॥ ಪೂರ್ಣ ಪರಮಾತ್ಮನೇ ನಮಃ ॥

# ಬದುಕುವ ದಾರಿ

## (Way of living)

**ಲೇಖಕರು :– ಸಂತ ರಾಮ್‌ಪಾಲ್ ದಾಸ್**
**ಶಿಷ್ಯ**
**ಸ್ವಾಮಿ ರಾಮದೇವಾನಂದ ಸ್ವಾಮೀಜಿ**

**ಜೀವವೇ ನಮ್ಮ ಜಾತಿ, ಮಾನವ ಧರ್ಮ ನಮ್ಮದು,**
**ಹಿಂದೂ, ಮುಸ್ಲಿಂ, ಸಿಖ್, ಕ್ರೈಸ್ತ ಯಾವ ಧರ್ಮವೂ ಬೇರೆ ಅಲ್ಲ.**

# ಪೂರ್ಣ ಸಂತ ರಾಮ್‌ಪಾಲ್ ಮಹಾರಾಜರವರ

## ಮಂಗಳ–ಪ್ರವಚನಗಳನ್ನು

ಈ ಕೆಳಗಿನ ಸುಪ್ರಸಿದ್ಧ ಟಿ.ವಿ. ಚಾನಲ್‌ಗಳಲ್ಲಿ ನೋಡಬಹುದು

### ಅವಶ್ಯಕವಾಗಿ ನೋಡಿರಿ

1. ಬೆಳಿಗ್ಗೆ 6:00–7:00, ನೇಪಾಳ ಒನ್ ಟಿ.ವಿ
2. ಮಧ್ಯಾಹ್ನ 2:00–3:00, MH ONE ಶ್ರದ್ಧಾ.
3. ರಾತ್ರಿ 7:30–8:30, ಸಾಧನಾ ಟಿ.ವಿ
4. ರಾತ್ರಿ 6:30–7:30, ಸಾರಥೀ ಟಿ.ವಿ
5. ರಾತ್ರಿ 8:30–9:30, ಈಶ್ವರ್ ಟಿ.ವಿ


–: ಪ್ರಕಾಶಕರು :–

ಪ್ರಚಾರ ಪ್ರಸಾರ ಸಮಿತಿ ಹಾಗೂ ಭಕ್ತ ಸಮೂಹ

ಸತ್ಯಲೋಕ ಆಶ್ರಮ, ಹಿಸಾರ್–ಟೋಹಾನಾ ರೋಡ್,
ಬರವಾಲಾ, ಜಿಲ್ಲೆ ಹಿಸಾರ್, ಹರಿಯಾಣಾ (ಭಾರತ)
ಬೆಂಗಳೂರು (ಕರ್ನಾಟಕ)
ದೂರವಾಣಿ ಸಂ. 8884445281, 7026200360
8222880541, 8222880542, 8222880543, 8222880544, 8222880545

ಮುದ್ರಕರು : ಕಬೀರ್ ಪ್ರಿಂಟರ್ಸ್
ಸಿ–117, ಸೆಕ್ಟರ್–3, ಬವಾನಾ ಇಂಡ್‌ಸ್ಟ್ರಿಯಲ್ ಎರಿಯಾ, ಜಯಪುರ್

ಬೆಲೆ ರೂ. 20/–

Visit us at: www.jagatgururampalji.org
e-mail: jagatgururampalji@yahoo.com

# ವಿಷಯ ಸೂಚಿ


| ಕ್ರ.ಸಂ. | ವಿವರಣೆ | ಪುಟ ಸಂಖ್ಯೆ |
|---|---|---|
| 1. | ಪೀಠಿಕೆ | I |
| 2. | ಎರಡು ಮಾತು | 1 |
| 3. | ಮಾನವ ಜೀವನದ ಸಾಮಾನ್ಯ ಅನಿಸಿಕೆ | 5 |
| 4. | ಮಾರ್ಕಂಡೇಯ ಋಷಿ ಮತ್ತು ಅಪ್ಸರೆಯ ಸಂವಾದ | 12 |
| 5. | ಇಂದು ಸಹೋದರನಿಗೆ ಬಿಡುವು | 17 |
| 6. | ಭಕ್ತಿ ಮಾಡದೆ ಇರುವುದರಿಂದ ಆಗುವ ನಷ್ಟದ ವಿವರಣೆ | 21 |
| 7. | ಭಕ್ತಿ ಮಾಡದಿದ್ದರೆ ಬಹಳ ದುಃಖವಾಗುವುದು | 24 |
| 8. | ಭಕ್ತಿ ಮಾರ್ಗದ ಯಾತ್ರೆ | 25 |
| 9. | ಮದುವೆ ಹೇಗೆ ಮಾಡಬೇಕು | 26 |
| 10. | ಪ್ರೇಮ ಪ್ರಸಂಗವು ಹೇಗಾಗುತ್ತದೆ? | 28 |
| 11. | ಪರಮಾತ್ಮನಾದ ಶಿವನು ತನ್ನ ಪತ್ನಿಯನ್ನು ತ್ಯಜಿಸುವುದು | 28 |
| 12. | ಕೃತಘ್ನ ಮಗ | 32 |
| 13. | ಮಕ್ಕಳಿಲ್ಲದವರೇ, ಎಚ್ಚರ!! | 32 |
| 14. | ಮದುವೆಯಲ್ಲಿ ಜ್ಞಾನಹಿನರು ನರ್ತಿಸುತ್ತಾರೆ | 33 |
| 15. | ಸಂತರ ಶಿಕ್ಷಣ | 33 |
| 16. | ವಿವಾಹದ ನಂತರದ ಯಾತ್ರೆ | 35 |
| 17. | ವಿಶೇಷ ಮಂಥನ | 38 |
| 18. | ಚಾರಿತ್ರ್ಯವಂತನ ಕತೆ | 40 |
| 19. | ಸಹವಾಸದ ಪ್ರಭಾವ ಮತ್ತು ಪ್ರಭುವಿನ ವಿಶ್ವಾಸ | 41 |
| 20. | ಕಬೀರ್ ಪರಮೇಶ್ವರರಿಂದ ಕಾಶೀ ನಗರದಲ್ಲಿ ಭೋಜನ ಅಂದರೆ ಧರ್ಮಯಜ್ಞದ ವ್ಯವಸ್ಥೆ | 44 |
| | ● ಆ ಭೋಜನ ಕೂಟದಲ್ಲಿ ನಡೆದ ಇನ್ನೊಂದು ಚಮತ್ಕಾರ | 46 |
| 21. | ಹರ್‌ಲಾಲ್ ರೈತನ ಕತೆ | 48 |
| 22. | ತಂಬಾಕು ಸೇವನೆ ಮಹಾಪಾಪ | 51 |
| 23. | ತಂಬಾಕು ಉತ್ಪತ್ತಿಯ ಕತೆ | 51 |
| 24. | ತಂಬಾಕಿನ ವಿಷಯದಲ್ಲಿ ಇನ್ನುಳಿದ ವಿಚಾರಗಳು | 54 |
| 25 | ತಂಬಾಕನ್ನು ಕತ್ತೆ–ಕುದುರೆಗಳೂ ಅಸಹ್ಯ ಪಟ್ಟುಕೊಳ್ಳುತ್ತವೆ | 56 |
| 26. | ಮಾದಕತೆ ನಮ್ಮನ್ನು ನಾಶಮಾಡುತ್ತದೆ | 57 |

27. ತಂದೆ ತಾಯಿಯ ಸೇವೆ ಮಾಡುವುದು ಮತ್ತು ಅವರನ್ನು ಗೌರವಿಸುವುದು ನಮ್ಮ ಪರಮ ಕರ್ತವ್ಯ........ 61
28. ತಂದೆಯು ಮಕ್ಕಳ ಪ್ರತಿಯೊಂದು ತಪ್ಪನ್ನು ಮನ್ನಿಸುತ್ತಾನೆ........ 62
29. ಸತ್ಸಂಗದಿಂದ ಮನೆಯಲ್ಲಿ ಕಲಹವು ಅಂತ್ಯವಾಗುತ್ತದೆ........ 67
30. ಪುಹಲೋ ಬಾಯಿಯ ಕತೆ........ 69
31. ವರ್ತಮಾನದ ಕೆಲವು ಸತ್ಯ ಕತೆಗಳು........ 77
- ಭಕ್ತ ಸುರೇಶ್‌ನ ಹಾಳಾದ ಸಂಸಾರವನ್ನು ಸರಿ ಮಾಡಿದ್ದು........ 77
- ಸತ್ಸಂಗ ಕೇಳದಿದ್ದಕ್ಕೆ ಸರ್ವನಾಶವಾಯಿತು........ 79
- ಸತ್ಸಂಗಕ್ಕೆ ಹೋದರೆ ದೊಡ್ಡ ವಿಪತ್ತಿನಿಂದ ಪಾರಾಗಬಹುದು........ 80
- ಮೀರಾಬಾಯಿಯನ್ನು ವಿಷ ಕುಡಿಸಿ ಕೊಲ್ಲುವ ವ್ಯರ್ಥ ಪ್ರಯತ್ನ........ 82
- ಮೀರಾಬಾಯಿಗೆ ಸದ್ಗುರುವಿನ ಆಶ್ರಯ ಸಿಕ್ಕಿತು........ 83
- ಕಳ್ಳನು ಎಂದಿಗೂ ಧನಿಕನಾಗುವುದಿಲ್ಲ........ 90
- ಸಾಂಸಾರಿಕ ಜಂಜಾಟದಲ್ಲಿದ್ದುಕೊಂಡೇ ಭಕ್ತರಾಗಬೇಕಾಗುತ್ತದೆ........ 92
- ಚೌಧರಿ ಎಂಬ ಜಮೀನ್ದಾರನಿಗೆ ಜ್ಞಾನೋದಯವಾಯಿತು........ 94
- ವೇಶ್ಯೆಯ ಉದ್ಧಾರ........ 96
- ರಂಕಾ–ಬಂಕಾನ ಕತೆ........ 99
- ಕಬೀರರ ಮೂಲಕ ಶಿಷ್ಯರಿಗೆ ಪರೀಕ್ಷೆ........ 101
- ಆನೆಯ ಕಾಲಿನಿಂದ ತುಳಿಸಿ ಪರಮೇಶ್ವರ ಕಬೀರರನ್ನು ಕೊಲ್ಲುವ ವ್ಯರ್ಥಪ್ರಯತ್ನ........ 108

32. ದೀಕ್ಷೆಯ ನಂತರ........ 111
33. ಪರಮಾತ್ಮನಿಗೆ ಯಾವುದೂ ಅಸಾಧ್ಯವಲ್ಲ........ 111
34. ಒಂದು ಕೊಟ್ಟರೆ ಒಂದು ತೆಗೆದುಕೊಳ್ಳಬೇಕು........ 115
35. ಹೇಳುವುದು ಮತ್ತು ಮಾಡುವುದರಲ್ಲಿ ಅಂತರವಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ........ 117
36. ಸತ್ಸಂಗದಿಂದ ಭಕ್ತಿಯ ದಾರಿ ಸಿಕ್ಕಿತು........ 118
37. ಮನೀರಾಮ್ ಎಂಬ ಪಂಡಿತ ಕಥಾವಾಚಕನ ಕೆಲಸ........ 126
38. ಪರೀಕ್ಷಿತ ರಾಜನ ಉದ್ಧಾರ........ 127
39. ಪಂಡಿತನ ಪರಿಭಾಷೆ........ 130
40. ಸುದಾಮರು ಪಂಡಿತರಾಗಿದ್ದರು........ 130
41. 'ಅನುರಾಗ ಸಾಗರ'ದ ಸಾರಾಂಶ........ 132
- ಭಕ್ತನ ಸ್ವಭಾವ ಹೇಗಿರಬೇಕು?........ 138
- ಮನಸ್ಸು ಹೇಗೆ ಪಾಪ ಪುಣ್ಯಗಳನ್ನು ಮಾಡಿಸುತ್ತದೆ........ 142

- ಭಕ್ತನ 16 ಗುಣಗಳು (ಆಭೂಷಣ) ................................................ 143
- ಕಾಲನ ಜೀವವು ಸದ್ಗುರುವಿನ ಜ್ಞಾನವನ್ನು ಒಪ್ಪುವುದಿಲ್ಲ ................. 145
- ಹಂಸ (ಭಕ್ತ) ಗುಣ ........................................................................ 146
- ಜ್ಞಾನಿಯ ಅಂದರೆ ಸತ್ಸಂಗೀಯ ಲಕ್ಷಣಗಳು ................................... 146
- ಭಕ್ತನು ಪರಮಾರ್ಥಿಯಾಗಬೇಕು ..................................................... 147

42. ದೀಕ್ಷೆ ಪಡೆದು ನಾಮ ಸ್ಮರಣೆ ಮಾಡುವುದು ಅನಿವಾರ್ಯ ...................... 149
- ದಶ ಮುಕಾಮಿ ರೇಖತಾ .................................................................. 152
- ಭಕ್ತ ಯತಿ ಮತ್ತು ಸತಿಯಾಗಬೇಕು ................................................. 154

43. ಗರುಡ್ ಬೋಧ್ ಅಧ್ಯಾಯದ ಸಾರಾಂಶ ............................................ 163
44. ಹನುಮಾನ್ ಬೋಧ್‌ನ ಸಾರಾಂಶ ...................................................... 180
45. ನಾವು ಕಾಲನ ಜಾಲದಲ್ಲಿ ಹೇಗೆ ಸಿಲುಕಿಕೊಂಡೆವು? ............................. 191
46. ಕಾಲನ ಜೊತೆ ಕಬೀರ್ ಪರಮೇಶ್ವರರ ಮಾತು ................................... 191
- ಕಾಲ ನಿರಂಜನನ ಮೂಲಕ ಕಬೀರರಿಂದ ಮೂರೂ ಯುಗಗಳಲ್ಲಿ ಕಡಿಮೆ ಜೀವಗಳನ್ನು ತೆಗೆದುಕೊಂಡು ಹೋಗುವ ಬಗ್ಗೆ ವಚನ ಪಡೆಯುವುದು ............................................................................ 194

47. ಹದಿಮೂರು ಗಾಡಿ ಕಾಗದಗಳನ್ನು ಬರೆಯುವುದು ................................. 202
48. ಕಲಿಯುಗ ವರ್ತಮಾನದಲ್ಲಿ ಎಷ್ಟು ಕಳೆದಿದೆ? ......................................... 207
49. ಗುರುವಿಲ್ಲದೆ ಮೋಕ್ಷವಿಲ್ಲ ................................................................ 208
50. ಪೂರ್ಣ ಗುರುವಿನ ವಚನಗಳ ಶಕ್ತಿಯಿಂದ ಭಕ್ತಿಯುಂಟಾಗುತ್ತದೆ ............. 210
51. ವಾಸುದೇವನ ಪರಿಭಾಷೆ .................................................................... 218
52. ಯಾವ ಪ್ರಭುವನ್ನು ಆರಾಧಿಸಬೇಕು–ಗೀತೆಯ ಪ್ರಕಾರ ............................ 224
53. ಪೂಜೆ ಮತ್ತು ಸಾಧನೆಯಲ್ಲಿರುವ ವ್ಯತ್ಯಾಸ ............................................ 239
54. ಋಷಿ ದೂರ್ವಾಸರ ಕಾರ್ಯಕುಶಲತೆ .................................................... 246
55. ಸೃಷ್ಟಿ ರಚನೆ ..................................................................................... 255
- ಆತ್ಮಗಳು ಕಾಲನ ಬಲೆಯಲ್ಲಿ ಹೇಗೆ ಸಿಲುಕಿಕೊಂಡವು? .................. 259
- ‘ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಮತ್ತು ಶ್ರೀ ಶಿವನ ಉತ್ಪತ್ತಿ ......................... 263
- ಮೂರು ಗುಣಗಳೆಂದರೆ ಏನು? ಆಧಾರದ ಸಹಿತ .......................... 265
- ಬ್ರಹ್ಮ (ಕಾಲ)ನು ಅವ್ಯಕ್ತನಾಗಿರಲು ಪ್ರತಿಜ್ಞೆ...................................... 266
- ಬ್ರಹ್ಮಾನು ತನ್ನತಂದೆ (ಕಾಲ/ ಬ್ರಹ್ಮ)ಯನ್ನು ಪಡೆಯುವ ಪ್ರಯತ್ನ .. 269
- ಮಾತೆ(ದುರ್ಗಾ)ಯಿಂದ ಬ್ರಹ್ಮಾನಿಗೆ ಶಾಪ ನೀಡುವಿಕೆ ..................... 270
- ವಿಷ್ಣುವು ತನ್ನ ತಂದೆ (ಕಾಲ/ ಬ್ರಹ್ಮ)ಯನ್ನು ಪಡೆಯಲು ನಿರ್ಗಮನ ಮತ್ತು ತಾಯಿಯ ಆಶೀರ್ವಾದ ಪಡೆಯುವಿಕೆ................................ 271

- ಪರಬ್ರಹ್ಮನ ಏಳು ಸಂಖ ಬ್ರಹ್ಮಾಂಡಗಳ ಸ್ಥಾಪನೆ ............................ 279
- ಪವಿತ್ರ ಅಥರ್ವಣವೇದದಲ್ಲಿ ಸೃಷ್ಟಿ ರಚನೆಗೆ ಆಧಾರ ........................ 281
- ಪವಿತ್ರ ಋಗ್ವೇದದಲ್ಲಿ ಸೃಷ್ಟಿ ರಚನೆಯ ಆಧಾರ ................................ 286
- ಪವಿತ್ರ ಶ್ರೀಮದ್‌ದೇವಿ ಮಹಾಪುರಾಣದಲ್ಲಿ
  ಸೃಷ್ಟಿ ರಚನೆಯ ಆಧಾರ ................................................................ 292
- 'ಪವಿತ್ರ ಶಿವ ಮಹಾಪುರಾಣದಲ್ಲಿ ಸೃಷ್ಟಿ ರಚನೆಯ ಆಧಾರ ............. 294
- ಪವಿತ್ರ ಶ್ರೀ ಮದ್ಭಗವದ್ಗೀತೆಯಲ್ಲಿ ಸೃಷ್ಟಿ ರಚನೆಯ ಆಧಾರ ............. 295
- ಪವಿತ್ರ ಬೈಬಲ್ ಮತ್ತು ಪವಿತ್ರ ಕುರಾನ್ ಶರೀಫದಲ್ಲಿ
  ಸೃಷ್ಟಿ ರಚನೆಯ ಆಧಾರ ................................................................ 299
- ಪೂಜ್ಯ ಕಬೀರ್ ಪರಮೇಶ್ವರ (ಕವಿರ್ ದೇವ) ರವರ
  ಅಮೃತವಾಣಿಯಲ್ಲಿ ಸೃಷ್ಟಿಯ ರಚನೆ ............................................... 301
- ಗೌರವಾನ್ವಿತ ಗರೀಬ್ ದಾಸ್ ರವರ ಅಮೃತವಾಣಿಯಲ್ಲಿ
  ಸೃಷ್ಟಿಯ ರಚನೆಯ ಆಧಾರ .......................................................... 304
- ಗೌರವಾನ್ವಿತ ಗುರುನಾನಕ್ ರವರ ಮಾತಿನಲ್ಲಿ
  ಸೃಷ್ಟಿರಚನೆಯ ಸಂಕೇತ .................................................................. 311
- ಅನ್ಯ ಸಂತರಿಂದ ಸೃಷ್ಟಿ ರಚನೆಯ ದಂತ ಕಥೆ ................................. 315

56. ಭಕ್ತಿಯ ಮರ್ಯಾದೆ ............................................................................ 318
- ದೀಕ್ಷೆ ಪಡೆಯುವ ವ್ಯಕ್ತಿಗಳಿಗೆ ಕೆಲವು ತಿಳುವಳಿಕೆಗಳು ..................... 318
- ಕರ್ಮ ಕಾಂಡದ ವಿಷಯದಲ್ಲಿ ಸತ್ಯಕಥೆ ........................................... 326

57. ಶಾಸ್ತ್ರಾನುಕೂಲದ ಭಕ್ತಿಯಿಂದ ಭಕ್ತರಿಗಾಗುವ ಲಾಭ ............................... 333
- ಪರಮೇಶ್ವರನ ಸೀಮಾತಇತವಾದ ದಯೆ ............................................ 333
- ಅದ್ಭುತ ಚಮತ್ಕಾರ........................................................................335
- ಲೂಟಿಗೊಳಗಾದವರಿಗೆ ಆಧಾರ.......................................................336
- 11,000 ಓಲ್ಟೇಜ್‌ನ ವೈರ್‌ನಿಂದ ಬಿಡುಗಡೆಗೊಳಿಸುವುದು................339
- ಪೂರ್ಣ ಪರಮಾತ್ಮನು ಸಾಧಕರ ಭಯಂಕರ ರೋಗವನ್ನು
  ಮುಕ್ತಗೊಳಿಸಿ ಆಯಸ್ಸನ್ನು ವೃದ್ಧಿಸುತ್ತಾನೆ..................................342

## ಪೀಠಿಕೆ

**ಬದುಕುವ ದಾರಿ**–ಇದು ಮನೆಮನೆಯಲ್ಲಿ ಸಂಗ್ರಹಿಸಿಡುವಂಥಾ ಪುಸ್ತಕ. ಇದನ್ನು ಓದುವುದರಿಂದ ಹಾಗೂ ಇದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ಈ ಲೋಕದಲ್ಲೂ, ಪರಲೋಕದಲ್ಲೂ ಸುಖವಾಗಿರುವಿರಿ. ಪಾಪದಿಂದ ಮುಕ್ತರಾಗುವಿರಿ, ಮನೆಯಲ್ಲಿ ಕಲಹಗಳಿದ್ದರೆ, ಅವು ಅಂತ್ಯವಾಗುತ್ತವೆ. ಆಗ ಮಗ–ಸೊಸೆ ತಮ್ಮ ತಂದೆ–ತಾಯಿಯರ ಸೇವೆಯನ್ನು ಅಗತ್ಯವಾಗಿ ಮಾಡುವರು, ಮನೆಯಲ್ಲಿ ಪರಮಾತ್ಮ ನೆಲೆಸುತ್ತಾನೆ. ಪಿತ್ರಹ, ಭೂತ–ಪ್ರೇತ, ದೆವ್ವ ಪಿಶಾಚಿಗಳ ಆತ್ಮಗಳು ಆ ಕುಟುಂಬದ ಹತ್ತಿರವೂ ಸುಳಿಯಲಾರವು. ದೇವತೆಗಳು ಆ ಭಕ್ತ–ಕುಟುಂಬವನ್ನು ರಕ್ಷಿಸುತ್ತಾರೆ. ಯಾರು ಈ ಪುಸ್ತಕವನ್ನು ಓದಿ, ದೀಕ್ಷೆಯನ್ನು ಪಡೆದು ಸಚ್ಚಾರಿತ್ರದಿಂದ ಸಾಧನೆ ಮಾಡುವರೋ ಅಂಥಾ ಭಕ್ತರಿಗೆ ಅಕಾಲ ಮರಣವು ಉಂಟಾಗುವುದಿಲ್ಲ.

ಈ ಪುಸ್ತಕವನ್ನು ಓದುವುದರಿಂದ ಮುರಿದ ಕುಟುಂಬಗಳು ಒಂದಾಗುತ್ತವೆ. ಯಾರ ಮನೆಯಲ್ಲಿ ಈ ಪುಸ್ತಕವಿರುವುದೋ, ಅವರ ಅಹಂಕಾರವು ತನ್ನಿಂದ ತಾನೇ ದೂರವಾಗುವುದು. ಏಕೆಂದರೆ ಅಂಥವರಲ್ಲಿ ಆತ್ಮವನ್ನು ಮುಟ್ಟುವಂಥಾ ಶಕ್ತಿ ಇರುತ್ತದೆ. ಮದ್ಯಪಾನ, ತಂಬಾಕು ಮತ್ತು ಅನ್ಯರೀತಿಯ ಮತ್ತಿನ ಪದಾರ್ಥಗಳ ಬಗ್ಗೆ ತಿರಸ್ಕಾರ ಉಂಟಾಗುವುದು. ಅವುಗಳ ಹೆಸರೆತ್ತಿದರೂ ಕಂಪಿಸುವರು. ಇಡೀ ಕುಟುಂಬ ಸುಖದ ಸುಪ್ಪತ್ತಿಗೆಯಲ್ಲಿರುವುದು. ಜೀವನದ ಯಾತ್ರೆಯು ಸುಲಭವಾಗಿ ಸಾಗುವುದು. ಏಕೆಂದರೆ ಜೀವನದ ಮಾರ್ಗವು ಸ್ವಚ್ಛವಾಗಿರುವುದು.

ಈ ಪುಸ್ತಕದಲ್ಲಿ, ಪೂರ್ಣವಾದ ಪರಮಾತ್ಮನು ಯಾರು? ಅವನ ಹೆಸರೇನು? ಅವನ ಭಕ್ತಿಯು ಹೇಗಿರುತ್ತದೆ? ಇವೆಲ್ಲದರ ಬಗ್ಗೆ ವಿವರವಿದೆ. ಇದನ್ನರಿತರೆ ಮಾನವ ಜೀವನವು ಸಾರ್ಥಕವಾಗುವುದು. ಕುಟುಂಬದಲ್ಲಿ ಯಾವುದೇ ರೀತಿಯ ಕೆಟ್ಟತನವಿರುವುದಿಲ್ಲ. ಪರಮಾತ್ಮನ ಕೃಪೆ ಎಂದಿಗೂ ಇರುವುದು. ಉತ್ತಮವಾದ ಬದುಕುವ ದಾರಿಯು ಸಿಗುವುದರಿಂದ ಯಾತ್ರೆಯು ಸುಲಭವಾಗುವುದು. ಯಾರು ಈ ಪುಸ್ತಕವನ್ನು ಮನೆಯಲ್ಲಿಟ್ಟುಕೊಳ್ಳುವುದಿಲ್ಲವೋ, ಅವನಿಗೆ ಉತ್ತಮ ಜೀವನವು ಲಭಿಸದೆ, ಈ ಭವವೆಂಬ ಕಾಡಿನಲ್ಲಿ ಅಲೆದಾಡುತ್ತಾ ತನ್ನ ಅಮೂಲ್ಯವಾದ ಜೀವನವನ್ನು ನಾಶಮಾಡಿಕೊಳ್ಳುತ್ತಾನೆ. ಅವನು ಪರಮಾತ್ಮನ ಮನೆಗೆ ಹೋದಾಗ ಪಶ್ಚತ್ತಾಪದ ವಿನಃ ಇನ್ನೇನೂ ಉಳಿದಿರುವುದಿಲ್ಲ. ಆಗ ನಿಮಗೆ ಉತ್ತಮವಾದ **ಬದುಕುವ ದಾರಿ** ಸಿಗದೆ ಬದುಕು ನಾಶವಾಯಿತು ಎಂದು ಅನ್ನಿಸುತ್ತದೆ. ಆಗ ನೀವು ಪರಮಾತ್ಮನಲ್ಲಿ **"**ಹೇ ಪ್ರಭು! ಮತ್ತೊಮ್ಮೆ ಮಾನವ ಜನ್ಮ ಕೊಡು, ನಾನು ನಿಜವಾದ ಮನಸ್ಸಿನಿಂದ ಭಕ್ತಿಯಿಂದ ನಿನ್ನನ್ನು ಆರಾಧಿಸುವೆ. ಜೀವನದ ನಿಜವಾದ ದಾರಿಯನ್ನು ಹುಡುಕಲು ಸತ್ಸಂಗಕ್ಕೆ ಹೋಗುವೆ. ನನ್ನ ಉದ್ಧಾರಕ್ಕಾಗಿ ಶ್ರಮಿಸುವೆ**"** ಎಂದು ನೀವು ಪ್ರಾರ್ಥಿಸುವಿರಿ. ಆ ಪರಮಾತ್ಮನ ಆಸ್ಥಾನದಲ್ಲಿ ನಿಮ್ಮ ಪೂರ್ವಜನ್ಮದ ನೆನಪನ್ನು ನಿಮಗೆ ತೋರಿಸಲಾಗುತ್ತದೆ. ಅದರಲ್ಲಿ ನೀವು ಪ್ರತೀ ಬಾರಿಯೂ ಮನುಷ್ಯ ಜನ್ಮ

ಪ್ರಾಪ್ತವಾದಾಗಲೆಲ್ಲಾ ಇದೇ ರೀತಿ 'ಹೇ ದೇವ ನನಗೆ ಮನುಷ್ಯ ಜನ್ಮ ಕೊಡು, ನಾನು ಎಂದೆಂದಿಗೂ ತಪ್ಪು ಕೆಲಸ ಮಾಡಲಾರೆ, ಜೀವನಪರ್ಯಂತ ಭಕ್ತಿಮಾಡುವೆ. ಮನೆಯನ್ನು ಚೆನ್ನಾಗಿ ನಿರ್ವಹಿಸಿಕೊಂಡು ಹೋಗುತ್ತೇನೆ. ಸದ್ಗುರುವಿನಿಂದ ದೀಕ್ಷೆಪಡೆದು ಕಲ್ಯಾಣ ಕೆಲಸಗಳನ್ನು ಮಾಡಿಸುತ್ತೇನೆ. ಇಂದಿನ ಜನ್ಮದಲ್ಲಿ ಯಾವ ತಪ್ಪುಗಳಾಗಿದೆಯೋ ಅವನ್ನು ಪುನರಾವರ್ತಿಸುವುದಿಲ್ಲ' ಎಂದೆಲ್ಲಾ ಹೇಳಿದ ಸಿನಿಮಾ ತೋರಿಸಲಾಗುತ್ತದೆ.

ಆಗ ಪರಮಾತ್ಮನು, 'ನೀನು ನಿನ್ನನ್ನು ಮೂರ್ಖನನ್ನಾಗಿ ಮಾಡಿಕೊಂಡು, ಜೀವನವನ್ನು ಹಾಳುಮಾಡಿಕೊಂಡು, ಈಗ ಪಾಪದ ಕೊಡ ಹೊತ್ತುಕೊಂಡು ನನ್ನ ಮುಂದೆ ನಿಂತು ನನ್ನನ್ನು ಮೂರ್ಖನನ್ನಾಗಿ ಮಾಡಲು ಇಚ್ಛಿಸುವೆಯಾ? ನಡೀ, ನರಕಕ್ಕೆ', ಎನ್ನುತ್ತಾನೆ. ಆದ್ದರಿಂದ ಎಂಭತ್ತ ನಾಲ್ಕು ಲಕ್ಷ ಪ್ರಕಾರಗಳ ಪ್ರಾಣಿಗಳ ಶರೀರದಲ್ಲಿ ಸುತ್ತಿ ಸುತ್ತಿ, ಮತ್ತೆಂದಾದರೂ ಮಾನವ (ಸ್ತ್ರೀ–ಪುರುಷ) ಶರೀರ ಸಿಕ್ಕಿದರೆ, ಬಹಳ ಸಾವಧಾನದಿಂದ ಸತ್ಸಂಗವನ್ನು ಆರಿಸಿಕೊಂಡು ನಿನ್ನ ಉದ್ಧಾರವನ್ನು ಮಾಡಿಕೊ ಎಂದು ಹೇಳುತ್ತಾನೆ.

ಓದುಗರಲ್ಲಿ ವಿನಂತಿಸುವುದೇನೆಂದರೆ ಈ ಪವಿತ್ರವಾದ ಪುಸ್ತಕವನ್ನು ಓದುವುದರಿಂದ ನಿಮ್ಮ ನೂರೊಂದು ಪೀಳಿಗೆ ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಸುಖಿಗಳಾಗುತ್ತವೆ. ಇದನ್ನು ಪರಮಾತ್ಮನ ಆದೇಶವೆಂದು ತಿಳಿದು ಇಡೀ ಕುಟುಂಬದವರು ಓದಿರಿ. ಒಬ್ಬರು ಓದಿ ಮತ್ತೊಬ್ಬರು ಕೇಳುವಂಥವರಾಗಿ ಅಥವಾ ಒಂದಕ್ಕಿಂತ ಹೆಚ್ಚು ಪುಸ್ತಕಗಳನ್ನು ತೆಗೆದುಕೊಂಡು ಪ್ರತಿಯೊಬ್ಬರೂ, ಪ್ರತಿದಿನವೂ ಓದಿ. ಇದರಲ್ಲಿ ಬರೆದಿರುವ ಪ್ರತಿಯೊಂದು ಪ್ರಕರಣವನ್ನೂ ಸತ್ಯವೆಂದೇ ತಿಳಿಯಿರಿ. ತಮಾಷೆ ಎಂದು ಪರಿಗಣಿಸಬೇಡಿ. ಇದನ್ನು ಯಾರೋ ಬರೆದಿದ್ದಾರೆ ಎಂದು ಪರಿಗಣಿಸದೆ, ಇದನ್ನು ಪರಮೇಶ್ವರನ ಗುಲಾಮನಾದ ರಾಮ್‌ಪಾಲ್‌ದಾಸನ ಮೂಲಕ ಹೃದಯ ಪೂರ್ವಕವಾಗಿ ಮಾನವ ಕಲ್ಯಾಣಕ್ಕಾಗಿ ಬರೆಯಲಾಗಿದೆ ಎಂದು ತಿಳಿಯಿರಿ. ಇದರಿಂದ ಪ್ರಯೋಜನ ಪಡೆಯಿರಿ.

**ಲೇಖಕ**

ದಾಸಾನುದಾಸ ರಾಮ್‌ಪಾಲ್ ದಾಸ್
ಪುತ್ರ/ಶಿಷ್ಯ ಸ್ವಾಮಿ ರಾಮದೇವಾನಂದ್
ಸತ್ಯಲೋಕ ಆಶ್ರಮ್, ಬರವಾಲಾ
ಹಿಸಾರ್ ಜಿಲ್ಲೆ, ಹರಿಯಾಣ, ಭಾರತ.

## ಎರಡು ಮಾತು

ಪ್ರಾಣಿಗಳ ಜೀವನ ಯಾತ್ರೆಯು ಅವುಗಳ ಜನ್ಮದಿಂದ ಪ್ರಾರಂಭವಾಗುತ್ತದೆ. ಅವುಗಳ ಗುರಿಯು ನಿರ್ಧಾರಿತವಾಗಿರುತ್ತದೆ. ಈ ಪವಿತ್ರ ಪುಸ್ತಕದಲ್ಲಿ ಮಾನವ ಜೀವನದ ಯಾತ್ರೆಯ ಮಾರ್ಗವನ್ನು ವಿವರವಾಗಿ ತೋರಿಸಲಾಗಿದೆ. ಮೋಕ್ಷ ಪ್ರಾಪ್ತಿಯೇ ಮಾನವನ (ಸ್ತ್ರೀ/ಪುರುಷ)ನ ಗುರಿಯಾಗಿದೆ. ದಾರಿಯಲ್ಲಿ ಪಾಪ ಮತ್ತು ಪುಣ್ಯಕರ್ಮಗಳ ರಾಶಿಯೂ ಇದೆ, ಮುಳ್ಳುಗಳೂ ಇವೆ. ಪಾಪಕರ್ಮಗಳು ಕಷ್ಟ ಕೊಡುವುದಾಗಿಯೂ, ಪುಣ್ಯ ಕರ್ಮಗಳು ಸುಖ ಕೊಡುವುದಾಗಿಯೂ ಇದೆ. ಅದರ ಸಂಕ್ಷಿಪ್ತ ವಿವರ ಹೀಗಿದೆ:–

ಪಾಪದ ರಾಶಿ ಅಥವಾ ಮುಳ್ಳುಗಳು:– ಮನುಷ್ಯನ ಜೀವನವು ಪರಮಾತ್ಮನ ಶಾಸ್ತ್ರಾನುಸಾರದಂತೆ ಸಾಧನೆಯನ್ನು ಮಾಡಿ ಮೋಕ್ಷವನ್ನು ಹೊಂದುವುದೇ ಆಗಿದೆ. ಪಾಪಕರ್ಮವು ಭಕ್ತಿಮಾರ್ಗಕ್ಕೆ ಅಡೆತಡೆಯಾಗುತ್ತದೆ. ಉದಾಹರಣೆಗೆ, ಪಾಪಕರ್ಮದಿಂದ ಶರೀರಕ್ಕೆ ರೋಗ ಅಂಟಿಕೊಳ್ಳುವುದು, ಪಶುವೃತ್ತಿಯಲ್ಲಿ ಹಾಗೂ ರೈತವೃತ್ತಿಯಲ್ಲಿ ನಷ್ಟವುಂಟಾಗುವುದು, ಸಾಲದ ಹೊರೆ ಹೆಚ್ಚಾಗುವುದು, ಮುಂತಾದವು ಆಗುತ್ತದೆ. ಸಾಲದಿಂದ ಭಾಧಿತನಾದ ವ್ಯಕ್ತಿಯು ಹಗಲಿರುಳೂ ಚಿಂತೆಗೊಳಗಾಗುತ್ತಾನೆ. ಅವನು ಭಕ್ತಿಯಿಂದ ಇರಲಾರ. ಸದ್ಗುರುವಿನಿಂದ ದೀಕ್ಷೆ ಪಡೆದ ನಂತರ ಪರಮೇಶ್ವರನು ಆ ಭಕ್ತನನ್ನು ಮೇಲೆ ಹೇಳಿದಂಥಾ ಸಕಲ ಕಷ್ಟಗಳಿಂದ ಮುಕ್ತಗೊಳಿಸುತ್ತಾನೆ. ಆಗ ಭಕ್ತನು ಅಧಿಕ ಶ್ರದ್ಧೆಯಿಂದ ಭಕ್ತಿಯಲ್ಲಿ ತೊಡಗಲು ಸಾಧ್ಯ. ಆಗ ಪರಮಾತ್ಮನ ಮೇಲೆ ವಿಶ್ವಾಸವು ಹೆಚ್ಚುವುದು. ಅವನು ಹೆಚ್ಚು ಧೃಢನಾಗುತ್ತಾನೆ. ಆದರೆ ಭಕ್ತನು ಪರಮಾತ್ಮನಿಗೆ ಸಮರ್ಪಿತನಾಗಬೇಕು. ಹೇಗೆ ಪತಿವ್ರತಾ ಸ್ತ್ರೀಯು ತನ್ನ ಪತಿಯ ವಿನಃ ಅನ್ಯ ಪುರುಷನನ್ನು ಅವನು ಎಷ್ಟೇ ಸುಂದರನಾಗಿದ್ದರೂ, ಕನಸಿನಲ್ಲೂ ಇಚ್ಛಿಸುವುದಿಲ್ಲವೋ ಹಾಗೆ ಭಕ್ತನು ಪರಮಾತ್ಮನಲ್ಲಿ ಲೀನವಾಗಬೇಕು. ಅವಳ ಪತಿಯು ತನ್ನ ಪತ್ನಿಗಾಗಿ ಎಲ್ಲಾ ಸುಖ ಸವಲತ್ತುಗಳನ್ನು ನೀಡುತ್ತಾನೆ. ವಿಶೇಷವಾಗಿ ಪ್ರೀತಿಸುತ್ತಾನೆ. ಇದೇ ರೀತಿ ದೀಕ್ಷೆ ತೆಗೆದುಕೊಂಡ ನಂತರ ಆತ್ಮದ ಸಂಯೋಗ ಪರಮಾತ್ಮನ ಜೊತೆಗೆ ಆಗುತ್ತದೆ. ಗುರುಗಳು ಪರಮಾತ್ಮನ ಜೊತೆ ಆತ್ಮದ ವಿವಾಹವನ್ನು ಮಾಡಿಸುತ್ತಾರೆ. ಮಾನವ ಶರೀರವನ್ನು ಧರಿಸಿರುವ ಆತ್ಮವು ತನ್ನ ಪತಿ ಪರಮೇಶ್ವರನಲ್ಲಿ ಪತಿವ್ರತೆಯಂತೆ ಸಮರ್ಪಿತಳಾಗಿ ಇದ್ದರೆ, ಆಗ ಅವಳ ಪತಿ ಪರಮೇಶ್ವರನು ಅವನ ಜೀವನದಲ್ಲಿ ಬಂದೊದಗುವ ಎಲ್ಲಾ ಕಷ್ಟಗಳನ್ನು ಹಾಗೂ ಪಾಪಕರ್ಮಗಳನ್ನು ತೊಲಗಿಸುತ್ತಾನೆ. ಆಗ ಆ ಆತ್ಮದ ಬದುಕುವ ದಾರಿಯು ಕಷ್ಟಗಳಿಲ್ಲದೆ ಸುಗಮವಾಗಿ ಸಾಗುತ್ತದೆ. ಅವನ ಗುರಿಯು ಅವನಿಗೆ ಸುಲಭವಾಗಿ ಸಿಗುತ್ತದೆ.

ಆ ಆತ್ಮಕ್ಕೆ ಪರಮಾತ್ಮನು ಏನನ್ನು ಮಾಡುತ್ತಾನೆನ್ನುವುದು ಪರಮೇಶ್ವರನಾದ ಕಬೀರರಿಂದ ಪ್ರಾಪ್ತವಾದ ಜ್ಞಾನವನ್ನು ಸಂತ ಗರೀಬ್‌ದಾಸರು ಈ ರೀತಿ ಹೇಳುತ್ತಾರೆ.

ಗರೀಬ್, ಪತಿವ್ರತಾ ಜಮೀನ್ ಪರ್, ಜ್ಯೋಂ–ಜ್ಯೋಂ ಧರಿ ಹೈ ಪಾಂವೈ ।
ಸಮರ್ಥ್ ಝಾಡೂ ದೇತ್ ಹೈ, ನಾ ಕಾಂಟಾ ಲಗ್ ಜಾವೈ ॥

ಕಬೀರ ಪರಮೇಶ್ವರರು ಹೇಳಿರುವುದೇನೆಂದರೆ:–

ಕಬೀರ್, ಸಾಧಕ್ ಕೆ ಲಕ್ಷಣ್ ಕಹೂಂ, ರಹೈ ಜ್ಯೋಂ ಪತಿವ್ರತಾ ನಾರಿ ।
ಕಹ್ ಕಬೀರ್ ಪರಮಾತ್ಮಾ ಕೋ, ಲಗೈ ಆತ್ಮಾ ಪ್ಯಾರೀ ॥

ಪತಿವ್ರತಾ ಕೆ ಭಕ್ತಿ ಪಥ್ ಕೋ, ಆಪ್ ಸಾಫ್ ಕರೇ ಕರ್‌ತಾರ್ ।
ಆನ್ ಉಪಾಸನಾ ತ್ಯಾಗ್ ದೇ, ಸೋ ಪತಿವ್ರತಾ ಪಾರ್ ॥

ಭಕ್ತಿಯ ದಾರಿಯಲ್ಲಿ ಮುಳ್ಳುಗಳಂತಿರುವ ಪಾಪಗಳು ಭಕ್ತಿಯಿಂದ ಇದ್ದರೆ, ಅವು ನಾಶವಾಗಿ

ಹೋಗುತ್ತವೆ.

ಕಬೀರ್, ಜಬ್ ಹೀ ಸತ್ಯನಾಮ್ ಹೃದಯ್ ಧರೋ,ಭಯೋ ಪಾಪ್ ಕೋ ನಾಶ್।
ಜೈಸೇ ಚಿಂಗಾರೀ ಅಗ್ನಿ ಕೀ, ಪಡ್ಯೆ ಪುರಾನೆ ಘಾಸ್ ॥

ಆದ್ದರಿಂದ ಪೂರ್ಣ ಗುರುವಿನಿಂದ ದೀಕ್ಷೆ ಪಡೆದು ಪ್ರತೀ ಸ್ತ್ರೀ–ಪುರುಷರು, ಮೂರು ವರ್ಷ ತುಂಬಿದ ಮಕ್ಕಳು ಹಾಗೂ ಯುವಕರು, ವೃದ್ಧರು ಎಲ್ಲರೂ ಭಕ್ತಿಯಿಂದ ಇರಬೇಕಾಗಿರುವುದು ಅವಶ್ಯಕ.

❖ ಪುಣ್ಯವೂ ಸಹ ಭಕ್ತಿಗೆ ಅಡ್ಡವಾಗುತ್ತದೆ:–

ಪೂರ್ವ ಜನ್ಮದ ಪುಣ್ಯದಿಂದ ಮನೆಯಲ್ಲಿ ಧನ ಕನಕಗಳಿರಬಹುದು. ಸಕಲ ಸೌಲಭ್ಯಗಳು ಲಭ್ಯವಾಗಬಹುದು. ಆದರೆ ರಾಜನ ಪದವಿ ಸಿಕ್ಕರೆ ಅದೇ ಭಕ್ತಿಗೆ ಅಡ್ಡವಾಗಬಹುದು. ಆ ಸುಖವು ಅವನನ್ನು ಪರಮಾತ್ಮನಿಂದ ಮೈಲಿಗಟ್ಟಲೆ ದೂರವಿಡುತ್ತದೆ. ಅಂಥಹ ಸುಖವು ಬದುಕುವ ದಾರಿಯಲ್ಲಿ ಪರಮಾತ್ಮನನ್ನು ಪಡೆಯುವ ಗುರಿಯಿಂದ ದೂರ ಮಾಡುತ್ತದೆ.

ಕಬೀರ್, ಸುಖ್ ಕೆ ಮಾಥೆ ಪತ್ಥರ್ ಪಡೋ, ನಾಮ್ ಹೃದಯ್ ಸೆ ಜಾವೈ ।
ಬಲಿಹಾರೀ ವಾ ದುಖ್ ಕೀ, ಜೋ ಪಲ್–ಪಲ್ ನಾಮ್ ರಟಾವೈ ॥

ಒಬ್ಬ ರಾಜನಿಗೋ, ಧನಿಕನಿಗೋ, ಪರಮಾತ್ಮನ ಕಥೆಯನ್ನು ಹೇಳುವ ಪ್ರಯತ್ನ ಮಾಡಿ ನೋಡಿ. ಅವನಿಗೆ ನಿಜವಾಗಲೂ ಅದು ರುಚಿಸುವುದಿಲ್ಲ. ಇನ್ನೊಂದೆಡೆ ಪಾಪಕರ್ಮಗಳಿಂದ ಜರ್ಜರಿತವಾದ ವ್ಯಕ್ತಿಗೆ ಪರಮಾತ್ಮನು ಎಲ್ಲಾ ಕಷ್ಟಗಳನ್ನು ದೂರ ಮಾಡುತ್ತಾನೆ. ಪರಮಾತ್ಮನನ್ನು ಧ್ಯಾನಮಾಡು ಎಂದು ಹೇಳಿ, ಒಂದು ಹಳ್ಳಿಯಲ್ಲಿ ಒಬ್ಬ ವ್ಯಕ್ತಿ ಸಂತನಿಂದ ದೀಕ್ಷೆ ಪಡೆದು ಸುಖಿಯಾದನು. ಈ ಮೊದಲು ಅವನೂ ನಿನ್ನಂತೆ ಕಷ್ಟದಲ್ಲಿದ್ದನು ಎಂದು ಹೇಳಿ, ಆಗ ಆ ವ್ಯಕ್ತಿ ಭಕ್ತಿಯಿಂದಿರಲು ಪ್ರಾರಂಭಿಸುತ್ತಾನೆ. ಅವನಿಗೆ ಆ ದುಃಖವೇ ವರವಾಗಿ ಪರಿಣಮಿಸುತ್ತದೆ. ಧನಿಕ ವ್ಯಕ್ತಿಯು ತನ್ನ ಪುಣ್ಯವನ್ನು ಉಂಡು, ತಿಂದು, ಖರ್ಚುಮಾಡಿ ಖಾಲಿ ಮಾಡಿಕೊಂಡು, ಪಾಪದ ಮೂಟೆ ಹೊತ್ತುಕೊಂಡು, ಸಾವಿನ ನಂತರ ಪರಮಾತ್ಮನ ಆಸ್ಥಾನದಲ್ಲಿ ಜೋಲು ಮೋರೆ ಹಾಕಿಕೊಂಡು ಭಯಭೀತನಾಗಿ ನಿಲ್ಲುತ್ತಾನೆ. ಅವನಿಗೆ ನಾಯಿ, ಕತ್ತೆ, ಹಂದಿಯ ಜನ್ಮವು ಬರುತ್ತದೆ. ಇದಕ್ಕೆ ವಿರುದ್ಧವಾಗಿ ದುಃಖದಿಂದಿರುವ ಬಡವನಾದ ವ್ಯಕ್ತಿಯು ಪರಮಾತ್ಮನನ್ನು ಆರಾಧಿಸುತ್ತಾ ದಾನಧರ್ಮ ಮಾಡಿ ಸುಖವಾದ ಜೀವನ ಹೊಂದುತ್ತಾನೆ. ಪಾಪಕರ್ಮಗಳಿಂದ ದೂರಾಗಿ ಪುಣ್ಯದ ಮೂಟೆ ಹೊತ್ತು ಭಕ್ತಿ ಎನ್ನುವ ಧನದಿಂದ ಧನಿಕನಾಗಿ ಪರಮಾತ್ಮನ ಆಸ್ಥಾನದಲ್ಲಿ ನಿರ್ಭಯನಾಗಿ ನಿಲ್ಲುತ್ತಾನೆ. ಪರಮಾತ್ಮನು ಅವನನ್ನು ತನ್ನ ಹತ್ತಿರಕ್ಕೆ ಬರಮಾಡಿಕೊಳ್ಳುತ್ತಾನೆ. ಆ ಭಕ್ತನಿಗೆ ಮೋಕ್ಷವನ್ನು ಕರುಣಿಸಿ, ಎಂದೆಂದಿಗೂ ಸುಖವನ್ನು ನೀಡುತ್ತಾನೆ.

ಹಾಗೊಂದು ವೇಳೆ ಧನಿಕನೂ ಸಹ ಭಕ್ತಿಯಿಂದ ಇದ್ದರೆ ಅವನ ಕಾರ್ಯವೂ ಸಿದ್ಧಿಸುವುದು ಹಾಗೂ ಮೋಕ್ಷಕ್ಕೆ ಯಾವುದೇ ಅಡಚಣೆಯೂ ಆಗುವುದಿಲ್ಲ.

ಪ್ರಶ್ನೆ: ಒಬ್ಬ ಸಜ್ಜನನು 'ನಾನು ಮತ್ತಿನ ಪದಾರ್ಥ ತೆಗೆದುಕೊಳ್ಳುವುದಿಲ್ಲ. ಕೆಟ್ಟ ಚಟಗಳಿಂದ ದೂರವಿದ್ದೇನೆ. ಪರಸ್ತ್ರೀಯರನ್ನು ಅಕ್ಕ ತಂಗಿಯರಂತೆ ಕಾಣುತ್ತೇನೆ. ಯಾವುದೇ ಪಾಪ ಮಾಡುವುದಿಲ್ಲ. ನನಗೆ ಭಕ್ತಿಯ ಅವಶ್ಯಕತೆ ಇಲ್ಲ, ಬೇರೆಯವರು ಕೆಟ್ಟಕೆಲಸ ಮಾಡಿ, ಸತ್ಸಂಗಕ್ಕೆ ಹೋಗುತ್ತಾರೆ' ಎಂದನು.

ಉತ್ತರ: ಇಲ್ಲಿ ಎರಡು ಎಕರೆ ಜಮೀನಿದೆ. ಒಂದು ಎಕರೆಯನ್ನು ಟ್ರಾಕ್ಟರಿನಿಂದ ಉತ್ತು, ಫಲವತ್ತಾಗಿ ಮಾಡಲಾಗಿದೆ. ಆದರೆ ಬೀಜ ಬಿತ್ತಿಲ್ಲ. ಇನ್ನೊಂದೆಕರೆ ಜಮೀನಿನಲ್ಲಿ ಹುಲ್ಲು, ಗಿಡಗಂಟಿಗಳು ಬೆಳೆದುನಿಂತಿವೆ. ಅವೆಲ್ಲಾ ಕೆಲಸಕ್ಕೆ ಬಾರದವು. ಆ ಜಮೀನನ್ನು ಯಾರಾದರೂ ಸ್ವಲ್ಪ ಸ್ವಚ್ಛಮಾಡಿ, ಗೋಧಿಯನ್ನು

ಬಿತ್ತಿದರೆ ಹಾಗೂ ಮೊದಲಿನ ಒಂದೆಕರೆ ಜಮೀನಿನಲ್ಲಿ ಏನನ್ನೂ ಬಿತ್ತಲಿಲ್ಲವೆಂದರೆ, ಮೊದಲನೆಯ ಜಮೀನಿಗಿಂತ ಎರಡನೆಯ ಜಮೀನು ಉಪಯುಕ್ತವಲ್ಲವೆ? ಆದ್ದರಿಂದ ನೀವು ಯಾವುದೇ ದುಶ್ಚಟಗಳಿಂದ ದೂರವಿದ್ದರೂ, ನೀವು ಭಕ್ತಿ ಎನ್ನುವ ಬೀಜ ಬಿತ್ತದಿದ್ದರೆ ಯಾವುದೇ ಉಪಯೋಗವಾಗಲಾರದು. ಭಕ್ತಿ ಎನ್ನುವ ಬೀಜ ಬಿತ್ತಿದರೆ ನಿಮ್ಮ ಶರೀರ ಎನ್ನುವ ಜಮೀನು ಫಲನೀಡುವುದು. ಯಾರು ಕೆಟ್ಟ ಕೆಲಸ ಮಾಡುತ್ತಿದ್ದರೋ, ಅವರಿಗೆ ಜ್ಞಾನವುಂಟಾಯಿತು. ಕೆಟ್ಟತನ ಬಿಟ್ಟು ಭಕ್ತಿಯಿಂದ ಇರಲು ಪ್ರಾರಂಭಿಸಿದರು. ತಮ್ಮ ಬದುಕುವ ದಾರಿಯನ್ನು ಬದಲಿಸಿದರು. ಆಗ ಗುರಿ ಅವರಿಗೆ ಹತ್ತಿರವಾಯಿತು. ಕಬೀರ್ ಪರಮಾತ್ಮನ ಸತ್ಸಂಗವನ್ನು ಕೇಳಿ ತನ್ನ ದಿಕ್ಕನ್ನು ಬದಲಾಯಿಸಿಕೊಂಡು, ದೀಕ್ಷೆಯನ್ನು ಪಡೆದು, ಸತ್ಸಂಗಕ್ಕೆ ಹೋದ ಒಬ್ಬ ವೇಶ್ಯೆಯ ಕತೆಯನ್ನು ಮುಂದೆ ಓದಲಿದ್ದೀರಿ. ಆ ವೇಶ್ಯೆಯು ಸತ್ಸಂಗಕ್ಕೆ ಹೋಗಿದ್ದು ನಗರದ ಜನರಿಗೆ ಸರಿ ಕಾಣಲಿಲ್ಲ. ಮನಸ್ಸಿಗೆ ಬಂದಂತೆ ಮಾತನಾಡತೊಡಗಿದರು. ಕಬೀರರ ಸತ್ಸಂಗಕ್ಕೆ ಕೆಟ್ಟ ಹೆಂಗಸರು ಹೋಗುವರು, ಈ ಸಂತರು ಒಳ್ಳೆಯವರಲ್ಲ, ಅಪ್ರಯೋಜಕರು ಮಾತ್ರ ಸತ್ಸಂಗಕ್ಕೆ ಬರುವರು. ನಿಮ್ಮ ಅಕ್ಕ ತಂಗಿಯರನ್ನು ಅಲ್ಲಿ ಕಳುಹಿಸಬೇಡಿ ಎಂದೆಲ್ಲಾ ಹೇಳಿದರು. ಊರಿನ ಜನರ ಮಾತುಗಳನ್ನು ಕೆಳಿ ಕೇಲವು ಭಕ್ತರು ಮಾತನಾಡತೋಡಗಿದರು. ಆಗ ಪರಮೇಶ್ವರನಾದ ಕಬೀರರು ಹೇಳಿದರು,

ಕುಷ್ಠೀ ಹೋ ಸಂತ್ ಬಂದಗೀ ಕೀಜಿಯೇ ।
ಜೆ ಹೋ ವೈಶ್ಯಾ ಕೋ ಪ್ರಭು ವಿಶ್ವಾಸ್, ಚರಣ್ ಚಿತ್ ದೀಜಿಯೆ ॥

ಭಾವಾರ್ಥ: ಒಬ್ಬ ಭಕ್ತನಿಗೆ ಕುಷ್ಟರೋಗವಿದ್ದರೆ, ಅವನು ಭಕ್ತಿಯಿಂದ ಇರಲು ಪ್ರಾರಂಭಿಸಿದರೆ ಆಗ ಸಮಾಜದ ಜನ ಅವನನ್ನು ತಿರಸ್ಕಾರದಿಂದ ನೋಡಬಾರದು. ಬೇರೆ ಭಕ್ತರಿಗೆ ನಮಿಸುವಂತೆ ಅವನಿಗೂ ನಮಿಸಬೇಕು. ಅವನನ್ನು ಗೌರವಿಸಬೇಕು. ಅವನಿಗೆ ಧೈರ್ಯ ತುಂಬಬೇಕು. ಭಕ್ತಿಯಿಂದ ಇದ್ದರೆ ಅವನ ಜೀವನವೂ ಸಾರ್ಥಕವಾಗುವುದು, ರೋಗವೂ ಗುಣವಾಗುವುದು. ಇದೇ ರೀತಿ ಆ ವೇಶ್ಯೆಯೂ ಯಾವುದೋ ಅಕ್ಕತಂಗಿಯರಿಗೆ ಪ್ರೇರಣೆಯಾಗುತ್ತಾಳೆ. ಸತ್ಸಂಗಕ್ಕೆ ಬಂದ ನಂತರ ಅವಳಿಗೆ ಪರಮಾತ್ಮನಲ್ಲಿ ನಂಬಿಕೆ ಬಂದಿದೆ, ಅವಳು ಸತ್ಸಂಗದ ವಿಚಾರವನ್ನು ಕೇಳಿದರೆ ಅವಳ ಕೆಟ್ಟತನ ದೂರವಾಗುತ್ತದೆ, ಅವಳಿಗೆ ಒಳ್ಳೆಯದಾಗುತ್ತದೆ. ಅವಳು ಸತ್ಸಂಗಕ್ಕೆ ಬರದಿದ್ದರೆ ಅವಳಿಗೆ ಅವಳ ಪಾಪಕರ್ಮಗಳ ಬಗ್ಗೆ ತಿಳಿಯುವುದಾದರೂ ಹೇಗೆ? ಕೊಳೆ ಬಟ್ಟೆಯು ನೀರು ಮತ್ತು ಸಾಬೂನಿನ ಸಂಪರ್ಕ ಮಾಡದಿದ್ದರೆ ಶುಭ್ರವಾಗುವುದಾದರೂ ಹೇಗೆ? ಆದ್ದರಿಂದ ಕುಲಟೆಯೂ ಸಹ ಭಕ್ತಿಯಿಂದ ಇದ್ದರೆ ಅವಳನ್ನು ಗೌರವದಿಂದ ಕಾಣಬೇಕು. ಆಗ ಅವಳಿಗೆ ಸತ್ಸಂಗಕ್ಕೆ ಬರಲು ಸಂಕೋಚವಾಗುವುದಿಲ್ಲ. ಅವಳನ್ನು ತಡೆದರೆ ನೀವೇ ಪಾಪಕ್ಕೆ ತುತ್ತಾಗುವಿರಿ. ಇನ್ನುಳಿದ ಕತೆಯನ್ನು ಇದೆ ಪುಸ್ತಕದ ಪುಟ ಸಂಖ್ಯೆ 101ರಲ್ಲಿ 'ಕಬೀರರ ಮೂಲಕ ಶಿಷ್ಯರಿಗೆ ಪರೀಕ್ಷೆ' ಎಂಬ ಹೆಡ್ಡಿಂಗ್ ನಲ್ಲಿ ಓದಿರಿ.

ಭಗವದ್ಗೀತೆಯ 9ನೇ ಅಧ್ಯಾಯದ 30ನೇ ಶ್ಲೋಕದಲ್ಲಿ ಇದರ ಉಲ್ಲೇಖವಿದೆ. ಯಾರಾದರೂ ಅತ್ಯಂತ ದುರಾಚಾರಿ ವ್ಯಕ್ತಿಯು ನಂಬಿಕೆ ಇಟ್ಟು ಭಕ್ತಿಯಿಂದ ಪರಮಾತ್ಮನಲ್ಲಿ ಲೀನನಾದರೆ ಅವನನ್ನು ಮಹಾತ್ಮನಿಗೆ ಸಮಾನನಂತೆ ಕಾಣಬೇಕು ಎಂದು ಹೇಳಿದೆ. ಅವನು ಸಂತರ ವಿಚಾರಗಳಿಂದ ಬದಲಾಗಬಲ್ಲ ಮತ್ತು ಒಳ್ಳೆಯವನಾಗಬಲ್ಲ. ಆದ್ದರಿಂದ ಮಾನವ ಶರೀರವುಳ್ಳ ಎಲ್ಲರೂ ಪರಮಾತ್ಮನ ಭಕ್ತಿ ಮತ್ತು ಶುಭ ಕಾರ್ಯ, ದಾನ–ಧರ್ಮ, ಗುರುಗಳ ಆಶೀರ್ವಾದ ಪಡೆಯಲು ಸತ್ಸಂಗಕ್ಕೆ ಬರಬೇಕು.

ಕಬೀರ್ ಪರಮೇಶ್ವರರು ಹೇಳಿದ್ದಾರೆ–

ಕಬೀರ್, ಮಾನುಷ್ ಜನ್ಮ್ ದುರ್ಲಭ್ ಹೈ, ಮಿಲೇ ನ ಬಾರಂ–ಬಾರ್ ।
ತರ್‌ವರ್ ಸೇ ಪತ್ತಾ ಟೂಟ್ ಗಿರೇ, ಬಹುರ್ ನಾ ಲಾಗೇ ಡಾರ್ ॥

ಭಾವಾರ್ಥ: ಮಾನವ ಜನ್ಮ ಬಹಳ ಕಷ್ಟದಿಂದ ಹಾಗೂ ಯುಗ ಯುಗಗಳ ಪುಣ್ಯದಿಂದ

ಪ್ರಾಪ್ತವಾಗುತ್ತದೆ. ಮತ್ತೆ ಮತ್ತೆ ಸಿಗುವುದಿಲ್ಲ. ಈ ಶರೀರವಿದ್ದಾಗಲೇ ಪರಮಾತ್ಮನನ್ನು ಭಕ್ತಿಯಿಂದ ಕಾಣು. ಇಲ್ಲದಿದ್ದರೆ ಈ ಶರೀರ ನಾಶವಾಗಿಹೋಗುತ್ತದೆ. ಹೇಗೆ ಮರದಿಂದ ಉದುರಿದ ಎಲೆ ಮತ್ತೆ ಮರವನ್ನು ಸೇರುವುದಿಲ್ಲವೋ ಹಾಗೆ ಈ ಶರೀರ ಮತ್ತೆ ನಿನಗೆ ಪ್ರಾಪ್ತವಾಗುವುದಿಲ್ಲ.

ಕಬೀರರು ಹೇಳಿದ್ದಾರೆ,

ಕಬೀರ್, ಮಾನುಷ್ ಜನ್ಮ್ ಪಾಯ್ ಕರ್, ನಹೀಂ ರಟ್ಯೆಂ ಹರಿ ನಾಮ್ ।
ಜೈಸೆ ಕುಆ ಜಲ್ ಬಿನಾ, ಬನ್‌ವಾಯಾ ಕ್ಯಾ ಕಾಮ್ ॥

ಭಾವಾರ್ಥ:– ಮಾನವ ಜೀವನದಲ್ಲಿ ಭಕ್ತಿ ಇರದಿದ್ದರೆ ಆ ಜೀವನವೊಂದು ಸುಂದರವಾದ ಬಾವಿ ಇದ್ದಂತೆ. ಅದರಲ್ಲಿ ನೀರು ಇರದಿದ್ದರೆ, ಅಥವಾ ನೀರಿದ್ದರೂ ಅದು ಉಪ್ಪು ನೀರಾಗಿದ್ದರೆ, ಅದು ಬಾವಿಯಾಗಿದ್ದರೂ ಪ್ರಯೋಜನವಿಲ್ಲ. ಹಾಗೆಯೇ ಮನುಷ್ಯನು ಭಕ್ತಿಯಿಂದ ಇರದಿದ್ದರೆ ಅವನನ್ನು ಮನುಷ್ಯನೆನ್ನುವರೇ ವಿನಃ ಗುಣವಂತನೆನ್ನಲಾರರು.

ಪೂರ್ವ ಜನ್ಮದ ಪುಣ್ಯ ಕಾರ್ಯಗಳಿಂದ ಹಾಗೂ ಭಕ್ತಿಯಿಂದ ಯಾರಾದರೂ ಆರೋಗ್ಯದಿಂದಿರಬಹುದು. ಆದರೆ 'ಮುಂದೆ ಅವನೇ ರೋಗಿಯಾಗಿ, ಲಕ್ಷಾಂತರ ಹಣ ಖರ್ಚುಮಾಡಿದರೂ ಪ್ರಯೋಜನವಾಗದೆ ಸಾವನ್ನೂ ಅಪ್ಪಬಹುದು. ಯಾರೋ ಜನ್ಮತಃ ರೋಗಿಯಾಗಿರಬಹುದು, ಜೀವನ ಪೂರ್ತಿ ಕಷ್ಟಪಟ್ಟು ಸಾಯಬಹುದು, ಯಾರೋ ಬಡವನಿರಬಹುದು, ಯಾರೋ ಶ್ರೀಮಂತನಿರಬಹುದು, ಯಾರಿಗೋ ಮಕ್ಕಳು ಹುಟ್ಟಬಹುದು, ಇನ್ಯಾರಿಗೋ ಮಕ್ಕಳೇ ಆಗದಿರಬಹುದು, ಮತ್ತೊಬ್ಬರಿಗೆ ಗಂಡು ಮಕ್ಕಳಾಗದೆ, ಬರೀ ಹೆಣ್ಣು ಮಕ್ಕಳು ಹುಟ್ಟಬಹುದು. ಇವೆಲ್ಲ ಮಾನವನ ಪೂರ್ವಜನ್ಮದ ಸುಕೃತಗಳ ಫಲ. ಎಲ್ಲಿಯವರೆಗೆ ಅವನು ಭಕ್ತನಾಗುವುದಿಲ್ಲವೋ, ಎಲ್ಲಿಯವರೆಗೆ ಸದ್ಗುರುವಿನ ದೀಕ್ಷೆ ತೆಗೆದುಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಅವನು ದುಃಖಿಯಾಗಿಯೇ ಉಳಿಯುತ್ತಾನೆ. ದೀಕ್ಷೆ ಪಡೆದರೆ ಅವನ ದುಃಖದ ಬದುಕು ಸುಖದಲ್ಲಿ ಬದಲಾಗುತ್ತದೆ.

## "ಮಾನವ ಜೀವನದ ಸಾಮಾನ್ಯ ಅನಿಸಿಕೆ"

ನಿಜವಾದ ಆಧ್ಯಾತ್ಮಿಕ ಜ್ಞಾನವುಂಟಾಗದಿದ್ದಾಗ ಜನ ಸಾಮಾನ್ಯರ ಅನಿಸಿಕೆ ಈ ರೀತಿ ಇರುತ್ತದೆ.

1) ದೊಡ್ಡವನಾಗಿ, ಓದಿ, ಬರೆದು, ನನ್ನ ಜೀವನ ನಿರ್ವಹಣೆಗಾಗಿ ಹುಡುಕಾಟ ನಡೆಸಿ, ವಿವಾಹ ಮಾಡಿಕೊಂಡು, ಕುಟುಂಬದ ಪೋಷಣೆ ಮಾಡೋಣ. ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸೋಣ. ನಂತರ ಅವರಿಗೆ ನೌಕರಿ ಸಿಗುವಂತಾಗಲಿ. ಅವರಿಗೆ ಮದುವೆ ಮಾಡೋಣ. ದೇವರು ಆ ಮಕ್ಕಳಿಗೆಲ್ಲಾ ಮಕ್ಕಳನ್ನು ಕರುಣಿಸಲಿ. ನಂತರ ನಮ್ಮ ಕರ್ತವ್ಯವು ಪೂರ್ಣವಾಯಿತು. ಒಮ್ಮೊಮ್ಮೆ ಹಳ್ಳಿಯ ಅಥವಾ ಪಕ್ಕದ ಹಳ್ಳಿಯ ಯಾರಾದರೂ ವೃದ್ಧರು ಸಿಕ್ಕರೆ ಪರಸ್ಪರ ಕ್ಷೇಮ ಸಮಾಚಾರ ವಿಚಾರಿಸಿದಾಗ ಒಬ್ಬರು, "ಭಗವಂತನ ಕೃಪೆಯಿಂದ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಅವರನ್ನು ಬಹಳ ಕಷ್ಟಪಟ್ಟು ಬೆಳೆಸಿದೆ, ಓದಿಸಿದೆ, ಮದುವೆಯನ್ನೂ ಮಾಡಿದೆ. ಈಗ ಎಲ್ಲರಿಗೂ ಮಕ್ಕಳಿವೆ, ನನ್ನ ಜವಾಬ್ದಾರಿ ಮುಗಿಯಿತು. 75 ವರ್ಷದವನಾಗಿದ್ದೇನೆ. ಈಗ ಒಳ್ಳೆಯ ಸಾವು ಬಂದುಬಿಟ್ಟರೆ ನನ್ನ ಜೀವನ ಸಾರ್ಥಕವಾಯಿತು. ವಂಶದ ಕುಡಿ ಬೆಳೆಯಿತು. ವಂಶೋದ್ಧಾರವಾಯಿತು. ಸಮಾಜದಲ್ಲಿ ಹೆಸರಿರುತ್ತದೆ" ಎನ್ನುತ್ತಾರೆ.

ಮೇಲೆ ತಿಳಿಸಿದ ಪ್ರಸಂಗದಲ್ಲಿ ಅವರಿಗೆ ಏನೆಲ್ಲಾ ಸಿಕ್ಕಿದೆಯೋ, ಅದು ಪೂರ್ವ ನಿರ್ಧಾರಿತ ಸಂಸ್ಕಾರದಿಂದ ಪ್ರಾಪ್ತವಾಗಿದೆ. ಹೊಸದೇನೂ ಸಿಗಲಿಲ್ಲ.

ಒಬ್ಬ ವ್ಯಕ್ತಿಗೆ ಮದುವೆಯಾಯಿತು. ಅವನಿಗೆ ಒಬ್ಬಳು ಮಗಳು ಹುಟ್ಟಿದಳು. ಅವನಿಗೆ ಗಂಡುಮಗುವಾಗಲಿಲ್ಲ, ಅವನ ವಂಶ ಉದ್ಧಾರವಾಗುವುದಿಲ್ಲ ಎನ್ನುವುದು ಸಮಾಜದ ಅಭಿಪ್ರಾಯ.

(ಆದರೆ ಆಧ್ಯಾತ್ಮಿಕ ಜ್ಞಾನದ ದೃಷ್ಟಿಯಲ್ಲಿ ಮಗ–ಮಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ.) ಎರಡನೆಯ ಮಗು ಗಂಡುಮಗುವಾದೀತೆಂದು ಆಸೆ. ಆದರೆ ಎರಡನೆಯದೂ ಹೆಣ್ಣುಮಗುವೇ ಆಯಿತು. ಪರಮಾತ್ಮನು ಮೂರನೆಯದನ್ನಾದರೂ ಗಂಡು ಮಗುವನ್ನು ಕೊಡುವನೆಂಬ ಆಸೆ. ಆದರೆ ಮೂರನೆಯದೂ ಹೆಣ್ಣುಮಗುವಾಯಿತು. ಈ ರೀತಿ ಒಟ್ಟು ಐದು ಹೆಣ್ಣುಮಕ್ಕಳು ಹುಟ್ಟಿದವು. ಗಂಡುಮಗುವಾಗಲೇ ಇಲ್ಲ. ಇದರಿಂದ ಮಾನವನು ಇಷ್ಟಪಟ್ಟಿದ್ದೂ ಆಗಲಾರದು, ಅವನು ಪ್ರಯತ್ನ ಪಟ್ಟಿದ್ದೂ ಆಗಲಾರದು ಎಂದು ತಿಳಿಯುತ್ತದೆ. ಏನೆಲ್ಲಾ ಜರುಗಿತೋ, ಸಂಸ್ಕಾರದಿಂದಲೇ ಜರುಗಿದೆ. ಇದು ಪರಮಾತ್ಮನ ಸಂಕಲ್ಪ. ಮಾನವಶರೀರ ಸಿಕ್ಕ ಪ್ರಾಣಿಯು ಇಂದಿನ ಜನ್ಮದಲ್ಲಿ ಸಂತರಿಂದ ದೀಕ್ಷೆ ಪಡೆದು ಭಕ್ತಿಯಿಂದ ಇರಬೇಕು. ದಾನ–ಧರ್ಮ, ಶುಭಕಾರ್ಯಗಳನ್ನು ಮಾಡಬೇಕು. ಇಲ್ಲದಿದ್ದರೆ ಪೂರ್ವಜನ್ಮದ ಪುಣ್ಯವು ಇಂದಿನ ಜನ್ಮದಲ್ಲಿ ಖರ್ಚಾಗಿ ಹೋಗಿ ಬರಿಗೈಯ್ಯಲ್ಲಿ ಪರಮಾತ್ಮನ ಆಸ್ಥಾನಕ್ಕೆ ಹೋಗುತ್ತಾನೆ. ನಂತರದ ಜೀವನದಲ್ಲಿ ಯಾವುದಾದರೂ ಪ್ರಾಣಿಯಾಗಿ ಹುಟ್ಟಬೇಕಾಗುತ್ತದೆ.

ರೈತನು ತನ್ನ ಹೊಲದಲ್ಲಿ ಗೋಧಿ, ಕಡಲೆಬೀಜ ಬಿತ್ತುತ್ತಾನೆ. ನಂತರ ಪರಿಶ್ರಮದಿಂದ ಅದನ್ನು ಬೆಳೆದು ಮತ್ತೆ ಗೋಧಿ ಕಡಲೆಯನ್ನು ಮನೆಗೆ ತಂದು ತುಂಬುತ್ತಾನೆ. ಹಾಗೊಮ್ಮೆ ಅವನು ಬೀಜ ಬಿತ್ತಿ ಫಸಲನ್ನು ತೆಗೆಯದೆ ಹಿಂದಿನವರ್ಷದ ಬೆಳೆಯನ್ನು ತಿನ್ನುತ್ತಾ ಬಂದರೆ, ಸದ್ಯಕ್ಕೆ ಅವನಿಗೆ ಯಾವುದೇ ಆಪತ್ತು ಬರದಿರಬಹುದು, ಏಕೆಂದರೆ ಹಿಂದಿನ ವರ್ಷದ ಫಸಲು ಅವನ ಬಳಿ ಇದೆ. ಆದರೆ ಮುಂದೊಂದು ದಿನ ತನ್ನ ಬಳಿ ಸಂಗ್ರಹಿಸಿಟ್ಟುಕೊಂಡಿದ್ದ ಫಸಲು ಖಾಲಿಯಾಗಿ ಹೋದರೆ ಆಗ ಆ ರೈತಕುಟುಂಬ ಭಿಕ್ಷುಕರಾಗಿ ಬಿಡುವರು. ಅದೇ ರೀತಿ ಮಾನವ ಶರೀರದಲ್ಲಿರುವಾಗ ಏನೆಲ್ಲ ಪ್ರಾಪ್ತವಾಗುವುದೋ, ಅದೆಲ್ಲಾ ಪೂರ್ವ ಜನ್ಮದ ಸಂಗ್ರಹ. ಈ ಜನ್ಮದಲ್ಲಿ ಒಳ್ಳೆಯ ಕೆಲಸ ಮಾಡದಿದ್ದರೆ ಭವಿಷ್ಯದಲ್ಲಿ ಜೀವನವು ನರಕವಾಗಿಬಿಡುವುದು.

ಆಧ್ಯಾತ್ಮಜ್ಞಾನ ಪ್ರಾಪ್ತಿಯಾದ ನಂತರ ಮಾನವನು ಬುದ್ಧಿವಂತ ರೈತನ ಹಾಗೆ ಪ್ರತೀ ವರ್ಷವೂ ಬೇರೆ ಬೇರೆ ಋತುಗಳಲ್ಲಿ ದಾನ, ಧರ್ಮ, ಸ್ಮರಣೆ, ಜಪ ಮುಂತಾದ ಬೀಜ ಬಿತ್ತುತ್ತಾನೆ ಮತ್ತು ತನ್ನ ಮನೆಯಲ್ಲಿ ಸಂಗ್ರಹಿಸಿ ತಿನ್ನುತ್ತಾನೆ ಹಾಗೂ ಅವುಗಳನ್ನು ಮಾರಿ ತನ್ನ ಖರ್ಚನ್ನೂ ನಿಭಾಯಿಸುತ್ತಾನೆ. ಅಂದರೆ ಪೂರ್ಣ ಗುರುವಿನಿಂದ ದೀಕ್ಷೆಯನ್ನು ಪಡೆದು ಅವರು ಹೇಳಿದಂತೆ ಸಾಧನೆಯನ್ನು ಮಾಡಬೇಕು ಮತ್ತು ದಾನಧರ್ಮವನ್ನು ಮಾಡಬೇಕು. ಆಗ ಭಕ್ತಿ ಎಂಬ ಧನವನ್ನು ಸಂಗ್ರಹಿಸಿಡಬಹುದು. ಆದ್ದರಿಂದ ಪರಮ ಸಂತರು ಮಾನವನಿಗೆ ಬದುಕುವ ದಾರಿಯನ್ನು ತಿಳಿಸುತ್ತಾರೆ. ಆಧ್ಯಾತ್ಮಿಕಜ್ಞಾನ ಸರ್ವಗ್ರಂಥಗಳಿಂದ ಪ್ರಾಮಾಣಿಕರಿಸಲ್ಪಡುತ್ತದೆ.

ಮೇಲೆ ಹೇಳಿದ ಪ್ರಸಂಗದಲ್ಲಿ ವೃದ್ಧನು ತನ್ನೆಲ್ಲ ಮಕ್ಕಳನ್ನು ಪೋಷಿಸಿ, ಮದುವೆ ಮಾಡಿದ್ದಾನೆ. ನನ್ನ ಮಾನವ ಜೀವನದ ಕಾರ್ಯವು ಪೂರ್ಣಗೊಂಡಿತು, ನನ್ನ ಜೀವನ ಸಾರ್ಥಕವಾಯಿತು. ಈಗ ಸಾವು ಬರಲಿ ಎನ್ನುತ್ತಾನೆ. ಆದರೆ ಇಲ್ಲಿ ಯೋಚಿಸಬೇಕಾದ ವಿಷಯವೆಂದರೆ ಅವನು ಪೂರ್ವಜನ್ಮದಲ್ಲಿ ಸಂಗ್ರಹಿಸಿದ್ದನ್ನು ಖರ್ಚುಮಾಡಿದ್ದಾನೆ. ಭವಿಷ್ಯಕ್ಕಾಗಿ ಏನನ್ನೂ ಮಾಡಲಿಲ್ಲ. ಆ ಕಾರಣಕ್ಕಾಗಿ ವ್ಯಕ್ತಿಯ ಮಾನವ ಜೀವನವು ವ್ಯರ್ಥವಾಗಿ ಹೋಯಿತು.

ಕಬೀರರು ಹೇಳುತ್ತಾರೆ :

ಕ್ಯಾ ಮಾಂಗೂ ಕುಛ್ ಥಿರ್ ನಾ ರಹಾಯಿ । ದೇಖತ್ ನೈನ್ ಚಲಾ ಜಗ್ ಜಾಯೀ ॥
ಏಕ್ ಲಖ್ ಪೂತ್ ಸವಾ ಲಖ್ ನಾತಿ । ಉಸ್ ರಾವಣ್ ಕೈ ದೀವಾ ನ ಬಾತೀ ॥

ಭಾವಾರ್ಥ: ಒಬ್ಬ ಮನುಷ್ಯ ಒಂದು ಗಂಡು ಮಗುವಿನಿಂದ ತನ್ನ ವಂಶವೃಕ್ಷವು ಸ್ಥಿರವಾಗುವುದೆಂದು ತಿಳಿದರೆ ಅದು ಅವನ ತಪ್ಪು ಕಲ್ಪನೆ. ಶ್ರೀಲಂಕಾದ ರಾಜನಾದ ರಾವಣನಿಗೆ ಒಂದು ಲಕ್ಷ ಪುತ್ರರಿದ್ದರು ಹಾಗೂ ಒಂದುಕಾಲು ಲಕ್ಷ ಮೊಮ್ಮಕ್ಕಳಿದ್ದರು, ಆದರೆ ಈಗ ಅವನ ಮನೆಯ ದೀಪವನ್ನು ಹಚ್ಚಲು

ಅವನ ವಂಶದ ಯಾವ ಕುಡಿಯೂ ಉಳಿದಿಲ್ಲ. ಎಲ್ಲರೂ ನಾಶವಾಗಿ ಹೋಗಿದ್ದಾರೆ. ಆದ್ದರಿಂದ ಹೇ ಮಾನವ, ಶಾಶ್ವತವಲ್ಲದ್ದನ್ನು ಪರಮಾತ್ಮನಲ್ಲಿ ಏಕೆ ಕೇಳುವೆ? ಇದೆಲ್ಲ ಆಧ್ಯಾತಿಕ ಜ್ಞಾನದ ಅಭಾವದಿಂದಲೇ ಆಗಿದೆ. ಪರಮಾತ್ಮನು ನಿನಗೆ ಸಂಸ್ಕಾರ ನೀಡುತ್ತಾನೆ. ನೀನು ಮಾಡಿದ ಕಾರ್ಯ ಏನೂ ನಡೆಯುವುದಿಲ್ಲ. ಏಕೆಂದರೆ ಆ ವೃದ್ಧನ ಮಾತನ್ನು ಒಪ್ಪಿಕೊಂಡರೆ, ಪುತ್ರಪ್ರಾಪ್ತಿಯಾದರೆ, ವಂಶವೃದ್ಧಿಯಾಗುವುದರಿಂದ ಪ್ರಪಂಚದಲ್ಲಿ ಹೆಸರುಳಿಯುತ್ತದೆ. ಆದರೆ ಪುಣ್ಯ ಸಂಪಾದನೆಯಾಗುವುದಿಲ್ಲ.

ಒಂದು ಹಳ್ಳಿಯಲ್ಲಿ ಪ್ರಾರಂಭದಲ್ಲಿ ಕೇವಲ ನಾಲ್ಕೈದು ವ್ಯಕ್ತಿಗಳಿದ್ದರು. ನಂತರ ಅವರ ವಂಶದ ನೂರಾರು ಕುಟುಂಬಗಳು ಉಂಟಾದವು. ಅವರ ವಂಶವೃಕ್ಷವು ಬೆಳೆಯುತ್ತಾ ಇದೆ. ಸಮಾಜದಲ್ಲಿ ಅವರ ಹೆಸರೂ ಮುಂದುವರಿಯುತ್ತಿದೆ. ಆದರೆ ಶಾಸ್ತ್ರಬದ್ಧವಾಗಿ ಭಕ್ತಿಯನ್ನು ಮಾಡದೆ ಇದ್ದ ಕಾರಣ ಪರಮಾತ್ಮನ ವಿಧಾನಾನುಸಾರ ಆ ಒಳ್ಳೆಯ ಮನುಷ್ಯನೂ ಸಹ ಮುಂದಿನ ಜನ್ಮದಲ್ಲಿ ಕತ್ತೆಯಾಗಿ ಕಷ್ಟವನ್ನು ಪಡಬೇಕಾಗುತ್ತದೆ. ನಂತರ ಅವನು ಕತ್ತೆಯ ವಂಶವನ್ನು ಉದ್ಧಾರಮಾಡಿ ನಂತರ ನಾಯಿಯ ಜನ್ಮವನ್ನು ತಾಳಿ ಅಲ್ಲಿ ಅದರ ಕುಲವನ್ನು ಬೆಳೆಸುತ್ತಾ, ಅನ್ಯ ಪ್ರಾಣಿಗಳ ಜನ್ಮವನ್ನು ತಳೆದು ಅಸಂಖ್ಯ ಜನ್ಮಗಳನ್ನು ಪಡೆದು ಕಷ್ಟ ಅನುಭವಿಸ ಬೇಕಾಗುವುದು. ಅಂದರೆ ಮಾನವ ಜನ್ಮ ಪ್ರಾಪ್ತವಾದ ಪ್ರಾಣಿಯು ಸಾಂಸಾರಿಕ ಕರ್ತವ್ಯಗಳನ್ನು ಮಾಡುತ್ತಾ–ಮಾಡುತ್ತಾ ಆತ್ಮ ಕಲ್ಯಾಣದ ಕಾರ್ಯವನ್ನೂ ನಿಭಾಯಿಸುತ್ತಾ ಮಾಡಬೇಕು. ಆಗ ಕುಟುಂಬದಿಂದ ಉಂಟಾಗುವ ಪೂರ್ವಪಾಪವೂ ದೂರವಾಗುವುದು ಹಾಗೂ ಕುಟುಂಬ ಸಂತೋಷದಿಂದಿರುವುದು. ಇಲ್ಲದಿದ್ದಲ್ಲಿ ಶುಭಾ–ಅಶುಭ ಎನ್ನುವ ಎರಡೂ ಕರ್ಮಫಲಗಳನ್ನು ಅನುಭವಿಸುವುದರಿಂದ ಒಮ್ಮೊಮ್ಮೆ ಸುಖ, ಒಮ್ಮೊಮ್ಮೆ ದುಃಖವನ್ನು ಸಹಿಸಿಕೊಳ್ಳಬೇಕಾಗುತ್ತದೆ.

ಒಮ್ಮೆ ದಾಸ (ಲೇಖಕ) ಒಂದು ಹಳ್ಳಿಯಲ್ಲಿ ಮೂರುದಿನ ಸತ್ಸಂಗದ ಬೋದನೆ ಮಾಡುತ್ತಿದ್ದರು. ಅದೇ ಕುಟುಂಬದ ಒಬ್ಬ ಸಂಬಂಧಿಕ ತನ್ನ ನಾಲ್ಕು ವರ್ಷದ ಹುಡುಗನನ್ನು ಜೊತೆಯಲ್ಲಿ ಕರೆದುತಂದಿದ್ದನು. ಚರ್ಚೆಯಲ್ಲಿ, ನನಗೆ ನಾಲ್ಕು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಎಲ್ಲರಿಗೂ ಮದುವೆ ಮಾಡಿದೆ. ನನ್ನಂಥಾ ಸುಖಿ ಈ ಹಳ್ಳಿಯಲ್ಲಿ ಇನ್ಯಾರೂ ಇರಲಿಲ್ಲ. ಆದರೆ ಕೇವಲ ಎರಡು ವರ್ಷಗಳಲ್ಲಿ ನನ್ನ ಮನೆ ನಾಶವಾಗಿ ಹೋಯಿತು. ಇಬ್ಬರು ಗಂಡು ಮಕ್ಕಳು ಮೋಟಾರು ಸೈಕಲಿನಲ್ಲಿ ಅತ್ತೆಯ ಮನೆಗೆ ಹೋಗುತ್ತಿದ್ದರು, ದುರ್ಘಟನೆಯಲ್ಲಿ ದೇವರು ಅವರನ್ನು ತನ್ನ ಬಳಿ ಕರೆಸಿಕೊಂಡನು. ಒಂದು ವರ್ಷದ ನಂತರ ಒಬ್ಬ ಮಗನಿಗೆ ಹೊಲದಲ್ಲಿ ಹಾವು ಕಡಿದು ಸಾವನ್ನಪ್ಪಿದನು. ನಾಲ್ಕನೆಯವ ಹೃದಯಾಘಾತದಿಂದ ತೀರಿಕೊಂಡನು. ಸೊಸೆಯರು ತಮ್ಮ ತಾಯಿಯ ಮನೆಗೆ ಹೊರಟು ಹೋದರು. ಪತ್ನಿಯು ಇದರಿಂದ ಹುಚ್ಚಿಯಾಗಿಹೋದಳು. ಈ ಹುಡುಗ ನನ್ನ ಮಗಳ ಮಗ, ಇವನನ್ನು ನೋಡಿಕೊಂಡು ದಿನ ದೂಡುತ್ತಿದ್ದೇನೆ. ಮಗಳನ್ನು ಮನೆಯಲ್ಲೇ ಇಟ್ಟುಕೊಂಡಿದ್ದೇನೆ ಎಂದನು. ಇದರಿಂದ ಏನು ಪ್ರಯೋಜನ? ಓದುಗರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ವಿವೇಕದಿಂದ ವರ್ತಿಸಿ ಮತ್ತು ಮಾನವ ಜೀವನದ ಸರಿಯಾದ ದಾರಿಯಲ್ಲಿ ಸಾಗಿರಿ, ಭಕ್ತಿಯಿಂದ ಬದುಕಿರಿ.

ಮಕ್ಕಳಾಗುವುದು, ಆಗದೇ ಇರುವುದು ನಿಮ್ಮ ಪೂರ್ವಕರ್ಮಗಳ ಫಲ. ಮಕ್ಕಳಿಗೆ ಧರ್ಮ–ಕರ್ಮದ ಜ್ಞಾನವಿಲ್ಲದಿದ್ದರೆ, ಅವರು ಎಷ್ಟೇ ಒಳ್ಳೆಯವರಾಗಿದ್ದರೂ, ಯಾವಾಗಲಾದರೂ ತಪ್ಪನ್ನು ಮಾಡಿಯೇ ಮಾಡುತ್ತಾರೆ. ಅದೆಲ್ಲಾ ಪಾಪ ಕರ್ಮಗಳ ಕಾರಣದಿಂದ ಆಗುತ್ತದೆ. ಒಬ್ಬ ಹೇಳಿದ್ದೇನೆಂದರೆ ನನ್ನ ಮಾವ ನಾಲ್ಕು ಎಕರೆಯುಳ್ಳ ಒಬ್ಬ ರೈತ, ಹಗಲಿರುಳೂ ಶ್ರಮಿಸಿ 16 ಎಕರೆ ಜಮೀನನ್ನು ಖರೀದಿಸಿದರು, ಅಂದರೆ ಹನ್ನೆರಡು ಎಕರೆ ಜಮೀನನ್ನು ಕೊಂಡುಕೊಂಡರು. ಅವರಿಗೆ ನಾಲ್ಕು ಗಂಡು ಮಕ್ಕಳಿದ್ದರು ಹಾಗೂ ಒಬ್ಬ ಮಗಳಿದ್ದಳು. ಎಲ್ಲರಿಗೂ ಮದುವೆ ಮಾಡಿದರು. ಅರವತ್ತು ವರ್ಷಗಳಲ್ಲಿ ನನ್ನ ಮಾವನನ್ನು ಲಕ್ವ ತಿಂದು ಹಾಕಿತು. ನಾಲ್ಕು ಜನ ಮಕ್ಕಳು ಬೇರೆ ಬೇರೆಯಾಗಿ

ವಾಸಿಸಲ್ಪಟ್ಟರು. ಸ್ವಲ್ಪದಿನ ದೊಡ್ಡಮಗನ ಮನೆಯಲ್ಲಿದ್ದರು, ಆರು ತಿಂಗಳಲ್ಲೇ ಅವರ ಬಟ್ಟೆಗಳಲ್ಲಿ ಕೆಟ್ಟ ವಾಸನೆ ಬರತೊಡಗಿತು. ಎರಡನೇ ಮಗನ ಮನೆಯಲ್ಲಿರತೊಡಗಿದರು, ಅವನು ಇವರ ಮೇಲೆ ಕೈ ಎತ್ತಲು ಪ್ರಾರಂಭಿಸಿದನು. ಹೀಗೆ ನಾಲ್ಕು ಜನ ಗಂಡು ಮಕ್ಕಳು ಇವರ ಸೇವೆಯಿಂದ ದೂರಸರಿದರು. ಹಳ್ಳಿಯ ಪಂಚಾಯಿತಿಯಲ್ಲಿ, ಯಾರು ತಂದೆಯ ಸೇವೆ ಮಾಡುವರೋ, ಅವರಿಗೆ ಆಸ್ತಿಯಲ್ಲಿ ಎರಡು ಎಕರೆ ಹೆಚ್ಚಾಗಿ ಕೊಡುವುದಾಗಿ ತೀರ್ಮಾನವಾಯಿತು. ಈ ದುರಾಸೆಯಲ್ಲಿ ಕೊನೆ ಮಗನು ತಂದೆಯ ಸೇವೆ ಮಾಡಲು ಒಪ್ಪಿಕೊಂಡನು. ಆದರೆ **6** ತಿಂಗಳಲ್ಲೇ ನನಗೆ ಸಾಧ್ಯವಿಲ್ಲ ಎಂದು ಕೈ ಚೆಲ್ಲಿದನು. ನೆಂಟರಿಷ್ಟರೆಲ್ಲಾ ಒಂದೆಡೆ ಸೇರಿದರು. ಎಲ್ಲಾ ಮಕ್ಕಳಿಗೂ ಬುದ್ಧಿವಾದ ಹೇಳಿದರು. ಆದರೆ ಯಾರೂ ಇವರ ಸೇವೆ ಮಾಡಲು ಸಿದ್ಧರಿರಲಿಲ್ಲ. ಆ ಮಾವನು, ಮಾತನ್ನೂ ಸಹ ಆಡುತ್ತಿರಲಿಲ್ಲ. ಯಾವಾಗ ಮೊಮ್ಮಗ ಮುಂದೆ ಬಂದನೋ ಆಗ ಅವನು ತನ್ನ ಮೊಮ್ಮಗನನ್ನು ಸಂಜ್ಞೆಯಿಂದಲೇ ಬಳಿ ಬರುವಂತೆ ಕರೆಯುತ್ತಾ ಮುದ್ದು ಮಾಡಲು ಇಷ್ಟಪಟ್ಟನು. ನಂತರದ ದಿನಗಳಲ್ಲಿ ಆ ಮೊಮ್ಮಗನು ಆ ಎರಡು ಎಕರೆ ಜಮೀನನ್ನು ಪಡೆದುಕೊಂಡು ಅದನ್ನು ಗುತ್ತಿಗೆಗೆ ಕೊಟ್ಟು ತಾತನನ್ನು ನೋಡಿಕೊಳ್ಳಲು ಒಬ್ಬ ಕೆಲಸದವನನ್ನು ಇಟ್ಟು ದೂರ ಹೊರಟು ಹೋದನು. ಹೀಗೆ ಆ ಮಾವನು ದುರ್ಗತಿಯಿಂದ ತೀರಿಕೊಂಡನು.

ಈಗ ವಿಚಾರ ಮಾಡುವ ವಿಷಯವೇನೆಂದರೆ, ಆ ಪರಿಶ್ರಮೀ ವ್ಯಕ್ತಿಗೆ ಭಕ್ತಿ ಮತ್ತು ಧರ್ಮವಿಲ್ಲದಿದ್ದರೆ ಮಾನವ ಜೀವನ ನರಕವಾಗುವುದೆಂದು ತಿಳಿದಿದ್ದರೆ ಅವನು ಪರಮಾತ್ಮನಲ್ಲಿ ಭಕ್ತಿ ಇಡುತ್ತಿದ್ದನು. ಆಗ ಅವನಿಗೆ ಈ ಗತಿ ಒದಗುತ್ತಿರಲಿಲ್ಲ. ಮಕ್ಕಳೂ ಇವನ ಸೇವೆ ಮಾಡುತ್ತಿದ್ದರು. ಸತ್ಸಂಗದಲ್ಲಿ ಇದೇ ಶಿಕ್ಷಣವನ್ನು ನೀಡಲಾಗುತ್ತದೆ. ಶ್ರದ್ಧೆಯಿಂದ ಇರುವವರಿಗೆ ದಯೆ ಮತ್ತು ಧರ್ಮದ ಪಾಠವನ್ನು ಹೇಳಿಕೊಡಲಾಗುತ್ತದೆ. ಆಶ್ರಮದ ಸತ್ಸಂಗಕ್ಕೆ ವೃದ್ಧರು, ರೋಗಿಗಳು, ವಿಕಲಾಂಗರು, ಚಿಕ್ಕಮಕ್ಕಳ ಸಹಿತ ತಾಯಂದಿರು, ಅಕ್ಕಂದಿರು, ಹೆಣ್ಣುಮಕ್ಕಳು ಬರುತ್ತಾರೆ. ಆಶ್ರಮದಲ್ಲಿ ಹಳೇ ಭಕ್ತರು–ಭಕ್ತಿಮತಿಯರಿಗೆ ಸೇವೆ ನೀಡಲಾಗುತ್ತದೆ. ಅವರು ವೃದ್ಧರ ಹಾಗೂ ರೋಗಿಗಳ ಮತ್ತು ಅನ್ಯ ಅಸಹಾಯಕರ ಸೇವೆ ಮಾಡುತ್ತಾರೆ. ಅವರಿಗೆ ಸ್ನಾನ ಮಾಡಿಸುತ್ತಾರೆ, ಅವರ ಬಟ್ಟೆ ಒಗೆಯುತ್ತಾರೆ. ಭೋಜನಾಲಯದಿಂದ ಭೋಜನ ಪ್ರಸಾದವನ್ನು ತಂದು ಪೆಂಡಾಲಿನಲ್ಲಿ ಕುಳಿತಿರುವವರಿಗೆ ತಿನ್ನಿಸುತ್ತಾರೆ. ಹಾಗೆ ಕಾಫೀ ಟೀ ಕುಡಿಸುತ್ತಾರೆ. ಸಂಬಂಧವೇ ಇಲ್ಲದವರ ಸೇವೆ ಮಾಡುವವರು ಮನೆಯಲ್ಲಿ ತಮ್ಮ ಸ್ವಂತ ತಾಯಿ–ತಂದೆ, ಅಣ್ಣ–ತಮ್ಮ, ಅಕ್ಕ–ತಂಗಿ, ಅತ್ತೆ–ಮಾವನ ಸೇವೆ ಮಾಡದಿರುವರೆ? ಏಕೆಂದರೆ ಅವರ ಸ್ವಭಾವದಲ್ಲಿ ಬದಲಾವಣೆ ಕಂಡು ಬರುತ್ತದೆ. ಅವರ ಮನಸ್ಸಿನಲ್ಲಿ ದಯೆಯೇ ತುಂಬಿರುತ್ತದೆ. ಅವರಿಗೆ ಪರಮಾತ್ಮನ ವಿಧಾನವು ಚೆನ್ನಾಗಿ ತಿಳಿದಿರುತ್ತದೆ. ಮೇಲೆ ತಿಳಿಸಿದ ಪ್ರಸಂಗದಲ್ಲಿ ಅಂದರೆ ಆ ಪರಿಶ್ರಮಿ ರೈತನು ಲಕ್ವದಿಂದ ನರಳುವುದು ಹಾಗೂ ಅವರ ಮಕ್ಕಳು ಅವರನ್ನು ನೋಡಿಕೊಳ್ಳದೇ ಇರುವುದು ಎಲ್ಲವೂ ಆಯಿತು. ಒಂದು ವೇಳೆ ಆ ಮಕ್ಕಳು ಹಾಗೂ ಸೊಸೆಯಂದಿರು ಸತ್ಸಂಗಕ್ಕೆ ಹೋಗಿದ್ದರೆ ಅವರು ತಮ್ಮ ತಂದೆಯ ಸೇವೆ ಮಾಡುತ್ತಿದ್ದರು. ಒಂದು ವೇಳೆ ಆ ರೈತನು ಪರಮಾತ್ಮನಲ್ಲಿ ಭಕ್ತಿ ಇಟ್ಟಿದ್ದಲ್ಲಿ ಅವನ ಶರೀರವು ಆರೋಗ್ಯಪೂರ್ಣವಾಗಿರುತ್ತಿತ್ತು. ಉದಾಹರಣೆಗೆ ಸಾಧು ಸಂತರು ಭಕ್ತಿಯಿಂದಿರುತ್ತಾರೆ ಹಾಗಾಗಿ ಇಡೀ ಹಳ್ಳಿಯೇ ಅವರನ್ನು ಆದರದಿಂದ ಕಾಣುತ್ತದೆ. ಇದೇ ರೀತಿ ಭಕ್ತಿಯಿಂದ ಇದ್ದರೆ ಪರಮಾತ್ಮನ ಶಕ್ತಿಯು ತನ್ನಿಂದ ತಾನೇ ಬೇರೆಯವರಿಗೆ ಪ್ರೇರೇಪಿಸುತ್ತಾ ಭಕ್ತನಿಗೆ ಒಳ್ಳೆಯ ಪರಿಸ್ಥಿತಿ ತಂದೊಡ್ಡುತ್ತಿತ್ತು. ಆದ್ದರಿಂದ ಭಕ್ತಿಯಿಂದಿರುವಂತೆ ಸಂತರು ಪ್ರೇರಣೆಯನ್ನು ನೀಡುವರು. ಸತ್ಸಂಗದಿಂದ ಒಳ್ಳೆಯ ಬದುಕುವ ದಾರಿಯು ಸಿಗುತ್ತದೆ.

ಕಬೀರರು ಮತ್ತೆ ಹೇಳುತ್ತಾರೆ,

ಕಬೀರ್, ಕಾಯಾ ತೇರಿ ಹೈ ನಹೀಂ, ಮಾಯಾ ಕಹಾಂ ಸೆ ಹೋಯ್ ।

ಭಕ್ತಿ ಕರ್ ದಿಲ್ ಪಾಕ್ ಸೆ, ಜೀವನ್ ಹೈ ದಿನ್ ದೋಯ್ ॥
ಬಿನ್ ಉಪದೇಶ್ ಅಚಂಭ್ ಹೈ, ಕ್ಯೋಂ ಜಿವತ್ ಹೈ ಪ್ರಾಣ್ ।
ಭಕ್ತಿ ಬಿನಾ ಕಹಾಂ ಠೌರ್ ಹೈ, ಏ ನರ್ ನಾಹೀ ಪಾಷಾಣ್ ॥

**ಭಾವಾರ್ಥ:– ಪರಮಾತ್ಮ ಕಬೀರ್ ಹೇಳುವುದೇನೆಂದರೆ, 'ಹೇ ಮುಗ್ಧ ಮನುಷ್ಯನೇ, ಗುರುವಿನ ದೀಕ್ಷೆ ಇಲ್ಲದಿದ್ದರೆ ನೀನಿನ್ನೂ ಏಕೆ ಬದುಕಿರುವೆ? ಶರೀರವೂ ನಿನ್ನದಲ್ಲ, ಅದೂ ಹೊರಟು ಹೋಗುವುದು. ಇನ್ನು ಸಂಪತ್ತೆಲ್ಲಿಂದ ಬರುವುದು?'**

**ಭಕ್ತಿ ಇಲ್ಲದಿದ್ದರೆ ಜೀವಕ್ಕೆ ಜಾಗವೇ ಇಲ್ಲ ಎನ್ನುವ ವಿವೇಕ ಯಾರಿಗಿಲ್ಲವೋ ಅವರು ಮನುಷ್ಯರೇ ಅಲ್ಲ, ಅವರು ಒಂದು ಕಲ್ಲು, ಅವರ ಬುದ್ಧಿಗೆ ಮಂಕು ಕವಿದಿದೆ ಎಂದರ್ಥ. ಕಬೀರರು ಮತ್ತೆ ಹೇಳುವುದೇನೆಂದರೆ,**

ಅಗಮ್ ನಿಗಮ್ ಕೋ ಖೋಜ್ ಲೇ, ಬುದ್ಧಿ ವಿವೇಕ್ ವಿಚಾರ್।
ಉದಯ್–ಅಸ್ತ್ ಕಾ ರಾಜ್ ಮಿಲೆ, ತೋ ಬಿನ್ ನಾಮ್ ಬೇಗಾರ್ ॥

**ಭಾವಾರ್ಥ:– ಒಂದು ಕಾಲದಲ್ಲಿ ಪೊಲೀಸ್ ಠಾಣೆಯಲ್ಲಿ ಜೀಪು, ಕಾರುಗಳು ಇರುತ್ತಿರಲಿಲ್ಲ. ಪೋಲೀಸರು ರೇಡ್ ಮಾಡಬೇಕಾದರೆ ಯಾವುದಾದರೂ ಖಾಸಗಿ ಸ್ಕೂಟರ್ ಅಥವಾ ಕಾರಿನವನನ್ನು ಬಲವಂತವಾಗಿ ಹಿಡಿದು ತರುತ್ತಿದ್ದರು. ಅವರ ಸ್ಕೂಟರು, ಆಟೋ ಅಥವಾ ಕಾರಿನಲ್ಲಿ ಕುಳಿತು ಎಲ್ಲಿಗೆ ಹೋಗಬೇಕಿತ್ತೋ, ಅಲ್ಲಿಗೆ ಹೋಗುತ್ತಿದ್ದರು. ಡ್ರೈವರ್ ಕೂಡ ಅದೇ ಆಟೋದವನಾಗಿರುತ್ತಿದ್ದನು ಮತ್ತು ಪೆಟ್ರೋಲ್, ಡೀಸಲ್ಲನ್ನು ಸಹ ತನ್ನ ಜೇಬಿನಿಂದ ಹಾಕಿಸುತ್ತಿದ್ದನು. ಪೋಲೀಸರು ಇಡೀ ದಿನ ಅವನನ್ನು ಅಲ್ಲಿ–ಇಲ್ಲಿ ಸುತ್ತಿಸುತ್ತಿದ್ದರು. ಸಾಮಾನ್ಯ ಜನರು ಆಟೋವನ್ನು ನೋಡಿ, ಓ ಈ ದಿನ ಬಹಳ ಸಂಪಾದನೆ ಮಾಡಿದ್ದಾನೆ ಎಂದು ತಿಳಿಯುತ್ತಿದ್ದರು. ಇಡೀ ದಿನ ಕಳೆದಿದೆ, ಆದರೆ ಅವನಿಗೆ ಏನಾಯಿತೆಂದು ಅವನೊಬ್ಬನಿಗೆ ಮಾತ್ರ ಗೊತ್ತಿತ್ತು. ಇದೇ ರೀತಿ ರಾಜರೂ ಸಹ ಭಕ್ತಿಯಿಂದ ಇರುವುದನ್ನು ಬಿಟ್ಟು ಕೇವಲ ರಾಜ್ಯಭಾರ ಮಾಡುವುದರಲ್ಲೇ ಜೀವನವನ್ನು ಮುಗಿಸುತ್ತಿದ್ದರು. ವೃಥಾ ದುಡಿದು ಹೋಗುತ್ತಾರೆ. ಪೂರ್ವಜನ್ಮದ ಧರ್ಮ ಕರ್ಮಗಳಿಂದಲೇ ರಾಜನಾಗಲು ಸಾಧ್ಯ, ಇಂದಿನ ಜನ್ಮದಲ್ಲಿ ಆ ಪುಣ್ಯವನ್ನು ಖರ್ಚು ಮಾಡುತ್ತಿದ್ದಾರೆ. ರಾಜನು ಮಜಾ ಮಾಡುತ್ತಿದ್ದಾನೆಂದು ಸಾಮಾನ್ಯ ಜನತೆ ತಿಳಿದು ಕೊಳ್ಳುತ್ತದೆ. ಆಧ್ಯಾತ್ಮಿಕ ದೃಷ್ಟಿಯಿಂದ ನೋಡಿದರೆ ಅವನು ವ್ಯರ್ಥ ಕೆಲಸ ಮಾಡಿದ್ದಾನೆ. ಭಕ್ತಿಯನ್ನು ಸಂಪಾದಿಸಲಿಲ್ಲ. ಆ ವ್ಯಕ್ತಿ ಗುರುವಿನಿಂದ ದೀಕ್ಷೆ ಪಡೆದು ಭಕ್ತಿಯಿಂದ ಇರದೆ ಇದ್ದರೆ, ಅವನಿಗೆ ಇಡೀ ಪೃಥ್ವಿಯೇ ರಾಜ್ಯವಾಳಲು ಸಿಕ್ಕರೂ ಸಹ ಅವನು ಆಟೋದವನು ಸುತ್ತಿದಂತೆ ವ್ಯರ್ಥವಾಗಿ ಸುತ್ತುತ್ತಿರುತ್ತಾನೆ. ಅವನಿಗೆ ಯಾವುದೇ ಪ್ರಯೋಜನವಿರುವುದಿಲ್ಲ. ಆದ್ದರಿಂದಲೇ ರಾಜನಾಗಲೀ, ಧನಿಕನಾಗಲೀ, ಭಿಕ್ಷುಕನಾಗಲೀ, ಎಲ್ಲರೂ ಒಂದೇ ರೀತಿಯಾಗಿ ಭಕ್ತಿಯಿಂದ ಇರಬೇಕು. ಅಂತಹವರ ಭವಿಷ್ಯವು ಉಜ್ವಲವಾಗುವುದು.**

**ಪರಮಾತ್ಮ ಕಬೀರರು ತಮ್ಮ ಶಿಷ್ಯ ಸಂತ ಗರೀಬ್‌ದಾಸನಿಗೆ ತತ್ವಜ್ಞಾನವನ್ನು ತಿಳಿಸಿದ್ದಾರೆ. (ರಾಗ ಅಸಾವರಿ ಶಬ್ದ ಸಂಖ್ಯೆ 1)**

ಮನ್ ತೂ ಚಲಿ ರೇ ಸುಖ್ ಕೇ ಸಾಗರ್,
ಜಹಾಂ ಶಬ್ದ್ ಸಿಂಧು ರತ್ನಾಗರ್ । (ಟೇಕ್)

ಕೋಟಿ ಜನ್ಮ್ ತೋಹೇ ಮರತಾ ಹೋಗೆ, ಕುಛ್ ನಹೀಂ ಹಾಥ್ ಲಗಾ ರೇ ।
ಕುಕರ್–ಸುಕರ್ ಖರ್ ಭಯಾ ಬೌರೇ, ಕೌಆ ಹಂಸ್ ಬುಗಾ ರೇ ॥ (1)

ಕೋಟಿ ಜನ್ಮ್ ತೂ ರಾಜಾ ಕೀನ್ಹಾ, ಮಿಟಿ ನ ಮನ್ ಕೀ ಆಶಾ ।

ಭಿಕ್ಷುಕ್ ಹೋಕರ್ ದರ್–ದರ್ ಹಾಂಡ್ಯಾ, ಮಿಲ್ಯಾ ನ ನಿರ್ಗುಣ್ ರಾಸಾ ॥(2)

ಇಂದ್ರ್ ಕುಬೇರ್ ಈಶ್ ಕೀ ಪದವೀ, ಬ್ರಹ್ಮಾ, ವರುಣ್ ಧರ್ಮರಾಯಾ ।
ವಿಷ್ಣುನಾಥ್ ಕೇ ಪುರ್ ಕೂ ಜಾಕರ್, ಬಹುರ್ ಅಪೂಠಾ ಆಯಾ ॥ (3)

ಅಸಂಖ್ಯ್ ಜನ್ಮ್ ತೋಹೇ ಮರತೇ ಹೋಗೆ, ಜೀವಿತ್ ಕ್ಯೂಂ ನಾ ಮರ್ರೈ ರೇ ।
ದ್ವಾದಶ್ ಮಧ್ಯ್ ಮಹಲ್ ಮಠ್ ಬೌರೇ, ಬಹುರ್ ನ ದೇಹ್ ಧರ್ರೈ ರೇ ॥(4)

ದೋಜಖ್ ಬಹಿಶ್ತ್ ಸಭೀ ತೈ ದೇಖೆ, ರಾಜ–ಪಾಟ್ ಕೇ ರಸಿಯಾ ।
ತೀನ್ ಲೋಕ್ ಸೇ ತೃಪ್ತ್ ನಾಹೀಂ, ಯಹ್ ಮನ್ ಭೋಗೀ ಖಸಿಯಾ ॥(5)

ಸತಗುರು ಮಿಲೈ ತೋ ಇಚ್ಛಾ ಮೇಟೈ, ಪದ್ ಮಿಲ್ ಪದೈ ಸಮಾನಾ ।
ಚಲ್ ಹಂಸಾ ಉಸ್ ಲೋಕ್ ಪಠಾಊಂ, ಜೋ ಆದಿ ಅಮರ್ ಅಸ್ಥಾನಾ ॥(6)

ಚಾರ್ ಮುಕ್ತಿ ಜಹಾಂ ಚಂಪೀ ಕರತೀ, ಮಾಯಾ ಹೋ ರಹೀ ದಾಸೀ ।
ದಾಸ್ ಗರೀಬ್ ಅಭಯ್ ಪದ್ ಪರಸ್ಯೈ, ಮಿಲೈ ರಾಮ್ ಅವಿನಾಶೀ ॥(7)

**ಸೂಕ್ಷ್ಮವೇದದ ವಾಣಿಯ ಭಾವಾರ್ಥ:–**

**ಆತ್ಮ ಮತ್ತು ಮನಸ್ಸುಗಳನ್ನು ಪಾತ್ರಗಳನ್ನಾಗಿಸಿ ಸಂತ ಗರೀಬ್‌ದಾಸರು ಮಾನವನಿಗೆ ಹೇಳಿದ್ದಾರೆ. 'ಈ ಪ್ರಪಂಚ ದುಃಖಗಳ ಸಾಗರ. ಇದರಿಂದ ಭಿನ್ನವಾದ ಮತ್ತೊಂದು ಪ್ರಪಂಚವಿದೆ. ಅಲ್ಲಿ ಯಾವುದೇ ದುಃಖವಿಲ್ಲ ಆ ಸ್ಥಾನವು ಸತ್ಯಲೋಕ ಮತ್ತು ಅಲ್ಲಿಯ ಪ್ರಭು ಅವಿನಾಶಿ ಪರಮೇಶ್ವರ ಅದು ಸುಖದ ಸಾಗರ. ಸುಖ ಸಾಗರವೆಂದರೆ ಅಮರ ಪರಮಾತ್ಮ ಮತ್ತು ಅವನ ರಾಜಧಾನಿಯಾದ ಅಮರ ಲೋಕದ ಸಂಕ್ಷಿಪ್ತ ಪರಿಭಾಷೆಯನ್ನು ಹೇಳಲಾಗಿದೆ.**

ಶಂಖೋಂ ಲಹರ್ ಮೆಹರ್ ಕೀ ಊಪಜೈ, ಕಹರ್ ನಹೀಂ ಜಹಾಂ ಕೋಯೀ ।
ದಾಸ್ ಗರೀಬ್ ಅಚಲ್ ಅವಿನಾಶೀ, ಸುಖ್ ಕಾ ಸಾಗರ್ ಸೋಯೀ ॥

**ಭಾವಾರ್ಥ:– ಯಾವ ಸಮಯದಲ್ಲಿ ನಾನು (ಲೇಖಕ) ಒಬ್ಬಂಟಿಯಾಗುತ್ತೇನೋ, ಆಗಾಗ ಒಳಗಿನಿಂದ ಒಂದು ಅಲೆಯು ಏಳುತ್ತದೆ. ಆಗ ಎಲ್ಲರೂ ನನ್ನವರಂತೆ ಅನ್ನಿಸುತ್ತದೆ. ನನಗೆ ಯಾರು ಎಷ್ಟೇ ಕಷ್ಟ ಕೊಟ್ಟಿದ್ದರೂ, ಅವರ ಬಗ್ಗೆ ದ್ವೇಷ ಭಾವನೆ ಹುಟ್ಟುವುದಿಲ್ಲ. ಎಲ್ಲರ ಮೇಲೂ ದಯೆ ಉಂಟಾಗುತ್ತದೆ. ಈ ಸ್ಥಿತಿ ಕೇವಲ ಕೆಲವೇ ನಿಮಿಷಗಳಿರುತ್ತದೆ. ಸತ್ಯಲೋಕ ಅಂದರೆ ಪರಮ ಧಾಮಕ್ಕೆ ಹೋದ ನಂತರ ಪ್ರತ್ಯೇಕ ಪ್ರಾಣಿಗೆ ಆನಂದ ಸಿಗುತ್ತದೆ. ಅಲ್ಲಿ ಇಂತಹ ಅಸಂಖ್ಯ ಅಲೆಗಳು ಆತ್ಮದಲ್ಲಿ ಏಳುತ್ತಾ ಇರುತ್ತದೆ. ಯಾವಾಗ ಆ ಅಲೆಯು ನನ್ನ ಆತ್ಮದಿಂದ ದೂರವಾಗುತ್ತದೋ ಆಗ ನನಗೆ ದುಃಖಮಯವಾದ ಸ್ಥಿತಿ ಪ್ರಾರಂಭವಾಗುತ್ತದೆ. ಅವನ್ಯಾಕೆ ಹಾಗೆ ಹೇಳಿದ? ಆ ವ್ಯಕ್ತಿ ಒಳ್ಳೆಯವನಲ್ಲ, ಇದು ನಷ್ಟವಾಯಿತು, ಇದಾಯಿತು, ಅದಾಯಿತು, ಎಂದು ಪ್ರಾರಂಭವಾಗುತ್ತದೆ. ಅದನ್ನು ದುಃಖದ ಅಲೆ ಎಂದು ಹೇಳುತ್ತಾರೆ.**

**ಆ ಸತ್ಯಲೋಕದಲ್ಲಿ ಅಸಂಖ್ಯ ದಯೆಯ ಅಲೆಗಳು ಹುಟ್ಟುತ್ತವೆ. ಅಲ್ಲಿ ಯಾವುದೇ ದುಃಖ ಇರುವುದಿಲ್ಲ. ದುಃಖವೆಂದರೆ ಭಯಂಕರ ಕಷ್ಟ. ಹೇಗೆಂದರೆ, ಒಂದು ಹಳ್ಳಿಯಲ್ಲಿ ಪರಸ್ಪರ ದ್ವೇಷಿಸುತ್ತಿದ್ದ ಕುಟುಂಬಗಳು ತಮ್ಮ ವಿರೋಧಿಗಳ ಕುಟುಂಬದ ಮೂವರನ್ನು ಕೊಲೆ ಮಾಡುತ್ತಾರೆ. ಇನ್ನೊಂದು ಕಡೆ ಭೂಕಂಪದಿಂದ ಸಾವಿರಾರು ಜನರು ಸತ್ತು ಹೋಗುತ್ತಾರೆ. ಅದನ್ನೇ ಕಷ್ಟ ಆವರಿಸಿತು ಎಂದು ಹೇಳುವುದು. ಮೇಲೆ ತಿಳಿಸಿದ ಪದ್ಯದಲ್ಲಿ ಸುಖ–ಸಾಗರದ ಪರಿಭಾಷೆಯನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಆ ಅಮರ ಲೋಕವು ಅಚಲ ಅವಿನಾಶಿಯಾಗಿದೆ. ಅಂದರೆ ಅದು ಎಂದಿಗೂ ನಾಶವಾಗುವುದಿಲ್ಲ ಮತ್ತು ಅಲ್ಲಿ ವಾಸಿಸುವ ಪರಮೇಶ್ವರನು ಅವಿನಾಶಿಯಾಗಿದ್ದಾನೆ. ಆ ಜಾಗ ಮತ್ತು ಪರಮೇಶ್ವರ**

ಸುಖದ ಸಮುದ್ರವೇ ಸರಿ. ಸಮುದ್ರದ ಹಡಗು ಬಂದರಿನ ದಡದಿಂದ 100 ಅಥವಾ 200 ಕಿ.ಮೀ ದೂರ ಹೋಗಿನಿಂತಾಗ ಸಮುದ್ರದ ಯಾತ್ರಿಗಳಿಗೆ ಸಮುದ್ರದ ನೀರಿನ ವಿನಃ ಮತ್ತೇನೂ ಕಾಣಿಸುವುದಿಲ್ಲ. ಸುತ್ತಲೂ ನೀರೇ ತುಂಬಿರುತ್ತದೆ. ಹಾಗೆ ಸತ್ಯಲೋಕದಲ್ಲಿ ಸುಖದ ವಿನಃ ಬೇರೆ ಏನೂ ಇರುವುದಿಲ್ಲ. ಅಲ್ಲಿ ಬೇರೆ ದುಃಖವೇ ಇರುವುದಿಲ್ಲ.

ಮನ್ ತೂ ಚಲ್ ರೇ ಸುಖ್ ಕೇ ಸಾಗರ್, ಜಹಾಂ ಶಬ್ದ್ ಸಿಂಧು ರತ್ನಾಗರ್ । (ಟೇಕ್)

ಕೋಟಿ ಜನ್ಮ್ ತೋಹೇ ಭ್ರಮತ್ ಹೋಗೆ, ಕುಛ್ ನಹೀಂ ಹಾಥ್ ಲಗಾ ರೇ ।
ಕುಕರ್-ಸುಕರ್ ಖರ್ ಭಯಾ ಬೌರೇ, ಕೌಆ ಹಂಸ್ ಬುಗಾ ರೇ ॥

ಭಾವಾರ್ಥ:- ಪರಮೇಶ್ವರನಾದ ಕಬೀರರ ಶಿಷ್ಯನಾದ ಸಂತ ಗರೀಬ್‌ದಾಸರಿಗೆ ಸೂಕ್ಷ್ಮವೇದದ ಜ್ಞಾನವನ್ನು ತಿಳಿಸಿದರು. ಅದನ್ನೇ ಆತ್ಮ ಮತ್ತು ಮನಸ್ಸನ್ನು ಪಾತ್ರಗಳನ್ನಾಗಿ ಮಾಡಿ ವಿಶ್ವದ ಮಾನವರಿಗೆ ಕಾಲಬ್ರಹ್ಮಲೋಕದ ಕಷ್ಟವನ್ನು, ಸತ್ಯಲೋಕದ ಸುಖವನ್ನು ಹೇಳಿ ಆ ಪರಮಧಾಮಕ್ಕೆ ಹೋಗಲು ಸತ್ಯಸಾಧನೆ ಮಾಡಲು ಪ್ರೇರಣೆ ನೀಡಿದ್ದಾರೆ. 'ಹೇ ಮನಸ್ಸೇ, ನೀನು ಸುಖ ಸಾಗರದೆಡೆಗೆ ಹೋಗು ಅಂದರೆ ಶಬ್ದವು ನಾಶವಾಗದ ಸನಾತನ ಪರಮಧಾಮಕ್ಕೆ ಹೋಗು. ಶಬ್ದದ ಅರ್ಥ ಅವಿನಾಶಿಯಿಂದ ಕೂಡಿದೆ. ಈ ಕಾಲಬ್ರಹ್ಮನ ಲೋಕದಲ್ಲಿ ನೀವೆಲ್ಲ ಭಕ್ತಿಯಿಂದ ಇದ್ದಿರಿ. ಆದರೆ ತತ್ವದರ್ಶಿ ಸಂತನು ಸಿಗದ ಕಾರಣ ನೀವು ಸಾವಿರಾರು ಜನ್ಮಗಳಿಂದ ಅಲೆದಾಡುತ್ತಿರುವಿರಿ. ನೂರಾರು ಕೋಟಿ ಸಂಗ್ರಹ ಮಾಡುವುದರಲ್ಲಿ ಇಡೀ ಜೀವನ ಕಳೆದಿರುವಿರಿ. ನಂತರ ಸಾವು ಬಂದೆರಗುತ್ತದೆ. ನೀವು ಇದನ್ನು ಬಿಟ್ಟು ಇನ್ನೇನೂ ಮಾಡಲಿಲ್ಲ. ಪರಮಾತ್ಮನಲ್ಲಿ ಶಾಸ್ತ್ರೋಕ್ತವಾಗಿ ಭಕ್ತಿಯ ಸಾಧನೆ ಮಾಡಿಲ್ಲ. ಪೂರ್ವಜನ್ಮದ ಪುಣ್ಯದಿಂದ ಹಣ ಗಳಿಸಿದಿರಿ, ಆದರೆ ಆ ಹಣವೂ ಉಳಿಯಲಿಲ್ಲ, ನಿಮಗೆ ಮತ್ತಿನ್ನೇನೂ ಸಿಗಲಿಲ್ಲ. ಹಾಗಾಗಿ ನೀವು ನಾಯಿ, ಕತ್ತೆ, ಹಂದಿ, ಕಾಗೆ, ಹಂಸ, ಬಕಪಕ್ಷಿ ಮುಂತಾದ ಜನ್ಮ ತಳೆದು ಕಷ್ಟಪಡುವಿರಿ.

ಕೋಟಿ ಜನ್ಮ್ ತೂ ರಾಜಾ ಕೀನ್ಹಾ, ಮಿಟಿ ನ ಮನ್ ಕೀ ಆಶಾ ।
ಭಿಕ್ಷುಕ್ ಹೋಕರ್ ದರ್-ದರ್ ಹಾಂಡ್ಯಾ, ಮಿಲ್ಯಾ ನ ನಿರ್ಗುಣ್ ರಾಸಾ ॥

ಸರಳಾರ್ಥ:-ಹೇ ಮಾನವ, ನೀನು ಬ್ರಹ್ಮನನ್ನು ಬಹಳ ಕಷ್ಟದಿಂದ ಒಲಿಸಿಕೊಳ್ಳಲು ಪ್ರಯತ್ನಿಸಿದೆ. ಮನೆ ಮಠ ಬಿಟ್ಟು ಕಾಡಿನಲ್ಲಿ ವಾಸಿಸಿದೆ. ಮನೆ-ಮನೆ, ಬೀದಿ-ಬೀದಿ ಅಲೆದೆ. ಬಿಕ್ಷೆಬೇಡಿ ಕಾಡಿನಲ್ಲಿ ಸಾಧನೆಯಲ್ಲಿರುವ ಸಾಧಕರು ಹಳ್ಳಿ, ಹಳ್ಳಿ, ಪಟ್ಟಣಗಳಿಗೆ ಹೋಗುತ್ತಾರೆ. ಒಂದು ಮನೆಯಲ್ಲಿ ಅವರಿಗೆ ಬೇಕಾಗುವಷ್ಟು ಬಿಕ್ಷೆ ಸಿಗದಿದ್ದರೆ ಬೇರೆ ಮನೆಗಳಿಗೆ ತೆರಳಿ ಊಟವನ್ನು ಪಡೆದು ಮತ್ತೆ ಕಾಡಿಗೆ ಮರಳುತ್ತಾರೆ. ಒಮ್ಮೊಮ್ಮೆ ಸಾಧಕರು ಒಂದು ಬಾರಿ ಪಡೆದ ಬಿಕ್ಷೆಯಲ್ಲೇ 2-3 ದಿನ ಕಾಲ ಕಳೆಯುತ್ತಾರೆ. ರೊಟ್ಟಿಗಳನ್ನು ತೆಳುವಾದ ಬಟ್ಟೆಯಲ್ಲಿ ಕಟ್ಟಿ ಮರದ ಟೊಂಗೆಗೆ ನೇತು ಹಾಕುತ್ತಾರೆ. ಅವು ಒಣಗಿಹೋಗುತ್ತವೆ. ಅದನ್ನು ನೀರಿನಲ್ಲಿ ನೆನೆಸಿ, ಮೆತ್ತಗೆ ಮಾಡಿಕೊಂಡು ತಿನ್ನುತ್ತಾರೆ. ಪ್ರತಿದಿನ ಬಿಕ್ಷೆಗಾಗಿ ಹೋಗುವ ಸಮಯವನ್ನು ವ್ಯರ್ಥಮಾಡಲು ಇಚ್ಛಿಸದೇ ಆ ಸಮಯವನ್ನು ಉಳಿಸಿ ಬ್ರಹ್ಮನ ಸಾಧನೆಯಲ್ಲಿ ತೊಡಗುತ್ತಾರೆ. ಅಂದರೆ ಜನನ ಮರಣದಿಂದ ಮುಕ್ತಿ ಪಡೆಯಲು, ಮೋಕ್ಷ ಪ್ರಾಪ್ತಿಗಾಗಿ ವೇದಗಳಲ್ಲಿ ವರ್ಣಿಸಿದಂತೆ ಘೋರವಾದ ತಪಸ್ಸನ್ನು ಆಚರಿಸುತ್ತಾರೆ. ಅವರಿಗೆ ತತ್ವದರ್ಶಿ ಸಂತನು ಸಿಗದ ಕಾರಣ ಅವರು ಈ ರೀತಿ ತಪಸ್ಸನ್ನು ಆಚರಿಸುತ್ತಾರೆ. ಗುಪ್ತಜ್ಞಾನವನ್ನು ತತ್ವಜ್ಞಾನವೆನ್ನುತ್ತಾರೆ. ಅದು ಸಿಗಲಾರದು. ಏಕೆಂದರೆ ಯಜುರ್ವೇದ 40ನೇ ಅಧ್ಯಾಯದ 10ನೇ ಮಂತ್ರದಲ್ಲಿ ಹಾಗೂ ನಾಲ್ಕೂ ವೇದಗಳ ಸಾರಾಂಶ ರೂಪಿ ಭಗವದ್ಗೀತೆಯ 4ನೇ ಅಧ್ಯಾಯದ 32 ಮತ್ತು 34ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಯಜ್ಞಗಳಲ್ಲಿ ಅಂದರೆ ಧಾರ್ಮಿಕ ಕಾರ್ಯಗಳಲ್ಲಿ ವಿಸ್ತೃತ ಜ್ಞಾನವನ್ನು ಸ್ವತಃ ಸಚ್ಚಿದಾನಂದ ಘನ ಬ್ರಹ್ಮ ಅಂದರೆ ಪರಮ ಅಕ್ಷರ ಬ್ರಹ್ಮ ತನ್ನ ಮುಖದಿಂದ ಬೇರೆಯವರಿಗೆ ಹೇಳುತ್ತಾನೋ ಅದನ್ನೇ ತತ್ವಜ್ಞಾನ ಅರ್ಥಾತ್ ಸೂಕ್ಷ್ಮವೇದ ಎನ್ನುತ್ತಾರೆ. ಗೀತೆಯ ಜ್ಞಾನವನ್ನು ಕೊಡುವಾತನು

ಹೇಳಿರುವುದೇನೆಂದರೆ, ಆ ತತ್ವಜ್ಞಾನವನ್ನು ನೀನು ತತ್ವಜ್ಞಾನಿಗಳ ಬಳಿ ಹೋಗಿ ತಿಳಿದುಕೋ, ಅವರಿಗೆ ದಂಡವತ್ ಪ್ರಣಾಮ್ ಮಾಡುವುದರಿಂದ ಹಾಗೂ ವಿನಮ್ರತೆಯಿಂದ ಪ್ರಶ್ನೆ ಕೇಳುವುದರಿಂದ ಆ ಪರಮಾತ್ಮ ತತ್ವವನ್ನು ಚೆನ್ನಾಗಿ ತಿಳಿದಿರುವ ತತ್ವದರ್ಶಿ ಸಂತನು ನಿನಗೆ ಆ ತತ್ವಜ್ಞಾನವನ್ನು ಉಪದೇಶಿಸುವನು. ಇದರಿಂದ ತತ್ವಜ್ಞಾನವು ವೇದಗಳಲ್ಲಿ ಅಥವಾ ಗೀತೆಯಲ್ಲಿ ಇಲ್ಲ ಎಂದು ತಿಳಿಯುತ್ತದೆ. ಅದು ಇದ್ದಿದ್ದರೆ ಇನ್ನೊಂದು ಅಧ್ಯಾಯ ಬರೆದು ತತ್ವಜ್ಞಾನ ಅದರಲ್ಲಿದೆ ಎಂದು ಹೇಳುತ್ತಿದ್ದರು. ಸಂತ ಗರೀಬ್‌ದಾಸರು ಮಾನವ ಶರೀರ ಉಳ್ಳವರಿಗೆ ತಿಳಿಸುವುದೇನೆಂದರೆ, ತತ್ವಜ್ಞಾನ ಸಿಗದ ಕಾರಣ ಕಾಲಬ್ರಹ್ಮನ ಸಾಧನೆ ಮಾಡಿ ಕೋಟಿ ಕೋಟಿ ಜನ್ಮ ನೀವು ರಾಜರಾಗಿದ್ರಿ. ಆದರೂ ತೃಪ್ತಿಯಾಗಲಿಲ್ಲ. ಏಕೆಂದರೆ ಆ ರಾಜನೂ ಸಹ ಸುಖ ಎನ್ನುವುದು ಸ್ವರ್ಗದಲ್ಲಿದೆ. ಇಲ್ಲಿ ರಾಜನಾಗಿ ಯಾವ ಸಂತೋಷವೂ ಇಲ್ಲ. ಎಂದು ಚಿಂತಿಸುತ್ತಾನೆ. ನಿರ್ಗುಣವೆಂದರೆ, ಯಾವುದೇ ವಸ್ತುವಿನಿಂದ ಲಾಭಸಿಗದಿರುವುದು. ಮರದ ಬೀಜದಲ್ಲಿ ಹಣ್ಣು ಅಥವಾ ಗಿಡವಾಗಿ ಬೆಳೆಯುವುದು–ಇವು ನಿರ್ಗುಣರೂಪದಲ್ಲಿದೆ. ಆ ಬೀಜವನ್ನು ಮಣ್ಣಿನಲ್ಲಿ ಬಿತ್ತಿ, ನೀರುಣಿಸಿ, ಮತ್ತೆ ವೃಕ್ಷವನ್ನಾಗಿ ಬೆಳೆಸಬಹುದು. ಆ ಅರಿವು ಇಲ್ಲದ ಕಾರಣ ನಾವು ಹಣ್ಣಿನಿಂದ ಹಾಗೂ ಮರದ ನೆರಳಿನಿಂದ ವಂಚಿತರಾಗುತ್ತಿದ್ದೇವೆ. ಸೂಕ್ಷ್ಮ ವೇದದಲ್ಲಿ ಪರಮೇಶ್ವರ ಕಬೀರರು ಹೇಳಿರುವುದೇನೆಂದರೆ.

ಕಬೀರ್, ನೌ ಮನ್ ಸೂತ್ ಉಲಝಿಯಾ, ಋಷಿ ರಹೇ ಝಖ್ ಮಾರ್ ।
ಸತ್‌ಗುರು ಐಸಾ ಸುಲಝಾ ದೇ, ಉಲಝೇ ನ ದೂಜೀ ಬಾರ್ ॥

**ಸರಳಾರ್ಥ:–** ಆಧ್ಯಾತ್ಮ ಜ್ಞಾನ ರೂಪಿಯಾದ ನೌ ಮನ್ (360 ಕಿ. ಗ್ರಾಂ.) ಹತ್ತಿ ಸಿಕ್ಕಾಗಿದೆ. ಒಂದು ಕೆಜಿ ಹತ್ತಿಯನ್ನು ಬಿಡಿಸಲು ನೇಕಾರರಿಗೆ ಒಂದು ದಿನಕ್ಕಿಂತ ಹೆಚ್ಚು ಸಮಯ ಬೇಕಾಗುತ್ತದೆ. ಬಿಡಿಸುವಾಗ, ದಾರ ಮಾಡುವಾಗ ತುಂಡಾದರೆ, ಬಟ್ಟೆ ನೇಯುವಾಗ ಗಂಟಾಗುತ್ತದೆ. ಗಂಟು ಗಂಟಾದ ಬಟ್ಟೆಯನ್ನು ಯಾರೂ ಕೊಳ್ಳುವುದಿಲ್ಲ. ಆದ್ದರಿಂದ ಗಂಟಾದ ಹತ್ತಿಯನ್ನು ಬಿಡಿಸಲು ಯಾರಿಂದಲೂ ಸಾಧ್ಯವಿಲ್ಲ, ಆಧ್ಯಾತ್ಮ ಜ್ಞಾನವು ಗಂಟಾದ ಹತ್ತಿಯಂತೆ, ಅದನ್ನು ತತ್ವದರ್ಶಿ ಸಂತನು ಮಾತ್ರ ಬಿಡಿಸಲು ಸಾಧ್ಯ ಅದು ಮತ್ತೆ ಗಂಟಾಗುವುದಿಲ್ಲ ಎಂದು ಪರಮೇಶ್ವರ ಕಬೀರನೆಂಬ ನೇಕಾರರು ಹೇಳಿದ್ದಾನೆ. ಬಿಡಿಸದ ಹತ್ತಿಯಂತಿರುವ ಆಧ್ಯಾತ್ಮದ ಜ್ಞಾನದಿಂದ ಅಂದರೆ ಲೋಕವೇದದ ಆಧಾರದಿಂದ ಸಾಧನೆಮಾಡಿ, ಸ್ವರ್ಗ–ನರಕ ಇರುವ 84 ಲಕ್ಷ ಪ್ರಾಣಿಗಳು ಜನ್ಮ ಪಡೆಯುತ್ತಾರೆ, ಪೃಥ್ವಿಯ ಮೇಲೆ ರಾಜನಾಗುತ್ತಾರೆ, ಸ್ವರ್ಗದ ರಾಜನಾಗುತ್ತಾರೆ ಪುನಃ ಜನನ–ಮರಣದ ಚಕ್ರದಲ್ಲಿ ಬಿದ್ದು ಕಷ್ಟದ ಮೇಲೆ ಕಷ್ಟ ಪಡುತ್ತಾರೆ. ಆದರೆ ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಹೇಳಿರುವಂತೆ ವೇದಗಳಲ್ಲಿ ವರ್ಣಿಸಿರುವ ಕಾಲಬ್ರಹ್ಮನ ಸಾಧನೆ ಮಾಡುವುದರಿಂದ ಪರಮ ಶಾಂತಿಯಾಗಲೀ ಹಾಗೂ ಸನಾತನ ಪರಮಧಾಮ ಪ್ರಾಪ್ತಿಯಾಗಲಿಲ್ಲ. ಹಾಗೂ ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಿರುವಂತೆ ಸಾಧಕನು ಮರಳಿ ಈ ಪ್ರಪಂಚಕ್ಕೆ ಬಾರದಿರುವ ಆ ಪರಮೇಶ್ವರನ ಪರಮ ಪದವಿಯೂ ಪ್ರಾಪ್ತವಾಗಲಿಲ್ಲ.

ವಾಣಿ ಸಂಖ್ಯೆ 3 :–
ಇಂದ್ರ್–ಕುಬೇರ್, ಈಶ್ ಕೀ ಪದವೀ, ಬ್ರಹ್ಮಾ ವರುಣ್ ಧರ್ಮರಾಯಾ ।
ವಿಷ್ಣುನಾಥ್ ಕೆ ಪುರ್ ಕೂಂ ಜಾಕರ್, ಬಹುರ್ ಅಪೂಠಾ ಆಯಾ ॥

**ಸರಳಾರ್ಥ:–** ಕಾಲಬ್ರಹ್ಮನ ಸಾಧನೆ ಮಾಡಿ ಸಾಧಕನು ಇಂದ್ರನ ಪದವಿಯನ್ನು ಗಳಿಸುತ್ತಾನೆ. ಇಂದ್ರನು ಸ್ವರ್ಗದ ರಾಜ. ಅವನಿಗೆ ದೇವರಾಜ ಅಥವಾ ದೇವ–ದೇವತೆಗಳ ರಾಜ ಮತ್ತು ಸುರಪತಿ ಎಂದೂ ಕರೆಯುತ್ತಾರೆ. ಅವನು ವರುಣದೇವನನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುತ್ತಾನೆ.

**ಪ್ರಶ್ನೆ:–** ಇಂದ್ರ ಪದವಿ ಹೇಗೆ ಪ್ರಾಪ್ತವಾಗುತ್ತದೆ?

ಉತ್ತರ:– ಅಧಿಕ ತಪಸ್ಸನ್ನು ಮಾಡುವುದರಿಂದ ಹಾಗೂ 100 ಮಣ ಅಂದರೆ 4 ಸಾವಿರ ಕೆ.ಜಿ ಹಸು ಅಥವಾ ಎಮ್ಮೆಯ ತುಪ್ಪವನ್ನು ಹಾಕಿ ಧರ್ಮಯಜ್ಞವನ್ನು ಮಾಡುವುದರಿಂದ ಒಂದು ಧರ್ಮಯಾಗ ಪೂರ್ಣಗೊಳ್ಳುತ್ತದೆ. ಇಂತಹ ನೂರು ಧರ್ಮಯಾಗಗಳನ್ನು ನಿರ್ವಿಘ್ನವಾಗಿ ಮಾಡುವುದರಿಂದ ಇಂದ್ರನ ಪದವಿಯನ್ನು ಸಾಧಕನು ಗಳಿಸಬಲ್ಲನು. ತಪಸ್ಸು ಅಥವಾ ಯಾಗಗಳನ್ನು ಮಾಡುವಾಗ ಭಂಗವುಂಟಾದರೆ ಮತ್ತೆ ಮೊದಲಿನಿಂದ ತಪಸ್ಸನ್ನು ಹಾಗೂ ಯಜ್ಞವನ್ನು ಪ್ರಾರಂಭಿಸಬೇಕಾಗುತ್ತದೆ.

ಪ್ರಶ್ನೆ:– ಇಂದ್ರನ ಆಡಳಿತ ಕಾಲ ಎಷ್ಟು? ಸಾವಿನ ನಂತರ ಇಂದ್ರನ ಪದವಿಯನ್ನು ಬಿಟ್ಟು ಯಾವ ಪ್ರಾಣಿಯ ಜನ್ಮವನ್ನು ತಾಳಬಹುದು?

ಉತ್ತರ:– ಇಂದ್ರನು ಸ್ವರ್ಗದ ರಾಜ. ಅವನು ಪದವಿಯಲ್ಲಿ 72 ಚತುರ್ಯುಗದವರೆಗೆ ಇರುತ್ತಾನೆ. ಒಂದು ಚತುರ್ಯುಗವೆಂದರೆ ಸತ್ಯಯುಗ+ತ್ರೇತಾಯುಗ+ದ್ವಾಪರಯುಗ ಮತ್ತು ಕಲಿಯುಗದ ಸಮಯ. 1728000+1296000+8640000+4320000 ಕ್ರಮಶಃ ಸತ್ಯಯುಗ+ತ್ರೇತಾಯುಗ+ ದ್ವಾಪರಯುಗ+ಕಲಿಯುಗದ ಸಮಯ. 43 ಲಕ್ಷ 20 ಸಾವಿರ ವರ್ಷಕ್ಕೆ ಸಮ. ಅಂತಹ 72 ಚತುರ್ಯುಗದವರೆಗೆ ಸಾಧಕನು ಇಂದ್ರನ ಪದವಿ ಪಡೆದು ಸ್ವರ್ಗದ ರಾಜನಾಗಿ ಸುಖವನ್ನು ಅನುಭವಿಸುತ್ತಾನೆ. ಒಂದು ಕಲ್ಪವೆಂದರೆ ಬ್ರಹ್ಮಾನ ಒಂದು ದಿನದಲ್ಲಿ (ಅಂದರೆ 1008 ಚತುರ್ಯುಗ) 14 ಜೀವ ಇಂದ್ರನ ಪದವಿಯಲ್ಲಿದ್ದು ತಾನು ಮಾಡಿದ ಪುಣ್ಯಕರ್ಮವನ್ನು ಅನುಭವಿಸುತ್ತಾನೆ. ನಂತರ ಕತ್ತೆಯ ಜೀವನ ಪ್ರಾಪ್ತವಾಗುತ್ತದೆ.

## "ಮಾರ್ಕಂಡೇಯ ಋಷಿ ಮತ್ತು ಅಪ್ಸರೆಯ ಸಂವಾದ"

ಒಮ್ಮೆ ಬಂಗಾಳದ ಕಾಡಿನಲ್ಲಿ ಮಾರ್ಕಂಡೇಯ ಋಷಿ ತಪಸ್ಸು ಮಾಡುತ್ತಿದ್ದರು. ಇಂದ್ರನ ಪದವಿ ಸಿಗಬೇಕಾದರೆ 72 ಚತುರ್ಯುಗಗಳವರೆಗೆ ಯಾರಾದರೂ ಇಂದ್ರನ ಪದವಿ ಪಡೆಯಲು ಯೋಗ್ಯವಾದಂಥಾ ಧರ್ಮಯಜ್ಞವನ್ನು ಮಾಡಿದರೆ ಮತ್ತು ಅವನ ಈ ಕಾರ್ಯದ ಮಧ್ಯದಲ್ಲಿ ಯಾವುದೇ ವಿಘ್ನಗಳಾಗದೆ ಇದ್ದರೆ ಆ ಸಾಧಕನಿಗೆ ಇಂದ್ರನ ಪದವಿ ದೊರಕುತ್ತದೆ ಮತ್ತು ಆ ಪದವಿಯನ್ನು ವರ್ತಮಾನದಲ್ಲಿದ್ದ ಇಂದ್ರನಿಂದ ಕಿತ್ತುಕೊಳ್ಳಲಾಗುತ್ತದೆ ಎನ್ನುವುದು ನಿಜ. ಆದ್ದರಿಂದ ಇಂದ್ರನು ತನ್ನ ಆಡಳಿತ ಕಾಲದಲ್ಲಿ ಯಾವ ಸಾಧಕನಿಗೂ ಅದು ಲಭ್ಯವಾಗದಂತೆ ತಪಸ್ಸಿಗೋ ಅಥವಾ ಧರ್ಮಯಜ್ಞಕ್ಕೋ ಭಂಗ ಬರುವಂತೆ ಮಾಡುತ್ತಾನೆ. ಅವನ ಸಾಧನೆಯು ಪೂರ್ಣವಾಗದಂತೆ ಮಾಡುತ್ತಾನೆ.

ಇಂದ್ರನಿಗೆ ಅವನ ದೂತರು ಬಂದು ಬಂಗಾಳದ ಕಾಡಿನ ಗುಹೆಯಲ್ಲಿ ಮಾರ್ಕಂಡೇಯನೆಂಬ ಋಷಿ ತಪಸ್ಸನ್ನಾಚರಿಸುತ್ತಿದ್ದಾರೆ ಎಂದು ತಿಳಿಸಿದರು. ಇಂದ್ರನು ಮಾರ್ಕಂಡೇಯನ ತಪಸ್ಸನ್ನು ಭಂಗ ಮಾಡಲು ಊರ್ವಶಿಯನ್ನು ಕಳುಹಿಸಿಕೊಟ್ಟನು. ಊರ್ವಶಿಯು ಸಕಲ ಶೃಂಗಾರದಿಂದ ಮಾರ್ಕಂಡೇಯ ಋಷಿಯ ಮುಂದೆ ನೃತ್ಯ ಮಾಡತೊಡಗಿದಳು. ತನ್ನ ಸಿದ್ಧಿ ಶಕ್ತಿಯಿಂದ ಆ ಜಾಗವನ್ನು ವಸಂತ ಋತುವಿನಂತೆ ವಾತಾವರಣವನ್ನು ಮಾರ್ಪಾಡು ಮಾಡಿದ್ದಳು. ಮಾರ್ಕಂಡೇಯ ಋಷಿಯು ಊರ್ವಶಿಯ ಮೇಲೆ ಯಾವುದೇ ಉತ್ಸುಕತೆ ತೋರಿಸಲಿಲ್ಲ. ಊರ್ವಶಿಯು ತನ್ನ ಸೊಂಟದ ಲಾಡಿಯನ್ನು ಬಿಚ್ಚಿ ವಿವಸ್ತ್ರಳಾದಳು. ಆಗ ಮಾರ್ಕಂಡೇಯ ಋಷಿ, "ಹೇ ಮಗಳೇ, ಹೇ ಸಹೋದರಿಯೇ, ಹೇ ಅಮ್ಮಾ, ನೀನೇನು ಮಾಡುತ್ತಿರುವೆ? ನೀನು ಈ ದಟ್ಟಡವಿಗೆ ಒಬ್ಬಳೇ ಏಕೆ ಬಂದೆ?" ಎಂದು ಕೇಳಿದನು. ಆಗ ಊರ್ವಶಿಯು, "ಹೇ ಋಷಿಗಳೇ, ನನ್ನ ಈ ರೂಪವನ್ನು ನೋಡಿ ಈ ವನದಲ್ಲಿರುವ ಎಲ್ಲಾ ಸಾಧಕರು ತಮ್ಮ ಸಂಯಮವನ್ನು ಕಳೆದುಕೊಂಡಿದ್ದಾರೆ. ಆದರೆ ನೀವು ಮಿಸುಕಾಡಲಿಲ್ಲ. ನಿಮ್ಮ ಗಮನ ಎಲ್ಲಿತ್ತು ಎನ್ನುವುದು ತಿಳಿಯಲಿಲ್ಲ. ದಯಮಾಡಿ ನೀವು ನನ್ನ ಜೊತೆ ಇಂದ್ರಲೋಕಕ್ಕೆ ಬನ್ನಿ.

ಇಲ್ಲದಿದ್ದರೆ ನಾನು ಸೋತು ಬಂದಿದ್ದೇನೆಂದು ನನಗೆ ಶಿಕ್ಷೆಯಾಗುವುದು" ಎಂದಳು. ಆಗ ಮಾರ್ಕಂಡೇಯ ಮಹರ್ಷಿಗಳು, "ನನ್ನ ಗಮನ ಬ್ರಹ್ಮಲೋಕಕ್ಕೆ ಹೋಗಿತ್ತು. ಅಲ್ಲಿ ನಾನು ಊರ್ವಶಿಯರ ನೃತ್ಯ ನೋಡುತ್ತಿದ್ದೆ. ಅವರು ಎಷ್ಟು ಸುಂದರಿಯರಾಗಿದ್ದರೆಂದರೆ, ನಿನ್ನಂಥಾ 7–7 ಜನ ಸುಂದರಿಯರು ಅವರಿಗೆ ಜವಾನಿಯರಾಗಿದ್ದರು. ಹಾಗಾಗಿ ನಿನ್ನನ್ನು ನಾನೇಕೆ ನೋಡಲಿ? ನಾನೇಕೆ ಆಸಕ್ತಿ ತೋರಿಸಲಿ? ನಿನಗಿಂತ ಅಪ್ಸರೆಯರಿದ್ದರೆ ಅವರನ್ನು ಕರೆದುಕೊಂಡು ಬಾ" ಎಂದು ಹೇಳಿದರು. ಆಗ ಆ ದೇವಕನ್ಯೆಯು "ಇಂದ್ರನ ರಾಣಿ ನಾನೇ. ನನಗಿಂತ ಸುಂದರಿಯರು ಈ ಸ್ವರ್ಗದಲ್ಲಿ ಯಾರೂ ಇಲ್ಲ" ಎಂದಳು. ಆಗ ಮಾರ್ಕಂಡೇಯ ಋಷಿಯು, ಇಂದ್ರನ ಸಾವುಂಟಾದಾಗ ನೀನೇನು ಮಾಡುವೆ' ಎಂದು ಕೇಳಿದನು. ಆಗ ಊರ್ವಶಿಯು 'ನಾನು 14 ಇಂದ್ರರನ್ನು ಅನುಭವಿಸುತ್ತೇನೆ' ಎಂದು ಹೇಳಿದಳು. ಅಂದರೆ ಬ್ರಹ್ಮಾನ ಒಂದು ದಿನದಲ್ಲಿ 1008 ಚತುರ್ಯುಗಗಳಿರುತ್ತವೆ. ಅದರಲ್ಲಿ 72–72 ಚತುರ್ಯುಗಗಳ ಆಡಳಿತ ಕಾಲವನ್ನು ಪೂರ್ಣಗೊಳಿಸಿ 14 ಇಂದ್ರರು ಮೃತ್ಯುವನ್ನು ಪಡೆಯುತ್ತಾರೆ. ಇಂದ್ರನ ರಾಣಿಯ ಆತ್ಮವು ಯಾವುದೋ ಮಾನವ ಜನ್ಮದಲ್ಲಿ ಸಾಕಷ್ಟು ಪುಣ್ಯವನ್ನು ಮಾಡಿದ್ದಿರಬಹುದು. ಆ ಕಾರಣದಿಂದ ಅವಳು 14 ಇಂದ್ರರ ಪಟರಾಣಿಯಾಗಿ ಸ್ವರ್ಗಸುಖ ಹಾಗೂ ಪುರುಷ ಸುಖವನ್ನು ಅನುಭವಿಸುತ್ತಾಳೆ.

ಮಾರ್ಕಂಡೇಯ ಋಷಿಯು ಹೇಳಿದರು, "ಆ 14 ಇಂದ್ರರೂ ಸಾಯುತ್ತಾರೆ, ಆಗ ನೀನೇನು ಮಾಡುವೆ?" ಆಗ ಊರ್ವಶಿ ಹೇಳಿದಳು, "ಮತ್ತೆ ನಾನು ಮೃತ್ಯು ಲೋಕದಲ್ಲಿ ಕತ್ತೆಯಾಗಿ ಹುಟ್ಟುತ್ತೇನೆ. ಎಷ್ಟು ಜನ ಇಂದ್ರರು ನನ್ನ ಪತಿಯಾಗುವರೋ ಅವರೂ ಸಹ ಪೃಥ್ವಿಯಲ್ಲಿ ಕತ್ತೆಯಾಗಿ ಹುಟ್ಟುತ್ತಾರೆ" ಆಗ ಮಾರ್ಕಂಡೇಯರು "ಹಾಗಾದರೆ ನನ್ನನ್ನು ಅಂಥಾ ಲೋಕಕ್ಕೆ ಏಕೆ ಕರೆದೊಯ್ಯುತ್ತಿರುವೆ? ಎಲ್ಲಿ ರಾಜನು ಕತ್ತೆಯಾಗುವನೋ, ಎಲ್ಲಿ ರಾಣಿಯು ಕತ್ತೆಯಾಗುವಳೋ ಅಲ್ಲಿಗೇಕೆ ನಾನು ಬರಬೇಕು?" ಎಂದರು. ಆಗ ಊರ್ವಶಿಯು ನನ್ನ ಗೌರವವನ್ನು ಉಳಿಸಿಕೊಳ್ಳಬೇಕು. ಇಲ್ಲದಿದ್ದರೆ ಅವರು ನೀನು ಸೋತು ಬಂದಿರುವೆ ಎನ್ನುತ್ತಾರೆ" ಎಂದಳು.

ಮಾರ್ಕಂಡೇಯ ಋಷಿಗಳು ಹೇಳಿದರು, "ಕತ್ತೆಗಳಿಗೆ ಎಂಥಾ ಗೌರವ? ನೀನು ಈಗಲೂ ಕತ್ತೆಯೇ. ಏಕೆಂದರೆ ನಾನು ನೂರಾರು ಆಣೆ ಪ್ರಮಾಣ ಮಾಡುವೆ. ಸತ್ತ ನಂತರ ನೀನು ಕತ್ತೆಯಾಗಿ ಹುಟ್ಟುವೆ ಎಂದು ನೀನೇ ಒಪ್ಪಿಕೊಳ್ಳುತ್ತಿರುವೆ". ಅಷ್ಟರಲ್ಲಿ ಇಂದ್ರ ಬಂದನು. ವಿಧಾನಾನುಸಾರವಾಗಿ ಇಂದ್ರನ ರಾಜ್ಯವನ್ನು ಮಾರ್ಕಂಡೇಯನಿಗೆ ನೀಡಲು ಬಂದನು. "ಋಷಿಗಳೇ, ನಾವು ಸೋತೆವು, ನೀವೇ ಗೆದ್ದಿರಿ. ನೀವು ಇಂದ್ರನ ಪದವಿಯನ್ನು ಸ್ವೀಕರಿಸಿ", ಎಂದನು. ಆಗ ಮಾರ್ಕಂಡೇಯರು, "ಹೇ ಇಂದ್ರ! ಇಂದ್ರನ ಪದವಿ ನನಗೇತಕ್ಕೆ? ನನಗೆ ಆ ಪದವಿಯು ಕಾಗೆಯ ಮಲಕ್ಕೆ (ಹೇಸಿಗೆ) ಸಮಾನ. ನಾನು ಹೇಳಿದಂತೆ ಸಾಧನೆ ಮಾಡು. ನಿನ್ನನ್ನು ಬ್ರಹ್ಮಲೋಕಕ್ಕೆ ಕರೆದೊಯ್ಯುವೆ. ಈ ಇಂದ್ರನ ರಾಜ್ಯವನ್ನು ಬಿಟ್ಟುಬಿಡು" ಎಂದರು. ಆಗ ಇಂದ್ರನು, "ಈಗ ನನ್ನನ್ನು ಮಜಾ ಮಾಡಲು ಬಿಟ್ಟು ಬಿಡಿ. ಮುಂದೆ ನೋಡೋಣ" ಎಂದನು.

ಓದುಗರೇ, ಯೋಚಿಸಿ, ಸಾವಿನ ನಂತರ ಕತ್ತೆಯ ಜನ್ಮ ಸಿಗುವುದೆಂದು ಇಂದ್ರನಿಗೆ ಗೊತ್ತಿದೆ. ಆದರೂ ಕ್ಷಣಿಕ ಸುಖವನ್ನು ಬಿಡಲು ಇಷ್ಟವಿಲ್ಲ. ಮುಂದೆ ನೋಡೋಣ ಎನ್ನುತ್ತಾನೆ. ಯಾವಾಗ ನೋಡುವುದು? ಕತ್ತೆಯಾದ ಮೇಲೆ ಕತ್ತೆ ಕಾಯುವವನು ನೋಡಬೇಕಷ್ಟೇ. ಎಷ್ಟು ಭಾರ ಕತ್ತೆಯ ಮೇಲಿಡಬೇಕು? ಎಲ್ಲೆಲ್ಲಿ ಕೋಲಿನಿಂದ ಹೊಡೆಯಬೇಕು? ಹಾಗೆಯೇ ಈ ಭೂಮಿಯ ಮೇಲೆ ಯಾರಾದರೂ ಸ್ವಲ್ಪ ಭಾಗಕ್ಕೆ ಪ್ರಧಾನಮಂತ್ರಿ, ಮಂತ್ರಿ, ಮುಖ್ಯಮಂತ್ರಿಯಾದರೆ ಅಥವಾ ಯಾವುದಾದರೂ ಸರ್ಕಾರದ ಅಧಿಕಾರಿಯಾದರೆ ಅಥವಾ ಧನಿಕನಾದರೆ ಸಾಲದು. ಅವರು ಭಕ್ತಿಯಿಂದಿರಬೇಕು ಇಲ್ಲದಿದ್ದರೆ ಕತ್ತೆಯಾಗಿ ಹುಟ್ಟುವರು. ನೀವು ಅವರಿಗೆ ಹಾಗೆ ಹೇಳಿದರೆ ಅವರು ಕೋಪಗೊಂಡು ಕೇಳುವರು, ನಾವೇಕೆ ಕತ್ತೆಯಾಗುತ್ತೇವೆ? ಹಾಗೆಲ್ಲಾ ಹೇಳಬೇಡಿ. ಮತ್ತೆ ಕೆಲವರು ಸಭ್ಯರಿರುತ್ತಾರೆ. ಅವರು,

"ನೋಡಿದವರಾರು?" ಎನ್ನುತ್ತಾರೆ. ಆಗ ಅವರಿಗೆ ಸಂತರಿಂದ ಹಾಗೂ ಗ್ರಂಥಗಳಿಂದ ತಿಳಿದು ಬಂದಿದೆ ಎಂದು ಹೇಳಿದಾಗ ಅವರು ಮುಂದೆ ನೋಡೋಣ ಎಂದು ಉಡಾಫೆಯ ಉತ್ತರ ನೀಡುತ್ತಾರೆ.

ಅವರಲ್ಲಿ ಪ್ರಾರ್ಥಿಸುವುದೇನೆಂದರೆ, ಮೃತ್ಯುವಿನ ನಂತರ ಕತ್ತೆಯಾದ ಮೇಲೆ ನೀವೇನು ನೋಡಲು ಸಾಧ್ಯ? ಕತ್ತೆ ಕಾಯುವವನು ನಿಮ್ಮನ್ನು ನೋಡುತ್ತಾನಷ್ಟೇ. ನೋಡಬೇಕೆಂದರೆ ಈಗ ನೋಡಿ. ಕೆಟ್ಟದ್ದನ್ನು ಬಿಟ್ಟು ಶಾಸ್ತ್ರಬದ್ಧವಾಗಿ ಸಾಧನೆ ಮಾಡಿ. ಅದು ವರ್ತಮಾನದಲ್ಲಿ ಕೇವಲ ನನ್ನ(ರಾಮ್‌ಪಾಲ್ ದಾಸ್‌ನ) ಬಳಿ ಇದೆ. ಬನ್ನಿ ದೀಕ್ಷೆ ಪಡೆದುಕೊಂಡು ನಿಮ್ಮ ಜೀವನವನ್ನು ಉದ್ಧಾರ ಮಾಡಿಕೊಳ್ಳಿ.

ಸ್ವರ್ಗದಲ್ಲಿ **33** ಕೋಟಿ ದೇವರ ಪದವಿಗಳಿವೆ. ಭಾರತದ ಸಂವಿಧಾನದಲ್ಲಿ **540** ಸಂಸದರ ಪದವಿಗಳಿವೆ. ವ್ಯಕ್ತಿಗಳು ಬದಲಾಗುತ್ತಾರೆ. ಆ ಸಂಸದರಲ್ಲೇ ಪ್ರಧಾನಮಂತ್ರಿ ಮತ್ತು ಕೇಂದ್ರದ ಬೇರೆ ಬೇರೆ ಮಂತ್ರಿಗಳಾಗುತ್ತಿರುತ್ತಾರೆ.

ಮೇಲೆ ತಿಳಿಸಿದ ಸಂಖ್ಯೆ 3ರ ವಾಣಿಯಲ್ಲಿ ಹೇಳಿರುವುದೇನೆಂದರೆ, ಇಂದ್ರ–ಕುಬೇರ ಮತ್ತು ಈಶನ ಪದವಿ ಪಡೆಯುವವರು ಹಾಗೂ ಬ್ರಹ್ಮಾನ ಪದವಿ ಹಾಗೂ ವರುಣ, ಧರ್ಮರಾಯನ ಪದವಿ ಪಡೆದು, ಹಾಗೂ ವಿಷ್ಣುವಿನ ಲೋಕವನ್ನು ಪಡೆದು, ದೇವ ಪದವಿಯನ್ನು ಪಡೆದು, ಆ ನಂತರವೂ ಮರಳಿ ಜನನ–ಮರಣದ ಚಕ್ರದಲ್ಲಿ ಸಿಲುಕುತ್ತಾರೆ.

ಅದೇ ರೀತಿ **33** ಕೋಟಿ ದೇವತೆಗಳಲ್ಲಿ ಕುಬೇರನ ಪದವಿ ಅಂದರೆ ಹಣದ ದೇವತೆಯ ಪದವಿ ಸಿಗುತ್ತದೆ. ಈಶ ಪದವಿ ಎಂದರೆ ಬ್ರಹ್ಮಾ, ವಿಷ್ಣು ಮತ್ತು ಮಹೇಶ್ವರನ ಪದವಿ.

ವರುಣದೇವನು ಜಲ ದೇವತೆ. ಧರ್ಮರಾಜನು ನ್ಯಾಯಾಧೀಶ. ಅವನು ಎಲ್ಲರಿಗೂ ಕರ್ಮಫಲವನ್ನು ನೀಡುತ್ತಾನೆ. ಅವನಿಗೆ ಧರ್ಮರಾಜನೆನ್ನುತ್ತಾರೆ. ಇವರೆಲ್ಲರೂ ಕಾಲಬ್ರಹ್ಮನ ಸಾಧನೆ ಮಾಡಿ ಪದವಿ ಗಳಿಸುತ್ತಾರೆ. ಪುಣ್ಯವು ಸಮಾಪ್ತಿಯಾದ ನಂತರ ಎಲ್ಲಾ ದೇವ ಪದವಿಗಳು ಹೋಗಿ ಪಶು ಪಕ್ಷಿಗಳ ಜನ್ಮ ತಾಳುತ್ತಾರೆ. ನಂತರ ಹೊಸ ಬ್ರಹ್ಮಾ, ವಿಷ್ಣು, ಮಹೇಶ್ವರರು ಆ ಪದವಿ ಪಡೆಯುತ್ತಾರೆ.

ಮೇಲೆ ತಿಳಿಸಿದ ಎಲ್ಲಾ ದೇವತೆಗಳಿಗೂ ಹುಟ್ಟು ಸಾವುಂಟು. ಅವರು ಅವಿನಾಶಿಗಳಲ್ಲ. ಇವರ ತಂದೆ ಯಾರು? ತಾಯಿ ಯಾರು? ಮಕ್ಕಳು ಯಾರು ಎನ್ನುವುದನ್ನು ಮುಂದೆ ತಿಳಿಸಲಾಗುತ್ತದೆ.

ಅನ್ಯ ಪ್ರಮಾಣ :– ದೇವಿ ಪುರಾಣ (ಗೀತಾ ಪ್ರೆಸ್, ಗೋರಖ್ ಪುರದಿಂದ ಪ್ರಕಾಶಿತ)ದ ಮೂರನೇ ಸ್ಕಂದದ **105**ನೇ ಪುಟದಲ್ಲಿ ಬರೆದಿರುವುದೇನೆಂದರೆ, ನೀನು ಶುದ್ಧ ಸ್ವರೂಪಿ, ಈ ಇಡೀ ಪ್ರಪಂಚ ನಿನ್ನಿಂದಲೇ ಆಗಿದೆ. ನಾನು (ವಿಷ್ಣು), ಬ್ರಹ್ಮಾ ಮತ್ತು ಶಂಕರ ನಿಮ್ಮ ಕೃಪೆಯಿಂದಲೇ ಆಗಿದ್ದೇವೆ. ನಮ್ಮ ಅವಿರ್ಭಾವ ಅಂದರೆ ಜನ್ಮ ಮತ್ತು ತಿರೋಭಾವ ಅಂದರೆ ಮರಣ ಆಗುತ್ತಲೇ ಇರುತ್ತದೆ. ನೀನು ಪ್ರಕೃತಿ ದೇವಿ."

ಶಂಕರನು, "ದೇವಿ, ಒಂದು ವೇಳೆ ವಿಷ್ಣುವಿನ ನಂತರ ಉತ್ಪನ್ನವಾಗುವ ಬ್ರಹ್ಮಾ ನಿನ್ನಿಂದಲೇ ಹುಟ್ಟಿದ್ದಾರೆ ಎಂದರೆ ನಾನು ತಮೋಗುಣದ ಲೀಲೆಯನ್ನು ಮಾಡುವ ಶಂಕರ ನಿನ್ನ ಸಂತಾನವಲ್ಲವೇ? ಅಂದರೆ ನನ್ನನ್ನೂ ನೀನೇ ಹುಟ್ಟಿಸಿರುವೆ. ನಾವು ಕೇವಲ ಸೀಮಿತ ಕಾರ್ಯ ಮಾಡುತ್ತೇವೆ. ಯಾರ ಹಣೆಯಲ್ಲಿ ಏನು ಬರೆದಿರುವುದೋ ಅದನ್ನೇ ನಾವು ಕೊಡುತ್ತೇವೆ ಹೆಚ್ಚು ಮಾಡಲಾಗುವುದಿಲ್ಲ. ಕಡಿಮೆಯೂ ಮಾಡಲಾಗುವುದಿಲ್ಲ.

ಓದುಗರೇ! ಈ ದೇವಿ ಪುರಾಣದಿಂದ ಸ್ಪಷ್ಟವಾಗುವುದೇನೆಂದರೆ ಬ್ರಹ್ಮಾ, ವಿಷ್ಣು, ಮಹೇಶ್ವರರು ನಾಶವಾಗುವಂಥವರು. ಇವರ ತಾಯಿಯ ಹೆಸರು ಶ್ರೀ ದುರ್ಗಾದೇವಿ. ಇನ್ನು ಹೆಚ್ಚಿನ ತಿಳುವಳಿಕೆಗಾಗಿ ಇದೇ ಪುಸ್ತಕದ 'ಸೃಷ್ಟಿಯ ರಚನೆ' ಎಂಬ ಅಧ್ಯಾಯವನ್ನು ಓದಿರಿ. ಇವರು ಪ್ರಧಾನ ದೇವತೆಗಳು.

ಉಳಿದವರು ಇವರಿಗಿಂತ ಭಿನ್ನ ಹಂತದ ದೇವರುಗಳು. ಇವರೆಲ್ಲಾ ಹುಟ್ಟುತ್ತಾರೆ, ಸಾಯುತ್ತಾರೆ. ಇವರೆಲ್ಲಾ ಅವಿನಾಶಿ ರಾಮನೂ ಇಲ್ಲ, ಅವಿನಾಶಿ ಪರಮಾತ್ಮನೂ ಅಲ್ಲ.

ಶ್ರೀಮದ್ ಭಗವದ್ಗೀತೆಯ 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ ಗೀತೆಯ ಜ್ಞಾನ ನೀಡುವ ಕಾಲಬ್ರಹ್ಮನು "ನನ್ನ ಉತ್ಪತ್ತಿಯು ದೇವ–ದೇವತೆಗಳಿಗೂ ಗೊತ್ತಿಲ್ಲ, ಮಹರ್ಷಿಗಳಿಗೂ ಗೊತ್ತಿಲ್ಲ, ಏಕೆಂದರೆ ಇವೆಲ್ಲರ ಆದಿ ಕಾರಣವೂ ನಾನೇ ಆಗಿದ್ದೇನೆ. ಅಂದರೆ ಇವರೆಲ್ಲಾ ನನ್ನಿಂದಲೇ ಹುಟ್ಟಿದ್ದಾರೆ.

ಶ್ರೀಮದ್‌ಭಗವದ್ಗೀತೆಯ 4ನೇ ಅಧ್ಯಾಯದ 5ನೇ ಶ್ಲೋಕದಲ್ಲಿ ಗೀತೆಯನ್ನು ಬೋಧಿಸಿದಾತನು ಹೇಳಿದ್ದಾನೆ, "ಹೇ ಅರ್ಜುನ! ನಿನ್ನ ಮತ್ತು ನನ್ನ ಅನೇಕ ಜನ್ಮಗಳಾಗಿವೆ. ನಿನಗೆ ತಿಳಿದಿಲ್ಲ, ಆದರೆ ನನಗೆ ತಿಳಿದಿದೆ. ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕದಿಂದ ಸ್ಪಷ್ಟವಾಗುವುದೇನೆಂದರೆ ನೀನು, ನಾನು ಮತ್ತು ಈ ರಾಜ, ಸೈನ್ಯ ಎಲ್ಲರೂ ಜನ್ಮಿಸಿದ್ದರು. ಮುಂದೆಯೂ ಜನ್ಮಿಸುತ್ತಾರೆ".

ಗೀತೆಯ 14ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಹೇಳಿರುವಂತೆ, "ಹೇ ಅರ್ಜುನ! ಪ್ರಕೃತಿ ಅಂದರೆ ದುರ್ಗೆಯು ಗರ್ಭವನ್ನು ಧರಿಸುತ್ತಾಳೆ. ನಾನು ಅವಳ ಗರ್ಭದಲ್ಲಿ ಬೀಜವನ್ನು ಸ್ಥಾಪಿಸುತ್ತೇನೆ. ಇದರಿಂದ ಎಲ್ಲಾ ಪ್ರಾಣಿಗಳ ಸೃಷ್ಟಿಯಾಗುತ್ತದೆ".

ಗೀತೆಯ 14ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಗೀತೆಯನ್ನು ಬೋಧಿಸಿದಾತನು ಹೇಳಿದ್ದಾನೆ. "ಹೇ ಅರ್ಜುನ! ಎಲ್ಲಾ ರೀತಿಯ ಯೋನಿಗಳಿಂದ ಎಷ್ಟು ಶರೀರಧಾರಿ ಮೂರ್ತಿಗಳು ಹುಟ್ಟುತ್ತವೆಯೋ, ಪ್ರಕೃತಿಯು ಅವೆಲ್ಲದರ ಗರ್ಭಧಾರಣೆ ಮಾಡುವ ಮಾತೆಯು. (ಅಹಂ ಬ್ರಹ್ಮ) ನಾನು ಬ್ರಹ್ಮ ಬೀಜವನ್ನು ಸ್ಥಾಪಿಸುವಂಥಾ ತಂದೆ.

ಗೀತೆಯ 14ನೇ ಅಧ್ಯಾಯದ 5ನೇ ಶ್ಲೋಕದಲ್ಲಿ ಗೀತೆಯನ್ನು ಬೋಧಿಸಿದಾತನು ಸ್ಪಷ್ಟಪಡಿಸುವುದೇನೆಂದರೆ, "ಹೇ ಅರ್ಜುನ! ಸತ್ವಗುಣದ ಶ್ರೀ ವಿಷ್ಣುವು, ರಜೋಗುಣದ ಬ್ರಹ್ಮಾ, ಹಾಗೂ ತಮೋಗುಣದ ಶಿವ – ಈ ಮೂವರೂ ಪ್ರಕೃತಿ ಅರ್ಥಾತ್ ದುರ್ಗಾದೇವಿಯಿಂದ ಹುಟ್ಟಿದ ಮೂರು ದೇವತೆಗಳು. ಅಂದರೆ ಮೂರೂ ಗುಣಗಳು. ಅವರು ಅವಿನಾಶಿ ಜೀವಾತ್ಮನನ್ನು ಕರ್ಮಗಳ ಅನುಸಾರವಾಗಿ ಶರೀರದಲ್ಲಿ ಬಂಧಿಸುತ್ತಾರೆ.

ಮೇಲೆ ತಿಳಿಸಿದ ಸಾಕ್ಷಿಗಳಿಂದ ಮೇಲಿನ ದೇವತೆಗಳೆಲ್ಲಾ ನಾಶವಾಗುವವರು ಎಂದು ಸ್ಪಷ್ಟವಾಗುತ್ತದೆ ಹಾಗೂ ಇವರೆಲ್ಲ ಕಾಲಬ್ರಹ್ಮನ ಸಂತಾನ ಎಂದು ಸ್ಪಷ್ಟವಾಗುತ್ತದೆ.

ವಾಣಿ ಸಂಖ್ಯೆ 3ರ ಸರಳಾರ್ಥ:– ಇಂದ್ರ, ಕುಬೇರ, ಈಶ ಅರ್ಥಾತ್ ಬ್ರಹ್ಮಾ, ವಿಷ್ಣು, ಮಹೇಶ್ವರನ ಪದವಿ ಗಳಿಸಿದರೂ, ವರುಣ, ಧರ್ಮರಾಯನ ಪದವಿ ಗಳಿಸಿದರೂ, ಶ್ರೀ ವಿಷ್ಣುವಿನ ಲೋಕ ಪ್ರಾಪ್ತಿಯಾದರೂ ಜನನ–ಮರಣದ ಚಕ್ರದಲ್ಲಿ ಇರುತ್ತೇವೆ.

* ಮಾರ್ಕಂಡೇಯ ಋಷಿಗಳು ಬ್ರಹ್ಮ ಸಾಧನೆ ಮಾಡುತ್ತಿದ್ದರು. ಅವರನ್ನೇ ಸರ್ವೋತ್ತಮರು ಎಂದು ಭಾವಿಸಲಾಗುತ್ತಿತ್ತು. ಆದ್ದರಿಂದ ಅವರು ಇಂದ್ರನಿಗೆ "ಬಾ ನಿನಗೆ ಬ್ರಹ್ಮ ಸಾಧನೆಯ ಜ್ಞಾನವನ್ನು ಬೋಧಿಸುವೆ" ಎಂದು ಹೇಳುತ್ತಿದ್ದರು. ಬ್ರಹ್ಮ ಲೋಕವನ್ನು ಸ್ವರ್ಗಕ್ಕೆ ಹೋಲಿಸಿದರೆ ಹಲ್ವವನ್ನು ಕಾಗೆಯ ಮಲಕ್ಕೆ (ಹೇಸಿಗೆ) ಹೋಲಿಸಿದಂತಾಗುತ್ತದೆ.

ಓದುಗರೇ! ಬ್ರಹ್ಮ ಸಾಧನೆ ಮಾಡಿರುವ ಚುಣಕ ಋಷಿಗಳು, ದೂರ್ವಾಸ ಮಹರ್ಷಿಗಳು ಮತ್ತು ಕಪಿಲ ಋಷಿಗಳ ಸಾಧನೆಯನ್ನು ಗೀತೆಯನ್ನು ಬೋಧಿಸಿದಾತನು ಗೀತೆಯ 7ನೇ ಅಧ್ಯಾಯದ

18ನೇ ಶ್ಲೋಕದಲ್ಲಿ ಉತ್ತಮ ಸಾಧನೆಯಲ್ಲವೆಂದು ಹೇಳಿದ್ದಾನೆ. ಅದೇ ರೀತಿಯ ಸಾಧನೆಯನ್ನು ಮಾರ್ಕಂಡೇಯ ಋಷಿಗಳೂ ಮಾಡಿದ್ದರು. ಅದನ್ನು ಅವರು ಅತ್ಯುತ್ತಮ ಸಾಧನೆ ಎಂದು ತಿಳಿದಿದ್ದರು. ಹಾಗಾಗಿ ಇಂದ್ರನಿಗೂ ಅವರು ಬ್ರಹ್ಮ ಸಾಧನೆ ಮಾಡಲು ತಿಳಿಸುತ್ತಿದ್ದರು.

ಸೂಕ್ಷ್ಮವೇದದಲ್ಲಿ ಹೇಳಿದೆ:–

ಔರೋಂ ಪಂಥ್ ಬತಾವಹೀ, ಆಪ್ ನ ಜಾನೆ ರಾಹ್ ॥ 1 ॥
ಮೋತಿ ಮುಕ್ತಾ ದರ್ಶತ್ ನಾಹೀ, ಯಹ್ ಜಗ್ ಹೈ ಸಬ್ ಅಂಧ್ ರೇ ।
ದಿಖತ್ ಕೇ ತೋ ನೈನ್ ಚಿಸಮ್ ಹೈ, ಫೀರಾ ಮೋತಿಯಾ ಬಿಂದ್ ರೇ ॥ 2 ॥
ವೇದ್ ಪಢೇ ಪರ್ ಭೇದ್ ನಾ ಜಾನೇ, ಬಾಂಚೆ ಪುರಾಣ್ ಅಠಾರಾ ।
ಪತ್ಥರ್ ಕೀ ಪೂಜಾ ಕರೆ, ಭೂಲೇ ಸಿರ್‌ಜನ್‌ಹಾರಾ ॥ 3 ॥

ವಾಣಿ ಸಂ. 1ರ ಭಾವಾರ್ಥ :– ಅನ್ಯರಿಗೆ ಮಾರ್ಗದರ್ಶನ ಮಾಡುತ್ತಾರೆ, ಆದರೆ ಸ್ವತಃ ಅವರಿಗೆ ಭಕ್ತಿಯ ಜ್ಞಾನವಿರುವುದಿಲ್ಲ.

ವಾಣಿ ಸಂ. 2ರ ಭಾವಾರ್ಥ :– ತತ್ವದರ್ಶಿ ಸಂತರ ಕೊರತೆಯ ಕಾರಣದಿಂದ ಮೋತಿ ಅಂದರೆ ಮೋಕ್ಷವೆಂಬ ಮುತ್ತು ಅಂದರೆ ಮೋಕ್ಷ ಮಂತ್ರವು ಕಾಣಿಸುವುದಿಲ್ಲ. ಇಡೀ ಪ್ರಪಂಚವೇ ಕಣ್ಣಿಲ್ಲದೆ ಕುರುಡಾಗಿ ಆಧ್ಯಾತ್ಮಜ್ಞಾನದಿಂದ ವಂಚಿತವಾಗಿದೆ. ಯಾರಿಗೆ ಕಣ್ಣಿನ ರೋಗವಿದೆಯೋ ಅಂದರೆ ಇದೊಂದು ರೀತಿಯ ರೋಗ. ಈ ರೋಗ ಇರುವವರ ಕಣ್ಣುಗಳು ನೋಡಲು ಆರೋಗ್ಯವಂತವಾಗಿ ಕಂಡರೂ, ಆ ರೋಗಗ್ರಸ್ತ ವ್ಯಕ್ತಿಗಳಿಗೆ ಏನೂ ಕಾಣುವುದಿಲ್ಲ. ಉದಾಹರಣೆಗೆ ಕೆಲವರು ಸಂಸ್ಕೃತವನ್ನು ಮಾತನಾಡುತ್ತಾರೆ. ಅವರು ಮಹಾವಿದ್ವಾಂಸರೆಂದು ಅನ್ನಿಸುತ್ತದೆ. ಆದರೆ ಆ ಸದ್ಗ್ರಂಥಗಳ ರಹಸ್ಯವನ್ನು ಅವರು ಅರಿತಿರುವುದಿಲ್ಲ. ಅವರ ಕಣ್ಣಿಗೆ ಅಜ್ಞಾನವೆಂಬ ಪೊರೆ ಆವರಿಸಿಕೊಂಡಿದೆ ಎನ್ನಬಹುದು.

ವಾಣಿ ಸಂ. 3ರ ಭಾವಾರ್ಥ:– ವೇದಗಳನ್ನು ಕಂಠಪಾಠ ಮಾಡಿರುವವರು ವೇದಗಳ ಗೂಡಾರ್ಥಗಳನ್ನು ತಿಳಿದುಕೊಳ್ಳದೆ ಅವುಗಳ ವಿರುದ್ಧವೇ ಸಾಧನೆ ಮಾಡುತ್ತಾ–ಮಾಡಿಸುತ್ತಾ ಇರುತ್ತಾರೆ. ವೇದಗಳಲ್ಲಿ ಮೂರ್ತಿಪೂಜೆಯ ಉಲ್ಲೇಖವು ಎಲ್ಲಿಯೂ ಇಲ್ಲ. ವೇದಗಳಲ್ಲಿ ಪಾರಂಗತರು ಎಂದು ಹೇಳಿಕೊಳ್ಳುವವರು ಕಲ್ಲಿನ ಪೂಜೆ ಮಾಡುತ್ತಾ, ಮಾಡಿಸುತ್ತಾ ಇರುತ್ತಾರೆ. ವೇದಗಳಲ್ಲಿ ಹೇಳಿರುವ ಪರಮಾತ್ಮನನ್ನು ಮರೆಸುತ್ತಿದ್ದಾರೆ.

ಭಗವದ್ಗೀತೆಯ 4ನೇ ಅಧ್ಯಾಯದ 25ರಿಂದ 29ನೇ ಶ್ಲೋಕದವರೆಗೆ ಹೀಗೆಂದು ಹೇಳಿದೆ, ಯಾವ ಸಾಧಕನು ಯಾವ ರೀತಿಯ ಸಾಧನೆ ಮಾಡಿದರೂ ಅವನು ಅದನ್ನೇ ಉತ್ತಮ ಎಂದು ತಿಳಿದು ಮಾಡುತ್ತಿರುತ್ತಾನೆ. ಎಲ್ಲಾ ಸಾಧಕರು ತಮ್ಮ ತಮ್ಮ ಭಕ್ತಿಯನ್ನು ಪಾಪವನ್ನು ನಾಶಮಾಡುವಂಥಾ ಸಾಧನೆ ಎಂದು ತಿಳಿದಿದ್ದಾರೆ.

ಗೀತೆಯ 4ನೇ ಅಧ್ಯಾಯದ 32ನೇ ಶ್ಲೋಕದಲ್ಲಿ ಸ್ಪಷ್ಟಪಡಿಸಿರುವುದೇನೆಂದರೆ, ಯಜ್ಞಗಳ ಅರ್ಥಾತ್ ಧಾರ್ಮಿಕ ಅನುಷ್ಠಾನಗಳ ಜ್ಞಾನವನ್ನು ಸ್ವತಃ ಸಚ್ಚಿದಾನಂದ ಘನಬ್ರಹ್ಮನು ತನ್ನ ಬಾಯಿಂದ ತಿಳಿಸಿದ ವಾಣಿಯಲ್ಲಿ ಸವಿಸ್ತಾರವಾಗಿ ಹೇಳಿದ್ದಾನೆ. ಅದೇ ತತ್ವಜ್ಞಾನ. ಅದನ್ನು ಅರಿತ ಸಾಧಕನು ಎಲ್ಲಾ ಪಾಪಗಳಿಂದ ಮುಕ್ತನಾಗುತ್ತಾನೆ. ಗೀತೆಯ 4ನೇ ಅಧ್ಯಾಯದ 34 ನೇ ಶ್ಲೋಕದಲ್ಲಿ, ಯಾವ ತತ್ವದರ್ಶಿ ಸಂತನು ತತ್ವಜ್ಞಾನವನ್ನು ತಿಳಿದಿದ್ದಾನೋ, ಅವನಿಗೆ ದೀರ್ಘದಂಡ ನಮಸ್ಕಾರ ಮಾಡುವುದರಿಂದ, ವಿನಯವಾಗಿ ಪ್ರಶ್ನೆ ಕೇಳುವುದರಿಂದ, ತತ್ವಜ್ಞಾನವನ್ನು ತಿಳಿದ ಜ್ಞಾನಿ ಮಹಾತ್ಮನು ನಿನಗೆ ತತ್ವಜ್ಞಾನದ ಉಪದೇಶವನ್ನು ನೀಡುವನು ಎಂದು ಸ್ಪಷ್ಟವಾಗಿ ಹೇಳಿದೆ.

ಮೇಲೆ ತಿಳಿಸಿದ ನಿರ್ಗುಣ ಉಪಾಸಕ ಗುರುಗಳು ಸಿಗದ ಕಾರಣ ಎಲ್ಲಾ ಸಾಧಕರು ಜನನ–ಮರಣದ ಚಕ್ರದಲ್ಲೇ ಉಳಿದು ಬಿಟ್ಟಿದ್ದಾರೆ.

ಮಾರ್ಕಂಡೇಯ ಋಷಿ ಬ್ರಹ್ಮಸಾಧನೆ ಮಾಡುತ್ತಿದ್ದರು. ಭಗವದ್ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದಲ್ಲಿ, ಬ್ರಹ್ಮಲೋಕಕ್ಕೆ ಹೋದ ಸಾಧಕರೂ ಸಹ ಪುನರಾವರ್ತಿ ಅರ್ಥಾತ್ ಮತ್ತೆ ಮತ್ತೆ ಜನನ–ಮರಣದ ಚಕ್ರದಲ್ಲೇ ಇರುತ್ತಾರೆ ಎಂದು ಹೇಳಲಾಗಿದೆ.

ಮೊದಲಿನ ಶಬ್ದದ 4ನೇ ಸಂಖ್ಯೆಯ ವಾಣಿ :

ಅಸಂಖ್ಯ್ ಜನ್ಮ್ ತೋಹೆ ಮರತಾಂ ಹೋಗೆ, ಜೀವಿತ್ ಕ್ಯೋಂ ನ ಮರ್ೈ ರೆ ॥
ದ್ವಾದಶ್ ಮಧ್ಯ್ ಮಹಲ್ ಮತ್ ಬೋರೆ, ಬಹುರ್ ನ ದೇಹ್ ಧರ್ೈ ರೆ ।

ಸರಳಾರ್ಥ :– ಹೇ ಮಾನವ! ನೀನು ಅಸಂಖ್ಯ ಜನ್ಮವೆತ್ತಿ, ಅಸಂಖ್ಯ ಮರಣ ಹೊಂದಿರುವೆ. ಸತ್ಯ ಸಾಧನೆ ಮಾಡು ಹಾಗೂ ಜೀವಂತವಾಗಿ ಸಾಯಿ. ಜೀವಂತವಾಗಿ ಸಾಯುವುದು ಎಂದರೆ ಈ ಪ್ರಪಂಚದ ಪ್ರತಿಯೊಂದು ವಸ್ತುವೂ ಶಾಶ್ವತವಲ್ಲ ಎಂಬ ಅರಿವು ಭಕ್ತನಿಗೆ ಆಗುವುದು. ಈ ಶರೀರವೂ ಶಾಶ್ವತವಲ್ಲ, ಜನನ–ಮರಣವೆಂಬ ಜಂಜಟವೂ ಭಯಂಕರವಾಗಿರುತ್ತದೆ ಎಂದು ಅರಿಯುವುದೇ ಆಗಿದೆ. ಈ ಪ್ರಪಂಚದಲ್ಲಿ ದುಃಖದ ವಿನಃ ಇನ್ನೇನೂ ಇಲ್ಲ. ಮಾನವ ಶರೀರವನ್ನು ಪಡೆದ ನಂತರವೂ ಮೋಕ್ಷವನ್ನು ಪಡೆಯಲಿಲ್ಲವೆಂದರೆ ಪಶುವಿನಂತೆ ಬದುಕಬೇಕು ಎಂದು ಅವನಿಗೆ ಅರಿವಾಗುವುದು. ಗೀತೆಯ 7ನೇ ಅಧ್ಯಾಯದ 29ನೇ ಶ್ಲೋಕದಲ್ಲಿ ಹೇಳಿರುವಂತೆ ಸಾಧಕನು ಕೇವಲ ವೃದ್ಧಾಪ್ಯದ ಕಷ್ಟ ಮತ್ತು ಮರಣದ ದುಃಖದಿಂದ ಬಿಡುಗಡೆ ಹೊಂದಲು ಯಾವ ಸಾಧನೆ ಮಾಡುತ್ತಾನೋ, ಅವನು ತತ್ ಬ್ರಹ್ಮನನ್ನು ಹಾಗೂ ಸಂಪೂರ್ಣ ಆಧ್ಯಾತ್ಮವನ್ನು ಹಾಗೂ ಕರ್ಮವನ್ನು ತಿಳಿದವನಾಗಿರುತ್ತಾನೆ ಎಂದು ಹೇಳಲಾಗಿದೆ.

ಇದೇ ರೀತಿ ತತ್ವಜ್ಞಾನವನ್ನು ಪಡೆದ ನಂತರ ಮಾನವನಿಗೆ ಅನಾವಶ್ಯಕ ವಸ್ತುಗಳ ಮೇಲೆ ಆಸೆಯುಂಟಾಗುವುದಿಲ್ಲ. ತಂಬಾಕು, ಮದ್ಯ ಸೇವನೆ, ಮಾಂಸಸೇವನೆ ಮಾಡುವುದಿಲ್ಲ. ಹಾಡು, ಕುಣಿತ ಮೂರ್ಖರ ಕೆಲಸ ಎಂದು ಅನ್ನಿಸುತ್ತದೆ. ಎಂತಹ ಊಟ ಸಿಕ್ಕರೂ ಅದರಲ್ಲೇ ಸಂತುಷ್ಟನಾಗುತ್ತಾನೆ.

* ಆತ್ಮಕಲ್ಯಾಣಕ್ಕಾಗಿ ಸಾಧಕರು ಚಿಂತಿಸುತ್ತಾರೆ. ಸತ್ಸಂಗಕ್ಕೆ ಹೋಗದಿದ್ದರೆ ಗುರುಗಳ ದರ್ಶನ ಮಾಡಲು ಸಾಧ್ಯವಿಲ್ಲ ಎಂದು ಅವರು ಭಾವಿಸುತ್ತಾರೆ. ಸತ್ಸಂಗದ ವಿಚಾರ ಕೇಳದಿದ್ದರೆ ಮನಸ್ಸು ಮತ್ತೆ ಚಂಚಲವಾಗಬಹುದು ಎಂದು ತಿಳಿಯುತ್ತಾರೆ. ಆಗ ಆ ಸಾಧಕರು ಎಲ್ಲಾ ಕೆಲಸಗಳನ್ನು ಬದಿಗೊತ್ತಿ ಸತ್ಸಂಗವನ್ನು ಕೇಳಲು ಹೊರಡುತ್ತಾರೆ. ನಾವು ಪ್ರತಿದಿನವೂ ಕೇಳುತ್ತಿರುತ್ತೇವೆ ಹಾಗೂ ನೋಡುತ್ತಿರುತ್ತೇವೆ, ಚಿಕ್ಕ ಚಿಕ್ಕ ಮಕ್ಕಳನ್ನು ಬಿಟ್ಟು ತಂದೆಯಾದವನು ಈ ಪ್ರಪಂಚದಿಂದ ಹೊರಟು ಹೋಗುತ್ತಾನೆ ಅಂದರೆ ಸತ್ತು ಹೋಗುತ್ತಾನೆ. ದೊಡ್ಡ ದೊಡ್ಡ ಉದ್ಯಮಿಗಳು ದುರ್ಘಟನೆಯಲ್ಲಿ ಮರಣ ಹೊಂದುತ್ತಾರೆ. ಜೀವಮಾನದಲ್ಲಿ ಸಂಗ್ರಹಿಸಿದ್ದ ಸಂಪತ್ತೆಲ್ಲವನ್ನೂ ಬಿಟ್ಟು ಹೊರಡುತ್ತಿರುತ್ತಾರೆ. ಆ ಸಂಪತ್ತನ್ನು ಕಾಪಾಡಲು ಮತ್ತೆ ಬರುವುದಿಲ್ಲ. ಸಾಯುವ ಮೊದಲು ಒಂದು ದಿನವೂ ಕೆಲಸ ಬಿಡಲು ಮನಸ್ಸು ಒಪ್ಪುವುದಿಲ್ಲ. ಆದರೆ ಇಂದು ಶಾಶ್ವತವಾಗಿ ಕೆಲಸವೆಲ್ಲಾ ಹೋಯಿತು ಎಂದು ಸಾಧಕನು ಚಿಂತನೆ ಮಾಡುತ್ತಾನೆ.

## "ಇಂದು ಸಹೋದರನಿಗೆ ಬಿಡುವು"

ಒಬ್ಬ ಭಕ್ತನು ಸತ್ಸಂಗಕ್ಕೆ ಹೋಗಿ ಜ್ಞಾನ ತಿಳಿದು ದೀಕ್ಷೆ ಪಡೆದು ಭಕ್ತಿಯಿಂದ ಇರಲು ಪ್ರಾರಂಭಿಸಿದನು. ತನ್ನ ಮಿತ್ರನಿಗೂ ಸತ್ಸಂಗಕ್ಕೆ ಹೋಗಲು ವಿನಂತಿಸಿದನು. ಆದರೆ ಮಿತ್ರ ಕೇಳಲಿಲ್ಲ. ತನಗೆ ಬಿಡುವಿಲ್ಲವೆಂದು ಹೇಳಿದನು ಹಾಗೂ ತನಗೆ ಚಿಕ್ಕ–ಚಿಕ್ಕ ಮಕ್ಕಳಿರುವುದಾಗಿಯೂ, ಅವುಗಳ ಪಾಲನೆ, ಪೋಷಣೆ

ಮಾಡಬೇಕಾಗಿರುವುದರಿಂದ ಕೆಲಸ ಕಾರ್ಯ ಬಿಟ್ಟು ಸತ್ಸಂಗಕ್ಕೆ ಬಂದರೆ ಕೆಲಸವೆಲ್ಲಾ ಮಣ್ಣುಪಾಲಾಗುವುದೆಂದನು.

ಸತ್ಸಂಗಕ್ಕೆ ಹೋಗುವ ಭಕ್ತನು ತನ್ನ ಮಿತ್ರನನ್ನ ಸತ್ಸಂಗಕ್ಕೆ ಕರೆದಾಗಲೆಲ್ಲಾ ಅವನು ತನಗೆ ಬಿಡುವಿಲ್ಲವೆಂದು ಹೇಳುತ್ತಿದ್ದನು. ಒಂದು ವರ್ಷದ ನಂತರ ಆ ಮಿತ್ರನು ಸಾವನ್ನಪ್ಪಿದನು. ಅವನ ಕುಟುಂಬದವರು, ಬಂಧು ಮಿತ್ರರು ಅವನ ಹೆಣವನ್ನು ಹೊತ್ತು ಸಾಗಿದರು. ಆ ಊರಿನ ಸಾವಿರಾರು ಮಂದಿ ಹೆಣದ ಜೊತೆ ನಡೆದರು. 'ರಾಮ ನಾಮವೇ ಸತ್ಯ' ಎಂದು ಹೇಳುತ್ತಾ ಮುಂದೆ ಸಾಗಿದರು.

ರಾಮನಾಮವೇನೋ ಸತ್ಯ, ಆದರೆ ಇಂದು ಸಹೋದರನಿಗೆ ಬಿಡುವು ಎಂದು ಆ ಭಕ್ತ ಹೇಳುತ್ತಿದ್ದನು. ಆಗ ಬೇರೆ ಜನರೆಲ್ಲಾ ಆ ಭಕ್ತನಿಗೆ, 'ಹಾಗೆಲ್ಲಾ ಹೇಳಬೇಡ, ಅವನ ಮನೆಯವರಿಗೆ ಬೇಸರವಾಗುತ್ತದೆ' ಎಂದರು. ಆಗ ಆ ಭಕ್ತನು, 'ನಾನಂತೂ ಹಾಗೇ ಹೇಳುವೆ. ಏಕೆಂದರೆ ಈ ಮೂರ್ಖನಿಗೆ ಕೈ ಜೋಡಿಸಿ ಹೇಳಿದೆ, ಸತ್ಸಂಗಕ್ಕೆ ಬಾ, ಕೊಂಚ ಭಕ್ತಿಯಿಂದ ಇರು ಎಂದೆ. ಆದರೆ ಇವನು ನನಗೆ ಈಗ ಬಿಡುವಿಲ್ಲ ಎಂದು ಹೇಳುತ್ತಿದ್ದ. ಈ ದಿನ ಇವನಿಗೆ ಶಾಶ್ವತವಾಗಿ ಬಿಡುವು ಸಿಕ್ಕಿದೆ. ಚಿಕ್ಕ–ಚಿಕ್ಕ ಮಕ್ಕಳನ್ನು ಬಿಟ್ಟು ಹೊರಟಿದ್ದಾನೆ. ಇವರ ನೆಪವೊಡ್ಡಿ ಪರಮಾತ್ಮನಿಂದ ದೂರ ಉಳಿದಿದ್ದ. ಭಕ್ತಿ ಮಾಡಿದ್ದರೆ ಬರಿಗೈಯಲ್ಲಿ ಹೋಗುತ್ತಿರಲಿಲ್ಲ. ಭಕ್ತಿ ಎನ್ನುವ ಸಂಪತ್ತನ್ನು ತೆಗೆದುಕೊಂಡು ಹೋಗುತ್ತಿದ್ದ' ಎಂದನು. ಮಕ್ಕಳ ಪಾಲನೆ ಪೋಷಣೆ ಪರಮಾತ್ಮ ಮಾಡುತ್ತಾನೆ. ಭಕ್ತಿ ಮಾಡುವುದರಿಂದ ಸಾಧಕನ ಆಯಸ್ಸನ್ನು ಪರಮಾತ್ಮ ಹೆಚ್ಚಿಸುತ್ತಾನೆ. ಭಕ್ತರು ಈ ರೀತಿಯಾಗಿ ಯೋಚಿಸಿ ಭಕ್ತಿ ಮಾಡಿದರೆ, ತಮ್ಮ ಕೆಲಸಗಳನ್ನೆಲ್ಲಾ ಬದಿಗೊತ್ತಿ ಸತ್ಸಂಗಕ್ಕೆ ತೆರಳಲು ಸಾಧ್ಯವಾಗುತ್ತದೆ.

'ಒಂದು ವೇಳೆ ಪರಮಾತ್ಮನು ಮಾಡದಿದ್ದರೆ ಹಾಗೂ ನಮಗೆ ಸಾವು ಬಂದೊದಗಿದರೆ' ಎಂದು ಭಕ್ತರು ಯೋಚಿಸಿದರೆ? ಆಗ ನಮ್ಮ ಕೆಲಸ ಮಾಡುವವರಾರು? ನಮಗೆ ಸಾವೇ ಬಂದು ಒದಗಿತು ಎಂದಿಟ್ಟುಕೊಳ್ಳೋಣ. ನಾವು ಮೂರು ದಿನ ಸತ್ತು ಹೋಗಿದ್ದೇವೆ ಎಂದಿಟ್ಟುಕೊಳ್ಳೋಣ. ಹಾಗೆಂದುಕೊಂಡು ಸತ್ಸಂಗಕ್ಕೆ ಹೋದರೆ, ಪರಮಾತ್ಮನಂತೂ ಭಕ್ತರ ಕೆಲಸವನ್ನು ಹಾಳು ಮಾಡುವುದಿಲ್ಲ. ಆದರೂ ನಮ್ಮ ಅನುಪಸ್ಥಿತಿಯಲ್ಲಿ ನಮ್ಮ ಕೆಲಸ ಹಾಳಾಯಿತು ಎಂದಿಟ್ಟುಕೊಳ್ಳೋಣ. ಆಗ ಮೂರು ದಿನದ ನಂತರ ಹೋಗಿ ಸರಿ ಮಾಡಿಕೊಂಡರಾಯಿತು. ಸಾವೇನಾದರೂ ಬಂದು ಬಿಟ್ಟರೆ ಶಾಶ್ವತವಾಗಿ ಕೆಲಸ ಹಾಳಾಯಿತು. ಮತ್ತೆಂದೂ ಸರಿ ಮಾಡಲು ಬರಲಾಗುವುದಿಲ್ಲ.

ವಾಣಿಯ ಉಳಿದ ಸರಳಾರ್ಥ :–

ದ್ವಾದಶ್ ಮಧ್ಯ್ ಮಹಲ್ ಮಠ್ ಬೌರೆ, ಬಹುರ್ ನ ದೇಹಿ ಧರೈ ರೆ ।

ಸರಳಾರ್ಥ:– ಶ್ರೀಮದ್ಭಗವದ್ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ, ತತ್ವಜ್ಞಾನದ ಪ್ರಾಪ್ತಿಯನಂತರ ಪರಮೇಶ್ವರನ ಆ ಪರಮ ಪದದ ಹುಡುಕಾಟವನ್ನು ಮಾಡಬೇಕು ಎಂದು ಹೇಳಿದೆ, ಅಲ್ಲಿ ಹೋದನಂತರ ಸಾಧಕನು ಪ್ರಪಂಚಕ್ಕೆ ಮರಳಿ ಬರುವುದಿಲ್ಲ. ಅಂದರೆ ಅವನಿಗೆ ಪೂನರ್ಜನ್ಮ ಇರುವುದಿಲ್ಲ. ಅವನು ದೇಹಧಾರಣೆ ಮಾಡುವುದಿಲ್ಲ. ಸೂಕ್ಷ್ಮವೇದದ ಈ ವಾಣಿಯು ಸ್ಪಷ್ಟಪಡಿಸುವುದೇನೆಂದರೆ, ಆ ಪರಮಧಾಮವಾದ ದ್ವಾದಶ ಅಂದರೆ 12ನೇ ದ್ವಾರವನ್ನು ದಾಟಿ ಆ ಪರಮ ಧಾಮಕ್ಕೆ ಹೋಗುತ್ತಾನೆ. ಇಲ್ಲಿಯವರೆಗೆ ಸರ್ವಋಷಿ, ಮಹರ್ಷಿಗಳು, ಸಂತರು, ಮಂಡಲೇಶ್ವರರು ಕೇವಲ 10 ದ್ವಾರಗಳನ್ನು ತಿಳಿಸಿಕೊಟ್ಟಿದ್ದಾರೆ. ಆದರೆ ಕಬೀರ್ ಪರಮೇಶ್ವರರು ತನ್ನ ಸ್ಥಾನವನ್ನು ಪಡೆಯುವ ಸತ್ಯಮಾರ್ಗ, ಸತ್ಯಸ್ಥಾನವನ್ನು ತಾವೇ ತಿಳಿಸಿದ್ದಾರೆ. ಅವರು 12ನೇ ದ್ವಾರವನ್ನು ತಿಳಿಸಿಕೊಟ್ಟಿದ್ದಾರೆ. ಇಲ್ಲಿಯವರೆಗಿನ (ಸನ್ 2012 ರವರೆಗೆ) ಭಕ್ತಿ ಎಲ್ಲಾ ಋಷಿಗಳ, ಸಂತರ ಭಕ್ತಿ ಕಾಲಬ್ರಹ್ಮನವರೆಗೆ ಸೀಮಿತವಾಗಿತ್ತು ಆದ್ದರಿಂದ ಜನನ–ಮರಣದ ಚಕ್ರ ಸುತ್ತುತ್ತಿತ್ತು.

ವಾಣಿ ಸಂಖ್ಯೆ 5 :–

ದೋಜಖ್ ಬಹಿಶ್ತ್ ಸಭೀ ತೈ ದೇಖೆ, ರಾಜ–ಪಾಟ್ ಕೇ ರಸಿಯಾ ।
ತೀನ್ ಲೋಕ್ ಸೇ ತೃಪ್ತ್ ನಾಹೀಂ, ಯಹ್ ಮನ್ ಭೋಗೀ ಖಸಿಯಾ ॥

ಸರಳಾರ್ಥ:– ತತ್ವಜ್ಞಾನದ ಅಭಾವದಿಂದ ಪೂರ್ಣ ಮೋಕ್ಷದ ದಾರಿ ಸಿಗದಿದ್ದಕಾರಣ ಒಮ್ಮೆ ನರಕಕ್ಕೆ ಹೋಗುವುದು, ಒಮ್ಮೆ ಸ್ವರ್ಗಕ್ಕೆ ಹೋಗುವುದು, ಒಮ್ಮೆ ರಾಜನಾಗಿ ಮೆರೆಯುವುದು ಪುನರಾವರ್ತನೆ ಆಗುತ್ತಿರುತ್ತದೆ. ಇಂತಹ ಮನುಷ್ಯನಿಗೆ ಮೂರು ಲೋಕಗಳ ರಾಜ್ಯವನ್ನು ಕೊಟ್ಟರೂ ಅವನಿಗೆ ತೃಪ್ತಿಯಾಗುವುದಿಲ್ಲ.

ಉದಾಹರಣೆ:– ಯಾರಾದರೂ ಒಂದು ಹಳ್ಳಿಯ ಪಂಚಾಯಿತಿ ಸದಸ್ಯನಾದರೆ ಅವನು ಅಧ್ಯಕ್ಷನಾಗಲು ಬಯಸುತ್ತಾನೆ. ಅಧ್ಯಕ್ಷನಾದರೆ ಮಂತ್ರಿಯಾಗಲು ಇಚ್ಛಿಸುತ್ತಾನೆ. ಮಂತ್ರಿಯಾದರೆ ಮುಖ್ಯಮಂತ್ರಿಯಾಗಲು ಇಚ್ಛಿಸುತ್ತಾನೆ. ಮುಖ್ಯಮಂತ್ರಿಯಾದರೆ ಇಡೀ ರಾಜ್ಯ ತನ್ನ ಕೈಯಲ್ಲಿರುತ್ತದೆ. ಇಡೀ ರಾಜ್ಯ ತನ್ನ ಮಾತನ್ನು ಕೇಳುತ್ತದೆ ಎಂದೆನಿಸುತ್ತದೆ. ಇದು ಇಲ್ಲಿಗೇ ನಿಲ್ಲದೆ, ನಂತರ ಪ್ರಧಾನಮಂತ್ರಿಯಾದರೆ ಜೀವನ ಸಾರ್ಥಕವೆನ್ನಿಸುತ್ತದೆ. ಅಲ್ಲಿಯವರೆಗೆ ಅವನ ಜೀವನ ಸಮಾಪ್ತಿಯಾಗಿರುತ್ತದೆ. ನಂತರ ಈಗ ಕತ್ತೆಯಾಗಿ ಹುಟ್ಟಿ ಕತ್ತೆಕಾಯುವವನ ಲಾಠಿ ಏಟು ತಿನ್ನುತ್ತಿರಬೇಕು. ಆದ್ದರಿಂದ ಕಾಲಬ್ರಹ್ಮನ ಮೂಲಕ ಮಾಡಲ್ಪಟ್ಟ ಸ್ವರ್ಗ–ನರಕ ಮತ್ತು ಅಧಿಕಾರ ಪ್ರಾಪ್ತಿಗಾಗಿ ಮಾಡಿದ ತಪ್ಪು–ಒಪ್ಪುಗಳಲ್ಲಿ ಇಡೀ ಜೀವನ ವ್ಯರ್ಥಗೊಳಿಸಿದ್ದಾನೆ ಎಂದು ತತ್ವಜ್ಞಾನದಲ್ಲಿ ತಿಳಿಸಲಾಗುತ್ತದೆ. ಎಲ್ಲೂ ಸಂತೋಷವಿಲ್ಲ, ಮನಸ್ಸು ಜಡಹಿಡಿದಂತಾಗುತ್ತದೆ.

ಬಲಖ್ ಎಂಬ ನಗರದಲ್ಲಿ ಅಬ್ರಹಮ್ ಸುಲ್ತಾನ್ ಎಂಬ ರಾಜನಿದ್ದನು. ಅವನು ಹಿಂದಿನ ಜನ್ಮದಲ್ಲಿ ಒಬ್ಬ ಪರಮ ಭಕ್ತನಾಗಿದ್ದನು. ಆದರೆ ಈ ಜನ್ಮದಲ್ಲಿ ಧನದ ಮದದಿಂದ ಪರಮಾತ್ಮನನ್ನು ಮರೆತು ಹೋಗಿದ್ದನು. ರಾಜನ ವೈಭೋಗದಲ್ಲಿ, ಅರಮನೆಯಲ್ಲಿ, ಸುಖದ ಸುಪ್ಪತ್ತಿಗೆಯಲ್ಲಿ ರಾಜನು ಕಾಲ ಕಳೆಯುತ್ತಿದ್ದನು. ಒಂದು ದಿನ ಪರಮಾತ್ಮ ಸತ್ಯಲೋಕದಿಂದ ಬಂದು ಒಂದು ಯಾತ್ರಿಕನಂತೆ ವೇಷಧರಿಸಿ ಆ ರಾಜನ ಅರಮನೆಗೆ ಹೋದನು. ಅವನ ಬಳಿ ಹೋಗಿ, "ಹೇ ರಾಜ, ಒಂದು ಕೊಠಡಿಯನ್ನು ಬಾಡಿಗೆಗೆ ಕೊಡು, ಹಣವೆಷ್ಟು ಹೇಳು. ಈ ರಾತ್ರಿ ಇಲ್ಲಿ ಕಳೆಯಬೇಕಿದೆ" ಎಂದನು. ಆಗ ಆ ರಾಜನು ಆ ಯಾತ್ರಿಕನಿಗೆ, "ಹೇ ಯಾತ್ರಿಕನೇ, ಇದೇನು ನಿನಗೆ ಧರ್ಮಛತ್ರದಂತೆ ಕಾಣುತ್ತಿದೆಯೇ? ನಾನು ರಾಜ ಮತ್ತು ಇದು ನನ್ನ ಅರಮನೆ" ಎಂದನು. ಆಗ ಆ ಪರಮಾತ್ಮನು ಈ ಅರಮನೆಯಲ್ಲಿ ಈ ಮೊದಲು ಯಾರು ವಾಸಿಸುತ್ತಿದ್ದರು ಎಂದು ಕೇಳಿದನು. ಆಗ ಆ ರಾಜನು, 'ನನ್ನ ತಂದೆ, ತಾತಾ–ಮುತ್ತಾತಂದಿರು ವಾಸಿಸುತ್ತಿದ್ದರು ಎಂದನು. ಯಾತ್ರಿಕ ವೇಷದಲ್ಲಿದ್ದ ಪರಮಾತ್ಮನು, ನೀನೆಷ್ಟು ದಿನ ಈ ಅರಮನೆಯಲ್ಲಿರುತ್ತೀಯಾ? ಎಂದು ಕೇಳಿದನು. ಆಗ ರಾಜನು ಮುಂದೊಂದು ದಿನ ನಾನೂ ಈ ಅರಮನೆಯನ್ನು ಬಿಟ್ಟು ಹೋಗುವೆ ಎಂದನು. ಆಗ ಪರಮಾತ್ಮನು, ಈ ಅರಮನೆ ಧರ್ಮಛತ್ರವಲ್ಲದೆ ಮತ್ತೇನು? ನಿನ್ನ ತಾತ ಮುತ್ತಾತಂದಿರು ಹೋದರು, ಹಾಗೇ ನೀನು ಒಂದು ದಿನ ಹೊರಟು ಹೋಗುವೆ, ಆದ್ದರಿಂದ ನಾನು ಅರಮನೆಯನ್ನು ಧರ್ಮಛತ್ರ ಎಂದಿದ್ದೇನೆ." ಎಂದು ಹೇಳಿದನು. ಆಗ ರಾಜನಿಗೆ ಜ್ಞಾನೋದಯವಾಯಿತು. ಪ್ರಪಂಚದ ಮೋಹವನ್ನು ತೊರೆದು ಆತ್ಮ ಕಲ್ಯಾಣ ಮಾಡಿಕೊಂಡನು. ಎಂದೆಂದಿಗೂ ಸುಖವಾಗಿರಲು ಮತ್ತು ಅಮರ ಜೀವನ ಪಡೆಯಲು ದೀಕ್ಷೆ ಪಡೆದನು ಮತ್ತು ಜೀವನಪರ್ಯಂತ ಭಕ್ತನಾಗಿ ಉಳಿದನು. ತನ್ನ ಜೀವನವನ್ನು ಸಾರ್ಥಕ ಪಡಿಸಿಕೊಂಡನು.

ವಾಣಿ ಸಂಖ್ಯೆ 6 :–

ಸತ್‌ಗುರು ಮಿಲ್ಯೆ ತೋ ಇಚ್ಛಾ ಮೇಟ್ಯೆ, ಪದ್ ಮಿಲ್ ಪದೇ ಸಮಾನಾ ।

ಚಲ್ ಹಂಸಾ ಉಸ್ ಲೋಕ್ ಪಠಾಊಂ, ಜೋ ಆದಿ ಅಮರ್ ಅಸ್ಥಾನಾ ॥

**ಸರಳಾರ್ಥ:–** ತತ್ವದರ್ಶಿ ಸಂತ ಸದ್ಗುರು ಸಿಕ್ಕಿದರೆ, ಮೇಲೆ ತಿಳಿಸಿದ ಜ್ಞಾನವನ್ನು ತಿಳಿಸಿ, ಕಾಲಬ್ರಹ್ಮನ ಲೋಕದ ಎಲ್ಲಾ ವಸ್ತುಗಳು ಮತ್ತು ಪದವಿಗಳಿಂದ ದೂರ ಉಳಿದು, ಶಾಸ್ತ್ರವಿಧಿಯಂತೆ ಸಾಧನೆ ಮಾಡುವುದನ್ನು ತಿಳಿಸುತ್ತಾರೆ. ಪರಮೇಶ್ವರನ ಪರಮ ಪದವಿಯನ್ನು ಗಳಿಸಿದಾಗ ಸಾಧಕನು ಮತ್ತೆ ಈ ಪ್ರಪಂಚಕ್ಕೆ ಬರುವುದಿಲ್ಲ. ಹೇ ಭಕ್ತರೇ, ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಹೇಳಿರುವ ಸನಾತನ ಪರಮಧಾಮಕ್ಕೆ ನಿಮ್ಮನ್ನು ಕಳುಹಿಸುವೆ, ಅಲ್ಲಿ ಪರಮ ಶಾಂತಿ ನೆಲೆಸಿರುತ್ತದೆ.

ವಾಣಿ ಸಂಖ್ಯೆ 7 :–

ಚಾರ್ ಮುಕ್ತಿ ಜಹಾಂ ಚಂಪೀ ಕರತೀ, ಮಾಯಾ ಹೋ ರಹೀ ದಾಸೀ ।
ದಾಸ್ ಗರೀಬ್ ಅಭಯ್ ಪದ್ ಪರಸ್ಯೈ, ಮಿಲ್ಯೈ ರಾಮ್ ಅವಿನಾಶೀ ॥

**ಸರಳಾರ್ಥ:–** ಆ ಸನಾತನ ಪರಮಧಾಮದಲ್ಲಿ ಪರಮ ಶಾಂತಿ ಮತ್ತು ಸುಖವಿದೆ. ಕಾಲಬ್ರಹ್ಮನ ಲೋಕದಲ್ಲಿ ನಾಲ್ಕು ಮುಕ್ತಿಗಳನ್ನು ಹೇಳಲಾಗಿದೆ. ಅದನ್ನು ಪಡೆದು ಸಾಧಕನು ತನ್ನನ್ನು ಧನ್ಯನೆಂದು ತಿಳಿಯುತ್ತಾನೆ. ಆದರೆ ಅದು ಶಾಶ್ವತವಲ್ಲ. ಸ್ವಲ್ಪ ಸಮಯದ ನಂತರ ಪುಣ್ಯ ಖಾಲಿಯಾದಾಗ 84 ಲಕ್ಷ ಪ್ರಕಾರಗಳ ಯೋನಿಗಳಲ್ಲಿ ಜನ್ಮ ತಾಳಿ ಕಷ್ಟ ಪಡುತ್ತಾನೆ. ಆದರೆ ಈ ಸತ್ಯಲೋಕದಲ್ಲಿ ನಾಲ್ಕೂ ಮುಕ್ತಿಯ ಸುಖ ಎಂದೆಂದಿಗೂ ಇರುವುದು. ಆಗ ಮಾಯೆ ನಿಮ್ಮ ಸೇವಕಿಯಾಗಿ ಇರುತ್ತಾಳೆ. ಸಂತ ಗರೀಬ್‌ದಾಸರು ಹೇಳುವುದೇನೆಂದರೆ, ಅಮರ ಲೋಕವನ್ನು ತಲುಪಿದ ನಂತರ ಪ್ರಾಣಿಯು ನಿರ್ಭಯನಾಗುತ್ತಾನೆ ಮತ್ತು ಆ ಸನಾತನ ಪರಮಧಾಮದಲ್ಲಿ ಅವನಿಗೆ ಅವಿನಾಶಿ ರಾಮ ಅಂದರೆ ಪರಮೇಶ್ವರನು ಸಿಗುತ್ತಾನೆ. ಆದ್ದರಿಂದ ಪೂರ್ಣ ಮೋಕ್ಷಕ್ಕಾಗಿ ಶಾಸ್ತ್ರಾನುಸಾರವಾಗಿ ಭಕ್ತಿ ಮಾಡಬೇಕು. ಆಗ ಅವನು ನಿಜವಾಗಲೂ ಭಗವಂತನ ಮೊರೆ ಹೋಗಬಹುದು.

ಇದರಿಂದ ಸ್ಪಷ್ಟವಾಗುವುದೇನೆಂದರೆ ಬ್ರಹ್ಮಾ, ವಿಷ್ಣು, ಮಹೇಶ್ವರ ಮತ್ತು ಅವನ ತಂದೆ ಕಾಲಬ್ರಹ್ಮ ಅರ್ಥಾತ್ ಕ್ಷರಪುರುಷ ಮತ್ತು ಅಕ್ಷರಪುರುಷ ಎಲ್ಲರೂ ರಾಮ ಅರ್ಥಾತ್ ಪ್ರಭು ನಾಶವಾಗುವವರು. ಕೇವಲ ಪರಮ ಅಕ್ಷರಬ್ರಹ್ಮನೇ ಅವಿನಾಶೀ ರಾಮ ಅರ್ಥಾತ್ ಪ್ರಭು. ಅಂದರೆ ಈ ಪರಮೇಶ್ವರನ ಭಕ್ತಿಯಿಂದ ಪರಮಶಾಂತಿ ಮತ್ತು ಸನಾತನ ಪರಮ ಧಾಮ ಅರ್ಥಾತ್ ಪೂರ್ಣ ಮೋಕ್ಷ ಪ್ರಾಪ್ತಿಯಾಗುತ್ತದೆ. ಅಲ್ಲಿ ನಾಲ್ಕು ಮುಕ್ತಿಯ ಸುಖ ಯಾವಾಗಲೂ ಸಿಗುತ್ತದೆ. ಮಾಯೆಯು ಮತ್ತು ಸಕಲ ಸೌಕರ್ಯಗಳು ಸಾಧಕನಿಗೆ ಸೇವಕನಾಗಿ ಇರುತ್ತವೆ. ಸೂಕ್ಷ್ಮವೇದದಲ್ಲಿ ಹೇಳಿರುವುದೇನೆಂದರೆ,

ಕಬೀರ್, ಮಾಯಾ ದಾಸೀ ಸಂತ್ ಕೀ, ಉಭಯ್ ದೇ ಆಶೀಷ್ ।
ವಿಲಸೀ ಔರ್ ಲಾತೋ ಛಡೀ, ಸುಮರ್–ಸುಮರ್ ಜಗದೀಶ್ ॥

**ಭಾವಾರ್ಥ:–** ಹಣದಿಂದ ಸರ್ವಸುಖ–ಸಂಪತ್ತುಗಳು ದೊರಕುವುವು. ಶಾಸ್ತ್ರವಿಧಿಯ ಅನುಸಾರವಾಗಿ ಭಕ್ತಿ ಮಾಡುವ ಸಂತ–ಭಕ್ತನು ಆ ಹಣವನ್ನು ಗಳಿಸುವ ಉದ್ದೇಶ ಇಟ್ಟುಕೊಳ್ಳದಿದ್ದರೂ ಅವನಿಗೆ ಹಣ ಪ್ರಾಪ್ತವಾಗುತ್ತದೆ. ಅಂದರೆ ಗೋಧಿಯನ್ನು ಬಿತ್ತಿದರೆ ಅವನ ಉದ್ದೇಶ ಗೋಧಿಯ ಕಾಳನ್ನು ಪಡೆಯುವುದು ಎಂದರ್ಥ. ಆದರೆ ಅದರ ಜೊತೆ ಭೂಸಾನೂ ಲಭ್ಯವಾಗುವುದು. ಭೂಸ ಗೋಧಿಯ ಬೈ ಪ್ರಾಡಕ್ಟ್ ಆಗಿರುತ್ತದೆ. ಅದೇ ರೀತಿ ಸತ್ಯ ಸಾಧನೆ ಮಾಡುವವನಿಗೆ ಮಾಯೆ ಎನ್ನುವ ಧನವೂ ಸಿಗುವುದು. ಸಾಧಕನು ಅದನ್ನು ಅನುಭವಿಸುತ್ತಾನೆ. ಅದು ಅವನ ಪಾದದ ಬಳಿ ಬಿದ್ದಿರುತ್ತದೆ. ಅವನಿಗೆ ಹಣದ ಆಭಾವ ಇರುವುದಿಲ್ಲ ಬದಲಾಗಿ ಅವಶ್ಯಕತೆಗಿಂತ ಹೆಚ್ಚಿರುತ್ತದೆ. ಪರಮೇಶ್ವರನ ಭಕ್ತಿ ಮಾಡುವುದರಿಂದ ಭಕ್ತನು ಆನಂದ ಹಾಗೂ ಪೂರ್ಣ ಮೋಕ್ಷವನ್ನು ಪಡೆಯುತ್ತಾನೆ.

ಈ ಪ್ರಸಂಗವನ್ನು ಮುಂದುವರೆಸುತ್ತಾ, ಮಾನವ ಶರೀರ ಪಡೆದ ಪ್ರಾಣಿಗೆ ಅವನು ತನ್ನ

**ಉದ್ದೇಶವನ್ನು ನೆನಪಿಡುವಂತೆ ಮಾಡಬೇಕು. ಭಕ್ತಿಯಿಂದ ತನ್ನ ಉದ್ಧಾರ ಮಾಡಿಕೊಳ್ಳಬೇಕು. ಸೂಕ್ಷ್ಮವೇದದಲ್ಲಿ ಹೀಗೆ ಬರೆದಿದೆ:–**

ಯಹ್ ಸೌದಾ ಫಿರ್ ನಾಹೀಂ ಸಂತೋ, ಯಹ್ ಸೌದಾ ಫಿರ್ ನಾಹೀಂ ।
ಲೋಹೆ ಜೈಸಾ ತಾವ್ ಜಾತ್ ಹೈ, ಕಾಯಾ ದೇಹ್ ಸರಾಹೀ ॥
ತೀನ್ ಲೋಕ್ ಔರ್ ಭುವನ್ ಚತುರ್ದಶ್, ಸಬ್ ಜಗ್ ಸೌದೇ ಆಹೀಂ ।
ದುಗನೆ–ತಿಗುನೆ ಕಿಯೆ ಚೌಗುನೆ, ಕಿನ್ಹೂಂ ಮೂಲ್ ಗವಾಹೀಂ ॥

**ಭಾವಾರ್ಥ:– ಇಬ್ಬರು ವ್ಯಾಪಾರಿಗಳು ವ್ಯಾಪಾರ ಮಾಡಲು ಒಂದೂರಿಗೆ ಹೋದರು. ತಲಾ 5–5 ಲಕ್ಷ ಬಂಡವಾಳ ತೆಗೆದುಕೊಂಡು ಹೋದರು. ಒಬ್ಬನು ತನ್ನ ಹಣವನ್ನು ಸದುಪಯೋಗ ಮಾಡಿಕೊಂಡನು. ಹೋಟೆಲ್‌ನಲ್ಲಿ ಬಾಡಿಗೆಗೆ ರೂಮನ್ನು ಪಡೆದನು, ಸಾಮಾನನ್ನು ಖರೀದಿಸಿದನು. ಹೆಚ್ಚಿನ ಬೆಲೆಗೆ ಮಾರಿದನು. 20 ಲಕ್ಷ ರೂಪಾಯಿ ಸಂಪಾದನೆ ಮಾಡಿದನು. ಎರಡು ವರ್ಷದಲ್ಲಿ ಮನೆಗೆ ವಾಪಸ್ಸು ಬಂದನು. ಎಲ್ಲರೂ ಅವನನ್ನು ಹೊಗಳಿದರು. ಅವನು ಧನಿಕನಾದನು.**

**ಇನ್ನೊಬ್ಬನು ಹೋಟೆಲ್‌ನಲ್ಲಿ ರೂಮನ್ನು ಬಾಡಿಗೆಗೆ ಪಡೆದು. ಮದ್ಯವನ್ನು ಸೇವಿಸಿ. ವೇಶ್ಯೆಯರ ಸಂಗ ಮಾಡಿ. ತಿಂದು, ಉಂಡು ಮಲಗಿ, ವ್ಯರ್ಥಮಾಡಿದನು. ಅವನು ತನ್ನ ಬಂಡವಾಳದಲ್ಲಿ 5 ಲಕ್ಷ ರೂಪಾಯಿಗಳನ್ನು ಕಳೆದುಕೊಂಡನು. ಮನೆಗೆ ಮರಳಿ ಬಂದಾಗ ಸಾಲಗಾರನಾದನು. ಯಾರಿಂದ 5 ಲಕ್ಷ ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದನೋ ಅವನು ಆ ಹಣವನ್ನು ಕೊಡುವಂತೆ ಕೇಳಿದನು. ಕೊಡಲು ಸಾಧ್ಯವಿಲ್ಲದಿದ್ದಾಗ ಅವನು ಆ ವ್ಯಾಪಾರಿಯನ್ನು ಜೀತಕ್ಕಿಟ್ಟುಕೊಂಡನು. ಕಷ್ಟಪಟ್ಟು ದುಡಿದು ಅವನು 5 ಲಕ್ಷ ಸಾಲ ತೀರಿಸಿದನು. ಮೇಲಿನ ಪದ್ಯದ ತಾತ್ಪರ್ಯವೇನೆಂದರೆ, ಸ್ವರ್ಗಲೋಕ, ಪಾತಾಳಲೋಕ ಮತ್ತು ಭೂಲೋಕ–ಮೂರೂ ಲೋಕದಲ್ಲಿ ಇರುವ ಪ್ರಾಣಿಗಳೆಲ್ಲಾ ರಾಮನಾಮದ ವ್ಯಾಪಾರ ಮಾಡಲು ಬಂದಿರುವರು. ಒಬ್ಬರು ಎರಡರಷ್ಟು, ಮೂರರಷ್ಟು, ನಾಲ್ಕರಷ್ಟು ಹಣ ಸಂಪಾದಿಸಿದನು. ಅಂದರೆ ಸಂತನಿಂದ ದೀಕ್ಷೆ ಪಡೆದು ಮನುಷ್ಯ ಜೀವನದ ಉಸಿರಿನ ಬಂಡವಾಳವನ್ನು ನಿಜವಾದ ಭಕ್ತಿಯಿಂದ ಹೆಚ್ಚಿಸಿದನು. ಬೇರೆ ವ್ಯಕ್ತಿಗಳು ಭಕ್ತಿ ಮಾಡಲಿಲ್ಲ, ಶಾಸ್ತ್ರಾನುಸಾರ ಮಾಡಬೇಕಾದ್ದನ್ನು ಬಿಟ್ಟು ಮನಸ್ಸಿಗೆ ಬಂದಂತೆ ಆಚರಿಸಿದರು ಅಥವಾ ಅನಧಿಕಾರಿ ಗುರುವಿನಿಂದ ದೀಕ್ಷೆ ಪಡೆದು ಭಕ್ತಿ ಮಾಡಿದರು. ಅವರಿಗೆ ಯಾವುದೇ ಲಾಭವಾಗಲಿಲ್ಲ. ಇದನ್ನು ಗೀತೆಯ 16ನೇ ಅಧ್ಯಾಯದ 23–24ನೇ ಶ್ಲೋಕದಲ್ಲಿ ಬರೆದಿದೆ. ಆದ್ದರಿಂದ ಅವನು ತನ್ನ ಮನುಷ್ಯ ಜೀವನದ ಉಸಿರಿನ ರೂಪದಲ್ಲಿರುವ ಬಂಡವಾಳವನ್ನು ಸತ್ಯ, ಭಕ್ತಿ ಮಾಡದೆ ಹಾಳು ಮಾಡಿಕೊಂಡನು.**

## “ಭಕ್ತಿ ಮಾಡದೆ ಇರುವುದರಿಂದ ಆಗುವ ನಷ್ಟದ ವಿವರಣೆ”

ಯಹ್ ದಮ್ ಟೂಟೈ ಪಿಂಡಾ ಫೂಟೈ, ಹೋ ಲೇಖಾ ದರ್‌ಗಾಹ್ ಮಾಂಹೀ ।
ಉಸ್ ದರಗಾಹ್ ಮೆಂ ಮಾರ್ ಪಡೈಗೀ, ಜಮ್ ಪಕಡೇಂಗೆ ಬಾಂಹೀ ॥

ನರ್–ನಾರಾಯಣ್ ದೇಹಿ ಪಾಯ್ ಕರ್, ಫೇರ್ ಚೌರಾಸೀ ಜಾಂಹೀ ।
ಉಸ್ ದಿನ್ ಕೀ ಮೋಹೆ ಡರನೀ ಲಾಗೇ, ಲಜ್ಜಾ ರಹ್ ಕೇ ನಾಂಹೀ ॥

ಜಾ ಸತಗುರು ಕೀ ಮೈಂ ಬಲಿಹಾರೀ, ಜೋ ಜಾಮಣ್ ಮರಣ್ ಮಿಟಾಹೀಂ ।
ಕುಲ್ ಪರಿವಾರ್ ತೇರಾ ಕುಟಂಬ್ ಕಬೀಲಾ, ಮಸಲಿತ್ ಏಕ್ ಠಹರಾಹೀ ।
ಬಾಂಧ್ ಪೀಂಜರೀ ಆಗೈ ಧರ್ ಲಿಯಾ, ಮರಘಟ್ ಕೂಂ ಲೇ ಜಾಹೀಂ ।
ಅಗ್ನಿ ಲಗಾ ದಿಯಾ ಜಬ್ ಲಂಬಾ, ಫೂಂಕ್ ದಿಯಾ ಉಸ್ ಠಾಹೀಂ ।

ಪುರಾಣ್ ಉಠಾ ಫಿರ್ ಪಂಡಿತ್ ಆಯೆ, ಪೀಛೆ ಗರುಡ್ ಪಢಾಹೀಂ ॥

ಭಾವಾರ್ಥ:– ಯಾವಾಗ ಈ ಉಸಿರು ನಿಂತು ಹೋಗುವುದೋ ಆ ದಿನವೇ ಈ ಶರೀರ ರೂಪದಲ್ಲಿರುವ ಪಿಂಡ ಹೊರಟು ಹೋಗುವುದು. ನಂತರ ಪರಮಾತ್ಮನ ಆಸ್ಥಾನದಲ್ಲಿ ಪಾಪ ಪುಣ್ಯಗಳ ಲೆಕ್ಕಾಚಾರ ಪ್ರಾರಂಭವಾಗುವುದು. ಭಕ್ತಿ ಮಾಡದಿರುವ ಅಥವಾ ಶಾಸ್ತ್ರವಿರುದ್ಧವಾಗಿ ಭಕ್ತಿ ಮಾಡುವವರನ್ನು ಯಮದೂತರು ಕುತ್ತಿಗೆ ಹಿಡಿದು ಕೊಂಡೊಯ್ಯುತ್ತಾರೆ. ಅವನು ಯಾವುದೇ ದೇಶದ ರಾಜನಾಗಿರಬಹುದು, ಅವನನ್ನು ಹೊಡೆಯಲಾರಂಭಿಸುತ್ತಾರೆ. ಸಂತ ಗರೀಬ್‌ದಾಸರಿಗೆ ಪರಮೇಶ್ವರನಾದ ಕಬೀರರು ಸಿಕ್ಕಿದರು. ಅವರ ಆತ್ಮವನ್ನು ಮೇಲೆ ತೆಗೆದುಕೊಂಡು ಹೋದರು. ಬ್ರಹ್ಮಾಂಡವನ್ನೆಲ್ಲಾ ತೋರಿಸಿ ಸಂಪೂರ್ಣ ಆಧ್ಯಾತ್ಮ ಜ್ಞಾನವನ್ನು ತಿಳಿಸಿ ಮರಳಿ ಶರೀರದಲ್ಲಿ ತಂದು ಬಿಟ್ಟರು. ಸಂತ ಗರೀಬ್‌ದಾಸರು ತಮ್ಮ ಕಣ್ಣಾರೆ ನೋಡಿದ್ದನ್ನು ಹೀಗೆ ವರ್ಣಿಸಿದ್ದಾರೆ, "ಹೇ ಮಾನವ! ನಿನಗೆ ಮಾನವ ಶರೀರ ಸಿಕ್ಕಿದೆ. ಅದು ನಾರಾಯಣನ ಸ್ವರೂಪ, ಬೇರೆ ಪ್ರಾಣಿಗಳಿಗೆ ಈ ಸುಂದರ ಶರೀರ ಲಭ್ಯವಾಗಿಲ್ಲ. ಈ ಶರೀರ ಸಿಕ್ಕಿದ್ದರಿಂದ ನೀನು ಜೀವನಪರ್ಯಂತ ಭಗವಂತನಲ್ಲಿ ಭಕ್ತಿ ಇರಿಸಬೇಕು. ಹಾಗೆ ಮಾಡದಿದ್ದರೆ ಅವನು 84 ಲಕ್ಷ ಯೋನಿಗಳಲ್ಲಿ ಮರಳಿ ಹೋಗುತ್ತಾನೆ. ಇಂತಹ ಮಾನವ ಜೀವನಕ್ಕೆ ಧಿಕ್ಕಾರವಿರಲಿ. ಯಾವಾಗ ಭಕ್ತಿ ಕಡಿಮೆಯಾಗುತ್ತೋ ಆಗ ಪರಮಾತ್ಮನ ಆಸ್ಥಾನದಲ್ಲಿ ನಿನಗೆ ಗೌರವ ಇರುವುದೋ ಇಲ್ಲವೋ ಎನ್ನುವುದೇ ನನಗೆ ಭಯವಾಗಿದೆ ಹಾಗೂ ಚಿಂತೆಯಾಗಿದೆ. ನೀನಂತೂ ಭಕ್ತಿಯನ್ನೇ ಮಾಡಿಲ್ಲ. ಮಾಡಿದರೂ ಶಾಸ್ತ್ರವಿರುದ್ಧವಾಗಿ ಮಾಡಿದ್ದೀಯಾ. ಆದ್ದರಿಂದ ನಿನ್ನ ಗತಿ ನೆಟ್ಟಗಿರುವುದಿಲ್ಲ. ಹಾಗಾಗಿ ನಾನೊಂದು ಉಪಾಯ ಹೇಳಿ ಕೊಡುವೆ. ಜನನ–ಮರಣವೆಂಬ ದೀರ್ಘ ರೋಗವನ್ನು ನಿವಾರಿಸುವ, ಸಂಪೂರ್ಣ ತೊಲಗಿಸುವ ಸದ್ಗುರುವನ್ನು ಹುಡುಕು". ನಾವು ಸತ್ತ ನಂತರ ನಮ್ಮ ಗತಿ ಏನಾಗುವುದೆಂದು ತಿಳಿಯಬೇಕು. ಅಕ್ಕ ಪಕ್ಕದ ಮನೆಯವರು ಹೆಣವನ್ನು ಬೇಗ ಎತ್ತಬೇಕೆಂದು ಒತ್ತಾಯಿಸುವರು. ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಹೂಳುತ್ತಾರೆ ಅಥವಾ ಸುಟ್ಟುಹಾಕುತ್ತಾರೆ. ಹೆಣದ ಬಳಿ ಇರುವ ವಸ್ತುಗಳನ್ನೆಲ್ಲಾ ತೆಗೆದುಕೊಳ್ಳುತ್ತಾರೆ. ಅವರಿಗೆ ತೋಚಿದಂತೆ ಸಂಸ್ಕಾರ ಮಾಡುತ್ತಾರೆ. ನಂತರ ಗರುಡ ಪುರಾಣವನ್ನು ಓದುತ್ತಾರೆ.

ಸೂಕ್ಷ್ಮವೇದ (ತತ್ವಜ್ಞಾನದಲ್ಲಿ) ಹೇಳಿರುವುದೇನೆಂದರೆ, ಮಾನವ ತನ್ನ ಜೀವನವನ್ನು ಪೂರ್ಣಗೊಳಿಸಿ ಅವನು ಹೊರಟು ಹೋಗುತ್ತಾನೆ. ಪರಮಾತ್ಮನ ಆಸ್ಥಾನದಲ್ಲಿ ಅವನ ಲೆಕ್ಕಾಚಾರ ಪ್ರಾರಂಭವಾಗುವುದು. ಅವನು ಅವನ ಕರ್ಮಾನುಸಾರ ಕತ್ತೆಯೋ, ನಾಯಿಯೋ ಆಗುವ ಸಾಲಿನಲ್ಲಿ ನಿಲ್ಲುತ್ತಾನೆ. ಸತ್ತ ನಂತರ ಗರುಡ ಪುರಾಣದ ಪಠಣ ಅವನಿಗೇನು ಪ್ರಯೋಜನ?. ಇದಂತೂ ಖಂಡಿತವಾಗಿಯೂ ಶಾಸ್ತ್ರಕ್ಕೆ ವಿರುದ್ಧವಾದ ಕ್ರಿಯಾಕ್ರಮವಾಗಿದೆ. ಅವನು ಬದುಕಿದ್ದಾಗ ಅವನು ಭಗವಂತನ ಸಂವಿಧಾನ ಜ್ಞಾನ ಪಡೆಯಬೇಕಾಗಿತ್ತು. ಆಗ ಅವನಿಗೆ ಒಳ್ಳೆಯ–ಕೆಟ್ಟದರ ಅರಿವು ಉಂಟಾಗುತ್ತಿತ್ತು. ಆಗ ಅವನು ತನ್ನ ಮಾನವ ಜೀವನವನ್ನು ಸಾರ್ಥಕ ಮಾಡಿಕೊಳ್ಳುತ್ತಿದ್ದನು.

ಪ್ರೇತ್ ಶಿಲಾ ಪರ್ ಜಾಯ್ ವಿರಾಜೇ, ಫಿರ್ ಪಿತರೋಂ ಪಿಂಡ್ ಭರಾಹೀಂ ।
ಬಹುರ್ ಶ್ರಾದ್ಧ್ ಖಾನ್ ಕೂಂ ಆಯಾ, ಕಾಗ್ ಭಯೇ ಕಲಿ ಮಾಹೀಂ ॥

ಭಾವಾರ್ಥ:– ಮೃತ್ಯುವಿನ ನಂತರ ಆ ಜೀವದ ಕಲ್ಯಾಣಕ್ಕಾಗಿ ಅಂದರೆ ಮೋಕ್ಷವನ್ನು ಕೊಡಿಸುವುದಕ್ಕಾಗಿ ಮಾಡುವ ಶಾಸ್ತ್ರವಿರುದ್ಧವಾದ ಕ್ರಿಯೆಗಳೆಲ್ಲಾ ವ್ಯರ್ಥ. ಗರುಡ ಪುರಾಣ ಓದುವುದು, ಅಸ್ಥಿಗಳನ್ನು ಗಂಗೆಯಲ್ಲಿ ಬಿಡುವುದು, ಒಂದು ವರ್ಷದವರೆಗೆ ಮಾಸಿಕವನ್ನು ಮಾಡುವುದು. ಆರು ತಿಂಗಳಿಗೆ, ಒಂದು ವರ್ಷಕ್ಕೆ ತಿಥಿ ಮಾಡುವುದು, ಪಿಂಡಪ್ರದಾನ ಮಾಡುವುದು, ಶ್ರಾದ್ಧ ಮಾಡುವುದು ಮುಂತಾದವು ಕೇವಲ ಅವನಿಗೆ ಮುಕ್ತಿ ಕೊಡಿಸಲು ಅಷ್ಟೇ, ಶ್ರಾದ್ಧದ ದಿನ ಪುರೋಹಿತರು ತಾವೇ ಅಡುಗೆ ಮಾಡುತ್ತಾರೆ ಹಾಗೂ ಮಾಡಿದ ಅಡಿಗೆಯನ್ನು ಮನೆಯ ತಾರಸಿಯ ಮೇಲೆ ಇಟ್ಟು ನಿಮ್ಮ ಪಿತೃಗಳು ಕಾಗೆಯಾಗಿ ಬರುತ್ತಾರೆ ಎಂದು ಹೇಳುತ್ತಾರೆ. ಕಾಗೆಯು ಊಟ ಮಾಡಿದರೆ, ನಿಮ್ಮ ಜನ್ಮ

ಸಾರ್ಥಕವಾಯಿತು, ಶ್ರಾದ್ಧವು ಸಫಲವಾಯಿತೆಂದು ಹೇಳುತ್ತಾರೆ. ಇದರಿಂದ ತಿಳಿದು ಬರುವುದೇನೆಂದರೆ ಅವನು ಯಾರ ಉತ್ತರಕ್ರಿಯೆಗಳನ್ನು ಮಾಡಿದನೋ ಅವನು ಕಾಗೆಯಾಗಿಬಿಟ್ಟಿದ್ದಾನೆ ಎಂದು.

ಶ್ರಾದ್ಧ ಮಾಡಿಸುವ ಪುರೋಹಿತನು, ಶ್ರಾದ್ಧ ಮಾಡುವುದರಿಂದ ಆ ಜೀವವು ಒಂದು ವರ್ಷದವರೆಗೆ ತೃಪ್ತಿಗೊಂಡಿದೆ, ಮತ್ತೆ ಮುಂದಿನ ವರ್ಷ ತಿಥಿ ಮಾಡಬೇಕು ಎಂದು ಹೇಳುತ್ತಾನೆ.

**ಯೋಚಿಸೋಣ:–** ಬದುಕಿದ್ದ ವ್ಯಕ್ತಿ ಒಂದು ದಿನಕ್ಕೆ ಮೂರು ಬಾರಿ ಊಟಮಾಡುತ್ತಿದ್ದನು. ಈಗ ಒಂದು ದಿನ ಊಟ ಮಾಡಿದರೆ ಒಂದು ವರ್ಷದವರೆಗೆ ಹೇಗೆ ತೃಪ್ತಗೊಳ್ಳಲು ಸಾಧ್ಯ? ಪ್ರತಿದಿನವೂ ತಾರಸಿಯ ಮೇಲೆ ಊಟವನ್ನಿಟ್ಟರೆ ಆ ಕಾಗೆಯು ಖಂಡಿತವಾಗಿಯೂ ಊಟ ಮಾಡುತ್ತದೆ.

**ಮತ್ತೊಂದು ಮಾತು:–** ಸಾವಿನ ನಂತರ ಮಾಡುವ ಎಲ್ಲ ಕರ್ಮಗಳು ಮೋಕ್ಷಕ್ಕಾಗಿಯೇ ಮಾಡಲಾಗುತ್ತದೆ. ಆ ಬಗ್ಗೆ ಅರಿವಿರದ ಅಜ್ಞಾನಿ ಗುರುಗಳು ಕೊನೆಯಲ್ಲಿ ಅವನನ್ನು ಕಾಗೆ ಮಾಡಿ ಬಿಟ್ಟು ಬಿಟ್ಟರು. ಅವನು ಪ್ರೇತ ಶಿಲೆಯ ಮೇಲೆ ಪ್ರೇತ ಯೋನಿಯಲ್ಲಿ ಜನಿಸಿದ್ದಾನೆ. ಇದರ ಮೇಲೆ ಗುರು ಮತ್ತು ಕಾಗೆ ಮಜ ಮಾಡಿಕೊಂಡು ಊಟ ಮಾಡುತ್ತಿದ್ದಾರೆ. ಪಿಂಡ ಪ್ರದಾನದಿಂದ ಪ್ರೇತ ಜನ್ಮವು ನಾಶವಾಗುತ್ತದೆ ಎಂದು ಹೇಳುತ್ತಿದ್ದಾನೆ. ಪ್ರೇತ ಯೋನಿ ಸಿಗದೆ ಯಾವುದೋ ಕತ್ತೆ, ಎತ್ತಿನ ಜನ್ಮ ಸಿಕ್ಕರೆ ಮುಕ್ತಿ ಎಲ್ಲಿ?

ನರ್ ಸೇ ಫಿರ್ ಪಶುವಾ ಕೀಜೈ, ಗಧಾ, ಬೈಲ್ ಬನಾಯೀ ।
ಛಪ್ಪನ್ ಭೋಗ್ ಕಹಾಂ ಮನ್ ಬೌರೇ, ಕಹೀಂ ಕುರಡೀ ಚರನೇ ಜಾಈ ॥

**ಭಾವಾರ್ಥ:–** ಮನುಷ್ಯ ಜೀವನದಲ್ಲಿ ನಾವು **56** ಪ್ರಕಾರದ ಊಟ ಮಾಡುತ್ತೇವೆ. ಭಕ್ತಿ ಮಾಡದಿದ್ದರೆ ಅಥವಾ ಶಾಸ್ತ್ರವಿರುದ್ಧವಾದ ಸಾಧನೆ ಮಾಡುವುದರಿಂದ ಕತ್ತೆಯಾಗಿ ಹುಟ್ಟಿದರೆ ಈ **56** ಪ್ರಕಾರದ ಊಟ ಎಲ್ಲಿ ಸಿಗಲು ಸಾಧ್ಯ? ತನ್ನ ಹೊಟ್ಟೆ ತುಂಬಿಸಿಕೊಳ್ಳಲು ಹುಲ್ಲು ತಿನ್ನಲು ಹೋಗುತ್ತಾನೆ. ಹಾಗೇ ಬೇರೆ ಪ್ರಾಣಿಯಾಗಿ ಹುಟ್ಟಿ ಕಷ್ಟದ ಮೇಲೆ ಕಷ್ಟಪಡುತ್ತಾನೆ.

ಜೇ ಸತಗುರು ಕೀ ಸಂಗತ್ ಕರತೇ, ಸಕಲ್ ಕರ್ಮ್ ಕಟಿ ಜಾಈ ।
ಅಮರ್ ಪುರಿ ಪರ್ ಆಸನ್ ಹೋತೆ, ಜಹಾಂ ಧೂಪ್ ನ ಛಾಂಈ ॥

**ಭಾವಾರ್ಥ:–** ಸಂತ ಗರೀಬ್‌ದಾಸರು ಪರಮೇಶ್ವರರಿಂದ ಪ್ರಾಪ್ತವಾದ ಸೂಕ್ಷ್ಮವೇದದಲ್ಲಿ ಹೇಳಿರುವುದೇನೆಂದರೆ, ತತ್ವದರ್ಶಿ ಸಂತನ ಆಶ್ರಯ ಪಡೆದು ದೀಕ್ಷೆ ಪಡೆದರೆ ಮೇಲೆ ತಿಳಿಸಿದ ಕಷ್ಟವು ಇರುವುದಿಲ್ಲ. ಅವರು ದೆವ್ವವೂ ಆಗುವುದಿಲ್ಲ, ಕತ್ತೆಯೂ ಆಗುವುದಿಲ್ಲ. ಅಮರ ಪುರಿಯಲ್ಲಿ ಆಸೀನರಾಗುತ್ತಾರೆ. ಗೀತೆಯ **18** ನೇ ಅಧ್ಯಾಯದ **62**ನೇ ಶ್ಲೋಕ ಮತ್ತು **15**ನೇ ಅಧ್ಯಾಯದ **4**ನೇ ಶ್ಲೋಕದಲ್ಲಿ ಹೇಳಿರುವಂತೆ ಅವರಿಗೆ ಸನಾತನವಾದ ಪರಮ ಪದವು ಪ್ರಾಪ್ತಿಯಾಗುತ್ತಿತ್ತು. ಪರಮ ಶಾಂತಿ ಲಭಿಸುತ್ತಿತ್ತು. ಮತ್ತೆಂದೂ ಮರಳಿ ಈ ಪ್ರಪಂಚಕ್ಕೆ ಬರುವುದಿಲ್ಲ. ಅಂದರೆ ಜನನ–ಮರಣವೆಂಬ ಕಷ್ಟದ ಚಕ್ರವು ಎಂದೆಂದಿಗೂ ನಾಶವಾಗಿ ಹೋಗುತ್ತಿತ್ತು. ಆ ಸತ್ಯಲೋಕವೆಂಬ ಅಮರ ಲೋಕದಲ್ಲಿ ಬಿಸಿಲು–ನೆರಳಿಲ್ಲ. ಅಂದರೆ ಬಿಸಿಲು ದುಃಖ ಕೊಡುವಂತಾದರೆ ನೆರಳಿನ ಅವಶ್ಯಕತೆ ಇದೆ. ಆ ಸತ್ಯಲೋಕದಲ್ಲಿ ಬರೀ ಸುಖವೇ ಇದೆ, ದುಃಖ ಇಲ್ಲವೇ ಇಲ್ಲ.

ಸುರತ್ ನಿರತ್ ಮನ್ ಪವನ್ ಪಯಾನಾ, ಶಬ್ದೈ ಶಬ್ದ್ ಸಮಾಈ ।
ಗರೀಬ್‌ದಾಸ್ ಗಲತಾನ್ ಮಹಲ್ ಮೆಂ, ಮಿಲೇ ಕಬೀರ್ ಗೋಸಾಈ ॥

**ಭಾವಾರ್ಥ:–** ಸಂತ ಗರೀಬ್‌ದಾಸರು, 'ನನಗೆ ಕಬೀರ್ ಪರಮೇಶ್ವರರು ಸಿಕ್ಕಿದ್ದಾರೆ' ಎಂದು ಹೇಳುತ್ತಾರೆ. 'ಅವರು ನನಗೆ ನನ್ನ ಮನಸ್ಸು ಮತ್ತು ಉಸಿರಿನ ಮೇಲೆ ಗಮನ ಇಟ್ಟುಕೊಂಡು ನಾಮ

ಸ್ಮರಣೆ ಮಾಡುವ ವಿಧಾನವನ್ನು ತಿಳಿಸಿದರು. ಯಾವ ಸಾಧನೆಯಿಂದ ಸತ್ಯಲೋಕದಲ್ಲಿ ತನ್ನ ಅರಮನೆಯಲ್ಲಿ ಆನಂದದಿಂದ ಇರುತ್ತಾನೋ ಆ ಸತ್ಯಲೋಕವನ್ನು ಪರಮೇಶ್ವರ ಕಬೀರರು ನನಗೆ ತಿಳಿಸಿದ್ದರು. ಹಾಗೇ ಆ ಜಾಗವನ್ನು ನಾನು ಕಬೀರ್ ಪರಮೇಶ್ವರರ ಜೊತೆ ಹೋಗಿ ನೋಡಿ ಬಂದಿರುವೆನು. ಯಾವ ಕಾರಣಕ್ಕಾಗಿ ನಂಬಿಕೆಯಿಂದ ನಾನು ಯಾವ ಶಾಸ್ತ್ರಬದ್ಧವಾಗಿ ಸಾಧನೆ ಮಾಡುತ್ತಿದ್ದೇನೆಯೋ ಅದನ್ನು ಪರಮಾತ್ಮ ತಿಳಿಸಿದ್ದಾರೆ. ಇದರ ಬಗ್ಗೆ ಯಾವ ಸಂಶಯವೂ ಇಲ್ಲ. ಯಾವ ಕಾರಣದಿಂದ ನಾನು ಸತ್ಯಲೋಕದಲ್ಲಿರುವ ನನ್ನ ಅರಮನೆಗೆ ಹೋಗಿ ನಿಶ್ಚಿಂತೆಯಿಂದ ಮತ್ತು ಅರಮನೆ ಸಿಕ್ಕ ಖುಷಿಯಲ್ಲಿ ಇರುತ್ತೇನೆಯೋ ಅದಕ್ಕೆಲ್ಲ ಕಾರಣ ಪರಮಾತ್ಮ ಕಬೀರರು ತಮ್ಮ ಲೋಕದಿಂದ ಬಂದು ನನ್ನನ್ನು ಭೇಟಿಯಾಗಿರುವುದೇ ಆಗಿದೆ, ಎಂದು ಗರೀಬ್‌ದಾಸರು ಹೇಳಿದ್ದಾರೆ.

ಗರೀಬ್, ಅಜಬ್ ನಗರ್ ಮೆಂ ಲೇ ಗಯೆ, ಹಮ್ಕೋ ಸತ್‌ಗುರು ಆನ್ ।
ಝಿಲಕೇ ಬಿಂಬ್ ಅಗಾಧ್ ಗತಿ, ಸೂತೇ ಚಾದರ್ ತಾನ್ ॥

**ಭಾವಾರ್ಥ:–** ಗರೀಬ್‌ದಾಸರು ಹೀಗೆಂದರು, "ಸದ್ಗುರು ಅಂದರೆ ಸ್ವಯಂ ಪರಮೇಶ್ವರ ಕಬೀರರು ತನ್ನ ಸ್ವಂತ ಧಾಮವಾದ ಸತ್ಯಲೋಕದಿಂದ ಬಂದು ನನ್ನನ್ನು ಕರೆದುಕೊಂಡು ಅದ್ಭುತವಾದ ನಗರಕ್ಕೆ ಅಂದರೆ ಸತ್ಯಲೋಕದಲ್ಲಿ ಸ್ಥಾಪಿತವಾಗಿರುವ ನಗರಕ್ಕೆ ಕರೆದುಕೊಂಡು ಹೋದರು. ಆ ಸ್ಥಾನವನ್ನು ಈ ಕಣ್ಣಿಂದ ನೋಡಿದ ನಾನು ಪರಮಾತ್ಮನು ತಿಳಿಸಿರುವ ಭಕ್ತಿ ಮಾರ್ಗದಲ್ಲಿ ನಡೆಯುತ್ತಿದ್ದೇನೆ. ಸತ್ಯನಾಮ, ಸಾರನಾಮದ ಸಾಧನೆ ಮಾಡುತ್ತಿದ್ದೇನೆ. ನಾನು ನಿಶ್ಚಿಂತೆಯಿಂದ ಹೊದಿಕೆಯನ್ನು ಹೊದ್ದುಕೊಂಡು ಮಲಗಿದ್ದೇನೆ. ಏಕೆಂದರೆ ನನಗೆ ಮೋಕ್ಷಸಿಗುವುದರಲ್ಲಿ ಯಾವುದೇ ಸಂದೇಹವಿಲ್ಲ.

ಯಾರಿಗೆ ಯಾವುದೇ ಕೆಲಸವಿಲ್ಲದೆ ಚಾದರ ಹೊದ್ದುಕೊಂಡು ಮಲಗಿದ್ದಾನೆಂದರೆ ಹಳ್ಳಿಯಲ್ಲಿ ಎಲ್ಲರೂ ಏನು ಚಾದರ ಹೊದ್ದುಕೊಂಡು ಮಲಗಿರುವನಲ್ಲಾ, ಏನೂ ಕೆಲಸವಿಲ್ಲವೇ ಎಂದು ಕೇಳುವರು. ಹಾಗೆ ಗರೀಬ್‌ದಾಸರು, ಸತ್ಯಲೋಕದಲ್ಲೇ ಮೊದಲೇ ಕಟ್ಟಿರುವ ಅರಮನೆ ಸಿದ್ಧವಿರಬೇಕಾದರೆ ಅದನ್ನು ಬಿಟ್ಟು ಮೃತ್ಯುವಿನ ಕೂಪಕ್ಕೆ ಹೋಗುವುದು ಎಂದರೆ ಏನು? ಎಂದು ಕೇಳಿದರು. ಈಗ ಸತ್ಯ, ಭಕ್ತಿ ಸಿಕ್ಕಿದೆ ಮತ್ತು ತತ್ವಜ್ಞಾನ ಸಿಕ್ಕಿದೆ. ಅದನ್ನು ತನ್ನದನ್ನಾಗಿಸಿಕೊಳ್ಳಬೇಕು ಎಂದು ಗರೀಬ್‌ದಾಸರು ಹೇಳುತ್ತಾರೆ.

ಸಜ್ಜನರೇ, ಈ ಸತ್ಯ ಭಕ್ತಿ ಈಗ ನನ್ನ (ರಾಮ್‌ಪಾಲ್ ದಾಸ್‌ನ)ಬಳಿ ಇದೆ. ಇದರಿಂದ ಈ ದುಃಖದ ಪ್ರಪಂಚವನ್ನು ದಾಟಬಹುದು. ಪರಮಶಾಂತಿ ಮತ್ತು ಶಾಶ್ವತವಾದ ಸನಾತನ ಪರಮಧಾಮವು ಪ್ರಾಪ್ತವಾಗುತ್ತದೆ. ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಮತ್ತು 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಇದರ ಬಗ್ಗೆ ಹೇಳಿದೆ. ತತ್ವದರ್ಶಿ ಸಂತನಿಂದ ತತ್ವಜ್ಞಾನವನ್ನು ಪಡೆದು, ಆ ತತ್ವಜ್ಞಾನದಿಂದ ಅಜ್ಞಾನವನ್ನು ನಾಶಪಡಿಸಿಕೊಂಡು, ಅದರ ನಂತರ ಪರಮೇಶ್ವರನ ಆ ಪರಮ ಪದವನ್ನು ಹುಡುಕಬೇಕು. ಅಲ್ಲಿಗೆ ಹೋದ ನಂತರ ಸಾಧಕನು ಮತ್ತೆ ಮರಳಿ ಈ ಪ್ರಪಂಚಕ್ಕೆ ಬರಲಾರನು, ಅಂಥಾ ಮುಕ್ತಿಯನ್ನು ಪಡೆಯಬೇಕು.

## "ಭಕ್ತಿ ಮಾಡದಿದ್ದರೆ ಬಹಳ ದುಃಖವಾಗುವುದು"

**ಸೂಕ್ಷ್ಮವೇದದಲ್ಲಿ ಹೇಳಿದೆ:–**

ಯಹ್ ಸಂಸಾರ್ ಸಮಝುದಾ ನಾಹೀಂ, ಕಹಂದಾ ಶಾಮ್ ದುಪಹರೇ ನೂಂ ।
ಗರೀಬ್‌ದಾಸ್ ಯಹ್ ವಕ್ತ್ ಜಾತ್ ಹೈ, ರೋವೋಗೆ ಇಸ್ ಪಹರೇ ನೂಂ ॥

**ಭಾವಾರ್ಥ:–** ಆಧ್ಯಾತ್ಮಿಕಜ್ಞಾನದ ಕೊರತೆಯಿಂದ ಪರಮಾತ್ಮನ ವಿಧಾನವನ್ನು ತಿಳಿಯಲು ಅಸಮರ್ಥನಾದ ಕಾರಣ ಈ ಮನುಷ್ಯನು ಈ ದುಃಖಗಳ ಪ್ರಪಂಚದಲ್ಲಿ ಬಹಳವಾದ ಕಷ್ಟವನ್ನು ಅನುಭವಿಸುತ್ತಿದ್ದಾನೆ, ಅದನ್ನೇ ಸುಖವೆಂದು ತಿಳಿದಿದ್ದಾನೆ.

ಹರಿಯಾಣ ರಾಜ್ಯದಲ್ಲಿ ಒಬ್ಬ ವ್ಯಕ್ತಿ ಜೂನ್ ತಿಂಗಳಿನ ಒಂದು ಬೆಳಿಗ್ಗೆಯೇ ಮದ್ಯವನ್ನು ಕುಡಿದು, ಮಧ್ಯಾಹ್ನದವರೆಗೆ ತೂರಾಡಿ ಸುಡು ಬಿಸಿಲಿನಲ್ಲಿ ಬಿದ್ದಿದ್ದಾನೆ. ಬೆವರಿನಿಂದ ತೊಪ್ಪೆಯಾಗಿದ್ದಾನೆ. ಶರೀರ ಮಣ್ಣಿನಿಂದ ತುಂಬಿದೆ. ಒಬ್ಬ ವ್ಯಕ್ತಿ ಬಂದು, "ಹೇ ಸಹೋದರ, ಏಳು. ನಿನ್ನನ್ನು ಆ ಮರದ ಕೆಳಗೆ ಕೂರಿಸುತ್ತೇನೆ. ನೀನು ಈ ಬಿಸಿಲಿನಲ್ಲಿ ಉರಿದು ಹೋಗುತ್ತಿರುವೆ" ಎಂದು ಹೇಳಿದನು. ಆಗ ಆ ಕುಡುಕ, "ಇಲ್ಲ ಇಲ್ಲ, ನಾನು ಇಲ್ಲೇ ಇರುತ್ತೇನೆ, ಇಲ್ಲೇ ಚೆನ್ನಾಗಿದೆ. ಇಲ್ಲಿ ಯಾವ ಕಷ್ಟವೂ ಇಲ್ಲ", ಎನ್ನುತ್ತಾನೆ.

❖ ಒಬ್ಬ ವ್ಯಕ್ತಿ ಯಾವುದೋ ಕಾರಣದಿಂದ ನ್ಯಾಯಲಯಕ್ಕೆ ಹೋದನು. ಅಲ್ಲಿ ಅವನಿಗೆ ಅವನ ನೆಂಟನೊಬ್ಬನು ಸಿಕ್ಕಿದನು. ಉಭಯ ಕುಶಲೋಪರಿಯಾಯಿತು. ಅವರಿಬ್ಬರು ಒಬ್ಬರಿಗೊಬ್ಬರು ತಾವು ಕ್ಷೇಮವೆಂದು ತಿಳಿಸಿದರು.

❖ ಒಬ್ಬ ವ್ಯಕ್ತಿಯ ಏಕೈಕ ಪುತ್ರ ರೋಗಿಯಾಗಿದ್ದನು. ಅವನನ್ನು ಆಸ್ಪತ್ರೆಗೆ ಸೇರಿಸಿದ್ದರು. ಅವನು ಬದುಕುಳಿಯುವ ಆಸೆ ಇರಲಿಲ್ಲ. ಅಂಥಾ ಸ್ಥಿತಿಯಲ್ಲಿ ತಂದೆ ತಾಯಿಗಳ ಮನಸ್ಥಿತಿ ಹೇಗಿರುತ್ತದೆ ಎಂದು ಸುಲಭವಾಗಿ ಹೇಳಬಹುದು. ಸಂಬಂಧಿಕ ಅವನನ್ನು ನೋಡಲು ಬಂದವನೇ, ಮಗನ ಸ್ಥಿತಿ ಹೇಗಿದೆ? ಎಂದು ಹೇಳಿದನು. ಆಗ ಮತ್ತೆ ಅವನು ಎಲ್ಲರೂ ಕುಶಲವೇ ಎಂದು ಕೇಳಿದರು. ಆಗ ಆ ತಂದೆಯು 'ಎಲ್ಲರು ಚೆನ್ನಾಗಿದ್ದೇವೆ' ಎಂದನು.

ಯೋಚಿಸುವ ವಿಷಯ:– ಮದ್ಯದ ಮತ್ತಿನಲ್ಲಿ, ಘೋರವಾದ ಸುಡು ಬಿಸಿಲಿನ ಝಳದಲ್ಲಿ ಬೇಯುತ್ತಿದ್ದಾನೆ. ಆದರೂ ಚೆನ್ನಾಗಿದ್ದಾನೆ ಎಂದು ಹೇಳುತ್ತಿದ್ದಾನೆ.

❖ ಕೋರ್ಟು, ಕಛೇರಿಗಳಲ್ಲಿ ಸಂಬಂಧಿಕ ಸಿಕ್ಕಾಗ ಪರಸ್ಪರ ನಾವು ಚೆನ್ನಾಗಿದ್ದೇವೆ ಎಂದು ಹೇಳುತ್ತಾರೆ. ಯೋಚಿಸಿ ನೋಡಿ, ಯಾವ ವ್ಯಕ್ತಿಯು ಕೋರ್ಟಿನ ಕೇಸಿನಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ, ಅವನು ಕನಸಿನಲ್ಲಿಯೂ ಸುಖವಾಗಿರಲಾರ, ಆದರೂ ಅವನು ನಾನು ಸುಖವಾಗಿದ್ದೇನೆ ಎಂದು ಹೇಳುತ್ತಾನೆ.

❖ ಯಾವ ವ್ಯಕ್ತಿಯ ಏಕೈಕ ಪುತ್ರನು ಮೃತ್ಯುವಿನ ಶಯ್ಯೆಯಲ್ಲಿ ಮಲಗಿದ್ದಾನೋ ಅವನು ಸುಖವಾಗಿರಲು ಹೇಗೆ ಸಾಧ್ಯ? ಹಾಗಾಗಿ ಸೂಕ್ಷ್ಮವೇದದಲ್ಲಿ ಈ ದುಃಖಮಯವಾದ ಪ್ರಪಂಚದಲ್ಲಿ ಮನುಷ್ಯನು ಮಹಾ ಕಷ್ಟವನ್ನು ಸುಖವೆಂದು ಭಾವಿಸಿದ್ದಾನೆ ಎಂದು ಹೇಳಿದೆ.

ಯಹ್ ಸಂಸಾರ್ ಸಮಝುದಾ ನಾಹೀಂ, ಕಹಂದಾ ಶಾಮ್ ದೋಪಹರೆ ನೂಂ ।
ಗರೀಬ್‌ದಾಸ್ ಯಹ್ ವಕ್ತ್ ಜಾತ್ ಹೈ, ರೋವೋಗೆ ಇಸ್ ಪಹರೇ ನೂಂ ॥

ಭಾವಾರ್ಥ:–ಸಂತ ಗರೀಬ್‌ದಾಸರು, ಮನುಷ್ಯನು ಈ ಜನ್ಮವನ್ನು ಪಡೆದು ಭಕ್ತಿಯನ್ನು ಮಾಡದೇ ಇದ್ದಾಗ, ಅವನು ನಾಯಿ, ಕತ್ತೆ ಮುಂತಾದ ಜನ್ಮ ಪಡೆದು ಕಷ್ಟಪಡುತ್ತಾನೆ. ನಾಯಿಯು ರಾತ್ರಿಯ ವೇಳೆ ಆಕಾಶದ ಕಡೆ ಮುಖ ಮಾಡಿ ಅಳುತ್ತದೆ ಎಂದು ಹೇಳಿದರು. ಹಾಗೂ ಈ ಮಾನವ ಶರೀರ ಒಂದೇ ಬಾರಿ ಸಿಗುವುದು. ಅದು ಕೈಯಿಂದ ಜಾರಿ ಹೋದರೆ ಹಾಗೂ ಭಕ್ತಿ ಮಾಡದಿದ್ದರೆ ಮುಂದೆ ಅಳಬೇಕಾಗುತ್ತದೆ ಎಂದು ಗರೀಬ್‌ದಾಸರು ಹೇಳಿದ್ದಾರೆ.

## "ಭಕ್ತಿ ಮಾರ್ಗದ ಯಾತ್ರೆ"

ಎಲ್ಲಿಯವರೆಗೆ ಆಧ್ಯಾತ್ಮಿಕ ಜ್ಞಾನ ಇರುವುದಿಲ್ಲವೋ ಅಲ್ಲಿಯವರೆಗೆ ಜೀವಾತ್ಮನು ಮಾಯೆಯ ಮತ್ತಿನಲ್ಲಿ ತನ್ನ ಗುರಿಯನ್ನು ಮರೆತುಬಿಡುತ್ತಾನೆ. ಮೇಲೆ ಹೇಳಿದಂತೆ ಕುಡುಕನು ಕುಡಿದ ಮತ್ತಿನಲ್ಲಿ ಬಿಸಿಲುಗಾಲದಲ್ಲಿ ಮಧ್ಯಾಹ್ನ 12 ಗಂಟೆಯ ಬಿಸಿಲಿನಲ್ಲಿ ಬಿದ್ದುಕೊಂಡು ಬೆವರು ಹಾಗೂ ಮಣ್ಣಿನಿಂದ

ಆವರಿಸಿಕೊಂಡು ಒದ್ದಾಡುತ್ತಿದ್ದರೂ ನಾನು ಸುಖವಾಗಿದ್ದೇನೆಂದು ಹೇಳುತ್ತಿದ್ದನು. ಆದರೆ ನಶೆ ಇಳಿದ ಮೇಲೆ, ನಾನು ಯಾವುದೋ ಕಾಡಿನಲ್ಲಿ ಬಿದ್ದಿದ್ದೇನೆ, ನನ್ನ ಮನೆ ಬಹಳ ದೂರವಿದೆ ಎಂದು ಅವನಿಗೆ ತಿಳಿಯುತ್ತದೆ.

ಕಬೀರ್ ಪರಮೇಶ್ವರರು ಹೇಳಿದ್ದಾರೆ:–

ಕಬೀರ್, ಯಹ್ ಮಾಯಾ ಅಟಪಟೀ, ಸಬ್ ಘಟ್ ಆನ್ ಅಡೀ ।
ಕಿಸ್–ಕಿಸ್ ಕೋ ಸಮಝಾವೂಂ, ಯಾ ಕೂಐ ಭಾಂಗ್ ಪಡೀ ॥

ಭಾವಾರ್ಥ:– ಆಧ್ಯಾತ್ಮ ಜ್ಞಾನವೆಂಬ ಔಷಧಿಯನ್ನು ಸೇವಿಸುವುದರಿಂದ ಜೀವಾತ್ಮದ ನಶೆಯು ಇಳಿದು ಹೋಗುತ್ತದೆ. ನಂತರ ಅವನು ಭಕ್ತಿಯ ಯಾತ್ರೆಯನ್ನು ಕೈಗೊಳ್ಳುತ್ತಾನೆ. ಏಕೆಂದರೆ ಅವನಿಗೆ ಪರಮಾತ್ಮನ ಬಳಿ ಹೋಗಬೇಕಿದೆ. ಸದ್ಗುರು ಅವನ ತಂದೆ ಹಾಗೂ ಸತ್ಯಲೋಕ ಅವನ ಮನೆ.

ಯಾತ್ರೆಗೆ ಹೋಗುವ ವ್ಯಕ್ತಿ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಹೋಗುವುದಿಲ್ಲ. ತನಗೆ ಅವಶ್ಯಕತೆ ಇರುವ ವಸ್ತುಗಳನ್ನು ಮಾತ್ರ ತೆಗೆದುಕೊಂಡು ಯಾತ್ರೆಗೆ ಹೊರಡುತ್ತಾನೆ. ಆಗಲೇ ಅವನು ಗುರಿ ತಲುಪಲು ಸಾಧ್ಯ. ಭಕ್ತಿಯ ಮಾರ್ಗದಲ್ಲಿ ಸಾಗಲು ಅವನಿಗೆ ಮಾನಸಿಕ ಶಾಂತಿ ಅನಿವಾರ್ಯವಾಗಿರುತ್ತದೆ. ಮಾನಸಿಕ ದುಗುಡತೆಗೆ ಕಾರಣವೆಂದರೆ, ತನ್ನ ಪರಂಪರೆ, ನಶೆ, ಆಡಂಬರ, ಅಹಂ ಮುಂತಾದವು, ದೊಡ್ಡಬಂಗಲೆ, ದುಬಾರಿಕಾರು, ಶೃಂಗಾರ, ಒಡವೆ ವಸ್ತ್ರಗಳು ಮುಂತಾದವನ್ನು ಸಂಗ್ರಹಿಸುವುದು, ವರದಕ್ಷಿಣೆ ತೆಗೆದುಕೊಳ್ಳುವುದು, ಮದುವೆ, ಮುಂಜಿ, ದಿಬ್ಬಣದ ಸಮಯದಲ್ಲಿ ಇಡೀ ಕುಟುಂಬ ನಾಚಿಕೆ ಬಿಟ್ಟು ನರ್ತಿಸುವುದು. ಶ್ರಾದ್ಧ, ತಿಥಿ ಊಟ ಮಾಡುವುದು, ಮಗು ಹುಟ್ಟಿದರೆ ಸಂತೋಷಪಡುವುದು, ಸಂತೋಷದ ಸಮಯದಲ್ಲಿ ಪಟಾಕಿ ಹೊಡೆಯುವುದು, ದುಂದುವೆಚ್ಚ ಮಾಡುವುದು ಮುಂತಾದವು ಭಕ್ತಿ ಎಂಬ ಯಾತ್ರೆಯಲ್ಲಿ ತೊಂದರೆ ಉಂಟುಮಾಡುವುದರಿಂದ ಅವುಗಳನ್ನೆಲ್ಲಾ ಬಿಟ್ಟು ಬಿಡಬೇಕಾಗುವುದು.

## "ಮದುವೆ ಹೇಗೆ ಮಾಡಬೇಕು"

ಶ್ರೀ ದುರ್ಗಾದೇವಿ ತನ್ನ ಮೂವರು ಪುತ್ರರ (ಬ್ರಹ್ಮಾ, ವಿಷ್ಣು, ಮಹೇಶ್ವರರ) ವಿವಾಹವನ್ನು ಹೇಗೆ ಮಾಡಿದಳೋ, ಅದನ್ನು ಮುಂದೆ ಇದೇ ಪುಸ್ತಕದಲ್ಲಿ ಓದುವಿರಿ. ನನ್ನ (ರಾಮ್‌ಪಾಲ್ ದಾಸ್‌ನ) ಅನುಯಾಯಿಗಳು ಹಾಗೆಯೇ ಮಾಡುತ್ತಾರೆ. 17 ನಿಮಿಷದ ಅಸುರ ನಿಕಂದನ ರಮೈಣಿ ಇದೆ. ಪ್ರದಕ್ಷಿಣೆಯ ಸ್ಥಾನದಲ್ಲಿ ಅದನ್ನು ಹೇಳಲಾಗುತ್ತದೆ. ಅದು ಕೋಟಿ ಗಾಯತ್ರಿ ಮಂತ್ರ (ಓಂ ಭುರ್ಭವ.....)ಕ್ಕಿಂತ ಉತ್ತಮ ಹಾಗೂ ಲಾಭದಾಯಕವಾಗಿದೆ. ಅದರಲ್ಲಿ ವಿಶ್ವದ ಸರ್ವ ದೇವಿ–ದೇವತೆಗಳ ಹಾಗೂ ಪೂರ್ಣ ಪರಮಾತ್ಮನ ಆಹ್ವಾನ ಮತ್ತು ಸ್ತುತಿ–ಪ್ರಾರ್ಥನೆ ಇದೆ. ಈ ಕಾರಣದಿಂದ ಸರ್ವಶಕ್ತಿಗಳು ಆ ವಿವಾಹದ ಜೋಡಿಗಳನ್ನು ಯಾವಾಗಲೂ ರಕ್ಷಿಸುತ್ತವೆ ಮತ್ತು ಸಹಾಯ ಮಾಡುತ್ತವೆ. ಇದರಿಂದ ಬದುಕುವ ದಾರಿ ಸುಗಮವಾಗುತ್ತದೆ.

ವಿವಾಹದಲ್ಲಿ ಪ್ರಚಲಿತವಿರುವ ಇಂದಿನ ಪರಂಪರೆಯನ್ನು ತ್ಯಜಿಸುವ ವಿಧಾನ :–

ವಿವಾಹದಲ್ಲಿ ವ್ಯರ್ಥವಾಗಿ ಖರ್ಚುಮಾಡುವುದನ್ನು ಬಿಡಬೇಕು. ಮಗಳ ಮದುವೆಯಲ್ಲಿ ಅದ್ದೂರಿ ದಿಬ್ಬಣ ಬರುವುದು, ವರದಕ್ಷಿಣೆ ನೀಡುವುದು ವ್ಯರ್ಥವಾದ ಪರಂಪರೆ. ಈ ಕಾರಣದಿಂದಲೇ ಹೆಣ್ಣು ಮಕ್ಕಳನ್ನು ಕುಟುಂಬಕ್ಕೆ ಭಾರವೆಂದು ಭಾವಿಸಲಾಗುತ್ತದೆ. ಹಾಗಾಗಿ ಗರ್ಭದಲ್ಲೇ ಅವರನ್ನು ಕೊಲ್ಲುವ ವ್ಯವಸ್ಥೆ ಪ್ರಾರಂಭವಾಗಿದೆ. ಇದು ತಂದೆ ತಾಯಿಯರಿಗೆ ಅತ್ಯಂತ ಪಾಪವನ್ನುಂಟು ಮಾಡುವ ಕೆಲಸ. ಹೆಣ್ಣು ಮಗಳು ದೇವಿಯ ಸ್ವರೂಪ. ನಮ್ಮ ಕೆಟ್ಟ ವ್ಯವಸ್ಥೆ ಹೆಣ್ಣನ್ನು ಶತ್ರುವಿನಂತೆ ಬಿಂಬಿಸಲಾಗಿದೆ.

ದೇವಿಪುರಾಣದ ಮೂರನೇ ಅಧ್ಯಾಯದಲ್ಲಿ ಹೇಳಿರುವುದೇನೆಂದರೆ, ಬ್ರಹ್ಮಾಂಡದ ಪ್ರಾರಂಭದಲ್ಲಿ ಮೂರೂ ದೇವರುಗಳ (ಬಹ್ಮಾ, ವಿಷ್ಣು, ಮಹೇಶ್ವರ) ಮದುವೆಯನ್ನು ದೇವಿ ದುರ್ಗಾಮಾತೆಯು ಮಾಡಿಸಿದಳೋ, ಆ ಸಮಯದಲ್ಲಿ ಯಾವುದೇ ದಿಬ್ಬಣವೂ ಇರಲಿಲ್ಲ, ಯಾವುದೇ ಆಡಂಬರವಿರಲಿಲ್ಲ. ಯಾವುದೇ ಭೂರಿ ಭೋಜನವೂ ಇರಲಿಲ್ಲ. ಯಾವುದೇ ಸಂಗೀತವಿರಲಿಲ್ಲ, ನೃತ್ಯವಿರಲಿಲ್ಲ. ದುರ್ಗಾಮಾತೆಯು ತನ್ನ ದೊಡ್ಡ ಮಗನಾದ ಬ್ರಹ್ಮಾನಿಗೆ ಹೇಳಿದಳು, "ಹೇ ಬ್ರಹ್ಮಾ, ಈ ಸಾವಿತ್ರಿ ಎಂಬ ಹುಡುಗಿಯು ನಿನ್ನ ಪತ್ನಿಯಾಗಿ ಬರುತ್ತಿದ್ದಾಳೆ. ಇವಳನ್ನು ವರಿಸಿ ನಿನ್ನ ಮನೆಯಲ್ಲಿ ನೆಲೆಸು. ಇದೇ ರೀತಿ ವಿಷ್ಣುವಿಗೆ ಲಕ್ಷ್ಮಿಯನ್ನು ಕೊಡುತ್ತಾ ಮತ್ತು ಶಿವನಿಗೆ ಪಾರ್ವತಿಯನ್ನು ಅರ್ಪಿಸುತ್ತಾ ಹೇಳಿದಳು,' ಇವರು ನಿಮ್ಮ ಪತ್ನಿಯರು, ಇವರನ್ನು ಕರೆದುಕೊಂಡು ಹೋಗಿ ನಿಮ್ಮ ಮನೆಯಲ್ಲಿ ನೆಲೆಸಿ" ಮೂವರೂ ತಮ್ಮ ತಮ್ಮ ಪತ್ನಿಯರ ಜೊತೆ ತಮ್ಮ ತಮ್ಮ ಲೋಕಕ್ಕೆ ತೆರಳಿದರು. ಇದರಿಂದ ವಿಶ್ವದ ವಿಕಾಸವಾಯಿತು.

ಸಂಶಯ ನಿವಾರಣೆ:– ಕೆಲವರು ಹೇಳುವುದೇನೆಂದರೆ, ಪಾರ್ವತಿಯ ಮೃತ್ಯುವಾಯಿತು. ಆ ದೇವಿಯ ಜನನ ದಕ್ಷರಾಜನ ಮನೆಯಲ್ಲಾಯಿತು. ಪಾರ್ವತಿಯು ಯುವತಿಯಾದಾಗ ನಾರದರು ಹೇಳಿದ ಮೇರೆಗೆ ಶಿವನನ್ನು ಪಡೆಯಲು ಧೃಢ ಸಂಕಲ್ಪ ಮಾಡಿ ಶಿವನನ್ನು ವರಿಸುವುದಾಗಿ ತನ್ನ ತಾಯಿಯ ಮೂಲಕ ತಂದೆಗೆ ಹೇಳಿದಾಗ, ರಾಜ ದಕ್ಷನು, 'ಶಿವನು ನನ್ನ ಅಳಿಯನಾಗಲು ಯೋಗ್ಯನಲ್ಲ, ಏಕೆಂದರೆ ಅವನು ಬೆತ್ತಲೆ ತಿರುಗುತ್ತಾನೆ. ಕೇವಲ ಒಂದು ಮೃಗ ಚರ್ಮವನ್ನು ಹೊದ್ದಿಕೊಳ್ಳುತ್ತಾನೆ. ಶರೀರದ ಮೇಲೆ ಬೂದಿ ಬಳಿದುಕೊಳ್ಳುತ್ತಾನೆ. ಬಂಗಿ ಕುಡಿದು ಮತ್ತಿನಲ್ಲಿ ತಿರುಗುತ್ತಾನೆ. ಹಾವುಗಳ ಜೊತೆ ಇರುತ್ತಾನೆ. ಅಂಥಾ ವ್ಯಕ್ತಿಯ ಜೊತೆ ನಾನು ನನ್ನ ಮಗಳ ವಿವಾಹ ಮಾಡಿ ನಗೆಪಾಟಲಿಗೆ ಈಡಾಗಲಾರೆ' ಎಂದನು. ಆದರೆ ಪಾರ್ವತಿದೇವಿಯು ಹಠ ಹಿಡಿದಳು. ಅವಳು ತನ್ನ ಇಂಗಿತವನ್ನು ಶಿವನವರೆಗೆ ತಲುಪಿಸಿದಳು. ಹಾಗೂ ನಾನು ನಿಮ್ಮನ್ನು ಮದುವೆಯಾಗಲು ಬಯಸುತ್ತೇನೆ ಎಂಬ ಸಂದೇಶ ಕಳುಹಿಸಿದಳು. ದಕ್ಷರಾಜನು ಪಾರ್ವತಿಯ ವಿವಾಹವನ್ನು ಬೇರೆಯವರ ಜೊತೆ ನಿಶ್ಚಯಮಾಡಿದ್ದನು, ಅದೇ ದಿನ ಶಿವನು ತನ್ನ ಜೊತೆ ಸಾವಿರಾರು ಭೂತ–ಪ್ರೇತ, ಭೈರವ ಹಾಗೂ ಗಣಗಳನ್ನು ಕರೆದುಕೊಂಡು ವಿವಾಹ ಮಂಟಪಕ್ಕೆ ಬಂದನು. ದಕ್ಷರಾಜನ ಸೈನಿಕರು ವಿರೋಧಿಸಿದರು. ಶಿವನ ಸೈನ್ಯಕ್ಕೆ ಮತ್ತು ದಕ್ಷ ರಾಜನ ಸೈನ್ಯಕ್ಕೆ ಯುದ್ಧವೇರ್ಪಟ್ಟಿತು. ಪಾರ್ವತಿಯು ಶಿವನ ಕೊರಳಿಗೆ ಹೂ ಮಾಲೆ ಹಾಕಿದಳು. ಶಿವನು ಪಾರ್ವತಿಯನ್ನು ಕರೆದುಕೊಂಡು ಕೈಲಾಸ ಪರ್ವತದ ಮೇಲಿರುವ ತನ್ನ ಮನೆಗೆ ನಡೆದನು. ಕೆಲವರು ಹೇಳುತ್ತಾರೆ, ನೋಡಿ, ಶಿವನೂ ಸಹ ಭವ್ಯವಾದ ದಿಬ್ಬಣ ತಂದು ಪಾರ್ವತಿಯನ್ನು ವರಿಸಲು ಬಂದಿದ್ದನು. ಆದ್ದರಿಂದ ದಿಬ್ಬಣದ ಪರಂಪರೆ ಬಹಳ ಪುರಾತನವಾದದ್ದು. ಆದ್ದರಿಂದ ದಿಬ್ಬಣವಿಲ್ಲದೆ ವಿವಾಹದ ಶೋಭೆ ಇರುವುದಿಲ್ಲ, ನಿಜ ಹೇಳಬೇಕೆಂದರೆ ಅದು ವಿವಾಹವಲ್ಲ, ಒಂದು ಪ್ರೇಮಪ್ರಸಂಗವೆನ್ನಬಹುದು. ಶಿವನು ಪಾರ್ವತಿಯನ್ನು ಬಲವಂತವಾಗಿ ಎತ್ತಿಕೊಂಡು ಹೋಗಲು ಸೈನ್ಯ ತಂದಿದ್ದನೇ ಹೊರತು ದಿಬ್ಬಣವನ್ನಲ್ಲ. ವಿವಾಹದ ಪುರಾತನ ಪರಂಪರೆಯೂ ದೇವಿ ಮಹಾ ಪುರಾಣದ ಮೂರನೇ ಸ್ಕಂದದಲ್ಲಿ ಈ ರೀತಿ ಬರೆದಿದೆ. ತಂದೆ ತಾಯಿಯರ ಇಚ್ಛಾನುಸಾರ ವಿವಾಹ ಮಾಡಲೆಂದು ಗಂಡು ಮಕ್ಕಳ ಮತ್ತು ಹೆಣ್ಣು ಮಕ್ಕಳ ಇಚ್ಛೆಯಾಗಿರುತ್ತದೆ. ಪ್ರೇಮ ವಿವಾಹವು ಮನಕ್ಲೇಷಕ್ಕೆ ಕಾರಣವಾಗುತ್ತದೆ. ಶಿವ ಪಾರ್ವತಿಯರ ವಿವಾಹವೂ ಮನಸ್ತಾಪಕ್ಕೆ ಕಾರಣವಾಯಿತು. ಶಿವನು ಪಾರ್ವತಿಯ ಜೊತೆ ಕೋಪಗೊಂಡು ಪತ್ನಿಯಂತೆ ನಡೆಸಿಕೊಳ್ಳಲಿಲ್ಲ ಹಾಗೂ ಮಾತನ್ನೇ ಬಿಟ್ಟುಬಿಟ್ಟನು. ಪಾರ್ವತಿಗೆ ಆ ಮನೆ ನರಕವಾಗಿ ಪರಿಣಮಿಸಿತು. ಆಗ ಪಾರ್ವತಿಯು ಕೆಲ ದಿನಗಳ ಮಟ್ಟಿಗೆ ತಾಯಿಯ ಮನೆಗೆ ಹೋಗಲು ನಿಶ್ಚಯಿಸಿದಳು ಆಗ ದಕ್ಷನ ಮನೆಗೆ ಹೊರಟು ಹೋದಳು.

ಆ ದಿನ ದಕ್ಷರಾಜನು ಹೋಮವನ್ನು ಮಾಡುತ್ತಿದ್ದನು. ದಕ್ಷರಾಜನು ಪಾರ್ವತಿಗೆ ಮಗಳಂತೆ

ಸತ್ಕಾರ ಮಾಡದೆ ಕೇಳಿದನು "ನೀನೇಕೆ ಇಲ್ಲಿಗೆ ಬಂದೆ? ಏನನ್ನು ತೆಗೆದುಕೊಳ್ಳಲು ಬಂದೆ, ಅವನ ಪ್ರೇಮ ನೋಡಿದೆಯಾ? ಮನೆ ಬಿಟ್ಟು ಹೋಗು" ಎಂದು ಗದರಿದನು. ಆಗ ಪಾರ್ವತಿಯು ತನ್ನ ತಾಯಿಯ ಬಳಿ ಶಿವನಿಂದ ತಾನು ಕೋಪಗೊಂಡು ಬಂದ ಬಗ್ಗೆ ತಿಳಿಸಿದಳು. ತಾಯಿಯು ದಕ್ಷರಾಜನಿಗೆ ಎಲ್ಲವನ್ನೂ ತಿಳಿಸಿದಳು. ಪಾರ್ವತಿಗೆ ಅತ್ತ ತಾಯಿಯ ಮನೆಯೂ ಇಲ್ಲ, ಇತ್ತ ಅತ್ತೆಯ ಮನೆಯೂ ಇಲ್ಲ ಎಂಬಂತಾಯಿತು. ಪ್ರೇಮ ವಿವಾಹವು ಎಂಥಾ ಪರಿಸ್ಥಿತಿಯನ್ನು ತಂದೊಡ್ಡಿತೆಂದರೆ, ಪಾರ್ವತಿಗೆ ಆತ್ಮಹತ್ಯೆಯ ವಿನಃ ಬೇರೆ ದಾರಿಯೇ ಇರಲಿಲ್ಲ. ಆಗ ದಕ್ಷರಾಜನ ವಿಶಾಲ ಹೋಮ ಕುಂಡದಲ್ಲಿ ಬಿದ್ದು ಸುಟ್ಟು ಹೋದಳು. ಧಾರ್ಮಿಕ ಅನುಷ್ಠಾನದ ನಾಶವಾಯಿತು. ತನ್ನ ಅಮೂಲ್ಯವಾದ ಮಾನವ ಜೀವನವನ್ನು ಕಳೆದುಕೊಂಡಳು. ವಿಷಯ ತಿಳಿದ ಶಿವನು ತನ್ನ ಸೈನ್ಯ ಸಮೇತ ಹೋಗಿ ದಕ್ಷರಾಜನ ಕತ್ತನ್ನು ಕೊಯ್ದನು. ಈ ರೀತಿ ತಂದೆ ಮನೆಯೂ ನಾಶವಾಯಿತು. ನಂತರ ಕುರಿಯ ಕತ್ತನ್ನು ಜೋಡಿಸಿ ಬದುಕಿಸಿದನು. ಈ ರೀತಿ ಪ್ರೇಮ ವಿವಾಹವು ಸರ್ವನಾಶಕ್ಕೆ ದಾರಿಯಾಯಿತು. ಹೀಗೆ ಶಿವಸೈನ್ಯವನ್ನು ದಿಬ್ಬಣವೆಂದು ತಪ್ಪಾಗಿ ಅರ್ಥೈಸಲಾಗಿದೆ. ಇದು ಪ್ರೇಮ ವಿವಾಹವೆಂಬ ಅನಿಷ್ಟ ಪದ್ಧತಿಯ ಜನ್ಮವೆನ್ನಬಹುದು. ಸಮಾಜವನ್ನು ನಾಶಮಾಡುವಂಥಾದ್ದು.

(ಬ್ರಹ್ಮಾ ಮತ್ತು ವಿಷ್ಣುವಿನ ಮದುವೆಯ ರೀತಿ) ಒಳ್ಳೆಯ ಪದ್ಧತಿಯ ಪ್ರಕಾರ ಆದ ವಿವಾಹದಿಂದ ಸುಖ ಜೀವನವನ್ನು ನಡೆಸುತ್ತಿದ್ದಾರೆ.

ಮದುವೆಯಾಗುವ ಉದ್ದೇಶ:– ಸಂತಾನೋತ್ಪತ್ತಿಯೇ ವಿವಾಹದ ಉದ್ದೇಶವಾಗಿದೆ. ನಂತರ ಗಂಡ–ಹೆಂಡತಿ ಸೇರಿ ಕಷ್ಟದಿಂದ ಮಕ್ಕಳ ಪಾಲನೆ ಪೋಷಣೆ ಮಾಡುತ್ತಾರೆ. ಅವರ ಮದುವೆ ಮಾಡುತ್ತಾರೆ. ನಂತರ ಅವರಿಗೆ ಮನೆಮಾಡುತ್ತಾರೆ. ಆದರೆ ಪ್ರೇಮ ವಿವಾಹವು ಸಮಾಜದಲ್ಲಿ ಅಶಾಂತಿಯ ಬೀಜ ಬಿತ್ತುತ್ತದೆ. ಸಮಾಜದ ಪರಿಸ್ಥಿತಿ ಬಿಗಡಾಯಿಸುತ್ತದೆ.

## "ಪ್ರೇಮ ಪ್ರಸಂಗವು ಹೇಗಾಗುತ್ತದೆ?"

ಉತ್ತರ:– ಚಾರಿತ್ರ್ಯವಿಲ್ಲದ ಹುಡುಗ ಹುಡುಗಿಯರು ಅತ್ತಿತ್ತ ತಿರುಗಾಡುವಾಗ ವಿಚಿತ್ರವಾದ ಆಕ್ಟಿಂಗ್ ಮಾಡುತ್ತಾರೆ. ಅವರ ದೃಷ್ಟಿಯೂ ವಕ್ರವಾಗಿರುತ್ತದೆ. ಕೆಲವು ಬಾರಿ ಕೃತಕವಾಗಿ ನಗುತ್ತಾರೆ. ತಿರುತಿರುಗಿ ಹಿಂದೆ ಮುಂದೆ ನೋಡುವುದು, ಬಳಕುತ್ತಾ ನಡೆಯುವುದು ಮುಂತಾದವನ್ನು ಮಾಡುತ್ತಾರೆ. ಕೊನೆಗೆ ಪ್ರೇಮವಿವಾಹ ಮಾಡಿಕೊಳ್ಳುತ್ತಾರೆ. ಅದೇ ಪಾಪಾತ್ಮಗಳ ಶೋಕಕ್ಕೆ ಕಾರಣವಾಗುತ್ತದೆ. ನಂತರ ತಮಗೆ ಇನ್ನು ಬೇರೆ ಪ್ರೇಮಿ–ಪ್ರೇಯಸಿಯರಿದ್ದರು ಎಂದು ಅವರಿಗೆ ಅನ್ನಿಸುತ್ತದೆ. ನಂತರ ಅವರ ಸ್ಥಿತಿ ಶಿವ ಪಾರ್ವತಿಯರಂತಾಗುತ್ತದೆ. ವಿವಾಹದ ಉದ್ದೇಶವನ್ನು ಮೇಲೆ ತಿಳಿಸಲಾಗಿದೆ. ಅದನ್ನು ಬಿಟ್ಟು ಯುವ ಜನತೆ ಬೇರೆ ಬಯಸಿದರೆ ಅವರ ಜೀವನದ ಪ್ರಯಾಣ ನರಕವಾಗುತ್ತದೆ. ಯಾರ ಮೇಲಾದರೂ ಪ್ರೇಮ ಉಂಟಾದರೆ, ಸಮಾಜದ ಮರ್ಯಾದೆ ಅಂದರೆ ಕುಲ, ಗೋತ್ರ, ಹಳ್ಳಿಯ ಮರ್ಯಾದೆಗೆ ಭಂಗವಾಗುತ್ತದೆ ಮತ್ತು ತಮ್ಮ ತಂದೆ ತಾಯಿಯರ ಗೌರವಕ್ಕೆ ಧಕ್ಕೆಯಾಗುತ್ತದೆ ಎಂದು ಯುವ ಪೀಳಿಗೆ ಅರಿಯಬೇಕು. ಆಗ ಅವರು ತಕ್ಷಣವೇ ಪ್ರೇಮ ಸಂಬಂಧವನ್ನು ಮುರಿದು ಹಾಕಲು ಸಾಧ್ಯ. ಇಂದಿನ ಕಾಲದಲ್ಲಿ ಅಂತರ್ಜಾತಿಯ ವಿವಾಹ ಮಾಡಿಕೊಂಡರೆ ಯಾವುದೇ ಹಾನಿಯಾಗದು. ಆದರೆ ಮೇಲೆ ತಿಳಿಸಿದ ಮರ್ಯಾದೆಯ ಬಗ್ಗೆ ಗಮನವಿಡಬೇಕು. ಪರಮಾತ್ಮನಾದ ಶಿವನು ಪಾರ್ವತಿಯನ್ನು ಇದೇ ಕಾರಣದಿಂದ ತ್ಯಜಿಸಿದ್ದನು.

## "ಪರಮಾತ್ಮನಾದ ಶಿವನು ತನ್ನ ಪತ್ನಿಯನ್ನು ತ್ಯಜಿಸುವುದು"

ದಶರಥನ ಪುತ್ರನಾದ ಶ್ರೀರಾಮಚಂದ್ರನು ವನವಾಸದಲ್ಲಿದ್ದಾಗ ಲಂಕೆಯ ರಾಜನಾದ ರಾವಣನು

ಸೀತೆಯನ್ನು ಅಪಹರಿಸಿದ್ದನು. ಶ್ರೀರಾಮನಿಗೆ ಇದು ಗೊತ್ತಿರಲಿಲ್ಲ. ಸೀತೆಯ ವಿರಹದಲ್ಲಿ ರಾಮನು ವಿಲಾಪಿಸುತ್ತಿದ್ದನು. ಆಕಾಶದಲ್ಲಿ ಶಿವ ಪಾರ್ವತಿಯರು ಇದನ್ನು ನೋಡಿದರು. ಪಾರ್ವತಿಯು ಶಿವನ ಬಳಿ ಕೇಳಿದಳು, "ಈ ವ್ಯಕ್ತಿ ಈ ರೀತಿ ಜೋರಾಗಿ ಏಕೆ ಅಳುತ್ತಿದ್ದಾನೆ. ಅವನಿಗೆ ಯಾವ ಕಷ್ಟ ಬಂದಿದೆ?" ಆಗ ಶಿವನು, ಅವನು ಸಾಧಾರಣ ವ್ಯಕ್ತಿ ಅಲ್ಲ. ಅವನು ಶ್ರೀವಿಷ್ಣು, ಈಗ ದಶರಥನ ಮನೆಯಲ್ಲಿ ಹುಟ್ಟಿದ್ದಾರೆ. ಈಗ ವನವಾಸದಲ್ಲಿದ್ದಾರೆ. ಅವರ ಪತ್ನಿಯಾದ ಸೀತೆಯೂ ಅವರ ಜೊತೆ ಬಂದಿದ್ದಳು. ಅವಳನ್ನು ಯಾರೋ ಅಪಹರಿಸಿದ್ದಾರೆ. ಆದ್ದರಿಂದ ದುಃಖಿಯಾಗಿದ್ದಾರೆ ಎಂದನು. ಆಗ ಪಾರ್ವತಿಯು, ನಾನು ಸೀತೆಯ ರೂಪ ಧರಿಸಿ ಅವರ ಮುಂದೆ ಹೋಗುವೆ. ಅವರು ನನ್ನನ್ನು ಗುರುತುಹಿಡಿದರೆ ಅವರು ದೇವರೆಂದು ನಾನು ನಂಬುವೆ. ಎಂದಳು. ಆಗ ಶಿವನು, ಅಂಥಾ ಕೆಲಸ ಮಾಡಬೇಡ, ಸೀತೆಯ ರೂಪ ಧರಿಸಿದರೆ ನನಗೆ ಇಷ್ಟವಾಗುವುದಿಲ್ಲ ಎಂದನು. ಆಗ ಪಾರ್ವತಿಯು ಆ ಸಂದರ್ಭದಲ್ಲಿ ನಾನು ಪರೀಕ್ಷಿಸುವುದಿಲ್ಲ ಎಂದು ಹೇಳಿದಳು. ಆದರೆ ಶಿವನು ಮನೆಯಿಂದ ಹೊರ ಹೋದ ನಂತರ ಅವಳು ಸೀತೆಯ ರೂಪ ಧರಿಸಿ ರಾಮನ ಮುಂದೆ ನಿಂತಳು. ಆಗ ರಾಮನು ಹೇ ದಕ್ಷ ಪುತ್ರಿ ಮಾಯೆಯೇ, ನೀನು ಇಂದೇಕೆ ಒಬ್ಬಳೇ ಬಂದೆ? ಶಿವನನ್ನು ಎಲ್ಲಿ ಬಿಟ್ಟು ಬಂದೆ? ಎಂದನು. ಆಗ ದೇವಿಗೆ ನಾಚಿಕೆಯಾಯಿತು. ನಂತರ ಹೀಗೆಂದಳು, "ಪರಮಾತ್ಮನಾದ ಶಿವನು ಸತ್ಯವನ್ನೇ ಹೇಳಿದನು. ನೀವು ತ್ರಿಲೋಕಕ್ಕೂ ಪರಮಾತ್ಮ, ನೀವು ನನ್ನನ್ನು ಗುರುತಿಸಿಬಿಟ್ಟಿರಿ, ನಾನು ಪರೀಕ್ಷಿಸಲು ಬಂದಿದ್ದೆ". ಇತ್ತ ಶಿವನಿಗೆ ಪಾರ್ವತಿಯು ಸೀತೆಯ ರೂಪ ಧರಿಸಿ ರಾಮನನ್ನು ಪರೀಕ್ಷಿಸಿದ್ದು ತಿಳಿಯಿತು. ಆಗ ಶಿವನು 'ನಾನು ಬೇಡವೆಂದಿದ್ದು ಕೊನೆಗೂ ಮಾಡಿಬಿಟ್ಟೆಯಾ' ಎಂದು ಕೇಳಿದನು. ಆಗ ಪಾರ್ವತಿಯು ನಾನು ಯಾವ ಪರೀಕ್ಷೆಯನ್ನೂ ಮಾಡಲಿಲ್ಲವೆಂದು ಸುಳ್ಳು ಹೇಳಿದಳು. ಆಗ ಶಿವನಿಗೆ ಕೋಪ ಬಂದಿತು. ಆ ಕಾರಣಕ್ಕೆ ಅವನು ಪಾರ್ವತಿಯನ್ನು ತೊರೆದನು. ಹೀಗೆ ಪ್ರೇಮ ವಿವಾಹದಿಂದ ನರಕ ಪ್ರಾಪ್ತವಾಯಿತು.

ಆದ್ದರಿಂದ ಯುವ ಪೀಳಿಗೆಗೆ ವಿನಂತಿಸುವುದೇನೆಂದರೆ, ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ತಂದೆ ತಾಯಿ ಹಾಗೂ ಸಮಾಜದಲ್ಲಿ ವಿಷವನ್ನು ಹರಡಬೇಡಿ. ವಿವಾಹವಾಗುವುದು ಒಳ್ಳೆಯ ವಿಷಯ, ತಂದೆ ತಾಯಿಗಳು ಸಮಯ ಬಂದಾಗ ತಮ್ಮ ಮಕ್ಕಳ ವಿವಾಹದ ಬಗ್ಗೆ ಚಿಂತಿಸುತ್ತಾರೆ ಮತ್ತು ವಿವಾಹವನ್ನೇರ್ಪಡಿಸಿ, ನೆಮ್ಮದಿಯ ನಿಟ್ಟುಸಿರು ಬಿಡುತ್ತಾರೆ. ಹಾಗಿದ್ದೂ ಯುವ ಪೀಳಿಗೆ ಈ ತಲೆನೋವನ್ನು ತಂದುಕೊಳ್ಳುತ್ತದೆ. ವಿವಾಹವಾಗುವವರೆಗೂ ಒಂದು ಭ್ರಮೆ ಇರುತ್ತದೆ. ನಂತರ ಮಕ್ಕಳಾದ ಮೇಲೆ ಏಳು ವರ್ಷಗಳ ನಂತರ ಏಕೆ ಮದುವೆಯಾದೆನೆಂದು ಅನ್ನಿಸುತ್ತದೆ. ಹರಿಯಾಣದ ಕವಿ ಜಾಟ್ ಮೆಹರ್‌ಸಿಂಗ್ ಹೇಳಿದ್ದಾರೆ.

ವಿವಾಹ್ ಕರ್ ಕೇ ದೇಖ್ ಲಿಯೋ, ಜಿಸ್‌ನೇ ದೇಖೀ ಜೇಲ್ ನಹೀಂ ಹೈ ।

ಜೈಲಿನಲ್ಲಿ ನಾಲ್ಕು ಗೋಡೆಗಳ ಮಧ್ಯೆ ಇರುವುದು ಅನಿವಾರ್ಯ. ಹಾಗೆಯೇ ವಿವಾಹದ ನಂತರ ತಂದೆ ತಾಯಿಗಳು ತಮ್ಮ ಕುಟುಂಬ ಪೋಷಣೆಗಾಗಿ ಹಾಗೂ ಗೃಹಸ್ಥ ಜೀವನ ನಡೆಸಲು ಸಾಮಾಜಿಕ ಗೌರವ ಎಂಬ ನಾಲ್ಕು ಗೋಡೆಗಳ ಮಧ್ಯೆ ಇರುವುದು ಅನಿವಾರ್ಯವಾಗುತ್ತದೆ. ಅವನು ತನ್ನ ಇಚ್ಛೆಯಂತೆ ಬದುಕಲಾರ ಅಂದರೆ ಕೆಲಸದಂತಿರುವ ಕೆಲಸಕ್ಕೆ ಹೋಗುತ್ತಾನೆ. ಕಾರ್ಮಿಕನು ಕೆಲಸಕ್ಕೆ ಹೋಗುವಂತೆ, ರೈತನು ಹೊಲದ ಕೆಲಸಕ್ಕೆ ಹೋಗುವಂತೆ ಹೋಗಬೇಕು. ಆದ್ದರಿಂದ ವೈವಾಹಿಕ ಜೀವನ ಗೌರವಯುತವಾದ ಬಂದೀಖಾನೆ ಎನ್ನಬಹುದು, ಆದರೆ ಈ ಬಂದೀಖಾನೆ ಇಲ್ಲದೆ ಸಂಸಾರದ ಉತ್ಪತ್ತಿ ಆಗಲು ಸಾಧ್ಯವಿಲ್ಲ. ನಿಮ್ಮ ತಂದೆ ತಾಯಿಯರು ಮದುವೆಯಾದ ಕಾರಣವೇ ನಿಮಗೆ ಈ ಅಮೂಲ್ಯವಾದ ಶರೀರ ಸಿಕ್ಕಿದೆ. ಈ ಶರೀರದ ಮೂಲಕ ಭಕ್ತಿಯಿಂದ ಇದ್ದರೆ ಮೋಕ್ಷವನ್ನು ಪಡೆಯಬಹುದು. ಇದು ವಿವಾಹದ ವರವೆಂದೇ ಹೇಳಬಹುದು. ಈ ಪವಿತ್ರ

ಸಂಬಂಧವನ್ನು ಚಾರಿತ್ರ್ಯವಿಲ್ಲದ ವ್ಯಕ್ತಿ ಕಾಮುಕ ಕತೆಗಳನ್ನು ಹೇಳುತ್ತಾ ಮತ್ತು ರಾಗ ದ್ವೇಷಗಳನ್ನು ತಿಳಿಸುತ್ತಾ, ಯುವ ಪೀಳಿಗೆಯಲ್ಲಿರುವ ರಾಗ ದ್ವೇಷಗಳನ್ನು ಕೆರಳಿಸುತ್ತಾನೆ. ಇದರಿಂದ ಶಾಂತವಾಗಿರುವ ಮಾನವ ಸಮಾಜದಲ್ಲಿ ಬೆಂಕಿ ಭುಗಿಲೇಳುತ್ತದೆ. ಇದರಿಂದ ಎಷ್ಟೋ ಕುಟುಂಬಗಳು ಒಡೆದು ಹೋಗುತ್ತವೆ. ಸಮಾಚಾರ ಪತ್ರಿಕೆಗಳು ಓದಲು ಸಿಗುತ್ತವೆ. ಅದರಲ್ಲಿ ಯುವಕ ಯುವತಿಯರು ತಮ್ಮ ಹಳ್ಳಿಯಲ್ಲಿ ಪರಸ್ಪರ ಪ್ರೀತಿಸಿ ನಾಶದ ಬೀಜವನ್ನು ಬಿತ್ತುತ್ತಿದ್ದಾರೆ ಎಂದು ಬರೆಯಲಾಗುತ್ತದೆ. ಹುಡುಗಿಯ ಕಡೆಯವರು ಎಷ್ಟೇ ಬುದ್ಧಿ ಹೇಳಿದರೂ ಕೆಟ್ಟ ಸಿನಿಮಾಗಳ ಪ್ರಭಾವದಿಂದ ಹುಡುಗಿಯು ಕೇಳುವುದಿಲ್ಲ, ಕುಟುಂಬದವರು ಅವಳನ್ನು ಕೊಂದು ಹಾಕುತ್ತಾರೆ. ಈ ಕಾರಣದಿಂದ ಹುಡುಗಿಯ ತಂದೆ, ತಾಯಿ, ಅಣ್ಣ, ಅತ್ತಿಗೆ ಜೈಲಿಗೆ ಹೋಗುತ್ತಾರೆ. ಅವರಿಗೆ ಜೀವಾವಧಿ ಶಿಕ್ಷೆಯಾಗುತ್ತದೆ, ಅವರ ಪ್ರೇಮಪ್ರಸಂಗ ಎನ್ನುವ ಬೆಂಕಿಯಿಂದ ಇಡೀ ಕುಟುಂಬ ನಾಶವಾಗುತ್ತದೆ. ಚೆನ್ನಾಗಿ ನೆಲೆಸಿದ್ದ ಕುಟುಂಬ ನೆಲಸಮವಾಗುತ್ತದೆ. ಇಂಥಾ ಎಷ್ಟೋ ಪ್ರಸಂಗಗಳು ನಮ್ಮ ಮುಂದಿವೆ, ಇವುಗಳಲ್ಲಿ ಮರ್ಯಾದೆ ಹತ್ಯೆ ಪ್ರಕರಣಗಳು ಇವೆ. ಹೇ ಯುವಕರೆ, ಕೊಂಚ ಯೋಚಿಸಿ, ತಂದೆ ತಾಯಿಗಳು ನಿಮ್ಮ ಮೇಲೆ ಏನೆಲ್ಲಾ ಆಸೆಗಳನ್ನಿಟ್ಟುಕೊಂಡು ಬದುಕುತ್ತಾರೆ. ನಿಮ್ಮನ್ನು ಓದಿಸಿ, ಬೆಳೆಸುತ್ತಾರೆ. ನೀವು ಸಮಾಜದ ಗೌರವವನ್ನು ಮರೆತು ಒಂದು ಸಣ್ಣ ತಪ್ಪು ಮಾಡಿ ಜೀವನವನ್ನೇ ಹಾಳು ಮಾಡಿಕೊಳ್ಳುವಿರಿ. ಆದ್ದರಿಂದ ಮಕ್ಕಳಿಗೆ ಸತ್ಸಂಗ ಅನಿವಾರ್ಯ. ಸಮಾಜದ ಬಗ್ಗೆ ಅರಿವು ಮೂಡಿಸುವುದು ಅನಿವಾರ್ಯ. ಇತ್ತೀಚೆಗೆ ಆ ಅರಿವಿನ ಕೊರತೆ ಹೆಚ್ಚಾಗಿದೆ.

ಪ್ರಶ್ನೆ:– ದಿಬ್ಬಣ ಎನ್ನುವುದು ಯಾವಾಗ ಮತ್ತು ಹೇಗೆ ಹುಟ್ಟಿಕೊಂಡಿತು?

ಉತ್ತರ:– ದಿಬ್ಬಣ ಎನ್ನುವುದು ರಾಜರಿಂದ ಪ್ರಾರಂಭವಾಯಿತು. ಇವರು ತಮ್ಮ ಮಗನ ಮದುವೆಗೆ ಸೈನ್ಯ ತೆಗೆದುಕೊಂಡು ಹೋಗುತ್ತಿದ್ದರು. ದಾರಿಯಲ್ಲಿ ರಾಜನ ಸುರಕ್ಷೆ ಅನಿವಾರ್ಯವಾಗಿತ್ತು. ಇದರ ಸಂಪೂರ್ಣ ಖರ್ಚನ್ನು ಹುಡುಗಿಯ ಕಡೆಯವರು ನೋಡಿಕೊಳ್ಳುತ್ತಿದ್ದರು.

ಸೇಠ್, ಸಾಹುಕಾರರು ವರದಕ್ಷಿಣೆಯಲ್ಲಿ ಅತ್ಯಧಿಕ ಒಡವೆ ಹಾಗೂ ಹಣ ನೀಡುತ್ತಿದ್ದರು. ಅವರು ಹಳ್ಳಿಯ ಬಹಳಷ್ಟು ಜನರನ್ನು ಮಾರ್ಗಮಧ್ಯೆಯ ಸುರಕ್ಷತೆಗಾಗಿ ಕರೆದುಕೊಂಡು ಹೋಗುತ್ತಿದ್ದರು. ಮೊದಲನೇ ದಿನ ಹುಡುಗನ ಕಡೆಯವರು ತಮ್ಮ ಮನೆಯಲ್ಲಿ ಸಿಹಿ ತಿನ್ನಿಸುತ್ತಿದ್ದರು. ಹುಡುಗಿಯ ಕಡೆಯವರಿಂದ ಪ್ರತಿಯೊಬ್ಬರಿಗೂ ಒಂದೊಂದು ಬೆಳ್ಳಿಯ ನಾಣ್ಯ ಹಾಗೂ ಒಂದೊಂದು ಹಿತ್ತಾಳೆಯ ಲೋಟ ಕೊಡಲ್ಪಡುತ್ತಿತ್ತು. ಒಮ್ಮೊಮ್ಮೆ ಹೆಚ್ಚೆಚ್ಚು ಕೊಡುವ ಪರಿಪಾಠವೂ ಇತ್ತು. ಏಕೆಂದರೆ ಹಿಂದೆಲ್ಲಾ ಅರಣ್ಯದ ಮೂಲಕ ಹೋಗಬೇಕಾಗುತ್ತಿತ್ತು ಹಾಗೂ ಪ್ರಯಾಣಕ್ಕೆ ಬೇರೆ ವಾಹನಗಳ ವ್ಯವಸ್ಥೆ ಇರಲಿಲ್ಲ. ಹೀಗಾಗಿ ಈ ದಿಬ್ಬಣ ಹೊರಡುವುದು ಒಂದು ಪರಿಪಾಠಿಯಾಯ್ತು. ಒಮ್ಮೊಮ್ಮೆ ಬರಗಾಲ ಬಂದಾಗ ಎಲ್ಲರೂ ಬಡವರಾಗಿ ಬಿಡುತ್ತಿದ್ದರು ಯಾರೋ ಒಬ್ಬರು ಧನಿಕನಿದ್ದರೆ ಅವನನ್ನು ಲೂಟಿ ಮಾಡುತ್ತಿದ್ದುದು ಸಾಮಾನ್ಯ ಸಂಗತಿಯಾಗಿತ್ತು. ಆ ಕಾರಣದಿಂದ ದಿಬ್ಬಣವೆಂಬ ಸೈನ್ಯ ಹುಟ್ಟಿಕೊಂಡಿತು. ನಂತರ ಜನರು ಆಡಂಬರ ಪ್ರಾರಂಭಿಸಿದರು. ಇದರ ಅವಶ್ಯಕತೆ ಖಂಡಿತವಾಗಿಯೂ ಇಲ್ಲ.

ಪ್ರಶ್ನೆ:– ಕೊಡುಗೆ ಅಥವಾ ಆತಿಥ್ಯ ಹೇಗೆ ಪ್ರಾರಂಭವಾಯಿತು?

ಉತ್ತರ:– ಇದೂ ಸಹ ದಿಬ್ಬಣ ಬರುವುದು, ವರದಕ್ಷಿಣೆ ಕೊಡುವುದು ಎಲ್ಲವೂ ಹೀಗೇ ಪ್ರಾರಂಭವಾಯಿತು. ಹುಡುಗಿ ಕಡೆಯವರು ಹುಡುಗನ ಕಡೆಯವರಿಗೆ ಸಿಹಿ ತಿನ್ನಿಸುವುದು. ಕೊಡುಗೆ ನೀಡುವುದು ಸಾಮಾನ್ಯವಾಗಿ ಬಿಟ್ಟಿತು. ಇದನ್ನೆಲ್ಲ ಕೇವಲ ವಧುವಿನ ಕುಟುಂಬದವರಿಗೆ ಹೊರುವ ಶಕ್ತಿ ಇರುವುದಿಲ್ಲ. ಆಗ ವಧುವಿನ ಕಡೆಯವರೆಲ್ಲ ತಮ್ಮ ಶಕ್ತ್ಯಾನುಸಾರ ಹಣವನ್ನು ಕೊಡಲು ಪ್ರಾರಂಭಿಸಿದರು. ಇನ್ನು ಕೆಲವರು ಬಡ್ಡಿ ಇಲ್ಲದೆ ಸಾಲ ಕೊಡಲು ಪ್ರಾರಂಭಿಸಿದರು. ಕೆಲ ಜನಾಂಗದಲ್ಲಿ ಎಲ್ಲರೂ ಕೊಟ್ಟ ಹಣವನ್ನು ಬರೆಸಲಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ವಿವಾಹದ ಸಮಯದಲ್ಲಿ ಪ್ರತಿಯೊಬ್ಬರು ಕೊಟ್ಟ ಹಣದ ವಿವರವನ್ನು ಬರೆಸಲಾಗುತ್ತದೆ. ಹೀಗೆ ಮದುವೆ ಮಾಡುವವರಿಗೆ ಹಣದ ಕೊರತೆ

ಉಂಟಾಗುವುದಿಲ್ಲ.

ಕೊಡುಗೆ:– ಕೊಡುಗೆಯೂ ಇದೇ ರೀತಿ ಪ್ರಾರಂಭವಾಯಿತು. ಅಕ್ಕ ತಂಗಿಯರ ಮಕ್ಕಳ ಮದುವೆಯಲ್ಲಿ ಬಟ್ಟೆ, ನಗದು ಕೊಡುವುದು ಕೊಡುಗೆ ಎನ್ನಬಹುದು. ಇದನ್ನು ಮತ್ತೆ ವಾಪಸ್ಸು ಕೊಡುವಂತಿಲ್ಲ. ಅಕ್ಕತಂಗಿಯರಿಗೆ ಅಣ್ಣ ತಮ್ಮಂದಿರು ಇಲ್ಲದಿದ್ದರೆ ಅವರು ಅತ್ಯಂತ ದುಃಖಿಗಳಾಗುತ್ತಾರೆ. ಅವರೆಲ್ಲ ಏಕಾಂತದಲ್ಲಿ ಕುಳಿತು ಅಳುತ್ತಾರೆ.

ಇನ್ನು ಮಗಳಿಗೆ ಮಗುವಾದರೆ ತಾಯಿಯ ಮನೆಯವರು ಬಾಣಂತನಕ್ಕಾಗಿ ಶುದ್ಧ ತುಪ್ಪ, ಅಂಟಿನುಂಡೆ, ನವಜಾತ ಮಗುವಿಗೆ ಬಟ್ಟೆ ಇವೆಲ್ಲಾ ಕೊಡಬೇಕಾಗುತ್ತದೆ. ಬಟ್ಟೆಗಳೆಲ್ಲಾ ಒಂದು ವರ್ಷದ ನಂತರ ವ್ಯರ್ಥವಾಗಿ ಬಿಡುತ್ತವೆ.

ಇಂಥಾ ಪರಂಪರೆಯನ್ನು ಬಿಡಬೇಕು. ಏಕೆಂದರೆ ಇದು ಜೀವನಕ್ಕೆ ಭಾರವಾಗಿ ಪರಿಣಮಿಸುತ್ತದೆ. ನೀವು ಬೇಕಾದರೆ ನಿಮ್ಮ ಮಗಳಿಗೆ ಸಹಾಯ ಮಾಡಿ. ಆದರೆ ಮದುವೆ ಸಮಯದಲ್ಲಿ ವರದಕ್ಷಿಣೆ ರೂಪದಲ್ಲಿ ಕೊಡಬಾರದು. ಹಸು–ಎಮ್ಮೆ ಕೊಡುವುದು, ಅವಳ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲದಿದ್ದರೆ ನಿಮ್ಮ ಮಗಳು ಒಪ್ಪಿದರೆ, ಅವಳಿಗೆ ನಿಮ್ಮ ಆಸ್ತಿಯಲ್ಲಿ ಒಂದು ಭಾಗವನ್ನು ನೀವು ಕೊಡಬಹುದು. ಆದರೆ ಅವಶ್ಯಕತೆ ಬಂದಾಗ ಹಣವನ್ನು ತೆಗೆದುಕೊಳ್ಳಿ ಮತ್ತೆ ಹಿಂದಿರುಗಿಸಿ. ಪರಮಾತ್ಮನಲ್ಲಿ ನಂಬಿಕೆ ಇಡಿ. ಆಗ ನಿಮ್ಮ ಗೌರವ ಉಳಿಯುವುದು.

ಪರಿಹಾರ:– ಇದಕ್ಕೆಲ್ಲಾ ಪರಿಹಾರವೆಂದರೆ ವಿವಾಹವನ್ನು ಸೂಕ್ಷ್ಮವೇದದ ಪ್ರಕಾರ ಮಾಡುವುದು. ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದವೆಂಬ ನಾಲ್ಕು ವೇದಗಳನ್ನು ನೀವು ಕೇಳಿರುವಿರಿ, ಆದರೆ ಐದನೇ ವೇದವಾದ ಸೂಕ್ಷ್ಮವೇದವನ್ನು ಸ್ವತಃ ಪೂರ್ಣಬ್ರಹ್ಮನು ಭೂಮಿಗೆ ಬಂದು ತನ್ನ ಬಾಯಿಂದ ಅಮೃತವಾಣಿಯ ಮೂಲಕ ತಿಳಿಸಿದ್ದಾನೆ.

ನನ್ನ (ರಾಮ್‌ಪಾಲ್ ದಾಸ) ಅನುಯಾಯಿಗಳು ಈ ಐದನೇ ವೇದದ ಪ್ರಕಾರ ಮದುವೆ ಮಾಡುತ್ತಾರೆ. ಇದರಲ್ಲಿ ಮೇಲೆ ತಿಳಿಸಿರುವ ಯಾವುದೇ ಆಡಂಬರದ ಅವಶ್ಯಕತೆ ಇರುವುದಿಲ್ಲ. ಮದುವೆಯಲ್ಲಿ ಹಾಗೂ ಇನ್ನಿತರೇ ಸಂದರ್ಭದಲ್ಲಿ ವಧೂ–ವರರ ಕಡೆಯವರು ವ್ಯರ್ಥವಾದ ಖರ್ಚು ಮಾಡುವ ಅವಶ್ಯಕತೆ ಇರುವುದಿಲ್ಲ. ಕೇವಲ ಕನ್ಯಾದಾನ ಮಾಡಬೇಕು. ವಧುವು ತನಗಾಗಿ ನಾಲ್ಕು ಜೊತೆ ಬಟ್ಟೆ ತೆಗೆದುಕೊಂಡು ಹೋಗಬಹುದು, ಚಪ್ಪಲಿ ತೊಟ್ಟಿರುತ್ತಾಳೆ ಅಷ್ಟೇ. ವಧುವು ಯಾರ ಮನೆಗೆ ಹೋಗುತ್ತಾಳೋ ಅವಳನ್ನು ಅವರ ಮನೆಯವರು ಆದರದಿಂದ ನೋಡುತ್ತಾರೆ. ತನ್ನ ಮನೆಯ ಆರ್ಥಿಕ ಸ್ಥಿತಿಗನುಗುಣವಾಗಿ ಅವಳಿಗೆ ಸವಲತ್ತು ನೀಡುವರು. ವಧುವು ಆಗ ತನ್ನ ತಾಯಿ ತಂದೆಗೆ ಭಾರವಾಗಲಾರಳು. ತಾಯಿ ಮನೆಗೆ ಬಂದಾಗ ಯಾವುದೇ ಒಡವೆ ವಸ್ತ್ರ ಪಡೆಯುವುದಿಲ್ಲ. ಆಗ ಅಣ್ಣ ಅತ್ತಿಗೆಗೂ ಪ್ರೀತಿ ಪಾತ್ರಳಾಗುತ್ತಾಳೆ. ಏಕೆಂದರೆ ಅತ್ತಿಗೆಯು ಇವಳು ಬಂದು 5–6 ಸಾವಿರ ಖರ್ಚುಮಾಡಿಸಿ ಹೋದಳು ಎಂದು ಗೊಣಗುವುದು ತಪ್ಪುತ್ತದೆ. ಇದರಿಂದ ಪರಸ್ಪರ ಪ್ರೀತಿ ವಿಶ್ವಾಸ ಹೆಚ್ಚುತ್ತದೆ. ಈ ರೀತಿ ಬಯಸುವುದರಿಂದ ನಾವು ಬೇಗ ಮೋಕ್ಷದ ಮಾರ್ಗವನ್ನು ಕಂಡು ಕೊಳ್ಳಲು ಸಾಧ್ಯ.

ಪ್ರಶ್ನೆ:– ಶುಭಕಾರ್ಯಗಳಿಗೆ ಹೋದಾಗ ಮಕ್ಕಳಿಲ್ಲದವರ ಮುಖ ನೋಡುವುದೂ ಸಹ ಕೆಟ್ಟದೆಂದು ಹೇಳುತ್ತಾರೆ, ಏಕೆ?

ಉತ್ತರ:– ಇದು ಸಂಪೂರ್ಣವಾಗಿ ಅಜ್ಞಾನದಿಂದ ತುಂಬಿದ ಕೆಟ್ಟ ಪರಿಪಾಠ ಎಂದು ಹಿಂದೆ ನೀವೇ ಓದಿರುವಿರಿ. ಒಬ್ಬ ವ್ಯಕ್ತಿಗೆ ನಾಲ್ಕು ಜನ ಮಕ್ಕಳಿದ್ದರೂ, ಅವನಿಗೆ ಲಕ್ವ ಹೊಡೆದಾಗ ಯಾರೂ ಅವನ ಸೇವೆ ಮಾಡಲಿಲ್ಲ. ಅವನಿಗೆ ಮಕ್ಕಳಿದ್ದಾರೆ ಎಂದಾಕ್ಷಣ ಅವನ ದರ್ಶನ ಭಾಗ್ಯದಿಂದ

ಶುಭವಾಗುವುದೇ? ಅವನ ದುರ್ಗತಿಯನ್ನು ನೋಡಲು ಯಾರು ಇಷ್ಟ ಪಡುತ್ತಾರೆ?

## "ಕೃತಘ್ನ ಮಗ"

ಒಬ್ಬನಿಗೆ ಇಬ್ಬರು ಮಕ್ಕಳಿದ್ದರು. ಅವನು ಸೈನ್ಯದಿಂದ ನಿವೃತ್ತಿ ಹೊಂದಿದ್ದನು. ಮಕ್ಕಳು ಬೇರೆ ಬೇರೆಯಾದರು, ಚಿಕ್ಕ ಮಗನು ತನ್ನ ಮಕ್ಕಳು ಚಿಕ್ಕವರಾದ ಕಾರಣ ತಾಯಿಯನ್ನು ತನ್ನ ಮನೆಯಲ್ಲಿಟ್ಟುಕೊಂಡನು. ತಾಯಿಯು ಅವರನ್ನು ನೋಡಿಕೊಳ್ಳಬೇಕಾಗಿತ್ತು. ದೊಡ್ಡ ಮಗ ತಂದೆಯನ್ನು ಇಟ್ಟುಕೊಂಡನು, ತಂದೆಯು, ಪೆನ್‌ಷನ್ ಹಣ ನಾನು ಅವನಿಗೆ ಕೊಟ್ಟು, ಅದರಲ್ಲಿ ನಾನು ತಿನ್ನುವೆ ಎಂದನು. ಚಿಕ್ಕ ಮಗನು, ನನಗೆ ಅರ್ಧ ಪೆನ್‌ಷನ್ ಕೊಡು ಎಂದನು. ತಂದೆ ಒಪ್ಪದಿದ್ದಾಗ ಒಂದು ದಿನ ಅವನು ತಂದೆಯ ತಲೆ ಮೇಲೆ ಹೊಡೆದು ಅವನನ್ನು ಕೊಂದು ಹಾಕಿದನು. ಮಗನಿಗೆ ಜೀವಾವಧಿ ಶಿಕ್ಷೆಯಾಯಿತು. ಮಗ ಹುಟ್ಟಿದ್ದಕ್ಕಾಗಿ ಆ ಸೈನಿಕನನ್ನು ಕೊಂಡಾಡುತ್ತಿದ್ದವರು ಈಗ ನೋಡಿ ಏನಾಯಿತು? ಈಗ ಆಧ್ಯಾತ್ಮಿಕ ತಕ್ಕಡಿಯಲ್ಲಿ ತೂಗಿ ನೋಡೋಣ, ಮಕ್ಕಳಿಲ್ಲದವರ ದರ್ಶನದಿಂದ ಶುಭವಾಗುವುದೇ ಅಥವಾ ಅಶುಭವಾಗುವುದೇ? ಮೇಲೆ ತಿಳಿಸಿರುವಂತೆ ಸಂಸ್ಕಾರದಿಂದಲೇ ಕುಟುಂಬ ಏರ್ಪಡುತ್ತದೆ. ಸಾಲ ತೀರಿಸಲು ತಂದೆ–ಮಗ, ಹೆಂಡತಿ, ತಂದೆ–ತಾಯಿ, ಅಕ್ಕ–ತಂಗಿ, ಅಣ್ಣ–ತಮ್ಮ ಮುಂತಾದ ರೂಪದಲ್ಲಿ ಜನ್ಮತಾಳಿ ಕುಟುಂಬದಲ್ಲಿ ಮರ್ಯಾದೆಯಿಂದ ಬದುಕುವುದನ್ನು ನೋಡುತ್ತೇವೆ. ಆದರೆ ಕೆಲ ಯುವಕರು ಅಕಾಲ ಮರಣವನ್ನು ಅಪ್ಪುತ್ತಾರೆ. ಮತ್ತೆ ಕೆಲವರು ಮದುವೆಯಾದ ತಕ್ಷಣ ಸಾಯುತ್ತಾರೆ. ಇವರೆಲ್ಲಾ ತಮ್ಮ ಸಾಲ ತೀರಿದ ತಕ್ಷಣ ತಮ್ಮ ಶರೀರವನ್ನು ತ್ಯಜಿಸುತ್ತಾರೆ. ಯಾರಿಗೆ ಮಕ್ಕಳಿಲ್ಲವೋ ಅವರಿಗೆ ಯಾವುದೇ ಕೊಳ್ಳುವ–ಕೊಡುವ ವ್ಯಾಪಾರ ಇರುವುದಿಲ್ಲ. ಪೂರ್ಣ ಗುರುವಿನಿಂದ ದೀಕ್ಷೆ ಪಡೆದು ಭಕ್ತಿಯಿಂದ ಇದ್ದರೆ ಅಂಥಾ ಸೌಭಾಗ್ಯವಂತರು ಬೇರೊಬ್ಬರಿಲ್ಲ. ಅವರಿಗೆ ಹುಟ್ಟಿನ ಸಂತೋಷವೂ ಇಲ್ಲ, ಸಾವಿನ ದುಃಖವೂ ಇಲ್ಲ. ಮಕ್ಕಳಿಲ್ಲದವರು ಪುಣ್ಯವಂತರು. ಭಕ್ತಿಯಿಂದ ಇರದಿದ್ದರೆ ಮಕ್ಕಳಿದ್ದರೂ, ಇಲ್ಲದಿದ್ದರೂ ಎಲ್ಲರೂ ತಮ್ಮ ಜೀವನವನ್ನು ಮುಗಿಸಲೇಬೇಕು. ಭಕ್ತಿಯಿಂದ ಇದ್ದರೆ ಇವರೆಲ್ಲರ ದರ್ಶನವೂ ಶುಭವೇ ಆಗಿರುತ್ತದೆ.

## "ಮಕ್ಕಳಿಲ್ಲದವರೇ, ಎಚ್ಚರ!!"

ಯಾವ ಪುಣ್ಯಾತ್ಮರಿಗೆ ಮಕ್ಕಳಿಲ್ಲವೋ, ಅವರು ಆಧ್ಯಾತ್ಮಜ್ಞಾನದ ಕೊರತೆಯಿಂದ ಸಂತಾನ ಪ್ರಾಪ್ತಿಗೆ ಹಾತೊರೆಯುತ್ತಿರುತ್ತಾರೆ. ಅದಕ್ಕಾಗಿ ಏನೆಲ್ಲಾ ಪ್ರಯತ್ನ ಮಾಡುತ್ತಾರೆ. ಆದರೂ ಸಂತಾನವಾಗದಿದ್ದರೆ, ಜೀವನ ಪರ್ಯಂತ ಸಂತಾನ ಪ್ರಾಪ್ತಿಗಾಗಿ ದುಃಖವನ್ನು ಸಹಿಸುತ್ತಾರೆ. ವಿಶೇಷವಾಗಿ ಹೆಂಗಸರು ಮಕ್ಕಳನ್ನು ಪಡೆಯಲು ಹೆಚ್ಚಾಗಿ ಹಂಬಲಿಸುತ್ತಾರೆ, ಹೆಣ್ಣು ತನ್ನನ್ನು ಯಾರೂ ಬಂಜೆ ಎಂದು ಕರೆಯಬಾರದೆಂದು ಬಯಸುತ್ತಾಳೆ. ವೈದ್ಯರು ತಪಾಸಣೆ ನಡೆಸಿ ಬಂಜೆಯ ಯಾವ ಲಕ್ಷಣಗಳೂ ಇಲ್ಲವೆಂದು ಹೇಳುತ್ತಾರೆ. ಎಲ್ಲಾ ಭಗವಂತನ ಲೀಲೆ, ಆದರೆ ತತ್ವಜ್ಞಾನವಿಲ್ಲದ ಸ್ತ್ರೀ ಅದೇ ಕೊರಗಿನಲ್ಲಿ ಸಾಯುತ್ತಾಳೆ. ಭಕ್ತಿ ಮಾಡದ ಕಾರಣ ಅವಳು ಮುಂದಿನ ಜನ್ಮದಲ್ಲಿ ನಾಯಿಯಾಗಿ ಹುಟ್ಟುತ್ತಾಳೆ. ಆಗ ಪರಮಾತ್ಮನು, "ಅಕ್ಕಾ, ಈಗ ನೀನು ಮಕ್ಕಳನ್ನು ಹುಟ್ಟಿಸಿ ನಿನ್ನ ದುಃಖ, ನಿವಾರಿಸಿಕೋ ಎನ್ನುತ್ತಾನೆ. "ಒಂದೇ ಬಾರಿಗೆ 7–8 ಮರಿಗಳನ್ನು ಹಡೆಯುತ್ತಾಳೆ. ಮತ್ತೆ ಮುಂದಿನ ಜನ್ಮದಲ್ಲಿ ಹಂದಿಯಾಗಿ ಹುಟ್ಟುತ್ತಾಳೆ. ಒಂದು ಸಾರಿಗೆ ಹನ್ನೆರಡು ಮರಿಗಳಾಗುತ್ತವೆ. ಆಗ ಮಕ್ಕಳ ಆಸೆಯೆಲ್ಲಾ ತೀರಿ ಹೋಗುತ್ತದೆ.

ಓದುಗರೇ, ಅಕ್ಕ–ತಂಗಿಯರೇ, ಆಧ್ಯಾತ್ಮಜ್ಞಾನವನ್ನು ಪಡೆಯಿರಿ. ಮಾನವ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಿ. ಬದುಕುವ ದಾರಿ ಕಂಡುಕೊಳ್ಳಿ, ಅಂದರೆ ಪೂರ್ಣ ಗುರುವಿನಿಂದ ದೀಕ್ಷೆ ಪಡೆದು ಭಕ್ತಿಯಿಂದ ಇದ್ದು, ಉದ್ಧಾರವಾಗಿರಿ.

## "ಮದುವೆಯಲ್ಲಿ ಜ್ಞಾನಹೀನರು ನರ್ತಿಸುತ್ತಾರೆ"

ಒಂದು ದಿನ, ಸಮಾಚಾರಪತ್ರದಲ್ಲಿ ಹೀಗೆ ಬರೆದಿತ್ತು, ರೋಹತಕ್‌ನ ಒಬ್ಬ ಮದುಮಗ ಮದುವೆಗಾಗಿ ಕಾರಿನಲ್ಲಿ ತೆರಳುತ್ತಿದ್ದನು. ಅವನ ಜೊತೆ ಅವನ ಭಾವಂದಿರು ಸಹ ಕಾರಿನಲ್ಲಿದ್ದರು. ಮೊದಲ ದಿನ ಕುಟುಂಬದವರೆಲ್ಲಾ (ತಂಗಿ, ತಾಯಿ, ತಂದೆ, ಅಕ್ಕ, ಭಾವಂದಿರು, ಚಿಕ್ಕಪ್ಪ, ಚಿಕ್ಕಮ್ಮ) ಡಿ.ಜೆ ಹಾಕಿಕೊಂಡು ಕುಣಿಯುತ್ತಿದ್ದರು. ಬಹಳ ಮಜಾಮಾಡುತ್ತಿದ್ದರು. ಕಲಾನೌರ್ ಎಂಬ ಊರಿನಲ್ಲಿ ಮದುಮಗನ ಕಾರು ಒಂದು ಟ್ರಕ್ಕಿಗೆ ಡಿಕ್ಕಿ ಹೊಡೆಯಿತು. ಕಾರಿನಲ್ಲಿದ್ದವರೆಲ್ಲಾ ಸತ್ತು ಹೋದರು, ಮದುಮಗ ಸತ್ತ, ಅಕ್ಕಂದಿರು ವಿಧವೆಯರಾದರು. ಇದ್ದ ಒಬ್ಬ ಮಗನು ಸತ್ತು ಕುಟುಂಬವೆಲ್ಲಾ ಸರ್ವನಾಶವಾಯಿತು. ಆಗ ಯಾರಾದರೂ ಡಿ.ಜೆ ಹಾಕಿಕೊಂಡು ನರ್ತಿಸುವರೇ? ಪರಮಾತ್ಮನ ಭಕ್ತಿ ಮಾಡುವುದರಿಂದ ಈ ರೀತಿಯ ಕಷ್ಟಗಳು ಎದುರಾಗುವುದಿಲ್ಲ. ಆದ್ದರಿಂದ ನನ್ನ (ಲೇಖಕ) ಅನುಯಾಯಿಗಳಿಗೆ ನಾನು ಉಪದೇಶ ನೀಡುವುದೇನೆಂದರೆ ಪರಮಾತ್ಮನಿಗೆ ಹೆದರಿ ಕೆಲಸ ಮಾಡು. ಸಾಮಾನ್ಯ ವಿಧಾನದಲ್ಲಿ ವಿವಾಹವಾಗು. ಈ ಹೊಲಸು ಲೋಕದಲ್ಲಿ (ಕಾಲನ ಲೋಕದಲ್ಲಿ) ಒಂದು ಕ್ಷಣದ ವಿಶ್ವಾಸವಿಲ್ಲ. ಯಾವಾಗ ಸಿಡಿಲು ಬಡಿಯುವುದೋ ಯಾರಿಗೆ ಗೊತ್ತು?

## "ಸಂತರ ಶಿಕ್ಷಣ"

ಒಂದು ಹಳ್ಳಿಯಲ್ಲಿ ಒಬ್ಬ ವ್ಯಕ್ತಿ ಮೊದಲ ಸಾರಿ ಗುರುನಾನಕ್ ರವರ ಬಳಿ ಹೋದನು. ಗುರುಗಳು ಒಬ್ಬರೇ ನಿಶ್ಯಬ್ದವಾಗಿ ಕುಳಿತಿದ್ದರು. (ಧ್ಯಾನ ಮಾಡುತ್ತಿದ್ದರು) ಆ ವ್ಯಕ್ತಿಯು ಗುರುಗಳಿಗೆ ನಮಸ್ಕರಿಸಿದನು. ಗುರುಗಳು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿದರು. ನಂತರ ಎಲ್ಲರಿಗೂ ಊಟ ಬಡಿಸಿದರು. ಜ್ಞಾನದ ವಿಚಾರ ಹೇಳಿದರು. ಇದಾದ ನಂತರ ಆ ವ್ಯಕ್ತಿ ಹೋರಟು ಹೋದನು. ಒಂದು ದಿನ ಮತ್ತೆ ಆ ವ್ಯಕ್ತಿ ಬಂದು ಕೇಳಿದನು, "ಗುರುಗಳೇ, ನೀವೆಂದಿಗೂ ಖುಷಿಯಾಗಿರುವಂತೆ ಕಾಣುತ್ತಿಲ್ಲ? ಕಾರಣವೇನು?" ಆಗ ಸಂತ ನಾನಕರು ಹೇಳಿದರು:–

ನಾ ಜಾನೆ ಕಾಲ್ ಕೀ ಕರ್ ಡಾರೇ, ಕಿಸ್ ವಿಧಿ ಢಲ್ ಜಾ ಪಾಸಾ ವೇ ।
ಜಿನ್ಹಾತೆ ಸಿರ್ ತೇ ಮೌತ್ ಖುಡಕದೀ, ಉನ್ಹಾನೂಂ ಕೇಹಡಾ ಹಾಂಸಾ ವೇ ॥

ಭಾವಾರ್ಥ:– ಹೇ ಸಹೋದರ, ಈ ಮೃತ್ಯುಲೋಕದಲ್ಲಿ ಎಲ್ಲವೂ ನಶ್ವರ, ಯಾರು ಯಾವಾಗ ಹೋಗಬೇಕಾಗುವುದೋ ಯಾರಿಗೂ ತಿಳಿಯದು. ಆದ್ದರಿಂದ ಯಾರ ತಲೆಯ ಮೇಲೆ ಸಾವು ಸುತ್ತುತ್ತಿರುವುದೋ ಆ ವ್ಯಕ್ತಿಯು ದುಡಿದು, ತಿಂದು, ಹಾಡಿ, ಕುಣಿದು, ಕುಪ್ಪಳಿಸಿಕೊಂಡಿರುವುದು ಹೇಗೆ ಸಾಧ್ಯ? ಮೂರ್ಖ ಅಥವಾ ಕೆಟ್ಟ ಮನುಷ್ಯ ಈ ಕೆಟ್ಟ ಪ್ರಪಂಚದಲ್ಲಿ ಮಜಾ ಮಾಡುತ್ತಾನೆ. ಅಂಥಾ ಒಬ್ಬ ವ್ಯಕ್ತಿಯ ಹೆಂಡತಿಗೆ ಹತ್ತು ವರ್ಷದ ನಂತರ ಒಬ್ಬ ಮಗ ಹುಟ್ಟಿದನು ಎಂದಿಟ್ಟುಕೋ.. ಮಗ ಹುಟ್ಟಿದ ಸಂತೋಷಕ್ಕೆ ಲಡ್ಡು ತಿನ್ನಿಸಿ, ಬ್ಯಾಂಡು ಬಾರಿಸಿ, ಮಜಾ ಮಾಡಿದನು. ಆದರೆ ಮರುದಿವಸವೇ ಆ ಮಗ ಸಾವನ್ನಪ್ಪಿದನು. ಆ ಖುಷಿಯಲ್ಲಾ ಕರಗಿಹೋಯಿತು. ಅಳು, ಗೋಳು ಪ್ರಾರಂಭವಾಯಿತು. ಮನೆ ನರಕವಾಯಿತು. ಈಗ ಸಂತೋಷ ಎಲ್ಲಿರುತ್ತೆ?" ಈ ಮಾತನ್ನು ಕೇಳಿದ ಆ ವ್ಯಕ್ತಿ ನಡುಗಿ ಹೋದನು, ಹಾಗೂ ಹೇಳಿದನು, "ಹೇ ಪ್ರಭು! ನಿಮ್ಮ ಮಾತು ಸತ್ಯ. ಆದರೆ ನೀವು ಯಾವಾಗಲೂ ಖುಷಿಯಾಗಿರುವುದಿಲ್ಲವೇ?" 'ಖುಷಿಯಾಗಿರುತ್ತೇನೆ' ಎಂದು ನಾನಕರು ಹೇಳಿದರು.

ಸಾಧ್ ಮಿಲೇ ಸಾಡೆ ಶಾದೀ ಹೂಂದೀ, ಬಿಛುಡದಾ ದಿಲ್ ಗೀರೀ ವೇ ।
ಅಖದೇ ನಾನಕ್ ಸುನೋ ಜಿಹಾನಾ, ಮುಶ್ಕಿಲ್ ಹಾಲ್ ಫಕೀರೀ ವೇ ॥

ಭಾವಾರ್ಥ:– ಯಾವಾಗ ನನ್ನ ಶಿಷ್ಯರು ಸತ್ಸಂಗಕ್ಕೆ ಬರುತ್ತಾರೋ. ಆಗ ನನಗೆ ಸಂತೋಷವಾಗುತ್ತದೆ.

ಓಹೋ, ಎಲ್ಲರೂ ಭಕ್ತಿಯಿಂದಿದ್ದಾರೆ, ಯಾರು ವಿಚಲಿತರಾಗಿಲ್ಲ ಎನ್ನಿಸುತ್ತದೆ. ಸತ್ಸಂಗದ ನಂತರ ಅವರೆಲ್ಲ ಹೊರಟು ಹೋದ ನಂತರ ಒಂದು ರೀತಿ ಶೂನ್ಯ ಆವರಿಸುತ್ತದೆ. ನಾನಕರು ಹೇಳುತ್ತಾರೆ. "ಜ್ಞಾನಹೀನ ಸಂತರು ಭಕ್ತಿಯನ್ನು ಕಷ್ಟಕರವನ್ನಾಗಿಸಿದ್ದಾರೆ. ಅವರಿಗೆ ಪೂರ್ಣ ಮೋಕ್ಷಮಾರ್ಗವು ತಿಳಿದಿಲ್ಲ. ಅವರೆಲ್ಲಾ ನಾವು ಗುರುಗಳೆಂಬ ಭ್ರಮೆಯಲ್ಲಿದ್ದಾರೆ. ಸಿಹಿಯಾದ ಮಾತುಗಳಿಂದ ನನ್ನ ಭಕ್ತರನ್ನೆಲ್ಲಾ ಕಾಲನ ದವಡೆಗೆ ದೂಕುತ್ತಿದ್ದಾರೆ. ಆದ್ದರಿಂದ ಎಲ್ಲಿ ಇವರೆಲ್ಲಾ ಸತ್ಸಂಗಕ್ಕೆ ಬರುವುದಿಲ್ಲವೋ ಎಂಬ ಚಿಂತೆ ನನ್ನನ್ನು ಕಾಡುತ್ತಿರುತ್ತದೆ. ಎಲ್ಲರೂ ಪುನಃ ಬಂದಾಗ ಸಂತೋಷವಾಗುತ್ತದೆ. ಆದರೆ ನಾವು ಕುಣಿದು ಕುಪ್ಪಳಿಸುವುದಿಲ್ಲ. ನಮ್ಮ ಮನಸ್ಸಿಗೆ ಸಮಾಧಾನವಾಗುತ್ತದೆ. ಕಬೀರರು ಹೇಳಿದ್ದಾರೆ".

ಮೌತ್ ಬಿಸಾರೀ ಮೂರ್ಖಾ, ಅಚರಜ್ ಕಿಯಾ ಕೌನ್ ।
ತನ್ ಮಿಟ್ಟೀ ಮೆಂ ಮಿಲ್ ಜಾಯೆಗಾ, ಜ್ಯೋಂ ಆಟೇ ಮೆಂ ಲೌನ್ ॥

ಶಬ್ದಾರ್ಥ :– ಹೇ ಮೂರ್ಖ ಮನುಷ್ಯನೇ ! ನೀನು ಸಾವನ್ನು ಮರೆತು ಎಂಥಾ ಕೆಲಸ ಮಾಡಿರುವೆ! ನಿನ್ನ ಶರೀರ ಒಂದಲ್ಲ ಒಂದು ದಿನ ಸಾವನ್ನು ಪಡೆದುಕೊಂಡು ಮಣ್ಣಲ್ಲಿ ಸೇರಿಹೋಗುವುದು. ಆಗ ನಿನ್ನ ನಾಮಾವಶೇಷವೂ ಇರುವುದಿಲ್ಲ. ಹಿಟ್ಟಿನಲ್ಲಿ ಉಪ್ಪು ಸೇರಿಕೊಂಡರೆ ಕಾಣದಿರುವ ಹಾಗೆ ನಿನ್ನ ಯಾವ ಕುರುಹೂ ಇರುವುದಿಲ್ಲ. ಸಾವನ್ನು ಮರೆತು ಮನುಷ್ಯನು (ಸ್ತ್ರೀ–ಪುರುಷ) ಸ್ವಾರ್ಥದಿಂದ ತಪ್ಪುಗಳನ್ನು ಮಾಡುತ್ತಾನೆ ಮತ್ತು ಪ್ರಪಂಚದಲ್ಲಿ ಆರಾಮವಾಗಿರುತ್ತಾನೆ. ಅವನಿಗೆ ಸಾವಿನ ನೆನಪು ಇದ್ದಿದ್ದರೆ ಅವನು ಪಾಪವಾಗಲೀ ತಪ್ಪಾಗಲೀ ಮಾಡಲು ಸಾಧ್ಯವಿಲ್ಲ.

ಅನ್ಯ ಉದಾಹರಣೆಗಳು:– ಒಂದು ದಿನ ಒಬ್ಬ ಸೇಠ್ ಒಂದು ಸಂತರ ಆಶ್ರಮಕ್ಕೆ ಹೋದನು. ಸಂತನ ಕೃಪೆಯಿಂದ ಅವನಿಗೆ ತುಂಬಾ ಪ್ರಯೋಜನವಾಯಿತು. ಆ ಸೇಠ್ ಸೇಬು, ಕಿತ್ತಲೆ ಮತ್ತು ಬಾಳೆ ಹಣ್ಣುಗಳ ಬುಟ್ಟಿ ತೆಗೆದುಕೊಂಡು ಬಂದನು. ನಂತರ ಅದನ್ನು ಪ್ರಸಾದದ ಬುಟ್ಟಿಯಲ್ಲಿ ಹಾಕಿದನು. ಎರಡು ದಿನಗಳ ನಂತರ ಸೇಠ್ ಬಂದು ನೋಡಿದಾಗ, ಆ ಬುಟ್ಟಿ ಹಣ್ಣುಗಳಿಂದ ತುಂಬಿತ್ತು. ಗುರುಗಳು ಕೊಂಚ ಪ್ರಸಾದವನ್ನು ಭಕ್ತರಿಗೆ ಹಂಚಿದರು. ಕೆಲ ಭಕ್ತರು ಫಲಗಳನ್ನು ಪ್ರಸಾದವಾಗಿ ತಂದರು. ಅದನ್ನು ಬುಟ್ಟಿಯಲ್ಲಿ ತುಂಬಲಾಯಿತು. ಗುರುಗಳಿಗೆ ಸೇಠ್ ಕೇಳಿದನು. "ಗುರುಗಳೇ ನೀವೇಕೆ ಹಣ್ಣು ತಿನ್ನುವುದಿಲ್ಲ" ಆಗ ಗುರುಗಳೆಂದರು, "ನನಗೆ ಸಾವು ಕಾಣಿಸುತ್ತಿದೆ, ಆದ್ದರಿಂದ ತಿನ್ನಲಾಗುತ್ತಿಲ್ಲ" ಆಗ ಸೇಠ್ ಕೇಳಿದನು. "ಗುರುಗಳೇ ಈ ಪ್ರಪಂಚದಿಂದ ಯಾವಾಗ ಹೋಗುತ್ತಿರುವಿರಿ?" ಆಗ ಗುರುಗಳೆಂದರು, "ಇಂದಿನಿಂದ ಸರಿಯಾಗಿ ನಲವತ್ತು ವರ್ಷಗಳ ನಂತರ ನನ್ನ ಮರಣವಾಗುತ್ತದೆ". ಆಗ ಸೇಠ್, "ಅಯ್ಯೋ ಗುರುಗಳೇ ಹೀಗೆ ಎಲ್ಲರೂ ಸಾಯಲೇಬೇಕು. ಸಾವಿಗೆ ಏಕೆ ಭಯಪಡಬೇಕು? ಇಂಥಾ ಸಾವಿಗೆ ಸಾಮಾನ್ಯ ಮನುಷ್ಯನು ಹೆದುರುವುದಿಲ್ಲ. ಇನ್ನೂ ನೀವೇಕೆ ಹೀಗೆ?" ಎಂದನು. ನಂತರ ಆ ಸೇಠ್‌ಜೀ ಎರಡನೇ ದಿನ, ಮೂರನೇ ದಿನ ಬಂದು ಅದೇ ಮಾತನ್ನು ಆಡಿದನು.

ಆ ನಗರದ ರಾಜನು ಆ ಗುರುಗಳ ಭಕ್ತನಾಗಿದ್ದನು. ಗುರುಗಳು ರಾಜನಿಗೆ ಹೇಳಿದರು, "ನಿಮ್ಮ ನಗರದಲ್ಲಿ ಕಿರೋಡಿಮಲ್ ಎಂಬ ಸೇಠ್ ಇದ್ದಾನೆ. ಅವನಿಗೆ ಗಂಧದ ತುಂಡುಗಳ ಅಂಗಡಿಗಳಿವೆ. ಅವನಿಗೆ ಗಲ್ಲು ಶಿಕ್ಷೆ ಕೊಡು. ಮುಂದಿನ ತಿಂಗಳ ಹುಣ್ಣಿಮೆಯದಿನ ಅವನಿಗೆ ಗಲ್ಲಿಗೇರಿಸಲು ದಿನವನ್ನು ನಿರ್ಧರಿಸಿ ಅವನಿಗೆ ತಿಳಿಸು ಅಲ್ಲಿಯವರೆಗೆ ಅವನನ್ನು ಜೈಲಿನಲ್ಲಿಟ್ಟು, ಅಲ್ಲಿ ಒಂದು ಬುಟ್ಟಿಯತುಂಬ ಹಣ್ಣುಗಳನ್ನು ಇಡು. ಅದರ ಜೊತೆಗೆ ಒಂದು ಕೆ.ಜಿ ಹಾಲನ್ನು ಬಟ್ಟಲಲ್ಲಿ ತುಂಬಿಸಿಡು. ತಿನ್ನಲು ಹಲ್ವ, ಪಾಯಸ, ಹೋಳಿಗೆ, ಚಿತ್ರಾನ್ನ ಪಲ್ಯಗಳು ಇರಲಿ" ಎಂದನು. ಆಗ ರಾಜನು ಗುರುಗಳ ಆಜ್ಞೆಯನ್ನು ಪಾಲಿಸಿದನು. ರಾಜನು ಆ ಸೇಠ್‌ಜೀಯನ್ನು 20 ದಿನಗಳವರೆಗೆ ಬಂಧಿಸಿಟ್ಟಿದ್ದನು. ಆಗ ಸೇಠ್ ಕೃಶವಾಗಿಬಿಟ್ಟನು. ಗುರುಗಳು ಸೇಠ್‌ಜೀಯನ್ನು ನೋಡಲು ಹೋದರು. ಆಗ ಅವನನ್ನು ಕೇಳಿದರು.

"ನೀನ್ಯಾರು? ಎಲ್ಲಿಯವನು?" ಎಂದರು. ಆಗ ಸೇಠ್‌ಜೀ "ಹೇ ಗುರುಗಳೇ ನೀವು ನನ್ನನ್ನು ಗುರುತಿಸಲಿಲ್ಲವೇ? ನಾನು ಕಿರೋಡಿಮಲ್ ಸೇಠ್, ಅದೇ ಗಂಧದ ಅಂಗಡಿಯ ಮಾಲೀಕ" ಎಂದನು. ಆಗ ಗುರುಗಳು, "ಹೇ, ಕಿರೋಡಿಮಲ್, ನೀನ್ಯಾಕೆ ಇಷ್ಟು ಕೃಶವಾಗಿದ್ದೀಯಾ? ಏಕೆ ತಿಂದುಂಡು ಮಲಗುತ್ತಿಲ್ಲ? ಅರೆ, ಹಣ್ಣಿನ ಬುಟ್ಟಿ ಇಲ್ಲೇ ಇದೆ, ಲೋಟದ ತುಂಬಾ ಹಾಲಿದೆ, ಪಂಚಭಕ್ಷ್ಯ ಪರಮಾನ್ನಗಳು ತಟ್ಟೆಯಲ್ಲಿದೆ." ಎಂದರು. ಆಗ ಸೇಠ್‌ಜೀ, "ಗುರುಗಳೇ, ನನಗೆ ಗಲ್ಲಿಗೇರಿಸಲಿದ್ದಾರೆ. ನಾನು ನಿರಪರಾಧಿ, ನನಗೆ ಚಿಕ್ಕ ಚಿಕ್ಕ ಮಕ್ಕಳಿವೆ" ಎಂದನು. ಆಗ ಗುರುಗಳೆಂದರು, "ಅರೆ ಸಹೋದರ, ಎಲ್ಲರೂ ಸಾಯಲೇ ಬೇಕು. ಮತ್ಯಾಕೆ ಹೆದರಬೇಕು? ತಿಂದುಂಡು ಮಜಾ ಮಾಡು" ಎಂದರು. ಆಗ ಸೇಠ್‌ಜೀ ಜೈಲಿನ ಸರಳುಗಳಿಂದ ಗುರುಗಳ ಕಾಲು ಹಿಡಿದು ಹೇಳಿದನು, "ನನ್ನನ್ನು ಕಾಪಾಡಿ ಗುರುಗಳೇ, ಏನನ್ನೂ ತಿನ್ನಲು ಮನಸ್ಸಾಗುತ್ತಿಲ್ಲ. ಹುಣ್ಣಿಮೆಯ ದಿನ ನೆನಪಿಗೆ ಬರುತ್ತದೆ ಎಂದನು. ಆಗ ಗುರುಗಳು, "ಹೇ ಕಿರೋಡಿಮಲ್, ಹೇಗೆ ನಿನಗೆ ಹುಣ್ಣಿಮೆಯ ದಿನ ಸಾವು ನಿಶ್ಚಿತವಾಗಿದೆಯೋ ಹಾಗೆ ಸಾಧು ಸಂತರಿಗೆ ಅವರ ಸಾವು ಕಾಣುತ್ತದೆ. ಅದು ನಲವತ್ತು ವರ್ಷಗಳ ನಂತರವಾದರೂ ಸರಿ!" ಎಂದರು.

ಆಧ್ಯಾತ್ಮಜ್ಞಾನವಿಲ್ಲದ ವ್ಯಕ್ತಿಯು ಮಜಾಮಾಡುತ್ತಿರುತ್ತಾನೆ. ಆಗ ಆಕಸ್ಮಿಕವಾಗಿ ಸಾವು ನಿನ್ನನ್ನು ಎತ್ತಿಕೊಂಡು ಹೋಗುತ್ತದೆ. ಹಾಗೆಯೇ ಅದು ನಲವತ್ತು ವರ್ಷಗಳ ನಂತರ ಬಂದರೂ ನನಗೆ ನನ್ನ ಸಾವು ಕಾಣಿಸುತ್ತದೆ. ಈ ಕಾರಣದಿಂದ ಊಟ ತಿಂಡಿ ಅಷ್ಟು ರುಚಿಸುವುದಿಲ್ಲ. ಮಜಾ ಮಾಡಲು ಮನಸ್ಸಾಗುವುದಿಲ್ಲ. ಪರಮಾತ್ಮನ ನೆನಪಾಗುತ್ತದೆ. ನಿಮ್ಮ ಕಣ್ಣುಗಳಿಗೆ ಅಜ್ಞಾನದ ಪೊರೆ ಆವರಿಸಿದೆ. ಸತ್ಸಂಗದಲ್ಲಿ ಆ ಪೊರೆಯನ್ನು ಕಳಚಲಾಗುತ್ತದೆ. ಇದರಿಂದ ಬದುಕುವ ದಾರಿ ಕಾಣಿಸುತ್ತಿದೆ, ಮುಕ್ತಿಯೂ ಸಿಗುತ್ತದೆ." ಎಂದರು.

## "ವಿವಾಹದ ನಂತರದ ಯಾತ್ರೆ"

ವಿವಾಹದ ನಂತರ ಪತಿಪತ್ನಿಗೆ ತಮ್ಮದೇ ಕರ್ತವ್ಯಗಳಿರುತ್ತವೆ. ಒಬ್ಬರು ಇನ್ನೊಬ್ಬರ ಮೇಲೆ ನಂಬಿಕೆ ಇಡಬೇಕಾಗುತ್ತದೆ. ತನ್ನ ಪತ್ನಿಯು ಪರಪುರುಷನ ಬಳಿ ಹೋಗಲಾರಳು ಎಂಬ ನಂಬಿಕೆ ಪತಿಗೂ, ನನ್ನ ಪತಿ ಪರಸ್ತ್ರೀಯು ಎಷ್ಟೇ ಅಪ್ಸರೆಯಾದರೂ ಅವಳ ಸಂಗ ಮಾಡಲಾರನು ಎಂಬ ನಂಬಿಕೆ ಪತ್ನಿಗೂ ಇರಬೇಕು.

➢ ಕಥೆ:– ಒಬ್ಬ ಯುವ ಸೈನಿಕನಿದ್ದನು. ಅವನ ಪತ್ನಿಯು ಪತಿವ್ರತೆಯಾಗಿದ್ದಳು. ಈ ಮಾತನ್ನು ಸೈನ್ಯದಲ್ಲಿದ್ದ ತನ್ನ ಸಹೋದ್ಯೋಗಿಗಳಿಗೆ ಹೇಳಿದ್ದನು. ಈ ಮಾತು ಆ ಊರಿನ ಮಂತ್ರಿಯಾದ ಶೇರ್‌ಖಾನ್ ಎಂಬ ಮುಸಲ್ಮಾನನಿಗೆ ತಲುಪಿತು. ಇದನ್ನು ಅವನು ರಾಜನಿಗೆ ತಿಳಿಸಿದನು ಹಾಗೂ ಸತ್ಯಾಂಶವನ್ನು ಪರೀಕ್ಷಿಸಲು ವಿನಂತಿಸಿದನು. ರಾಜನು ಸಭೆ ಏರ್ಪಡಿಸಿ, ಸೈನಿಕನನ್ನು ಕರೆಸಿದನು. ಸಭೆಯಲ್ಲಿ ರಾಜನು ಸೈನಿಕನನ್ನು ಕುರಿತು ಹೀಗೆಂದನು "ನಿನ್ನ ಪತ್ನಿ ಪತಿವ್ರತೆ. ಅವಳು ಯಾವ ದುರಾಸೆಗೂ ಒಳಗಾಗದೆ ಅನ್ಯ ಪುರುಷನ ಬಳಿ ಹೋಗಲಾರಳು." ಆಗ ಸೈನಿಕನು, "ಹೌದು ಮಹಾರಾಜ ಇದು ನೂರಕ್ಕೆ ನೂರರಷ್ಟು ಸತ್ಯ." ಎಂದನು. ಆಗ ರಾಜನು "ಒಂದು ವೇಳೆ ಸುಳ್ಳಾದರೆ?" ಎಂದನು. ಆಗ ಸೈನಿಕನು "ನೀವು ಯಾವ ಶಿಕ್ಷೆ ಕೊಟ್ಟರೂ ನಾನು ಸಿದ್ಧ" ಎಂದನು. ಆಗ ಮಂತ್ರಿಯೂ, "ರಾಜ, ಈ ಪರೀಕ್ಷೆಯನ್ನು ನಾನೇ ಖುದ್ದಾಗಿ ಮಾಡುವೆ" ಎಂದನು. ಆಗ ರಾಜನು, "ಸರಿ" ಎಂದನು. ಸೈನಿಕನು ಹೇಳಿದನು. "ನನ್ನ ಮದುವೆ ಸಮಯದಲ್ಲಿ ಕೊಟ್ಟಿರುವ ಕತ್ತಿ ಹಾಗೂ ಅದರ ಮುಚ್ಚಿಕೆಯನ್ನು ಈ ಮಂತ್ರಿಯಾದ ಶೇರ್‌ಖಾನ್ ತರಲಾರ, ನನ್ನ ಪತ್ನಿ ಅದನ್ನು ನೀಡಲಾರಳು. ಒಂದು ವೇಳೆ ತಂದರೆ ನನ್ನ ಪತ್ನಿ ಧರ್ಮಬಿಟ್ಟವಳೆಂದು ನಾನು ನಂಬುತ್ತೇನೆ" ಎಂದನು. ಶೇರ್‌ಖಾನ್ ಆ ಸೈನಿಕನ ನಗರಕ್ಕೆ ಹೋಗಿ ಒಬ್ಬ ಹೆಂಗಸಿನ ಬಳಿ ತೆರಳಲು ಹೇಳಿದನು, ಆ ಸೈನಿಕ ಹೆಂಡತಿಯ ಬಳಿ ನನ್ನನ್ನು

ಕರೆದುಕೊಂಡು ಹೋಗು, ನಾನು ಅವಳನ್ನು ಸೇರಬೇಕು ಎಂದನು. ಆಗ ಆ ಹೆಂಗಸು, ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ" ಎಂದಳು. ಆ ಶೇರ್‌ಖಾನ್, ನೀನು ಹೇಗಾದರೂ ಮಾಡಿ ಅವಳ ಬಳಿ ಇರುವ ಆ ಕತ್ತಿ ಮತ್ತು ಆ ಮುಚ್ಚಿಕೆಯನ್ನು ತಂದುಕೊಡು. ಎಷ್ಟು ಹಣ ಖರ್ಚಾದರೂ ಪರವಾಗಿಲ್ಲ. ಹಾಗೇ ಅವಳ ತೊಡೆಯ ಮೇಲಿರುವ ಯಾವುದಾದರೂ ಮಚ್ಚೆ ಅಥವಾ ಗುರುತನ್ನು ನೋಡಿ ನನಗೆ ತಿಳಿಸು" ಎಂದನು. ಆ ಹೆಂಗಸು ಒಪ್ಪಿಕೊಂಡು ಆ ಸೈನಿಕನ ದೂರದ ಬಂಧು ಎಂದು ಹೇಳಿಕೊಂಡು ಆ ಸೈನಿಕನ ಹೆಂಡತಿಯಾದ ಸೋಮವತಿಯ ಬಳಿ ಹೋದಳು. ತನಗೆ ಖಾಯಿಲೆ ಇದ್ದ ಕಾರಣ ಇವರ ಮದುವೆಗೆ ಬರಲಾಗಲಿಲ್ಲವೆಂದು ಸುಳ್ಳು ಹೇಳಿದಳು. ನಂತರ ಕೆಲವು ದಿನಗಳವರೆಗೆ ಅವಳ ಮನೆಯಲ್ಲಿದ್ದು ಅವಳ ಮನಸ್ಸನ್ನು ಗೆದ್ದುಕೊಂಡಳು. ಅವಳ ಅಂಗ ಸೌಂದರ್ಯವನ್ನು ಕೊಂಡಾಡುತ್ತಾ, ಅವಳು ಸ್ನಾನಮಾಡುತ್ತಿರುವಾಗ ಅವಳ ತೊಡೆಯ ಮೇಲಿದ್ದ ಕಪ್ಪು ಮಚ್ಚೆಯನ್ನು ಗಮನಿಸಿದಳು. ನಂತರ ಒಂದು ದಿನ ಆ ಕತ್ತಿ ಮತ್ತು ಮುಚ್ಚಿಕೆಯನ್ನು ಕದ್ದು, ಅಲ್ಲಿಂದ ಓಡಿಬಂದು ಶೇರ್‌ಖಾನ್‌ಗೆ ಕೊಟ್ಟಳು. ಆಗ ಶೇರ್‌ಖಾನ್ ವಾಪಸ್ಸು ಬಂದು, "ಆ ಸೈನಿಕನ ಹೆಂಡತಿ ನನ್ನ ಜೊತೆ ಸಂಬಂಧ ಇಟ್ಟುಕೊಂಡಳು. ಅವಳ ತೊಡೆಯಲ್ಲಿ ಮಚ್ಚೆ ಇದೆ. ಅವಳೇ ನನಗೆ ಈ ಕತ್ತಿ ಮತ್ತು ಮುಚ್ಚಿಕೆ ಕೊಟ್ಟಳು" ಎಂದು ಹೇಳಿದನು.

ಮತ್ತೆ ಸಭೆ ಸೇರಿತು. ರಾಜನು ಸೈನಿಕನನ್ನು ಕರೆಸಿ, ಆ ಕತ್ತಿ ಮತ್ತು ಮುಚ್ಚಿಕೆಯನ್ನು ತೋರಿಸಿದನು. ಸೈನಿಕನು ಅದನ್ನು ನೋಡಿ, "ಇವೆರಡೂ ನನ್ನ ಪತ್ನಿಯ ಬಳಿ ಇದ್ದ ವಸ್ತುಗಳೇ ಎನ್ನುವುದು ನಿಜ. ಆದರೆ ನನ್ನ ಹೆಂಡತಿ ಚಾರಿತ್ರ್ಯ ಹೀನಳೆಂದು ನಾನು ನಂಬುವುದಿಲ್ಲ" ಎಂದು ಬಲವಾಗಿ ಹೇಳಿದನು. ಆಗ ರಾಜನು ಕೋಪಗೊಂಡು, ಅವನಿಗೆ ಮರಣದಂಡನೆಯನ್ನು ವಿಧಿಸಿದನು. ಒಂದು ತಿಂಗಳ ಬಳಿಕ ನೇಣಿಗೆ ಹಾಕುವುದಾಗಿ ತಿಳಿಸಿದನು. ಆ ಸೈನಿಕನ ಅಂತಿಮ ಇಚ್ಛೆಯನ್ನು ಕೇಳಿದಾಗ, ಆ ಸೈನಿಕನು ತನ್ನ ಹೆಂಡತಿಯನ್ನು ಕಡೆಯ ಬಾರಿ ಹೋಗಿ ನೋಡಿಬರುವ ಇಚ್ಛೆ ವ್ಯಕ್ತಪಡಿಸಿದನು. ಅದರಂತೆ ಅವನು ಅವಳ ಬಳಿ ತೆರಳಿ ವಿಚಾರಿಸಿದಾಗ, ಆ ಹೆಂಗಸು ಬಂದು ಇದ್ದಿದ್ದಾಗಿ ಹಾಗೂ ಆ ವಸ್ತುಗಳನ್ನು ಕಳುವು ಮಾಡಿದ್ದಾಗಿ ತಿಳಿಸಿದಳು.

ಇದಾದ ನಂತರ ಆ ಸೈನಿಕನ ಹೆಂಡತಿಯಾದ ಸೋಮವತಿಯು ಒಬ್ಬ ನರ್ತಕಿಯ ವೇಷದಲ್ಲಿ ರಾಜನ ಬಳಿ ತೆರಳಿ, ತಾನು ನೃತ್ಯ ಮಾಡಬೇಕೆಂದೂ, ತಾವು ಅದನ್ನು ನೋಡಬೇಕೆಂದೂ ವಿನಂತಿಸಿಕೊಂಡಳು. ಅದಕ್ಕೆ ರಾಜನು ಸಮ್ಮತಿಸಿದನು. ಆಗ ಶೇರ್‌ಖಾನ್ ಸಹ ಇದ್ದನು. ನೃತ್ಯವಾದ ನಂತರ ರಾಜನು ಪ್ರಸನ್ನಗೊಂಡು 'ಏನು ಬೇಕು' ಎಂದು ನರ್ತಕಿಗೆ ಕೇಳಿದನು. ಆಗ ಅವಳು "ಮೊದಲು ನೀವು ಮಾತು ಕೊಡಿ, ಆ ನಂತರ ನಾನು ಕೇಳುತ್ತೇನೆ" ಎಂದಳು. ಆಗ ಆ ರಾಜನು ಈ ರಾಜ್ಯವೊಂದನ್ನು ಬಿಟ್ಟು ಏನನ್ನು ಕೇಳಿದರೂ ನಾನು ಕೊಡಲು ಸಿದ್ಧ ಎಂದನು. ಆಗ ನರ್ತಕಿಯು, ನಿಮ್ಮ ಸಭೆಯಲ್ಲಿ ಕಳ್ಳನಿದ್ದಾನೆ. ನನ್ನ ಮನೆಯಿಂದ ಕದ್ದು ತಂದಿದ್ದಾನೆ. ಅವನ ಹೆಸರು ಶೇರ್‌ಖಾನ್. ಅವನಿಗೆ ಮರಣದಂಡನೆ ನೀಡಬೇಕು' ಎಂದಳು. ಆಗ ರಾಜನು ಶೇರ್‌ಖಾನ್‌ನನ್ನು ಕರೆದು ನಿಜಾಂಶದ ಬಗ್ಗೆ ಕೇಳಿದನು. ಆಗ ಶೇರ್‌ಖಾನ್,' ಮಹಾರಾಜ, ಇದೆಲ್ಲಾ ಸುಳ್ಳು, ನಾನು ಈ ಹೆಂಗಸಿನ ಮುಖವನ್ನೇ ನೋಡಿಲ್ಲ. ಇನ್ನು ಈ ಕತ್ತಿಯನ್ನು ಅವಳ ಮನೆಯಿಂದ ಹೇಗೆ ತರಲು ಸಾಧ್ಯ" ಎಂದನು. ಆಗ ಸೋಮವತಿಯು, "ನಾನು ಆ ಸೈನಿಕನ ಹೆಂಡತಿ, ಈ ಸುಳ್ಳನ್ನು ನಿಮಗೆ ತಿಳಿಸಲೆಂದೇ ಈ ನಾಟಕವಾಡಿದೆ." ಎಂದಳು. ಆಗ ರಾಜನು ಆ ಸೈನಿಕನನ್ನೂ ಕರೆದು ತನ್ನ ಅರ್ಧರಾಜ್ಯವನ್ನು ನೀಡಿದನು ಹಾಗೂ ಮಂತ್ರಿಗೆ ಮರಣದಂಡನೆ ವಿಧಿಸಿದನು. ಇಂಥಾ ನಾರಿಯರಿರುವ ಭಾರತವೇ ಧನ್ಯ!.

ತುರಾ ನ ತೀಖಾ ಕೂದ್‌ನಾ, ಪುರುಷ್ ನಹೀಂ ರಣಧೀರ್ ।
ನಹೀಂ ಪದಮನೀ ನಗರ್ ಮೆಂ, ಯಾ ಮೋಟೀ ತಕಸೀರ್ ॥

ಭಾವಾರ್ಥ:– ಕಬೀರರು ಹೇಳಿದ್ದಾರೆ, ಹೇ ಗರೀಬ್‌ದಾಸ್, ಯಾವ ದೇಶದಲ್ಲಿ, ಯಾವ ಊರಿನಲ್ಲಿ ವೇಗವಾಗಿ ಓಡುವ ಕುದುರೆಗಳಿಲ್ಲವೋ, ಯಾವ ನಾಗರಿಕನು ಶೂರ ವೀರನಾಗಿರುವುದಿಲ್ಲವೋ, ಯಾವ ನಗರದಲ್ಲಿ ಪತಿವ್ರತಾ ಸ್ತ್ರೀಯರಿರುವುದಿಲ್ಲವೋ ಆ ನಗರವು ನಗರವಲ್ಲ, ಚಾರಿತ್ರ್ಯವುಳ್ಳ ಸ್ತ್ರೀ ಪುರುಷರಿರುವುದು ನಗರಕ್ಕೆ ಅನಿವಾರ್ಯ.

❖ ವಿವಾಹದ ನಂತರ ಕೆಲವು ಹೆಣ್ಣುಮಕ್ಕಳು ಅತ್ತೆಯ ಮನೆಗೆ ಬಂದ ನಂತರ ತುಂಬಾ ಸಿಂಗರಿಸಿಕೊಳ್ಳುತ್ತಾರೆ. ಬೀದಿಯಲ್ಲಿ ಸುತ್ತುತ್ತಾರೆ. ವಿಚಿತ್ರವಾಗಿ ವರ್ತಿಸುತ್ತಿರುತ್ತಾರೆ. ಅಸಹಜವಾಗಿ ವರ್ತಿಸುತ್ತಾ, ಹೊಳೆಯುವ, ಆಕರ್ಷಿಸುವ ವಸ್ತ್ರಗಳನ್ನು ತೊಡುತ್ತಾರೆ. ಇದರ ಉದ್ದೇಶವೇನಿರುತ್ತದೆ? ಇದಂತೂ ಸ್ಪಷ್ಟ, ತನ್ನ ಪತಿಯ ವಿನಃ ಇನ್ನೂ ಅನ್ಯ ಪುರುಷರನ್ನು ಆಕರ್ಷಿಸುವುದೇ ಆಗಿದೆ. ತನ್ನ ಸೌಂದರ್ಯ ಹಾಗೂ ವೈಭವದ ಪ್ರದರ್ಶನವು ಒಬ್ಬ ಒಳ್ಳೆಯ ಮಗಳ, ಒಳ್ಳೆಯ ಸೊಸೆಯ ಲಕ್ಷಣವಲ್ಲ. ಕೇವಲ ಪತಿಯನ್ನು ಆಕರ್ಷಿಸಲು ಆ ರೀತಿ ಮಾಡಿದರೆ, ಅದೆಲ್ಲಾ ಮನೆಯವರೆಗೆ ಸೀಮಿತವಾಗಿದ್ದರೆ ಒಳ್ಳೆಯದು.

ಎಷ್ಟೇ ಬೆಲೆ ಬಾಳುವುದಿದ್ದರೂ, ಎಷ್ಟೇ ಕಡಿಮೆ ಬೆಲೆಯದ್ದಾದರೂ ಸರಿ, ಸಾಧಾರಣ ವಸ್ತ್ರವನ್ನು ತೊಡಬೇಕು. ಹೆಣ್ಣು ಮಕ್ಕಳ ದೃಷ್ಟಿ ಕೇವಲ 12 ಅಡಿಯವರೆಗಿದ್ದರೆ ಸಾಕು, ನಡೆಯುವಾಗ, ಕೂತಾಗ, ಎದ್ದಾಗ, ಯಾವ ದೃಷ್ಟಿಯೂ ತನ್ನ ಮೇಲೆ ಬಿದ್ದು ಉತ್ತೇಜನ ನೀಡದಿರುವಂತೆ ಗಮನ ಹರಿಸಬೇಕು. ಹೆಣ್ಣಿನ ಉತ್ತೇಜನದಿಂದ ಕೆಟ್ಟ ವ್ಯಕ್ತಿಗಳಿಗೆ ಇನ್ನೂ ಧೈರ್ಯ ಬರುತ್ತದೆ. ಅವರು ಇತರರಿಗೆ ತೊಂದರೆ ಕೊಡುತ್ತಾರೆ. ಮಹಿಳೆಯು ಜೋರಾಗಿ ನಗುತ್ತಾ ಮಾತಾಡುವುದು ಸಭ್ಯತನವಲ್ಲ ಎಷ್ಟೇ ಪುರುಷರ ಜೊತೆ ಇರಬೇಕಾದ ಸಂದರ್ಭದಲ್ಲೂ ಒಬ್ಬ ಸ್ತ್ರೀಯು ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಂಡರೆ ಸಮಾಜವು ಅವಳನ್ನು ಗೌರವಿಸುತ್ತದೆ. ಪೆಟ್ರೋಲಿಗೆ ಬೆಂಕಿ ಕಿಡಿ ಸಿಗದಿದ್ದರೆ ಅದು ಸ್ಫೋಟಿಸಲು ಹೇಗೆ ಸಾಧ್ಯ?

❖ ಮೇಲೆ ಹೇಳಿದ ಉದಾಹರಣೆಯಿಂದ ತಿಳಿಯುವುದೇನೆಂದರೆ, ಇದಕ್ಕೆ ವಿರುದ್ಧವಾಗೇನಾದರೂ ಜರುಗಿದರೆ ಸಮಾಜಕ್ಕೆ ಬೆಂಕಿ ಇಟ್ಟಂತೆ. ಈ ಉದಾಹರಣೆಯು ಸಮಾಜದ ಎಲ್ಲಾ ಯುವಕ ಯುವತಿಯರಿಗೆ ಅನ್ವಯಿಸುತ್ತದೆ.

ಯೌವ್ವನವು ಮದ್ದುಗುಂಡಿದ್ದಂತೆ. ಯಾರಾದರೂ ಕಿಡಿ ಹೊತ್ತಿಸಿದರೆ, ಸರ್ವನಾಶವಾಗುವುದು. ಕಿಡಿ ಹೊತ್ತಿಸದಿದ್ದರೆ ಎಷ್ಟೋ ವರ್ಷಗಳವರೆಗೆ ಸುರಕ್ಷಿತವಾಗಿರುತ್ತದೆ.

❖ ಎಲ್ಲಾ ಪುರುಷರು ತಮ್ಮ ಅಕ್ಕ, ತಂಗಿ, ಮಗಳು, ಸೊಸೆ, ಹೆಂಡತಿ ಪತಿವ್ರತೆಯಾಗಿರಲಿ ಎಂದು ಆಶಿಸುತ್ತಾರೆ. ಅವರ ಮನೆತನ ಚೆನ್ನಾಗಿಲ್ಲ ಎಂದು ಯಾರಾದರೂ ಹೇಳಿದರೆ ಸಹಿಸಲಾರರು.

❖ ಎಂದಾದರೂ ಒಬ್ಬ ಹುಡುಗಿಯನ್ನು ನೋಡಿ, ಕೆಟ್ಟ ಆಸೆ ಬಂತೆಂದರೆ, ತಕ್ಷಣ ನಾವು ಯೋಚಿಸಬೇಕು. ನಮ್ಮ ತಾಯಿ, ಅಕ್ಕ, ತಂಗಿ, ಮಗಳು, ಸೊಸೆಯರ ವಿಷಯದಲ್ಲಿ ಇನ್ಯಾರಾದರೂ ಕೆಟ್ಟ ದೃಷ್ಟಿಯಿಂದ ನೋಡಿದರೆ, ಅವರನ್ನು ಕೆಣಕಿದರೆ, ಅವರ ಜೊತೆ ಅಸಭ್ಯವಾಗಿ ವರ್ತಿಸಿದರೆ, ನಮಗೆ ಹೇಗಾಗುತ್ತದೆ ಎನ್ನುವುದನ್ನು ಮೊದಲು ಯೋಚಿಸಬೇಕು. ಆಗ ಅವರ ಕೈ ಕಾಲು ಮುರಿಯಬೇಕೆನ್ನಿಸುತ್ತದೆ ಎನ್ನುವುದಂತೂ ಸತ್ಯ. ಯಾರು ದುರ್ಬಲರೋ, ಅವರು ಒಂದು ಮೂಲೆಯಲ್ಲಿ ಕುಳಿತು ಅಳುತ್ತಾರೆ. ಚಿಂತಿಸಬೇಕಾದ ವಿಷಯವೆಂದರೆ,

ಜೈಸಾ ದರ್ದ್ ಅಪ್ನೆ ಹೋವೆ, ಐಸಾ ಜಾನ್ ಬಿರಾಣ್ಯೆ ।
ಜೋ ಅಪನ್ಯೆ ಸೋ ಔರ್ ಕ್ಯೆ, ಏಕೈ ಪೀಡ್ ಪಿಛಾನ್ಯೆ ॥
ಕಬೀರ್, ಪರನಾರೀ ಕೋ ದೇಖಿಯೆ, ಬಹನ್–ಬೇಟೀ ಕೇ ಭಾವ್ ।

ಕಹ್ ಕಬೀರ್ ಕಾಮ್ (Sex)ನಾಶ್ ಕಾ, ಯಹೀ ಸಹಜ್ ಉಪಾಯ್ ॥

**ಪರಮೇಶ್ವರ ಕಬಿರರು ಇದಕ್ಕೆ ಉಪಾಯವನ್ನು ತಿಳಿಸಿದ್ದಾರೆ :**

**ಯೌವ್ವನವು ದುಃಖಕ್ಕೆ ದಾರಿ:– ಸಿನೆಮಾಗಳಲ್ಲಿ ಸುಳ್ಳು ಸುಳ್ಳಿನ ಕಥೆಗಳನ್ನು ತೋರಿಸಲಾಗುತ್ತದೆ. ಅದನ್ನು ನೋಡಿ ಮಕ್ಕಳು ಅದನ್ನು ನಕಲು ಮಾಡುತ್ತಾ ನಾಚಿಕೆ ಬಿಟ್ಟು ವರ್ತಿಸುತ್ತಾರೆ. ಸಿನೆಮಾಗಳಲ್ಲಿ ತೋರಿಸುವಂಥಾ ಘಟನೆಗಳು ಮನೆಯಲ್ಲಾಗಲೀ, ಯಾವುದೇ ಊರಿನಲ್ಲಾಗಲೀ ನಡೆಯದೇ ಇರುವಂಥಾದ್ದು. ಅದನ್ನು ತೋರಿಸುವ ಉದ್ದೇಶವಾದರೂ ಏನು? ಬರೀ ಮನೋರಂಜನೆ. ಇದು ಸಮಾಜದ ನಾಶಕ್ಕೆ ಕಾರಣವಾಗುತ್ತದೆ. ಆದ್ದರಿಂದ ನನ್ನ (ಲೇಖಕ) ಅನುಯಾಯಿಗಳು ಸಿನೆಮಾವನ್ನು ನೋಡುವುದಿಲ್ಲ. ಅಶ್ಲೀಲ ಸಾಹಿತ್ಯ ಓದುವುದು, ಅಶ್ಲೀಲ ಹಾಡನ್ನು ಹಾಡುವುದು ಮತ್ತು ಅಶ್ಲೀಲವಾದ ಚರ್ಚೆಯನ್ನು ಕೇವಲ ಕೆಲಸಕ್ಕೆ ಬಾರದವರು ಮಾಡುತ್ತಾರೆ. ಅವರ ಸಹವಾಸದಿಂದ ಒಳ್ಳೆಯ ಯುವಕರೂ ಸಹ ಕೆಟ್ಟು ಹೋಗುತ್ತಾರೆ. ಕಬೀರ್ ಪರಮೇಶ್ವರರು ಹೇಳುತ್ತಾರೆ:–**

ಕಥಾ ಕರೋ ಕರ್ತಾರ್ ಕೀ, ಸುನೋ ಕಥಾ ಕರ್ತಾರ್ ।
ಕಾಮ್ (Sex) ಕಥಾ ಸುನೋಂ ನಹೀಂ, ಕಹ್ ಕಬೀರ್ ವಿಚಾರ್ ॥

**ಭಾವಾರ್ಥ;– ಪರಮಾತ್ಮನ ಗುಣಗಾನ ಮಾಡು ಅಥವಾ ಎಲ್ಲಿ ಪರಮಾತ್ಮನ ಕಥೆಯನ್ನು ಹೇಳುತ್ತಿರುತ್ತಾರೋ ಅಲ್ಲಿಗೆ ಹೋಗಿ ಕಥೆಯನ್ನು ಕೇಳು. ಅಶ್ಲೀಲ ಚರ್ಚೆ ಎಂದಿಗೂ ಬೇಡ. ಇದನ್ನೇ ಕಬೀರರು ಹೇಳಿದ್ದಾರೆ.**

## "ವಿಶೇಷ ಮಂಥನ"

ಕಾಮ ಪ್ರಕ್ರಿಯೆಯನ್ನು ವಿವೇಕದಿಂದ ತಿಳಿಯೋಣ. ಪತಿ ಪತ್ನಿಯ ಮಿಲನಕ್ಕೆ ಸಮಾಜ ಮಾನ್ಯತೆ ನೀಡುತ್ತದೆ. ನೀವು ನಿಮ್ಮ ಸಂತಾನವನ್ನು ಪಡೆಯಬಹುದೆಂದು ಸಮಾಜ ಒಪ್ಪಿಗೆ ನೀಡುತ್ತದೆ. ಎಲ್ಲ ತಂದೆ ತಾಯಿಯರ ಸಂತಾನೋತ್ಪತ್ತಿಯ ಪ್ರಕ್ರಿಯೆಯನ್ನು ಸಂಭೋಗವೆಂದು ಕರೆಯುತ್ತಾರೆ. ಇದರಿಂದ ಎಲ್ಲಾ ಜೀವಿಗಳ ಜನ್ಮವಾಗುತ್ತದೆ. ಈ ಪ್ರಕ್ರಿಯೆಯು ಪವಿತ್ರವಾದದ್ದು. ಇದರಿಂದಲೇ ನಮಗೆ ಮಾನವ ಶರೀರವು ಲಭ್ಯವಾಗಿದೆ. ಒಬ್ಬರು ಡಾಕ್ಟರ್ ಆದರೆ, ಒಬ್ಬರು ಸೈನಿಕ. ಇನ್ನೊಬ್ಬರು ಮಂತ್ರಿಯಾದರೆ, ಮತ್ತೊಬ್ಬರು ಇಂಜಿನಿಯರ್, ಯಾರೋ ರೈತನಾಗಿ ಎಲ್ಲರಿಗೂ ಅನ್ನ ಕೊಟ್ಟರೆ, ಇನ್ಯಾರೋ ಕಾರ್ಮಿಕನಾಗಿ ನಮಗೆ ಮನೆ ಕಟ್ಟಿಕೊಟ್ಟಿದ್ದಾನೆ. ಮಾನವ ಶರೀರ ಪಡೆದ ನಾವು ಭಕ್ತಿ, ದಾನ, ಧರ್ಮ ಮಾಡಿ ನಮ್ಮ ಕಲ್ಯಾಣ ಮಾಡಿಕೊಳ್ಳಬಹುದು. ಇದನ್ನು ಎಷ್ಟೇ ಕೆಟ್ಟದಾಗಿ ಹೇಳಿದರೂ, ಪ್ರಕ್ರಿಯೆ ಮಾತ್ರ ಅದೇ. ಇದನ್ನು ಮರೆಯಲ್ಲಿ ಮಾಡಿದರೆ ಸಭ್ಯತೆ. ಪಶು ಪಕ್ಷಿಗಳೂ ಸಹ ಈ ಕಾರ್ಯದಲ್ಲಿ ತೊಡಗುತ್ತವೆ. ಅವುಗಳಿಗೆ ಯಾವುದೇ ಮುಚ್ಚುಮರೆ ಇಲ್ಲ. ಆದರೆ ಮನುಷ್ಯ ಸಭ್ಯತೆಯ ಪ್ರಾಣಿ. ಹಾಗಾಗಿ ಸಭ್ಯತೆ ಕಾಪಾಡಿಕೊಳ್ಳುವುದು ಅನಿವಾರ್ಯ.

ಮೇಲಿನ ವಿಷಯ ಓದಿದ ಮೇಲೆ ನಿಮಗೆ ಯಾರ ತಂಗಿ, ಮಗಳು ಸೊಸೆಯನ್ನು ನೋಡಿದರೂ ಅಶ್ಲೀಲ ವಿಚಾರ ಬರಲಿಕ್ಕಿಲ್ಲ. ಇದನ್ನೇ ನಿಮ್ಮ ಅಜ್ಜಿ ತಾತ ಮಾಡಿದರು, ನಿಮ್ಮ ತಂದೆಯ ಜನ್ಮವಾಯಿತು. ಹಾಗೇ ನಿಮ್ಮ ತಾಯಿ–ತಂದೆಯಿಂದ ನಿಮ್ಮ ಜನ್ಮವಾಯಿತು. ನಿಮ್ಮನ್ನು ಅವರು ಬೆಳೆಸಿದರು. ನಿಮ್ಮ ಜನ್ಮವೂ ನಿಮ್ಮ ತಂದೆ ತಾಯಿಯ ಕಾಮಕ್ರಿಯೆಯಿಂದ ಆಯಿತು. ಇದು ಅಶ್ಲೀಲವೇ? ಆದರೆ ಕೆಟ್ಟ ಜನರು ಇದನ್ನು ಕೆಟ್ಟದಾಗಿ ತೋರಿಸಿ ಸಮಾಜಕ್ಕೆ ಬೆಂಕಿ ಹಚ್ಚುತ್ತಾರೆ.

❖ ಯಾರಾದರೂ ಒಬ್ಬ ಪುರುಷ ಯಾರಾದರೂ ಒಬ್ಬ ಸ್ತ್ರೀಯನ್ನು ರೇಗಿಸಿದರೆ ಅವನಿಗೆ ಮೂರು ವರ್ಷ ಶಿಕ್ಷೆ ಎಂದು ನಮ್ಮ ಸಂವಿಧಾನದಲ್ಲಿ ಬರೆಯಲಾಗಿದೆ. ಪರಸ್ತ್ರೀಯ ಮೇಲೆ ಅತ್ಯಾಚಾರ ಮಾಡಿದರೆ ಅವನಿಗೆ ಹತ್ತು ವರ್ಷ ಶಿಕ್ಷೆ. ಕಾನೂನಿನ ಅರಿವಿದ್ದರೆ ಮನುಷ್ಯ ಕೆಟ್ಟತನ ಮತ್ತು ದುರಾಚಾರಕ್ಕೆ

ಭಯಗೊಳ್ಳುತ್ತಾನೆ.

❖ ಸಿನೆಮಾ ನೋಡಬಾರದು:– ಸಿನೆಮಾ ಒಂದು ಸುಳ್ಳಿನಿಂದ ಹೆಣೆದ ಕತೆಯಾಗಿರುತ್ತದೆ. ಅದನ್ನು ನೋಡುತ್ತಾ ನಾವು ಸಮಯವನ್ನೇ ಮರೆತು ಬಿಡುತ್ತೇವೆ. ನಟರು ತಮ್ಮ ಹೊಟ್ಟೆ ಹೊರೆಯಲು ನಟಿಸುತ್ತಾರೆ. ಇತ್ತೀಚೆಗೆ ಒಂದು ಸಿನಿಮಾಗೆ ಕೋಟಿಗಟ್ಟಲೆ ಹಣ ಪಡೆಯುತ್ತಾರೆ. ಮುಗ್ಧ ಯುವಕರು ವಿವೇಕ ಮರೆತು ಅವರ ಅಭಿಮಾನಿಗಳಾಗುತ್ತಾರೆ. ಅವರು ತಮ್ಮ ವ್ಯಾಪಾರ ಮಾಡಿಕೊಳ್ಳುತ್ತಾರೆ. ನೀವು ಮೂರ್ಖರಾಗಿ ಸಿನೆಮಾ ನೋಡುತ್ತಾ ಹಣವನ್ನು ಕಳೆದುಕೊಳ್ಳುತ್ತೀರಿ. ನೀವು ಯಾವ ನಾಯಕ ನಟ ನಟಿಯರ ಅಭಿಮಾನಿಗಳಾಗುತ್ತೀರೋ ಅವರ ಮನೆಗೊಮ್ಮೆ ಹೋಗಿ ನೋಡಿ ಕಾಫಿ ಟೀ ಮಾತಿರಲಿ, ಅವರು ನಿಮಗೆ ಒಂದು ಲೋಟ ನೀರನ್ನೂ ಕುಡಿಸುವುದಿಲ್ಲ. ಯೋಚಿಸಿ ನೋಡಿ, ನಾನು ಲಾಡು ತಿನ್ನುತ್ತಿದ್ದೇನೆ, ನೀವು ನೋಡುತ್ತಿದ್ದೀರಿ, ಎಷ್ಟು ಸ್ಟೈಲಾಗಿ ಲಾಡು ತಿನ್ನುತ್ತಿದ್ದಾನೆ ಎಂದು ನೀವು ಹೇಳುವಿರಿ. ಆದರೆ ನಿಮಗೇನು ಸಿಕ್ಕಿತು? ಇದೇ ಪರಿಸ್ಥಿತಿ ಸಿನೆಮಾ ನಟ ಹಾಗೂ ದರ್ಶಕರದ್ದಾಗಿರುತ್ತದೆ.

➢ ನಮ್ಮ ಯೋಚನೆ ಬದಲಿಸಿಕೊಳ್ಳಬೇಕು:– ನಾವು ಅಶ್ಲೀಲ ಮೂರ್ತಿಯನ್ನು ನೋಡಿದಾಗ ನಮ್ಮ ಮನಸ್ಸಿನಲ್ಲಿ ಕೆಟ್ಟತನ ಹುಟ್ಟುತ್ತದೆ. ಏಕೆಂದರೆ ಉತ್ತೇಜಿಸುವ ಮೂರ್ತಿಯು ನಮ್ಮ ಒಳಗಿರುವ ಕಿಡಿಯನ್ನು ಹೊತ್ತಿಸುತ್ತದೆ. ಆದ್ದರಿಂದ ಅಂಥಾ ಚಿತ್ರಗಳನ್ನು, ಮೂರ್ತಿಗಳನ್ನು ನೋಡಬಾರದು.

➢ ನಾವು ದೇಶಭಕ್ತರ ಜೀವನ ಚರಿತ್ರೆ ಓದಿದಾಗ, ಅವರ ಚಿತ್ರಗಳನ್ನು ನೋಡಿದಾಗ ನಮ್ಮ ಒಳಗಿರುವ ದೇಶಭಕ್ತಿಗೆ ಪ್ರೇರಣೆ ಸಿಗುವುದು, ಅಂಥಾ ಚಿತ್ರಗಳನ್ನು ಮನೆಯಲ್ಲಿಟ್ಟುಕೊಂಡರೆ ಯಾವುದೇ ಹಾನಿಯಾಗುವುದಿಲ್ಲ.

➢ ಒಂದು ವೇಳೆ ನಾವು ಸಾಧು–ಸಂತ–ಫಕೀರ ಮತ್ತು ಒಳ್ಳೆಯ ಚಾರಿತ್ರ್ಯವುಳ್ಳ ನಾಗರೀಕರ ಜೀವನ ಚರಿತ್ರೆಯನ್ನು ಓದಿದಾಗ–ಕೇಳಿದಾಗ ನಮ್ಮ ಎಲ್ಲ ದೋಷಗಳು ನಿವಾರಣೆಯಾಗಿ ಒಳ್ಳೆಯ ನಾಗರೀಕರಾಗಲು ಪ್ರಯತ್ನಿಸುತ್ತೇವೆ. ಆದ್ದರಿಂದ ನಮಗೆ ಸಂತರ ಮತ್ತು ಸತ್ಸಂಗದ ಅವಶ್ಯಕತೆ ಇದೆ. ಅಲ್ಲಿ ಒಳ್ಳೆಯ ವಿಚಾರಗಳನ್ನು ಹೇಳಲಾಗುತ್ತದೆ.

➢ ನಾವು ನಮ್ಮ ಚಿಕ್ಕ ಮಗಳಿಗೆ ಸ್ನಾನ ಮಾಡಿಸುತ್ತೇವೆ, ಬಟ್ಟೆ ತೊಡಿಸುತ್ತೇವೆ. ಅವಳನ್ನು ಬೆಳೆಸುತ್ತೇವೆ. ಅವಳ ಮದುವೆಯ ನಂತರ ಅವಳು ಅತ್ತೆಯ ಮನೆಗೆ ತೆರಳುತ್ತಾಳೆ. ಹಾಗೆಯೇ ಬೇರೆಯವರ ಮಗಳು ನಮ್ಮ ಮನೆಗೆ ಸೊಸೆಯಾಗಿ ಬರುತ್ತಾಳೆ. ಇದರಲ್ಲಿ ಹೊಸದೇನಿದೆ? ಎಂದು ಶುದ್ಧ ಮನಸ್ಸಿನಿಂದ ಯೋಚಿಸಿದಾಗ ವಿವೇಕವುಂಟಾಗುತ್ತದೆ. ಮತ್ತು ಕೆಟ್ಟತನ ನಾಶವಾಗುತ್ತದೆ. ವೃತ್ತ ಪತ್ರಿಕೆಗಳಲ್ಲೂ ಎಷ್ಟೋಂದು ಅಶ್ಲೀಲ ಚಿತ್ರಗಳನ್ನು ಪ್ರಕಟಿಸುತ್ತಾರೆಂದರೆ ಯುವ ಜನತೆ ತಪ್ಪುದಾರಿಗಿಳಿಯುತ್ತಾರೆ. ಕೆಲ ಹುಡುಗಿಯರು ಪ್ರಸಿದ್ಧಿ ಪಡೆಯಲು ತುಂಬಾ ಕಡಿಮೆ ಬಟ್ಟೆ ಧರಿಸುತ್ತಾರೆ. ಇದು ತುಂಬಾ ತಪ್ಪು. ಪುರುಷರೂ ಇದಕ್ಕೇನು ಕಡಿಮೆ ಇಲ್ಲ. ಇದನ್ನೆಲ್ಲಾ ಮೊದಲು ನಿಷೇಧಿಸಬೇಕು. ಇದನ್ನೆಲ್ಲ ಸಂಘಟನೆಯಿಂದ ಸಂವಿಧಾನಿಕ ರೀತಿಯಲ್ಲಿ ನಿಷೇಧಿಸುವ ಕೆಲಸವಾಗಬೇಕು ಮತ್ತು ಮನುಷ್ಯನನ್ನು ಚಾರಿತ್ರ್ಯವಂತೆ ಹಾಗೂ ಒಳ್ಳೆಯ ವ್ಯಕ್ತಿಯಾಗಿ ಮಾಡಲು ಒಳ್ಳೆಯ ಪುಸ್ತಕಗಳನ್ನು ಓದಲು ಪ್ರೇರೇಪಿಸಬೇಕು. ಸತ್ಸಂಗಗಳನ್ನು ಏರ್ಪಡಿಸಬೇಕು.

➢ ಕೆಲ ಯುವತಿಯರ ಗಂಡಂದಿರು ಪತಿ ವಿವಾಹವಾದ ಕೆಲ ದಿನಗಳಲ್ಲೇ ಸೈನ್ಯಕ್ಕೆ ಹೊರಟುಹೋಗುತ್ತಾರೆ **8–10** ತಿಂಗಳು ಬರುವುದಿಲ್ಲ. ಇನ್ನೂ ಕೆಲ ಯುವತಿಯರ ಗಂಡಂದಿರು ಕೆಲಸಕ್ಕಾಗಿ ವಿದೇಶಕ್ಕೆ ತೆರಳುತ್ತಾರೆ. **2–3** ವರ್ಷಗಳವರೆಗೆ ಬರುವುದಿಲ್ಲ. ಇವರೆಲ್ಲಾ ಸಂಯಮದಿಂದಲೇ ಇರುತ್ತಾರೆ. ಯಾವುದೇ ಪರ ಪುರುಷನನ್ನು ಕನಸಿನಲ್ಲೂ ನೆನಪಿಸಿಕೊಳ್ಳುವುದಿಲ್ಲ. ಇವರೆಲ್ಲಾ ಉತ್ತಮ ಮನೆತನದ ಹೆಣ್ಣು ಮಕ್ಕಳು. ಪುರುಷರೂ ಸಹ ಅಷ್ಟೇ ಸಂಯಮದಿಂದಿರುತ್ತಾರೆ. ಇವರೂ ಸಹ ಒಳ್ಳೆಯ ಮನೆತನದ ಮಕ್ಕಳು. ಇನ್ನು ಕೆಲವು ಪೋಕರಿಗಳು ತಲೆಯ ಕೂದಲನ್ನು ಹೊಸ ಸ್ಟೈಲಿನಲ್ಲಿ

ಕಟಿಂಗ್ ಮಾಡಿಸಿಕೊಂಡು, ಕೂಲಿಂಗ್ ಗ್ಲಾಸ್ ಹಾಕಿಕೊಂಡು ನಾಯಿಗಳಂತೆ ಗಲ್ಲಿ ಗಲ್ಲಿ ಸುತ್ತುತ್ತಿರುತ್ತಾರೆ. ಇವರು ಯಾವುದೋ ಕೆಟ್ಟ ಕೆಲಸ ಮಾಡಿ ಇಡೀ ಮನೆಯನ್ನು ಹಾಳು ಮಾಡುತ್ತಾರೆ. ಯಾರದೋ ಅಕ್ಕ ತಂಗಿಯರನ್ನು ರೇಗಿಸುತ್ತಾರೆ. ಇದರಿಂದ ಜಗಳಗಳಾಗುತ್ತವೆ. ಜಗಳ ಕದನಗಳು ತಾರಕಕ್ಕೇರಿ ಕೊನೆಗೆ ಎಷ್ಟೋ ಸಾವುಗಳಾಗುತ್ತವೆ. ಇಂಥಹವರಿಂದ ಎರಡೂ ಮನೆಗಳು ನಾಶವಾಗುತ್ತವೆ. ಆದ್ದರಿಂದ ನಮ್ಮ ಮಕ್ಕಳನ್ನು ಬಾಲ್ಯದಿಂದಲೂ ಸತ್ಸಂಗಕ್ಕೆ ಕಳುಹಿಸಿ, ವಿಚಾರವಂತರನ್ನಾಗಿ ಮಾಡಬೇಕು.

## "ಚಾರಿತ್ರ್ಯವಂತನ ಕತೆ"

ಶುಕದೇವ ಋಷಿಗಳು ವೇದವ್ಯಾಸರ ಪುತ್ರರು. ಒಂದು ದಿನ ಅವರು ದೀಕ್ಷೆ ಪಡೆಯುವ ಉದ್ದೇಶದಿಂದ ಮಿಥಿಲೆಯ ಜನಕ ರಾಜನ ಬಳಿ ಬಂದರು. ರಾಜ ಜನಕರಾಜನು ಅವರಿಗೆ ನಾಳೆ ಭೇಟಿಯಾಗುವುದಾಗಿ ಹೇಳಿದನು. ಅವರು ಉಳಿದುಕೊಳ್ಳಲು ವ್ಯವಸ್ಥೆ ಮಾಡಿದನು. ಅವರನ್ನು ಪರೀಕ್ಷಿಸಲು ಒಬ್ಬ ಸುಂದರ ಯುವತಿಯನ್ನು ಅವರ ಸೇವೆಗಾಗಿ ನೇಮಿಸಿದನು. ಆ ಯುವತಿಯು ಅವರ ಕಾಲ ಬಳಿ ಬಂದು ಕುಳಿತಳು. ಋಷಿಗಳು ಸಂಕೋಚದಿಂದ ತಮ್ಮ ಕಾಲನ್ನು ಮಡಚಿಕೊಂಡರು. ಯುವತಿಯೂ ಋಷಿಯ ಬಳಿ ಜರುಗಿದಾಗ ಅವರು ಎದ್ದು ನಿಂತರು. ನಂತರ ಹೀಗೆ ಹೇಳಿದರು. "ಹೇ ತಂಗಿಯೇ, ನೀನು ಒಳ್ಳೆಯ ಮನೆಯಿಂದ ಬಂದವಳಂತೆ ಕಾಣುತ್ತಿರುವೆ. ಕೃಪೆಯಿಟ್ಟು ಈ ಕೊಠಡಿಯಿಂದ ಹೊರಗಡೆ ಹೋಗು, ಇಲ್ಲದಿದ್ದರೆ ನಾನೇ, ಹೋಗುತ್ತೇನೆ" ಎಂದರು. ಆಗ ಆ ಯುವತಿಯು ಹೊರಟು ಹೋದಳು. ರಾಜ ಜನಕನ ಬಳಿ ಬಂದು ಎಲ್ಲವನ್ನು ವಿವರಿಸಿದರು, ಬೆಳಿಗ್ಗೆ ಜನಕರಾಜನು ಶುಕದೇವನಿಗೆ ಹೇಳಿದನು, "ನಿಮ್ಮನ್ನು ಸೇರಲು ಒಬ್ಬ ಹುಡುಗಿ ಬಂದಿದ್ದಳು. ನೀವು ಅವಳನ್ನು ಅಂಗೀಕರಿಸದೆ ಸಂಯಮವನ್ನು ತೋರಿಸಿದಿರಿ. ನೀವೊಬ್ಬ ಸಂಯಮಿ. ನಿಮ್ಮ ತಂದೆ ತಾಯಿಯರು ಧನ್ಯರು" ಎಂದನು.

❖ ಕಬೀರ್ ಪರಮೇಶ್ವರರ ವಿಚಾರ ಇದಕ್ಕಿಂತ ಶ್ರೇಷ್ಠವಾಗಿದೆ. ಅವರು ಹೇಳುವುದೇನೆಂದರೆ, ಋಷಿ ಶುಕದೇವನು ಆತ್ಮಜ್ಞಾನಿಯಾಗಿರಲಿಲ್ಲ. ಏಕೆಂದರೆ ಆ ಸ್ತ್ರೀಯು ಶುಕದೇವನ ಹಾಸಿಗೆಯ ಬಳಿ ಕುಳಿತಾಗ ಅವರು ಅವಳನ್ನು ಹೊರ ಹೋಗುವಂತೆ ಹೇಳಿದರು. ಅದೇ ಆ ಸ್ತ್ರೀ ಹೆಣ್ಣಾಗದೇ ಪುರುಷನಾಗಿದ್ದಿದ್ದರೆ ಶುಕದೇವನು ಹಾಗೆ ಹೇಳುತ್ತಿದ್ದರೇ? ಅವರು ಅವನ ಕ್ಷೇಮ ಸಮಾಚಾರ ವಿಚಾರಿಸುತ್ತಿದ್ದರು ಹಾಗೂ ಅವನನ್ನು ಹೊರ ಹೋಗುವಂತೆ ಹೇಳುತ್ತಿರಲಿಲ್ಲ. ಹಾಗೂ "ಹೇ ಸಹೋದರ, ಒಂದೇ ಮಂಚವಿದೆ, ಇದರ ಮೇಲೆ ನೀನು ಮಲಗಿಕೋ, ನಾನು ನೆಲದ ಮೇಲೆ ಮಲಗಿಕೊಳ್ಳುತ್ತೇನೆ" ಎಂದು ಹೇಳುತ್ತಿದ್ದರು. ಆ ಯುವಕನು ಸಭ್ಯನಾಗಿದ್ದರೆ, ಅವನು, "ಹೇ ಋಷಿಗಳೇ, ನೀವೇ ಮಂಚದ ಮೇಲೆ ಮಲಗಿಕೊಳ್ಳಿ, ನಾನು ನೆಲದ ಮೇಲೆ ಮಲಗಿಕೊಳ್ಳುತ್ತೇನೆ ಎನ್ನುತ್ತಿದ್ದ. ಹುಡುಗಿಯಾದ ಕಾರಣ ಶುಕದೇವರಿಗೆ ಕಾಮ ದೋಷದಿಂದ ಭಯವಾಗಿತ್ತು.

ಕಬೀರ ಪರಮೇಶ್ವರರು ಹೇಳಿದ್ದಾರೆ, ಸ್ತ್ರೀ ಮತ್ತು ಪುರುಷ ಆತ್ಮಗಳ ಮೇಲೆ ಎರಡು ವಸ್ತ್ರಗಳಿವೆ. ಗೀತೆಯ 2ನೇ ಅಧ್ಯಾಯದ 22ನೇ ಶ್ಲೋಕದಲ್ಲಿ ಹೇಳಿರುವಂತೆ "ಅರ್ಜುನ, ಜೀವವು ಒಂದು ಶರೀರವನ್ನು ತ್ಯಜಿಸಿ ಮತ್ತೊಂದು ಶರೀರವನ್ನು ಧಾರಣೆ ಮಾಡುತ್ತದೆ. ಅದನ್ನೇ ಮೃತ್ಯು ಎನ್ನುವರು. ಒಬ್ಬ ವ್ಯಕ್ತಿ ಹಳೆಯ ಬಟ್ಟೆ ಬಿಚ್ಚಿ ಹೊಸ ಬಟ್ಟೆ ತೊಡುವಂತೆ ಈ ಪ್ರಕ್ರಿಯೆ. ಆದ್ದರಿಂದ ಆತ್ಮ ತತ್ವವನ್ನು ಮೊದಲು ತಿಳಿ,"

ಉದಾಹರಣೆ:– ಒಂದು ಹಳ್ಳಿಗೆ ಒಂದು ನಾಟಕ ಮಂಡಳಿ ಬಂದಿತು. ಕೆಲವು ದಿನಗಳು ನಾಟಕವಾಡಿದರು. ಹಿಂದಿನ ಕಾಲದಲ್ಲಿ ನಾಟಕದಲ್ಲಿ ಪುರುಷರೇ ಸ್ತ್ರೀಯರ ಪಾತ್ರವನ್ನು ತೊಡುತ್ತಿದ್ದರು. ಒಬ್ಬ ಹುಡುಗ ತನ್ನ ಗೆಳೆಯನ ಜೊತೆ ಮೊದಲ ಬಾರಿಗೆ ನಾಟಕ ನೋಡಲು ಬಂದನು. ಆ ಗೆಳೆಯನು ಹೇಳಿದ. "ಆಹಾ– ನೋಡು ಆ ಹುಡುಗಿ ಎಷ್ಟು ಸುಂದರವಾಗಿದ್ದಾಳೆ". ಆ ಗೆಳೆಯ ಒಪ್ಪಲು

ಸಿದ್ಧವಾಗಿರಲಿಲ್ಲ. ಅವನಿಗೆ ತನ್ನ ಗೆಳೆಯನ ಮಾತುಗಳಲ್ಲಿ ನಂಬಿಕೆ ಬರಲಿಲ್ಲ. ನಾಟಕ ಮುಗಿದ ನಂತರ ನಾಟಕದವರೆಲ್ಲಾ ತಂಗಿದ್ದ ಸ್ಥಳಕ್ಕೆ ಈ ಗೆಳೆಯರಿಬ್ಬರೂ ಹೊರಟರು ಆ ನಾಟಕದ ಸ್ತ್ರೀ ಪಾತ್ರಧಾರಿ ತನ್ನ ಸ್ತ್ರೀವೇಷದ ವಸ್ತ್ರಗಳನ್ನು ಬಿಚ್ಚಿ ಗೂಟಕ್ಕೆ ಹಾಕಿದ್ದನು. ಸ್ನಾನ ಮಾಡಲು ಸ್ನಾನದ ಮನೆಗೆ ಹೋಗಿದ್ದನು. ಇದನ್ನು ನೋಡಿದ ಮೇಲೆ ಆ ಗೆಳೆಯನಿಗೆ 'ಅವನು ಹುಡುಗಿಯಲ್ಲ, ಹುಡುಗ' ಎನ್ನುವುದು ಮನವರಿಕೆಯಾಯಿತು. ಮರುದಿನ ನಾಟಕ ನೋಡಲು ಹೋದಾಗ ಆ ಹುಡುಗಿಯ ವೇಷದಲ್ಲಿದ್ದ ಹುಡುಗನನ್ನು ನೋಡಿ ಗೆಳೆಯನ ಮನಸ್ಸಿನಲ್ಲಿ ಯಾವುದೇ ಕೆಟ್ಟ ಶೃಂಗಾರಭಾವನೆಗಳು ಉಂಟಾಗಲಿಲ್ಲ. ಅವನಿಗೆ ಆ ಹುಡುಗನೇ ಕಾಣಿಸುತ್ತಿದ್ದನು. ಇದೇ ರೀತಿ ಶುಕದೇವ ಋಷಿಗೆ ವಿವೇಕದ ಆತ್ಮಜ್ಞಾನದ ಅರಿವಿರುತ್ತಿದ್ದರೆ, ಅವರಿಗೆ ಅವಳು ಸ್ತ್ರೀ ಅಲ್ಲ, ಆತ್ಮರೂಪದಲ್ಲಿರುವ ಪುರುಷನೆಂದು ತಿಳಿದು ಹೇಳಿರುತ್ತಿದ್ದರು, "ನಾನು ನೆಲದ ಮೇಲೆ ಮಲಗುತ್ತೇನೆ. ನೀನು ಮಂಚದ ಮೇಲೆ ಮಲಗು", ಎನ್ನುತ್ತಿದ್ದರು. ಹೀಗೆ ಸಾಧು, ಸಂತರು ಈ ವಿಚಾರಧಾರೆಯಲ್ಲಿ ಜೀವಿಸುತ್ತಾರೆ. ಸಾಧನೆಯನ್ನು ಮಾಡಿ ಮೋಕ್ಷವನ್ನು ಹೊಂದುತ್ತಾರೆ.

## "ಸಹವಾಸದ ಪ್ರಭಾವ ಮತ್ತು ಪ್ರಭುವಿನ ವಿಶ್ವಾಸ"

ಒಂದು ಹಳ್ಳಿಯಲ್ಲಿ ಒಬ್ಬ ವ್ಯಕ್ತಿಗೆ ಮದುವೆಯಾಗಿ 10–12 ವರ್ಷವಾದರೂ ಮಕ್ಕಳಾಗಿರಲಿಲ್ಲ. ಆ ಹಳ್ಳಿಯಿಂದ 2 ಕಿ.ಮೀ ದೂರದಲ್ಲಿ ಒಂದು ಆಶ್ರಮದಲ್ಲಿ ಒಬ್ಬ ಸಾಧು ಇದ್ದನು. ಅವನು ಹಳ್ಳಿಗೆ ಹೋಗಿ ಬಿಕ್ಷೆ ಬೇಡಿ ತಂದು 3–4 ಅಥವಾ ಅದಕ್ಕೂ ಹೆಚ್ಚು ದಿನಗಳವರೆಗೆ ಇಟ್ಟುಕೊಂಡು ತಿನ್ನುತ್ತಿದ್ದನು. ಒಂದು ದಿನ ಆ ಸಾಧು ಮಕ್ಕಳಿಲ್ಲದವನ ಮನೆಗೆ ಬಿಕ್ಷೆ ಬೇಡಲು ಬಂದನು. ಆಗ ಆ ದಂಪತಿಗಳು ಪುತ್ರಪ್ರಾಪ್ತಿಗಾಗಿ ಆ ಸಾಧುವಿನ ಕಾಲು ಹಿಡಿದು ಪ್ರಾರ್ಥಿಸತೊಡಗಿದರು. ಆಗ ಆ ಸಾಧುವು "ಒಂದು ಷರತ್ತಿನ ಮೇಲೆ ನಿಮಗೆ ಸಂತಾನವಾಗುತ್ತದೆ. ನಿಮಗೆ ಮೊದಲು ಒಂದು ಗಂಡುಮಗುವಾಗುತ್ತದೆ. ಎರಡು ವರ್ಷದ ನಂತರ ಆ ಮಗುವನ್ನು ನನಗೊಪ್ಪಿಸಬೇಕು. ಅದನ್ನು ನನ್ನ ಉತ್ತರಾಧಿಕಾರಿಯನ್ನಾಗಿ ಮಾಡುವೆ, ಅದಾದ ನಂತರ ನಿಮಗೆ ಒಂದು ಹೆಣ್ಣು ಮಗು, ಒಂದು ಗಂಡು ಮಗು ಹುಟ್ಟುತ್ತದೆ. ಈ ಷರತ್ತಿಗೆ ಒಪ್ಪುವಿರಾ" ಎಂದು ಕೇಳಿದನು. ಆ ದಂಪತಿಗಳು ಒಪ್ಪಿದರು. ಇದಾದ ನಂತರ ಸಾಧುವಿನ ಆಶೀರ್ವಾದದಿಂದ ಒಂದು ವರ್ಷದೊಳಗೆ ಅವರಿಗೆ ಒಂದು ಗಂಡು ಮಗು ಹುಟ್ಟಿತು. ಎರಡು ವರ್ಷದ ನಂತರ ಆ ಮಗುವನ್ನು ಆ ಸಾಧುವಿಗೆ ಒಪ್ಪಿಸಿದರು. ನಂತರ ಆ ದಂಪತಿಗೆ ಒಂದು ಹೆಣ್ಣು ಮಗು ಹುಟ್ಟಿತು. ನಂತರದಲ್ಲಿ ಗಂಡು ಮಗು ಹುಟ್ಟಿತು. ಇದರಿಂದ ಸಾಧುವಿನ ಮಹಿಮೆ ಎಲ್ಲೆಡೆ ಹರಡಿತು. ಆ ಆಶ್ರಮಕ್ಕೆ ಹುಡುಗಿಯ ಪ್ರವೇಶಕ್ಕೆ ನಿಷೇಧವಿತ್ತು. ಒಮ್ಮೆ ಸಾಧುವಿಗೆ ಅವನ ಎದೆಯ ಬಳಿ ಒಂದು ಕುರು ಎದ್ದಿತು. ಸಾಧು ನೋವಿನಿಂದ ನರಳಾಡ ತೊಡಗಿದನು. ಆ ಹುಡುಗನು ನಾರು ಬೇರನ್ನು ತಂದು ಅದನ್ನು ಅರೆದು ಸಾಧುವಿನ ಎದೆಗೆ ಲೇಪಿಸಿದನು. 4–5 ದಿನದಲ್ಲಿ ಸಾಧು ಗುಣಮುಖನಾದನು. ನಂತರದಲ್ಲಿ ಸಾಧುವಿಗೆ ಜ್ವರ ಬಂದಿತು. ವೃದ್ಧಾಪ್ಯ ಹಾಗೂ ಜ್ವರದ ತಾಪದಿಂದ ಸಾಧುವಿಗೆ ದುರ್ಬಲತೆ ಉಂಟಾಗಿ ಓಡಾಡುವುದು ಕಷ್ಟವಾಯಿತು. ಸಾಧು ಆ ಹುಡುಗನನ್ನು ಬಿಕ್ಷೆಗಾಗಿ ಒಂದು ದಿನವೂ ಊರ ಜನರ ಬಳಿ ಕಳುಹಿಸಿರಲಿಲ್ಲ. ಯೌವನದಲ್ಲಿರುವ ಹುಡುಗ ಬೇರೆ ಹುಡುಗರ ಸಹವಾಸದಿಂದ ಎಲ್ಲಿ ದುಶ್ಚಟಗಳಿಗೆ ಗುರಿಯಾಗುವನೋ ಎಂಬ ಚಿಂತೆ ಸಾಧುವಿಗಿತ್ತು. ಅವನಿಗೆ ವಿವಾಹವಾಗುವ ಇಚ್ಛೆ ಉಂಟಾಗದಿರಲೆಂದು ಸಾಧುವಿನ ಆಶಯವಾಗಿತ್ತು.

ಆದರೆ ಒಂದು ದಿನ ಸಾಧು ಅಸಹಾಯಕನಾಗಿ ಅವನನ್ನು ಕರೆದು ಹೇಳಿದನು, "ಮಗು, ಬಿಕ್ಷೆ ಬೇಡಿ ತಾ, ಆದರೆ ಊರಿನ ಮೊದಲನೇ ಗಲ್ಲಿಯ 4ನೇ ಮನೆಗೆ ಹೋಗಿ ಏನು ಸಿಗುವುದೋ ಅದನ್ನು ತೆಗೆದುಕೊಂಡು ಬಾ, ಮುಂದೆ ಹೋಗಬೇಡ" ಎಂದನು. ಆ ಶಿಷ್ಯನು ಹಾಗೆಯೇ ಆಗಲಿ ಎನ್ನುತ್ತಾ ಆ ಗಲ್ಲಿಗೆ ತೆರಳಿ ಆ ಮನೆಯ ಮುಂದೆ ನಿಂತು 'ಅಲಕ್ ನಿರಂಜನ್' ಎಂದು ಕೂಗಿದನು. ಆ

ಮನೆಯ ಒಳಗಿಂದ 14 ವರ್ಷದ ಹುಡುಗಿ ಹೊರ ಬಂದಳು. ಆ ಶಿಷ್ಯನು ಅವಳ ಶರೀರವನ್ನೇ ದಿಟ್ಟಿಸಿ ನೋಡಿದನು. ಅವನ ದೃಷ್ಟಿಯಲ್ಲಿ ದೋಷವಿರುವುದನ್ನು ಅರಿತ ಆ ಹುಡುಗಿಯು ಸಂಕೋಚದಿಂದ. "ಹೇ ಬಾಬಾ, ಬಿಕ್ಷೆ ತೆಗೆದುಕೋ" ಎಂದಳು. ಆಗ ಆ ಹುಡುಗನು, ಹೇ ಹುಡುಗಿ ನಿನ್ನ ಎದೆಯ ಮೇಲೆ ಎರಡು ಕುರು ಎದ್ದಿರುವಂತಿದೆ. ಆಶ್ರಮಕ್ಕೆ ಬಂದರೆ ಔಷಧಿಯ ಲೇಪ ಹಾಕುತ್ತೇನೆ" ಎಂದನು. ನಿನಗೆ ಆ ಕುರುಗಳು ತುಂಬಾ ನೋವನ್ನು ಉಂಟುಮಾಡುತ್ತಿರಬೇಕು. ಏಕೆಂದರೆ ನನ್ನ ಗುರುವಿಗೆ ಒಂದು ಕುರುವೇ ಅತ್ಯಂತ ನೋವು ಕೊಟ್ಟಿತ್ತು" ಎಂದನು. ಈ ಮಾತನ್ನು ಕೇಳಿದ ಹುಡುಗಿಗೆ, ಆ ಹುಡುಗನು ಒಳ್ಳೆಯವನಲ್ಲವೆಂದು ಮನವರಿಕೆಯಾಯಿತು. ಆ ಹುಡುಗಿ ಕೋಪಗೊಂಡು, "ನಿನ್ನ ತಾಯಿ, ಅಕ್ಕ, ತಂಗಿಯರ ಕುರು ವಾಸಿ ಮಾಡು ಹೋಗು, ನಾಚಿಕೆಇಲ್ಲದವನೇ, ನಿನಗೆ ಚಪ್ಪಲಿ ಏಟು ಬೇಕಾ? ಎನ್ನುತ್ತಾ ತನ್ನ ಕಾಲಲ್ಲಿದ್ದ ಚಪ್ಪಲಿ ತೆಗೆದು, "ಮೊದಲು ಇಲ್ಲಿಂದ ತೊಲಗು, ಮತ್ತೆ ಇಲ್ಲಿ ಬಂದರೆ ನಿನ್ನ ಗತಿ ನೆಟ್ಟಗಾಗುವುದಿಲ್ಲ" ಎಂದಳು. ಗಲಾಟೆ ಕೇಳಿ ಹುಡುಗಿಯ ತಾಯಿಯೂ ಬಾಗಿಲ ಬಳಿ ಬಂದಳು. ಇದನ್ನೆಲ್ಲಾ ಕೇಳಿದ ಅವಳು ಆ ಹುಡುಗನನ್ನು ಬಯ್ಯಲಾರಂಭಿಸಿದಳು. ಅವನು ಯಾರೆಂದು ವಿಚಾರಿಸಿದಾಗ ಅವನು ಆ ತಾಯಿಯ ಮಗನೇ ಎಂದು ತಿಳಿಯಿತು. ಆ ಹುಡುಗಿ ಅವನ ತಂಗಿ ಎಂದು ತಿಳಿಯಿತು. ಆಗ ಆ ತಾಯಿಯು, ಈ ಹುಡುಗ ನಿನ್ನ ಅಣ್ಣ, ನಾವು ಇವನನ್ನು ಆ ಸಾಧುವಿಗೆ ಸಮರ್ಪಿಸಿದ್ದೆವು. ಅವನು ಈ ಪ್ರಪಂಚದ ಕೆಟ್ಟತನದಿಂದ ದೂರವಿದ್ದಾನೆ. ಅವನಿಗೆ ಏನೂ ತಿಳಿಯದು. ಅವನೊಬ್ಬ ಮುಗ್ಧ, ಹೇ ಮಗಳೇ, ಯಾವ ದೋಷವು ನಿನಗೆ ಕಂಡಿತೋ ಆ ದೋಷ ಇವನಲ್ಲಿಲ್ಲ. ಇವನು ಶುದ್ಧ ಆತ್ಮದಿಂದ ಮಾಡನಾಡುತ್ತಿದ್ದಾನೆ. ನೀನು ಈ ಹಳ್ಳಿಯ ಕೆಟ್ಟ ಹುಡುಗರ ತುಂಟತನದ ಅನುಸಾರವಾಗಿ ಚಿಂತಿಸಿ ಅವನನ್ನು ಗದರಿಸುತ್ತಿರುವೆ" ಎಂದಳು. ನಂತರ ಆ ಹುಡುಗನಿಗೆ ನಿಜಸ್ಥಿತಿಯನ್ನು ವಿವರಿಸಿದಳು.

ಆ ಹುಡುಗನು ಆಧ್ಯಾತ್ಮಿಕ ದೃಷ್ಟಿಕೋನದಿಂದ ಚಿಂತಿಸಿದನು. ಹುಟ್ಟುವ ಮಗುವಿನ ಬಗ್ಗೆ ದೇವರು ಎಷ್ಟು ಕಾಳಜಿ ವಹಿಸುತ್ತಾನೆ? ಆ ಮಗುವಿನ ಜನ್ಮದ 7–8 ತಿಂಗಳ ಹಿಂದೆಯೇ ಹಾಲು ಕುಡಿಯಲು ವ್ಯವಸ್ಥೆ ಏರ್ಪಡಿಸುತ್ತಾನೆ. ಹಾಗಾದರೆ ನಮಗೆ ತಿನ್ನಲು ಆಶ್ರಮದಲ್ಲಿ ವ್ಯವಸ್ಥೆ ಮಾಡಲಾರನೇ? ನಾನು ಮತ್ತು ನನ್ನ ಗುರುಗಳು ಭಗವಂತನನ್ನೇ ನಂಬಿ ಕುಳಿತಿದ್ದೇವೆ, ಇಂದಿನಿಂದ ಯಾವುದೇ ಕಾರಣಕ್ಕೂ ನಾನು ಬಿಕ್ಷೆ ಬೇಡುವುದಿಲ್ಲ ಎಂದು ನಿರ್ಧರಿಸಿದನು. ಆಗ ಆ ತಾಯಿಯು, 'ಏನು ಯೋಚನೆ ಮಾಡುತ್ತಿರುವೆ' ಎಂದು ಕೇಳಿದಳು. ಆಗ ಆ ಶಿಷ್ಯನು, ಇಂದಿನಿಂದ ಚಿಂತೆ ಮುಗಿಯಿತು ಎಂದು ಹೇಳುತ್ತಾ ಬಿಕ್ಷೆಯ ಜೋಳಿಗೆಯನ್ನು ಅಲ್ಲೇ ಬಿಸಾಡಿ ಬರಿಗೈಯ್ಯಲ್ಲಿ ಆಶ್ರಮಕ್ಕೆ ತೆರಳಿದನು. ಹಾಗೂ ಸಾಧುವಿಗೆ, "ಪರಮಾತ್ಮನು ಮಗು ಹುಟ್ಟುವ 7–8 ತಿಂಗಳ ಮೊದಲೇ ಅದರ ಊಟದ ವ್ಯವಸ್ಥೆ ಮಾಡಿರುವಾಗ ನಮಗೆ ನಮ್ಮ ಆಶ್ರಮದಲ್ಲಿ ಅದರ ವ್ಯವಸ್ಥೆ ಮಾಡಲಾರನೇ ಎಂದು ಯೋಚಿಸಿ, ಜೋಳಿಗೆಯನ್ನು ಬಿಸಾಕಿ ಬಂದೆ" ಎಂದನು. ಸಾಧುವು, 'ಇವನೊಬ್ಬ ಮೈಗಳ್ಳ, ದಿನವೂ ಭಿಕ್ಷೆಗೆ ಹೋಗಬೇಕಾಗುವುದೆಂದು ತಿಳಿದು ಜೋಳಿಗೆಯನ್ನು ಬಿಸಾಡಿ ಬಂದಿದ್ದಾನೆ' ಎಂದು ತಿಳಿದನು. ಆದರೆ ಸಾಧುವಿಗೆ ನಡೆದಾಡಲು ಸಾಧ್ಯವಿರಲಿಲ್ಲ. ಅವನು ಅಸಹಾಯಕನಾಗಿದ್ದನು. ಆದರೂ ಮಾರನೇ ದಿನ ಕಷ್ಟವೋ ಸುಖವೋ ತಾನೇ ಬಿಕ್ಷೆಗೆ ಹೋಗಲು ನಿರ್ಧರಿಸಿದನು.

ಆ ಹುಡುಗನು ಜೋಳಿಗೆಯನ್ನು ಬಿಸಾಕಿ ಹೊರಟು ಹೋದ ಮೇಲೆ ಪರಮಾತ್ಮನು ನಗರದ ಕೆಲ ಜನರಲ್ಲಿ ಅರಿವು ಮೂಡಿಸಿದನು. ದೊಡ್ಡ ಸಾಧು ಅಸ್ವಸ್ಥರಾಗಿದ್ದಾರೆ. ಚಿಕ್ಕ ಸಾಧುವಿಗೆ ಯಾರೋ ಏನೋ ಅಂದಿದ್ದಾರೆ. ಅದಕ್ಕೆ ಅವನು ಜೋಳಿಗೆ ಬಿಸಾಡಿ ಹೊರಟು ಹೋಗಿದ್ದಾನೆ ಸಾಧು ಮತ್ತು ಆ ಹುಡುಗ ಹಸಿವಿನಿಂದ ಇದ್ದಾರೆ ಎನ್ನುವುದು ತಿಳಿಯಿತು. ಹೀಗೆ ಯೋಚಿಸಿ ಒಳ್ಳೆ ಊಟ ಸಿದ್ಧಪಡಿಸಿ ಒಬ್ಬ ವ್ಯಕ್ತಿ ಅದನ್ನೆಲ್ಲಾ ತೆಗೆದುಕೊಂಡು ಹೋಗಿ, "ಈ ಹುಡುಗ ಯಾರೋ ಏನೋ ಹೇಳಿದ್ದಕ್ಕೆ

ಕೋಪಗೊಂಡು ಭಿಕ್ಷೆ ತರಲಿಲ್ಲ ಗುರುಗಳೇ" ಎಂದು ಹೇಳಿದನು, ಆಗ ಆ ಸಾಧು, ಮೊದಲು ಅವನಿಗೆ ಊಟ ಬಡಿಸಿ" ಎಂದನು. ಆಗ ಆ ಹುಡುಗನು, ಮೊದಲು ಗುರುಗಳು ತಿಂದ ಮೇಲೆ ಶಿಷ್ಯ ಊಟ ಮಾಡುತ್ತಾನೆ" ಎಂದನು. ಸಾಧು ಊಟ ಮಾಡ ತೊಡಗಿದನು, ಅಷ್ಟರಲ್ಲಿ ಇನ್ನೊಬ್ಬ ಊಟ ತಂದನು. ಹೀಗೆ ಎಲ್ಲರೂ ಒಬ್ಬೊಬ್ಬರಾಗಿ ಆಶ್ರಮಕ್ಕೆ ಬಂದರು. ಆಗ ಶಿಷ್ಯನು, "ಹೇ ಭಗವಂತ, ನೀನೆಷ್ಟು ಒಳ್ಳೆಯವನೆಂದು ತಿಳಿದಿರಲಿಲ್ಲ. ಆದ್ದರಿಂದ ನಿಮ್ಮ ಚಿಂತೆ ಕಡಿಮೆ ಹಾಗೂ ಊಟದ ಬಗ್ಗೆ ಹೆಚ್ಚು ಚಿಂತೆ ಇರುತ್ತಿತ್ತು, ಎಂದನು. ಅಂದಿನಿಂದ ಊರಿನವರು ಒಬ್ಬೊಬ್ಬರು ಒಂದೊಂದು ದಿನ ಊಟ ತಂದು ಕೊಡಲು ಒಪ್ಪಿಕೊಂಡರು. ಗುರು ಶಿಷ್ಯರ ಧ್ಯಾನ ಸಾಂಗವಾಗಿ ನೆರವೇರಿತು.

ಶಿಕ್ಷಣ:– ಪರಮಾತ್ಮನಲ್ಲಿ ನಂಬಿಕೆ ಇಡದಿದ್ದರೆ ಭಕ್ತ ಅಪೂರ್ಣ. ಭಿಕ್ಷೆ ಬೇಡಿ ತಿನ್ನುವುದೂ ಸಹ ಶಾಸ್ತ್ರಕ್ಕೆ ವಿರುದ್ಧವಾದುದು, ಏಕೆಂದರೆ ಭಕ್ತನ ಶ್ರದ್ಧೆ ಮತ್ತು ವಿಶ್ವಾಸ ನಿಜವಾಗಿದ್ದರೆ ಪರಮಾತ್ಮನೇ ಎಲ್ಲವನ್ನೂ ಕೊಡುತ್ತಾನೆ. ದುಡಿದು ತಿನ್ನುವುದು ಗೃಹಸ್ಥನ ಕೆಲಸವಾದರೆ ಸತ್ಸಂಗ ನಡೆಸುವುದು ಸಾಧು–ಸಂತರ ಕೆಲಸ. ಶ್ರದ್ಧೆಯಿಂದ ಮಾಡಿದರೆ ಅವನಿಗೆ ಬೇಡುವ ಅವಶ್ಯಕತೆ ಇರುವುದಿಲ್ಲ. ಪರಮಾತ್ಮ ಕಬೀರರಿಂದ ಪ್ರಾಪ್ತವಾದ ಜ್ಞಾನದಿಂದ ಸಂತ ಗರೀಬ್‌ದಾಸರು ತಮ್ಮ ಅಮೃತವಾಣಿಯಲ್ಲಿ ಹೇಳಿದ್ದಾರೆ:–

ಗರೀಬ್, ನಟ್ ಪೇರಣಾ ಕಾಂಜರ್ ಸಾಂಶೀ ಮಾಂಗತ್ ಹೈಂ ಭಠಿಯಾರೇ ।
ಜಾಕೀ ತಾರೀ ಲಾಗೀ ತತ್ ಮೆಂ ಮೋತಿ ದೇತ್ ಉಧಾರೇ ॥ (3)

ಗರೀಬ್, ದ್ರೋಪದ್ ಸುತಾ ಕೇ ಚೀರ್ ಬಢಾಯೇ ಬಿನ್ ಹೀ ತಾನೇ ಕಾತೇ ।
ಸಕಲ್ ಮನೋರಥ್ ಪೂರ್ಣ್ ಸಾಹಿಬ್ ತುಮ್ ಕ್ಯೋಂ ಮಾಂಗನ್ ಜಾತೇ ॥(2)

ಗರೀಬ್, ಆಪ್ ತೆಂ ಆವೈ ರತ್ನ್ ಬರಾಬರ್ ಮಾಂಗ್ಯಾ ಆವೈ ಲೋಹಾ ।
ಲಕ್ಷಣ್ ನಹೀಂ ಜೋಗ್ ಕೇ ಜೋಗೀ ಜಾ ಬಸ್ಯಾ ಬನ್ ಖೋಹಾ ॥ (6)

ಗರೀಬ್, ಟೂಕಾಂ ಕಾರಣ್ ಫಿರೈ ಕುಕರಾ (ಕುತ್ತಾ) ಸತಘರ್ ಫಿರ್ ಆವೈ ।
ಯೇ ತೋ ಲಕ್ಷಣ್ ನಹೀಂ ಜೋಗ್ ಕೇ ಕ್ಯೋಂ ಬಾಣಾ ಬಿರದಲ್ ಜಾವೈ ॥(10)

ಗರೀಬ್, ಜಿನ್ಕೋ ಆತ್ಮಜ್ಞಾನ್ ನಹೀಂ ಹೈ ವೇ ಮಾಂಗೈ ರೇ ಭಾಯೀ ।
ಚಾವಲ್ ಚೂನ್ ಇಕಟ್ಠಾ ಕರಕೈ ಬ್ಯಾಜ್ ಬಧಾವೈ ಜಾಯೀ ॥(24)

ಗರೀಬ್, ಜೋ ಮಾಂಗೈ ಸೋ ಭಡವಾ ಕಹಿಯೇ ದರ್–ದರ್ ಫಿರೈ ಅಜ್ಞಾನೀ ।
ಯೋಗೀ ಯೋಗ್ ಸಂಪೂರ್ಣ್ ಜಿಸ್ಕಾ ಜೋ ಮಾಂಗ್ ನ ಪೀವೈ ಪಾನೀ ॥(41)

ಗರೀಬ್, ಕದ್ ನಾರದ್ ಜಮಾತ್ ಚಲಾಯೀ ವ್ಯಾಸ್ ನ ಟುಕಡಾ ಮಾಂಗ್ಯಾ ।
ವಸೀಷ್ಠ ವಿಶ್ವಾಮಿತ್ರ ಜ್ಞಾನೀ ಶಬ್ದ್ ಬಿಹಂಗಮ್ ಜಾಗ್ಯಾ ॥(50)

ಗರೀಬ್, ಕಬೀರ್ ಪುರುಷ್ ಕೈ ಬಾಲದ್ ಆಯೀ ನೌ ಲಖ್ ಬೋಡೀ ಲಾಹಾ ।
ಕೇಶವ್ ಸೇ ಬಣಜಾರೇ ಜಿಸ್ ಕೈ ದೇವೈಂ ಯಜ್ಞ್ ಜುಲಾಹಾ ॥(55)

ಭಾವಾರ್ಥ:– ಯಾರು ಸತ್ಯ, ಭಕ್ತಿ ಹಾಗೂ ಶಾಸ್ತ್ರಕ್ಕೆ ಅನುಸಾರವಾಗಿ ಇರುವುದಿಲ್ಲವೋ ಅವರು ತುಂಡು ರೊಟ್ಟಿಗಾಗಿ ನಾಯಿಯು ಅಲೆದಾಡುವಂತೆ ಅಲೆದಾಡುತ್ತಿರುತ್ತಾರೆ. ಸಾಧುಗಳು ಹಾಗೇ ಮಾಡಿದರೆ ಅವರ ಸಾಧನೆಯಲ್ಲಿ ಏನೋ ಕೊರತೆ ಇರುತ್ತದೆ. ಪರಮೇಶ್ವರ ಕಬೀರರು ತನ್ನ ದೈನಿಕ ಕೆಲಸವಾದ ನೇಯುವ ಕೆಲಸ ಮಾಡುತ್ತಿದ್ದರು. ಹಾಗೇ ಸತ್ಯ ಸಾಧನೆ ಮಾಡುತ್ತಾ, ಸತ್ಸಂಗ ಏರ್ಪಡಿಸುತ್ತಿದ್ದರು. ಸತ್ಯ ಭಕ್ತಿಯಿಂದ ಇರುವವರಿಗೆ ಪರಮಾತ್ಮನು ಹೇಗೆ ಸಹಾಯ

ಮಾಡುತ್ತಾನೆ ಎನ್ನುವುದನ್ನು ಸ್ವತಃ ಕಬೀರರು ಹೇಳಿದ್ದಾರೆ. ಅದರ ಕತೆ ಈ ರೀತಿ ಇದೆ.

## "ಕಬೀರ್ ಪರಮೇಶ್ವರರಿಂದ ಕಾಶೀ ನಗರದಲ್ಲಿ ಭೋಜನ ಅಂದರೆ ಧರ್ಮಯಜ್ಞದ ವ್ಯವಸ್ಥೆ"

ಶೇಖ್‌ತಖೀ ಎಂಬುವವನು ಮುಸಲ್ಮಾನರಿಗೆ ಮುಖಂಡನಾಗಿಯೂ, ಮುಖ್ಯ ಗುರುವಾಗಿಯೂ ಇದ್ದನು. ಅವನು ಮೊದಲಿನಿಂದಲೂ ಕಬೀರರನ್ನು ನೋಡಿ ಹೊಟ್ಟೆ ಉರಿದುಕೊಳ್ಳುತ್ತಿದ್ದನು. ಬ್ರಾಹ್ಮಣರನ್ನು ಮತ್ತು ಮುಲ್ಲಾ ಖಾಜಿಗಳನ್ನು ಎತ್ತಿ ಕಟ್ಟಿ ಕಬೀರರು ಒಬ್ಬ ದರಿದ್ರದವನೆಂದು ಹೇಳಿ ಕುತಂತ್ರ ಮಾಡಿದನು, ಎಲ್ಲರಿಗೂ ಕಬೀರನ ಹೆಸರಿನಲ್ಲಿ ಪತ್ರ ಬರೆಯಲು ಹೇಳುತ್ತಾ, ಕಬೀರ್ ಒಬ್ಬ ದೊಡ್ಡ ಸೇಠ್‌ಜೀ. ಅವನು ಇನ್ನು ಮೂರು ದಿನದಲ್ಲಿ ಒಂದು ಭೋಜನ ಕೂಟವನ್ನು ಏರ್ಪಡಿಸಲಿದ್ದಾನೆ. ಎಲ್ಲಾ ಸಾಧು ಸಂತರಿಗೆ ಸ್ವಾಗತ. ನಾನು ನೂರ್‌ಅಲಿ ಅಂಸಾರಿಯ ಮಗ ಕಬೀರ್. ನಾವು ಕಾಶಿಯ ನೇಕಾರರ ಬೀದಿಯಲ್ಲಿದ್ದೇವೆ. ಎಲ್ಲರೂ ದಯಮಾಡಿ ಬರಬೇಕು. ಊಟಕ್ಕೆ ಬರುವವರಿಗೆ ಪ್ರತಿಯೊಬ್ಬರಿಗೂ ಒಂದು ಬೆಲೆ ಬಾಳುವ ಕಂಬಳಿ ಮತ್ತು ಒಂದು ಚಿನ್ನದ ಕಾಸನ್ನು ಉಡುಗೊರೆಯಾಗಿ ಕೊಡುತ್ತೇವೆ. ಒಬ್ಬ ವ್ಯಕ್ತಿ ಎಷ್ಟುದಿನ, ಎಷ್ಟು ಹೊತ್ತು ಊಟ ಮಾಡುವನೋ, ಅಷ್ಟು ಸಾರಿ ಅವನಿಗೆ ಈ ಉಡುಗೊರೆ ಸಿಗುತ್ತದೆ. ಊಟದಲ್ಲಿ ಲಾಡು, ಜಿಲೇಬಿ, ಹಲ್ವಾ, ಪಾಯಸ, ವಡೆ, ರಸಗುಲ್ಲಾ ಮುಂತಾದ ಪಂಚಭಕ್ಷ್ಯ ಪರಮಾನ್ನಗಳಿರುತ್ತವೆ. ಹೀಗೆಲ್ಲಾ ಬರೆಯಬೇಕೆಂದು ಅವರನ್ನೆಲ್ಲಾ ಎತ್ತಿಕಟ್ಟಿದನು. ಶೇಖ್‌ತಖೀಯು ತನ್ನ ಹೆಸರಿಗೆ ಹಾಗೂ ದಿಲ್ಲಿಯ ರಾಜನಾದ ಸಿಕಂದರ್ ಲೋಧಿಗೆ ಪತ್ರ ಬರೆದು ಕಳುಹಿಸಿದನು, ನಿಶ್ಚಿತ ದಿನದ ಮುನ್ನಾದಿನದ ರಾತ್ರಿಯಿಂದಲೇ ಸಾಧು ಸಂತರು ಆಗಮಿಸತೊಡಗಿದರು. ಮರುದಿನವೇ ಭೋಜನ ಕೂಟ ಏರ್ಪಡುವುದಿತ್ತು. ನಂತರ ರವಿದಾಸರು ಕಬೀರರನ್ನು ಕುರಿತು ಹೀಗೆಂದರು, "ನಿಮ್ಮ ಹೆಸರಿನಿಂದ ಬಂದ ಪತ್ರ ಹಿಡಿದು 18 ಲಕ್ಷ ಸಾಧು ಸಂತರು ಮತ್ತು ಭಕ್ತರು ಕಾಶೀ ನಗರಕ್ಕೆ ಬಂದಿದ್ದಾರೆ. ನಾವು ಈಗ ಈ ಊರು ಬಿಟ್ಟು ಹೋಗಬೇಕಾಗಬಹುದು", ಕಬೀರ್‌ದಾಸರಿಗೆ ಎಲ್ಲವೂ ತಿಳಿದಿತ್ತು. ಆದರೂ ಏನೂ ತಿಳಿಯದವರಂತೆ, "ರವಿದಾಸರೆ, ನೀವು ಗುಡಿಸಿಲಿನ ಒಳಗೆಬಂದು ಕುಳಿತುಕೊಂಡು ಚಿಲಕ ಹಾಕಿಕೊಳ್ಳಿ. ಅವರೆಲ್ಲಾ ಹಾಗೆಯೇ ಹೊರಟು ಹೋಗುತ್ತಾರೆ. ನಾವು ಹೊರಗಡೆ ಬರುವುದಿಲ್ಲ." ಎಂದರು. ನಂತರ ಅವರು ಸತ್ಯಲೋಕಕ್ಕೆ ತೆರಳಿದರು. ಅಲ್ಲಿಂದ ಒಂಭತ್ತು ಲಕ್ಷ ಎತ್ತುಗಳ ಮೇಲೆ ಅಕ್ಕಿ, ಬೇಳೆ, ತುಪ್ಪ ಮುಂತಾದವುಗಳ ಮೂಟೆ ಹೊರೆಸಿ, ಭೂಮಿಗೆ ಬಂದರು. ಸತ್ಯಲೋಕದಿಂದಲೇ ಸೇವೆ ಮಾಡುವವರು ಬಂದರು. ಇತ್ತ ದಿಲ್ಲಿಯ ರಾಜ ಸಿಕಂದರ್‌ಲೋಧಿ ಮತ್ತು ಗುರು ಶೇಖ್‌ತಖೀನು ಬಂದರು. ಕಾಶಿಯಲ್ಲಿ ಭೋಜನಕೂಟ ಏರ್ಪಟ್ಟಿತು. ಎಲ್ಲರಿಗೂ ಊಟವಾದ ನಂತರ ಉಡುಗೊರೆಯೂ ಸಿಕ್ಕಿತು. ಕೆಲ ಕಳ್ಳ ಸಾಧುಗಳು 3–4 ಬಾರಿ ಊಟ ಮಾಡಿ 3–4 ಬಾರಿ ಉಡುಗೊರೆ ಪಡೆದರು.

ಇದನ್ನೆಲ್ಲಾ ನೋಡಿದ ಶೇಖ್‌ತಖೀ ಅಳುಮೋರೆ ಹಾಕಿಕೊಂಡನು. ನಂತರ ಸಿಕಂದರ್ ಲೋಧಿ ರಾಜನು ತಂಗಿದ್ದ ಟೆಂಟಿಗೆ ಹೋದನು, ಅಲ್ಲಿ ಕಬೀರ್ ಪರಮೇಶ್ವರರು ವೇಷ ಬದಲಿಸಿಕೊಂಡು ಕೇಶವ ಎಂಬ ಹೆಸರಿನಲ್ಲಿ ಅಲೆಮಾರಿ ವೇಷದಲ್ಲಿ ಕುಳಿತಿದ್ದರು. ರಾಜನು ಕಬೀರರನ್ನು ಕುರಿತು ನೀವ್ಯಾರು? ನಿಮ್ಮ ಹೆಸರೇನು? ನಿಮಗೂ ಕಬೀರರಿಗೂ ಏನು ಸಂಬಂಧ?" ಎಂದು ಕೇಳಿದನು. ಕೇಶವ ರೂಪದಲ್ಲಿದ್ದ ಪರಮಾತ್ಮ ಹೇಳಿದರು."ನನ್ನ ಹೆಸರು ಕೇಶವ, ನಾನೊಬ್ಬ ಅಲೆಮಾರಿ. ಕಬೀರರು ನನಗೊಂದು ಪತ್ರ ಬರೆದಿದ್ದರು. ಇಲ್ಲೊಂದು ಸಣ್ಣ ಭೋಜನಕೂಟ ಏರ್ಪಡಿಸಬೇಕಿದೆ. ಎಂದರು. ನಾನು ಈ ಸಾಮಾನುಗಳನ್ನೆಲ್ಲಾ ತಂದೆ. ಈ ಸೇವಕನು ಅವರ ಸೇವೆಗೆ ಎಂದೂ ಸಿದ್ಧ" ಎಂದರು. ಇದನ್ನು ಕೇಳಿದ ಶೇಖ್‌ತಖೀ ಅಳುವುದೊಂದೇ ಬಾಕಿ. ಒಂದು ಪುಟ್ಟ ಭೋಜನಕೂಟವೆಂದರೇನೇ 18 ಲಕ್ಷ ಜನರು ಬಂದಿದ್ದಾರೆ. ಪ್ರತಿಯೊಬ್ಬರಿಗೂ ಚಿನ್ನದ ನಾಣ್ಯ,

ಕಂಬಳಿ, ಗೋಧಿಹಿಟ್ಟು, ಬೇಳೆ, ಅಕ್ಕಿ, ತುಪ್ಪ ಎಲ್ಲವನ್ನೂ ಕೊಟ್ಟು ಕಳುಹಿಸುತ್ತಿದ್ದಾರೆ. ಎಂದು ಯೋಚಿಸುತ್ತಾ ಶೇಖ್‌ತಖೀ ವಿಶ್ರಾಂತಿ ಗೃಹಕ್ಕೆ ಹೊರಟುಹೋದನು. ಅಲ್ಲಿ ರಾಜ ತಂಗಿದ್ದನು. ರಾಜನು ಕೇಶವನನ್ನು ಕಬೀರರು ಏಕೆ ಬರಲಿಲ್ಲವೆಂದು ಕೇಳಿದನು. ಆಗ ಕೇಶವನು, "ಅವರ ಸೇವಕನೇ ಇಲ್ಲಿ ಹಾಜರಿರುವಾಗ ಅವರು ಕಷ್ಟವೇಕೆಪಡಬೇಕು? ಅವರಿಗೆ ಇಷ್ಟ ಬಂದಾಗ ಬರುತ್ತಾರೆ. ಈ ಕೂಟವಂತೂ ಮೂರು ದಿನ ನಡೆಯಲಿದೆ". ಎಂದನು. ಆಗ ಸಿಕಂದರ್ ಲೋಧಿ ಆನೆಯ ಮೇಲೇರಿ ಕಬೀರರ ಗುಡಿಸಲಿನ ಕಡೆಗೆ ಬಂದನು. ಆನೆಯಿಂದಿಳಿದು, ಬಾಗಿಲನ್ನು ಬಡಿಯುತ್ತಾ ಈ ರೀತಿ ಹೇಳಿದನು, "ಹೇ ಕಾಪಾಡುವವನೇ, ಬಾಗಿಲು ತೆಗೆ. ನಿಮ್ಮ ಮಗ ಸಿಕಂದರ್ ಬಂದಿದ್ದಾನೆ." ಆಗ ಕಬೀರ್ ಪರಮೇಶ್ವರರು ಹೇಳಿದರು, "ಹೇ ರಾಜ, ಕೆಲ ವ್ಯಕ್ತಿಗಳು ನನ್ನ ಹಿಂದೆ ಬಿದ್ದಿದ್ದಾರೆ. ದಿನವೂ ಒಂದಲ್ಲಾ ಒಂದು ಕುತಂತ್ರ ರಚಿಸಿ ನನ್ನನ್ನು ಗೋಳು ಹುಯ್ದುಕೊಳ್ಳುತ್ತಾರೆ. ಈ ದಿನ ಸುಳ್ಳು ಸುಳ್ಳು ಪತ್ರ ಬರೆದು ಲಕ್ಷಗಟ್ಟಲೆ ಜನರನ್ನು ಕರೆಸಿದ್ದಾರೆ. ನಾನು ಬಟ್ಟೆನೇಯ್ದು ನನ್ನ ಕುಟುಂಬವನ್ನು ಪಾಲಿಸುತ್ತಿರುವೆನು. ನನ್ನ ಬಳಿ ಭೋಜನ ಕೂಟ ಏರ್ಪಡಿಸಲು ಹಾಗೂ ಉಡುಗೊರೆ ದಕ್ಷಿಣೆ ನೀಡಲು ಹಣವಿಲ್ಲ, ನಾನು ಈ ರಾತ್ರಿ ಕುಟುಂಬ ಸಹಿತ ಕಾಶಿ ನಗರವನ್ನು ತ್ಯಜಿಸಿ ಎಲ್ಲಾದರೂ ದೂರ ಹೊರಟು ಹೋಗುತ್ತೇನೆ. ನಾನು ಬಾಗಿಲನ್ನು ತೆರೆಯಲಾರೆ." ಎಂದರು. ಆಗ ಸಿಕಂದರ್ ಲೋಧಿಯು, "ಹೇ ಸಮರ್ಥ ಪರಮಾತ್ಮ, ನಾನು ನಿಮ್ಮನ್ನು ಗುರುತಿಸಿದೆ. ನೀವು ನನ್ನನ್ನು ಯಾಮಾರಿಸಲಾರಿರಿ. ನೀವು ಮೈದಾನದಲ್ಲಿ ಭೋಜನ ಕೂಟವನ್ನು ಏರ್ಪಡಿಸಿರುವಿರಿ. ನಿಮ್ಮ ಮಿತ್ರನಾದ ಕೇಶವ ಬಂದಿದ್ದಾನೆ. ಅಪಾರವಾದ ಖಾದ್ಯ ಸಾಮಗ್ರಿಗಳನ್ನು ತಂದಿದ್ದಾನೆ. ಲಕ್ಷಗಟ್ಟಲೆ ಜನ ಊಟ ಮಾಡಿ ನಿಮ್ಮನ್ನು ಕೊಂಡಾಡುತ್ತಿದ್ದಾರೆ. ನಿಮ್ಮ ದರ್ಶನ ಪಡೆಯಲು ಆತುರರಾಗಿದ್ದಾರೆ. ಒಮ್ಮೆ ಬಾಗಿಲು ತೆಗೆದು ನಿಮ್ಮ ಗುಲಾಮನಾದ ಸಿಕಂದರನಿಗೆ ದರ್ಶನಕೊಡಿ" ಎಂದನು. ಆಗ ಕಬೀರರು ಸಂತ ರವಿದಾಸರನ್ನು ಕುರಿತು, 'ಬಾಗಿಲು ತೆಗೆ' ಎಂದರು. ಸಿಕಂದರ್ ಮಹಾರಾಜನು ಚಪ್ಪಲಿ ಕಳಚಿಟ್ಟು, ಕಿರೀಟ ಸಮೇತ ದೀರ್ಘದಂಡ ನಮಸ್ಕಾರ ಮಾಡಿ, ಕಾಶಿಯಲ್ಲಿ ನಡೆಯುತ್ತಿದ್ದ ಭೋಜನ ಕೂಟದಲ್ಲಿ ಪಾಲ್ಗೊಳ್ಳಲು ವಿನಂತಿಸಿದನು. ಕಬೀರರು ಹೊರಗೆ ಬಂದೊಡನೆ ಆಕಾಶದಿಂದ ಸುಂದರವಾದ ಕಿರೀಟವೊಂದು ಬಂದು ಅವರ ಶಿರವನ್ನು ಅಲಂಕರಿಸಿತು. ಆಕಾಶದಿಂದ ಪುಷ್ಪವೃಷ್ಟಿಯಾಯಿತು. ರಾಜನು ಅವರನ್ನು ಆನೆಯ ಮೇಲೆ ಹತ್ತುವಂತೆ ಪ್ರಾರ್ಥಿಸಿದನು. ಕಬೀರರು ರವಿದಾಸನನ್ನು ಜೊತೆಗೆ ಕರೆದುಕೊಂಡರು. ರಾಜ, ರವಿದಾಸ್ ಮತ್ತು ಪರಮಾತ್ಮ ಕಬೀರರು, ಈ ಮೂವರೂ ಆನೆಯ ಮೇಲೆ ಹತ್ತಿ ಭೋಜನ ಕೂಟದ ಜಾಗಕ್ಕೆ ಬಂದರು. ಎಲ್ಲರಿಗಿಂತ ಮೊದಲು ಕಬೀರರು ಸೇಠ್‌ರ ಪರಿಚಯ ಮಾಡಿಸಿದರು ಮತ್ತು ಕೇಶವನ ರೂಪದಲ್ಲಿ ಡಬಲ್ ರೋಲ್ ಮಾಡುತ್ತಾ ಅಲ್ಲಿ ನೆರೆದಿದ್ದ ಸಾಧು ಸಂತರ, ಭಕ್ತರ ಪ್ರಶ್ನೆಗಳಿಗೆ ಉತ್ತರಿಸುತ್ತಾ, ಸತ್ಸಂಗವನ್ನು ನೆರವೇರಿಸಿದರು. ಸತ್ಸಂಗವು 24 ಗಂಟೆಗಳವರೆಗೆ ನಡೆಯಿತು. ಲಕ್ಷಾಂತರ ಸಾಧುಗಳು ತಮ್ಮ ನಕಲಿ ಭಕ್ತಿಯನ್ನು ತ್ಯಜಿಸಿ, ಕಬೀರರಿಂದ ದೀಕ್ಷೆ ಪಡೆದರು. ತಮ್ಮ ಉದ್ಧಾರ ಮಾಡಿಕೊಂಡರು. ಭೋಜನಕೂಟ ಮುಗಿದ ನಂತರ ಉಳಿದ ಸಾಮಗ್ರಿಗಳನ್ನು ಎತ್ತುಗಳ ಮೇಲೆ ಹೇರಿಕೊಂಡು ಹೊರಟರು. ಆಗ ಸಿಕಂದರ್ ಲೋಧಿ, ಕೇಶವ್, ಶೇಖ್‌ತಕಿ ಮತ್ತು ಕಬೀರರು ಒಂದೆಡೆ ನಿಂತಿದ್ದರು. ಅವರೆಲ್ಲಾ ಹೊರಟ ನಂತರ ಸಿಕಂದರ್ ಲೋಧಿಯು ಕೇಶವನನ್ನು ಹೋಗಲು ಹೇಳಿದನು. ಸ್ವಲ್ಪ ಹೊತ್ತಿನ ನಂತರ ಸೇವಕರು ಮತ್ತು ಮೂಟೆ ಹೊತ್ತ ಎತ್ತುಗಳು ಹೋದ ಕಡೆ ಸಿಕಂದರ್ ನೋಡಿದಾಗ, ಅಲ್ಲಿ ಯಾರೂ ಕಾಣಲಿಲ್ಲ. ಆಶ್ಚರ್ಯಗೊಂಡು ರಾಜನು "ಕಬೀರ್‌ಜೀ, ಎತ್ತುಗಳು ಮತ್ತು ಅಲೆಮಾರಿಗಳು ಇಷ್ಟು ಬೇಗ ಎಲ್ಲಿಗೆ ಹೋದರು?" ಎಂದು ಕೇಳಿದನು. ಅಷ್ಟರಲ್ಲಿ ಕೇಶವ್ ಸಹ ಕಬೀರರ ಶರೀರದಲ್ಲಿ ಲೀನವಾದನು, ಕೇವಲ ಕಬೀರರು ಒಬ್ಬರೇ ನಿಂತಿದ್ದರು. ಇದನ್ನು ನೋಡಿದ ರಾಜನು, "ಹೇ ಪರಮಾತ್ಮ ಈ ಲೀಲೆಯೆಲ್ಲಾ ನಿನ್ನದೇ! ನೀವು ಸ್ವತಃ ದೇವರು" ಎಂದನು. ಆಗ

ಶೇಖ್‌ತಖೀಯ ಮೈಯೆಲ್ಲಾ ಉರಿಯಿತು. ಇಂಥಾ ನೂರಾರು ಯೋಜನ ಕೂಟಗಳನ್ನು ನಾನೆಷ್ಟು ನೋಡಿಲ್ಲ? ಇದೊಂದು ಭೋಜನ ಕೂಟವೇ? ದರಿದ್ರ! ಎಂದು ಮೂದಲಿಸಿದನು.

ಗರೀಬ್, ಕೋಯೀ ಕಹ್ ಜಗ್ ಜೌನಾರ್ ಕರೀ ಹೈ, ಕೋಯೀ ಕಹೆ ಮಹೌಭಾ ।
ಬಡೇ ಬಡಾಯೀ ಕಿಯಾ ಕರೇಂ, ಗಾಲೀ ಕಾಢೆ ಔಛಾ ॥

ಶಬ್ದಾರ್ಥ:– ಆ ಭೋಜನಕೂಟ ಅಂದರೆ ಭೋಜನ ಭಂಡಾರವನ್ನು ನೋಡಿ ಒಳ್ಳೆಯ ವ್ಯಕ್ತಿಗಳು ಏನು ಹೇಳುತ್ತಿದ್ದರೆಂದರೆ, ಜಗ್ ಜೌನಾರ್ ಎಂದರೆ ಮನಸ್ಸು ಬಿಚ್ಚಿ ಧರ್ಮಕ್ಕಾಗಿ ಹಣವನ್ನು ವ್ಯಯಿಸಿ, ಧರ್ಮದ ಕಾರ್ಯವನ್ನು ಮಾಡಿದ್ದಾನೆ. ಧರ್ಮಯಜ್ಞವನ್ನು ಮಾಡಿ ಊಟವನ್ನು ಉಣಬಡಿಸಿದ್ದಾನೆ ಎನ್ನುತ್ತಿದ್ದರು. ಅಹಂಕಾರಿ ದುಷ್ಟ ವ್ಯಕ್ತಿಗಳು ಮನಸ್ಸಿಗೆ ವಿರುದ್ಧವಾಗಿ ಕಡಿಮೆ ಖರ್ಚು ಮಾಡಿ ಭೊಜನ ಕೂಟವನ್ನು ಏರ್ಪಡಿಸಿದ್ದಾರೆ ಎಂದುಹೇಳುತ್ತಿದ್ದರು.

ಕಬೀರರು ಭಕ್ತರಿಗೆ ಉದಾಹರಣೆ ಸಹಿತ ವಿವರಿಸಿದ್ದಾರೆ, ನೀವು ನನ್ನ ಹಾಗೆ ಒಳ್ಳೆಯ ಮನಸ್ಸಿನಿಂದ ಭಕ್ತಿಯಿಂದ ಇದ್ದರೆ ಹಾಗೂ ಪ್ರಾಮಾಣಿಕತೆಯಿಂದ ಇದ್ದರೆ ಪರಮಾತ್ಮನು ನಿಮಗೆ ಸಹಾಯ ಮಾಡುವನು.

ನಿಜವಾದ ಭಕ್ತನೇ ನಿಜವಾದ ಧನವಂತ, ಭಕ್ತನ ಬಳಿ ಎರಡು ಆಸ್ತಿಗಳಿವೆ. ಒಂದು, ಪ್ರಪಂಚದಲ್ಲಿ ಬೇಕಾಗಿರುವ ಹಣವೆಂಬ ಧನ, ಎರಡನೆಯದು ಸತ್ಯ ಸಾಧನೆಯೆಂಬ ಧನ.

## "ಆ ಭೋಜನ ಕೂಟದಲ್ಲಿ ನಡೆದ ಇನ್ನೊಂದು ಚಮತ್ಕಾರ"

ಆ ಉತ್ಸವವು ಮೂರು ದಿನಗಳವರೆಗೆ ನಡೆಯಿತು. ಒಂದು ದಿನದಲ್ಲಿ ಪ್ರತೀ ವ್ಯಕ್ತಿಯು ಎರೆಡುಬಾರಿ ಊಟ ಮಾಡುತ್ತಿದ್ದನು. ಕೆಲವರು 3–4 ಸಾರಿ ಊಟಮಾಡುತ್ತಿದ್ದರು. ಏಕೆಂದರೆ ಪ್ರತಿ ಊಟವಾದ ನಂತರ ಒಂದು ಚಿನ್ನದ ನಾಣ್ಯ ಹಾಗೂ ಒಂದು ಕಂಬಳಿ ಕೊಡಲಾಗುತ್ತಿತ್ತು. ಈ ದುರಾಸೆಯಿಂದ ಮತ್ತೆ ಮತ್ತೆ ಊಟ ಮಾಡುತ್ತಿದ್ದರು. ಇಷ್ಟು ಜನರು ಒಂದೆಡೆ ಸೇರಿ ಮೂರುದಿನ ಇದ್ದರೆ ತಿಂದೂ ತಿಂದೂ ಶೌಚಕ್ಕೆ ಹೋಗಬೇಕಾದದ್ದು ಖಚಿತ. ಇಷ್ಟು ಜನ ಶೌಚಕ್ಕೆ ಹೋದರೆ ಕಾಶಿಯ ಸುತ್ತಲೂ ಮಲಿನದ ಗುಡ್ಡೆ ಏರ್ಪಡುತ್ತಿತ್ತು. ಕಾಶಿಯನ್ನು ಕೊಳೆತು ನಾರುವಂತೆ ಮಾಡುತ್ತಿತ್ತು. ಕಾಶಿ ನಿವಾಸಿಗಳು ಮತ್ತು ಆ 18 ಲಕ್ಷ ಅತಿಥಿಗಳಲ್ಲದೆ ಒಂದು ಲಕ್ಷ ಸ್ವಯಂಸೇವಕರ ಶೌಚದಿಂದ ಉಸಿರಾಡುವುದೇ ಕಷ್ಟವಾಗುತ್ತಿತ್ತು. ಆದರೆ ಈ ರೀತಿ ಆಗಲೇ ಇಲ್ಲ. ಎಲ್ಲರೂ 3–4 ಬಾರಿ ಊಟ ಮಾಡುತ್ತಿದ್ದರು. ಆದರೆ ಒಂದು ಬಾರಿಯೂ ಶೌಚಕ್ಕೆ ಹೋಗುತ್ತಿರಲಿಲ್ಲ. ತುಂಬಾ ಸ್ವಾದಿಷ್ಟವಾದ ಊಟವಾಗಿತ್ತು. ಎಲ್ಲರೂ ಹೊಟ್ಟೆ ಬಿರಿಯುವಷ್ಟು ತಿನ್ನುತ್ತಿದ್ದರು. ಮೊದಲಿಗಿಂತ ಎರಡರಷ್ಟು ಊಟ ಮಾಡುತ್ತಿದ್ದರು. ಆದರೆ, ಅವರಿಗೆ ಹೊಟ್ಟೆ ಉಬ್ಬರವಾಗಲಿಲ್ಲ ಹಾಗೂ ಹಸಿವೂ ಚೆನ್ನಾಗೇ ಆಗುತ್ತಿತ್ತು, ಆದ್ದರಿಂದ ಅವರಿಗೆ ತಾವು ರೋಗಿ ಅಲ್ಲ ತಾನೇ ಎಂಬ ಸಂದೇಹ ಮೂಡಿತು. ಸತ್ಯಲೋಕದಿಂದ ಬಂದ ಸ್ವಯಂ ಸೇವಕರಿಗೆ ಈ ವಿಷಯ ತಿಳಿಸಿದಾಗ ಅವರು, ಈ ಊಟವನ್ನು ಗಿಡ ಮೂಲಿಕೆಗಳನ್ನು ಸೇರಿಸಿ ತಯಾರಿಸಲಾಗಿದೆ. ಇದರಿಂದ ಶರೀರದಲ್ಲಿ ಊಟವು ಲೀನವಾಗುತ್ತದೆ" ಎಂದರು. ನಾವು ದಿನವೂ ಇಂಥಾ ಊಟವನ್ನೇ ತಯಾರಿಸಿ, ತಿನ್ನುತ್ತೇವೆ. ನಾವು ಎಂದಿಗೂ ಶೌಚಕ್ಕೆ ಹೋಗುವುದಿಲ್ಲ. ಬಹಿರ್ದೆಸೆಗೂ ಹೋಗುವುದಿಲ್ಲ. ನೀವು ನಿಶ್ಚಿಂತೆಯಿಂದ ಇರಿ, ಎಂದರು. ಆದರೂ ಇಷ್ಟು ಊಟ ಮಾಡಿದರೂ ಕೊಂಚವಾದರೂ ಮಲ ಹೊರಬರಲೇ ಬೇಕಲ್ಲಾ ಎಂದು ಅವರು ಚಿಂತಿಸುತ್ತಿದ್ದರು. ಆಗ ಇದ್ದಕ್ಕಿದ್ದಂತೆ ಬಹಿರ್ದೆಸೆಗೆ ಹೋಗಬೇಕೆನ್ನಿಸಿತು, ಏಕಾಂತ ಸ್ಥಳವನ್ನು ಹುಡುಕಿಕೊಂಡು ಹೋಗಿ ಬಹಿರ್ದೆಸೆಗೆ ಕುಳಿತರು. ಮಲವಂತೂ ಹೊರ ಬರಲಿಲ್ಲ. ಒಂದು ರೀತಿಯ ಸುಗಂಧಭರಿತ ವಾಯು ಹೊರಬಂದಿತು. ಆಗ ಸ್ವಯಂಸೇವಕರು ಹೇಳಿದ್ದು ನಿಜವೆಂದು ನಂಬಿದರು. ಆಗ ಅವರ ಭಯವೆಲ್ಲಾ ದೂರವಾಯಿತು. ಆದರೂ ಅವರ ಕಣ್ಣುಗಳಿಗೆ ಅಜ್ಞಾನದ ಪೊರೆ ಆವರಿಸಿತ್ತು. ಅವರು ಪರಮಾತ್ಮ ಕಬೀರರನ್ನು ಪರಮೇಶ್ವರರೆಂದು

ಸ್ವೀಕರಿಸಲಿಲ್ಲ.

ಪುರಾಣಗಳಲ್ಲೂ ಒಂದು ಪ್ರಕರಣವಿದೆ. ಅಯೋಧ್ಯೆಯ ರಾಜ ಋಷಭದೇವನು ರಾಜ್ಯವನ್ನು ತೊರೆದು ಕಾಡುಗಳಲ್ಲಿ ಸಾಧನೆ ಮಾಡುತ್ತಿದ್ದನು. ಅವನ ಭೋಜನವು ಸ್ವರ್ಗದಿಂದ ಬರುತ್ತಿತ್ತು. ಅವನ ಮಲದಿಂದ ಸುಗಂಧ ಸೂಸುತ್ತಿತ್ತು. ಅಕ್ಕ ಪಕ್ಕದಲ್ಲಿದ್ದ ಜನರು ಇದನ್ನು ನೋಡಿ ಆಶ್ಚರ್ಯಚಕಿತರಾಗುತ್ತಿದ್ದರು. ಇದೇ ರೀತಿ ಸತ್ಯಲೋಕದ ಆಹಾರ ತಿನ್ನುವುದರಿಂದ ಕೇವಲ ಸುಗಂಧವೇ ಹೊರ ಸೂಸುತ್ತದೆ, ಮಲವಲ್ಲ. ಸ್ವರ್ಗವಂತೂ ಸತ್ಯಲೋಕದ ಯಥಾವತ್ ಆಗಿರುತ್ತದೆ. ಆದರೆ ನಾಶವಾಗುವಂತಹದ್ದು.

**ಪ್ರಶ್ನೆ:– ಭಕ್ತಿಯಿಂದಿರಲು ಮನೆ ತ್ಯಜಿಸಿ ಹೋಗಬೇಕೋ ಅಥವಾ ಮನೆಯಲ್ಲೇ ಇದ್ದು ಭಕ್ತಿಯಿಂದ ಇರಬೇಕೋ?**

ಉತ್ತರ:– ಶಾಸ್ತ್ರವಿಧಿಯ ಪ್ರಕಾರ ಪೂರ್ಣಗುರುವಿನಿಂದ ದೀಕ್ಷೆಪಡೆದು ಭಕ್ತಿ, ಮರ್ಯಾದೆಯನ್ನು ನಿರ್ವಹಿಸುತ್ತಾ, ಜೀವನಪರ್ಯಂತ ಸಾಧನೆ ಮಾಡುವುದರಿಂದ ಮೋಕ್ಷ ಪ್ರಾಪ್ತಿಯಾಗುವುದು. ಮನೆ ಬಿಟ್ಟು ಕಾಡಿನಲ್ಲಿರಲು ಹೋದರೆ ಊಟಕ್ಕಾಗಿ ಮತ್ತೆ ಊರಿಗೆ ಬಂದು ಯಾರದಾದರೂ ಗೃಹಸ್ಥರ ಬಾಗಿಲುತಟ್ಟಬೇಕಾಗುವುದು. ಬಿಸಿಲು, ಮಳೆ, ಚಳಿ ಗಾಳಿಯಿಂದ ತಪ್ಪಿಸಿಕೊಳ್ಳಲು ಗುಡಿಸಲು ಕಟ್ಟಬೇಕಾಗಬಹುದು. ಬಟ್ಟೆ ಕೇಳಬೇಕು. ಮತ್ತೆ ಅಲ್ಲೇ ಇನ್ನೊಂದು ಮನೆ ಏರ್ಪಡುತ್ತದೆ. ಆದ್ದರಿಂದ "ಮನೆಯಲ್ಲೇ ಇದ್ದು ಸತ್ಯಸಾಧನೆ ಮಾಡಿ, ಮೋಕ್ಷ ಕಟ್ಟಿಟ್ಟ ಬುತ್ತಿ. ಮದುವೆಯಾಗಿರಲಿ, ಆಗದಿರಲಿ, ಎಲ್ಲರೂ ಭಕ್ತಿಯಿಂದ ಇದ್ದರೆ ಮೋಕ್ಷ ಪಡೆಯಬಹುದು. ಕೆಲವರು ಕೇವಲ ಬ್ರಹ್ಮಚಾರಿಗಳಾಗಿದ್ದರೆ ಮಾತ್ರ ಮೋಕ್ಷ ಲಭಿಸುವುದೆನ್ನುವರು, ನಾವು ಹೇಗಿದ್ದರೂ ಸತ್ಯ ಸಾಧನೆ ಮಾಡಿ ಮೋಕ್ಷ ಪಡೆಯಬಹುದು.

ಉದಾಹರಣೆ:– ಭಕ್ತ ಧ್ರುವ ಮತ್ತು ಭಕ್ತ ಪ್ರಹ್ಲಾದ ಇಬ್ಬರಿಗೂ ಮೋಕ್ಷ ಪ್ರಾಪ್ತಿಯಾಗಿದೆ ಎಂದು ಗೊತ್ತು. ಇವರಿಬ್ಬರಿಗೂ ಮದುವೆಯಾಗಿ ಮಕ್ಕಳಿದ್ದರು. ಪ್ರಹ್ಲಾದನ ಮಗ ಬೈರೋಚನ, ಮೊಮ್ಮಗ ಬಲಿ ಚಕ್ರವರ್ತಿ, ಇವನು ನೂರು ಯಜ್ಞಗಳನ್ನು ಮಾಡಿದ್ದನು. ಪರಮಾತ್ಮನು ವಾಮನನ ರೂಪದಲ್ಲಿ ಬಂದು ಮೂರು ಹೆಜ್ಜೆ ಜಾಗವನ್ನು ದಾನವಾಗಿ ಪಡೆದಿದ್ದನು. ಬ್ರಹ್ಮಚಾರಿಗಳು ಮಾತ್ರ ಮೋಕ್ಷ ಪಡೆಯುವರು ಎಂದಾದರೆ ಖೋಜಾಗಳು ಯಾವಾಗಲೂ ಬ್ರಹ್ಮಚಾರಿಗಳೇ? ಹಾಗಾದರೆ ಅವರಿಗೆಲ್ಲಾ ಮೋಕ್ಷ ಸಿಗುವುದೇ?

ಸತ್ಯ ಸಾಧನೆ ಮಾಡಿದರೆ ಖೋಜಾಗಳು, ಬ್ರಹ್ಮಚಾರಿಗಳು, ಗೃಹಸ್ಥರು, ಹೆಂಗಸರು, ಗಂಡಸರು ಎಲ್ಲರಿಗೂ ಮೋಕ್ಷ ಪ್ರಾಪ್ತಿಯಾಗುತ್ತದೆ. ಸಂತ ಗರೀಬ್‌ದಾಸರು ಹೇಳಿದ್ದಾರೆ.

ಗರೀಬ್, ಡೇರೆ ಡಾಂಡೈ ಖುಶ್ ರಹೋ, ಖುಸರೇ ಲಹೆಂ ನಾ ಮೋಕ್ಷ್ ।
ಧ್ರುವ್–ಪ್ರಹಲಾದ್ ಪಾರ್ ಹುಯೆ, ಫಿರ್ ಡೇರೇ (ಘರ್) ಮೆಂ ಕ್ಯಾ ದೋಷ್ ॥1॥

ಗರೀಬ್, ಕೇಲೇ ಕೀ ಕೋಪೀನ್ ಹೈ, ಫೂಲ್–ಪಾತ್–ಫಲ್ ಖಾಂಯೀ ।
ನರ್ ಕಾ ಮುಖ್ ನಹೀಂ ದೇಖ್‌ತೆ, ಬಸ್ತೀ ನಿಕಟ ನಹೀಂ ಜಾಯೀಂ ॥2॥

ಗರೀಬ್, ವೇ ಜಂಗಲ್ ಕೇ ರೋಝ್ ಹೈಂ, ಜೋ ಮನುಷ್ಯೋಂ ಬಿದಕೇ ಜಾಹೀಂ ।
ನಿಶ್ ದಿನ್ ಫಿರೋ ಉಜಾಡ್ ಮೆಂ, ಯೂಂ ಸಾಂಯೀ ಪಾವೈ ನಾಹೀಂ ॥3॥

ಗರೀಬ್, ಗಾಡೀ ಬಾಹೋ ಘರ್ ರಹೋ, ಖೇತೀ ಕರೋ ಖುಶ್‌ಹಾಲ್ ।
ಸಾಯೀ ಸಿರ್ ಪರ್ ರಾಖಿಯೇ, ಸಹೀ ಭಕ್ತ್ ಹರ್‌ಲಾಲ್ ॥4॥

ವಾಣಿ ಸಂಖ್ಯೆ 2–3ರ ಭಾವಾರ್ಥ:– ನಾವು ಸಂತರ ಹುಡುಕಾಟದಲ್ಲಿ ಬೆಟ್ಟ ಗುಡ್ಡ ಕಾಡುಮೇಡು ಅಲೆದಿದ್ದೇವೆ ಎಂದು ಕೆಲವರು ಹೇಳುತ್ತಿದ್ದರು.

ಒಂದು ಕಾಡಿನಲ್ಲಿ ಒಬ್ಬ ಸಾಧು ಇದ್ದನು. ಆ ಸಾಧುವು ಬಾಳೆ ಎಲೆಯನ್ನು ಲಂಗೋಟಿಯಂತೆ ಧರಿಸುತ್ತಾನೆ ಹಾಗೂ ಕಾಡಿನಲ್ಲಿ ಎಲೆ, ಹೂವು ಹಣ್ಣುಗಳನ್ನು ತಿನ್ನುತ್ತಾನೆ ಎಂದು ಅಲ್ಲಿಯ ಸುತ್ತಮುತ್ತಲಿನ ಜನರೆಲ್ಲಾ ಹೇಳುತ್ತಿದ್ದರು. ಹಳ್ಳಿಯ ಹತ್ತಿರವೂ ಅವನು ಸುಳಿಯುತ್ತಿರಲಿಲ್ಲ. ಮನುಷ್ಯರ ಮುಖವನ್ನೇ ನೋಡುತ್ತಿರಲಿಲ್ಲ, ನೋಡಿದಾಕ್ಷಣ ಒಂದೇ ಉಸಿರಿಗೆ ಓಡಿಹೋಗಿ ಕಾಡನ್ನು ಸೇರುತ್ತಿದ್ದ, ಯಾರಿಗೆ ಅವನ ದರ್ಶನವಾಗುವುದೋ ಅವರಿಗೆ ಅದೃಷ್ಟ ಖುಲಾಯಿಸುತ್ತದೆ ಎಂದು ಜನರೆಲ್ಲಾ ಹೇಳುತ್ತಿದ್ದರು. ಅವನ ದರ್ಶನಕ್ಕಾಗಿ ಎಷ್ಟೋ ದಿನ ಜನರು ಕಾಡಿಗೆ ಬೆಳಿಗ್ಗೆ ಹೋಗಿ ಹುಡುಕಿ, ಹುಡುಕಿ ಸಂಜೆ ಮರಳಿ ಬರುತ್ತಿದ್ದರು. ಒಂದು ದಿನ ಓಡಿ ಹೋಗುತ್ತಿರುವ ಸಾಧು ಕಂಡನು. ಅವನ ಬೆನ್ನು ಮಾತ್ರ ಕಾಣಿಸಿತು. ದರ್ಶನವಾಗುತ್ತಿದ್ದಂತೆ ಮಾಯವಾಗಿ ಹೋದನು. ಇಲ್ಲಿ ಯೋಚಿಸಬೇಕಾದ ವಿಷಯವೆಂದರೆ, ಆ ವ್ಯಕ್ತಿ ಅಪರಾಧಿಯಾಗಿದ್ದು, ಪೋಲಿಸರಿಂದ ತಪ್ಪಿಸಿಕೊಳ್ಳಲು ಈ ರೀತಿ ನಾಟಕವಾಡುತ್ತಿರಬೇಕಲ್ಲವೇ? ಗರೀಬ್‌ದಾಸರು ಇಂಥಾ ವ್ಯಕ್ತಿಯನ್ನು ನೀಲ್‌ಗಾಯ್ ಎಂಬ ಪ್ರಾಣಿಗೆ ಹೋಲಿಸಿದ್ದಾರೆ. ಈ ಪ್ರಾಣಿಯು ಮನುಷ್ಯರನ್ನು ನೋಡಿದಾಕ್ಷಣ ಹೆದರಿ, ಓಡುತ್ತಿರುತ್ತವೆ. ಇಂಥಾ ವ್ಯಕ್ತಿಗಳು ಹಗಲಿರುಳೂ ಕಾಡಿನಲ್ಲಿದ್ದರೂ ಪರಮಾತ್ಮನು ಪ್ರಾಪ್ತಿಯಾಗುವುದಿಲ್ಲ.

ಗರೀಬ್, ಗಾಡೀ ಬಾಹೋ ಘರ್ ರಹೋ, ಖೇತೀ ಕರೋ ಖುಶ್‌ಹಾಲ್ ।
ಸಾಯೀ ಸಿರ್ ಪರ್ ರಾಖಿಯೇ, ಸಹೀ ಭಕ್ತ್ ಹರ್‌ಲಾಲ್ ॥

ಭಾವಾರ್ಥ:–

## "ಹರ್‌ಲಾಲ್ ರೈತನ ಕತೆ"

ಹರಿಯಾಣ ರಾಜ್ಯದ ಜಜ್ಜರ್ ಜಿಲ್ಲೆಯ ಬೆರಿ ಎಂಬ ಹಳ್ಳಿಯಲ್ಲಿ ಒಬ್ಬ ಹರ್‌ಲಾಲ್ ಎಂಬ ರೈತನಿದ್ದನು. ಅವನು ಧಾರ್ಮಿಕನಾಗಿದ್ದನು. ಅವನ ಕುಟುಂಬದವರೆಲ್ಲರೂ ಧಾರ್ಮಿಕರಾಗಿದ್ದರು. ಸಂತನ ವೇಷದಲ್ಲಿ ಒಬ್ಬ ವ್ಯಕ್ತಿಯು ಆ ಊರಿಗೆ ಬಂದು ಒಂದು ಧರ್ಮಛತ್ರದಲ್ಲಿ ತಂಗಿದ್ದನು. ಕೆಲವು ದಿನ ಸತ್ಸಂಗ ನಡೆಸಿದನು. ಹರ್‌ಲಾಲ್ ಅವನ ಪರಿಚಯ ಕೇಳಿದಾಗ, ಅವನಿಗೆ ಯಾರೂ ಇಲ್ಲವೆಂದು ತಿಳಿಯಿತು. ಬಾಲ್ಯದಲ್ಲೇ ತಂದೆ ತಾಯಿಯರು ತೀರಿಕೊಂಡಿದ್ದರು. ಹಾಗಾಗಿ ಆ ವ್ಯಕ್ತಿಯನ್ನು ತಮ್ಮ ಮನೆಯಲ್ಲಿರುವಂತೆ ಹರ್‌ಲಾಲರು ಒತ್ತಾಯಿಸಿದರು. ರಾತ್ರಿಯ ಸೇವೆ ಸಿಗುವುದು ಹಾಗೂ ಭಕ್ತಿಯಿಂದಿರಲು ಸಮಯ ಸಿಗುವುದೆಂದು ಹೇಳಿದಾಗ ಆ ವ್ಯಕ್ತಿಯು ಒಪ್ಪಿಕೊಂಡನು. ಹರ್‌ಲಾಲರಿಗೆ ಎರಡು ಮನೆಗಳಿದ್ದವು. ಒಂದರಲ್ಲಿ ಅವರ ಕುಟುಂಬದವರು ಇರುತ್ತಿದ್ದರು. ಇನ್ನೊಂದು ಮನೆ ಸ್ವಲ್ಪ ದೂರದಲ್ಲಿತ್ತು. ಅಲ್ಲಿ ಪಶು ಪಕ್ಷಿಗಳನ್ನು ಸಾಕಿದ್ದರು. ಆ ಮನೆಯ ಮಹಡಿಯ ಮೇಲೆ ಆ ವ್ಯಕ್ತಿಗೆ ಜಾಗ ಕಲ್ಪಿಸಲಾಯಿತು. ಇಡೀ ಕುಟುಂಬ ಆ ವ್ಯಕ್ತಿಯ ಸೇವೆ ಮಾಡತೊಡಗಿದರು. 2–3 ಹೊತ್ತು ಊಟ ನೀಡುತ್ತಿದ್ದರು. ಹೀಗೆ ಕೆಲ ವರ್ಷಗಳ ನಂತರ ಆ ವ್ಯಕ್ತಿ ಅಲ್ಲೇ ತೀರಿಕೊಂಡನು. ಅವನ ಸಂಸ್ಕಾರವನ್ನು ಮಾಡಿ, ಅವನ ಸ್ಮಾರಕವನ್ನು ಹೊಲದಲ್ಲಿ ಸ್ಥಾಪಿಸಲಾಯಿತು. ಟ್ರಕ್ ಅಥವಾ ಕ್ಯಾಂಟರ್‌ನಲ್ಲಿ ಮಾಲನ್ನು ಒಂದು ಮಂಡಿಯಿಂದ ಇನ್ನೊಂದು ಮಂಡಿಗೆ ಬಾಡಿಗೆಗೆ ಹೊತ್ತೊಯ್ಯುವಂತೆ ಹೊರಲಾಲರು. ತಮ್ಮ ಎತ್ತಿನ ಗಾಡಿಯಲ್ಲಿ ಸಾಮಾನುಗಳನ್ನು ಸಾಗಿಸುವ ಕೆಲಸ ಮಾಡುತ್ತಿದ್ದರು. 10.30ರ ಸಮಯ. ಎತ್ತಿನಗಾಡಿಗಳಲ್ಲಿ ಸಕ್ಕರೆ, ಅಕ್ಕಿ, ಗೋಧಿ, ನವಣೆ, ಜೋಳ, ಬೆಲ್ಲ ಮುಂತಾದವುಗಳನ್ನು ಬಾಡಿಗೆ ಆಧಾರದ ಮೇಲೆ ಸಾಗಿಸುತ್ತಿದ್ದರು. ಬೇರೆ ಹಳ್ಳಿಯಿಂದ ನಜಫ್‌ಗಡ್‌ಗೆ ಹೋಗಬೇಕಾದರೆ ಛುಡಾನಿ ಎನ್ನುವ ಹಳ್ಳಿಯ ಮೂಲಕ ಹೋಗಬೇಕಿತ್ತು. ಹರಲಾಲರ ಒಂದು ಎತ್ತು ಬಿಳಿ ಬಣ್ಣದ್ದಾಗಿತ್ತು ಮತ್ತು ಬಹಳ ದುರ್ಬಲವಾಗಿತ್ತು. ಮಾರ್ಗ ಮಧ್ಯೆ ಅಲ್ಲಲ್ಲಿ ಕೂತುಬಿಡುತ್ತಿತ್ತು. ಒಂದು ದಿನ ಬಿಸಿಲಕಾಲದಲ್ಲಿ ಬೆಳಗ್ಗಿನ ಜಾವ ನಾಲ್ಕು ಗಂಟೆಗೆ ಛುಡಾನಿ ಹಳ್ಳಿಯ ಸ್ವಲ್ಪ ದೂರದ ಒಂದು ಬಾವಿಯ ಬಳಿ ಆ ಎತ್ತು ಕೂತುಬಿಟ್ಟಿತು. ಹರಲಾಲರು ಕೋಲಿನಿಂದ ಅದಕ್ಕೆ ಹೊಡೆಯಲಾರಂಭಿಸಿದರು. ಆ ಬಾವಿಯ ಬಳಿ ಸಂತ ಗರೀಬ್‌ದಾಸರು

ಸ್ನಾನ ಮಾಡುತ್ತಿದ್ದರು. ಅದನ್ನು ನೋಡಿ ಎತ್ತಿಗೆ ಹೊಡಿಯಬೇಡವೆಂದು ಹರಲಾಲಗೆ ತಿಳಿಸಿದರು, ಗರೀಬ್‌ದಾಸರು ಒಬ್ಬ ರೈತರಾಗಿದ್ದರು. ಅವರು ಹರಿಯಾಣದ ಸಾಧಾರಣವಾದ ಪಂಚೆ ಕುರ್ತ ಧರಿಸಿದ್ದರು. ಹರಲಾಲರೆಂದರು, "ಸಹೋದರ, ನೋಡು ಇದು ನನ್ನನ್ನು ಗೋಳು ಹುಯ್ದುಕೊಳ್ಳುತ್ತಿದೆ. ಅರ್ಧ ಮೈಲಿ ನಡೆಯುತ್ತದೆ, ಹಾಗೇ ಕೂತು ಬಿಡುತ್ತದೆ". ಆಗ ಸಂತ ಗರೀಬ್‌ದಾಸರು ಆ ಎತ್ತಿನ ಬಳಿ ಹೋಗಿ ಅದರ ಕಿವಿಯಲ್ಲಿ ಏನೋ ಹೇಳಿದರು. ತಕ್ಷಣವೇ ಆ ಎತ್ತು ಎದ್ದು ನಿಂತುಕೊಂಡಿತು. ಸಂತ ಗರೀಬ್‌ದಾಸರು, ಈಗ ಈ ಎತ್ತು ಸರಿಯಾಗಿ ನಡೆಯುತ್ತದೆ ಎಂದು ಹೇಳಿದರು. ಹರಲಾಲರಿಗೆ ನಂಬಿಕೆಯಾಗಲಿಲ್ಲ. ಗಾಡಿ ತೆಗೆದುಕೊಂಡು ಹೊರಟರು. ಆ ಬಿಳಿ ಎತ್ತು ಇನ್ನೊಂದು ಎತ್ತಿಗಿಂತ ವೇಗವಾಗಿ ಹೊರಡಲಾರಂಭಿಸಿತು. ಛುಡಾನಿಯಿಂದ ಬೇರಿಯವರೆಗೆ ಒಮ್ಮೆಯೂ ಕುಳಿತುಕೊಳ್ಳಲಿಲ್ಲ. ಹರಲಾಲರಿಗೆ ಸಂತೋಷದ ಜೊತೆಗೆ ಆಶ್ಚರ್ಯವೂ ಆಯಿತು. ಈ ವಿಷಯವನ್ನು ಮನೆಯವರಿಗೆ ತಿಳಿಸಿದರೆ ಅವರೂ ನಂಬಲಿಲ್ಲ. ನಂತರ ಹರಲಾಲರು ಛುಡಾನಿ ಹಳ್ಳಿಗೆ ತೆರಳಿದರು. ಅವರು ಸ್ನಾನ ಮಾಡುತ್ತಿದ್ದ ವ್ಯಕ್ತಿಯ ಹೆಸರನ್ನು ಕೇಳಿರಲಿಲ್ಲ. ಮತ್ತೆ ಅವರು ಛುಡಾನಿಗೆ ಹೋಗಿ ವಿಚಾರಿಸಿದರು. ಪ್ರತಿದಿನವೂ ಸ್ನಾನಕ್ಕಾಗಿ ಅಲ್ಲಿಗೆ ಬರಬಹುದೆಂದು ತಿಳಿದರು. ಆದ್ದರಿಂದ ಮರುದಿನ ಬೆಳಗ್ಗಿನ ನಾಲ್ಕು ಗಂಟೆಗೆ ಎದ್ದು ಆ ಬಾವಿಯ ಬಳಿ ತೆರಳಿದರು. ಆಗ ಗರೀಬ್‌ದಾಸರು ಸಿಕ್ಕಿ, "ಹೇ ಸಹೋದರ, ಆ ಎತ್ತಿನ ಬಗ್ಗೆ ಕೇಳಲು ಬಂದಿರುವೆಯಾ?" ಎಂದು ಕೇಳಿದರು. ಹರಲಾಲರು "ನಿಮ್ಮಲ್ಲಿ ಏನು ಮುಚ್ಚು ಮರೆ? ನೀವು ಆ ಎತ್ತಿಗೆ ಏನು ಜಾದೂ ಮಾಡಿದಿರಿ? ಆ ಎತ್ತು ಎಲ್ಲರಿಗಿಂತ ವೇಗವಾಗಿ ನಡೆಯುತ್ತಿದೆ" ಎಂದರು. ಆಗ ಗರೀಬ್‌ದಾಸರು ಕೇಳಿದರು. "ನಿಮ್ಮ ಮನೆಯಲ್ಲಿ ಒಬ್ಬ ಸಾಧುವಿದ್ದನು. ಅವನು ಈಗ ಹೇಗಿದ್ದಾನೆ? ನಾನು ಅವನನ್ನು ಭೇಟಿಯಾಗಿದ್ದೆ, ಆಗ ನೀವು ಗಾಡಿ ತೆಗೆದುಕೊಂಡು ಹೋಗುತ್ತಿದ್ದಿರಿ" ಎಂದರು. ಆಗ ಹರಲಾಲರು "ಆ ವ್ಯಕ್ತಿ ನಾಲ್ಕು ವರ್ಷಗಳ ಮೊದಲೇ ದೇಹ ತ್ಯಜಿಸಿದ್ದಾನೆ. ಅವನ ನೆನಪಿಗೆ ಒಂದು ಸ್ಮಾರಕವನ್ನೂ ಸ್ಥಾಪಿಸಿದ್ದೇನೆ" ಎಂದರು. ಆಗ ಗರೀಬ್‌ದಾಸರು, ಈ ಎತ್ತು ಅದೇ ಮೋಸಗಾರ ಬಾಬಾ. ನಾನು ಅದರ ಬಳಿ ಜ್ಞಾನದ ಚರ್ಚೆ ಮಾಡಿದೆ. ಹಾಗೂ ನಿಮ್ಮ ಭಕ್ತಿ ನಿಜವಾದುದಲ್ಲ. ನೀವು ಬರೀ ತಿನ್ನುತ್ತೀರಾ, ಮಲಗುತ್ತೀರಾ, ಪರಮಾತ್ಮನ ಆಸ್ಥಾನದಲ್ಲಿ ಲೆಕ್ಕವಿರುತ್ತದೆ. ಅದು ನಿಮಗೆ ನಂತರ ತಿಳಿಯುತ್ತದೆ. ಈಗ ಕೂತು ತಿಂದರೆ ಮುಂದೆ ತೀರಿಸಬೇಕಾಗುತ್ತದೆ' ಎಂದು ಹೇಳಿದೆ.

ಗರೀಬ್, ನರ್ ಸೇ ಫಿರ್ ಪಶುವಾ ಕೀಜೈ, ಗಧಾ–ಬೈಲ್ ಬನಾಯ್ ।
ಛಪ್ಪನ್ ಭೋಗ್ ಕಹಾಂ ಮನ್ ಬೋರೇ, ಕುರಡೀ ಚರನೇ ಜಾಯ್ ॥

ಆದರೆ ಅವನು ಕೋಪಗೊಂಡು ಹೇಳಿದ, ನಾನು ಬಾಲ ಬ್ರಹ್ಮಚಾರಿ, ನೀವು ಗೃಹಸ್ಥ. ಇಲ್ಲಿಂದ ಮೊದಲು ಹೊರಡಿ, ಒಬ್ಬ ಸಾಧುವಿಗೆ ಹೇಳಿ ಕೊಡಲು ಬರಬೇಡಿ ಎಂದನು.

ಕಬೀರ್, ರಾಮ್ ನಾಮ್ ಸೇ ಖಿಜ್ ಮರ್ರೈಂ, ಕುಷ್ಟಿ ಹೋ ಗಲ್ ಜಾಯ್ ।
ಶುಕರ್ ಹೋಕರ್ ಜನ್ಮ್ ಲೇ, ನಾಕ್ ಡೂಬತಾ ಖಾಯ್ ॥

ಭಾವಾರ್ಥ:– ಕಬೀರರು ಹೇಳಿದ್ದಾರೆ, ಅಹಂಕಾರದ ವ್ಯಕ್ತಿಗಳು ರಾಮನಾಮದ ಚರ್ಚೆಯಿಂದ ವಿಮುಖರಾಗುತ್ತಾರೆ ಅವರು ಕುಷ್ಟರೋಗದಿಂದ ನರಳಿ ನರಳಿ ಸಾಯುತ್ತಾರೆ. ಮುಂದಿನ ಜನ್ಮದಲ್ಲಿ ಹಂದಿಯಾಗಿ ಹುಟ್ಟಿ ಹೊಲಸು ತಿನ್ನುತ್ತಾರೆ. ಹಂದಿಯ ಮೂಗೂ ಸಹ ಹೊಲಸಿನಿಂದ ತುಂಬಿರುತ್ತದೆ. ಹೀಗೆ ಮನುಷ್ಯನು ಕಷ್ಟ ಪಡಬೇಕಾಗುತ್ತದೆ. ಯಾರು ಭಕ್ತಿಯಿಂದ ಇರುವುದಿಲ್ಲವೋ ಅಥವಾ ಡೋಂಗಿ ಬಾಬಾಗಳಾಗುತ್ತಾರೋ ಅವರಿಗೆ ಇದೇ ಗತಿ.

"ಹೇ ಹರಲಾಲ್, ನಾನು ಆ ಎತ್ತಿನ ಕಿವಿಯಲ್ಲಿ ಅದನ್ನೇ ಹೇಳಿದೆ. ಅದಕ್ಕೆ ಹೀಗೆ ಹೇಳಿದೆ. ಹೇ ಜೀವವೇ! ನೀನು ಆ ರೈತನ ಸಾಲ ತೀರಿಸಬೇಕಾಗುತ್ತದೆ. ಏಟು ತಿಂದಾದರೂ ತೀರಿಸು ಅಥವಾ ಸಂತೋಷದಿಂದಲಾದರೂ ತೀರಿಸು. ಅದು ನಿನ್ನನ್ನು ಬಿಡುವುದಿಲ್ಲ." ಎಂದು ಹೇಳಿದೆ. ಆಗ ಎತ್ತಿನ

ವೇಷದಲ್ಲಿದ್ದ ನಕಲಿ ಬಾಬಾಗೆ ನನ್ನ ಮಾತು ಅರ್ಥವಾಯಿತು. ಯಾವುದೋ ಜನ್ಮದಲ್ಲಿ ಪರಮೇಶ್ವರ ಕಬೀರರ ಶಿಷ್ಯನಾಗಿದ್ದ. ಆದರೆ ನಂತರ ಕೆಟ್ಟ ಚಾಳಿ ಅಂಟಿಕೊಂಡಿತ್ತು. ಹಾಗಾಗಿ ಒಳ್ಳೆಯ ದಾರಿ ಬಿಟ್ಟು ಹೋಗಿದ್ದಕ್ಕೆ ಕಷ್ಟ ಪಡಬೇಕಾಯಿತು. ಇನ್ನು ಮುಂದೆ ಈ ಎತ್ತು ಎಂದಿಗೂ ಕೂರುವುದಿಲ್ಲ" ಎಂದರು. ಹರ್‌ಲಾಲರು ಗರೀಬ್‌ದಾಸರ ಕಾಲಿಗೆ ಬಿದ್ದು ಹೇಳಿದರು, "ಸಂತ ಮಹಾರಾಜರೇ, ನನ್ನನ್ನು ನಿಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳಿ. ನಾನು ಮನೆ ಮಠ ಬಿಟ್ಟು ನಿಮ್ಮ ಜೊತೆ ಇರುತ್ತೇನೆ. ನನ್ನ ಕಣ್ಣು ತೆರೆಯಿತು. ಭಕ್ತಿಯಿಂದ ಇರದಿದ್ದರೆ ಜೀವವು ಎಷ್ಟು ಕಷ್ಟ ಪಡುತ್ತದೆ ಎಂದು ತಿಳಿಯಿತು ಎಂದರು. ಆಗ ಗರೀಬ್ ದಾಸರು ಹೇಳಿದರು,

ಗರೀಬ್, ಗಾಡೀ ಬಾಹೋ ಘರ್ ರಹೋ, ಖೇತೀ ಕರೋ ಖುಶ್‌ಹಾಲ್ ।
ಸಾಯೀ ಸಿರ್ ಪರ್ ರಾಖಿಯೇ, ಸಹೀ ಭಗತ್ ಹರ್‌ಲಾಲ್ ॥

**ಭಾವಾರ್ಥ:–** ಪರಮಾತ್ಮನ ಪ್ರಾಪ್ತಿಗಾಗಿ ಮನೆ ಬಿಡುವ ಅವಶ್ಯಕತೆ ಇಲ್ಲ. ನಿಮ್ಮ ವ್ಯವಸಾಯ ಮತ್ತು ಟ್ರಾನ್ಸ್‌ಪೋರ್ಟ್ ಕೆಲಸವನ್ನು ಸಂತೋಷದಿಂದ ಮಾಡಿ ಮನೆಯಲ್ಲೇ ಇರಿ. ಪರಮಾತ್ಮನನ್ನು ಆರಾಧಿಸುವ ವಿಧಾನವನ್ನು ನಾನು ತಿಳಿಸಿಕೊಡುವೆ. ಅದನ್ನು ಮಾಡುತ್ತಿರಿ. ಆಗ ನೀವು ನಿಜವಾದ ಭಕ್ತನೆನ್ನಿಸಿಕೊಳ್ಳುವಿರಿ.

ಗರೀಬ್, ನಾಮ್ ಉಠತ್ ನಾಮ್ ಬೈಠತ್, ನಾಮ್ ಸೋವತ್ ಜಾಗ್ ರೇ ।
ನಾಮ್ ಖಾತೇ ನಾಮ್ ಪೀತೇ, ನಾಮ್ ಸೇತೀ ಲಾಗ್ ರೇ ॥

**ಇದೇ ಯಜುರ್ವೇದದ 40ನೇ ಅಧ್ಯಾಯದ 15ನೇ ಶ್ಲೋಕದಲ್ಲಿ ಹೇಳಿದೆ :–**

ವಾಯು ಅನಿಲಮ್ ಅಥಯಿದಮ್ ಅಮೃತಮ್ ಭಸ್ಮಂತಮ್ ಶರೀರಂ ।
ಓಮ್ ಕೃತು ಸ್ಮರ್ ಕಿಲವೇ ಸ್ಮರ್ ಕೃತಮ್ ಸ್ಮರ್ ॥

**ಭಾವಾರ್ಥ:–** ಸಂತ ಗರೀಬ್‌ದಾಸರು ಹೇಳಿದ್ದಾರೆ, ಯಾವ ಸತ್ಯ ಸಾಧನೆಯ ಸತ್ಯ ಮಂತ್ರವನ್ನು ನಾನು ನಿಮಗೆ ನೀಡುವೆನೋ, ಅದನ್ನು ನೀವು ತಿನ್ನುತ್ತಾ, ಕುಡಿಯುತ್ತಾ, ಎದ್ದಾಗ, ಜಪಿಸುತ್ತಿರಿ. ಬೆಳಿಗ್ಗೆ ನಿದ್ದೆಯಿಂದ ಎದ್ದಾಗ ಜಪಿಸಿ. ಮಲಗುವ ಮುಂಚೆ ಜಪಿಸಿ, ಕುಳಿತಾಗ, ಎದ್ದಾಗ ಪರಮಾತ್ಮನ ಹೆಸರನ್ನು ಜಪಿಸಿ. ಈ ರೀತಿ ಸ್ಮರಣೆಯೂ ಆಗುತ್ತದೆ, ಕೆಲಸವೂ ಆಗುತ್ತದೆ. ಕೆಲವು ಹಳ್ಳಿಗಳಲ್ಲಿ ಜನರು ದಿನವೆಲ್ಲಾ ಇಸ್ಪೀಟು ಆಡುತ್ತಾರೆ. ಬೀಡಿ, ಸಿಗರೇಟ್ ಸೇದುತ್ತಿರುತ್ತಾರೆ, ರಾಜಕೀಯದ ಮಾತನ್ನಾಡುತ್ತಿರುತ್ತಾರೆ ಅಥವಾ ಯಾರನ್ನಾದರೂ ನಿಂದಿಸುತ್ತಿರುತ್ತಾರೆ, ಸಿನೆಮಾ ನೋಡುತ್ತಾ ಸಮಯವನ್ನು ವ್ಯರ್ಥವಾಗಿ ಕಳೆಯುತ್ತಾರೆ. ಇದರ ಬದಲಾಗಿ ಸತ್ಸಂಗಕ್ಕೆ ಹೋಗಿ ಬರುವುದರಿಂದ ಮುಕ್ತಿ ಪ್ರಾಪ್ತವಾಗುತ್ತದೆ.

ಶ್ರೀ ಹರ್‌ಲಾಲರು ದೀಕ್ಷೆ ಪಡೆದು ಮನೆಗೆ ಬಂದರು. ಮನೆಯವರಿಗೆಲ್ಲಾ ಈ ಮಾತನ್ನು ತಿಳಿಸಿದರು. ನಕಲಿ ಬಾಬಾನ ಸ್ಮಾರಕವನ್ನು ಕೆಡವಿಹಾಕಿದರು. ಇಡೀ ಕುಟುಂಬವನ್ನು ಛುಡಾನಿಗೆ ಕರೆದೊಯ್ದರು. ಸಂಜೆ ಗರೀಬ್‌ದಾಸರಿಂದ ದೀಕ್ಷೆ ಕೊಡಿಸಿದರು. ತನ್ನ ಮತ್ತು ತನ್ನ ಕುಟುಂಬಕ್ಕೆ ಒಳಿತನ್ನು ಮಾಡಿದರು. ಸಂತ ಗರೀಬ್‌ದಾಸರ ಆದೇಶದಂತೆ ಮತ್ತೆ ಆ ಎತ್ತನ್ನು ಗಾಡಿಗಾಗಲೀ, ನೇಗಿಲಿಗಾಗಲೀ ಕಟ್ಟಲಿಲ್ಲ. ಎಲ್ಲಾ ಪ್ರಾಣಿಗಳಿಂದ ದೂರವಿಟ್ಟು ಒಳ್ಳೆ ಮೇವನ್ನು ತಿನ್ನಿಸಿದರು. ಈ ಎತ್ತು ಮೊದಲು ಭಕ್ತನಾಗಿತ್ತು, ಕೆಟ್ಟ ಸಹವಾಸದಿಂದ ಎತ್ತಾಗಿ ಹುಟ್ಟಿದೆ ಎಂದು ಗರೀಬ್‌ದಾಸರು ಮನವರಿಕೆ ಮಾಡಿಕೊಟ್ಟರು. ಆ ಎತ್ತು 5ವರ್ಷ ಬದುಕಿತ್ತು. ಭಕ್ತನಾದ ಹರಲಾಲರು ಆ ಎತ್ತನ್ನು ಚೆನ್ನಾಗಿ ನೋಡಿಕೊಂಡರು. ಪರಮಾತ್ಮನಾದ ಕಬೀರರು ದಾರಿ ತಪ್ಪಿದ್ದ ಪಶುವಿನ ರೂಪದಲ್ಲಿದ್ದ ಭಕ್ತನನ್ನು ಉದ್ಧರಿಸಿದರು. ಅವನಿಗೆ ಮತ್ತೆಂದಾದರೂ ಮನುಷ್ಯ ಜನ್ಮ ಲಭಿಸಿದರೆ ಹಾಗೂ ಮುಂದೆ ಅವನ

ಅದೃಷ್ಟದಲ್ಲಿ ಯಾರಾದರೂ ಪೂರ್ಣಗುರು ಸಿಕ್ಕರೆ ಮುಕ್ತಿ ಸಿಗುವುದು ಇಲ್ಲದಿದ್ದರೆ ಮತ್ತೆ ಎಂಭತ್ತನಾಲ್ಕು ಲಕ್ಷ ಯೋನಿಗಳಲ್ಲಿ ಕಷ್ಟಪಡುವುದು ಶತಸಿದ್ಧ. ಬೇರಿ ಹಳ್ಳಿಯಲ್ಲಿರುವ ಭಕ್ತನಾದ ಹರಲಾಲನ ಸಂತಾನವು ಇಂದಿಗೂ ಈ ಘಟನೆಗೆ ಸಾಕ್ಷಿಯಾಗಿದೆ.

## "ತಂಬಾಕು ಸೇವನೆ ಮಹಾಪಾಪ"

ಸಂತ ಗರೀಬ್‌ದಾಸರು ಹರಲಾಲಂಗೆ ಹೇಳಿದರು, "ನೀವು ಅಂದರೆ ದೀಕ್ಷೆ ತೆಗೆದುಕೊಳ್ಳುವವರೆಲ್ಲಾ ತಂಬಾಕಿನ ಅಂದರೆ ಹುಕ್ಕಾ, ಬೀಡಿ, ಸಿಗರೇಟು ಮುಂತಾದವುಗಳನ್ನು ಎಂದಿಗೂ ಸೇವನೆ ಮಾಡಬಾರದು. ಯಾವುದೇ ಮಾದಕ ವಸ್ತುಗಳನ್ನು ಉಪಯೋಗಿಸಬಾರದು. ಆಗ ಭಕ್ತನೆಂದನು, "ಗುರುಗಳೇ, ಇಲ್ಲಿ ಎಲ್ಲಾ ರೈತರು ತಂಬಾಕಿನ ಸೇವನೆ ಮಾಡುತ್ತಾರೆ. ಇದರಿಂದ ನಷ್ಟವೇನು?"

ಸಂತ ಗರೀಬ್‌ದಾಸರೆಂದರು, ನೀವು ರಾಮಾಯಣ ಮತ್ತು ಮಹಾಭಾರತದ ಕತೆಯನ್ನು ಕೇಳಿರಬಹುದು. ಇದರಲ್ಲಿ ಹುಕ್ಕಾ ಸೇವನೆಯ ವರ್ಣನೆ ಎಲ್ಲೂ ಇಲ್ಲ. ತಂಬಾಕಿನ ಉತ್ಪತ್ತಿ ಹೇಗಾಗಿದೆ ಎನ್ನುವುದನ್ನು ಹೇಳುತ್ತೇನೆ, ಕೇಳಿ.

## "ತಂಬಾಕು ಉತ್ಪತ್ತಿಯ ಕತೆ"

ಒಂದೂರಿನಲ್ಲಿ ಒಬ್ಬ ಋಷಿ ಮತ್ತು ಒಬ್ಬ ರಾಜ ಇದ್ದರು. ಇವರು ಅಕ್ಕ ತಂಗಿಯರನ್ನು ಮದುವೆಯಾಗಿದ್ದರು. ಒಂದು ದಿನ ರಾಣಿಯು ಋಷಿಯ ಪತ್ನಿಗೆ ಕುಟುಂಬ ಸಮೇತ ಊಟಕ್ಕೆ ಆಹ್ವಾನವನ್ನು ಕಳುಹಿಸಿದಳು. ಈ ವಿಷಯವನ್ನು ಋಷಿ ಪತ್ನಿಯು ತನ್ನ ಪತಿಗೆ ತಿಳಿಸಿದಾಗ ಆ ಋಷಿಯೂ ಧನಿಕರ ಗೆಳೆತನ ಒಳ್ಳೆಯದಲ್ಲ. ನಿನ್ನ ಆ ತಂಗಿ ವೈಭವದ ಜೀವನ ಮಾಡುತ್ತಿದ್ದಾಳೆ. ರಾಜನಿಗೆ ಹಣ ಹಾಗೂ ರಾಜ್ಯದ ಶಕ್ತಿ–ಇವೆರಡರ ಅಹಂಕಾರವಿರುತ್ತದೆ. ಅವರು ನಿನ್ನನ್ನು ಅವಮಾನಿಸಲು ಕರೆಯುತ್ತಿದ್ದಾರೆ. ಏಕೆಂದರೆ ಅವರು ಕರೆದ ಮೇಲೆ ನಾವೂ ಒಂದುದಿನ ಅವರನ್ನು ಭೋಜನಕ್ಕೆ ಕರೆಯಬೇಕಾಗುತ್ತದೆ. ನಾವು ಅವರಂಥಾ ಭೋಜನದ ವ್ಯವಸ್ಥೆ ಈ ಕಾಡಿನಲ್ಲಿ ಮಾಡಲು ಸಾಧ್ಯವಿಲ್ಲ. ಇದೆಲ್ಲಾ ಆ ಧನಿಕ ರಾಜನ ಕುತಂತ್ರ. ನಿನ್ನ ಮುಂದೆ ತನ್ನನ್ನು ದೊಡ್ಡವನನ್ನಾಗಿ ಹಾಗೂ ನನ್ನನ್ನು ಸಣ್ಣವನನ್ನಾಗಿ ತೋರಿಸುವುದೇ ಅವನ ಆಶಯ. ನೀನು ಈ ವಿಷಯವನ್ನು ಇಲ್ಲಿಗೇ ಬಿಟ್ಟುಬಿಡು. ನಾವು ಹೋಗದಿರುವುದೇ ಕ್ಷೇಮ ಎಂದನು. ಆದರೆ ಋಷಿ ಪತ್ನಿಯು ಕೇಳಲಿಲ್ಲ. ಹಠಹಿಡಿದಾಗ ಋಷಿ ಬೇರೆ ದಾರಿ ಕಾಣದೆ ಕುಟುಂಬ ಸಹಿತ ರಾಜನ ಅರಮನೆಗೆ ಹೋದನು. ರಾಣಿಯು ಅತ್ಯಮೂಲ್ಯವಾದ ಒಡವೆ ಧರಿಸಿದ್ದಳು. ಬೆಲೆಬಾಳುವ ಬಟ್ಟೆ ತೊಟ್ಟಿದ್ದಳು. ಋಷಿ ಪತ್ನಿಯ ಸಾಧಾರಣವಾದ ಬಟ್ಟೆ ಮತ್ತು ಕೊರಳಲ್ಲಿದ್ದ ರಾಮನಾಮದ ಜಪಮಾಲೆಯನ್ನು ನೋಡಿ ರಾಣಿಯ ಸೇವಕರು ಮತ್ತು ಅಧಿಕಾರಿಗಳು ತಮ್ಮಲ್ಲೇ ಹಾಸ್ಯ ಮಾಡಿಕೊಳ್ಳುತ್ತಿದ್ದರು. ರಾಜನ ಭಾವ ಇವರೇನಾ? ಎಲ್ಲಿಯ ರಾಜ ಎಲ್ಲಿಯ ಈ ಬಡವ?" ಎನ್ನುತ್ತಿದ್ದರು. ಇದನ್ನೆಲ್ಲಾ ಋಷಿ ಕುಟುಂಬದವರು ಕೇಳಿಸಿಕೊಳ್ಳುತ್ತಿದ್ದರು. ಊಟವಾದ ನಂತರ ಋಷಿ ಪತ್ನಿಯು ರಾಜನ ಕುಟುಂಬದವರನ್ನು ತಮ್ಮ ಮನೆಗೆ ಭೋಜನಕ್ಕೆ ಆಹ್ವಾನಿಸಿದಳು.

ನಿಶ್ಚಿತವಾದ ದಿನ ರಾಜನು ಸಾವಿರಾರು ಸೈನಿಕರನ್ನು ಕರೆದುಕೊಂಡು ತನ್ನ ಭಾವನಾದ ಋಷಿಯ ಆಶ್ರಮಕ್ಕೆ ಬಂದನು. ಋಷಿಯು ಸ್ವರ್ಗಲೋಕದ ಇಂದ್ರನನ್ನು ಪ್ರಾರ್ಥಿಸಿಕೊಂಡು ಕಾಮಧೇನುವನ್ನು ಕರೆಸಿಕೊಂಡಿದ್ದನು. ಅದರ ಬದಲಾಗಿ ಋಷಿಯು ತಾನು ಸಂಪಾದಿಸಿದ್ದ ಪುಣ್ಯವನ್ನು ಧಾರೆ ಎರೆದಿದ್ದನು. ಇಂದ್ರನು ಒಂದು ಟೆಂಟನ್ನು ಮತ್ತು ಕಾಮಧೇನುವಿನ ಜೊತೆ ಕೆಲವು ಸೇವಕರನ್ನು ಕಳುಹಿಸಿದ್ದನು. ಕಾಮಧೇನುವನ್ನು ಟೆಂಟಲ್ಲಿ ಇರಿಸಲಾಗಿತ್ತು. ಋಷಿಯು ಆ ಹಸುವಿಗೆ ಆರತಿ ಮಾಡಿ ತನ್ನ ಮನೋಕಾಮನೆಯನ್ನು ತಿಳಿಸಿದನು. ತಕ್ಷಣವೇ 56 ತರಹದ ಭಕ್ಷ್ಯಗಳು ಬೆಳ್ಳಿಯ ತಟ್ಟೆ, ಬಟ್ಟಲುಗಳಲ್ಲಿ

ತುಂಬಿದ್ದ ತಿಂಡಿಗಳು ಸ್ವರ್ಗದಿಂದ ಇಳಿದು ಟೆಂಟಿನಲ್ಲಿ ಬಂದು ಕುಳಿತವು. ಅರ್ಧ ಎಕರೆ ಟೆಂಟ್ ಭಕ್ಷ್ಯಭೋಜನಗಳಿಂದ ತುಂಬಿಹೋಯಿತು. ಋಷಿಯು ಭೋಜನ ಮಾಡಿರೆಂದು ರಾಜನನ್ನು ಪ್ರಾರ್ಥಿಸಿದ, ಅದರೆ ರಾಜನು ಋಷಿಯನ್ನು ಅವಮಾನಿಸಲು ನಿರ್ಧರಿಸಿ, "ನನ್ನ ಸೈನ್ಯವೂ ನನ್ನ ಜೊತೆ ಊಟಮಾಡುತ್ತದೆ ಹಾಗೂ ಕುದುರೆಗಳು ಮೇವು ತಿನ್ನುತ್ತದೆ" ಎಂದನು. ಋಷಿಯು ಒಪ್ಪಿದನು. ಆಗ ರಾಜ ಟೆಂಟಿನ ಒಳಗಡೆ ಹೋದವನೇ ಆಶ್ಚರ್ಯಚಕಿತನಾದನು. ಪಂಚ ಭಕ್ಷ್ಯ ಪರಮಾನ್ನಗಳನ್ನು ಸೇವಕರು ತಂದು ತಂದು ಇಡಲಾರಂಭಿಸಿದರು, ಅನ್ನಪೂರ್ಣೆಯ ಸ್ತುತಿಯನ್ನು ಮಾಡುತ್ತಾ ಋಷಿಯು ಊಟ ಮಾಡಿರೆಂದು ರಾಜನನ್ನು ವಿನಂತಿಸಿದನು. ಈ ಭೋಜನದ ಮುಂದೆ ನನ್ನ ಭೋಜನಕೂಡ ಏನೇನೂ ಇಲ್ಲ ಎಂದು ರಾಜನಿಗೆ ತಿಳಿಯಿತು. ನಾನು ಕೇವಲ 3–4 ರೀತಿಯ ಭಕ್ಷ್ಯಗಳನ್ನು, ಅದೂ ಋಷಿ ಕುಟುಂಬದವರಿಗೆ ಮಾತ್ರ ಮಾಡಿಸಿದ್ದೆ ಎಂದು ತಿಳಿದು ನಾಚಿಕೆಯಾಯಿತು. ಊಟ ಮಾಡುವಾಗಲೂ ಚಿಂತೆಗೊಳಗಾಗಿದ್ದನು. ಹೊಟ್ಟೆಕಿಚ್ಚು ಉಂಟಾಯಿತು. ಇದು ತನ್ನ ಅವಮಾನವೆಂದು ತಿಳಿದನು. ಸೈನಿಕರೆಲ್ಲಾ ತಿಂದು ತೇಗಿ, ಋಷಿಯನ್ನು ಕೊಂಡಾಡಿದರು. ರಾಜನ ರಕ್ತ ಕುದಿಯುತ್ತಿತ್ತು. ನಂತರ ಟೆಂಟಿಗೆ ಹೋಗಿ ಈ ಊಟ ಹೇಗೆ ತಯಾರಿಸಿದೆ ಎಂದು ಋಷಿಯನ್ನು ಕೇಳಿದನು. ಯಾವ ಒಲೆಯೂ ಉರಿದಿಲ್ಲ, ಯಾವ ಬಾಣಲೆಯನ್ನು ಒಲೆಯ ಮೇಲಿಟ್ಟಿಲ್ಲ, ಇದು ಹೇಗೆ ಸಾಧ್ಯ ಎಂದನು. ಆಗ ಋಷಿಯು, ಭಕ್ತಿ ಮತ್ತು ಪುಣ್ಯದ ಫಲದಿಂದ ನಾನು ಸ್ವರ್ಗದಿಂದ ಹಸುವನ್ನು ಕರೆಸಿದೆ. ನಾವು ಎಷ್ಟು ಖಾದ್ಯಗಳನ್ನು ಕೇಳುತ್ತೇವೆಯೋ ಅಷ್ಟನ್ನು ತಕ್ಷಣವೇ ಒದಗಿಸಿಕೊಡುವುದೇ ಆ ಹಸುವಿನ ವಿಶೇಷ ಲಕ್ಷಣ" ಎಂದನು. ಆಗ ರಾಜನು ಆ ಹಸುವನ್ನು ನನ್ನ ಮುಂದೆ ತಂದು ತೋರಿಸಿದರೆ ನನಗೆ ನಂಬಿಕೆ ಬರುವುದು ಎಂದನು. ಆಗ ರಾಜ ಮತ್ತು ಋಷಿ ಟೆಂಟಿನ ಬಾಗಿಲ ಬಳಿ ಹೋದರು. ಒಳಗೆ ಹಸುವೊಂದೇ ನಿಂತಿತ್ತು. ಬಾಗಿಲ ಕಡೆ ಮುಖ ಮಾಡಿತ್ತು. ಎಲ್ಲರೂ ಊಟ ಮಾಡಿದ್ದರಿಂದ ಟೆಂಟ್ ಖಾಲಿಯಾಗಿತ್ತು. ಉಳಿದ ಸಾಮಾನನ್ನು ಸೇವಕರು ತೆಗೆದುಕೊಂಡು ಹೋಗುತ್ತಿದ್ದರು. ಹಸುವೂ ತೆರಳಲು ಋಷಿಯ ಅನುಮತಿಗಾಗಿ ಕಾಯುತ್ತಿತ್ತು. ಅಷ್ಟರಲ್ಲಿ ರಾಜನು ಋಷಿಗೆ, ಹೇ ಋಷಿ, ಈ ಹಸುವನ್ನು ನನಗೆ ಕೊಡು. ನನ್ನ ಬಳಿ ದೊಡ್ಡ ಸೈನ್ಯವಿದೆ. ಇವರಿಗೆಲ್ಲಾ ಊಟ ತಯಾರಿಸಿಕೊಳ್ಳುವೆ. ನಿನಗೇಕೆ ಈ ಹಸು" ಎಂದನು. ಆಗ ಋಷಿಯು ಹೇ ರಾಜ, ನಾನು ಈ ಗೋಮಾತೆಯನ್ನು ಸಾಲವಾಗಿ ಪಡೆದಿದ್ದೇನೆ. ಸ್ವರ್ಗದಿಂದ ತರಿಸಿರುವೆ. ಇದರ ಮಾಲಿಕ ನಾನಲ್ಲ, ನಾನು ಇದನ್ನು ನಿಮಗೆ ನೀಡಲಾರೆ,' ಎಂದನು. ರಾಜನು ಕೋಪಗೊಂಡು ಆ ಹಸುವನ್ನು ಬಲವಂತವಾಗಿ ಹೊತ್ತೊಯ್ಯುವಂತೆ ತನ್ನ ಸೈನಿಕರಿಗೆ ಆದೇಶಿಸಿದನು. ಋಷಿಗೆ ರಾಜನ ವರ್ತನೆ ದುರ್ವರ್ತನೆಯಾಗಿ ಬದಲಾದುದನ್ನು ಕಂಡನು. ಆಗ ಅವನು ಗೋಮಾತೆಗೆ ತನ್ನ ಆ ವಾಸಸ್ಥಾನವಾದ ಇಂದ್ರನ ಸ್ವರ್ಗಲೋಕಕ್ಕೆ ವಾಪಸ್ಸು ಹೋಗುವಂತೆ ಪ್ರಾರ್ಥಿಸಿದನು. ತಕ್ಷಣವೇ ಕಾಮಧೇನು ಟೆಂಟನ್ನು ಹರಿದು ಹಾಕುತ್ತಾ ಆಕಾಶದ ಕಡೆಗೆ ಹಾರಿ ಹೋಯಿತು. ರಾಜನು ಹಸುವನ್ನು ಕೆಳಗೆ ಬೀಳಿಸಲು ಹಸುವಿನ ಕಾಲಿಗೆ ಬಾಣ ಬಿಟ್ಟನು. ಅದರ ಕಾಲಿನಿಂದ ಚಿಮ್ಮಿದ ರಕ್ತವು ಭೂಮಿಯ ಮೇಲೆ ಬೀಳತೊಡಗಿತು. ಗಾಯಗೊಂಡ ಹಸು ಸ್ವರ್ಗಲೋಕಕ್ಕೆ ಸೇರಿತು. ಎಲ್ಲೆಲ್ಲಿ ರಕ್ತ ಚೆಲ್ಲಿತ್ತೋ, ಅಲ್ಲೆಲ್ಲಾ ತಂಬಾಕು ಬೆಳೆಯಿತು. ನಂತರ ತಂಬಾಕಿನ ಬೀಜ ಹುಟ್ಟಿ ನೂರಾರು ಗಿಡಗಳಾಗಿ ಬೆಳೆಯಿತು. ಸಂತ ಗರೀಬ್‌ದಾಸರೆಂದಿದ್ದಾರೆ.

ಖು ನಾಮ ಖುನ್ ಕಾ ತಮಾ ನಾಮ ಗಾಯ ।
ಸೌ ಬಾರ್ ಸೌಗಂಧ ಇಸೆ ನ ಪಿಯೆ–ಖಾಯ ॥

ತಮಾ+ಖು= ತಮಾಖು– ತಂಬಾಕು

ಖು ಎಂದರೆ ರಕ್ತ, ತಮಾ ಎಂದರೆ ಹಸು. ನಖಾಯ್–ತಿನ್ನಬೇಡ.

ಭಾವಾರ್ಥ:– ಫಾರಸಿ ಭಾಷೆಯಲ್ಲಿ ತಮಾ ಎಂದರೆ ಹಸು ಎಂದರ್ಥ. ಖು ಎಂದರೆ ಹಿಂದಿಯಲ್ಲಿ ರಕ್ತ ಎಂದರ್ಥ, ಈ ತಂಬಾಕು ಹಸುವಿನ ರಕ್ತದಿಂದ ಹುಟ್ಟಿದೆ. ಇದರ ಮೇಲೆ ಹಸುವಿನ ರೋಮದಂಥಾ

ಕೂದಲಿರುತ್ತದೆ. ಹೇ ಮಾನವ, ಆಣೆ ಮಾಡಿ ಹೇಳುವೆ, ಯಾವುದೇ ಸಂದರ್ಭದಲ್ಲೂ ಇದನ್ನು ನೀನು ತಿನ್ನಬೇಡ. ತಂಬಾಕನ್ನು ತಿಂದರೆ ಹಸುವಿನ ರಕ್ತ ಕುಡಿದಂತೆ. ನಿನಗೆ ಪಾಪ ಸುತ್ತಿಕೊಳ್ಳುತ್ತದೆ. ಮುಸಲ್ಮಾನರಿಗೆ ಹಿಂದೂಗಳಿಂದ ತಂಬಾಕು ಹೇಗೆ ಹುಟ್ಟಿತು ಎಂಬ ವಿಷಯ ತಿಳಿಯಿತು. ಇದರಿಂದ ಹಸುವಿನ ರಕ್ತವೆಂದು ತಿಳಿದು ತಂಬಾಕನ್ನು ತಿನ್ನುವುದು ಮತ್ತು ಹುಕ್ಕಾ ಸೇದುವುದನ್ನು ಅವರು ಪ್ರಾರಂಭಿಸಿದರು. ಏಕೆಂದರೆ ತಪ್ಪು ಜ್ಞಾನದಿಂದ ಮುಸನ್ಮಾನರು ಹಸುವಿನ ಮಾಂಸ ತಿನ್ನುವುದು ಧರ್ಮದ ಪ್ರಸಾದ ಎಂದು ತಿಳಿಯುತ್ತಾರೆ. ವಾಸ್ತವವಾಗಿ ಮುಸಲ್ಮಾನರ ಧರ್ಮಗುರುವಾದ ಹಜರತ್ ಮುಹಮ್ಮದ್‌ರವರು ಎಂದೂ ಪ್ರಾಣಿಯ ಮಾಂಸವನ್ನು ತಿಂದಿರಲಿಲ್ಲ.

ಗರೀಬ್, ನಬೀ ಮುಹಮ್ಮದ್ ನಮಸ್ಕಾರ್ ಹೈ, ರಾಮ್ ರಸೂಲ್ ಕಹಾಯಾ ।
ಏಕ್ ಲಾಖ್ ಅಸ್ಸೀ ಕೂ ಸೌಗಂಧ್, ಜಿನ್ ನಹೀಂ ಕರದ್ ಚಲಾಯಾ ॥

ಗರೀಬ್, ಅರ್ಸ್ ಕುರ್ಶ್ ಪರ್ ಅಲ್ಲಹ್ ತಖ್ತ್ ಹೈ, ಖಾಲಿಕ್ ಬಿನ್ ನಹೀಂ ಖಾಲೀ ।
ವೈ ಪೈಗಂಬರ್ ಪಾಕ್ ಪುರುಷ್ ಥೇ, ಸಾಹೇಬ್ ಕೇ ಅಬದಾಲೀ ।

**ಭಾವಾರ್ಥ:–** ನಬೀ ಮುಹಮ್ಮದರು ಗೌರವಾನ್ವಿತ ಮಹಾಪುರುಷರಾಗಿದ್ದರು. ಅವರು ಪರಮಾತ್ಮನ ದೂತರಾಗಿದ್ದರು. ಮುಸಲ್ಮಾನ ಧರ್ಮದಲ್ಲಿ (ಬಾಬಾ ಆದಮದಿಂದ ಮುಹಮ್ಮದ್ ರವರೆಗೆ) ಒಂದು ಲಕ್ಷ 80 ಸಾವಿರ ಅಂಥಾ ಪೈಗಂಬರರಾಗಿದ್ದಾರೆ. ಇವರೆಲ್ಲಾ ಎಷ್ಟು ಪವಿತ್ರರಾಗಿದ್ದರೆಂದರೆ, ಎಂದಿಗೂ ಪಶು ಪಕ್ಷಿಗಳ ಮೇಲೆ ಆಯುಧ ಚಲಾಯಿಸಿರಲಿಲ್ಲ. ಅವರಿಗೆ ದೇವರಲ್ಲಿ ಭಯವಿತ್ತು. ದೇವರ ಕೃಪೆಗೂ ಪಾತ್ರರಾಗಿದ್ದರು. ನಂತರದಲ್ಲಿ ಕೆಲ ಮುಲ್ಲಾಗಳು ಮಾಂಸ ತಿನ್ನುವ ಪರಂಪರೆ ಹುಟ್ಟು ಹಾಕಿದರು. ಇದನ್ನು ಧಾರ್ಮಿಕತೆಯ ಅಪವಾದ ಎಂದೇ ಹೇಳಬಹುದು ಹೀಗಾಗಿ ಎಲ್ಲಾ ಮುಸಲ್ಮಾನರು ಪಾಪವನ್ನೇ ಮಾಡುತ್ತಿದ್ದಾರೆ. ಮತ್ತೆ ಕೆಲವು ಮುಸಲ್ಮಾನರು ಭ್ರಮೆಗೊಳಗಾಗಿ ತಂಬಾಕು ಸೇವನೆಯನ್ನು ಪ್ರಾರಂಭಿಸಿದ್ದಾರೆ. ಬಡಪಾಯಿ ಹಿಂದೂ ಧರ್ಮದವರಿಗೆ ಈ ಬಗ್ಗೆ ಅರಿವಿರಲಿಲ್ಲ. ಮುಸಲ್ಮಾನರ ಜೊತೆಗೂಡಿ ಅವರೂ ತಂಬಾಕು ಸೇವನೆ ಪ್ರಾರಂಭಿಸಿದರು. ಇದು ಅಜ್ಞಾನದ ಪರಮಾವಧಿ. ಹಾಗಾಗಿ ನೀವು ಮುಂದೆ ತಂಬಾಕು ಸೇವನೆ ಮಾಡಬಾರದು. ಮುಂದುವರಿದು ಸಂತ ಗರೀಬ್‌ದಾಸರು ಹರಲಾಲರನ್ನು ಕುರಿತು. ತಂಬಾಕು ಸೇವನೆಯಿಂದ ಉಂಟಾಗುವ ಪಾಪವನ್ನು ಕೇಳು ಎಂದರು.

ಗರೀಬ್, ಪರದ್ವಾರಾ ಸ್ತ್ರೀ ಕಾ ಖೋಲ್ಯೆ । ಸತ್ತರ್ ಜನ್ಮ್ ಅಂಧಾ ಹೋ ಡೋಲ್ಯೆ ॥1॥
ಮದಿರಾ ಪೀವೈ ಕಡವಾ ಪಾನೀ । ಸತ್ತರ್ ಜನ್ಮ್ ಶ್ವಾನ್ ಕೇ ಜಾನೀ ॥2॥

ಮಾಂಸ್ ಆಹಾರೀ ಮಾನವಾ, ಪ್ರತ್ಯಕ್ಷ್ ರಾಕ್ಷಸ್ ಜಾನ್ ।
ಮುಖ್ ದೇಖೋ ನ ತಾಸ್ ಕಾ, ವೋ ಫಿರ್ಯೆ ಚೌರಾಸೀ ಖಾನ್ ॥3॥

ಸುರಾಪಾನ ಮದ್ಯ್ ಮಾಂಸಾಹಾರಿ । ಗಮನ್ ಕರ್ಯೆ ಭೋಗ್ಯೆ ಪರ್ ನಾರೀ ॥4॥

ಸತ್ತರ್ ಜನ್ಮ್ ಕಟತ್ ಹೈ ಶೀಶಂ । ಸಾಕ್ಷೀ ಸಾಹೇಬ್ ಹೈ ಜಗದೀಶಂ ॥5॥

ಸೌ ನಾರೀ ಜಾರೀ ಕರ್ಯೆ, ಸುರಾಪಾನ್ ಸೌ ಬಾರ್ ।
ಏಕ ಚಿಲಮ್ ಹುಕ್ಕಾ ಭರ್ಯೆ, ಡೂಬ್ಯೆ ಕಾಲೀ ಧಾರ್ ॥6॥

ಹುಕ್ಕಾ ಹರದಮ್ ಪೀವತೇ, ಲಾಲ್ ಮಿಲಾಂವೇ ಧೂರ್ ।
ಇಸ್ಮೆ ಸಂಶಯ್ ಹೈ ನಹೀಂ, ಜನ್ಮ್ ಪೀಛಲೇ ಸೂಅರ್ ॥7॥

**ವಾಣಿ ಸಂಖ್ಯೆ 1ರ ಭಾವಾರ್ಥ:–** ಯಾರು ಪರಸ್ತ್ರೀ ಜೊತೆ ಸಂಬಂಧ ಇಟ್ಟುಕೊಳ್ಳುವರೋ,

ಅವರು ಮುಂದಿನ ಎಪ್ಪತ್ತು ಜನ್ಮಗಳು ಕುರುಡರಾಗಿ ಹುಟ್ಟುತ್ತಾರೆ. ಕುರುಡ ಕತ್ತೆ, ಕುರುಡ ಎತ್ತು, ಕುರುಡ, ಕುರುಡಿ ಹೀಗೆ 70 ಜನ್ಮಗಳನ್ನು ತಾಳಿ ಕಷ್ಟ ಅನುಭವಿಸುತ್ತಾರೆ.

ವಾಣಿ ಸಂಖ್ಯೆ 2–ಮದ್ಯವನ್ನು ಸೇವಿಸುವುದರಿಂದ ಅವರು 70 ಜನ್ಮಗಳನ್ನು ನಾಯಿಯಾಗಿ ಹುಟ್ಟುತ್ತಾರೆ ಮೋರಿಯ ನೀರನ್ನು ಕುಡಿಯುತ್ತಾರೆ, ರೊಟ್ಟಿ ಸಿಗದಿದ್ದರೆ ಮಲ (ಹೇಸಿಗೆ) ತಿನ್ನುತ್ತಾರೆ.

ವಾಣಿ ಸಂಖ್ಯೆ 3–ಮಾಂಸ ತಿನ್ನುವ ವ್ಯಕ್ತಿಗಳು ರಾಕ್ಷಸರೇ ಸರಿ. ಅವರ ಮುಖವನ್ನು ನೋಡಬಾರದು. ಅವರ ಸಹವಾಸದಿಂದ ಬೇರೆಯವರೂ ಮಾಂಸ ತಿನ್ನತೊಡಗುತ್ತಾರೆ. ಅಂಥವರು 84 ಲಕ್ಷ ಯೋನಿಗಳಲ್ಲಿ ಹುಟ್ಟಿ ಅಲೆದಾಡುತ್ತಾರೆ.

ವಾಣಿ ಸಂಖ್ಯೆ 4–5– ಮದ್ಯ ಕುಡಿಯುವವರು, ಪರಸ್ತ್ರೀಯನ್ನು ಅನುಭವಿಸುವವರು, ಮಾಂಸ ತಿನ್ನುವವರು ಪಾಪದ ಎಲ್ಲಾ ಕಷ್ಟವನ್ನೂ ಅನುಭವಿಸಬೇಕಾಗುತ್ತದೆ. ಅವರು ಕುರಿ, ಕತ್ತೆ, ಕೋಳಿ, ನಾಯಿ, ಹೀಗೆ ನೂರಾರು ಜನ್ಮ ಎತ್ತುತ್ತಾರೆ. ಇದಂತೂ ಸತ್ಯ.

ವಾಣಿ ಸಂಖ್ಯೆ 6– ಒಂದು ಹುಕ್ಕಾದಲ್ಲಿ ತಂಬಾಕು ತುಂಬಿ ಹುಕ್ಕಾ ಕುಡಿಯುವವರಿಗೆ ಕೊಡುವುದರಿಂದ ಯಾವ ಪಾಪ ಬರುವುದೆಂದು ಕೇಳಿ. ಒಂದು ಬಾರಿ ಮದ್ಯಕುಡಿದರೆ, ಮಾಂಸತಿಂದರೆ, ಪರಸ್ತ್ರೀ ಸಂಗ ಮಾಡಿದರೆ ಯಾವ ಪಾಪ ಬರುವುದೆಂದು ಈಗ ಕೇಳಿದಿರಿ. ಅಂಥಾ ನೂರು ಪಾಪಗಳು ಒಬ್ಬ ಹುಕ್ಕಾ ತುಂಬಿ ಕೊಡುವವನಿಗೆ ಬರುತ್ತದೆ ಎಂದರೆ ನೀವು ನಂಬುವಿರಾ? ಆದ್ದರಿಂದ ಮೊದಲು ಈ ಎಲ್ಲಾ ಪದಾರ್ಥಗಳ ಸೇವನೆಯನ್ನು ಮೊದಲು ಬಿಟ್ಟುಬಿಡಿ.

ವಾಣಿ ಸಂಖ್ಯೆ 7–ಸಮಾಜದಲ್ಲಿ ಕೆಲ ವ್ಯಕ್ತಿಗಳನ್ನು ನೋಡಿ ಮತ್ತೆ ಕೆಲವರು ಮಾದಕ ವಸ್ತುಗಳನ್ನು ಬಳಸಲು ಪ್ರಾರಂಭಿಸುತ್ತಾರೆ. ಸತ್ಸಂಗಕ್ಕೆ ಬಂದು ಅದನ್ನು ಬಿಟ್ಟು ಬಿಡುತ್ತಾರೆಂದರೆ ಅವರು ಹಿಂದಿನ ಜನ್ಮದಲ್ಲಿ ಮನುಷ್ಯರಾಗಿದ್ದರು ಎಂದರ್ಥ. ಸತ್ಸಂಗಕ್ಕೆ ಹೋದ ನಂತರವೂ ಈ ದುರಭ್ಯಾಸವನ್ನು ಬಿಡಲಿಲ್ಲವೆಂದರೆ ಅವರು ಹಿಂದಿನ ಜನ್ಮದಲ್ಲಿ ಹಂದಿಯಾಗಿ ಹುಟ್ಟಿದ್ದರು ಎಂದರ್ಥ. ಹಂದಿಯಾಗಿ ದುರ್ಗಂಧ ಮೂಸಿ ಅಭ್ಯಾಸವಾಗಿರುವುದರಿಂದ ಈ ದುರ್ಗಂಧವನ್ನೂ ಮೂಸುತ್ತಿದ್ದಾರೆ ಎಂದರ್ಥ. ಅಂಥವರು ಈ ದುರಭ್ಯಾಸದಿಂದ ಹೊರ ಬಾರದೆ, ಅಮೂಲ್ಯವಾದ ಮಾನವ ಜನ್ಮವನ್ನು ಹಾಳು ಮಾಡುತ್ತಿದ್ದಾರೆ. ಅಂಥವರೂ ಸಹ ಸತ್ಸಂಗಕ್ಕೆ ಮತ್ತೆ ಮತ್ತೆ ಬರಲಿ, ನಿರಾಶರಾಗುವ ಭಯ ಬೇಡ. ನಿಜವಾದ ಮನಸ್ಸಿನಿಂದ ಭಗವಂತನಲ್ಲಿ ಪ್ರಾರ್ಥಿಸಿದರೆ, ಈ ದುರಭ್ಯಾಸ ದೂರವಾಗುತ್ತದೆ.

## "ತಂಬಾಕಿನ ವಿಷಯದಲ್ಲಿ ಇನ್ನುಳಿದ ವಿಚಾರಗಳು"

(ಸಂತ ಗರೀಬ್‌ದಾಸರ ಗ್ರಂಥದಲ್ಲಿ "ಅಥ ತಂಬಾಖು ಕೀ ಬೈಂತ್" ಎಂಬ ಅಧ್ಯಾಯದಿಂದ ಆಯ್ದು ಬರೆಯಲಾಗಿದೆ.)

ಪಿತ್ ಬಾಯೀ ಖಾಂಸೀ ನಿಬಾಸೀ ನಿಬಾಸ್ ।
ಕಫ್ ದಲ್ ಕಲೇಜಾ ಲಿಯಾ ಹೈ ಗಿರಾಸ್ ॥
ಕಾಲಾ ತಮಾಖೂ ಅರೂ ಗೋರಾ ಪಿವಾಕ್ ।
ದಸ್ ಬೀಸ್ ಲಂಗರ್ ಜಹಾಂ ಬೈಠೇ ಗುಟಾಕ್ ॥
ಬಾಜೇ ನೈ ಗುಡ್ ಗುಡ್ ಅರೂ ಹುಕ್ಕೇ ಹಜೂಮ್ ।
ಕೋರೇ ಕುಬುದ್ಧಿ ಬೀಸಾ ಹೈಂ ನ ಸೂಮ್ ॥
ಬಾಂಕೀ ಪಗಡೀ ಅರೂ ಬಾಂಕೀ ಹೀ ನೈ ಖುದ್ ಡೂಬೈ

ಅರೂ ಡುಬೋಎ ಹೈ ಕೈ ॥
ಗುಟಾಕಡ್ ಅಟಾಕಡ್ ಮಟಾಕಡ್ ಲಹೂರ್ ।
ಏಕ್ ಬೈಠೇಗಾ ಅಡಕರ್ ಏಕ್ ಬೇಠೈಗಾ ದೂರ್ ॥
ಪೀವೈ ತಮಾಖೂ ಪಡ್ಯೆ ಕರ್ಮ್ ಮಾರ್ ।
ಅಮಲೀ ಕೇ ಮುಖ್ ಮೆಂ ಮುತ್ರ್ ಕೀ ಧಾರ್ ॥
ಕಡವಾ ಹೀ ಕಡವಾ ತೂ ಕರತಾ ಹಮೇಶ್ ।
ಕಡವಾ ಹೀ ಲೇ ಪ್ಯಾರೇ ಕಡವಾ ಹೀ ಪೇಶ್ ॥
ಕಾಮೀ ಕ್ರೋಧೀ ತೂ ಲೋಭೀ ಲಬೂಟ್ ।
ಬಚನ್ ಮಾನ್ ಮೇರಾ ಧೂಂಮಾ ನ ಘೂಂಟ್ ॥
ಹುಕ್ಕಾ ಹರಾಮೀ ಗುಲಾಮೀ ಗುಲಾಮ್ ।
ಧನೀ ಕೇ ಸರೇ ಮೆಂ ನ ಪಹುಂಚೆ ಅಲಾಮ್ ॥
ಪಾಮರ್ ಪರಮ್ ಧಾಮ್ ಜಾತೇ ನ ಕೋಯೀ ।
ಝೂಠೆ ಅಮಲ್ ಪರ್ ದಯೀ ಜಾನ್ ಖೋಯೀ ॥
ಮುರದಾ ಮಜಾವರ್ ಹರಾಮೀ ಹರಾಮ್ ।
ಪೀವೈ ತಮಾಖೂ ಸೋ ಇಂದ್ರೀ ಕೇ ಗುಲಾಮ್ ॥
ಅಜ್ಞಾನ್ ನೀಂದ್ ನ ಸೋ ಉಠ್ ಜಾಗ್,
ಪೀವೈ ತಮಾಖೂ ಗಯೆ ಫುಟಿ ಭಾಗ್ ॥
ಭಾಂಗ್ ತಮಾಖೂ ಪೀವೈಂ ಹೀ, ಸುರಾಪಾನ್ ಸೇ ಹೇತ್ ।
ಗೋಸತ್ ಮಿಟ್ಟೀ ಖಾಯ್‌ಕರ್ ಜಂಗಲೀ ಬನೈಂ ಪ್ರೇತ್ ॥
ಗರೀಬ್, ಪಾನ್ ತಮಾಖೂ ಚಾಬಹೀ, ಸಾಂಸ್ ನಾಕ್ ಮೆಂ ದೇತ್ ।
ಸೋ ತೋ ಅಕಾರ್ಥ್ ಗಯೇ, ಜ್ಯೋಂ ಭಡಭೂಜೇ ಕಾ ರೇತ್ ॥
ಭಾಂಗ್ ತಮಾಖೂ ಪೀವಹೀ, ಗೋಸತ್ ಗಲಾ ಕಬಾಬ್ ।
ಮೋರ್ ಮೃಗ್ ಕೂ ಭಖಿತ್ ಹೈ, ದೇಂಗೇ ಕಹಾಂ ಜವಾಬ್ ॥
ಭಾಂಗ್ ತಮಾಖೂ ಪೀವತೇ, ಚಿಸಮ್ಯೋಂ ನಾಲಿ ತಮಾಮ್ ।
ಸಾಹಿಬ್ ತೇರೀ ಸಾಹಿಬೀ, ಜಾನೇ ಕಹಾಂ ಗುಲಾಮ್ ॥
ಗವೂ ಆಪನೀ ಅಮ್ಮಾ ಹೈ, ಇಸ್ ಪರ್ ಛುರೀ ನಾ ಬಾಹಯ್।
ಗರೀಬ್‌ದಾಸ್ ಘೀ ದೂಧ್ ಕೋ, ಸಬ್ ಹೀ ಆತ್ಮ ಖಾಯ್ ॥

**ಭಾವಾರ್ಥ:–** ಮಾನವನ ಶರೀರಕ್ಕೆ ಆಮ್ಲಜನಕದ ಅವಶ್ಯಕತೆ ಇದೆ. ಅದರ ಬದಲಾಗಿ ತಂಬಾಕಿನ ಹೊಗೆ ಪ್ರವೇಶಿಸಿದರೆ ಅವನಿಗೆ ದಮ್ಮು ಬರುತ್ತದೆ. ಕ್ಯಾನ್ಸರ್ ರೋಗ ಬರುತ್ತದೆ. ಹುಕ್ಕಾ ಸೇದುವವರು ಗೆಳೆಯರಾಗಿ ಅಕ್ಕ ಪಕ್ಕ ಕುಳಿತು ಒಬ್ಬರ ನಂತರ ಒಬ್ಬರು ಸೇದಲು ಪ್ರಾರಂಭಿಸುತ್ತಾರೆ. ಮಕ್ಕಳು ಇವರನ್ನು ನೋಡಿ ಇದೇ ಕೆಲಸ ಮಾಡಿ ಪಾಪಕ್ಕೆ ಹೋಗುತ್ತಾರೆ. ಅವರ ಅದೃಷ್ಟ ಬಿಗಡಾಯಿಸುತ್ತದೆ. ಅನ್ಯರನ್ನು ತಂಬಾಕು ಸೇವಿಸುವಂತೆ ಪ್ರೇರೇಪಿಸುತ್ತಾ ಅವರನ್ನೂ ಮುಳುಗಿಸುತ್ತಾರೆ. ಈ ರೀತಿ ಕೆಟ್ಟ ಕೆಲಸ ಮಾಡಿ ತಮ್ಮ ಜೀವನ ಹಾಳುಮಾಡಿಕೊಳ್ಳುತ್ತಾರೆ. ಹೇಗೆ ಭಟ್ಟಿಯಲ್ಲಿ ಮರಳನ್ನು ಚೆನ್ನಾಗಿ ಕಾಯಿಸಿ ಕಡಲೆ ಹುರಿಯುತ್ತಾರೋ, ಹುರಿದ ನಂತರ ಕಡಲೆಯನ್ನು ತೆಗೆದುಕೊಂಡು ಮರಳನ್ನು ಬೀದಿಗೆ ಬಿಸಾಡುತ್ತಾರೋ ಹಾಗೆ ಮನುಷ್ಯನು ಕೆಟ್ಟ ಕೆಲಸ ಮಾಡಿ ತನ್ನ ಜೀವನ ಎಂಬ ಮರಳನ್ನು

ಬೀದಿಗೆ ಬಿಸಾಕುತ್ತಾನೆ. ಇಂಥಾ ಕೆಟ್ಟ ಮನುಷ್ಯರು ದೇವರ ಆಸ್ಥಾನದಲ್ಲಿ ಏನು ಉತ್ತರ ನೀಡಬಲ್ಲರು?

ಭಕ್ತಿಮಾರ್ಗದಲ್ಲಿ ತಂಬಾಕು ಅತ್ಯಂತ ತೊಂದರೆ ಕೊಡುತ್ತದೆ ಹೇಗೆಂದರೆ ನಮ್ಮ ಮೂಗಿನ ಎರಡೂ ಹೊಳ್ಳೆಗಳ ಮಧ್ಯದಲ್ಲಿ ಒಂದು ಮೂರನೇ ದಾರಿ ಇದೆ. ಅದು ಸೂಜಿಯ ಮೊನೆಯಷ್ಟು ಚಿಕ್ಕದು. ಯಾರು ತಂಬಾಕಿನ ಹೊಗೆಯನ್ನು ಮೂಗಿನ ಹೊಳ್ಳೆಗಳಿಂದ ಬಿಡುತ್ತಾರೋ, ಆ ಹೊಗೆಯು ಆ ದಾರಿಯನ್ನು ಮುಚ್ಚಿಬಿಡುತ್ತದೆ. ಅದೇ ದಾರಿಯು ಮೇಲಿನ ತ್ರಿಕುಟಿಯ ಕಡೆಗೆ ಹೋಗುತ್ತದೆ. ಅಲ್ಲಿ ಪರಮಾತ್ಮ ನೆಲೆಸಿರುತ್ತಾನೆ. ಯಾವ ಮಾರ್ಗದಿಂದ ನಾವು ದೇವರನ್ನು ಭೇಟಿಯಾಗಬೇಕೋ ಅದೇ ದಾರಿಯನ್ನು ತಂಬಾಕು ಮುಚ್ಚಿ ಬಿಡುತ್ತದೆ. ಹುಕ್ಕಾ ಕುಡಿಯುವವರನ್ನು ನೋಡಿದ್ದೇವೆ. ದಿನವೂ ಹುಕ್ಕಾದ ನಳಿಕೆಯನ್ನು ಲೋಹದ ಸರಳಿಗೆ ಸಿಕ್ಕಿಸುತ್ತಾರೆ. ಆ ನಳಿಕೆಯಿಂದ ಕೆಟ್ಟ ಹೊಗೆ ಹೊರ ಹೊಮ್ಮುತ್ತದೆ. ಮಾನವ ಜೀವನವು ಪರಮಾತ್ಮನ ಪ್ರಾಪ್ತಿಗಾಗಿ ಸಿಕ್ಕಿದೆ. ಪರಮಾತ್ಮನನ್ನು ಪಡೆಯುವ ದಾರಿಯನ್ನು ತಂಬಾಕು ಮುಚ್ಚಿ ಬಿಡುತ್ತದೆ. ಆದ್ದರಿಂದ ಭಕ್ತನಿಗೆ ತಂಬಾಕು ಒಂದು ದೊಡ್ಡ ಶತ್ರು. ತಂಬಾಕು ಒಳ್ಳೆಯದಲ್ಲವೆಂದು ಹುಕ್ಕಾ ಕುಡಿಯುವವರಿಗೂ ಗೊತ್ತು. ಮನೆಯಲ್ಲಿ ತಂದೆ, ತಾತ, ಚಿಕ್ಕಪ್ಪ ಹುಕ್ಕಾ ಸೇವನೆ ಮಾಡಿದರೆ ಮಗು ಅದನ್ನು ನೋಡಿ ಅನುಕರಿಸುತ್ತದೆ. ತಾವು ಹುಕ್ಕಾ ಸೇವಿಸುತ್ತಾರೆ. ಮಕ್ಕಳಿಗೆ ಸೇವಿಸದಂತೆ ಧಮಕಿ ಹಾಕುತ್ತಾರೆ. ತಂಬಾಕು ಒಳ್ಳೆಯದಾಗಿದ್ದರೆ, ನಿಮ್ಮ ಮಕ್ಕಳಿಗೆ ಸೇದಲು ಬಿಡಿ. ನೀವು ಮಕ್ಕಳಿಗೆ ಬೇಡವೆಂದು ಹೇಳಿದರೆ ಅದು ಒಳ್ಳೆಯದಲ್ಲವೆಂದೇ ಅರ್ಥ. ಒಂದು ಮಗು ಹಾಲು ಕುಡಿಯಲು ನಿರಾಕರಿಸಿದರೆ, ಅದನ್ನು ಪುಸಲಾಯಿಸಿ, ನಿನ್ನ ಕೂದಲು ಉದ್ದವಾಗುತ್ತದೆ, ನೀನು ಸುಂದರವಾಗಿ ಬೆಳೆಯುತ್ತೀಯಾ ಎಂದೆಲ್ಲಾ ಹೇಳಿ ಹಾಲು ಕುಡಿಸಿದರೆ ಅದು ಸರಿ. ಏಕೆಂದರೆ ಹಾಲು ಆರೋಗ್ಯಕ್ಕೆ ಒಳ್ಳೆಯದು. ಆದರೆ ತಂಬಾಕು ಸೇವನೆ ಸಮಾಜದಲ್ಲಿ ಸಾಮಾನ್ಯವಾಗಿ ಬಿಟ್ಟಿದೆ. ಇದನ್ನು ಮಾಡಬಾರದು.

ಇದೇ ರೀತಿ ತಂಬಾಕು ಸೇವನೆ ಮಹಾಪಾಪ, ಆದರೆ ಇತ್ತೀಚೆಗೆ ಇದು ಸಾಮಾನ್ಯವಾಗಿ ಬಿಟ್ಟಿದೆ. ಆದ್ದರಿಂದ ಇದನ್ನು ಬಿಟ್ಟು ಬಿಡಬೇಕು" ಎಂದರು. ಭಕ್ತ ಹರಲಾಲರು ಆ ದಿನವೇ ಹುಕ್ಕಾವನ್ನು ಮುರಿದು ಬಿಸಾಕಿದರು. ಅದನ್ನು ನೋಡಿ ಕುಟುಂಬದವರು ಸಂತೋಷಿಸಿದರು. ಎಲ್ಲರೂ ದೀಕ್ಷೆ ಪಡೆದರು. ಹಲವಾರು ಪೀಳಿಗೆಯವರೆಗೂ ಆ ಕುಟುಂಬದಲ್ಲಿ ಹುಕ್ಕಾ ಎಂಬ ಹೆಸರೇ ಇರಲಿಲ್ಲ.

## "ತಂಬಾಕನ್ನು ಕತ್ತೆ-ಕುದುರೆಗಳೂ ಅಸಹ್ಯ ಪಟ್ಟಿಕೊಳ್ಳುತ್ತವೆ"

ಒಂದು ದಿನ ಸಂತ ಗರೀಬ್‌ದಾಸರು (ಝುಜ್ಜರ್ ಜಿಲ್ಲೆಯ ಛುಡಾನಿ ಹಳ್ಳಿಯವರು) ಯಾವುದೋ ಕೆಲಸದ ನಿಮಿತ್ತ ಕುದುರೆಯೇರಿ ಜಿಂದ್ ಜಿಲ್ಲೆಯ ಯಾವುದೋ ಹಳ್ಳಿಗೆ ಹೊರಟರು. ದಾರಿಯಲ್ಲಿ ಮಾಲ್‌ಖೇಡ್ ಎಂಬ ಹಳ್ಳಿಯನ್ನು ತಲುಪಿದರು. ಗೋಧಿಯ ಫಸಲು ಬಂದಿತ್ತು. ಕುದುರೆ ಇದ್ದಕ್ಕಿದ್ದಂತೆ ರಸ್ತೆಯಿಂದ ಹೊಲದ ಕಡೆಗೆ ಹೊರಟಿತು. ಹೊಲದಲ್ಲಿ ಹೊಲ ಕಾಯುವವರಿದ್ದರು. ಕೋಲನ್ನು ಹಿಡಿಯುತ್ತಾ ಗರೀಬ್‌ದಾಸರನ್ನು ಅಟ್ಟಾಡಿಸಿಕೊಂಡು ನಿನ್ನ ತಲೆ ಕೆಟ್ಟಿದೆಯಾ? ನಮ್ಮ ಬೆಳೆಯನ್ನೆಲ್ಲಾ ಹಾಳು ಮಾಡಿದೆಯಲ್ಲಾ? ಕುದುರೆಯನ್ನು ಸರಿಯಾಗಿ ಓಡಿಸಲು ನಿನಗೇನಾಗಿದೆ? ಎಂದು ಬಯ್ಯುತ್ತಾ ಕೋಲಿನಿಂದ ಹೊಡೆಯಲು ಕೈ ಮೇಲೆತ್ತಿದವರೇ. ಎಲ್ಲರೂ ಕಲ್ಲಿನಂತೆ ಐದು ನಿಮಿಷದವರೆಗೆ ನಿಂತಿದ್ದರು. ಸಂತ ಗರೀಬ್‌ದಾಸರು ಅವರಿಗೆ ಆಶೀರ್ವಾದ ನೀಡಲು ಮುಂದಾದರು. ಕಾವಲುಗಾರರಿಗೆ ಎಚ್ಚರವಾದಾಗ ಕೆಳಗೆ ಬಿದ್ದರು. ಕಾವಲುಗಾರರಿಗೆ ಇವರೊಬ್ಬರು ಸಾಮಾನ್ಯ ವ್ಯಕ್ತಿಯಲ್ಲ ಎಂದು ತಿಳಿದು ಹೋಯಿತು. ಅಗ ಅವರ ಕಾಲಿಗೆ ಬಿದ್ದು ಎಲ್ಲರೂ ಕ್ಷಮೆ ಯಾಚಿಸಿದರು. ಆಗ ಸಂತ ಗರೀಬ್‌ದಾಸರು, "ಮಹಾನುಭಾವರೇ, ಈ ದಾರಿಯಲ್ಲಿ ಹೋಗುವವನ ಜೊತೆ ಹೀಗೆ ವರ್ತಿಸುತ್ತೀರಾ? ಹೊಡೆಯಲು ಬರುವಿರಾ? ಮೊದಲು ಕುದುರೆ ದಾರಿ ಬಿಟ್ಟು ಹೊಲಕ್ಕೆ ಏಕೆ ನುಗ್ಗಿತು ಎನ್ನುವುದನ್ನು ತಿಳಿಯಲು ಪ್ರಯತ್ನಿಸಬೇಕು. ಈ ಹೊಲದಲ್ಲಿ ಗೋಧಿಗೆ ಮೊದಲು ಏನನ್ನು ಬೆಳೆದಿದ್ದಿರಿ?" ಎಂದು

ಕೇಳಿದರು. ಆಗ ರೈತರು. 'ಜೋಳ ಹಾಕಿದ್ದೆವು' ಎಂದರು. ಅದಕ್ಕಿಂತ ಮೊದಲು ಏನನ್ನು ಬೆಳೆದಿದ್ದಿರಿ? ಎಂದರು. ಆಗ ರೈತರು 'ತಂಬಾಕನ್ನು ಬೆಳೆದಿದ್ದೆವು' ಎಂದರು. ಸಂತ ಗರೀಬ್‌ದಾಸರು, ತಂಬಾಕಿನ ದುರ್ವಾಸನೆ ಇನ್ನೂ ಈ ಹೊಲದಿಂದ ಬರುತ್ತಿದೆ. ಅದರ ದುರ್ವಾಸನೆಯಿಂದ ಕುದುರೆ ಕಂಗೆಟ್ಟು ಈ ರೀತಿ ದೂರ ಓಡಲು ಪ್ರಯತ್ನಿಸಿ ಅಡ್ಡಾದಿಡ್ಡಿ ಓಡುತ್ತಿದೆ. ನೀವು ತಂಬಾಕು ಸೇವನೆ ಮಾಡುತ್ತೀರಾ, ನೀವು ಪ್ರಾಣಿಗಳಿಗಿಂತ ಕಡೆ, ಗಮನವಿಟ್ಟು ಕೇಳಿ. ಈ ದಿನದಿಂದ ಯಾರೂ ತಂಬಾಕನ್ನು ಸೇವಿಸಬಾರದು. ಹುಕ್ಕಾ ಕುಡಿಯಬಾರದು. ಒಂದು ವೇಳೆ ಆದೇಶ ಪಾಲಿಸದಿದ್ದರೆ ಇಡೀ ಹಳ್ಳಿ ಹಾಳಾಗಿ ಹೋಗುತ್ತದೆ." ಎಂದರು. ಎಲ್ಲರೂ ಅವರ ಮಾತನ್ನು ಒಪ್ಪಿದರು. ನಂತರ ಗರೀಬ್‌ದಾಸರು ಅಲ್ಲಿಂದ ಹೊರಟು ಹೋದ ಮೇಲೆ ರೈತರು ಹುಕ್ಕಾ ಕುಡಿಯಲು ನಿರ್ಧರಿಸಿ, ನಳಿಕೆಗೆ ಹುಕ್ಕಾ ತುಂಬಿದರು. ಕ್ಷಣಾರ್ಧದಲ್ಲಿ ಹುಕ್ಕಾ ಕೈಯಿಂದ ಜಾರಿ ಕೆಳಗೆ ಬಿದ್ದು ಚೂರಾಯಿತು. ಮತ್ತೊಂದು ನಳಿಕೆಗೆ ತುಂಬಿದರು. ಅದೂ ಕೆಳಗೆ ಬಿದ್ದು ಚೂರು ಚೂರಾಯಿತು. ಹೊಲದಲ್ಲಿದ್ದ ಹುಕ್ಕಾ ನಳಿಕೆಗಳಿಗೆಲ್ಲಾ ಅದೇ ಗತಿಯಾಯಿತು. ಹೊಲ ಕಾಯುವವನಿಗೆ ಇದೆಲ್ಲಾ ಆ ಗುರುಗಳ ಮಹಿಮೆ ಎಂದು ತಿಳಿಯಿತು. ಹಳ್ಳಿಗೆ ಹೋಗಿ ನೋಡಿದಾಗ ಎಲ್ಲಾರ ಹುಕ್ಕಾಗಳಿಗೂ ಅದೇ ಗತಿಯಾಗಿತ್ತು. ಇಡೀ ಹಳ್ಳಿಯಲ್ಲಿ ಕೋಲಾಹಲವುಂಟಾಯಿತು. ಭಯದ ವಾತಾವರಣ ಉಂಟಾಯಿತು. ಕಾವಲು ಕಾಯುವವನು ವಿಷಯವನ್ನೆಲ್ಲಾ ತಿಳಿಸಿದ ನಂತರ ಹಳ್ಳಿಯವರಿಗೆ ಜ್ಞಾನೋದಯವಾಯಿತು. ಆ ದಿನದಿಂದ ಮಾಲ್‌ಖೇಡ್ ಹಳ್ಳಿಯಲ್ಲಿ ಯಾರೂ ತಂಬಾಕು ಸೇವನೆ ಮಾಡಲಿಲ್ಲ.

ಸಂತ ಗರೀಬ್‌ದಾಸರು ತಮ್ಮ ಪ್ರಭಾವದಿಂದ ಹುಕ್ಕಾ ಸೇವನೆ ಎಂಬ ದುಶ್ಚಟದಿಂದ ಜನರನ್ನು ಮುಕ್ತಗೊಳಿಸಿದರು. ಜ್ಞಾನದ ಪ್ರಭಾವದಿಂದ ಕೆಟ್ಟತನ ದೂರವಾಗುತ್ತದೆ. ಸತ್ಸಂಗದಿಂದ ಜ್ಞಾನ ಉಂಟಾಗುತ್ತದೆ. ಸತ್ಸಂಗ ಕೇಳುವ ಅಭ್ಯಾಸ ಮಾಡಿಕೊಳ್ಳಿ.

ಇಂಥಾ ಕೆಟ್ಟತನ ಬಿಟ್ಟರೆ ಜೀವನ ಸುಖಮಯವಾಗುವುದೆನ್ನುವುದೇ ಮೇಲಿನ ದೃಷ್ಟಾಂತದ ಆಶಯ.

## "ಮಾದಕತೆ ನಮ್ಮನ್ನು ನಾಶಮಾಡುತ್ತದೆ"

ಮದ್ಯ, ಅಫೀಮ್, ಹೆರೊಯಿನ್ ಮುಂತಾದ ಮಾದಕ ವಸ್ತುಗಳು ನಿಮ್ಮನ್ನು ನಾಶಮಾಡುತ್ತವೆ. ಮಾದಕತೆ ಮೊದಲನೆಯದಾಗಿ ಮನುಷ್ಯನನ್ನು ರಾಕ್ಷಸರನ್ನಾಗಿ ಮಾಡುತ್ತದೆ ನಂತರ ಶರೀರವನ್ನು ಹಾಳು ಮಾಡುತ್ತದೆ. ಶರೀರದ ನಾಲ್ಕು ಮಹತ್ವಪೂರ್ಣ ಭಾಗಗಳೆಂದರೆ 1) ಶ್ವಾಸಕೋಶ 2) ಲಿವರ್ 3) ಕಿಡ್ನಿ 4) ಹೃದಯ. ಮದ್ಯಸೇವನೆ ಈ ನಾಲ್ಕೂ ಅಂಗಗಳನ್ನು ಹಾಳುಮಾಡುತ್ತದೆ. ಚರಸ್ ಬುದ್ಧಿಯನ್ನು ಸಂಪೂರ್ಣವಾಗಿ ಹಾಳುಗೆಡವುತ್ತದೆ. ಹೆರೊಯಿನ್ ಮದ್ಯಕ್ಕಿಂತ ಹೆಚ್ಚು ಹಾನಿಕರ. ಅಫೀಮಿನಿಂದ ಶರೀರ ದುರ್ಬಲವಾಗುತ್ತದೆ. ರಕ್ತ ಮಲಿನವಾಗುತ್ತದೆ. ಆದ್ದರಿಂದ ಯಾರೂ ಅದನ್ನು ಮನೆಯಲ್ಲಾಗಲೀ, ಊರಿನಲ್ಲಾಗಲೀ ಇಟ್ಟುಕೊಳ್ಳಬಾರದು. ಅದರ ಬಗ್ಗೆ ಯೋಚಿಸುವುದು ಸಹ ಮಹಾಪಾಪ.

❖ ಒಬ್ಬ ವ್ಯಕ್ತಿ ದಿಲ್ಲಿಯ ಪಾಲಮ್ ವಿಮಾನ ನಿಲ್ದಾಣದಲ್ಲಿ ಕೆಲಸ ಮಾಡುತ್ತಿದ್ದನು. 1997ರ ಮಾತು. ಆ ಸಮಯದಲ್ಲಿ ಅವನಿಗೆ 12,000 ಸಂಬಳ ಸಿಗುತ್ತಿತ್ತು. ದಿಲ್ಲಿಯ ಹತ್ತಿರದ ಒಂದು ಹಳ್ಳಿಯಲ್ಲಿ ಈ ದಾಸ್ (ರಾಮ್‌ಪಾಲ್ ದಾಸ್) ಸತ್ಸಂಗ ಮಾಡುವುದಕ್ಕೆ ಹೋದನು. ಅಲ್ಲಿ ಒಬ್ಬ ಮುದುಕಿಯು ತನ್ನ ಮೂರು ಜನ ಮೊಮ್ಮಕ್ಕಳ ಜೊತೆ ಸತ್ಸಂಗಕ್ಕೆ ಬಂದಿದ್ದಳು. ಅವಳು ಸತ್ಸಂಗ ಏರ್ಪಡಿಸಿದ್ದವರಿಗೆ ಚಿಕ್ಕಮ್ಮನಾಗಿದ್ದಳು. ಹಳ್ಳಿಯ ಸ್ವಲ್ಪ ಹೊರಗೆ ಒಂದು ಮನೆ ಕಟ್ಟಿಕೊಂಡು ವಾಸವಿದ್ದಳು. ವಿಮಾನ ನಿಲ್ದಾಣದಲ್ಲಿ ನೌಕರನ ತಾಯಿ ಅವಳಾಗಿದ್ದಳು. ಆ ನೌಕರ ಮದ್ಯ ಸೇವಿಸುತ್ತಿದ್ದ. ಹೆಂಡತಿ ಮಕ್ಕಳನ್ನು ಹೊಡೆಯುತ್ತಿದ್ದ. ಇದು ದಿನನಿತ್ಯದ ಮಹಾಭಾರತವಾಗಿತ್ತು.

ಒಂದು ದಿನ ಅವನ ಹೆಂಡತಿ ಕುಡುಕನನ್ನು ಬಿಟ್ಟು ತನ್ನ ತಾಯಿಯ ಮನೆಗೆ ಹೊರಟು ಹೋದಳು. ಆ ತಾಯಿಯು ಮೊಮ್ಮಕ್ಕಳನ್ನು ಸಾಕಿದಳು. ಒಂದು ದಿನ ತನ್ನ ಸೊಸೆಗೆ ಸಮಾಧಾನ ಮಾಡಿ ಮತ್ತೆ ಮನೆಗೆ ಕರೆತಂದಳು. ಆ ರಾತ್ರಿ ಆ ಮುದುಕಿಯು ತನ್ನ ಸೊಸೆ ಮತ್ತು ಮೊಮ್ಮಕ್ಕಳ ಜೊತೆ ಸತ್ಸಂಗಕ್ಕೆ ಬಂದಳು. ಸತ್ಸಂಗದಲ್ಲಿ ಪ್ರತಿ ಸಾರಿಯೂ ವರ್ಣನೆ ನೀಡುವ ಅವಶ್ಯಕತೆ ಇರುತ್ತದೆ. ಮೊದಲು ಭಕ್ತಿಯಿಂದ ಉಂಟಾಗುವ ಲಾಭ ಮತ್ತು ಮಾಡದಿದ್ದರೆ ಉಂಟಾಗುವ ನಷ್ಟದ ಬಗ್ಗೆ ಹೇಳಲಾಗುತ್ತದೆ. ಆ ದಿನ ಆ ಕುಡುಕನು ಮನೆಗೆ ಬಂದಾಗ ಮನೆಯಲ್ಲಿ ಯಾರೂ ಇರಲಿಲ್ಲ. ಸ್ವಲ್ಪ ಹೊತ್ತು ಅಲ್ಲೇ ಕುಳಿತಿದ್ದನು. ಆಗ ನೆರಮನೆಯವನು, "ನಿಮ್ಮ ತಾಯಿ ಎಲ್ಲರನ್ನು ಕರೆದುಕೊಂಡು ಸತ್ಸಂಗಕ್ಕೆ ಹೋಗಿದ್ದಾಳೆ. ಅಲ್ಲೆ ಊಟದ ಏರ್ಪಾಡಾಗಿರುತ್ತದೆ". ಎಂದನು. ಅವನಿಗೆ ಏನೆನ್ನಿಸಿತೋ, ಅವನೂ ಸತ್ಸಂಗಕ್ಕೆ ಹೋದನು. ಎಲ್ಲರಿಗಿಂತ ಹಿಂದೆ ಹೋಗಿ ಕುಳಿತನು.

ಸತ್ಸಂಗದ ವಚನ:– ಮಾನವ ಜನ್ಮ ಪಡೆದು ಅವನು ಒಳ್ಳೆಯ ಕೆಲಸ ಮಾಡದಿದ್ದರೆ ಅವನ ಜೀವನ ನರಕವಾಗುತ್ತದೆ. ಮಾದಕ ವಸ್ತುವಿನ ಸೇವನೆಯಿಂದ ಅವನ ಇಂದಿನ ಜೀವನ ಮತ್ತು ಭವಿಷ್ಯತ್ತು ಎರಡೂ ನರಕವಾಗುತ್ತದೆ. ಯಾವ ವ್ಯಕ್ತಿ ತನ್ನ ಪೂರ್ವ ಜನ್ಮದ ಪುಣ್ಯ ಗಳಿಸಿರುತ್ತಾನೋ ಪ್ರತಿಫಲವಾಗಿ ಅವನಿಗೆ ಒಳ್ಳೆಯ ನೌಕರಿ ಸಿಗುತ್ತದೆ. ಆಗ ಒಳ್ಳೆಯ ಕೆಲಸ ಮಾಡದಿದ್ದರೆ ಮುಂದಿನ ಜನ್ಮದಲ್ಲಿ ನಾಯಿ, ಕತ್ತೆ, ಹಂದಿ, ಎತ್ತಾಗಿ ಹುಟ್ಟಿ ಹೊಲಸು ತಿನ್ನಬೇಕಾಗುತ್ತದೆ.

ಹಿಂದಿನ ಜನ್ಮದಲ್ಲಿ ಒಳ್ಳೆಯ ಕೆಲಸ ಮಾಡಿದ್ದರೆ ಒಳ್ಳೆಯ ಊಟ ಸಿಗುತ್ತದೆ. ಮಾನವ ಜನ್ಮ ಸಿಗುತ್ತದೆ. ಆಗ ಇಷ್ಟಬಂದಾಗ ಊಟ ಮಾಡಬಹುದು, ಬಾಯಾರಿಕೆಯಾದಾಗ ಕುಡಿಯಬಹುದು. ಪಿಸ್ತಾ ಬಾದಾಮಿ ತಿನ್ನಬಹುದು. ಮನುಷ್ಯನಾಗಿ ಒಳ್ಳೆಯ ಕೆಲಸ ಮಾಡದಿದ್ದರೆ ಪ್ರಾಣಿಗಳಾಗಿ ಹುಟ್ಟಿ ದುರ್ಗತಿ ಕಾಣಬೇಕಾಗುತ್ತದೆ. ಸಮಯಕ್ಕೆ ಸರಿಯಾಗಿ ಊಟ ಸಿಗುವುದಿಲ್ಲ. ಸೊಳ್ಳೆಗಳಿಂದ ಕಡಿಸಿಕೊಂಡು ನರಳಬೇಕಾಗುತ್ತದೆ. ಪರಮೇಶ್ವರರರಾದ ಕಬೀರರಿಂದ ಲಭ್ಯವಾದ ಜ್ಞಾನದಿಂದ ಸಂತ ಗರೀಬ್‌ದಾಸರು ಹೇಳುತ್ತಾರೆ.

ಗರೀಬ್, ನರ್ ಸೇತೀ ತೂ ಪಶುವಾ ಕೀಜೈ, ಗಧಾ ಬೈಲ್ ಬನಾಯೀ ।
ಛಪ್ಪನ್ ಭೋಗ್ ಕಹಾಂ ಮನ್ ಬೋರೇ, ಕುರಡೀ ಚರನೇ ಜಾಯೀ ॥

ಭಾವಾರ್ಥ:– ಮಾನವ ಶರೀರಬಿಟ್ಟ ಮೇಲೆ ಭಕ್ತಿಹೀನ ಹಾಗೂ ಕರ್ಮಹೀನ ಜೀವವು ಕತ್ತೆ, ಎತ್ತು ಮುಂತಾದ ಯೋನಿಗಳನ್ನು ಪ್ರವೇಶಿಸುತ್ತದೆ. ನಂತರ ಮಾನವನಿಗೆ ಸಿಗುವಂತಹ ಆಹಾರವು ಸಿಗುವುದಿಲ್ಲ. ಕತ್ತೆಯಾಗಿ ಹೊಲಸಿನಲ್ಲಿ ಹೊರಳಾಡುತ್ತಾ ಹೊಲಸನ್ನೇ ತಿನ್ನಬೇಕು. ಎತ್ತಾಗಿ ಹುಟ್ಟಿ ಮೂಗಿಗೆ ಮೂಗುದಾರ ಹಾಕಿಸಿಕೊಂಡು, ಹಗ್ಗದಿಂದ ಬಿಗಿಸಿಕೊಂಡು ಬದುಕಬೇಕು. ಬಾಯಾರಿದಾಗ ನೀರು ಕುಡಿಯುವಂತಿಲ್ಲ, ಹಸಿವಾದಾಗ ಊಟ ಮಾಡುವಂತಿಲ್ಲ. ನೊಣ, ಸೊಳ್ಳೆಗಳಿಂದ ಪಾರಾಗಲು ಒಂದು ಬಾಲವಿರುತ್ತದೆ ಅಷ್ಟೇ. ಅದನ್ನೇ ಕೂಲರ್ ತರಹ, ಫ್ಯಾನ್ ತರಹ ಉಪಯೋಗಿಸಿಕೊಳ್ಳಬೇಕು. ಯಾವ ಪ್ರಾಣಿಗಳು ಹೆಚ್ಚು ಪಾಪಕರ್ಮ ಮಾಡಿರುತ್ತವೋ, ಅವುಗಳ ಬಾಲವೂ ನಂತರದಲ್ಲಿ ಕತ್ತರಿಸಲ್ಪಡುತ್ತದೆ. ಒಂದು ಕೋಲನ್ನು ತಿರುವುತ್ತಾ ಆ ಪ್ರಾಣಿಗಳನ್ನು ನಿಯಂತ್ರಿಸಲಾಗುತ್ತದೆ. ಅಂಥಾ ಜೀವನವು ಬೇಕೇ?.

ಒಮ್ಮೆ ಒಂದು ಎತ್ತಿನ ಹಿಂದಿನ ಕಾಲಿಗೆ ಒಂದು ದೊಡ್ಡ ಮೊಳೆ ಸಿಕ್ಕಿಕೊಂಡಿತು. ನಡೆದಾಡುತ್ತಾ ನಡೆದಾಡುತ್ತಾ ಅದು ಆಳವಾಗಿ ಒಳಗೆ ಹೋಗಿ ಬಿಟ್ಟಿತು. ಎತ್ತಿಗೆ ನೋವಾಗಿ ಅದು ಕುಂಟಲಾರಂಭಿಸಿತು. ಮಾಲೀಕನಿಗೆ ಈ ವಿಷಯ ತಿಳಿಯದೇ, ಕಾಲಿಗೆ ಏನೋ ಏಟಾಗಿರಬಹುದು, ನರ ಹೊರಳಿರಬಹುದು, ಓಡಾಡಿದರೆ ಸರಿ ಹೋಗಬಹುದು ಎಂದು ತಿಳಿದನು. ಒಮ್ಮೊಮ್ಮೆ ಒಂದು ನರದ ಮೇಲೆ ಇನ್ನೊಂದು

ನರ ಕುಳಿತರೆ, ನಡೆದಾಡಿದರೆ ಸರಿ ಹೋಗುತ್ತದೆ, ಆದರೆ ಈ ಎತ್ತಿಗೆ ಹಾಗಾಗಲಿಲ್ಲ. ಇಡೀ ದಿನ ಎತ್ತು ನೇಗಿಲಿಗೆ ಕಟ್ಟಿಸಿಕೊಂಡು ಉತ್ತುವ ಕೆಲಸ ಮಾಡಿತು. ಮನೆಗೆ ಬರುವ ವೇಳೆಗೆ ಕಾಲಿಗೆ ಹೆಚ್ಚು ನೋವಾಗಿ ಆ ಎತ್ತಿಗೆ ನೆಲದ ಮೇಲೆ ಕಾಲನ್ನು ಊರುವುದೇ ಕಷ್ಟವಾಯಿತು. ನಿಧಾನವಾಗಿ ನಡೆಯುತ್ತಿತ್ತು. ಮನೆ ಸೇರಿದೊಡನೆ ಬಡಪಾಯಿ ಎತ್ತು ಕುಳಿತು ಬಿಟ್ಟಿತು. ಮೇವನ್ನು ಮುಟ್ಟಲಿಲ್ಲ. ನೋವು ಹೆಚ್ಚಾಗಿದ್ದ ಕಾರಣ ಕಣ್ಣುಗಳಿಂದ ನೀರು ಬರುತ್ತಿತ್ತು. ಬೆಳಿಗ್ಗೆ ಆ ಎತ್ತು ಏಳಲೇ ಇಲ್ಲ. ಅಲ್ಲೇ ಮಲಗಿಬಿಟ್ಟಿತು. ಆಗ ದನಗಳ ವೈದ್ಯ ಬಂದು ಪರೀಕ್ಷಿಸಿದನು, ಅವನಿಗೂ ಸರಿಯಾಗಿ ತಿಳಿಯಲಿಲ್ಲ. ಎಲ್ಲೋ ಕಾಲಿನಲ್ಲಿ ಬಾವು ಆಗಿರಬೇಕೆಂದು ತಿಳಿದು ಹಳೇ ಬೆಲ್ಲವನ್ನು ಕುಟ್ಟಿ ಪುಡಿ ಮಾಡಿ ಪಟ್ಟಿಕಟ್ಟಿದರು. ಸರಿಯಾಗುತ್ತದೆ. ಎಂದು ಹೇಳಿದನು. ಮೊಳೆ ಚುಚ್ಚಿದ್ದು ಪಾದಕ್ಕಾದರೆ ಚಿಕಿತ್ಸೆ ಕಾಲಿಗೆ ಮಾಡುತ್ತಿದ್ದರು. ಹೀಗೆ ಒಂದು ತಿಂಗಳು ಕಳೆದು ಹೋಯಿತು. ನಂತರ ಒಂದು ದಿನ ಆ ಕಾಲಿನಿಂದ ಕೀವು ಬರಲು ಪ್ರಾರಂಭವಾಯಿತು. ಅದನ್ನು ಸ್ವಚ್ಛಗೊಳಿಸಿದಾಗ ಅಲ್ಲಿ ಸಣ್ಣದಾಗಿ ಮೊಳೆಯ ತುದಿ ಕಾಣಲಾರಂಭಿಸಿತು. ಆಗ ತಕ್ಷಣವೇ ಇಕ್ಕಳದಿಂದ ಆ ಮೊಳೆಯನ್ನು ತೆಗೆಯಲಾಯಿತು. ಒಂದು ವಾರದಲ್ಲಿ ಎತ್ತು ಸರಿಯಾಯಿತು. ಹೊಟ್ಟೆ ತುಂಬಾ ಹುಲ್ಲು ತಿಂದು ನೀರು ಕುಡಿಯಿತು.

ಯೋಚಿಸುವ ವಿಷಯ:– ಈ ಪ್ರಾಣಿಯು ಮಾನವ ಶರೀರದಲ್ಲಿದ್ದಾಗ ಅದು ಮುಂದೆ ನಾನು ಎತ್ತಾಗಿ ಹುಟ್ಟುವೆ ಎಂದು ಕನಸ್ಸಿನಲ್ಲೂ ಎಣಿಸಿರಲಿಲ್ಲ. ಬಾಯಿ ಬಿಟ್ಟು ಎಲ್ಲಿ ನೋವು ಆಗುತ್ತಿದೆ ಎಂದು ಹೇಳಲೂ ಆ ಎತ್ತಿಗೆ ಸಾಧ್ಯವಿರಲಿಲ್ಲ.

ಕಬೀರ್, ಜಿವ್ಹಾ ತೋ ವೋಹೇ ಭಲೀ, ಜೋ ರಟೈ ಹರಿನಾಮ್ ।
ನಾ ತೋ ಕಾಟ್ ಕೇ ಫೈಂಕ್ ದಿಯೋ, ಮುಖ್ ಮೆಂ ಭಲೋ ನಾ ಚಾಮ್ ॥

ಭಾವಾರ್ಥ:– ಮನುಷ್ಯನಿಗೆ ನಾಲಿಗೆ ಬಹಳ ಮಹತ್ವಪೂರ್ಣವಾದ ಅಂಗ. ಪರಮಾತ್ಮನ ಗುಣಗಾನ, ನಾಮಸ್ಮರಣೆ, ಜಪ ಮಾಡದಿದ್ದರೆ ಜೀವನ ವ್ಯರ್ಥ. ಏಕೆಂದರೆ ಈ ನಾಲಿಗೆಯಿಂದ ಏನು ಬೇಕಾದರೂ ಕೆಟ್ಟ ಮಾತನ್ನಾಡಿ ಪಾಪಮಾಡಬಹುದು. ಬಲಶಾಲಿ ವ್ಯಕ್ತಿಯು ದುರ್ಬಲ ವ್ಯಕ್ತಿಗೆ ಕೆಟ್ಟಮಾತನ್ನು ಆಡಬಹುದು. ಇದರಿಂದ ಆತ್ಮ ಅಳುತ್ತದೆ. ಯಾರನ್ನಾದರೂ ಬಯ್ದು, ಯಾರ ಬಗ್ಗೆಯೋ ಸುಳ್ಳು ಸಾಕ್ಷಿ ಹೇಳಿ, ಯಾರ ವ್ಯಾಪಾರದಲ್ಲೋ ಮೋಸ ಮಾಡಿ, ಅನೇಕ ರೀತಿಯಲ್ಲಿ ಮಾನವನು ತನ್ನ ನಾಲಿಗೆಯಿಂದ ಪಾಪ ಮಾಡುತ್ತಾನೆ. ಯಾರು ನಾಲಿಗೆಯ ಸದುಪಯೋಗ ಮಾಡಿಕೊಳ್ಳುವುದಿಲ್ಲವೋ, ಒಳ್ಳೆಯ ಮಾತು, ಮಧುರವಾದ ವಾಣಿ, ಪರಮಾತ್ಮನ ಗುಣಗಾನ, ದೇವರ ಬಗ್ಗೆ ಚರ್ಚೆ, ಧಾರ್ಮಿಕ ಗ್ರಂಥಗಳ ಪಠಣ, ದೇವರ ಹೆಸರಿನಲ್ಲಿ ಜಪ, ತಪ ಮುಂತಾದವುಗಳನ್ನು ತಮ್ಮ ನಾಲಿಗೆಯಿಂದ ಮಾಡುವುದಿಲ್ಲವೋ ಅಂಥಾವರ ನಾಲಿಗೆಯನ್ನು ಕತ್ತರಿಸಿ ಬಿಸಾಕು ಎಂದು ಪರಮೇಶ್ವರರಾದ ಕಬೀರರು ಹೇಳಿದ್ದಾರೆ.

(ನಾಲಿಗೆ ಕತ್ತರಿಸು ಎಂದರೆ ಸಾಂಕೇತಿಕವಾಗಿ ಕತ್ತರಿಸು ಎಂದರ್ಥ. ನಾಲಿಗೆಯನ್ನು ಎಂದಿಗೂ ಕತ್ತರಿಸಬಾರದು. ಒಳ್ಳೆಯ ಕಾರ್ಯವನ್ನು ಪ್ರಾರಂಭಿಸು ಎಂದರ್ಥ. ರಾಮನಾಮ ಅಥವಾ ಭಗವಂತನ ಗುಣಗಾನ ಮಾಡದಿದ್ದರೆ ಈ ನಾಲಿಗೆ ಇದ್ದು ವ್ಯರ್ಥ ಎಂದರ್ಥ.)

* ಇಂದಿನ ಕಾಲದಲ್ಲಿ (1970ನೇ ಇಸವಿಯಿಂದ) ಮಾನವನಿಗೆ ಅನೇಕ ಸೌಲಭ್ಯಗಳು ಲಭಿಸುತ್ತಿದೆ. ಆದರೆ ಅವನು ಎಷ್ಟು ವೇಗವಾಗಿ ಪರಮಾತ್ಮನಿಂದ ದೂರ ಸರಿಯುತ್ತಿದ್ದಾನೋ, ಅಷ್ಟೇ ವೇಗವಾಗಿ ಅವನಿಗೆ ದುಃಖ ಸಮೀಪಿಸುತ್ತಿದೆ. ಆರ್ಥಿಕ ಸ್ಥಿತಿ ಸುಧಾರಿಸುತ್ತಿದೆ ಆದರೆ ಮಾನಸಿಕ ಶಾಂತಿ ದೂರವಾಗುತ್ತಿದೆ. ಇದಕ್ಕೆ ಮಾದಕತೆಯೇ ಮುಖ್ಯ ಕಾರಣ.

ಒಬ್ಬ ತಂದೆ ಕೆಲಸಕ್ಕೆ ಹೋಗಿದ್ದರೆ ಅವನ ಮಕ್ಕಳು ತನ್ನ ತಂದೆ ಬರುವಾಗ ತಮಗೆ ಬೇಕಾದ

ವಸ್ತುಗಳನ್ನು ತರಬಹುದೆಂದು ಮಕ್ಕಳು ಕಾಯುತ್ತಿರುತ್ತಾರೆ. ತಂದೆ ಬಂದ ತಕ್ಷಣ ಚಿಕ್ಕ ಚಿಕ್ಕ ಮಕ್ಕಳು ಓಡಿ ಹೋಗಿ ಅಪ್ಪನನ್ನು ತಬ್ಬಿಕೊಳ್ಳುತ್ತಾರೆ. ಆದರೆ ಯಾರ ತಂದೆ ಮಾದಕ ವ್ಯಸನಿಯಾಗಿರುತ್ತಾನೋ ಆ ಮನೆಯಲ್ಲಿ ಜಗಳ ಬಿಟ್ಟು ಪ್ರೀತಿ ಸಿಗಲು ಹೇಗೆ ಸಾಧ್ಯ? ಮಕ್ಕಳು ಅಪ್ಪನ ಬಳಿ ಹೋಗಲು ಹೆದರುತ್ತಾರೆ. ಅವರ ಶಾರೀರಿಕ, ಮಾನಸಿಕ ವಿಕಾಸವಾಗುವುದಿಲ್ಲ. ಆ ಮನೆ ನರಕವಾಗುತ್ತದೆ. ಮದ್ಯ ಕುಡಿಯುವ ವ್ಯಕ್ತಿಗೆ ಸಮಾಜದಲ್ಲಿ ಯಾವ ಗೌರವವೂ ಇರುವುದಿಲ್ಲ.

ಮುಂದಿನ ಜನ್ಮದಲ್ಲಿ ಆ ವ್ಯಕ್ತಿ ನಾಯಿಯಾಗಿ ಮಲ ತಿನ್ನಬೇಕಾಗುತ್ತದೆ. ಅವನು ಮೋರಿ ನೀರು ಕುಡಿಯುತ್ತಾನೆ. ಪಶು ಪಕ್ಷಿಯಾಗಿ ಹುಟ್ಟಿ ಕಷ್ಟಪಡುತ್ತಾನೆ. ಆದ್ದರಿಂದ ಮಾದಕ ವಸ್ತುಗಳ ಸೇವನೆ ಬಿಟ್ಟು ಮನುಷ್ಯ ಜೀವನ ಮಾಡು. ಸಭ್ಯ ಸಮಾಜದಲ್ಲಿ ನೆಮ್ಮದಿಯಿಂದ ಬದುಕಲು ಬಿಡು. ಒಬ್ಬ ಕುಡುಕ ನೂರಾರು ವ್ಯಕ್ತಿಗಳಿಗೆ ದುಃಖ ತಂದಿಡುತ್ತಾನೆ. ಹೆಂಡತಿ, ಹೆಂಡತಿಯ ತಂದೆ, ತಾಯಿ, ಅಕ್ಕ, ತಮ್ಮ, ತನ್ನ ತಂದೆ, ತಾಯಿ, ಅಕ್ಕ, ತಂಗಿ, ಅಣ್ಣ, ತಮ್ಮ ಮುಂತಾದವರಿಗೆ ಕಷ್ಟ ಕೊಡುತ್ತಾನೆ. ಕೇವಲ ಒಂದು ಗಂಟೆ ಮತ್ತಿನಲ್ಲಿದ್ದರೆ, ಆಗ ಹಣಹಾಳು, ಗೌರವ ಹಾಳು, ಮಾನ ಮರ್ಯಾದೆ ಮಣ್ಣುಪಾಲು, ಕುಟುಂಬದ ನೆಮ್ಮದಿ ಹಾಳು. ಭವಿಷ್ಯದಲ್ಲಿ ಆ ವ್ಯಕ್ತಿಯು ಖಂಡಿತಾ ಸುಖವಾಗಿರುವುದಿಲ್ಲ. ನರಕದ ಜೀವನ ಸಾಗಿಸಬೇಕಾಗುತ್ತದೆ, ಆದ್ದರಿಂದ ಕೆಟ್ಟಿದ್ದನ್ನು ಬೇಗ ಬಿಡಬೇಕು ಎಂದು ತೀರ್ಮಾನಿಸಬೇಕು.

ಪ್ರಶ್ನೆ:– ಮುಂದಿನ ಜನ್ಮದಲ್ಲಿ ಏನಾಗುತ್ತದೆ ಎಂದು ನೋಡಿದವರ್‍ಯಾರು?

ಉತ್ತರ:– ಉದಾಹರಣೆಗೆ, ಒಬ್ಬ ಕುರುಡ ಒಮ್ಮೆ ಒಂದು ಕಾಡಿನ ಕಡೆಗೆ ಹೋಗುತ್ತಿದ್ದನು. ಮುಂದೆ ಒಬ್ಬ ಸಜ್ಜನ ವ್ಯಕ್ತಿ ನಿಂತಿದ್ದರು. ಆ ವ್ಯಕ್ತಿ ಕುರುಡನಿಗೆ, ಸೂರ್‌ದಾಸರೆ, ಈ ಕಡೆ ಹೋಗಬೇಡಿ, ಅದು ದಟ್ಟವಾದ ಕಾಡಿಗೆ ಹೋಗುತ್ತದೆ, ಅಲ್ಲಿ ಭಯಂಕರವಾದ ಹುಲಿ, ಸಿಂಹ, ಚಿರತೆಗಳಿರುತ್ತವೆ. ನೀವು ವಾಪಸ್ಸು ಹೋಗಿ ಎಂದು ಹೇಳಿದನು. ಆಗ ಆ ಕುರುಡನು ಕುಡುಕನಾಗಿರದೆ ಇದ್ದಿದ್ದರೆ ಅವನು ತಕ್ಷಣವೇ ಹಿಂತಿರುಗಿ ಹೋಗುತ್ತಿದ್ದನು. ಒಂದು ವೇಳೆ ಅವನು ಕುಡುಕನೇ ಆಗಿದ್ದರೆ, ನಶೆಯಲ್ಲಿದ್ದರೆ, ಅವನು 'ನೋಡಿದವರ್‍ಯಾರು? ಈ ಕಾಡಿನಲ್ಲಿ ಹುಲಿ, ಚಿರತೆ ಇದೆ ಎಂದು ಹೇಗೆ ನಂಬುವುದು?' ಎಂದು ಹೇಳುತ್ತಾ ಮುಂದುವರಿಯುತ್ತಿದ್ದ.

ಯೋಚಿಸಬೇಕಾದ ವಿಷಯ:– ಕುರುಡನಿಗೆ ಕಾಣುವುದಿಲ್ಲ, ಕಣ್ಣಿದ್ದವನ ಮಾತಿನ ಮೇಲೆ ನಂಬಿಕೆ ಇಲ್ಲ. ಹಾಗಾದರೆ ಅವನಿಗೆ ತಿಳುವಳಿಕೆ ಹೇಗೆ ಹೇಳುವುದು?. ಆ ಸಜ್ಜನನ ಮಾತು ಕೇಳದಿದ್ದರೆ ಅವನು ಯಾವುದೋ ಸಿಂಹ, ಹುಲಿಗೆ ಆಹಾರವಾಗಬೇಕಾಗುತ್ತದೆ.

ಇದೇ ರೀತಿ ಸಂತರು ಜ್ಞಾನವೆಂಬ ಕಣ್ಣುಳ್ಳವರಾಗಿರುತ್ತಾರೆ. ನಾವು ಕುರುಡರಾಗಿರುತ್ತೇವೆ. ನಾವು ಸಂತರ ಮಾತನ್ನು ಕೇಳದೆ ನಮ್ಮ ಜೀವನದ ದಾರಿಯನ್ನು ಬದಲಿಸಿಕೊಳ್ಳದೇ ಹೋದರೆ ಮೇಲೆ ಹೇಳಿದಂತೆ ಆಗುತ್ತದೆ.

ನರ್ ಸೇ ಫಿರ್ ಪೀಛೇ ತೂ ಪಶುವಾ ಕೀಜೈ, ಗಧಾ ಬೈಲ್ ಬನಾಯೀ ।
ಛಪ್ಪನ್ ಭೋಗ್ ಕಹಾಂ ಮನ್ ಬೌರೇ, ಕುರಡೀ ಚರನೇ ಜಾಯೀ ॥

❖ ಕೆಲವರು, ಅಯ್ಯೋ ಮುಂದೆ ಏನಾಗುತ್ತೋ ನೋಡೋಣ ಎನ್ನುತ್ತಾರೆ. ಅವರಲ್ಲಿ ವಿನಂತಿಸುವುದೇನೆಂದರೆ, ಕತ್ತೆಯಾದ ಮೇಲೆ ನೋಡೋದೇನು? ಆಗ ಕತ್ತೆ ಕಾಯುವವನು ನಿಮ್ಮನ್ನು ನೋಡಿಕೊಳ್ಳುತ್ತಾನೆ ಅಷ್ಟೇ.

ಹಿಂದೆ ಹೇಳಿದ ಪ್ರಸಂಗದಲ್ಲಿ ಆ ಕುಡುಕನೂ ಸತ್ಸಂಗಕ್ಕೆ ಬಂದನು. ಏಕೆಂದರೆ ಮನೆಗೆ ಬೀಗ ಹಾಕಿತ್ತು, ಸ್ವಲ್ಪ ಸಮಯದ ನಂತರ ನಶೆಯೆಲ್ಲಾ ಇಳಿಯಿತು. ಸತ್ಸಂಗ ಕೇಳಲಾರಂಭಿಸಿದನು. ಆ ದಿನದಿಂದ ಆ ಕುಡುಕ ಎಂದಿಗೂ ಮದ್ಯ ಕುಡಿಯಲಿಲ್ಲ. ದೀಕ್ಷೆ ಪಡೆದು ಇಡೀ ಕುಟುಂಬಕ್ಕೆ ದೀಕ್ಷೆ

ಕೊಡಿಸಿದನು.

ಇದಕ್ಕೆ ಮೊದಲು ನಾವು(ಲೇಖಕರು ಮತ್ತು ಸತ್ಸಂಗಕ್ಕೆ ಬಂದ ಕೆಲ ಭಕ್ತರು) ಒಂದು ದಿನ ಬೆಳಿಗ್ಗೆ ಊರಿನ ಹೊರಗಡೆ ಸುತ್ತಾಡಲು ಹೊರಟೆವು. ದಾರಿಯಲ್ಲಿ ಆ ಕುಡುಕನ ಮನೆ ಇತ್ತು. ಗಲ್ಲಿಯಲ್ಲಿ ಅವನ ತಾಯಿ ನಿಂತಿದ್ದಳು. ಅವಳು, 'ಗುರುಗಳೇ, ಚಾ ಕುಡಿದು ಹೋಗಿ' ಎಂದಳು. ಊರಿನ ಒಬ್ಬ ಭಕ್ತನೆಂದ, "ಖಂಡಿತವಾಗಿಯೂ ಅವರ ಮನೆಗೆ ಹೋಗೋಣ. ಏಕೆಂದರೆ ಅವರ ಮನೆ ಹಾಳು ಬಿದ್ದಿದೆ. ಇಡೀ ಕುಟುಂಬ ಹಾಳಾಗಿದೆ, ಸಾಧುಸಂತರ ಚರಣ ಸ್ಪರ್ಶದಿಂದ ಅದು ಪವಿತ್ರವಾಗಬಹುದು."ನಾವೆಲ್ಲಾ ಅವನ ಮನೆಗೆ ಹೋದೆವು. ನಾವು ಐದು ಜನರಿದ್ದೆವು. ಅಂಗಳದಲ್ಲಿ ಮಂಚ ಹಾಕಿದ್ದರು. ಮೇ ತಿಂಗಳಾಗಿತ್ತು. ಮರದ ನೆರಳಿತ್ತು. ಅವನ ತಾಯಿಯು, ಸೊಸೆಯನ್ನು ಕರೆದು, ಚಹಾ ತಯಾರಿಸಲು ಹೇಳಿದಳು. ಅವಳು ಒಲೆ ಹತ್ತಿಸಿ ಚಹಾ ಮಾಡಲು ಪ್ರಾರಂಭಿಸಿದಳು. ನಾವೆಲ್ಲಾ ಚಹ ಬೇಗ ತರುವಂತೆ ಮತ್ತೆ ಮತ್ತೆ ಒತ್ತಾಯಿಸತೊಡಗಿದೆವು. ಆಗ ಅವಳು ಅಳಲು ಪ್ರಾರಂಭಿಸಿದಳು. ಆಗ ಮನೆಯಲ್ಲಿ ಏನೂ ಇಲ್ಲ. ಪಾಳು ಬಿದ್ದಿದೆ ಎಂದು ಅತ್ತುಕೊಂಡಳು. ಆದರೆ ಅದೇ ವ್ಯಕ್ತಿ ದೀಕ್ಷೆ ಪಡೆದ ನಂತರ ಸಂಪೂರ್ಣ ಬದಲಾಗಿ ಬಿಟ್ಟಿದ್ದನು. ಲೇಖಕ (ರಾಮ್‌ಪಾಲ್ ದಾಸ್) ಮತ್ತೊಮ್ಮೆ ಪಂಜಾಬ್‌ಖೇಡ್ ಎನ್ನುವ ಹಳ್ಳಿಗೆ ಸತ್ಸಂಗಕ್ಕೆ ಹೋದಾಗ ಆ ವ್ಯಕ್ತಿ ತನ್ನ ತಾಯಿ, ಹೆಂಡತಿ ಮತ್ತು ಮಕ್ಕಳನ್ನು ಕರೆದುಕೊಂಡು ಬಂದಿದ್ದನು. ಅವನು ಕಾರಿನಲ್ಲಿ ಕರೆತಂದಿದ್ದನು. ಮಕ್ಕಳೆಲ್ಲಾ ಒಳ್ಳೆಯ ಬಟ್ಟೆ ತೊಟ್ಟಿದ್ದರು. ಮನೆಯಲ್ಲಿ ಜಗಳವಿರಲಿಲ್ಲ. ಬರುವ ಸಂಬಳವೆಲ್ಲಾ ಹೆಂಡತಿಗೆ ನೀಡುತ್ತಿದ್ದನು. ಹೆಂಡತಿ ಅಚ್ಚುಕಟ್ಟಾಗಿ ಸಂಸಾರ ನಡೆಸಿಕೊಂಡು ಹೋಗುತ್ತಿದ್ದಳು. ಆ ತಾಯಿಯು ಗುರುವನ್ನು ಕುರಿತು ಹೀಗೆಂದಳು, 'ಆ ದಿನ ನೀವು ಬಂದಾಗ ನಮ್ಮ ಮನೆ ಪಾಳು ಬಿದ್ದಿತ್ತು' ಆಗ ಲೇಖಕರೆಂದರು, ಅಮ್ಮಾ, ನಿನ್ನ ಮಗ ಕೆಟ್ಟವನಲ್ಲ, ಆದರೆ ಒಳ್ಳೆಯ ವಿಚಾರಗಳನ್ನು ಅವನು ಎಂದಿಗೂ ಕೇಳಿರಲಿಲ್ಲ ಅಷ್ಟೇ. ಈ ಮೊದಲೇ ಸತ್ಸಂಗದ ವಿಚಾರ ಕೇಳಿದ್ದಿದ್ದರೆ ಕೆಟ್ಟತನ ಮಾಡುತ್ತಿರಲಿಲ್ಲ. ಇದೆಲ್ಲಾ ಪರಮೇಶ್ವರರಾದ ಕಬೀರರ ಕೃಪೆ. ಸತ್ಸಂಗಕ್ಕೆ ಬಂದಿದ್ದರಿಂದ ಅವನ ಆತ್ಮದ ಮೈಲಿಗೆಯೆಲ್ಲಾ ತೊಳೆದು ಹೋಯಿತು. ನಿಮ್ಮ ಕುಟುಂಬ ನರಕದಿಂದ ಸ್ವರ್ಗಕ್ಕೆ ಹೋಗಿ ವಾಸ ಮಾಡುತ್ತಿದೆ. ಪರಮಾತ್ಮನನ್ನು ಭಜಿಸಿದರೆ ಎಂದಿಗೂ ಕಷ್ಟ ಬರುವುದಿಲ್ಲ. ಭಕ್ತಿಯಿಂದ ಇರಬೇಕು. ಆಗ ನಿಮ್ಮ ಇಡೀ ಪೀಳಿಗೆಯು ಉದ್ಧಾರವಾಗುತ್ತದೆ. ಹೀಗೆ ಸತ್ಸಂಗದಿಂದ ಮಾನವನ ಉದ್ಧಾರವಾಗಿ ವಿಶ್ವದಲ್ಲಿ ಶಾಂತಿ, ಪರಸ್ಪರ ಪ್ರೇಮ ಹೆಚ್ಚಾಗುತ್ತದೆ. ಸತ್ಸಂಗದ ವಿಚಾರವನ್ನು ಖಂಡಿತವಾಗಿಯೂ ಕೇಳುತ್ತಿರಿ.

## "ತಂದೆ ತಾಯಿಯ ಸೇವೆ ಮಾಡುವುದು ಮತ್ತು ಅವರನ್ನು ಗೌರವಿಸುವುದು "ನಮ್ಮ ಪರಮ ಕರ್ತವ್ಯ"

ಪ್ರತಿಯೊಬ್ಬ ತಂದೆ ತಾಯಿಗೂ ತಮ್ಮ ಮಗು ಯೋಗ್ಯನಾಗಿರಬೇಕೆಂಬ ಅಭಿಲಾಷೆ ಇರುತ್ತದೆ. ಸಮಾಜದಲ್ಲಿ ಕೆಟ್ಟ ಹೆಸರು ಬರಬಾರದು. ಒಳ್ಳೆಯ ಚಾರಿತ್ಯ ಇರಬೇಕು. ಹೇಳಿದಂತೆ ಕೇಳಬೇಕು ಎಂಬ ಆಸೆ ಇರುತ್ತದೆ. ಮುದಿಕಾಲದಲ್ಲಿ ನಮ್ಮ ಸೇವೆ ಮಾಡಬೇಕು. ನಮ್ಮ ಮಾತು ಕೇಳುವಂಥಾ ಸೊಸೆ ಬರಬೇಕು. ಸಮಾಜದಲ್ಲಿ ನಮಗೆ ಗೌರವ ತರಬೇಕು. ಪ್ರೀತಿಯಿಂದ ನಮ್ಮನ್ನು ಕಾಣಬೇಕು ಎಂಬ ಆಸೆ ಇರುತ್ತದೆ. ತ್ರೇತಾಯುಗ, ಸತ್ಯಯುಗ, ದ್ವಾಪರಯುಗದವರೆಗೆ ಎಲ್ಲರಿಗೂ ಗೌರವವಿತ್ತು, ಎಲ್ಲರೂ ಸುಖ ಜೀವನ ನಡೆಸುತ್ತಿದ್ದರು. ಕಲಿಯುಗದಲ್ಲಿ ಕೆಲ ಕಾಲದವರೆಗೆ ಸರಿಯಾಗಿತ್ತು, ಆದರೆ ಈಗ ಪರಿಸ್ಥಿತಿ ವಿರುದ್ಧವಾಗಿದೆ. ಇದನ್ನು ಸುಧಾರಿಸುವ ಉದ್ದೇಶ ಲೇಖಕರಿಗಿದೆ (ರಾಮಾಪಾಲ್ ದಾಸ್) ದೇವರ ದಯೆಯಿಂದ ಹಾಗೂ ಜ್ಞಾನದ ಬೆಳಕಿನಿಂದ ಎಲ್ಲವೂ ಸಾಧ್ಯವಾಗುತ್ತದೆ, ಸಾಧ್ಯವಾಗುತ್ತಿದೆ, ಸಾಧ್ಯವಾಗುತ್ತಾ ಹೋಗುತ್ತದೆ ಎನ್ನುವ ಆಸೆ ಇದೆ.

* ಮಗುವಿನ ಬಗ್ಗೆ ತಾಯಿಯ ಪ್ರೀತಿ:– ಒಬ್ಬ ಹುಡುಗನಿದ್ದ, ಅವನ ತಂದೆ ತೀರಿಕೊಂಡರು. ಆಗ ಆ ಹುಡುಗನಿಗೆ 10–11 ವರ್ಷ ವಯಸ್ಸು. ತಾಯಿಯು ಆ ಏಕೈಕ ಪುತ್ರನನ್ನು ಸಾಕಿ ಬೆಳೆಸಿದಳು. ತಂದೆ ಮತ್ತು ತಾಯಿಯ ಪ್ರೀತಿಯನ್ನು ತಾಯಿಯೊಬ್ಬಳೇ ಧಾರೆ ಎರೆದಳು. ತಂದೆ ಇಲ್ಲ ಎನ್ನುವ ಕೊರತೆ ಮಗನಿಗೆ ಉಂಟಾಗದಂತೆ ನೋಡಿಕೊಂಡಳು, ಆದರೆ ಹುಡುಗನು ದೊಡ್ಡವನಾದ ಮೇಲೆ ಮದ್ಯವ್ಯಸನಿಯಾದನು ಹಾಗೂ ವೇಶ್ಯೆಯರ ಸಂಗ ಮಾಡಲಾರಂಭಿಸಿದನು. ತಾಯಿಯಿಂದ ದಿನವೂ ಹಣ ಪಡೆದು ಹಾಳು ಮಾಡುತ್ತಿದ್ದನು. ಒಂದು ದಿನ ತಾಯಿಯ ಬಳಿ ಹಣವಿರಲಿಲ್ಲ. ಕುಡಿದ ಅಮಲಿನಲ್ಲಿ ತಾಯಿಗೆ ಹೊಡೆದು, ವೇಶ್ಯೆಯ ಮನೆಗೆ ಹೋದನು. ಆ ದಿನ ಹಣವಿರದ ಕಾರಣ ವೇಶ್ಯೆಯು ಅವನ ತಾಯಿಯ ಹೃದಯವನ್ನು ತರಲು ಹೇಳಿದಳು. ಮನೆಗೆ ಬಂದಾಗ ತಾಯಿ ಪ್ರಜ್ಞೆ ತಪ್ಪಿ ಬಿದ್ದಿದ್ದಳು. ಮಗನು ಆ ತಾಯಿಯನ್ನು ಕೊಂದು, ಅವಳ ಹೃದಯವನ್ನು ಕಿತ್ತು ಹೊರ ನಡೆದನು. ಕುಡಿದ ಅಮಲಿನಲ್ಲಿ ಎಡವಿ ಬಿದ್ದುಬಿಟ್ಟನು. ಆಗ ತಾಯಿಯ ಹೃದಯದಿಂದ ಧ್ವನಿ ಕೇಳಿಸಿತು. "ಮಗನೇ, ನಿನಗೆ ಪೆಟ್ಟಾಗಲಿಲ್ಲ ತಾನೇ?"

ಆದರೂ ಲೆಕ್ಕ ಮಾಡದೆ ಆ ಮಗನು ತಾಯಿಯ ಹೃದಯವನ್ನು ಹಿಡಿದುಕೊಂಡು ವೇಶ್ಯೆಯ ಮನೆಗೆ ಹೋದನು. ಆಗ ಆ ವೇಶ್ಯೆಯು "ನೀನು ತಾಯಿಯ ಹಿತೈಷಿಯೇ ಆಗಲಿಲ್ಲವೆಂದ ಮೇಲೆ ನನಗೆ ಹೇಗೆ ಹಿತೈಷಿಯಾಗುವೆ? ಇನ್ನ್ಯಾರೋ ಹೇಳಿದರೆ ನೀನು ನನ್ನನ್ನು ಸಾಯಿಸುವೆ. ನಾನು ನಿನ್ನಿಂದ ಬಿಡಿಸಿಕೊಳ್ಳಬೇಕಿತ್ತು– ನೀನು ಭಿಕಾರಿಯಾಗಿರುವೆ. ನಿನ್ನ ಬಳಿ ನನಗೇನು ಕೆಲಸ? ನಿನ್ನ ತಾಯಿ ನಿನ್ನ ಯಾವ ಕೋರಿಕೆಯನ್ನೂ ತಿರಸ್ಕರಿಸಿರಲಿಲ್ಲ. ಹಾಗಾಗಿ ನೀನು ಅವಳ ಹೃದಯವನ್ನು ತರಲಾರೆ ಎಂಬ ನಂಬಿಕೆಯಿಂದ ನಿನಗೆ ನಾನು ಆ ಷರತ್ತನ್ನು ವಿಧಿಸಿದ್ದೆ, ಆದರೆ ನೀನೊಬ್ಬ ರಾಕ್ಷಸ. ಈಗಲೇ ಇಲ್ಲಿಂದ ತೊಲಗು" ಎನ್ನುತ್ತಾ ಆ ವೇಶ್ಯೆಯು ಅವನನ್ನು ತನ್ನ ಮನೆಯಿಂದ ಒದ್ದು ಹೊರಹಾಕಿದಳು. ಅವನು ತನ್ನ ಮನೆಗೆ ಬಂದಾಗ, ತಾಯಿ ಸತ್ತು ಬಿದ್ದಿದ್ದಳು– ಅವಳ ಹೆಣದ ಮುಂದೆ ಗೋಳಾಡತೊಡಗಿದನು. "ಅಮ್ಮಾ ದೇವರ ಆಸ್ಥಾನದಲ್ಲಿ ನಾನು ಏನು ಹೇಳಲಿ?" ಎಂದು ಗೋಳಾಡಿದನು. ಆಗ ತಾಯಿಯ ಧ್ವನಿ ಕೇಳಿಸಿತು, "ಮಗನೇ ನಿನಗೇನು ಆಗುವುದಿಲ್ಲ, ನೀನು ಸುಖವಾಗಿರುವುದನ್ನು ನೋಡಲು ನಾನು ಇಷ್ಟ ಪಡುತ್ತೇನೆ." ಅಷ್ಟರಲ್ಲಿ ಎಲ್ಲಾ ಕಡೆ ಸುದ್ದಿ ಹಬ್ಬಿತು. ರಾಜನು ಆ ಅಪರಾಧಿಗೆ ಗಲ್ಲು ಶಿಕ್ಷೆ ವಿಧಿಸಿದನು. ಗಲ್ಲಿಗೇರಿಸುವ ಮುನ್ನ ರಾಜನು ಅವನ ಅಂತಿಮ ಇಚ್ಛೆ ಏನೆಂದು ಕೇಳಿದನು. ಆಗ ಆ ಯುವಕನು "ನಗರವಾಸಿಗಳನ್ನೆಲ್ಲಾ ಕರೆಸಿ, ಅವರ ಮುಂದೆ ನನ್ನ ತಪ್ಪನ್ನು ಒಪ್ಪಿಕೊಳ್ಳುತ್ತೇನೆ" ಎಂದನು. ಅದರಂತೆ ಎಲ್ಲರ ಮುಂದೆ ತಪ್ಪೊಪ್ಪಿಕೊಂಡನು, ಅವನೆಂದನು, "ನನ್ನ ತಾಯಿ ಕೊನೆಯವರೆಗೂ ನನ್ನ ಸುಖವನ್ನೇ ಬಯಸಿದಳು, ಆದರೆ ಕುಡಿದ ಅಮಲಿನಲ್ಲಿ ನಾನು ರಾಕ್ಷಸನಾಗಿದ್ದೆ, ನಾನು ಪರಸ್ತ್ರೀ ಸಹವಾಸ ಮಾಡಿ ಸಮಾಜಕ್ಕೆ ಕೆಟ್ಟ ಹೆಸರು ತಂದೆ. ನೀವೆಲ್ಲಾ ನನ್ನ ಈ ಕೃತ್ಯವನ್ನು ಮನ್ನಿಸದಿರಿ. ನಾನು ತಾಯಿಗೆ ಕಷ್ಟ ಕೊಟ್ಟೆ. ಘೋರವಾದ ಪಾಪ ಮಾಡಿದೆ. ನನ್ನನ್ನು ಕ್ಷಮಿಸಬೇಡಿ" ಎಂದನು, ತಾಯಿಯಂಥಾ ಸಹೃದಯಿ ಮತ್ತೊಬ್ಬರಿಲ್ಲ. ಹೆಂಡತಿ ಎಷ್ಟೇ ಒಳ್ಳೆಯವಳಾಗಿದ್ದರೂ ತಾಯಿಯಷ್ಟು ಸಹೃದಯತೆ ಇರುವುದಿಲ್ಲ. ಎಳೆ ಮನಸ್ಸಿನಲ್ಲಿ ಮಕ್ಕಳು ಹೇಸಿಗೆ ಮಾಡಿದರೆ, ಮೂತ್ರ ವಿಸರ್ಜಿಸಿದರೆ, ಆ ಬಟ್ಟೆಗಳ ಮೇಲೆಯೇ ಯಾವ ಅಸಹ್ಯವೂ ಇಲ್ಲದೆ ಮಲಗುತ್ತಾಳೆ, ತನ್ನ ಮಗುವನ್ನು ಒಣಗಿದ ಶುಭ್ರ ವಸ್ತ್ರದ ಮೇಲೆ ಮಲಗಿಸುತ್ತಾಳೆ. ಮಗು ಅಳುತ್ತಿದ್ದರೆ ಎಲ್ಲಿದ್ದರೂ ಓಡಿ ಬಂದು, ಹಾಲು ಕುಡಿಸಿ ಆ ಮಗುವನ್ನು ಸುಮ್ಮನಾಗಿಸುತ್ತಾಳೆ.

## "ತಂದೆಯು ಮಕ್ಕಳ ಪ್ರತಿಯೊಂದು ತಪ್ಪನ್ನು ಮನ್ನಿಸುತ್ತಾನೆ"

ತಂದೆಯು ತನ್ನ ಮಗನ/ಮಗಳ ಎಲ್ಲಾ ಅಪರಾಧಗಳನ್ನು ಕ್ಷಮಿಸುತ್ತಾನೆ ಎಂದು ಪರಮಾತ್ಮ ಕಬೀರರು ಹೇಳಿದ್ದಾರೆ.

ಅವಗುಣ್ ಮೇರೇ ಬಾಪ್ ಜೀ, ಬಕ್ಸ್ಯೋ ಗರೀಬ್ ನವಾಜ್ ।
ಜೋ ಮೈ ಪೂತ್–ಕಪೂತ್ ಹೂಂ, ತೋ ಭೀ ಪಿತಾ ಕೋ ಲಾಜ್ ॥

ಭಾವಾರ್ಥ :– ಪರಮಾತ್ಮನೇ ಎಲ್ಲಾ ಜೀವಿಗಳ ತಂದೆ. ತನ್ನ ಮಕ್ಕಳು ಅಜ್ಞಾನದಿಂದ ತಪ್ಪನ್ನು ಮಾಡಿದಾಗ ಹಾಗೂ ನಂತರದಲ್ಲಿ ಎಂದಿಗೂ ಆ ತಪ್ಪನ್ನು ಮಾಡುವುದಿಲ್ಲವೆಂದು ತಂದೆಯ ಬಳಿ ಬಂದು ಕ್ಷಮೆ ಕೇಳಿದಾಗ ತಂದೆಯು ತಕ್ಷಣವೇ ಕ್ಷಮಿಸಿಬಿಡುತ್ತಾನೆ. ಆದ್ದರಿಂದ ಭಕ್ತನು ಪರಮಾತ್ಮನಲ್ಲಿ ವಿನಯವಾಗಿ ಕೇಳುತ್ತಾನೆ, "ಹೇ ದೀನ ದಯಾಳು! ನೀನು ನಮ್ಮೆಲ್ಲರ ತಂದೆ? ನೀನು ನನ್ನ ತಂದೆಯಾದ ಕಾರಣ ನನ್ನ ಅವಗುಣ (ಅಪರಾಧ)ಗಳನ್ನು ಕ್ಷಮಿಸು. ನಾನು ಕೆಟ್ಟ ಮಗನಾದರೂ, ಕೆಲಸಕ್ಕೆ ಬಾರದಿರುವ ಮಗನಾದರೂ, ನೀನು ತಂದೆಯ ಕರ್ತವ್ಯವನ್ನು ಪಾಲಿಸಲು ನನ್ನನ್ನು ಕ್ಷಮಿಸು".

➢ ಒಬ್ಬ ರಾಮಭಕ್ತನ ಪತ್ನಿ ತೀರಿಕೊಂಡಳು. ಆಗ ಅವನ ಮಗನಿಗೆ ಮೂರು ವರ್ಷ ವಯಸ್ಸು. ಆ ವ್ಯಕ್ತಿಯ ಸಂಬಂಧಿಕರಲ್ಲಿ ಒಂದು ಘಟನೆ ನಡೆಯಿತು. ಅದು ಹೀಗಿದೆ. ಆ ರಾಮಭಕ್ತನಿಗೆ ಒಬ್ಬ ಸೋದರಮಾವನಿದ್ದನು. ಅವನು ರಾಮಭಕ್ತನ ತಾಯಿಗಿಂತ 10 ವರ್ಷ ದೊಡ್ಡವನಿದ್ದನು. ಆ ಮಾವನಿಗೆ ಇಬ್ಬರು ಪುತ್ರರಿದ್ದರು. ರಾಮಭಕ್ತನ ಅತ್ತೆ ತೀರಿಕೊಂಡಳು. ಮಾವ ಎರಡನೇ ಮದುವೆ ಮಾಡಿಕೊಂಡನು. ಎರಡನೇ ಹೆಂಡತಿಗೆ ಒಬ್ಬ ಮಗ ಹುಟ್ಟಿದನು. ಎರಡನೆ ಹೆಂಡತಿ ಸವತಿಯ ಮಕ್ಕಳನ್ನು ನೋಡಿದರೆ ಉರಿದು ಬೀಳುತ್ತಿದ್ದಳು. 15 ಎಕರೆ ಜಮೀನನ್ನು ಹಂಚಲು ಇಷ್ಟಪಡದೆ, ಆ ಮಕ್ಕಳಿಗೆ ಸ್ವಲ್ಪ ಸ್ವಲ್ಪವೇ ವಿಷವನ್ನು ಹಾಲಿನಲ್ಲಿ, ಊಟದಲ್ಲಿ ಬೆರೆಸಿ ಕೊಡಲಾರಂಭಿಸಿದಳು. ಆ ಮಕ್ಕಳಿಬ್ಬರೂ ಕಾಯಿಲೆ ಬಿದ್ದು ಕೊನೆಗೆ ಸತ್ತು ಹೋದರು. ಡಾಕ್ಟರ್ ಬಂದು ವಿಷ ತಿಂದಿರುವ ಬಗ್ಗೆ ಹೇಳಿದರು. ಒಂದು ದಿನ ಆ ಎರಡನೇ ಹೆಂಡತಿ ಅವಳ ನೆರೆಮನೆಯವಳಿಗೆ ಈ ಗುಟ್ಟಿನ ವಿಷಯ ಹೇಳಿಬಿಟ್ಟಳು. ಆ ನೆರೆಮನೆಯವಳು ಆ ಮಾವನಿಗೆ ಈ ವಿಷಯವನ್ನು ಹೇಳಿದಳು. ಮಾವನು ಹೆಂಡತಿಯನ್ನು ಅತಿಯಾಗಿ ಪ್ರೀತಿಸುತ್ತಿದ್ದನು. ಹಾಗಾಗಿ ನಂಬಿಕೆ ಬರಲಿಲ್ಲ. ಆದರೆ ಆ ಎರಡನೇ ಹೆಂಡತಿಯು ಒಂದು ದಿನ ತನ್ನ ಅಣ್ಣನ ಬಳಿ ಈ ವಿಷಯವನ್ನು ಹೇಳುತ್ತಿದ್ದುದ್ದನ್ನು ಈ ಮಾವ ಕಿಟಕಿಯ ಬಳಿ ನಿಂತು ಕೇಳಿಸಿಕೊಂಡು ಬಿಟ್ಟನು, ಅವನಿಗೆ ತುಂಬಾ ದುಃಖವಾಯಿತು. ಅವನ ಮನಸ್ಸು ಚೂರು ಚೂರಾಯಿತು, ಆ ದಿನವೇ ಮನೆ ಬಿಟ್ಟು ರಾಮಭಕ್ತನ ಮನೆಗೆ ಬಂದನು. ಅಲ್ಲೇ ವಾಸಿಸತೊಡಗಿದನು. ಕೆಲ ವರ್ಷಗಳ ನಂತರ ಎರಡನೇ ಹೆಂಡತಿಯ ಮಗನೂ ತೀರಿಕೊಂಡನು. ಆ ಎರಡನೇ ಹೆಂಡತಿ ಯಾರ ಜೊತೆಯೋ ಓಡಿ ಹೋದಳು. ನಂತರ ಆ ವ್ಯಕ್ತಿ ಅವಳ ಒಡವೆಯನ್ನೆಲ್ಲಾ ಕಿತ್ತುಕೊಂಡು, ಅವಳನ್ನು ಹೊಡೆದು ಬಾವಿಗೆ ತಳ್ಳಿದನೆಂದು ತಿಳಿಯಿತು. ಆ ವ್ಯಕ್ತಿಯೂ ಪೊಲೀಸಿಗೆ ಸಿಕ್ಕಿ ಬಿದ್ದು ಗಲ್ಲು ಶಿಕ್ಷೆ ಅನುಭವಿಸಿದನು. ಈ ಎಲ್ಲಾ ಕರ್ಮಕಾಂಡವನ್ನು ತಿಳಿದ ರಾಮಭಕ್ತನು ತನ್ನ ಹೆಂಡತಿಯ ಮರಣಾನಂತರ ಎರಡನೇ ಮದುವೆ ಮಾಡಿಕೊಳ್ಳಲಿಲ್ಲ. ಮಕ್ಕಳನ್ನು ತನ್ನ ಜೊತೆಯಲ್ಲೇ ಇಟ್ಟುಕೊಂಡು ಸಾಕಿದನು, ಹೊಲ ಉಳುತ್ತಿದ್ದನು. ಊಳುವಾಗಲೂ ಮಗನನ್ನು ಹೆಗಲ ಮೇಲೆ ಇಟ್ಟುಕೊಳ್ಳುತ್ತಿದ್ದನು. ದಣಿವಾದಾಗ ಮರದ ಕೆಳಗೆ ಮಲಗಿ ಬಿಡುತ್ತಿದ್ದನು. ತಾನೇ ಅಡಿಗೆ ಮಾಡುತ್ತಿದ್ದನು, ಮಕ್ಕಳಿಗೆ ಸ್ನಾನ ಮಾಡಿಸುತ್ತಿದ್ದನು, ಬಟ್ಟೆ ಒಗೆಯುತ್ತಿದ್ದನು, ಊಟ ಮಾಡಿಸುತ್ತಿದ್ದನು. ಹೀಗೆ ಮಕ್ಕಳು ಬೆಳೆದು ದೊಡ್ಡವರಾದರು. ಅವರಿಗೆ ಮದುವೆ ಮಾಡಿದನು. ಮಕ್ಕಳೂ ಇವನ ಕೆಲಸದಲ್ಲಿ ಕೈ ಜೋಡಿಸುತ್ತಿದ್ದರು, ಕಾಲ ಕಳೆದಂತೆಲ್ಲಾ ಮುದಿತನ ಆವರಿಸಿತು. ಆಗ ಕೆಲಸ ಮಾಡಲು ಕೈಯಲ್ಲಿ ಆಗುತ್ತಿರಲಿಲ್ಲ. ಆಗ ಸೊಸೆಗೆ ಇವನು ಭಾರವಾಗತೊಡಗಿದನು. ಅವಳು ಮಾವನಿಗೆ ಒಣಕಲು ರೊಟ್ಟಿ ಕೊಡತೊಡಗಿದಳು. ಹೊಟ್ಟೆ ತುಂಬಾ ಊಟ ಕೊಡುತ್ತಿರಲಿಲ್ಲ. ಎಲ್ಲವೂ ಸರಿಯಾಗಿದೆಯೇ ಎಂದು ಮಗ ಅಪ್ಪನನ್ನು ಕೇಳಿದಾಗ ಅಪ್ಪನು, 'ಯಾವ ಚಿಂತೆಯೂ ಇಲ್ಲ ಮಗನೇ, ಬಹಳ ಒಳ್ಳೆಯ ಸೊಸೆ ಸಿಕ್ಕಿದ್ದಾಳೆ. ನನ್ನನ್ನು ಹೆಚ್ಚು ಗಮನಿಸಿಕೊಳ್ಳುತ್ತಾಳೆ' ಎನ್ನುತ್ತಿದ್ದನು. ಈ ಮಾತನ್ನು ಸೊಸೆಯೂ ಕೇಳಿಸಿಕೊಳ್ಳುತ್ತಿದ್ದಳು, ಗಂಡನಿಗೆ ಗೊತ್ತಾಗುತ್ತಿಲ್ಲವೆಂದು ತಿಳಿದು ಮಾವನನ್ನು ಇನ್ನೂ ಹೆಚ್ಚಾಗಿ ಗೋಳು ಹುಯ್ದು ಕೊಳ್ಳುತ್ತಿದ್ದಳು.

ಒಂದು ದಿನ ತಂದೆಗೆ ಸರಿಯಾಗಿ ಊಟ ಸಿಗದಿರುವುದನ್ನು ನೋಡಿ ಹೆಂಡತಿಯ ಬಳಿ ವಿಚಾರಿಸಿದನು. ಅವಳು ಪತಿಗೆ ಜೋರು ಮಾಡಿದಳು. "ನಿಮಗೆ ಮನೆಯ ಚಿಂತೆ ಇಲ್ಲ. ನನ್ನಿಂದಲೇ ಮನೆ ನಡೆಯುತ್ತಿದೆ. ಮನೆ ಹೇಗೆ ನಡೆಸಬೇಕು, ಎಷ್ಟು ಖರ್ಚು ಮಾಡಬೇಕೆಂದು ನನಗೆ ಗೊತ್ತಿದೆ" ಎಂದು ಗದರಿದಳು. ಒಂದು ದಿನ ಆ ವೃದ್ಧನು ತಲೆತಿರುಗಿ ಬಿದ್ದು ಬಿಟ್ಟನು. ಕಾಲು ಮುರಿದು ಹೋಯಿತು. ವೈದ್ಯರು ಬಂದು ಪರೀಕ್ಷಿಸಿ, "ಆಹಾರ ಸರಿಯಾಗಿ ಸಿಗದ ಕಾರಣ ಶರೀರ ಕೃಷವಾಗಿದೆ. ಎರಡು ಹೊತ್ತು ಅರ್ಧರ್ಧ ಲೀಟರ್ ಹಾಲನ್ನು ಕುಡಿಸಿ, ಒಳ್ಳೆ ಊಟ ಕೊಡಿ," ಎಂದರು. ವೈದ್ಯರು ಹೊರಟು ಹೋದ ಮೇಲೆ ಸೊಸೆಯು, ಹೀಗೆ ಮಾಡಿದರೆ ಮನೆ ದೀವಾಳಿಯಾಗುತ್ತದೆ' ಎಂದು ಹೇಳುತ್ತಾ ಹೊರಟು ಹೋದಳು. ಮಗನು ಹೆಚ್ಚು ಗಮನ ಕೊಡಲಿಲ್ಲ, ವೃದ್ಧನ ಅತ್ತೆ ಮನೆಯವರು ಸುದ್ಧಿ ತಿಳಿದು ಬಂದರು ಹಾಗೂ ವಿಚಾರಿಸಿದಾಗ ಆ ವೃದ್ಧ ರಾಮಭಕ್ತನು, "ಕೇಳಲೇ ಬೇಡಿ, ಇಂಥಾ ಮಗ ಸೊಸೆ ಎಲ್ಲರಿಗೂ ಸಿಗಲಿ, ನನಗೆ ಯಾವ ಕಷ್ಟವನ್ನೂ ಕೊಡುವುದಿಲ್ಲ. ಏನೋ ನನ್ನ ಕರ್ಮ, ಹೀಗೆ ಪೆಟ್ಟಾಯಿತು" ಎಂದನು, ರಾಮಭಕ್ತನ ಹೆಂಡತಿಯ ತಂಗಿಯನ್ನು ಪಕ್ಕದ ಹಳ್ಳಿಗೆ ಕೊಟ್ಟು ವಿವಾಹ ಮಾಡಿದ್ದರು. ರಾಮಭಕ್ತನ ಅತ್ತೆ ಮಾವ ತನ್ನ ಎರಡನೇ ಮಗಳ ಮನೆಗೆ ಹೋದಾಗ ರಾಮಭಕ್ತನನ್ನು ಅವನ ಮಗ ಸೊಸೆ ಸರಿಯಾಗಿ ನೋಡಿಕೊಳ್ಳುತ್ತಿಲ್ಲವೆಂಬ ವಿಷಯ ತಿಳಿಯಿತು. ಅವರ ಗಂಟಲಲ್ಲಿ ಅನ್ನ ನೀರು ಇಳಿಯಲಿಲ್ಲ. ಅವರು ಪುನಃ ರಾಮಭಕ್ತನ ಮನೆಗೆ ಹೋದಾಗ ರಾಮಭಕ್ತನು ಹಳಸಿದ ರೊಟ್ಟಿಯನ್ನು ನೀರಿನಲ್ಲಿ ನೆನೆಸಿ, ನೆನೆಸಿ ತಿನ್ನುತ್ತಿದ್ದನು. ಅದನ್ನು ನೋಡಿ ಅವರಿಗೆ ಅಳು ಬಂದಿತು. ಮಗನನ್ನು ಕರೆದು, "ನಿನಗೆ ಸ್ವಲ್ಪವೂ ನಾಚಿಕೆಯಾಗುವುದಿಲ್ಲವೇ? ನಿನ್ನನ್ನು ಹೇಗೆ ಬೆಳೆಸಿ ದೊಡ್ಡವನನ್ನಾಗಿ ಮಾಡಿದ್ದಾರೆ ಎಂದು ನಿನಗೆ ಗೊತ್ತಾ?" ಎಂದು ಬಯ್ದರು. ಆದರೆ ಸೊಸೆಯನ್ನು ಕೇಳಿದಾಗ ನಾವು ಮಾವನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದೇವೆ ಎಂದಳು. ರಾಮಭಕ್ತನು ಅವರಿಗೆ, "ನೀವು ಇಲ್ಲಿಂದ ಹೋಗಿ, ನನ್ನ ಹಣೆಯಲ್ಲಿ ಬರೆದ ಹಾಗಾಗುತ್ತದೆ" ಎಂದನು.

ರಾಮಭಕ್ತನ ಅತ್ತೆಯ ಮಗನಾದ ರಾಮ್‌ನಿವಾಸಿಯು ಸತ್ಸಂಗಿಯಾಗಿದ್ದನು. ಅವನು ಯಾವಾಗಲೂ ರಾಮಭಕ್ತನಿಗೆ ಸತ್ಸಂಗಕ್ಕೆ ಹೋಗಿ ಭಕ್ತಿಯಿಂದ ಇರಲು ಹೇಳುತ್ತಿದ್ದನು. ಆಗ ರಾಮಭಕ್ತನು. ನಾನು ನನ್ನ ಮಗನನ್ನು ಪೂಜಿಸುತ್ತೇನೆ. ಅವನು ಸುಖವಾಗಿರಲಿ ಎನ್ನುವುದೇ ನನ್ನ ಜೀವನದ ಆಶಯ, ನನ್ನ ಮಗ–ಸೊಸೆಯನ್ನು ನೋಡಿಕೊಂಡು ಬದುಕು ಸಾಗಿಸುತ್ತಿದ್ದೇನೆ", ಎಂದನು. ರಾಮ್‌ನಿವಾಸ್‌ನು ಆ. ವೃದ್ಧನನ್ನು ಬಹಳ ಬಲವಂತವಾಗಿ ಸತ್ಸಂಗಕ್ಕೆ ಕರೆದೊಯ್ದನು. ನಂತರ ತನ್ನ ಮನೆಗೆ ಕರೆದುಕೊಂಡು ಹೋಗಿ ಅವನ ಸೇವೆ ಮಾಡಿದನು.

ಒಳ್ಳೆಯ ಊಟ ಕೊಟ್ಟು ಬಹಳ ದಿನಗಳವರೆಗೆ ಆ ವೃದ್ಧನನ್ನು ತಾನೇ ನೋಡಿಕೊಂಡರು. ರಾಮಭಕ್ತನಿಗೆ ಭಕ್ತಿಯ ಮೇಲೆ ನಂಬಿಕೆ ಬಂದಿತು. ನಂತರ ತನ್ನ ಮಗನ ಮನೆಗೆ ಹೋಗಿ ಹೀಗೆಂದನು, "ಮಗನೇ, ನಾನು ಇದುವರೆಗೂ ನಿಮ್ಮ ಹತ್ತಿರ ಏನನ್ನೂ ಕೇಳಿಲ್ಲ. ಈ ದಿನ ಒಂದು ಬಿಕ್ಷೆ ಬೇಡುತ್ತಿದ್ದೇನೆ. ನೀವು ನನ್ನ ಜೊತೆ ಸತ್ಸಂಗಕ್ಕೆ ಬನ್ನಿ", ಆಗ ಅವರು ನನ್ನ ಮಕ್ಕಳನ್ನು ಹಾಗೂ ದನಕರುಗಳನ್ನು ಯಾರು ನೋಡಿಕೊಳ್ಳುವರು?" ಎಂದರು. ಆಗ ರಾಮಭಕ್ತನು ಮೊಮ್ಮಕ್ಕಳು ಸ್ವಲ್ಪ ಕಾಲದವರೆಗೆ ನೋಡಿಕೊಳ್ಳುವರು, ನೀವು ನನ್ನ ಜೊತೆ ಖಂಡಿತವಾಗಿಯೂ ಸತ್ಸಂಗಕ್ಕೆ ಬನ್ನಿ" ಎಂದನು. ಅವನ ಮಾತಿನಂತೆ ಅವರೆಲ್ಲಾ ಸತ್ಸಂಗಕ್ಕೆ ಬಂದರು. ಅವರ ಮಾತುಗಳನ್ನು ಕೇಳಿದರು. ಅಲ್ಲಿದ್ದ ಭಕ್ತರೆಲ್ಲಾ ಅಲ್ಲಿಗೆ ಆಗಮಿಸುವ ಭಕ್ತರ ಸೇವೆಯನ್ನು ವಿಶೇಷ ಅತಿಥಿಗಳಿಗೆ ಮಾಡುವಂತೆ ಮಾಡುತ್ತಿದ್ದರು. ವೃದ್ಧರ, ರೋಗಿಗಳ, ವಿಕಲಚೇತನರ ಸೇವೆ ಮಾಡುತ್ತಿದ್ದರು. ಬೇರೆಯವರ ಮೇಲೆ ದಯೆ ತೋರಿದರೆ ಪರಮಾತ್ಮನು ಒಲಿಯುವನೆಂದು ಸತ್ಸಂಗದಲ್ಲಿ ಹೇಳಲಾಗುತ್ತಿತ್ತು. ದುಃಖಿಗಳಿಗೆ, ಅಸಹಾಯಕರಿಗೆ ಸಹಾಯ ಮಾಡುವುದು ಮಾನವನ ಪರಮ ಕರ್ತವ್ಯ.

ದಯೆಯೇ ಧರ್ಮದ ಮೂಲವಯ್ಯ, ಪಾಪವೂ ಅಹಂಕಾರದ ಮೂಲ, ಭಗವಂತನು ದಯೆಯಿರುವವನ ಬಳಿ ನೆಲೆಸಿರುತ್ತಾನೆ ಎಂದು ಕಬೀರರು ಹೇಳಿದ್ದಾರೆ.

ದಯಾ–ಧರ್ಮ್ ಕಾ ಮೂಲ್ ಹೈ, ಪಾಪ್ ಮೂಲ್ ಅಭಿಮಾನ್ ।
ಕಹ್ ಕಬೀರ್ ದಯಾವಾನ್ ಕೇ ಪಾಸ್ ರಹೇ ಭಗವಾನ್ ॥

ಶಬ್ದಾರ್ಥ :– ಯಾರ ಹೃದಯದಲ್ಲಿ ದಯೆ ಇದೆಯೋ, ಅವನು ಧರ್ಮವನ್ನು ಪಾಲಿಸುತ್ತಾನೆ. ದಯೆಯೇ ಧರ್ಮದ ಮೂಲ. ಯಾವುದರಲ್ಲಿ ಅಹಂಕಾರ ಇರುವುದೋ ಅದನ್ನೇ ಅವನು ಮಾಡುತ್ತಾನೆ. ಅಹಂಕಾರವು ಪಾಪದ ಮೂಲ. ದಯೆಯಿಂದ ಇರುವವನ ಬಳಿ ಪರಮಾತ್ಮನು ನೆಲೆಸಿರುತ್ತಾನೆ, ಅಹಂಕಾರಿ ಬಳಿ ಸುಳಿಯುವುದೂ ಇಲ್ಲ ಎಂದು ಕಬೀರ್ ಪರಮಾತ್ಮ ಹೇಳಿದ್ದಾರೆ.

ರಾಮಭಕ್ತನ ಸೊಸೆ ಸತ್ಸಂಗದಲ್ಲಿ ಕುಳಿತಿದ್ದಳು. ಒಬ್ಬ ಭಕ್ತೆಯು 'ಅವಳಿಗೆ ನೀನು ಸೇವೆ ಮಾಡು' ಎಂದು ಹೇಳಿದಳು.

ಸತ್ಸಂಗ ವಚನ:– ಯಾರು ಸೇವೆ, ಭಕ್ತಿ ಮಾಡುವರೋ, ಅವರಿಗೆ ಫಲದೊರಕುವುದು. ಎಂದು ಗುರುವೇ ಹೇಳುತ್ತಾರೆ. ನಾನು ಊಟಮಾಡಿದರೆ ನನ್ನ ಹೊಟ್ಟೆ ತುಂಬುತ್ತದೆ. ನೀವು ತಿಂದರೆ ನಿಮ್ಮ ಹೊಟ್ಟೆ ತುಂಬುತ್ತದೆ. ಎಲ್ಲರೂ ದೇವರ ಮಕ್ಕಳೇ. ನೀವು ಧನಿಕನ ಮಕ್ಕಳೆಂದು ತಿಳಿದು ಸೇವೆ ಮಾಡಿ.

ಒಬ್ಬ ಧನಿಕನಿಗೆ. 8–9 ವರ್ಷದ ಮಗಳಿದ್ದಳು. ಅವಳನ್ನು ನೋಡಿಕೊಳ್ಳಲು ಒಬ್ಬ ಕೆಲಸದವಳಿದ್ದಳು. ಅವಳನ್ನು ಶಾಲೆಗೆ ಕರೆದುಕೊಂಡು ಹೋಗುವಾಗ ಬಿಸಿಲಿದ್ದರೆ. ಅವಳ ತಲೆಯ ಮೇಲೆ ಛತ್ರಿ ಇಟ್ಟು ತಾನು ಬಿಸಿಲಿನಲ್ಲಿ ನಡೆದು ಹೋಗುತ್ತಿದ್ದಳು. ಇದನ್ನು ನೋಡಿದ ಧನಿಕನು ಸಂತೋಷಗೊಂಡು ಅವಳಿಗೆ ಹೆಚ್ಚು ಸಂಬಳ ನೀಡುತ್ತಿದ್ದನು. ನೀವೇ ಇದರ ಬಗ್ಗೆ ಯೋಚಿಸಿ, ನೀವು ಬೇರೆಯವರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಅತ್ತೆ ಮಾವನ ಸೇವೆ, ದೊಡ್ಡವರ ಸೇವೆ ಮಾಡುವುದು ನಿಮ್ಮ ಕರ್ತವ್ಯ– ಇವರ ಸೇವೆ ನೀವು ಮಾಡಿದರೆ ದೇವರು ನಿಮ್ಮ ಸೇವೆಗೆ ವ್ಯವಸ್ಥೆಮಾಡುತ್ತಾನೆ. ನೀವು ನಿಮ್ಮ ಮಕ್ಕಳನ್ನು ಸತ್ಸಂಗಕ್ಕೆ ಕರೆತನ್ನಿ. ಅವರಿಗೂ ಸೇವೆ ಮಾಡುವ, ಬೇರೆಯವರ ಜೊತೆ ವ್ಯವಹರಿಸುವ ಸಂಸ್ಕಾರ ಬರುತ್ತದೆ. ನಿಮ್ಮ ಮಕ್ಕಳು ದೊಡ್ಡವರಾದ ಮೇಲೆ ನೀವು ಮುದುಕರಾಗಿರುತ್ತೀರಿ. ಆಗ ನಿಮ್ಮ ಸೇವೆ ಮಾಡುವರು. ಒಬ್ಬ ಹೆಣ್ಣು ಮಗಳು ತಂದೆ ತಾಯಿಯನ್ನು ಬಿಟ್ಟು ಅತ್ತೆ ಮಾವನ ಮನೆಗೆ ಹೋಗುತ್ತಾಳೆ. ಆ ಅತ್ತೆ ಮಾವನು ತಮ್ಮ ಮನೆಗೆ ಬಂದ ಸೊಸೆಯನ್ನು ಮಗಳಂತೆ ಕಾಣಬೇಕು. ತನ್ನ ಮಗಳ ಮತ್ತು ಸೊಸೆಯ ಮಧ್ಯೆ ಭೇದಭಾವ ತೋರಬಾರದು. ಏಕೆಂದರೆ ಅದೇ ಜಗಳಕ್ಕೆ ಮೂಲವಾಗುತ್ತದೆ. ಸೊಸೆ ತನ್ನ ಅತ್ತೆಯ ಮನೆಯ ಪರಿಸ್ಥಿತಿಗೆ ಹೊಂದಿಕೊಳ್ಳಬೇಕು. ತಾಯಿಯ ಮನೆಯ ಒಡನಾಟವನ್ನು ಕಡಿಮೆ ಮಾಡಬೇಕು. ಅತ್ತೆಯ ಮನೆಯೇ ಅವಳಿಗೆ ಸರ್ವಸ್ವವಾಗಬೇಕು.

ಕಥೆ:– ಒಬ್ಬ ಸೊಸೆ ತನ್ನ ಅತ್ತೆಗೆ ಬಹಳ ಕಷ್ಟ ಕೊಡುತ್ತಿದ್ದಳು. ಅವಳು ತನ್ನ ಅತ್ತೆಗೆ ನಾಯಿಗೆ ಕೊಡುವಂತೆ ಒಡೆದ ಮಡಕೆಯ ಚೂರಿನಲ್ಲಿ ಊಟ ಬಡಿಸುತ್ತಿದ್ದಳು. ಹೀಗೆ ಕೆಲವರ್ಷಗಳು ಕಳೆದವು. ಅವಳ ಮಗನಿಗೆ ಮದುವೆಯಾಗಿ ಸೊಸೆ ಮನೆಗೆ ಬಂದಳು. ಕೆಲವು ದಿನಗಳಲ್ಲೇ ಆ ಅತ್ತೆಯು ಸತ್ತು ಹೋದಳು. ಆಗ ಆ ಸೊಸೆಯು ಹೊಸದಾಗಿ ಬಂದ ತನ್ನ ಸೊಸೆಯನ್ನು ಕರೆದು, ಆ ಮಡಕೆಯ ಚೂರನ್ನು ಬಿಸಾಡುವಂತೆ ಹೇಳಿದಳು. ಆಗ ಆ ಹೊಸ ಸೊಸೆಯು, 'ಅತ್ತೆ ನಿಮಗೆ ವಯಸ್ಸಾದಾಗ ನಿಮಗೂ ಇದರಲ್ಲಿ ಊಟ ಕೊಡುತ್ತೇನೆ. ನೀವು ನಿಮ್ಮ ಅತ್ತೆಗೆ ತುಂಬಾ ಕಷ್ಟ ಕೊಟ್ಟಿದ್ದೀರಾ' ಎಂದಳು. ಆಗ ಅವಳಿಗೆ ತನ್ನ ತಪ್ಪಿನ ಅರಿವಾಯಿತು. ಹೊಸ ಸೊಸೆ ಬುದ್ಧಿವಂತಳಾಗಿದ್ದಳು. ಅವಳು ಸಂಜೆಯವರೆಗೆ ಆ ಮಡಕೆಚೂರನ್ನು ಬಿಸಾಡಲಿಲ್ಲ. ಆಗ ಆ ಅತ್ತೆಗೆ ಆ ಮಡಕೆ ಚೂರು ಒಬ್ಬ ಶತ್ರುವಿನಂತೆ ಭಾಸವಾಯಿತು. ಆಗ ಸೊಸೆಯು, 'ಅತ್ತೇ, ನಾನು ಸತ್ಸಂಗ ಕೇಳಿದ್ದೇನೆ. ನಾನು ಕೆಟ್ಟ ಕೆಲಸ ಮಾಡುವುದಿಲ್ಲ.' ಎಂದು

ಹೇಳುತ್ತಾ ಮಡಕೆಯ ಚೂರನ್ನು ಎತ್ತಿ ಬಿಸಾಕಿದಳು. ತಾನು ಮಾಡಿದ ಪಾಪ ಕರ್ಮದ ಫಲವಾಗಿ ಅತ್ತೆಗೆ ಕ್ಯಾನ್ಸರ್ ರೋಗ ಬಂದಿತು. ಸೊಸೆ ಅತ್ತೆಯ ಸೇವೆ ಮಾಡಿದಳು. ಅವಳಿಗೆ ಯಾವ ಕೊರತೆಯೂ ಬಾರದಂತೆ ನೋಡಿಕೊಂಡಳು. ಆದರೆ ಅವಳೆಂದಳು, "ಅತ್ತೆ ನಾನೇನೋ ನಿಮ್ಮ ಸೇವೆ ಮಾಡುವೆ ಆದರೆ ನಿಮ್ಮ ಪಾಪವನ್ನು ನಾನು ಹಂಚಿಕೊಳ್ಳಲಾರೆ. ಅದನ್ನು ನೀವೇ ಅನುಭವಿಸಬೇಕು. ನೀವು ಸತ್ಸಂಗಕ್ಕೆ ಬಂದಿದ್ದರೆ ನಿಮಗೆ ಈ ದಿನ ಈ ಗತಿ ಬರುತ್ತಿರಲಿಲ್ಲ. ಆಗ ಅತ್ತೆ ಹೇಳಿದಳು. ಮಗಳೇ, ನಾನು ಮಹಾಪಾಪಿ. ನನ್ನ ಉದ್ಧಾರವಾಗುವುದೇ? ನಾನು ದೀಕ್ಷೆ ತೆಗೆದುಕೊಳ್ಳಬೇಕೆಂದು ಇಚ್ಛಿಸುತ್ತೇನೆ." ಸೊಸೆ ಒಳ್ಳೆಯ ಮನೆತನದವಳಾದ್ದರಿಂದ ಅವಳಿಗೆ ಸತ್ಸಂಗಕ್ಕೆ ಹೋದರೆ ಪಾಪವು ತೊಡೆದು ಹೋಗುತ್ತದೆಂದು ತಿಳಿದಿತ್ತು. ಎಷ್ಟೇ ಪಾಪ ಮಾಡಿದ್ದರೂ, ಸತ್ಸಂಗಕ್ಕೆ ಹೋಗಿ ಪಾಪ ತೊಳೆದುಕೊಳ್ಳಬಹುದು. ಭವಿಷ್ಯದಲ್ಲಿ ಮಾನವ ಜನ್ಮ ಲಭಿಸುವುದು. ಗುರುಗಳು ಸತ್ಸಂಗದಲ್ಲಿ ಉದಾಹರಣೆಯ ಮೂಲಕ ತಿಳಿ ಹೇಳುತ್ತಾರೆ. ಹೇಗೆ ಬಟ್ಟೆಯು ಕಡಿಮೆ ಕೊಳೆಯಾಗಿದ್ದರೆ, ಸ್ವಲ್ಪ ಪ್ರಯತ್ನ ಪಟ್ಟರೆ ಸಾಕು, ಸ್ವಚ್ಛವಾಗುತ್ತದೆ. ಬಟ್ಟೆ ಹೆಚ್ಚು ಕೊಳೆಯಾಗಿದ್ದರೆ, ಹೆಚ್ಚೆಚ್ಚು ಸಾಬೂನು ಹಾಕಿ ಎರಡು ಮೂರು ಬಾರಿ ನೀರಿನಲ್ಲಿ ತೊಳೆದರೆ ಸ್ವಚ್ಛವಾಗುತ್ತದೆ. ಇನ್ನು ಹೆಚ್ಚು ಕೊಳೆಯಾಗಿದ್ದರೆ ಹಾಗೂ ಕಲೆಗಳಾಗಿದ್ದರೆ, ಡ್ರೈ ಕ್ಲೀನಿಂಗ್‌ಗೆ ಕೊಡಬೇಕಾಗುತ್ತದೆ. ಸ್ವಚ್ಛಗೊಳಿಸಲೇಬೇಕೆಂಬ ಧೃಡ ಸಂಕಲ್ಪವಿದ್ದರೆ ಮೋರಿಯಲ್ಲಿ ಅದ್ದಿದ ಬಟ್ಟೆಯನ್ನೂ ಸ್ವಚ್ಛಗೊಳಿಸಬಹುದು.

ಸೊಸೆಗೆ ಅತ್ತೆಯು ಮೋರಿಯಲ್ಲಿ ಅದ್ದಿದ ಬಟ್ಟೆಯಂತೆ ಎಂದು ಗೊತ್ತಿದ್ದರೂ, ಸತ್ಸಂಗಕ್ಕೆ ಹೋದರೆ ಅವಳ ಪಾಪವು ತೊಳೆದು ಹೋಗುವುದೆಂದು ಅವಳಿಗೆ ತಿಳಿದಿತ್ತು. ಆದ್ದರಿಂದ ಅವಳು ತನ್ನ ಅತ್ತೆಗೆ ದೀಕ್ಷೆ ಕೊಡಿಸಿದಳು. ಸ್ವಲ್ಪ ದಿನದ ನಂತರ ಅವಳ ಕ್ಯಾನ್ಸರಿನಿಂದ ಉಂಟಾದ ನೋವು ಸ್ವಲ್ಪ ಶಮನವಾಯಿತು. ಅವಳು ತನ್ನ ಅತ್ತೆಯ ಜೊತೆ ನಡೆದುಕೊಂಡ ಪರಿಯನ್ನು ನೆನೆದು ಪಾಪಪ್ರಜ್ಞೆಯಿಂದ ನರಳಿದಳು. ಮೊದಲೇ ಈ ಸತ್ಸಂಗ ಕೇಳಲು ಸಿಕ್ಕಿದ್ದರೆ, ಇಂದು ಈ ಅವಸ್ಥೆ ಬರುತ್ತಿರಲಿಲ್ಲ. ನಿರ್ಮಲ ಜೀವನ ಸಾಗಿಸಬಹುದಿತ್ತು, ಅತ್ತೆಯ ಆತ್ಮಕ್ಕೂ ಖುಷಿಯಾಗುತ್ತಿತ್ತು. ಎಂದು ಚಿಂತಿಸಿದಳು.

ಈ ಕತೆಯನ್ನು ಕೇಳಿದ ರಾಮಭಕ್ತನ ಸೊಸೆಯೂ ಬಿಕ್ಕಿ ಬಿಕ್ಕಿ ಅತ್ತಳು. ಎಲ್ಲರೂ ಸಮಾಧಾನ ಮಾಡಿದ ನಂತರ ತಾನು ಮಾಡಿದ ಪಾಪದ ಕೆಲಸವನ್ನು ಎಲ್ಲರಿಗೂ ತಿಳಿಸಿದಳು. ನಂತರ ಪಶ್ಚಾತ್ತಾಪ ಪಟ್ಟಳು. ಎರಡು-ಮೂರು ದಿನ ಸತ್ಸಂಗ ಕೇಳಿದ ನಂತರ ತನ್ನ ಮಾವನಾದ ರಾಮಭಕ್ತನ ಜೊತೆ ಮನೆಗೆ ಮರಳಿ ಬಂದಳು. ನಂತರ ಮಕ್ಕಳನ್ನು ಕರೆದುಕೊಂಡು ಸತ್ಸಂಗಕ್ಕೆ ಹೋದಳು. ಅವಳ ಮಕ್ಕಳೂ ಸಹ ಒಳ್ಳೆಯ ಸಂಸ್ಕಾರವನ್ನು ಕಲಿತರು. ನಂತರ ಬಂದು ತನ್ನ ತಾತನ ಸೇವೆ ಮಾಡಲು ಪ್ರಾರಂಭಿಸಿದರು. ದೊಡ್ಡ ಬಕೆಟ್ಟಿನಲ್ಲಿ ನೀರು ತಂದು ಸ್ನಾನಮಾಡಲು ಹೇಳಿದರು. ಆಗ ರಾಮಭಕ್ತನು ಅಯ್ಯೋ ಇಷ್ಟೊಂದು ಭಾರ ಎತ್ತಬೇಡಿ. ನಾನು ತೆಗೆದುಕೊಳ್ಳುತ್ತೇನೆ ಎಂದನು. ಆಗ ಮಕ್ಕಳು, "ಸತ್ಸಂಗದಲ್ಲಿ ಗುರುಗಳು ಹೇಳುತ್ತಾರೆ, ಸೇವೆ ಮಾಡುವುದರಿಂದ ಪ್ರಯೋಜನವಿದೆ ತಾತ. ನಾವು ಊಟ ಮಾಡಿದರೆ ನಮ್ಮ ಹೊಟ್ಟೆ ತುಂಬುತ್ತದೆ. ನಾವು ಸೇವೆ ಮಾಡಿದರೆ ನಮಗೆ ಪುಣ್ಯ ಬರುತ್ತದೆ. ರೋಗ ಇದ್ದರೂ ಭಕ್ತಿಯಿಂದ, ಸೇವೆಯಿಂದ ಅದನ್ನು ದೂರ ಮಾಡಬಹುದೆಂದು ನಮಗೆ ತಿಳಿಯಿತು. ಆಶ್ರಮದಲ್ಲಿದ್ದ ಭಕ್ತರು 'ನಾವು ಮೊದಲು ರೋಗದಿಂದ ಇದ್ದೆವು, ಭಗವಂತನ ಸ್ಮರಣೆಯಿಂದ ನಮ್ಮ ರೋಗ ದೂರವಾಯಿತು ಎಂದು ಹೇಳಿದರು. ಈಗ ನಾವು ಯಾವ ಔಷಧವನ್ನೂ ಸೇವಿಸುತ್ತಿಲ್ಲ. (ಋಗ್ವೇದ 10ನೇ ಮಂಡಲದ 161ನೇ ಸೂಕ್ತಿಯ 2ನೇ ಮಂತ್ರದಲ್ಲಿಯೂ ಹೇಳಿದೆ), ಒಬ್ಬ ರೋಗಿಯು ಸಾವಿಗೆ ಹತ್ತಿರವಾಗಿದ್ದರೂ, ಅವನಿಗೆ ಅಸಾಧ್ಯವಾದ ರೋಗ ಕಾಡುತ್ತಿದ್ದರೂ, ಅವನೇನಾದರೂ ಭಕ್ತಿಯಿಂದ ಇದ್ದರೆ ಭಗವಂತನು ಅವನನ್ನು ಸಾವಿನ ದವಡೆಯಿಂದ ಕಾಪಾಡಬಲ್ಲನು. ಅವನಿಗೆ ಪೂರ್ಣ ಆಯಸ್ಸನ್ನು ಪ್ರದಾನಿಸುತ್ತಾನೆ ಲೇಖಕ).

ರಾಮಭಕ್ತನ ಸೊಸೆ ಅವನನ್ನು ಚೆನ್ನಾಗಿ ನೋಡಿಕೊಳ್ಳಲಾರಂಭಿಸಿದಳು. ಅವಳ ಮಕ್ಕಳು ತಾತನ ಬಟ್ಟೆ ಒಗೆದು, ಅವನ ಸೇವೆ ಮಾಡಿದರು. ಅವನ ಸೊಸೆ ದಿನವೂ ಸ್ವಾದಿಷ್ಟ ಬೋಜನ ತಯಾರಿಸಿ ಬಡಿಸುತ್ತಿದ್ದಳು. ರಾಮಭಕ್ತನು ನಿರಾಕರಿಸಿದರೂ ಬಿಡದೆ ಅವನ ಸೇವೆ ಮಾಡಿದಳು.

ಒಂದು ದಿನ ರಾಮಭಕ್ತನ ಅತ್ತೆಯ ಮಗ ರಾಮ್‌ನಿವಾಸ್ ಮನೆಗೆ ಬಂದನು. ರಾಮಭಕ್ತನು ಅವನನ್ನು ಆಲಂಗಿಸಿಕೊಳ್ಳುತ್ತಾ ಹೇಳಿದನು, "ನಿನ್ನ ದೆಸೆಯಿಂದ ನನ್ನ ಮನೆ ಇಂದು ಸ್ವರ್ಗವಾಗಿದೆ. ಆಗ ರಾಮ್‌ನಿವಾಸನೆಂದನು, "ಇದು ನನ್ನ ದೆಸೆಯಿಂದಲ್ಲ, ಗುರುಗಳ ಶಕ್ತಿಯಿಂದ ಉಂಟಾದ ಅದ್ಭುತ. ಗುರುಗಳು ಹೇಳುತ್ತಿದ್ದರು, ರಾಮಭಕ್ತನು ಮೊದಲಿನಿಂದಲೂ ಭಕ್ತನೇ ಆಗಿದ್ದನು. ಆದರೆ ಅವನ ಕುಟುಂಬದಲ್ಲಿ ಮೋಹ ಆವರಿಸಿಕೊಂಡಿತ್ತು, ಆದ್ದರಿಂದ ಇಷ್ಟೆಲ್ಲಾ ಕಷ್ಟ ಅನುಭವಿಸಬೇಕಾಯಿತು. ನಾನು ಈ ಮೊದಲೇ ಸತ್ಸಂಗಕ್ಕೆ ಬರಲು ತಿಳಿಸಿದ್ದೆ, ಆದರೆ ಯಾವುದೋ ಮಾಯೆ ಆವರಿಸಿದ್ದರಿಂದ ಅವನು ನನ್ನ ಮಾತನ್ನು ಕೇಳಲಿಲ್ಲ. ಅವನ ಮಗ ಸೊಸೆಯ ವರ್ತನೆಯೆಲ್ಲಾ ಅವನಿಗೆ ವರದಾನವಾಯಿತು" ಎಂದರು.

ಕಬೀರರು ಹೇಳಿದ್ದಾರೆ.

ಕಬೀರ್, ಸುಖ್ ಕೇ ಮಾಥೇ ಪತ್ಥರ್ ಪಡೋ,
ಜೋ ನಾಮ್ ಹೃದಯ್ ಸೇ ಜಾಯ್ ।
ಬಲಿಹಾರೀ ವಾ ದುಃಖ್ ಕೇ, ಜೋ ಪಲ್-ಪಲ್ ರಾಮ್ ರಟಾಯ್ ॥

ಭಾವಾರ್ಥ:- ಹೇ ಪರಮಾತ್ಮ! ನಿನ್ನನ್ನು ಮರೆತು ಹೋಗುವಷ್ಟು ಸುಖವನ್ನು ನೀಡಬೇಡ. ಯಾವ ದುಃಖದಿಂದ ನಿನ್ನ ನೆನಪು ಕ್ಷಣಕ್ಷಣವೂ ಇರುವುದೋ ಅಂಥಾ ದುಃಖವನ್ನು ಕೊಡು. ಯಾವ ದುಃಖದಿಂದ ದೇವರ ಆಶ್ರಯ ಲಭಿಸುವುದೋ ಅಂಥಾ ದುಃಖಕ್ಕೆ ನಾನು ನನ್ನನ್ನು ಅರ್ಪಿಸಿಕೊಳ್ಳುವೆ.

ರಾಮಭಕ್ತನು ತನ್ನ ಮಗನನ್ನು ಸತ್ಸಂಗಕ್ಕೆ ಕರೆದೊಯ್ಯುವಂತೆ ರಾಮ್‌ನಿವಾಸ್‌ಗೆ ಹೇಳಿದನು. ಒಂದು ತಿಂಗಳ ನಂತರ ಆಯೋಜಿಸಿದ್ದ ಸತ್ಸಂಗಕ್ಕೆ ರಾಮ್‌ನಿವಾಸ್‌ನು ಅವನನ್ನು ಸತ್ಸಂಗಕ್ಕೆ ಕರೆದೊಯ್ದನು. ಮೂರು ದಿನ ಅವರಿಬ್ಬರೂ ಆಶ್ರಮದಲ್ಲಿದ್ದರು, ಸತ್ಸಂಗದಲ್ಲಿದ್ದರು. ಅಲ್ಲಿಯ ಆಶ್ರಮವಾಸಿಗಳಿಂದ ಅವರ ಜೀವನದ ಅನುಭವಗಳನ್ನು ಕೇಳಿದರು. ಭಕ್ತಿಯಲ್ಲಿ ಮಿಂದೆದ್ದರು. ನಂತರ ಅವರ ಕುಟುಂಬ ಸಂಪೂರ್ಣ ಬದಲಾಯಿತು. ಭಕ್ತಿ ಮತ್ತು ಸೇವೆಯಿಂದ ಅವರ ಉದ್ಧಾರವಾಯಿತು.

## "ಸತ್ಸಂಗದಿಂದ ಮನೆಯಲ್ಲಿ ಜಗಳ ಅಂತ್ಯವಾಗುತ್ತದೆ"

ಒಬ್ಬ ಹೆಂಗಸು ತನ್ನ ಸೊಸೆಯ ಮೇಲೆ ಮಾತು ಮಾತಿಗೂ ಮುನಿಸಿಕೊಳ್ಳುತ್ತಿದ್ದಳು. ಅವಳ ಸಣ್ಣ ಪುಟ್ಟ ತಪ್ಪುಗಳನ್ನು ಉಪ್ಪು ಖಾರಾ ಸೇರಿಸಿ ತನ್ನ ಮಗನಿಗೆ ಹೇಳುತ್ತಿದ್ದಳು. ಮಗ ಹೆಂಡತಿಯನ್ನು ಬಯ್ಯುತ್ತಿದ್ದ. ಹೀಗೆ ಮನೆ ನರಕವಾಗಿ ಹೋಗಿತ್ತು. ಸೊಸೆ ಆಗಾಗ ಅತ್ತೆಗೆ ಸತ್ಸಂಗಕ್ಕೆ ಹೋಗುವಂತೆ ಹೇಳುತ್ತಿದ್ದಳು. ಏಕೆಂದರೆ ಅವಳ ನೆರೆಮನೆಯವಳು ಸತ್ಸಂಗಕ್ಕೆ ಹೋಗುತ್ತಿದ್ದಳು. ಅತ್ತೆಗೆ ಈ ಮಾತು ಸರಿ ಅನ್ನಿಸುತ್ತಿರಲಿಲ್ಲ. 'ಬುದ್ಧಿ ಇಲ್ಲದವರು, ಚಾರಿತ್ರವಿಲ್ಲದವರು ಸತ್ಸಂಗಕ್ಕೆ ಹೋಗುತ್ತಾರೆ' ಎಂದು ವಾದಿಸುತ್ತಿದ್ದಳು. ನಾವು ಒಳ್ಳೆಯ ಮನೆತನದವರು, ಸತ್ಸಂಗದಲ್ಲಿ ನಮಗೇನು ಕೆಲಸ? ಎನ್ನುತ್ತಿದ್ದಳು. ಸೊಸೆ ಎಷ್ಟೇ ಪ್ರಯತ್ನ ಪಟ್ಟರೂ ಅತ್ತೆ ಸೊಸೆಯ ಮಾತು ಕೇಳಲು ಸಿದ್ಧಳಾಗಿರಲಿಲ್ಲ. ಒಂದು ದಿನ ಅತ್ತೆಯ ಊರಿನ ಒಬ್ಬ ಹೆಂಗಸು ಯಾವುದೋ ಕೆಲಸದ ನಿಮಿತ್ತ ಅತ್ತೆಯ ಮನೆಗೆ ಬಂದಳು. ಆಗ ಅತ್ತೆ ಸೊಸೆಗೆ ಬಯ್ಯುತ್ತಿದ್ದಳು, ಗದರಿಸುತ್ತಿದ್ದಳು. ನಿನ್ನ ಚರ್ಮ ಸುಲಿಯುತ್ತೇನೆ

ಎಂದು ಬಯ್ಯುತ್ತಿದ್ದಳು. ಆಗಿದ್ದಿಷ್ಟೇ. ಸೊಸೆ ಅತ್ತೆಗೆ ಚಹ ಮಾಡಿ, ಚಹಾ ಲೋಟವನ್ನು ತಂದು ಅತ್ತೆಯ ಕೈಗಿಡಬೇಕೆನ್ನುವಷ್ಟರಲ್ಲಿ ಮಲಗಿದ್ದ ಸೊಸೆಯ ಮಗು ಅಳಲು ಪ್ರಾರಂಭಿಸಿತು. ಲೋಟವನ್ನು ಅಲ್ಲೇ ಟೇಬಲ್ಲಿನ ಮೇಲಿಟ್ಟು ಮಗುವನ್ನು ಸಮಾಧಾನ ಮಾಡಲು ಸೊಸೆ ರೂಮಿನ ಒಳಗೆ ಹೋದಳು. ಅಷ್ಟರಲ್ಲಿ ಅವರ ಮನೆ ನಾಯಿ ಲೋಟಕ್ಕೆ ಬಾಯಿಹಾಕಿತು. ಲೋಟ ನೆಲದ ಮೇಲೆ ಬಿದ್ದು ಚಹ ಚೆಲ್ಲಿ ಹೋಯಿತು. ಅತ್ತೆ ಸ್ವಲ್ಪ ದೂರದಲ್ಲಿ ಕುಳಿತಿದ್ದಳು, ವ್ಯಾಯಾಮ ಎಲ್ಲಾ ಮಾಡಿ ಕಟ್ಟು ಮಸ್ತಾದ ಆಳಾಗಿದ್ದರೂ ಮನೆಯಲ್ಲಿ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಅವಳು ಸೊಸೆಗೆ ನರಕ ತೋರಿಸತೊಡಗಿದಳು. ಇವಳ ಮನೆಗೆ ಬಂದು ಇಳಿದು ಕೊಂಡಿದ್ದ ಆ ಹಳ್ಳಿಯ ಹೆಂಗಸು ಇದನ್ನೆಲ್ಲಾ ನೋಡಿ, ಪಕ್ಕದ ಗಲ್ಲಿಯಲ್ಲಿ ವಾಸವಾಗಿದ್ದ ಅತ್ತೆಯ ತಂಗಿಗೆ ಈ ವಿಷಯವನ್ನೆಲ್ಲಾ ಹೋಗಿ ಹೇಳಿದಳು. ಆಗ ಅತ್ತೆಯ ತಂಗಿ ತನ್ನ ಅಕ್ಕನ ಮನೆಗೆ ಬಂದು ಅವಳ ಮನವೊಲಿಸಿ ತನ್ನ ಮನೆಗೆ ಕರೆದುಕೊಂಡು ಹೋದಳು. ಅಲ್ಲಿ ಸತ್ಸಂಗಕ್ಕೆ ಹೋಗಲು ಅವಳ ಹತ್ತಾರು ಗೆಳತಿಯರು ಕಾದು ಕುಳಿತಿದ್ದರು. ಅತ್ತೆಯ ಮನ ಒಲಿಸಿ ಎಲ್ಲರೂ ಸತ್ಸಂಗಕ್ಕೆ ಹೋದರು. ನಂತರ ಅತ್ತೆಗೆ ಸತ್ಸಂಗಕ್ಕೆ ಅಂತಿಂಥಾ ವ್ಯಕ್ತಿಗಳು ಬರುವುದಿಲ್ಲ, ಎಲ್ಲಾ ಸಭ್ಯವ್ಯಕ್ತಿಗಳೇ ಬರುತ್ತಾರೆ ಎಂಬ ಅರಿವಾಯಿತು. ಎಲ್ಲರೂ ತನ್ನ ಅಕ್ಕ, ತಂಗಿ, ಮಕ್ಕಳು, ಸೊಸೆಯಂದಿರು ಹಾಗೂ ಹೆಂಡತಿಯನ್ನು ಸತ್ಸಂಗಕ್ಕೆ ಕಳುಹಿಸುವುದಿಲ್ಲ ಹಾಗೂ ತಾವೂ ಬರುವುದಿಲ್ಲ. ಸತ್ಸಂಗಕ್ಕೆ ಹೋದರೆ ಮರ್ಯಾದೆ ಮಣ್ಣು ಪಾಲಾಗುತ್ತದೆ, ನಮ್ಮ ಹೆಣ್ಣು ಮಕ್ಕಳು ಹಾಳಾಗುತ್ತಾರೆ ಎಂದು ತಿಳಿದಿದ್ದಾರೆ. ಆದರೆ ಸತ್ಸಂಗಕ್ಕೆ ಹೋಗದಿದ್ದರೆ ಪರಮಾತ್ಮನ ಬಗೆಗಿನ ಜ್ಞಾನದ ಅರಿವಾಗುವುದಿಲ್ಲ ಮತ್ತು ಭಕ್ತಿಯಿಂದ ಇರದಿದ್ದರೆ ಮುಂದಿನ ಜೀವನದಲ್ಲಿ ಎಷ್ಟು ಕಷ್ಟ ಪಡಬೇಕಾದೀತು ಎಂದು ಅವರು ಯೋಚಿಸಬೇಕು.

❖ ಯಾವ ಮನುಷ್ಯನು ಶರೀರವನ್ನು ಹೊಂದಿದ್ದರೂ ಭಕ್ತಿಯಿಂದ ಇರುವುದಿಲ್ಲವೋ ಅವನಿಗೆ ಆಗುವ ನಷ್ಟವೇನು ಎಂದು ಸೂಕ್ಷ್ಮವೇದದಲ್ಲಿ ಹೇಳಿದೆ.

ಕಬೀರ್, ಹರಿ ಕೇ ನಾಮ್ ಬಿನಾ, ನಾರಿ ಕುತಿಯಾ ಹೋಯ್ ।
ಗಲೀ-ಗಲೀ ಭೌಕತ್ ಫಿರೈ, ಟೂಕ್ ನಾ ಡಾಲೈ ಕೋಯ್ ॥

**ಸಂತ ಗರೀಬ್‌ದಾಸರು ಹೇಳಿದಂತೆ :**

ಬೀಬೀ ಪಡದೈ ರಹೇ ಥೀ, ಡ್ಯೋಡೀ ಲಗತೀ ಬಾಹರ್ ।
ಅಬ್ ಗಾತ್ ಉಘಾಡೈ ಫಿರತೀ ಹೈಂ, ಬನ್ ಕುತಿಯಾ ಬಾಜಾರ್ ॥

ವೇ ಪಡದೇ ಕೀ ಸುಂದರೀ, ಸುನೋ ಸಂದೇಶಾ ಮೋರ್ ।
ಗಾತ್ ಉಘಾಡೈ ಫಿರತೀ ಹೈ ಕರೇಂ ಸರಾಯೋಂ ಶೋರ್ ॥

ನಕ್ ಬೇಸರ್ ನಕ್ ಪರ್ ಬನಿ, ಪಹರೇಂ ಥೀ ಹಾರ್ ಹಮೇಲ್ ।
ಸುಂದರೀ ಸೇ ಕುತಿಯಾ ಬನೀ, ಸುನ್ ಸಾಹೇಬ್ (ಪ್ರಭು) ಕೇ ಖೇಲ್ ॥

ಭಾವಾರ್ಥ:- ಮನುಷ್ಯ ಜೀವನವನ್ನು ಪಡೆದ ಪ್ರಾಣಿಯು ಭಕ್ತಿಯಿಂದ ಇರದಿದ್ದರೆ ಅವನು ಮರಣಾನಂತರ ಪಶು ಪಕ್ಷಿಗಳ ಜನ್ಮ ತಾಳುತ್ತಾನೆ. ಪರಮಾತ್ಮನ ನಾಮಸ್ಮರಣೆ ಮಾಡದ ಸ್ತ್ರೀಯು ಮುಂದಿನ ಜೀವನದಲ್ಲಿ ನಾಯಿಯಾಗಿ ಹುಟ್ಟುತ್ತಾಳೆ. ಬೆತ್ತಲೆಯಾಗಿ ಗಲ್ಲಿಗಳಲ್ಲಿ ಅಲೆದಾಡಬೇಕಾಗುತ್ತದೆ. ಹಸಿವಿನಿಂದ ನರಳಬೇಕಾಗುತ್ತದೆ. ಅವಳಿಗೆ ಅನ್ನ ಹಾಕುವವರು ಯಾರೂ ಇರುವುದಿಲ್ಲ. ಯಾರಾದರೂ ಒಬ್ಬ ಸ್ತ್ರೀ ರಾಜನ ಅಥವಾ ಅಧಿಕಾರಿಯ ಹೆಂಡತಿಯಾಗಿದ್ದರೆ, ಅದು ಅವಳ ಪೂರ್ವ ಜನ್ಮದ ಪುಣ್ಯದ ಫಲ, ಹಿಂದಿನ ಜನ್ಮದಲ್ಲಿ ಅವಳು ಭಕ್ತಿ-ದಾನ ಧರ್ಮ ಮಾಡಿದ್ದಿರಬೇಕು. ಆ ದೊಡ್ಡ ಮನೆಯ ಹೆಂಗಸರು ದ್ರಾಕ್ಷಿ ಗೋಡಂಬಿ ಹಾಕಿದ ಪಂಚಭಕ್ಷ್ಯ ಪರಮಾನ್ನಗಳನ್ನು ತಿಂದರೆ, ಅವರು

ತಿಂದು ಬಿಟ್ಟ ಎಂಜಲನ್ನು ಅವರ ಕೆಲಸದವರು ತಿನ್ನುತ್ತಾರೆ. ಆದರೆ ಅಂಥಾ ಹೆಂಗಸರನ್ನು ಸತ್ಸಂಗಕ್ಕೆ ಹೋಗಲು ಬಿಡುವುದಿಲ್ಲ, ಅವರೆಲ್ಲಾ ಹೊರ ಹೋದರೆ ಮರ್ಯಾದೆಗೆ ಕಡಿಮೆ ಎಂದು ಭಾವಿಸುತ್ತಾರೆ. ಅವರು ಸತ್ಸಂಗಕ್ಕೆ ಹೋಗಿ ಪರಮಾತ್ಮನ ವಿಚಾರವನ್ನು ಕೇಳದಿದ್ದರೆ ಅವರು ಮುಂದಿನ ಜನ್ಮದಲ್ಲಿ ನಾಯಿಯಾಗಿ ಹುಟ್ಟಿ ಗಲ್ಲಿ ಗಲ್ಲಿ ಸುತ್ತುತ್ತಾರೆ. ಎಷ್ಟೇ ಬೆಲೆಬಾಳುವ ಹಾರ ಧರಿಸಿದರೂ, ಚಿನ್ನದ ಒಡವೆ ಧರಿಸಿದರೂ, ಸತ್ಸಂಗಕ್ಕೆ ಹೋಗದಿದ್ದರೆ ನಾಯಿಯ ಜನ್ಮ ಪಡೆಯುವುದು ಖಚಿತ. ಧರ್ಮಛತ್ರದಲ್ಲಿ ಯಾತ್ರಿಕರು ಉಳಿದುಕೊಂಡು ಅವರು ತಿಂದುಳಿದ ಊಟವನ್ನು ನೆಲದ ಮೇಲೆ ಎಸೆದಾಗ, ಮಣ್ಣು ಮೆತ್ತಿಕೊಂಡಿರುವ ಊಟವನ್ನೇ ತಿನ್ನಲು ಈ ಸ್ತ್ರೀಯರು ನಾಯಿಯಾಗಿ ಪರದಾಡಬೇಕಾಗುತ್ತದೆ. ಸತ್ಸಂಗದ ಜ್ಞಾನವಿಲ್ಲದ ಕಾರಣ ಹಿಂದಿನ ಜನ್ಮದಲ್ಲಿ ದ್ರಾಕ್ಷಿ ಗೋಡಂಬಿ ತಿಂದು ಸುಖದ ಸುಪ್ಪತ್ತಿಗೆಯಲ್ಲಿದ್ದ ಹೆಂಗಸರು ಈಗ ನಾಯಿಯಾಗಿ ಅಲೆದಾಡಬೇಕಾಗುತ್ತದೆ. ಮಾನವ ಶರೀರವಿದ್ದಾಗ ಸಂತರಿಂದ ದೀಕ್ಷೆ ಪಡೆದರೆ ಇಂಥಾ ಗತಿ ಯಾರಿಗೂ ಬರಲಾರದು.

## "ಪುಹಲೋ ಬಾಯಿಯ ಕತೆ"

ಒಬ್ಬ ರಾಜನು ಪುಹಲೋ ಬಾಯಿಯ ಜ್ಞಾನ–ವಿಚಾರ ಕೇಳಿದನು. ಅದರಿಂದ ಬಹಳ ಪ್ರಭಾವಿತನಾದನು. ಆ ರಾಜನಿಗೆ ಮೂವರು ರಾಣಿಯರಿದ್ದರು. ರಾಜನು ತನ್ನ ಮೂವರು ರಾಣಿಯರ ಬಳಿ ಪುಹಲೋಬಾಯಿಯ ಬಗ್ಗೆ ಹೇಳಿದನು. ಪುಹಲೋಬಾಯಿಯನ್ನು ಅವರ ಮುಂದೆ ಹೊಗಳುತ್ತಿದ್ದನು. ಪರಸ್ತ್ರೀಯ ಪ್ರಶಂಸೆಯನ್ನು ತನ್ನ ಪತಿಯ ಬಾಯಿಂದ ಕೇಳಿದ ಆ ರಾಣಿಯರು ಕೋಪಗೊಂಡರು. ಆದರೆ ಏನನ್ನೂ ಹೇಳಲಿಲ್ಲ. ಅವರೆಲ್ಲಾ ಭಕ್ತ ಶಿರೋಮಣಿ ಪುಹಲೋಬಾಯಿಯನ್ನು ನೋಡುವ ಇಚ್ಛೆ ವ್ಯಕ್ತಪಡಿಸಿದರು. ರಾಜನು ತನ್ನ ಅರಮನೆಯಲ್ಲಿ ಸತ್ಸಂಗವೇರ್ಪಡಿಸಲು ಪುಹಲೋಬಾಯಿಯನ್ನು ಆಹ್ವಾನಿಸಿದನು. ಪುಹಲೋಬಾಯಿ ಒಪ್ಪಿ, ಸತ್ಸಂಗವೇರ್ಪಡಿಸಿದಳು. ರಾಣಿಯರು ಆ ದಿನ ಬಹಳ ಬೆಲೆಬಾಳುವ ವಸ್ತ್ರಗಳನ್ನುಟ್ಟು, ಒಡವೆಗಳನ್ನೆಲ್ಲಾ ತೊಟ್ಟುಕೊಂಡು, ಚೆನ್ನಾಗಿ ಅಲಂಕರಿಸಿಕೊಂಡರು, ಪುಹಲೋಬಾಯಿ ಬಹಳ ಸುಂದರಿಯಾಗಿರಬಹುದು ಎಂದು ಅವರು ಅಂದುಕೊಂಡಿದ್ದರು, ಭಕ್ತ ಶಿರೋಮಣಿ ಪುಹಲೋಬಾಯಿ ರಾಜನ ಅರಮನೆಗೆ ಬಂದಳು. ಅವಳು ಬಂದು ಕೊಳೆಯಾದ ಖಾದಿಯ ಬಟ್ಟೆಯನ್ನುಟ್ಟಿದ್ದಳು. ಕೈಯ್ಯಲ್ಲಿ ಜಪಮಾಲೆ ಇತ್ತು. ಅತಿಯಾಗಿ ಬೆಳ್ಳಗೂ ಇರಲಿಲ್ಲ. ಅವಳನ್ನು ನೋಡಿದ ರಾಣಿಯರು ಜೋರಾಗಿ ನಗುತ್ತಾ, 'ಅಯ್ಯೋ ಇವಳಾ ಪುಹಲೋಬಾಯಿ, ನಾವು ಇವಳು ಬಹಳ ಸುಂದರಿ ಎಂದು ಕೊಂಡಿದ್ದೆವು' ಎಂದರು, ಅವರ ಮಾತು ಕೇಳಿದ ಪುಹಲೋಬಾಯಿ ಹೀಗೆಂದಳು.

ವಸ್ತ್ರ–ಆಭೂಷಣ್ ತನ್ ಕೀ ಶೋಭಾ, ಯಹ್ ತನ್ ಕಾಚ್ಚೋ ಭಾಂಡೋ ।<br>
ಭಕ್ತಿ ಬಿನಾ ಬನೋಗೀ ಕುತಿಯಾ, ರಾಮ್ ಭಜೋ ನ ರಾಂಡೋ ॥

ಭಾವಾರ್ಥ:– ಸುಂದರವಾದ ವಸ್ತ್ರ ಹಾಗೂ ಒಡವೆಗಳು ಶರೀರದ ಅಂದವನ್ನು ಹೆಚ್ಚಿಸುತ್ತವೆ. ಈ ಶರೀರ ನಶ್ವರ. ಈ ಶರೀರ ಮಡಕೆ ಇದ್ದಂತೆ. ಯಾವಾಗ ಏನಾಗುವುದೋ, ಯಾವ ಕಷ್ಟ ಬರುವುದೋ ತಿಳಿಯದು, ಭಕ್ತಿ ಮಾಡದಿದ್ದರೆ ಮುಂದಿನ ಜನ್ಮದಲ್ಲಿ ನಾಯಿಯಾಗಿ ಹುಟ್ಟುವೆ. ಬೆತ್ತಲೆಯಾಗಿ ಅಲೆಯುವೆ, ಆದ್ದರಿಂದ ಹೆಂಗಸರೇ, ಭಕ್ತಿಯಿಂದ ಇರಿ", ಹಿಂದಿಯಲ್ಲಿ 'ರಾಂಡ್' ಎಂಬ ಶಬ್ದ ವಿಧವೆಯನ್ನು ಕರೆಯಲು ಉಪಯೋಗಿಸಲಾಗುತ್ತದೆ. ಆದರೆ ಸಾಮಾನ್ಯವಾಗಿ ಮಹಿಳೆಯರು ತಮ್ಮ ಆತ್ಮೀಯ ಗೆಳತಿಯರನ್ನು ಪ್ರೀತಿಯಿಂದ ಸಂಬೋಧಿಸಲು ಉಪಯೋಗಿಸುತ್ತಾರೆ. (ಪ್ರೀತಿಯಿಂದ ಬಯ್ಯುವ ರೀತಿಯಲ್ಲಿ), ಈಗ ಸುಶಿಕ್ಷಿತರಾದ ನಂತರ ಆ ಶಬ್ದದ ಪ್ರಯೋಗವಾಗುತ್ತಿಲ್ಲ. ಭಕ್ತ ಶಿರೋಮಣಿಯಾದ ಪುಹಲೋಬಾಯಿ ಸತ್ಸಂಗವೇರ್ಪಡಿಸಿದಳು. ಕಬೀರ್ ಪರಮೇಶ್ವರರ ಪದ್ಯವನ್ನು ಎಲ್ಲರಿಗೂ ತಿಳಿಸಿದಳು.

ಕಬೀರ್, ಹರಿ ಕೆ ನಾಮ್ ಬಿನಾ, ನಾರೀ ಕುತಿಯಾ ಹೋಯ್ ।
ಗಲೀ–ಗಲೀ ಭೌಂಕತ್ ಫಿರೆ, ಟೂಕ್ ನಾ ಡಾಲೆ ಕೋಯ್ ॥

ಕಬೀರ್, ರಾಮ್ ರಟತ್ ಕೋಢೀ ಭಲೋ, ಚೂ–ಚೂ ಪಡೇ ಜೋ ಚಾಮ್ ।
ಸುಂದರ್ ದೇಹಿ ಕಿಸ್ ಕಾಮ್ ಕೀ, ಜಾ ಮುಖ್ ನಾಹೀಂ ನಾಮ್ ॥

ಕಬೀರ್, ನಹೀಂ ಭರೋಸಾ ದೇಹಿ ಕಾ, ವಿನಶ್ ಜಾಯೇ ಛಿನ್ ಮಾಹೀಂ ।
ಶ್ವಾಂಸ್–ಉಶ್ವಾಂಸ್ ಮೆಂ ನಾಮ್ ಜಪೋ, ಔರ್ ಯತ್ನ್ ಕುಛ್ ನಾಹೀಂ ॥

ಕಬೀರ್, ಶ್ವಾಂಸ್–ಉಶ್ವಾಂಸ್ ಮೆಂ ನಾಮ್ ಜಪೋ,
ವ್ಯರ್ಥಾ ಶ್ವಾಂಸ್ ಮತ್‌ಖೋವೋ ।
ನಾ ಜಾನೇ ಇಸ್ ಶ್ವಾಂಸ್ ಕಾ, ಆವನ್ ಹೋ ಕೇ ನಾ ಹೋಯ್ ॥

ಗರೀಬ್, ಸರ್ವ್ ಸೋನೇ ಕೀ ಲಂಕಾ ಥೀ, ರಾವಣ್ ಸೇ ರಣಧೀರಮ್ ।
ಏಕ್ ಪಲಕ್ ಮೆಂ ರಾಜ್ಯ್ ಗಯಾ, ಜಮ್ ಕೇ ಪಡೇ ಜಂಜೀರಮ್ ॥

ಗರೀಬ್, ಮರ್ದ್–ಗರ್ದ್ ಮೆಂ ಮಿಲ್ ಗಯೇ, ರಾವಣ್ ಸೇ ರಣಧೀರಮ್ ॥
ಕಂಸ್, ಕೇಸಿ, ಚಾಣೂರ್ ಸೇ, ಹಿರಣಾಕುಶ್ ಬಲಬೀರಮ್ ॥

ಗರೀಬ್, ತೇರೀ ಕ್ಯಾ ಬುನಿಯಾದ್ ಹೈ, ಜೀವ್ ಜನ್ಮ್ ಧರಿ ಲೇತ್ ।
ದಾಸ್ ಗರೀಬ್ ಹರಿ ನಾಮ್ ಬಿನ್, ಖಾಲೀ ರಹ್ ಜಾ ಖೇತ್ ॥

❖ **ಶಬ್ದಾರ್ಥ :–** ಕಬೀರ್ ಪರಮೇಶ್ವರರು ಆಧ್ಯಾತ್ಮದ ವಿಧಾನವನ್ನು ತಿಳಿಸಿದ್ದಾರೆ. ಸ್ತ್ರೀಯು ಭಕ್ತಿಯಿಂದ ಇರದಿದ್ದರೆ, ಅವಳು ಮುಂದಿನ ಜನ್ಮದಲ್ಲಿ ನಾಯಿಯಾಗಿ ಹುಟ್ಟಿ ಬೀದಿ ಬೀದಿ ಅಲೆದಾಡಬೇಕಾಗುತ್ತದೆ. ಯಾರೂ ಅವಳಿಗೆ ಒಂದು ತುತ್ತು ಊಟವನ್ನೂ ಕೊಡುವುದಿಲ್ಲ. ಮಾನವ ಜೀವನವಿದ್ದಾಗ ಅವಳಿಗೆ ಹೊತ್ತೊತ್ತಿಗೆ ಊಟ ಸಿಗುತ್ತಿತ್ತು. ಭಕ್ತಿಯಿಂದ ಇರದಿದ್ದರೆ ಇಂಥಾ ಗತಿ ಬರಬಹುದು.

ಪರಮಾತ್ಮನ ಭಕ್ತಿಯನ್ನು ಕುಷ್ಟರೋಗಿಯೂ (ಯಾರ ಶರೀರದ ಚರ್ಮವು ಸೀಳಿಕೊಂಡು–ಸ್ವಲ್ಪ ಸ್ವಲ್ಪವಾಗಿಯೇ ಉದುರುತ್ತಿರುತ್ತದೋ, ಅದರಿಂದ ರಕ್ತವು ಬರುತ್ತಿರುತ್ತದೋ) ಸಹ ಮಾಡುತ್ತಾನೆಂದರೆ ಬಹಳ ಒಳ್ಳೆಯದು. ಭಕ್ತಿಯಿಂದ ಇದ್ದರೆ ಅವನ ಕುಷ್ಟರೋಗವೂ ಸಹ ಓಡಿಹೋಗುವುದು. ಭವಿಷ್ಯವು ಉಜ್ವಲವಾಗುವುದು. ಯಾರು ಭಕ್ತಿ ಮಾಡುವುದಿಲ್ಲವೋ, ಅವರು ಎಷ್ಟೇ ಸುಂದರವಾಗಿದ್ದರೂ, ಆ ಸುಂದರ ಶರೀರವು ಯಾವ ಕೆಲಸಕ್ಕೂ ಬರುವುದಿಲ್ಲ.

ಮಾನವ ಶರೀರವು ಯಾವಾಗ, ಯಾವ ಕಾರಣಕ್ಕೆ, ಎಲ್ಲಿ ನಾಶವಾಗುವುದೋ ಯಾರಿಗೆ ಗೊತ್ತು? ಅದನ್ನು ಕಾಪಾಡಿಕೊಂಡಿರಲು ಸಾಧ್ಯವಿಲ್ಲ. ಇದಕ್ಕೆ ಒಂದೇ ಉಪಾಯವೆಂದರೆ ಭಕ್ತಿಯಿಂದ ಇರುವುದೇ ಆಗಿದೆ. ಒಂದು ಉಸಿರೂ ಸಹ ನಾಮಸ್ಮರಣೆಯ ವಿನಃ ಹಾಗೆ ತೆಗೆದುಕೊಳ್ಳದಂತೆ ನಾಮಸ್ಮರಣೆ ಮಾಡು.

ಉಸಿರು ತೆಗೆದುಕೊಳ್ಳುವಾಗ, ಉಸಿರು ಬಿಡುವಾಗ ಅಂದರೆ ಪ್ರತಿಯೊಂದು ಉಸಿರಿನಲ್ಲೂ ನಾಮಸ್ಮರಣೆ ಮಾಡು. ನಾಮಸ್ಮರಣೆ ಇಲ್ಲದೆ ಉಸಿರನ್ನು ವ್ಯರ್ಥ ಮಾಡಬೇಡ. ಒಳಗಡೆ ಹೋಗಿರುವ ಉಸಿರಿಗೆ ತಾನು ಹೊರ ಬರುವೆನೆಂಬ ನಂಬಿಕೆಯೂ ಇಲ್ಲ. ಆದ್ದರಿಂದ ವ್ಯರ್ಥಗೊಳಿಸದೆ ಭಕ್ತಿಯಲ್ಲಿ ಲೀನವಾಗು.

ನಿಮ್ಮ ಬಳಿ ಹಣವಿದ್ದರೂ, ಸಕಲ ಸೌಕರ್ಯಗಳಿದ್ದರೂ ಭಕ್ತಿಯನ್ನು ಮರೆಯಬೇಡಿ. ಶ್ರೀಲಂಕೆಯ ರಾಜನಾದ ರಾವಣನ ಬಳಿ ಬಹಳವಾಗಿ ಹಣವಿತ್ತು. ಚಿನ್ನದ ಅರಮನೆ ಇತ್ತು.

ಮೇಲಾಗಿ ಸ್ವತಃ ವೀರನಾಗಿದ್ದನು. ಆದರೆ ರಾಮಚಂದ್ರನ ಜೊತೆ ಯುದ್ಧವಾಯಿತು. ಆಗ ಅವನು ಸತ್ತು ಹೋದ, ಚಿನ್ನವೆಲ್ಲಾ ಲೂಟಿ ಆಯಿತು, ರಾಜ್ಯವೂ ಹೋಯಿತು. ಇವೆಲ್ಲವೂ ಒಂದು ಕ್ಷಣಮಾತ್ರದಲ್ಲಿ ಆಗಿ ಹೋಯಿತು. ಅಂದರೆ ರಾಮನ ಒಂದು ಬಾಣದಿಂದ ರಾವಣನು ಸತ್ತು ಹೋದನು. ತಕ್ಷಣವೇ ಎಲ್ಲವೂ ನಾಶವಾಯಿತು. ಯಮದೂತನು ಅಂದರೆ ಮೃತ್ಯು ದೇವತೆಯ ಸೇವಕನು ಆ ರಾವಣನನ್ನು ಸರಪಳಿಯಲ್ಲಿ ಬಂಧಿಸಿ ಎಳೆದುಕೊಂಡು ಹೋದನು. ಅಲ್ಲಿ ನರಕಕ್ಕೆ ತಳ್ಳಿದನು.

ರಾವಣನಂಥಾ ಧೀರನು (ಶೂರವೀರನು) ಮಣ್ಣಲ್ಲಿ ಸೇರಿಹೋದನು. ಮಥುರೆಯ ರಾಜನಾದ ಕಂಸ, ಅವನ ಕುಸ್ತಿಪಟುವಾದ ಚಾಣೂರ, ಕಂಸನ ಸೇವಕನಾದ ಕೇಶಿ ಎಂಬ ರಾಕ್ಷಸ ಮತ್ತು ಹಿರಣ್ಯಕಶಪುವಿನಂಥಾ ಶಕ್ತಿಶಾಲಿಗಳು ಭಕ್ತಿ ಮಾಡದೆ ತಮ್ಮ ಜೀವನವನ್ನು ನಾಶಮಾಡಿಕೊಂಡರು. ಹೇ ಸಾಮಾನ್ಯ ಜೀವಿಯೇ ! ನಿನ್ನದ್ಯಾವ ಲೆಕ್ಕ? ಅಂದರೆ ನೀನು ಹೇಗೆ ಉಳಿದುಕೊಳ್ಳುವೆ? ನೀನು ಕರ್ಮಗಳಿಗೆ ಅನುಸಾರವಾಗಿ ಬೇರೆ ಬೇರೆ ಜೀವಿಗಳ ಶರೀರವನ್ನು ಪಡೆಯುವೆ. ಸಂತ ಗರೀಬ್‌ದಾಸರು ಕಬೀರ ಪರಮೇಶ್ವರರ ಮೂಲಕ ತಿಳಿಸಿದ ಜ್ಞಾನದಿಂದ ಹೇಳುವುದೇನೆಂದರೆ, ಭಕ್ತಿ ಮಾಡದಿದ್ದರೆ ರೈತನು ಬೀಜವನ್ನು ಬಿತ್ತದಿದ್ದರೆ ಹೇಗೆ ಹಸಿವಿನಿಂದ ಸಾಯುತ್ತಾನೋ ಹಾಗೆ ನಿನ್ನ ಗತಿಯೂ ಆಗುವುದು.

ಪುಹಲೋಬಾಯಿಯು ಈ ಪ್ರಪಂಚದ ವಾಸ್ತವಿಕತೆಯನ್ನು ತಿಳಿಸಿದಳು. ಭಕ್ತಿ ಮಾಡದಿದ್ದರೆ ಬರುವ ಕಷ್ಟವನ್ನು ತಿಳಿಸಿದಳು. ಒಂದು ಸಣ್ಣ ರಾಜ್ಯಗಳಿಸಿದ್ದಕ್ಕೆ ಇಷ್ಟು ಅಹಂಕಾರ ಪಡುವಿರಲ್ಲಾ, ಲಂಕೆಯ ರಾಜ ರಾವಣನು ಚಿನ್ನದ ಅರಮನೆಯನ್ನೇ ಕಟ್ಟಿಸಿದ್ದನು. ಆದರೆ ಸತ್ಯದಿಂದ ಇರದೆ, ಭಕ್ತಿಯಿಂದ ಜೀವನ ಮಾಡದ ಕಾರಣ ರಾಜ್ಯವೂ ಉಳಿಯಲಿಲ್ಲ, ಚಿನ್ನವೂ ಹೋಯಿತು. ಮೇಲಾಗಿ ಅವನು ನರಕಕ್ಕೆ ಹೋದನು. ಪುಹಲೋಬಾಯಿಯ ಸತ್ಸಂಗವನ್ನು ಕೇಳಿದ ರಾಜ ರಾಣಿಯರು ಭಕ್ತಿಯಿಂದ ಇದ್ದು ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡರು.

ಕಬೀರ್, ಹರಿ ಕೇ ನಾಮ್ ಬಿನ್, ರಾಜಾ ರಷಭ್ ಹೋಯ್ ।
ಮಿಟ್ಟೀ ಲದೇ ಕುಮ್ಹಾರ್ ಕೇ, ಘಾಸ್ ನ ನೀರೈ ಕೋಯೇ ॥

ಪರಮಾತ್ಮನಲ್ಲಿ ಭಕ್ತಿಯಿಂದ ಲೀನವಾಗದಿದ್ದರೆ ರಾಜನೂ ಕತ್ತೆಯ ಜನ್ಮ ತಾಳುತ್ತಾನೆ. ಕುಂಬಾರನ ಮನೆಯಲ್ಲಿ ಮಣ್ಣು ಹೊರುತ್ತಾನೆ. ಸ್ವತಃ ಕಾಡಿಗೆ ಹೋಗಿ ಹುಲ್ಲು ತಿನ್ನುತ್ತಾನೆ.

ಫಿರ್ ಪೀಛೇ ತೂ ಪಶುವಾ ಕಿಜ್ಯೈ, ದೀಜ್ಯೈ ಬೈಲ್ ಬನಾಯ್ ।
ಚಾರ್ ಪಹರ್ ಜಂಗಲ್ ಮೆಂ ಡೋಲೇ, ತೋ ನಹೀಂ ಉದರ್ ಭರಾಯ್ ॥

ಸಿರ್ ಪರ್ ಸೀಂಗ್ ದಿಯೇ ಮನ್ ಬೌರೇ, ದೂಮ್ ಸೇ ಮಚ್ಛರ್ ಉಡಾಯ್ ।
ಕಾಂಧೈ ಜೂಆ ಜೋತೈ ಕೂಆ, ಕೋಂದೋಂ ಕಾ ಭುಸ್ ಖಾಯ್ ॥

ಭಾವಾರ್ಥ:– ಕತ್ತೆಯ ಜನ್ಮ ತೀರಿದ ನಂತರ ಎತ್ತಾಗಿ ಹುಟ್ಟುತ್ತಾನೆ. ಮಾನವ ಶರೀರದಲ್ಲಿದ್ದಾಗ ಎಷ್ಟೊಂದು ಸೌಲಭ್ಯಗಳಿತ್ತು? ಹಸಿವಾದಾಗ ಊಟ ಮಾಡು, ಹಾಲು ಕುಡಿ, ಚಹ ಕುಡಿ, ಬಾಯಾರಿಕೆಯಾದಾಗ ನೀರು ಕುಡಿ. ಅದೇ ಭಕ್ತನಾಗದಿದ್ದರೆ ಅವನು ಎತ್ತಾಗಿ ಹುಟ್ಟಿ ಬೆಳಿಗ್ಗೆಯಿಂದ ರಾತ್ರಿಯವರೆಗೆ ನಾಲ್ಕು ಹೊತ್ತು ಅಂದರೆ 12 ಗಂಟೆಗಳೂ ಕಾಡಿನಲ್ಲಿ ಅಲೆಯಬೇಕು, ಹೊಲ ಊಳಬೇಕು. ದಿನದಲ್ಲಿ ಎರಡು ಬಾರಿ ಮಾತ್ರ ಊಟ ಸಿಗುತ್ತದೆ. ಮಧ್ಯದಲ್ಲಿ ಹಸಿವಾದರೆ, ಬಾಯಾರಿಕೆಯಾದರೆ ಊಟವೂ ಇಲ್ಲ, ನೀರೂ ಇಲ್ಲ, ತಲೆಯ ಮೇಲೆ ಎರಡು ಕೊಂಬು, ಶರೀರದಲ್ಲಿ ಒಂದು ಬಾಲ ಇಟ್ಟುಕೊಂಡು ತಿರುಗಬೇಕು. ಮನುಷ್ಯನಾಗಿದ್ದಾಗ ಕೂಲರ್, ಫ್ಯಾನ್, ಎ.ಸಿ. ಎಲ್ಲವೂ ಇತ್ತು. ಈಗ ಬಾಲವಿದೆ. ಅದೇ ಕೂಲರ್, ಫ್ಯಾನ್ ಆಗಿ ಕೆಲಸಮಾಡಬೇಕಾಗುತ್ತದೆ ಅಷ್ಟೇ.

❖ ಪರಮಾತ್ಮನ ವಿಧಾನವನ್ನು ಅನುಸರಿಸದೇ ಸಾಂಸಾರಿಕ ಭಾವದಿಂದ ನಡೆದರೆ ನರಕವೇ ಗತಿ ಎಂದು ಸತ್ಸಂಗದಲ್ಲಿ ಹೇಳಿಕೊಡಲಾಗುತ್ತದೆ. ಮನೆಯ ಯಾವುದೇ ಸದಸ್ಯನು ಮನೆಯಲ್ಲಿ ಜಗಳವಾಡಬಾರದು, ಮನೆಯಲ್ಲಿ ಏನಾದರೂ ನಷ್ಟವಾದರೆ ಅದರ ವಿಷಯವಾಗಿ ಜಗಳವಾಡಕೂಡದು, ನಷ್ಟವಾಗಿರುವುದು ಆಗಿದೆ, ಆಗಬಾರದಿತ್ತು, ಆಗಿದೆ. ಜಗಳವಾಡುವುದರಿಂದ ಏನು ಪ್ರಯೋಜನ? ನಮ್ಮ ಅದೃಷ್ಟ ಕೆಟ್ಟದಿತ್ತು, ಹಾಗಾಗಿ ನಷ್ಟವಾಗಿದೆ, ನಾವು ತಿಳಿದೂ ತಿಳಿದು ಹೀಗೆ ಮಾಡಲಿಲ್ಲ.– ಹೀಗೆ ಹೇಳಿದಾಗ ಮನೆಯಲ್ಲಿ ಶಾಂತಿ ನೆಲೆಸುತ್ತದೆ. ಜಗಳದಲ್ಲಿ ಮೃತ್ಯುವಾಸಿಸುತ್ತದೆ. ಯಾರು ಜಗಳವಾಡುವುದಿಲ್ಲವೋ, ಅವರು ಸುಖದಿಂದ ಇರುತ್ತಾರೆ. ಯಾರ ಮನೆಯಲ್ಲಿ ದೇವರಸ್ತುತಿ, ಆರತಿ, ಹೋಮ, ಹವನಗಳು ನಡೆಯುವುವೋ, ಆ ಮನೆಯಲ್ಲಿ ದೇವತೆಗಳು ನೆಲೆಸುತ್ತಾರೆ.

ಅತ್ತೆ ಸೊಸೆಯ ಪ್ರಕರಣ ಇಲ್ಲಿ ಪುನರುಚ್ಚರಿಸೋಣ, ಅತ್ತೆ ಸೊಸೆಯನ್ನು ಗೋಳು ಹುಯ್ದುಕೊಳ್ಳುತ್ತಿದ್ದಳು. ಅವಳು ತನ್ನ ತಂಗಿಯ ಬಲವಂತದಿಂದ ಸತ್ಸಂಗಕ್ಕೆ ಹೋದಳು. ರಾತ್ರಿ 12 ಗಂಟೆಯಿಂದ ಬೆಳಗ್ಗಿನ ಜಾವ 2 ಗಂಟೆಯವರೆಗೆ ಸತ್ಸಂಗವಾಯಿತು. ಎಲ್ಲರೂ ಮನೆಗೆ ಮರಳಿದರು. ಸತ್ಸಂಗಕ್ಕೆ ಹೋಗಿದ್ದು ಸೊಸೆಗೆ ಗೊತ್ತಿರಲಿಲ್ಲ. ಬೆಳಿಗ್ಗೆ ಎದ್ದು ಎಮ್ಮೆಯ ಹಾಲನ್ನು ಕರೆದ ಸೊಸೆ ಆ ಬಟ್ಟಲನ್ನು ಮೇಲೆ ನೇತಾಡುತ್ತಿದ್ದ ಹಗ್ಗದ ಉಯ್ಯಾಲೆಯಲ್ಲಿಟ್ಟಳು. ಅವಳು ತಿರುಗಿ ನಡೆದಾಗ ಆ ಬಟ್ಟಲು ಸರಿಯಾಗಿ ಇಡದಿದ್ದ ಕಾರಣ ಅದು ಉರುಳಿ ಬಿದ್ದು ಹಾಲೆಲ್ಲಾ ನೆಲದ ಮೇಲೆ ಚೆಲ್ಲಿ ಹೋಯಿತು. ಆಗ ಸೊಸೆಗೆ ಭಯವಾಗತೊಡಗಿತು. ಈ ದಿನ ಅತ್ತೆ ತನಗೆ ಒಂದು ಗತಿ ಕಾಣಿಸುತ್ತಾಳೆ, ತನ್ನ ಮಗನಿಗೆ ಹೇಳಿ ಹೊಡೆಸುತ್ತಾಳೆ, ಹೇ ದೇವರೆ, ಇದೇನಾಗಿ ಹೋಯಿತು? ಈ ರೀತಿ ಯಾವತ್ತೂ ಆಗಿರಲಿಲ್ಲ. ಹೇ ಸದ್ಗುರು, ನನ್ನ ಮೇಲೆ ದಯೆ ತೋರಿಸು. ದಿನವೆಲ್ಲಾ ಅತ್ತೆಯ ಬಗ್ಗೆ ಚಿಂತಿಸುವುದರಿಂದ ನಿನ್ನ ನಾಮಸ್ಮರಣೆಯೂ ಮರೆತು ಹೋಗುತ್ತಿದ್ದೇನೆ' ಎಂದು ಅಳತೊಡಗಿದಳು. ಆದರೆ ಅತ್ತೆ ಸೊಸೆಯ ಬಳಿ ಬಂದು, ಮಗಳೇ, ಏನಾಗಬೇಕಿತ್ತೋ, ಅದಾಗಿದೆ. ಈ ದಿನ ನಮ್ಮ ಹಣೆಬರಹದಲ್ಲಿ ಹಾಲು ಬರೆದಿಲ್ಲ. ಚಿಂತೆ ಮಾಡಬೇಡ, ಚೆಲ್ಲಿರುವ ಹಾಲನ್ನು ಕೈಯಿಂದ ಎತ್ತಿ ದನಕರುಗಳಿಗೆ ಕುಡಿಸಿಬಿಡು" ಎಂದು ಹೇಳುತ್ತಾ, ದೀಕ್ಷೆ ಪಡೆದ ನಾಮ ಸ್ಮರಣೆ ಮಾಡುತ್ತಾ ಅಲ್ಲಿಂದ ಹೊರಟಳು. ಸೊಸೆಗೆ ತನ್ನ ಕಿವಿಯನ್ನೇ ನಂಬಲಾಗಲಿಲ್ಲ. ತನ್ನ ಅತ್ತೆಯ ಮನಸ್ಸೆಂಬ ಖಜಾನೆಯಲ್ಲಿ ಇಂಥಾ ನುಡಿಮುತ್ತುಗಳಿರುತ್ತವೆ ಎಂದು ಅನ್ನಿಸಿರಲಿಲ್ಲ. ಅತ್ತೆಯು ಮತ್ತೆ ಸೊಸೆಯ ಬಳಿ ಬಂದು 'ಮಗಳೇ, ನಾನು ನಿನ್ನೆ ನನ್ನ ತಂಗಿಯ ಜೊತೆ ಸತ್ಸಂಗಕ್ಕೆ ಹೋಗಿದ್ದೆ, ನನ್ನ ಕಣ್ಣು ತೆರೆಯಿತು. ನಾನು ಬಹಳ ಕೆಟ್ಟವಳಾಗಿದ್ದೆ, ಈಗ ಬುದ್ಧಿ ಬಂತು. ನನ್ನನ್ನು ಕ್ಷಮಿಸಿಬಿಡು. ನೀನೇ ನನ್ನ ಸ್ವಂತ ಮಗಳು, ನನ್ನ ನಿಜವಾದ ಮಗಳು ಮದುವೆಯಾಗಿ ಬೇರೆಯವರ ಮನೆ ಬೆಳಸಲು ಹೋಗಿದ್ದಾಳೆ. ಒಂದೇ ದಿನದ ಸತ್ಸಂಗದಿಂದ ನನ್ನ ಕಣ್ಣು ತೆರೆಯಿತು. ಮುಂದಿನ ಭಾನುವಾರ ನೀನೂ ಸತ್ಸಂಗಕ್ಕೆ ಬಾ, ಮಗನನ್ನು ಕರೆದುಕೊಂಡು ಹೋಗೋಣ" ಎಂದಳು. ಸೊಸೆಯು ಈ ಮೊದಲೇ ಗುರುಗಳ ಫೋಟೋ ತಂದು ಸೀರೆಗಳ ಮಧ್ಯದಲ್ಲಿ ಮುಚ್ಚಿಟ್ಟಿದ್ದಳು. ಅದನ್ನು ತೆಗೆದು ಅವರ ಕಾಲುಗಳನ್ನು ಮುಟ್ಟಿ ನಮಸ್ಕರಿಸುತ್ತಾ, ಹೇಳಿದಳು, "ಗುರುಗಳೇ ಈ ದಿನ ಈ ನಿಮ್ಮ ಮಗಳ ಕೂಗನ್ನು ಕೇಳಿದಿರಿ. ಮನೆಯನ್ನು ಸ್ವರ್ಗವನ್ನಾಗಿ ಮಾಡಿದಿರಿ" ಎಂದಳು.

ಸ್ವಲ್ಪ ಸಮಯದ ನಂತರ ಸೊಸೆಯ ಗುರುಗಳು ಬಂದರು, ಆಗ ಸೊಸೆಯು ಹೇಳಿದಳು, "ಗುರುಗಳೇ, ನನ್ನ ಸೊಸೆ ದೀಕ್ಷೆ ಪಡೆದ ವಿಷಯ ನನ್ನ ಬಳಿ ಯಾವತ್ತೂ ಹೇಳಿರಲೇ ಇಲ್ಲ. ನನ್ನ ಜಗಳದಿಂದ ಭಯ ಪಟ್ಟಿರಬೇಕು" ಎಂದಳು. ಆಗ ಗುರುಗಳು, ಅಮ್ಮ!, ನಿಮ್ಮ ದೀಕ್ಷೆ ಶಾಸ್ತ್ರಾನುಸಾರ ಆಗಿಲ್ಲ. ಸತ್ಯ ಸಾಧನೆಯ ವಿನಃ ಮೋಕ್ಷ ಪ್ರಾಪ್ತಿಯಿಲ್ಲ. ಹೇಗೆ ಸರಿಯಾದ ಔಷಧಿ ತಿಂದರೆ ರೋಗ ವಾಸಿಯಾಗುವುದೋ ಹಾಗೆ ಸತ್ಯ ಸಾಧನೆಯಿಂದ ಮೋಕ್ಷ ಪ್ರಾಪ್ತಿಯಾಗುತ್ತದೆ." ಮಧ್ಯದಲ್ಲೇ

ಸೊಸೆಯೆಂದಳು, "ಗುರೂಜೀ ನೀವು ಒಂದು ಹೊಸ ಪುಸ್ತಕವನ್ನು ಬರೆದಿದ್ದೀರಿ ಎಂದು ತಿಳಿಯಿತು. ಅದು ಮುದ್ರಣಗೊಂಡಿದೆಯಂತೆ, ನಿಮ್ಮ ಬಳಿ ಇದೆಯೇನು?" ಆಗ ಗುರುಗಳೆಂದರು, "ಮಗಳೇ, ನಾನು ನಿಮಗೆ ಕೊಡಲೆಂದೇ ಬಂದಿರುವೆ ಎನ್ನುತ್ತಾ ಜೋಳಿಗೆಯಿಂದ ಪುಸ್ತಕವನ್ನು ತೆಗೆದರು. ಸೊಸೆಗೆ ಹೇಳಿದರು, ನಿಮ್ಮ ಅತ್ತೆಯ ಗಮನ ಈಗ ಸಂಪೂರ್ಣವಾಗಿ ಭಕ್ತಿಯ ಕಡೆಗಿದೆ. ಅವಳು ತತ್ವಜ್ಞಾನವನ್ನು ಕೇಳುವಳು" ಎಂದರು. ಮೂರು ದಿನ ಗುರುಗಳು ಅಲ್ಲೇ ಇದ್ದು, ತತ್ವಜ್ಞಾನವನ್ನು ತಿಳಿಸಿದರು. ಅತ್ತೆ ಸಂಪೂರ್ಣ ಬದಲಾದಳು ಹಾಗೂ ಅವಳ ಉದ್ಧಾರವಾಯಿತು. ಸತ್ಸಂಗದಿಂದ ಮನೆ ಸ್ವರ್ಗವಾಯಿತು. ಎಲ್ಲೆಲ್ಲೂ ಶಾಂತಿ ನೆಲೆಸಿತು. ಮೋರಿ ನೀರಿನಂತಿದ್ದ ಮನೆಯಲ್ಲಿ ಪರಿಶುದ್ಧ ಗಂಗೆ ಹರಿಯುವಂತಾದಳು.

ಸೊಸೆಯ ಗುರುಗಳು ಪರಮೇಶ್ವರರಾದ ಕಬೀರರೇ ಆಗಿದ್ದರು. ಎಲ್ಲಾ ಕಡೆಯೂ ಸತ್ಯ ಭಕ್ತಿಯ ಪ್ರಚಾರ ಮಾಡಲು ವೇಷಮರೆಸಿಕೊಂಡು ತಿರುಗಾಡುತ್ತಿದ್ದರು. ಯಾವ ಪ್ರಭುವಿನ ಭಕ್ತಿ ಮಾಡಬೇಕೆಂದು ಅವರು ತಿಳಿಸಿದರು. ಹೆಚ್ಚಿನ ಮಾಹಿತಿಗಾಗಿ ಇದೇ ಪುಸ್ತಕದ "ಯಾವ ಪ್ರಭುವನ್ನು ಆರಾಧಿಸಬೇಕು, ಗೀತೆಯ ಪ್ರಕಾರ" ಎಂಬ ಹೆಡ್ಡಿಂಗ್‌ನಲ್ಲಿ ಪುಟ ಸಂಖ್ಯೆ 224ರಲ್ಲಿ ಓದಿರಿ.

ನಿಷ್ಕರ್ಷೆ :– ಕಬೀರ್ ಪರಮೇಶ್ವರರು ಹೇಳಿದ್ದಾರೆ :–

ಮನ್ ನೇಕೀ ಕರ್ ಲೇ, ದೋ ದಿನ್ ಕಾ ಮೆಹಮಾನ್ ॥ಟೇಕ್॥
ಮಾತ–ಪಿತಾ ತೇರಾ ಕುಟಮ್ ಕಬೀಲಾ,
ಕೋಯೆ ದಿನ್ ಕಾ ರಲ್ ಮಿಲ್ ಕಾ ಮೇಲಾ ।

ಅಂತ್ ಸಮಯ್ ಉಠ್ ಚಲೆ ಅಕೇಲಾ, ತಜ್ ಮಾಯಾ ಮಂಡಾನ್ ॥1॥
ಕಹಾಂ ಸೆ ಆಯಾ, ಕಹಾಂ ಜಾಯೇಗಾ, ತನ್ ಛೂಟ್ಯೆ ತಬ್ ಕಹಾಂ ಸಮಾಯೇಗಾ ।
ಆಖಿರ್ ತುಝ್‌ಕೋ ಕೌನ್ ಕಹೇಗಾ, ಗುರು ಬಿನ್ ಆತ್ಮ ಜ್ಞಾನ್ ॥2॥

ಕೌನ್ ತುಮ್ಹಾರಾ ಸಚ್ಚಾ ಸಾಯೀ, ಝೂಠೀ ಹೈ ಯೆ ಸಕಲ್ ಸಗಾಯೀ ।
ಚಲ್‌ನೇ ಸೆ ಪಹಲೇ ಸೋಚ್ ರೇ ಭಾಯೀ, ಕಹಾಂ ಕರೇಗಾ ವಿಶ್ರಾಮ್ ॥3॥

ರಹಟ್ ಮಾಲ್ ಪನಘಟ್ ಜ್ಯೋಂ ಭರಿತಾ, ಆವತ್ ಜಾತ್ ಭರ್ಯೆ ಕರ್ಯೆ ರೀತಾ ।
ಜುಗನ್–ಜುಗನ್ ತೂ ಮರ್ ತಾ ಜೀತಾ, ಕರವಾ ಲೇ ರೇ ಕಲ್ಯಾಣ್ ॥4॥

ಲಖ್–ಚೌರಾಸೀ ಕೀ ಸಹ್ ತ್ರಾಸಾ, ಊಂಚ್–ನೀಚ್ ಘರ್ ಲೇತಾ ಬಾಸಾ ।
ಕಹ್ ಕಬೀರ್ ಸಬ್ ಮಿಟಾವೂಂ, ರಾಸಾ ಕರ್ ಮೇರೀ ಪಹಚಾನ್ ॥5॥

ಭಾವಾರ್ಥ:– ಪರಮೇಶ್ವರ ಕಬೀರರು ತಮ್ಮ ಮನಸ್ಸನ್ನು ಸಂಬೋಧಿಸುತ್ತಾ ನಮ್ಮನ್ನು ಎಚ್ಚರಿಸಿದ್ದಾರೆ. ನಾವು ಈ ಪ್ರಪಂಚದಲ್ಲಿ ಎರಡು ದಿನದ ಅತಿಥಿಗಳು. ಆತ್ಮಜ್ಞಾನದ ಅಭಾವದಿಂದ ಅನೇಕ ಪಾಪಗಳನ್ನು ಮೂಟೆ ಕಟ್ಟಿಕೊಳ್ಳುತ್ತೇವೆ. ಅಮೂಲ್ಯವಾದ ಮಾನವ ಜೀವನವನ್ನು ಹಾಳು ಮಾಡಿಕೊಳ್ಳುತ್ತೇವೆ. ಹಣ ಸಂಪಾದಿಸುವುದನ್ನು ಪ್ರಪಂಚದಲ್ಲಿ ಯಾರು ಬೇಕಾದರೂ ತಿಳಿಸಿಕೊಡುತ್ತಾರೆ. ಆದರೆ ಗುರುಗಳಿಲ್ಲದೆ ಆತ್ಮಜ್ಞಾನವೆಂದರೆ ಏನು? ಜೀವವು ಎಲ್ಲಿಂದ ಬಂದಿತು? ಮನುಷ್ಯ ಜೀವನದ ಮೂಲ ಉದ್ದೇಶವೇನು? ದೀಕ್ಷೆ ತೆಗೆದುಕೊಳ್ಳದಿದ್ದರೆ ಮಾನವ ಜೀವನವು ಹೇಗೆ ನಾಶವಾಗುತ್ತದೆ? ಇವೆಲ್ಲವನ್ನೂ ಮನುಷ್ಯನು ತಿಳಿಯುವುದು ಕಷ್ಟ. ಈ ಜನ್ಮದಲ್ಲಿ ರಾಜನಾಗಿದ್ದರೂ ಸರಿ, ಭಕ್ತಿ ಇಲ್ಲದಿದ್ದರೆ ಭವಿಷ್ಯತ್ತಿನಲ್ಲಿ ಪಶುವಿನ ಜನ್ಮ ತಾಳಬೇಕಾಗುವುದು. ಗುರುವಿನಿಂದ ದೀಕ್ಷೆಯ ಮಂತ್ರವನ್ನು ಪಡೆಯದಿದ್ದರೆ ಜನನ–ಮರಣದ ಚಕ್ರವು ಅಂತ್ಯವಾಗುವುದಿಲ್ಲ.

ಯಹ್ ಜೀವನ್ ಹರಹಟ್ ಕಾ ಕುಂವಾ ಲೋಯೀ ।
ಯಾ ಗಲ್ ಬಂಧಾ ಹೈ ಸಬ್ ಕೋಯೀ ॥

ಕೀಡೀ–ಕುಂಜರ್ ಔರ್ ಅವತಾರಾ । ಹರಹಟ್ ಡೋರ್ ಬಂಧೇ ಕಯೀ ಬಾರಾ ॥

ಭಾವಾರ್ಥ :– ಹೇಗೆ ಬಾವಿಯ ಮೇಲೆ ಕಬ್ಬಿಣದ ರಾಟೆ ಇರುತ್ತದೋ, ಅದಕ್ಕೆ ಒಂದು ಬಕೆಟ್ಟನ್ನು ಕಟ್ಟಲಾಗುತ್ತದೆಯೋ ಹೇಗೆ ರಾಟೆಯ ಸಹಾಯದಿಂದ ನೀರನ್ನು ಮೇಲೆತ್ತಿ, ಅದನ್ನು ಖಾಲಿ ಮಾಡುತ್ತೇವೆಯೋ ಹಾಗೆ ಭೂಮಿಯ ರೂಪದಲ್ಲಿರುವ ಬಾವಿಯಿಂದ ಪಾಪ–ಪುಣ್ಯಗಳೆಂಬ ನೀರನ್ನು ತೆಗೆದು ಸ್ವರ್ಗ, ನರಕದಲ್ಲಿ ಖಾಲಿ ಮಾಡಲಾಗುತ್ತದೆ. ಈ ರೀತಿ ಜನನ–ಮರಣವೆಂಬ ಚಕ್ರದಲ್ಲಿ ಜೀವವು ಯಾವಾಗಲೂ ಇರುತ್ತದೆ. ಮನುಷ್ಯನು ಒಂದಲ್ಲ ಒಂದು ದಿನ ಕುಟುಂಬ, ಹಣ, ಆಸ್ತಿ ಎಲ್ಲವನ್ನು ಬಿಟ್ಟು ಒಬ್ಬನೇ ಹೊರಟು ಹೋಗುತ್ತಾನೆ. ಮತ್ತೆ ಇನ್ನೆಲ್ಲೋ ಜನ್ಮ ತಾಳುತ್ತಾನೆ. ನೀವು ಮನೆಯಿಂದ ಹೊರಡುವ ಮುಂಚೆ ಎಲ್ಲಿಗೆ ಹೋಗಬೇಕೆಂದು ಮೊದಲೇ ನಿರ್ಧರಿಸಿರುತ್ತೀರಿ. ವಿಶ್ರಾಂತಿ ಪಡೆಯದೆ ಅಲ್ಲಿಗೆ ಸೇರುತ್ತೀರಿ. ಆದರೆ ಪ್ರಪಂಚ ಬಿಟ್ಟು ಹೋದಾಗ ಎಲ್ಲಿ ವಿಶ್ರಮಿಸುವುದು ಎಂದು ಯೋಚಿಸುತ್ತೀರಾ? ಹೇ ಜೀವವೇ! ಲಕ್ಷಾಂತರ ಪ್ರಾಣಿಗಳ ಶರೀರದಲ್ಲಿ ಪ್ರವೇಶಿಸಿ ಒದ್ದಾಡುವುದು ಇದ್ದೇ ಇದೆ. ಸಾಯುವುದು, ಮತ್ತೆ ಹೊಸ ಜನ್ಮ ಪಡೆಯುವುದು ಇದ್ದೇ ಇದೆ. ಒಮ್ಮೆ ರಾಜನಾದರೆ, ಒಮ್ಮೆ ಭಿಕಾರಿಯಾಗಿ ಹುಟ್ಟುತ್ತಾನೆ. ಪರಮಾತ್ಮ ಕಬೀರರು ಹೇಳುತ್ತಾರೆ, "ಅವತಾರ ಪುರುಷರೂ (ಶ್ರೀರಾಮ, ಶ್ರೀಕೃಷ್ಣ ಇತ್ಯಾದಿ) ಸಹ ಸತ್ಯ ಸಾಧನೆಯ ದಾರಿ ಸಿಗದ ಕಾರಣ ಜನನ–ಮರಣದ ಚಕ್ರದಲ್ಲಿ ಸಿಲುಕಿದ್ದಾರೆ. ನನ್ನ ಬಳಿ ಸತ್ಯ ಸಾಧನೆ ಇದೆ. ಹೇ ಮಾನವ, ನನ್ನನ್ನು ಗುರುತಿಸು. ನಾನು ಸಮರ್ಥವಾದ ಪರಮಾತ್ಮನು. ನಾನು ನಿನ್ನ ಜನನ–ಮರಣದ ಎಲ್ಲಾ ಕಷ್ಟಗಳನ್ನು ಅಂತ್ಯಗೊಳಿಸುವೆ".

ಶಬ್ದ ನಂ.2

ನಾಮ್ ಸುಮರಲೇ ಸುಕರ್ಮ್ ಕರಲೇ, ಕೌನ್ ಜಾನೇ ಕಲ್ ಕೀ ॥
ಖಬರ್ ನಹೀಂ ಪಲ್ ಕೀ (ಟೇಕ್) ಕೋಡಿ–ಕೋಡಿ ಮಾಯಾ ಜೋಡೀ ಬಾತ್ ಕರೇ ಛಲ್
ಕೀ, ಪಾಪ್ ಪುಣ್ಯ್ ಕೀ ಬಾಂಧೀ ಪೋಟರಿಯಾ, ಕೈಸೆ ಹೋವೆ ಹಲ್ಕೀ ॥1॥

ಮಾತ್–ಪಿತಾ ಪರಿವಾರ್ ಭಾಯೀ ಬಂಧು, ತ್ರೀರಿಯಾ ಮತಲಬ್ ಕೀ,
ಚಲತೀ ಬರಿಯಾಂ ಕೋಯೀ ನಾ ಸಾಥೀ, ಯಾ ಮಾಟೀ ಜಂಗಲ್ ಕೀ ॥2॥


ತಾರೋಂ ಬೀಚ್ ಚಂದ್ರಮಾ ಜ್ಯೋಂ ಝುಲಕ್ಯೆ, ತೇರೀ ಮಹಿಮಾ ಝುಲಾ ಝುಲ್ಕೀ,
ಬನ್ಯೆ ಕುಕರಾ, ವಿಷ್ಟಾ ಖಾವ್ಯೆ, ಅಬ್ ಬಾತ್ ಕರ್ಯೆ ಬಲ ಕೀ ॥3॥

ಯೇ ಸಂಸಾರ್ ರೈನ್ ಕಾ ಸಪನಾ, ಓಸ್ ಬೂಂದ್ ಜಲ್ ಕೀ,
ಸತನಾಮ್ ಬಿನಾ ಸಬ್ಯೆ ಸಾಧನಾ ಗಾರಾ ದಲ್‌ದಲ್ ಕೀ ॥4॥

ಅಂತ್ ಸಮಯ್ ಜಬ್ ಚಲ್ಯೆ ಅಕೇಲಾ, ಆಂಸೂ ನೈನ್ ಢಲಕೀ,
ಕಹ್ ಕಬೀರ ಗಹ್ ಶರಣ್ ಮೇರೀ ಹೋ ರಕ್ಷಾ ಜಲ್ ಥಲ್ ಕೀ ॥5॥

ಭಾವಾರ್ಥ:– ಪರಮಾತ್ಮ ಕಬೀರರು ಹೇಳುತ್ತಾರೆ, ಹೇ ಮಾನವ, ಪರಮಾತ್ಮನ ನಾಮಸ್ಮರಣೆ ಮಾಡು ಮತ್ತು ಒಳ್ಳೆಯ ಕೆಲಸ ಮಾಡು, ಮುಂದೇನಾಗುವುದೋ ಗೊತ್ತಿಲ್ಲ.

ಹೆಚ್ಚು ಹೆಚ್ಚು ಹಣ ಸಂಗ್ರಹ ಮಾಡುವುದು ಮೋಸದಿಂದ ಮಾತ್ರ ಸಾಧ್ಯ. ಅದರಲ್ಲಿ ಸ್ವಲ್ಪವನ್ನು ಧರ್ಮಕ್ಕಾಗಿ ವ್ಯಯಿಸು. ಹೀಗೆ ಪಾಪ ಮತ್ತು ಪುಣ್ಯದ ಎರಡು ಗಂಟು ಕಟ್ಟಿ. ಪಾಪದ ಗಂಟು ನರಕಕ್ಕೂ, ಪುಣ್ಯದ ಗಂಟು ಸ್ವರ್ಗಕ್ಕೂ ನಮ್ಮ ಜೊತೆ ಬರುತ್ತದೆ. ತಂದೆ, ತಾಯಿ, ಅಣ್ಣ, ತಂಗಿ, ಗಂಡ, ಹೆಂಡತಿ ತಮ್ಮ ತಮ್ಮ ಪ್ರಯೋಜನಕ್ಕೆ ಮಾತನಾಡುತ್ತಾರೆ. ಯಾರ್‍ಯಾರ ಸಮಯವು ಮುಗಿಯುತ್ತಾ ಹೋಗುವುದೋ, ಸಂಸ್ಕಾರವು ಅಂತ್ಯವಾಗುವುದೋ, ಅವರು ತಕ್ಷಣವೇ ಕುಟುಂಬ ಬಿಟ್ಟು ಹೊರಡುವರು. ಹೇಗೆ ರೈಲಿನಲ್ಲಿ ಎಲ್ಲರೂ ಟಿಕೆಟ್ ತೆಗೆದುಕೊಂಡು ಹತ್ತಿದರೆ ರೈಲು ಭರ್ತಿಯಾಗುತ್ತದೆ. ಯಾರ್‍ಯಾರು




ಯೊಹ ಹರಹಟ ಕಾ ಕುಂಅ ಲೋಈ, ಯಾ ಗಲ ಬಂಧ್ಯಾ ಹೈ ಸಬ್ ಕೋಈ।
ಕೀಡೀ ಕುಂಜರ ಔರ ಅವತಾರಾ, ಹರಹಟ ಡೋರಿ ಬಂಧೆ ಕಈ ಬಾರಾ॥

'ಕಾಲ'ನ ಲೋಕದಲ್ಲಿ ಜನನ–ಮರಣ ರೂಪಗಳ ಹರಹಟ (ಚಕ್ರ)

ಎಲ್ಲೆಲ್ಲಿಗೆ ಟಿಕೆಟ್ ತೆಗೆದುಕೊಂಡಿರುತ್ತಾರೋ, ಅಲ್ಲಿ ಇಳಿಯುತ್ತಾರೆ. ಹಾಗೆಯೇ ಕುಟುಂಬವೂ ರೈಲಿದ್ದಂತೆ. ಸಾವಿನನಂತರ ನಮ್ಮ ದೇಹವು ಮಣ್ಣಿಗೆ ಸೇರುತ್ತದೆ. ಆಗ ಕುಟುಂಬದ ಸದಸ್ಯನ್ಯಾರೂ ನಿನ್ನ ಜೊತೆ ಬರುವುದಿಲ್ಲ.

ಒಬ್ಬ ವ್ಯಕ್ತಿ ತನ್ನ ಪತ್ನಿಯನ್ನು ಬಹುವಾಗಿ ಪ್ರೀತಿಸುತ್ತಿದ್ದನು. ವೃದ್ಧನಾದಾಗ ಅವನ ಸಾವು ಸಮೀಪಿಸಿತು. ಆಗ ಅವನು. ಪತ್ನಿಯನ್ನು ಕರೆದು, ನನ್ನ ಜೊತೆ ಬರುವೆಯಾ? ಎಂದು ಕೇಳಿದನು. ಆಗ ಅವಳು ತಕ್ಷಣವೇ "ಇಲ್ಲ, ನಾನ್ಯಾಕೆ ನಿನ್ನ ಜೊತೆ ಸಾಯಲಿ? ನಾನು ನಿನಗಿಂತ ಮೂರು ವರ್ಷ ಚಿಕ್ಕವಳು," ಎಂದಳು. ಆ ವೃದ್ಧನಿಗೆ ಆಘಾತವಾಯಿತು. ಆ ದಿನದಿಂದ ಅವಳ ಜೊತೆ ಮಾತನಾಡುವುದನ್ನು ನಿಲ್ಲಿಸಿದನು. 60 ವರ್ಷವಾದ ಮೇಲೆ ನನ್ನ ಜೊತೆ ಯಾರೂ ಇಲ್ಲ ಎನ್ನುವ ಕಟು ಸತ್ಯ ಅರಿವಾಯಿತು. ಆ ಪತ್ನಿಗೆ ಬುದ್ಧಿ ಇದ್ದಿದ್ದರೆ, "ನಾನು ನಿನ್ನ ಜೊತೆ ಬರಲು ಸಿದ್ಧ" ಎಂದು ಹೇಳುತ್ತಿದ್ದಳು, ವೃದ್ಧನೇನು ಅವಳನ್ನು ಕರೆದೊಯ್ಯಲು ಸಾಧ್ಯವಿರಲಿಲ್ಲ, ಬದಲಾಗಿ ಅವನು ಸಂತೋಷದಿಂದ ಸಾಯಿತ್ತಿದ್ದ ಅಷ್ಟೇ. ಕಾಲನ ಕರೆ ಬರುವವರೆಗೆ ಅವಳು ಹೇಗೆ ಸಾಯುತ್ತಿದ್ದಳು?. ಅಂದರೆ ನಿಜವಾದ ಪ್ರೀತಿಯೆಲ್ಲಾ ಬರೀ ಸುಳ್ಳು, ಎಲ್ಲರೂ ಸ್ವಾರ್ಥದಿಂದ ಕೂಡಿರುತ್ತಾರೆ. ಹೇ ಮಾನವ, ಹಿಂದಿನ ಜನ್ಮದಲ್ಲಿ ಜಪ, ತಪ ಮತ್ತು ಧರ್ಮ ಸಂಸ್ಕಾರ ಮಾಡಿದ ಕಾರಣ ಈಗ ಮಂತ್ರಿ, ಪ್ರಧಾನ ಮಂತ್ರಿ ಅಥವಾ ಉನ್ನತ ಅಧಿಕಾರಿಯಾಗಿ ಸುಶೋಭಿತನಾಗುತ್ತಾನೆ. ಸತ್ಸಂಗಕ್ಕೆ ಹೋಗದೆ, ಆತ್ಮಜ್ಞಾನವನ್ನು ಪಡೆಯದೆ, ಪರಮಾತ್ಮನಲ್ಲಿ ಭಕ್ತಿಭಾವ ಇಟ್ಟುಕೊಳ್ಳದಿದ್ದರೆ ಭವಿಷ್ಯದಲ್ಲಿ ನಾಯಿಯಾಗಿ, ಗೊಬ್ಬರ ತಿನ್ನಬೇಕಾಗುತ್ತದೆ. ಈಗ ನಿನ್ನ ಶಾರೀರಿಕ ಬಲದಿಂದ, ಪದವಿಯ ಬಲದಿಂದ ಮಾತನಾಡಬಹುದು ಆದರೆ ಮುಂದೆ ಪಶುವಾಗಿ ಬಹಳ ಕಷ್ಟ ಪಡಬೇಕಾಗುತ್ತದೆ.

ನರ್ ಸೆ ಫಿರ್ ಪಶುವಾ ಕೀಜೈ, ಗಧಾ–ಬೈಲ್ ಬನಾಯೀ ।
ಛಪ್ಪನ್ ಭೋಗ್ ಕಹಾಂ ಮನ್ ಬೋರೆ, ಕುರಡೀ ಚರ್‌ನೇ ಜಾಯೀ ॥

ಶಬ್ದಾರ್ಥ :– ಯಾವ ಮನುಷ್ಯನು (ಸ್ತ್ರೀ/ಪುರುಷ) ಸತ್ಯಭಕ್ತಿಯನ್ನು ಶಾಸ್ತ್ರಕ್ಕೆ ಅನುಸಾರವಾಗಿ ಗುರುವಿನಿಂದ ದೀಕ್ಷೆ ಪಡೆದು ಮಾಡುವುದಿಲ್ಲವೋ, ಅವನು ತನ್ನ ಮರಣಾನಂತರ ಪ್ರಾಣಿಯ ಜೀವನವನ್ನು ಪಡೆಯುತ್ತಾನೆ. ಕತ್ತೆಯಾಗಿಯೋ, ಎತ್ತಾಗಿಯೋ, ಹುಟ್ಟುತ್ತಾನೆ. ಮಾನವ ಶರೀರವಿದ್ದಾಗ ಸ್ವಾದಿಷ್ಟ ಊಟವನ್ನು ಮಾಡುತ್ತಿದ್ದ. ಕತ್ತೆಯಾದ ಮೇಲೆ ಯಾವುದೇ ಊಟ ಸಿಗುವುದಿಲ್ಲ. ಕತ್ತೆಯ ಶರೀರ ಪಡೆದು, ಕಾಡಿನಲ್ಲಿ ಕಸದ ರಾಶಿಯಿಂದ ಕೊಳಕಾದ ಊಟವನ್ನೋ, ಹುಲ್ಲನ್ನೋ ತಿನ್ನುತ್ತಾನೆ. ಆದ್ದರಿಂದ ಭಕ್ತಿ ಮಾಡು.

ಹೇಗೆ ಬೆಳಿಗ್ಗೆಯ ಇಬ್ಬನಿ ಇರುವುದೋ, ಅದು ಹುಲ್ಲಿನ ಮೇಲೆ ಬಿದ್ದು ಸ್ವಲ್ಪ ಸಮಯದ ನಂತರ ಮಾಯವಾಗುವುದೋ ಹಾಗೆ ಮನುಷ್ಯನ ಜೀವನವೂ ಕ್ಷಣಿಕ. ಆದ್ದರಿಂದ ನಿಜವಾದ ಸದ್ಗುರುವಿನಿಂದ ದೀಕ್ಷೆ ಪಡೆದ ಜೀವನವನ್ನು ಸಾರ್ಥಕಪಡಿಸಿಕೊಳ್ಳಿ. ಶಾಸ್ತ್ರ ವಿರುದ್ಧವಾದ ದೀಕ್ಷೆಯು ಕೆಸರಿದ್ದಂತೆ. ಮೋಕ್ಷ ಸಿಗುವ ಬದಲು ಕೆಸರಿನಲ್ಲಿ ಸಿಕ್ಕಿಹಾಕಿಕೊಂಡು ಒದ್ದಾಡುವಂತೆ ಸಂಸಾರದಲ್ಲಿ ಸಿಲುಕಿಕೊಳ್ಳುವಿರಿ. ಈ ತತ್ವ ಜ್ಞಾನವು ಕಬೀರರ ಬಳಿ ಇತ್ತು. ಅದನ್ನು ಕೆಲ ಸಂತರಿಗೆ ಮಾತ್ರ ತಿಳಿಸಿ ಅನ್ಯರಿಗೆ ತಿಳಿಸಬೇಡಿರೆಂದು ಹೇಳಿದ್ದರು. ಈಗ ಆ ಆತ್ಮಜ್ಞಾನವು ನನ್ನ (ರಾಮ್‌ಪಾಲ್ ದಾಸನ) ಬಳಿ ಇದೆ. ನನ್ನನ್ನು ಬಿಟ್ಟರೆ ಇನ್ಯಾರ ಬಳಿಯೂ ಭಕ್ತಿ ಆಧಾರಿತವಾದ ಮಂತ್ರವಿಲ್ಲ. ಬನ್ನಿ, ದೀಕ್ಷೆ ಪಡೆದುಕೊಳ್ಳಿ, ನಿಮ್ಮ ಜೀವನವನ್ನು ಸಾರ್ಥಕಮಾಡಿಕೊಳ್ಳಿ. ನೀವು ನನ್ನನ್ನು ಬಿಟ್ಟು ಬೇರೆಯವರ ಬಳಿ ದೀಕ್ಷೆ ಪಡೆದರೆ ಮುಳ್ಳಿರುವ ಖರ್ಜೂರದ ಗಿಡಕ್ಕೆ ಸಿಕ್ಕಿ ಹಾಕಿಕೊಂಡಂತೆ, ನೀವು ಅಲ್ಲಿಯೂ ಸಲ್ಲುವುದಿಲ್ಲ, ಇಲ್ಲಿಯೂ ಸಲ್ಲುವುದಿಲ್ಲ. ಮೊದಲು ನಾನು ಹಳ್ಳಿ ಹಳ್ಳಿ ಸುತ್ತುತ್ತಿದ್ದೆ. ಆಗ ಜನರು ಬೇರೆಯವರಲ್ಲಿ ದೀಕ್ಷೆ ಪಡೆಯುತ್ತಿದ್ದರು. ಆದರೆ ಅವರ ಕಷ್ಟ ತಪ್ಪಲಿಲ್ಲ, ಯಾವಾಗ ನನ್ನ ಬಳಿ ಬಂದು ದೀಕ್ಷೆ ಪಡೆದರೋ ಅವರೆಲ್ಲಾ ಸುಖಿಗಳಾದರು.

ಇದರಿಂದ ತಿಳಿಯುವುದೇನೆಂದರೆ ಸತ್ಸಂಗದ ವಚನ ಕೇಳಲು ಅವಕಾಶ ಸಿಕ್ಕರೆ ಅಂಥವರ ಮನೆ ಸ್ವರ್ಗವಾಗುತ್ತದೆ. ಇಲ್ಲದಿದ್ದರೆ ನರಕವಾಗುತ್ತದೆ. ಹೀಗೆ ವಿಶ್ವದ ಉದ್ಧಾರ ಸಾಧ್ಯ. ಎಲ್ಲರೂ ಪ್ರೀತಿ–ಪ್ರೇಮದಿಂದ ಜೀವನ ನಡೆಸಿ ಮೋಕ್ಷ ಪಡೆಯಬಹುದು. ಇದು ಅತ್ಯಂತ ಅನಿವಾರ್ಯವಾಗಿದೆ.

## "ವರ್ತಮಾನದ ಕೆಲವು ಸತ್ಯ ಕತೆಗಳು"

## "ಭಕ್ತ ಸುರೇಶ್‌ನ ಹಾಳಾದ ಸಂಸಾರವನ್ನು ಸರಿ ಮಾಡಿದ್ದು"

### ಡೀಗಲ್ ಹಳ್ಳಿಯ ಭಕ್ತ ಸುರೇಶ್ ಅಹಲಾವತ್ ಹಾಗೂ ಭಕ್ತಿಮತಿ ಯಶವಂತಿ.

ಸುರೇಶ್ ಒಬ್ಬ ಕುಡುಕ. ಅಷ್ಟೇ ಅಲ್ಲದೇ ತಂಬಾಕು ಹಾಗೂ ಗುಟ್ಕಾಗೂ ದಾಸನಾಗಿದ್ದ ಎನ್ನುವುದಕ್ಕೆ ಇಡೀ ಡೀಗಲ್ ಹಳ್ಳಿಯೇ ಸಾಕ್ಷಿಯಾಗಿತ್ತು. ಸುರೇಶನ ಹೆಂಡತಿ ಕಾಯಿಲೆಯಿಂದ ನರಳುತ್ತಿದ್ದಳು. ಅವರಿಗೆ ಚಿಕ್ಕ ಚಿಕ್ಕ ಮಕ್ಕಳಿದ್ದರು. ತಂದೆಯುನ್ನು ನೋಡಿದಾಕ್ಷಣ ಭಯಭೀತರಾಗುತ್ತಿದ್ದರು. ಮನೆಯಲ್ಲಿ ಯಾವಾಗಲೂ ಜಗಳವಾಗುತ್ತಿತ್ತು. ಯಶವಂತಿಯ ಅಣ್ಣ ಹರಿಯಾಣದಲ್ಲಿ ಪೋಲೀಸ್ ಇಲಾಖೆಯಲ್ಲಿ ಡಿ.ಎಸ್.ಪಿ ಆಗಿ ನಿವೃತ್ತನಾಗಿದ್ದನು. ತಂಗಿಯ ರೋಗವನ್ನು ಗುಣಪಡಿಸಲು ಎಷ್ಟೋ ಕಡೆ ತೋರಿಸಿದರು ಎಲ್ಲವೂ ವ್ಯರ್ಥವಾಗಿತ್ತು. ನನ್ನ ಭಕ್ತನೊಬ್ಬ ಹರಿಯಾಣ ಪೋಲೀಸ್ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದಾನೆ. ಅವನು ಆರ್ಯ ಸಮಾಜದ ಪ್ರಚಾರಕರಾದ ಚೌಹರಿಸಿಂಹನ ಮಗ. ಅವನ ಜೊತೆ ನನ್ನ (ರಾಮ್‌ಪಾಲ್‌ದಾಸ) ತಮ್ಮನೂ ಪೋಲೀಸ್ ಇಲಾಖೆಯಲ್ಲಿದ್ದನು. 2016ರಲ್ಲಿ ನಿವೃತ್ತನಾಗುವವನಿದ್ದನು. ಆದರೆ ಪರಮಾರ್ಥ ಕಾರಣದಿಂದ 2005ರಲ್ಲೇ ಸ್ವಯಂ ನಿವೃತ್ತಿ ಹೊಂದಿ ನನ್ನ ಜೊತೆ ಸೇರಿ ನನಗೆ ಸಹಾಯ ಮಾಡುತ್ತಿದ್ದಾನೆ. ನನ್ನ ತಮ್ಮ ರೋಹತಕ್ ನಗರದ ಎಸ್.ಪಿ.ಗೆ ಡ್ರೈವರ್ ಆಗಿದ್ದನು. ಭಕ್ತನಾದ ಜಯವೀರ್‌ಸಿಂಹನು ಝುಜ್ಜರ್ ನಗರದ ಡಿ.ಎಸ್.ಪಿ. ರಾಜೆಂದ್ರಸಿಂಹನಿಗೆ ಡ್ರೈವರ್ ಆಗಿದ್ದನು. ಇವರಿಬ್ಬರೂ ಆಗಾಗ ಭೇಟಿಯಾಗುತ್ತಿದ್ದರು. ನನ್ನ ತಮ್ಮ ಅವನಿಗೆ ಆಗಾಗ ಜ್ಞಾನದ ಬಗ್ಗೆ ಹೇಳುತ್ತಿದ್ದನು. ಭಕ್ತ ಜಯವೀರನು ಆರ್ಯಸಮಾಜದ ಅನುಯಾಯಿಯಾದ ಕಾರಣ ಮೊದಲು ಇದನ್ನೆಲ್ಲಾ ಒಪ್ಪಲಿಲ್ಲ. ನಂತರ ಬಹಳಷ್ಟು ವಿದ್ವಾಂಸರನ್ನು ಭೇಟಿಯಾಗಿ ಕೊನೆಗೆ ಸತ್ಯವೇನೆಂದು ಅರಿವಾಯಿತು. 1994ರಲ್ಲಿ ಅವನು ಬಂದು ದೀಕ್ಷೆ ಪಡೆದನು. 1995–96ರವರೆಗೆ ಡಿ.ಎಸ್.ಪಿ ರಾಜೇಂದ್ರಸಿಂಹನು ಝುಜ್ಜರ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದು, ಜಯವೀರಸಿಂಹನು ಅವರ ಡ್ರೈವರ್ ಆಗಿದ್ದು, ಅವನ ತಮ್ಮನೂ ಪೊಲೀಸ್ ಇಲಾಖೆಯಲ್ಲಿದ್ದನು. ಅವನಿಗೂ ಯಶವಂತಿಗಿದ್ದ ಕಾಯಿಲೆ ಇತ್ತು. ಈ ರೋಗಕ್ಕೆ ತುತ್ತಾಗಿ 1995ರಲ್ಲಿ ಅಕಾಲ ಮರಣವನ್ನಪ್ಪಿದನು. ಒಂದು ದಿನ ಜಯವೀರಸಿಂಹನು ಡಿ.ಎಸ್.ಪಿ ಯ ಡ್ರೈವರ್ ಆದ ಕಾರಣ ಯಶವಂತಿಯ ಮನೆಗೆ ಹೊಗಿದ್ದರು. ಒಂದು ದಿನ ಜಯವೀರಸಿಂಹನು ಡಿ.ಎಸ್.ಪಿ ಯವರಿಗೆ, ನೀವು ನಿಮ್ಮ ಕುಟುಂಬವನ್ನು ಕಾಪಾಡಲು ಇಚ್ಛಿಸುವಿರಾದರೆ ಸಂತ ರಾಮ್‌ಪಾಲ್ ರವರ ಬಳಿ ಹೋಗಿ ಅವರಿಂದ ದೀಕ್ಷೆ ಪಡೆಯಿರಿ ಎಂದು ವಿನಂತಿಸಿದನು. ಮೊದಮೊದಲು ಒಪ್ಪದಿದ್ದರೂ, ನಂತರ ಅವನು ಪರೀಕ್ಷಿಸೋಣವೆಂದು ಸಹೋದರಿ ಯಶವಂತಿಯನ್ನು ತನ್ನ ತಮ್ಮ ಸುಖವೀರ್‌ನ ಜೋತೆ ದೀಕ್ಷೆ ಪಡೆಯಲು ಕಳುಹಿಸಿದನು. ಈ ದಾಸ (ರಾಮ್‌ಪಾಲ್ ದಾಸ್) ನೀರಾವರಿ ಇಲಾಖೆಯಲ್ಲಿ ಜೂನೀಯರ್ ಇಂಜಿನಿಯರ್ (ಎ.ಇ) ಪದವಿಯಲ್ಲಿದ್ದು ಸೇವೆ ಸಲ್ಲಿಸುತ್ತಿದ್ದೆ. ಗುರುಗಳ ಆದೇಶಾನುಸಾರ ನಾಮದೀಕ್ಷೆ ನೀಡಲು ಪ್ರಾರಂಭಿಸಿದೆ. ಜನರ ಹಾಗೂ ಲೊಕ ಕಲ್ಯಾಣಕ್ಕಾಗಿ ಸನ್ 1995ರಲ್ಲಿ ನೌಕರಿಯಿಂದ ರಾಜಿನಾಮೆ ಕೊಟ್ಟು ಪ್ರಚಾರ ಪ್ರಸಾರ ಮಾಡಲು ಪ್ರಾರಂಭಿಸಿದೆ (ಹರ್ಯಾಣ ಸರ್ಕಾರದ ಮುಲಕ ರಾಜಿನಾಮೆ ಸ್ವೀಕರಿಸಲಾಗಿದೆ). ಹಳ್ಳಿ ಹಳ್ಳಿಗೆ ಹೋಗಿ ಸಂತ ಗರೀಬ್‌ದಾಸ್ ರವರ ವಾಣಿಯ ಅಖಂಡ ಪ್ರವಚನ ನಡೆಸಿ, ಸತ್ಸಂಗ ಏರ್ಪಡಿಸುತ್ತಿದ್ದೆ. ಎಲ್ಲರ

ಕೆಟ್ಟತನ ಬಿಡಿಸಿ, ದೀಕ್ಷೆ ಕೊಡುತ್ತಿದ್ದೆ, ಇದರಿಂದ ಎಲ್ಲರಿಗೂ ಪ್ರಯೋಜನವಾಗುತ್ತಿತ್ತು. ಹೀಗೆ ಪ್ರವಚನಗಳು ಸಾಗುತ್ತಿದ್ದವು.

**1996** ರಲ್ಲಿ ಒಂದು ದಿನ ದಿಲ್ಲಿಯ ಪಂಜಾಬ್‌ಬೋಡ್ ಎಂಬಲ್ಲಿ ಭಕ್ತನಾದ ಜಗದೀಶನ ಮನೆಯಲ್ಲಿ ಪ್ರವಚನ ನಡೆಯುತ್ತಿತ್ತು. "ಜಗದೀಶನೂ ಹಿಂದೊಮ್ಮೆ ಕುಡುಕನಾಗಿದ್ದನು. ಅವನ ಹೆಂಡತಿಗೂ ಚಿಕಿತ್ಸೆಗೆ ಗುಣವಾಗದಂತಹ ಕಾಯಿಲೆ ಇತ್ತು. ನನ್ನಿಂದ ದೀಕ್ಷೆ ಪಡೆದ ನಂತರ ಎಲ್ಲವೂ ಸರಿಯಾಯಿತು. ಮಾಡುವುದೆಲ್ಲಾ ಪರಮಾತ್ಮನೇ. ಆದರೆ ಗುರುಗಳ ಮೂಲಕ ಮನುಷ್ಯನಿಗೆ ಶಕ್ತಿ ಸಿಗುತ್ತದೆ. ಹೇಗೆ ತಂತಿಯ ಮೂಲಕ ವಿದ್ಯುತ್ ಪ್ರವಹಿಸುತ್ತದೋ ಹಾಗೆ. ಆದರೆ ತಂತಿಯೇ ವಿದ್ಯುತ್ ಅಲ್ಲ" ಎಂದು ಗುರುಗಳು ಹೇಳುತ್ತಿದ್ದರು. ಆಗ ಯಶವಂತಿಯ ನಾಲಿಗೆಯು ಮಾತನಾಡುವುದನ್ನು ನಿಲ್ಲಿಸಿತು. ಅವಳು ಮೂಗಿಯಾಗಿದ್ದಳು. ಸುಖಬೀರ್‌ಸಿಂಹನು ತನ್ನ ತಂಗಿಯನ್ನು ಕರೆದುಕೊಂಡು ಜಗದೀಶನ ಮನೆಗೆ ಬಂದನು. ಗುರುಗಳಿಗೆ ಎಲ್ಲವನ್ನು ತಿಳಿಸಿದನು. ಆ ಅಣ್ಣ ತಂಗಿಯರು ಸತ್ಸಂಗವನ್ನು ಕೇಳಿಸಿಕೊಂಡು ಆ ರಾತ್ರಿ ಅಲ್ಲೇ ತಂಗಿದರು. ಯಶವಂತಿಗೆ ದೀಕ್ಷೆಕೊಟ್ಟು ಪ್ರಸಾದ ತಿನ್ನಿಸಿದರು. ಬೆಳಿಗ್ಗೆ ಎದ್ದ ತಕ್ಷಣ ಅವಳು ಮಾತನಾಡಲಾರಂಭಿಸಿದಳು. ಅಣ್ಣ ತಂಗಿಯರು ಅಲ್ಲಿಗೆ ಬಂದಿದ್ದ ಜನರಿಗೆ ಈ ಚಮತ್ಕಾರವನ್ನು ಹೇಳಿದರು. ನಂತರ ಡಿ.ಎಸ್.ಪಿ ಹಾಗೂ ಅವರ ಕುಟುಂಬದವರೆಲ್ಲಾ ದೀಕ್ಷೆ ಪಡೆದರು. ಈಗ ಅವರೆಲ್ಲಾ ಕ್ಷೇಮದಿಂದಿದ್ದಾರೆ. ಹಾಗೆಯೇ ಸುರೇಶನು ಪಕ್ಕಾ ಕುಡುಕನಾಗಿದ್ದನು. ತನ್ನ ಪತ್ನಿ ಯಶವಂತಿಯು ಸರಿಯಾಗಿದ್ದನ್ನು ನೋಡಿ ತಾನೂ ಆಶ್ರಮಕ್ಕೆ ಬಂದು ದೀಕ್ಷೆ ಪಡೆದನು. ಮದ್ಯ ಸೇವಿಸುವುದನ್ನು ಬಿಟ್ಟು ಬಿಟ್ಟನು. ಅಲ್ಲಿಯವರೆಗೆ ಆಶ್ರಮ ಕಟ್ಟಿರಲಿಲ್ಲ. ಹಳ್ಳಿ ಹಳ್ಳಿಗೆ ಹೋಗಿ ಪ್ರವಚನ ಮಾಡಲಾಗುತ್ತಿತ್ತು. ಯಶವಂತಿಯ ಕುಟುಂಬವು ಇಡೀ ಹಳ್ಳಿಗೆ ಉದಾಹರಣೆಯಾಯಿತು. ಸುರೇಶ್ ಚೌಧರಿ ಭಕ್ತನಾದನು. ಎಲ್ಲಾ ದುಶ್ಚಟಗಳನ್ನು ಬಿಟ್ಟನು. ಇಬ್ಬರು ಮಕ್ಕಳು ದೊಡ್ಡವರಾಗಿ ಸೈನ್ಯಕ್ಕೆ ಸೇರಿದರು. ಸೈನ್ಯಕ್ಕೆ ಸೇರಲು ಒಂದು ಪೈಸಾ ಲಂಚವನ್ನೂ ಕೊಡಲಿಲ್ಲ. ಇಬ್ಬರ ಮದುವೆಯಾಯಿತು. ಒಂದು ಪೈಸೆ ವರದಕ್ಷಿಣೆಯನ್ನು ತೆಗೆದುಕೊಳ್ಳಲಿಲ್ಲ, ಹೀಗೆ ಅವರ ಕುಟುಂಬಕ್ಕೆ ಎಲ್ಲವೂ ಒಳ್ಳೆಯದಾಯಿತು". ಅಂತಹ ಅನೇಕ ಉದಾಹರಣೆಗಳಿವೆ. "ನಾನು ಈ ಕತೆಯನ್ನು ಹೇಳುವ ಉದ್ದೇಶವೇನೆಂದರೆ, ಗೀತೆಯ **16**ನೇ ಅಧ್ಯಾಯದ **23** ಮತ್ತು **24**ನೇ ಶ್ಲೋಕದಲ್ಲಿ ಹೇಳಿರುವಂತೆ ಶಾಸ್ತ್ರಾನುಸಾರ ಭಕ್ತಿ ಮಾಡದೆ ಮನಸ್ಸಿಗೆ ಬಂದಂತೆ ಆಚರಣೆ ಮಾಡುವವನು ಎಂದಿಗೂ ದೇವರನ್ನು ಭೇಟಿಯಾಗಲಾರನು. ಶಾಸ್ತ್ರೋಕ್ತವಾದ ಭಕ್ತಿಯನ್ನು ಮಾಡುವುದರಿಂದ ಪರಮಾತ್ಮನ ಶಕ್ತಿಯಿಂದ ಅಸಂಭವವು ಸಂಭವವಾಗುತ್ತದೆ. ಮುಕ್ತಿಯೂ ಸಿಗುತ್ತದೆ. ಋಗ್ವೇದ **10**ನೇ ಮಂಡಲದ **161**ನೇ ಸೂಕ್ತಿಯ **2**ನೇ ಮಂತ್ರದಲ್ಲಿ ಇದರ ಬಗ್ಗೆ ಆಧಾರವಿದೆ. ಪರಮಾತ್ಮನ ಮೇಲೆ ಭಕ್ತಿಯಿಂದ ಇರುವುದರಿಂದ ಅಸಾಧ್ಯ ರೋಗವೂ ಗುಣವಾಗುವುದು. ರೋಗಿಯ ಸಾವು ಸಮೀಪಿಸುತ್ತಿದ್ದರೂ ನಿಜವಾದ ಭಕ್ತಿಯಿಂದ ರೋಗಿಯು ಪರಮಾತ್ಮನನ್ನು ಗೆಲ್ಲಬಲ್ಲನು. ದೇವರು ಅವನಿಗೆ ನೂರರಷ್ಟು ಆಯುಸ್ಸನ್ನು ನೀಡುತ್ತಾನೆ.

ಈ ಮೊದಲು ವಿದ್ಯುತ್ತಿನ ಆವಿಷ್ಕಾರವಾಗಿರಲಿಲ್ಲ. ಹೆಂಗಸರು ಧಾನ್ಯಗಳನ್ನು ಬೀಸುವ ಕಲ್ಲಿನಿಂದ ಬೀಸಿ ಹಿಟ್ಟು ತಯಾರಿಸುತ್ತಿದ್ದರು, ಪುರುಷರು ಕೈಯಿಂದ ಹುಲ್ಲು ಕಿತ್ತು ದನಕರುಗಳಿಗೆ ತಿನ್ನಿಸುತ್ತಿದ್ದರು ನಂತರ ಕೈಯಿಂದ ಚಲಾಯಿಸುವ ಮಚ್ಚಿನ ಆವಿಷ್ಕಾರವಾಯಿತು. ಈಗ ವಿದ್ಯುತ್ತಿನಿಂದ ಹಿಟ್ಟು ಮಾಡುವ ಗಿರಣಿಗಳ ಆವಿಷ್ಕಾರವಾಗಿದೆ. ಈಗ ಹುಲ್ಲು ಕೀಳುವ ಯಂತ್ರಗಳಿವೆ. ಕೆಲಸಗಳು ಸುಗಮವಾಗಿವೆ. ಆದರೆ ವಿದ್ಯುತ್ತಿನ ಕನೆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ಹಾಗೂ ವಿದ್ಯುತ್ತನ್ನು ವಿಧಿವತ್ತಾಗಿ ಬಳಸಬೇಕಾಗುತ್ತದೆ. ಇಲ್ಲದಿದ್ದರೆ ಸರ್ವನಾಶವಾಗುತ್ತದೆ. ಇದೇ ರೀತಿ ಪರಮಾತ್ಮನ ಕನೆಕ್ಷನ್ ಪಡೆಯಬೇಕಾಗುತ್ತದೆ ಮತ್ತು ವಿಧಿವತ್ತಾಗಿ ಭಕ್ತಿಯಿಂದ ಇರಬೇಕಾಗುತ್ತದೆ. ಆಗ ಪರಮಾತ್ಮನು ಸುಖವನ್ನೂ, ಮೋಕ್ಷವನ್ನು ನೀಡುತ್ತಾನೆ. ಕ್ರಮತಪ್ಪಿದರೆ ಪರಮಾತ್ಮನ ಶಕ್ತಿ ಸಿಗುವುದು ಅಂತ್ಯಗೊಳ್ಳುತ್ತದೆ.

ಎಲ್ಲಾ ಸವಲತ್ತುಗಳು ಅಂತ್ಯಕಾಣುತ್ತವೆ.

ಇದನ್ನೆಲ್ಲಾ ಕೇಳಿದ ಸುರೇಶ್ ಮತ್ತು ಯಶವಂತಿ ಭಕ್ತರಾದರು. ಅವರನ್ನು ಯಾರು ಎಷ್ಟೇ ತಡೆದರೂ ಆಶ್ರಮಕ್ಕೆ ಬರುವುದನ್ನು ನಿಲ್ಲಿಸಲಿಲ್ಲ. 'ಇಲ್ಲಿ ನಮ್ಮ ಉದ್ಧಾರವಾಗಿದೆ, ಇಲ್ಲದಿದ್ದರೆ ನಾವು ಎಂದೋ ಹಾಳಾಗುತ್ತಿದ್ದೆವು' ಎಂದರು. ಪರಮಾತ್ಮನು ಅವರ ನಿಜವಾದ ಭಕ್ತಿಯನ್ನು ನೋಡಿ ಪ್ರತಿಫಲವನ್ನು ನೀಡಿದನು. ಭಕ್ತ ಸುರೇಶನ ಮೊಬೈಲ್ ನಂ. **9034029495**.

## "ಸತ್ಸಂಗ ಕೇಳದಿದ್ದಕ್ಕೆ ಸರ್ವನಾಶವಾಯಿತು"

ಕಬೀರ್, ರಾಮ್–ನಾಮ್ ಕಡ್‌ವಾ ಲಾಗ್ಯೆ, ಮೀಠೈ ಲಾಗೆಂ ದಾಮ್ ।
ದುವಿಧಾ ಮೆ ದೋನೋ ಗಯೇ, ಮಾಯಾ ಮಿಲಿ ನ ರಾಮ್ ॥

ಭಾವಾರ್ಥ :– ಸತ್ಸಂಗ ಕೇಳದಿರುವ ಮನುಷ್ಯನಿಗೆ (ಸ್ತ್ರೀ/ಪುರುಷ) ಪರಮಾತ್ಮನ ಅಸ್ತಿತ್ವದ ಪರಿಚಯವಾಗುವುದಿಲ್ಲ. ಆಗ ಅವನಿಗೆ ಪರಮಾತ್ಮನಿಗೆ ಸಂಬಂಧಪಟ್ಟ ಚರ್ಚೆಯೂ ರುಚಿಸುವುದಿಲ್ಲ. ಕೇವಲ ಹಣಗಳಿಕೆ ಇಷ್ಟವಾಗುತ್ತದೆ. ಮುಂದೆ ಅವನು ಎಲ್ಲವನ್ನೂ ಕಳೆದುಕೊಳ್ಳುತ್ತಾನೆ. ಅಂದರೆ ಅವನಿಗೆ ಪರಮಾತ್ಮನೂ ಸಿಗುವುದಿಲ್ಲ. ಸಾವಿನ ನಂತರ ಹಣವೂ ಇರುವುದಿಲ್ಲ. ಇವೆರಡೂ ಅವನ ಕೈಯಿಂದ ಜಾರಿ ಹೋಗುತ್ತದೆ.

**1998**ರ ಮಾತು, ಪಂಜಾಬ್ ಪ್ರಾಂತ್ಯದ ತಲವಂಡಿ ಭಾಯಿಕಿ ಎಂಬ ಹಳ್ಳಿಯಲ್ಲಿ ನನ್ನ (ರಾಮ್‌ಪಾಲ್ ದಾಸ್‌ನ) ಗುರುಗಳ ಆಶ್ರಮವಿದೆ. ಅವರು ಸತ್ಯಲೋಕಕ್ಕೆ ತೆರಳಿದ ನಂತರ ನಾನು(ರಾಮ್‌ಪಾಲ್‌ದಾಸರು) ಪ್ರತಿ ತಿಂಗಳ ಎರಡನೇ ಭಾನುವಾರ ಸತ್ಸಂಗ ನಡೆಸಲು ಅಲ್ಲಿಗೆ ಹೋಗುತ್ತಿದ್ದೆನು. ಆ ಹಳ್ಳಿಯ ಕೆಲವು ಮಾರ್ವಾಡಿಗಳು ನನ್ನ ಗುರುಗಳ ಶಿಷ್ಯರಾಗಿದ್ದರು. ಅವರ ಸಂಬಂಧಿಕರು ಒಬ್ಬ ವೃದ್ಧೆಯ ಸಾವಿನ ಶೋಕಾಚರಣೆಗೆ ಕುಟುಂಬಸಮೇತ ಶುಕ್ರವಾರ ಬಂದಿದ್ದರು. ಶನಿವಾರ ಅಲ್ಲಿಂದ ತಮ್ಮ ಊರಾದ ಚಂಡೀಗಢಕ್ಕೆ ತೆರಳಬೇಕೆಂದಿದ್ದಾಗ, ನಾಳೆ **8**ರಿಂದ **10**ರವರೆಗೆ ಸತ್ಸಂಗವಿದೆ. ಅದನ್ನು ಕೇಳಿಕೊಂಡು ಹೋಗಿ ಎಂದು ಅವರ ಸಂಬಂಧಿಕರೊಬ್ಬರು ಹೇಳಿದರು. ಆಗ ಅವರು ನಾಳೆ ನಮಗೆ ವ್ಯವಹಾರವಿದೆ. ಆ ವ್ಯಾಪಾರದಲ್ಲಿ **5** ಲಕ್ಷ ಲಾಭವಿದೆ ಎಂದರು. ಸತ್ಸಂಗದ ಭಕ್ತರು ಎಷ್ಟೇ ಆಗ್ರಹಿಸಿದರೂ ಅವರು ಕೇಳಲಿಲ್ಲ. ನಾಳೆ **11** ಗಂಟೆಗೆ ಹೊರಡಿ. ನಿಮ್ಮ ಪಾರ್ಟಿಗೆ **12** ಗಂಟೆಗೆ ಬರಲು ಫೋನ್ ಮೂಲಕ ತಿಳಿಸಿ ಎಂದರು. ಆದರೂ ಕೇಳಲಿಲ್ಲ, ಅವರು ತಮ್ಮ ಪತ್ನಿ, ಮಗ ಮತ್ತು ಮಗಳನ್ನು ಕರೆದುಕೊಂಡು ಮಾರುತಿ ಕಾರಿನಲ್ಲಿ ಹೊರಟೇ ಬಿಟ್ಟರು.

ಚಂಡೀಗಢ್ ತಲುಪುವ ಸ್ವಲ್ಪ ಮುಂಚೆ ಅಂಬಾಲಾ ಎನ್ನುವ ಊರಿನ ಬಳಿ ಲೋಡ್ ತುಂಬಿದ ಟ್ರಕ್ ಒಂದು ನಿಂತಿತ್ತು. ಈ ಮಾಲೀಕನಿದ್ದ ಮಾರುತಿ ಕಾರು ಬಹಳ ವೇಗವಾಗಿ ಚಲಿಸುತ್ತಿತ್ತು. ಏಕೆಂದರೆ ಮಾಯೆ ಎಂಬ ಲೋಭಿಗೆ ಕೇವಲ ಐದು ಲಕ್ಷ ಕಾಣುತ್ತಿತ್ತು. ಕಾರು ನೇರವಾಗಿ ಹೋಗಿ ಟ್ರಕ್ಕಿಗೆ ಗುದ್ದಿದ್ದೇ ತಡ, ಆ ರಭಸಕ್ಕೆ ಕಾರು ನಜ್ಜು ಗುಜ್ಜಾಗಿ ಹೋಯಿತು. ಅವರು ಸತ್ಸಂಗ ಕೇಳಲು ಉಳಿದುಕೊಂಡಿದ್ದರೆ, ಅವರು ಸಾಯುತ್ತಿರಲಿಲ್ಲ ಎಂದು ಹೇಳಲು ದುಃಖವಾಗುತ್ತದೆ. ಮಾಯೆಯಿಲ್ಲದಿದ್ದರೆ ಕೆಲಸವಾಗುತ್ತದೆ. ಆದರೆ ಶರೀರವಿಲ್ಲದಿದ್ದರೆ ಹೇಗೆ? ಶರೀರವಿದ್ದರೆ ಪರಮಾತ್ಮವನ್ನು ಆರಾಧಿಸಿ ಉದ್ಧಾರವಾಗಬಹುದು. ಪರಮೇಶ್ವರರಾದ ಕಬೀರರು ಹೇಳಿದ್ದಾರೆ.

ಕಬೀರ್, ರಾಮ್ ನಾಮ್ ಕಡವಾ ಲಗ್ಯೆ, ಮೀಠೇ ಲಾಗೇ ದಾಮ್ ।
ದುವಿಧಾ ಮೆಂ ದೋನೋಂ ಗಯೇ, ಮಾಯಾ ಮಿಲೀ ನಾ ರಾಮ್ ॥

ಭಾವಾರ್ಥ :– ಸತ್ಸಂಗ ಕೇಳದಿರುವ ಮನುಷ್ಯನಿಗೆ (ಸ್ತ್ರೀ/ಪುರುಷ) ಪರಮಾತ್ಮನ ಅಸ್ತಿತ್ವದ

ಪರಿಚಯವಾಗುವುದಿಲ್ಲ. ಆಗ ಅವನಿಗೆ ಪರಮಾತ್ಮನಿಗೆ ಸಂಬಂಧಪಟ್ಟ ಚರ್ಚೆಯೂ ರುಚಿಸುವುದಿಲ್ಲ. ಕೇವಲ ಹಣಗಳಿಕೆ ಇಷ್ಟವಾಗುತ್ತದೆ. ಮುಂದೆ ಅವನು ಎಲ್ಲವನ್ನೂ ಕಳೆದುಕೊಳ್ಳುತ್ತಾನೆ. ಅಂದರೆ ಅವನಿಗೆ ಪರಮಾತ್ಮನೂ ಸಿಗುವುದಿಲ್ಲ. ಸಾವಿನ ನಂತರ ಹಣವೂ ಇರುವುದಿಲ್ಲ. ಇವೆರಡೂ ಅವನ ಕೈಯಿಂದ ಜಾರಿ ಹೋಗುತ್ತದೆ.

ಆದ್ದರಿಂದ ಅಕ್ಕ–ತಂಗಿಯರೇ, ಅಣ್ಣ ತಮ್ಮಂದಿರೇ, ಸತ್ಸಂಗದ ಕಡೆಗೆ ಒಲವು ತೋರಿಸಿ. ಆತ್ಮ ಕಲ್ಯಾಣಕ್ಕಾಗಿ ಶ್ರಮಿಸಿ ಮತ್ತು ಜೀವನದ ದಾರಿಯನ್ನು ಸುಗಮಗೊಳಿಸಿಕೊಳ್ಳಿ.

## "ಸತ್ಸಂಗಕ್ಕೆ ಹೋದರೆ ದೊಡ್ಡ ವಿಪತ್ತಿನಿಂದ ಪಾರಾಗಬಹುದು"

ಕಬೀರ್, ಸಂತ ಶರಣ್ ಮೆಂ ಆನೇ ಸೇ, ಆಯೀ ಟಲ್ಯೆ ಬಲಾ ।
ಜೈ ಭಾಗ್ಯ ಮೆಂ ಸೂಲೀ ಹೋ, ಕಾಂಟೇ ಮೆಂ ಟಲ್ ಜಾಯ್ ॥

ಭಾವಾರ್ಥ :– ಕಬೀರ ಪರಮೇಶ್ವರರ ಕೃಪಾಪಾತ್ರರಾದ ನಿಜವಾದ ಗುರು (ಸದ್ಗುರು) ವಿನಿಂದ ದೀಕ್ಷೆ ಪಡೆಯುವ ಭಕ್ತ/ಭಕ್ತೆಯನ್ನು ಪರಮಾತ್ಮನು ರಕ್ಷಿಸುತ್ತಾನೆ. ಒಂದು ವೇಳೆ ಪೂರ್ವಜನ್ಮದ ಪಾಪದಿಂದ ಸಾಧಕನನ್ನು ಶೂಲಕ್ಕೇರಿಸುವ ಮೂಲಕ ಸಾವಿನ ಸಜೆ ಅವನ ಹಣೆಯಲ್ಲಿ ಬರೆದಿದ್ದರೆ ಪರಮಾತ್ಮನು ಆ ಸಾಧಕನ ಆ ಮರಣದಂಡನೆಯನ್ನು ಕೊನೆಗೊಳಿಸಿ, ಯಾವುದಾದರೂ ಸಣ್ಣ ಪುಟ್ಟ ಶಿಕ್ಷೆಯನ್ನು ಕೊಡುತ್ತಾನೆ. ಅಂದರೆ ಕಾಲಿಗೆ ಮುಳ್ಳು ಚುಚ್ಚುವಂತೆ ಮಾಡುವಂಥಾ ಪುಟ್ಟ ಶಿಕ್ಷೆಯನ್ನು ನೀಡುತ್ತಾನೆ. ಭಯಂಕರವಾದಂತಹ ಬಹಳ ಕಷ್ಟವನ್ನು ಕೊಡುವಂತಹ ಶಿಕ್ಷೆಯನ್ನು ಹೆಸರಿಗೆ ಮಾತ್ರ ಶಿಕ್ಷೆ ಎನ್ನುವಂತೆ ಬದಲಿಸಿಬಿಡುತ್ತಾನೆ.

ಒಂದು ಹಳ್ಳಿಯಲ್ಲಿ ಒಂದು ಆಶ್ರಮವಿತ್ತು. ಅದು ಹಳ್ಳಿಯಿಂದ 2 ಕಿ.ಮೀ ದೂರದಲ್ಲಿತ್ತು. ವರ್ಷದಲ್ಲಿ ಕೇವಲ ಎರಡು ಬಾರಿ ಮಾತ್ರ ಗುರುಗಳು ಆಶ್ರಮಕ್ಕೆ ಬರುತ್ತಿದ್ದರು. ಆ ಹಳ್ಳಿಯಲ್ಲಿ ಅನೇಕ ಕುಟುಂಬಗಳು ಅವರ ಶಿಷ್ಯರಾಗಿದ್ದವು. ಗುರುಗಳ ಜೊತೆ ಹಲವಾರು ಶಿಷ್ಯರೂ ಬರುತ್ತಿದ್ದರು. ಗುರುಗಳು ಎರಡು ತಿಂಗಳು ಆಶ್ರಮದಲ್ಲಿ ಉಳಿಯುತ್ತಿದ್ದರು. ಉಳಿದ ಸಮಯದಲ್ಲಿ ಬೇರೆ ಬೇರೆ ಆಶ್ರಮಗಳಿಗೆ ತೆರಳುತ್ತಿದ್ದರು. ಈ ಬಾರಿಯೂ ಗುರುಗಳು ಬಂದಾಗ ಭಕ್ತರು ಅವರವರ ಮನೆಯಿಂದ ಊಟದ ವ್ಯವಸ್ಥೆ ಮಾಡಿದ್ದರು. ಒಂದು ಕುಟುಂಬ ಒಂದು ದಿನದ ಊಟವನ್ನು ಒಪ್ಪಿಕೊಳ್ಳುತ್ತಿತ್ತು, ಗುರುಗಳಿಗೆ ಪಾಯಸಾನ್ನವನ್ನು ಬಡಿಸುವ ಇಚ್ಛೆ ಭಕ್ತರಿಗಿತ್ತು. ಅಲ್ಲಿ ಕಸ್ತೂರಿ ಎನ್ನುವ ಭಕ್ತೆ ಇದ್ದಳು. ಅವಳ ಮನೆಯಲ್ಲಿ ಹಾಲು ಒಡೆದು ಹೋಗಿತ್ತು. ಪಕ್ಕದ ಮನೆಯಲ್ಲಿ ತಾಯಿ ಮಗ ವಾಸಿಸುತ್ತಿದ್ದರು. ಆ ತಾಯಿಯ ಹೆಸರು ರಾಮೋ. ಮಗ 2 ವರ್ಷದವನಿದ್ದಾಗ ಅವಳ ಪತಿ ತೀರಿಕೊಂಡಿದ್ದನು. ಅವಳ ಸಂಬಂಧಿಕರಲ್ಲಿ ಒಂದು ಘಟನೆ ನಡೆದಿತ್ತು. ಅವಳ ಸೋದರತ್ತೆಯ ಮಗಳೂ ಸಹ ಅವಳ ಮಗನಿಗೆ 3 ವರ್ಷವಾಗಿದ್ದಾಗ ಅವಳ ಪತಿ ತೀರಿಕೊಂಡನು, ಅವಳ ಮೈದುನನೇ ಅತ್ತಿಗೆಯನ್ನು ಮದುವೆಯಾದನು. ಮೈದುನನಿಗೆ ಈ ಮೊದಲೇ ಮದುವೆಯಾಗಿ ಒಂದು ಮಗು ಇತ್ತು. ಮೈದುನನಿಂದ ಅವಳಿಗೊಂದು ಮಗು ಹುಟ್ಟಿತು. ಕೆಲವು ದಿನಗಳಲ್ಲೇ ಅವಳ ಜೀವನ ನರಕವಾಯಿತು. ಮೈದುನ, ವಾರಗಿತ್ತಿ ಅವಳನ್ನು ಮತ್ತು ಅವಳ ಮಗನನ್ನು ಕೆಲಸದವರಂತೆ ನೋಡಿಕೊಳ್ಳುತ್ತಿದ್ದರು. ತಂಗಳು, ಹಳಸಲು ತಿನ್ನಲು ಕೊಡುತ್ತಿದ್ದರು. ಮಗ ಸ್ವಲ್ಪ ದೊಡ್ಡವನಾದ ಮೇಲೆ ಇವರ ವ್ಯವಹಾರದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡನು. ಇದನ್ನು ನೋಡಿದ ತಾಯಿ ಹುಚ್ಚಿಯಾಗಿ ಎಲ್ಲಿಗೋ ಓಡಿಹೋದಳು. ಈ ಘಟನೆಯಿಂದ ಹೆದರಿಕೊಂಡು ರಾಮೋ ಬೇರೆ ಮದುವೆಯಾಗಲಿಲ್ಲ. ಅವಳ ಮಗನಾದ ಕರ್ಮಪಾಲನನ್ನೂ ಸಾಕಿ ಬೆಳೆಸಿದಳು. ಇದ್ದ ಅಲ್ಪ ಸ್ವಲ್ಪ ಜಮೀನಿನಲ್ಲಿ ಕೆಲಸ ಮಾಡಿ, ದನ ಕರುಗಳನ್ನು ಸಾಕುತ್ತಾ, ತನ್ನ ಮಗನಿಗೆ ಹಾಲು, ಹಣ್ಣು, ಸ್ವಾದಿಷ್ಟ ಭೋಜನ, ತುಪ್ಪ ತಿನ್ನಿಸುತ್ತಿದ್ದಳು. 'ದೊಡ್ಡವನಾದ ಮೇಲೆ ಅವನಿಗೆ ಮದುವೆ ಮಾಡಬೇಕು. ಆಗ ಅವನು ಕುಟುಂಬದ ಪೋಷಣೆ

ಮಾಡುತ್ತಾನೆ'. ನಂತರ ನಾನು ಸುಖವಾಗಿರಬಹುದು ಎಂದು ಭಾವಿಸಿದಳು. ಆದರೆ ಸತ್ಸಂಗವಿಲ್ಲದೆ ಜ್ಞಾನವಿಲ್ಲ, ಗುರುವೇ ಜ್ಞಾನ ನೀಡುವವನು. ಎಷ್ಟೇ ಶ್ರೀಮಂತರಾಗಿದ್ದರೂ ಭಕ್ತಿ ಇಲ್ಲದಿದ್ದರೆ ಸುಖವಿಲ್ಲ. ತಾಯಿಗೆ ತನ್ನ ಮಕ್ಕಳನ್ನು ಸುಖವಾಗಿ ಇಡುವ ಅಭಿಲಾಷೆ ಇರುತ್ತದೆ. ಆದರೆ ತಂದೆ ಇಲ್ಲದ ಮಗ ತಾಯಿಯ ಮುದ್ದಿನಿಂದ ಹಾಳಾಗುತ್ತಾನೆ. ವಿಧವೆಯ ಮಗ, ವಿಧುರನ ಮಗಳು ಹಾಳಾಗುತ್ತಾರೆ ಎಂಬ ಗಾದೆಯೇ ಇದೆ. ಏಕೆಂದರೆ ತನ್ನ ಕೆಲಸದಲ್ಲಿ ಮುಳುಗಿರುವ ಏಕ ಪೋಷಕ ಕುಟುಂಬಗಳು ತಮ್ಮ ಮಕ್ಕಳ ಮೇಲೆ ಜಾಸ್ತಿ ಗಮನ ಕೊಡಲು ಸಾಧ್ಯವಿಲ್ಲ. ಹೀಗಾಗಿ ರಾಮೋಳ ಮಗ ಕರ್ಮಪಾಲ್ ಮದ್ಯವ್ಯಸನಿಯಾದ. ಜಮೀನಿನ ಬೆಳೆಯನ್ನು ಮಾರಿ ಬಂದ ಹಣವನ್ನು ಹಾಳುಮಾಡತೊಡಗಿದನು. ತಾಯಿಯ ಜೊತೆ ಜಗಳವಾಡಿ ಇದ್ದ ಬದ್ದ ಹಣವನ್ನೆಲ್ಲಾ ಕಿತ್ತುಕೊಳ್ಳುತ್ತಿದ್ದನು. ತಾಯಿಯು ಗೋಳಾಡತೊಡಗಿದಳು. 'ಏನಾಗಬೇಕೆಂದು ಯೋಚಿಸಿದ್ದೆ, ಏನಾಗಿಹೊಯ್ತು' ಎಂದು ಗೋಳಾಡಿದಳು. ಇದೇ ಚಿಂತೆಯಲ್ಲಿ ಕೃಷವಾಗ ತೊಡಗಿದಳು.

ಅಂಥಾ ಸಮಯದಲ್ಲಿ ಭಕ್ತ ಶಿರೋಮಣಿ ಕಸ್ತೂರಿ ರಾಮೋವಿನ ಮನೆಗೆ ಹೋದಳು. ಮೊದಲು ಕ್ಷೇಮ ಸಮಾಚಾರವಾಯಿತು. ನಂತರ ಮಗನು ಏನು ಮಾಡುತ್ತಿದ್ದಾನೆ? ತಾಯಿ–ಮಗ ಕ್ಷೇಮವೇ? ಎಂಬಿತ್ಯಾದಿ ಕೇಳಿದಳು, ರಾಮೋ ಅಳಲು ಪ್ರಾರಂಭಿಸಿದಳು. "ನನ್ನ ಮಗ ಅಡ್ಡ ದಾರಿ ಹಿಡಿದಿದ್ದಾನೆ. ಮದ್ಯವ್ಯಸನಿಯಾಗಿದ್ದಾನೆ. ಯಾವಾಗಲೂ ಜಗಳವಾಡುತ್ತಾನೆ. ನನ್ನ ಗಂಡನ ಅಣ್ಣನನ್ನು ಮದುವೆ ಮಾಡಿಕೊಳ್ಳಬೇಕೆಂದು ನಮ್ಮ ಕುಟುಂಬದವರೆಲ್ಲಾ ನನ್ನನ್ನು ಒತ್ತಾಯಿಸಿದರು. ಆದರೆ ನಾನು ಅದಕ್ಕೆ ಸೊಪ್ಪು ಹಾಕದೆ ಮಗನನ್ನು ಸಾಕಿದೆ. ಆದರೆ ಮಗ ಹೀಗಾದ. ಎಲ್ಲಾದರೂ ಓಡಿ ಹೋಗೋಣ ಅಥವಾ ಆತ್ಮಹತ್ಯೆ ಮಾಡಿಕೊಳ್ಳೋಣವೆನ್ನಿಸುತ್ತಿದೆ" ಎಂದಳು ಆಗ ಕಸ್ತೂರಿಯು, "ತಂಗಿ, ತಪ್ಪು ಮಾಡುತ್ತಿರುವೆ. ನೀನು ಸತ್ತು ಹೋದರೆ ನಿನ್ನ ಕುಟುಂಬದವರು ಇರುವ ಜಮೀನನ್ನು ಕಬಳಿಸುತ್ತಾರೆ. ನಿನ್ನ ಮಗನನ್ನು ಮತ್ತೂ ಹಾಳು ಮಾಡಿ ಕೊಂದು ಹಾಕುತ್ತಾರೆ. ಹಾಗೆಲ್ಲಾ ಕೆಟ್ಟ ಯೋಚನೆ ಮಾಡಬೇಡ. ಒಂದು ಕೆಲಸ ಮಾಡು, ನನ್ನ ಜೊತೆ ಸತ್ಸಂಗಕ್ಕೆ ಬಾ, ನೀನೊಬ್ಬಳೇ ಇದ್ದರೆ ಬರೀ ಕೆಟ್ಟ ಯೋಚನೆಗಳೇ ಬರುವುವು. ನೋಡು, ಎಷ್ಟು ಸಣ್ಣಗಾಗಿದ್ದೀಯಾ" ಎಂದಳು. ಆಗ ರಾಮೋ ಅಂದಳು, "ಅಕ್ಕಾ, ನನ್ನನ್ನು ಈ ಜನರೆಲ್ಲಾ ಸಂದೇಹದ ದೃಷ್ಟಿಯಿಂದ ನೋಡುತ್ತಾರೆ. ಯಾರಾದರೂ ಕೆಲಸದ ಮೇಲೆ ನಮ್ಮ ಮನೆಗೆ ಬಂದರೆ ಜನರೆಲ್ಲಾ ಮೈಯೆಲ್ಲಾ ಕಾಣ್ಣಾಗಿಸಿ ನೋಡುತ್ತಾರೆ. ನಿಮಗೇನೋ ನಿಮ್ಮ ಪತಿ ಇದ್ದಾರೆ, ನಾನು ಸತ್ಸಂಗಕ್ಕೇನಾದರೂ ಬಂದರೆ ನನ್ನನ್ನು ಸುಮ್ಮನೆ ಬಿಟ್ಟಾರೆಯೇ? ನಾನಂತೂ ಸಾಯಲೇ ಬೇಕು. ಹೋಗಲಿ, ಹೇಳು. ಈ ದಿನ ಬಂದ ಕೆಲಸವಾದರೂ ಏನು?" ಎಂದಳು. ಆಗ ಕಸ್ತೂರಿಯು "ತಂಗಿ, ನಿನಗೆ ಗೊತ್ತಿರಬಹುದು, ಗುರುಗಳು ಆಶ್ರಮದಲ್ಲಿ ತಂಗಿದ್ದಾರೆ. ಈ ದಿನ ಊಟ ಕಳುಹಿಸುವ ಸರದಿ ನನ್ನದಾಗಿದೆ. ಸ್ವಲ್ಪ ಪಾಯಸ ಮಾಡಬೇಕಿತ್ತು. ಹಾಲೆಲ್ಲಾ ಒಡೆದು ಹೋಗಿದೆ. ಸ್ವಲ್ಪ ಹಾಲನ್ನು ಸಾಲವಾಗಿ ಕೊಟ್ಟರೆ ನಾಳೆ ಹಿಂತಿರುಗಿಸುತ್ತೇನೆ" ಎಂದಳು. ಈ ಮಾತನ್ನು ಕೇಳಿದ ರಾಮೋ ಥಟಗನೆ ಎದ್ದು ಬಟ್ಟಲಿನಲ್ಲಿಟ್ಟಿದ್ದ ಎಲ್ಲಾ ಹಾಲನ್ನೂ ಕಸ್ತೂರಿಯ ಬಟ್ಟಲಿಗೆ ತಂದು ಸುರಿದಳು. ಕಸ್ತೂರಿಯು ಸ್ವಲ್ಪ ಅವಳಿಗಾಗಿ ಇಟ್ಟಿಕೊಳ್ಳಲು ಹೇಳಿದರೂ ಸಹ, ರಾಮೋ ನಿರಾಕರಿಸುತ್ತಾ ಹೇಳಿದಳು, "ಯಾವ ಜನ್ಮದ ಪುಣ್ಯವೋ ಕಾಣೆ, ನನ್ನಂಥಾ ನತದೃಷ್ಟೆಯ ಮನೆಯ ಹಾಲು ಪುಣ್ಯಕಾರ್ಯಕ್ಕೆ ವಿನಿಯೋಗವಾಗುತ್ತಿದೆ. ಅಕ್ಕಾ ತೆಗೆದುಕೊಂಡು ಹೋಗಿ, ಗುರುಗಳ ಮತ್ತು ಭಕ್ತರ ಊಟಕ್ಕೆ ಉಪಯೋಗಿಸಿ" ಎಂದಳು.

ಕಸ್ತೂರಿ ಆಶ್ಚರ್ಯದಿಂದ ನೋಡುತ್ತಾ, ನಾನು ಸತ್ಸಂಗಿಯಾಗಿದ್ದರೂ ಇಡೀ ಹಾಲನ್ನು ನೀಡುತ್ತಿರಲಿಲ್ಲ, ಆದರೆ ಇವಳೆಷ್ಟು ಒಳ್ಳೆಯವಳು! ಇವಳಿಗೆ ಸತ್ಸಂಗದ ಪ್ರೇರಣೆಯ ಅವಶ್ಯಕತೆ ಇದೆ ಎಂದುಕೊಂಡಳು. ಮಾರನೇ ದಿನ 10–11 ಗಂಟೆಗೆ ಕಸ್ತೂರಿ ರಾಮೋ ಮನೆಗೆ ಹೋಗಿ, ಗುರುವಿನಿಂದ ಕೇಳಿಸಿಕೊಂಡಿದ್ದ ಸತ್ಸಂಗದ ಮಾತುಗಳನ್ನೆಲ್ಲಾ ರಾಮೋಗೆ ತಿಳಿಸಿದಳು. ಆದರೆ ಸಮಾಜಕ್ಕೆ ಹೆದರಿ

ರಾಮೋ ಒಪ್ಪಲು ಸಿದ್ಧಳಿರಲಿಲ್ಲ. ಆಗ ಕಸ್ತೂರಿಯು, "ತಂಗಿ, ನೀವು ಮೀರಾಬಾಯಿಯ ಕತೆ ಕೇಳಿಲ್ಲವೇ?" ಎಂದಳು. ಆಗ ರಾಮೋ, "ಅವಳು ಕೃಷ್ಣನ ಭಕ್ತೆ ಅಲ್ಲವೇ" ಎಂದಳು. ಕಸ್ತೂರಿಯು ಹೇಳಿದಳು, "ಹೌದು ಅವಳು ದೇವಸ್ಥಾನದಲ್ಲಿದ್ದಳು, ಠಾಕೂರ್ ವಂಶದಲ್ಲಿ ಜನಿಸಿದ್ದಳು. ಆ ವಂಶದ ಮಹಿಳೆಯು ಮನೆ ಬಿಟ್ಟು ಹೊರಹೋಗುವುದು ನಿಷಿದ್ಧವಾಗಿತ್ತು. ಮೀರಾಬಾಯಿ ಯಾರ ಬಗ್ಗೆಯೂ ತಲೆ ಕೆಡಿಸಿಕೊಳ್ಳಲಿಲ್ಲ. ಅವಳ ಮದುವೆ ರಾಜನ ಜೊತೆ ಆಯಿತು. ರಾಣಾ ಧಾರ್ಮಿಕನಾಗಿದ್ದನು. ಅವನು ಮೀರಾಳನ್ನು ದೇವಸ್ಥಾನಕ್ಕೆ ಹೋಗುವುದನ್ನು ತಡೆಯಲಿಲ್ಲ.

ಆದರೆ ಸಮಾಜಕ್ಕೆ ಹೆದರಿ ಅವಳ ಜೊತೆ 3–4 ಮಹಿಳಾ ಕೆಲಸಗಾರರನ್ನು ಕಳುಹಿಸುತ್ತಿದ್ದನು. ಸ್ವಲ್ಪ ಸಮಯದ ನಂತರ ಅವನು ಸಾವನ್ನಪ್ಪಿದನು, ಅವನ ತಮ್ಮನು ಸಿಂಹಾಸನವನ್ನೇರಿದನು, ಅವನು ಮೀರಾಳನ್ನು ದೇವಸ್ಥಾನಕ್ಕೆ ಹೋಗುವುದನ್ನು ತಡೆದನು. ಆದರೆ ಮೀರಾಬಾಯಿ ಕೇಳಲಿಲ್ಲ. ಮೀರಾಬಾಯಿಯನ್ನು ಹೇಗಾದರೂ ಮಾಡಿ ಸಾಯಿಸಬೇಕೆಂದು ಯೋಚಿಸಿದನು, ಅದಕ್ಕಾಗಿ ಒಂದು ಉಪಾಯವನ್ನು ಮಾಡಿದನು, ಹಾವಾಡಿಗನನ್ನು ಕರೆಸಿ ಅತ್ಯಂತ ವಿಷಪೂರಿತ ಹಾವನ್ನು ತರಿಸಿಕೊಂಡು ಅದನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಭದ್ರಪಡಿಸಿದನು, ಮರುದಿನ ಅವನ ಮಗನ ಜನ್ಮದಿನವಿತ್ತು, ಆ ದಿನ ಒಬ್ಬ ಸಖಿಯನ್ನು ಕರೆದು, "ಇದನ್ನು ಮೀರಾಬಾಯಿಗೆ ಕೊಟ್ಟು ಬಾ, ಇದರಲ್ಲಿ ಬೆಲೆ ಬಾಳುವ ವಜ್ರದ ಹಾರವಿದೆ. ಈ ದಿನ ಸಂಜೆ ನನ್ನ ಮಗನ ಜನ್ಮ ದಿನಕ್ಕೆ ಎಲ್ಲಾ ಗಣ್ಯರು ಆಗಮಿಸುತ್ತಾರೆ. ಆಗ ಮೀರಾಬಾಯಿ ಅತ್ಯಂತ ದುಬಾರಿಯಾದ ಬಟ್ಟೆ ತೊಟ್ಟುಕೊಂಡು, ಈ ಬೆಲೆ ಬಾಳುವ ಹಾರವನ್ನು ಹಾಕಿಕೊಂಡು ಬರಲಿ, ಈ ವಿಷಯವನ್ನು ಅವಳಿಗೆ ತಿಳಿಸು" ಎಂದು ಸಖಿಗೆ ಹೇಳಿದನು, ಸಖಿಯು ಅದೇ ರೀತಿ ಹೇಳಿ, ಮೀರಾಬಾಯಿಗೆ ಆ ಪೆಟ್ಟಿಗೆಯನ್ನು ಕೊಟ್ಟು ಬಂದಳು. ಮೀರಾಬಾಯಿಗೆ ಇಷ್ಟವಿಲ್ಲದಿದ್ದರೂ ಮೈದುನನಿಗೆ ಬೇಸರವಾಗಬಹುದೆಂದು ತಿಳಿದು ಆ ಪೆಟ್ಟಿಗೆಯನ್ನು ತೆರೆದಳು. ಅದರಲ್ಲಿ ನಿಜವಾಗಲೂ ಬೆಲೆಬಾಳುವ ವಜ್ರದ ಹಾರವಿತ್ತು. ಸಂಜೆ ದುಬಾರಿ ಉಡುಪನ್ನು ತೊಟ್ಟು, ಆ ಹಾರವನ್ನು ಧರಿಸಿ ಬಂದಳು. ಮೈದುನನು ಇಷ್ಟು ಹೊತ್ತಿಗೆ ಮೀರಾಬಾಯಿ ಹಾವು ಕಡಿದು ಸತ್ತಿರಬಹುದು ಎಂದು ಯೋಚಿಸುತ್ತಿದ್ದವನಿಗೆ ಮೀರಾಬಾಯಿಯನ್ನು ನೋಡಿ ಆಶ್ಚರ್ಯವಾಯಿತು. ಅವನು ಮೀರಾಬಾಯಿಗೆ ಯದ್ವಾ ತದ್ವಾ ಬಯ್ದು, "ನಿನ್ನ ಚಾರಿತ್ರ್ಯ ಚೆನ್ನಾಗಿಲ್ಲ, ಯಾರ ಬಳಿಯಿಂದ ಈ ಹಾರ ತಂದೆ" ಎಂದು ಬಯ್ದನು, ಮೀರಾಬಾಯಿ ಅಳುತ್ತಾ, "ಈ ಹಾರ ನೀವೇ ಕಳುಹಿಸಿದ್ದು, ಬೇಕಾದರೆ ಆ ಪೆಟ್ಟಿಗೆಯನ್ನು ತಂದು ತೋರಿಸುತ್ತೇನೆ ಎಂದಳು. ಮೀರಾಬಾಯಿಯು ಕೊಠಡಿಯಿಂದ ಸಖಿಯು ಈ ಹಿಂದೆ ಮೈದುನನು ಕೊಟ್ಟಿದ್ದ ಪೆಟ್ಟಿಗೆಯನ್ನು ತಂದು ತೋರಿಸಿದಳು, ರಾಜನು ಮರು ಮಾತಿಲ್ಲದೆ ವಾಪಸ್ಸು ಬಂದನು. ಅವಳನ್ನು ಹೇಗಾದರೂ ಮಾಡಿ ಸಾಯಿಸಬೇಕೆಂದು ಯೋಚಿಸುತ್ತಾ, ಈ ಬಾರಿ ನಾನೇ ಇವಳಿಗೆ ವಿಷ ಕುಡಿಸುತ್ತೇನೆ, ಕುಡಿಯದಿದ್ದರೆ ತಲೆ ತೆಗೆಯುತ್ತೇನೆ, ಎಂದು ಮನಸ್ಸಿನಲ್ಲೇ ಅಂದುಕೊಂಡನು.

## "ಮೀರಾಬಾಯಿಯನ್ನು ವಿಷ ಕುಡಿಸಿ ಕೊಲ್ಲುವ ವ್ಯರ್ಥ ಪ್ರಯತ್ನ"

ಈ ಬಾರಿ ಹಾವಾಡಿಗನನ್ನು ಕರೆದು ಕಾರ್ಕೋಟಕ ವಿಷವನ್ನು ತರಲು ಹೇಳಿದನು. ಒಂದು ಹನಿ ಕುಡಿದ ತಕ್ಷಣ ಯಾರೇ ಆಗಲಿ ಸತ್ತು ಬೀಳುವಂಥಾ ವಿಷವನ್ನು ತರಸಿಕೊಂಡನು, ನಂತರ ಮೀರಾಬಾಯಿಯನ್ನು ಕರೆದು "ವಿಷವನ್ನು ಕುಡಿ, ಇಲ್ಲದಿದ್ದರೆ ತಲೆ ತೆಗೆಯುತ್ತೇನೆ" ಎಂದು ಗದರಿಸಿದನು, ಮೀರಾಬಾಯಿ ತಲೆ ಕಡಿಯುವುದರಿಂದ ಹೆಚ್ಚು ನೋವಾಗುತ್ತದೆ, ವಿಷ ಕುಡಿಯುವುದೇ ಲೇಸೆಂದು ತಿಳಿದು, ಭಗವಂತನ ಧ್ಯಾನ ಮಾಡುತ್ತಾ, ವಿಷದ ಬಟ್ಟಲನ್ನು ತೆಗೆದುಕೊಂಡು ಒಂದೇ ಗುಟುಕಿಗೆ ಕುಡಿದು ಬಿಟ್ಟಳು, ಆದರೆ ಅವಳಿಗೆ ಏನೂ ಆಗಲಿಲ್ಲ, ರಾಜನು ಕೋಪಗೊಂಡು ಹಾವಾಡಿಗನಿಗೆ ಬಯ್ದನು. ಆ ವಿಷ ನಕಲಿ ಎಂದು ಆರೋಪಿಸಿದನು. ಹಾವಾಡಿಗನು ಅದೇ ಬಟ್ಟಲಿಗೆ

ಹಾಲು ತುಂಬಿ ಒಂದು ನಾಯಿಗೆ ಕುಡಿಸಿದನು. ಆ ಬಟ್ಟಲಿಗೆ ಮೆತ್ತಿಕೊಂಡಿದ್ದ ಒಂದು ತೊಟ್ಟು ವಿಷದಿಂದ ಆ ನಾಯಿ ಆ ಕ್ಷಣವೇ ಸತ್ತುಹೋಯಿತು. ಇವಳು ಹೀಗೆಲ್ಲಾ ಸಾಯಿವವಳಲ್ಲ ಎಂದು ರಾಜನಿಗೆ ಮನವರಿಕೆಯಾಯಿತು. ಆಗ ಅವನು ಅವಳಿಗೆ ದೇವಸ್ಥಾನಕ್ಕೆ ಹೋಗಲು ಅನುಮತಿ ನೀಡಿದನು.

## "ಮೀರಾಬಾಯಿಗೆ ಸದ್ಗುರುವಿನ ಆಶ್ರಯ ಸಿಕ್ಕಿತು"

ಮೀರಾಬಾಯಿ ಕೃಷ್ಣನನ್ನು ಪೂಜಿಸಲು ಹೋಗುವ ಮಾರ್ಗದಲ್ಲಿ ಒಂದು ಪುಟ್ಟ ಉದ್ಯಾನವನವಿತ್ತು. ಅಲ್ಲಿ ಹಲವಾರು ದೊಡ್ಡ ದೊಡ್ಡ ಮರಗಳಿದ್ದವು. ಅಲ್ಲಿ ಸಂತ ಕಬೀರ್‌ದಾಸರು ಮತ್ತು ರವಿದಾಸರು ಸತ್ಸಂಗ ನಡೆಸುತ್ತಿದ್ದರು. ಬೆಳಗ್ಗಿನ 10 ಗಂಟೆಯ ಸಮಯ. ಅಲ್ಲಿ ಪರಮಾತ್ಮನ ಬಗ್ಗೆ ಚರ್ಚೆ ಮತ್ತು ಅವನ ಕತೆಯನ್ನು ಹೇಳಲಾಗುತ್ತಿತ್ತು. ಮೀರಾ ಸ್ವಲ್ಪ ಸಮಯ ಅಲ್ಲಿದ್ದು ಹೊರಡಲು ನಿರ್ಧರಿಸಿದಳು.

ಪರಮೇಶ್ವರರಾದ ಕಬೀರರು ಸತ್ಸಂಗದಲ್ಲಿ ಸಂಕ್ಷಿಪ್ತವಾಗಿ ಸೃಷ್ಟಿಯ ಬಗ್ಗೆ ತಿಳಿಸಿಕೊಟ್ಟರು. "ಕೃಷ್ಣ ಅಂದರೆ ವಿಷ್ಣುವಿಗಿಂತ ಮೇಲೆ ಸರ್ವಶಕ್ತಿಮಾನನಾದ ಪರಮಾತ್ಮನಿದ್ದಾನೆ. ಜನನ ಮರಣವು ಅಂತ್ಯವಾಗದಿದ್ದರೆ ಭಕ್ತಿ ಮಾಡಿದರೂ ಒಂದೇ, ಬಿಟ್ಟರೂ ಒಂದೇ. ಜನನ–ಮರಣವಂತೂ ವಿಷ್ಣುವನ್ನು ಬಿಟ್ಟಿಲ್ಲ. ಇನ್ನು ಅವರ ಉಪಾಸಕರನ್ನು ಬಿಟ್ಟೀತೇ?" ಎಂದು ಹೇಳಿದರು. ಹಿಂದೂ ಸಂತರು ಹೇಳುವುದೇನೆಂದರೆ ಗೀತೆಯ ಜ್ಞಾನವನ್ನು ಕೃಷ್ಣ ಅರ್ಥಾತ್ ವಿಷ್ಣುವು, ಅರ್ಜುನನಿಗೆ ಹೇಳಿದನು. ಗೀತೆಯ ಜ್ಞಾನದಾತನು ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ, 4ನೇ ಅಧ್ಯಾಯದ 5ನೇ ಶ್ಲೋಕ, 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಹೇಳಿದ್ದಾನೆ, "ಹೇ ಅರ್ಜುನ! ನಿನ್ನ ಮತ್ತು ನನ್ನ ಅನೇಕ ಜನ್ಮಗಳಾದವು" ನಿನಗೆ ಗೊತ್ತಿಲ್ಲ, ನನಗೆ ಗೊತ್ತು." ಇದರಿಂದ ಕೃಷ್ಣನಿಗೂ ಜನನ–ಮರಣ ಅಂತ್ಯವಾಗಿಲ್ಲ ಎನ್ನುವುದು ಸ್ಪಷ್ಟ. ಅವನು ಅವಿನಾಶಿಯಲ್ಲ. ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಗೀತೆಯನ್ನು ಹೇಳಿರುವ ಕೃಷ್ಣನು ಹೇಳಿದ್ದಾನೆ. ಹೇ ಭರತ! ನೀನು ಸರ್ವಭಾವದಿಂದ ಪರಮೇಶ್ವರನ ಆಶ್ರಯ ಪಡಿ. ಆ ಪರಮೇಶ್ವರನ ಕೃಪೆಯಿಂದ ನೀನು ಸನಾತನ ಪರಮ ಧಾಮಕ್ಕೆ ಹೋಗುವೆ ಮತ್ತು ಪರಮ ಶಾಂತಿಯನ್ನು ಪಡೆಯುವೆ."

ಪರಮೇಶ್ವರರಾದ ಕಬೀರರ ಬಾಯಿಂದ ಈ ಮಾತುಗಳನ್ನು ಕೇಳಿದ ಆತ್ಮಕ್ಕೆ ಹೊಸ ಬೆಳಕು ಸಿಕ್ಕಿತು. ಸತ್ಸಂಗದ ನಂತರ ಮೀರಾಬಾಯಿ ಕೇಳಿದಳು, "ಮಹಾತ್ಮಾ! ನಿಮ್ಮ ಅನುಮತಿ ಇದ್ದರೆ ನನ್ನ ಸಂದೇಹ ನಿವಾರಿಸಿಕೊಳ್ಳುವೆ," ಆಗ ಕಬೀರರು, "ಪ್ರಶ್ನೆ ಕೇಳು ಮಗಳೇ" ಎಂದರು.

ಪ್ರಶ್ನೆ:– "ಹೇ ಮಹಾತ್ಮಾ! ಕೃಷ್ಣನಿಗಿಂತ ಮಿಗಿಲಾದ ಪರಮತ್ಮನಿರುವನೆಂದು ನಾನು ಇದುವರೆಗೆ ಯಾರ ಬಾಯಲ್ಲೂ ಕೇಳಿಲ್ಲ. ಇಂದು ನಿಮ್ಮ ಬಾಯಿಂದ ಕೇಳಿ ನಾನು ದ್ವಂದ್ವದಲ್ಲಿ ಬಿದ್ದಿದ್ದೇನೆ. ಸಂತರು ಸುಳ್ಳು ಹೇಳುವುದಿಲ್ಲವೆಂದು ನಾನು ತಿಳಿದಿದ್ದೇನೆ" ಎಂದಳು. ಆಗ ಕಬೀರರು, "ಇದೆಲ್ಲಾ ನಿಮ್ಮ ಅಜ್ಞಾನಿ ಗುರುಗಳ ಪ್ರಭಾವ, ಅವರಿಗೇ ಜ್ಞಾನವಿರುವುದಿಲ್ಲ. ನಿಮಗೆ ಏನು ಜ್ಞಾನ ಕೊಡಬಲ್ಲರು? ದೇವಿ ಪುರಾಣದ ಮೂರನೇ ಸ್ಕಂದದಲ್ಲಿ ವಿಷ್ಣುವು ಸ್ವತಃ ಸ್ವೀಕರಿಸುತ್ತಿದ್ದಾನೆ, ನಾನು(ವಿಷ್ಣು), ಬ್ರಹ್ಮಾ ಮತ್ತು ಶಂಕರ ಅವಿನಾಶಿಗಳಲ್ಲವೆಂದು. ನಮ್ಮ ಆವಿರ್ಭಾವ ಅಂದರೆ ಜನನ ಹಾಗೂ ತಿರೋಭಾವ ಎಂದರೆ ಮರಣವಾಗುತ್ತದೆ" ಎಂದು ಹೇಳಿದರು. ಆಗ ಮೀರಾಬಾಯಿ ಹೇಳಿದಳು, "ಹೇ ಗುರುಗಳೇ! ಪರಮಾತ್ಮನಾದ ಶ್ರೀ ಕೃಷ್ಣನು ನನಗೆ ದರ್ಶನ ನೀಡುತ್ತಾನೆ. ನಾನು ಅವನ ಜೊತೆ ಸಂವಾದ ಮಾಡುತ್ತೇನೆ." ಆಗ ಕಬೀರರು, "ಹೇ ಮೀರಾ, ನೀವು ಒಂದು ಕೆಲಸ ಮಾಡಿ. ನೀವೇ ಕೃಷ್ಣನ ಬಳಿ ನಿನಗಿಂತ ಮೇಲೆ ಯಾರಾದರೂ ಮಾಲೀಕರಿದ್ದಾರಾ ಎಂದು ಪ್ರಶ್ನಿಸಿ. ಅವರು ದೇವರಲ್ವ, ಸುಳ್ಳು ಹೇಳುವುದಿಲ್ಲ" ಎಂದರು. ಒಂದು ವೇಳೆ ಕೃಷ್ಣನ ಮೇಲೆ ಮತ್ತೊಬ್ಬ ದೇವರಿದ್ದಾನೆ ಎಂದಾದರೆ ನಾನು ಹುಚ್ಚಿಯಾಗಿ

ಬಿಡುತ್ತೇನೆ ಎಂದು ಮೀರಾಳಿಗೆ ಅನ್ನಿಸಿತು. ರಾತ್ರಿಯಲ್ಲಿ ಮೀರಾ ಕೃಷ್ಣನನ್ನು ಆವಾಹನೆ ಮಾಡಿದಳು. ತ್ರಿಲೋಕನಾಥನು ಪ್ರತ್ಯಕ್ಷನಾದನು. ಆಗ ಮೀರಾ ತನ್ನ ಸಂದೇಹ ನಿವಾರಣೆಗಾಗಿ ಕೃಷ್ಣನನ್ನು ಕುರಿತು, ನಿಮ್ಮ ಮೇಲೆ ಮತ್ತೊಬ್ಬ ದೇವರಿದ್ದಾನೆಯೇ' ಎಂದು ಕೇಳಿದಳು. ಆಗ ಕೃಷ್ಣನು, "ಹೇ ಮೀರಾ, ಪರಮಾತ್ಮನಿದ್ದಾನೆ. ಆದರೆ ಅವನು ಯಾರಿಗೂ ದರ್ಶನ ಕೊಡುವುದಿಲ್ಲ. ನಾವು ಸಾಧನೆ ಮಾಡಿ ನೋಡಿದ್ದೇವೆ ಎಂದನು. ಮೀರಾಬಾಯಿ ಕಬೀರರ ಬಾಯಲ್ಲಿ 'ಆ ಪರಮಾತ್ಮನ ದರ್ಶನ ಮಾಡಿಸುವೆ, ಸತ್ಯ ಸಾಧನೆ ಮಾಡಿ ಅವನ ಹತ್ತಿರ ಸತ್ಯಲೋಕಕ್ಕೆ ಕಳುಹಿಸುವೆ' ಎನ್ನುವ ಮಾತನ್ನು ಕೇಳಿದ್ದಳು. ಮೀರಾಬಾಯಿ ಕೃಷ್ಣನಿಗೆ ಮತ್ತೆ ಪ್ರಶ್ನೆ ಹಾಕಿದಳು. "ನೀವು ಜೀವದ ಜನನ-ಮರಣವನ್ನು ಅಂತ್ಯ ಗೊಳಿಸುವಿರಾ." ಆಗ ಕೃಷ್ಣನು ಅದು ಸಾಧ್ಯವಿಲ್ಲವೆಂದನು. ಕಬೀರರೆಂದಿದ್ದರು, ನನ್ನ ಬಳಿ ಒಂದು ಭಕ್ತಿ ಮಂತ್ರವಿದೆ. ಅದರಿಂದ ಜನನ-ಮರಣವು ಶಾಶ್ವತವಾಗಿ ಅಂತ್ಯಗೊಳ್ಳುವುದು. ತತ್ವಜ್ಞಾನ ಮತ್ತು ತತ್ವದರ್ಶಿ ಸಂತನು ಸಿಕ್ಕ ಮೇಲೆ ಪರಮಾತ್ಮನ ಆ ಪರಮಧಾಮವನ್ನು ಹುಡುಕಬೇಕು. ಆ ಪರಮಧಾಮಕ್ಕೆ ಹೋದ ನಂತರ ಸಾಧಕನು ಮರಳಿ ಈ ಪ್ರಪಂಚಕ್ಕೆ ಬರುವುದಿಲ್ಲ. ಎನ್ನುವ ಮಾತನ್ನು ಕೇಳಿದ್ದಳು. ಆಗ ಮೀರಾ ಕೃಷ್ಣನನ್ನು ಕೇಳಿದಳು, "ಸಂತರು ಜನನ-ಮರಣವನ್ನು ಅಂತ್ಯಗೊಳಿಸುತ್ತೇನೆ ಎಂದಿದ್ದಾರೆ. ಹೇ ಕೃಷ್ಣ, ನಾನೇನು ಮಾಡಲಿ? ನನಗೆ ಪೂರ್ಣವಾದ ಮುಕ್ತಿ ಬೇಕು" ಎಂದಳು. ಆಗ ಶ್ರೀ ಕೃಷ್ಣನು, "ಮೀರಾ, ನೀನು ಹೋಗಿ ಆ ಸಂತನ ಆಶ್ರಯ ಪಡಿ, ನಿನ್ನ ಉದ್ಧಾರ ಮಾಡಿಕೋ. ನನಗೇನು ಜ್ಞಾನವಿತ್ತೋ ನಿನಗೆ ಹೇಳಿದ್ದೇನೆ" ಎಂದನು. ಮಾರನೆ ದಿನ ಮೀರಾ ದೇವಸ್ಥಾನಕ್ಕೆ ಹೋಗದೆ ನೇರವಾಗಿ ಸಂತರ ಬಳಿ ಹೋದಳು. ದೀಕ್ಷೆ ಪಡೆಯುವ ಇಚ್ಛೆ ಪ್ರದರ್ಶಿಸಿದಳು. ಕೃಷ್ಣನ ಜೊತೆ ನಡೆದ ಸಂವಾದವನ್ನು ಕಬೀರರಿಗೆ ತಿಳಿಸಿದಳು.

ಆ ದಿನಗಳಲ್ಲಿ ಅಸ್ಪೃಶ್ಯತೆ ಬಹಳವಿತ್ತು ರಾಠೋರ್‌ರವರು ತಮ್ಮನ್ನು ಶ್ರೇಷ್ಠರೆಂದು ತಿಳಿದಿದ್ದರು. ಮೀರಾಬಾಯಿಯನ್ನು ಪರೀಕ್ಷೆಗೆ ಒಡ್ಡಲು ಕಬೀರರು ಸಂತ ರವಿದಾಸರನ್ನು ಕರೆದು, 'ಮೀರಾ ರಾಠೋರ್‌ಗೆ ಪ್ರಥಮ ಮಂತ್ರ ದೀಕ್ಷೆ ನೀಡಿ' ಎಂದರು. ರವಿದಾಸರು ಕಬೀರರ ಆದೇಶವನ್ನು ಪಾಲಿಸಿದರು. ತಕ್ಷಣವೇ ಮೀರಾ ರವಿದಾಸರ ಬಳಿ ಹೋಗಿ ದೀಕ್ಷೆ ನೀಡಿ ಉದ್ಧಾರ ಮಾಡುವಂತೆ ವಿನಂತಿಸಿದಳು. ಸಂತ ರವಿದಾಸರು, "ಹೇ ಮೀರಾಬಾಯಿ, ನಾನು ಜಾತಿಯಲ್ಲಿ ಚಮ್ಮಾರ, ನೀನು ಠಾಕೂರರ ಮಗಳು. ನಾನು ದೀಕ್ಷೆ ಕೊಟ್ಟರೆ ಸಮಾಜದ ಜನರು ಏನೆನ್ನುವರು?" ಮೀರಾ ಜಾತಿಯನ್ನು ಅರ್ಪಿಸಲು ಸಿದ್ಧವಾಗಿದ್ದಳು. ಅವಳೆಂದಳು, "ಹೇ ಗುರುಗಳೇ, ನೀವೇ ನನ್ನ ತಂದೆ, ನಾನು ನಿಮ್ಮ ಮಗಳು. ಸಮಾಜ ಹಾಳಾಗಲಿ, ನನಗೆ ಮೊದಲು ದೀಕ್ಷೆ ಕೊಡಿ. ನಾಳೆ ನಾನು ನಾಯಿಯಾಗಿ ಹುಟ್ಟಿದರೆ ಆಗ ಈ ಠಾಕೂರ್ ಸಮಾಜ ನನ್ನನ್ನು ಉಳಿಸುವುದೇ?" ಎಂದು ಕೇಳಿದಳು. ಸತ್ಸಂಗದಲ್ಲಿ ದೊಡ್ಡ ಗುರುಗಳಾದ ಕಬೀರರು ಹೇಳಿದರು:-

ಕಬೀರ್, ಕುಲ್ ಕರನೀ ಕೆ ಕಾರಣೇ, ಹಂಸಾ ಗಯಾ ಬಿಗೋಯ್ ।
ತಬ್ ಕುಲ್ ಕ್ಯಾ ಕರ್ ಲೇಗಾ, ಜಬ್ ಚಾರ್ ಪಾವೋಂ ಕಾ ಹೋಯ್ ॥

ಶಬ್ದಾರ್ಥ :- ಕಬೀರ್ ಪರಮೇಶ್ವರರು ಎಚ್ಚರಿಸುತ್ತಿದ್ದಾರೆ, "ಹೇ ಭಕ್ತ (ಸ್ತ್ರೀ/ಪುರುಷ) ಯಾರು ಕುಲ, ಕುಟುಂಬ ಅಥವಾ ಪ್ರಪಂಚಕ್ಕೆ ಅಂಜಿ ಭಕ್ತಿ ಮಾಡುವುದಿಲ್ಲವೋ, ಯಾರು ಮನೆಯವರು, ಕುಟುಂಬದವರು ಅಥವಾ ಪ್ರಪಂಚದ ವ್ಯಕ್ತಿಗಳು ನನ್ನನ್ನು ನೋಡಿ ತಮಾಷೆ ಮಾಡುತ್ತಾರೆ ಎಂದು ಹೇಳುವರೋ, ಯಾರು ದೀಕ್ಷೆ ಪಡೆದು ಸಾಷ್ಟಾಂಗ ನಮಸ್ಕಾರ ಮಾಡಲು ನಿನಗೆ ನಾಚಿಕೆಯಾಗುವುದಿಲ್ಲವೇ? ಬೇರೆ ದೇವಿ ದೇವತೆಗಳ ಪೂಜೆ ಮಾಡುವುದಿಲ್ಲವೇ? ಶ್ರಾದ್ಧ-ಪಿಂಡ ಪ್ರದಾನ ಮಾಡುವುದಿಲ್ಲವೇ? ನಿನಗೆ ನಾಚಿಕೆಯಾಗಬೇಕು, ಎಂದೆಲ್ಲಾ ಹೇಳುವರೋ, ಅವರು ತಮ್ಮ ಮಾನವ ಜೀವನವನ್ನು ನಾಶ ಮಾಡಿಕೊಂಡಿದ್ದಾರೆಂದು ಹೇಳಬಹುದು. ಭಕ್ತಿ ಮಾಡದೆ ಇದ್ದ ಕಾರಣ,

ನಾಲ್ಕು ಕಾಲುಗಳುಳ್ಳ ಪಶು ಎಂದರೆ ಕತ್ತೆ, ನಾಯಿ, ಹಂದಿ, ಎತ್ತು ಮುಂತಾದ ಪ್ರಾಣಿಗಳಾಗಿ ಹುಟ್ಟುವಿರಿ. ಆಗ ಈ ಕುಲದ, ಈ ಕುಟುಂಬದ ವ್ಯಕ್ತಿಗಳು ನಿಮ್ಮನ್ನು ಹೇಗೆ ಕಾಪಾಡಬಲ್ಲರು. ಭಕ್ತಿಯು ನಿಮ್ಮನ್ನು ಉಳಿಸಬಹುದಿತ್ತು. ಆದರೆ ನೀವು ಭಕ್ತಿ ಮಾಡಲಿಲ್ಲ, ಆದ್ದರಿಂದ ಭಕ್ತಿಯಿಂದ ಇರುವುದು ಉತ್ತಮ.

ಸಂತ ರವಿದಾಸರು ಎದ್ದು ಕಬೀರರ ಬಳಿ ಬಂದು ಎಲ್ಲವನ್ನೂ ತಿಳಿಸಿದರು. ಆಗ ಪರಮಾತ್ಮರೆಂದರು "ತಡ ಮಾಡಬೇಡ, ಆ ಆತ್ಮವನ್ನು ನಿನ್ನ ವಶಕ್ಕೆ ಪಡಿ." ಎಂದರು. ರವಿದಾಸರು ತಕ್ಷಣವೇ ಮೀರಾಳಿಗೆ ಪ್ರಥಮ ಮಂತ್ರದಲ್ಲಿ ಐದು ಮಂತ್ರಗಳನ್ನು ನೀಡಿದರು. {ಈ ಐದು ಮಂತ್ರಗಳು ಕಮಲ(ಚಕ್ರ)ಗಳನ್ನು ಅರಳಿಸುವಂತಹದ್ದಾಗಿದೆ. ರಾಧಾಸ್ವಾಮಿ ಪಂಥ ಹಾಗೂ ದಾಮಾಖೇಡ ಪೀಠದವರು ಕೊಡುವಂತಹದ್ದಾಗಿಲ್ಲ. ಈ ಮಂತ್ರಗಳು ಅವುಗಳಿಗಿಂತ ಭಿನ್ನವಾಗಿವೆ ಹಾಗೂ ಮೋಕ್ಷಕ್ಕೆ ಸಹಾಯಕವಾಗಿವೆ}ಮೀರಾಬಾಯಿಗೆ ಹೇಳಿದರು. 'ಇದು ಇವರ ಪೂಜೆಯಲ್ಲ, ಸಾಧನೆಯಾಗಿದೆ'. ಇವರ ಲೋಕದಲ್ಲಿ ಇರಲು, ತಿನ್ನಲು–ಕುಡಿಯಲು ಭಕ್ತಿ ಎನ್ನುವ ಯಾವ ಹಣವಿದೆಯೋ ಆ ಹಣ ಮಂತ್ರದಿಂದ ಮಾತ್ರ ಸಿಗಲು ಸಾಧ್ಯ. ಇಲ್ಲಿಯ ಋಣ ಮುಗಿಯುತ್ತದೆ. ನಂತರದಲ್ಲಿ ಮೋಕ್ಷವನ್ನು ಪಡೆಯುವವರಾಗುತ್ತಾರೆ' ಎಂದರು.

ಪರಮಾತ್ಮ ಕಬೀರರು ಮತ್ತು ರವಿದಾಸರು ಒಂದು ತಿಂಗಳವರೆಗೆ ಅಲ್ಲೇ ತಂಗಿದ್ದರು. ಮೀರಾಬಾಯಿ ಹಗಲಿರುಳು ಸತ್ಸಂಗಕ್ಕೆ ಬರಲು ಪ್ರಾರಂಭಿಸಿದಳು. ಏಕೆಂದರೆ ರಾತ್ರಿಯ ವೇಳೆಯೇ ಸತ್ಸಂಗವು ಹೆಚ್ಚಾಗಿ ನಡೆಯುತ್ತಿತ್ತು. ಒಬ್ಬೊಬ್ಬರಿಗೆ ಬೆಳಿಗ್ಗೆ ಸಮಯ ಸಿಗುತ್ತಿತ್ತು, ಒಬ್ಬೊಬ್ಬರಿಗೆ ರಾತ್ರಿ ಬಿಡುವು ಸಿಗುತ್ತಿತ್ತು. ಮೀರಾಳ ಮೈದುನ ಮೀರಾಬಾಯಿಯು ರಾತ್ರಿಯ ವೇಳೆ ಮನೆ ಬಿಟ್ಟು ಹೋಗುತ್ತಿದ್ದುದನ್ನು ನೋಡಿ ಕೋಪಗೊಂಡನು. ಆದರೆ ಮೀರಾಳನ್ನು ತಡೆಯುವುದು ಬಿರುಗಾಳಿಯನ್ನು ತಡೆಯುವಷ್ಟೇ ಕಷ್ಟವಾಗಿತ್ತು. ಆದ್ದರಿಂದ ಮೀರಾಳ ತಾಯಿಯನ್ನು ಕರೆದು ಅವಳಿಗೆ ಬುದ್ಧಿ ಹೇಳುವಂತೆ ಹೇಳಿದನು. ಮೀರಾಳ ತಾಯಿಯು ಮೀರಾಳಿಗೆ ಬುದ್ಧಿ ಹೇಳಿದಳು. ಆದರೆ ಮೀರಾ ಸತ್ಸಂಗಕ್ಕೆ ಹೋದರೆ ಸಿಗುವ ಪ್ರಯೋಜನದ ಬಗ್ಗೆ ತಿಳಿಸಿ ಹೇಳಿದಳು.

"ಶಬ್ದ"

ಸತಸಂಗ್ ಮೆಂ ಜಾನಾ ಮೀರಾಂ ಛೋಡ್ ದೆ ಎ,
ಆಯೆ ಮ್ಹಾರೀ ಲೋಗ್ ಕರ್‍ಯೆಂ ತಕರಾರ್ ।
ಸತಸಂಗ್ ಮೆಂ ಜಾನಾ ಮೇರಾ ನಾ ಛೂಟ್ಯೆ ರೀ,
ಚಾಹೆ ಜಲಕ್ಯೆ ಮರೋ ಸಂಸಾರ್ ॥ಟೇಕ್॥
ಥಾರೆ ಸತಸಂಗ್ ಕೆ ರಾಹೆ ಮ್ಯೆಂ ಐ, ಆಹೆ ವಹಾಂ ಪ್ಯೆ ರಹತೆ ಹ್ಯೆಂ ಕಾಲೇ ನಾಗ್,
ಕೋಯೇ–ಕೋಯೇ ನಾಗ್ ತನ್ಯೆ ಡಸ್ ಲೇವ್ಯೆ ।
ಜಬ್ ಗುರು ಮ್ಹಾರೆ ಮೆಹರ್ ಕರ್‍ಯೆ ರೀ,
ಆರೀ ವ್ಯೆ ತೋ ಸರ್ಪ್ ಗಂಡೆವೆ ಬನ್ ಜಾವ್ಯೆಂ ॥1॥
ಥಾರೇ ಸತಸಂಗ್ ಕೆ ರಾಹೇ ಮೆಂ ಐ, ಆಹೆ ವಹಾಂ ಪ್ಯೆ ರಹತೆ ಹ್ಯೆಂ ಬಬರೀ ಶೇರ್,
ಕೋಯೇ–ಕೋಯೇ ಶೇರ್ ತನ್ಯೆ ಖಾ ಲೇವ್ಯೆ ।
ಜಬ್ ಗುರುವಾಂ ಕೀ ಮೆಹರ್ ಫಿರ್‍ಯೆ ರೀ,
ಆರೀ ವ ತೋ ಶೇರಾಂ ಕೆ ಗೀದಡ್ ಬನ್ ಜಾವ್ಯೆಂ ॥2॥
ಥಾರೆ ಸತಸಂಗ್ ಕೆ ಬೀಚ್ ಮೆಂ ಐ, ಆಹೆ ವಹಾಂ ಪ್ಯೆ ರಹತೆ ಹ್ಯೆಂ ಸಾಧು ಸಂತ್,
ಕೋಯೇ–ಕೋಯೇ ಸಂತ್ ತನ್ಯೆ ಲೆ ರಮ್ಯೆ ಎ ।
ತೇರೆ ರೀ ಮನ್ ಮ್ಯೆಂ ಮಾತಾ ಪಾಪ್ ಹ್ಯೆ ರೀ,

ಸಂತ್ ಮೇರೆ ಮಾಂ ಬಾಪ್ ಹೈಂ ರೀ,
ಆ ರೀ ಯೇ ತೋ ಕರ್ ದೇಂಗೆ ಬೇಡಾ ಪಾರ್ ॥3॥

ವೋ ತೋ ಜಾತ ಚಮಾರ್ ಹೈ ಐ, ಇಸಮೆ ಮ್ಹಾರಿ ಹಾರ ಹೈ ಎ ।
ತೇರೆ ರೀ ಲೆಖೈ ಮಾತಾ ಚಮಾರ ಹೈ ರೀ, ಮೇರಾ ಸಿರಜನ್‌ಹಾರ್ ಹೈ ರೀ ।
ಆರೀ ವೈ ತೋ ಮೀರಾಂ ಕೆ ಗುರು ರವಿದಾಸ್ ॥4॥

ಶಬ್ದಾರ್ಥ :– ಮೀರಾಬಾಯಿಯ ತಾಯಿಯು ಹೀಗೆಂದಳು, "ಮೀರಾ ನೀನು ಸತ್ಸಂಗಕ್ಕೆ ಹೋಗುವುದನ್ನು ನಿಲ್ಲಿಸು. ಪ್ರಪಂಚದಲ್ಲಿ ಎಲ್ಲರೂ ನಮ್ಮನ್ನು ತಪ್ಪಾಗಿ ತಿಳಿದುಕೊಳ್ಳುತ್ತಾರೆ. ಆಗ ಮೀರಾ ಹೇಳಿದಳು, "ಅಮ್ಮಾ, ನಾನು ಸತ್ಸಂಗಕ್ಕೆ ಹೋಗುವುದನ್ನು ನಿಲ್ಲಿಸುವುದಿಲ್ಲ. ಬೇಕಾದರೆ ಪ್ರಪಂಚ ಹೊಟ್ಟೆ ಉರಿದುಕೊಂಡು ಸಾಯಲಿ". ಆಗ ಮೀರಾಳ ತಾಯಿಯು ಅವಳಿಗೆ ಭಯಹುಟ್ಟಿಸಲು ಹೀಗೆಂದಳು, "ನೀನು ಸತ್ಸಂಗ ಕೇಳಲು ಯಾವ ದಾರಿಯಲ್ಲಿ ಹೋಗುವೆಯೋ, ಆ ದಾರಿಯಲ್ಲಿ ಬರೀ ಹಾವು, ಸಿಂಹಗಳೇ ಓಡಾಡುತ್ತವೆ. ಅವು ನಿನ್ನನ್ನು ಸಾಯಿಸಿಬಿಡುತ್ತವೆ." ಆಗ ಮೀರಾ ಹೀಗೆಂದು ಉತ್ತರಿಸಿದಳು, "ಗುರುಗಳು ಎಷ್ಟು ಸಮರ್ಥರೆಂದರೆ, ಅವರು ಕೃಪೆ ತೋರಿದರೆ ಸಿಂಹವು ಸಹ ನರಿಯಂತೆ ವರ್ತಿಸುತ್ತದೆ. ಹಾವುಗಳು ಎರೆಹುಳುಗಳಂತಾಗಿ ಬಿಡುತ್ತವೆ. ಎರೆಹುಳುಗಳು 6–8 ಇಂಚು ಉದ್ದವಿದ್ದು ಅರ್ಧ ಇಂಚು ದಪ್ಪಗಿರುತ್ತವೆ. ಅವು ಕಚ್ಚುವುದಿಲ್ಲ". ಆಗ ಮೀರಾಳ ತಾಯಿಯು ಉತ್ತರಿಸಿದಳು, "ಪ್ರವಚನ ಕೇಳುವ ಜಾಗದಲ್ಲಿ ಕೆಲವು ಯುವಭಕ್ತರೂ ಇರುತ್ತಾರೆ ಯಾರಾದರೂ ನಿನ್ನನ್ನು ಎಲ್ಲಿಗಾದರೂ ಕರೆದುಕೊಂಡು ಹೋಗಿ ತಪ್ಪು ಕೆಲಸ ಮಾಡಬಹುದು." ಆಗ ಮೀರಾ, "ಅಮ್ಮಾ , ನಿಮ್ಮ ಮನಸ್ಸಿನಲ್ಲಿ ದೋಷವಿದೆ. ಆದ್ದರಿಂದ ನಿಮ್ಮ ಮನಸ್ಸಿನಲ್ಲಿ ಇಂಥಾ ವಿಚಾರಗಳು ಬರುತ್ತಿವೆ. ಅಮ್ಮಾ, ಆ ಸಂತರು ಹಾಗೂ ಭಕ್ತರು ನನಗೆ ತಂದೆ ತಾಯಿಗಳ ಸಮಾನ. ಅವರು ಎಂದಿಗೂ ತಪ್ಪು ಕೆಲಸ ಮಾಡಲಾರರು" ಎಂದಳು. ಮೀರಾಳ ತಾಯಿಯು ಅಸ್ಪೃಶ್ಯತೆಯ ಕಾರಣ ನೀಡಿ ಮೀರಾಳನ್ನು ತಡೆಯಲು ನೋಡಿದಳು. ಹಾಗೂ ಹೀಗೆಂದಳು "ಮೀರಾ ! ನಿನ್ನ ಗುರುಗಳಾದ ರವಿದಾಸರು ಅನುಸೂಚಿತ ಜನ ಜಾತಿಯವರಾದ ಚಮ್ಮಾರರು, ಇದರಿಂದ ನಮ್ಮ ರಜಪೂತರಿಗೆ ಅವಮಾನವಾಗುತ್ತಿದೆ, ಸತ್ಸಂಗಕ್ಕೆ ಹೋಗುವುದನ್ನು ನಿಲ್ಲಿಸು". ಆಗ ಮೀರಾ, "ಅಮ್ಮಾ, ನಿಮ್ಮ ದೃಷ್ಟಿಯಲ್ಲಿ ನನ್ನ ಗುರುಗಳು ಅನುಸೂಚಿತ ಜನಜಾತಿಯ ಚಮ್ಮಾರರು, ಆದರೆ ನನಗೆ ಅವರೇ ಪರಮಾತ್ಮ, ನಾನು ಅವರ ಮಗಳು, ಅವರು ನನ್ನ ತಂದೆ, ನಾನು ಸತ್ಸಂಗಕ್ಕೆ ಹೋಗುವುದನ್ನು ನಿಲ್ಲಿಸಲಾರೆ?" ಎಂದಳು.

ಈ ಕತೆ ಕೇಳಿದ ರಾಮೋವಿನ ಕಣ್ಣು ತೆರೆಯಿತು. ಮಾರನೇ ದಿನ ಕಸ್ತೂರಿಯ ಜೊತೆ ತಾನೂ ಸತ್ಸಂಗಕ್ಕೆ ಹೋದಳು. ಒಂದೇ ಸತ್ಸಂಗದಿಂದ ಪ್ರಭಾವಿತಳಾಗಿ ದೀಕ್ಷೆ ಪಡೆದಳು. ನಂತರ ಒಂದು ದಿನದ ಊಟವನ್ನು ತರುವುದಾಗಿ ಹೇಳಿದಳು. ಭಕ್ತರೆಲ್ಲಾ ನಾವು ಸೇವೆಯಿಂದ ಹಿಂದೆ ಸರಿಯುವುದಿಲ್ಲವೆಂದರು. ರಾಮೋಗೆ ತಾನು ಏನೂ ತರಲಿಲ್ಲವೆಂದು ಬಹಳ ದುಃಖವಾಯಿತು. ಆಗ ಕಸ್ತೂರಿಯು, 'ಮುಂದಿನ ಸಲ ಬೆಳಗ್ಗಿನ ಊಟ ನಾನು ತಂದರೆ, ರಾತ್ರಿಯ ಊಟ ನೀವು ತನ್ನಿ' ಎಂದಳು. ರಾಮೋಗೆ ಬಹಳ ಸಂತಸವಾಯಿತು. ನಂತರ ಮರುದಿನ ಪಂಚಭಕ್ಷ್ಯ ಪರಮಾನ್ನಗಳನ್ನು, ರೊಟ್ಟಿಗಳನ್ನು ಮಾಡಿಕೊಂಡು ಸಿದ್ಧವಾದಳು, ಆದರೆ ದೇವರ ಲೀಲೆ ಬಲ್ಲವರ್‍ಯಾರು? ಇದ್ದಕ್ಕಿದ್ದಂತೆ ಅವಳಿಗೆ ಜ್ವರ ಬಂದುಬಿಟ್ಟಿತು. ದೇಹ ಕೆಂಡದಂತೆ ಸುಡಲಾರಂಭಿಸುತು, ಅಷ್ಟರಲ್ಲಿ ಅವಳ ಮಗ ಮನೆಗೆ ಬಂದನು. ಆಗ ಅವಳು ಮಗನನ್ನು ಕರೆದು, 'ಮಗನೇ, ನಾನು ಈ ದಿನ ರಾತ್ರಿಯ ಊಟವನ್ನು ಗುರುಗಳ ಆಶ್ರಮಕ್ಕೆ ಕಳುಹಿಸಲು ಒಪ್ಪಿಕೊಂಡಿರುವೆ, ಕಸ್ತೂರಿ ಅಕ್ಕನ ಬಳಿ ಕಾಡಿ, ಬೇಡಿ ಈ ಸೇವೆಯನ್ನು ಪಡೆದಿರುವೆ. ಊಟವೆಲ್ಲಾ ಸಿದ್ಧವಾಗಿದೆ. ಆದರೆ ನನಗೆ ಜ್ವರ ಬಂದು ಮೇಲೆ ಏಳಲು ಆಗುತ್ತಿಲ್ಲ,

ಇದೊಂದು ರಾತ್ರಿ ನೀನು ನನಗಾಗಿ ಈ ಸಹಾಯ ಮಾಡು. ಈ ಊಟವನ್ನು ತೆಗೆದುಕೊಂಡು ಹೋಗಿ ಗುರುಗಳಿಗೆ ಹಾಗೂ ಭಕ್ತರಿಗೆ ಬಡಿಸಿ ಬಾ. ಇದೊಂದು ಕೆಲಸ ಮಾಡು. ನಾನು ಸಾಯುವವರೆಗೆ ನಿನ್ನ ಸಹಾಯ ಮರೆಯುವುದಿಲ್ಲ" ಎಂದಳು. ಮಗ ಮದ್ಯವ್ಯಸನಿಯಾಗಿದ್ದನು. ಅವನು ತಾಯಿಯನ್ನು ಬಯ್ಯಲು ಪ್ರಾರಂಭಿಸಿದನು. ರಾಮೋ ಪರಿಪರಿಯಾಗಿ ಬೇಡಿಕೊಂಡಾಗ ವಿಧಿ ಇಲ್ಲದೆ ತಾಯಿಗೆ ಬಯ್ಯುತ್ತಾ ಊಟವನ್ನು ತೆಗೆದುಕೊಂಡು ಗುರುಗಳ ಬಳಿ ಬಂದನು. ಅಲ್ಲಿರುವ ಪರಿಚಿತರು ಗುರುಗಳಿಗೆ ಅವನ ಪರಿಚಯ ಮಾಡಿಕೊಟ್ಟರು. ರಾಮೋ ಈ ಮೊದಲೇ 'ತನ್ನ ಮಗ ಒಬ್ಬ ಮದ್ಯ ವ್ಯಸನಿ' ಎಂದು ಗುರುಗಳಿಗೆ ತಿಳಿಸಿದ್ದಳು. ಹಾಗಾಗಿ ಗುರುಗಳು ಅವನನ್ನು ಕರೆದು ಒಂದೆರಡು ಒಳ್ಳೆಯ ಮಾತುಗಳನ್ನು ಹೇಳಬೇಕೆಂದು ಬಯಸಿದರು, ಊಟವನ್ನು ಎಲ್ಲರಿಗೂ ಬಡಿಸುವಂತೆ ಹೇಳಿದರು. ಅವನು ಬಡಿಸುವಾಗ ಗುರುಗಳು ಒಳ್ಳೆಯ ಮಾತನ್ನು ಅಂದರೆ ಬುದ್ಧಿ ಹೇಳಬೇಕೆಂದು ನಿರ್ಧರಿಸಿದರು.

ಆದರೆ ಆ ಕರ್ಮಪಾಲನಿಗೆ ಬಡಿಸುವ ವ್ಯವಧಾನವಿರಲಿಲ್ಲ. ಅವನು ಆ ದಿನ ರಾತ್ರಿ ತನ್ನ ಮಿತ್ರರ ಜೊತೆ ಸೇರಿ ರಾಜನ ಅರಮನೆಗೆ ಕನ್ನ ಹಾಕಿ ರಾಣಿಯರ ಒಡವೆಗಳನ್ನು ದೋಚುವ ಉಪಾಯ ಹಾಕಿದ್ದನು. ಹಾಗಾಗಿ ರಾತ್ರಿ ತನ್ನ ಗೆಳೆಯರನ್ನು ಸೇರಬೇಕೆಂಬ ತವಕದಲ್ಲಿದ್ದನು. ಗುರುಗಳ ಮಾತಿಗೆ ಸಿಟ್ಟಾಗಿ, ಸಿಡುಕುತ್ತಾ, ಬೇರೆ ದಾರಿ ಕಾಣದೆ ಊಟ ಬಡಿಸಲು ಪ್ರಾರಂಭಿಸಿದನು. ಗುರುಗಳು ಅವನನ್ನು ಕುರಿತು, "ಮಗನೇ, ತಂದೆ-ತಾಯಿಗಳ ಸೇವೆ ಮಾಡಬೇಕು, ಅವರ ಮಾತನ್ನು ಕೇಳಬೇಕು. ಮೋಕ್ಷ ಪ್ರಾಪ್ತಿಗಾಗಿ ಭಕ್ತಿಯಿಂದಿರಬೇಕು," ಎಂದು ಬುದ್ಧಿ ಹೇಳುತ್ತಿದ್ದರು. ಆದರೆ ಅವನಿಗೆ ಕ್ಷಣ ಕ್ಷಣವೂ ಅಸಹನೆಯಾಗುತ್ತಿತ್ತು. ಗುರುಗಳಿಗೆ ಅವನೆಂದನು. "ಗುರುಗಳೇ, ಬೇಗ ಊಟ ಮಾಡಿ, ನನಗೆ ನಿಮ್ಮ ಬುದ್ಧಿಮಾತಿನ ಅವಶ್ಯಕತೆ ಇಲ್ಲ." ಗುರುಗಳಿಗೆ ಬಹಳ ಬೇಸರವಾಯಿತು. ಈ ರಾಕ್ಷಸನಿಂದ ಪಾಪ ರಾಮೋಳಿಗೆ ಸುಖವಿಲ್ಲ ಎಂದು ಮನಸ್ಸಿನಲ್ಲೇ ಅಂದುಕೊಂಡರು. ಊಟಮಾಡಿದ ತಕ್ಷಣ ಬಟ್ಟಲುಗಳನ್ನೂ ತೊಳೆಯದೆ, ಬೇಗ ಬೇಗ ಜೋಡಿಸಿಕೊಂಡು ಮನೆಯ ಕಡೆಗೆ ನಡೆದನು. ಅರ್ಧ ದೂರ ಹೋಗಿರಬಹುದು, ಅಷ್ಟರಲ್ಲಿ ಇದ್ದಕ್ಕಿದ್ದಂತೆ ಅವನ ಕಾಲಿಗೆ ಒಂದು ದೊಡ್ಡ ಮೊಳೆ ಚುಚ್ಚಿಕೊಂಡಿತು. ರಾತ್ರಿಯ ಕತ್ತಲಲ್ಲಿ ಕಾಣಲಿಲ್ಲ ಸ್ವಲ್ಪ ದೂರ ನಡೆದ ಮೇಲೆ ಆ ಮೊಳೆ ಕಾಲಿನ ಒಳಗೆ ಹೊರಟು ಹೋಯಿತು, ನೋವನ್ನು ತಾಳಲಾರದೆ ಕುಂಟುತ್ತಾ ಅವನು ಮನೆಗೆ ಬಂದು ತನ್ನ ತಾಯಿಯನ್ನು ಹಿಗ್ಗಾ ಮುಗ್ಗಾ ಬಯ್ದನು. "ಈ ದಿನ ನಿನ್ನ ಗುರುವಿನ ದರ್ಶನವಾಯಿತು. ಈ ದಿನವೇ ನನ್ನ ಅದೃಷ್ಟ ಕೈ ಕೊಟ್ಟಿತು, ನೋಡು ನನ್ನ ಕಾಲಿಗೆ ಮೊಳೆ ಚುಚ್ಚಿ ಅಸಾಧ್ಯ ನೋವಾಗುತ್ತಿದೆ. ನನಗೆ ನಡೆಯಲೇ ಆಗುತ್ತಿಲ್ಲ. ಇನ್ನೊಂದು ಸಾರಿ ಸತ್ತರೂ ಆ ಆಶ್ರಮದ ಕಡೆ ಮುಖ ಹಾಕಿ ಮಲಗುವುದಿಲ್ಲ" ಎಂದನು. ರಾಮೋ ನಿಧಾನವಾಗಿ ಎದ್ದು ಬಂದು ಅವನ ಕಾಲನ್ನು ನೀರಿನಿಂದ ತೊಳೆದು ಕೊಳೆಯನ್ನೆಲ್ಲಾ ತೆಗೆದು, ಒಂದು ಬಟ್ಟೆಯಿಂದ ಕಟ್ಟಿದಳು. ಮಾರನೇ ದಿನ ಮೊಳೆಯನ್ನು ತೆಗೆಸುವುದಾಗಿ ಹೇಳಿದಳು. ಮಗ ರಾತ್ರಿಯೆಲ್ಲಾ ಅಮ್ಮನನ್ನು ಬಯ್ಯುತ್ತಿದ್ದನು. ತನ್ನ ದುರಾದೃಷ್ಟವನ್ನು ಹಳಿಯುತ್ತಾ ಹೊರಳಾಡುತ್ತಿದ್ದನು.

ಬೆಳಗಾಯಿತು, ರಾಮೋ ತನ್ನ ಮಗನ ಕಾಲಿಗೆ ಚುಚ್ಚಿದ್ದ ಮೊಳೆಯನ್ನು ತೆಗೆಸಿದಳು. ಅವಳಿಗೆ ಜ್ವರ, ಇಳಿದಿತ್ತು. ತನ್ನ ಕೆಲಸಕಾರ್ಯದಲ್ಲಿ ತೊಡಗಿಕೊಂಡಳು. ಸ್ವಲ್ಪ ಸಮಯದಲ್ಲೇ ರಾಜನ ಸೇವಕನು ಡಂಗುರ ಸಾರುತ್ತಾ ಬರುತ್ತಿದ್ದನು. ಆ ಡಂಗುರ ಯಾರದೋ ಸಾವಿನ ಸುದ್ದಿಯನ್ನು ತಿಳಿಸುವಂಥಾದ್ದಾಗಿತ್ತು. ಊರಿನ ಜನರೆಲ್ಲಾ ಆ ಸುದ್ದಿಯನ್ನು ತಿಳಿಯಲು ತಮ್ಮ ತಮ್ಮ ಮನೆಗಳ ಮುಂದೆ ಬಂದು ನಿಂತರು. ಆ ಸೇವಕನು ಸುದ್ದಿಯನ್ನು ತಿಳಿಸುತ್ತಾ, ಡಂಗುರ ಸಾರುತ್ತಾ ಮುಂದೆ ಮುಂದೆ ನಡೆಯುತ್ತಿದ್ದನು, ಕೆಲ ಸೇವಕರು ನಾಲ್ಕು ಜನರನ್ನು ಎಳೆದುಕೊಂಡು ಅವನ ಹಿಂದೆ ಬರುತ್ತಿದ್ದರು. ಆ ನಾಲ್ಕು ಜನರನ್ನು ನೋಡಿದೊಡನೆ ರಾಮೋವಿನ ಮಗನಾದ ಕರ್ಮಪಾಲನಿಗೆ ಆಘಾತವಾಯಿತು. ಅವನು ಹಿಂದಿನ ರಾತ್ರಿ ಅವರ ಜೊತೆ ಸೇರಿ ದರೋಡೆ ಮಾಡುವವನಿದ್ದನು, ಆ ನಾಲ್ಕು ಜನ ಗೆಳೆಯರು ದರೋಡೆ

ಮಾಡಲು ಅರಮನೆಗೆ ಹೋಗಿ ಕಾವಲು ಭಟರ ಕೈಗೆ ಸಿಕ್ಕಿ ಹಾಕಿಕೊಂಡಿದ್ದರು. ರಾಜನು ಅವರಿಗೆ ಮರಣದಂಡನೆ ಶಿಕ್ಷೆಯನ್ನು ವಿಧಿಸಿದ್ದನು. ಇದನ್ನು ಕೇಳಿದ ಊರ ಜನ ಆ ನಾಲ್ವರು ದರೋಡೆಕೋರರಿಗೆ ಹಿಡಿ ಶಾಪ ಹಾಕಿದರು. ಅವರಿಗೆ ಸರಿಯಾದ ಶಿಕ್ಷೆಯಾಯಿತು ಎಂದರು. ಕರ್ಮಪಾಲನಿಗೆ ಬಾಯಿಂದ ಮಾತೇ ಬರಲಿಲ್ಲ. ಭಯಭೀತನಾಗಿ ನಿಂತಿದ್ದನು. ನಂತರ ರಾಮೋವಿನ ಹಿಂದೆ ಹೋಗಿ ಅವಳ ಕಾಲಿಗೆ ಬಿದ್ದು ಅಳಲಾರಂಭಿಸಿದನು. ರಾಮೋವಿಗೆ ತಲೆ ಬುಡ ಅರ್ಥವಾಗಲಿಲ್ಲ. ಅವಳು ಮಗನಿಗೆ, "ಯಾಕೆ ಮಗನೇ, ಮೊಳೆ ಚುಚ್ಚಿದ್ದ ಜಾಗ ತುಂಬಾ ನೋವಾಗುತ್ತಿದೆಯಾ? ಮೊಳೆ ತೆಗೆಸಿಯಾಯ್ತಲ್ಲ? ಒಂದೆರೆಡು ದಿನದಲ್ಲಿ ಕಡಿಮೆಯಾಗುತ್ತದೆ" ಎಂದಳು. ಆಗ ಕರ್ಮಪಾಲನು, ಅಮ್ಮ ಈ ದಿನ ನಿನ್ನ ಮಗನು ನೇಣುಗಂಬ ಏರಬೇಕಿತ್ತು. ನಿನ್ನ ಗುರುಗಳು ಅದನ್ನು ತಪ್ಪಿಸಿದರು" ಎಂದು ಅಳಲಾರಂಭಿಸಿದನು. ಆಗ ರಾಮೋ, 'ಏಕೆ ಮಗನೇ, ನೀನೇನು ಕಳ್ಳನೇ, ನೀನು ಏಕೆ ನೇಣುಗಂಬ ಏರುವೆ?' ಎಂದಳು. ಆಗ ಕರ್ಮಪಾಲನು, 'ಹೌದಮ್ಮ ನಾನು ಒಬ್ಬ ಕಳ್ಳ, ದರೋಡೆಕೋರ, ನಿನ್ನೆ ರಾತ್ರಿ ಆ ನಾಲ್ಕು ಜನರ ಜೊತೆ ಸೇರಿ ನಾನು ಅರಮನೆಗೆ ಕಳ್ಳತನಕ್ಕೆ ಹೋಗುವವನಿದ್ದೆ, ನಿನ್ನಿಂದ ಹಾಗೂ ಆ ಗುರುಗಳಿಂದ ಅದು ತಪ್ಪಿಹೋಯಿತು. ನನ್ನಿಂದ ತಪ್ಪಾಗಿದೆ, ಈಗ ನನಗೆ ಬುದ್ಧಿ ಬಂದಿದೆ. ನಾನು ಸತ್ಸಂಗಕ್ಕೆ ಬರುತ್ತೇನೆ. ನೀನು ಹೇಳಿದ ಕೆಲಸವನ್ನೆಲ್ಲಾ ಮಾಡುತ್ತೇನೆ. ಇನ್ನೆಂದಿಗೂ ನಿನಗೆ ಕಷ್ಟ ಕೊಡುವುದಿಲ್ಲ" ಎಂದು ಗೋಳಾಡಿದನು.

ಆಗ ರಾಮೋವಿಗೆ ಸಂತಸದಿಂದ ಕಣ್ಣಲ್ಲಿ ನೀರು ಬಂತು. ತಕ್ಷಣವೇ ಅವಳು ಮಗನನ್ನು ಕರೆದುಕೊಂಡು ಕಸ್ತೂರಿಯ ಮನೆಗೆ ಬಂದು ನಡೆದಿದ್ದನ್ನೆಲ್ಲಾ ತಿಳಿಸಿದಳು. ಆಗ ಕಸ್ತೂರಿಯು ಸಂತಸಗೊಂಡು ತಕ್ಷಣವೇ ಅವರನ್ನು ಕರೆದುಕೊಂಡು ಗುರುವಿನ ಆಶ್ರಮಕ್ಕೆ ಬಂದು ಅವರಿಗೆ ಧನ್ಯವಾದವನ್ನು ತಿಳಿಸಿದಳು. ಕರ್ಮಾಪಾಲನು ಪರಿವರ್ತನೆಗೊಂಡು ಸತ್ಸಂಗಿಯಾದನು, ನಂತರದಲ್ಲಿ ಒಂದು ಒಳ್ಳೆಯ ಕುಟುಂಬದ ಹುಡುಗಿಯ ಜೊತೆ ಅವನ ಮದುವೆಯಾಯಿತು. ಎಲ್ಲರೂ ಸತ್ಸಂಗಕ್ಕೆ ಬಂದು ತಮ್ಮ ಜೀವನವನ್ನು ಉದ್ಧಾರ ಮಾಡಿಕೊಂಡರು. ರಾಮೋ ಆಶ್ರಮದ ಸತ್ಸಂಗ ಕೇಳುತ್ತಾ ಕೇಳುತ್ತಾ, ಸತ್ಸಂಗಕ್ಕೆ ತನ್ನನ್ನು ಅರ್ಪಿಸಿಕೊಂಡಳು. ಅಲ್ಲಿಯೇ ಇದ್ದು ಬೇರೆ ಭಕ್ತರ ಸೇವೆ ಮಾಡುತ್ತಿದ್ದಳು. ಬೆಳಿಗ್ಗೆಯೇ ಆಶ್ರಮಕ್ಕೆ ಬಂದು ಪಾತ್ರೆ ತೊಳೆಯುವುದು, ಗುರುಗಳ ಬಟ್ಟೆ ಒಗೆಯುವುದು, ಮುಂತಾದ ಸೇವಾ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡು ತಡರಾತ್ರಿಯವರೆಗೆ ಆಶ್ರಮದಲ್ಲೇ ಇದ್ದು ನಂತರ ಮನೆಗೆ ತೆರಳುತ್ತಿದ್ದಳು. ಚಳಿಗಾಲದ ಒಂದು ದಿನ, ಗುರುಗಳು ರಾಮೋನನ್ನು ಕರೆದು, "ಮಗಳೇ, ನೀನಾಗಲೇ ನದಿಗೆ ಹೋಗಿ ಈ ಬಟ್ಟೆಗಳನ್ನು ಒಗೆದು, ಒಣಗಿಸಿಕೊಂಡು ಬಾ, ತಡವಾದರೆ ಬಟ್ಟೆ ಒಣಗುವುದಿಲ್ಲ" ಎಂದರು. ರಾಮೋ ಗುರುಗಳ ಮಾತಿನಂತೆ ಬಟ್ಟೆಗಳನ್ನೆಲ್ಲಾ ಬಕೆಟ್ಟಿಗೆ ತುಂಬಿಕೊಂಡು ನದಿಯ ಬಳಿ ಬಂದಳು. ನದಿ ಆಶ್ರಮದ ಹತ್ತಿರದಲ್ಲೇ ಹರಿಯುತ್ತಿತ್ತು. ಬಟ್ಟೆಗಳನ್ನೆಲ್ಲಾ ಸೋಪಿನಲ್ಲಿ ನೆನೆಸಿಟ್ಟಳು, ಸ್ವಲ್ಪ ನೆನೆದರೆ ಕೊಳೆ ಚೆನ್ನಾಗಿ ಹೋಗುವುದೆಂದು ಯೋಚಿಸಿ, ಅಲ್ಲಿಯವರೆಗೆ ವ್ಯರ್ಥವಾಗಿ ಕಾಲ ಕಳೆಯಬಾರದೆಂದು ನಿರ್ಧರಿಸಿ ಆಶ್ರಮದ ಗೋಡೆಗೆ ಕಿವಿಯಾನಿಸಿಕೊಂಡು ಸತ್ಸಂಗದ ವಚನವನ್ನು ಕೇಳಲಾರಂಭಿಸಿದಳು. ಸತ್ಸಂಗ ಮುಗಿಯುವ ಸಮಯವಾಯಿತು. 'ಜೈ ಗುರು ಸತ್ ಸಾಹೇಬ್' ಎಂದು ಸತ್ಸಂಗಕ್ಕೆ ಮಂಗಳ ಹಾಡಿದ್ದು ಕೇಳಿಸಿತು. ಆಗ ಇದ್ದಕ್ಕಿದ್ದಂತೆ ರಾಮೋಗೆ ಬಟ್ಟೆಯ ನೆನಪಾಯಿತು. ಅವಳಿಗೆ ಅತ್ಯಂತ ಭಯವಾಯಿತು. ನಾನು ಬಟ್ಟೆ ಒಗೆಯುವುದು ಯಾವಾಗ? ಅವುಗಳನ್ನು ಒಣಗಿಸುವುದು ಯಾವಾಗ? ಆ ಬಟ್ಟೆಗಳೇನಾದರೂ ಒಣಗದಿದ್ದರೆ ಗುರುಗಳ ಮಾತು ಮೀರಿದಂತಾಗುತ್ತದೆ. ಈ ದಿನ ನನಗ್ಯಾವ ಕೆಟ್ಟ ಬುದ್ಧಿ ಬಂತು? ಈಗೇನು ಮಾಡುವುದು? ಎಂಬಿತ್ಯಾದಿ ವಿಚಾರಗಳು ಸುಳಿದು ಗಾಬರಿಯಿಂದ ನದಿಯ ಕಡೆಗೆ ಓಡಿದಳು.

ಅಲ್ಲಿ ಬಂದು ನೋಡಿದಾಗ ಆಶ್ಚರ್ಯವೊಂದು ಕಾದಿತ್ತು. ಬಟ್ಟೆ ನೆನೆಸಿಟ್ಟಿದ್ದ ಬಕೆಟ್

ಖಾಲಿಯಾಗಿತ್ತು. ಬಟ್ಟೆಗಳನ್ನೆಲ್ಲಾ ಪೊದೆಗಳ ಮೇಲೆ ಹರವಿ ಹಾಕಲಾಗಿತ್ತು. ರಾಮೋ ಹೋಗಿ ಮುಟ್ಟಿ ನೋಡಿದಾಗ ಆ ಬಟ್ಟೆಗಳೆಲ್ಲಾ ಆಗಲೇ ಒಣಗಿ ಹೋಗಿದ್ದವು. ಅವಳಿಗೆ ಏನಾಯಿತೆಂದು ತಿಳಿಯಲೇ ಇಲ್ಲ. ಅಲ್ಲಿ ಬೇರೆ ಹೆಂಗಸರನ್ನು ಇದರ ಬಗ್ಗೆ ಕೇಳಿದಾಗ ಅವರೆಲ್ಲಾ ಆಕ್ಷೇಪಿಸುವ ಧ್ವನಿಯಲ್ಲಿ," ಇದೇನು ಹೀಗೆ ಹೇಳುತ್ತಿರುವೆ? ನೀನೇ ಅಲ್ಲವೇ ಬಟ್ಟೆಯನ್ನೆಲ್ಲಾ ಒಗೆದದ್ದು. ನೀನು ಒಗೆಯಬೇಕಾದರೆ ನಮಗೆಲ್ಲಾ ನೀನು ನೀರು ಹಾರಿಸಿದೆ. ಅದಕ್ಕಾಗಿ ನಿನ್ನನ್ನು ನಾವೆಲ್ಲಾ ಗದರಿಸಿದೆವು. ನೀನು ಯಾವ ಮಾತನ್ನು ಆಡದೆ, ಬಟ್ಟೆಗಳನ್ನು ಒಣಗಲು ಹಾಕಿ ಹೊರಟು ಹೋದೆಯಲ್ಲಾ" ಎಂದರು. ಏನೂ ತೋಚದೆ ರಾಮೋ ಬಟ್ಟೆಗಳನ್ನೆಲ್ಲಾ ಎತ್ತಿಕೊಂಡು ಬಕೆಟ್ಟಿನಲ್ಲಿ ತುಂಬಿಕೊಂಡು ಆಶ್ರಮದ ಕಡೆಗೆ ಹೊರಟಳು. ಅಷ್ಟರಲ್ಲಿ ರಾಮೋ ಬಟ್ಟೆ ಒಗೆಯದೆ, ಆಶ್ರಮದ ಗೋಡೆಗೆ ಕಿವಿಯಾನಿಸಿಕೊಂಡು ನಿಂತಿದ್ದನ್ನು ಕಂಡಿದ್ದ ಒಬ್ಬ ವ್ಯಕ್ತಿ ಗುರುಗಳ ಬಳಿ ಚಾಡಿ ಹೇಳಿದ್ದನು. ಬಟ್ಟೆ ಒಗೆಯದೆ ರಾಮೋ ಇಲ್ಲಿ ನಿಂತಿದ್ದಳು. ಈಗ ಒದ್ದೆ ಬಟ್ಟೆಗಳನ್ನು ತರುತ್ತಾಳೆ ಎಂದು ಹೇಳಿದ್ದನು. ರಾಮೋ ಗುರುಗಳ ಬಳಿ ಬಂದು ನಡೆದದ್ದನ್ನು ಮುಚ್ಚಿಡದೆ ಎಲ್ಲವನ್ನೂ ಹೇಳಿದಳು. ಗುರುಗಳು ಬಟ್ಟೆಯನ್ನು ಮುಟ್ಟಿ ನೋಡಿದಾಗ ಅವುಗಳೆಲ್ಲಾ ಒಣಗಿ ಹೋಗಿದ್ದವು. ಆಗ ಗುರುಗಳು ರಾಮೋಳ ಮೇಲೆ ಕೋಪಗೊಳ್ಳದೆ ಪ್ರಸನ್ನರಾಗಿ ಅವಳಿಗೆ ಹೀಗೆಂದರು, "ಮಗಳೇ, ಪರಮಾತ್ಮ ಕಬೀರರು ರಾಮೋ ವೇಷದಲ್ಲಿ ಬಂದು ಬಟ್ಟೆ ಒಗೆದಿದ್ದಾರೆ.

ಜ್ಯೋಂ ಬಚ್ಚಾ ಗವೂ ಕೀ ನಜರ್ ಮೆಂ, ಯೂಂ ಸಾಯೀ ಕೂ ಸಂತ್ ।
ಭಕ್ತೋಂ ಕೆ ಪೀಛೆ ಫಿರೆ, ಭಕ್ತ್ ವಚ್ಛಲ್ ಭಗವಂತ್ ॥

**ಶಬ್ದಾರ್ಥ :–** ಹೇಗೆ ಹಸುವು ಯಾವುದೇ ಪಶು, ಪಕ್ಷಿ, ಮನುಷ್ಯನು ತನ್ನ ಮರಿಯನ್ನು ಸಾಯಿಸದಿರಲಿ ಎಂದು ತನ್ನ ಕರುವಿನ ಮೇಲೆ ನಿಗಾ ಇಡುವುದೋ, ಹಾಗೆ ಪರಮಾತ್ಮನು ತನ್ನ ಭಕ್ತನ ಮೇಲೆ ನಿಗಾ ಇಡುತ್ತಾನೆ. ಹೇಗೆ ಕರುವು ನೆಗೆಯುತ್ತಾ, ಕುಣಿಯುತ್ತಾ ಎಲ್ಲೆಲ್ಲೋ ಓಡಿದಾಗ ಹಸುವೂ ಸಹ ಅದರ ರಕ್ಷಣೆಗಾಗಿ ಹಿಂದೆ ಹಿಂದೆ ಓಡುವುದೋ, ಹಾಗೆ ಪರಮಾತ್ಮನೂ ಸಹ ಭಕ್ತರ ತಲೆ ಕಾಯುವವನು, ತನ್ನ ಭಕ್ತರ ಹಿಂದೆ ಹಿಂದೆ ಓಡಾಡುವನು. ಅವರ ರಕ್ಷಣೆಗಾಗಿ ಯಾವಾಗಲೂ ಜೊತೆಯಲ್ಲಿರುತ್ತಾನೆ.

ಪರಮಾತ್ಮನು ಅಬ್ರಾಹಿಮ್ ಸುಲ್ತಾನ ಎನ್ನುವ ಅಧಮನನ್ನು ನರಕದಿಂದ ಹೊರತರಲು ಕೆಲಸದಾಳಾಗಿ ಬಂದು ಚಾಟಿ ಏಟು ತಿಂದಿದ್ದನು. ಮಗಳೇ, ದುಃಖ ಪಡಬೇಡ. ನಿನ್ನ ಉದ್ದೇಶ ತಪ್ಪಲ್ಲ. ಪರಮಾತ್ಮನು ನಿಜವಾದ ಭಕ್ತಿ ಭಾವವನ್ನು ಎದುರು ನೋಡುತ್ತಿರುತ್ತಾನೆ". ಎಂದು ಗುರುಗಳು ಹೇಳಿದರು. ಇದರಿಂದ ರಾಮೋಳಿಗೆ ಸಮಾಧಾನವಾಯಿತು. ಅಂದಿನಿಂದ ರಾಮೋ ನಿರಂತರವಾಗಿ ಸತ್ಸಂಗಕ್ಕೆ ಬಂದು ಜ್ಞಾನ ಪಡೆದು ಸದ್ಗತಿ ಹೊಂದಿದಳು.

ಕಬೀರ್, ಸತಗುರು ಶರಣ್ ಮೆಂ ಆನೇ ಸೆ, ಆಯೀ ಟಲೈ ಬಲಾ ।
ಜೈ ಭಾಗ್ಯ ಮೆಂ ಸೂಲೀ ಲಿಖೀ ಹೋ, ಕಾಂಟೇ ಮೆಂ ಟಲ್ ಜಾಯ್ ॥

**ಭಾವಾರ್ಥ :–** ಸಮರ್ಥ ಕಬೀರ ಪರಮೇಶ್ವರರ ಕೃಪಾ ಪಾತ್ರರಾದ ನಿಜವಾದ ಗುರು (ಸದ್ಗುರು)ವಿನಿಂದ ದೀಕ್ಷೆ ಪಡೆಯುವ ಭಕ್ತ/ಭಕ್ತೆಯರನ್ನು ಪರಮಾತ್ಮನು ರಕ್ಷಿಸುತ್ತಾನೆ. ಒಂದು ವೇಳೆ ಪೂರ್ವ ಜನ್ಮದ ಪಾಪದ ಕಾರಣದಿಂದ ಸಾಧಕನಿಗೆ ಶೂಲಕ್ಕೇರಿಸಿ ಶಿಕ್ಷೆ ಕೊಟ್ಟು ಸಾವು ಎನ್ನುವುದು ಅವನ ಅದೃಷ್ಟದಲ್ಲಿ ಬರೆದಿದ್ದರೆ ಅದು ಎಷ್ಟೇ ಕಷ್ಟದಾಯಕವಾಗಿದ್ದರೂ ಆ ಸಾವಿನ ಶಿಕ್ಷೆಯನ್ನು ಪರಮಾತ್ಮನು ಕೇವಲ ಕಾಲಿಗೆ ಮುಳ್ಳು ಚುಚ್ಚುವಷ್ಟು ಸಣ್ಣ ಶಿಕ್ಷೆಯನ್ನಾಗಿ ಪರಿವರ್ತಿಸಿ ಬಿಡುತ್ತಾನೆ. ದೊಡ್ಡ ಶಿಕ್ಷೆಯನ್ನು ಸಹ ಹೆಸರಿಗೆ ಮಾತ್ರ ಶಿಕ್ಷೆ ಎನ್ನುವಂತೆ ಸಣ್ಣ ಶಿಕ್ಷೆಯನ್ನು ನೀಡುತ್ತಾನೆ.

## "ಕಳ್ಳನು ಎಂದಿಗೂ ಧನಿಕನಾಗುವುದಿಲ್ಲ"

ಕಬೀರ ಪರಮೇಶ್ವರರು ನಿಯಮಾನುಸಾರ ಒಂದು ಊರಿನ ಹೊರಗೆ ಕಾಡಿನಲ್ಲಿ ಒಂದು ಆಶ್ರಮ ಕಟ್ಟಿ ಇರುತ್ತಿದ್ದರು. ಕೆಲವು ದಿನಗಳವರೆಗೆ ಅಲ್ಲಿದ್ದು ಸತ್ಸಂಗ ಮಾಡುತ್ತಿದ್ದರು. ನಂತರ ತಿರುಗಾಟದಲ್ಲಿ ತೊಡಗುತ್ತಿದ್ದರು. ಅವರಿಗೆ ಒಬ್ಬ ರೈತ ಭಕ್ತನಿದ್ದನು. ಅವನ ಬಳಿ ಸ್ವಲ್ಪ ಜಮೀನಿತ್ತು. ಅದನ್ನು ಉಳುವುದಕ್ಕೆ ಅವನ ಬಳಿ ಕೇವಲ ಒಂದು ಎತ್ತು ಮಾತ್ರ ಇತ್ತು. ಅವನು ಊರಿನವರ ಬಳಿ ಒಂದೊಂದು ದಿನ ಒಬ್ಬೊಬ್ಬರ ಎತ್ತನ್ನು ಬಾಡಿಗೆಗೆ ಪಡೆದು ಆ ಎರಡೂ ಎತ್ತುಗಳನ್ನು ನೇಗಿಲಿಗೆ ಕಟ್ಟಿ ಹೊಲ ಉಳುತ್ತಿದ್ದನು. ಒಂದು ದಿನ ರಾತ್ರಿ ಅವನು ಮಲಗಿರುವಾಗ ಒಬ್ಬ ಕಳ್ಳನು ಆ ಊರಿಗೆ ಬಂದನು. ಅಂಗಳದಲ್ಲಿ ಕಟ್ಟಿದ್ದ ಎತ್ತನ್ನು ನೋಡಿ ಅದನ್ನು ಕದ್ದುಕೊಂಡು ಪರಾರಿಯಾದನು. ಬೆಳಿಗ್ಗೆ ರೈತನು ಎದ್ದು ನೋಡಿದಾಗ ತನ್ನ ಎತ್ತು ಕಳುವಾಗಿರುವುದು ತಿಳಿಯಿತು. ಅತ್ಯಂತ ದುಃಖದಿಂದ ಗುರುಗಳ ಬಳಿ ಹೋಗಿ ತನ್ನ ದುಃಖವನ್ನು ತೋಡಿಕೊಂಡನು. ಆಗ ಗುರುಗಳು, "ಚಿಂತಿಸಬೇಡ ಮಗನೇ, ದೇವರು ನಿನಗೆ ಎರಡು ಎತ್ತುಗಳನ್ನು ಕೊಡುತ್ತಾನೆ" ಎಂದು ಸಂತೈಸಿದರು. ಗುರುಗಳ ಕೃಪೆಯಿಂದ ಈಗಾಗಲೇ ಉತ್ತು ಬಿತ್ತಿದ್ದ ಹೊಲದಲ್ಲಿ ಬೆಳೆ ಚೆನ್ನಾಗಿ ಬೆಳೆದು ಒಂದಕ್ಕೆ ಎರಡರಷ್ಟು ಲಾಭ ಬಂದಿತು. ರೈತನು ಬಹಳ ಸಂತೋಷದಿಂದ ಎರಡು ಎತ್ತುಗಳನ್ನು ಖರೀದಿಸಿದನು. ಆ ಎತ್ತುಗಳಿಗೆ ಹುಲ್ಲು ಭೂಸ ತಿನ್ನಿಸಿ ಚೆನ್ನಾಗಿ ಬೆಳೆಸಿದನು. ಆ ಎರಡೂ ಎತ್ತುಗಳು ಗೂಳಿಗಳಂತೆ ತಯಾರಾದವು. ನೋಡುವವರು ಹೊಟ್ಟೆ ಕಿಚ್ಚು ಪಡುವಷ್ಟು ಸುಂದರವಾಗಿದ್ದವು. ಇತ್ತ ಒಂದು ಎತ್ತನ್ನು ಕದ್ದ ಕಳ್ಳನ ಕೈ ಖಾಲಿಯಾಗಿತ್ತು. ಅವನು ಮತ್ತೆ ಆ ರೈತನ ಮನೆಗೆ ಬಂದನು. ಗೂಳಿಯಂತಿದ್ದ ಆ ಎತ್ತುಗಳನ್ನು ನೋಡಿ ಬಹಳ ಸಂತೋಷದಿಂದ ಅವುಗಳನ್ನು ಕದ್ದುಕೊಂಡು ಹೋದನು. ಮರುದಿನ ಎದ್ದು ರೈತನು ನೋಡಿದಾಗ ಅವನಿಗೆ ಆಘಾತವಾಯಿತು. ತನ್ನ ಅತ್ಯಂತ ಪ್ರೀತಿಪಾತ್ರವಾಗಿದ್ದ ಎತ್ತುಗಳು ಕಳುವಾಗಿದ್ದವು. ಅವನು ಅಳುತ್ತಾ ಹೋಗಿ ಗುರುಗಳ ಬಳಿ ತಿಳಿಸಿದನು. ಗುರುಗಳು ಶಾಂತವಾಗಿ "ಮಗನೇ ದೇವರು ನಿನಗೆ ನಾಲ್ಕು ಎತ್ತು ಕೊಡುತ್ತಾನೆ ಚಿಂತಿಸಬೇಡ" ಎಂದರು.

ಅದೇ ರೀತಿ ಆ ವರ್ಷವೂ ದೇವರ ದಯೆಯಿಂದ ಹಾಗೂ ಗುರುಗಳ ಆಶೀರ್ವಾದದಿಂದ ಬೆಳೆ ಚೆನ್ನಾಗಿ ಬಂತು. ಒಂದಕ್ಕೆ ನಾಲ್ಕರಷ್ಟು ಲಾಭ ಬಂದು ನಾಲ್ಕು ಎತ್ತುಗಳನ್ನು ಖರೀದಿಸಿ, ಮನೆ ಮಠ ಮಾಡಿಕೊಂಡು, ಕುಟುಂಬದವರ ಜೊತೆ ಸಂತೋಷವಾಗಿದ್ದನು. ಇತ್ತ ಎತ್ತುಗಳನ್ನು ಕದ್ದ ಕಳ್ಳನು ರೋಗಿಯಾಗಿ, ದುರ್ಬಲಗೊಂಡು ಕಳ್ಳತನ ಮಾಡಲಾಗದೆ ಒಂದು ರಾತ್ರಿ ಅದೇ ರೈತನ ಮನೆಗೆ ಬಂದನು. ಅಲ್ಲಿ ಒಂದಕ್ಕಿಂತ ಒಂದು ಬಲಶಾಲಿಯಾದ ನಾಲ್ಕು ಎತ್ತುಗಳನ್ನು ನೋಡಿ ಬಹಳ ಆಶ್ಚರ್ಯವಾಯಿತು. ಆಗ ಅವನಿಗೆ ತಪ್ಪಿನ ಅರಿವಾಗಿ ರೈತನನ್ನು ಎಬ್ಬಿಸಿ ತಾನು ಎತ್ತುಗಳನ್ನು ಕದ್ದ ವಿಷಯವನ್ನು ತಿಳಿಸಿದನು. ಆಗ ರೈತನು, "ಸಹೋದರ, ನನ್ನನ್ನು ರಾತ್ರಿಯಲ್ಲಿ ನಿದ್ದೆಯಿಂದ ಎಬ್ಬಿಸಬೇಡ, ನಿನ್ನ ಕೆಲಸ ನೀನು ಮಾಡಿಕೋ ಹೋಗು. ದೇವರು ನನಗೆ ಕೊಡುತ್ತಿದ್ದಾನೆ. ನನ್ನನ್ನು ಮಲಗಲು ಬಿಡು" ಎಂದನು.

ಆಗ ಕಳ್ಳನು ಪಶ್ಚಾತ್ತಾಪದಿಂದ ಭಕ್ತನ ಕಾಲಿಗೆ ಬಿದ್ದು, ಅಣ್ಣಾ, ನಿಮ್ಮ ಕಳ್ಳ ನಿಮ್ಮ ಮುಂದಿದ್ದಾನೆ. ನೀವು ನನ್ನನ್ನು ಏಕೆ ಹಿಡಿದುಕೊಳ್ಳುತ್ತಿಲ್ಲ? ನಾನು ನಿಮ್ಮ ಮೂರು ಎತ್ತುಗಳನ್ನು ಕದ್ದಿದ್ದೇನೆ. ಈ ದಿನ ನನ್ನ ಮಕ್ಕಳು ಮರಿ ಹಸಿವಿನಿಂದ ಕಂಗೆಟ್ಟಿದ್ದಾರೆ. ನನ್ನ ವಿಕಾಸದ ದಾರಿ ನೀವೇ ತೋರಿಸಿ ಎಂದು ಅಲವತ್ತುಕೊಂಡನು. ಆಗ ಆ ರೈತನು ಅವನನ್ನು ಸ್ನಾನ ಮಾಡಲು ತಿಳಿಸಿದನು. ನಂತರ ಹೊಟ್ಟೆ ತುಂಬಾ ಊಟ ನೀಡಿದನು. ಅವನನ್ನು ಕರೆದುಕೊಂಡು ಆಶ್ರಮಕ್ಕೆ ಹೋದನು. ಗುರುಗಳನ್ನು ಭೇಟಿ ಮಾಡಿಸಿ ವೃತ್ತಾಂತವನ್ನೆಲ್ಲಾ ಹೇಳಿದನು. 8–10 ದಿನ ಆಶ್ರಮದಲ್ಲೇ ಉಳಿದು ಸತ್ಸಂಗ

ಕೇಳಲು ಹೇಳಿದನು. ಅದರಂತೆ ಕಳ್ಳನು ದೀಕ್ಷೆ ಪಡೆದು ಸತ್ಸಂಗ ಕೇಳಿದನು. ಗುರುಗಳು ರೈತನನ್ನು ಕರೆದು ಕಳ್ಳನಿಗೆ ಎರಡು ಎತ್ತುಗಳನ್ನು ಕೊಡಲು ತಿಳಿಸಿದರು, ಅದರಿಂದ ಅವನು ಉತ್ತು ಬಿತ್ತು, ಬೆಳೆ ತೆಗೆದು ಮಕ್ಕಳನ್ನು ಸಾಕುತ್ತಾನೆ ಎಂದರು. ರೈತನು ಗುರುಗಳ ಆಜ್ಞೆಯಂತೆ ಎರೆಡು ಎತ್ತುಗಳನ್ನು ಅವನಿಗೆ ಸಾಲವಾಗಿ ಕೊಟ್ಟನು. ಕಳ್ಳನು ಪರಿವರ್ತನೆಗೊಂಡು ಭಕ್ತನಾಗಿ ಮಾರ್ಪಟ್ಟನು, ತಿಂಗಳಿಗೆ ಒಮ್ಮೆ ಕುಟುಂಬ ಸಮೇತ ಸತ್ಸಂಗಕ್ಕೆ ಬರುತ್ತಿದ್ದನು. ಕ್ರಮೇಣ ಅವನ ಆರ್ಥಿಕ ಪರಿಸ್ಥಿತಿ ಸುಧಾರಿಸಿತು. ಆಗ ಎತ್ತುಗಳಿಗೆ ಬೆಲೆ ಕಟ್ಟಿ ಅದರ ಹಣವನ್ನು ಮತ್ತು ಈ ಮೊದಲೇ ಕದ್ದಿದ್ದ ಎತ್ತುಗಳಿಗೆ ಬೆಲೆ ಕಟ್ಟಿ ಅದರ ಹಣವನ್ನು ರೈತನಿಗೆ ಕೊಡಲು ಬಂದನು. ಆಗ ಆ ರೈತನು ಆ ಹಣವನ್ನು ಮುಟ್ಟದೆ ಅವನನ್ನು ಗುರುಗಳ ಬಳಿ ಕರೆದೊಯ್ದನು. ಆ ಹಣವನ್ನೆಲ್ಲಾ ಗುರುಗಳ ಪಾದಗಳಿಗೆ ಒಪ್ಪಿಸಿದನು. ಗುರುಗಳು ಆ ಹಣವನ್ನೆಲ್ಲಾ ದಾನ ಧರ್ಮಗಳಿಗೆ ವಿನಿಯೋಗಿಸಿದರು. ಈ ರೀತಿ ಕಳ್ಳತನದ ಹಣ ಹಾಳಾಯಿತು. ಭಕ್ತನ ಉದ್ಧಾರವಾಯಿತು.

➢ ಸಂಸ್ಕಾರವು ಸಾಂಕ್ರಾಮಿಕ ರೋಗದಂತೆ ಹರಡುತ್ತದೆ :–

ಒಳ್ಳೆಯ ಹಾಗೂ ಕೆಟ್ಟ ಸಂಸ್ಕಾರಗಳು ಸಾಂಕ್ರಾಮಿಕ ರೋಗದಂತೆ ಹರಡುತ್ತವೆ. ಹಾಗೆಯೇ ಭಕ್ತನ ಕೈಯಿಂದ ಬಿತ್ತಿದ ಬೀಜದಲ್ಲೂ ಭಕ್ತಿ ಸಂಸ್ಕಾರವು ಪ್ರವೇಶಿಸುತ್ತದೆ. ಯಾರು ಆ ಅನ್ನವನ್ನು ತಿನ್ನುತ್ತಾರೋ, ಅವರಿಗೂ ಭಕ್ತಿಯ ಪ್ರೇರಣೆ ಆಗುವುದು.

ಒಂದು ವೇಳೆ ಮದ್ಯವಸನಿಯು ಕೆಟ್ಟ ಆಲೋಚನೆಯಿಂದ ಬೀಜವನ್ನು ಬಿತ್ತಿದರೆ ಆ ಬೀಜದಲ್ಲಿ ಅವರ ವಿಚಾರಗಳು ಪ್ರವೇಶಿಸಿ, ಆ ಅನ್ನ ತಿನ್ನುವವರಿಗೆ ಅದೇ ಪ್ರೇರಣೆ ಸಿಗುತ್ತದೆ.

ಉದಾಹರಣೆಗೆ:– ಒಂದೂರಿನಲ್ಲಿ ಒಬ್ಬ ಅಕ್ಕ ತಂಗಿಯರಿದ್ದರು. ಅವರ ಮನೆಗೆ ಒಬ್ಬ ಗುರುಗಳು ಅವರ ಶಿಷ್ಯನ ಜೊತೆ ಬಂದರು. ಅಕ್ಕ ಗುರುಗಳಿಂದ ದೀಕ್ಷೆ ಪಡೆದಿದ್ದಳು. ಅಕ್ಕನಿಗೆ ಒಬ್ಬ ಮಗಳಿದ್ದಳು. ಅಳಿಯ ಅಕಾಲ ಮರಣವನ್ನಪ್ಪಿದ್ದನು. ಮಗಳಿಗೆ ಚಿಕ್ಕ ಚಿಕ್ಕ ಮಕ್ಕಳಿದ್ದರು. ಅವಳು ಆ ಮಕ್ಕಳ ಬಗ್ಗೆ ಬಹಳ ಚಿಂತಿತಳಾಗಿದ್ದಳು. ಅವರನ್ನು ಯಾರು ಸಾಕಿ ಸಲಹುತ್ತಾರೆ? ನನ್ನ ಮಗಳಿಗೆ ಗಂಡನೂ ಇಲ್ಲ, ಅತ್ತೆ ಮನೆಯ ಸಂಬಂಧವೂ ಕಡಿದು ಹೋಗಿದೆ. ಅಯ್ಯೋ ದೇವರೆ, ಮುಂದೆ ಇವರಿಗೆ ಯಾರು ಗತಿ? ಎನ್ನುತ್ತಾ ಚಿಂತಿಸುತ್ತಿದ್ದಳು. ರಾತ್ರಿ ಗುರು ಶಿಷ್ಯರಿಗೆ ಊಟ ಬಡಿಸಿದಳು. ಗುರುಗಳು ಮಾರನೇದಿನ ಅಡಿಗೆ ಯಾರು ಮಾಡಿದ್ದೆಂದು ತಂಗಿಯನ್ನು ಕೇಳಿದರು. ತಂಗಿಯು ತನ್ನ ಅಕ್ಕನು ಮಾಡಿದ್ದೆಂದು ಹೇಳಿದಳು. ಅವಳಿಗೆ ಏನಾದರೂ ಕಷ್ಟವಿದೆಯಾ ಎಂದು ಗುರುಗಳು ಪ್ರಶ್ನಿಸಿದರು. ಆಗ ತಂಗಿಯು, ಅವಳ ಅಳಿಯ ತೀರಿಕೊಂಡಿದ್ದಾನೆ. ಅವಳ ಮಗಳಿಗೆ ಚಿಕ್ಕ ಚಿಕ್ಕ ಮಕ್ಕಳಿವೆ. ಯಾವಾಗಲೂ ಅವಳಿಗೆ ಅವರ ಬಗ್ಗೆಯೇ ಚಿಂತೆ ಎಂದು ಹೇಳಿದಳು. ಆಗ ಗುರುಗಳು ಅವಳ ಚಿಂತೆ ಈ ಊಟದಲ್ಲಿ ಪ್ರವೇಶಿಸಿದೆ. ಅದು ತಿನ್ನುವವರ ಮೇಲೆ ಪ್ರಭಾವ ಬೀರಿದೆ. ಅದೇ ಚಿಂತೆ ಇಡೀ ರಾತ್ರಿ ನನ್ನನ್ನೂ ಕಾಡುತ್ತಿತ್ತು. ಅದೇ ರೀತಿ ಭಕ್ತಿ, ನಾಮಸ್ಮರಣೆ ಅಥವಾ ಸಂತರ ವಾಣಿಯನ್ನು ಮನನ ಮಾಡಿಕೊಳ್ಳುತ್ತಾ ಅಡಿಗೆ ಮಾಡಿದರೆ ತಿನ್ನುವವರಲ್ಲೂ ಸುಸಂಸ್ಕಾರ ಪ್ರೇರಣೆ ನೀಡುತ್ತದೆ. ಭಕ್ತಿಯ ಅಭಿರುಚಿ ಹೆಚ್ಚುತ್ತದೆ. ಹಾಡು ಹಾಡುವವರು ಹಾಡುತ್ತಾ ಅಡಿಗೆ ಮಾಡಿದರೆ ಸಂಗೀತದ ಮಾಧುರ್ಯ ಊಟದಲ್ಲಿ ಪ್ರವೇಶಿಸುತ್ತದೆ. ಕೆಟ್ಟ ಯೋಚನೆ ಮಾಡುತ್ತಾ ಅಡಿಗೆ ಮಾಡಿದರೆ ಅವರಲ್ಲೂ ಕೆಟ್ಟತನಕ್ಕೆ ಪ್ರೇರಣೆ ನೀಡುತ್ತದೆ. ಇತ್ತೀಚೆಗೆ ಈ ರೀತಿಯ ಸಂಸ್ಕಾರವು ಹೆಚ್ಚಾಗಿ ನೋಡಲು ಸಿಗುತ್ತಿದೆ.

ಒಂದು ವೇಳೆ ಸಂತರ ವಾಣಿ, ಪ್ರವಚನ, ಆರತಿ, ಸ್ಮರಣೆ ಮಾಡುವವರ ಸಂಖ್ಯೆ ಹೆಚ್ಚಾದರೆ ವಾತಾವರಣ ಭಕ್ತಿಮಯವಾಗುತ್ತದೆ. ಪ್ರತಿಯೊಬ್ಬನ ಮನಸ್ಸಿನಲ್ಲೂ ಭಕ್ತಿ ಹುಟ್ಟುತ್ತದೆ. ಅಂಥಹ

ವಾತಾವರಣ ಉಂಟು ಮಾಡಲು ಮನೆ ಮನೆಯಲ್ಲೂ ಆರತಿ, ಸ್ತುತಿ ಇರಬೇಕು ಮತ್ತು ಎಲ್ಲರೂ ನೇಮ ನಿಷ್ಠೆಯಿಂದಿರಬೇಕು. ಗುರುವಿನಿಂದ ದೀಕ್ಷೆ ಪಡೆದು ನಾಮಸ್ಮರಣೆ ಮಾಡಬೇಕು. ಇದರಿಂದ ವಾತಾವರಣದಲ್ಲಿ ಭಕ್ತಿಯ ವಿಚಾರಗಳು ತುಂಬಿರುತ್ತದೆ. ಗುರುವಿನ ದೀಕ್ಷೆ ಪಡೆದು ಭಕ್ತಿ ವಿಚಾರಗಳಿಂದ ವಾತಾವರಣವನ್ನು ತುಂಬಿದರೆ ಕೆಟ್ಟ ಸಂಸ್ಕಾರಗಳು ದೂರ ಓಡುತ್ತವೆ. ಭಕ್ತಿ ಸಂಸ್ಕಾರಗಳು ಆಕ್ಸಿಜನ್ ಆದರೆ ಕೆಟ್ಟ ಸಂಸ್ಕಾರಗಳು ಕಾರ್ಬನ್ ಡೈಯಾಕ್ಸೈಡ್ ಇದ್ದಂತೆ. ಆಕ್ಸಿಜನ್‌ರೂಪದಲ್ಲಿರುವ ಭಕ್ತ ಸಂಸ್ಕಾರದ ಸಿಲೆಂಡರ್‌ನ್ನು ತೆರೆದರೆ ಹಾಗೂ ಸದ್ಗುರು ಸಾಹೇಬ್‌ರ ಪ್ರವಚನವನ್ನು ಕೇಳಿದರೆ, ಮೂರು ಹೊತ್ತು ನಿತ್ಯ ಭಜನೆಯಲ್ಲಿ ತೊಡಗಿದರೆ, ಭಕ್ತರ ಸಂಖ್ಯೆ ಹೆಚ್ಚಾಗುತ್ತದೆ. ಭಕ್ತಿ ವಿಚಾರಗಳು ಭೂಮಿಯ ಮೇಲೆ ಎಲ್ಲೆಲ್ಲೂ ಹರಡುತ್ತದೆ. ಆಗ ಪ್ರತಿಯೊಬ್ಬರ ಮನಸ್ಸಿನಲ್ಲಿ ಶಾಂತಿ ನೆಲೆಸುತ್ತದೆ. ಯಾರ ಮನೆಯಲ್ಲಿ ಪ್ರವಚನ, ಸತ್ಸಂಗ, ಆರತಿ, ನಾಮಸ್ಮರಣೆಯಾಗುವುದೋ ಅವರ ಮನೆಯಿಂದ ಕೆಟ್ಟ ಸಂಸ್ಕಾರಗಳು ಹೊರಟು ಹೋಗುತ್ತವೆ. ನಾವು ಸತ್ಸಂಗದ ನಂತರ ಮುಂದಿನ ಹಳ್ಳಿಗೆ ಹೋಗಬೇಕಾಗಿ ಬಂದಾಗ ಇಡೀ ಹಳ್ಳಿಯೇ ಅಳುತ್ತಿತ್ತು. ನಮ್ಮ ಮತ್ತು ಭಕ್ತರ ಸಂಗದಿಂದ ಇಡೀ ಹಳ್ಳಿಗೆ ಶಾಂತಿ ಸಿಗುತ್ತಿತ್ತು. ಅದರ ಪ್ರಭಾವ ತಿಂಗಳುಗಟ್ಟಲೇ ಇರುತ್ತಿತ್ತು. ಪ್ರತಿ ಕುಟುಂಬವೂ ನಾಮ ಸ್ಮರಣೆ ಮಾಡುವುದರಿಂದ ಎಲ್ಲೆಡೆ ಶಾಂತಿ ನೆಲೆಸುತ್ತದೆ.

❖ ಯಾರು ಮದ್ಯವಸನಿಗಳಾಗುವರೋ, ಯಾರು ಬೀಡಿ, ತಂಬಾಕು ಸೇವನೆ ಮಾಡುವರೋ, ಅವರ ಪ್ರಭಾವ ಅವರ ಕುಟುಂಬಕ್ಕಷ್ಟೇ ಅಲ್ಲದೇ ಇಡೀ ಸಮಾಜದ ಮೇಲೆ ಬಿದ್ದು ಸಮಾಜವು ನಾಶದ ಕಡೆಗೆ ಮುಖ ಮಾಡುತ್ತದೆ. ತಿನ್ನುವ ಅನ್ನದಲ್ಲೂ ತಂಬಾಕಿನ ಸೂಕ್ಷ್ಮ ತತ್ವ ಪ್ರವೇಶಿಸಿ ಯುವಜನತೆಯನ್ನು ತಪ್ಪು ದಾರಿಗೆಳೆಯುತ್ತದೆ. ಮಕ್ಕಳಾಗಿದ್ದಾಗ ತಂದೆ, ತಾಯಿ, ಚಿಕ್ಕಪ್ಪ, ಮಾವ, ದೊಡ್ಡಪ್ಪ, ತಾತ ಇವರುಗಳಿಗೆ ಹೆದರಿ ತಂಬಾಕು ಸೇವನೆ ಮಾಡದಿರಬಹುದು. ಆದರೆ ಯುವಕರಾದ ಮೇಲೆ ಮಾದಕತೆಯ ಸೆಳೆತ ಜಾಸ್ತಿಯಾಗುತ್ತದೆ. ಮಾನವ ಸಮಾಜದಿಂದ ಮಾದಕತೆ ಮತ್ತು ಬೇರೆ ಕೆಟ್ಟ ಚಟಗಳು ದೂರವಾಗಿ ಭೂಮಿಯನ್ನು ಸ್ವರ್ಗವಾಗಿಸುವುದೇ ನನ್ನ (ಲೇಖಕನ) ಉದ್ದೇಶ. ಕಬೀರರ ವಚನವು ಸಾಕಾರವಾಗುವುದನ್ನು ನೋಡಲು ಇಚ್ಛಿಸುತ್ತೇನೆ. ಅವರ ಪ್ರೇರಣೆ ಮತ್ತು ಶಕ್ತಿಯಿಂದ ಇಂಥಾ ಅಮೂಲ್ಯವಾದ ಕೆಲಸ ಸಾಧ್ಯವಾಗತ್ತದೆ. ಈ ದಾಸ ಮತ್ತು ನನ್ನ ಅನುಯಾಯಿಗಳು ಒಳ್ಳೆಯ ಮನಸ್ಸಿನಿಂದ ಈ ಕೆಲಸಕ್ಕಾಗಿ ಪ್ರಯತ್ನಶೀಲರಾಗಿದ್ದಾರೆ. ಯಶಸ್ಸಿನ ಬಗ್ಗೆ ನನಗೆ ಭರವಸೆ ಇದೆ.

## "ಸಾಂಸಾರಿಕ ಜಂಜಾಟದಲ್ಲಿದ್ದುಕೊಂಡೇ ಭಕ್ತರಾಗಬೇಕಾಗುತ್ತದೆ"

ಹರಿಯಾಣ ಪ್ರಾಂತ್ಯದ ಒಂದು ಹಳ್ಳಿಯಲ್ಲಿ ಒಬ್ಬ ಪೋಲಿಸ್ ಇನ್ಸ್‌ಪೆಕ್ಟರ್ ಇದ್ದನು. ಇದು ಆಗಿನ ಕಾಲದ ಮಾತು. ಆಗೆಲ್ಲಾ ಅವರು ಕುದುರೆಯ ಮೇಲೆ ಓಡಾಡುತ್ತಿದ್ದರು. ಬೇಸಿಗೆ ಕಾಲದ ಒಂದು ದಿನ, ಮಧ್ಯಾಹ್ನದ ಸುಡು ಬಿಸಿಲು, ಇನ್ಸ್‌ಪೆಕ್ಟರ್‌ಗೆ ಕಾರ್ಯ ನಿಮಿತ್ತ ಪಕ್ಕದ ಹಳ್ಳಿಗೆ ಹೋಗಬೇಕಾಗಿ ಬಂದಿತು. ಕುದುರೆಯನ್ನೇರಿ ಆ ಹಳ್ಳಿಯ ಕಡೆ ಹೊರಟನು. ಮಾರ್ಗಮಧ್ಯೆ ಅವನಿಗೆ ಮತ್ತು ಕುದುರೆಗೆ ದಣಿವಾಯಿತು. ಕುದುರೆ ಸುಸ್ತಾಗಿತ್ತು. ಕಣ್ಣು ಹಾಯಿಸಿದಾಗ ಒಬ್ಬ ರೈತ ತನ್ನ ಜಮೀನಿಗೆ ನೀರು ಹಾಯಿಸುತ್ತಿದ್ದುದು ಕಂಡಿತು. ಅವನು ಬಕೆಟ್ಟನ್ನು ಹಗ್ಗಕ್ಕೆ ಕಟ್ಟಿ, ಅದನ್ನು ಏತಕ್ಕೆ ಕಟ್ಟಿದ್ದನು. ಏತದ ಸಹಾಯದಿಂದ ಬಾವಿಯಿಂದ ನೀರನ್ನು ಮೇಲಕ್ಕೆ ಎತ್ತುತ್ತಿದ್ದನು. ನೀರನ್ನು ಮೇಲಕ್ಕೆ ಎತ್ತುವಾಗ ರಾಟೆಯೂ ಗಡ ಗಡ ಎಂದು ಸದ್ದನ್ನು ಮಾಡುತ್ತಿತ್ತು. ಏತವು ಮೇಲೆ ಬಂದ ತಕ್ಷಣ ಬಕೆಟ್ಟಿನ ನೀರು ಭೂಮಿಗೆ ಬಿದ್ದು, ಆ ನೀರು ಭೂಮಿಯ ಒಡಲನ್ನು ಸೇರುತ್ತಿತ್ತು. ಇನ್ಸ್‌ಪೆಕ್ಟರ್ ಅವನ ಬಳಿ ನೀರು ಕುಡಿಯಲು ಬಂದ ತಕ್ಷಣ ಕುದುರೆಯು ರಾಟೆಯ ಸದ್ದಿಗೆ ಬೆದರಿ ದೂರ ಹೋಗಿ ನಿಂತಿತು. ಇನ್ಸ್‌ಪೆಕ್ಟರ್ ರೈತನಿಗೆ ಏತವನ್ನು ನಿಲ್ಲಿಸಲು ಹೇಳಿದನು. ರೈತನು ಏತವನ್ನು ನಿಲ್ಲಿಸಿದನು. ನೀರು ಬಾವಿಯಿಂದ

ಮೇಲೆ ಬರುವುದು ನಿಂತು ಹೋಯಿತು. ಮೊದಲು ಎಳೆದ ಬಕೆಟ್ಟಿನ ನೀರು ಭೂಮಿಗೆ ಬಿದ್ದು ಭೂಮಿ ಕುಡಿದಿತ್ತು. ಇನ್ಸ್‌ಪೆಕ್ಟರ್ ಏತವನ್ನು ಚಲಾಯಿಸಲು ಹೇಳಿದನು. ಮತ್ತೆ ಕುದುರೆ ಬೆದರಿ ಮೈಲುದೂರ ಓಡಿತು. ಹೀಗೆ 3–4 ಸಾರಿ ಪುನರಾವರ್ತನೆಯಾಯಿತು. ಇನ್ಸ್‌ಪೆಕ್ಟರ್ ಇದರಿಂದ ಸುಸ್ತಾಗಿ ಹೋದನು. ಆಗ ರೈತನು, ನೀರು ಬೇಕಾದರೆ ಈ ಶಬ್ದದ ನಡುವೆಯೇ ಬಂದು ಕುಡಿಯಬೇಕೆಂದು ಹೇಳಿದನು. ಕುದುರೆಯನ್ನು ಸಂತೈಸಿ, ನಿಧಾನವಾಗಿ ರೈತನಿರುವ ಕಡೆಗೆ ಬಂದು ಆ ರಾಟೆಯ ಸದ್ದಿನ ನಡುವೆಯೇ ನೀರನ್ನು ಕುಡಿಯಬೇಕಾಗಿ ಬಂದಿತು. ಕೊನೆಗೆ ಆ ಸದ್ದಿನ ನಡುವೆಯೇ ನೀರನ್ನು ಕುಡಿದು ತಮ್ಮ ಜೀವ ಉಳಿಸಿಕೊಂಡರು. ಹೀಗೆ ನಾವೂ ಸಹ ಸಾಂಸಾರಿಕ ಕೆಲಸಗಳನ್ನು ಮಾಡುತ್ತಲೇ ಭಕ್ತಿ, ದಾನ, ಧರ್ಮ, ನಾಮಸ್ಮರಣೆ ಅವಶ್ಯವಾಗಿ ಮಾಡಬೇಕು.

❖ ವಯಸ್ಸಾದ ಮೇಲೆ ಭಕ್ತಿಯಿಂದೇನಾಗುವುದು?

ಜೀಂದ್ ಎನ್ನುವ ಜಿಲ್ಲೆಯಲ್ಲಿ ಮನೋರ್‌ಪುರ್ ಎಂಬ ಹಳ್ಳಿಯಿದೆ. ಅಲ್ಲಿ ರಾಮ್‌ಕುಮಾರ್ ಎಂಬ ಭಕ್ತನಿದ್ದನು. ಅವನು ಮತ್ತು ಅವನ ಕುಟುಂಬವು ಸತ್ಸಂಗದಿಂದ ಪ್ರಭಾವಿತರಾಗಿ ದೀಕ್ಷೆ ಪಡೆದರು ಹಾಗೂ ಸತ್ಸಂಗಕ್ಕೆ ಹೋಗಲು ಪ್ರಾರಂಭಿಸಿದರು. ಅಂದಿನ ದಿನಗಳಲ್ಲಿ ಕೇವಲ ವಯಸ್ಸಾದ ವಿಧವೆಯರು ಸತ್ಸಂಗಕ್ಕೆ ಹೋಗುತ್ತಿದ್ದರು. ರಾತ್ರಿಯೆಲ್ಲಾ ಸತ್ಸಂಗಕ್ಕೆ ಹೋದರೂ ಸಹ ಅಲ್ಲಿಯ ವಚನಗಳ ಬಗ್ಗೆ ಗಮನ ಕೊಡದೆ ಬೆಳಿಗ್ಗೆ ಬಂದು ತನ್ನ ಕುಟುಂಬದವರನ್ನು, ಸೊಸೆಯನ್ನು ಗೋಳುಹುಯ್ದುಕೊಳ್ಳುತ್ತಿದ್ದರು. ಹಾಗಾಗಿ ಆ ಕಾಲದಲ್ಲಿ ಸತ್ಸಂಗಕ್ಕೆ ಒಳ್ಳೆಯ ಹೆಸರಿರಲಿಲ್ಲ. ರಾಮ್‌ಕುಮಾರನು ಮನೆಯಲ್ಲಿ ಅನುಷ್ಠಾನ ಹಾಗೂ ಸತ್ಸಂಗ ಮಾಡಿಸುತ್ತಿದ್ದುದನ್ನು ನೋಡಿ ಅವನ ತಂದೆಯು ಅವನ ಬಳಿ ಬಂದು ಜಗಳವಾಡಿಕೊಂಡು ಮನೆ ಬಿಟ್ಟು ಚಿಕ್ಕ ಮಗನ ಮನೆಗೆ ಹೊರಟು ಹೋದನು. ಬೆಳಿಗ್ಗಿನ ಹೊತ್ತು ಹೊಲದಲ್ಲಿ ಕೆಲಸ ಮಾಡುತ್ತಿದ್ದನು. ಸಂಜೆಯಾದ ಮೇಲೆ ಒಂದು ಕಟ್ಟೆಯ ಮೇಲೆ ಕುಳಿತು, ರಾಮ್‌ಕುಮಾರನು ಸತ್ಸಂಗಕ್ಕೆ ಹೋಗಿ ಹಾಳಾಗುತ್ತಿರುವನಲ್ಲಾ, ಸಮಾಜ ನನ್ನನ್ನು ದೂಷಿಸುತ್ತದೆ ಎಂದು ಚಿಂತಿಸುತ್ತಾ ಕಣ್ಣೀರಿಡುತ್ತಿದ್ದನು. ಹೀಗೆ ಎರಡು ದಿನಗಳು ಕಳೆದವು. ಮೂರನೇ ದಿನ ಸಂಜೆಯ ಸಮಯದಲ್ಲಿ ಈ ದಾಸ್ (ರಾಮ್‌ಪಾಲ್‌ದಾಸ)ರ ಸತ್ಸಂಗವನ್ನು ಮೈಕ್ ಹಾಕಿ ಜೋರಾಗಿ ಎಲ್ಲರಿಗೂ ಕೇಳಿಸುವಂತೆ ಮಾಡಲಾಗಿತ್ತು. ರಾಮ್‌ಕುಮಾರನು ಲೌಡ್‌ಸ್ಪೀಕರ್‌ನನ್ನು ನಿಧಾನವಾಗಿ ತನ್ನ ತಂದೆಯು ಕುಳಿತಿದ್ದ ಕಡೆಗೆ ತಿರುಗಿಸಿದನು. ಆಗ ವಿಧಿ ಇಲ್ಲದೆ ಅವನ ತಂದೆಯು ಸತ್ಸಂಗದ ಪ್ರವಚನವನ್ನು ಕೇಳಬೇಕಾಗಿ ಬಂದಿತು. ಹೀಗೆ ಎರಡು ದಿನ ಪ್ರವಚನ ಕೇಳಿದೊಡನೆ ಅವನಲ್ಲಿ ಬಹಳ ಬದಲಾವಣೆ ಕಂಡಿತು. ಅವನು ನೇರವಾಗಿ ರಾಮ್‌ಕುಮಾರನ ಮನೆಗೆ ಬಂದನು. ಅವನನ್ನು ನೋಡಿದ ಅವನ ಸೊಸೆಯು, ನಮ್ಮನ್ನೆಲ್ಲ ಬಯ್ಯಲು ಬಂದಿರುವನೆಂದು ಹೆದರಿದಳು. ಆದರೆ ಅವನು ಬಂದವನೇ ಮನೆಯವರನ್ನೆಲ್ಲಾ ಕರೆದುಕೊಂಡು ನನ್ನ ಬಳಿ ಬಂದು ಮಂಡಿಯೂರಿ ಕುಳಿತು ಬಿಟ್ಟನು ಹಾಗೂ "ಹೇ ಗುರುಗಳೇ, ನಾನು ಪ್ರವಚನದಿಂದ ಕೋಪಗೊಂಡಿದ್ದೆ, ಆದರೆ ಎರಡು ದಿನ ನಿಮ್ಮ ಪ್ರವಚನ ಕೇಳಿದ ಮೇಲೆ ನನ್ನ ಮನಸ್ಸು ಪರಿವರ್ತನೆಯಾಯಿತು. ನಾನು ನನ್ನ ಜೀವನವನ್ನೆಲ್ಲಾ ನಷ್ಟ ಮಾಡಿಕೊಂಡುಬಿಟ್ಟೆ. 8 ಎಕರೆ ಜಮೀನನ್ನು ಖರೀದಿಸಿದ್ದೇನೆ. ಇಬ್ಬರು ಮಕ್ಕಳನ್ನು ಸಾಕಿ ದೊಡ್ಡವರನ್ನಾಗಿ ಮಾಡಿದ್ದೇನೆ. ಹಗಲಿರುಳೂ ಜಮೀನಿನಲ್ಲಿ ಕೆಲಸ ಮಾಡಿದ್ದೇನೆ. ನನ್ನ ಜೀವನ ಹಾಳು ಮಾಡಿಕೊಂಡಿರುವೆ ಎಂದು ನಿಮ್ಮ ಪ್ರವಚನದಿಂದ ತಿಳಿಯಿತು. ಈಗ ನನಗೆ 75 ವರ್ಷಗಳಾಯಿತು. ಈಗ ಭಕ್ತನಾದರೆ ಏನು ಪ್ರಯೋಜನ?" ಎಂದು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದನು.

ಆಗ ಗುರುಗಳು ಅವನನ್ನು ಸಂತೈಸುತ್ತಾ, "ಈಗಲೂ ಕಾಲ ಮಿಂಚಿಲ್ಲ, ಒಂದು ಉದಾಹರಣೆ ನಾನು ನನ್ನ ಗುರುಗಳಿಂದ ಕೇಳಿದ್ದೆ, ಅದನ್ನು ಹೇಳುವೆ" ಎನ್ನುತ್ತಾ ಉದಾಹರಣೆ ನೀಡಿದರು, "ಬಾವಿಯಿಂದ ನೀರೆತ್ತಲು ರಾಟೆಗೆ ಹಗ್ಗ ಕಟ್ಟಿ, ಹಗ್ಗದ ಒಂದು ತುದಿಗೆ ಬಕೆಟ್ಟನ್ನು ಕಟ್ಟಿ, ಇನ್ನೊಂದು

ತುದಿಯನ್ನು ಕೈಯಲ್ಲಿ ಹಿಡಿದು, ಹಗ್ಗ ಸಡಿಲ ಬಿಟ್ಟು, ನೀರು ಬಕೆಟ್ಟಿನಲ್ಲಿ ತುಂಬಿದಾಕ್ಷಣ ಹಗ್ಗವನ್ನು ಜೋರಾಗಿ ಎಳೆದಾಗ ರಾಟೆಯ ಸಹಾಯದಿಂದ ನೀರು ತುಂಬಿದ ಬಕೆಟ್ಟು ಮೇಲೆ ಬರುತ್ತದೆ. ಒಂದು ವೇಳೆ ಕೈಯಿಂದ ಹಗ್ಗ ಕಳಚಿಕೊಂಡರೆ, ಬಕೆಟ್ಟು ಬಾವಿಯಲ್ಲಿ ಮುಳುಗುತ್ತದೆ. ಅದು ಮುಳುಗುವ ಮೊದಲು ನಾವು ಓಡಿ ಹೋಗಿ ಅದರ ತುದಿಯನ್ನು ಹಿಡಿದುಕೊಂಡರೆ, ನೀರು ನಮಗೆ ಖಂಡಿತವಾಗಿಯೂ ಸಿಗುತ್ತದೆ. ಒಂದು ವೇಳೆ ಹಗ್ಗ ನಮ್ಮ ಕೈ ತಪ್ಪಿತು ಎಂದು ಅಳುತ್ತಾ, ಪ್ರಯತ್ನ ಪಡದೇ ನಾವು ಅಲ್ಲೇ ನಿಂತಿದ್ದರೆ, ನೀರು ನಮ್ಮ ಕೈ ತಪ್ಪಿ ಹೋಗುತ್ತದೆ. ಹಗ್ಗದ ತುದಿಯವರೆಗೆ ನಾವು ಪ್ರಯತ್ನ ನಿಲ್ಲಿಸಬಾರದು. ಹಗ್ಗದ ತುದಿಯಿಂದಲೂ ನೀನು ನೀರು ಪಡೆಯಬಹುದು. ಹಾಗೆಯೇ ಜೀವನದ ಕೊನೆಗಾಲದಲ್ಲೂ ಭಕ್ತಿಯಿಂದ ಸಾಧನೆ ಮಾಡಿದರೆ ಮುಕ್ತಿ ಪಡೆಯಬಹುದು" ಎಂದರು. ಇದನ್ನು ಕೇಳಿದ ಆ ವೃದ್ಧ ತನ್ನ ದುಶ್ಚಟಗಳನ್ನೆಲ್ಲಾ ಬಿಟ್ಟು, ದೀಕ್ಷೆ ಪಡೆದನು ಹಾಗೂ ಸತ್ಸಂಗಕ್ಕೆ ತಾನು ಹೋಗುವುದಲ್ಲದೇ ತನ್ನ ಎರಡನೇ ಮಗನನ್ನು ಸಂಸಾರ ಸಮೇತ ಕರೆದುಕೊಂಡು ಹೋದನು. ತನ್ನ 85ನೇ ವಯಸ್ಸಿನಲ್ಲಿ ಅವನು ಮುಕ್ತಿಯನ್ನು ಪಡೆದನು.

ಏಕೈ ಚೋಟ್ ಸಿಧಾರಿಯಾ ಜಿನ್ ಮಿಲನ್ ದಾ ಚಾಹ್ ।

ಹರಿಯಾಣ ಬಾಷೆಯಲ್ಲಿ ಒಂದು ಗಾದೆ ಇದೆ:–

ಘಾಮ್ ಕಾ ಔರ್ ಜ್ಞಾನ್ ಕಾ ಚಮ್‌ಕಾ–ಸಾ ಲಾಗ್ಯಾ ಕರೈ ।

ಶಬ್ದಾರ್ಥ:– ಬಾದ್ರಪದ ಮಾಸದಲ್ಲಿ ಬಿಸಿಲು (ಘಾಮ್) ಬಹಳ ಅಧಿಕವಾಗಿರುತ್ತದೆ. ಹೊಲದಲ್ಲಿ ಕೆಲಸ ಮಾಡುವವರಿಗೆ ಆ ಬಿಸಿಲು ಹಾನಿಯುಂಟುಮಾಡುತ್ತದೆ. ಬೇಸಿಗೆ ಕಾಲದಲ್ಲಿ ಹೊಲದಲ್ಲಿ ಕೆಲಸ ಮಾಡುವುದು ಅಷ್ಟು ಸುಲಭವಲ್ಲ. ಬಿಸಿಲಿನಲ್ಲಿ ಒಂದೇ ಸಮನೆ ಕೆಲಸ ಮಾಡುವುದರಿಂದ ದೇಹ ದಣಿಯುತ್ತದೆ. ಬಿಸಿಲಿನ ತಾಪಕ್ಕೆ ಒಮ್ಮೊಮ್ಮೆ ದೇಹ ಬಸವಳಿಯುತ್ತದೆ. ಜ್ವರವೂ ಬರುತ್ತದೆ. ವೈದ್ಯನ ಬಳಿ ಹೋಗಿ ರೈತನು, ನನಗೆ ಏಕೆ ಹೀಗಾಯಿತೋ ಗೊತ್ತಿಲ್ಲ, ಇದ್ದಕ್ಕಿದ್ದಂತೆ ನನ್ನ ದೇಹ ಬಸವಳಿದಿದೆ ಎನ್ನುತ್ತಾನೆ. ಆಗ ವೈದ್ಯನು ಏನೂ ಆಗುವುದಿಲ್ಲ. ದಣಿವು ಹೆಚ್ಚಾದಾಗ ಹೀಗಾಗುವುದು, ಕೊಂಚ ಔಷದಿ ಕೊಟ್ಟರೆ ಸರಿಯಾಗುವುದು ಎನ್ನುತ್ತಾರೆ. ಇದೇ ರೀತಿ ಜ್ಞಾನವೆಂಬ ಸ್ವಲ್ಪವೇ ಔಷಧದಿಂದ ರೋಗವೆಂಬ ಅಜ್ಞಾನವು ದೂರವಾಗುತ್ತದೆ.

## "ಚೌಧರಿ ಎಂಬ ಜಮೀನ್ದಾರನಿಗೆ ಜ್ಞಾನೋದಯವಾಯಿತು"

ಉತ್ತರ ಪ್ರದೇಶದ ಬಾಗ್‌ಪತ್ ಎಂಬ ಜಿಲ್ಲೆಯ ಖೇಖಡಾ ಎಂಬ ಹಳ್ಳಿಯಲ್ಲಿ ಸುಮಾರು 275 ವರ್ಷಗಳ ಹಿಂದೆ ನಡೆದ ಘಟನೆ. ಆ ಹಳ್ಳಿಯಲ್ಲಿ ಒಬ್ಬ ಜಮೀನ್ದಾರನಿದ್ದನು. ಆ ಊರಿಗೆ ಅವನೇ ಅತೀ ಶ್ರೀಮಂತ. ಪಂಚಾಯಿತಿಯನ್ನು ಅವನೇ ನಡೆಸುತ್ತಿದ್ದನು. ಯಾವಾಗಲೂ ಸತ್ಯದ ಕಡೆಗೆ ತೀರ್ಪು ನೀಡುತ್ತಿದ್ದನು. ಸುಳ್ಳಿಗೆ ಎಂದಿಗೂ ಮಹತ್ವ ನೀಡುತ್ತಿರಲಿಲ್ಲ. ಅದೇ ಹಳ್ಳಿಯಲ್ಲಿ ಘೀಸಾದಾಸ್ ಎಂಬ ಒಬ್ಬ ಸಂತನಿದ್ದನು. ಅವನು ಅಲ್ಲಿ ಸತ್ಸಂಗ ನಡೆಸುತ್ತಿದ್ದನು. ಆಗಿನ ಕಾಲದಲ್ಲಿ ಅಸ್ಪೃಶ್ಯತೆ ಎನ್ನುವುದು ಉತ್ತುಂಗ ಸ್ಥಿತಿಯಲ್ಲಿತ್ತು. ಅವನು ಜಾತಿಯಲ್ಲಿ ಚಮ್ಮಾರನಾಗಿದ್ದನು. ಪರಮೇಶ್ವರ ಕಬೀರರು ಘೀಸಾದಾಸನಿಗೆ ಅವನು 7–8 ವರ್ಷದವನಿದ್ದಾಗ ಕಾಡಿನಲ್ಲಿ ಸಿಕ್ಕಿದ್ದರು. ಅವನಿಗೆ ಕಬೀರರು ಸತ್ಯಜ್ಞಾನ ಮತ್ತು ದೀಕ್ಷೆ ನೀಡಿ ಅಂತರ್ಧಾನರಾಗಿದ್ದರು. ಘೀಸಾದಾಸರು ದೊಡ್ಡವರಾದ ಮೇಲೆ ತಾವೇ ಸತ್ಸಂಗ ನಡೆಸುತ್ತಿದ್ದರು. ಅಕ್ಕ ಪಕ್ಕದ ಜನರು ಇವರ ಸತ್ಸಂಗ ಕೇಳಿ, ದೀಕ್ಷೆಯನ್ನು ಪಡೆದು ಸಂಕಟದಿಂದ ಮುಕ್ತರಾಗಿದ್ದರು. ಬೆಳಗ್ಗಿನ ಹೊತ್ತು ತಮ್ಮ ಜೀವನ ನಿರ್ವಹಣೆಗಾಗಿ ಅವರು ಕೆಲಸ ಮಾಡುತ್ತಿದ್ದರು. ರಾತ್ರಿಯ ವೇಳೆ ಸತ್ಸಂಗ ನಡೆಸುತ್ತಿದ್ದರು. ತಿಂಗಳಿನಲ್ಲಿ ಎರಡು ದಿನ ಸತ್ಸಂಗ ನಡೆಯುತ್ತಿತ್ತು. ರಾತ್ರಿಯ ವೇಳೆ ಪ್ರವಚನದಲ್ಲಿ ಸ್ತ್ರೀ–ಪುರುಷರು ಇಬ್ಬರೂ ಭಾಗವಹಿಸುತ್ತಿದ್ದರು. ಹಳ್ಳಿಯ ಜನರು ರಾತ್ರಿಯ ವೇಳೆ ಸ್ತ್ರೀಯರು ಪ್ರವಚನಕ್ಕೆ

ಹೋಗುವುದು ಒಳ್ಳೆಯದಲ್ಲವೆಂದು ಭಾವಿಸುತ್ತಿದ್ದ ಕಾಲವದು.

ಹಾಗಾಗಿ ಏನಾದರೂ ಅಪ್ರಿಯವಾದ ಘಟನೆ ನಡೆಯಬಹುದು. ಹಾಗಾಗಿ ಏನಾದರೂ ಮಾಡಿ ಸತ್ಸಂಗವನ್ನು ನಿಲ್ಲಿಸಬೇಕೆಂದು ಅವರೆಲ್ಲಾ ಯೋಚಿಸಿದರು. ಹಳ್ಳಿಯಲ್ಲಿ ಪಂಚಾಯಿತಿ ಏರ್ಪಡಿಸಲಾಯಿತು. ಅದರ ಪ್ರಕಾರ ಊರವರೆಲ್ಲಾ ಪ್ರವಚನ, ಸತ್ಸಂಗ ನಿಲ್ಲಿಸಬೇಕೆಂದು ಆಗ್ರಹಪಡಿಸಿದರು. ಅದರಂತೆ ಚೌಧರಿ ಜೀತಾರಾಮ್ ಸತ್ಸಂಗ ನಿಲ್ಲಿಸಬೇಕೆಂದು ಆಗ್ರಹಿಸಿದರು. ಅಷ್ಟರಲ್ಲಿ ಘೀಸಾದಾಸರು ಪಕ್ಕದ ಹಳ್ಳಿಯಲ್ಲಿ ಸತ್ಸಂಗ ನಡೆಸುತ್ತಿದ್ದರು. ಹಳ್ಳಿಯ ಜನರ ತೀರ್ಪನ್ನು ಘೀಸಾದಾಸರಿಗೆ ತಿಳಿಸಲು ಚೌಧರಿ ಜೀತಾರಾಮ್ ಪಕ್ಕದ ಹಳ್ಳಿಗೆ ಹೋದನು. ಹೋಗುವಾಗ ಒಂದು ಕೋಲನ್ನು ತೆಗೆದುಕೊಂಡು ಹೊರಟನು. ನೋಡಿದವರಿಗೆ ಅವನು ಜಗಳಕ್ಕೆ ಹೊರಟವನಂತೆ ಕಾಣುತ್ತಿತ್ತು. ಹಳ್ಳಿ ತಲುಪಿದ ತಕ್ಷಣ ಜೀತಾರಾಮನು ಕೋಲನ್ನು ಒಂದು ಮರಕ್ಕೆ ಒರಗಿಸಿ ಘೀಸಾದಾಸರ ಬಳಿ ತೆರಳಿದನು.

ಅಲ್ಲಿ ಸತ್ಸಂಗ ನಡೆಯುತ್ತಿತ್ತು. ತಾನೂ ಒಂದೆರಡು ನಿಮಿಷ ನಿಂತು ಪ್ರವಚನ ಕೇಳಿದನು. ಕೇಳುತ್ತಾ ಮೈ ಮರೆತನು. ಇಡೀ ರಾತ್ರಿ ಸತ್ಸಂಗದಲ್ಲಿ ಇದ್ದು ಅವನ ಮೈ ರೋಮಾಂಚನಗೊಂಡಿತು. ಅವನ ಕಣ್ಣುಗಳಿಂದ ನೀರು ಸುರಿಯಲಾರಂಭಿಸಿತು. ಪಶ್ಚಾತ್ತಾಪದಿಂದ ರೋಧಿಸುತ್ತಾ ಅವನು ನೇರವಾಗಿ ಹೋಗಿ ಘೀಸಾದಾಸರ ಕಾಲಿಗೆ ಬಿದ್ದು ಸತ್ಸಂಗ ಏರ್ಪಡಿಸದಂತೆ ತೀರ್ಪನ್ನು ಹೇಳಲು ಬಂದಿರುವುದಾಗಿ ಅಳುತ್ತಾ ಹೇಳಿದನು. ಹಾಗೆಯೇ, "ನನ್ನದು ತಪ್ಪಾಯಿತು ಗುರುಗಳೇ, ನನ್ನದು ತಪ್ಪಾಯಿತು, ನನಗೆ ದೀಕ್ಷೆ ಕೊಡಿ". ಎನ್ನುತ್ತಾ ಘೀಸಾದಾಸರ ಭಕ್ತನಾಗಿಬಿಟ್ಟನು. ಈ ವಿಷಯ ಕಾಡ್ಗಿಚ್ಚಿನಂತೆ ಖೇಖಡಾ ಹಳ್ಳಿಯಲ್ಲಿ ಹರಡಿತು. ಹಳ್ಳಿಯ ಜನರೆಲ್ಲಾ ಘೀಸಾದಾಸರಿಗೆ ಬಯ್ಯಲು ಪ್ರಾರಂಭಿಸಿದರು. ಹಾಗೂ ಚೌಧರಿಗೆ ಏನೋ ಮಾಟಮಂತ್ರ ಮಾಡಿ ತಮ್ಮ ವಶಮಾಡಿಕೊಂಡಿದ್ದಾರೆ ಎಂದು ಬಯ್ಯತೊಡಗಿದರು. ಜೀತಾರಾಮನು ಎಷ್ಟೇ ಹೇಳಿದರೂ ಹಳ್ಳಿಯವರು ಕೇಳಲು ಸಿದ್ಧರಿರಲಿಲ್ಲ. ಮತ್ತೊಮ್ಮೆ ಪಂಚಾಯಿತಿ ಏರ್ಪಟ್ಟಿತು. ಅದರಲ್ಲಿ ಜೀತಾರಾಮ್ ಮತ್ತು ಘೀಸಾದಾಸರಿಗೆ ಬಹಿಷ್ಕಾರ ಹಾಕಲಾಯಿತು. ಅವರಿಬ್ಬರೂ ಸಂತೋಷದಿಂದಲೇ ಹಳ್ಳಿಯನ್ನು ಬಿಟ್ಟು ಹೊರಟರು. ಆದರೆ ಅವರು ಹೊರಟ ಸ್ವಲ್ಪ ದಿನಗಳಲ್ಲೇ ಹಳ್ಳಿಗೆ ಕೆಟ್ಟಕಾಲ ಬಂದಿತು. ಅಕಾಲ ಮರಣ ಉಂಟಾಯಿತು. ಯೌವನದಲ್ಲೇ ಸ್ತ್ರೀಯರು ವಿಧವೆಯರಾದರು, ಬರಗಾಲವೇರ್ಪಟ್ಟಿತು. ಬೆಳೆಗೆ ಬೆಂಕಿ ಬಿದ್ದಿತು. ಮನೆಗಳಲ್ಲಿ ಜಗಳ ಕದನಗಳೇರ್ಪಟ್ಟವು. ಜಾನುವಾರುಗಳು ಸತ್ತು ಹೋದವು. ಉಳಿದವರು ರೋಗದಿಂದ ನರಳಿದರು. ಕೊನೆಗೆ ಹಳ್ಳಿಯವರು ದಿಕ್ಕು ತೋಚದೆ ಒಬ್ಬ ಜ್ಯೋತಿಷಿಯ ಬಳಿ ಹೋಗಿ ಕೇಳಿದಾಗ ಆ ಜೋತಿಷಿಯು, "ನಿಮ್ಮ ಹಳ್ಳಿಯಲ್ಲಿ ಇಬ್ಬರು ಸಂತರಿದ್ದರು. ಅವರಿಬ್ಬರೂ ಮತ್ತೆ ಹಳ್ಳಿಗೆ ಬಂದರೆ ಈ ಹಳ್ಳಿ ಉಳಿಯುತ್ತದೆ ಇಲ್ಲದಿದ್ದರೆ ಹಳ್ಳಿ ನಾಶವಾಗಿ ಹೋಗುತ್ತದೆ" ಎಂದನು. ಆಗ ಹಳ್ಳಿಯವರಿಗೆಲ್ಲಾ ಜ್ಞಾನೋದಯವಾಯಿತು. ಆ ಇಬ್ಬರು ಸಂತರನ್ನು ಕರೆತರಲು ಹೊರಟರು.

ಆ ಜನರನ್ನು ನೋಡಿ ಜೀತಾರಾಮನು ಘೀಸಾದಾಸರ ಬಳಿ ಹೋಗಿ, "ಹಳ್ಳಿಯ ಜನರೆಲ್ಲಾ ನಮ್ಮನ್ನು ಇಲ್ಲಿಂದಲೂ ಎತ್ತಂಗಡಿ ಮಾಡಲು ಬರುತ್ತಿದ್ದಾರೆ" ಎಂದನು. ಘೀಸಾದಾಸರು, "ಹಾಗಾದರೆ ಜೋಳಿಗೆಯನ್ನು ತೆಗೆದುಕೋ. ಕಂಬಳಿಯನ್ನು ಹೆಗಲ ಮೇಲೆ ಹಾಕಿಕೊಂಡು ಹೊರಡೋಣ ನಡೆ" ಎಂದು ಏಳಲು ಪ್ರಯತ್ನಿಸಿದರು. ಅಷ್ಟರಲ್ಲಿ ಊರಿನ ಮುಖಂಡರು ಬಂದು ತಮ್ಮ ತಲೆಯ ಮೇಲಿದ್ದ ಪಗಡಿಯನ್ನು ತೆಗೆದು ಅವರಿಬ್ಬರ ಕಾಲ ಬಳಿ ಇಟ್ಟು, "ಗುರುಗಳೇ, ನಮ್ಮ ತಪ್ಪನ್ನು ಕ್ಷಮಿಸಿಬಿಡಿ. ನೀವು ಅಲ್ಲಿಂದ ಹೊರಟು ಹೋದ ನಂತರ ನಮ್ಮ ಊರೇ ಹಾಳಾಗುತ್ತಿದೆ. ಏನಾದರೂ ಮಾಡಿ ಉಳಿಸಿ. ಇಲ್ಲದಿದ್ದರೆ ನಾವೆಲ್ಲಾ ನಿಮ್ಮ ಜೊತೆ ಬರುತ್ತೇವೆ." ಎಂದರು ಆ ಊರಿನ ಜನರೂ ಬಂದು ಅಲ್ಲಿ ಸೇರಿದರು. ಅವರೆಲ್ಲಾ. "ಈ ಇಬ್ಬರು ಸಂತರು ಬಂದಾಗಿನಿಂದ ನಮ್ಮ ಊರು ಉದ್ಧಾರವಾಗಿದೆ. ಯಾರೂ ಪರಸ್ಪರ ಜಗಳವಾಡುತ್ತಿಲ್ಲ. ಒಳ್ಳೆಯ ಬೆಳೆ ಬಂದಿದೆ." ಎಂದರು. ಆದರೆ ಖೇಖಡಾ ಹಳ್ಳಿಯ ಜನರು ಬಹಳ ವಿನಂತಿಸಿಕೊಂಡ ನಂತರ ಆ ಸಂತರು ಅವರ ಹಳ್ಳಿಗೆ ಹೋಗಲು ಒಪ್ಪಿಕೊಂಡರು. ಪ್ರತಿ ಹುಣ್ಣಿಮೆಗೆ ಖೇಖಡಾಗೆ ಹೋಗಲು ಒಪ್ಪಿದರು. ಅದರಂತೆ ಆ

ಹುಣ್ಣಿಮೆಯ ದಿನ ಅವರ ಹಳ್ಳಿಗೆ ಹೋದಾಗ ಅಲ್ಲಿ ಸಂಪೂರ್ಣ ಶಾಂತಿ ನೆಲೆಸಿತು. ಜಾನುವಾರುಗಳ ರೋಗ ವಾಸಿಯಾಯಿತು. ಎಲ್ಲರೂ ನೆಮ್ಮದಿಯಿಂದ ಇರಲಾರಂಭಿಸಿದರು. ಎಲ್ಲಾ ಕಷ್ಟಗಳೂ ದೂರವಾದವು. ಇಂದಿಗೂ ಆ ಹಳ್ಳಿಯಲ್ಲಿ ಸಂತ ಘೀಸಾದಾಸ್ ಮತ್ತು ಭಕ್ತ ಜೀತಾರಾಮ್‌ರ ಹೆಸರಿನಲ್ಲಿ ಜಾತ್ರೆಯಾಗುತ್ತದೆ. ಸಂತಗರೀಬ್‌ದಾಸರು ಹೇಳಿದ್ದಾರೆ:–

ಗರೀಬ್, ಜಿಸ್ ಮಂಡಲ್ ಸಾಧು ನಹೀಂ, ನದೀ ನಹೀಂ ಗುಂಜಾರ್ ।
ತಜ್ ಹಂಸಾ ವಹ್ ದೇಶಡಾ, ಜಮ್ ಕೀ ಮೋಟೀ ಮಾರ್ ॥

ಶಬ್ದಾರ್ಥ :– ಯಾವ ಕ್ಷೇತ್ರದಲ್ಲಿ ಮಹಾತ್ಮ, ಗುರುಜನರು ಇರುವುದಿಲ್ಲವೋ, ಯಾವ ಪ್ರದೇಶದ ಸುತ್ತಮುತ್ತಲೂ ನದಿ ಹರಿಯುವುದಿಲ್ಲವೋ, ಹೇ ಭಕ್ತ ! ಆ ಪ್ರದೇಶವನ್ನು ತೊರೆದುಬಿಡು. ಅಲ್ಲಿ ಮೃತ್ಯುವಿನ ಕರಿ ನೆರಳಿರುತ್ತದೆ.

ಹಾಗಾಗಿ ಓದುಗರೇ, ನಿಮಗೆ ಯಾವ ವಯಸ್ಸಿನಲ್ಲಿ ಸದ್ಗುರು ಸಿಕ್ಕರೂ ನೀವು ಭಕ್ತರಾಗಿ ಬಿಡಿ. ಸಂತ ಗರೀಬ್‌ದಾಸರು ಹೇಳಿದ್ದಾರೆ.

ಗರೀಬ್, ಚಲೀ ಗಯೀ ಸೋ ಜಾನ್ ದೇ, ಲೇ ರಹತೀ ಕೂಂ ರಾಖ್ ।
ಉತರೀ ಲಾವ್ ಚಢಾಯಿಯೋ, ಕರೋ ಅಪೂಠೀ ಚಾಕ್ ॥

ಭಾವಾರ್ಥ:– ಹೇ ಮಾನವಾ! ಗುರು ಸಿಗುವ ಮುನ್ನ ಕಳೆದ ಆಯುಷ್ಯವೆಲ್ಲಾ ಬರೀ ವ್ಯರ್ಥ. ಇನ್ನುಳಿದಿರುವ ಆಯುಷ್ಯದಲ್ಲಿ ಚಿಂತೆಯೆಲ್ಲವನ್ನೂ ಮರೆತು ಶ್ರದ್ಧೆಯಿಂದ ಭಕ್ತಿ ಮಾಡಿ ನಿನ್ನನ್ನು ನೀನು ಉದ್ಧರಿಸಿಕೋ. ಭಕ್ತಿಯಲ್ಲಿ ತೊಡಗಿಸಿಕೊಳ್ಳುವುದರಿಂದ ಸಾಂಸಾರಿಕ ಕಾರ್ಯಗಳು ಸುಲಭವಾಗುತ್ತವೆ. ಬಾವಿಯಿಂದ ನೀರನ್ನು ಮೇಲೆತ್ತುವಾಗ ರಾಟೆಯಿಂದ ಹಗ್ಗವು ಜಾರಿದರೆ, ನೀರೆಳೆಯುವುದು ಬಹಳ ಕಷ್ಟವಾಗುತ್ತದೆ. ಪುನಃ ಹಗ್ಗವನ್ನು ರಾಟೆಯ ಚಕ್ರದಲ್ಲಿ ಸರಿಯಾಗಿ ಕೂರಿಸಿದರೆ ನೀರನ್ನು ಮೇಲೆತ್ತುವುದು ಸುಲಭವಾಗುತ್ತದೆ. ಸದ್ಗುರುವಿನ ಆಶ್ರಮಕ್ಕೆ ಬರುವ ಮೊದಲು ಹಗ್ಗವು ಚಕ್ರದಿಂದ ಪಕ್ಕಕ್ಕೆ ಸರಿದಂತೆ ಜೀವನವು ಬಹಳ ಕಷ್ಟಕರವಾಗಿರುತ್ತದೆ. ಅದೇ ರೀತಿ ಹಗ್ಗವನ್ನು ರಾಟೆಯ ಚಕ್ರದಲ್ಲಿ ಸರಿಯಾಗಿ ಕೂರಿಸಿದಾಗ ಅಂದರೆ ಭಕ್ತಿಯನ್ನು ಪ್ರಾರಂಭಿಸಿದಾಕ್ಷಣ ಕೆಲಸಗಳೆಲ್ಲಾ ಸುಲಭವಾಗಿ ಜರುಗುವುದು. ಈಗ ಆಯುಷ್ಯ ಬಹಳ ಕಡಿಮೆ ಇದೆ ಎಂದು ಚಿಂತಿಸಬಾರದು. ಈಗ ಆಗಿದ್ದಾದರೂ ಏನು? ಭಕ್ತಿ ಮಾಡೋಣ. ಸತ್ಸಂಗದಿಂದ ಯಾವಾಗ ಬೇಕಾದರೂ ಜ್ಞಾನ ದೊರಕುತ್ತದೆ. ಉಳಿದ ಆಯುಷ್ಯವನ್ನು ದೃಢ ಚಿತ್ತದಿಂದ ಭಕ್ತಿಯಿಂದ ಇರಬೇಕು ಎಂದು ಚಿಂತಿಸಬೇಕು.

ಭಾವಾರ್ಥ:– ಕಳೆದುಹೋದ ವಯಸ್ಸಿನ ಚಿಂತೆ ಬಿಟ್ಟು, ಉಳಿದ ಜೀವನದಲ್ಲಿ ದಾನ–ಧರ್ಮ, ಭಕ್ತಿ, ಸೇವೆ ಮಾಡು. ಹಿಂದಿನ ಕಾಲದಲ್ಲಿ ಹೊಲಕ್ಕೆ ನೀರು ಹಾಯಿಸಲು ಬಾವಿಯಿಂದ ನೀರೆತ್ತಲು ಚರ್ಮದ ಚೀಲಗಳನ್ನು ಉಪಯೋಗಿಸಲಾಗುತ್ತಿತ್ತು. ಅದರಲ್ಲಿ 2–3 ಕ್ವಿಂಟಾಲ್ ನೀರು ತುಂಬುತ್ತಿತ್ತು. ಆ ಚೀಲವನ್ನು ದಪ್ಪ ಹಗ್ಗಕ್ಕೆ ಕಟ್ಟಿ, ಆ ಹಗ್ಗವನ್ನು ರಾಟೆಯ ಚಕ್ರದ ಮೇಲೆ ನಿಲ್ಲಿಸಲಾಗುತ್ತಿತ್ತು. ಒಮ್ಮೊಮ್ಮೆ ಜೋರಾಗಿ ಎಳೆದಾಗ ಹಗ್ಗವು ಚಕ್ರದಿಂದ ಹೊರ ಬಂದು ಬಿಡುತ್ತಿತ್ತು. ಆಗ ನೀರೆಳೆಯುವುದು ಬಹಳ ಕಷ್ಟವಾಗುತ್ತಿತ್ತು. ತಕ್ಷಣವೇ ಹಗ್ಗವನ್ನು ರಾಟೆಯ ಚಕ್ರದ ಮಧ್ಯಕ್ಕೆ ಸೇರಿಸುವ ಕೆಲಸ ಮಾಡಲಾಗುತ್ತಿತ್ತು. ಆಗ ನೀರು ಚರ್ಮದ ಚೀಲದ ಮೂಲಕ ಸುಲಭವಾಗಿ ಮೇಲೆ ಬರುತ್ತಿತ್ತು. ಹೀಗೆ ಗುರುವಿನ ಆಶ್ರಯ ಪಡೆಯದಿದ್ದರೆ ನಿಮ್ಮ ಜೀವನವೆಂಬ ಹಗ್ಗ ಚಕ್ರದಿಂದ ಹೊರಬರುತ್ತದೆ. ಜೀವನದ ಪ್ರತಿ ಕೆಲಸವೂ ಕಷ್ಟವಾಗುತ್ತದೆ. ಆ ಜೀವನವೆಂಬ ಹಗ್ಗವನ್ನು ಮತ್ತೆ ಚಕ್ರದ ಮಧ್ಯೆ ಕೂರಿಸಿ, ಅಂದರೆ ಗುರುವಿನ ಆಶ್ರಯದಿಂದ ನಿಮ್ಮ ಜೀವನದ ದಾರಿ ಸುಗಮವಾಗಲಿದೆ.

## "ವೇಶ್ಯೆಯ ಉದ್ಧಾರ"

ಪರಮೇಶ್ವರ ಕಬೀರರು ರಾತ್ರಿಯಲ್ಲಿ ಮನೆ ಮನೆ ತೆರಳಿ ಸತ್ಸಂಗ ನಡೆಸುತ್ತಿದ್ದರು. ಹಗಲಿನಲ್ಲಿ ತಮ್ಮ ಜೀವನ ನಿರ್ವಹಣೆಗಾಗಿ ಕೆಲಸದಲ್ಲಿ ತೊಡಗಿಕೊಳ್ಳುತ್ತಿದ್ದರು. ಕಾಶಿ ಎನ್ನುವ ಊರಿನಲ್ಲಿ ಒಬ್ಬ ವೇಶ್ಯೆ ಇದ್ದಳು. ಒಂದುದಿನ ರಾತ್ರಿ ಸತ್ಸಂಗ ನಡೆಯುತ್ತಿತ್ತು. ವೇಶ್ಯೆಯು ಆ ದಿನ ರಾತ್ರಿ ಯಾವುದೇ ಗಿರಾಕಿಗಳಿಲ್ಲದೆ ಮಹಡಿಯ ಮೇಲೆ ಕುಳಿತಿದ್ದಳು. ಅವಳ ಹೆಸರು ಚಂಪಾಕಲಿ. ಅವಳು ಬಹಳ ದೊಡ್ಡ ಬಂಗಲೆ ಕಟ್ಟಿಸಿಕೊಂಡಿದ್ದಳು. ಆ ರಾತ್ರಿ ಅವಳು ಮಹಡಿಯ ಮೇಲೆ ಕುಳಿತು ಗಿರಾಕಿಯನ್ನು ಎದುರು ನೋಡುತ್ತಿದ್ದಳು. ಸತ್ಸಂಗದ ವಚನಗಳು ಅವಳ ಕಿವಿಗೆ ಬಿದ್ದವು. ಪರಮಾತ್ಮ ಕಬೀರರು ಹೇಳುತ್ತಿದ್ದರು. "ಮಾನವನ ಜನ್ಮವು ಬಹಳ ಪುಣ್ಯದಿಂದ ಲಭಿಸುತ್ತದೆ. ಯಾವ ಸ್ತ್ರೀ, ಪುರುಷನು ಭಕ್ತಿಯಿಂದ ಇರುವುದಿಲ್ಲವೋ, ದಾನ, ಧರ್ಮ, ಸೇವೆ ಮಾಡುವುದಿಲ್ಲವೋ ಅವರು ಮಹಾಪರಾಧಿಗಳು. ಭಗವದ್ಗೀತೆಯ 3ನೇ ಅಧ್ಯಾಯದ 12ನೇ ಶ್ಲೋಕದಲ್ಲಿ ಹೇಳಿರುವಂತೆ ಪರಮಾತ್ಮನಿಂದ ಪಡೆದ ಹಣದ ಕೊಂಚ ಭಾಗವನ್ನು ದಾನ ಧರ್ಮದಲ್ಲಿ ವಿನಿಯೋಗಿಸದಿದ್ದರೆ, ಅವನೇ ಅನುಭವಿಸುತ್ತಿದ್ದರೆ ಅವನು ಪರಮಾತ್ಮನ ದೃಷ್ಟಿಯಲ್ಲಿ ಒಬ್ಬ ಕಳ್ಳ. ಯಾರು ಕಳ್ಳತನ, ದರೋಡೆ, ಮೋಸ, ವೇಶ್ಯಾವೃತ್ತಿ ಮಾಡುತ್ತಾರೋ ಅವರು ನಿಜವಾಗಲೂ ಮಹಾಪರಾಧಿಗಳು. ಪರಮಾತ್ಮನ ಆಸ್ಥಾನದಲ್ಲಿ ಅವರಿಗೆ ಕಠಿಣ ಶಿಕ್ಷೆ ಸಿಗುವುದು.

ಕಬೀರ್, ಚೋರೀ ಜಾರೀ ವೈಶ್ಯಾ ವೃತಿ, ಕಬಹು ನಾ ಕರಯೋ ಕೋಯೆ ।
ಪುಣ್ಯ್ ಪಾಯೀ ನರ್ ದೇಹೀ, ಓಚ್ಛೀ ಠೌರ್ ನ ಖೋಯೇ ॥

ಶಬ್ದಾರ್ಥ :– ಹೇ ಮಾನವಾ! ಪರಸ್ತ್ರೀಯನ್ನು ಸೇರುವ ಅಂದರೆ ಪರಪುರುಷರಿಂದ ಹಣದ ದುರಾಸೆಯಲ್ಲಿ ಸ್ತ್ರೀಯು ಸಂಭೋಗ ಎಂದಿಗೂ ಮಾಡಬಾರದು. ಈ ಮಾನವ ಶರೀರವು (ಸ್ತ್ರೀ/ಪುರುಷ) ಬಹಳ ಪುಣ್ಯದಿಂದ ಪ್ರಾಪ್ತವಾಗಿದೆ. ಇದರಿಂದ ಪಾಪ ಕಾರ್ಯಗಳನ್ನು ಮಾಡಿ ಕೆಟ್ಟ ಜಾಗಗಳಿಗೆ ಹೋಗಿ, ಈ ದೇಹವನ್ನು ನಾಶ ಮಾಡಬೇಡ. ಒಳ್ಳೆಯ ಕೆಲಸ ಮಾಡಿ, ಗುರುವನ್ನು ಪಡೆದು, ನಿಮ್ಮ ಉದ್ಧಾರ ಮಾಡಿಕೊಳ್ಳಿ.

ಮಾನವ ಶರೀರ ಪಡೆದ ವ್ಯಕ್ತಿ ಮೊಟ್ಟ ಮೊದಲಿಗೆ ಪೂರ್ಣಗುರುವಿನ ಬಳಿ ಹೋಗಿ ದೀಕ್ಷೆ ಪಡೆಯಬೇಕು. ಜೀವನಪರ್ಯಂತ ನೇಮ, ನಿಷ್ಠೆಯಿಂದ ಇದ್ದು, ಸಾಧನೆ, ಸೇವೆ, ದಾನ–ಧರ್ಮ ಮಾಡುತ್ತಿರಬೇಕು. ತನ್ನ ದೈನಂದಿನ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ಆದರೆ ಕೆಟ್ಟ ಕೆಲಸ ಮಾಡಬಾರದು. ಆಗ ಅವನ ಉದ್ಧಾರವಾಗುತ್ತದೆ. ಆಧ್ಯಾತ್ಮ ಜ್ಞಾನದ ಕೊರತೆಯಿಂದ ಮಾನವನು ಕೇವಲ ಧನ ಸಂಪಾದನೆಯನ್ನೇ ತನ್ನ ಮುಖ್ಯ ಗುರಿಯಾಗಿರಿಸಿಕೊಂಡು ಜೀವನವೆಂಬ ಯಾತ್ರೆಯನ್ನು ನಿಶ್ಚಯಿಸಿಕೊಳ್ಳುತ್ತಾನೆ. ಒಂದು ವೇಳೆ ನಿಮ್ಮ ಬಳಿ ಕೋಟ್ಯಾಂತರ ಧನ–ಸಂಪತ್ತು ಇದೆ, ಇಡೀ ಜೀವನವನ್ನು ಮೋಸದಿಂದ ಕಳೆದಿರುವಿರಿ, ಇದ್ದಕ್ಕಿದ್ದಹಾಗೆ ಸಾವುಂಟಾಗುತ್ತದೆ. ಆಗ ಇಡೀ ಹಣ ನಿಮ್ಮ ಜೊತೆ ಬರುವುದಿಲ್ಲ, ನಿಮ್ಮ ಶರೀರವೂ ನಿಮ್ಮ ಬಳಿ ಇಲ್ಲ. ಕೇವಲ ನೀವು ಮಾಡಿದ ಪಾಪವಷ್ಟೇ ನಿಮ್ಮ ಜೊತೆ ಇರುತ್ತದೆ.

ಕಾಯಾ ತೇರೀ ಹೈ ನಹೀಂ, ಮಾಯಾ ಕಹಾಂ ಸೆ ಹೋಯ್ ।
ಗುರು ಚರಣೋಂ ಮೆಂ ಧ್ಯಾನ್ ರಖ್, ಇನ್ ದೋನೋಂ ಕೋ ಖೋಯ್ ॥

ಕಬೀರ್, ಸಬ್ ಜಗ್ ನಿರ್ಧನಾ, ಧನವಂತಾ ನಾ ಕೋಯ್ ।
ಧನವಾನ್ ವಹ್ ಜಾನಿಯೇ, ಜಾಪೇ ರಾಮ್ ನಾಮ್ ಧನ್ ಹೋಯ್ ॥

ಭಾವಾರ್ಥ:– ಮಾನವನು ತನ್ನ ಶರೀರವನ್ನು ರೋಗಮುಕ್ತಗೊಳಿಸಲು ತನ್ನ ಸಂಪತ್ತನ್ನೆಲ್ಲಾ ಖರ್ಚು ಮಾಡಿ ಉಪಚರಿಸಿಕೊಳ್ಳುತ್ತಾನೆ. ನಿಮ್ಮ ಶರೀರವೂ ನಿಮ್ಮ ಜೊತೆ ಬರುವುದಿಲ್ಲ. ಇದನ್ನೇ

ಮಾಯೆಯೆನ್ನುವುದು. ಗುರುವಿನಿಂದ ದೀಕ್ಷೆಪಡೆದು ಹಗಲಿರುಳೂ ಭಕ್ತಿಯಿಂದ ಇರಿ. ಗುರುವಿನಿಂದ ಪಡೆದ ಜ್ಞಾನದ ಆಧಾರದಿಂದ ಜೀವನದ ದಾರಿಯನ್ನು ಕಂಡುಕೊಳ್ಳಿ. ಕಾಯ (ಶರೀರ) ಮತ್ತು ಮಾಯಾದ (ಹಣ) ಮೋಹವನ್ನು ತ್ಯಜಿಸಿ ಭಕ್ತಿ ಎನ್ನುವ ಹಣವನ್ನು ಸಂಗ್ರಹಿಸಿ.

**ಹೇ ಮಾನವ! ಮಾನವ ಜನ್ಮದ ಹಿಂದಿನ ಇತಿಹಾಸವನ್ನು ನೋಡೋಣ!**

ಸರ್ವ್ ಸೋನೇ ಕೀ ಲಂಕಾ ಥೀ, ರಾವಣ್ ಸೆ ರಣಧೀರಂ ।
ಏಕ ಪಲಕ್ ಮೆಂ ರಾಜ್ ನಷ್ಟ್ ಹುವಾ, ಜಮ್ ಕೆ ಪಡೇ ಜಂಜೀರ್ ॥

ಗರೀಬ್, ಭಕ್ತಿ ಬಿನಾ ಕ್ಯಾ ಹೋತ್ ಹೈ, ಭ್ರಮ್ ರಹಾ ಸಂಸಾರ್ ।
ರತೀ ಕಂಚನ್ ಪಾಯಾ ನಹೀಂ, ರಾವಣ್ ಚಲೀ ಬಾರ್ ॥

ಭಾವಾರ್ಥ:– ಶ್ರೀಲಂಕಾದ ರಾಜನಾದ ರಾವಣನ ಬಳಿ ಚಿನ್ನದ ಅರಮನೆಯೂ ಇತ್ತು. ವಿನಾಶದ ಕಾಲ ಸಮೀಪಿಸಿದಾಗ ಅವನು ಒಂದು ಗ್ರಾಂ ಚಿನ್ನವನ್ನೂ ತನ್ನ ಜೊತೆ ತೆಗೆದುಕೊಂಡು ಹೋಗಲಿಲ್ಲ.

ಭಾವಾರ್ಥ:–ಪರಮೇಶ್ವರ ಕಬೀರರು ಭಕ್ತಿ ಇಲ್ಲದೆ ಜೀವಕ್ಕೆ ಯಾವುದೇ ಲಾಭವಿಲ್ಲವೆಂದು ತಿಳಿಸಿ, ಅದಕ್ಕೆ ಸಮರ್ಥನೆಯನ್ನು ನೀಡಿದ್ದಾರೆ, ಮಾಯೆ ಆವರಿಸಿಕೊಂಡರೆ ಜೀವನ ಪರ್ಯಂತ ಅಲೆದಾಡಬೇಕಾಗುತ್ತದೆ. ಈ ಹಿಂದೆ ಹೇಳಿದಂತೆ ರಾವಣನು ಚಿನ್ನದ ಅರಮನೆಯಲ್ಲಿದ್ದರೂ, ವಿನಾಶ ಬಂದಾಗ ಒಂದು ಗ್ರಾಂ ಚಿನ್ನವನ್ನು ಅವನು ತೆಗೆದುಕೊಂಡು ಹೋಗಲಿಲ್ಲ. ಸತ್ಯ ಭಕ್ತಿ ಮಾಡದ ಕಾರಣ ಯಮದೂತರಿಂದ ಕೈಗೆ ಬೇಡಿಯನ್ನು ತೊಡಿಸಿಕೊಂಡು ಯಮರಾಜನ ಮುಂದೆ ನಿಲ್ಲಬೇಕಾಯಿತು. ನಂತರ ಅವನು ನರಕದಲ್ಲಿ ತಳ್ಳಲ್ಪಟ್ಟನು. ಆದ್ದರಿಂದ ಹೇ ಮಾನವ! ಕೆಟ್ಟ ಕೆಲಸಗಳಿಂದ ದೂರವಿದ್ದು, ಒಳ್ಳೆಯ ಕೆಲಸ ಮಾಡು. ಕಬೀರರು ಹೇಳುವಂತೆ ಆಧ್ಯಾತ್ಮಿಕ ಜ್ಞಾನವಿಲ್ಲದಿದ್ದರೆ ಒಳ್ಳೆಯ ವ್ಯಕ್ತಿಗಳಿಂದಲೂ ಪಾಪದ ಕೆಲಸಗಳಾಗಿವೆ. ಅವರು ಸತ್ಸಂಗಕ್ಕೆ ಬಂದರೆ. ಅವರ ಪಾಪಗಳೆಲ್ಲಾ ತೊಳೆದುಹೋಗಿ ತಮ್ಮ ಉದ್ಧಾರವನ್ನು ಮಾಡಿಕೊಳ್ಳುವರು. ಕಬೀರರು ಹೇಳುವುದೇನೆಂದರೆ, ನನ್ನ ಬಳಿ ಸಾಧನೆಯ ಯಥಾರ್ಥ ಮಂತ್ರವಿದೆ. ಅದು ಸರ್ವಪಾಪಗಳನ್ನು ನಾಶಪಡಿಸುತ್ತದೆ. ಇಂದಿನ ವಿಜ್ಞಾನಿಗಳು ಕಂಡುಹಿಡಿದಿರುವ ಔಷಧಿಯು ಹೇಗೆ ಹುಲ್ಲು, ಕಳೆಯನ್ನು ಹಾಳುಮಾಡಿ, ಬೆಳೆಯನ್ನು ಮಾತ್ರ ಉಳಿಸುವುದೋ, ಹಾಗೇ ಆ ದಿವ್ಯ ಮಂತ್ರವು ಪಾಪಗಳನ್ನು ತೊಳೆದು ಪುಣ್ಯವನ್ನು ಉಳಿಸುವುದು. ಆ ಮಂತ್ರವನ್ನು ನಾನು ನನ್ನ ಲೋಕದಿಂದ ತಂದಿರುವೆ.

ಸೋಹಂ ಶಬ್ದ್ ಹಮ್ ಜಗ್ ಮೆಂ ಲಾಯೆ । ಸಾರ್ ಶಬ್ದ ಹಮ್ ಗುಪ್ತ ಛಿಪಾಯೆ ॥

ಋಗ್ವೇದದ 9ನೇ ಮಂಡಲದ 95ನೇ ಸೂಕ್ತಿಯ 2ನೇ ಮಂತ್ರದಲ್ಲಿ ಹೇಳಿರುವಂತೆ "ಪರಮಾತ್ಮನು (ಪ್ರಪಂಚ) ಈ ಸಂಸಾರದಲ್ಲಿ ಪ್ರತ್ಯಕ್ಷನಾಗಿ ತನ್ನ ಅಮೃತವಾಣಿಯಿಂದ ಮುಕ್ತಿಯ ಸತ್ಯಮಾರ್ಗದ ಪ್ರೇರಣೆ ನೀಡುವನು. ಆ ಪರಮಾತ್ಮನು ಎಲ್ಲಾ ದೇವರ ದೇವನು. ಅಂದರೆ ಎಲ್ಲರಿಗೂ ದೇವನು. ಅವನು ಗುಪ್ತನಾಮಗಳ ಆವಿಷ್ಕಾರ ಮಾಡುತ್ತಾನೆ. ಯಾರಾದರೂ ಮಹಾಪಾಪಿಗಳಿದ್ದರೆ, ಒಂದು ವೇಳೆ ಅವನು ಸತ್ಯ ಸಾಧನೆ ಮಾಡಿದರೆ ಅವನು ಮುಂದೆಂದೂ ಪಾಪ ಮಾಡುವುದಿಲ್ಲ. ಅವನ ಪಾಪಗಳೆಲ್ಲಾ ಅಂತ್ಯವಾಗುತ್ತದೆ. ಅವನ ಉದ್ಧಾರವು ಆಗಿಯೇ ಆಗುತ್ತದೆ.

ಈ ಅಮೃತವಾಣಿಯನ್ನು ಕೇಳಿದ ವೇಶ್ಯೆಯು ನಿದ್ದೆಯಿಂದ ಎಚ್ಚೆತ್ತುಕೊಂಡಂತೆ ಬೆಚ್ಚಿದಳು. ನಂತರ ಮಹಿಳೆಯರ ಹಿಂದೆ ಹೋಗಿ ಸಾಲಿನಲ್ಲಿ ಕುಳಿತಳು. ಸತ್ಸಂಗ ಮುಗಿದ ನಂತರ ದೀಕ್ಷೆ ಪಡೆಯಲು ಇಚ್ಛಿಸುವವರು ಮುಂದೆ ಬರಬೇಕೆಂದು ಹೇಳಿದರು. ಆಗ ಕೆಲ ಸ್ತ್ರೀ, ಪುರುಷರು ಎದ್ದು ಮುಂದೆ ಬಂದರು. ಆಗ ವೇಶ್ಯೆಯೂ ಎದ್ದು ಗುರುಗಳ ಬಳಿ ಬಂದು ತನ್ನ ವೃತ್ತಾಂತವನ್ನೆಲ್ಲಾ ಹೇಳಿ

ಅಳತೊಡಗಿದಳು ಹಾಗೂ ಗುರುಗಳ ಬಳಿ ಹೀಗೆಂದಳು, "ನಾನು ನನ್ನ 40 ವರ್ಷಗಳ ಜೀವನದಲ್ಲಿ ಮಾಡಬಾರದ ಪಾಪ ಮಾಡಿದ್ದೇನೆ, ನಿಮ್ಮ ಅಮೃತವಾಣಿ ಕೇಳಿದ ಮೇಲೆ ನನಗೆ ಪಶ್ಚಾತ್ತಾಪವಾಗಿದೆ, ನನ್ನಂಥಾ ಪಾಪಿಯ ಜೀವನ ಉದ್ಧಾರವಾಗುವುದೇ?", ಆಗ ಪರಮೇಶ್ವರ ಕಬೀರರು ಹೇಳಿದರು:–

ಕಬೀರ್, ಜಬ್ ಹೀ ಸತ್ಯನಾಮ್ ಹೃದಯ್ ಧರಾ, ಭಯೋ ಪಾಪ್ ಕೋ ನಾಶ್ ।
ಜೈಸೆ ಚಿನಂಗೀ ಅಗ್ನಿ ಕೀ, ಪಡ್ಯೆ ಪುರಾನ್ಯೆ ಘಾಸ್ ॥

ಭಾವಾರ್ಥ:– ಹೇಗೆ ರಾಶಿ ರಾಶಿ ಹುಲ್ಲನ್ನು ಒಂದು ಸಣ್ಣ ಬೆಂಕಿ ಕಿಡಿ ಸುಟ್ಟು ಬೂದಿಮಾಡಿಬಿಡುವುದೋ, ಹಾಗೂ ಗಾಳಿ ಬಂದಾಗ ಆ ಬೂದಿಯನ್ನು ಎತ್ತಿಕೊಂಡು ಹೋಗುವುದೋ ಹಾಗೆ ನನ್ನ ಒಂದು ಮಂತ್ರವು ಜನ್ಮ ಜನ್ಮಾಂತರದ ಪಾಪವನ್ನು ಸುಟ್ಟು ಭಸ್ಮ ಮಾಡಿಬಿಡುವುದು. ಭವಿಷ್ಯದಲ್ಲಿ ಯಾವುದೇ ತಪ್ಪನ್ನು ಎಸಗದಿದ್ದರೆ, ಮೋಕ್ಷ ಕಟ್ಟಿಟ್ಟ ಬುತ್ತಿ.

(ಯಜುರ್ವೇದ 8ನೇ ಅಧ್ಯಾಯದ 13ನೇ ಮಂತ್ರದಲ್ಲೂ ಸಹ ಪ್ರಮಾಣವಿದೆ, ಪರಮಾತ್ಮನು ತನ್ನ ಭಕ್ತನ (ಎನಸಃ ಎನಸಃ) ಘೋರ ಪಾಪವನ್ನು ನಾಶಮಾಡಿ ಜೀವದ ಉದ್ಧಾರ ಮಾಡುತ್ತಾನೆ)

ಅದೇ ದಿನ ಆ ವೇಶ್ಯೆಯು ವೇಶ್ಯಾವೃತ್ತಿಯನ್ನು ಬಿಟ್ಟುಬಿಟ್ಟಳು. ಪರಮಾತ್ಮ ಕಬೀರರಿಂದ ದೀಕ್ಷೆ ಪಡೆದಳು. ಮರ್ಯಾದೆಯಲ್ಲಿದ್ದುಕೊಂಡು ಜೀವನಪರ್ಯಂತ ಭಕ್ತಿಯಿಂದ ಸಾಧನೆಗೈದಳು.

## "ರಂಕಾ–ಬಂಕಾನ ಕತೆ"

ಚಂಪಾಕಲಿಯು ಪರಮೇಶ್ವರ ಕಬೀರರನ್ನು ಕೇಳಿದಳು, "ಸ್ವಾಮಿ, ಈ ಪಾಪದ ಹಣವನ್ನು ಏನು ಮಾಡಲಿ?" ಆಗ ಗುರುಗಳೆಂದರು, "ಇದನ್ನೆಲ್ಲಾ ದಾನ ಮಾಡಿಬಿಡು". ಮನೆಗೆ ಹೋದ ಚಂಪಾಕಲಿ 'ಎಲ್ಲಾ ಹಣವನ್ನು ದಾನ ಮಾಡಿ ಬಿಟ್ಟರೆ ನಾನು ಏನನ್ನು ತಿನ್ನಲಿ? ನನಗೆ ಬೇರೆ ಕೆಲಸವೂ ಇಲ್ಲ' ಎಂದು ಯೋಚಿಸಿದಳು. ಮಾರನೇ ದಿನ ಸತ್ಸಂಗದಲ್ಲಿ ಈ ಕತೆ ಹೇಳಲ್ಪಟ್ಟಿತು.

ಒಂದೂರಿನಲ್ಲಿ ಒಬ್ಬ ರಂಕ (ಪುರುಷ) ಮತ್ತು ಬಂಕ (ಸ್ತ್ರೀ) ಎಂಬ ದಂಪತಿಗಳಿದ್ದರು. ಅವರು ಗುರುಗಳ ನಿಜವಾದ ಭಕ್ತರಾಗಿದ್ದರು. ಅವರಿಗೆ ಅಂಬಿಕ ಎಂಬ ಮಗಳಿದ್ದಳು. ಅವರ ಬಳಿ ಹಣವಿರಲಿಲ್ಲ. ಜೀವನ ನಿರ್ವಹಣೆಗೆ ಕಾಡಿನಿಂದ ಸೌದೆ ತಂದು ಮಾರುತ್ತಿದ್ದರು. ಒಂದು ದಿನ ನಾಮದೇವನೆಂಬ ಭಕ್ತನು ಕಬೀರರಿಗೆ ಹೀಗೆಂದನು, "ಗುರುಗಳೇ ರಂಕ ಮತ್ತು ಬಂಕರಿಗೆ ವಯಸ್ಸಾಗುತ್ತಿದೆ. ಕಾಡಿನಿಂದ ಸೌದೆ ಆರಿಸಿ ತರುವುದು ಕಷ್ಟವಾಗುತ್ತಿದೆ, ಅವರಿಗೆ ನೀವೇಕೆ ಸ್ವಲ್ಪ ಹಣ ಕೊಡಬಾರದು? ಎಂದನು. ಆಗ ಕಬೀರರು, "ನಾನೂ ಎಷ್ಟೋ ವೇಳೆ ಅವರಿಗೆ ಹಣ ಕೊಟ್ಟಿರುವೆ, ಆದರೆ ಅವರಿಬ್ಬರು ಆ ಹಣವನ್ನು ಇಟ್ಟುಕೊಳ್ಳದೆ, ದಾನ ಮಾಡಿ ಬಿಡುತ್ತಾರೆ. ನಾನು ವೇಷ ಬದಲಿಸಿಕೊಂಡು ಅವರು ಸೌದೆ ಮಾರುವ ಜಾಗಕ್ಕೆ ಹೋಗಿ ಒಂದಕ್ಕೆ ನಾಲ್ಕರಷ್ಟು ಬೆಲೆ ಕೊಟ್ಟು ಖರೀದಿಸಿದರೆ, ಆ ಹಣವನ್ನೂ ದಾನ ಮಾಡಿಬಿಡುತ್ತಾರೆ. ನಾನೇನು ಮಾಡುವುದು?" ಎಂದರು. ಆದರೂ ನಾಮದೇವನು ಮತ್ತೊಮ್ಮೆ ಅವರಿಗೆ ಹಣ ನೀಡುವಂತೆ ಆಗ್ರಹಿಸಿದನು. ಗುರುಗಳು ಒಪ್ಪಿದರು. ಆ ದಂಪತಿಗಳು ಸೌದೆ ಹೊತ್ತು ಬರುವ ದಾರಿಯಲ್ಲಿ ಕೆಲವು ಬೆಲೆ ಬಾಳುವ ಒಡವೆಗಳನ್ನು ನೆಲದ ಮೇಲೆ ಬಿಸಾಕಿದರು. ನಂತರ ಗುರುಗಳು ಮತ್ತು ನಾಮದೇವನು ಒಂದು ಪೊದೆಯಲ್ಲಿ ಬಚ್ಚಿಟ್ಟುಕೊಂಡರು. ರಂಕನು ಸೌದೆ ಹೊರೆಯನ್ನು ತಲೆಯಮೇಲೆ ಇಟ್ಟುಕೊಂಡು ಮುಂದೆ ಮುಂದೆ ಹೋಗುತ್ತಿದ್ದನು. ಅವನ ಹೆಂಡತಿ ಬಂಕಾ ಸಹ ಸೌದೆ ಹೊರೆಯನ್ನು ಹೊತ್ತುಕೊಂಡು ಸ್ವಲ್ಪ ದೂರದಲ್ಲಿ ಅವನ ಹಿಂದೆ ಹಿಂದೆ ಬರುತ್ತಿದ್ದಳು. ರಂಕನ ಕಣ್ಣಿಗೆ ಒಡವೆಗಳು ಕಂಡವು ಅವನು ತಕ್ಷಣವೇ, ನನ್ನ ಹೆಂಡತಿಯ ಕಣ್ಣಿಗೆ ಬಿದ್ದರೆ, ಅವಳ ಮನಸ್ಸಿನಲ್ಲಿ ಆಸೆ ಮೂಡಬಹುದು, ಮೊದಲೇ ಹೆಣ್ಣು ಜಾತಿ. ಒಡವೆಯ ಮೇಲೆ ಮೋಹ ಜಾಸ್ತಿ ಎಂದು

ಯೋಚಿಸುತ್ತಾ, ಆ ಒಡವೆಯ ಮೇಲೆ ಕಾಲಿನಿಂದ ಮಣ್ಣನ್ನು ಮುಚ್ಚುತ್ತಾ ಮುಂದೆ ಹೋಗುತ್ತಿದ್ದನು. ಆದರೆ ಅವನ ಈ ಕೆಲಸವನ್ನು ಬಂಕಾ ನೋಡುತ್ತಿದ್ದಳು, ನಂತರ ಅವಳು ತನ್ನ ಪತಿಯನ್ನು ಕೂಗಿ ಕರೆದು ಹೀಗೆಂದಳು, "ಯಾಕೆ ಮಣ್ಣಿನ ಮೇಲೆ ಮಣ್ಣು ಹಾಕಿ ಮುಚ್ಚುತ್ತಿರುವಿರಿ?" ರಂಕಾನಿಗೆ ತನ್ನ ಹೆಂಡತಿಯ ಬಗ್ಗೆ ನಂಬಿಕೆ ಬಂದಿತು. ಇವಳ ಭಕ್ತಿ ಮತ್ತು ಸಾಧನೆ ನಿಜವಾದದ್ದು ಎಂದುಕೊಂಡನು. ಇವರಿಬ್ಬರೂ ಲಕ್ಷಾಂತರ ಬೆಲೆಬಾಳುವ ಸಂಪತ್ತನ್ನು ತಿರಸ್ಕರಿಸಿ ಊರಿಗೆ ಬಂದು ತಲುಪಿದರು. ಆಗ ಗುರುಗಳು ನಾಮದೇವನನ್ನು ಕುರಿತು, "ಭಕ್ತರೆಂದರೆ ಹೀಗಿರಬೇಕು" ಎಂದರು.

ಒಂದು ಸಂಜೆ ನಾಲ್ಕು ಗಂಟೆಯ ಸಮಯ. ಗುರುಗಳು ಸತ್ಸಂಗ ನಡೆಸುತ್ತಿದ್ದರು. ರಂಕ ಮತ್ತು ಬಂಕ ದಂಪತಿಗಳು ಗುರುಗಳ ಆಶ್ರಮದಲ್ಲಿ ಪ್ರವಚನ ಕೇಳುತ್ತಿದ್ದರು. ಅವರ ಮಗಳಾದ ಅಂಬಿಕೆಯು ಆಶ್ರಮದಿಂದ ಒಂದು ಕಿ.ಮೀ ದೂರದಲ್ಲಿರುವ ತನ್ನ ಮನೆಯ ಮಂಚದ ಮೇಲೆ ಕುಳಿತಿದ್ದಳು. ಅವಳಿಗೆ ಆಗ 19 ವರ್ಷ ವಯಸ್ಸಾಗಿತ್ತು. ಮಂಚದ ಮೇಲೆ ಕುಳಿತು ಏನನ್ನೋ ಚಿಂತಿಸುತ್ತಿದ್ದಳು. ಅಷ್ಟರಲ್ಲಿ ಅವಳ ಮನೆಗೆ ಅಂದರೆ ಗುಡಿಸಿಲಿಗೆ ಬೆಂಕಿ ಬಿದ್ದಿತು. ಕ್ಷಣದಲ್ಲಿ ಗುಡಿಸಿಲಿಗೆಲ್ಲಾ ಬೆಂಕಿಯ ಜ್ವಾಲೆಗಳು ಹರಡಿದವು. ಮಗಳಾದ ಅಂಬಿಕೆಯು ಓಡಿಹೋಗಿ ಸತ್ಸಂಗ ನಡೆಯುತ್ತಿದ್ದ ಜಾಗಕ್ಕೆ ಬಂದಳು. ಎಲ್ಲರೂ ಧ್ಯಾನಾಸಕ್ತರಾಗಿದ್ದರು, ಗಮನವಿಟ್ಟು ಸತ್ಸಂಗ ಕೇಳುತ್ತಿದ್ದರು. ಮಗಳು ಅವಳ ತಾಯಿಯನ್ನು ಕರೆದು ಗುಡಿಸಲಿಗೆ ಬೆಂಕಿ ಬಿದ್ದ ವಿಷಯವನ್ನು ತಿಳಿಸಿದಳು. ಅವಳ ತಾಯಿ ಸತ್ಸಂಗದಿಂದ ಎದ್ದು ಹೊರಬಂದಳು. ಸತ್ಸಂಗಕ್ಕೆ ಯಾವುದೇ ಭಂಗ ಬರಬಾರದೆಂದು ಅವಳ ಆಶಯವಾಗಿತ್ತು. ಅವಳು ಹೊರ ಬಂದೊಡನೆ ಅವಳ ಪತಿಯು ಹೊರಬಂದು ವಿಷಯವೇನೆಂದು ಕೇಳಿದನು. ಅಂಬಿಕೆಯು ಅವನ ಮನೆಗೆ ಬೆಂಕಿ ಬಿದ್ದ ವಿಷಯ ತಿಳಿಸಿದಳು. ಆಗ ಅವರಿಬ್ಬರೂ ಶಾಂತ ಚಿತ್ತರಾಗಿ, "ಮಗಳೇ, ನೀನು ಮತ್ತೆ ಅಲ್ಲಿಗೆ ಹೋಗಿ ನೀನು ಕುಳಿತಿದ್ದ ಮಂಚವನ್ನೂ ಸಹ ಬೆಂಕಿಗೆ ಹಾಕಿ ಬಾ" ಎಂದು ಆದೇಶಿಸಿದರು. ಗುಡಿಸಲು ಇಲ್ಲದೆ ಇದ್ದಿದ್ದರೆ ಬೆಂಕಿ ಬೀಳುತ್ತಿರಲಿಲ್ಲ, ಬೆಂಕಿ ಬೀಳದೆ ಇದ್ದಿದ್ದರೆ ಸತ್ಸಂಗಕ್ಕೆ ಭಂಗ ಬರುತ್ತಿರಲಿಲ್ಲ ಎಂದು ಅವರಿಬ್ಬರೂ ಯೋಚಿಸಿದರು. ನಂತರ ಅವರು ಮರು ಮಾತಾಡದೆ ಸತ್ಸಂಗದಲ್ಲಿ ಹೋಗಿ ಕುಳಿತರು. ಅವರ ಮಗಳು ಗುಡಿಸಿಲಿನ ಬಳಿ ಹೋಗಿ ಉಳಿದಿದ್ದ ಮಂಚವನ್ನು ಬೆಂಕಿಗೆ ಹಾಕಿ ಬಂದಳು. ರಾತ್ರಿಯ ಊಟ ಆಶ್ರಮದಲ್ಲಾಯಿತು. ಮೂವರೂ ಯಾವ ಚಿಂತೆಯೂ ಇಲ್ಲದೆ ದೂರದ ಮರದ ಕೆಳಗೆ ಮಲಗಿಕೊಂಡರು. ಬೆಳಗಾದೊಡನೆ ಅವರಿಗೆ ಆಶ್ಚರ್ಯಕಾದಿತ್ತು. ಅವರು ಮಲಗಿದ್ದಾಗಲೇ ಅವರ ಸುತ್ತಲೂ ಒಂದು ಗುಡಿಸಲು ನಿರ್ಮಾಣವಾಗಿತ್ತು. ಪಕ್ಕದಲ್ಲಿ ದವಸ ಧಾನ್ಯಗಳು ತುಂಬಿದ್ದ ಮಣ್ಣಿನ ಮಡಿಕೆಗಳು ಓರಣವಾಗಿ ಜೋಡಿಸಲ್ಪಟ್ಟಿದ್ದವು. ಇದೆಲ್ಲಾ ಪರಮಾತ್ಮನ ಕೃಪೆಯಿಂದ ಎಂದು ಅವರಿಗೆ ತಿಳಿಯಿತು. ಊರಿನ ಜನರಿಗೆ ಆಶ್ಚರ್ಯವೋ ಆಶ್ಚರ್ಯ. ಏಕೆಂದರೆ ಒಂದು ವಾರ ಶ್ರಮಿಸಿದರೂ ಅಂಥಾ ಗುಡಿಸಲನ್ನು ನಿರ್ಮಿಸಲು ಸಾಧ್ಯವಿರಲಿಲ್ಲ. ಬೆಳಗಾಗುವುದರೊಳಗೆ ಗುಡಿಸಲು ಸಿದ್ಧವಾಗಿತ್ತು. ಹಳೇ ಗುಡಿಸಲು ಸುಟ್ಟು ಬೂದಿಯಾಗಿತ್ತು. ಅಷ್ಟರಲ್ಲಿ ಆಕಾಶವಾಣಿ ಕೇಳಿಸಿತು. "ನೀವೆಲ್ಲಾ ಈ ಗುಡಿಸಲಿನಲ್ಲಿರಿ, ಇದು ನನ್ನ ಆಜ್ಞೆ", ಆ ಮೂವರೂ ಸಂತಸದಿಂದ ಒಪ್ಪಿಕೊಂಡರು. ಅವರೆಲ್ಲಾ ಗುರುವಿನ ಚಮತ್ಕಾರದಿಂದ ಆಗಿದೆ ಎಂದರು. ಎಲ್ಲರೂ ಗುರುವಿನ ಬಳಿ ದೀಕ್ಷೆ ಪಡೆಯಲು ಇಚ್ಛಿಸಿದರು. ಸಾವಿರಾರು ನಗರವಾಸಿಗಳು ದೀಕ್ಷೆಪಡೆದರು. (ಈ ಲೀಲೆಯನ್ನು ಕಬೀರ್ ಪರಮೇಶ್ವರರು ಕಾಶಿಯಲ್ಲಿ ಪ್ರಕಟವಾದ ಸುಮಾರು 200 ವರ್ಷಗಳ ಪೂರ್ವದಲ್ಲಿ ಮಾಡಿದರು. ಆ ಸಮಯದಲ್ಲಿ ಭಕ್ತ ನಾಮದೇವರಿಗೂ ಗುರುದೀಕ್ಷೆ ನೀಡಿದ್ದರು).

ಮೇಲೆ ತಿಳಿಸಿದ ಕತೆಯನ್ನು ಕೇಳಿದ ವೇಶ್ಯೆ ಚಂಪಾಕಲಿಯು ತನ್ನ ಮನಸ್ಸಿನಲ್ಲಿದ್ದ ಭಯವನ್ನು ಕಿತ್ತೊಗೆದಳು. ತನ್ನ ಸಂಪತ್ತನ್ನು ಗುರುಗಳಿಗೆ ಸಮರ್ಪಿಸಿದಳು, ಪರಮಾತ್ಮನೆಂದರು. "ಮಗಳೇ, ನೀನೇ

ನನ್ನವಳಾದ ಮೇಲೆ ಈ ಸಂಪತ್ತೆಲ್ಲವೂ ನನ್ನದೇ, ಆ ಸಂಪತ್ತಿನಲ್ಲಿ ನಿನ್ನ ಜೀವನ ನಿರ್ವಹಣೆಗಾಗಿ ಎಷ್ಟು ಬೇಕೋ ಅಷ್ಟನ್ನು ಇಟ್ಟುಕೋ. ಮಿಕ್ಕಿದ್ದನ್ನು ದಾನ ಮಾಡು". ವೇಶ್ಯೆಯಾದ ಚಂಪಾಕಲಿ ಹಾಗೇ ಮಾಡಿದಳು. ಮನೆ ಇಟ್ಟುಕೊಂಡು ಉಳಿದ ಹಣದಲ್ಲಿ ಬಹುಪಾಲನ್ನು ದಾನ ಮಾಡಿದಳು.

## "ಕಬೀರರ ಮೂಲಕ ಶಿಷ್ಯರಿಗೆ ಪರೀಕ್ಷೆ"

ಕಬೀರ್ ಪರಮೇಶ್ವರರ ಅನೇಕ ಲೀಲೆಗಳನ್ನು ನೋಡಿ 64 ಲಕ್ಷ ಜನರು ಅವರ ಶಿಷ್ಯರಾಗಿದ್ದರು. ಕಬೀರರು ಭೂತ, ವರ್ತಮಾನ ಹಾಗೂ ಭವಿಷ್ಯತ್ತನ್ನು ಕಂಡಿದ್ದರು. ನನ್ನ ಆಶೀರ್ವಾದದಿಂದ ಹಾಗೂ ನಾನು ಮಾಡುವ ಚಮತ್ಕಾರದಿಂದ ಇವರೆಲ್ಲಾ ನನ್ನ ಭಕ್ತರಾಗಿದ್ದಾರೆ ಎಂದು ತಿಳಿದರು. ಕಬೀರರು ನಮ್ಮ ಸದ್ಗುರುಗಳು ಹಾಗೂ ನಮಗೆ ಬಹಳಷ್ಟು ಪ್ರಯೋಜನ ನೀಡುತ್ತಾರೆ ಎಂದು ಜನರೆಲ್ಲಾ ತಿಳಿದಿದ್ದರು. ಒಂದು ದಿನ ಕಬೀರರು ಅವರ ಶಿಷ್ಯರನ್ನೆಲ್ಲಾ ಪರೀಕ್ಷಿಸಲು ನಿರ್ಧರಿಸಿದರು. ಇವರಿಗೆಲ್ಲಾ ಎಷ್ಟರ ಮಟ್ಟಿಗೆ ಜ್ಞಾನವಿದೆ? ನಿಜವಾಗಲೂ ಗುರುವಿನ ಮೇಲೆ ನಂಬಿಕೆ ಇಲ್ಲದಿದ್ದರೆ ಇವರಿಗೆ ಮೋಕ್ಷ ಪ್ರಾಪ್ತಿಯಾಗುವುದಿಲ್ಲ. ಸುಮ್ಮನೆ ಇಷ್ಟು ಶಿಷ್ಯರಿರುವುದು ದಂಡವಾಗುತ್ತದೆ ಎಂದು ಯೋಚಿಸಿ, ಒಂದು ಉಪಾಯವನ್ನು ಹೂಡಿದರು. ತನ್ನ ಪರಮ ಶಿಷ್ಯನಾದ ರವಿದಾಸನನ್ನು ಕರೆದು ಒಂದು ಆನೆಯನ್ನು ಬಾಡಿಗೆಗೆ ತರಲು ಹೇಳಿದರು.

ಕಾಶಿ ನಗರದಲ್ಲಿ ಒಬ್ಬ ಸುಂದರ ವೇಶ್ಯೆ ಇದ್ದಳು. ಅವಳು ಸತ್ಸಂಗವನ್ನು ಕೇಳಿ ಬದಲಾದಳು. ಪ್ರತಿದಿನ ಸತ್ಸಂಗ ಕೇಳಲು ಬರುತ್ತಿದ್ದಳು. ಕಬೀರರ ಸತ್ಸಂಗದಿಂದ ಸಂಪೂರ್ಣ ಬದಲಾಗಿ, ತನ್ನ ವೃತ್ತಿಯನ್ನು ಬಿಟ್ಟು ಬಿಟ್ಟಳು. ದಿನವೂ ಗುರುಗಳ ಹತ್ತಿರದಲ್ಲೇ ಕುಳಿತುಕೊಳ್ಳುತ್ತಿದ್ದಳು. ಇದನ್ನು ನೋಡಿ ಸತ್ಸಂಗಕ್ಕೆ ಬರುವ ಬೇರೆ ಜನರು ಇದನ್ನು ಸಹಿಸುತ್ತಿರಲಿಲ್ಲ. "ನಿನ್ನ ಕಾರಣದಿಂದ ಗುರುಗಳಿಗೆ ಕೆಟ್ಟ ಹೆಸರು ಬರುತ್ತಿದೆ. ನೀನು ಸತ್ಸಂಗಕ್ಕೆ ಬರಬೇಡ. ಗುರುಗಳ ಮುಂದೆಯೇ ನೀನು ಕುಳಿತುಕೊಳ್ಳುವುದು ಸರಿಯಲ್ಲ, ಅಲ್ಲಿ ಕುಳಿತುಕೊಳ್ಳಬೇಡ" ಎಂದು ಹೇಳಿದರು. ವೇಶ್ಯೆಯು ಇದನ್ನೆಲ್ಲಾ ಅಳುತ್ತಾ ಗುರುಗಳಿಗೆ ತಿಳಿಸಿದಳು. ಆಗ ಗುರುಗಳು, "ಮಗಳೇ, ನೀನು ಸತ್ಸಂಗಕ್ಕೆ ಬರುತ್ತಿರು. ಸಾಬೂನು ಮತ್ತು ನೀರಿಲ್ಲದೆ ಕೊಳೆ ಬಟ್ಟೆ ಹೇಗೆ ಶುದ್ಧವಾಗುವುದು? ಪಾಪಿಯು ಸತ್ಸಂಗದಿಂದ ಹಾಗೂ ಗುರುವಿನಿಂದ ದೂರವಿದ್ದು ಆತ್ಮಕಲ್ಯಾಣ ಹೇಗೆ ಮಾಡಿಕೊಳ್ಳಲು ಸಾಧ್ಯ? ನಿಜವಾದ ಭಕ್ತನು ರೋಗಿಯನ್ನು ಹಾಗೂ ವೇಶ್ಯೆಯನ್ನು ನೋಡಿ ಅಸಹ್ಯ ಪಟ್ಟುಕೊಳ್ಳುವುದಿಲ್ಲ, ಬದಲಾಗಿ ಗೌರವಿಸುತ್ತಾನೆ. ಅವರಿಗೆ ಅರಿವನ್ನು ಉಂಟುಮಾಡಿ ಮುಕ್ತಿ ಪಡೆಯಲು ಪ್ರೇರೇಪಿಸುತ್ತಾನೆ". ಇಷ್ಟೆಲ್ಲವನ್ನು ಹೇಳಿದ ನಂತರ ಭಕ್ತರಿಗೆ, ತಿಳಿ ಹೇಳಿದ್ದರೂ ಅವರು ಕೇಳಲು ಸಿದ್ಧರಿರಲಿಲ್ಲ. ಆ ವೇಶ್ಯೆಯನ್ನು ಬಯ್ಯುತ್ತಾ ಹೇಳುತ್ತಿದ್ದರು. ಕಾಶಿಯ ಜನರೆಲ್ಲಾ 'ನಿಮ್ಮ ಗುರುಗಳು ಎಂಥಹವರು? ವೇಶ್ಯೆಯಂಥಾವರೆಲ್ಲಾ ಅವರ ಬಳಿ ಬರುತ್ತಾರೆ?' ಎನ್ನುತ್ತಿದ್ದರು.

ಕಬೀರರು ಬಾಡಿಗೆ ತರಿಸಿದ್ದ ಆನೆಯ ಬಳಿ ವೇಶ್ಯೆಯನ್ನು ಕರೆದುಕೊಂಡು ಹೋಗಿ, "ಮಗಳೇ ನನ್ನ ಜೊತೆ ಈ ಆನೆಯ ಮೇಲೆ ಕುಳಿತು ಬರುವೆಯಾ?" ಎಂದು ಕೇಳಿದರು. "ನಿಮ್ಮ ಆಜ್ಞೆಯಂತೆ ಬರುತ್ತೇನೆ" ಎಂದಳು. ಆಗ ಕಬೀರರು ರವಿದಾಸನನ್ನು ಆನೆಯನ್ನು ಮುನ್ನೆಡುವಂತೆ ಹೇಳುತ್ತಾ ಆ ವೇಶ್ಯೆಯನ್ನು ಆನೆಯ ಮೇಲೆ ಹತ್ತಿಸಿದರು. ನಂತರ ಗಂಗೆಯ ನೀರನ್ನು ಒಂದು ಬಾಟಲಿಯಲ್ಲಿ ತುಂಬಿಕೊಂಡು ಅವರೂ ಆನೆಯನ್ನೇರಿದರು. ರವಿದಾಸನಿಗೆ ಆನೆಯನ್ನು ನಗರದ ಮುಖ್ಯ ಬೀದಿಗಳಲ್ಲಿ ಸುತ್ತಾಡಿಸುವಂತೆ ಹೇಳಿದರು. ಆನೆಯ ಮೇಲೆ ರವಿದಾಸನು ಮುಂದೆ ಕುಳಿತು ಆನೆಯನ್ನು ನಡೆಸುತ್ತಿದ್ದನು. ಅದರ ಹಿಂದೆ ಆ ಸುಂದರ ವೇಶ್ಯೆ ಕುಳಿತಿದ್ದಳು. ಅವಳ ಹಿಂದೆ ಗುರುಗಳು ಕುಳಿತು ಬಾಟಲಿಯಿಂದ ನೀರನ್ನು ಕುಡಿಯುತ್ತಿದ್ದರು. ಅಂದರೆ ಆ ಸುಂದರ ಹುಡುಗಿಯು ಇಬ್ಬರು ಪುರುಷರ ಮಧ್ಯೆ ಕುಳಿತಿದ್ದಳು. ಊರಿನ ಜನರೆಲ್ಲಾ ಈ ದೃಶ್ಯವನ್ನು ನೋಡಿ ಮೂಗಿನ ಮೇಲೆ ಬೆರಳಿಟ್ಟುಕೊಂಡರು.

ಗುರುಗಳಿಗೆ ಮಾಯೆ ಆವರಿಸಿದೆ, ಅವರು ಮದ್ಯವನ್ನು ಸೇವಿಸುತ್ತಾ, ವೇಶ್ಯೆಯ ಜೊತೆ ತಿರುಗುತ್ತಿದ್ದಾರೆ ಎಂದು ತಿಳಿದರು. ಜನರು ಗುರುಗಳ ಭಕ್ತರನ್ನೆಲ್ಲಾ ಎಳೆದೆಳೆದು ತಂದು ಆ ದೃಶ್ಯವನ್ನು ತೋರಿಸಿದರು. ಭಕ್ತರೆಲ್ಲಾ ಆ ದೃಶ್ಯವನ್ನು ನೋಡಿ, ಊರಿನ ಜನರು ಹೇಳುವುದನ್ನು ಕೇಳಿ ನಿಜವೆಂದೇ ನಂಬಿದರು. ಗುರುಗಳ ಮೇಲೆ ಇಟ್ಟಿದ್ದ ನಂಬಿಕೆಯೆಲ್ಲಾ ದೂರವಾಯಿತು. ಅವರೆಲ್ಲಾ ಗುರುಗಳಿಂದ ದೂರವಾದರು. ಸಮಾಜದ ಮಾತನ್ನು ನಂಬಿ ಗುರುಗಳಿಂದ ವಿಮುಖರಾದರು.

ದಿಲ್ಲಿಯ ರಾಜನಾದ ಸಿಕಂದರ್ ಲೋಧಿಯು ಕಾಶಿಗೆ ಬಂದಾಗ ಪರಮಾತ್ಮನಾದ ಕಬೀರರು ಇಂಥಾ ಲೀಲೆಗಳನ್ನು ಮಾಡುತ್ತಿದ್ದರು. ಹೀಗೆ ಆನೆಯ ಮೇಲೆ ಕುಳಿತು ವೇಶ್ಯೆಯ ಜೊತೆ ಸುತ್ತಾಡಿದ್ದನ್ನು ಕೂಡ ಜನರು ಸಿಕಂದರ್ ಲೋಧಿಗೆ ದೂರನ್ನು ಕೊಟ್ಟರು. ಲೋಧಿಯು ಕಬೀರರನ್ನು ಬಂಧಿಸಿ, ಕೈ ಕಾಲುಗಳನ್ನು ಕಬ್ಬಿಣದ ಸರಪಳಿಯಿಂದ ಬಿಗಿದು, ಕೊರಳಿಗೆ ಕಬ್ಬಿಣದ ಸರಪಳಿ ಸುತ್ತಿ, ಗಂಗಾನದಿಗೆ ಬಿಸಾಕಿ ಬರುವಂತೆ ಸೈನಿಕರಿಗೆ ಆದೇಶಿಸಿದನು. ಸೈನಿಕರು ರಾಜನು ಹೇಳಿದಂತೆ ಕಬೀರರನ್ನು ಬಂಧಿಸಿ, ಕೈಕಾಲುಗಳಿಗೆ ಕೊರಳಿಗೆ ಸರಪಳಿ ಬಿಗಿದು. ದೋಣಿಯಲ್ಲಿ ಕುಳ್ಳಿರಿಸಿಕೊಂಡು ಗಂಗಾನದಿಯ ಮಧ್ಯಭಾಗಕ್ಕೆ ಹೋಗಿ, ಅವರನ್ನು ನದಿಗೆ ತಳ್ಳಿ ಬಂದರು. ಒಂದೇ ಕ್ಷಣದಲ್ಲಿ ಅವರಿಗೆ ಕಟ್ಟಿದ್ದ ಸರಪಳಿ ಕಳಚಿಕೊಂಡು ನೀರಿಗೆ ಬಿದ್ದಿತು. ಕಬೀರರು ನೀರಿನ ಮೇಲೆ ಬಂದು ಪದ್ಮಾಸನ ಹಾಕಿ ಕುಳಿತರು. ಅವರ ಕೆಳಗೆ ನೀರು ಸುಳಿಯಂತೆ ಸುತ್ತುತ್ತಿತ್ತು. ಇದನ್ನು ಕಂಡ ಲೋಧಿಯು, ಕಬೀರರ ಸೊಂಟಕ್ಕೆ ಕಲ್ಲುಕಟ್ಟಿ, ಕೈಕಾಲನ್ನು ಹಗ್ಗದಿಂದ ಬಂಧಿಸಿ, ನೀರಲ್ಲಿ ಮುಳುಗಿಸಲು ಆದೇಶಿಸಿದನು. ಸೈನಿಕರು ಆದೇಶವನ್ನು ಪಾಲಿಸಿದರು. ಒಂದೇ ನಿಮಿಷದಲ್ಲಿ ಹಗ್ಗ ತುಂಡಾಯಿತು. ಕಲ್ಲು ನೀರಿನ ಪಾಲಾಯಿತು.

ಕಬೀರರು ಎದ್ದು ನದಿಯ ತೀರಕ್ಕೆ ನಡೆದುಬಂದರು, ರಾಜನಿಗೆ ಇದರಿಂದ ತೃಪ್ತಿಯಾಗಲಿಲ್ಲ. ಕಬೀರರಿಗೆ ಕಲ್ಲನ್ನು ಹೊಡೆದೋ ಅಥವಾ ಗುಂಡನ್ನು ಹಾರಿಸಿಯೋ ಸಾಯಿಸಬೇಕೆಂದು ಆಜ್ಞಾಪಿಸಿದನು. ಸೈನಿಕರು ಕಬೀರರ ಮೇಲೆ ಕಲ್ಲು ತೂರಿದರು, ಒಂದು ಕಲ್ಲೂ ಕಬೀರರಿಗೆ ತಾಕಲಿಲ್ಲ. ಗುಂಡು ಹಾರಿಸಲು ಪ್ರಾರಂಭಿಸಿದರು. ಗುಂಡು ಕಬೀರರ ಬಳಿಯೂ ಸುಳಿಯಲಿಲ್ಲ. ಇಷ್ಟಾದರೂ ಕಾಶಿಯ ಜನರಿಗೆ ಬುದ್ಧಿ ಬರಲಿಲ್ಲ. ಪರಮೇಶ್ವರ ಕಬೀರರು 'ಇವರೆಲ್ಲಾ ಪೆದ್ದರು' ಎಂದು ಯೋಚಿಸುತ್ತಾ ಗಂಗಾನದಿಯಲ್ಲಿ ಮುಳುಗಿ ಭಕ್ತನಾದ ರವಿದಾಸನ ಮನೆಗೆ ಬಂದು ಸೇರಿದರು. ಜನರೆಲ್ಲಾ ಕಬೀರರು ನೀರಲ್ಲಿ ಮುಳುಗಿ ಹೋದರು ಎಂದು ತಿಳಿದರು. ಅವರ ಮೇಲೆ ಕೆಸರು ತುಂಬಿಕೊಂಡಿರಬೇಕು, ಅದಕ್ಕೇ ಅವರ ಹೆಣ ಮೇಲೆ ಬಂದು ತೇಲಲಿಲ್ಲ ಎಂದು ಚಿಂತಿಸುತ್ತಾ ತಮ್ಮ ತಮ್ಮಲ್ಲೇ ಸಂತಸ ಹಂಚಿಕೊಂಡರು. ಶೇಖ್‌ತಖಿಯು ಕಬೀರರ ಭಕ್ತನಾದ ರವಿದಾಸರಿಗೆ, ಕಬೀರರ ಸಾವಿನ ಸುದ್ದಿ ಮುಟ್ಟಿಸಲು ಅವರ ಮನೆಗೆ ತೆರಳಿದನು. ಕಬೀರರು ತಂಬೂರಿಯನ್ನು ಹಿಡಿದು ವಚನಗಳನ್ನು ಹಾಡುತ್ತಿದ್ದರು.

ಆ ದೃಶ್ಯವನ್ನು ನೋಡಿ ಶೇಖ್‌ತಖಿಗೆ ಮಾತೇ ಹೊರಡಲಿಲ್ಲ. ತಕ್ಷಣವೇ ಅಲ್ಲಿಂದ ಓಡಿ ಹೋಗಿ ಸಿಕಂದರ್ ಲೋಧಿಗೆ ಚಾಡಿ ಹೇಳಿದನು. ಕಬೀರರು ಎಲ್ಲರ ಕಣ್ಣು ತಪ್ಪಿಸಿ, ರವಿದಾಸರ ಮನೆಗೆ ಹೋಗಿ ಕುಳಿತಿದ್ದಾನೆ ಎಂದು ಹೇಳಿದನು. ಲೋಧಿಯು ತಕ್ಷಣವೇ ತಾನೇ ಖುದ್ದಾಗಿ ರವಿದಾಸರ ಮನೆಗೆ ಬಂದನು. ಆಗ ಕಬೀರರು ಅಲ್ಲಿಂದ ಅಂತರ್ಧಾನರಾಗಿ ಗಂಗಾ ನದಿಯ ಮಧ್ಯದಲ್ಲಿ ಪದ್ಮಾಸನ ಹಾಕಿ ಕುಳಿತರು. ಕಬೀರರು ರವಿದಾಸನ ಮನೆಯಲ್ಲಿ ಇಲ್ಲದ್ದನ್ನು ಕಂಡ ಲೋಧಿಯು, 'ಕಬೀರರು ಎಲ್ಲಿ' ಎಂದು ಪ್ರಶ್ನಿಸಿದನು. ಆಗ ರವಿದಾಸನು "ಮಹಾರಾಜರೇ, ಅವರು ಪೂರ್ಣ ಪರಮಾತ್ಮ, ಅವರೇ ಜಗತ್ತಿಗೆಲ್ಲಾ ಅಲ್ಲಾಹ್. ನೀವು ಅವರನ್ನು ಗುರುತಿಸಿ, ಅವರು ತಮ್ಮ ಇಚ್ಛೆಯಂತೆ ನಡೆಯುವವರು. ಅವರು ಎಲ್ಲಿಗೆ ಬೇಕಾದರೂ ತೆರಳಲು ಸಾಧ್ಯ. ಅವರು ಎಲ್ಲಿಗೆ ಹೋಗಿದ್ದಾರೆಂದು ನನಗೇನು ಗೊತ್ತು? ಅವರು ಎಲ್ಲರ ಜೊತೆಯಲ್ಲೂ ಇರುತ್ತಾರೆ" ಎಂದನು. ಅಷ್ಟರಲ್ಲಿ ಯಾರೋ ಬಂದು, 'ಕಬೀರರು

ಗಂಗಾ ನದಿಯ ನೀರ ಮೇಲೆ ಪದ್ಮಾಸನ ಹಾಕಿ ಕುಳಿತು ಹಾಡುತ್ತಿದ್ದಾರೆ' ಎಂದು ತಿಳಿಸಿದರು. ರಾಜನಿಂದ ಹಿಡಿದು ಊರ ಜನರೆಲ್ಲಾ ಗಂಗಾ ನದಿಯ ಬಳಿ ಬಂದರು. ಅಂಬಿಗರನ್ನು ಕರೆದು ದೋಣಿಯಲ್ಲಿ ಕುಳಿತು ದಡದ ಬಳಿ ಬರಬೇಕೆಂದು ಲೋಧಿಯು ಕಬೀರರಿಗೆ ಕರೆ ಕಳುಹಿಸಿದನು. ಕಬೀರರು ದೋಣಿಯಲ್ಲಿ ಕುಳಿತು ದಡಕ್ಕೆ ಬಂದರು.

ಸಿಕಂದರ್ ಲೋಧಿಯು ಮತ್ತೆ ಕಬೀರರನ್ನು ಬಂಧಿಸಿ ಆನೆಯಿಂದ ತುಳಿಸಲು ಆಜ್ಞೆ ಮಾಡಿದನು. ಸುತ್ತಲೂ ಜನರು ನೆರೆದಿದ್ದರು. ಲೋಧಿಯು ಎತ್ತರವಾದ ಸ್ಥಳದಲ್ಲಿ ಕುಳಿತಿದ್ದನು. ಮಾವುತನು ಆನೆಯನ್ನು ಕರೆತಂದು ಅದಕ್ಕೆ ಮದ್ಯವನ್ನು ಕುಡಿಸಿದನು. ಕಬೀರರ ಕೈ ಕಾಲು ಕಟ್ಟಿಹಾಕಿ ನೆಲದ ಮೇಲೆ ಮಲಗಿಸಿದ್ದರು. ಮಾವುತನು ಆನೆಯನ್ನು ಕಬೀರರ ಕಡೆಗೆ ಓಡಿಸಿದನು, ಆನೆಯು ಹತ್ತಿರ ಬಂದ ತಕ್ಷಣ ಕಬೀರರು ಆನೆಗೆ ಸಿಂಹದ ರೂಪವನ್ನು ತೋರಿಸಿದರು. ಸಿಂಹವನ್ನು ನೋಡಿದಾಕ್ಷಣ ಆನೆ ಕಬೀರರಿಂದ ದೂರ ಓಡಿತು. ಮಾವುತನು ಎಷ್ಟೇ ಪ್ರಯತ್ನ ಪಟ್ಟರೂ ಅವನ ಮಾತನ್ನು ಕೇಳಲಿಲ್ಲ. ಮಾವುತನು ತನ್ನ ಕೆಲಸ ಹೋಗುವುದೆಂಬ ಭಯದಿಂದ ಆನೆಯನ್ನು ಮತ್ತೆ ಮತ್ತೆ ಕಬೀರರ ಬಳಿ ಓಡಿಸಿದನು. ಆ ಕಬೀರರು ಮಾವುತನಿಗೂ ಸಿಂಹದ ರೂಪವನ್ನು ತೋರಿಸಿದರು. ಅದನ್ನು ನೋಡಿದ ಕೂಡಲೇ ಮಾವುತನು ತನ್ನ ಅಂಕುಶವನ್ನು ಕೆಳಗೆ ಬಿಸಾಕಿದನು. ಆನೆಯು ಅಲ್ಲಿಂದ ಓಡಿ ಹೋಯಿತು. ಕಬೀರರನ್ನು ಬಂಧಿಸಿದ್ದ ಹಗ್ಗ ತಾನಾಗಿ ಕಳಚಿ ಬಿದ್ದಿತು. ಕಬೀರರು ಎದ್ದು ನಿಂತು ಒಮ್ಮೆ ಮೈ ಮುರಿದರು. ಇದ್ದಕ್ಕಿದ್ದಂತೆ ವಿರಾಟರೂಪವಾಗಿ ಬೆಳೆದರು. ಅವರ ತಲೆಯು ಆಕಾಶವನ್ನು ಮುಟ್ಟುತ್ತಿದೆಯೋನೋ ಎಂದು ಅನ್ನಿಸುತ್ತಿತ್ತು. ಅವರ ದೇಹದಿಂದ ಪ್ರಕಾಶ ಹೊರ ಹೊಮ್ಮುತ್ತಿತ್ತು. ಸಿಕಂದರ್ ಲೋಧಿಗೆ ಭಯವಾಗಿ ಕಂಪಿಸಲು ಪ್ರಾರಂಭಿಸಿದನು. ನಂತರ ಪರಮೇಶ್ವರ ಕಬೀರರ ಚರಣಗಳಿಗೆರಗಿ ಕ್ಷಮಿಸುವಂತೆ ಕೇಳಿಕೊಂಡನು. ನಂತರ "ಹೇ ದೇವ, ನೀವೇ ಪರಮೇಶ್ವರ, ನೀವೇ ನನ್ನನ್ನು ಉದ್ಧರಿಸುವವರು. ನನ್ನಿಂದ ದೊಡ್ಡ ತಪ್ಪಾಗಿದೆ. ನಾನು ಈಗ ನಿಮ್ಮನ್ನು ಗುರುತಿಸಿದ್ದೇನೆ. ನೀವೇ ಸ್ವತಃ ಅಲ್ಲಾಹ್. ಭೂಮಿಯ ಮೇಲೆ ಬಂದಿರುವಿರಿ" ಎಂದು ಹೇಳಿದನು. ಆಗ ಪರಮೇಶ್ವರ ಕಬೀರರು ಕಾಶಿ ನಗರಕ್ಕೆ ಬಂದು ಆ ವೇಶ್ಯೆಯ ಮನೆಗೆ ತೆರಳಿದರು. ಆ ವೇಶ್ಯೆಯು ಕಬೀರರ ಕಾಲನ್ನು ಒತ್ತಲು ಪ್ರಾರಂಭಿಸಿದಳು. ಅವರ ಕಾಲನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡು, ಮೋಕ್ಷ ಪ್ರಾಪ್ತಿಯ ದಾರಿ ಕಂಡುಕೊಂಡಳು.

**ಸೂಚನೆ :– ಈ ವಾಣಿಗಳ ಶಬ್ದಾರ್ಥವನ್ನು ಸಂಕ್ಷಿಪ್ತವಾಗಿ ಮೇಲೆ ತಿಳಿಸಲಾಗಿದೆ.**

ಫಿರ್ ಗಣಿಕಾ ಕೈ ಸಂಗ್ ಚಲೆ, ಶೀಶೀ ಭರೀ ~~ಶರಾಬ್ ।
ಗರೀಬ್‌ದಾಸ್ ಉಸ್ ಪುರೀ ಮೆಂ, ಜುಲಹಾ ಭಯಾ ಖರಾಬ್ ॥726॥
ತಾರೀ ಬಾಜೀ ಪುರೀ ಮೆಂ, ಭಿಷ್ಟ್ ಜುಲಹದೀ ನೀಚ್ ।
ಗರೀಬ್‌ದಾಸ್ ಗನಿಕಾ ಸಜೀ, ದಹೂಂ ಸಂತೌಂ ಕೈ ಬೀಚ್ ॥727॥
ಗಾವತ್ ಬೈಂನ್ ಬಿಲಾಸ್ ಪದ್, ಗಂಗಾಜಲ್ ಪೀವಂತ್ ।
ಗರೀಬ್‌ದಾಸ್ ವಿಹ್ವಲ್ ಭಯೇ, ಮತವಾಲೇ ಘೂಮಂತ್ ॥728॥
ಭಡುವಾ ಭಡುವಾ ಸಬ್ ಕಹೈಂ, ಕೋಈ ನ ಜಾನೈ ಖೋಜ್ ।
ದಾಸ್ ಗರೀಬ್ ಕಬೀರ್ ಕರಮ್, ಬಾಂಟತ್ ಶಿರಕಾ ಬೋಝ್ ॥729॥
ದೇಖೋ ಗನಿಕಾ ಸಂಗಿ ಲಈ, ಕಹತೇ ಕೌಮ್ ಛತೀಸ್ ।
ಗರೀಬ್‌ದಾಸ್ ಇಸ್ ಜುಲಹದೀ ಕಾ, ದರ್ಶನ್ ಆನ್ ಹದೀಸ್ ॥730॥
ಶಾಹ್ ಸಿಕಂದರ್ ಕೂಂ ಸುನೀ, ಭಿಷ್ಟ್ ಹುಯೆ ದೋ ಸಂತ್।
ಗರೀಬ್‌ದಾಸ್ ಚ್ಯಾರೋಂ ವರಣ್, ಉಠಿ ಲಾಗೆ ಸಬ್ ಪಂಥ್ ॥731॥
ಚ್ಯಾರಿ ವರಣ್ ಷಟ್ ಆಶ್ರಮ್, ದೋನೌಂ ದೀನ್ ಖುಶಾಲ್ ।

ಗರೀಬ್‌ದಾಸ್ ಹಿಂದೂ ತುರಕ್, ಪಡ್ಯಾ ಶಹರ್ ಗಲಿ ಜಾಲ್ ॥732॥
ಶಾಹ್ ಸಿಕಂದರಕೈ ಗಯೇ, ಸುನಿ ಕಬಲೇ ಅರದಾಸ್ ।
ಗರೀಬ್‌ದಾಸ್ ತಲಬಾಂ ಹುಈ, ಪಕರೆ ದೋನೌಂ ದಾಸ್ ॥733॥
ಕಹೌ ಕಬೀರ್ ಯೌಹ್ ಕ್ಯಾ ಕಿಯಾ, ಗನಿಕಾ ಲಿನ್ಹೀ ಸಂಗ್ ।
ಗರೀಬ್‌ದಾಸ್ ಭೂಲೆ ಭಕ್ತಿ, ಫರ್ಯಾ ಭಜನ್ ಮೆಂ ಭಂಗ್ ॥734॥
ಸುನೌ ಸಿಕಂದರ್ ಬಾದಶಾಹ್, ಹಮರೀ ಅರಜ್ ಅವಾಜ್ ।
ಗರೀಬ್‌ದಾಸ್ ವಹ್ ರಾಖಿಸೀ, ಜಿನ್ ಯೌಹ್ ಸಾಜ್ಯಾ ಸಾಜ್ ॥735॥
ಜಡಿಯಾ ತೌಕ್ ಜಂಜೀರ್ ಗಲ್, ಶಾಹ್ ಸಿಕಂದರ್ ಆಪ್ ।
ಗರೀಬ್‌ದಾಸ್ ಪದ್ ಲೀನ್ ಹೈ, ತಾರೀ ಅಜಪಾ ಜಾಪ ॥736॥
ಹಾಥೌಂ ಜಡೀ ಹಥಕಡೀ, ಪಗ್ ಬೇಡೀ ಪಹಿರಾಯ ।
ಗರೀಬ್‌ದಾಸ್ ಬೀಚ್ ಗಂಗ್ ಮೆಂ, ತಹಾಂ ದೀನ್ಹಾ ಛಿಟಕಾಯ್ ॥737॥
ಝುಡಿ ಗಯೆ ತೌಂಕ್ ಜಂಜೀರ್ ಸಬ್, ಲಗ್ಯೈ ಕಿನಾರೈ ಆಯ್ ।
ಗರೀಬ್‌ದಾಸ್ ದೇಖೈ ಖಲಕ್, ಸ್ಯೌಂ ಕಾಜೀ ಬಾದಶಾಹ್ ॥738॥
ನೀಚೈ ನೀಚೈ ಗಂಗಾಜಲ್, ಊಪರ್ ಆಸನ್ ಧೀರ್ ।
ಗರೀಬ್‌ದಾಸ್ ಬೂಡ್ಯೆ ನಹೀಂ, ಬೈಠೆ ಅಧರ್ ಕಬೀರ್ ॥739॥
ಯೋಹ್ ಅಚರಜ್ ಕೈಸಾ ಭಯಾ, ದೇಖೈ ದೋನೌಂ ದೀನ್ ।
ಗರೀಬ್‌ದಾಸ್ ಕಾಜೀ ಕಹೈ, ಬಾಂಧಿ ದಿಯಾ ಜಲ್ ಸೀನ್ ॥740॥
ಗಲ್ ಮೆಂ ಫಾಂಸೀ ಡಾರಿ ಕರಿ, ಬಾಂಧೌ ಶಿಲಾ ಸುಧಾರಿ ।
ಗರೀಬ್‌ದಾಸ್ ಯೌಹ್ ಜುಲಹದೀ, ಜಬ್ ಬೂಡ್ಯೆ ಗಂಗಧಾರ ॥741॥
ಶಿಲಾ ಧರೀ ಜಬ್ ನಾವ್ ಮೆಂ, ಬಾಂಧೀ ಗಲ್ಯೈ ಕಬೀರ್ ।
ಗರೀಬ್‌ದಾಸ್ ಫಂದ್ ಟೂಟಿ ಕೈ, ನಾ ಡೂಬೈ ಜಲನೀರ್ ॥742॥
ಶಿಲಾ ಚಲೀ ಶಾಹ ಔರ್ ಕೌ, ದೇಖತ್ ಕಾಶೀ ಖ್ಯಾಲ್ ।
ಗರೀಬ್‌ದಾಸ್ ಕಬೀರ್ ಕಾ ಆಸನ್ ಅಧರ ಹಮಾಲ್ ॥743॥
ತೀರ್ ಬಾಣ್ ಗೋಲೀ ಚಲ್ಯೆಂ, ತೋಪ್ ರಹಕಲ್ಯೌಂ ಶೋರ್।
ಗರೀಬ್‌ದಾಸ್ ಉಸ್ ಜುಲಹದೀಕೈ, ಗಈ ಏಕ ನಹೀಂ ಓರ್॥744॥
ಅಧರ್ ಧಾರ್ ಗೋಲೇ ಬಹೈಂ, ಜಲಕೈ ಬೀಚ್ ಗಭಾಕ್ ।
ಗರೀಬ್‌ದಾಸ್ ಉಸ್ ಜುಲಹದೀ ಪರ್, ಶಸ್ತ್ರ ಛೂಟ್ಯೆಂ ಲಾಖ್ ॥745॥
ತೋಪ್ ರಹಕಲೇ ಸಬ್ ಚಲ್ಯೆಂ, ತೀರ್ ಬಾಣ್ ಕಮಾನ್ ।
ಗರೀಬ್‌ದಾಸ್ ವಹ್ ಜುಲಹದೀ, ಜಲ್ ಪರ್ ರಹೈ ಅಮಾನ್ ॥746॥
ಅಧರಿ ಧಾರ್ ಅಪಾರ್ ಗತಿ, ಜಲ್ ಪರಿ ಲಗೀ ಸಮಾಧಿ ।
ಗರೀಬ್‌ದಾಸ್ ನಿಜ್ ಬ್ರಹ್ಮಪದ್, ಖೇಲೈ ಆದಿ ಅನಾದಿ ॥747॥
ಜುಲಮ್ ಹುಆ ಬೂಡ್ಯೆ ನಹೀಂ, ಶಸ್ತ್ರ ಲಗ್ಯೈ ನ ಬಾಣ್ ।
ಗರೀಬ್‌ದಾಸ್ ಇಬ್ ಕೌನ್ ಗತಿ, ಕೈಸ್ಯೆಂ ತೀಜೈ ಪ್ರಾಣ್ ॥748॥
ಲಗೀ ಸಮಾಧೀ ಅಗಾಧ್ ಮೆಂ, ಬಿಚರೈ ಕಾಶೀ ಗಂಗ್ ।
ಗರೀಬ್‌ದಾಸ್ ಕಿಲೋಲ್ ಸರ್, ಛೂಹೈಂ ಚರಣ್ ತರಂಗ್ ॥749॥
ಚ್ಯಾರಿ ಪಹರ್ ಗೋಲೆ ಬಗೆ, ಧಮೀ ಮುಲಕ್ ಮೈದಾನ್ ।
ಗರೀಬ್‌ದಾಸ್ ಪೋಖರ್ ಸುಖ್ಯೆಂ, ರಹೆ ಕಬೀರ್ ಅಮಾನ್ ॥750॥

ಅಪನೀ ಕರನೀ ಸಬ್ ಕರೀ, ಥಾಕೆ ದೋನೌಂ ದೀನ್ ।
ಗರೀಬ್‌ದಾಸ್ ಅಬ್ ಜುಲಹದೀ, ಪೈಠಿ ಗಯೆ ಜಲಮೀನ್ ॥751॥

ಡೂಬ್ಯಾ ಡೂಬ್ಯಾ ಸಬ್ ಕಹೈಂ, ಹೋ ಗಯೆ ಗಾರತ್ ಗೋರ್ ।
ಗರೀಬ್‌ದಾಸ್ ಕಬಲೇ ಧನೀ, ತುಮ್ ಆಗೈ ಕ್ಯಾ ಜೋರ್ ॥752॥

ಆನಂದ್ ಮಂಗಲ್ ಹೋತ್ ಹೈ, ಬಟ್ಟೈಂ ಬಧಾಈ ಬೇಗ್ ।
ಗರೀಬ್‌ದಾಸ್ ಉಸ್ ಜುಲಹದೀ ಪರ್ ಫಿರ್ ಗಈ ರೇತೀ ರೇಫ್ ॥753॥

ಹಸ್ತೀ ಘೋಡೆ ಚಢತ್ ಹೈ, ಪಾನ್ ಮಿಠಾಈ ಚೀರ್ । ಗರೀಬ್‌ದಾಸ್ ಕಾಶೀ ಖುಸೀ, ಬೂಡೆ ಗಂಗ್ ಕಬೀರ್ ॥754॥

ಜಾವೋ ಘರಿ ರೈದಾಸ್ ಕೈ, ಹಿಲಕಾರೆ ಹಜೂರ್ । ಗರೀಬ್‌ದಾಸ್ ಖುಸಿಯಾ ಕಹೌ, ಕಹಿಯೋ ನಹೀಂ ಕಸೂರ್ ॥755॥

ಝಾಲರಿ ಢೋಲಕ್ ಬಜತ್ ಹೈಂ, ಗಾವೈಂ ಶಬ್ದ್ ಕಬೀರ್ । ಗರೀಬ್‌ದಾಸ್ ರೈದಾಸ್ ಸಂಗಿ, ದೋನೌಂ ಏಕಹೀ ತೀರ್ ॥756॥

ಕಾಜೀ ಪಂಡಿತ್ ಸಬ್ ಗಯೇ, ಶಾಹ್ ಸಿಕಂದರ್ ಉಠ್ । ಗರೀಬ್‌ದಾಸ್ ರೈದಾಸಕೈ, ಭೇಷ್ ಗಯೇ ಜಟಜೂಟ್ ॥757॥

ಕೋರೀ ಕುಠಲೇ ಸಬ್ ಝುಕೇ, ಬಾಸನ್ ಟೀಡರ್ ಗೋಲಿ ।
ಗರೀಬ್‌ದಾಸ್ ರಹದಾಸ್ ಸುನೀ, ಕಹಾಂ ಗಯೇ ವಹ್ ಬೋಲ್ ॥758॥

ವೆ ಪ್ರಗಟ್ ಪೂರಣ್ ಪುರುಷ್ ಹೈಂ, ಅಬಿನಾಶೀ ಅಲಖ್ ಅಲ್ಲಾಹ್ ।
ಗರೀಬ್‌ದಾಸ್ ರೈದಾಸ್ ಕಹೈಂ, ಸುನೌಂ ಸಿಕಂದರ್ ಶಾಹ್ ॥759॥

ಸೂರಜ್ ಮುಖೀ ಸುಭಾಂನ್ ಸರ್, ಖಿಲೇ ಫೂಲ್ ಗುಲಜಾರ್ । ಗರೀಬ್‌ದಾಸ್ ಕಾಜೀ ಪಂಡಿತ್ ಕರತಾ ಶಾಹ್ ಪುಕಾರ್ ॥760॥

ಶಾಹ್ ಸಿಕಂದರ್ ಫಿರ್ ಗಯೇ, ಉಸ್ ಗಂಗಾ ಕೈ ತೀರ್ । ದಾಸ್ ಗರೀಬ್ ಕಬೀರ್ ಹರೀ, ಬೈಠೆ ಊಪರ್ ನೀರ್ ॥761॥

ಬೈಠಿ ಮಲಾಹ್ ಜಿಹಾಜ್ ಮೆಂ, ಗಯೆ ಧಾರ್ ಕೈ ಬೀಚ್ ।
ಗರೀಬ್‌ದಾಸ್ ಹರಿ ಹರಿ ಕರೈಂ, ಪ್ರೇಮ್ ಫುಹಾರೆ ಸೀಚ್ ॥762॥

ಕರೀ ಅರಜ್ ಮಲಾಹ್ ತಹಾಂ, ದೀನ್ ದುನೀ ಬಾದಶಾಹ್ ।
ಗರೀಬ್‌ದಾಸ್ ಆಸನ್ ಉಧರ್, ಲಗೀ ಸಮಾಧಿ ಜುಲಾಹ್ ॥763॥

ಭಂವರ್ ಫಿರತ್ ಹೈಂ ಗಂಗ್ ಜಲ್, ಫೂಲ್ ಉಗಾನೆಂ ಕೋಟಿ ।
ಗರೀಬ್‌ದಾಸ್ ತಹಾಂ ಬಂದಗೀ, ಹರಿಜನ್ ಹರಿ ಕೀ ಓಟ್ ॥764॥

ಸಂಕಲ್ ಸೀಢೀ ಲಾಯ್ ಕರಿ, ಉತರೆ ತಹಾಂ ಮಲಾಹ್ ।
ಗರೀಬ್‌ದಾಸ್ ಹಮ್ ಬಂದಗೀ, ಯಾದ್ ಕಿಯೆ ಬಾದ್ ಶಾಹ್ ॥765॥

ಬೈಠ್ ಕಬೀರ್ ಜಹಾಜ್ ಮೆಂ, ಆಯೆ ಗಂಗಾ ಘಾಟ್ ।
ಗರೀಬ್‌ದಾಸ್ ಕಾಶೀ ಥಕೀ, ಹಾಂಡೆ ಬೌಹ್ ಬಿಧಿ ಬಾಟ್ ॥766॥

**ಶಬ್ದಾರ್ಥ:– 726–730 ರ ವಾಣಿಗಳ ಶಬ್ದಾರ್ಥ:–**

ಪರಮಾತ್ಮ ಕಬೀರರು ಶಿಷ್ಯರನ್ನು ಪರೀಕ್ಷಿಸುವ ಉದ್ದೇಶದಿಂದ ಒಂದು ಶೀಶೆಯಲ್ಲಿ ಗಂಗಾನದಿಯ ನೀರನ್ನು ತುಂಬಿ ತಂದರು. ಕಾಶೀ ನಗರದ ಪ್ರಸಿದ್ಧ ವೇಶ್ಯೆಯು ಸಂತ ರವಿದಾಸರ ಜೊತೆಯಲ್ಲಿ ಬಾಡಿಗೆಗೆ ಪಡೆದಿದ್ದ ಆನೆಯ ಮೇಲೆ ಕುಳಿತು ಕಾಶೀ ನಗರದ ಮುಖ್ಯ ಬೀದಿಗಳಲ್ಲಿ ಓಡಾಡಲಾರಂಭಿಸಿದರು. ಶೀಶೆಯಿಂದ ಅವರು ನೀರನ್ನು ಕುಡಿಯುತ್ತಿದ್ದರು. ಆದರೆ ಮದ್ಯವನ್ನು ಸೇವಿಸುತ್ತಿರುವಂತೆ ನಾಟಕವಾಡುತ್ತಿದ್ದರು. ರವಿದಾಸರು ಆನೆಯನ್ನು ಮುನ್ನಡೆಸುತ್ತಿದ್ದರು. ಹಿಂದೆ ವೇಶ್ಯೆ ಕುಳಿತಿದ್ದಳು. ವೇಶ್ಯೆಯ ಹಿಂದೆ ಕಬೀರದಾಸರು ವೇಶ್ಯೆಯ ಕೊರಳನ್ನು ತಬ್ಬಿಕೊಂಡು ಪ್ರೇಮಿಯ ರೀತಿಯಲ್ಲಿ ಅಭಿನಯಿಸುತ್ತಿದ್ದರು. ಕಾಶೀ ನಗರದ ಜನರೆಲ್ಲಾ ಇದನ್ನು ನೋಡಿ, ಚಪ್ಪಾಳೆ ತಟ್ಟಿ, ನೋಡು, ಕಬೀರ್ ಎಂಬ ನೀಚತ ನೇಕಾರನು ವೇಶ್ಯೆಯ ಜೊತೆ ಮದ್ಯದ ಮತ್ತಿನಲ್ಲಿ ಸುತ್ತಾಡುತ್ತಿದ್ದಾನೆ. ಅವಳ ಕೊರಳನ್ನು ತಬ್ಬಿಕೊಂಡು ಹುಚ್ಚನಂತೆ ಸುತ್ತುತ್ತಿದ್ದಾನೆ. ಮಾನ ಮರ್ಯಾದೆಯ ಬಗ್ಗೆ ಚಿಂತಿಸುತ್ತಿಲ್ಲ. ಕಬೀರ ಪರಮಾತ್ಮ ಭಕ್ತಿಯ ಹಾಡುಗಳನ್ನು ಹಾಡುತ್ತಿದ್ದರು ಹಾಗೂ ವಾಲಾಡುತ್ತಿದ್ದರು. ವೇಶ್ಯೆಯನ್ನು ತಬ್ಬಿಕೊಂಡು ಹಾಡು ಹಾಡುತ್ತಿದ್ದಾರೆ ಎಂದು ಜನತೆ ಅರ್ಥೈಸಿಕೊಂಡಿತು. ಕಾಶೀ ನಗರದ ಎಲ್ಲಾ ನಾಗರೀಕರು ಕಬೀರರನ್ನು ವ್ಯಭಿಚಾರಿ ಎಂದು ಕರೆಯಲಾರಂಭಿಸಿದರು. ಆದರೆ ಕಬೀರ ಪರಮಾತ್ಮರು ಸದ್ಗುರುವಿನ ರೂಪದಲ್ಲಿ ಅನೇಕ ಶಿಷ್ಯರಿಗೆ ದೀಕ್ಷೆ ಕೊಡಿಸಿದ್ದರು ಎನ್ನುವುದನ್ನು ಯಾರೂ ತಿಳಿದುಕೊಳ್ಳಲಿಲ್ಲ. ಅವರೆಲ್ಲರ ಪಾಪದ ಕೊಡವನ್ನು ತಾವು ಹೊತ್ತುಕೊಂಡಿದ್ದರು. ಶಿಷ್ಯರು ಗುರುವಿನ ಆದೇಶವನ್ನು ಪಾಲಿಸುತ್ತಿರಲಿಲ್ಲ. ಶಿಷ್ಯರೆಲ್ಲ ಕಬೀರರ ಈ ವರ್ತನೆಯನ್ನು ನೋಡಿ ನಾಮಸ್ಮರಣೆಯ ದೀಕ್ಷೆಯನ್ನು ತೊರೆದು ಕಬೀರರಿಂದ ದೂರವಾದರು. ಅವರ ಸತ್ಸಂಗದಲ್ಲಿ ನಡೆಯುವ ಪ್ರವಚನ ಕೇಳಲೂ ಸಹ ಬರಲಿಲ್ಲ. ಎಷ್ಟು ಜನರು ಸತ್ಸಂಗ ಬಿಟ್ಟರೋ, ಅಷ್ಟು ಜನರ ಭಾರ ಕಬೀರರ ತಲೆಯಿಂದ ಇಳಿಯಿತು. ಕಾಶೀ ನಗರದ ಮೂವತ್ತಾರ ಮನೆತನದವರು. ನೋಡು, ವೇಶ್ಯೆಯನ್ನು ಕರೆದುಕೊಂಡು ಹೇಗೆ ತಿರುಗುತ್ತಿದ್ದಾನೆ, ಇವನ ದರ್ಶನದಿಂದಲೇ ನಮಗೆ ಪಾಪ ಸುತ್ತಿಕೊಳ್ಳುತ್ತದೆ ಎಂದು ಆಡಿಕೊಳ್ಳತೊಡಗಿದರು.

**731–754** ರವರೆಗಿನ ವಾಣಿಗಳ ಶಬ್ದಾರ್ಥ :– ಆ ದಿನಗಳಲ್ಲಿ ದಿಲ್ಲಿಯ ರಾಜನಾದ ಸಿಕಂದರ್ ಲೋಧಿ ಕಾಶಿಯಲ್ಲಿ ನೆಲೆಸಿದ್ದನು. ಏಕೆಂದರೆ ಅವನು ಇಡೀ ಹಳೇ ಭಾರತದ ಸಾಮ್ರಾಟನಾಗಿದ್ದನು. ಅವನ ಅಧೀನದಲ್ಲಿ ಚಿಕ್ಕ ಚಿಕ್ಕ ರಾಜ್ಯಗಳಿದ್ದವು. ಕಾಶೀ ನಗರದ ರಾಜನಾದ ಬೀರದೇವ ಸಿಂಹ ಬಘೇಲನೂ ಸಹ ಸಿಕಂದರನ ಅಧೀನದಲ್ಲಿದ್ದನು. ಪರಮಾತ್ಮ ಕಬೀರರೂ ಸಹ ಸಿಕಂದರ್ ಲೋಧಿ ಕಾಶಿಗೆ ಬಂದು ನೆಲೆಸಿದ್ದಾಗ ಅಪೂರ್ವ ಲೀಲೆಗಳನ್ನು ಮಾಡುತ್ತಿದ್ದರು. ಯಾವ ಮನುಷ್ಯನು ಯಾವ ಧರ್ಮಕ್ಕೆ ಸೇರಿದವನು ಹಾಗೂ ಅನ್ಯ ಜೀವಿಗಳು ಯಾವ ಯಾವ ಜೀವಿಗಳ ಮಕ್ಕಳು ಎಂದು ಪರಮೇಶ್ವರನಿಗೆ ತಿಳಿದೇ ಇರುತ್ತದೆ. ತಂದೆಯಾದ ಕಾರಣ ಪರಮೇಶ್ವರ ಕಬೀರರು ತಮ್ಮ ಮಕ್ಕಳನ್ನು ಕಾಲಬ್ರಹ್ಮನ ಬಲೆಯಿಂದ ಬಿಡಿಸುವ ಪ್ರಯತ್ನ ಮಾಡುತ್ತಿರುತ್ತಾರೆ. ಪರಮೇಶ್ವರ ಕಬೀರರು ಹೇಗಾದರೂ ಮಾಡಿ ಸಿಕಂದರ್ ಲೋಧಿಯು ನನ್ನ ಸಾಮರ್ಥ್ಯವನ್ನು ಅರಿತುಕೊಳ್ಳಲಿ ಹಾಗೂ ಈ ರಾಜ್ಯದಲ್ಲಿ ನನ್ನ ಜ್ಞಾನದ ಪ್ರಚಾರಕ್ಕೆ ಸಹಯೋಗ ನೀಡಿ ತನ್ನ ಉದ್ಧಾರ ಮಾಡಿಕೊಳ್ಳಲಿ ಎಂದು ಆಶಿಸುತ್ತಿದ್ದರು.

ಭಾರತದಲ್ಲಿ ಹಿಂದೂ ಬ್ರಾಹ್ಮಣ ಗುರುಗಳ ಮತ್ತು ಮುಸಲ್ಮಾನ ಕಾಜೀ ಧರ್ಮ ಗುರುಗಳ ಮಧ್ಯೆ ಎಂದೂ ಸಾಮರಸ್ಯವಿರಲಿಲ್ಲ. ಧರ್ಮದ ಹೆಸರಿನಲ್ಲಿ ಜಗಳವಾಡುತ್ತಿದ್ದರು. ಆದರೆ ಕಬೀರರ ವಿಷಯ ಬಂದಾಗ ಇವರಿಬ್ಬರೂ ಒಂದಾಗಿ ಕಬೀರರನ್ನು ವಿರೋಧಿಸುತ್ತಿದ್ದರು. ಏಕೆಂದರೆ ಕಬೀರರು ಎರಡೂ ಧರ್ಮದ ಪ್ರಚಾರಕರ ಜ್ಞಾನವನ್ನು ತಪ್ಪು ಎಂದು ಸಾಬೀತುಪಡಿಸುತ್ತಿದ್ದರು. ಈ ಧರ್ಮ ಪ್ರಚಾರಕರಿಗೆ ಧರ್ಮಗ್ರಂಥದ ಬಗ್ಗೆ ತಿಳುವಳಿಕೆ ಇಲ್ಲ ಎಂದು ಹೇಳುತ್ತಿದ್ದರು. ಇವರೆಲ್ಲಾ ಶಾಸ್ತ್ರ ವಿರುದ್ಧವಾದ ಜ್ಞಾನ ಮತ್ತು ಭಕ್ತಿಯನ್ನು ತಿಳಿಸುತ್ತಿದ್ದಾರೆ, ಹಾಗಾಗಿ ಸಾಧಕರಿಗೆ ಯಾವುದೇ ಆಧ್ಯಾತ್ಮಿಕ ಲಾಭ ಪರಮಾತ್ಮನ ಕಡೆಯಿಂದ ಸಿಗುತ್ತಿಲ್ಲ ಎಂದು ಹೇಳುತ್ತಿದ್ದರು.

ಕಬೀರರಿಂದ ದೀಕ್ಷೆ ಪಡೆದವರಿಗೆ ತಕ್ಷಣವೇ ಪ್ರಯೋಜನವಾಗುತ್ತಿತ್ತು. ಈ ಕಾರಣದಿಂದ ಅರವತ್ತನಾಲ್ಕು ಲಕ್ಷ ಜನರು ಕಬೀರರ ಶಿಷ್ಯರಾಗಿದ್ದರು. ಎಲ್ಲರೂ ಬಹಳ ದುಃಖಿಗಳಾಗಿದ್ದರು. ಆದರೆ ದೀಕ್ಷೆ ಮತ್ತು ಆಶೀರ್ವಾದದಿಂದ ಎಲ್ಲರ ಕಷ್ಟ ದೂರವಾಗಿ ಎಲ್ಲರೂ ಸುಖಿಗಳಾಗಿದ್ದರು. (ಕಬೀರರ ಶಿಷ್ಯರಲ್ಲಿ) ಹಿಂದೂ ಮತ್ತು ಮುಸಲ್ಮಾನರಿದ್ದರು. ಈ ಕಾರಣದಿಂದ ಧರ್ಮ ಪ್ರಚಾರಕರು ಕಬೀರರನ್ನೂ ಕಂಡು ಹೊಟ್ಟೆಕಿಚ್ಚು ಪಡುತ್ತಿದ್ದರು. ಈ ಘಟನೆಯಿಂದ ಧರ್ಮ ಪ್ರಚಾರಕರಿಗೆ ಇನ್ನೂ ರೆಕ್ಕೆಗಳು ಬಂದ ಹಾಗಾಯಿತು. ದಿಲ್ಲಿಯ ಸಾಮ್ರಾಟರು ಬಂದಿದ್ದಾರೆ, ಈ ದಿನ ಈ ನೇಕಾರನಿಗೆ ಮರಣದಂಡನೆಯ ಶಿಕ್ಷೆ ಕೊಡಿಸೋಣ ಎಂದು ಯೋಚಿಸುತ್ತಾ, ಸಾವಿರಾರು ಸಂಖ್ಯೆಯಲ್ಲಿ ಎರಡೂ ಧರ್ಮದ ಧರ್ಮ ಪ್ರಚಾರಕರು ಸಿಕಂದರ್ ಲೋಧಿಯ ವಿಶ್ರಾಂತಿ ಗೃಹಕ್ಕೆ ಬಂದರು. ಸಿಕಂದರ್ ಲೋಧಿಯು ಜನರನ್ನು ಸಂತೃಪ್ತಿಗೊಳಿಸಲು, 'ಈಗಲೇ ಅವನನ್ನು ಬಂಧಿಸಿ, ಅವನ ತಲೆ ಕಡಿಯುತ್ತೇನೆ' ಎಂದನು. ಸಂತರ ರವಿದಾಸರು ಹಾಗೂ ಪರಮಾತ್ಮ ಕಬೀರರನ್ನು ಪೊಲೀಸರು ಬಂಧಿಸಿದರು. ಸಂತ ರವಿದಾಸರನ್ನು ನಂತರದಲ್ಲಿ ಬಿಡುಗಡೆ ಮಾಡಿದರು. ಏಕೆಂದರೆ ತಪ್ಪೆಲ್ಲವೂ ನನ್ನದೇ ಎಂದು ಕಬೀರರು ಒಪ್ಪಿಕೊಂಡರು. ಇದರಲ್ಲಿ ರವಿದಾಸರ ತಪ್ಪು ಇಲ್ಲ, ವೇಶ್ಯೆಯ ತಪ್ಪೂ ಇಲ್ಲ, ಎಲ್ಲವನ್ನು ನಾನೇ ಮಾಡಿದ್ದೇನೆ ಎಂದರು.

ಕಬೀರ ಪರಮೇಶ್ವರರ ಆಶೀರ್ವಾದದಿಂದ ಸಿಕಂದರ್ ಲೋಧಿಯ ಅಸಾಧಾರಣ ರೋಗವು ವಾಸಿಯಾಗಿತ್ತು. ತನ್ನ ಮಗನಾದ ಕಮಾಲ್ ಹಾಗೂ ಮಗಳಾದ ಕಮಾಲಿ ಮತ್ತು ಸ್ವಾಮಿ ರಾಮಾನಂದರನ್ನು ಸಿಕಂದರ್ ಲೋಧಿಯು ಹತ್ಯೆ ಮಾಡಿದ್ದನು. ಆದರೆ ಕಬೀರರು ಆ ರಾಜನ ಮುಂದೆಯೇ ಸತ್ತವರನ್ನು ಬದುಕಿಸಿದ್ದರು. ಸಿಕಂದರ್ ಲೋಧಿಯು ಕಬೀರರನ್ನು ಗುರುಗಳೆಂದು ನಂಬಿದ್ದನು. ಆದರೆ ಅತ್ಯಧಿಕ ಜನರು ಸೇರಿದ್ದ ಕಾರಣ, ಕಬೀರರ ವರ್ತನೆ ಅಕ್ಷಮ್ಯವೆಂದು ಭಾವಿಸಿ ಹಾಗೂ ಕಾನೂನಿನ ಸುವ್ಯವಸ್ಥೆಯನ್ನು ಕಾಪಾಡಲು ಅವನು ಕಬೀರರನ್ನು ಬಂಧಿಸಿದನು. ಆದರೂ ಸಹ ಶಿಷ್ಟಾಚಾರವನ್ನು ಕಾಪಾಡಲು ಹೀಗೆಂದು ಪ್ರಶ್ನಿಸಿದನು, "ಕಬೀರರೇ, ನೀವು ಒಳ್ಳೆಯ ವಿಚಾರವಂತರು, ನೀವೇನು ಮಾಡಿಬಿಟ್ಟಿರಿ? ವೇಶ್ಯೆಯನ್ನು ಕರೆದುಕೊಂಡು ಬಂದು ಭಕ್ತಿಯನ್ನು ಮರೆತಿರಿ. ನಿಮ್ಮ ಭಜನೆ ಭಂಗವಾಯಿತು. ಭಕ್ತಿ ನಾಶವಾಯಿತು." ಆಗ ಕಬೀರರು, "ಸಿಕಂದರ್ ಮಹಾರಾಜರೇ, ನಿಮ್ಮ ಪ್ರಶ್ನೆಗೆ ಉತ್ತರ ಕೇಳಿ. ಯಾವ ಪರಮೇಶ್ವರನು ಎಲ್ಲಾ ಬ್ರಹ್ಮಾಂಡಗಳನ್ನು ರಚಿಸಿ, ಸುರಕ್ಷಿತವಾಗಿ ಇಟ್ಟಿದ್ದಾನೋ, ಅವನು ನನ್ನ ರಕ್ಷಣೆಯನ್ನೂ ಮಾಡುತ್ತಾನೆ" ಎಂದರು. ಆದರೂ ಸಹ ಜನತೆಯನ್ನು ತೃಪ್ತಿಗೊಳಿಸಲು ಸಿಕಂದರ್ ಲೋಧಿಯು ಕಬೀರರ ಕೈಗಳಿಗೆ ಬೇಡಿ ತೊಡಿಸಿ, ಕಾಲುಗಳಿಗೆ ಸರಪಳಿ ತೊಡಿಸಿ, ಕತ್ತಿಗೆ ಕಬ್ಬಿಣದ ಸರಪಳಿ ಹಾಕಿ ಗಂಗಾ ನದಿಯ ಮಧ್ಯದಲ್ಲಿ ಮುಳುಗಿಸಿ ಸಾಯಿಸುವಂತೆ ಆದೇಶ ನೀಡಿದನು.

ರಾಜನ ಆಜ್ಞೆಯಂತೆ ಕಬೀರರನ್ನು ಗಂಗಾನದಿಯ ಮಧ್ಯಕ್ಕೆ ದೋಣಿಯಲ್ಲಿ ಕರೆದುಕೊಂಡು ಹೋಗಿ, ಅಲ್ಲಿ ನೀರಲ್ಲಿ ಮುಳುಗಿಸಲಾಯಿತು. ತಕ್ಷಣವೇ ಕಬೀರರ ಕೈಯಲ್ಲಿದ್ದ ಬೇಡಿ, ಕಾಲಲ್ಲಿ, ಕೊರಳಲ್ಲಿ ಇದ್ದ ಕಬ್ಬಿಣದ ಸರಪಳಿಗಳು ತುಂಡಾಗಿ ನೀರಲ್ಲಿ ಬಿದ್ದುಬಿಟ್ಟವು. ಪರಮಾತ್ಮ ಕಬೀರರು ನೀರಿನಿಂದ ಮೇಲೆ ಬಂದು ಕುಳಿತರು. ಇದನ್ನು ನೋಡಿದ ಕಾಜಿಗಳು ಬಹುಶಃ ಮಾಯಾ ಮಂತ್ರದಿಂದ ನೀರನ್ನು ಬಂಧಿಸಿಟ್ಟಿದ್ದಾರೆ (ಹಾಗಾಗಿ ಇವರು ಮುಳುಗುತ್ತಿಲ್ಲ) ಎಂದು ಹೇಳತೊಡಗಿದರು. ಸ್ವಲ್ಪ ಸಮಯದವರೆಗೆ ಕಬೀರರು ನೀರಿನ ಮೇಲೆ ಕುಳಿತಿದ್ದರು. ನಂತರ ಮೊದಲು ಹೇಗೆ ದೋಣಿಯಲ್ಲಿ ಬಂದಿದ್ದರೋ, ಅದೇ ಮಾರ್ಗವಾಗಿ ಮರಳಿ ಬಂದರು. ಅಲ್ಲಿ ಸಾವಿರಾರು ಮಂದಿ ಈ ದೃಶ್ಯವನ್ನು ನೋಡಲು ಸೇರಿದ್ದರು. ಸಿಕಂದರ್ ಲೋಧಿಯೂ ಹಾಜರಿದ್ದನು. ಕಾಜಿಗಳು, ಧರ್ಮಗುರುಗಳು ಯೋಚಿಸಿ, ಇವನ ಕೊರಲಿಗೆ ಭಾರವಾದ ಕಲ್ಲನ್ನು ಕಟ್ಟಿದರೆ ಇವನು ಮುಳುಗುತ್ತಾನೆ ಎಂದು ಸಿಕಂದರ್ ಲೋಧಿಗೆ ಹೇಳಿದರು.

ಮತ್ತೆ ಕಬೀರರ ಕೊರಳಿಗೆ ಕಬ್ಬಿಣದ ಸರಪಳಿಯಿಂದ ಕಟ್ಟಿದ ಭಾರೀ ಗಾತ್ರದ ಕಲ್ಲನ್ನು ನೇತುಹಾಕಿ

ಗಂಗಾನದಿಯ ಮಧ್ಯಕ್ಕೆ ಕರೆದುಕೊಂಡು ಹೋಗಿ ಮುಳುಗಿಸಲಾಯಿತು. ಮತ್ತೆ ಸರಪಳಿ ತುಂಡಾಯಿತು. ಭಾರೀ ಗಾತ್ರದ ಕಲ್ಲು ತೇಲುತ್ತಾ ಬಂದು ಬಹಳ ವೇಗವಾಗಿ ಸಿಕಂದರ್ ಲೋಧಿಯ ಬಳಿ ಬಂದಿತು. ಕಬೀರರು ನೀರಿನ ಮೇಲೆ ಪದ್ಮಾಸನ ಹಾಕಿ ಆರಾಮವಾಗಿ ಕುಳಿತಿದ್ದರು. ಅಗಾಧವಾದ ನೀರು ಹರಿಯುತ್ತಿತ್ತು. ಆದರೆ ಕಬೀರ ಪರಮಾತ್ಮರು ಮುಳುಗಲಿಲ್ಲ. ನೀರಿನ ಅಲೆಗಳು ಪರಮೇಶ್ವರರ ಚರಣಗಳನ್ನು ಸ್ಪರ್ಶಿಸಿ, ಕುಣಿಯುತ್ತಾ, ನರ್ತಿಸುತ್ತಿತ್ತು. ಆಗ ರಾಜನು ಬಾಣವನ್ನು ಬಿಟ್ಟು ಕಬೀರರನ್ನು ಕೊಲ್ಲಲು ಆದೇಶವನ್ನಿತ್ತನು. ಎಷ್ಟೇ ಬಾಣಗಳನ್ನು ಬಿಟ್ಟರೂ ಕಬೀರರು ಸಾಯಲಿಲ್ಲ. ಆಗ ತೋಪನ್ನು ತರಿಸಲಾಯಿತು. ತೋಪಿಗೆ ಮದ್ದು ಗುಂಡುಗಳನ್ನು ತುಂಬಿ ಕಬೀರರ ಮೇಲೆ ಪ್ರಯೋಗಿಸಲಾಯಿತು. ಆದರೆ ಕಬೀರರಿಗೆ ಏನೂ ಆಗಲಿಲ್ಲ. ಮದ್ದು ಗುಂಡುಗಳಲ್ಲಿ ಒಂದು ನದಿಗೆ ಬಿದ್ದರೆ, ಇನ್ನೊಂದು ಗುಡ್ಡಕ್ಕೆ ಬಿತ್ತು. ಒಂದು ಎಡಕ್ಕೆ ಬಿದ್ದರೆ, ಒಂದು ಬಲಕ್ಕೆ ಬಿತ್ತು. ಒಂದು ಗುಂಡೂ ಸಹ ಕಬೀರರ ಹತ್ತಿರವೂ ಬರಲಿಲ್ಲ. ಸುಮಾರು ಹನ್ನೆರಡು ಗಂಟೆಗಳವರೆಗೆ ಈ ಪ್ರಯತ್ನ ನಡೆಯಿತು. ಆದರೆ ಕಬೀರರು ಸಾಯಲಿಲ್ಲ. ಪೂರ್ಣ ಪರಮಾತ್ಮ ಕಬೀರರು ಅವಿನಾಶಿಗಳು. ಅವಿನಾಶಿಗಳನ್ನು ಯಾರು ಸಾಯಿಸಲು ಸಾಧ್ಯ? ಅವರ ಜೊತೆಗೆ ಲೀಲೆಗಳಿಂದ ತಮ್ಮ ಸಾಮರ್ಥ್ಯವನ್ನು ತೋರಿಸುತ್ತಿದ್ದರು. ಆದರೆ ಕಾಲಬ್ರಹ್ಮನು ಜನರ ಬುದ್ಧಿಯನ್ನು ಕೆಡಿಸಿದ್ದನು ಹಾಗಾಗಿ ಇವರು ಸಾಮಾನ್ಯ ವ್ಯಕ್ತಿಯಲ್ಲ ಎಂದು ಯಾರ ಮನಸ್ಸಿಗೂ ತಿಳಿಯಲೇ ಇಲ್ಲ.

ಇವರೆಲ್ಲಾ ಹೀಗೆ ವಿಚಾರ ಮಾಡುತ್ತಿರುವಾಗ ಕಬೀರರು ಗೋತಾ ಹೊಡೆದು ನೀರಲ್ಲಿ ಮುಳುಗಿದರು, ಆಗ ಇವರೆಲ್ಲಾ ಕಬೀರರು ಸತ್ತು ಹೋದರೆಂದೂ, ಇವರ ಶರೀರವು ಮೇಲೆ ಬರದ ಕಾರಣ ಯಾವುದೋ ಕೇಸರಿನಲ್ಲಿ ಸಿಕ್ಕಿ ಹಾಕಿಕೊಂಡಿರಬಹುದು ಎಂದು ತಿಳಿದರು. ಕಬೀರರು ಸತ್ತ ಖುಷಿಗೆ ಜನರು ವಾದ್ಯಗಳನ್ನು ನುಡಿಸುತ್ತಾ ನರ್ತಿಸಲಾರಂಭಿಸಿದರು, ಸಿಹಿ ಹಂಚಿದರು, ರಾಜನು ವಿಶ್ರಾಂತಿಗೃಹಕ್ಕೆ ಹೊರಟು ಹೋದನು. ಕಾಜಿಗಳು, ಧರ್ಮಗುರುಗಳು ಸೇರಿ ರವಿದಾಸರ ಮನೆಗೆ ತೆರಳಿದರು. ಅಲ್ಲಿ ಅವರಿಗೆ ಒಳಗಿನಿಂದ ಕಬೀರರ ಧ್ವನಿ ಕೇಳಿಸಿತು. ಅವರು ಪರಮಾತ್ಮನ ಮಹಿಮೆಯ ಹಾಡನ್ನು ಹಾಡುತ್ತಿದ್ದರು. ನೀವು ಯಾರನ್ನು ಅವಿನಾಶಿ ಎಂದು ಹೇಳುತ್ತಿದ್ದಿರೋ, ಆ ಕಬೀರರು ಸತ್ತುಹೋಗಿದ್ದಾರೆ ಎಂದು ಹೇಳಲು ಅವರೆಲ್ಲಾ ಬಂದಿದ್ದರು. ಆದರೆ ಮನೆಯ ಒಳಗಡೆ ಹೋದರೆ ಕಬೀರರು ರವಿದಾಸರ ಬಳಿ ಕುಳಿತಿದ್ದರು. ಇಬ್ಬರೂ ಭಕ್ತಿ ಪದಗಳನ್ನು ಹಾಡುತ್ತಿದ್ದರು. ಇದನ್ನು ನೋಡಿದ ಜನರು, ಕಬೀರರು ಸತ್ತಿಲ್ಲ, ಅವರು ರವಿದಾಸರು ಬಳಿ ಕುಳಿತಿದ್ದಾರೆ ಎಂದು ಹೋಗಿ ಸಿಕಂದರ್ ಲೋಧಿಗೆ ಹೇಳಿದರು. ಸಾವಿರಾರು ಮುಲ್ಲಾಗಳು, ಧರ್ಮ ಪ್ರಚಾರಕರು, ಸಾಮಾನ್ಯ ಜನರು ರವಿದಾಸರ ಮನೆಗೆ ತೆರಳಿದರು. ಅಲ್ಲಿ ಕಬೀರರು ಇರಲಿಲ್ಲ. ಕಬೀರರು ಎಲ್ಲಿ ಎಂದು ರವಿದಾಸರನ್ನು ಎಲ್ಲರೂ ಕೇಳಿದರು. ಆಗ ರವಿದಾಸರು, ಈಗಷ್ಟೇ ಇಲ್ಲಿಂದ ಹೊರಟರು. ಗಂಗಾನದಿಯಲ್ಲಿ ಸ್ನಾನ ಮಾಡಿ ಬರುತ್ತೇನೆ ಎಂದು ಹೇಳಿದರು. ಆಗ ರಾಜ ಹಾಗೂ ಎಲ್ಲಾ ಜನರು ಗಂಗಾನದಿಯ ದಡಕ್ಕೆ ಬಂದರು. ಅಲ್ಲಿ ಕಬೀರರು ನೀರಿನ ಮೇಲೆ ಮೊದಲಿನ ಸ್ಥಿತಿಯಲ್ಲೇ ಕುಳಿತಿದ್ದರು. ನದಿಯ ಮಧ್ಯದಲ್ಲಿ ಅವರು ಕುಳಿತಿದ್ದರು. ಒಂದು ಚಿಕ್ಕ ದೋಣಿಯಲ್ಲಿ ಅಂಬಿಗ ಹಾಗೂ ಕೆಲ ವ್ಯಕ್ತಿಗಳು ಅಲ್ಲಿಗೆ ಹೋಗಿ ರಾಜ ಸಿಕಂಧರನು ಕರೆಯುತ್ತಿದ್ದಾನೆ ಎಂದು ಹೇಳಿದರು. ಆಗ ದೋಣಿಯಲ್ಲ ಕುಳಿತು ಕಬೀರರು ಹೊರಬಂದ ಕೂಡಲೇ ಮತ್ತೆ ಅವರನ್ನು ಬಂಧಿಸಲಾಯಿತು.

## "ಆನೆಯ ಕಾಲಿನಿಂದ ತುಳಿಸಿ ಪರಮೇಶ್ವರ ಕಬೀರರನ್ನು ಕೊಲ್ಲುವ ವ್ಯರ್ಥ ಪ್ರಯತ್ನ"

ಖೂನೀ ಹಾಥೀ ಮಸ್ತ್ ಹೈ, ಪಗ್ ಬಂಧೇ ಜಂಜೀರ್ ।
ಗರೀಬ್‌ದಾಸ್ ಜಹಾಂ ಡಾರಿಯಾ, ಮಸಕ ಬಾಂಧಿ ಕಬೀರ್ ॥767॥

ಸಿಂಹ್ ರೂಪ್ ಸಾಹಿಬ್ ಧರ್ಯಾ, ಭಾಗೆ ಉಲಟೆ ಫೀಲ್ ।
ಗರೀಬ್‌ದಾಸ್ ನಹೀಂ ಸಮಝುತೀ, ಯಾಹ್ ದುನಿಯಾ ಖಲೀಲ್ ॥768॥
ಬನೆ ಕೇಹರೀ ಸಿಂಹ್ ಜಿತ್, ಚೌರ್ ಶಿಖರ್ ಅಸಮಾಂನ್ ।
ಗರೀಬ್‌ದಾಸ್ ಹಸ್ತೀ ಲಖ್ಯಾ, ದೀಖೈ ನಹೀಂ ಜಿಹಾಂನ್ ॥769॥
ಕೂಟೈ ಶೀಶ್ ಮಹಾವತಂ, ಅಂಕುಶ್ ಶೀರ್ ಗರಗಾಪ್ ।
ಗರೀಬ್‌ದಾಸ್ ಉಲಟಾ ಭಗ್ಯೆ, ತಾರೀ ದೀಜ್ಯೆಂ ಥಾಪ್ ॥770॥
ಭಾಲೇ ಕೋಖೌಂ ಮಾರಿಯೇ, ಚರಖೀ ಛೂಟ್ಯೆಂ ಪಾಖ್ ।
ಗರೀಬ್‌ದಾಸ್ ನಹೀಂ ನಿಕಟ್ ಜಾಯ್, ಕಿಲಕೀ ದೇವ್ಯೆಂ ಲಾಖ್ ॥771॥
ಜೈಸೀ ಭಕ್ತಿ ಕಬೀರ್ ಕೀ, ಐಸೀ ಕರ್ತೈ ನ ಕೋಯ್ ।
ಗರೀಬ್‌ದಾಸ್ ಕುಂಜರ್ ಥಕೆ, ಉಲಟೇ ಭಾಗೆ ರೋಯ್ ॥772॥
ದುಂಮ್ ಗೋವ್ಯೆಂ ಮೂಂಡೀ ಧುನ್ಯೆಂ, ಸೈಂನ್ ನ ಸಮಝ್ಯೆ ಏಕ್ ।
ಗರೀಬ್‌ದಾಸ್ ದೀಖೈ ನಹೀಂ, ಆಗೈ ಖಡಾ ಅಲೇಖ್ ॥773॥
ಪೀಲವಾನ್ ದೇಖ್ಯಾ ತಬೈ, ಖಡಾ ಕೇಹರೀ ಸಿಂಘ್ ।
ಗರೀಬ್‌ದಾಸ್ ಆಯೇ ತಹಾಂ, ಧರಿ ಮೌಲಾ ಬಹು ರಂಗ್ ॥774॥
ಉತರೇ ಮೌಲಾ ಅರಸ್ ತೈಂ, ಭಾವ್ ಭಕ್ತಿ ಕೈ ಹೇತ್ ।
ಗರೀಬ್‌ದಾಸ್ ತಬ್ ಶಾಹ್ ಲಖೇ, ಕಬೀರ್ ಪುರುಷ್ ಸಹೇತ್ ॥775॥
ಲೀಲಾ ಕೀ ಕಬೀರ್ ನೆ, ದೋ ರೂಪ್ ಮೆಂ ರಹೆ ದೀಸ್ ।
ದಾಸಗರೀಬ್ ಕಬೀರ್ ಕೈ, ಪಾಸ್ ಖಡೇ ಜಗದೀಶ್ ॥776॥
ಜಂಭಾಈ ಅಂಗಡಾಈಯಾಂ, ಲಂಬೇ ಭಯೇ ದಯಾಲ್ ।
ಗರೀಬ್‌ದಾಸ್ ಉಸ್ ಶಾಹ್ ಕೂಂ, ಮಾನೌಂ ದರ್ಶ್ಯಾ ಕಾಲ್ ॥777॥
ಕೋಟಿ ಚಂದ್ರ ಶಶಿ ಭಾನ್ ಮುಖ್, ಗಿರದ್ ಕುಂಡ್ ದುಮ್ ಲೀಲ್ ।
ಗರೀಬ್‌ದಾಸ್ ತಹಾಂ ನಾ ಟಿಕೆ, ಭಾಗಿ ಗಯೇ ರನಫೀಲ್ ॥778॥
ನಯನ್ ಲಾಲ್ ಭೌಂಹ್ ಪೀತ್ ಹೈಂ, ಡೂಂಗರ್ ನಕ್ ಪಹಾರ್ ।
ಗರೀಬ್‌ದಾಸ್ ಉಸ್ ಶಾಹ್ ಕೂಂ, ಸಿಂಹ್ ರೂಪ್ ದೀದಾರ್ ॥779॥
ಮಸ್ತಕ್ ಶಿಖರ್ ಸ್ವರ್ಗ್ ಲಗ್, ದೀರಘ್ ದೇಹ್ ಬಿಲಂದ್ ।
ಗರೀಬ್‌ದಾಸ್ ಹರಿ ಊತರೆ, ಕಾಟನ್ ಜಮ್ ಕೇ ಫಂದ್ ॥780॥
ಗಿರದ್ ನಾಭಿ ನಿರಭೈ ಕಲಾ, ದುದಕಾರೈ ನಹೀಂ ಕೋಯ್ ।
ಗರೀಬ್‌ದಾಸ್ ತ್ರಿಲೋಕಿ ಮೆಂ, ಗಾಜ್ ತಾಸ್ ಕೀ ಹೋಯ್ ॥781॥
ಜ್ಯೂಂ ನರಸಿಂಹ್ ಪ್ರಹ್ಲಾದಕೈ, ಯೂಂ ವಹ್ ನರಸಿಂಹ್ ಏಕ್ ।
ಗರೀಬ್‌ದಾಸ್ ಹರಿ ಆಈಯಾ, ರಾಖನ್ ಜನಕೀ ಟೇಕ್ ॥782॥
ಬಾರ್–ಬಾರ್ ಸತಾಯ್ ಕರ್, ಮಸ್ತಕ್ ಲೀನಾ ಭಾರ್ ।
ಗರೀಬ್‌ದಾಸ್ ಶಾಹ್ ಯೌಂ ಕಹೈ, ಬಕಸೌ ಇಬಕೀ ಬಾರ್ ॥783॥
ತಹಾಂ ಸಿಂಹ್ ಲ್ಯೌಲೀನ್ ಹುಆ, ಪರಚಾ ಇಬಕೀ ಬಾರ್ ।
ಗರೀಬ್‌ದಾಸ್ ಯೌಂ ಕಹೈ, ಅಲ್ಲಹ್ ದಿಯಾ ದೀದಾರ್ ॥784॥

ಸುನ್ ಕಾಶೀ ಕೆ ಪಂಡಿತೌ, ಕಾಜೀ ಮುಲ್ಲಾಂ ಪೀರ್ ।
ಗರೀಬ್‌ದಾಸ್ ಇಸಕೇ ಚರಣ್ ಲ್ಯೌಹ್, ಅಲಹ್ ಅಲೇಖ್ ಕಬೀರ್ ॥785॥

ಯೌಹ್ ಕಬೀರ್ ಅಲ್ಲಾಹ್ ಹ್ಯೆ, ಉತರೆ ಕಾಶೀ ಧಾಮ್ ।
ಗರೀಬ್‌ದಾಸ್ ಯೌ ಕಹ್ಯೆಂ, ಝುಗರ ಮೂಂಯೆ ಬೇ ಕಾಮ್ ॥786॥

ಕಾಜೀ ಪಂಡಿತ್ ರೂಠಿಯಾ, ಹಮ್ ತ್ಯಾಗ್ಯಾ ಯೋಹ್ ದೇಶ್।
ಗರೀಬ್‌ದಾಸ್ ಷಟದಲ್ ಕಹ್ಯೆಂ, ಜಾದೂ ಸಿಹರ್ ಹಮೇಶ್ ॥787॥

ಇನ್ ಜಾದೂ ಜಂತರ್ ಕಿಯಾ, ಹಸ್ತೀ ದಿಯಾ ಭಗಾಯ್ ।
ಗರೀಬ್‌ದಾಸ್ ಇತ್ ನಾ ರಹ್ಯೆಂ, ಕಾಶೀ ಬಿಡರೀ ಜಾಯ್ ॥788॥

ಕಾಶೀ ಬಿಡರೀ ಚಹೌಂ ದಿಶಾ, ಥಾಂಭನ್ ಹಾರಾ ಏಕ್ ।
ಗರೀಬ್‌ದಾಸ್ ಕೈಸೇ ಥಂಭ್ಯೈ, ಬಿಡರೆ ಬೌಹತ್ ಅನೇಕ್ ॥789॥

**ಶಬ್ದಾರ್ಥ:– ಕ್ರಮಸಂಖ್ಯೆ 767–789 ವಾಣಿಗಳು :–** ಪರಮಾತ್ಮ ಕಬೀರರ ಕಾಲನ್ನು ಕಟ್ಟಿ ಒಂದು ಮೈದಾನದಲ್ಲಿ ಬಿಸಾಡಲಾಯಿತು. ಅಲ್ಲಿ ಮಹಾಪರಾಧಿಗಳಿಗೆ ಕಠಿಣ ಶಿಕ್ಷೆಯನ್ನು ನೀಡಲಾಗುತ್ತಿತ್ತು. ಆ ಮೈದಾನವು ಇಂದಿನ ಸ್ಟೇಡಿಯಂಗೆ ಹೋಲಿಕೆಯಾಗುತ್ತಿತ್ತು. ರಾಜ ಹಾಗೂ ಪದಾಧಿಕಾರಿಗಳು ವೇದಿಕೆಯ ಮೇಲೆ ಕುಳಿತಿರುತ್ತಿದ್ದರು. ಪ್ರೇಕ್ಷಕರು ನಾಲ್ಕಾರು ಕಡೆ ನಿಂತಿರುತ್ತಿದ್ದರು. ಮನುಷ್ಯರನ್ನು ಕೊಲ್ಲಲು ಆನೆಗಳಿಗೆ ಮೊದಲೇ ತರಬೇತಿ ನೀಡಿರುತ್ತಿದ್ದರು. ಅವುಗಳಿಗೆ ಮದ್ಯ ಹಾಗೂ ರಕ್ತವನ್ನು ಕುಡಿಯುವ ಚಟ ಹತ್ತಿಸುತ್ತಿದ್ದರು. ಆ ಆನೆಗಳನ್ನು ಕೊಲೆಗಾರ ಆನೆಗಳು ಎಂದು ಕರೆಯುತ್ತಿದ್ದರು. ಸಿಕಂದರ್ ರಾಜ ಹಾಗೂ ಉಳಿದ ಮಂತ್ರಿಗಳು ಕುಳಿತಿದ್ದರು. ಪ್ರಜೆಗಳು ನಾಲ್ಕಾರು ಕಡೆ ನಿಂತಿದ್ದರು. ಕೊಲೆಗಾರ ಆನೆಯ ಮಾವುತನು ಕಬೀರರ ಕಡೆಗೆ ಆನೆಯನ್ನು ಓಡಿಸಿದನು. ಆಗ ಕಬೀರರು ಒಂದು ಸಿಂಹದ ರೂಪವನ್ನು ತೋರಿಸಿದರು. ಅದು ಕೇವಲ ಆನೆಗೆ ಮಾತ್ರ ಕಾಣುತ್ತಿತ್ತು. ಆನೆ ಮೊದಲೇ ಮದ್ಯ ಕುಡಿದಿತ್ತು. ಸಿಂಹವನ್ನು ನೋಡಿ ಆನೆ ಭಯದಿಂದ ಯದ್ವಾ ತದ್ವಾ ಓಡಲಾರಂಭಿಸಿತು. ಮಾವುತನು ಆನೆಯನ್ನು ಭರ್ಚಿಯಿಂದ ತಿವಿದನು.

ಆದರೆ ಆನೆಯು ಕಬೀರರ ಕಡೆಗೆ ಹೋಗಲೇ ಇಲ್ಲ. ಪರಮಾತ್ಮ ಕಬೀರರು ಮಾವುತನಿಗೂ ಸಿಂಹದ ದರ್ಶನ ಮಾಡಿಸಿದರು. ಆಗ ಮಾವುತನು ಭಯದಿಂದ ಕೆಳಗೆ ಬಿದ್ದನು. ಆನೆ ಅಲ್ಲಿಂದ ಓಡಿಹೋಯಿತು. ಪರಮಾತ್ಮ ಕಬೀರರ ಸರಪಳಿ ತನಗೆ ತಾನೇ ಬಿಚ್ಚಿಕೊಂಡಿತು. ಆಗ ಕಬೀರರು ಎದ್ದು ನಿಂತು ಒಮ್ಮೆ ಮೈ ಮುರಿದರು, ನಂತರ ಆಕಳಿಸಿದರು. ನಂತರ ಎತ್ತರವಾಗಿ ಬೆಳೆದರು. ಅವರ ತಲೆ ಆಕಾಶವನ್ನು ಮುಟ್ಟುತ್ತಿತ್ತು. ಶರೀರದಿಂದ ಅಸಂಖ್ಯಾತ ಸೂರ್ಯರ ಪ್ರಕಾಶವು ಹೊರಹೊಮ್ಮುತ್ತಿತ್ತು. ಇದು ಕೇವಲ ಸಿಕಂದರ್ ಲೋಧಿಗೆ ಕಾಣುತ್ತಿತ್ತು. ಆಗ ರಾಜನು ಭಯಭೀತನಾಗಿ ಎದ್ದು ನಿಂತು ಮೈದಾನಕ್ಕೆ ಬಂದು ಹೀಗೆ ಹೇಳಿದನು, "ನನ್ನ ಪ್ರಾಣ ಉಳಿಸು, ನನ್ನಿಂದ ಬಹಳ ದೊಡ್ಡ ತಪ್ಪಾಯಿತು. ನನಗೆ ಪರಮಾತ್ಮನ ದರ್ಶನವಾಯಿತು." ನಂತರ ಪ್ರಜೆಗಳಿಗೆ ಹೀಗೆಂದನು, "ಪ್ರಜೆಗಳೇ, ಇವರು ಅಲ್ಲಾಹು ಅಕ್ಬರ್, ಕಬೀರರ ರೂಪದಲ್ಲಿ ಭೂಮಿಗೆ ಬಂದಿದ್ದಾರೆ, ಇವರ ಪಾದಗಳನ್ನು ಸ್ಪರ್ಶಿಸಿ, ನಿಮ್ಮ ಉದ್ಧಾರ ಮಾಡಿಕೊಳ್ಳಿ". ಆದರೆ ಕರ್ಮಹೀನರಾದ ಕಾಜಿಮುಲ್ಲಾಗಳು ಹಾಗೂ ಪಂಡಿತರು ಹೇಳಿದರು, "ಕಬೀರನು ಮಾಯ ಮಂತ್ರ ಮಾಡಿ ಆನೆಯನ್ನು ಓಡಿಸಿದ್ದಾನೆ. ನಾವು ಇಲ್ಲಿಂದ ಹೋಗುತ್ತಿದ್ದೇವೆ." ಹೀಗೆನ್ನುತ್ತಾ ಆ ಪಾಪಾತ್ಮಗಳೆಲ್ಲಾ ಅಲ್ಲಿಂದ ತೆರಳಿದವು. ಪರಮಾತ್ಮನು ತನ್ನ ಶರೀರವನ್ನು ಸಾಮಾನ್ಯ ಸ್ಥಿತಿಗೆ ತಂದು ಸಿಂಹವನ್ನು ಅದೃಶ್ಯ ಮಾಡಿದನು. ನಂತರ ಕಬೀರರು ತಮ್ಮ ಕುಟೀರಕ್ಕೆ ತೆರಳಿದರು.

## "ದೀಕ್ಷೆಯ ನಂತರ"

ಪೂರ್ಣ ಗುರುದೇವರಿಂದ ದೀಕ್ಷೆ ಪಡೆದು ಪೂರ್ಣ ನಂಬಿಕೆಯಿಂದ ಗುರುದೇವರು ಹೇಳಿದ ಸಾಧನೆಯನ್ನು ಪ್ರಾಮಾಣಿಕತೆಯಿಂದ ಮಾಡಿ.

- ಕಬೀರರು ಹೇಳಿದ್ದಾರೆ, (1) ಸಮಾಧಾನವಿರಲಿ

> ಕಬೀರ್, ಧೀರೆ–ಧೀರೆ ರೇ ಮನಾ, ಧೀರೆ ಸಬ್ ಕುಛ್ ಹೋಯ್ ।
> ಮಾಲೀ ಸೀಂಚೆ ಸೌಂ ಘಡಾ, ಸಮಯ್ ಆಏ ಫಲ್ ಹೋಯ್ ॥

ಭಾವಾರ್ಥ:– ಮಾಲಿ ಮಾವಿನ ಗಿಡವನ್ನು ನೆಡುತ್ತಾನೆ. ಅದಕ್ಕೆ ನೀರೆರೆದು ಪೋಷಿಸುತ್ತಾನೆ. ಅದು ಬೆಳೆದು ದೊಡ್ಡದಾಗುತ್ತದೆ. ಮಾಲಿ ಇನ್ನೂ ಚೆನ್ನಾಗಿ ಪೋಷಿಸುತ್ತಾನೆ. ಒಂದು ಮಾವಿನ ಗಿಡವು ಮರವಾಗಿ ಬೆಳೆಯಲು ಸುಮಾರು 10 ವರ್ಷಗಳು ಬೇಕು. ನಂತರ ಅದು ಮಾವಿನ ಹಣ್ಣುಗಳನ್ನು ಕೊಡಲು ಪ್ರಾರಂಭಿಸುತ್ತದೆ. ಅದು ಎಷ್ಟು ಹಣ್ಣುಗಳನ್ನು ನೀಡುತ್ತದೆ ಎಂದರೆ ಮಾಲಿಯ ಇಡೀ ಕುಟುಂಬವು ತೃಪ್ತಿಯಾಗಿ ತಿನ್ನುವುದಲ್ಲದೆ, ಉಳಿದ ಹಣ್ಣುಗಳನ್ನು ಮಾರಿ ಲಾಭವನ್ನೂ ಗಳಿಸಬಹುದು. ಇದೇ ರೀತಿ ಭಕ್ತಿ ಎಂಬ ಗಿಡವನ್ನು ನೆಟ್ಟರೆ ಅದನ್ನು ಪೋಷಿಸಿದರೆ ಅದು ಸುಖವೆಂಬ ಫಲವನ್ನು ನೀಡುತ್ತದೆ. ಇದು ಕೇವಲ ಈ ಜನ್ಮಕ್ಕಷ್ಟೇ ಅಲ್ಲದೆ ಜನ್ಮ ಜನ್ಮಕ್ಕೆ ಬೇಕಾಗುವಷ್ಟು ಪುಣ್ಯವೆಂಬ ಫಲವನ್ನು ನೀಡುತ್ತದೆ. ಸಮಯ ಬಂದಾಗ ಫಲ ತಾನಾಗಿ ದೊರಕುವುದು, ಹಾಗಾಗಿ ತಾಳ್ಮೆಯಿಂದ ಭಕ್ತಿಯ ದಾರಿಯಲ್ಲಿ ನಡೆಯಿರಿ.

- (2) ನಂಬಿಕೆ:– ಯಾರು ಪರಮಾತ್ಮನಲ್ಲಿ ನಂಬಿಕೆ ಇಡುವರೋ ಅವರಿಗೆ ಪರಮಾತ್ಮನ ಭಕ್ತಿಯ ಪ್ರಯೋಜನ ಖಂಡಿತವಾಗಿಯೂ ಸಿಗುತ್ತದೆ.

## "ಪರಮಾತ್ಮನಿಗೆ ಯಾವುದೂ ಅಸಾಧ್ಯವಲ್ಲ"

ಒಂದೂರಿನಲ್ಲಿ ಇಬ್ಬರು ಭಕ್ತರಿದ್ದರು. ಒಬ್ಬ ಭಕ್ತನು ನಗರದ ಪಶ್ಚಿಮ ಭಾಗದಲ್ಲಿರುವ ಕಾಡಿನಲ್ಲಿ ಆಶ್ರಮ ಕಟ್ಟಿಸಿಕೊಂಡು ನಲ್ವತ್ತು ವರ್ಷಗಳಿಂದ ಸಾಧನೆ ಮಾಡುತ್ತಿದ್ದನು. ಇನ್ನೊಬ್ಬ ಭಕ್ತನು ನಗರದ ಪೂರ್ವ ಭಾಗದಲ್ಲಿ ಆಶ್ರಮ ಸ್ಥಾಪಿಸಿ ಕೇವಲ ಎರಡು ವರ್ಷಗಳಿಂದ ಸಾಧನೆ ಮಾಡುತ್ತಿದ್ದನು. ದೇವದೂತನೊಬ್ಬ ದಿನವೂ ಆ ಆಶ್ರಮಗಳಿಗೆ ತೆರಳುತ್ತಿದ್ದನು. ಪ್ರತಿಯೊಬ್ಬ ಭಕ್ತನ ಬಳಿ ಕುಳಿತು ಆಧ್ಯಾತ್ಮದ ಚರ್ಚೆ ಮಾಡುತ್ತಿದ್ದನು. ಒಂದು ದಿನ ದೇವದೂತನು ಪರಮಾತ್ಮನ ಬಳಿ ತೆರಳಿ, "ದೇವಾ! ಕಪಿಲಾನಗರಿಯ ಕಾಡಿನಲ್ಲಿ ಇಬ್ಬರು ಭಕ್ತರು ನಿಮ್ಮ ನಾಮ ಸ್ಮರಣೆಯಲ್ಲಿ ತೊಡಗಿದ್ದಾರೆ" ಎಂದನು. ಆಗ ಪರಮಾತ್ಮನು, "ಒಬ್ಬ ನಿಜವಾದ ಭಕ್ತ, ಇನ್ನೊಬ್ಬ ಡೊಂಗಿ ಭಕ್ತ" ಎಂದನು. ನಲ್ವತ್ತು ವರ್ಷಗಳಿಂದ ಸಾಧನೆ ಮಾಡುತ್ತಿರುವವನು ನಿಜವಾದ ಭಕ್ತನಿರಬೇಕು ಹಾಗೂ ಕೇವಲ ಎರಡು ವರ್ಷಗಳಿಂದ ಸಾಧನೆ ಮಾಡುತ್ತಿರುವವನು ಡೋಂಗಿ ಭಕ್ತನಿರಬೇಕು. ಏಕೆಂದರೆ ನಲ್ವತ್ತು ವರ್ಷಗಳ ಸಾಧನೆ ಕಡಿಮೆ ಏನಲ್ಲ ಎಂದುಕೊಂಡನು. ಪರಮಾತ್ಮನು, "ನನ್ನ ಮಾತಿನ ಮೇಲೆ ನಿನಗೆ ನಂಬಿಕೆ ಬರಲಿಲ್ಲವೇ?" ಎಂದು ಕೇಳಿದನು. ಆಗ ದೇವದೂತನು, "ಹಾಗಲ್ಲ ದೇವಾ, ಆದರೂ ನಲ್ವತ್ತು ವರ್ಷದಿಂದ ಸಾಧನೆ ಮಾಡುತ್ತಿರುವವನೇ ನಿಜವಾದ ಭಕ್ತ ಎಂದು ನನ್ನ ತುಚ್ಛ ಬುದ್ಧಿ ಹೇಳುತ್ತಿದೆ" ಎಂದನು. ಪರಮಾತ್ಮನು ದೇವದೂತನನ್ನು ಕುರಿತು, "ಹಾಗಾದರೆ ನಾಳೆಯ ದಿನ ನೀನು ಅವರ ಆಶ್ರಮಗಳಿಗೆ ತಡವಾಗಿ ಹೋಗು. ಅವರು ಏಕೆ ತಡವಾಯಿತೆಂದು ಕೇಳಿದರೆ, ಪರಮಾತ್ಮನು ಸೂಜಿಯ ಮೊನೆಯ ತೂತಿನೊಳಗಿಂದ ಆನೆಯನ್ನು ತೂರಿಸುತ್ತಿದ್ದನು. ಆ ಲೀಲೆಯನ್ನು ನೋಡಿ ಬರಲು ತಡವಾಯಿತು ಎಂದು ಹೇಳು" ಎಂದನು. ದೇವದೂತನಿಗೆ ಇವರಿಬ್ಬರಲ್ಲಿ ಅಸಲಿ ಭಕ್ತನು ಯಾರು ಎಂದು ತಿಳಿಯುವ

ಕುತೂಹಲವಿತ್ತು. ಹಾಗಾಗಿ ಪರಮಾತ್ಮನ ಮಾತಿಗೆ ಒಪ್ಪಿಕೊಂಡು, ಮಾರನೇ ದಿನ ನಲ್ವತ್ತು ವರ್ಷಗಳ ಸಾಧನೆ ಮಾಡಿದ್ದ ಭಕ್ತನ ಬಳಿ ಮೊದಲು ಹೊರಟನು. ದಿನವೂ ಬೆಳಿಗ್ಗೆ 10 ಗಂಟೆಗೆ ಹೋಗುತ್ತಿದ್ದವನು ಆ ದಿನ 12.30 ಗಂಟೆಗೆ ಹೋದನು. ಆ ಭಕ್ತನು ದೇವದೂತನನ್ನು ಏಕೆ ತಡವಾಗಿ ಬಂದೆಯೆಂದು ಪ್ರಶ್ನಿಸಿದನು. ದೇವದೂತನು ಅವನಿಗೆ ಪರಮಾತ್ಮನು ಹೇಳಿದಂತೆ ಹೇಳಿದನು. ಆ ಮಾತನ್ನು ಕೇಳಿದ ಭಕ್ತನು, "ಏನು ತಮಾಷೆ ಮಾಡುತ್ತಿರುವೆಯಾ? ಸುಳ್ಳು ಹೇಳಿದರೂ ಎಲ್ಲರೂ ನಂಬುವಂಥಾ ಸುಳ್ಳನ್ನು ಹೇಳಬೇಕು. ಪರಮಾತ್ಮನು ಆನೆಯನ್ನು ಸೂಜಿಯ ಮೊನೆಯ ತೂತಿನ ಒಳಗಡೆ ತೂರಿಸುವುದು ಎಂದರೇನು?" ಎಂದು ಗದರಿದನು.

ಆಗಲೇ ದೇವದೂತನಿಗೆ ಈ ಭಕ್ತನು ಡೋಂಗಿ ಎಂಬುದು ಅರಿವಿಗೆ ಬರತೊಡಗಿತು. ಆದರೂ ಇನ್ನೊಬ್ಬ ಭಕ್ತನ ಬಳಿ ತಡವಾಗಿ ಹೋದನು. ಮತ್ತೆ ಆ ಭಕ್ತನಿಂದ ಏಕೆ ತಡವಾಯಿತು ಎಂಬ ಪ್ರಶ್ನೆ ಬಂದಿತು. ದೇವದೂತನು ಅವನಿಗೂ ಪರಮಾತ್ಮನು ಹೇಳಿ ಕೊಟ್ಟಂತೆ ಹೇಳಿದನು. ತಕ್ಷಣವೇ ಆ ಭಕ್ತನ ಕಣ್ಣಲ್ಲಿ ನೀರು ಹರಿಯಲಾರಂಭಿಸಿತು. ಇದೆಲ್ಲಾ ಪರಮಾತ್ಮನ ಲೀಲೆ. ಇಡೀ ಬ್ರಹ್ಮಾಂಡವನ್ನೇ ಒಂದು ಸೂಜಿಯ ಮೊನೆಯ ತೂತಿನಲ್ಲಿ ತೂರಿಸುವ ಶಕ್ತಿ ಪರಮಾತ್ಮನಿಗೆ ಇದೆ. ಇನ್ನು ಈ ಆನೆಯೇನು ಮಹಾ?" ಎಂದನು. ಇದನ್ನು ಕೇಳಿದ ದೇವದೂತನು ಆ ಭಕ್ತನನ್ನು ಆಲಂಗಿಸಿಕೊಂಡು, "ನಿನಗೆ ಜನ್ಮ ನೀಡಿದ ತಂದೆ ತಾಯಿಗಳೇ ಧನ್ಯರು, ಪರಮಾತ್ಮನ ಮೇಲೆ ನೀನಿಟ್ಟಿರುವ ನಂಬಿಕೆಗೆ ನಾನು ಚಿರಋಣಿ" ಎಂದನು.

ಓದುಗರೇ, ಇದೊಂದು ಉದಾಹರಣೆ ಅಷ್ಟೆ. ವಾಸ್ತವವಾಗಿ ಪರಮಾತ್ಮನ ಮೇಲೆ ಭಕ್ತನು ಪೂರ್ಣ ನಂಬಿಕೆಯನ್ನಿಡಬೇಕು. ಪರಮಾತ್ಮನು ಏನನ್ನು ಇಚ್ಛಿಸುತ್ತಾನೋ ಅದನ್ನು ಮಾಡುತ್ತಾನೆ. ಯಾರಾದರೂ ಪರಮಾತ್ಮನು ಇದನ್ನು ಮಾಡಲಾರ, ಅದನ್ನು ಮಾಡಲಾರ ಎಂದು ಹೇಳಿದರೆ ಅವರ ಭಕ್ತಿ ನಿಜವಾದ ಭಕ್ತಿಯಲ್ಲ. ಭಕ್ತಿಯ ನಾಟಕವಾಡಿ ನಿಮ್ಮ ಸಮಯವನ್ನು ವ್ಯರ್ಥಮಾಡಿಕೊಳ್ಳಬೇಡಿ. ಪರಮಾತ್ಮನಲ್ಲಿ ನಂಬಿಕೆ ಇಟ್ಟು ಭಕ್ತಿಯೆಂಬ ದಾರಿಯಲ್ಲಿ ನಡೆದರೆ ಗುರಿ ತಲುಪುವಿರಿ.

## ➢ (೩) ಪರಮಾತ್ಮನು ಮಾಡುವುದೆಲ್ಲಾ ಒಳ್ಳೆಯದೇ:–

ದೀಕ್ಷೆ ಪಡೆದ ನಂತರ ಭಕ್ತಿಯ ಮಾರ್ಗದಲ್ಲಿ ಎಷ್ಟೇ ಕಷ್ಟ ಬಂದರೂ, ಪರಮಾತ್ಮನು ಮಾಡುವುದೆಲ್ಲಾ ಭಕ್ತನ ಒಳಿತಿಗೇ ಎನ್ನುವ ಭಾವನೆ ಭಕ್ತನ ಮನಸ್ಸಿನಲ್ಲಿ ಬರಬೇಕು.

ಕಥೆ:– ಒಂದೂರಿನಲ್ಲಿ ಒಬ್ಬ ರಾಜನಿದ್ದನು. ಅವನು ಪರಮಾತ್ಮನ ಭಕ್ತನಾಗಿದ್ದನು. ಆದರೆ ಅವನಿಗೆ ಸಾಧನೆ ಮಾಡಲು ಬಹಳ ಸಮಯ ಸಿಗುತ್ತಿರಲಿಲ್ಲ. ಅವನಿಗೊಬ್ಬ ಮಹಾಮಂತ್ರಿ ಇದ್ದನು. ಅವನು ಬಹಳ ಒಳ್ಳೆಯವನಾಗಿದ್ದನು ಹಾಗೂ ಪರಮಾತ್ಮನಲ್ಲಿ ಅಪಾರವಾದ ಭಕ್ತಿ ಉಳ್ಳವನಾಗಿದ್ದನು. ರಾಜನು ಹೋದಡೆಯಲ್ಲೆಲ್ಲಾ ಮಹಾಮಂತ್ರಿಯನ್ನು ತನ್ನ ಜೊತೆ ಕರೆದೊಯ್ಯುತ್ತಿದ್ದನು. ಇದನ್ನು ನೋಡಿ ಆ ರಾಜನ ಮತ್ತೋರ್ವ ಮಂತ್ರಿಗೆ ಹೊಟ್ಟೆ ಕಿಚ್ಚು ಉಂಟಾಗುತ್ತಿತ್ತು. ಸಮಯ ಸಿಕ್ಕಾಗಲೆಲ್ಲಾ ಅವನು ರಾಜನ ಬಳಿ ತೆರಳಿ ಆ ಮಹಾಮಂತ್ರಿಯ ಬಗ್ಗೆ ರಾಜನಿಗೆ ಚಾಡಿ ಹೇಳುತ್ತಿದ್ದನು. ಅವನೊಬ್ಬ ಮೋಸಗಾರ ಎಂದು ಹೇಳುತ್ತಿದ್ದನು. ಏನಾದರೂ ಮಾಡಿ ಆ ಮಹಾಮಂತ್ರಿಯ ಪದವಿಯನ್ನು ತಾನು ಗಿಟ್ಟಿಸಿಕೊಳ್ಳಬೇಕೆಂದು ಪ್ರಯತ್ನಿಸುತ್ತಿದ್ದನು. ಒಂದು ದಿನ ಯಾವುದೋ ಕಾರ್ಯನಿಮಿತ್ತ ರಾಜನು ಮಹಾಮಂತ್ರಿ, ದಂಡನಾಯಕ, ಮಿಕ್ಕೆಲ್ಲಾ ಮಂತ್ರಿಗಳ ಜೊತೆ ಬೇರೆ ಊರಿಗೆ ಪ್ರಯಾಣ ಬೆಳಸಬೇಕಾಗಿ ಬಂದಿತು. ಅವರೆಲ್ಲಾ ಅರಮನೆಯ ಒಂದು ಕೋಣೆಯಲ್ಲಿ ಬಂದು ಸೇರಿದ್ದರು. ರಾಜನು ಕತ್ತಿಯನ್ನು ತನ್ನ ಒರೆಗೆ ಇಳಿಸುವ ಸಂದರ್ಭದಲ್ಲಿ ಆಕಸ್ಮಾತ್ತಾಗಿ ಆ ಕತ್ತಿಯ ತುದಿಯು ರಾಜನ ಬೆರಳಿಗೆ ತಾಗಿ ಬೆರಳಿನ ತುದಿ ತುಂಡಾಯಿತು. ಬೆರಳಿನಿಂದ ರಕ್ತ ಸೋರಲಾರಂಭಿಸಿತು. ಆಗ

ಮಂತ್ರಿಯು ಬೊಬ್ಬೆ ಹೊಡೆಯುತ್ತಾ, "ಅಯ್ಯೋ ರಾಜ, ಇದೇನಾಗಿ ಹೋಯಿತು. ನಿಮ್ಮ ಬೆರಳ ತುದಿ ತುಂಡಾಗಿ ಹೋಯಿತಲ್ಲಾ, ಈ ದಿನ ಎಂತಹ ದುರ್ದಿನ, ಇದನ್ನು ನಮ್ಮ ಕಣ್ಣ ಮುಂದೆ ನೋಡಬೇಕಾಯಿತಲ್ಲಾ" ಎಂದು ವಿಲಾಪಿಸಿದನು, ಆದರೆ ಮಹಾಮಂತ್ರಿಯು, "ರಾಜರೇ, ಆಗಿದ್ದೆಲ್ಲಾ ಒಳ್ಳೆಯದಕ್ಕೇ ಎಂದು ತಿಳಿಯಬೇಕು. ಪರಮಾತ್ಮನ ಇಚ್ಛೆ ಹೀಗೇ ಇದ್ದಿರಬೇಕು" ಎಂದನು. ಮೊದಲೇ ಗಾಯದ ನೋವಿನಿಂದ ನರಳುತ್ತಿದ್ದ ರಾಜನಿಗೆ ಗಾಯದ ಮೇಲೆ ಉಪ್ಪು ಸುರಿದಂತಾಯಿತು. ತಕ್ಷಣವೇ ಮಹಾಮಂತ್ರಿಯನ್ನು ಬಂಧಿಸಿ, ಜೈಲಿಗೆ ಹಾಕಲು ಆದೇಶವನ್ನಿತ್ತನು. ಇದೇ ಸಮಯ ಕಾಯುತ್ತಿದ್ದ ಮಂತ್ರಿಯು ಮಹಾಮಂತ್ರಿಯ ಬಗ್ಗೆ ಕುರಿತು ರಾಜನಿಗೆ ಚಾಡಿ ಹೇಳಿದನು. "ನೋಡಿದಿರಾ ರಾಜ, ಇವನೆಂಥಾ ಮೋಸಗಾರ, ನಿಮ್ಮ ಬೆರಳು ಕತ್ತರಿಸಿಕೊಂಡಿರುವುದು ಒಳ್ಳೆಯದು ಎಂದು ಹೇಳುತ್ತಿದ್ದಾನೆ. ಅವನು ನಿಜವಾಗಲೂ ನಿಮ್ಮ ಶತ್ರು", ಎಂದನು. ರಾಜನು ಅವನ ಮಾತುಗಳಿಗೆ ಮರಳಾಗಿ ಮಹಾಮಂತ್ರಿಯನ್ನು ಜೈಲಿಗೆ ಕಳುಹಿಸಿ, ಮಂತ್ರಿಯನ್ನು ಮಹಾಮಂತ್ರಿಯನ್ನಾಗಿ ಮಾಡಿದನು. ಬೆರಳಿಗೆ ಉಪಚಾರವಾಯಿತು, ಆದರೆ ಬೆರಳಿನ ತುದಿ ತುಂಡಾಗಿತ್ತು.

ಒಮ್ಮೆ ರಾಜನು ಮಂತ್ರಿ ಹಾಗೂ ಬೇಟೆಗಾರರ ಜೊತೆ ಬೇಟೆಯಾಡಲು ಕಾಡಿಗೆ ಹೋದನು. ಬೇಟೆಯಾಡುತ್ತಾ ಆಡುತ್ತಾ, ರಾಜ ಮತ್ತು ಮಂತ್ರಿ ಬೇಟೆಗಾರರಿಂದ ದೂರವಾಗಿ ದಟ್ಟವಾದ ಕಾಡಿನೊಳಗೆ ಹೊರಟು ದಾರಿ ತಪ್ಪಿದರು. ಅಷ್ಟರಲ್ಲಿ ಗುಟ್ಟಗಾಡಿನ ಜನರಿಗೆ ಅವರಿಬ್ಬರು ಸೆರೆ ಸಿಕ್ಕರು, ಆ ದಿನ ಆದಿವಾಸಿಗಳ ಹಬ್ಬವಿತ್ತು. ದೇವಿಗೆ ಮನುಷ್ಯರನ್ನು ಬಲಿ ಕೊಡಬೇಕಿತ್ತು. ಹಾಗಾಗಿ ಇವರಿಬ್ಬರನ್ನು ಬಂಧಿಸಿ ಅವರ ಪುರೋಹಿತರ ಬಳಿ ಎಳೆದೊಯ್ದರು. ಪುರೋಹಿತನು ಬಹಳ ಸಂತಸಗೊಂಡು ಅವರಿಬ್ಬರ ತಲೆ ಕತ್ತರಿಸಿ ದೇವಿಗೆ ನೈವೇದ್ಯವಿಡಲು ಹೇಳಿದನು. ನಂತರ ಆದಿವಾಸಿಗಳಿಗೆ, ಅವರಿಬ್ಬರನ್ನು ಪರೀಕ್ಷಿಸಿ, ದೇಹದ ಯಾವುದೇ ಭಾಗ ಊನವಾಗಿರಬಾರದು. ಇಲ್ಲದಿದ್ದರೆ ದೇವಿ ಕೋಪಗೊಳ್ಳುವಳು" ಎಂದನು. ಗುಡ್ಡಗಾಡಿನ ಜನರು ಅವರಿಬ್ಬರನ್ನು ಪರೀಕ್ಷಿಸಿದಾಗ ರಾಜನ ಕೈ ಬೆರಳ ತುದಿ ತುಂಡಾಗಿರುವುದು ಗಮನಕ್ಕೆ ಬಂದಿತು. ಹಾಗಾಗಿ ರಾಜನನ್ನು ಬಿಟ್ಟು ಆ ಮಂತ್ರಿಯ ತಲೆ ಕಡಿದು ದೇವಿಗೆ ಅರ್ಪಿಸಿದರು. ಈ ಘಟನೆ ನೋಡಿದ ರಾಜನಿಗೆ ಜ್ಞಾನೋದಯವಾಯಿತು. ಮಹಾಮಂತ್ರಿ 'ಆಗಿದ್ದೆಲ್ಲಾ ಒಳ್ಳೆಯದಕ್ಕೆ' ಎಂದು ಹೇಳಿದ ಮಾತು ಜ್ಞಾಪಕಕ್ಕೆ ಬಂದಿತು. ಕಾಡಿನಿಂದ ನಾಡಿಗೆ ಬಂದವನೇ ಜೈಲಿಗೆ ಹೋಗಿ ಮಹಾಮಂತ್ರಿಯ ಬಳಿ ತೆರಳಿ ಅವನನ್ನು ಬಂಧ ಮುಕ್ತಗೊಳಿಸಿದನು. ನಂತರ ಮಹಾಮಂತ್ರಿಯನ್ನು ಕುರಿತು, "ನನಗೇನೋ ಕೈ ಬೆರಳು ತುಂಡಾಗಿದ್ದು ಒಳ್ಳೆಯದೇ ಆಯಿತು. ಇಲ್ಲದಿದ್ದರೆ ನಾನಿಂದು ಜೀವಂತವಾಗಿ ಉಳಿಯುತ್ತಿರಲಿಲ್ಲ. ಆದರೆ ನಿನಗೇನು ಒಳ್ಳೆಯದಾಯಿತು? ನೀನು ವ್ಯಥಾ ಆರು ತಿಂಗಳು ಜೈಲಿನಲ್ಲಿರಬೇಕಾಯಿತಲ್ಲಾ? ಎಂದನು. ಆಗ ಆ ಮಹಾಮಂತ್ರಿಯೂ, "ರಾಜ, ಇಲ್ಲಿಯೂ ನನಗೆ ಒಳ್ಳೆಯದೇ ಆಯಿತು. ನಾನು ಜೈಲಿನಲ್ಲಿ ಇರದೇ ಹೋಗಿದ್ದರೆ, ನಾನು ನಿಮ್ಮ ಜೊತೆ ಬರುತ್ತಿದ್ದೆ, ಆಗ ನನ್ನ ತಲೆ ಕಡಿಯುತ್ತಿದ್ದರು. ಈಗ ನಾನು ಬದುಕಿರುವುದು ದೇವರ ಕೃಪೆಯಿಂದ ಅಲ್ಲವೇ?" ಎಂದನು.

ಹೀಗೆ ಪರಮಾತ್ಮನ ಮೇಲೆ ನಂಬಿಕೆ ಇಟ್ಟು ತಮ್ಮ ಜೀವನದ ದಾರಿಯಲ್ಲಿ ನಡೆಯಬೇಕು.

ಏಕ್ ಲೇವಾ ಏಕ್ ದೇವಾ ದೂತಂ । ಕೋಯಿ ಕಿಸೀ ಕಾ ಪಿತಾ ನ ಪೂತಂ ॥

ಒಬ್ಬ ರೈತನಿಗೆ ಒಬ್ಬ ಮಗನಿದ್ದನು. ಅವನು **6** ವರ್ಷದವನಾಗಿದ್ದಾಗ ರೈತನ ಹೆಂಡತಿ ಸತ್ತು ಹೋದಳು. ರೈತನು ಎರಡನೇ ಮದುವೆ ಮಾಡಿಕೊಂಡನು. ಅವನಿಗೆ ಇನ್ನೊಬ್ಬ ಮಗ ಹುಟ್ಟಿದನು. ಅವನು **6** ವರ್ಷದವನಾಗುವಷ್ಟರಲ್ಲಿ ಆ ರೈತನ ಎರಡನೇ ಹೆಂಡತಿಯೂ ತೀರಿಕೊಂಡಳು. ರೈತನಿಗೆ **16** ಎಕರೆ ಜಮೀನಿತ್ತು. ಕೆಲವೇ ವರ್ಷಗಳಲ್ಲಿ, ಮೊದಲನೇ ಹೆಂಡತಿಯ ಮಗ ಮದುವೆ ವಯಸ್ಸಿಗೆ ಬಂದಿದ್ದರಿಂದ ರೈತನು ಅವನಿಗೆ ಮದುವೆ ಮಾಡಿ ಸೊಸೆಯನ್ನು ಮನೆ ತುಂಬಿಸಿಕೊಂಡನು. ಅಷ್ಟರಲ್ಲಿ

ರೈತನಿಗೆ ಕಾಯಿಲೆ ಬಂದು ಅವನೂ ತೀರಿಕೊಂಡನು. ಮೊದಲನೇ ಹೆಂಡತಿಯ ಮಗ ನ್ಯಾಯವಾಗಿ ತನ್ನ ತಮ್ಮನಿಗೆ 8 ಎಕರೆ ಜಮೀನು ನೀಡಬೇಕಿತ್ತು. ಆದರೆ ಅವನು ಮತ್ತು ಅವನ ಹೆಂಡತಿ ದುರಾಸೆಯಿಂದ 16 ಎಕರೆ ಜಮೀನನ್ನು ತಾವೇ ಇಟ್ಟುಕೊಂಡರು. ಅಷ್ಟರಲ್ಲಿ ತಮ್ಮನಿಗೆ ಕಾಯಿಲೆ ಬಂದಿತು. ಅವನಿಗೆ ಚಿಕಿತ್ಸೆ ಕೊಡುವ ಬದಲು ಅವನು ಸಾಯಬೇಕೆಂದು ಅವರಿಬ್ಬರೂ ಆಶಿಸಿದರು. ಅವನು ಸತ್ತು ಹೋದರೆ ಆ 8 ಎಕರೆ ಜಮೀನು ತಮ್ಮದಾಗುವುದೆಂದು ತಿಳಿದರು. ಅವನನ್ನು ಉಪಚರಿಸುವ ವೈದ್ಯನಿಗೆ 500ರೂ ಲಂಚಕೊಟ್ಟು, ಅವನಿಗೆ ಕೊಡುವ ಔಷಧಿಯಲ್ಲಿ ವಿಷ ಬೆರೆಸಿ ಕೊಡುವಂತೆ ಹೇಳಿದರು. ಆ ವೈದ್ಯನು ಹಣದ ದುರಾಸೆಗೆ ಒಳಗಾಗಿ ಆ ಕೆಲಸ ಮಾಡಲು ಒಪ್ಪಿಕೊಂಡನು. ಅದರಂತೆ ಔಷಧಿಯಲ್ಲಿ ವಿಷ ಬೆರಸಿ ಕುಡಿಸಿದನು. ತಮ್ಮನು ಇಹಲೋಕ ತ್ಯಜಿಸಿದನು. ಮೊದಲ ಹೆಂಡತಿಯ ಮಗ ಮತ್ತು ಸೊಸೆಯ ಸಂತೋಷಕ್ಕೆ ಪಾರವೇ ಇರಲಿಲ್ಲ, ತಮ್ಮನು ರೋಗದಿಂದ ಮರಣಿಸಿದನೆಂದು ಜನರೆಲ್ಲಾ ನಂಬಿದರು. ಒಂದು ವರ್ಷದ ಒಳಗೆ ಆ ದಂಪತಿಗೆ ಒಬ್ಬ ಮಗ ಹುಟ್ಟಿದನು. ಅದರಿಂದ ಅವರಿಬ್ಬರೂ ಇನ್ನೂ ಸಂತೋಷಗೊಂಡರು. ಅವನನ್ನು ಚಿನ್ನದ ತೊಟ್ಟಿಲಿನಲ್ಲಿಟ್ಟು ತೂಗಿದರು. ಬೆಲೆ ಬಾಳುವ ಬಟ್ಟೆ ತೊಡಿಸಿ ಸಂತೋಷಪಟ್ಟರು. ದ್ರಾಕ್ಷಿ ಗೋಡಂಬಿ ತಿನ್ನಿಸಿ ಬೆಳೆಸಿದರು. ಅವನು 18 ವರ್ಷದವನಾದಾಗ ಅವನಿಗೆ ಮದುವೆ ಮಾಡಿದರು. ಅಷ್ಟರಲ್ಲೇ ಆ ಮಗನಿಗೆ ಯಾವುದೋ ಕಾಯಿಲೆ ಬಂದಿತು. ಎಷ್ಟೇ ಚಿಕಿತ್ಸೆ ಕೊಡಿಸಿದರೂ ವಾಸಿಯಾಗಲಿಲ್ಲ. ತನ್ನ ಬಳಿ ಇದ್ದ ಹಣವನ್ನು ಖರ್ಚು ಮಾಡಿದರು. ಕೊನೆಗೆ ಅರ್ಧ ಜಮೀನನ್ನು ಮಾರಲು ಮುಂದಾದರು. 8 ಎಕರೆ ಜಮೀನನ್ನು ಮಾರಿ ಅವನಿಗೆ ಚಿಕಿತ್ಸೆ ಕೊಡಿಸಿದರು. ಆದರೂ ವಾಸಿಯಾಗಲಿಲ್ಲ. ಆಗ ಮಗನ ಪಕ್ಕದಲ್ಲಿ ಕುಳಿತು ಅವನು ಚಿಂತಿಸತೊಡಗಿದನು, ಆಗ ಇದ್ದಕ್ಕಿದ್ದಂತೆ ಮಗ 'ಅಣ್ಣಾ' ಎಂದು ಕೂಗಿದನು. ಆಗ ತಂದೆಯು, "ಮಗನೇ, ನಾನು ನಿನ್ನ ಅಣ್ಣನಲ್ಲ, ನಿನ್ನ ತಂದೆ" ಎಂದನು. ಆಗ ಮಗನು, "ನಾನು ನಿನ್ನ ಮಗನಲ್ಲ ನಿನ್ನ ತಮ್ಮ, ನೀನು ಕೈಯಾರೆ ಸಾಯಿಸಿದ ತಮ್ಮನೇ ನಿನ್ನ ಮಗನಾಗಿ ಹುಟ್ಟಿದ್ದೇನೆ, ನನಗೆ ಸೇರಬೇಕಾದ 8 ಎಕರೆ ಜಮೀನನ್ನು ಪಡೆದಿದ್ದೇನೆ. ಇನ್ನೇನಿದ್ದರೂ ನನ್ನನ್ನು ಸುಡಲು ನಿನಗೆ ಬೇಕಾಗಿರುವುದು ಸೌದೆ ಮತ್ತು ಹೆಣದ ಬಟ್ಟೆ ಮಾತ್ರ. ನಿನ್ನ ಸಾಲವೆಲ್ಲಾ ತೀರಿದೆ" ಎಂದು ಹೇಳಿದನು. ಆಗ ಪತಿ ಪತ್ನಿ ಇಬ್ಬರೂ ಪಶ್ಚಾತ್ತಾಪದಿಂದ ನರಳಿದರು. "ಇದೆಲ್ಲಾ ಪರಮಾತ್ಮನ ನಿಯಮ. ಅದು ಅಚಲ. ನಾವು ದುರಾಸೆಯಿಂದ ಪಾಪ ಮಾಡಿದೆವು. ದೇವರು ನಮಗೆ ಬುದ್ಧಿ ಕಲಿಸಿದನು. ಯಾವ ಆಸ್ತಿಗಾಗಿ ನಾವು ನಿನ್ನನ್ನು ಕೊಂದೆವೋ, ಆ 8 ಎಕರೆ ಜಮೀನು ಉಳಿಯಲಿಲ್ಲ, ನೀನು ತೀರಿಕೊಂಡರೆ ನಮಗೆ ಇನ್ಯಾವ ಮಕ್ಕಳೂ ಇಲ್ಲ, ಇನ್ನು ಮಿಕ್ಕ ಆಸ್ತಿ ಇಟ್ಟುಕೊಂಡು ನಾವೇನು ಮಾಡಬೇಕು. ಪರಮಾತ್ಮನು ನ್ಯಾಯವನ್ನೇ ಮಾಡಿದ್ದಾನೆ, ಆದರೆ ನೀನು ತೀರಿಕೊಂಡರೆ ನಿನ್ನ ಪತ್ನಿ ವಿಧವೆಯಾಗುತ್ತಾಳೆ. ಅವಳಿಗೆ ಯಾಕೆ ಈ ಶಿಕ್ಷೆ?" ಎಂದು ಪ್ರಶ್ನಿಸಿದರು. ಆಗ ಆ ಮಗನ ರೂಪದಲ್ಲಿದ್ದ ತಮ್ಮನು ಹೇಳಿದನು. ಅವಳಿಗೆ ಸರಿಯಾದ ಶಾಸ್ತಿಯಾಗುತ್ತದೆ. ಅವಳು ಮತ್ತಿನ್ಯಾರೂ ಅಲ್ಲ. ನನಗೆ ಔಷಧಿಯ ರೂಪದಲ್ಲಿ ವಿಷ ಕೊಟ್ಟ ವೈದ್ಯನ ಆತ್ಮವಾಗಿದೆ. ಅವನ ದುರಾಸೆಯಿಂದ ನಾನು ತೀರಿಕೊಂಡೆ, ಈಗ ಆ ಶಿಕ್ಷೆ ಅವಳು ಅನುಭವಿಸುತ್ತಾಳೆ ಏಕೆಂದರೆ ನಮ್ಮ ಜನಾಂಗದಲ್ಲಿ ಗಂಡ ಸತ್ತರೆ ಹೆಂಡತಿಯನ್ನು ಪತಿಯ ಹೆಣದ ಜೊತೆ ಜೀವಂತವಾಗಿ ಸುಡುತ್ತಾರೆ. ಇವಳನ್ನು ನನ್ನ ಹೆಣದ ಜೊತೆ ಸುಟ್ಟು ಹಾಕುತ್ತಾರೆ. ಮಾಡಿದ ಪಾಪಕ್ಕೆ ತಕ್ಕ ಶಿಕ್ಷೆ ಸಿಗುತ್ತದೆ" ಎಂದನು.

ಓದುಗರೇ, ಸ್ವಲ್ಪ ಯೋಚಿಸಿ ನೋಡಿ. ಪರಮಾತ್ಮನ ದೃಷ್ಟಿಯಿಂದ ಯಾವುದನ್ನೂ ಮುಚ್ಚಿಡಲಾಗದು, ಮಾಡಿದ್ದುಣ್ಣೋ ಮಹರಾಯ. ಪ್ರತಿ ಕುಟುಂಬವೂ ಇದೇ ರೀತಿ ಒಬ್ಬರಿಗೊಬ್ಬರು ಸಂಬಂಧಿಸಿದವರಾಗಿರುತ್ತಾರೆ. ಒಬ್ಬರು ಹಿಂದಿನ ಜನ್ಮದ ಸಾಲ ಪಡೆಯಲು ಬಂದಿದ್ದಾರೆ, ಇನ್ನೊಬ್ಬರು ಪೂರ್ವ ಜನ್ಮದ ಸಾಲ ತೀರಿಸಲು ಬಂದಿರುತ್ತಾರೆ.

ಉದಾಹರಣೆಗೆ:– ಒಬ್ಬ ತಂದೆಯು ಮಗನನ್ನು ಸಾಕಿ ಬೆಳೆಸಿ, ಓದಿಸಿದನು. ಮಗನಿಗೆ ಮದುವೆ ಮಾಡಲು ಎಲ್ಲಾ ಏರ್ಪಾಟು ಮಾಡಿದನು. ಮದುವೆ ಎರಡು ದಿನವಿರುವಾಗ ಮದುಮಗನು ಯಾವುದೋ ದುರ್ಘಟನೆಯಿಂದ ತೀರಿಕೊಂಡನು. ಇದರರ್ಥ ಆ ಮಗನು ಹಿಂದಿನ ಜನ್ಮದ ಸಾಲವನ್ನು ಅಪ್ಪನಿಂದ ಪಡೆಯಲು ಬಂದಿದ್ದನು ಎಂಬುದೇ ಅಲ್ಲವೇ?

ಒಬ್ಬ ಅಪ್ಪನು ರೋಗಿಯಾದನು. ಮಗ ಎಷ್ಟೇ ಖರ್ಚುಮಾಡಿದರೂ ತಂದೆಯ ರೋಗ ವಾಸಿಯಾಗಲಿಲ್ಲ. ಸಾಕಷ್ಟು ಹಣ ಖರ್ಚಾದ ಮೇಲೆ ತಂದೆ ತೀರಿಕೊಂಡನು. ಅಂದರೆ ಮಗನು ಹಿಂದಿನ ಜನ್ಮದ ಸಾಲವನ್ನು ತೀರಿಸಲು ಬಂದಿದ್ದಾನೆ ಎಂದರ್ಥ.

ಅಪ್ಪ ಮಗಳ ಮದುವೆ ಮಾಡಿದ್ದಾನೆ. ಸಾಕಷ್ಟು ವರದಕ್ಷಿಣೆ ಕೊಟ್ಟಿದ್ದಾನೆ. ಸ್ವಲ್ಪ ದಿನದಲ್ಲೇ ಮದುಮಗಳು ತೀರಿಕೊಂಡಳು. ಅಂದರೆ ಅಳಿಯನು ತನ್ನ ಹಿಂದಿನ ಜನ್ಮದ ಸಾಲವನ್ನು ಪಡೆಯಲು ಬಂದಿದ್ದಾನೆ. ಈ ಘಟನೆಗಳೆಲ್ಲಾ ಕಾಲ್ಪನಿಕವಲ್ಲ, ವಾಸ್ತವ. ಯಾರಾದರೂ ಇದು ಕಟ್ಟುಕತೆ, ಇದನ್ನೆಲ್ಲಾ ನೋಡಿದವರ್‍ಯಾರು? ನಂಬುವುದು ಹೇಗೆ ಎನ್ನಬಹುದು. ಹೇಗೆಂದರೆ ಕಳ್ಳನನ್ನು ನೋಡಿದ ಒಬ್ಬ ಸಭ್ಯ ಮನುಷ್ಯ, "ಅರೆ, ನೀನು ಕಳ್ಳತನ ಮಾಡಬೇಡ, ಸಿಕ್ಕಿ ಹಾಕಿಕೊಂಡರೆ ಮೊದಲು ಸಾರ್ವಜನಿಕರು ನಿನ್ನನ್ನು ಹೊಡೆಯುತ್ತಾರೆ. ನಂತರ ಪೋಲೀಸರು ಹೊಡೆಯುವರು, ಜೈಲಿಗೂ ಹೋಗಬೇಕಾಗಬಹುದು. ಯಾರಾದರೂ ಇದು ಕಟ್ಟುಕತೆ, ಕಳ್ಳನಿಗೆ ಏನಾಗುವುದೆಂದು ಯಾರಿಗೆ ಗೊತ್ತು ಎಂದು ಹೇಳಿದಂತೆ ಆಯಿತು. ಕಳ್ಳನಿಗೆ ನಿಜಾಂಶ ಹೇಳಿ ಎಚ್ಚರಿಕೆ ನೀಡಲಾಗಿದೆ. ಅದು ನಿಜವೂ ಹೌದು, ಕಳ್ಳನು ನಿಜವನ್ನು ನಂಬಿ ಕಳ್ಳತನ ಬಿಟ್ಟು ಬಿಟ್ಟರೆ ಅವನಿಗೇ ಒಳ್ಳೆಯದು, ಅದೇ ಕಳ್ಳನು, ಏನಾಗುತ್ತೆ ನೋಡೋಣ ಏನಾಗುವುದೆಂದು ಯಾರಿಗೆ ಗೊತ್ತು ಎಂದು ಚಿಂತಿಸಿದರೆ ಮುಂದೆ ಅವನೇ ಕಷ್ಟ ಪಡಬೇಕಾಗಬಹುದು.

ಈ ರೀತಿ ಮೇಲೆ ಹೇಳಿರುವ ಕತೆ ಬರೀ ಕಟ್ಟು ಕತೆ, ಹೆದರಿಸಲು ಹೇಳುವಂಥದ್ದು ಎಂದು ತಿಳಿದರೆ ಅದೊಂದು ದೌರ್ಭಾಗ್ಯ.

❖ ಲೇಖಕರು 1978ರಲ್ಲಿ ಈ ಕತೆಯನ್ನು ಒಬ್ಬ ದನದ ಡಾಕ್ಟರ್‌ನಿಂದ ಕೇಳಿದ್ದರು. ಆ ಡಾಕ್ಟರ್ ಹೇಳುವುದೇ ಒಂದು, ಮಾಡುವುದೇ ಇನ್ನೊಂದು ಎನ್ನುವ ಹಾಗೆ ತನ್ನ ವೈದ್ಯವೃತ್ತಿ ಮಾಡುತ್ತಿದ್ದನು. ಸಣ್ಣ ಸಣ್ಣ ರೋಗಕ್ಕೂ ರೋಗಿಗಳಿಗೆ ಶುದ್ಧ ನೀರನ್ನು ಇಂಜೆಕ್ಷನ್‌ನಲ್ಲಿ ತುಂಬಿ ಇಂಜೆಕ್ಷನ್‌ಕೊಟ್ಟು 20–30 ರೂಪಾಯಿಗೆ ಬದಲಾಗಿ 200–300ರೂ ಕೀಳುತ್ತಿದ್ದನು. ಸಂಜೆಯವೇಳೆ ಭೇಟಿಯಾದಾಗ ಜಂಭ ಕೊಚ್ಚಿಕೊಳ್ಳುತ್ತಿದ್ದನು. ಎಮ್ಮೆಯಂಥವರಿಗೆ ಹೀಗೇ ಮಾಡಬೇಕೆಂದು ಹೇಳುತ್ತಿದ್ದನು. ಅವನ ಮಾತಿನಲ್ಲಿ ಮತ್ತು ಮಾಡುವ ಕೆಲಸದಲ್ಲಿ ಅಂತರವಿತ್ತು. ಸಂತ ಗರೀಬ್‌ದಾಸರು, ಕೇವಲ ಹೇಳುವುದರಿಂದ–ಕೇಳುವುದರಿಂದ ಅಲ್ಲ, ಅದನ್ನು ಕಾರ್ಯಾರೂಪಕ್ಕೆ ತಂದರೆ ಜೀವನ ಹಸನಾಗುವುದು. ಪರಮಾತ್ಮನ ನಿಯಮವನ್ನು ತಿಳಿದುಕೊಂಡು ಪರಿಶುದ್ಧ ಜೀವನವನ್ನು ಮಾಡಿ, ಜೀವನದ ದಾರಿಯನ್ನು ಮುಳ್ಳುಗಳಿಂದ ಮುಕ್ತಗೊಳಿಸಿ ಎಂದು ತಿಳಿಸಿದ್ದಾರೆ.

## "ಒಂದು ಕೊಟ್ಟರೆ ಒಂದು ತೆಗೆದುಕೊಳ್ಳಬೇಕು"

ಪರಮೇಶ್ವರನಾದ ಶಿವನು ಅಮರನಾಥ್ ಎಂಬ ಸ್ಥಳದಲ್ಲಿ ತನ್ನ ಪತ್ನಿಯಾದ ಪಾರ್ವತಿಗೆ ಒಂದು ಒಣಗಿದ ಮರದ ಕೆಳಗೆ ಕುಳಿತು ದೀಕ್ಷೆ ನೀಡಿದ್ದನು. ಆ ವೃಕ್ಷದ ಪೊಟರೆಯಲ್ಲಿ ಒಂದು ಹೆಣ್ಣು ಗಿಳಿಯು ಮೊಟ್ಟೆಗಳನ್ನಿಟ್ಟಿತ್ತು. ಆರೋಗ್ಯವಂತ ಮೊಟ್ಟೆಗಳು ಶಿವನ ಕೈಗಳಿಂದ ಹೊಡೆಯಲ್ಪಟ್ಟ ಚಪ್ಪಾಳೆಯಿಂದ ಮರಿಗಳಾಗಿ ಹೊರಬಂದು ಹಾರಿ ಹೋದವು. ಅವುಗಳಲ್ಲಿ ಒಂದು ಮೊಟ್ಟೆ ಅಸ್ವಸ್ಥವಾಗಿತ್ತು. ಆ ಮೊಟ್ಟೆಯೊಳಗೊಂದು ಜೀವವಿತ್ತು. ಶಿವನು ಪಾರ್ವತಿಗೆ ದೀಕ್ಷೆ ಕೊಡುವ

ವೇಳೆ ಆ ಮೊಟ್ಟೆಯಲ್ಲಿದ್ದ ಜೀವವು ದೀಕ್ಷಾ ಮಂತ್ರವನ್ನು ಕೇಳಿಸಿಕೊಂಡು ಆರೋಗ್ಯವಂತ ಮರಿಯಾಗಿ ಮಾರ್ಪಟ್ಟಿತು. ಆ ಮರಿಗೆ ರೆಕ್ಕೆಗಳು ಹುಟ್ಟಿದವು. ಹಾರಲು ಸಾಮರ್ಥ್ಯಬಂದಿತು. ಇತ್ತ ಪಾರ್ವತಿ ಧ್ಯಾನಾಸಕ್ತಳಾದಳು. ಅವಳು ಹೂಂಗುಡುವುದನ್ನು ನಿಲ್ಲಿಸಿದಳು. ಗಿಳಿಮರಿಯು ಹೂಂಗುಡಲಾರಂಭಿಸಿತು. ಶಿವನು ನೋಡಿದಾಗ ಪಾರ್ವತಿಯೂ ಧ್ಯಾನಾಸಕ್ತಳಾಗಿದ್ದಾಳೆ. ಮಾತನಾಡುತ್ತಿಲ್ಲ, ಕೇಳಿಸಿಕೊಳ್ಳುತ್ತಿಲ್ಲ. ಹೂಂಗುಡುವ ಶಬ್ದ ಎಲ್ಲಿಂದ ಬರುತ್ತಿದೆ ಎಂದು ನೋಡಿದನು. ಆಗ ಮರದ ಪೊಟರೆಯಿಂದ ಗಿಳಿಮರಿ ಮಾತನಾಡುತ್ತಿತ್ತು. ಆಗ ಶಿವನು ಅದನ್ನು ಕೊಲ್ಲಬೇಕೆಂದಿದ್ದಾಗ ಅದು ಅಲ್ಲಿಂದ ಹಾರಿಹೋಯಿತು. ಶಿವನೂ ಸಹ ತನ್ನ ಸಿದ್ಧಿ ಶಕ್ತಿಯಿಂದ ಹಾರಿ ಅದನ್ನು ಕೊಲ್ಲಲು ಮುಂದಾದನು. ಋಷಿ ವೇದವ್ಯಾಸರ ಪತ್ನಿಯು ಆಗ ತಾನೇ ಆಕಳಿಸಲು ಬಾಯಿ ತೆಗೆದಿದ್ದಳು. ಆಗ ಆ ಗಿಳಿ ಮರಿಯ ಆತ್ಮವು ತನ್ನ ದೇಹ ತ್ಯಾಗ ಮಾಡಿ ಅವಳ ಬಾಯೊಳಗೆ ಪ್ರವೇಶಿಸಿತು. ಆಗ ಶಿವನು ಅಲ್ಲಿಗೆ ಬಂದು ವೇದವ್ಯಾಸರ ಪತ್ನಿಯನ್ನು ಕುರಿತು, ನನ್ನ ಜ್ಞಾನವನ್ನು ಕದ್ದು ಜೀವವು ಗಿಳಿ ಮರಿಯ ದೇಹವನ್ನು ತ್ಯಜಿಸಿ ನಿಮ್ಮ ಗರ್ಭದಲ್ಲಿ ಪ್ರವೇಶಿಸಿದೆ. ಆ ಕಳ್ಳನನ್ನು ನಾನು ಕೊಲ್ಲುವೆ, ಎಂದನು. ಆ ಸಮಯಕ್ಕೆ ಸರಿಯಾಗಿ ವೇದವ್ಯಾಸರು ಅಲ್ಲಿಗೆ ಬಂದರು. ಎಲ್ಲವನ್ನೂ ಕೇಳಿ ಶಿವನಿಗೆ ಹೀಗೆಂದರು. "ಹೇ ದೇವಾ! ಯಾರು ಕಳ್ಳರು, ಎಂಥಾ ಕಳ್ಳರು? ಆಗ ಶಿವನು "ನಾನು ಪಾರ್ವತಿಗೆ ದೀಕ್ಷೆ ಕೊಡುತ್ತಿದ್ದೆ. ಮಂತ್ರದ ರಹಸ್ಯವನ್ನು ಹೇಳುತ್ತಿದ್ದೆ. ಈ ಗಿಳಿಯು ಕೇಳಿಸಿಕೊಂಡು ಬಿಟ್ಟಿದೆ. ಹಾಗೂ ಅಮರವಾಗಿದೆ. ಆ ಗಿಳಿಯು ಇನ್ಯಾರ ಬಳಿಯಾದರೂ ಆ ಮಂತ್ರದೀಕ್ಷೆ ಹೇಳಿಬಿಟ್ಟರೆ ಅವರು ಅಮರರಾಗುತ್ತಾರೆ. ಹಾಗೂ ಸಮಾಜಕ್ಕೆ ಘಾತುಕರಾಗಬಹುದು ಎಂದನು. ಆಗ ವ್ಯಾಸರು. "ಹೇ ದೇವಾ, ಈ ಗಿಳಿ ಮರಿಯು ಅಮರವಾಗಿದೆ ಎಂದರೆ ನೀವು ಹೇಗೆ ಅದನ್ನು ಕೊಲ್ಲುವಿರಿ? ಎಂದರು, ಇದನ್ನು ಕೇಳಿದ ಶಿವನು ಪಾರ್ವತಿಯ ಬಳಿ ಮರಳಿ ಬಂದನು. ಪಾರ್ವತಿಗೆ ಎಲ್ಲವನ್ನು ತಿಳಿಸಿದನು. ವೇದವ್ಯಾಸರು ತಮ್ಮ ದಿವ್ಯದೃಷ್ಟಿಯಿಂದ ನೋಡಿದಾಗ ಅವರ ಪತ್ನಿಯ ಗರ್ಭದಲ್ಲಿ ಪುತ್ರನಿರುವುದು ತಿಳಿಯಿತು. 12 ವರ್ಷಗಳ ನಂತರ ಪುತ್ರನ ಜನ್ಮವಾಯಿತು. ವೇದವ್ಯಾಸರ ಹೆಂಡತಿಯು ತನ್ನ ಮಗನು ಗರ್ಭದಲ್ಲಿದ್ದಾಗ ಯಾವ ಕಷ್ಟವೂ ಆಗದ ಕಾರಣ ಅವನ ಹೆಸರನ್ನು ಸುಖದೇವ್ ಎಂದು ಇಡಲು ಇಚ್ಛಿಸಿದಳು. ಬೇರೆ ಬ್ರಾಹ್ಮಣರು ಅದು ಶುಕ (ಗಿಳಿಯ) ಶರೀರವನ್ನು ತ್ಯಜಿಸಿ ಮಾನವ ಶರೀರ ಪಡೆದ ಕಾರಣ ಅವನನ್ನು ಶುಕದೇವ ಎಂದು ಕರೆದರು. ಶುಕದೇವನು ಗರ್ಭದಲ್ಲೇ ಹನ್ನೆರಡು ವರ್ಷವಿದ್ದ ಕಾರಣ ಅವನು ಹುಟ್ಟಿದ ಕೂಡಲೇ ಹನ್ನೆರಡು ವರ್ಷದವನಾಗಿದ್ದನು. ಹುಟ್ಟಿದ ಕೂಡಲೇ ನಡೆದು ಹೊರಡಲನುವಾದನು. ವೇದವ್ಯಾಸರು ಅವನನ್ನು ಎಲ್ಲಿಗೆ ಹೋಗುತ್ತಿರುವೆ ಎಂದು ಕೇಳಿದರು. ಆಗ ಶುಕದೇವ ಋಷಿಯು "ನನ್ನ ಮತ್ತು ನಿಮ್ಮ ಋಣ ಇಷ್ಟು ಮಾತ್ರ ಎಂದು ಹೇಳಿದನು. ವೇದವ್ಯಾಸರು, ಹೇ ಪುತ್ರ ! ನಿನ್ನ ಆಗಮನಕ್ಕೆ ನಾವು 12 ವರ್ಷ ನಿರೀಕ್ಷಿಸಿದೆವು. ಈ ದಿನ ನಮ್ಮನ್ನು ಬಿಟ್ಟು ಹೊರಟಿರುವೆಯಲ್ಲಾ, ಒಂದು ಬಾರಿ ನಿನ್ನ ಮುಖ ತೋರಿಸು" ಎಂದರು. ಆಗ ಶುಕದೇವನು, "ಬಹಳ ಸಾರಿ ನಾನು ನಿಮ್ಮ ತಂದೆಯಾಗಿರುವೆ, ನೀವು ನನ್ನ ತಂದೆಯಾಗಿದ್ದಿರಿ, ಇದೊಂದು ಮಾಯಾಜಾಲ. ನಾನು ಇನ್ನು ಮುಂದೆ ಸಾಧನೆ ಮಾಡುವೆ. ನಿಮಗೆ ನನ್ನ ಮೇಲೆ ಮೋಹ ಉಂಟಾಗಬಹುದೆಂದು ನಾನು ನಿಮಗೆ ನನ್ನ ಮುಖ ತೋರಿಸುತ್ತಿಲ್ಲ". ಎಂದನು. ಇದನ್ನೇ ಸಂತ ಗರೀಬ್‌ದಾಸರು ತಮ್ಮ ವಾಣಿಯಲ್ಲಿ ಹೇಳಿದ್ದಾರೆ.

ಏಕ್ ಲೇವಾ ಏಕ್ ದೇವಾ ದೂತಂ, ಕೋಈ ಕಾಹೂ ಕಾ ಪಿತಾ ನ ಪೂತಂ ।
ಋಣ್ ಸಂಬಂಧ್ ಜುಡಾ ಏಕ್ ಠಾಠಾ, ಅಂತ್ ಸಮಯ್ ಸಬ್ ಬಾರಾ ಬಾಟಾ ॥

ಯಾರು ತಂದೆ, ತಾಯಿ, ಮಗಳು, ಮಗ ಮುಂತಾದ ಸಂಬಂಧದಲ್ಲಿರುವರೋ, ಅವರೆಲ್ಲಾ ಪೂರ್ವ ಜನ್ಮದ ಸಾಲ ತೀರಿಸಲು ಬಂದವರಾಗಿರುತ್ತಾರೆ. ವಾಸ್ತವವಾಗಿ ಯಾರೂ ಯಾರ

ತಂದೆ, ಯಾರ ಮಗನೂ ಅಲ್ಲ. ಮರಣಾನಂತರ ಅವರೆಲ್ಲಾ ತಮ್ಮ ತಮ್ಮ ಸಂಸ್ಕಾರಕ್ಕೆ ಅನುಗುಣವಾಗಿ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಶರೀರವನ್ನು ಸೇರುತ್ತಾರೆ. ಆದ್ದರಿಂದ ಯಾರೂ ಯಾರಿಗೂ ತಂದೆ–ಮಗ ಅಲ್ಲ. ಇಷ್ಟನ್ನು ಹೇಳಿ ಶುಕದೇವನು ಹಾರುತ್ತಾ ಬೇರೆ ಸ್ಥಳಕ್ಕೆ ಸೇರಿದನು. ಪ್ರಿಯ ಓದುಗರೇ, ಭಕ್ತಿಯಿಂದ ಬದುಕಿ ಹಾಗೂ ನಿಮ್ಮ ಉದ್ಧಾರ ಮಾಡಿಕೊಳ್ಳಿ. ಕೇವಲ ಕುಟುಂಬದ ಸಂಬಂಧದಲ್ಲಿ ಸಿಲುಕಿಕೊಂಡು ನಿಮ್ಮ ಜೀವನ ವ್ಯರ್ಥಮಾಡಿಕೊಳ್ಳಬೇಡಿ. ಪರಮಾತ್ಮನ ಭಕ್ತಿಯಿಂದ ಋಣವು ಸುಲಭವಾಗಿ ತೀರಿ ಹೋಗುವುದು.

## "ಹೇಳುವುದು ಮತ್ತು ಮಾಡುವುದರಲ್ಲಿ ಅಂತರವಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ"

ಒಂದೂರಿನಲ್ಲಿ ಒಬ್ಬ ವ್ಯಕ್ತಿ ಕಥಾ ವಾಚಕನಿದ್ದನು. ದಿನನಿತ್ಯ ರಾಮಾಯಣದ ಪಠಣ ಮಾಡುತ್ತಿದ್ದನು. ಒಂದು ದಿನ ಅವನು ಯಾವುದೋ ಕೆಲಸದ ಮೇಲೆ ಪಟ್ಟಣಕ್ಕೆ ಹೋಗಬೇಕಾಗಿತ್ತು. ಅವನ ಗೆಳೆಯನೂ ಇವನ ಜೊತೆ ಹೊರಡಬೇಕಾಯಿತು. ಮಾರನೇದಿನ ಬೆಳಗ್ಗಿನ ಜಾವ 5 ಗಂಟೆಗೆ ರೈಲು ಹತ್ತಬೇಕಾಗಿತ್ತು. ಹಾಗಾಗಿ ಆ ದಿನ ಅವನಿಗೆ ನಿತ್ಯನಿಯಮ ಮಾಡಲು ಸಾಧ್ಯವಾಗಲಿಲ್ಲ. ರೈಲಿಗೆ ಹೋಗಲು ಸಮಯವಾಗಿತ್ತು. ಇಂದು ಗಾಡಿಯಲ್ಲೆ ನಿತ್ಯನಿಯಮ ಮಾಡುವೆ ಎಂದುಕೊಂಡು ಅವನು ಮತ್ತು ಅವನ ಗೆಳೆಯ–ಇಬ್ಬರೂ ಓಡಿ ಹೋಗಿ ರೈಲು ಹತ್ತಿದರು. ಅಷ್ಟರಲ್ಲಿ ರೈಲುಗಾಡಿ ಮುಂದೆ ಸಾಗಿತು, ಬೋಗಿಯಲ್ಲಿ ಜನಸಂದಣಿ ಹೆಚ್ಚಿತ್ತು. ಬಹಳ ಜನ ನಿಂತಿದ್ದರು. ಸೀಟಿನ ತುಂಬೆಲ್ಲಾ ಪ್ರಯಾಣಿಕರು ಕುಳಿತಿದ್ದರು, ಹಾಗಾಗಿ ಇವನಿಗೆ ಕೂರಲು ಜಾಗ ಸಿಗಲಿಲ್ಲ. ಈ ದಿನ ನಿತ್ಯನಿಯಮ ಮಾಡಲಿಲ್ಲವೆಂಬ ಕೊರಗು ಕಾಡುತ್ತಿತ್ತು. ಹಾಗಾಗಿ ಅವನು ಸೀಟಿನ ಮೇಲೆ ಕುಳಿತಿರುವ ಪ್ರಯಾಣಿಕರಲ್ಲಿ ಈ ರೀತಿ ವಿನಂತಿಸಿದನು. "ಸಜ್ಜನರೇ, ನಾನು ಈ ದಿನ ಮನೆಯಲ್ಲಿ ರಾಮಾಯಣದ ಪಾಠ ಮಾಡಲು ಸಾಧ್ಯವಾಗಲಿಲ್ಲ, ನೀವು ಸ್ವಲ್ಪ ಜಾಗ ಕೊಟ್ಟರೆ, ನಾನು ಅಲ್ಲಿ ಕುಳಿತು, ಇಲ್ಲಿಯೇ ಪ್ರವಚನ ಹೇಳುವೆ," ಇದನ್ನು ಕೇಳಿದ ಪ್ರಯಾಣಿಕರು ಸಂತೋಷವಾಗಿ ಜಾಗ ಕೊಡುತ್ತಾ, "ಸಹೋದರ, ಈ ದಿನ ನಮ್ಮ ಅದೃಷ್ಟವೆಂದು ತಿಳಿಯುತ್ತೇವೆ. ನಮಗೂ ಪ್ರವಚನ ಕೇಳುವ ಸೌಭಾಗ್ಯ ಒದಗಿ ಬಂತು" ಹಾಗೆಯೇ ಅವರು ಇಡೀ ಸೀಟನ್ನು ಆ ವ್ಯಕ್ತಿಗೆ ಬಿಟ್ಟುಕೊಟ್ಟರು. ರಾಮಾಯಣದ ಭರತನ ಕತೆಯನ್ನು ಆರಿಸಿಕೊಂಡು ಆ ವ್ಯಕ್ತಿಯು ಅಂದಿನ ಪ್ರವಚನವನ್ನು ಪ್ರಾರಂಭಿಸಿದನು. ರಾಮನು ವನವಾಸದಲ್ಲಿದ್ದಾಗ ತಮ್ಮನಾದ ಭರತನು ಅಯೋಧ್ಯೆಯ ರಾಜ್ಯಭಾರವನ್ನು ಸ್ವೀಕರಿಸದೆ, ಅಣ್ಣನಾದ ರಾಮನ ಪಾದುಕೆಗಳನ್ನು ತಂದು, ಅವುಗಳನ್ನು ಸಿಂಹಾಸನದ ಮೇಲಿಟ್ಟು, ತಾನು ನೆಲದ ಮೇಲೆ ಕುಳಿತು ರಾಜ್ಯವನ್ನು ಆಳುವ ಕತೆಯನ್ನು ಮನಮುಟ್ಟುವಂತೆ ಹೇಳಿದನು. ಅಣ್ಣ–ತಮ್ಮರ ಅನುಬಂಧವನ್ನು ವರ್ಣಿಸಿದನು. ಇದನ್ನು ಕೇಳಿದ ಪ್ರಯಾಣಿಕರು ಗದ್ಗದಿತರಾದರು.

ಆ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಒಬ್ಬ ಪ್ರಯಾಣಿಕನ ತಂದೆಯ ವರ್ಷದ ತಿಥಿ ಮರುದಿನವೇ ಇತ್ತು. ಆ ವರ್ಷದ ತಿಥಿಯಲ್ಲಿ ಪ್ರವಚನ ಏರ್ಪಡಿಸಬೇಕೆಂಬ ಇಚ್ಛೆ ಅವನಲ್ಲಿತ್ತು. ಆದರೆ ಪ್ರವಚನಕಾರರು ಯಾರೂ ಸಿಕ್ಕಿರಲಿಲ್ಲ. ಆ ಪ್ರಯಾಣಿಕನು ಇವನ ಬಳಿ ಬಂದು ಕೈ ಮುಗಿದು, "ಮಹಾತ್ಮರೆ, ನಾಳೆಯ ದಿನ ನಮ್ಮ ಮನೆಗೆ ಬಂದು ನಮ್ಮ ತಂದೆಯವರ ವಾರ್ಷಿಕ ತಿಥಿಯಂದು ಪ್ರವಚನ ಮಾಡಬೇಕು" ಎಂದು ಪ್ರಾರ್ಥಿಸಿದನು. ಆಗ ಆ ಪಂಡಿತನು ನಾಳೆ ಸಾಧ್ಯವಿಲ್ಲವೆಂದನು. ಸಹ ಪ್ರಯಾಣಿಕರೆಲ್ಲಾ, "ಪಂಡಿತರೇ, ನಿಮ್ಮ ಕೆಲಸವೇ ಪ್ರವಚನ ಮಾಡುವುದು, ಇವರಿಗೆ ಬೇರೆ ಪ್ರವಚನಕಾರರು ಸಿಕ್ಕಿಲ್ಲವಂತೆ, ನೀವು ಒಪ್ಪಿಕೊಳ್ಳಿ" ಎಂದರು. ಆದರೆ ಪಂಡಿತನು ಕಾರಣ ಹೇಳದೆ ಪ್ರವಚನ ಮಾಡುವುದಿಲ್ಲ ಎಂದನು. ಆಗ ಅವನ ಗೆಳೆಯನು "ನನ್ನ ಮಿತ್ರ ನಾಳೆ ಏಕೆ ಪ್ರವಚನ ಮಾಡುವುದಿಲ್ಲ ಎನ್ನುವುದನ್ನು ನಾನು

ಹೇಳುತ್ತೇನೆ. ನಾಳೆ ಪಟ್ಟಣದಲ್ಲಿ ಇವರ ಅಣ್ಣನ ವಿರುದ್ಧ ಕೋರ್ಟಿನಲ್ಲಿ ದಾವೆ ಹೂಡಿದ್ದಾರೆ. ಅವರ ಮತ್ತು ಅವರ ಅಣ್ಣನ ಮಧ್ಯೆ ಆಸ್ತಿ ವಿಷಯದಲ್ಲಿ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿದೆ. ಅದಕ್ಕೆ ಸಾಕ್ಷಿಯಾಗಿ ನನ್ನನ್ನು ಕರೆದುಕೊಂಡು ಹೋಗುತ್ತಿದ್ದಾರೆ" ಎಂದನು. ಇದನ್ನು ಕೇಳಿದ ಆ ವ್ಯಕ್ತಿಯು, "ಪಂಡಿತರೇ, ಎಂಥಾ ಮಾರ್ಮಿಕ ಕತೆ ನೀವು ಹೇಳಿದ್ದಿರಿ. ಆದರೆ ನೀವು ಹೇಳಿದ್ದೇ ಒಂದು, ಮಾಡುತ್ತಿರುವುದೇ ಒಂದು. ಇಂಥಾ ವ್ಯಕ್ತಿಯಿಂದ ಪ್ರವಚನ ಮಾಡಿಸಿದರೆ ಜನರ ಮೇಲೆ ಯಾವ ಪ್ರಭಾವ ಬೀರಬಹುದು.

ಕಬೀರರು ಹೇಳಿದ್ದಾರೆ :–

ಕಬೀರ್, ಕರನೀ ತಜ್ ಕಥನೀ ಕಥೈಂ, ಅಜ್ಞಾನೀ ದಿನ್ ರಾತ್ ।
ಕುಕರ್ (ಕುತ್ತೇ) ಜ್ಯೋಂ ಭೌಂಕತ್ ಫಿರೈಂ, ಸುನೀ ಸುನಾಈ ಬಾತ್ ॥(1)

ಗರೀಬ್‌ದಾಸರು ಹೇಳಿದ್ದಾರೆ :–

ಗರೀಬ್, ಬೀಜಕ್ ಕೀ ಬಾತಾಂ ಕಹೈಂ, ಬೀಜಕ್ ನಾಹೀ ಹಾಥ್ ।
ಪೃಥ್ವೀ ಡೋಬನ್ ಉತರೆ, ಯೇ ಕಹ್ ಕಹ್ ಮೀಠೀ ಬಾತ್ ॥(2)

ಶಬ್ದಾರ್ಥ:– ಯಾರು ಜ್ಞಾನದ ಮಾತುಗಳನ್ನು ಹೇಳುತ್ತಾರೋ, ಬೇರೆಯವರಿಗೆ ಕೆಟ್ಟದ್ದನ್ನು ಮಾಡಬೇಡಿರೆಂದು ಹೇಳುತ್ತಾರೋ, ಅವರೇ ತಪ್ಪು ಮಾಡುತ್ತಿರುತ್ತಾರೆ. ಅವರು ಸುಮ್ಮ ಸುಮ್ಮನೆ ಬೊಗಳುವ ನಾಯಿಗೆ ಸಮಾನ, ಇದೇ ರೀತಿ ಕೆಲ ಧರ್ಮಗುರುಗಳು ಅವರಿವರಿಂದ ಕತೆಗಳನ್ನು ಕೇಳಿ ಶಿಷ್ಯರಿಗೆ ಹೇಳುತ್ತಿರುತ್ತಾರೆ. ತಾವು ಪಾಲಿಸುವುದಿಲ್ಲ.(1)

ವಾಣಿ ಸಂಖ್ಯೆ 2 :– ಅಜ್ಞಾನಿ ಧರ್ಮಗುರು ತತ್ವಜ್ಞಾನ ಎಂದು ಹೇಳುತ್ತಾ ಬರೀ ಅಜ್ಞಾನದ ಪ್ರಚಾರ ಮಾಡುತ್ತಾರೆ. ಏಕೆಂದರೆ ಅವರಿಗೆ ತತ್ವಜ್ಞಾನದ ಅರಿವೇ ಇರುವುದಿಲ್ಲ. ಇಂಥಾ ವ್ಯಕ್ತಿಗಳು ಮಾನವನ ಅಮೂಲ್ಯವಾದ ಜೀವನವನ್ನು ನಾಶಮಾಡಲೆಂದೇ ಹುಟ್ಟಿರುತ್ತಾರೆ.(2)

## "ಸತ್ಸಂಗದಿಂದ ಭಕ್ತಿಯ ದಾರಿ ಸಿಕ್ಕಿತು"

ಸಂತ ನಿತ್ಯಾನಂದರ ಬಾಲ್ಯದ ಹೆಸರು ನಂದಲಾಲ್. ಅವರು ಬ್ರಾಹ್ಮಣ ಕುಲದಲ್ಲಿ ಹುಟ್ಟಿದವರಾಗಿದ್ದರು. ಅವರು ಸಂತ ಗರೀಬ್‌ದಾಸರಿಗೆ ಕೆಲವು ಕಾಲ ಸಮಕಾಲೀನರಾಗಿದ್ದರು. ಸಂತ ಗರೀಬ್‌ದಾಸರ ಜೀವನ ಇಸವಿ 1717–78ರವರೆಗೆ ಇತ್ತು. ಆಗಿನ ಕಾಲದಲ್ಲಿ ಬ್ರಾಹ್ಮಣರಿಗೆ ವಿಶೇಷ ಗೌರವವಿತ್ತು. ಬ್ರಾಹ್ಮಣರನ್ನು ಸರ್ವೋಚ್ಚ ಜಾತಿಯವರೆಂದು ಪರಿಗಣಿಸಲಾಗುತ್ತಿತ್ತು. ಹಾಗಾಗಿ ಅವರು ಅಹಂಕಾರ ಪಡುತ್ತಿದ್ದರು. ನಂದಲಾಲರ ತಂದೆ–ತಾಯಿಯರ ದೇಹಾಂತವಾಗಿತ್ತು. ಆಗ ನಂದಲಾಲರಿಗೆ 7–8 ವರ್ಷ ವಯಸ್ಸು. ಅವರನ್ನು ಅವರ ಅಜ್ಜಿ–ತಾತ ಸಾಕಿ ದೊಡ್ಡವರನ್ನಾಗಿ ಮಾಡಿದರು. ತಾತ ದೀಕ್ಷೆ ಪಡೆದ ನಂತರ ನಂದಲಾಲರಿಗೆ ತಹಸೀಲ್ದಾರ್ ಪದವಿ ಕೊಡಿಸಿದರು, ಮೊದಲೇ ಬ್ರಾಹ್ಮಣ, ಮೇಲಾಗಿ ತಹಸೀಲ್ದಾರ್. ಇದರಿಂದ ಅಹಂಕಾರ ಹೆಚ್ಚಾಗಿತ್ತು. ಅಜ್ಜಿ–ತಾತ ನಂದಲಾಲರ ಮದುವೆಯನ್ನೂ ಮಾಡಿ ಮುಗಿಸಿದ್ದರು. ತಹಸೀಲ್ದಾರರ ಮನೆಯ ಸ್ವಲ್ಪ ದೂರದಲ್ಲಿ ಒಬ್ಬ ವೈಷ್ಣವ ಸಂತರಾದ ಶ್ರೀ ಗುಮಾನಿದಾಸರು ತಮ್ಮ ಭಕ್ತನ ಮನೆಯಲ್ಲಿ ಸತ್ಸಂಗ ನಡೆಸುತ್ತಿದ್ದರು. ಅವರು ವಿಷ್ಣುವಿನ ಭಕ್ತರಾಗಿದ್ದರು. ಎಲ್ಲಾ ಸಂತರೂ ತಮ್ಮ ಸತ್ಸಂಗದಲ್ಲಿ ಪರಮಾತ್ಮ ಕಬೀರರ ಅಮೃತವಾಣಿಯನ್ನು ಉಚ್ಚರಿಸುತ್ತಿದ್ದರು. ಮಾನವ ಜೀವನ ಏತಕ್ಕಾಗಿ ಸಿಗುವುದು? ಸತ್ಸಂಗ ಕೇಳದೆ ಇದ್ದರೆ ಅವರ ಜೀವನ ಹೇಗೆ ಹಾಳಾಗುವುದು? ಸಂಪತ್ತು, ಪದವಿ, ಜಾತಿ ಮುಂತಾದವುಗಳ ಮೇಲೆ ಅಹಂಕಾರ ಪಡುವುದು ಕೇವಲ ಅಜ್ಞಾನದಿಂದಲೇ, ಭಕ್ತಿ ಮಾಡದ ವ್ಯಕ್ತಿಯು ಮುಂದಿನ ಜನ್ಮದಲ್ಲಿ ನಾಯಿ, ಕತ್ತೆ, ಎಮ್ಮೆ, ಎತ್ತು ಮುಂತಾದ ಪ್ರಾಣಿಗಳಾಗಿ ಹುಟ್ಟುತ್ತಾರೆ. ಆದ್ದರಿಂದ ಅಹಂಕಾರ ಬಿಟ್ಟು ಸಂತರಿಂದ ದೀಕ್ಷೆ ಪಡೆದು ತಮ್ಮ ಉದ್ದಾರ ಮಾಡಿಕೊಳ್ಳಬೇಕು.

ಇಲ್ಲದಿದ್ದರೆ ಬೆಟ್ಟದಷ್ಟೆ ಕಷ್ಟಪಡಬೇಕಾಗುತ್ತದೆ ಎಂಬುದು ಸತ್ಸಂಗದ ವಿಷಯವಾಗಿತ್ತು.

ಸ್ವಾಮಿ ಗುಮಾನಿದಾಸರ ಆಶ್ರಮ ನಾರನೌಲ್ ನಗರದಿಂದ ಸುಮಾರು 1.5 ಕಿ. ಮೀ ದೂರದಲ್ಲಿತ್ತು ಸತ್ಸಂಗದ ಶಬ್ದ ಕೇಳಿ ತಹಸೀಲ್‌ದಾರ್ ತನ್ನ ಮನೆಯ ತಾರಸಿಯ ಮೇಲೆ ಒಂದು ಕುರ್ಚಿಹಾಕಿಕೊಂಡು ಕುಳಿತರು. ಇಡೀ ಪ್ರವಚನ ಕೇಳಿದರು. ಅವರಿಗೆ ದೀಕ್ಷೆ ಪಡೆಯುವ ಇಚ್ಛೆಯಾಯಿತು. ಆದರೆ ಜಾತಿ ಮತ್ತು ಪದವಿಯ ಅಹಂಕಾರ ಅಡ್ಡ ಬಂದಿತು. 'ನಾನು ಮೇಲ್ಜಾತಿಯ ಬ್ರಾಹ್ಮಣ, ಮೇಲಾಗಿ ತಹಸೀಲ್ದಾರ್' ಎನ್ನುವ ಅಹಂಕಾರದಿಂದ ಸುಮ್ಮನಿದ್ದುಬಿಟ್ಟರು. ಪ್ರವಚನ ಕೇಳಿದ ನಂತರ ಆಶ್ರಮಕ್ಕೆ ಹೋಗದೆ ಇರಲು ಆಗಲೇ ಇಲ್ಲ. ಕೊನೆಗೆ ಯಾರಿಗೂ ತಿಳಿಯದಂತೆ ಬೆಳಗ್ಗಿನ ಜಾವವೇ ಆಶ್ರಮಕ್ಕೆ ಹೋಗಿ ದೀಕ್ಷೆ ಪಡೆದು ಬರಲು ನಿರ್ಧರಿಸಿದರು. ಎಲ್ಲರೂ ಏಳುವ ಮುಂಚೆ ಎದ್ದು ಆಶ್ರಮಕ್ಕೆ ಹೋದರೆ ಯಾರಿಗೂ ತಿಳಿಯುವುದಿಲ್ಲವೆಂದು ಚಿಂತಿಸಿದರು. ಅದರಂತೆ ಮಾರನೇ ದಿನ ಬೆಳಗ್ಗಿನ ಜಾವ ಎದ್ದು ದೀಕ್ಷೆ ಪಡೆಯಲು ಆಶ್ರಮದ ಕಡೆಗೆ ಕುದುರೆಯೇರಿ ಹೊರಟರು. ಸ್ವಲ್ಪದೂರ ಹೋದ ಬಳಿಕ ಎದುರುಗಡೆಯಿಂದ ಒಬ್ಬ ವ್ಯಕ್ತಿ ತಲೆ ಮುಂಡನೆ ಮಾಡಿಸಿಕೊಂಡು ತಿರುಗಾಡಲು ಬರುತ್ತಿದ್ದನು. ಆ ವ್ಯಕ್ತಿ ಬೇರ್‍ಯಾರೂ ಅಲ್ಲದೆ ಸಂತ ಗುಮಾನಿದಾಸರೇ ಆಗಿದ್ದರು. ಅವರು ತಮ್ಮ ತಲೆ ಬೋಳಿಸಿಕೊಂಡಿದ್ದರು.

ಉತ್ತರೀಯ ಧರಿಸಿದ್ದರು. ಇವರ ಗುರುತು ಯಾರಿಗೂ ಸಿಗುತ್ತಿರಲಿಲ್ಲ. ಎದುರಿಗೆ ಬಂದ ಆ ವ್ಯಕ್ತಿಯನ್ನು ನೋಡಿ ತಹಸೀಲ್ದಾರ್‌ನ ಕೋಪ ನೆತ್ತಿಗೇರಿತು. ಯಾವುದಾದರೂ ಒಳ್ಳೆಯ ಕೆಲಸಕ್ಕೆ ಹೋಗುವಾಗ ತಲೆ ಬೋಳಿಸಿಕೊಂಡು ಯಾರಾದರೂ ಎದುರಾದರೆ ಅಪಶಕುನವೆಂದು ಆಗಿನ ಕಾಲದಲ್ಲಿ ನಂಬಲಾಗುತ್ತಿತ್ತು. ಹೇಳಿ ಕೇಳಿ ನಂದಲಾಲ್ ಬ್ರಾಹ್ಮಣ ಬೇರೆ. ಈ ಮೂಢನಂಬಿಕೆಯನ್ನು ಅಧಿಕವಾಗಿ ನಂಬುತ್ತಿದ್ದರು. ದೀಕ್ಷೆ ತೆಗೆದುಕೊಳ್ಳುವಂಥಾ ಪವಿತ್ರ ಕೆಲಸಕ್ಕೆ ಹೋಗುವಾಗ ಹೀಗಾಗಬೇಕೆ? ಎಂದು ಯೋಚಿಸಿದರು. ಇದಕ್ಕೆ ಪರಿಹಾರವಾಗಿ ಆ ವ್ಯಕ್ತಿಯ ಬಳಿ ಹೋಗಿ ಅವನ ತಲೆಯ ಮೇಲೆ ತನ್ನ ಬೆರಳುಗಳಿಂದ ಒಮ್ಮೆ ಹೊಡೆದರೆ ಆ ಅಪಶಕುನ ನಿವಾರಣೆಯಾಗುವುದೆಂದು ತಿಳಿದು, ಸೀದಾ ಗುಮಾನಿದಾಸರ ಎದುರಿಗೆ ನಿಂತು ಅವರ ತಲೆಯ ಮೇಲೆ ತನ್ನ ಬೆರಳಿನಿಂದ ಹೊಡೆದರು. ಈ ದಿನವೇ ನೀನು ನನ್ನ ಎದುರಿಗೆ ಬರಬೇಕಾಗಿತ್ತಾ?" ನಾನು ನನ್ನ ಜೀವನದ ಉತ್ತಮ ಕಾರ್ಯಕ್ಕೆ ಆಶ್ರಮಕ್ಕೆ ಹೊರಟಿದ್ದೆ ಎಂದು ಬಯ್ದರು. ನಂತರ ಕುದುರೆಯೇರಿ ದೀಕ್ಷೆ ಪಡೆಯಲು ಆಶ್ರಮದ ಕಡೆಗೆ ಹೊರಟರು. ಸಂತರಿಗೆ ಇದೆಲ್ಲಾ ಮಾಮೂಲಾಗಿತ್ತು.

ಸಮಾಜದಲ್ಲಿ ಎಲ್ಲಾ ರೀತಿಯ ಜನರಿರುತ್ತಾರೆ ಎಂದುಕೊಂಡು ನಗುತ್ತಾ ಮುಂದೆ ನಡೆದರು. ನಂದ್‌ಲಾಲ್ ಆಶ್ರಮಕ್ಕೆ ತೆರಳಿ ಕುದುರೆಯನ್ನು ಒಂದು ಮರಕ್ಕೆ ಕಟ್ಟಿ ಹಾಕಿದರು. ಅಲ್ಲಿ ಆಗಲೇ ಕೆಲವು ಭಕ್ತರು ಸೇರಿದ್ದರು. ಉಭಯ ಕುಶಲೋಪರಿಯಾಯಿತು. ಆಗ ನಂದ್‌ಲಾಲ್ ತಾನು ಬಂದ ಕಾರಣ ತಿಳಿಸಿದರು. ನಂತರ ಅಲ್ಲಿ ಹಾಸಿದ್ದ ಜಮಖಾನದ ಮೇಲೆ ಕುಳಿತುಕೊಂಡರು. ಗುಮಾನಿದಾಸರು ತಮ್ಮ ತಿರುಗಾಟವನ್ನು ಮುಗಿಸಿ, ಆಶ್ರಮಕ್ಕೆ ತೆರಳಿ ಸ್ನಾನಾದಿಗಳನ್ನು ಮುಗಿಸಿ, ತಮ್ಮ ಗದ್ದಿಗೆಯ ಮೇಲೆ ಕುಳಿತುಕೊಳ್ಳುತ್ತಾ ಮರಕ್ಕೆ ಕಟ್ಟಿ ಹಾಕಿದ್ದ ಕುದುರೆಯನ್ನು ನೋಡಿದರು. ಅವರಿಗೆ ಎಲ್ಲವೂ ಅರ್ಥವಾಯಿತು. ನಂದ್‌ಲಾಲ್ ಗುಮಾನಿದಾಸರನ್ನು ನೋಡಿದೊಡನೆ ನಾಚಿಕೆಯಿಂದ ತಲೆ ತಗ್ಗಿಸುವಂಥಾಯಿತು. ಆಶ್ರಮವಾಸಿಗಳು ಗುಮಾನಿದಾಸರಿಗೆ, 'ಇವರು ದೊಡ್ಡ ತಹಸೀಲ್ದಾರರು, ದೀಕ್ಷೆ ಪಡೆಯಲು ಬಂದಿದ್ದಾರೆ' ಎಂದು ಹೇಳಿದರು. ನಂದ್‌ಲಾಲರು ಗುರುಗಳ ಪಾದಗಳಿಗೆರಗಿ, ತಾವು ಬೆರಳಿನಿಂದ ತಲೆಯ ಮೇಲೆ ಹೊಡೆದ ಕಾರಣವನ್ನು ತಿಳಿಸಿದರು. ಆಗ ಗುಮಾನಿದಾಸರು ಹೇ ಭಕ್ತ! ನಾವು ಒಂದು ಮಡಿಕೆ ಕೊಳ್ಳಬೇಕಾದರೇನೇ ಆ ಮಡಿಕೆಯ ಮೇಲೆ ನಮ್ಮ ಬೆರಳುಗಳಿಂದ ಹೊಡೆದು ಪರಿಕ್ಷೀಸಿ ಖರೀದಿಸುತ್ತೇವೆ. ನೀವು ಬದುಕಿನ ವ್ಯಾಪಾರ ಮಾಡಲು ಬಂದಿರುವಿರಿ. ನೀವು ಗುರುವಿನ ತಲೆಯ ಮೇಲೆ ಹೊಡೆದು ಪರೀಕ್ಷಿಸಿದ್ದೀರಿ" ಯಾವುದೇ ಪಾಪ ಮಾಡಿಲ್ಲವೆಂದರು. ಇದನ್ನು ಕೇಳಿ ನಂದ್‌ಲಾಲ್ ಗುರುಗಳಿಂದ ಇನ್ನೂ ಪ್ರಭಾವಿತರಾದರು. ತಕ್ಷಣವೇ ದೀಕ್ಷೆ ಪಡೆದರು. ಸಂತ ಗುಮಾನಿದಾಸರು ಅವರ ಹೆಸರನ್ನು

ನಿತ್ಯಾನಂದನೆಂದು ಮರು ನಾಮಕರಣ ಮಾಡಿದರು. ಆ ಸತ್ಸಂಗದಿಂದ ಅವರಿಗೆ ಬದುಕುವ ದಾರಿ ಸಿಕ್ಕಿತು.

**ನಿತ್ಯಾನಂದರು ಹೇಳಿದ್ದಾರೆ :–**

ಬ್ರಾಹ್ಮಣ್ ಕುಲ್ ಮೆಂ ಜನ್ಮ್ ಥಾ, ಮೈಂ ಕರತಾ ಬಹುತ್ ಮರೋಡ್ ।
ಗುರು ಗುಮಾನೀ ದಾಸ್ ನೇ, ದಿಯಾ ಕುಬುದ್ಧಿ ಗಢ್ ತೋಡ್ ॥(1)

**ಅವರು ಗುರುಗಳಿಗೆ ಮತ್ತೆಷ್ಟು ಅಧೀನರಾದರೆಂದು ಈ ವಾಣಿಯ ಮುಖಾಂತರ ತಿಳಿಯಬಹುದಾಗಿದೆ.**

ಸಿರ್ ಸೌಂಪಾ ಗುರುದೇವ್ ಕೋ, ಸಫಲ್ ಹುಆ ಯಹ್ ಶೀಶ್ ।
ನಿತ್ಯಾನಂದ್ ಇಸ್ ಶೀಶ್ ಪರ್, ಆಪ್ ಬಸೈ ಜಗದೀಶ್ ॥(2)

**ಭಾವಾರ್ಥ:– ಎಲ್ಲಿಯವರೆಗೆ ಸತ್ಸಂಗ ಕೇಳಲು ಮನುಷ್ಯನಿಗೆ ಅವಕಾಶ ಸಿಗುವುದಿಲ್ಲವೋ, ಅಲ್ಲಿಯವರೆಗೆ ಅವನು ಅಹಂಕಾರದಲ್ಲಿ ಕೊಳೆಯುತ್ತಾ ಇರುತ್ತಾನೆ. ಜ್ಞಾನ ಪ್ರಾಪ್ತಿಯಾದರೆ, ಇಂದು ತಾನು ರಾಜನೆಂದು ತಿಳಿದಿರುವನು ಆದರೆ ಮರಣದ ನಂತರ ನಾಯಿ, ಕತ್ತೆಯಾಗಿ ಹುಟ್ಟಿದರೆ ಆಗ ಮೊದಲಿನ ಅಹಂಕಾರ ಎಲ್ಲಿಗೆ ಹೋಗುತ್ತದೆ? ಆದ್ದರಿಂದ ಭಕ್ತರು ಅಹಂಕಾರ ಪಡದೆ ಭಕ್ತಿಮಾರ್ಗದಲ್ಲಿ ನಡೆಯುತ್ತಾರೆ ಮತ್ತು ಯಶಸ್ಸನ್ನು ಕಾಣುತ್ತಾರೆ. ಶ್ರೀಲಂಕದ ರಾವಣನು ಭಕ್ತನಾಗಿದ್ದರೂ ಅಹಂಕಾರ ಬಿಡಲಿಲ್ಲ. ಹಾಗಾಗಿ ಅವನಿಗೆ ವಿನಾಶ ತಪ್ಪಲಿಲ್ಲ. ರಾವಣನಿಗೆ ಸತ್ಸಂಗಕ್ಕೆ ಹೋಗುವ ಅವಕಾಶ ಸಿಕ್ಕಲಿಲ್ಲ. ಆದ್ದರಿಂದ ಅವನ ಜೀವನ ವ್ಯರ್ಥವಾಗುವುದಷ್ಟೇ ಅಲ್ಲದೆ ಅವನ ಹೆಸರಿಗೆ ಕಳಂಕ ಹತ್ತಿಕೊಂಡಿತು. ನಿತ್ಯಾನಂದರು, "ನಾನು ಬ್ರಾಹ್ಮಣ ಕುಲದಲ್ಲಿ ಹುಟ್ಟಿದ್ದೇನೆಂಬ ಅಹಂಕಾರ ಇತ್ತು. ಗುರುಗಳ ಸತ್ಸಂಗದಿಂದ ನನ್ನ ಅಹಂಕಾರ ದೂರವಾಯಿತು. ಜೀವನ ಸಾರ್ಥಕವಾಯಿತು" ಎಂದರು.**

**ವಾಣಿ ಸಂಖ್ಯೆ 2ರ ಭಾವಾರ್ಥ :– ಸತ್ಸಂಗದ ಪ್ರವಚನ ಕೇಳಿ ನಿತ್ಯಾನಂದರು ಶರಣಾಗತರಾಗಿ. ಅಹಂಕಾರವನ್ನು ತೊರೆದರು. ಅವರು ಹೀಗೆಂದು ಹೇಳುತ್ತಿದ್ದರು, "ನಾನು ಗುರುವಿಗೆ ನನ್ನ ತಲೆ ಒಪ್ಪಿಸಿದ್ದೇನೆ." ಅಂದರೆ ಗುರುಗಳು ನನ್ನನ್ನು ಹೇಗೆ ಇಡುತ್ತಾರೋ, ನಾನು ಹಾಗೇ ಇರುವೆ. ನನ್ನ ತಲೆ ಉಳಿಯಿತು. ಇಲ್ಲದಿದ್ದರೆ ಯಾವುದೋ ರೋಗದಿಂದ ನನ್ನ ಜೀವನ ಮುಗಿಯುತ್ತಿತ್ತು. ತಲೆಯ ಮೇಲೆ ಪರಮಾತ್ಮ ವಾಸಿಸುತ್ತಿದ್ದಾನೆ. ನನ್ನ ರಕ್ಷಣೆಯನ್ನು ಅವನೇ ಮಾಡುತ್ತಾನೆ. ನನಗೆ ಯಾವುದೇ ಚಿಂತೆ ಇಲ್ಲ.**

**ನಿತ್ಯಾನಂದರು ಹೇಳಿದ್ದಾರೆ:–**

ಔರ್ ಬಾತ್ ತೇರೇ ಕಾಮ್ ನಾ ಆವೈ ಸಂತೋಂ ಶರಣೈ ಲಾಗ್ ರೇ ।
ಕ್ಯಾ ಸೋವೈ ಗಫಲತ್ ಮೆಂ ಬಂದೇ ಜಾಗ್–ಜಾಗ್ ನರ್ ಜಾಗ್ ರೇ ॥
ತನ್ ಸರಾಯ್ ಮೆಂ ಜೀವ್ ಮುಸಾಫಿರ್ ಕರತಾ ರಹೆ ದಿಮಾಗ್ ರೆ ।
ರಾತ್ ಬಸೇರಾ ಕರಲೇ ಡೇರಾ ಚಲೈ ಸವೇರಾ ತ್ಯಾಗ್ ರೇ । ಔರ್ ಬಾತ್––––––––––।
ಉಮದಾ ಚೋಲಾ ಬನಾ ಅನಮೋಲಾ ಲಗೇ ದಾಗ್ ಪರ್ ದಾಗ್ ರೇ ।
ದೋ ದಿನ್ ಕ ಗುಜರಾನ್ ಜಗತ್ ಮೆಂ ಜಲೇ ಬಿರಾನೀ ಆಗ್ ರೇ । ಔರ್ ಬಾತ್–––।
ಕುಬುದ್ಧ್ ಕಾಂಚಲೀ ಚಢ್ ರಹೀ ಚಿತ್ ಪರ್ ತೂ ಹುಆ ಮನುಷ್ ಸೇ ನಾಗ್ ರೇ ।
ಸೂಝ್ಯೆ ನಹೀಂ ಸಜನ್ ಸುಖ್ ಸಾಗರ್ ಬಿನಾ ಪ್ರೇಮ್ ಬೈರಾಗ್ ರೇ । ಔರ್ ಬಾತ್–।
ಹರ್ ಸುಮರೈ ಸೋ ಹಂಸ್ ಕಹಾವೈ ಕಾಮೀ ಕ್ರೋಧೀ ಕಾಗ್ ರೇ ।

ಭಂವರಾ ನಾ ಭರಮ್ಯೆ ವಿಷ್ ಕೇ ಬನ್ ಮೆಂ ಚಲ್ ಬೇಗಮ್ ಪುರ್ ಬಾಗ್ ರೇ ।
ಔರ್ ಬಾತ್------।

ಶಬ್ದ್ ಸೈನ್ ಸತಗುರು ಕೀ ಪಹಚಾನೀ ಪಾಯಾ ಅಟಲ್ ಸುಹಾಗ್ ರೇ ।
ನಿತಾನಂದ್ ಮಹಬೂಬ್ ಗುಮಾನೀ ಪ್ರಕಟೆ ಪೂರ್ಣ ಭಾಗ್ ರೆ । ಔರ್ ಬಾತ್-----।

**(ಮೇಲ್ಕಂಡ ಶಬ್ದವು ವಾಸ್ತವದಲ್ಲಿ ಕಬೀರ್ ಪರಮೇಶ್ವರರ ಶಬ್ದವಾಗಿದೆ)**

**ಶಬ್ದಾರ್ಥ:- ಹೇ ಮಾನವ (ಸ್ತ್ರೀ/ಪುರುಷ) ಪರಮಾತ್ಮನ ಚರ್ಚೆಯ ವಿನಃ ಬೇರೆ ಯಾವ ಮಾತೂ ಪ್ರಯೋಜನಕ್ಕೆ ಬರುವುದಿಲ್ಲ. ನಿಮಗೆಲ್ಲಾ ತತ್ವಜ್ಞಾನ ಇಲ್ಲ. ಆದ್ದರಿಂದ ಮೋಹ-ಮಮತೆ ಮತ್ತು ಅಜ್ಞಾನವೆಂಬ ನಿದ್ರೆ ಮಾಡುತ್ತಿರುವಿರಿ. ಅಂದರೆ ಪರಮಾತ್ಮನನ್ನು ಮರೆತು ಬಿಟ್ಟಿದ್ದೀರಿ. ಎದ್ದೇಳು, ಎದ್ದೇಳು, ನಿನ್ನನ್ನು ನೀನು ಸಂಭಾಳಿಸಿಕೊಂಡು ಸಂತರ ಸತ್ಸಂಗ ಕೇಳುತ್ತಾ, ನಿನ್ನ ಉದ್ಧಾರ ಮಾಡಿಕೋ, ನಾವು ಯಾವುದೋ ಹೋಟೆಲಿನಲ್ಲಿ ಒಂದು ರೂಮನ್ನು ಬಾಡಿಗೆಗೆ ಪಡೆದು, ರಾತ್ರಿ ಅಲ್ಲಿ ತಂಗಿ, ಮಾರನೇ ದಿನ ಬೆಳಿಗ್ಗೆ ಅದನ್ನು ಖಾಲಿ ಮಾಡಿ ತಮ್ಮ ತಮ್ಮ ಕಾರ್ಯಗಳಿಗೆ ಹೊರಡುವಂತೆ ಈ ಮಾನವ ಶರೀರದಲ್ಲಿರುವ ಜೀವವು ಇದೆ. ಶರೀರವೆಂಬ ಹೋಟೆಲಿನಲ್ಲಿ ಜೀವವೆಂಬ ಯಾತ್ರಿಕನಿದ್ದಾನೆ. ಸಾವಿನ ಸಮಯ ಬಂದಾಗ ಬೆಳಗಾದಂತೆ, ಶರೀರವೆಂಬ ಕೊಠಡಿಯನ್ನು ಖಾಲಿ ಮಾಡುವ ಸಮಯ ಬಂದಿದೆ ಎಂದರ್ಥ. ನೀವು ಭಕ್ತಿ ಮಾಡದಿದ್ದರೆ ಶರೀರ ಬಿಟ್ಟು ಖಾಲಿ ಕೈಯಲ್ಲಿ ಹೋಗಬೇಕಾಗುತ್ತದೆ.**

**ಮಾನವ ಶರೀರವೆಂಬ ವಸ್ತ್ರವು ಅಮೂಲ್ಯವಾದದ್ದು, ತತ್ವಜ್ಞಾನದ ಅಭಾವದಿಂದ ಭಕ್ತಿಯನ್ನು ಮಾಡದೆ ಪಾಪದ ಮೇಲೆ ಪಾಪವನ್ನು ಮಾಡಿ ಆ ಬಟ್ಟೆಯ ಮೇಲೆ ಕಲೆ ಮೂಡಿಸುತ್ತಿದ್ದಾನೆ. ಈ ಪ್ರಪಂಚದಲ್ಲಿ ಜೀವನದ ಸಮಯ ಹೆಚ್ಚಿರುವುದಿಲ್ಲ. ತಮ್ಮ ಕುಟುಂಬದ ಪೋಷಣೆ ಹಾಗೂ ಧನಾರ್ಜನೆಯಲ್ಲಿ ಚಿಂತಿತನಾಗಿರುತ್ತಾನೆ. ಪಾಪ ಮಾಡಿ ಹಣ ಸಂಗ್ರಹಿಸಿಡುತ್ತಾನೆ. ಸಾವಿನ ನಂತರ ಕುಟುಂಬ ಮತ್ತು ಹಣ ನಿನ್ನನ್ನು ತೊರೆಯುತ್ತದೆ. ಇದಕ್ಕೋಸ್ಕರ ನೀನು ಮಾಡಿರುವ ಪಾಪವು ನಿನ್ನನ್ನು ನರಕದಲ್ಲಿ ಸುಡುತ್ತದೆ. ಪಾಪ ಮಾಡಿ ಬೇರೆಯವರ ಬೆಂಕಿಯಲ್ಲಿ ಬೇಯಬೇಡ.**

**ಯಾವ ವ್ಯಕ್ತಿ ಭಕ್ತಿ ಮಾಡುವನೋ, ಅವನನ್ನು ಭಕ್ತನೆನ್ನುವರು. ಅಂದರೆ ಹಂಸ ಪಕ್ಷಿಯನ್ನು ಅಹಿಂಸಾವಾದಿ ಎನ್ನುತ್ತಾರೆ. ಅಂದರೆ ಭಕ್ತನು ಯಾರಿಗೂ ತೊಂದರೆ ಕೊಡುವುದಿಲ್ಲ. ಹಂಸಪಕ್ಷಿಯು ಸರೋವರದ ಮೀನನ್ನಾಗಲೀ, ಹುಳು ಹುಪ್ಪಟೆಯಾನ್ನಾಗಲೀ ತಿನ್ನುವುದಿಲ್ಲ. ಕೇವಲ ಮುತ್ತನ್ನು ತಿನ್ನುತ್ತದೆ. ಕಾಗೆ ತನ್ನ ಸ್ವಾರ್ಥಕ್ಕಾಗಿ ಜೀವಂತವಾಗಿರುವ ಪಶು ಪಕ್ಷಿಗಳ ಮಾಂಸವನ್ನು ಕಿತ್ತು ಕಿತ್ತು ತಿನ್ನುತ್ತದೆ, ಕಷ್ಟ ಕೊಡುತ್ತದೆ, ಇದೇ ರೀತಿ ಸತ್ಸಂಗ ಕೇಳದಿರುವ ವ್ಯಕ್ತಿ ಜ್ಞಾನದ ಕೊರತೆಯಿಂದ ಸ್ವಾರ್ಥದಿಂದ ಬೇರೆಯವರಿಂದ ಹಣ ಲೂಟಿ ಮಾಡುತ್ತಾನೆ. ಕಳ್ಳತನ ಮಾಡುತ್ತಾನೆ ಅಥವಾ ಬೇರೆ ರೀತಿಯಾದ ಕಷ್ಟ ಕೊಡುತ್ತಾನೆ." ಹೇ ಜೀವವೆಂಬ ದುಂಬಿಯೇ, ಕಾಮ ಕ್ರೋಧವೆಂಬ ಅರಿಷಡ್ವರ್ಗಗಳೆಂಬ ಕಾಡಿನಲ್ಲಿ ಅಲೆದಾಡಬೇಡ, ಈ ಕಾಲ ಲೋಕವೆಂಬುದು ವಿಷದ ಮನೆ. ಇದನ್ನು ಬಿಟ್ಟು ಕಷ್ಟವಿಲ್ಲದ ಸತ್ಯಲೋಕಕ್ಕೆ ನಡೆ. ಅದು ಸುಖದಾಯಕವಾದ ತೋಟ.**

**ನಿತ್ಯಾನಂದನು ಹೇಳಿದನು, "ನಾನು ಗುರುವಿನ ಸತ್ಸಂಗ ಕೇಳಿದೆನು, ಅವರ ಇಂಗಿತ ತಿಳಿದುಕೊಂಡೆನು. ನನ್ನ ಜೀವನವನ್ನು ಪಾವನಗೊಳಿಸಿಕೊಂಡೆನು. ನನಗೆ ನನ್ನ ಪ್ರೀತಿಪಾತ್ರರಾದ ಗುರು ಗುಮಾನಿ ದಾಸರು ಸಿಕ್ಕಿದರು. ಇದು ನನ್ನ ಪೂರ್ವಜನ್ಮದ ಸೌಭಾಗ್ಯ."**

**ಶಬ್ದ**

ತನ್ ಮನ್ ಶೀಶ್ ಈಶ್ ಅಪನೇ ಪೈ, ಪಹಲಮ್ ಚೋಟ್ ಚಢಾವೈ ।
ಜಬ್ ಕೋಏ ರಾಮ್ ಭಕ್ತ್ ಗತಿ ಪಾವೈ, ಹೋ ಜೀ ॥ಟೇಕ್॥

ಸತಗುರು ತಿಲಕ್ ಅಜಪಾ ಮಾಲಾ, ಯುಕ್ತ್ ಜಟಾ ರಖಾವಾವೈ ।
ಜತ್ ಕೋಪೀನ್ ಸತ್ ಕಾ ಚೋಲಾ, ಭೀತರ್ ಭೇಖ್ ಬನಾವೈ ॥1॥
ಲೋಕ್ ಲಾಜ್ ಮರ್ಯಾದ್ ಜಗತ್ ಕೀ, ತೃಣ್ ಜ್ಯೋಂ ತೋಡ್ ಬಗಾವೈ ।
ಕಾಮನಿ ಕನಕ್ ಜಹರ್ ಕರ್ ಜಾನ್ಯೈ, ಶಹರ್ ಅಗಮಪುರ್ ಜಾವೈ ॥2॥
ಜ್ಯೋಂ ಪತಿ ಭ್ರತಾ ಪತಿ ಸೇ ರಾತೀ, ಆನ್ ಪುರುಷ್ ನಾ ಭಾವೈ ।
ಬಸೈ ಪೀಹರ್ ಮೆಂ ಪ್ರೀತ್ ಪ್ರೀತಮ್ ಮೆಂ, ನ್ಯೂಂ ಕೋಏ ಧ್ಯಾನ್ ಲಗಾವೈ ॥3॥
ನಿಂದಾ ಸ್ತುತಿ ಮಾನ್ ಬಡಾಈ, ಮನ್ ಸೇ ಮಾರ್ ಗಿರಾವೈ ।
ಅಷ್ಟ್ ಸಿದ್ಧಿ ಕೀ ಅಟಕ್ ನ ಮಾನೈ, ಆಗೈ ಕದಮ್ ಬಢಾವೈ ॥4॥
ಆಶಾ ನದೀ ಉಲ್ಟ್ ಕರ್ ಡಾಟೈ, ಆಢಾ ಬಂಧ್ ಲಗಾವೈ ।
ಭವಜಲ್ ಖಾರ್ ಸಮುಂದ್ರ್ ಮೆಂ ಬಹುರ್ ನಾ ಖೋಡ್ ಮಿಲಾವೈ ॥5॥
ಗಗನ್ ಮಹಲ್ ಗೋವಿಂದ್ ಗುಮಾನೀ, ಪಲಕ್ ಮಾಂಹಿ ಪಹುಂಚಾವೈ ।
ನಿತಾನಂದ್ ಮಾಟೀ ಕಾ ಮಂದಿರ್, ನೂರ್ ತೇಜ್ ಹೋ ಜಾವೈ ॥6॥

**ಶಬ್ದಾರ್ಥ:–** ಸಂತ ನಿತ್ಯಾನಂದರು ಭಕ್ತಿಯನ್ನು ಸಫಲಗೊಳಿಸುವಂಥಾ ವಿಧಾನವನ್ನು ತಿಳಿಸಿದರು. ಅವರು ಹೀಗೆ ಹೇಳಿದರು, "ಗುರುಗಳಿಂದ ದೀಕ್ಷೆ ಪಡೆದ ನಂತರ ಪರಮೇಶ್ವರನಿಗೆ ಪೂರ್ಣವಾಗಿ ಸಮರ್ಪಿಸಿಕೊಳ್ಳಬೇಕು. ನಮ್ಮ ತನು–ಮನ–ಧನವನ್ನು ಪರಮೇಶ್ವರನಿಗೆ ಒಪ್ಪಿಸಬೇಕು. ಅಂದರೆ ಪ್ರಾರಂಭದಿಂದಲೂ ತ್ಯಾಗದ ಮನೋಭಾವ ಹೊಂದಬೇಕು. ಆಗ ಭಕ್ತಿಯ ಅಂದರೆ ಮುಕ್ತಿ ದೊರೆಯುವುದು."

ವಾಣಿ ಸಂ. 1 ಕೆಲವು ಸಾಧಕರು ನಾಟಕವಾಡುತ್ತಾರೆ. ಅವರು ಹಣೆಗೆ ತಿಲಕವಿಡುತ್ತಾರೆ. ಜಪಮಾಲೆಯಿಂದ ಜಪ ಮಾಡುತ್ತಾರೆ. ತಲೆಯಲ್ಲಿ ಉದ್ದುದ್ದ ಕೂದಲು ಬಿಡುತ್ತಾರೆ. ಕಚ್ಚೆಯ ಬದಲಾಗಿ ಬರೀ ಕೌಪೀನ ಧರಿಸುತ್ತಾರೆ. ಇನ್ನೂ ಕೆಲವರು ಉದ್ದ ನಿಲುವಂಗಿ ಧರಿಸುತ್ತಾರೆ. ಈ ವೇಷಕ್ಕೆ ಬದಲಾಗಿ ನಿಮ್ಮ ಸದ್ಗುರುವಿಗೆ ಮರ್ಯಾದೆ ಕೊಡಿ. ಅವರನ್ನು ನಿಮ್ಮ ತಲೆಯ ಮೇಲೆ ಕೂರಿಸಿಕೊಳ್ಳಿ ಅಂದರೆ ಗುರುವಿನ ಭಕ್ತನಾಗಿ ಅವರ ಆಜ್ಞೆಯನ್ನು ಪಾಲಿಸಿ ಜನತೆಗೆ ಮಾದರಿಯಾಗಿ ಭಕ್ತನಾಗಿದ್ದರೆ ಹೀಗಿರಬೇಕು ಎನ್ನುವಂತಿರಬೇಕು. ಭಕ್ತನ ಅಸ್ತಿತ್ವ ಅವನ ಬಾಹ್ಯಾಡಂಬರದ ಬದಲಾಗಿ ಅವನ ಕ್ರಿಯೆಯಿಂದ ಆಗಬೇಕು. ಒಳ್ಳೆಯದನ್ನೇ ಮಾಡಬೇಕು. ಕೆಟ್ಟತನದಿಂದ ದೂರವಿರಬೇಕು. ಜಪಮಾಲೆಯಿಂದ ಅಲ್ಲ, ಉಸಿರು ತೆಗೆದುಕೊಳ್ಳುವಾಗ ಹಾಗೂ ಬಿಡುವಾಗ ಜಪವನ್ನು ಮಾಡಬೇಕು. ತಲೆಯಲ್ಲಿ ಉದ್ದುದ್ದ ಜಟೆ ಬಿಡುವುದರ ಬದಲಾಗಿ ಸದ್ಗುರುವಿನ ಮೂಲಕ ಹೇಳಲ್ಪಟ್ಟ ಭಕ್ತಿಯ ಯುಕ್ತಿಯನ್ನು ದೃಢತೆಯಿಂದ ನಿಮ್ಮದಾಗಿಸಿಕೊಳ್ಳಿ. ಗುಪ್ತಾಂಗಕ್ಕೆ ಕೇವಲ ಕೌಪೀನ ಕಟ್ಟಿಕೊಳ್ಳುವುದರಿಂದ ಸಂಯಮ ಬರುವುದಿಲ್ಲ. ಯತಿ ಭಾವವನ್ನು ತನ್ನದಾಗಿಸಿಕೊಂಡರೆ ಸಂಯಮವು ಬರುವುದು. ಯುವತಿಯರನ್ನು ನೋಡಿದಾಗ ಮನಸ್ಸಿನಲ್ಲಿ ಕೆಟ್ಟ ಭಾವನೆ ಬಾರದಂತೆ ನೋಡಿಕೊಳ್ಳಬೇಕು. ಸತ್ಯವನ್ನೇ ಹೇಳಬೇಕು. ಇದೇ ಭಕ್ತನು ಧರಿಸುವ ನಿಜವಾದ ನಿಲುವಂಗಿ ಅಂದರೆ ಭಕ್ತನು ತೋರಿಸುವ ವಸ್ತ್ರ. ಸತ್ಯಜ್ಞಾನದಿಂದ ಇವನು ಸತ್ಯಭಕ್ತಿ ಮಾಡುತ್ತಿದ್ದಾನೆ ಅಥವಾ ತನ್ನ ಜೀವನವನ್ನು ತಪ್ಪು ದಾರಿಗೆ ಎಳೆದು ನಷ್ಟ ಮಾಡಿಕೊಳ್ಳುತ್ತಿದ್ದಾನೆ ಎಂಬುದು ತಿಳಿಯುತ್ತದೆ.

ವಾಣಿ ಸಂ. 2 :– ಪ್ರಪಂಚದಲ್ಲಿರುವ ವ್ಯಕ್ತಿಗಳ ಮಾತಿನಿಂದ ಭಕ್ತಿಗೆ ಭಂಗ ತಂದುಕೊಳ್ಳಬಾರದು. ಆ ಜನರು ಏನು ಹೇಳಲು ಸಾಧ್ಯ? ನಾನು ಸತ್ಸಂಗಕ್ಕೆ ಹೋಗುತ್ತೇನೆ. ಅಲ್ಲಿ ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ. ಪಾರಂಪರಿಕ ಭಕ್ತಿಯನ್ನು ಬಿಟ್ಟು ಬಿಟ್ಟಿದ್ದೇನೆ. ಹೀಗೆಂದರೆ ಅವರೇನು ಮಾಡಲು ಸಾಧ್ಯ? ಈ ಲೋಕಮರ್ಯಾದೆಯನ್ನು ಹುಲ್ಲುಕಡ್ಡಿಯನ್ನು ಕೀಳುವಂತೆ ಕಿತ್ತು ಬಿಸಾಡಬೇಕು

ಅಂದರೆ ನಿಮಗೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು. ಚಿನ್ನ ಮತ್ತು ಕಾಮಿನಿ ಅಂದರೆ ಸುಂದರ ಸ್ತ್ರೀಯನ್ನು ನೋಡಿ ನಿಮ್ಮ ವರ್ತನೆಯಲ್ಲಿ ದುರಾಸೆ ಬೇಡ. ಅದನ್ನು ವಿಷದಂತೆ ಭಾವಿಸಬೇಕು. ಆಗ ಮಾತ್ರ ಸಾಧಕನು ಅಮರ ಲೋಕಕ್ಕೆ ತೆರಳುವನು.

ವಾಣಿ ಸಂ. **3** :– ನಿಮ್ಮ ಇಷ್ಟದೇವರ ಬಗ್ಗೆ ಪತಿವ್ರತಾ ಸ್ತ್ರೀಯಂತೆ ನಿಷ್ಠೆಯಿಂದ ಇರಬೇಕು. ಹೇಗೆ ಪತಿವ್ರತಾ ಸ್ತ್ರೀಯು (ಪರಪುರುಷನು ಎಷ್ಟೇ ಸುಂದರವಾಗಿದ್ದರೂ, ಧನಿಕನಾಗಿದ್ದರೂ) ತನ್ನ ಪತಿಯನ್ನು ಬಿಟ್ಟು ಬೇರೆ ಪುರುಷನನ್ನು ತನ್ನ ಪತಿಯಂತೆ ನೋಡಲು ಇಚ್ಛಿಸುವುದಿಲ್ಲ ಹಾಗೆ ನಿಮ್ಮ ಪರಮಾತ್ಮನ ಭಕ್ತಿಯನ್ನು ಎಂದಿಗೂ ಮರೆಯಬಾರದು. ಯಾರೂ ಬರೀ ತೋರಿಕೆಗಾಗಿ ಭಕ್ತಿ ಮಾಡದೆ ಹೃದಯಪೂರ್ವಕವಾಗಿ, ದೃಢ ಮನಸ್ಸಿನಿಂದ, ಉಚ್ಛಾಸ, ನಿಶ್ವಾಸದಿಂದಲೂ ಪರಮಾತ್ಮನ ನಾಮಸ್ಮರಣೆ ಮಾಡುತ್ತಿರಬೇಕು. (ಭಕ್ತನೆಂದರೆ ಸ್ತ್ರೀಯಾಗಬಹುದು ಅಥವಾ ಪುರುಷನಾಗಬಹುದು) ಪತಿವ್ರತಾ ಸ್ತ್ರೀ ತನ್ನ ತಾಯಿಯ ಮನೆಗೆ ಹೋದಾಗ ಅವಳ ಕುಟುಂಬಕ್ಕೆ ಅವಳು ತನ್ನ ಪತಿಯನ್ನು ನೆನಪಿಸಿಕೊಳ್ಳುತ್ತಿದ್ದಾಳೆ ಎನ್ನುವುದು ತಿಳಿಯುವುದಿಲ್ಲ. ಇದೇ ರೀತಿ ಸಾಧಕನು ತನ್ನ ಪ್ರಭುವಿನ ಬಗ್ಗೆ ಗಮನಹರಿಸಬೇಕು.

ವಾಣಿ ಸಂ. **4** :– ಪೂರ್ಣ ಸದ್ಗುರುವಿನಿಂದ ಸತ್ಯ ಭಕ್ತಿಯನ್ನು ಪಡೆದ ನಂತರ ಯಾರಾದರೂ ಭಕ್ತನನ್ನು ನಿಂದಿಸಿದರೆ ತಪ್ಪಾಗಿ ತಿಳಿಯಬಾರದು. ಯಾರಾದರೂ ಪ್ರಶಂಸಿಸಿದರೆ ಅದರಿಂದ ಪ್ರಭಾವಿತವಾಗಬಾರದು. ಶಾಸ್ತ್ರಾನುಸಾರ ಸತ್ಯ ಭಕ್ತಿಯನ್ನು ಮಾಡುವುದರಿಂದ ಸಾಧಕನಿಗೆ ಕೆಲವು ಸಿದ್ಧಿಗಳು ದೊರೆಯುತ್ತವೆ. ಆದರೆ ಅವು ಮೋಕ್ಷಕ್ಕೆ ಉಪಯೋಗವಾಗುವುದಿಲ್ಲ. ಅವು ಸಂಖ್ಯೆಯಲ್ಲಿ ಎಂಟಿವೆ. ಅವುಗಳ ಮೂಲಕ ಸಾಧಕನು ಕೆಲವರಿಗೆ ಲಾಭ ಉಂಟು ಮಾಡಿ, ಕೆಲವರಿಗೆ ನಷ್ಟ ಉಂಟು ಮಾಡಿ ತನ್ನ ಭಕ್ತಿಯನ್ನು ನಷ್ಟ ಮಾಡಿಕೊಳ್ಳುತ್ತಾನೆ. ಯಾವುದಾದರೂ ಚಮತ್ಕಾರವನ್ನು ತೋರಿಸಿ ಪ್ರಸಿದ್ಧನಾಗುತ್ತಾನೆ. ಆದರೆ ಅವನ ಭವಿಷ್ಯ ನರಕವಾಗುತ್ತದೆ. ಅವನು ಪಶು–ಪಕ್ಷಿಗಳ ಯೋನಿಯನ್ನು ಪಡೆಯುತ್ತಾನೆ. ಆದ್ದರಿಂದ ಮೋಕ್ಷ ಪ್ರಾಪ್ತಿಯನ್ನು ಇಚ್ಛಿಸುತ್ತಾ ಅಷ್ಟ ಸಿದ್ಧಿಗಳೆಂಬ ನಕಲೀ ಅಧಿಕಾರದ ಆಸೆ ಪಡಬಾರದು. ಇದನ್ನೆಲ್ಲಾ ಬಿಟ್ಟು ಮೋಕ್ಷ ಪ್ರಾಪ್ತಿಯ ಉದ್ದೇಶದಿಂದ ಮುಂದುವರೆಯಬೇಕು.

ವಾಣಿ ಸಂ. **5** :– ಈ ಭೂಮಿ ಲೋಕದ ಧನ ವೈಭವ, ರಾಜ ವೈಭೋಗ, ಸಂಪತ್ತಿನ ಅನೇಕ ಇಚ್ಛೆಗಳೆಂಬ ನದಿಯನ್ನು ತಡೆಯಬೇಕು. ಈ ಆಸೆಗಳಿಗೆಲ್ಲಾ ಒಂದು ಅಣೆಕಟ್ಟು ಕಟ್ಟಬೇಕು. ಅಂದರೆ ದೃಢ ನಿಶ್ಚಯವೆಂಬ ಅಣೆಕಟ್ಟು ಕಟ್ಟಬೇಕು. ಸಂಸಾರವೆಂಬ ಉಪ್ಪಿನ ಸಮುದ್ರ ಅಂದರೆ ದುಃಖಗಳಿಂದ ತುಂಬಿದ ಸಮುದ್ರದಲ್ಲಿ ಮತ್ತೆ ಜನ್ಮ ತಾಳಬಾರದು.

ವಾಣಿ ಸಂ. **6** :– ಯಾವ ಇಷ್ಟದೈವದ ಭಕ್ತಿಯನ್ನು ಗುರುವು ತಿಳಿಸುತ್ತಾನೋ, ಆ ಗುರುವು ತನ್ನ ಅನುಯಾಯಿಗಳನ್ನು ಆಕಾಶದಲ್ಲಿರುವ ಆ ಇಷ್ಟ ದೈವದ ಧಾಮಕ್ಕೆ ಪೂರ್ಣ ಸಹಯೋಗ ನೀಡಿ ಕಳುಹಿಸಿಕೊಡುತ್ತಾನೆ. ನಿತ್ಯಾನಂದರ ಗುರುಗಳಾದ ಶ್ರೀ ಗುಮಾನಿದಾಸರು ಶ್ರೀ ವಿಷ್ಣುವಿನ ಭಕ್ತರಾಗಿದ್ದರು. ನಿತ್ಯಾನಂದರು ಅದರ ಪ್ರಾಪ್ತಿಗಾಗಿ ಮಹಿಮೆಯನ್ನು ತಿಳಿಸುತ್ತಾ ಹೀಗೆ ಹೇಳಿದ್ದಾರೆ, ತಮ್ಮ ಸಾಧನೆಯ ಶಕ್ತಿಯನ್ನು ಸುರಕ್ಷಿತವಾಗಿ ಇಡುವುದರಿಂದ ಸ್ಥೂಲ ಶರೀರದ ಒಳಗಿರುವ ಸೂಕ್ಷ್ಮ ಶರೀರವು ಭಕ್ತಿಯ ಶಕ್ತಿಯಿಂದ ತೇಜೋಮಯವಾಗುತ್ತದೆ. ಭಕ್ತಿ ಮಾಡದಿದ್ದರೆ ಆ ಶರೀರವು ಮಣ್ಣಿಗೆ ಸಮಾನ. ಇದರಿಂದ ತಿಳಿಯುವುದೇನೆಂದರೆ, ಅಂತರಾಷ್ಟ್ರೀಯ ಮಟ್ಟದಲ್ಲಿ ಆಡುವ ಆಟಗಾರರ ನಿಯಮಗಳಂತೆಯೇ, ಜಿಲ್ಲಾಮಟ್ಟದಲ್ಲಿ ಆಡುವ ಆಟಗಾರರ ನಿಯಮಗಳು ಇರುತ್ತವೆ. ನಿತ್ಯಾನಂದರು ರಾಜ್ಯ ಮಟ್ಟದಲ್ಲಿ ಆಟವಾಡುತ್ತಿದ್ದರು. ಅದನ್ನು ಯಶಸ್ವಿಗೊಳಿಸಿದರು. ನಾವು ಕಬೀರ ಪರಮಾತ್ಮರನ್ನು ಇಷ್ಟದೈವ ಎಂದು ಭಾವಿಸಿ ಭಕ್ತಿ ಮಾಡಿದರೂ ನಿಯಮ ಅದೇ ಆಗಿರುತ್ತದೆ. ನಾವು ಅಂತರರಾಷ್ಟ್ರೀಯ ಮಟ್ಟದ ಆಟಗಾರರು. **(6)**

ಸಂತ ನಿತ್ಯಾನಂದರು ತಮ್ಮ ಅಂತಿಮ ದಿನಗಳನ್ನು ಜಟೈಲಾ ಎಂಬಾ ಕೆರೆಯ ಬಳಿ ಸಾಧನೆ

ಮಾಡಿ ಕಾಲ ಕಳೆದರು. ಸಂತ ನಿತ್ಯಾನಂದರು ಶ್ರೀ ವಿಷ್ಣುವಿನ ಭಕ್ತರು. ಇವರ ಗುರುಗಳಾದ ಗುಮಾನಿದಾಸರು ದಿಲ್ಲಿಯ ಸಂತರಾದ ಶ್ರೀ ಚರಣದಾಸ ವೈಷ್ಣವರ ಶಿಷ್ಯರು. "ಸೃಷ್ಟಿ ರಚನೆ" ಎಂಬ ಗದ್ಯಭಾಗದಲ್ಲಿ ತಿಳಿಸಿರುವಂತೆ ನಿತ್ಯಾನಂದರಿಗೆ ಯಾವ ಶ್ರೇಣಿಯ ಮೋಕ್ಷ ಪ್ರಾಪ್ತಿಯಾಯಿತೆಂದು ಓದುಗರು ಇದೆಲ್ಲವನ್ನು ಪುಟಸಂಖ್ಯೆ 255 ರಲ್ಲಿ ಓದಿ ತಿಳಿಯಿರಿ. ಸಂತ ಗರೀಬ್‌ದಾಸರಿಗೆ ಪರಮಾತ್ಮ ಕಬೀರರು ಸಿಕ್ಕಿದರು. ಅವರು ಗರೀಬ್‌ದಾಸರಿಗೆ ಹೇಳಿದ್ದರು. ಭಕ್ತರು ಯಾವ ರೀತಿಯ ಸಾಧನೆ ಮಾಡಿದರೂ ಅದು ಆದರಣೀಯವೇ. ಆದರೆ ಎಲ್ಲಿಯವರೆಗೆ ಪರಮ ಸದ್ಗುರು ಸಿಗುವುದಿಲ್ಲವೋ, ಎರಡು ಅಕ್ಷರದ ನಾಮಸ್ಮರಣೆಯ ದೀಕ್ಷೆಯನ್ನು ಕೊಡುವುದಿಲ್ಲವೋ, ಅಲ್ಲಿಯವರೆಗೆ ಗುರುವಿಗೂ ಮುಕ್ತಿ ಇಲ್ಲ, ಶಿಷ್ಯನಿಗೂ ಇಲ್ಲ.

ಗರೀಬ್, ಸಾಧ್-ಸಾಧ್ ಸಬ್ ನೇಕ್ ಹೈಂ, ಆಪ್ ಆಪನೀ ಠೌರ್ ।
ಜೋ ನಿಜ್ ಧಾಮ್ ಪಹುಂಚಾವಹೀಂ, ಸೋ ಸಾಧು ಕೋಈ ಔರ್ ॥

ಗರೀಬ್, ಸಾಧ್ ಹಮಾರೆ ಸಗೆ ಹೈಂ, ನಾ ಕಾಹೂ ಕೋ ದೋಷ್ ।
ಜೋ ಸಾರನಾಮ್ ಬತಾವಹೀಂ, ಸೋ ಸಾಧು ಸಿರ್ ಪೋಷ್ ॥

ಶಬ್ದಾರ್ಥ :- ಸಂತ ಗರೀಬ್‌ದಾಸರು ಹೇಳಿದ್ದಾರೆ, ಯಾರು ಪರಮಾತ್ಮನ ಸತ್ಯಮಾರ್ಗವನ್ನು ಹೇಳುವರೋ ಆ ಸಂತರು ಒಳ್ಳೆಯ ಆತ್ಮ ಉಳ್ಳವರು. ಅವರ ಉದ್ದೇಶವು ತಪ್ಪಾಗಿರುವುದಿಲ್ಲ. ಅವರು ಎಷ್ಟರಮಟ್ಟಿಗೆ ಜ್ಞಾನ ಹೊಂದಿರುತ್ತಾರೆ, ಅಲ್ಲಿಯವರೆಗೆ ಸರಿ. ಅಂದರೆ ಒಬ್ಬರು ವಿಷ್ಣುವಿನ ಸಾಧನೆಯನ್ನು ಹೇಳುತ್ತಾರೆ, ಒಬ್ಬರು ಶಿವನ ಹಾಗೂ ಇನ್ನೊಬ್ಬರು ಬ್ರಹ್ಮನ ಸಾಧನೆಯನ್ನು ವೇದಗಳ ಪ್ರಕಾರ ಮಾಡುತ್ತಾರೆ ಹಾಗೂ ಮಾಡಿಸುತ್ತಾರೆ. ಒಂದು ಹಂತದವರೆಗೆ ಅದು ಸರಿ. ಆದರೆ ಆ ಸಾಧನೆಯಿಂದ ನಿಜವಾದ ಹಂತ ಅಂದರೆ ಸನಾತನ ಪರಮಧಾಮವನ್ನು (ಸತ್ಯಲೋಕ) ಪಡೆಯಲಾರರು. ಯಾವ ಸಂತನು ಸತ್ಯಲೋಕದ ಪ್ರಾಪ್ತಿಗಾಗಿ ಮಾರ್ಗದರ್ಶನ ನೀಡುವರೋ, ಆ ಸಂತರು ಮೇಲೆ ತಿಳಿಸಿದ ಸಂತರಿಗಿಂತ ಭಿನ್ನವಾಗಿರುತ್ತಾರೆ.

ಯಾವ ಸಂತರು ಪರಮಾತ್ಮನಿಗಾಗಿ ಪ್ರಯತ್ನಶೀಲರಾಗಿರುತ್ತಾರೋ, ಆ ಸಂತರೆಲ್ಲಾ ನಮ್ಮ ಸ್ವಂತ ಸಂಬಂಧಿಗಳು. ನಮ್ಮ ನಿಜವಾದ ಜೊತೆಗಾರರು. ಅವರಿಗೆ ನಾವು ಏನೂ ಹೇಳುವುದಿಲ್ಲ ಏಕೆಂದರೆ ಅವರಿಗೆ ಪೂರ್ಣ ಮೋಕ್ಷ ಮಂತ್ರ ಸಾರನಾಮದ ಜ್ಞಾನವಿಲ್ಲ. ಆ ಸಂತರ ಶಿಷ್ಯರಾಗುವುದರಿಂದ ಜೀವಕ್ಕೆ ಪೂರ್ಣ ಮೋಕ್ಷ ಪ್ರಾಪ್ತಿಯಾಗುವುದಿಲ್ಲ. ಜನನ-ಮರಣವು ಅವರನ್ನು ಬಾಧಿಸುತ್ತದೆ. ಯಾವ ಸಂತನು ಸಾರನಾಮದ ದೀಕ್ಷೆ ಕೊಡಿಸುವನೋ, ಅವನು ನಮ್ಮ ತಲೆ ಕಾಯುವನು. ಅಂಥಾ ಗುರುಗಳು ಗೌರವಕ್ಕೆ ಪಾತ್ರರು.

ಗೀತೆಯ 15ನೆಯ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಿರುವಂತೆ, ವಿಷ್ಣುವಿಗೇ ಜನನ ಮರಣಗಳಿರುವಾಗ ಉಪಾಸಕನಿಗೆ ಮೋಕ್ಷವು ಪ್ರಾಪ್ತಿಯಾಗುವುದಿಲ್ಲ. ತತ್ವದರ್ಶಿ ಸಂತನಿಂದ ತತ್ವಜ್ಞಾನಪ್ರಾಪ್ತಿಯಾದ ನಂತರ ಪರಮೇಶ್ವರನ ಆ ಪರಮ ಪದದ ಹುಡುಕಾಟವನ್ನು ನಡೆಸಬೇಕು. ಅಲ್ಲಿಗೆ ತೆರಳಿದ ನಂತರ ಸಾಧಕನು ಮರಳಿ ಈ ಪ್ರಪಂಚಕ್ಕೆ ಬರುವುದಿಲ್ಲ. ಈ ಪ್ರಪಂಚದ ವಿಸ್ತಾರವನ್ನು ಮಾಡಿರುವ ಹಾಗೂ ಪ್ರಪಂಚವೆಂಬ ವೃಕ್ಷವನ್ನು ರಚಿಸಿರುವ ಆ ಪರಮೇಶ್ವರನ ನಾಮಸ್ಮರಣೆ ಮಾಡು.

ಹಿಂದೂ ಸಮಾಜದ ಗುರುಗಳು, ಶ್ರೀ ಕೃಷ್ಣನು ಅರ್ಜುನನಿಗೆ ಗೀತೆಯನ್ನು ಬೋಧಿಸಿದ್ದಾನೆ ಎಂದು ಹೇಳಿದ್ದಾರೆ. ಕೃಷ್ಣನು ವಿಷ್ಣುವಿನ ಅವತಾರ ಅಂದರೆ ಸ್ವಯಂ ವಿಷ್ಣುವೇ. ಗೀತೆಯ 4ನೇ ಅಧ್ಯಾಯದ 5ನೇ ಶ್ಲೋಕದಲ್ಲಿ ಹೇಳಿದೆ- ಅರ್ಜುನ, ನಿನ್ನ ಮತ್ತು ನನ್ನ ಅನೇಕ ಜನ್ಮಗಳಾದವು. ನಿನಗೆ ಗೊತ್ತಿಲ್ಲ, ಆದರೆ ನನಗೆ ಗೊತ್ತು. (ಇದರಿಂದ ವಿಷ್ಣುವೂ ನಶ್ವರನಾದವನು, ಅವನಿಗೂ ಜನನ-ಮರಣವಿದೆ ಎಂದು ತಿಳಿಯುತ್ತದೆ) ದೇವಿಪುರಾಣದಲ್ಲಿ ವಿಷ್ಣು ಹೇಳಿದ್ದಾನೆ, "ನಾನು, ಬ್ರಹ್ಮಾ ಮತ್ತು

ಶಿವ ಈ ಮೂವರೂ ಹುಟ್ಟುತ್ತೇವೆ, ಸಾಯುತ್ತೇವೆ. ನಮ್ಮ ಆವಿರ್ಭಾವ ಮತ್ತು ತಿರೋಭಾವ ಆಗುತ್ತಿರುತ್ತದೆ" ಎಂದಿದ್ದಾರೆ. ಇದರಿಂದ ವಿಷ್ಣುವು ಅವಿನಾಶಿಯಲ್ಲ ಎಂದು ತಿಳಿಯುತ್ತದೆ. ಗೀತೆಯ 2ನೇ ಅಧ್ಯಾಯದ 17ನೇ ಶ್ಲೋಕ, 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಅವಿನಾಶಿ ಪರಮಾತ್ಮನು ಗೀತೆಯ ಜ್ಞಾನವನ್ನು ಕೊಟ್ಟವನಿಗಿಂತ ಬೇರೆ ಎಂದು ತಿಳಿಯುತ್ತದೆ. ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಗೀತೆಯ ಜ್ಞಾನವನ್ನು ನೀಡಿದಾತನು ಹೇಳಿದ್ದಾನೆ, "ಹೇ ಭಾರತ! ಸರ್ವಭಾವದಿಂದ ನೀನು ಪರಮೇಶ್ವರನ ಆಶ್ರಯ ಪಡೆ. ಆ ಪರಮೇಶ್ವರನ ಕೃಪೆಯಿಂದ ನೀನು ಪರಮ ಶಾಂತಿಯನ್ನು ಮತ್ತು ಸನಾತನ ಪರಮ ಧಾಮವನ್ನು ಪಡೆಯುವೆ."

ಇದರಿಂದ ತಿಳಿಯುವುದೇನೆಂದರೆ, ನಿತ್ಯಾನಂದರಿಗೆ ಗೀತೆಯಲ್ಲಿ ವರ್ಣಿಸಿರುವಂಥಾ ಪೂರ್ಣ ಮುಕ್ತಿಯು ಪ್ರಾಪ್ತವಾಗಲಿಲ್ಲ.

ಕಬೀರರು ಹೇಳಿದ್ದಾರೆ.

ಜೋ ಜಾಕಿ ಶರಣಾ ಬಸೈ, ತಾಕೋ ತಾಕೀ ಲಾಜ್ ।
ಜಲ್ ಸೌಂಹೀ ಮಛಲೀ ಚಢೇ, ಬಹ್ ಜಾತೇ ಗಜರಾಜ್ ॥

ಭಾವಾರ್ಥ:– ಭಕ್ತನು ಯಾವ ದೇವ–ದೇವತೆಯನ್ನು ಆರಾಧಿಸುತ್ತಾನೋ, ಆ ದೇವಿ–ದೇವತೆ ಆ ಭಕ್ತನ ಇಷ್ಟಾರ್ಥಗಳನ್ನು ಪೂರೈಸುತ್ತಾರೆ. ಉದಾಹರಣೆಗೆ ಒಬ್ಬ ಇನ್ಸ್‌ಪೆಕ್ಟರ್ ಜೊತೆಗೆ ಒಬ್ಬ ವ್ಯಕ್ತಿ ಗೆಳೆತನ ಬೆಳೆಸಿದರೆ ಆ ಇನ್ಸ್‌ಪೆಕ್ಟರ್ ಗೆಳೆಯ ಠಾಣೆಗೆ ಬಂದೊಡನೆ ಅವನಿಗೆ ಕುರ್ಚಿ ಕೊಟ್ಟು ಕಾಫಿ ತಿಂಡಿ ಕೊಡಿಸಿ ಸತ್ಕರಿಸುತ್ತಾನೆ. ಆದರೆ ಅಪರಿಚಿತ ವ್ಯಕ್ತಿಗೆ ಅದು ಸಾಧ್ಯವಿಲ್ಲ. ಪೊಲೀಸ್ ಸೂಪರಿಂಟೆಂಡೆಂಟ್ ಜೊತೆ ಗೆಳೆತನವಿದ್ದರೆ ಅವನಿಗೆ ಅತಿಥ್ಯ ಬೇರೆ ರೀತಿಯದೇ ಆಗುತ್ತದೆ. ಒಬ್ಬನಿಗೆ ಮುಖ್ಯಮಂತ್ರಿಯ ಜೊತೆ ಗೆಳೆತನವಿದ್ದರೆ ಅದರ ಲಾಭವೇ ಬೇರೆ. ಪ್ರಧಾನ ಮಂತ್ರಿಯ ಜೊತೆ ಗೆಳೆತನವಿದ್ದರೆ ಕೇಳುವುದೇ ಬೇಡ.

ಲೇಖಕರ (ರಾಮ್‌ಪಾಲ್ ದಾಸ್) ಅಭಿಪ್ರಾಯವೇನೆಂದರೆ, ಯಾರಾದರೂ ದೇವ–ದೇವತೆಗಳನ್ನು ಆರಾಧಿಸಿದರೆ ಲಾಭ ಖಂಡಿತ. ಆದರೆ ಪೂರ್ಣ ಪರಮಾತ್ಮನನ್ನು ಆರಾಧಿಸಿದರೆ ಸರ್ವ ಲಾಭಗಳೂ ಅವನಿಗೆ ಲಭಿಸುತ್ತದೆ. ಪ್ರಧಾನಮಂತ್ರಿಯ ಗೆಳೆತನವಿದ್ದರೆ ದೇಶದ ಎಲ್ಲಾ ಮುಖ್ಯಮಂತ್ರಿಗಳು, ಅಧಿಕಾರಿಗಳು, ನೌಕರರು ಎಲ್ಲರೂ ಅವನಿಗೆ ಸಹಕಾರ ನೀಡುತ್ತಾರೆ. ಯಾರೂ ಅವನನ್ನು ವಿರೋಧಿಸುವುದಿಲ್ಲ. ಇದೇ ರೀತಿ ಪೂರ್ಣ ಪರಮೇಶ್ವರನನ್ನು ಆರಾಧಿಸುವ ಭಕ್ತನ ಜೊತೆ ವಿಶ್ವದ ಎಲ್ಲಾ ದೇವ–ದೇವತೆಗಳು ಇರುತ್ತಾರೆ. ಅವರೆಲ್ಲಾ ಇವನಿಗೆ ಯಾವಾಗಲೂ ಸಹಾಯ ಮಾಡುತ್ತಿರುತ್ತಾರೆ. ತೊಂದರೆ ಕೊಡುವುದಿಲ್ಲ. ಯಾವುದಾದರೂ ದೆವ್ವ, ಭೂತ, ಪಿಶಾಚಿಗಳು ಭಕ್ತನನ್ನು ಸತಾಯಿಸಲು ಬಂದರೆ ದೇವ–ದೇವತೆಗಳು ಅವುಗಳನ್ನು ದೂರ ಓಡಿಸುತ್ತಾರೆ. ಹಾಗೂ ಅವುಗಳಿಗೆ ಈ ಭಕ್ತನು ಯಾರ ಆಶ್ರಯದಲ್ಲಿದ್ದಾನೆ ಎಂದು ನಿಮಗೆ ತಿಳಿದಿದೆಯೇ ಎಂದು ಪ್ರಶ್ನಿಸುತ್ತಾರೆ. ಆಗ ಆ ರಾಕ್ಷಸ ದೈತ್ಯರು ಹೆದರಿ ಯಾವುದೇ ಕೆಟ್ಟದ್ದನ್ನು ಮಾಡುವುದಿಲ್ಲ. ಯಾವುದಾದರೂ ಭೂತ, ಪ್ರೇತಗಳು ಭಕ್ತನನ್ನು ಕಾಡಿದರೆ, ಪರಮೇಶ್ವರನ ಗಣಗಳು ಅವುಗಳನ್ನು ಹಿಡಿದು ಚೆನ್ನಾಗಿ ಬಡಿದು, ಅವುಗಳನ್ನು ಬಂಧಿಸಿಡುತ್ತಾರೆ. ಪರಮಾತ್ಮ ಕಬೀರರು ಹೇಳಿದ್ದಾರೆ.

ಏಕೈ ಸಾಧ್ಯೈ ಸಬ್ ಸಧ್ಯೈ, ಸಬ್ ಸಾಧೇಂ ಸಬ್ ಜಾಯ್ ।
ಮಾಲೀ ಸೀಂಚೈ ಮೂಲ್ ಕೋ, ಫೂಲ್ಯೈ–ಫಲ್ಯೈ ಅಘಾಯ್ ॥

ಶಬ್ದಾರ್ಥ:– ಮಾವಿನಹಣ್ಣಿನ ಅಥವಾ ಬೇರೆ ಮರದ ಸಸ್ಯದ ಬೇರನ್ನು ಭೂಮಿಯಲ್ಲಿ ಗುಂಡಿ ತೋಡಿ ನೆಡುತ್ತಾರೆ. ನಂತರ ಅದಕ್ಕೆ ನೀರೆರೆಯುತ್ತಾರೆ. ಒಂದು ಬೇರನ್ನು ಪೋಷಿಸುವುದರಿಂದ

ಅಂದರೆ ಪೂಜೆ ಮಾಡುವುದರಿಂದ ಆ ಗಿಡದ ಎಲ್ಲಾ ಅಂಗಗಳು ವಿಕಸಿತವಾಗಿರುತ್ತದೆ. ಗಿಡ ಹೂವು ಹಣ್ಣುಗಳಿಂದ ತುಂಬಿ ಹೋಗುತ್ತದೆ. ಗಿಡವು ಮರವಾಗಿ ಬೆಳೆದು ನೆರಳು, ಸೌದೆ ಮತ್ತು ಹಣ್ಣುಗಳನ್ನು ನೀಡುತ್ತದೆ. ಒಂದು ವೇಳೆ ಆ ಗಿಡದ ರೆಂಬೆಗಳನ್ನು ನೆಲದಲ್ಲಿ ಗುಂಡಿ ತೋಡಿ ನೆಟ್ಟು, ಎಲ್ಲಾ ರೆಂಬೆ ಕೊಂಬೆಗಳಿಗೂ ನೀರೆರೆದರೆ ಹಾಗೂ ಬೇರಿಗೆ ನೀರನ್ನು ಹಾಕದಿದ್ದರೆ ಆಗ ಎಲ್ಲವೂ ಹಾಳಾಗಿ ಹೋಗುತ್ತದೆ. ಮಾಲಿಯು ಬೇರನ್ನು ನೆಲಕ್ಕೆ ನೆಟ್ಟು, ಅದಕ್ಕೆ ನೀರನ್ನು ಹಾಕುತ್ತಾನೆ. ಅದರಿಂದ ಲಾಭ ಪಡೆಯುತ್ತಾನೆ. ಇದೇ ರೀತಿ ತತ್ವದರ್ಶಿ ಸಂತನು ಸಂಸಾರವೆಂಬ ಗಿಡದ ಬೇರನ್ನು ಅಂದರೆ ಪರಮ ಅಕ್ಷರ ಬ್ರಹ್ಮನನ್ನು ಇಷ್ಟದೈವ ಎಂದು ಭಾವಿಸಿ ಪೂಜೆ ಮಾಡುತ್ತಾನೆ ಹಾಗೂ ಮಾಡಿಸುತ್ತಾನೆ. ಅವನು ಅದೊಂದನ್ನು ಪೂಜೆ ಮಾಡಿ ಎಲ್ಲವನ್ನೂ ಸಾಧಿಸುತ್ತಾನೆ. ಎಲ್ಲಾ ದೇವತೆಗಳು ಅದೇ ಸತ್ಯಪುರುಷನ ಆಜ್ಞೆಯನ್ನು ಪಾಲಿಸುತ್ತಾರೆ. ಸಾಧಕನ ಕಾರ್ಯವನ್ನು ಸಿದ್ಧಿಗೊಳಿಸುತ್ತಾರೆ. ಒಂದು ವೇಳೆ ಎಲ್ಲಾ ದೇವರ ಪೂಜೆ ಮಾಡಿದರೆ ಸತ್ಯಪುರುಷನ ಆಜ್ಞೆ ಇಲ್ಲದೆ ಯಾವ ದೇವತೆಯು ಅನುಕೂಲ ಮಾಡುವುದಿಲ್ಲ. ಅಂದರೆ ಸಾಧಕನ ಸಾಧನೆಯು ಶಾಸ್ತ್ರಕ್ಕೆ ವಿರುದ್ಧವಾದ ಕಾರಣ ಯಾವುದೇ ಪ್ರಯೋಜನ ಸಿಗುವುದಿಲ್ಲ.

ಆದ್ದರಿಂದ ಪೂರ್ಣ ಪರಮಾತ್ಮನನ್ನು ಆರಾಧಿಸಿ ವರ್ತಮಾನದಲ್ಲಿ ನನ್ನನ್ನು (ರಾಮ್‌ಪಾಲ್ ದಾಸ್) ಬಿಟ್ಟು ಬೇರೆ ಯಾರಿಗೂ ಸತ್ಯಜ್ಞಾನವಿಲ್ಲ. ನೀವೆಲ್ಲಾ ಬಂದು, ದೀಕ್ಷೆ ಪಡೆದು ನಿಮ್ಮ ಕುಟುಂಬದ ಉದ್ಧಾರ ಮಾಡಿಕೊಳ್ಳಿ.

## "ಮನೀರಾಮ್ ಎಂಬ ಪಂಡಿತ ಕಥಾವಾಚಕನ ಕೆಲಸ"

ಒಂದೂರಿನಲ್ಲಿ ಮನೀರಾಮ್ ಎಂಬ ಪ್ರವಚನ ಮಾಡುವವನಿದ್ದನು. ಅವನು ಹರಿಯಾಣದ ಒಂದು ಹಳ್ಳಿಯಲ್ಲಿ ರಾಮಾಯಣದ ಪ್ರವಚನ ನಡೆಸಿದನು. ರಾಮಾಯಣದ ಕತೆಯನ್ನು ಹೆಚ್ಚೆಂದರೆ 11 ದಿನಗಳಲ್ಲಿ ಹೇಳಿ ಮುಗಿಸಬಹುದಿತ್ತು. ಆದರೆ ಮನೀರಾಮನು ತುಂಬಾ ದುರಾಸೆಯುಳ್ಳವನಾಗಿದ್ದನು. ಹರಿಕತೆಯನ್ನು ಹೆಚ್ಚು ದಿನಗಳ ಕಾಲ ಎಳೆದರೆ ದಿನವೂ ಜನರು ದಾನ ದಕ್ಷಿಣೆಗಳನ್ನು ಕೊಡಬಹುದೆಂದು ಯೋಚಿಸಿ 30 ದಿನಗಳ ಕಾಲ ರಾಮಾಯಣದ ಪ್ರವಚನ ನಡೆಸಿದನು. ಕೊನೆಯದಿನ ಹಾಗೂ 30ನೇ ದಿನ ಬಹಳ ದಕ್ಷಿಣೆ ಬರಬಹುದೆಂದು ನಿರೀಕ್ಷಿಸಿದ್ದನು. ಆದರೆ ಅವನಿಗೆ ಕೇವಲ 30 ರೂ. ಸಿಕ್ಕಿತು. ಅದಕ್ಕೆ ಕಾರಣವೇನೆಂದರೆ ಅದೇ ದಿನ ಆ ಹಳ್ಳಿಯ ಇನ್ನೊಂದು ಗುಂಪು ದಿಲ್ಲಿಯಿಂದ ಚಂಪಾಕಲಿ ಎಂಬ ನೃತ್ಯಗಾರ್ತಿಯನ್ನು ಕರೆಸಿ ಹಾಡು–ಕುಣಿತ ಏರ್ಪಡಿಸಿದ್ದರು. ಅವಳಿಗೆ ಕೇವಲ 2 ಗಂಟೆಯಲ್ಲಿ 500 ರೂಪಾಯಿ ಸಂದಾಯವಾಯಿತು. ಮನೀರಾಮನ ದುಃಖಕ್ಕೆ ಪಾರವೇ ಇರಲಿಲ್ಲ. ಅವನು ಛುಡಾನಿಯಲ್ಲಿ ಪ್ರವಚನ ನಡೆಸುತ್ತಿದ್ದ ಪರಮ ಸಂತ ಗರೀಬ್‌ದಾಸರ ಬಳಿ ತೆರಳಿ ತನ್ನ ದುಃಖವನ್ನು ತೋಡಿಕೊಳ್ಳಲು ಹೋದನು. ಅಲ್ಲಿ ಸತ್ಸಂಗ ನಡೆಯುತ್ತಿತ್ತು. 15–16 ಭಕ್ತರು ಪ್ರವಚನ ಕೇಳುತ್ತಿದ್ದರು. ಸಂತ ಗರೀಬ್‌ದಾಸರಿಗೆ ವಂದಿಸಿದನು. ಗರೀಬ್‌ದಾಸರೂ ಸಹ ವಂದಿಸಿ, ಬಂದ ಕಾರಣವೇನೆಂದು ಕೇಳಿದರು. ಆಗ ಮನೀರಾಮನು, 'ಇದು ಕಲಿಗಾಲ, ಧರ್ಮವೆಲ್ಲಾ ನಾಶವಾಗಿದೆ. ಜನರಿಗೆ ಧರ್ಮ, ಶ್ರದ್ಧೆ ಹೊರಟುಹೋಗಿದೆ. ಆಕಾಶ ಭೂಮಿ ಒಂದಾಗುತ್ತಿದೆ ಅಂದರೆ ಇನ್ನೇನು ಪ್ರಳಯವಾಗಬಹುದು ಎಂದು ಗೋಳಿಟ್ಟನು. ಆಗ ಭಕ್ತರೆಲ್ಲಾ 'ಮನೀರಾಮನು ಹಾಗೇಕೆ ಹೇಳುತ್ತಿದ್ದಾನೆ ಎಂದು ಗರೀಬ್‌ದಾಸರನ್ನು ಕೇಳಿದರು. ಆಗ ಗರೀಬ್‌ದಾಸರು ಹೇಳಿದರು,

ಗರೀಬ್, ಫೂಟಿ ಆಂಖ್ ವಿವೇಕ್ ಕೀ, ಅಂಧಾ ಹೈ ಜಗದೀಶ್ ।
ಚಂಪಾಕಲೀ ಕೋ ಪಾಂಚ್ ಸೌ, ಮನೀರಾಮ್ ಕೋ ತೀಸ್ ॥

ಭಾವಾರ್ಥ:– ಜಗದೀಶ್ ಎಂಬ ವ್ಯಕ್ತಿಯು ಬೇಕಂತಲೇ ತಮಾಷೆ ಮಾಡುವ ಸಲುವಾಗಿ

ಮನೀರಾಮನಿಗೆ ದಕ್ಷಿಣೆ ಕೊಡುವ ದಿನ ಹಳ್ಳಿಯಲ್ಲಿ ಚಂಪಾಕಲಿ ಎನ್ನುವ ಹುಡುಗಿಯಿಂದ ಕುಣಿತ ಏರ್ಪಡಿಸಿದ್ದನು. ಹಾಗಾಗಿ ಮನೀರಾಮನಿಗೆ ಕೇವಲ 30 ರೂಪಾಯಿಗಳು ದೊರಕಿದವು. ಇದರಲ್ಲಿ ಮನೀರಾಮನದ್ದೂ ತಪ್ಪಿದೆ. 11 ದಿನದಲ್ಲಿ ಮುಗಿಯಬೇಕಾಗಿದ್ದ ರಾಮಾಯಣವನ್ನು ಗೊತ್ತಿದ್ದೂ 30 ದಿನಗಳವರೆಗೆ ಎಳೆದಿದ್ದನು. ಹಳ್ಳಿಯ ಕೆಲ ಹುಡುಗರು ಅವನಿಗೆ ಪಾಠ ಕಲಿಸಲು ಈ ರೀತಿ ಕುಣಿತ ಏರ್ಪಡಿಸಿದ್ದರು ಎಂದು ಹೇಳಿದರು. ಇದನ್ನು ಕೇಳಿದ ಮನೀರಾಮನಿಗೆ ಬಹಳ ಆಶ್ಚರ್ಯವಾಯಿತು. 'ಈ ದಿನವಷ್ಟೇ ಇಂಥಾ ಘಟನೆ ನಡೆದಿದೆ. ತಕ್ಷಣವೇ ನಾನು ಹೊರಟು ಇಲ್ಲಿಗೆ ಬಂದಿದ್ದೇನೆ. ಸಂತ ಗರೀಬ್‌ದಾಸರಿಗೆ ಹೇಗೆ ತಿಳಿಯಿತು? ಇವರು ನಿಜವಾಗಲೂ ಪರಮಾತ್ಮ. ಎಲ್ಲವನ್ನು ತಿಳಿದಿರುವವರು.' ಎಂದು ಚಿಂತಿಸಿ ಮನೀರಾಮನು ಎದ್ದು ಸಂತ ಗರೀಬ್‌ದಾಸರ ಕಾಲಿಗೆ ಬಿದ್ದು ಹೇಳಿದನು, "ಪ್ರಭು, ನೀವು ಹೇಳಿದ್ದು ಸತ್ಯ. ನಾನು ದುರಾಸೆಯಿಂದ ರಾಮಾಯಣವನ್ನು 30 ದಿನಗಳವರೆಗೆ ಎಳೆದೆ, ನಿಮಗೆ ಎಲ್ಲಾ ತಿಳಿದಿದೆ, ಹೇ ಪ್ರಭು! ಧರ್ಮ–ಕರ್ಮದ ಮತ್ತು ಬದುಕುವ ದಾರಿಯನ್ನು ತೋರಿಸಿ." ಎಂದನು. ಆಗ ಗರೀಬ್‌ದಾಸರು ಮನೀರಾಮನನ್ನು ಕುರಿತು ಹೀಗೆಂದರು, "ಹೇ ಮನೀರಾಮ್, ನೀವು ಪ್ರವಚನ ಮಾಡಿ ಜನರಿಂದ ಹಣ ಪಡೆಯುವಿರಿ. ಇದು ನಿಮ್ಮ ಮೇಲೆ ಸಾಲದ ಹೊರೆ ಏರುತ್ತದೆ. ಅದನ್ನು ಬಡ್ಡಿ ಸಮೇತ ತೀರಿಸಬೇಕಾಗುತ್ತದೆ. ನಿಮಗೆ ಆಧ್ಯಾತ್ಮಿಕ ಜ್ಞಾನ ಇಲ್ಲ. ಆದ್ದರಿಂದ ನಿಮಗೆ ಪ್ರವಚನ ಮಾಡುವ ಹಕ್ಕಿಲ್ಲ. ನೀವು ಜನರನ್ನು ಆಕರ್ಷಿಸಲು ಜಪಮಾಲೆ ಧರಿಸಿ ವೈಷ್ಣವ ಪಂಥವನ್ನು ಪ್ರತಿನಿಧಿಸುತ್ತಿದ್ದೀರಿ. ಒಂದು ಮಾಲೆಯು 108 ರುದ್ರಾಕ್ಷಿಗಳಿಂದ ಕೂಡಿರುತ್ತದೆ. ಅದನ್ನು ಜಪಕ್ಕಾಗಿ ಬಳಸುತ್ತಾರೆ. ಅದನ್ನು ಸಂತರು ಸ್ಮರಣೆ ಎನ್ನುತ್ತಾರೆ. ಹಣೆಯಲ್ಲಿ ತಿಲಕವಿಡುತ್ತಾರೆ, ಕಾವಿ ಬಟ್ಟೆ ತೊಡುತ್ತಾರೆ. ಎಂದರು ಗರೀಬ್ ದಾಸ್,

ಕಂಠೀ ಮಾಲಾ ಸುಮರಣೀ, ಪಹರೇ ಸೇ ಕ್ಯಾ ಹೋಯ್ ।
ಊಪರ್ ಡೂಂಡಾ ಸಾಧ್ ಕಾ, ಅಂತರ್ ರಾಖಾ ಖೋಯ್ ॥

ಭಾವಾರ್ಥ:– ಹೇ ಮನೀರಾಮ್, ಹೊರಗಿನಿಂದ ನೋಡಿದರೆ ನೀವೊಬ್ಬ ಸಂತರಂತೆ ಕಾಣುವಿರಿ. ನಿಮ್ಮ ವೇಷ ಭೂಷಣದಿಂದ ಸಾಮಾನ್ಯ ಜನರು ಮರಳಾಗುವುದರಲ್ಲಿ ಸಂಶಯವಿಲ್ಲ. ಆದರೆ ನಿಮ್ಮ ಆಂತರ್ಯ ಸಂತಗುಣಗಳಿಂದ ತುಂಬಿಲ್ಲ. ದುರಾಸೆಯಿಂದ ನಿಮ್ಮ ಅಂತಃಕರಣ ಮಲಿನವಾಗಿದೆ. ಹೀಗಾಗಿ ಜಪಮಾಲೆ ಕೊರಳಲ್ಲಿ ಧರಿಸಿ, ಹಣೆಗೆ ತಿಲಕವಿಟ್ಟು, ಕಾವಿ ಬಟ್ಟೆಯನ್ನು ತೊಡುವುದರಿಂದ ಸಂತರಾಗುವುದಿಲ್ಲ. ಪೂರ್ಣ ಸದ್ಗುರುವಿನಿಂದ ದೀಕ್ಷೆ ಪಡೆದು, ಜೀವನ ಪರ್ಯಂತ ಸಾಧನೆ ಮಾಡಿದಾಗ ಕಲ್ಯಾಣವಾಗುವುದು. ಮನಸ್ಸಿನಲ್ಲಿ ಮಲಿನವಿಟ್ಟುಕೊಂಡು ಪ್ರವಚನ ಮಾಡುವ ಹಕ್ಕು ನಿಮಗಿಲ್ಲ, ನಿಮ್ಮ ಪೂರ್ವಜರು ಬಹಳ ವಿದ್ವಾಂಸರಾಗಿದ್ದರು. ವಾಸ್ತವವಾಗಿ ಅವರು ಪಂಡಿತರಾಗಿದ್ದರು. ಅವರು ಎಂದಿಗೂ ಇಂಥಾ ತಪ್ಪನ್ನು ಮಾಡುತ್ತಿರಲಿಲ್ಲ" ಎಂದು ಹೇಳುತ್ತಾ ಒಂದು ಉದಾಹರಣೆ ಮನೀರಾಮನ ಮುಂದಿಟ್ಟರು.

## "ಪರೀಕ್ಷಿತ ರಾಜನ ಉದ್ಧಾರ"

ಋಷಿಯ ಶಾಪದಿಂದ ಪರೀಕ್ಷಿತ ರಾಜನು ತಕ್ಷಕವೆಂಬ ಸರ್ಪದ ಕಡಿತವನ್ನು ಅನುಭವಿಸಲೇ ಬೇಕಾಗಿತ್ತು. ಪರೀಕ್ಷಿತ ರಾಜನ ಉದ್ಧಾರಕ್ಕಾಗಿ ಶ್ರೀಮದ್‌ಭಾಗವತದ ಕತೆ ಅವನಿಗೆ ತಿಳಿಸಿ ಹೇಳಬೇಕಿತ್ತು. ಪ್ರಪಂಚದಲ್ಲಿರುವ ಋಷಿಗಳು ಮತ್ತು ಪಂಡಿತರನ್ನು ಭಾಗವತದ ಕಥೆ ಹೇಳುವಂತೆ ಪ್ರಾರ್ಥಿಸಲಾಯಿತು. ವಾಸ್ತವವಾಗಿ ಅವರೆಲ್ಲಾ ಪಂಡಿತರಾಗಿದ್ದರು. ಅವರು ಪರಮಾತ್ಮನ ನಿಯಮವನ್ನು ಅರಿತವರಾಗಿದ್ದರು. 7ನೇ ದಿನ ಏನಾಗಬಹುದು ಎಂದು ಅವರಿಗೆ ಗೊತ್ತಿತ್ತು. ವಿಶ್ವದ ಬುದ್ಧಿಜೀವಿಗಳ ದೃಷ್ಟಿಯೆಲ್ಲಾ ಆ 7ನೇ ದಿನದ ಮೇಲೆ ನೆಟ್ಟಿತ್ತು. ಯಾವ ಋಷಿಮುನಿಯೂ ಭಾಗವತದ ಪ್ರವಚನ ಮಾಡಲು ಒಪ್ಪಿಕೊಳ್ಳಲಿಲ್ಲ.

ಯಾವುದೇ ಮನುಷ್ಯನ ಜೀವನದ ಜೊತೆ ಚೆಲ್ಲಾಟವಾಡಿ ಪಾಪವನ್ನು ಕಟ್ಟಿಕೊಳ್ಳಲು ಅವರು ಸಿದ್ಧರಿರಲಿಲ್ಲ. ಶ್ರೀಮದ್‌ಭಾಗವತವನ್ನು ರಚಿಸಿದ್ದ ಸ್ವಯಂ ವೇದವ್ಯಾಸರೂ ಸಹ ಆ ಕತೆಯನ್ನು ಹೇಳಲು ತಿರಸ್ಕರಿಸಿದರು. ಆಗ ಎಲ್ಲಾ ಋಷಿಗಳು ಸೇರಿ ಸ್ವರ್ಗದಿಂದ ಸುಖದೇವನನ್ನು ಕರೆಸಿ ಕತೆ ಹೇಳುವಂತೆ ಪ್ರಾರ್ಥಿಸಬೇಕೆಂದು ಒಮ್ಮತದಿಂದ ಒಪ್ಪಿದರು. ಅವರಿಗೆ ಮಾತ್ರ ಕತೆ ಹೇಳುವ ಹಕ್ಕಿದೆ ಎಂದು ನಿರ್ಧರಿಸಿ ಸುಖದೇವನನ್ನು ಸ್ವರ್ಗದಿಂದ ಕರೆಸಲಾಯಿತು. ಆಗ ಯುದಿಷ್ಠಿರನು ಕೊಂಚ ನರಕವನ್ನು ಅನುಭವಿಸಿ ಸ್ವರ್ಗದಲ್ಲಿ ವಾಸವಾಗಿದ್ದನು. ತನ್ನ ವಂಶದ ಮೋಹಕ್ಕೆ ಬಿದ್ದು ಅರ್ಜುನನ ಮೊಮ್ಮಗನಾದ ಪರೀಕ್ಷಿತನನ್ನು ಉಳಿಸಲು ಸ್ವಲ್ಪ ಪುಣ್ಯವನ್ನು ಶುಕದೇವನಿಗೆ ದಾನ ಮಾಡಿದನು. ಆ ಪುಣ್ಯದ ಫಲದಿಂದ ಸುಖದೇವನು ವಿಮಾನದಲ್ಲಿ ಕುಳಿತು ಭಾಗವತದ ಕತೆ ಹೇಳಲು ಭೂಮಿಗೆ ಬಂದನು. 7ದಿನದ ಕತೆ ಹೇಳಿ ಪರೀಕ್ಷಿತ ರಾಜನ ರಾಜ್ಯದ ಮತ್ತು ಕುಟುಂಬದ ಮೋಹವನ್ನು ದೂರ ಮಾಡಿದನು. ತಕ್ಷಕ ಸರ್ಪವು ಪರೀಕ್ಷಿತನನ್ನು ಕಚ್ಚಿತು. ತಕ್ಷಣವೇ ರಾಜನು ಸಾವನ್ನಪ್ಪಿದನು. ಆದರೆ ಭಾಗವತದ ಕತೆ ಕೇಳಿದ ಪರೀಕ್ಷಿತನ ಗಮನವು ಪ್ರಪಂಚದಿಂದ ಸರಿದು ಸ್ವರ್ಗದ ಸುಖದಲ್ಲಿ ಲೀನವಾಯಿತು. ರಾಜನಾಗಿದ್ದಾಗ ಪರೀಕ್ಷಿತನು ದೊಡ್ಡ ದೊಡ್ಡ ಹೋಮ ಹವನಗಳನ್ನು ಮಾಡಿದ್ದನು. ಅದ್ದರಿಂದ ಅವನಿಗೆ ಪುಣ್ಯದ ಮೂಟೆಯೇ ಲಭಿಸಿತ್ತು. ಪರಮಾತ್ಮನು ತನ್ನ ನಿಯಮವನ್ನು ಹೀಗೆ ಹೇಳಿದ್ದಾನೆ:–

ಕಬೀರ್, ಜಹಾಂ ಆಶಾ ತಹಾಂ ಬಾಸಾ ಹೋಯಿ ।
ಮನ್ ಕರ್ಮ್ ವಚನ್ ಸುಮರಿಯೋ ಸೋಯೀ ॥

ಶಬ್ದಾರ್ಥ:– ಗೀತೆಯ **8**ನೇ ಅಧ್ಯಾಯದ **6**ನೇ ಶ್ಲೋಕದಲ್ಲಿ ಬರೆದಿದೆ, **"ಹೇ ಭಾರತ!** ಅಂತ್ಯಸಮಯದಲ್ಲಿ ಯಾವ ಭಾವನೆ ಹೊಂದಿರುತ್ತೀಯೋ ಅಂದರೆ ಯಾವುದರಲ್ಲಿ ಆಸಕ್ತಿ ಹೊಂದಿರುತ್ತೀಯೋ ಅವನು ಅದನ್ನೇ ಪಡೆಯುವನು". ಅದೇ ನಿಯಮದಂತೆ ರಾಜ ಪರೀಕ್ಷಿತನ ಜೀವವು ಸ್ಥೂಲ ಶರೀರವನ್ನು ತ್ಯಜಿಸಿ (ಸರ್ಪದ ವಿಷದಿಂದ ಸತ್ತು ಹೋಯಿತು) ಸೂಕ್ಷ್ಮ ಶರೀರವು ಸುಖದೇವನ ಜೊತೆ ವಿಮಾನದಲ್ಲಿ ಕುಳಿತು ಸ್ವರ್ಗಕ್ಕೆ ಹೊರಟು ಹೋಯಿತು.

ಸಂತ ಗರೀಬ್‌ದಾಸರು (ಛುಡಾನಿ ಹಳ್ಳಿ–ಝುಜ್ಜರ್ ಜಿಲ್ಲೆ) ಮನೀರಾಮನಿಗೆ, ಸುಖದೇವನ ಮೂಲಕ ಹೇಳಲ್ಪಟ್ಟ ಕತೆಯಿಂದ ರಾಜ ಪರೀಕ್ಷಿತನ ಮನಸ್ಸು ಪ್ರಪಂಚದಿಂದ ವಿಮುಖವಾಗಿ ಮೋಕ್ಷಪ್ರಾಪ್ತಿಗಾಗಿ ಪ್ರೇರೇಪಣೆಗೊಂಡಿತು. ಅವನು ಬದುಕಿರುವಾಗ ಮಾಡಿದ ಪುಣ್ಯದ ಫಲದಿಂದ ಅವನ ಆತ್ಮವು ನೇರವಾಗಿ ಸ್ವರ್ಗಕ್ಕೆ ಹೋಗಿ ತಲುಪಿತು. ಜನನ–ಮರಣದ ಚಕ್ರವು ಇನ್ನೂ ಬಾಕಿ ಇತ್ತು. ಕಾಲಬ್ರಹ್ಮನ ಲೋಕದಲ್ಲಿ ಸ್ವರ್ಗ–ಮಹಾಸ್ವರ್ಗ (ಬ್ರಹ್ಮಲೋಕ) ಪ್ರಾಪ್ತಿಯನ್ನೇ ಉದ್ಧಾರ ಎಂದು ಭಾವಿಸುತ್ತಿದ್ದನು. ಕಾಲಬ್ರಹ್ಮನ ಲೋಕದ ಉದ್ಧಾರವೂ ಭೂಮಿಯ ಯಾವುದೇ ಋಷಿಯ ಅಥವಾ ಪಂಡಿತನ ಕೈಯ್ಯಲ್ಲಿಲ್ಲ. ಏಕೆಂದರೆ ಅವರೆಲ್ಲಾ ಪ್ರವಚನ ಅಥವಾ ಸತ್ಸಂಗ ನಡೆಸುವುದು ಬರೀ ಆಡಂಬರಕ್ಕೆ ಮತ್ತು ತಮ್ಮ ದೊಡ್ಡತನವನ್ನು ತೋರಿಸಿಕೊಳ್ಳಲು ಮಾತ್ರ. ಒಬ್ಬ ಇನ್ನೊಬ್ಬ ಋಷಿಯ ಬಗ್ಗೆ ಹೊಟ್ಟೆಕಿಚ್ಚು ಪಡುವುದು ವಾಡಿಕೆ. ಸುಖದೇವನು ಸಂತನಾದ ಜನಕನ ಶಿಷ್ಯನಾಗಿದ್ದನು. ಜನಕರಾಜನಿಗೆ ಪೂರ್ಣ ಪರಮಾತ್ಮನಾದ ಕಬೀರರು ಸಿಕ್ಕಿದ್ದರು. ಅವರಿಗೆ 'ಸೋಹಂ' ಎಂಬ ಮಂತ್ರ ದೀಕ್ಷೆ ಕೊಟ್ಟಿದ್ದರು. ಜನಕರಾಜನ ಪ್ರೀತಿಪಾತ್ರನಾದ ಶಿಷ್ಯನು ಸುಖದೇವನೇ ಆಗಿದ್ದನು. ಜನಕನು ಕೇವಲ ಸುಖದೇವನಿಗೆ ಈ ಮಂತ್ರವನ್ನು ಉಪದೇಶಿಸಿದ್ದನು. ಆದ್ದರಿಂದ ಸುಖದೇವನ ಸ್ವರ್ಗದ ಸಮಯ ಅಧಿಕವಿತ್ತು. ಕಾಲದೇವನು ರಾಜ ಜನಕನಿಗೆ ಮೋಸ ಮಾಡಿದನು. ಏಕೆಂದರೆ ಜನಕನು ತನ್ನ ಅರ್ಧ ಪುಣ್ಯವನ್ನು ನರಕವನ್ನು ಅನುಭವಿಸುತ್ತಿದ್ದ **12** ಕೋಟಿ ಜೀವಿಗಳಿಗೆ ಹಂಚಿದ್ದನು. ಆದ್ದರಿಂದ ಅವನ ಸ್ವರ್ಗದ ಸಮಯ ಕಡಿಮೆ ಇತ್ತು. ಆದ್ದರಿಂದ **1469** ನೇ ಇಸವಿಯಲ್ಲಿ ಪಂಜಾಬ್ ಪ್ರಾಂತ್ಯದಲ್ಲಿ (ಭಾರತದಲ್ಲಿ) ಕಲೂರಾಮ್

ಮೆಹತಾ (ಖತ್ರಿ–ಅರೋಡಾ) ಎನ್ನುವವರ ಮನೆಯಲ್ಲಿ ನಾನಕ್ ಎಂಬ ಹೆಸರಿನಲ್ಲಿ ಹುಟ್ಟಿದನು. ವರ್ತಮಾನದಲ್ಲಿ ಇದು ಪಾಕಿಸ್ತಾನದಲ್ಲಿದೆ. ಸುಖದೇವನಿಗೆ ಭೂಮಿಯ ಮೇಲೆ ಯಾವುದೇ ಮೋಹ, ಸ್ವಾರ್ಥ, ದೊಡ್ಡತನದ ಇಚ್ಛೆ ಇರಲಿಲ್ಲ. ಸುಖದೇವನು ಹೇಳಿದ ಕತೆಯು ಪರೀಕ್ಷಿತನ ಮನಸ್ಸಿನ ಮೇಲೆ ಪ್ರಭಾವ ಬೀರಿತು. ಹಾಗಾಗಿ ಅವನಿಗೆ ಸ್ವರ್ಗವಾಸ ಸಿಕ್ಕಿತು. ಸುಖದೇವನಲ್ಲದೆ ಬೇರೆ ಋಷಿಗಳು ಕತೆ ಹೇಳಿದ್ದಿದ್ದರೆ ಪರೀಕ್ಷಿತನ ಮನಸ್ಸು ಸಾಂಸಾರಿಕ ಭೋಗದಲ್ಲೇ ಉಳಿಯುತ್ತಿತ್ತು. ಪುನಃ ಭೂಮಿಯ ಮೇಲೆ ಹುಟ್ಟಿ, ರಾಜನಾಗಿ ತಾನು ಸಂಪಾದಿಸಿದ ಪುಣ್ಯವನ್ನು ಕಳೆದುಕೊಳ್ಳುತ್ತಿದ್ದನು. ಸಂತ ಗರೀಬ್‌ದಾಸರು ಮುನೀರಾಮುನಿಗೆ, "ಎಲ್ಲಿಯವರೆಗೆ ಜೀವದ ಜನನ–ಮರಣ ಅಂತ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಅವನಿಗೆ ಪರಮ ಶಾಂತಿ ಸಿಗುವುದಿಲ್ಲ" ಎಂದು ಹೇಳಿದರು.

ಸಂತ ಗರೀಬ್‌ದಾಸರು ಹೇಳಿದರು, ಅವನು ರಾಜನಾಗಿ ಹುಟ್ಟಿದರೆ ರಾಜ್ಯದ ಲಾಭ–ನಷ್ಟದ ಬೆಂಕಿಯಲ್ಲಿ ಬೇಯುತ್ತಾನೆ. ಧನಿಕನು ಬಡವನಾಗಿ ಕಷ್ಟ ಪಡುತ್ತಾನೆ. ಪಶು ಪಕ್ಷಿಗಳಾಗಿ ಹುಟ್ಟಿ ನರಳುತ್ತಾರೆ. ನೀವು ಶ್ರೀ ವಿಷ್ಣು ಅಂದರೆ ಶ್ರೀ ಕೃಷ್ಣನ ಭಕ್ತರು. (ವೈಷ್ಣವ ಸಾಧುಗಳು ವಿಷ್ಣುವನ್ನು ತಮ್ಮಿಷ್ಟದ ರೂಪದಲ್ಲಿ ನೋಡುತ್ತಾರೆ) ಶ್ರೀಮದ್ ಭಾಗವತದ ಜ್ಞಾನವನ್ನು ಶ್ರೀಕೃಷ್ಣನು ಅರ್ಜುನನಿಗೆ ಹೇಳಿದ್ದಾನೆ ಎನ್ನುವುದನ್ನು ನೀವು ನಂಬುತ್ತೀರಾ?. ಗೀತೆಯ ಜ್ಞಾನವನ್ನು ತಿಳಿಸಿದಾತನು ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ನನಗಿಂತ ಬೇರೆ ಪರಮೇಶ್ವರನಿದ್ದಾನೆ ಎಂಬುದಾಗಿ ಹೇಳಿದ್ದಾನೆ. ಹೇ ಭಾರತ! ನೀನು ಸರ್ವಭಾವದಿಂದ ಪರಮೇಶ್ವರನ ಆಶ್ರಯ ಪಡೆ. ಆ ಪರಮೇಶ್ವರನ ಕೃಪೆಯಿಂದ ನೀನು ಪರಮ ಶಾಂತಿಯನ್ನು ಮತ್ತು ಸನಾತನ ಪರಮ ಧಾಮವನ್ನು (ಸತ್ಯಲೋಕ) ಸೇರಿಕೊಳ್ಳುವೆ.

❖ ಗೀತೆಯ 8ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ಅರ್ಜುನನು ಕೃಷ್ಣನನ್ನು ಪ್ರಶ್ನಿಸುತ್ತಾನೆ, 7ನೇ ಅಧ್ಯಾಯದ 29ನೇ ಶ್ಲೋಕದಲ್ಲಿ "ತತ್ ಬ್ರಹ್ಮನ ಬಗ್ಗೆ ಹೇಳಲಾಗಿದೆ. ಈ ತತ್ ಬ್ರಹ್ಮ ಯಾರು?" ಆಗ ಗೀತೆಯ ಜ್ಞಾನದಾತನು ಇದರ ಉತ್ತರವಾಗಿ 8ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಹೇಳುತ್ತಾನೆ, "ಅವನು ಪರಮ ಅಕ್ಷರ ಬ್ರಹ್ಮ".

ಗೀತೆಯ 8ನೇ ಅಧ್ಯಾಯದ 5 ಮತ್ತು 7ನೇ ಶ್ಲೋಕದಲ್ಲಿ ಕೃಷ್ಣನು ತನ್ನನ್ನು ಆರಾಧಿಸುವಂತೆ ಹೇಳಿದ್ದಾನೆ. ಅದರಿಂದ ತಾನು ಸಿಗುವೆನೆಂದು ಹಾಗೂ 8ನೇ ಅಧ್ಯಾಯದ 8, 9, 10ನೇ ಶ್ಲೋಕದಲ್ಲಿ ಅನ್ಯ ಪರಮ ಅಕ್ಷರ ಬ್ರಹ್ಮನನ್ನು ಆರಾಧಿಸುವುದರಿಂದ ಪರಮ ಪದವು ಪ್ರಾಪ್ತಿಯಾಗುವುದೆಂದು ಹೇಳಿದ್ದಾನೆ.

ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ. 4ನೇ ಅಧ್ಯಾಯದ 5ನೇ ಶ್ಲೋಕ, 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಹೇಳಿದ್ದಾನೆ, "ಹೇ ಅರ್ಜುನ, ನಿನ್ನ ಮತ್ತು ನನ್ನ ಅನೇಕ ಜನ್ಮಗಳಾಗಿವೆ, ಮುಂದೆಯೂ ಆಗುತ್ತದೆ".

ಗೀತೆಯ 7ನೇ ಅಧ್ಯಾಯದ 29ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿದ್ದಾನೆ, "ಯಾವ ಸಾಧಕನು ಮುದಿತನ ಮತ್ತು ಸಾವಿ (ಮೃತ್ಯು)ನಿಂದ ಬಿಡುಗಡೆ ಅಂದರೆ ಮೋಕ್ಷಪ್ರಾಪ್ತಿಗಾಗಿ ಪ್ರಯತ್ನಶೀಲನಾಗಿರುತ್ತಾನೋ, (ಮೃತ್ಯು ಲೋಕದ ರಾಜ್ಯ ಮತ್ತು ಸ್ವರ್ಗ ಮಹಾಸ್ವರ್ಗವನ್ನು ಇಚ್ಛಿಸುವುದಿಲ್ಲ) ಅವನು ತತ್ ಬ್ರಹ್ಮನನ್ನು ಸಂಪೂರ್ಣ ಆಧ್ಯಾತ್ಮವನ್ನು ಮತ್ತು ಎಲ್ಲಾ ಕರ್ಮಗಳನ್ನು ಬಲ್ಲವನಾಗಿರುತ್ತಾನೆ".

ಗೀತೆಯ 2ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಅವಿನಾಶಿ ಪರಮಾತ್ಮನು ಹೇಳಿದ್ದಾನೆ ಹಾಗೂ 15ನೇ ಅಧ್ಯಾಯದ 16–17ನೇ ಶ್ಲೋಕದಲ್ಲಿ ಮೂರು ಪುರುಷರನ್ನು (ಪ್ರಭು) ಹೇಳಲಾಗಿದೆ. ಶ್ಲೋಕ 16ರಲ್ಲಿ ಕ್ಷರ ಪುರುಷ ಮತ್ತು ಅಕ್ಷರ ಪುರುಷನು ಯಾರು ಎಂಬ ವರ್ಣನೆ, ಇಬ್ಬರೂ ನಾಶವಾಗುವವರು ಎಂದು ಹೇಳಿದ್ದಾರೆ. ನಂತರ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಅವಿನಾಶಿ ಪರಮ ಅಕ್ಷರ

ಬ್ರಹ್ಮನ ಬಗ್ಗೆ ಬರೆಯಲಾಗಿದೆ ಅವನನ್ನು ಉತ್ತಮ ಪುರುಷ ಅಂದರೆ ಸರ್ವಶ್ರೇಷ್ಠ ಪರಮಾತ್ಮ ಎಂದು ಹೇಳಲಾಗಿದೆ. ಯಾರು ಅವಿನಾಶಿಯೋ ಅವನೇ ಮೂರೂ ಲೋಕವನ್ನು ಪಾಲಿಸುತ್ತಾನೆ ವಾಸ್ತವವಾಗಿ ಅವಿನಾಶಿ. ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಗೀತಾಜ್ಞಾನವನ್ನು ನೀಡುವಾತನು ಸ್ಪಷ್ಟಪಡಿಸಿದ್ದಾನೆ, ತತ್ವದರ್ಶಿ ಸಂತನು ಸಿಕ್ಕ ನಂತರ ಪರಮೇಶ್ವರನ ಪರಮ ಪದದ ಆವಿಷ್ಕಾರ ಮಾಡಬೇಕು. ಅಲ್ಲಿಗೆ ಹೋದ ನಂತರ ಸಾಧಕನು ವಾಪಸ್ಸು ಬರುವುದಿಲ್ಲ. ಪ್ರಪಂಚವೆಂಬ ವೃಕ್ಷದ ಗುಣವಿಸ್ತಾರವನ್ನು ಪಡೆದ ಅಂದರೆ ಯಾವ ಪರಮಾತ್ಮನು ವಿಶ್ವವನ್ನು ಸೃಷ್ಟಿಸಿದ್ದಾನೋ ಆ ಪರಮಾತ್ಮನ ಭಕ್ತಿ ಮಾಡಬೇಕು (ಗೀತೆಯ ಉಲ್ಲೇಖ ಮುಕ್ತಾಯ)

ಸಂತ ಗರೀಬ್‌ದಾಸರು ಮನೀರಾಮನಿಗೆ ಹೀಗೆಂದರು, "ಪರಮ ಅಕ್ಷರಬ್ರಹ್ಮ ಅಂದರೆ ತತ್ ಬ್ರಹ್ಮನ ಭಕ್ತಿ ನನ್ನ (ಸಂತ ಗರೀಬ್‌ದಾಸನ) ಬಳಿ ಇದೆ. ನಿಮಗೆ ಪೂರ್ಣ ಮೋಕ್ಷ ಪ್ರಾಪ್ತಿಯಾಗಬೇಕಿದ್ದರೆ ದೀಕ್ಷೆ ಪಡೆಯಿರಿ ಮತ್ತು ಸಾಧನೆ ಮಾಡಿ". ಮನೀರಾಮನಿಗೆ ಗೀತೆಯ ಶ್ಲೋಕಗಳೆಲ್ಲಾ ಕಂಠಪಾಠವಾಗಿತ್ತು. ಹಾಗಾಗಿ ತಕ್ಷಣವೇ ದೀಕ್ಷೆ ಪಡೆದು ಪ್ರಪಂಚ ತೊರೆದು ಕಲ್ಯಾಣ ಹೊಂದಿದನು.

## "ಪಂಡಿತನ ಪರಿಭಾಷೆ"

ವಿದ್ವಾಂಸರನ್ನು ಪಂಡಿತರೆಂದು ಕರೆಯುತ್ತಾರೆ. ನನ್ನ ಗುರುಗಳು ಬ್ರಾಹ್ಮಣ ಜಾತಿಯಲ್ಲಿ ಹರಿಯಾಣ ಪ್ರಾಂತ್ಯದ ಭಿವಾನಿ ಜಿಲ್ಲೆಯ ದಾದರಿ ಎನ್ನುವ ಹೋಬಳಿಯ ದೊಡ್ಡ ಪೈಂತಾವಾಸ್ ಎನ್ನುವ ಹಳ್ಳಿಯಲ್ಲಿ ಹುಟ್ಟಿದ್ದರು. ಅವರು ತಮ್ಮನ್ನು ತಾವು ಎಂದಿಗೂ ಪಂಡಿತರೆಂದು ಹೇಳಿಕೊಳ್ಳುತ್ತಿರಲಿಲ್ಲ.

ನನ್ನ ತಾತ ಗುರುಗಳು (ನನ್ನ ಗುರುಗಳ ಗುರುಗಳು) ಅವರು ದೆಹಲಿಯಲ್ಲಿ ನಜಫ್‌ಗಢ್ ಹತ್ತಿರ ಛಾವಲಾ ಎಂಬ ಹಳ್ಳಿಯಲ್ಲಿ ಜಾಟ್ ಜಾತಿಯಲ್ಲಿ ಜನಿಸಿದ್ದರು. ಚಿಕ್ಕವಯಸ್ಸಿನಲ್ಲೇ ಅವರು ಸಂತ ಗಂಗೇಶ್ವರಾನಂದರ ಸತ್ಸಂಗದಿಂದ ಪ್ರಭಾವಿತರಾಗಿ ಅವರ ಜೊತೆ ಹರಿದ್ವಾರಕ್ಕೆ ಹೊರಟು ಹೋಗಿದ್ದರು. ಗಂಗೇಶ್ವರಾನಂದರು ಅವರನ್ನು ಕಾಶಿಯ ವಿದ್ಯಾಪೀಠದಲ್ಲಿ ವಿದ್ಯಾಭ್ಯಾಸ ಮಾಡಲು ಕಳುಹಿಸಿದರು. ಅವರು ಬಹಳ ಚುರುಕು ಬುದ್ಧಿಯುಳ್ಳವರಾಗಿದ್ದರು. ನಾಲ್ಕು ವಿಷಯಗಳಲ್ಲಿ ಆಚಾರ್ಯ ಪದವಿ ಗಳಿಸಿದರು. ಜಾಟ ಜಾತಿಯವರಾಗಿದ್ದರೂ ಸಹ ಅವರು ಪಂಡಿತ ಚಿದಾನಂದ ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದರು. ಹರಿಯಾಣದ ಸೋನಿಪತ್ ಜಿಲ್ಲೆಯ, ಖರಖೋದಾ ತಾಲೂಕಿನ, ಗೋಪಾಲಪುರ ಎಂಬಲ್ಲಿ ಅವರ ಆಶ್ರಮವಿದೆ. ಆ ಆಶ್ರಮದ ಹೆಸರು ಪಂಡಿತ ಚಿದಾನಂದರ ಆಶ್ರಮ, ಗೋಪಾಲಪುರ. ಬ್ರಾಹ್ಮಣ ಭಕ್ತರು ತಪ್ಪು ತಿಳಿಯಬೇಡಿ. ಪಂಡಿತರ ಪರಿಭಾಷೆ ಮಾಡುವುದು ಅನಿವಾರ್ಯವಾಗಿತ್ತು ಹಾಗಾಗಿ ಹೇಳಿದೆ.

## "ಸುದಾಮರು ಪಂಡಿತರಾಗಿದ್ದರು"

ಸುದಾಮನು ಬ್ರಾಹ್ಮಣ ಕುಲದಲ್ಲಿ ಹುಟ್ಟಿದ್ದನು. ಬಡತನ ಉತ್ತುಂಗ ಸ್ಥಿತಿಯಲ್ಲಿತ್ತು. ಅವನ ಮಕ್ಕಳು ರಾತ್ರಿಯ ವೇಳೆ ಹಸಿವಿನಿಂದ ಕಂಗೆಟ್ಟು ಹಾಗೆಯೇ ಮಲಗುತ್ತಿದ್ದರು. ಸುದಾಮ ಹಾಗೂ ದ್ವಾರಕೆಯ ರಾಜನಾದ ಕೃಷ್ಣನಲ್ಲಿ ಅಗಾಧವಾದ ಸ್ನೇಹವಿತ್ತು. ಹಾಗಾಗಿ ಸುದಾಮನ ಹೆಂಡತಿ ದ್ವಾರಕೆಗೆ ಹೋಗಿ ಕೃಷ್ಣನ ಬಳಿ ಹಣ ಕೇಳಿ ಪಡೆದುಕೊಂಡು ಬರುವಂತೆ ಪೀಡಿಸುತ್ತಿದ್ದಳು. ಆದರೆ ಸುದಾಮನು, "ಪಂಡಿತರ ಕೆಲಸ ಬೇಡುವ ಕೆಲಸವಲ್ಲ, ಬದಲಾಗಿ ಪರಮಾತ್ಮ ನಡೆಸಿದಂತೆ ನಡೆಯುವುದೇ ಧರ್ಮ" ಎಂದು ಹೇಳುತ್ತಿದ್ದನು. ಗರೀಬ್‌ದಾಸ್‌ರು ಹೇಳಿದ್ದಾರೆ.

ಗರೀಬ್, ನಟ್, ಪೇರಣಾ ಕಾಂಜರ್ ಸಾಂಸೀ, ಮಾಂಗತ್ ಹೈಂ ಭಠಿಯಾರೇ ।<br>
ಜಿನಕೀ ಭಕ್ತಿ ಮೆಂ ಲೌ ಲಾಗೀ, ವೋ ಮೋತೀ ದೇತ್ ಉಧಾರೇ ॥<br>
ಗರೀಬ್, ಜೋ ಮಾಂಗೈ ಸೋ ಭಡೂವಾ ಕಹಿಎ, ದರ್-ದರ್ ಫಿರೈ ಅಜ್ಞಾನೀ ।

ಜೋಗೀ ಜೋಗ್ ಸಂಪೂರ್ಣ್ ಜಾಕಾ, ಮಾಂಗ್ ನಾ ಪೀವೈ ಪಾನೀ ॥

ಶಬ್ದಾರ್ಥ :– ದೊಂಬರಾಟದಲ್ಲಿ ಜನರ ಮುಂದೆ ಒಂದು ಆಟ ಆಡಲಾಗುತ್ತದೆ. ಹೇಗೆಂದರೆ ಉದ್ದವಾದ ಬಿದಿರಿನ ಗಳುವನ್ನು ನೆಲದಲ್ಲಿ ನೆಡದೆ ಅದರ ಮೇಲೆ ಹತ್ತುತ್ತಾರೆ. ಅದು ತುಂಬಾ ಅಪೂರ್ವವಾದ ಹಾಗೂ ಶಿಷ್ಟದ ಕೆಲಸ. ಈ ಆಟವನ್ನು ಆಡಿದ ನಂತರ ಕೈಯ್ಯಲ್ಲಿ ಒಂದು ಬಟ್ಟಲನ್ನು ಹಿಡಿದು ಆಟವನ್ನು ನೋಡಿದ ಗುಂಪಿನ ಬಳಿ ಹೋಗಿ ಹಣವನ್ನು ಬೇಡುತ್ತಾರೆ. ಅದೇ ಪ್ರಕಾರ ಬೇರೆ ಜಾತಿಯ ಜನರು ಸಹ ತಮ್ಮ ತಮ್ಮ ಜಾತಿಗೆ ಬಂದ ಆಟಗಳನ್ನು ತೋರಿಸಿ ಗೋಧಿ, ನವಣೆ, ಅಕ್ಕಿ ಮುಂತಾದವುಗಳನ್ನು ಬೇಡುತ್ತಾರೆ. ಯೋಗಿ ಅಂದರೆ ಸಾಧಕನು ಇಂಥಾ ಸಿದ್ಧಿಗಳನ್ನು ಪ್ರದರ್ಶಿಸಿ ಹಣವನ್ನೋ, ಬೇರೆ ಪದಾರ್ಥಗಳನ್ನೋ ಸಂಗ್ರಹಿಸುತ್ತಾನೆಂದರೆ ಅದು ಅವನ ಸತ್ಯ ಸಾಧನೆಯಾಗುವುದಿಲ್ಲ. ಸತ್ಯ ಸಾಧಕನಾದರೆ ಅವನು ಶಿಷ್ಯರಿಗೆ ಆಶೀರ್ವಾದವೆಂಬ ಮುತ್ತನ್ನು ನೀಡಿ ಅವರನ್ನು ಧನಿಕರನ್ನಾಗಿ ಮಾಡುತ್ತಾನೆ. ಅದು ಸಾಧಕನ ಭಾಗ್ಯದಲ್ಲಿ ತನ್ನ ಕಡೆಯಿಂದ ಕೊಟ್ಟ ಸಾಲದ ರೂಪದಲ್ಲಿರುತ್ತದೆ. ಸಾಧಕರು ಮನೆ ಮನೆಗೆ ತೆರಳಿ ಬೇಡುತ್ತಾರೆಂದರೆ ಅವರು ನಿಜವಾಗಲೂ ಅಜ್ಞಾನಿಗಳು. ಅವರ ಬಳಿ ಶಾಸ್ತ್ರಾನುಸಾರವಾದ ಸಾಧನೆ ಖಂಡಿತವಾಗಿಯೂ ಇಲ್ಲ. ಅವನು ಸಂತನಲ್ಲ, ಅಂದರೆ ನಾಚಿಕೆಗೆಟ್ಟವನು ಎಂದರ್ಥ. ಯೋಗಿ ಎಂದರೆ ಸಾಧಕನ ಭಕ್ತಿಯು ಸಂಪೂರ್ಣವಾಗಿ ಅವನದ್ದೆ ಆಗಿರುತ್ತದೆ. ಅವನು ಯಾರ ಬಳಿಯೂ ಏನನ್ನೂ ಬೇಡುವುದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ ನಿಜವಾದ ಸಾಧಕನಾದವನು ವಸ್ತುಗಳನ್ನು ಬಿಡಿ, ನೀರನ್ನೂ ಸಹ ಬೇಡುವುದಿಲ್ಲ.

ಆದರೆ ಪತ್ನಿ ಮತ್ತೆ ಮತ್ತೆ ಹಠ ಹಿಡಿದಾಗ ವಿಧಿಇಲ್ಲದೆ ಸುದಾಮನು ತನ್ನ ಮಿತ್ರನಾದ ಕೃಷ್ಣನ ಮನೆಗೆ ಬಂದನು. ಸುದಾಮನನ್ನು ನೋಡಿದ ಕೃಷ್ಣನು ಬಹಳ ಪ್ರೀತಿಯಿಂದ ಅತಿಥಿ ಸತ್ಕಾರ ಮಾಡಿದನು. ಸುದಾಮನು ತನ್ನ ಜೊತೆ ದಾರಿಯ ಬುತ್ತಿಗೆಂದು ತಂದಿದ್ದ ಮೂರು ಹಿಡಿ ಅವಲಕ್ಕಿಯನ್ನು ಶ್ರೀ ಕೃಷ್ಣನು ತೆಗೆದುಕೊಂಡು ಬಹಳ ಪ್ರೀತಿಯಿಂದ ತಿಂದನು. ಕುಶಲೋಪರಿಯ ನಂತರ ಅವನ ಪಾದಗಳನ್ನು ಸಹ ತೊಳೆದನು. ಆಗ ಸುದಾಮನು ಸಂಕೋಚದಿಂದ ಮುದುರಿಕೊಂಡನು ಹಾಗೂ ಕೃಷ್ಣನಿಗೆಂದನು. "ಕೃಷ್ಣಾ ನಿನ್ನ ಕೃಪೆಯಿಂದ ನಾವೆಲ್ಲಾ ಚೆನ್ನಾಗಿದ್ದೇವೆ. ನನಗೆ ಯಾವ ವಸ್ತುವಿನ ಅವಶ್ಯಕತೆಯೂ ಇಲ್ಲ." ಕೃಷ್ಣನ ಬಳಿ ಹಣವನ್ನು ಬೇಡದೆ, ಒಂದು ವಾರ ಅವನ ಜೊತೆ ಇದ್ದು, ತನ್ನ ಊರಿಗೆ ಹಿಂತಿರುಗಿದನು.

ಕಬೀರ್, ಬಿನ್ ಮಾಂಗೇ ಮೋತೀ ಮಿಲೇಂ, ಮಾಂಗೇ ಮಿಲೇ ನ ಭೀಖ್ ।
ಮಾಂಗನ್ ಸೇ ಮರನಾ ಭಲಾ, ಯಹ್ ಸತಗುರು ಕೀ ಸೀಖ್ ॥

ಶಬ್ದಾರ್ಥ :– ಕಬೀರ ಪರಮಾತ್ಮ ಹೇಳಿದ್ದಾರೆ, ಯಾರು ಪೂರ್ಣಪರಮಾತ್ಮನ ಸಾಧನೆ ಮಾಡುವರೋ ಅವರು ಬೇಡುವ ಅವಶ್ಯಕತೆಯಿಲ್ಲ. ಬೇಡುವುದರಿಂದ ಪರಮಾತ್ಮ ದೂರವಾಗುತ್ತಾನೆ. ಅವನಿಗೆ ಭಿಕ್ಷೆಯೂ ಸಿಗುವುದಿಲ್ಲ. ಆ ಸಾಧಕನು ಪರಮಾತ್ಮನ ಮೇಲೆ ನಂಬಿಕೆ ಇಟ್ಟು ಬೇಡದೇ ಇದ್ದರೆ, ಪರಮಾತ್ಮನು ಅವನ ಇಚ್ಛೆಯನ್ನು ಪೂರೈಸುತ್ತಾನೆ ಅಂದರೆ ಮುತ್ತಿನಂತಹ ಅತ್ಯಮೂಲ್ಯವಾದ ವಸ್ತುವನ್ನು ಕೊಡುತ್ತಾನೆ. ಬೇಡಿದರೆ ಆ ವ್ಯಕ್ತಿಯು ಬದುಕಿದ್ದರೂ ಸತ್ತಂತೆ ಎಂಬ ಶಿಕ್ಷಣವನ್ನು ಪೂರ್ಣ ಸದ್ಗುರು ನೀಡುತ್ತಾನೆ. ಬೇಡುವುದಕ್ಕಿಂತ ಸಾಯುವುದೇ ಲೇಸು. ಇದರರ್ಥ ಆತ್ಮಹತ್ಯೆ ಅಲ್ಲ, ತಮ್ಮ ಇಚ್ಛೆಗಳನ್ನು ಅದುಮಿಟ್ಟು ಸತ್ತಂತೆ ಇರುವುದು ಎಂದರ್ಥ.

ಶ್ರೀ ಕೃಷ್ಣನು ರಾಜನಾಗಿದ್ದನು. ಅವನಿಗೆ ಸುದಾಮನ ಪರಿಸ್ಥಿತಿಯ ಅರಿವಿತ್ತು. ಹಾಗಾಗಿ ಒಂದು ವಾರದಲ್ಲಿ ವಿಶ್ವಕರ್ಮನಿಗೆ ಹೇಳಿ ಸುದಾಮನಿಗೆ ಅರಿವಿಲ್ಲದಂತೆ ಅವನ ಊರಿನಲ್ಲಿ ಒಂದು ಅರಮನೆಯನ್ನು ಕಟ್ಟಿಸಿಬಿಟ್ಟನು. ಸುಧಾಮನು ಧರ್ಮ ಕರ್ಮದ ಮೇಲೆ ಧೃಡವಾದ ನಂಬಿಕೆ ಇಟ್ಟಿದ್ದನು. ಈ ಕಾರಣದಿಂದಲೇ ಸುದಾಮನಿಗೆ ಲಾಭವಾಯಿತು. ಇಂಥವರನ್ನು ಪಂಡಿತರೆನ್ನುತ್ತಾರೆ. ಯಾರು ಬೇಡುತ್ತಾರೋ ಅವರನ್ನು ನೀಚರೆನ್ನುತ್ತಾರೆ.

ದೀಕ್ಷೆ ಪಡೆದ ನಂತರ ಈ ಪ್ರಪಂಚ ಮತ್ತು ಪರಮಾತ್ಮನಲ್ಲಿ ಭಕ್ತನ ಶ್ರದ್ಧೆ ಹೇಗಿರಬೇಕು ಎನ್ನುವುದಕ್ಕೆ ಪವಿತ್ರವಾದ ಕಬೀರ ಸಾಗರ ಗ್ರಂಥದ 'ಅನುರಾಗ ಸಾಗರ' ಎಂಬ ಅಧ್ಯಾಯದಲ್ಲಿ ಪರಮೇಶ್ವರ ಕಬೀರರು ತಮ್ಮ ಶಿಷ್ಯನಾದ ಧರ್ಮದಾಸರಿಗೆ ಈ ರೀತಿ ಹೇಳಿದ್ದಾರೆ.

## 'ಅನುರಾಗ್ ಸಾಗರ್'ದ ಸಾರಾಂಶ

ಅನುರಾಗ ಸಾಗರದ ಪುಟ ಸಂಖ್ಯೆ 3ರಿಂದ 5ರ ತನಕ ಇರುವ ಸಾರಾಂಶ

ಪುಟ 3ರಲ್ಲಿ:– ಧರ್ಮದಾಸನು ಕಬೀರರನ್ನು ಪ್ರಶ್ನಿಸಿದರು.

ಪ್ರಶ್ನೆ:– ಪ್ರಭು! ದೀಕ್ಷೆ ಪಡೆದ ನಂತರ ಪರಮಾತ್ಮನಲ್ಲಿ ಯಾವ ರೀತಿ ಶ್ರದ್ಧೆ ಇರಬೇಕು?

ಉತ್ತರ:– ಪರಮೇಶ್ವರ ಕಬೀರರು ಹೇಳಿದರು, ಹೇಗೆ ಜಿಂಕೆಯು ವಾದ್ಯದ ಶಬ್ದಕ್ಕೆ ಮರಳಾಗುವುದೋ ಹಾಗೆ ಸಾಧಕನು ಪರಮಾತ್ಮನ ಮೇಲೆ ಶ್ರದ್ಧೆ ಇಡಬೇಕು.

ಜಿಂಕೆಯನ್ನು ಹಿಡಿಯುವ ಬೇಟೆಗಾರನು ಒಂದು ವಾದ್ಯದಿಂದ ವಿಶೇಷವಾದ ಶಬ್ದವನ್ನು ಮಾಡುತ್ತಾನೆ. ಅದನ್ನು ಕೇಳಿದ ಜಿಂಕೆಯು ಆಕರ್ಷಿತಗೊಳ್ಳುತ್ತದೆ ಹಾಗೂ ಶಬ್ದ ಬರುತ್ತಿರುವ ಕಡೆಗೆ ಬರುತ್ತದೆ. ಬೇಟೆಗಾರನು ಆ ವಾದ್ಯವನ್ನು ನುಡಿಸುತ್ತಲೇ ಇರಬೇಕಾಗುತ್ತದೆ. ಜಿಂಕೆಯು ಅವನ ಮುಂದೆ ಬಂದು ಕುಳಿತು ತನ್ನ ಮುಖವನ್ನು ನೆಲದ ಕಡೆಗೆ ಮಾಡಿ, ಅವನಿಗೆ ತನ್ನನ್ನು ಸಮರ್ಪಿಸಿಕೊಳ್ಳುತ್ತದೆ. ಇದೇ ರೀತಿ ಸಾಧಕನು ಪರಮಾತ್ಮನಿಗೆ ತನ್ನನ್ನು ಸಮರ್ಪಿಸಿಕೊಳ್ಳಬೇಕು. ತನ್ನ ಜೀವನವನ್ನು ಸಮರ್ಪಿಸಿಕೊಳ್ಳಬೇಕು.

ಎರಡನೇ ಉದಾಹರಣೆ:– ಹೇಗೆ ಪತಂಗವು ದೀಪದ ಬೆಳಕಿಗೆ ಆಕರ್ಷಿತವಾಗಿ ದೀಪದ ಮೇಲೆ ಬಿದ್ದು ತನ್ನನ್ನು ತಾನು ಸಮರ್ಪಿಸಿಕೊಳ್ಳುತ್ತಾ ಸಾವನ್ನಪ್ಪುವುದೋ, ಹಾಗೆ ಸಾಧಕನು ಪರಮಾತ್ಮನಿಗೆ ತನ್ನನ್ನು ತಾನು ಸಮರ್ಪಿಸಿಕೊಳ್ಳಬೇಕು. ಎಷ್ಟೇ ಕಷ್ಟಗಳು ಎದುರಾದರೂ ಸರಿ, ಹಿಂದೆ ಸರಿಯಬಾರದು. ಅದನ್ನು ಎದುರಿಸಬೇಕು. ಅದಕ್ಕಾಗಿ ಏನೇ ತ್ಯಾಗ ಮಾಡಬೇಕಾಗಿ ಬಂದರೂ ಹಿಂದೆ ಸರಿಯಬಾರದು.

ಮೂರನೇ ಉದಾಹರಣೆ:– ಹಿಂದಿನ ಕಾಲದಲ್ಲಿ ಹೆಂಡತಿಯು ತನ್ನ ಗಂಡನನ್ನು ಎಷ್ಟು ಪ್ರೀತಿಸುತ್ತಿದ್ದಳೆಂದರೆ ಅವನ ಸಾವಿನ ನಂತರ ಅವಳು ಜೀವಂತವಾಗಿ ಅವನ ಚಿತೆಯೇರಿ ಸುಟ್ಟು ಬೂದಿಯಾಗುತ್ತಿದ್ದಳು. ಅದಕ್ಕಾಗಿ ಅವರ ಕುಟುಂಬದವರು ವಿರೋಧಿಸುತ್ತಿದ್ದರೂ ಲೆಕ್ಕಿಸದೇ ತನ್ನನ್ನು ತಾನು ಸಮರ್ಪಿಸಿಕೊಳ್ಳುತ್ತಿದ್ದಳು. ಅವಳ ಚಿಕ್ಕ ಚಿಕ್ಕ ಮಕ್ಕಳನ್ನು ತೋರಿಸಿ, ಅವರನ್ನು ಸಾಕಲು ಬದುಕಿರಬೇಕೆಂದು ಅವರ ಕುಟುಂಬದವರು ಹೇಳಿದರೂ ಅವಳು ಅವರ ಮಾತನ್ನು ಕೇಳುತ್ತಿರಲಿಲ್ಲ. ತಂದೆ ಸತ್ತಿದ್ದಾರೆ, ಇನ್ನು ತಾಯಿಯೂ ಸತ್ತು ಹೋದರೆ ಮಕ್ಕಳಿಗೆ ಯಾರು ದಿಕ್ಕು, ಅಜ್ಜಿ ತಾತ, ದೊಡ್ಡಮ್ಮ, ದೊಡ್ಡಪ್ಪ ಇವರೆಲ್ಲಾ ಎಂದಿಗೂ ತಂದೆ ತಾಯಿ ಆಗಲಾರರು, ಹಾಗಾಗಿ ಮಕ್ಕಳಿಗಾಗಿ ಬದುಕಿರು ಎಂದು ಕೇಳಿದರೂ ಅವಳು ತನ್ನ ನಿಲುವನ್ನು ಬದಲಿಸುತ್ತಿರಲಿಲ್ಲ. ವಿಧವಿಧವಾದ ಬೆಲೆಬಾಳುವ ಒಡವೆ ವಸ್ತ್ರಗಳನ್ನು ಅಷ್ಟ ಐಶ್ವರ್ಯಗಳ ಆಸೆ ತೋರಿಸಿದರೂ ಅವಳು ತನ್ನ ಧೃಢ ಚಿತ್ತವನ್ನು ಬದಲಿಸದೆ ತನ್ನ ಪತಿಯ ಜೊತೆ ಚಿತೆಯೇರಿ ಭಸ್ಮವಾಗುತ್ತಿದ್ದಳು. ಇದನ್ನೇ ಸತಿ ಸಹಗಮನ ಎನ್ನುವರು. ನಂತರದಲ್ಲಿ ಇದೊಂದು ಪದ್ಧತಿಯಾಗಿ ಮಾರ್ಪಟ್ಟು ಕುಟುಂಬದವರ ಮರ್ಯಾದೆಯ ಪ್ರಶ್ನೆಯಾಗಿ ಬದಲಾವಣೆ ಕಂಡಿತು. ಇದನ್ನೇ ಸತಿ ಸಹಗಮನ ಎಂದು ಕರೆಯಲಾರಂಭಿಸಿದರು. ಇತ್ತೀಚೆಗೆ ಚಳುವಳಿಗಳು ನಡೆದ ನಂತರ ಈ ಪದ್ಧತಿ ರದ್ದಾಯಿತು.

ಇದರಿಂದ ತಿಳಿಯುವುದೇನೆಂದರೆ ಹೇಗೆ ಪತ್ನಿಯು ತನ್ನ ಪತಿಗಾಗಿ ವೈರಾಗ್ಯದಿಂದ ಸುಟ್ಟು ಭಸ್ಮವಾಗುತ್ತಾಳೋ, ಹಾಗೇ ಭಕ್ತನು ಪರಮಾತ್ಮನಿಗೆ ತನ್ನನ್ನು ಸಮರ್ಪಿಸಿಕೊಳ್ಳಬೇಕು.

ಜಗತ್ ಮೆಂ ಜೀವನ್ ದಿನ್–ಚಾರ್ ಕಾ, ಕೋಈ ಸದಾ ನಹೀಂ ರಹೇ ।
ಯಹ್ ವಿಚಾರ್ ಪತಿ ಸಂಗ್ ಚಾಲಿ ಕೋಈ ಕುಛ್ ಕಹೈ ॥

**ಶಬ್ದಾರ್ಥ :– ಬಹಳ ಹಿಂದಿನ ಕಾಲದಲ್ಲಿ ಹೆಂಡತಿಯು ತನ್ನ ಸತ್ತ ಗಂಡನ ಜೊತೆಯಲ್ಲಿ ಚಿತೆಗೆ ಹಾರಿ ಸುಟ್ಟು ಹೋಗುತ್ತಿದ್ದಳು. ಆಗ ಅವಳ ಮನಸ್ಸಿನಲ್ಲಿ ತನ್ನ ಪತಿಯ ವಿನಃ ಬೇರೆ ಹಣ, ಸಂಪತ್ತು, ಮಕ್ಕಳು, ಒಡವೆ, ವಸ್ತ್ರಗಳ ಬಗ್ಗೆ ಯೋಚನೆ ಇರುತ್ತಿರಲಿಲ್ಲ. ಈವತ್ತಲ್ಲ, ನಾಳೆಯಾದರೂ ಸಾಯಲೇಬೇಕು ಎಂದು ಅವಳು ಯೋಚಿಸುತ್ತಿದ್ದಳು. ಯಾರೇ ಬಂದು ಏನೇ ಹೇಳಿದರೂ ಅವಳು ಯಾರೊಬ್ಬರ ಮಾತನ್ನೂ ಕೇಳಲು ಸಿದ್ಧವಾಗಿರುತ್ತಿರಲಿಲ್ಲ. ಹೀಗೆ ಅವಳು ತನ್ನ ಪತಿಯ ಚಿತೆಗೆ ಹಾರಿ ಪ್ರಾಣ ಬಿಡುತ್ತಿದ್ದಳು. ಇದೊಂದು ಕೆಟ್ಟ ಪದ್ಧತಿ. ಆದರೆ ಅಂದಿನ ಕಾಲದಲ್ಲಿ ಅದನ್ನು ಬಹಳ ಒಳ್ಳೆಯ ಪದ್ಧತಿ ಎನ್ನುತ್ತಿದ್ದರು. ಆದರೆ ಇಂದು ಶಿಕ್ಷಿತ ಸಮಾಜವು ಆ ಪದ್ಧತಿಯನ್ನು ಕೊನೆಗೊಳಿಸಿದೆ. ಭಕ್ತಿಯಲ್ಲಿ ದೃಢತೆಯನ್ನು ಉಂಟು ಮಾಡಲು ಈ ಉದಾಹರಣೆ ಸರಿ ಇದೆ, ಅಂದರೆ ಭಕ್ತನಿಗೂ ಇಂತಹ ದೃಢ ಚಿತ್ತವಿರಬೇಕು ಎಂದು ಹೇಳಬಹುದು. ಹೀಗೆ ಸಾಂಸಾರಿಕ ವಿಷಯಗಳ ಬಗ್ಗೆ ಗಮನಹರಿಸದೆ ತನ್ನ ಉದ್ದೇಶದ ಸಫಲತೆಗಾಗಿ ದೃಢಭಕ್ತಿಯಿಂದ ಇರಬೇಕು. ಗೌರವವನ್ನು ಕಾಪಾಡಿಕೊಳ್ಳಬೇಕು. ಸತ್ಯಪುರುಷನ ಪ್ರಾಪ್ತಿಗಾಗಿ ಯಾವ ರೀತಿ ಶ್ರದ್ಧೆಯಿಂದ ಇರಬೇಕು ಎನ್ನುವುದನ್ನು ಈ ಕೆಳಗಿನ ಪದ್ಯಗಳಲ್ಲಿ ವಿವರಿಸಲಾಗಿದೆ. ಪ್ರಾಪಂಚಿಕವಾದ ಸಂಬಂಧಗಳು, ಸಂಪತ್ತು ಮುಂತಾದವುಗಳನ್ನು ಮರೆತು ಕೇವಲ ಪರಮಾತ್ಮನ ಧ್ಯಾನದಲ್ಲಿ ತೊಡಗಬೇಕು.**

**ಹೇ ಧರ್ಮದಾಸನೇ ! ಈ ರೀತಿ ಭಕ್ತನ ವಿಚಾರ ಇರಬೇಕು.**

ಐಸೆ ಹೀ ಜೋ ಸತ್‌ಪುರುಷ್ ಲೌ ಲಾವೈ । ಕುಲ್ ಪರಿವಾರ್ ಸಬ್ ಬಿಸರಾವೈ ॥1
ನಾರಿ ಸುತ್ ಕಾ ಮೋಹ್ ನ ಆನೇ । ಜಗತ್ ರೂ ಜೀವನ್ ಸ್ವಪನ್ ಕರ್ ಜಾನೈ ॥2
ಜಗ್ ಮೆಂ ಜೀವನ್ ಥೋಡಾ ಭಾಈ ।ಅಂತ್ ಸಮಯ್ ಕೋಈ ನಹೀಂ ಸಹಾಈ ॥3
ಬಹುತ್ ಪ್ಯಾರೀ ನಾರಿ ಜಗ್ ಮಾಂಹೀ । ಮಾತಾ–ಪಿತಾ ಜಾ ಕೇ ಸಮ್ ನಾಹೀಂ ॥4
ತೇಹೀ ಕಾರಣ್ ನರ್ ಶೀಶ್ ಜೋ ದೇಹೀ ।
ಅಂತ್ ಸಮಯ್ ಸೋ ನಹೀಂ ಸಂಗ್ ದೇಹೀ ॥5
ಚಾಹೇ ಕೋಈ ಜಲೈ ಪತಿ ಕೇ ಸಂಗಾ । ಫಿರ್ ದೋನೋಂ ಬನೈಂ ಕೀಟ್ ಪತಂಗಾ ॥6
ಫಿರ್ ಪಶು–ಪಕ್ಷೀ ಜನ್ಮ್ ಪಾವೈ । ಬಿನ್ ಸತ್‌ಗುರು ದುಃಖ್ ಕೌನ್ ಮಿಟಾವೈ ॥7
ಐಸೀ ನಾರಿ ಬಹುತೇರೀ ಭಾಈ । ಪತಿ ಮರೈ ತಬ್ ರೂಧನ್ ಮಚಾಈ ॥8
ಕಾಮ್ ಪೂರ್ತಿ ಕೀ ಹಾನಿ ವಿಚಾರೈ । ದಿನ್ ತೇರಹ್ ಐಸೇ ಪುಕಾರೈ ॥9
ನಿಜ್ ಸ್ವಾರ್ಥ್ ಕೋ ರೋದನ್ ಕರಹೀ ।
ತುರಂತ್ ಹೀ ಖಸಮ್ ದೂಸರೋ ಕರಹೀ ॥10
ಸುತ್ ಪರಿಜನ್ ಧನ್ ಸ್ವಪನ್ ಸ್ನೇಹೀ । ಸತ್ಯನಾಮ್ ಗಹು ನಿಜ್ ಮತಿ ಐಸೀ ॥11
ಸ್ವ ತನ್ ಸಮ್ ಪ್ರಿಯ್ ಔರ್ ನ ಆನಾ। ಸೋ ಭೀ ಸಂಗ್ ನಹೀಂ ಚಲತ್ ನಿದಾನಾ ॥12
ಐಸಾ ಕೋಈ ನಾ ದಿಖ್ ಭಾಈ । ಅಂತ್ ಸಮಯ್ ಮೆಂ ಹೋಯ್ ಸಹಾಈ ॥13
ಆದಿ ಅಂತ್ ಕಾ ಸಖಾ ಭುಲಾಯಾ ।
ಝೂಠೈ ಜಗ್ ನಾತೋಂ ಮೆಂ ಫಿರೈ ಉಮಾಹಯಾ ॥14
ಅಂತ್ ಸಮಯಾ ಜಮ್ ದೂತ್ ಗಲಾ ದಬಾವೈ ।

ತಾ ಸಮಯ್ ಕಹೋ ಕೌನ್ ಛುಡಾವೈ ॥15
ಸತ್‌ಗುರು ಹೈ ಏಕ್ ಛುಡಾವನ್ ಹಾರಾ ।
ನಿಶ್ಚಯ್ ಕರ್ ಮಾನಹೂ ಕಹಾ ಹಮಾರಾ ॥16
ಕಾಲ್ ಕೋ ಜೀತ್ ಹಂಸ್ ಲೇ ಜಾಹೀ।
ಅವಿಚಲ್ ದೇಶ್ ಜಹಾಂ ಪುರುಷ್ ರಹಾಹೀ ॥17
ಐಸಾ ದೃಢ್ ಮತಾ ಕರಾಹೀ । ಜೈಸೆ ಸೂರಾ ಲೇತ್ ಲಡಾಈ ॥19
ಟೂಕ್–ಟೂಕ್ ಹೋ ಮರೈ ರಣ್ ಕೆ ಮಾಂಹೀ ।
ಪೂರಾ ಕದಮ್ ಕಬಹೂ ಹಟಾವೈ ನಾಂಹೀ ॥20
ಜೈಸೆ ಸತೀ ಪತಿ ಸಂಗ್ ಜರಹೀ । ಐಸಾ ದೃಢ್ ನಿಶ್ಚಯ್ ಜೋ ಕರಹೀ ॥21
ಸಾಹೇಬ್ ಮಿಲೈ ಜಗ್ ಕೀರ್ತಿ ಹೋಈ । ವಿಶ್ವಾಸ್ ಕರ್ ದೇಖೋ ಕೋಈ ॥22
ಹಮ್ ಹೈಂ ರಾಹ್ ಬತಾವನ್ ಹಾರಾ । ಮಾನೈ ಬಚನ್ ಭವ್ ಉತರೈ ಪಾರಾ ॥23
ಛಲ್ ಕಪಟ್ ಹಮ್ ನಹೀಂ ಕರಾಹೀಂ । ನಿಸ್ವಾರ್ಥ್ ಪರಮಾರ್ಥ್ ಕರೈಂ ಭಾಈ ॥24
ಜೀವ್ ಏಕ ಜೋ ಶರಣ್ ಪುರುಷ್ ಕೀ ಜಾವೈ ।
ಪ್ರಚಾರಕ್ ಕೋ ಘನಾ ಪುಣ್ಯ್ ಪಾವೈ ॥25
ಕೋಟಿ ಧೇನು ಜೋ ಕಟತ್ ಬಚಾಈ ।
ಏತಾ ಧರ್ಮ್ ಮಿಲೈ ಪ್ರಚಾರಕ್ ತಾಂಹೀ ॥26
ಲಾವೈ ಗುರು ಶರಣ್ ದೀಕ್ಷಾ ದಿಲಾವೈ ।
ಆಪಾ ನಾ ಥಾಪೈ ಸಬ್ ಕುಛ್ ಗುರು ಕೋ ಬತಾವೈ ॥27
ಜೋ ಕೋಈ ಪ್ರಚಾರಕ್ ಗುರು ಬನಿ ಬೈಠೈ ।
ಪರಮಾತ್ಮಾ ರೂಠೆ ಕಾಲ್ ಕಾನ್ ಐಠೈ ॥28
ಲಾಖ್ ಅಠಾಈಸ್ ಝೂಠೆ ಗುರು ರೋವೈಂ ।
ಪಡೆ ನರಕ್ ಮೆಂ ನಾ ಸುಖ್ ಸೋವೈಂ ॥29
ಅಬ್ ಕಹೇ ಹೈಂ ಭೂಲ್ ಭಈ ಭಾರೀ ।
ಹೇ ಸತ್‌ಗುರು ಸುಧ್ ಲೇವೋ ಹಮಾರೀ ॥30॥
ಬೋಐ ಬಬೂಲ್ ಆಮ್ ಕಹಾಂ ಖಾಈ ।
ಕೋಟಿ ಜೀವನ್ ಕೋ ನರಕ್ ಪಠಾಈ ॥31
ಐಸೀ ಗಲತೀ ನಾ ಕರಹೂಂ ಸುಜಾನಾ । ಸತ್ಯ್ ವಚನ್ ಮಾನೋ ಪ್ರಮಾನಾ ॥32

**ಶಬ್ದಾರ್ಥ:– ಒಬ್ಬ ಹುಡುಗನು ಬೆಳೆದು ದೊಡ್ಡವನಾದ ಮೇಲೆ ಯುವಕನಾಗುತ್ತಾನೆ. ಆಗ ಅವನಿಗೆ ವಿವಾಹವಾಗುತ್ತದೆ. ಅವನ ಪ್ರೀತಿ ತಂದೆ ತಾಯಿಗಳಿಂದ ದೂರವಾಗಿ ಹೆಂಡತಿಯ ಮೇಲೆ ಉಂಟಾಗುತ್ತದೆ. ಅವಳಿಗೆ ಮಕ್ಕಳಾದ ಮೇಲೆ ಆ ಮಕ್ಕಳ ಮೇಲೆ ಮಮತೆ ಉಂಟಾಗುತ್ತದೆ. ಅವನು ಸತ್ತಾಗ ಅವಳು ಕೆಲವು ದಿನ ಅಳುತ್ತಾಳೆ. ನಂತರ ಪತಿಯ ಅಣ್ಣ, ತಮ್ಮಂದಿರಲ್ಲಿ ಒಬ್ಬರನ್ನು ಮದುವೆಯಾಗುತ್ತಾಳೆ. ತನ್ನ ಪತ್ನಿಗಾಗಿ ಸರ್ವಸ್ವವನ್ನು ಸಮರ್ಪಿಸಿದ ಪತಿಯನ್ನು ಅವಳು ಮರೆತು ಹೋಗುತ್ತಾಳೆ. ಒಂದು ವೇಳೆ ಪತ್ನಿಯು ತನ್ನ ಪತಿಯ ಜೊತೆಗೆ ಹಾರಿ ಸತ್ತು ಹೋದರೆ ಮುಂದಿನ**

ಜನ್ಮದಲ್ಲಿ ಯಾವುದೋ ಪಶು ಅಥವಾ ಪಕ್ಷಿಯಾಗಿ ಅಲೆದಾಡುತ್ತಿರುತ್ತಾರೆ. ಯಾವ ಹೆಂಡತಿಗೋಸ್ಕರ ಪತಿ ತನ್ನ ಸರ್ವಸ್ವವನ್ನು ಅರ್ಪಿಸುತ್ತಾನೋ, ಯಾರಾದರೂ ತನ್ನ ಹೆಂಡತಿಯನ್ನು ಕೆಟ್ಟ ದೃಷ್ಟಿಯಿಂದ ನೋಡಿದರೆ, ತನ್ನ ಪತ್ನಿಗಾಗಿ ಎಂತಹ ಕಷ್ಟವನ್ನಾದರೂ ಎದುರಿಸಲು ಸಿದ್ಧವಾಗಿರುತ್ತಾನೋ, ಅದೇ ಪತ್ನಿಯು ತನ್ನ ಪತಿಯ ಮರಣಾನಂತರ ಬೇರೆ ವ್ಯಕ್ತಿಯನ್ನು ಮದುವೆಯಾಗುತ್ತಾಳೆ. ಪರಿಸ್ಥಿತಿಯ ಕಾರಣದಿಂದ ಅವಳು ಹಾಗೆ ಮಾಡಿದರೂ ಭಕ್ತನಿಗೆ ಮಾತ್ರ ಇದೊಂದು ಒಳ್ಳೆಯ ಪಾಠ.

ಇದೇ ರೀತಿ ಒಬ್ಬ ವ್ಯಕ್ತಿಯು ತನ್ನ ಪತ್ನಿ ತೀರಿಕೊಂಡರೆ, ಕೆಲವೇ ದಿನಗಳಲ್ಲಿ ಅವಳನ್ನು ಮರೆತು ಬೇರೆ ಮದುವೆಯಾಗುತ್ತಾನೆ. ಪತ್ನಿಯು ತನ್ನ ಪತಿಗಾಗಿ ತಂದೆ, ತಾಯಿ, ಅಣ್ಣ, ತಮ್ಮ, ಅಕ್ಕ, ತಂಗಿ, ತನ್ನ ಊರು–ಕೇರಿ ಎಲ್ಲಾ ಬಿಟ್ಟು ಬಂದು ಅವನಿಗೆ ತನ್ನನ್ನು ಸಮರ್ಪಿಸಿಕೊಳ್ಳುತ್ತಾಳೆ. ಆದರೆ ಅವಳು ಸತ್ತ ಕೆಲವೇ ದಿನಗಳಲ್ಲಿ ಪತಿಯು ತನ್ನ ಸುಖಕ್ಕಾಗಿ ಬೇರೆಯವಳನ್ನು ಮದುವೆಯಾಗುತ್ತಾನೆ.

ಇದರಿಂದ ತಿಳಿಯುವುದೇನೆಂದರೆ, ಎಲ್ಲರೂ ಸ್ವಾರ್ಥಪರರೇ. ಆದ್ದರಿಂದ ಸತ್ಯ ಭಕ್ತಿಯಿಂದ ಇದ್ದು. ಆ ಸತ್ಯಲೋಕಕ್ಕೆ ತೆರಳಿರಿ, ಅಲ್ಲಿ ವೃದ್ಧಾಪ್ಯ ಹಾಗೂ ಮರಣವೆಂಬುದೇ ಇರುವುದಿಲ್ಲ.

ಮುಂದಿನ ಪಂಕ್ತಿಗಳಲ್ಲಿ ಎಚ್ಚರಿಕೆಯನ್ನು ನೀಡಲಾಗಿದೆ. ಮನುಷ್ಯನಿಗೆ ತನ್ನ ಶರೀರಕ್ಕಿಂತ ಮಿಗಿಲಾದದ್ದು ಏನೂ ಇಲ್ಲ. ತನ್ನ ಶರೀರವನ್ನು ರಕ್ಷಿಸಿಕೊಳ್ಳಲು ಲಕ್ಷಾಂತರ ಹಣವನ್ನು ಖರ್ಚು ಮಾಡಲು ಹಿಂದೆ ಮುಂದೆ ನೋಡುವುದಿಲ್ಲ. ತನ್ನ ಶರೀರ ಉಳಿದರೆ ಮುಂದೆ ಕೂಲಿ–ನಾಲಿ ಮಾಡಿ ಹಣ ಸಂಪಾದಿಸಬಹುದು ಎಂದು ಯೋಚಿಸಿ ತನ್ನ ಆಸ್ತಿಯನ್ನು ಮಾರಲೂ ಹಿಂಜರಿಯುವುದಿಲ್ಲ. ಪರಮಾತ್ಮ ಕಬೀರರು ಹೇಳಿದ್ದಾರೆ:–

ಸ್ವ ತನು ಸಮ್ ಪ್ರಿಯ್ ಔರ್ ನ ಆನಾ । ಸೋ ಭೀ ಸಂಗ್ ವ ಚಲತ್ ನಿದಾನಾ ॥

ಶಬ್ದಾರ್ಥ:– ಈ ಶರೀರ ನಿಮ್ಮ ಜೊತೆ ಬರುವುದಿಲ್ಲ. ಇನ್ನು ಮನುಷ್ಯರು ವಸ್ತುಗಳ ಮೋಹದಲ್ಲಿ ಬಿದ್ದು, ಪರಮಾತ್ಮನನ್ನು ಮರೆತು ತಿರುಗಾಡುತ್ತಿರುತ್ತಾರೆ. ನಿಮ್ಮ ಬಂಧು ಬಳಗವೆಲ್ಲಾ ಒಂದು ಕನಸಿನಂತೆ. ಹಾಗಾಗಿ ಪೂರ್ಣ ಸಂತನಿಂದ ದೀಕ್ಷೆ ಪಡೆದು ಸಾಧನೆ ಮಾಡಿ, ಎಲ್ಲಿಯವರೆಗೆ ನೀವು ಕನಸಿನಲ್ಲಿರುತ್ತೀರೋ, ಅಲ್ಲಿಯವರೆಗೆ ಮೋಕ್ಷ ಪ್ರಾಪ್ತಿಯಾಗುವುದಿಲ್ಲ. ಎಲ್ಲರೂ ಜೀವನವೆಂಬ ರೈಲಿನಲ್ಲಿ ಪ್ರಯಾಣಿಸುತ್ತೀರಿ. ಯಾವ ಬೋಗಿಯಲ್ಲಿ ಕುಳಿತಿರುತ್ತೀರೋ ಅದೇ ನಿಮ್ಮ ಊರು. ಯಾವ ಸೀಟಿನಲ್ಲಿ ಕುಳಿತಿರುತ್ತೀರೋ ಅದೇ ನಿಮ್ಮ ಕುಟುಂಬ. ಯಾರ ಯಾತ್ರೆಯು ಪೂರ್ಣಗೊಳ್ಳುವುದೋ ಅವರು ಆಯಾಯಾ ನಿಲ್ದಾಣದಲ್ಲಿ ಇಳಿದು ಹೋಗುತ್ತಾರೆ. ಇದೇ ಸ್ಥಿತಿ ಈ ಪ್ರಪಂಚದ್ದು, ನಾವು ಕೆಲವು ಗಂಟೆಸಮಯವರೆಗೆ ಮಾತ್ರ ಜೊತೆಯಲ್ಲಿರುತ್ತೇವೆ ಎಂದು ಯಾತ್ರಿಕರಿಗೆ ತಿಳಿದಿರುತ್ತದೆ. ಸಭ್ಯವ್ಯಕ್ತಿಗಳು ಆ ಯಾತ್ರೆಯಲ್ಲಿ ಪ್ರೀತಿಯಿಂದ ಇರುತ್ತಾರೆ. ಎಲ್ಲರ ಬಳಿ ಸಹಕರಿಸುತ್ತಿರುತ್ತಾರೆ. ಅದೇ ರೀತಿ ನಮ್ಮ ಕನಸಿನಂಥಾ ಜೀವನವನ್ನು ಕಳೆಯಬೇಕು. ಯಾವಾಗ ಕನಸು ಕೊನೆಗೊಳ್ಳುವುದೋ ಅಂದರೆ ಶರೀರ ಬಿಡುತ್ತೇವೆಯೋ ಆಗ, ಇದೆಲ್ಲಾ ಏನು? ಈ ಕುಟುಂಬ ಮತ್ತು ಸಂಪತ್ತನ್ನು ಸಂಪಾದಿಸಲು ಈ ಜೀವನವನ್ನು ನಷ್ಟ ಮಾಡಿಕೊಂಡೆವಲ್ಲಾ, ಆ ಕುಟುಂಬ ಮತ್ತು ಸಂಪತ್ತು ಈಗೆಲ್ಲಿ? ಅನ್ನಿಸುತ್ತದೆ. ಪ್ರಪಂಚದಲ್ಲಿ ಪರಮಾತ್ಮನಲ್ಲದೆ ಬೇರೆ ಯಾರೂ ಇಲ್ಲ. ಮೃತ್ಯುವಿನ ಸಮಯದಲ್ಲಿ ಯಮದೂತರು ಬಂದು ನಿಮ್ಮ ಕಂಠದಿಂದ ಪ್ರಾಣವನ್ನು ತೆಗೆದುಕೊಂಡು ಹೋಗುತ್ತಿರಬೇಕಾದರೆ, ಪರಮಾತ್ಮನಲ್ಲದೆ ಬೇರೆ ಯಾರೂ ಸಹಾಯ ಮಾಡಲಾರರು. ಯಾರು ದೀಕ್ಷೆ ಪಡೆಯುವರೋ ಅವರನ್ನು ಪರಮಾತ್ಮನು ರಕ್ಷಿಸುತ್ತಾನೆ. ಪರಮೇಶ್ವರನು ಸದ್ಗುರುವಿನ ರೂಪದಲ್ಲಿ ಭಕ್ತನಿಗೆ ಸಹಾಯ ಮಾಡುತ್ತಾನೆ. ಹಾಗಾಗಿ ಸದ್ಗುರುವಿನ ಆಶ್ರಯದಲ್ಲಿ ಇರುವ ಭಕ್ತನು ಸದ್ಗುರುವಿನ ಮೇಲೆ ಜಿಂಕೆ, ಪತಂಗ, ಹಾಗೂ ಪತಿವ್ರತೆಯಂತೆ, ಸಮರ್ಪಣಾ ಭಾವವನ್ನು ಹೊಂದಿರಬೇಕು. ಶೂರರು ಚೂರು ಚೂರಾಗಿ ಭೂಮಿಗೆ ಬಿದ್ದರೂ ಯುದ್ಧದಿಂದ ಹಿಂದೆ ಸರಿಯುವುದಿಲ್ಲ. ಪುರಾಣ ಹಾಗೂ ಗೀತೆಯ 2ನೇ ಅಧ್ಯಾಯದ 38ನೇ ಶ್ಲೋಕದಲ್ಲಿ

ಹೇಳಿದೆ, "ಅರ್ಜುನ, ಯೋಧನು ಯುದ್ಧದಲ್ಲಿ ಮಡಿದರೆ ಅವನು ಸ್ವರ್ಗಸುಖ ಪಡೆಯುತ್ತಾನೆ. ಭಕ್ತನು ಭಕ್ತಿ ಮಾರ್ಗದಲ್ಲಿ ನಡೆದರೆ, ಶರೀರವನ್ನು ತ್ಯಜಿಸಿದರೆ ಅವನು ಸತ್ಯಲೋಕದಲ್ಲಿ ಸ್ಥಾನ ಪಡೆದು ಸುಖ ಸಾಗರವನ್ನು ತಲುಪಿ ಶಾಶ್ವತವಾದ ಸುಖ ಪಡೆಯುತ್ತಾನೆ. ಜನನ–ಮರಣವೆಂಬ ಸಂಕಟ ಶಾಶ್ವತವಾಗಿ ದೂರವಾಗುವುದು. ಈ ಭೂಮಿಯ ಮೇಲೆ ನಮ್ಮ ಜನನವಾಗಿದ್ದು, ನಾವು ಯಾರ ಮಗುವಾಗಿ ಹುಟ್ಟುತ್ತೇವೆ ಎಂದು ಗೊತ್ತಿರುವುದಿಲ್ಲ, ಯಾರನ್ನು ವಿವಾಹವಾಗುತ್ತೇವೆ, ನಮಗೆ ಮಗ ಹುಟ್ಟುವನೋ ಅಥವಾ ಮಗಳು ಹುಟ್ಟುವಳೋ ಎನ್ನುವುದೂ ಗೊತ್ತಿರುವುದಿಲ್ಲ. ಇದೆಲ್ಲಾ ನಮ್ಮ ಪೂರ್ವಜನ್ಮದ ಸಂಸ್ಕಾರದಿಂದ ನಡೆಯುತ್ತಿರುತ್ತದೆ. ಕುಟುಂಬದ ಸದಸ್ಯರ ಜೊತೆ ಪ್ರೀತಿ ವಾತ್ಸಲ್ಯವಿರುತ್ತದೆ ಹಾಗೂ ಎಂದಿಗೂ ಜೊತೆಯಲ್ಲಿರುವ ಆಸೆ ಉಂಟಾಗುತ್ತದೆ. ಯಾರೂ ಸಾಯಬಾರದೆಂದು ಆಶಿಸುತ್ತೇವೆ. ಆದರೆ ಈ ಕಾಲಬ್ರಹ್ಮನ ಲೋಕದಲ್ಲಿ ಯಾರೂ ಶಾಶ್ವತರಲ್ಲ. ಎಲ್ಲರೂ ಒಬ್ಬರ ಹಿಂದೆ ಒಬ್ಬರು ಹೋಗಬೇಕಾಗುತ್ತದೆ. ಆದರೆ ಯಾರು ಪೂರ್ಣ ಸಂತರಿಂದ ನಾಮದೀಕ್ಷೆಯನ್ನು ಪಡೆದು ಸತ್ಯ ಸಾಧನೆ ಮಾಡುವರೋ ಅವರು ಸತ್ಯಲೋಕಕ್ಕೆ ಹೋಗುವರು. ಅಲ್ಲಿ ಯಾವುದಕ್ಕೂ ಕೊರತೆ ಇರುವುದಿಲ್ಲ. ಸ್ವಾದಿಷ್ಟ ಭೋಜನವೂ, ಪಂಚಭಕ್ಷ್ಯ ಪರಮಾನ್ನಗಳು ದೊರಕುವುವು. ಅಲ್ಲಿ ವೃದ್ಧಾಪ್ಯವೂ ಇರುವುದಿಲ್ಲ. ಯಾವ ಕೆಲಸ ಮಾಡುವ ಅವಶ್ಯಕತೆಯೂ ಇರುವುದಿಲ್ಲ. ಅದನ್ನು ಅಕ್ಷಯ ಮೋಕ್ಷವೆನ್ನುವರು.

ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕ ಹಾಗೂ 15ನೇ ಅಧ್ಯಾಯದ ಶ್ಲೋಕ 4ರಲ್ಲಿ ಹೇಳಿರುವಂತೆ, ಸಿದ್ಧಿ ಮೋಕ್ಷ ಶಕ್ತಿಯನ್ನು 'ನೈಷ್ಕರ್ಮ್ಯ' ಸಿದ್ಧಿ ಎನ್ನುತ್ತಾರೆ. ಅದರ ವರ್ಣನೆಯನ್ನು ಗೀತೆಯ 3ನೇ ಅಧ್ಯಾಯದ 4ನೇ ಶ್ಲೋಕ, 18ನೇ ಅಧ್ಯಾಯದ 49ರಿಂದ 62ನೇ ಶ್ಲೋಕದಲ್ಲಿ ಕಾಲಬ್ರಹ್ಮ ಅಂದರೆ ಜ್ಯೋತಿ ನಿರಂಜನನ 21 ಬ್ರಹ್ಮಾಂಡಗಳ ಕ್ಷೇತ್ರದಲ್ಲಿ ಎಲ್ಲಾ ಪ್ರಾಣಿಗಳು ಕರ್ಮದಿಂದಲೇ ಆಹಾರವನ್ನು ಪಡೆದುಕೊಳ್ಳುತ್ತವೆ. ಆದರೆ ಸತ್ಯಲೋಕದಲ್ಲಿ ಎಲ್ಲರಿಗೂ ತನಗೆ ತಾನೇ ಆಹಾರ ದೊರಕುತ್ತದೆ. ಇದೆಲ್ಲಾ ಪರಮೇಶ್ವರನ ಶಕ್ತಿಯಿಂದ ಸಾಧ್ಯವಾಗುತ್ತದೆ. ಹಾಗಾಗಿ ಸದ್ಗುರುವಿನಿಂದ ದೀಕ್ಷೆ ಪಡೆದುಕೊಳ್ಳಿ. ಒಂದು ವೇಳೆ ದೀಕ್ಷೆ ಪಡೆಯದಿದ್ದರೆ ನಿಮ್ಮ ಮೃತ್ಯುವಿನ ಸಮಯದಲ್ಲಿ ಯಮದೂತರು ಬಂದು ನಿಮ್ಮ ಕಂಠದಿಂದ ಪ್ರಾಣವನ್ನು ತೆಗೆದುಕೊಂಡು ಹೋಗುತ್ತಿರುವಾಗ ಯಾರೂ ನಿಮ್ಮನ್ನು ಕಾಪಾಡಲಾರರು. ದೀಕ್ಷೆ ಪಡೆದರೆ ಸದ್ಗುರುವು ನಿಮ್ಮ ಸಹಾಯಕ್ಕೆ ಬರುವರು. ಪರಮೇಶ್ವರರಾದ ಕಬೀರರು ಹೇಳುತ್ತಾರೆ:–

ಅಂತ್ ಸಮಯ್ ಜಮ್ ದೂತ್ ಗಲಾ ದಬಾವೈಂ ।<br>ತಾ ಸಮಯ್ ಕಹೋ ಕೌನ್ ಛುಡಾವೈ ॥<br>ಸತ್‌ಗುರು ಏಕ್ ಛುಡಾವನ್ ಹಾರಾ । ನಿಶ್ಚಯ್ ಕರ್ ಮಾನಹು ಕಹಾ ಹಮಾರಾ ॥

ಶಬ್ದಾರ್ಥ :– ಯಾರಾದರೂ ಒಬ್ಬ ವ್ಯಕ್ತಿ ಸದ್ಗುರುವಿನಿಂದ ದೀಕ್ಷೆ ಪಡೆದು ಸತ್ಯಜ್ಞಾನವನ್ನು ಅರಿತ ನಂತರ ಇನ್ನ್ಯಾರನ್ನಾದರೂ ಸತ್ಯಜ್ಞಾನ ಪಡೆಯಲು ಸದ್ಗುರುವಿನ ಬಳಿ ಕರೆತಂದು ದೀಕ್ಷೆ ಕೊಡಿಸಿದರೆ ಕೋಟಿ ಹಸುಗಳನ್ನು ಕೊಂದ ಖಸಾಯಿಯ (ಕಟುಕ) ಪಾಪದಿಂದ ಮುಕ್ತನಾಗುವಂಥಾ ಪುಣ್ಯವು ಈ ವ್ಯಕ್ತಿಗೆ ದೊರೆಯುತ್ತದೆ. ಸತ್ಯಜ್ಞಾನವನ್ನು ಪಡೆದ ವ್ಯಕ್ತಿಯು ತಾನೇ ಗುರುವೆಂದು ತಿಳಿದು ಬೇರೆಯವರಿಗೆ ದೀಕ್ಷೆ ನೀಡಿದರೆ, ಸ್ವಯಂ ಗುರುವಾಗಿ ನಟಿಸಿದರೆ ಅವನು ಅಪರಾಧಿಯಾಗುತ್ತಾನೆ. ಪರಮೇಶ್ವರನು ಅವನ ಮೇಲೆ ಕೋಪಗೊಳ್ಳುತ್ತಾನೆ ಮತ್ತು ಹೇಗೆ ಖಸಾಯಿಯು ಕುರಿ, ಮೇಕೆಯನ್ನು ಕಿವಿ ಹಿಡಿದು ಎಳೆದುಕೊಂಡು ಹೋಗುತ್ತಾನೋ ಹಾಗೆ ಕಾಲನು ಅವನನ್ನು ಎಳೆದುಕೊಂಡು ಹೋಗಿ ನರಕಕ್ಕೆ ತಳ್ಳುತ್ತಾನೆ. ಕಬೀರ್ ಸಾಗರರ ಅಂಬುಸಾಗರ ಎಂಬ ಅಧ್ಯಾಯದ ಪುಟ ಸಂಖ್ಯೆ 48ರಲ್ಲಿ ಇದರ ಬಗ್ಗೆ ಹೇಳಲಾಗಿದೆ.

ತಬ್ ದೇಖಾ ದೂತನ್ ಕಹಂ ಜಾಈ । ಚೌರಾಸೀ ತಾಹಂ ಕುಂಡ್ ಬನಾಈ ॥<br>ಕುಂಡ್–ಕುಂಡ್ ಬೈಠೇ ಯಮದೂತಾ । ದೇತ್ ಜೀವನ್ ಕಹಂ ಕಷ್ಟ ಬಹುತಾ ॥

ತಹಾಂ ಜಾಯ್ ಹಮ್ ಠಾಡ್ (ಖಡೆ) ರಹಾವಾ ।
ದೇಖತ್ ಜೀವ್ ವಿನಯ್ ಬಹುತ್ ಲಾವಾ ॥

**"ಝೂಠೆ ಕಡಿಹಾರ್ (ನಕಲೀ ಸತ್‌ಗುರು) ಕೀ ದಶಾ"**

ಪಡ್ಯೆ ಮಾರ್ ಜೀವ್ ಕರೇಂ ಬಹು ಶೋರಾ ।
ಬಾಂಧ್–ಬಾಂಧ್ ಕುಂಡನ್ ಮೆಂ ಬೋರಾ ॥
ಲಾಖ್ ಅಠಾಇಸ್ ಪಡೇ ಕಡಿಹಾರಾ । ಬಹುತ್ ಕಷ್ಟ ತಹಾಂ ಕರತ್ ಪುಕಾರಾ ॥
ಹಮ್ ಭೂಲೇ ಸ್ವಾರ್ಥ ಸಂಗೀ । ಅಬ್ ಹಮರೇ ನಾಹೀಂ ಅರ್ಧಂಗೀ ॥
ಹಮ್ ತೋ ಜರತ್ ಹೈಂ ಅಗ್ನಿ ಮಂಝಾರಾ ।
ಅಂಗ್ ಅಂಗ್ ಸಬ್ ಜರತ್ ಹಮಾರಾ ॥
ಕೌನ್ ಪುರುಷ್ ಅಬ್ ರಾಖೇ ಭಾಈ । ಕರತ್ ಗುಹಾರ್ ಚಕ್ಷು ಢಲ್ ಜಾಈ ॥

**"ಜ್ಞಾನೀ (ಕಬೀರ್‌ರ) ವಚನ್"**

ಕರುಣಾ ದೇಖ್ ದಯಾ ದಿಲ್ ಆವಾ । ಅರೇ ದೂತ್ ತ್ರಾಸ್ ಭಾಸ್ ದಿಖಾವಾ ॥
ದುರ್ದಶಾ ದೇಖ್ ದಯಾ ದಿಲ್ ಆವಾ ।
ಅರೇ ದೂತ್ ತುಮ್ ಜೀವನ್ ಭ್ರಮಾವಾ ॥
ಜೀವ್ ತೋ ಅಚೇತ್ ಅಜ್ಞಾನಾ । ವಾಕೋ ಕಾಲ್ ಜಾಲ್ ತುಮ್ ಬಂಧಾನಾ ॥
ಚೌರಾಸೀ ದೂತನ್ ಕಹಂ ಬಾಂಧಾ । ಶಬ್ದ್ ಡೋರ್ ಚೌದರ್ ಯಮ್ ಸಾಂಧಾ ॥
ತಬ್ ಹಮ್ ಸಬಹನ್ ಕಹಂ ಮಾರಾ । ತುಮ್ ಹೋ ಜಾಲಿಮ್ ಬಟಪಾರಾ ॥
ಹಮರೆ ಭಗತನ್ ಕೋ ತುಮ್ ಭ್ರಮಾವಾ । ಪಲ್ ಪಲ್ ಸುರತಿ ಜೀವನ್ ಡಿಗಾವಾ ॥
ಗಹಿ ಚೋಟಿ ದೂತ್ ಘಸಿಯಾಏ । ಯಮ್ ರೂ ದೂತ್ ವಿನಯ್ ತಬ್ ಲಾಏ ॥

**"ದೂತ್ (ಯಾರು ನಕಲಿ ಗುರುಗಳಾಗಿದ್ದರೊ) ವಚನ್"**

ಚುಕ್ ಹಮಾರೀ ಛಮಾ ಕರ್ ದೀಜೈ । ಮನ್ ಮಾನೇ ತಸ್ ಆಜ್ಞಾ ಕೀಜೈ ॥
ಹಮ್ ತೋ ಧನೀ (ಕಾಲ್) ಕಹಯೋ ಜಸ್ ಕೀನ್ಹಾ ।
ಸೋ ವಚನ್ ಮಾನ್ ಹಮ್ ಲೀನ್ಹಾ ॥
ಅಬ್ ನಹೀಂ ಜೀವ್ ತುಮ್ಹಾರಾ ಭ್ರಮಾವೈಂ ।
ಹಮ್ ನಹೀಂ ಕಬಹೂ ಗುರೂ ಕಹಾವೈಂ ॥

**"ಜ್ಞಾನೀ (ಕಬೀರ್‌ರ) ವಚನ್"**

ಸುನ್ ಜ್ಞಾನೀ ಬಹುತೆ ಹಂಸಾಈ ।
ದೂತನ್ ದುಷ್ಟ ಬಂಧ್ ನ ಛೋಡೋ ಜಾಈ ॥
ಪಲ್ ಇಕ್ ಜೀವನ್ ಸುಖ್ ದೀನಾ । ತಬ್ ಸಂಸಾರ್ ಗಮನ್ ಹಮ್ ಕೀನ್ಹಾ ॥

**ಭಾವಾರ್ಥ:– ಕಬೀರ್ ಪರಮೇಶ್ವರರು ಹೇಳಿರುವಂತೆ ಯಾರಾದರೂ ನಕಲಿ ಸದ್ಗುರುವಾಗಿ ಶಿಷ್ಯರನ್ನು ದಾರಿ ತಪ್ಪಿಸಿದರೆ ಅವರಿಗೆ ಪರಮೇಶ್ವರರು ಕಠಿಣವಾದ ಶಿಕ್ಷೆಯನ್ನು ನೀಡುತ್ತಾ ಅವನನ್ನು ಹಾಗೂ ಅವನ ಶಿಷ್ಯರನ್ನು ನರಕಕ್ಕೆ ತಳ್ಳುತ್ತಾರೆ. ಕಬೀರ ಪರಮೇಶ್ವರರು ನರಕದ ಬಳಿ ಹೋಗಿ ನೋಡಿದಾಗ ಹಸಿದ ನಕಲಿ ಸದ್ಗುರುಗಳು ಅಲ್ಲಿದ್ದರು. ಲಕ್ಷಾಂತರ ಜೀವಗಳನ್ನು ಶಿಷ್ಯರನ್ನಾಗಿ ಮಾಡಿದ್ದರು. ಅವರನ್ನೆಲ್ಲಾ ನರಕಕ್ಕೆ ಜೊತೆಯಲ್ಲಿ ಕರೆತಂದಿದ್ದರು. ಆ ನರಕದಲ್ಲಿ ಹೋಮಕುಂಡಗಳಂಥಾ ಅನೇಕ ಕುಂಡಗಳಿದ್ದವು. ಪ್ರತೀ ಕುಂಡದಲ್ಲೂ ಜೀವಿಗಳಿದ್ದರು. ಯಮದೂತರು ಅವರನ್ನು**

ಗೋಳುಹುಯ್ದುಕೊಳ್ಳುತ್ತಿದ್ದರು. ಆ 28 ಲಕ್ಷ ನಕಲಿ ಸದ್ಗುರುಗಳು ನನ್ನನ್ನು ನೋಡಿ, 'ನಮ್ಮನ್ನು ಉಳಿಸಿ ಪ್ರಭು!' ಎಂದು ಗೋಗರೆದರು. ಇದಕ್ಕೆ ಕಾರಣವೇನೆಂದರೆ ಕಬೀರರನ್ನು ನೋಡಿದ ಯಮದೂತರು ಗಡಗಡ ನಡುಗಲು ಪ್ರಾರಂಭಿಸಿದರು. ಹಾಗಾಗಿ ನಕಲಿ ಸದ್ಗುರುಗಳಿಗೆ ಇವರಲ್ಲೇನೋ ಪರಮ ಶಕ್ತಿ ಇದೆ ಎಂದು ಅನ್ನಿಸಿತ್ತು. ಪರಮೇಶ್ವರ ಕಬೀರರು, ನೀವು ಮುಗ್ಧ ಜೀವಿಗಳನ್ನು ಭ್ರಮೆಗೊಳಗಾಗಿಸಿದ್ದೀರಿ. ನಿಮ್ಮನ್ನು ನೀವೇ ಸದ್ಗುರು ಎಂದು ಕರೆದುಕೊಂಡಿದ್ದೀರಿ. ಲಕ್ಷಾಂತರ ಮನುಷ್ಯರ ಅಮೂಲ್ಯ ಜೀವನವನ್ನು ನಿಮ್ಮ ಸ್ವಾರ್ಥಕ್ಕಾಗಿ ಹಾಳು ಮಾಡಿದ್ದೀರಿ. ಅವರು ಕಾಲನ ಬಲೆಯಲ್ಲಿ ಸಿಲುಕಿದ್ದಾರೆ." ಎಂದು ಹೇಳಿದರು ಆಗ ನಕಲಿ ಸದ್ಗುರುಗಳು, ನಾವು ಕಾಲಬ್ರಹ್ಮನ ಆಜ್ಞೆಯನ್ನು ಪಾಲಿಸಿದೆವು. ಈಗ ತಪ್ಪಾಗಿದೆ. ಇನ್ನು ಮುಂದೆ ನೀವು ಹೇಳಿದಂತೆ ಕೇಳುತ್ತೇವೆ. ಎಂದರು. ಎಲ್ಲಿಯವರೆಗೆ ಕಬೀರ ಪರಮೇಶ್ವರರು ಅಲ್ಲಿ ಇದ್ದರೋ ಅಲ್ಲಿಯವರೆಗೆ ಅವರಿಗೆ ಯಾವುದೇ ಕಷ್ಟವಾಗಲಿಲ್ಲ. ಅವರು ಹೊರಟು ಹೋದ ಮೇಲೆ ಮತ್ತೇ ಅವರಿಗೆ ನರಕ ಪ್ರಾಪ್ತಿಯಾಯಿತು. ಹಾಗಾಗಿ ಯಾರಾದರೂ ಅಜ್ಞಾನದಿಂದ ತನ್ನನ್ನು ಸದ್ಗುರು ಎಂದುಕೊಂಡರೆ ಪರಮೇಶ್ವರನು ಕೋಪಗೊಳ್ಳುತ್ತಾನೆ ಮತ್ತು ಕಾಲನು ಕಷ್ಟ ಕೊಡುತ್ತಾನೆ. ಅದ್ದರಿಂದ ಸಜ್ಜನರೇ, ಎಂದಿಗೂ ಅಂಥಾ ತಪ್ಪು ಮಾಡಬೇಡಿ.

### ಭಕ್ತನ ಸ್ವಭಾವ ಹೇಗಿರಬೇಕು?

**(ಅನುರಾಗ ಸಾಗರದ 6ನೇ ಪುಟದ ವಾಣಿ ಸಂಖ್ಯೆ 7ರಿಂದ 17)**

### ಧರ್ಮದಾಸ ವಚನ

ಮೃತಕ್ ಭಾವ್ ಪ್ರಭು ಕಹೋ ಬುಝಾಈ । ಜಾತೆ ಮನಕೀ ತಪನಿ ನಸಾಈ ॥
ಕೇಹಿ ವಿಧಿ ಮೃತಕ್ ಹೋ ಯಹ್ ಜೀವನ್ ।
ಕಹೋ ವಿಲೋಯ್ ನಾಥ್ ಅಮೃತ್‌ಧನ್ ॥

**ಕಬೀರರ ವಚನ–ಮೃತಪಟ್ಟವರ ದೃಷ್ಟಾಂತ (ಉದಾಹರಣೆ)**

ಧರ್ಮದಾಸ್ ಯಹ್ ಕಠಿನ್ ಕಹಾನೀ । ಗುರುಗಮ್ ತೆ ಕೋಈ ವಿರಲೇ ಜಾನೀ ॥

### ಭೃಂಗಿಯ ದೃಷ್ಟಾಂತ (ಉದಾಹರಣೆ)

ಮೃತಕ್ ಹೋಯ್ ಕೇ ಖೋಜಹಿಂ ಸಂತಾ । ಶಬ್ದ್ ವಿಚಾರಿ ಗಹೈಂ ಮಗು ಅನ್ತಾ ॥
ಜೈಸೆ ಭೃಂಗ್ ಕೀಟ್ ಕೇ ಪಾಸಾ । ಕೀಟ್ ಗಹೋ ಭೃಂಗ್ ಶಬ್ದ್ ಕೀ ಆಶಾ ॥
ಶಬ್ದ್ ಘಾತ್ ಕರ್ ತೇಹೀ ಮಹೈಂ ಡಾರೇ । ಭೃಂಗೀ ಶಬ್ದ್ ಕೀಟ್ ಜೋ ಧಾರೇ ॥
ತಬ್ ಲೈಗೌ ಭೃಂಗೀ ನಿಜ್ ಗೇಹಾ । ಸ್ವಾತೀ ದೇಹ್ ಕೀನ್ಹೋ ಸಮದೇಹಾ ॥
ಭೃಂಗೀ ಶಬ್ದ್ ಕೀಟ್ ಜೋ ಮಾನಾ । ವರಣ್ ಫೇರ್ ಆಪನ್ ಕರಜಾನಾ ॥
ಬಿರಲಾ ಕೀಟ್ ಜೋ ಹೋಯ್ ಸುಖದಾಈ ।
ಪ್ರಥಮ್ ಅವಾಜ್ ಗಹೇ ಚಿತಲಾಈ ॥
ಕೋಇ ದೂಜೇ ಕೋಇ ತೀಜೇ ಮಾನೈ । ತನ್ ಮನ್ ರಹಿತ್ ಶಬ್ದಿ ಹಿತ್ ಜಾನೈ ॥
ಭೃಂಗೀ ಶಬ್ದ್ ಕೀಟ್ ನಾ ಗಹಈ । ತೌ ಪುನಿ ಕೀಟ್ ಆಸರೇ ರಹಈ ॥
ಏಕ್ ದಿನ್ ಕೀಟ್ ಗಹೇಸೀ ಭೃಂಗ್ ಭಾಷಾ । ವರಣ್ ಬದಲೈ ಪೂರವೈ ಆಶಾ ॥

### ಮೃತಪಟ್ಟವರ ಮತ್ತಷ್ಟು ದೃಷ್ಟಾಂತಗಳು

**(ಅನುರಾಗ ಸಾಗರದ ಪುಟ 7ರಿಂದ ವಾಣಿ ಸಂ. 7ರಿಂದ 20)**

ಸುನಹು ಸಂತ್ ಯಹ್ ಮೃತಕ್ ಸುಭಾಊ ।
ಬಿರಲಾ ಜೀವ್ ಪೀವ್ ಮಗ್ ಧಾಊ ॥
ಔರೈ ಸುನಹು ಮೃತಕ್ ಕಾ ಭೇವಾ । ಮೃತಕ್ ಹೋಯ್ ಸತ್‌ಗುರು ಪದ್ ಸೇವಾ ॥
ಮೃತಕ್ ಛೋಹ್ ತಜೈ ಶಬ್ದ್ ಉರಧಾರೇ ।
ಛೋಹ್ ತಜೈ ತೋ ಜೀವ್ ಉಬಾರೇ ॥

## ಭೂಮಿಯ ದೃಷ್ಟಾಂತ

ಜಸ್ ಪೃಥ್ವೀ ಕೇ ಗಂಜನ್ ಹೋಈ । ಚಿತ್ ಅನುಮಾನ್ ಗಹೇ ಗುಣ್ ಸೋಈ ॥
ಕೋಈ ಚಂದನ್ ಕೋಈ ವಿಷ್ಟಾ ಡಾರೇ । ಕೋಈ ಕೋಈ ಕೃಷಿ ಅನುಸಾರೇ ॥
ಗುಣ್ ಔಗುಣ್ ತಿನ್ ಸಮಕರ್ ಜಾನಾ । ತಜ್ ವಿರೋಧ್ ಅಧಿಕ್ ಸುಖ್‌ಮಾನಾ ॥

## ಕಬ್ಬಿನ ದೃಷ್ಟಾಂತ

ಔರೋ ಮೃತಕ್ ಭಾವ್ ಸುನಿ ಲೇಹೂ ।
ನಿರಖಿ ಪರಖಿ ಗುರೂ ಮಗು ಪಗು ದೇಹೂ ॥
ಜೈಸೆ ಈಖ್ ಕಿಸಾನ್ ಉಗಾವೈ । ರತೀ ರತೀ ಕರ್ ದೇಹ್ ಕಟಾವೇ ॥
ಕೋಲ್ಹೂ ಮಹಂ ಪುನಿ ತಾಹೀ ಪಿರಾವೈ ।
ಪುನಿ ಕಡಾಹ್ ಮೆಂ ಖೂಬ್ ಉಂಟಾವೇ ॥
ನಿಜ್ ತನು ದಾಹೇ ಗುಡ್ ತಬ್ ಹೋಈ ।
ಬಹುರಿ ತಾವ್ ದೇ ಖಾಂಡ್ ವಿಲೋಈ ॥
ತಾಹೂ ಮಾಂಹಿ ತಾವ್ ಪುನಿ ದೀನ್ಹಾ । ಚೀನೀ ತಬೈ ಕಹಾವನ್ ಲೀನ್ಹಾ ॥
ಚೀನೀ ಹೋಯ್ ಬಹುರಿತ್ ತನ್ ಜಾರಾ । ತಾತೇ ಮಿಸರೀ ಹೈ ಅನುಸಾರಾ ॥
ಮಿಸರೀತೇ ಜಬ್ ಕಂದ್ ಕಹಾವಾ । ಕಹೇ ಕಬೀರ್ ಸಬಕೇ ಮನ್ ಭಾವಾ ॥
ಯಹೀ ವಿಧಿತೇ ಜೋ ಶಿಷ್ ಕರಹೀ । ಗುರು ಕೃಪಾ ಸಹಜೇ ಭವ್ ತರಈ ॥

**ಭಾವಾರ್ಥ:– ಧರ್ಮದಾಸನು ಕಬೀರರನ್ನು ಪ್ರಶ್ನಿಸಿದನು. "ಹೇ ಪ್ರಭು! ಮರಣಿಸಿದವರ ಸ್ವಭಾವ ಹೇಗಿರುತ್ತದೆ ಎಂದು ನನಗೆ ತಿಳಿಸು. ಬದುಕಿದ್ದು ಸಾಯುವುದು ಹೇಗೆ? ಅಮರ ಪರಮಾತ್ಮ! ಹೇ ಸ್ವಾಮಿ! ಕೃಪೆ ಇಟ್ಟು ಅಮರನಾಗುವ ಮಾರ್ಗ ತೋರಿಸು." ಆಗ ಪರಮೇಶ್ವರ ಕಬೀರರೆಂದರು, ಹೇ ಧರ್ಮದಾಸ! ನಿಮ್ಮ ಪ್ರಶ್ನೆಗೆ ಉತ್ತರ ಹೇಳಲು ಒಂದು ಜಟಿಲ ಕಥಾ ಪ್ರಸಂಗವನ್ನು ಹೇಳುತ್ತೇನೆ. ಸದ್ಗುರುವಿನ ಆಶ್ರಯದಲ್ಲಿ ಇದ್ದು ಜ್ಞಾನ ಪಡೆಯಲು ಇಚ್ಛಿಸುವವನು ಇದನ್ನು ತಿಳಿದುಕೊಂಡು ಈ ಪರೀಕ್ಷೆಯಲ್ಲಿ ಉತ್ತೀರ್ಣನಾಗುವನು."**

## "ಭೃಂಗಿಯ ದೃಷ್ಟಾಂತ"

**ಸಂತ ಸಾಧಕರು ಬದುಕಿದ್ದು ಮೃತರಾಗಿ ಪರಮಾತ್ಮನನ್ನು ಹುಡುಕುತ್ತಾರೆ. ಯಥಾರ್ಥವಾದ ನಾಮ ಮಂತ್ರಗಳನ್ನು ತಿಳಿದುಕೊಂಡು, ಅದರ ಬಗ್ಗೆ ಚಿಂತಿಸಿ, ಆ ಮಾರ್ಗದ ಅಂತಿಮ ಗುರಿಯವರೆಗೆ ತಲುಪುತ್ತಾರೆ ಹಾಗೂ ಪೂರ್ಣ ಮೋಕ್ಷವನ್ನು ಪಡೆಯುತ್ತಾರೆ.**

**ಭೃಂಗವೆಂದರೆ ರೆಕ್ಕೆಯುಳ್ಳ ಒಂದು ಕೀಟ. ಅದು ಕಡು ನೀಲಿ ಬಣ್ಣದ್ದಾಗಿರುತ್ತದೆ ಹಾಗೂ ಜೀ–**

ಜೀ ಎಂಬ ಶಬ್ದವನ್ನು ಮಾಡುತ್ತಿರುತ್ತದೆ. ಅದನ್ನು ದುಂಬಿ ಎಂದೂ ಕರೆಯುತ್ತಾರೆ. ಅದು ಬೇರೆ ಭೃಂಗಗಳ ಜೊತೆ ಸೇರಿ ತನ್ನ ಸಂತಾನವನ್ನು ಉತ್ಪತ್ತಿ ಮಾಡುವುದಿಲ್ಲ. ಅದು ಒಂದು ವಿಶೇಷವಾದ ಕೀಟದ ಬಳಿ ತೆರಳುತ್ತದೆ ಹಾಗೂ ಜೀ ಎಂದು ಶಬ್ದಮಾಡುತ್ತದೆ. ಆ ಶಬ್ದದಿಂದ ಆ ಕೀಟವು ಆಕರ್ಷಿತವಾಗುತ್ತದೆ. ಆಗ ಆ ಭೃಂಗವು ಆ ಕೀಟವನ್ನು ತೆಗೆದುಕೊಂಡು ನೆಲದ ಒಳಗಡೆ ಇರುವ ಒಂದು ಪುಟ್ಟ ಗೂಡಿನಲ್ಲಿ ಇಡುತ್ತದೆ. ಹೀಗೆ ಹಲವಾರು ಕೀಟಗಳನ್ನು ಅಲ್ಲಿ ಇಡುತ್ತದೆ. ನಂತರ ತನ್ನ ಬಾಯಿಂದ ಜಲವನ್ನು ತೆಗೆದುಕೊಂಡು ಹೋಗಿ ಆ ಕೀಟಗಳ ಮೇಲೆ ಚೆಲ್ಲುತ್ತದೆ. ನಿರಂತರವಾಗಿ ಜೀ ಎಂಬ ಶಬ್ದವನ್ನು ಮಾಡುತ್ತಿರುತ್ತದೆ. ಕೆಲವು ದಿನಗಳವರೆಗೆ ಈ ಪ್ರಕ್ರಿಯ ನಡೆದಾಗ ಆ ಕೀಟಗಳಿಗೆ ರೆಕ್ಕೆಗಳು ಮೂಡಿ, ನೀಲಿ ಬಣ್ಣಬಂದು, ಭೃಂಗಗಳಾಗಿ ಮಾರ್ಪಡುತ್ತವೆ. ಇದೇ ರೀತಿ ಸದ್ಗುರುವು ಸತ್ಸಂಗ ಏರ್ಪಡಿಸಿದಾಗ ಸಾಮಾನ್ಯ ಜನರಿಗೆ ಅದರ ಪ್ರಭಾವ ಬಿದ್ದು ಅವರು ಭಕ್ತರಾಗುತ್ತದೆ. ಸಂಸ್ಕಾರವಂತರು ಒಂದೆರೆಡು ದಿನದಲ್ಲೇ ಜ್ಞಾನ ಪಡೆಯುತ್ತಾರೆ. ಇನ್ನೂ ಕೆಲವರು ಕೆಲವು ಕಾಲ ಪ್ರವಚನ ಕೇಳಿದ ನಂತರ ದೀಕ್ಷೆ ಪಡೆಯುತ್ತಾರೆ. ಕೆಲವು ಕೀಟಗಳು ಬಹಳ ದಿನಗಳ ನಂತರ ತನ್ನ ಸ್ವಭಾವ ಬದಲಿಸದೆ, ಭೃಂಗವಾಗಿ ಮಾರ್ಪಡದಿದ್ದರೂ, ದೀರ್ಘಕಾಲ ಭೃಂಗದ ಜೊತೆ ಇದ್ದರೆ ಖಂಡಿತವಾಗಿಯೂ ಒಂದಲ್ಲ ಒಂದು ದಿನ ಪರಿವರ್ತನೆಯಾಗುತ್ತದೆ. ಇದೇ ರೀತಿ ಶಿಷ್ಯನು ಗುರುವಿನ ವಿಚಾರಗಳನ್ನು ಕೇಳುತ್ತಿದ್ದರೆ ಆ ಕೀಟದಂತೆ ಪ್ರಭಾವಿತನಾಗಿ ಪ್ರಾಪಂಚಿಕ ಭಾವನೆಗಳನ್ನು ಬದಲಿಸಿಕೊಂಡು ಭಕ್ತನಾಗುತ್ತಾನೆ.

ಕಬೀರರೆಂದರು, "ಮೃತಕನ ಸ್ವಭಾವವನ್ನು ಕೇಳು. ಈ ರೀತಿಯಲ್ಲಿ ಯಾರೋ ಒಬ್ಬರು ವಿರಳವಾಗಿ ಮಾತ್ರ ಅನುಸರಿಸಲು ಸಾಧ್ಯ. ಅಂಥವರು ಪರಮಾತ್ಮನನ್ನು ಪಡೆಯುವ ಮಾರ್ಗವನ್ನು ಕಂಡುಕೊಳ್ಳುತ್ತಾರೆ. ಇದಲ್ಲದೆ ಮೃತಕನ ಇನ್ನೊಂದು ಉದಾಹರಣೆಯನ್ನು ನೋಡು".


## "ಭೂಮಿಯ ಉದಾಹರಣೆ"

ಪೃಥ್ವಿಯಲ್ಲಿ ಸಹನಾಶೀಲತೆ ಇರುತ್ತದೆ. ಯಾರು ಪೃಥ್ವಿಯಂಥ ಗುಣವನ್ನು ಹೊಂದುತ್ತಾನೋ, ಅವನನ್ನು ಸಾಧಕ ಎನ್ನಬಹುದು ಮತ್ತು ಅವನು ಯಶಸ್ಸನ್ನು ಕಾಣುತ್ತಾನೆ. ಭೂಮಿಯ ಮೇಲೆ ಒಬ್ಬರು ಗುಡಿಸಲು ನಿರ್ಮಿಸುತ್ತಾರೆ, ಇನ್ನಾರೋ ವ್ಯವಸಾಯ ಮಾಡಲು ಉಳುತ್ತಾರೆ, ಅದನ್ನು ಸೀಳುತ್ತಾರೆ, ಮತ್ತೊಬ್ಬರು ಭೂಮಿಯನ್ನು ಪೂಜಿಸುತ್ತಾರೆ. ಭೂಮಿಯ, ಗುಣಾವಗುಣಗಳನ್ನು ನೋಡುವುದಿಲ್ಲ. ಯಾರು ಯಾವ ಭಾವನೆಯಿಂದಿರುತ್ತಾರೋ ಅವರು ಹಾಗೇ ಮಾಡುತ್ತಾರೆ. ಆದರೆ ಭೂಮಿಯು ಇದ್ಯಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ಸುಖವಾಗಿರುತ್ತದೆ.

ಅಂದರೆ ಹೇಗೆ ಜಮೀನು ಸಹನೆಯಿಂದ ಇರುವುದೋ, ಭಕ್ತನ ಸ್ವಭಾವವು ಹಾಗೆಯೇ ಇರಬೇಕು. ಯಾರು ಏನೇ ಹೇಳಿದರೂ, ಎಷ್ಟೇ ಅವಮಾನಮಾಡಿದರೂ, ಎಷ್ಟೇ ಗೌರವಿಸಿದರೂ, ತನ್ನ ಉದ್ದೇಶಕ್ಕಾಗಿ ಧೃಡವಾಗಿದ್ದು ಮುನ್ನಡೆದರೆ ಭಕ್ತನು ಯಶಸ್ಸನ್ನು ಕಾಣುವನು.

## "ಕಬ್ಬಿನ ದೃಷ್ಟಾಂತ"

ರೈತನು ಕಬ್ಬನ್ನು ಬೆಳೆಯುತ್ತಾನೆ. ಕಬ್ಬನ್ನು ಬೆಳೆಯಲು ಕಬ್ಬಿನ ತುಂಡುಗಳನ್ನು ಒಂದೊಂದು ಅಡಿ ಅಂತರದಲ್ಲಿ ಭೂಮಿಯಲ್ಲಿ ನೆಡುತ್ತಾನೆ. ಕಬ್ಬು ಬೆಳೆದು ಬಲಿತ ಮೇಲೆ ಅದನ್ನು ಗಾಣದಲ್ಲಿ ಅರೆಯಲಾಗುತ್ತದೆ. ನಂತರ ಕಬ್ಬಿನ ರಸವನ್ನು ಕಡಾಯಿಯಲ್ಲಿ ಹಾಕಿ ಬೆಂಕಿಯ ಮೇಲಿಟ್ಟು ಕುದಿಸಲಾಗುತ್ತದೆ. ಆಗ ಬೆಲ್ಲ ಸಿದ್ಧವಾಗುತ್ತದೆ. ಬೆಂಕಿಯ ತಾಪವನ್ನು ಹೆಚ್ಚಿಸಿದಷ್ಟೂ ಅದು ಪಾಕವಾಗುತ್ತದೆ ಮತ್ತು ಹೆಚ್ಚು ಸ್ವಾದಿಷ್ಟವಾಗಿರುತ್ತದೆ. ಇನ್ನೂ ಕಾಯಿಸಿದಾಗ ಸಕ್ಕರೆಯಾಗುತ್ತದೆ. ಇನ್ನೂ ಹೆಚ್ಚು ಕಾಯಿಸಿದಾಗ ಕಲ್ಲು ಸಕ್ಕರೆಯಾಗುತ್ತದೆ. ಪರಮೇಶ್ವರರಾದ ಕಬೀರರು ಹೇಳಿದ್ದಾರೆ. "ಹೇ ಧರ್ಮದಾಸ, ಈ ರೀತಿ ಶಿಷ್ಯನು ಭಕ್ತಿಯಲ್ಲಿ ಎಷ್ಟು ಕಷ್ಟಗಳನ್ನು ಸಹಿಸುತ್ತಾನೋ, ಅವನು ಪರಮಾತ್ಮನಿಗೆ ಅಷ್ಟೇ ಆಪ್ತನಾಗುತ್ತಾನೆ.



ಅನುರಾಗ ಸಾಗರದ **8** ಹಾಗೂ **9**ನೇ ಪುಟದ ಸಾರಾಂಶದ ಪ್ರಕಾರ, ಯಾರು ತನ್ನ ಎಲ್ಲಾ ಇಂದ್ರಿಯಗಳನ್ನು ಸಂಯಮದಲ್ಲಿಟ್ಟುಕೊಳ್ಳುತ್ತಾರೋ ಅವನೇ ನಿಜವಾದ ಸಾಧಕ. ಏನು ಸಿಕ್ಕಿದೆಯೋ,

ಅದರಲ್ಲೇ ತೃಪ್ತಿಪಟ್ಟುಕೊಳ್ಳಬೇಕು. ರೂಪಕ್ಕೆ ಮರುಳಾಗಬಾರದು. ಕುರೂಪವನ್ನು ನೋಡಿ ಅಸಹ್ಯಿಸಿಕೊಳ್ಳಬಾರದು. ಇಬ್ಬರನ್ನೂ ಸಮಾನ ದೃಷ್ಟಿಯಿಂದ ನೋಡಬೇಕು. ಹೊರಗಿನ ಚರ್ಮ ಕಪ್ಪು–ಬಿಳಿ ಇರಬಹುದು, ಆದರೆ ಶರೀರದಲ್ಲಿರುವ ರಕ್ತ ಮಾಂಸಗಳು ಒಂದೇ ರೀತಿಯಲ್ಲಿರುತ್ತದೆ. ಸ್ವಲ್ಪ ರೋಗ ಬಂದರೆ ಸಾಕು, ಕೊಳೆತು ನಾರುತ್ತದೆ. ವಿವೇಕದಿಂದ ಸಾಧನೆ ಮಾಡಬೇಕು. ಯಾರಾದರೂ ಕೆಟ್ಟ ಮಾತಾಡಿದರೆ ದುಃಖಪಡಬಾರದು, ಹೊಗಳಿದರೆ ಸಂತೋಷಿಸಬಾರದು. ಅವರ ಬುದ್ಧಿ ತಿಳಿದು ಶಾಂತವಾಗಿರಬೇಕು. ಯಾರಾದರೂ ಹಲ್ವ, ಪಾಯಸ, ಪಂಚಭಕ್ಷ್ಯಪರಮಾನ್ನಗಳನ್ನು ತಿನ್ನಿಸಿದರೆ, ಅದರಿಂದ ಆಕರ್ಷಿತವಾಗಬಾರದು. ಹಾಗಿದ್ದಾಗ ಅವನಿಗೆ ಕರ್ಮಫಲ ಖಂಡಿತವಾಗಿಯೂ ಸಿಗುವುದು. ಯಾರಾದರೂ ಒಣಕಲು ರೊಟ್ಟಿ ಕೊಟ್ಟರೆ ಅದನ್ನು ಪ್ರೀತಿಯಿಂದ ಸ್ವೀಕರಿಸಬೇಕು. ಕಾಮಕ್ಕೆ ಮಹತ್ವ ಕೊಡಬಾರದು. ಇಂತಹ ಭಕ್ತನು ಮೋಕ್ಷವನ್ನು ಪಡೆಯುತ್ತಾನೆ. ಒಂದು ವೇಳೆ ಕಾಮವು ಅವನನ್ನು ಭಾಧಿಸಿದರೆ ಭಕ್ತಿಯಿಂದ ಅದನ್ನು ಗೆಲ್ಲಬೇಕು. ಆಗ ಕಾಮವಾಸನೆಯು ತನಗೆ ತಾನೇ ದೂರವಾಗುತ್ತದೆ. ಕಾಮವನ್ನು ನಾಶಮಾಡುವ ವಿಧಾನವೆಂದರೆ,

ಕಬೀರ್, ಪರನಾರೀ ಕೋ ದೇಖಿಯೇ, ಬಹನ್ ಬೇಟೀ ಕಾ ಬಾವ್ ।
ಕಹ್ ಕಬೀರ್ ಕಾಮ್ ನಾಶ್ ಕಾ, ಯಹೀ ಸಹಜ್ ಉಪಾಯ್ ॥

## "ಮೋಕ್ಷ ಪ್ರಾಪ್ತಿಯ ಅನ್ಯ ಭಾವ"ಅನಲ್ (ಅಲಲ್) ಪಕ್ಷಿಯಂತಹ ಭಾವ"

ಒಂದು ವಾಯುಪಕ್ಷಿಯು ಆಕಾಶದಲ್ಲಿತ್ತು. ಈಗ ಅಂಥಾ ಪಕ್ಷಿಯು ಅವಸಾನವಾಗಿ ಬಿಟ್ಟಿದೆ. ಅದಕ್ಕೆ ನಾಲ್ಕು ಕಾಲುಗಳಿರುತ್ತಿದ್ದವು. ಮುಂದಿನ ಕಾಲುಗಳು ಚಿಕ್ಕವು ಹಾಗೂ ಹಿಂದಿನವು

ದೊಡ್ಡವಾಗಿರುತ್ತಿದ್ದವು. ಅದರ ಆಕಾರವು ಬಹಳ ದೊಡ್ಡದಿರುತ್ತಿತ್ತು. ಅದಕ್ಕೆ ದೊಡ್ಡ ದೊಡ್ಡ ರೆಕ್ಕೆಗಳಿರುತ್ತಿದ್ದವು. ಆ ಪಕ್ಷಿಗೆ ನಾಲ್ಕು ಆನೆಗಳನ್ನು ಒಟ್ಟಿಗೆ ಎತ್ತಿ ಆಕಾಶದಲ್ಲಿ ಹಾರಾಡುತ್ತಾ, ತನ್ನ ಕುಟುಂಬದ ಬಳಿಗೆ ತೆಗೆದುಕೊಂಡು ಹೋಗುವ ಸಾಮರ್ಥ್ಯವಿತ್ತು. ಅದನ್ನು ಅಲಲ್ ಪಕ್ಷಿ ಎಂದು ಕರೆಯುತ್ತಿದ್ದರು.

ಆ ಪಕ್ಷಿ ಯಾವಾಗಲೂ ಗಾಳಿಯಲ್ಲೇ ಇರುತ್ತಿತ್ತು. ಅಲ್ಲಿಂದಲೇ ಹೆಣ್ಣು ಪಕ್ಷಿಯು ಮೊಟ್ಟೆಯಿಡುತ್ತಿತ್ತು. ಅದು ಯಾವಾಗಲೂ ಬಾಳೆಯ ತೋಟದಲ್ಲೇ ಮೊಟ್ಟೆ ಬೀಳುವಂತೆ ಮಾಡುತ್ತಿತ್ತು. ಏಕೆಂದರೆ ಬಾಳೆಯ ಮರ ಒಂದಕ್ಕೊಂದು ಅಂಟಿಕೊಂಡಂತಿದ್ದು. ಮೊಟ್ಟೆ ನೆಲದ ಮೇಲೆ ಬಿದ್ದು ಚೂರಾಗುತ್ತಿರಲಿಲ್ಲ. ಬಾಳೆಯ ವನದಲ್ಲಿ ಬಿದ್ದ ಮೊಟ್ಟೆಯು ಒಡೆದು ಮರಿಯಾಗುತ್ತಿತ್ತು. ಅದು ಬೇರೆ ಪಕ್ಷಿಗಳ ಜೊತೆ ಇರುತ್ತಿತ್ತು. ಆದರೆ ಅದಕ್ಕೆ ದಿನವೂ ಇದು ನನ್ನ ಕುಟುಂಬವಲ್ಲ ಎಂದು ಅದರ ಮನಸ್ಸಿನಲ್ಲಿ ಕೊರೆಯುತ್ತಿತ್ತು. ಬಾಳೆಯ ವನದಲ್ಲಿ ಆನೆಗಳೂ ಬೀಡು ಬಿಡುತ್ತಿದ್ದವು. ಬಾಳೆಯ ಗೊನೆಗಳನ್ನು ತಿಂದು ಅಲ್ಲೇ ವಾಸಿಸುತ್ತಿದ್ದವು. ಅಲಲ್ ಪಕ್ಷಿಯು ಯೌವನಾವಸ್ಥೆಗೆ ಬಂದಾಗ ಅವುಗಳ ರೆಕ್ಕೆಗಳು ದೊಡ್ಡದಾಗಿ, ತನ್ನ ಕೊಕ್ಕಿನಲ್ಲಿ ಆನೆಯನ್ನು ಕಚ್ಚಿಕೊಂಡು ತನ್ನ ಕುಟುಂಬದ ಬಳಿಗೆ ಹಾರಿ ಹೋಗುತ್ತಿತ್ತು.

ಇದೇ ರೀತಿ ಕಬೀರ ಪರಮೇಶ್ವರರು ಉದಾಹರಣೆ ನೀಡಿ ವಿವರಿಸಿದ್ದಾರೆ. ನೀವು ಈ ಪ್ರಪಂಚದ ಶಾಶ್ವತವಾದ ವಾಸಿಗಳಲ್ಲ. ಇದನ್ನೆಲ್ಲಾ ಬಿಟ್ಟು ಹೋಗಲೇ ಬೇಕು. ನಿಮ್ಮ ನಿಜವಾದ ಸತ್ಯಲೋಕ ಮೇಲಿದೆ. ನೀವು ಸುಮ್ಮನೆ ಈ ಭೂಮಿಯ ಮೇಲಿದ್ದೀರಾ. ತತ್ವಜ್ಞಾನವನ್ನು ಪಡೆದ ಭಕ್ತನ ಸ್ಥಿತಿಯು ಅಲಲ್ ಪಕ್ಷಿಯ ಹಾಗೆ ಇರಬೇಕು. ಎಲ್ಲಿಯವರೆಗೆ ಸತ್ಯಲೋಕಕ್ಕೆ ಹೋಗುವ ಸಮಯ ಬರುವುದಿಲ್ಲವೋ ಅಲ್ಲಿಯವರೆಗೆ ಬೇರೆ ವ್ಯಕ್ತಿಗಳ ಜೊತೆ ಇರಬೇಕಾಗುವುದು. ಹೋಗುವಾಗ ಯಾವುದೇ ಬಯಕೆಗಳಿರಬಾರದು. ತಮ್ಮ ನಾಮಸ್ಮರಣೆಯ ಪುಣ್ಯ ಹಾಗೂ ಧರ್ಮದ ಪುಣ್ಯ ಜೊತೆಯಲ್ಲಿ ತೆಗೆದುಕೊಂಡು ಹಾರಿ ಹೋಗಬೇಕು. ನಿಜವಾದ ಸತ್ಯಲೋಕಕ್ಕೆ ಹೋಗಿ ಸೇರಬೇಕು.

ಅನುರಾಗ ಸಾಗರದ 152ನೇ ಪುಟದ ಸಾರಾಂಶ:–

ಈ ಪುಟದಲ್ಲಿ ಪರಮೇಶ್ವರರು ಶರೀರದ ಒಳಗಿರುವ ರಹಸ್ಯವನ್ನು ತಿಳಿಸಿದ್ದಾರೆ. ಮಾನವನ ಶರೀರದಲ್ಲಿ 72 ನಾಡಿಗಳಿವೆ. ಅದರಲ್ಲಿ (ಈಡಾ, ಪಿಂಗಳಾ, ಸುಷ್ಮಣಾ) ತುಂಬಾ ಮುಖ್ಯವಾಗಿವೆ. ಬ್ರಹ್ಮರಂಧ್ರವೆಂಬ ಮತ್ತೊಂದು ವಿಶೇಷವಾಗಿ ಮುಖ್ಯನಾಡಿ ಇದೆ. ಪರಮೇಶ್ವರರು ಹೇಳಿದರು. ಹೇ ಧರ್ಮದಾಸ! ಮನಸ್ಸೇ ಜ್ಯೋತಿ ನಿರಂಜನ. ಜೀವನವನ್ನು ಕೋತಿಯಂತೆ ಕುಣಿಸಬಲ್ಲದು. ಈ ಶರೀರದಲ್ಲಿ 5 ತತ್ವಗಳು 25 ಪ್ರಕೃತಿ ಹಾಗೂ 3 ಗುಣಗಳು ಇವು ಮೂರು ಕಾಲನ ಏಜೆಂಟ್‌ರಿದ್ದಾರೆ. ಜೀವನವನ್ನು ಇವು ಮೋಸದಲ್ಲಿಡುತ್ತವೆ. ಈ ಶರೀರದಲ್ಲಿ ಕಾಲನಿರಂಜನ ಮತ್ತು ಜೀವ ಇವೆರಡರ ಭೂಮಿಕೆಯು ಮುಖ್ಯವಾದುದು. ಮನಸ್ಸಿನ ರೂಪದಲ್ಲಿ ಕಾಲನಿರಂಜನವು ಎಲ್ಲಾ ರೀತಿಯ ಪಾಪವನ್ನು ಮಾಡಿಸುತ್ತದೆ. ಜೀವದ ತಲೆಯ ಮೇಲೆ ಪಾಪವು ಸವಾರಿ ಮಾಡುತ್ತಿರುತ್ತದೆ.

ಅನುರಾಗ ಸಾಗರದ 153ನೇ ಪುಟದ ಸಾರಾಂಶ:–

ಕಾಲವು ಎಂಥಾ ಮೋಸ ಮಾಡಿದೆಯೆಂದರೆ ಜೀವವು ಪರಮೇಶ್ವರನನ್ನು ಮರೆತು ಕುಳಿತು ಬಿಡುತ್ತದೆ.

## "ಮನಸ್ಸು ಹೇಗೆ ಪಾಪ ಪುಣ್ಯಗಳನ್ನು ಮಾಡಿಸುತ್ತದೆ"

ಮನಸ್ಸು ಕರಾಳವಾದದ್ದು, ಅದು ಜೀವನವನ್ನು ಆಡಿಸುತ್ತದೆ. ಸುಂದರ ಸ್ತ್ರೀಯನ್ನು ನೋಡಿದರೆ ಅವಳ ಜೊತೆ ಭೋಗ ವಿಲಾಸದಲ್ಲಿರಬೇಕೆಂದು ಮನಸ್ಸು ಹಾತೊರೆಯುತ್ತದೆ. ಸ್ತ್ರೀಯರನ್ನು ಭೋಗಿಸಿ

ಮನ ಆನಂದಪಡೆದರೆ, ಪಾಪವು ಜೀವದ ತಲೆಯ ಮೇಲೇರುತ್ತದೆ.

ವರ್ತಮಾನದಲ್ಲಿ ಸರ್ಕಾರವು ಸಾಕಷ್ಟು ಕಠಿಣ ನಿಯಮಗಳನ್ನು ಮಾಡಿದೆ. ಒಬ್ಬ ವ್ಯಕ್ತಿ ಯಾರಾದರೂ ಸ್ತ್ರೀಯ ಮೇಲೆ ಅತ್ಯಚಾರವೆಸಗಿದರೆ ಅವನಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗುತ್ತದೆ. ಆನಂದ ಎರಡು ನಿಮಿಷದ್ದಾದರೆ ದುಃಖ ಬೆಟ್ಟದಷ್ಟು. ಆದ್ದರಿಂದ ಮನಸ್ಸಿಗೆ ಜ್ಞಾನದ ಕಡಿವಾಣ ಹಾಕುವುದು ಅತ್ಯಂತ ಅವಶ್ಯಕ.

ಅನುರಾಗ ಸಾಗರದ 154ರ ಪುಟದ ಸಾರಾಂಶ:– ಪರರ ಆಸ್ತಿಯನ್ನು ನೋಡಿ ಮನಸ್ಸು ಅದನ್ನು ಕಬಳಿಸಲು ಪ್ರೇರೇಪಿಸುತ್ತದೆ. ಕಳ್ಳತನ ಮಾಡಿ ಜೀವಕ್ಕೆ ಶಿಕ್ಷೆ ನೀಡಲಾಗುತ್ತದೆ. ಪರನಿಂದೆ, ಪರಸ್ತ್ರೀ ವ್ಯಾಮೋಹ, ಪರರ ಆಸ್ತಿ ಕಬಳಿಕೆ ಇದೆಲ್ಲಾ ಪಾಪ. ಕಾಲಬ್ರಹ್ಮನು ಜೀವವನ್ನು ಇದೇ ರೀತಿ ಕರ್ಮದ ಬಂಧನದಲ್ಲಿ ಇಡುತ್ತದೆ. ಕಾಲವೇ ಸಂತನನ್ನು ವಿರೋಧಿಸುವಂತೆ ಮಾಡುತ್ತದೆ. ಇದು ಘೋರವಾದ ಅಪರಾಧ.

### "ನಿರಂಜನ ಚರಿತ್ರ = ಕಾಲನ ಜಾಲೆ"

ಪರಮೇಶ್ವರರು ಹೇಳಿದ್ದಾರೆ, ಹೇ ಧರ್ಮದಾಸ, ನಾನು ನಿನಗೆ ಧರ್ಮದ (ಧರ್ಮರಾಯ–ಕಾಲ) ಜಾಲವನ್ನು ತಿಳಿಸುತ್ತೇನೆ. ಕಾಲ ನಿರಂಜನವು(ಕಾಲಬ್ರಹ್ಮ) ಕೃಷ್ಣನಲ್ಲಿ ಪ್ರವೇಶಿಸಿ ಗೀತೆಯ ಜ್ಞಾನವನ್ನು ಹೇಳಿದ. ಕರ್ಮಯೋಗವೇ ಉತ್ತಮವೆಂದು ಹೇಳಿ ಯುದ್ಧ ಮಾಡಿಸಿದ. ಜ್ಞಾನಯೋಗದಿಂದ ಭ್ರಮಿತಗೊಳಿಸಿದ. ಅರ್ಜುನನಿಗೆ ತಿಳುವಳಿಕೆ ಇದ್ದಿದ್ದರಿಂದ ಅವನು ಒಳ್ಳೆಯ ಭಾಷೆಯನ್ನು ಮಾತನಾಡುತ್ತಿದ್ದನು. ಯುದ್ಧ ಮಾಡಿ ತಮ್ಮ ಕುಲದವರೇ ಆದ ಅಣ್ಣ, ತಮ್ಮ ಭಾವ, ಭಾವ–ಮೈದುನ, ಚಿಕ್ಕಪ್ಪ, ಮಾವ, ಸೋದರಮಾವ–ಇವರನ್ನೆಲ್ಲಾ ಸಾಯಿಸುವುದಕ್ಕಿಂತ ಭಿಕ್ಷೆ ಬೇಡಿ ಬದುಕೋಣ ಎನ್ನುತ್ತಿದ್ದನು. ಪಾಪದಿಂದ ಪ್ರಾಪ್ತಿಯಾಗುವ ರಾಜ್ಯದ ಆವಶ್ಯಕತೆ ನನಗೆ ಇಲ್ಲ ಎಂದು ಹೇಳುತ್ತಿದ್ದನು. ಆದರೆ ಅವನನ್ನು ಹೆದರಿಸಿ, ಬೆದರಿಸಿ, ಯುದ್ಧ ಮಾಡಿಸಿ, ನರಕಕ್ಕೆ ಹೋಗುವಂತೆ ಮಾಡಲಾಯಿತು. ಜ್ಞಾನಯೋಗದ ನೆಪ ಹೇಳಿ ಕರ್ಮಯೋಗಕ್ಕೆ ಒತ್ತು ಕೊಟ್ಟು, ಅವನಿಂದ ಮಹಾಪಾಪ ಮಾಡಿಸಲಾಯಿತು.

ಅನುರಾಗ ಸಾಗರದ 155ರ ಪುಟದ ಸಾರಾಂಶ:–

ಧರ್ಮದಾಸನು ಪ್ರಭುವನ್ನು ಕೇಳಿದನು, ಹೇ ಪ್ರಭು, ನಿಮ್ಮಪ್ರಾಪ್ತಿಗಾಗಿ ಜೀವವು ಏನು ಮಾಡಬೇಕು?

### "ಸದ್ಗುರು (ಕಬೀರರ) ವಚನ"

### "ಭಕ್ತನ 16 ಗುಣಗಳು (ಆಭೂಷಣ)"

ಪರಮೇಶ್ವರ ಕಬೀರರು ಹೇಳಿದರು, ಹೇ ಧರ್ಮದಾಸ! ಭವಸಾಗರದಿಂದ ಹೊರಬರಲು ಭಕ್ತಿ ಎಂಬ ಶಕ್ತಿಯ ಆವಶ್ಯಕತೆ ಇದೆ. ಪರಮಾತ್ಮನನ್ನು ಪಡೆಯಲು ಜೀವದಲ್ಲಿ 16 ಗುಣಗಳಿರಬೇಕಾದದ್ದು ಅನಿವಾರ್ಯ. ಇದನ್ನು ಆತ್ಮದ 16 ಸಿಂಗಾರಗಳು ಎಂದು ಹೇಳಲಾಗುತ್ತದೆ. 1) ಜ್ಞಾನ 2) ವಿವೇಕ 3) ಸತ್ಯ 4) ಸಂತೋಷ 5) ಪ್ರೇಮ 6) ಧೈರ್ಯ 7) ನಿಷ್ಕಪಟತೆ 8) ದಯೆ 9) ಕ್ಷಮೆ 10) ಶೀಲ 11) ನಿಷ್ಕಾಮ 12) ತ್ಯಾಗ 13) ವೈರಾಗ್ಯ 14) ಶಾಂತಿ 15) ಭಕ್ತಿ 16) ಎಲ್ಲರನ್ನು ಮಿತ್ರರಂತೆ ಕಾಣುವ ಸಮ ಚಿತ್ತ.

1) ತತ್ವಜ್ಞಾನ ಪಡೆಯುವುದು, 2) ವಿವೇಕದಿಂದ ವರ್ತಿಸುವುದು, 3) ಸತ್ಯವನ್ನು ಹೇಳುವುದು, 4) ಪರಮಾತ್ಮನನ್ನು ಪಡೆಯಲು ಸಂತೋಷದಿಂದ ಇರುವುದು, 5) ಪ್ರೇಮ ಭಾವದಿಂದ ಇರುವುದು, 6) ಸದ್ಗುರು ಕೊಟ್ಟಿರುವ ಜ್ಞಾನದಿಂದ ಯಶಸ್ಸಿಗಾಗಿ ಧೈರ್ಯದಿಂದ ಇರುವುದು ಮತ್ತು ಫಲಪ್ರಾಪ್ತಿಗಾಗಿ ಅವಸರ ಪಡದೆ ಇರುವುದು, 7) ಯಾರಿಗೂ ಮೋಸಮಾಡದಿರುವುದು, 8) ದಯೆಯಿಂದ ಇರುವುದು,

9) ಭಕ್ತನು ಶತ್ರುವನ್ನು ಸಹ ಕ್ಷಮಿಸಬೇಕು, 10) ಶೀಲವಂತರಾಗಿರುವುದು, 11) ಭಕ್ತನು ಸಂಸಾರಿಕ ಲಾಭದ ಉದ್ದೇಶವನ್ನು ಬಿಟ್ಟು ನಿಸ್ವಾರ್ಥ ಭಾವದಿಂದ ಮಾಡಬೇಕು, 12) ತ್ಯಾಗವು ಹೆಚ್ಚು ಮುಖ್ಯವಾದುದು, 13) ವೈರಾಗ್ಯದಿಂದಿರುವುದು, 14) ಶಾಂತಿಯು ಭಕ್ತನ ಗುಣ, 15) ಭಕ್ತಿಯಿಂದ ಜೀವವನ್ನು ಉದ್ಧಾರಮಾಡುವುದು, 16) ಮಿತ್ರರಂತೆ ಕಾಣುವ ಸಮಚಿತ್ತದಿಂದ ಇರುವುದು.

ಈ ಗುಣಗಳೆಲ್ಲಾ ಇದ್ದರೆ ಸತ್ಯಲೋಕಕ್ಕೆ ಹೋಗಬಹುದು. ಇವಿಷ್ಟೇ ಅಲ್ಲದೆ ಗುರುಸೇವೆ, ಗುರುವಿನಲ್ಲಿ ನಂಬಿಕೆ– ಇವು ಮುಖ್ಯವಾದದ್ದು.

ಅನುರಾಗ ಸಾಗರದ 156 ಮತ್ತು 157ನೇ ಪುಟದಲ್ಲಿ ಹೇಳಿರುವಂತೆ ಮನಸ್ಸು ರಾಗದ್ವೇಷಗಳನ್ನು ತ್ಯಜಿಸಬೇಕು. ಆಗ ಭಕ್ತಿ ಸಫಲತೆಯನ್ನು ಕಾಣುವುದು.

ಅನುರಾಗ ಸಾಗರದ 158 ಮತ್ತು 159ನೇ ಪುಟಗಳ ಸಾರಾಂಶ:–

ಭಕ್ತರು 15 ದಿನಗಳಿಗೊಮ್ಮೆ ಧಾರ್ಮಿಕ ಅನುಷ್ಠಾನ (ಪಾಠ) ಮಾಡಿಸಬೇಕು. ಸಾಧ್ಯವಾಗದಿದ್ದರೆ ತಿಂಗಳಿಗೊಮ್ಮೆಯಾದರೂ ಮಾಡಿಸಬೇಕು. ಯಾರಾದರೂ ಬಡವರಿದ್ದರೆ ಅವರು ವರ್ಷದಲ್ಲಿ ಎರಡು ಬಾರಿಯಾದರೂ ಧಾರ್ಮಿಕ ಅನುಷ್ಠಾನ (ಪಾಠ) ಮಾಡಿಸಬೇಕು. ಸಾಧ್ಯವಾಗದಿದ್ದರೆ ವರ್ಷದಲ್ಲಿ ಒಂದು ಬಾರಿಯಾದರೂ ಮಾಡಿಸಬೇಕು. ಯಾರು ವರ್ಷದಲ್ಲಿ ಒಂದು ಬಾರಿಯೂ ಅನುಷ್ಠಾನ ಮಾಡಿಸುವುದಿಲ್ಲವೋ, ಆ ಭಕ್ತನು ಕಪಟಿಯಾಗಿರುತ್ತಾನೆ. ಒಂದು ವರ್ಷದಲ್ಲಿ ಒಂದು ಬಾರಿ ಅನುಷ್ಠಾನ ಮಾಡಿಸುವುದರಿಂದ ಅವರಿಗೆ ಖಂಡಿತವಾಗಿಯೂ ಮೋಕ್ಷ ಸಿಗುವುದರಲ್ಲಿ ಸಂದೇಹವಿಲ್ಲ.

ಕಬೀರ್ ಪರಮೇಶ್ವರರ ಮಂತ್ರವನ್ನು ಯಾರಾದರೂ ಇದೂ ಒಂದು ಮಂತ್ರವೇ, ಎಂದು ಸಂಕೋಚಪಡದೆ ಶ್ರದ್ಧೆಯಿಂದ ಹೇಳುವುದರ ಜೊತೆಗೆ ಧರ್ಮದಾಸರನ್ನೂ ಗೌರವದಿಂದ ಕಾಣಬೇಕು.

ಭಾವಾರ್ಥ:– ಧರ್ಮದಾಸರನ್ನು ಕಬೀರರು ಸತ್ಯಲೋಕಕ್ಕೆ ಕರೆದುಕೊಂಡು ಹೋಗಿ ಯಥಾರ್ಥದ ಪರಿಚಯ ಮಾಡಿಸಿದ್ದಾರೆ. ಧರ್ಮದಾಸರು ತಮ್ಮ ಕಣ್ಣುಗಳಿಂದ ನೋಡಿದ, ತಮ್ಮ ಕಿವಿಗಳಿಂದ ಕೇಳಿದ ಆಧ್ಯಾತ್ಮಿಕ ಜ್ಞಾನ, ಕಬೀರವಾಣಿ, ಕಬೀರ್ ಬೀಜಕ್ ಮತ್ತು ಕಬೀರ್ ಶಬ್ದಾವಳಿಯನ್ನು ಸ್ವತಃ ಬರೆದು ಮಾನವ ಸಮಾಜಕ್ಕೆ ಉಪಕಾರವನ್ನು ಮಾಡಿದ್ದಾರೆ. ಆದ್ದರಿಂದ ಧರ್ಮದಾಸರನ್ನು ಗೌರವದಿಂದ ಕಾಣಬೇಕು.

ಭಕ್ತನು ತನ್ನ ಕೊನೆಯ ಉಸಿರಿರುವವರೆಗೆ ನಿಯಮದಲ್ಲಿದ್ದುಕೊಂಡು ಭಕ್ತಿಯಿಂದ ಸಾಧನೆ ಮಾಡಬೇಕು. ಹೇಗೆ ಶೂರ ವೀರರು ಯುದ್ಧದಲ್ಲಿ ಧೈರ್ಯದಿಂದ ಯುದ್ಧಮಾಡುವಾಗ 'ಮಾಡು ಅಥವಾ ಮಡಿ' ಎಂಬ ಧೈರ್ಯದಿಂದ ಮುನ್ನುಗ್ಗುತ್ತಾರೋ, ಹಿಂದೆ ಸರಿಯುವುದಿಲ್ಲವೋ, ಹಾಗೆ ಸಂತ ಹಾಗೂ ಭಕ್ತನ ರಣಕ್ಷೇತ್ರ ಭಕ್ತಿ ಮಂತ್ರ, ಜಪ ಮತ್ತು ನಿಯಮ. ಶಿಷ್ಯನು ಗುರುವಿನಿಂದ ವಿಮುಖನಾದರೆ ನಾಮ ಖಂಡನೆ ಆಗುತ್ತದೆ. ಆಗ ಅವನು ಗುರುವಿನಲ್ಲಿ ದೋಷ ಕಂಡು ಹಿಡಿಯುತ್ತಾನೆ. ಆಗ ಅವನು ನರಕಕ್ಕೆ ಹೋಗುತ್ತಾನೆ. ಅಲ್ಲಿ ಅಗ್ನಿಕುಂಡದಲ್ಲಿ ಬೇಯುತ್ತಾನೆ. ಒಂದು ವೇಳೆ ಗುರುವಿನಿಂದ ವಿಮುಖನಾಗಿ ಭಕ್ತಿಯನ್ನು ಬಿಟ್ಟು ಬಿಟ್ಟರೆ ಅವನಿಗೂ ನಷ್ಟ ತಪ್ಪಿದ್ದಲ್ಲ.

ಉದಾಹರಣೆಗೆ:– ಇನ್ವರ್ಟರ್‌ನನ್ನು ಚಾರ್ಜಿಗೆ ಹಾಕಿದರೆ ಅದು ಚಾರ್ಜು ಆಗುತ್ತಿರುತ್ತದೆ. ಮಧ್ಯದಲ್ಲಿ ಚಾರ್ಜಿನಿಂದ ತೆಗೆದು ಬಿಟ್ಟರೆ, ಇನ್ವರ್ಟರ್ ಎಷ್ಟು ಚಾರ್ಜ್ ಆಗಿರುತ್ತದೋ ಅಷ್ಟು ಕೆಲಸ ಮಾಡುತ್ತದೆ. ಚಾರ್ಜು ಮುಗಿದ ತಕ್ಷಣ ಎಲ್ಲವೂ ಸ್ವಿಚ್ ಆಫ್ ಆಗುತ್ತದೆ. ಹಾಗೆ ಎಲ್ಲಿಯವರೆಗೆ ಶಿಷ್ಯನು ಗುರುವಿನಿಂದ ದೀಕ್ಷೆ ಪಡೆದು ಸಾಧನೆ ಮಾಡುವನೋ ಅಲ್ಲಿಯವರೆಗೆ ಅವನ ಜೀವವು ಚಾರ್ಜ್ ಆಗುತ್ತಿರುತ್ತದೆ. ಗುರುವಿನಿಂದ ವಿಮುಖನಾದ ಸಾಧಕನು ಗುರುವಿಲ್ಲದೇ ಗುರು ಮಂತ್ರವನ್ನು ಜಪಿಸಿದರೆ ಅದು ಕೇವಲ ವ್ಯರ್ಥ. ಹೇಗೆ ವಿದ್ಯುಚ್ಛಕ್ತಿಯ ಕನೆಕ್ಷನ್ ತೆಗೆದುಹಾಕಿದ ನಂತರ ಫ್ಯಾನು,

ಮೋಟರ್, ಲೈಟು ಇವೆಲ್ಲದರ ಸ್ವಿಚ್ಚನ್ನು ಎಷ್ಟು ಬಾರಿ ಹಾಕಿದರೂ ಫ್ಯಾನು ತಿರುಗುವುದಿಲ್ಲ ಮೋಟರ್ ಓಡುವುದಿಲ್ಲ, ಲೈಟು ಹತ್ತುವುದಿಲ್ಲ. ಗುರುವಿನಿಂದ ವಿಮುಖನಾದ ಸಾಧಕನ ಪರಿಸ್ಥಿತಿಯೂ ಇದೇ ಆಗಿರುತ್ತದೆ. ನಂತರ ಅವನು ನರಕಕ್ಕೆ ಹೋಗುತ್ತಾನೆ. ಕಬೀರರು ಹೇಳುತ್ತಾರೆ:-

ಕಬೀರ್, ಮಾನುಷ್ ಜನ್ಮ್ ಪಾಕರ್ ಖೋವೈ ।
ಸತ್‌ಗುರು ವಿಮುಖಾ ಯುಗ್-ಯುಗ್ ರೋವೈ ।
ಕಬೀರ್, ಗುರು ವಿಮುಖ್ ಜೀವ್ ಕತಹು ನ ಬಚೈ ।
ಅಗ್ನಿ ಕುಂಡ್ ಮೆ ಜರ್-ಬರ್ ನಾಚೈ ॥
ಕೋಟಿ ಜನ್ಮ್ ವಿಷ್‌ಧರ್ ಕೋ ಪಾವೈ । ವಿಷ್ ಜ್ವಾಲಾ ಸಹೀ ಜನ್ಮ್ ಗಮಾವೈ ॥
ಬಿಷ್ಟಾ (ಟಟ್ಟೀ) ಮಾಂಹೀ ಕ್ರಮಿ ಜನ್ಮ್ ಧರಈ । ಕೋಟಿ ಜನ್ಮ್ ನರಕ್ ಹೀ ಪರಹೀ ॥

ಭಾವಾರ್ಥ:- ಗುರುವನ್ನು ತ್ಯಜಿಸಿದ ಜೀವವು ಉಳಿಯುವುದಿಲ್ಲ. ನರಕದಲ್ಲಿ ಅಗ್ನಿಕುಂಡದಲ್ಲಿ ಕುದ್ದು ಕುದ್ದು, ಉರಿದು ಹೋಗುತ್ತದೆ. ನಂತರ ವಿಷ ತುಂಬಿರುವ ಹಾವಿನ ಜನ್ಮ ತಾಳುತ್ತದೆ. ಸರ್ಪದ ಒಳಗಿರುವ ವಿಷದ ತಾಪವು ಬಹಳ ಕಷ್ಟ ಕೊಡುತ್ತದೆ. ಬೇಸಿಗೆ ಕಾಲದಲ್ಲಿ ಹಾವುಗಳು ಈ ತಾಪದಿಂದ ದೂರವಾಗಲು ಶ್ರೀಗಂಧದ ಮರಗಳಿಗೆ ಸುತ್ತಿಕೊಳ್ಳುತ್ತವೆ. ಹೀಗೆ ಅದೇ ಸರ್ಪಗಳು ಗುರು ವಿಮುಖವಾದ ಕಾರಣ ಸಣ್ಣ ಕೀಟವಾಗಿ ಜನ್ಮಿಸುತ್ತವೆ. ಒಂದು ವೇಳೆ ಗುರು ನಕಲಿ ಗುರುವಾದರೆ ಅವನನ್ನು ತ್ಯಜಿಸಿ ಅಸಲಿ ಗುರುವಿನ ಬಳಿ ತೆರಳಿದರೆ ಯಾವುದೇ ನಷ್ಟವಾಗುವುದಿಲ್ಲ.

ಕಬಿರ್, ಗುರು ದಯಾಲ್ ತೊ ಪುರುಷ ದಯಾಲ್ ।
ಜೆಹಿ ಗುರು ವ್ರತ್ ಛುಎ ನಹೀಂ ಕಾಲ್ ॥

ಭಾವಾರ್ಥ : ಹೇ ಧರ್ಮದಾಸ! ನಿನಗೆ ಶಿಷ್ಯನ ಮೇಲೆ ದಯೆ ಇದ್ದರೆ, ಅಂದರೆ ಗುರುವಿನ ಮನಸ್ಸಿನಲ್ಲಿ ಶಿಷ್ಯನ ಬಗ್ಗೆ ಒಳ್ಳೆಯ ಭಾವನೆಯಿದ್ದರೆ ಪರಮಾತ್ಮನು ಸಹ ಆ ಭಕ್ತನ ಮೇಲೆ ಪ್ರಸನ್ನನಾಗಿರುತ್ತಾನೆ. ಇಲ್ಲದಿದ್ದರೆ ಮೇಲೆ ತಿಳಿಸಿರುವಂತೆ ಶಿಷ್ಯನು ಕಷ್ಟವನ್ನು ಅನುಭವಿಸಬೇಕಾಗುತ್ತದೆ.

**160ನೇ ಪುಟದ ಸಾರಾಂಶ :-**

ಈ ಪುಟದಲ್ಲಿ ಕೇಲವು ಗುರು ಮಹಿಮೆ ಹಾಗೂ ಕೋಗಿಲೆಯ ಚಾಣಕ್ಯ ನೀತಿಯ ಜ್ಞಾನವಿದೆ.

## "ಕಾಲನ ಜೀವವು ಸದ್ಗುರುವಿನ ಜ್ಞಾನವನ್ನು ಒಪ್ಪುವುದಿಲ್ಲ"

ಕಾಗೆ-ಕೋಗಿಲೆಯ ಉದಾಹರಣೆ:- ಕೋಗಿಲೆ ಎಂದಿಗೂ ಗೂಡು ಕಟ್ಟುವುದಿಲ್ಲ. ಅದು ತನ್ನ ಮೊಟ್ಟೆಗಳನ್ನು ರಕ್ಷಿಸಲು ಒಂದು ಉಪಾಯವನ್ನು ಮಾಡುತ್ತದೆ. ಕಾಗೆಯು ಗೂಡುಕಟ್ಟಿ ಅದರಲ್ಲಿ ತನ್ನ ಮೊಟ್ಟೆಗಳನ್ನು ಇಡುತ್ತದೆ. ಹೆಣ್ಣು ಕಾಗೆಯು ಮೊಟ್ಟೆಗಳನ್ನು ಇಟ್ಟ ನಂತರ ಅದು ಊಟತರಲು ಹೊರ ಹೋದಾಗ ಕೋಗಿಲೆ ಆ ಗೂಡಿನೊಳಗಡೆ ಹೋಗಿ ತನ್ನ ಮೊಟ್ಟೆಗಳನ್ನು ಇಡುತ್ತದೆ. ಕಾಗೆ ಮರಳಿ ಬಂದಾಗ ಅದಕ್ಕೆ ತನ್ನ ಮೊಟ್ಟೆಗಳ್ಯಾವುವು? ಬೇರೆ ಪಕ್ಷಿಯ ಮೊಟ್ಟೆಗಳ್ಯಾವುವು ಎಂದು ತಿಳಿಯುವುದಿಲ್ಲ. ತನ್ನ ಮೊಟ್ಟೆಗಳನ್ನು ಯಾರೂ ಒಡೆದು ಹಾಕಿಲ್ಲವಲ್ಲಾ ಎಂದು ಸಂತೋಷಿಸುತ್ತದೆ ಹಾಗೂ ಎಲ್ಲಾ ಮೊಟ್ಟೆಗಳಿಗೂ ಕಾವು ಕೊಡುತ್ತದೆ. ಮರಿಗಳಾದಾಗಲೂ ಎಲ್ಲಾ ಮರಿಗಳೂ ಕಪ್ಪಗಿದ್ದು, ಒಂದೇ ತರಹ ಇರುವುದರಿಂದ ಕಾಗೆಗೆ ಅವು ಕೋಗಿಲೆಯ ಮರಿಗಳೆಂದು ತಿಳಿಯುವುದೇ ಇಲ್ಲ. ಕೋಗಿಲೆಯು ಆ ಗೂಡಿನ ಅಕ್ಕ ಪಕ್ಕವೇ ವಾಸವಿದ್ದು, ತನ್ನ ಮರಿಗಳನ್ನು ತನ್ನ ಕಂಠದಿಂದ 'ಕುಹೂ ಕುಹೂ' ಎಂದು ಕೂಗುತ್ತಾ ಆಕರ್ಷಿಸುತ್ತದೆ. ಕೋಗಿಲೆಯ ಮರಿಗಳು ಆ ಧ್ವನಿಗೆ ಆಕರ್ಷಿತಗೊಂಡು ಕೋಗಿಲೆ ಇರುವ ಕಡೆಗೆ ಹಾರಿ ಬರುತ್ತವೆ. ಕಾಗೆಯ ಮರಿಗಳು ಅಲ್ಲೇ ಮಜವಾಗಿ ವಾಸಿಸುತ್ತವೆ. ಹೆಣ್ಣು ಕಾಗೆಯು

ಗೂಡಿಗೆ ಬಂದು ನೋಡಿದಾಗ ಕೇವಲ ಕೆಲವೇ ಮರಿಗಳು ಉಳಿದಿದ್ದರೂ, ಅದು ಇಷ್ಟು ಮರಿಗಳನ್ನಾದರೂ ಉಳಿಸಿವೆಯಲ್ಲಾ ಎಂದು ಸಮಾಧಾನ ಪಟ್ಟುಕೊಂಡು ತನ್ನ ಮರಿಗಳನ್ನು ಸಲಹುತ್ತದೆ. ಹೀಗೆ ಕೋಗಿಲೆಯ ಮರಿಗಳು ತನ್ನ ಕುಟುಂಬವನ್ನು ಸೇರಿಕೊಳ್ಳುತ್ತವೆ.

ಕಬೀರರು ಧರ್ಮದಾಸನಿಗೆ ಹೇಳಿದರು, "ಹೇ ಧರ್ಮದಾಸ, ನಿನ್ನ ಮಗ ನಾರಾಯಣದಾಸನು ಕಾಗೆ ಇದ್ದ ಹಾಗೆ. ಅವನು ಕಾಲನ ಮಗನು. ಅವನ ಮೇಲೆ ನನ್ನ ಪ್ರವಚನ ಯಾವ ಪ್ರಭಾವವನ್ನೂ ಬೀರಿಲ್ಲ. ನೀವೇನೋ ಸತ್ಪುರುಷನ ಅಂಶ. ನಿನ್ನ ಮೇಲೆ ನಮ್ಮ ವಾಣಿಯ ಪ್ರಭಾವ ಬೀರಿದೆ. ನೀನು ನಮ್ಮ ಬಳಿ ಬಂದೆ. ಆದರೆ ಅದೇ ಪ್ರವಚನ ನಾರಾಯಣದಾಸನ ಮೇಲೆ ಪ್ರಭಾವವೂ ಬೀರಲಿಲ್ಲ. ಇದೇ ರೀತಿ ಪ್ರತೀ ಕುಟುಂಬದಲ್ಲೂ ನಡೆಯುತ್ತಿದೆ. ಪೂರ್ವಜನ್ಮದ ಭಕ್ತ ಸಂಸ್ಕಾರವಿರುವ ಜೀವವು ಸದ್ಗುರು ಕಬೀರರ ಸತ್ಯ ಮಾರ್ಗದಲ್ಲಿ ದೀಕ್ಷೆ ಪಡೆದಿದ್ದರೂ ಸಹ ಮುಕ್ತರಾಗಿರಲಿಲ್ಲ. ಅವರು ಇನ್ಯಾವುದೋ ಕುಟುಂಬದಲ್ಲಿ ಹುಟ್ಟುತ್ತಾರೆ. ಕಬೀರರ ವಾಣಿ ಕೇಳಿದಾಕ್ಷಣ ಅವರು ಎಚ್ಚೆತ್ತುಕೊಳ್ಳುತ್ತಾರೆ. ದೀಕ್ಷೆ ಪಡೆದು, ಶಿಷ್ಯರಾಗಿ ತಮ್ಮನ್ನು ಉದ್ದರಿಸಿಕೊಳ್ಳುತ್ತಾರೆ. ಅದೇ ಕುಟುಂಬದ ಕೆಲವರು ಗುರುಗಳನ್ನು ಒಪ್ಪುವುದಿಲ್ಲ. ದೀಕ್ಷೆ ಪಡೆದವರನ್ನು ವಿರೋಧಿಸುತ್ತಾರೆ, ಪರಿಹಾಸ್ಯ ಮಾಡುತ್ತಾರೆ. ಅವರೆಲ್ಲಾ ಕಾಲನ ಅಂಶ. ನಾರಾಯಣದಾಸನ ರೀತಿ ಕಾಲನ ದೂತರ ಮೂಲಕ ಪ್ರಚಲಿತವಿರುವ ಸಾಧನೆ ಮಾಡುತ್ತಾರೆ.

ಅನುರಾಗ ಸಾಗರದ ಪುಟ ಸಂಖ್ಯೆ 161ರ ಸಾರಾಂಶ :–

ಕಬೀರ ಪರಮಾತ್ಮರೆಂದರು, 'ಹೇ ಧರ್ಮದಾಸ! ಹೇಗೆ ಶೂರ ವೀರರು ಹಾಗೂ ಕೋಗಿಲೆಯ ಮರಿಗಳು (ಮಕ್ಕಳು), ನಡೆದಾಡಲು ಕಲಿತ ಮೇಲೆ ಹಿಂದೆ ತಿರುಗಿ ನೋಡುವುದಿಲ್ಲವೋ, ಹಾಗೆ ಯಾರಾದರೂ ಎಲ್ಲಾ ಬಂಧನಗಳನ್ನು ಬಿಡಿಸಿಕೊಂಡು, ಕುಟುಂಬದ ಮೋಹವನ್ನು ತೊರೆದು, ನನ್ನ ಆಶ್ರಯಕ್ಕೆ ಬರುತ್ತಾರೋ, ಅವರ ನೂರಾ ಒಂದು ಪೀಳಿಗೆಯನ್ನು ನಾನು ಉದ್ಧರಿಸುವೆ.

ಕಬೀರ್, ಭಕ್ತ್ ಬೀಜ್ ಹೋಯ್ ಜೋ ಹಂಸಾ ।<br>
ತಾರೂಂ ತಾಸ್ ಕೆ ಏಕೋತರ್ ಬಂಶಾ ॥<br>
ಕಬೀರ್ ಕೋಯಲ್ ಸುತ್ ಜೈಸೇ ಶೂರಾ ಹೋಈ ।<br>
ಯಹೀ ವಿಧಿ ಧಾಯ್ ಮಿಲೈ ಮೋಹೆ ಕೋಈ ॥

ನಿಜ್ ಘರ್ ಕೀ ಸುರತಿ ಕರೈ ಜೋ ಹಂಸಾ ।<br>
ತಾರೋ ತಾಸ್ ಕೇ ಏಕೋತ್ತರ್ ಬಂಶಾ ॥

## "ಹಂಸ (ಭಕ್ತ) ಗುಣ"

ಭಕ್ತನ ಗುಣ ಹಂಸದ ಗುಣವಿದ್ದಂತೆ. ಗುರುವಿಮುಖನ ಗುಣ ಕಾಗೆಯ ಗುಣವಿದ್ದಂತೆ. ಕಾಗೆಯ ಧ್ವನಿಯೂ ಕರ್ಕಶ ಹಾಗೂ ಅದರ ವೃತ್ತಿಯೂ ಕೆಟ್ಟತನದಿಂದ ಕೂಡಿರುವಂಥಾದ್ದು. ಯಾವುದೇ ಪ್ರಾಣಿಗೆ ಗಾಯವಾದರೆ ಕಾಗೆಯು ಆ ಗಾಯವನ್ನು ಮತ್ತೆ ಮತ್ತೆ ಕುಟುಕುತ್ತಾ. ಮಾಂಸವನ್ನು ಕಿತ್ತು ಕಿತ್ತು ತಿನ್ನುತ್ತದೆ. ಇಂಥಾ ಬುದ್ಧಿಯನ್ನು ಭಕ್ತನು ತ್ಯಜಿಸಿ, ಹಂಸದ ಗುಣವನ್ನು ಹೊಂದಬೇಕು. ಯಾವುದೇ ಸ್ವಾರ್ಥಕ್ಕಾಗಿ ಯಾರಿಗೂ ಕಷ್ಟಕೊಡಬಾರದು. ಕೋಗಿಲೆಯಂತೆ ಮೃದುವಾಗಿ ಮಾತನಾಡಬೇಕು. ಹಂಸದಂತೆ ಬದುಕಬೇಕು.

## "ಜ್ಞಾನಿಯ ಅಂದರೆ ಸತ್ಸಂಗೀಯ ಲಕ್ಷಣಗಳು"

ಸದ್ಗುರುವಿನಿಂದ ದೀಕ್ಷೆ ಪಡೆದನಂತರವೂ ಶಿಷ್ಯನು ಈ ಪ್ರಾಪಂಚಿಕ ಮೋಹದಿಂದ ಹೊರಬರದಿದ್ದರೆ ಅವನು ಮೂರ್ಖನೇ ಸರಿ. ಭಕ್ತಿಯಿಂದ ಸಿಗುವ ಲಾಭದಿಂದ ಅವನು

ವಂಚಿತನಾಗುತ್ತಾನೆ. ಅವನು ಉದ್ಧಾರವಾಗುವುದಿಲ್ಲ. ಕುರುಡನು ತನ್ನ ಕಾಲನ್ನು ಸೆಗಣಿಯ ಮೇಲೆ ಇಟ್ಟರೆ ಅದನ್ನು ನೋಡಿ ಯಾರೂ ಹಾಸ್ಯಮಾಡುವುದಿಲ್ಲ. ಯಾರೂ ಅವನನ್ನು ಆಡಿಕೊಳ್ಳುವುದಿಲ್ಲ. ಅದೇ ಕಣ್ಣುಳ್ಳವನು ಮಾಡಿದರೆ ಬೇರೆಯವರು ಅವನನ್ನು ನಿಂದಿಸುತ್ತಾರೆ. ಇದೇ ರೀತಿ ಕಣ್ಣುಳ್ಳವನು ತಪ್ಪುಮಾಡಿದರೆ, ಅಂದರೆ ಪರಸ್ತ್ರೀ ಸಂಗ, ಕಳ್ಳತನ, ಮೋಸ, ಮಾದಕವಸ್ತುಗಳ ಸೇವನೆ, ಸಾಧನೆಯಿಂದ ವಿಮುಖ ಮುಂತಾದವುಗಳನ್ನು ಮಾಡಿದರೆ ಅವನು ಖಂಡಿತವಾಗಿಯೂ ನಿಂದೆಗೊಳಗಾಗುತ್ತಾನೆ.

ಅನುರಾಗಸಾಗರದ ಪುಟ ಸಂಖ್ಯೆ 162ರಿಂದ 163ರ ಸಾರಾಂಶ:

## "ಭಕ್ತನು ಪರಮಾರ್ಥಿಯಾಗಬೇಕು"

ಹೇಗೆ ಹಸುವು ಪರರ ಉದ್ಧಾರಕ್ಕಾಗಿ ಜೀವಿಸುವುದೋ ಹಾಗೆ ಭಕ್ತನು ಪರರ ಹಿತಕ್ಕಾಗಿ ಜೀವಿಸಬೇಕು. ಹಸುವು ಕಾಡಲ್ಲೆಲ್ಲಾ ಅಲೆದು, ಹುಲ್ಲು, ಕಸ ಕಡ್ಡಿ ತಿಂದರೂ ಮಾನವನಿಗೆ ಅಮೃತದಂಥಾ ಹಾಲನ್ನು ಕೊಡುತ್ತದೆ. ಅದರ ಸೆಗಣಿ ಗೊಬ್ಬರವಾಗುತ್ತದೆ. ಅದು ಸತ್ತ ನಂತರ ಅದರ ಚರ್ಮವು ಮನುಷ್ಯನ ಕಾಲುಗಳಿಗೆ ಪಾದರಕ್ಷೆಯಾಗಿ ಅವನಿಗೆ ಕಲ್ಲು ಮುಳ್ಳುಗಳು ಚುಚ್ಚುವುದನ್ನು ತಪ್ಪಿಸುತ್ತದೆ. ಹಸುವಿನ ಸಂತಾನವಾದ ಎತ್ತುಗಳು ರೈತನಿಗೆ ಹೊಲದಲ್ಲಿ ಸಹಾಯ ಮಾಡುತ್ತದೆ. ಆದರೆ ಮನುಷ್ಯನು ಮಾಂಸಾಹಾರಿಯಾಗಿ ಆ ಹಸುವನ್ನು ಕೊಂದು, ಅದನ್ನೇ ತಿನ್ನುತ್ತಿದ್ದಾನೆ. ಪಾಪವನ್ನು ಮೂಟೆ ಕಟ್ಟಿಕೊಳ್ಳುತ್ತಿದ್ದಾನೆ. ಪರಮೇಶ್ವರರಾದ ಕಬೀರರು ಹೇಳಿದ್ದಾರೆ:–

## "ಪರಮಾರ್ಥಿ ಹಸುವಿನ ದೃಷ್ಟಾಂತ"

ಗಊಕೋ ಜಾನು ಪರಮಾರ್ಥ್ ಖಾನೀ । ಗಊ ಚಾಲ್ ಗುಣ್ ಪರಖಹು ಜ್ಞಾನೀ ॥
ಆಪನ್ ಚರೇ ತೃಣ್ ಉದ್ಯಾನಾ । ಅಂಚವೇ ಜಲ್ ದೇ ಕ್ಷೀರ್ ನಿದಾನಾ ॥
ತಾಸು ಕ್ಷೀರ್ ಘೃತ್ ದೇವ್ ಅಘಾಹೀಂ । ಗೌ ಸುತ್ ನರ್ ಕೇ ಪೋಷಕ್ ಆಹೀಂ ॥
ವಿಷ್ಠಾ ತಾಸು ಕಾಜ್ ನರ್ ಆವೇ । ನರ್ ಅಘ್ ಕರ್ಮೀ ಜನ್ಮ್ ಗಮಾವೇ ॥
ಟೀಕಾ ಪುರೇ ತಬ್ ಗೌ ತನ್ ನಾಸಾ । ನರ್ ರಾಕ್ಷಸ್ ಗೋತನ್ ಲೇತ್ ಗ್ರಾಸಾ ॥
ಚಾಮ್ ತಾಸು ತನ್ ಅತಿ ಸುಖದಾಈ । ಏತಿಕ್ ಗುಣ್ ಇಕ್ ಗೋತನ್ ಭಾಈ ॥

## "ಪರಮಾರ್ಥಿ ಸಂತರ ಲಕ್ಷಣ"

ಗೌ ಸಮ್ ಸಂತ್ ಗಹೈ ಯಹ್ ಬಾನೀ । ತೋ ನಹಿಂ ಕಾಲ್ ಕರೈ ಜಿವಹಾನೀ ॥
ನರತನ್ ಲಹಿ ಅಸ್ ಬುದ್ಧೀ ಹೋಈ । ಸತ್‌ಗುರು ಮಿಲೇ ಅಮರ್ ಹ್ವೈ ಸೋಈ ॥
ಸುನಿ ಧರ್ಮನಿ ಪರಮಾರಥ್ ಬಾನೀ । ಪರಮಾರಥತೇ ಹೋಯ್ ನ ಹಾನೀ ॥
ಪದ್ ಪರಮಾರಥ್ ಸಂತ್ ಅಧಾರಾ । ಗುರು ಸಮ್ ಲೇಈ ಸೋ ಉತರೇ ಪಾರಾ ॥
ಸತ್ಯ ಶಬ್ದ್ ಕೋ ಪರಿಚಯ್ ಪಾವೈ । ಪರಮಾರಥ್ ಪದ್ ಲೋಕ್ ಸಿಧಾವೈ ॥
ಸೇವಾ ಕರೇ ವಿಸಾರೇ ಆಪಾ । ಆಪಾ ಥಾಪ್ ಅಧಿಕ್ ಸಂತಾಪಾ ॥
ಯಹ್ ನರ್ ಅಸ್ ಚಾತುರ್ ಬುದ್ಧಿಮಾನಾ ।
ಗುನ್ ಸುಭ್ ಕರ್ಮ್ ಕಹೈ ಹಮ್ ಠಾನಾ ॥
ಊಂಚಾ ಕರ್ಮ್ ಅಪನೇ ಸಿರ್ ಲೀನ್ಹಾ । ಅವಗುಣ್ ಕರ್ಮ್ ಪರ್ ಸಿರ್ ದೀನ್ಹಾ ॥
ತಾತ್ ಹೋಯ್ ಶುಭ್ ಕರ್ಮ್ ವಿನಾಶಾ । ಧರ್ಮದಾಸ್ ಪದ್ ಗಹೋ ವಿಶ್ವಾಸಾ ॥
ಆಶಾ ಏಕ್ ನಾಮಕೀ ರಾಖೇ । ನಿಜ್ ಶುಭ್ ಕರ್ಮ್ ಪ್ರಗಟ್ ನಹಿಂ ಭಾಖೇ ॥

ಗುರುಪದ್ ರಹೇ ಸದಾ ಲೌ ಲೀನಾ । ಜೈಸೇ ಜಲಹಿ ನ ವಿಸರತ್ ಮೀನಾ ॥
ಗುರು ಕೆ ಶಬ್ದ್ ಸದಾ ಲೌ ಲಾವೇ । ಸತ್ಯನಾಮ್ ನಿಶದಿನ್ ಗುಣಗಾವೇ ॥
ಜೈಸೇ ಜಲಹಿ ನ ವಿಸರೇ ಮೀನಾ । ಐಸೆ ಶಬ್ದ್ ಗಹೇ ಪರವೀನಾ ॥
ಪುರುಷ್ ನಾಮಕೋ ಅಸ್ ಪರಭಾಊ । ಹಂಸಾ ಬಹುರಿ ನ ಜಗಮಹಂ ಆಊ ॥
ನಿಶ್ಚಯ್ ಜಾಯ್ ಪುರುಷ್ ಕೇ ಪಾಸಾ । ಕೂರ್ಮಕಲಾ ಪರಖಹು ಧರ್ಮದಾಸಾ ॥

ಭಾವಾರ್ಥ:– ಪರಮೇಶ್ವರ ಕಬೀರರು ಧರ್ಮದಾಸನ ಮೂಲಕ ಮಾನವನಿಗೆ ಉಪದೇಶ ನೀಡಿರುವುದೇನೆಂದರೆ ಮಾನವನು ಹಸುವಿನಂತೆ ಪರಮಾರ್ಥಕ್ಕೋಸ್ಕರ ಬದುಕಬೇಕು. ಪಾಪಗಳನ್ನು ಮಾಡಬಾರದು. ಸೇವೆ ಮಾಡಬೇಕು. ತನ್ನ ಸ್ವಾರ್ಥಕ್ಕಾಗಿ ತನ್ನನ್ನು ತಾನು ಮಹಾ ಮಹಿಮವಂತನೆಂದು ಪರಿಗಣಿಸಿಕೊಂಡರೆ ಮುಂದೆ ಅವನಿಗೆ ಕಷ್ಟಗಳು ಕಟ್ಟಿಟ್ಟ ಬುತ್ತಿ.

ಸಾಧಕನು ತನ್ನ ಸ್ವಾರ್ಥವನ್ನು ಬಿಡಬೇಕು. ದಾನ ಮುಂತಾದ ಅನ್ಯ ಸೇವೆ ಮಾಡಬೇಕು. ದಾನ ಮಾಡಿದ್ದನ್ನು ಬೇರೆಯವರಿಗೆ ಹೇಳಬಾರದು. ನೀರಿನಲ್ಲಿ ಮೀನು ಇರುವಂತೆ ಶಿಷ್ಯನು ಗುರುವಿನ ಚರಣದಲ್ಲಿರಬೇಕು. ಹೇಗೆ ನೀರಿಲ್ಲದಿದ್ದರೆ, ಒಂದು ಕ್ಷಣವೂ ಮೀನು ಬದುಕಿರುವುದಿಲ್ಲವೋ, ಹಾಗೆ ಭಕ್ತನು ಗುರುವನ್ನು ಬಿಟ್ಟು ಇರಬಾರದು. ಗುರುವಿನಿಂದ ಪಡೆದ ದೀಕ್ಷಾಮಂತ್ರವನ್ನು ಭಕ್ತನು ಯಾವಾಗಲೂ ಜಪಿಸುತ್ತಿರಬೇಕು. ಅವನಿಗೆ ಸಿಕ್ಕ ದೀಕ್ಷಾಮಂತ್ರವನ್ನು ಜಪಿಸುವುದರಿಂದ ಅವನಿಗೆ ಸಕಲ ಸೌಲಭ್ಯಗಳು ದೊರಕುತ್ತವೆ. ಆ ಮಂತ್ರಕ್ಕೆ ಎಷ್ಟು ಶಕ್ತಿ ಇದೆ ಎಂದರೆ ಅವನು ಮತ್ತೆ ಜನ್ಮ ತಾಳುವುದಿಲ್ಲ. ಜನನ–ಮರಣದ ಚಕ್ರದಿಂದ ಹೊರಬಂದು ಸನಾತನ ಪರಮ ಧಾಮವನ್ನು ಸೇರುತ್ತಾನೆ. ಅಲ್ಲಿ ಶಾಶ್ವತವಾದ ಶಾಂತಿ ದೊರಕುತ್ತದೆ. ಅಲ್ಲಿಗೆ ತಲುಪಿದ ಸಾಧಕನು ಮತ್ತೆ ಈ ಪ್ರಪಂಚಕ್ಕೆ ಬರುವುದಿಲ್ಲ.

ಇದನ್ನೇ ಭಗವದ್ಗೀತೆಯ 18 ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಹೇಳಲಾಗಿದೆ. ಅಲ್ಲಿ, "ಹೇ ಅರ್ಜುನ! ನೀನು ಸರ್ವಭಾವದಿಂದ ಆ ಪರಮೇಶ್ವರನ ಆಶ್ರಯಕ್ಕೆ ಹೋಗು. ಆ ಪರಮೇಶ್ವರನ ಕೃಪೆಯಿಂದಲೇ ನೀನು ಪರಮ ಶಾಂತಿ ಹಾಗೂ (ಸನಾತನ ಪರಮಧಾಮ) ಶಾಶ್ವತವಾದ ಸ್ಥಾನವನ್ನು ಹೊಂದುವೆ.

ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿದ್ದಾನೆ, ತತ್ವಜ್ಞಾನದ ಪ್ರಾಪ್ತಿಯ ನಂತರ ಪರಮೇಶ್ವರನ ಪರಮ ಪದದ ಹುಡುಕಾಟ ನಡೆಸಬೇಕು. ಅಲ್ಲಿಗೆ ಹೋದ ನಂತರ ಸಾಧಕನು ಮರಳಿ ಪ್ರಪಂಚಕ್ಕೆ ಎಂದಿಗೂ ಬರುವುದಿಲ್ಲ. ಯಾವ ಪರಮೇಶ್ವರನು ಪ್ರಪಂಚವೆಂಬ ವೃಕ್ಷವನ್ನು ರಚಿಸಿದ್ದಾನೋ, ಅವನನ್ನು ಭಕ್ತಿ ಮಾಡು (15ನೇ ಅಧ್ಯಾಯದ 4ನೇ ಶ್ಲೋಕ)

ಗೀತೆಯ ಜ್ಞಾನದಾತನು ತನ್ನ ನಶ್ವರದ ಅಂದರೆ ಜನನ–ಮರಣದ ಸ್ಥಿತಿಯನ್ನು ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ, 4ನೇ ಅಧ್ಯಾಯದ 5 ಮತ್ತು 9ನೇ ಶ್ಲೋಕ ಹಾಗೂ 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ. ಹೇ ಅರ್ಜುನ! ನನ್ನ ಹಾಗೂ ನಿನ್ನ ಅನೇಕ ಜನ್ಮಗಳಾಗಿವೆ, ನಿನಗೆ ಗೊತ್ತಿಲ್ಲ, ಆದರೆ ನನಗೆ ಗೊತ್ತಿದೆ, ಎಂದಿದ್ದಾನೆ.

ಓದುಗರೇ, ಗೀತೆಯಿಂದ ಸ್ಪಷ್ಟವಾಗುವುದೇನೆಂದರೆ, ಗೀತೆಯನ್ನು ಹೇಳಿರುವವನು ಕಾಲಬ್ರಹ್ಮನು. ಅವನು ಕೃಷ್ಣನ ಶರೀರದಲ್ಲಿ ಪ್ರವೇಶಿಸಿ ಮಾತನಾಡಿದ್ದಾನೆ. ಅವನು ಅವಿನಾಶಿಯಲ್ಲ, ಅವನೂ ಜನನ ಮರಣದ ಚಕ್ರಕ್ಕೆ ಸಿಲುಕಿರುವವನು. ಹಾಗೂ ಸರ್ವಭಾವದಿಂದ ಪರಮೇಶ್ವರನ ಆಶ್ರಯಕ್ಕೆ ಹೋಗು ಎಂದು ಹೇಳುವವನು. ಅಂಥಹವರು ಪರಮೇಶ್ವರ ಕಬೀರರು. ಅವರು ತಮ್ಮ ಮಹಿಮೆಯನ್ನು ಕಬೀರ ಸಾಗರದಲ್ಲಿ ಸ್ವತಃ ಅವರೇ ಹೇಳಿದ್ದಾರೆ. ಅನುರಾಗ ಸಾಗರದಲ್ಲಿ, ಸತ್ಯ ಪುರುಷನ ಮೂಲಕ

ರಚಿಸಿರುವ ಸೃಷ್ಟಿಯ ವಿಷಯದಲ್ಲಿ ಹೇಳಿರುವ ಕತೆಯ ಸಾಕ್ಷಿಯನ್ನು ಯಾರಿಗೆ ಹೇಳಲಿ ಎಂದಿದ್ದಾರೆ. ಏಕೆಂದರೆ ಎಲ್ಲರ ಹುಟ್ಟು ನಂತರದಲ್ಲಾಗಿದೆ. ಸೃಷ್ಟಿರಚನೆಯ ಸಮಯದಲ್ಲಿ ಯಾರೂ ಇಲ್ಲದಿದ್ದಾಗ ಕಬೀರರಿಗೆ ಜ್ಞಾನ ಎಲ್ಲಿಂದ ಬಂದಿತು ಎಂದು ಯೋಚಿಸಬೇಕಾಗುತ್ತದೆ. ಇದರಿಂದ ತಿಳಿಯುವುದೇನೆಂದರೆ, ಇವರೇ ಸ್ವಯಂ ಪೂರ್ಣ ಪರಮಾತ್ಮನು ಸೃಷ್ಟಿಯ ಸೃಜನಕರ್ತನು. ಯಾರಿಗೆ ಕಬೀರರು ಸಿಕ್ಕಿದ್ದಾರೋ ಅವರೆಲ್ಲಾ ಇದನ್ನೇ ಪ್ರಮಾಣೀಕರಿಸಿ ಹೇಳಿದ್ದಾರೆ.

ಗರೀಬ್, ಅನಂತ್ ಕೋಟಿ ಬ್ರಹ್ಮಾಂಡ್ ಕಾ, ಏಕ್ ರತಿ ನಹೀಂ ಭಾರ್ ।
ಸತ್‌ಗುರು ಪುರುಷ್ ಕಬೀರ್ ಹೈಂ, ಕುಲ್ ಕೇ ಸಿರಜನ್‌ಹಾರ್ ॥

ಭಾವಾರ್ಥ:– ಹೇಗೆ ಆಮೆಯು ಅಪಾಯವುಂಟಾದಾಗ ತನ್ನ ತಲೆಯನ್ನು ತನ್ನ ಚಿಪ್ಪಿನೊಳಗೆ ಎಳೆದುಕೊಂಡು ಅಪಾಯದಿಂದ ತಪ್ಪಿಸಿಕೊಳ್ಳುವುದೋ ಹಾಗೆ ಸಂಸಾರಿಕ ವ್ಯಕ್ತಿಗಳಿಂದ ತನ್ನ ಭಕ್ತಿಗೆ ಭಂಗ ಬಂದಾಗ ಎದುರು ಮಾತನಾಡದೆ ಸುಮ್ಮನೆ ಇದ್ದು ಪರಿಸ್ಥಿತಿ ಸಹಜಸ್ಥಿತಿಗೆ ಬಂದಾಗ ಪುನಃ ತನ್ನ ಸಾಧನೆಯನ್ನು ಮುಂದುವರೆಸಬೇಕು. ಆಗ ಭಕ್ತನು ಪರಮಾತ್ಮನೆಡೆಗೆ ಖಂಡಿತವಾಗಿಯೂ ಹೋಗುವನು.

ಅನುರಾಗ ಸಾಗರ ಪುಟ 163 (281)ರಲ್ಲಿ :–

ಸೋರಠಾ :–

ಹಂಸ್ ತಹಾಂ ಸುಖ್ ಬಿಲಸಹೀಂ, 'ಆನಂದ್ ಧಾಮ್ ಅಮೋಲ್ ।
ಪುರುಷ್ ತನು ಛವಿ ನಿರಖಿಹಿಂ, ಹಂಸ್ ಕರೆಂ ಕಿಲೋಲ್ ॥

ಭಾವಾರ್ಥ:– ಮೇಲೆ ತಿಳಿಸಿದಂತೆ ಸಾಧನೆ ಮಾಡಿದಾಗ ಸಾಧಕನು ಅಮರಧಾಮವನ್ನು ತಲುಪಿ ಆನಂದವನ್ನು ಅನುಭವಿಸುತ್ತಾನೆ. ಅಮೂಲ್ಯವಾದ ಸತ್ಯಲೋಕವನ್ನು ಸೇರಿ ಸತ್ಯಪುರುಷರ ಜೊತೆ ವಾಸಿಸುತ್ತಾನೆ.

## ದೀಕ್ಷೆ ಪಡೆದು ನಾಮ ಸ್ಮರಣೆ ಮಾಡುವುದು ಅನಿವಾರ್ಯ

ಅಧ್ಯಾಯ "ವೀರ್ ಸಿಂಹ ಬೋಧ್" ಪುಟ 123 ರಲ್ಲಿ

ರಾಜ ವೀರಸಿಂಹನಿಗೆ ಒಬ್ಬ ಉಪಪತ್ನಿ ಇದ್ದಳು. ಅವಳ ಹೆಸರು ಸುಂದರದೇವಿ. ಅವಳು ಗುರುವಿನಿಂದ ದೀಕ್ಷೆ ಪಡೆದಿದ್ದಳು. ಆದರೆ ಸರಿಯಾಗಿ ಸತ್ಸಂಗಕ್ಕೆ ಹೋಗುತ್ತಿರಲಿಲ್ಲ, ನಾಮಸ್ಮರಣೆಯನ್ನೂ ಮಾಡುತ್ತಿರಲಿಲ್ಲ. ಒಮ್ಮೆ ಅವಳಿಗೆ ಯಾವುದೋ ಕಾಯಿಲೆ ಬಂದಿತು. ಸಾವು ಸಮೀಪಿಸಿತು. ಯಮದೂತರು ಅವಳ ಜೀವವನ್ನು ಪಡೆಯಲು ಅರಮನೆಗೆ ಬಂದರು. ಆದರೆ ಅವಳ ಜೀವ ಅವಳ ಶರೀರ ಬಿಟ್ಟು ಹೋಗಲಿಲ್ಲ. ಉಸಿರು ಅರ್ಧಂಬರ್ಧ ಆಡುತ್ತಿತ್ತು. ರಾಣಿಗೆ ಬಹಳ ಕಷ್ಟವಾಗತೊಡಗಿತು. ಆಗ ಅವಳ ಮುಂದೆಯೇ ಸತ್ಸಂಗ ಏರ್ಪಡಿಸಲು ರಾಜನನ್ನು ಕೇಳಿಕೊಂಡಳು. ಸಂತರು ಬಂದು ಪ್ರವಚನ ನಡೆಸಿಕೊಟ್ಟರು. ಆದರೂ ಯಾವುದೇ ಪ್ರಯೋಜನವಾಗಲಿಲ್ಲ. ಅವಳ ಶರೀರದಲ್ಲಿ ಯಮದೂತರು ಕಾಣಲಾರಂಭಿಸಿದರು. ಆದರೂ ಜೀವ ಹೋಗಲಿಲ್ಲ. ಅವಳಿಗೆ ಉಸಿರಾಡುವುದೇ ಕಷ್ಟವಾಯಿತು. ಜೀವಕ್ಕೆ ಭಯವಾಯಿತು ಹೃದಯ ಕಮಲ (ಹೃದಯ ಚಕ್ರ)ವನ್ನು ತ್ಯಜಿಸಿ ತ್ರಿಕುಟಿಗೆ ತಲುಪಿತು. ಆಗ ಯಮದೂತರು ಸುತ್ತಲೂ ಸುತ್ತುವರಿದರು. ಅವಳಿಗೆ ಹೀಗೆಂದರು, "ಮೊದಲು ನಡಿ! ಪ್ರಭು ನಿನ್ನನ್ನು ಕರೆಯುತ್ತಿದ್ದಾರೆ", ಆಗ ರಾಣಿಯು ನೀವು ಇಲ್ಲಿಗೆ ಹೇಗೆ ಬಂದಿರಿ? ನನ್ನ ಸದ್ಗುರುವೇ ನನ್ನ ಪ್ರಭು. ನೀವು ನನ್ನನ್ನು ಕರೆದೊಯ್ಯಲಾರಿರಿ. ನನ್ನ ಸದ್ಗುರು ನನಗೆ ನಾಮಮಂತ್ರ ನೀಡಿದ್ದಾರೆ. ನನ್ನ ಗುರುಗಳು ಬಂದರೆ ನಾನು ಬರುವೆ" ಎಂದಳು. "ಯಾರಾದರೂ ಗುರುಗಳಿದ್ದರೆ ತಿಳಿಸು ಇಲ್ಲದಿದ್ದರೆ ನಮ್ಮ ಜೊತೆ ನಡಿ" ಎಂದು ಯಮದೂತರು ಗದರಿದರು. ಜೀವವು ಆಗ

ಹೀಗೆಂದಿತು.

ಧರನೀ (ಪೃಥ್ವೀ) ಆಕಾಶ್ ಸೆ ನಗರ್ ನಿಯಾರಾ ।
ತಹಾಂ ನಿವಾಜೈ ಧನೀ ಹಮಾರಾ ॥
ಅಗಮ್ ಶಬ್ದ್ ಜಬ್ ಭಾಖೈ ನಾಊಂ ।
ತಬ್ ಯಮ್ ಜೀವ್ ಕೆ ನಿಕಟ್ ನಹೀಂ ಆಊಂ ॥

ಭಾವಾರ್ಥ:– ಈ ಮೊದಲು ರಾಣಿಗೆ ಸತ್ಸಂಗ ಮತ್ತು ಪ್ರವಚನದ ಬಗ್ಗೆ ನಂಬಿಕೆ ಇರಲಿಲ್ಲ. ಅವಳು ದೀಕ್ಷೆ ಪಡೆದಿದ್ದರೂ ಸಹ ಪ್ರವಚನದ ಕತೆಗಳೆಲ್ಲಾ ಕೇವಲ ಕಟ್ಟು ಕತೆಗಳು. ನನಗೆ ಎಷ್ಟೊಂದು ಸುಖವಿದೆ, ಕೈಗೊಬ್ಬ ಆಳು, ಕಾಲಿಗೊಬ್ಬ ಆಳು, ಎಷ್ಟೊಂದು ಬೆಲೆಬಾಳುವ ಉಡುಪುಗಳು, ಒಡವೆಗಳು, ಹೊತ್ತು ಹೊತ್ತಿಗೂ ಪಂಚ ಭಕ್ಷ್ಯ ಪರಮಾನ್ನಗಳು ಅವಳ ಪಾಲಾಗುತ್ತಿದ್ದವು. ಇದನ್ನೇ ಸುಖವೆಂದು ಪರಿಗಣಿಸಿ, ಗುರುವಿನ ಸೇವೆ, ಮಂತ್ರಜಪ, ನಾಮಸ್ಮರಣೆ ಮಾಡಲಿಲ್ಲ. ಈ ಸೌಲಭ್ಯಗಳೆಲ್ಲಾ ಹಿಂದಿನ ಜನ್ಮದ ಪುಣ್ಯದ ಫಲ. ಅಂದರೆ ಹಿಂದಿನ ಜನ್ಮದಲ್ಲಿ ಬ್ಯಾಟರಿ ಚಾರ್ಜ್‌ಆಗಿತ್ತು. ಈ ಜನ್ಮದಲ್ಲಿ ಪ್ಲಗ್ ಸಿಕ್ಕಿತ್ತು. ಆದರೆ ಚಾರ್ಜ್ ಮಾಡುವುದನ್ನು ಮರೆತಿದ್ದಳು. ಎಷ್ಟೇ ಸ್ವಿಚ್ ಹಾಕಿದರೂ ಫ್ಯಾನೂ ತಿರುಗಲಿಲ್ಲ, ಲೈಟೂ ಹತ್ತಲಿಲ್ಲ. ಇದೇ ರೀತಿ ಜೀವದ ಪೂರ್ವಜನ್ಮದ ಭಕ್ತಿ ಎಂಬ ಆಸ್ತಿ ಅಂದರೆ ಚಾರ್ಜಿಂಗ್ ಖಾಲಿಯಾಗುತ್ತದೆ. ಆಗ ಎಲ್ಲಾ ಸವಲತ್ತುಗಳನ್ನು ಕಿತ್ತುಕೊಳ್ಳಲಾಗುತ್ತದೆ. ಜೀವವನ್ನು ನರಕದಲ್ಲಿ ಹಾಕಲಾಗುತ್ತದೆ. ಆಗ ಅದಕ್ಕೆ ಬುದ್ಧಿ ಬರುತ್ತದೆ. ಅಷ್ಟು ಹೊತ್ತಿಗೆ ಕಾಲ ಮಿಂಚಿರುತ್ತದೆ. ಕೇವಲ ಪಶ್ಚಾತ್ತಾಪ ಪಟ್ಟುಕೊಂಡು ಅಳುವುದೊಂದೇ ಉಳಿದಿರುತ್ತದೆ. ರಾಣಿ ಸುಂದರ ದೇವಿಯು ಸತ್ಸಂಗದಲ್ಲಿ ಪ್ರವಚನ ಕೇಳಿದಳು. ಗುರುವಿನಿಂದ ದೀಕ್ಷೆ ಪಡೆದಿದ್ದಳು. ನಾಮ ಸ್ಮರಣೆ ಮಾಡಿರಲಿಲ್ಲ. ಅವಳು ಗುರುದ್ರೋಹಿಯಾಗಿರಲಿಲ್ಲ. ಗುರುನಿಂದೆ ಮಾಡಿರಲಿಲ್ಲ. ರಾಣಿಯು ಸದ್ಗುರುವನ್ನು ನೆನೆಸಿಕೊಂಡಳು, 'ಹೇ ಗುರುವೇ! ನನ್ನ ಪ್ರಭುವೇ! ನನ್ನನ್ನು ಯಮದೂತರು ಬಂದು ಸುತ್ತುವರೆದಿದ್ದಾರೆ. ನನ್ನಂಥಾ ದಾಸಿಯನ್ನು ಬಿಡಿಸು! ನಾನು ನಿಮ್ಮಿಂದ ದೀಕ್ಷೆ ಪಡೆದಿದ್ದೇನೆ.

ನನ್ನ ಸಹಾಯಕ್ಕೆ ನನ್ನ ಪತಿ, ಪುತ್ರ, ತಂದೆ, ತಾಯಿ, ಅಕ್ಕ ತಮ್ಮ, ಅಣ್ಣ, ತಂಗಿ ಯಾರೂ ಬರುವುದಿಲ್ಲವೆಂದು ಈ ದಿನ ತಿಳಿಯಿತು." ರಾಣಿಯ ಜೀವವು ತನ್ನ ಹೃದಯಾಂತರಾಳದಿಂದ ಸದ್ಗುರುವನ್ನು ಕರೆಯಿತು. ತಕ್ಷಣವೇ ಮಹಾತ್ಮ ಕಬೀರರು ಪ್ರತ್ಯಕ್ಷರಾದರು. ರಾಣಿಯು ಓಡಿ ಹೋಗಿ ಅವರ ಕಾಲಿಗೆರಗಿದಳು. ಅದೇ ಕ್ಷಣ ಯಮದೂತರು ಓಡಿಹೋಗಿ ಯಮರಾಜನ ಬಳಿ ಬಂದು ಹೇಳಿದರು, "ಅವಳ ಸದ್ಗುರು ಬಂದಾಗ ಅಲ್ಲಿ ಒಂದು ರೀತಿಯ ಪ್ರಕಾಶವೇರ್ಪಟ್ಟಿತು." ರಾಣಿಯು ನಾಮಸ್ಮರಣೆ ಮಾಡಿದ ತಕ್ಷಣ ಗುರುಗಳು ಅವಳನ್ನು ಯಮದೂತರಿಂದ ಬಿಡಿಸಿದರು. ಪುನಃ ಜೀವನ ದಾನವನ್ನು ನೀಡಿದರು. ಆಗ ರಾಣಿಯು ನಿಜವಾದ ಸಾಧನೆ ಮಾಡಿ ಕಬೀರರ ಮಂತ್ರವನ್ನು ಜಪಿಸಿ, ಪುಣ್ಯ ಸಂಪಾದಿಸಿದಳು. ಆಗ ಈ ಪ್ರಪಂಚ ನಶ್ವರ ಎನ್ನಿಸತೊಡಗಿತು. ರಾಜ, ಆಸ್ತಿ, ಕುಟುಂಬ– ಇವೆಲ್ಲವೂ ಪರಕೀಯವೆನ್ನಿಸಿತು. ನಂತರ ಅವಳ ಅಂತಿಮ ಸಮಯ ಸಮೀಪಿಸಿತು. ಆಗ ರಾಣಿ ತನ್ನ ತನು–ಮನ–ಧನವನ್ನು ಸದ್ಗುರುವಿನ ಚರಣಗಳಿಗೆ ಅರ್ಪಿಸಿದಳು. ಅವಳ ಭಕ್ತಿಯ ಪುಣ್ಯದಿಂದ ಅವಳು ಸತ್ಯಲೋಕಕ್ಕೆ ಹೋದಳು. ಅಲ್ಲಿ ಅವಳ ಜೀವವು ಪ್ರಶ್ನಿಸಿತು. "ಹೇ ಉದ್ಧರಮಾಡುವವನೇ, ನನ್ನ ಜೀವವನ್ನು ಯಮದೂತರು ಹೇಗೆ ತಡೆದರು?" ಸದ್ಗುರುವಿನ ರೂಪದಲ್ಲಿದ್ದ ಕಬೀರರು ಹೇಳಿದರು, ಈ ರಾಣಿಯು ದೀಕ್ಷೆ ಪಡೆದ ನಂತರವೂ ನಾಮಸ್ಮರಣೆ ಮಾಡಲಿಲ್ಲ. ಆದ್ದರಿಂದ ಯಮದೂತರು ಇವಳನ್ನು ಸುತ್ತುವರೆದಿದ್ದರು. ನಾನು ಅವರಿಂದ ಬಿಡಿಸಿದೆ".

ಆಗ ಜೀವವು ತಲೆತಗ್ಗಿಸಿ ಹೀಗೆ ಹೇಳಿತು, "ಈ ಮೊದಲು ನನಗೆ ನಂಬಿಕೆ ಇರಲಿಲ್ಲ. ನಂತರ ಯಮದೂತರ ಯಾತನೆ ನೋಡಿ ನನಗೆ ನಿಮ್ಮ ನೆನಪು ಬಂತು. ನಿಮ್ಮ ಜ್ಞಾನ ಸತ್ಯವೆಂದು ಅನ್ನಿಸಿತು.

ನಿಮ್ಮನ್ನು ಕರೆದೆ. ನೀವು ನನ್ನನ್ನು ರಕ್ಷಿಸಿದಿರಿ. ನನಗೆ ಮತ್ತೆ ಜೀವನವನ್ನು ಮರಳಿ ಪ್ರಸಾದಿಸಿದಿರಿ. ಆಗ ನಾನು ಹೃದಯಪೂರ್ವಕವಾಗಿ ಭಕ್ತಿ ಮಾಡಿದೆ. ಪೂರ್ಣ ದೀಕ್ಷೆಯನ್ನು ಪಡೆದ ನಾನು ನಿಮ್ಮ ಕೃಪೆಯಿಂದ ಹಾಗೂ ಗುರುಗಳ ಸಹಯೋಗದಿಂದ ನಿಮ್ಮ ಚರಣಗಳ ಆಶ್ರಮಕ್ಕೆ ಬಂದು ತಲುಪಿದೆ. ಸತ್ಯಲೋಕಕ್ಕೆ ಹೋದ ಭಕ್ತನನ್ನು ಬೇರೆ ಭಕ್ತರ ಬಳಿ ಕಳುಹಿಸಲಾಗುತ್ತದೆ. ಅಲ್ಲಿ ಅವರಿಗೆ ಸುಂದರವಾದ ಅಮರ ಶರೀರ ಪ್ರಾಪ್ತವಾಗುವುದು. ಬಹಳ ದೊಡ್ಡದಾದ ಅರಮನೆ ಸಿಗುತ್ತದೆ. ಅಂಗಳದಲ್ಲಿ ವಿಮಾನವು ನಿಂತಿರುತ್ತದೆ. ಸಿದ್ಧಿಗಳು ಆಜ್ಞೆಗಾಗಿ ಕಾಯುತ್ತಿರುತ್ತವೆ. ವಿದ್ಯುತ್ತಿನ ಬಟನ್ (ಸ್ವಿಚ್)ನ್ನು ಒತ್ತಿದ ತಕ್ಷಣ ಹೇಗೆ ವಿದ್ಯುತ್ತಿನಿಂದ ಚಲಿಸುವ ಯಂತ್ರವು ಕೆಲಸ ಮಾಡಲು ಪ್ರಾರಂಭಿಸುತ್ತದೆಯೋ ಹಾಗೆ ಅಲ್ಲಿ ವಚನವೆಂಬ ಬಟನ್ (ಸ್ವಿಚ್) ಇದೆ. ನಿಮಗೆ ಯಾವ ವಸ್ತು ಬೇಕು ಹೇಳಿ. ಅದೇ ವಸ್ತು–ಪದಾರ್ಥಗಳು ನಿಮ್ಮ ಬಳಿ ಹಾಜರಾಗುತ್ತವೆ. ಊಟ ಮಾಡುವ ಆಸೆಯಾಗುತ್ತಿದ್ದಂತೆಯೇ, ನೀವು ಊಟ ಮಾಡುವ ಜಾಗದಲ್ಲಿ ತಟ್ಟೆ ಲೋಟಗಳನ್ನಿಡಲಾಗುತ್ತದೆ. ಸ್ವಲ್ಪ ನಿಧಾನವಾಗಿ ಊಟ ಮಾಡಬೇಕೆಂದು ಅನ್ನಿಸಿದರೆ, ಅದನ್ನೆಲ್ಲಾ ಅಡುಗೆ ಮನೆಯಲ್ಲಿ ಮುಚ್ಚಿಡಲಾಗುತ್ತದೆ ಮರು ಘಳಿಗೆಯೇ ತಿನ್ನಬೇಕೆನ್ನಿಸಿದರೆ ಅದಕ್ಕೂ ವ್ಯವಸ್ಥೆ ಮಾಡಲಾಗುತ್ತದೆ. ತಿರುಗಾಡುವ ಮನಸ್ಸಾದರೆ ವಿಮಾನವು ಚಲಿಸಲು ಸಿದ್ಧವಾಗುತ್ತದೆ. ವಿಮಾನದ ಬಳಿ ಹೋದ ತಕ್ಷಣವೇ ಅದರ ಬಾಗಿಲು ತೆರೆದುಕೊಳ್ಳುತ್ತದೆ. ವಿಮಾನವು ಸ್ಟಾರ್ಟ್ ಆಗುತ್ತದೆ. ಯಾವ ದ್ವೀಪಕ್ಕೆ ಹೋಗಲು ಇಚ್ಛೆಯಾಗುವುದೋ, ಅದೇ ಕಡೆಗೆ ವಿಮಾನವು ಹಾರುವುದು. ಇಷ್ಟಪಟ್ಟ ತಕ್ಷಣ ತಾಜಾ–ತಾಜಾ ಹಣ್ಣುಗಳನ್ನು ಮರಗಳಿಂದ ಕಿತ್ತು ತಂದು ನಿಮ್ಮ ಮುಂದೆ ಇಡಲಾಗುವುದು. ಸತ್ಯಲೋಕದ ನಕಲೀ ಲೋಕವೇ ಈ ಕಾಲಲೋಕ.

ಇದೇ ರೀತಿ ಸ್ತ್ರೀ–ಪುರುಷರ ಕುಟುಂಬಗಳಿವೆ ಸತ್ಯಲೋಕದಲ್ಲಿ ಎರಡು ರೀತಿಯ ಸಂತಾನದ ಸೃಷ್ಟಿಯಾಗುತ್ತದೆ. ಶಬ್ದರಿಂದ ಹಾಗೂ ಮೈಥುನದಿಂದ ಅದು ಹಂಸದ ಮೇಲೆ ನಿರ್ಧಾರವಾಗುತ್ತದೆ. ಶಬ್ದರಿಂದ ಸಂತಾನೋತ್ಪತ್ತಿಯ ಕ್ಷೇತ್ರವು ಸತ್ಯಪುರುಷನ ಸಿಂಹಾಸನದ ನಾಲ್ಕೂ ಕಡೆ ಇದೆ. ನರ–ನಾರಿಯ ಕುಟುಂಬದ ಕ್ಷೇತ್ರವು ಅದರ ನಂತರದ್ದಾಗಿದೆ. ಶಬ್ದದಿಂದ ಸಂತಾನವನ್ನು ಹುಟ್ಟಿಸುವವನು ಕೇವಲ ಮನುಷ್ಯರನ್ನು ಮಾತ್ರ ಹುಟ್ಟಿಸುತ್ತಾನೆ. ಸತ್ಯಲೋಕದಲ್ಲಿ ವೃದ್ಧಾಪ್ಯ ಇರುವುದಿಲ್ಲ. ನರ–ನಾರಿಯ ಕ್ಷೇತ್ರದಲ್ಲಿ ಹುಡುಗರು ಹಾಗೂ ಹುಡುಗಿಯರು ಇಬ್ಬರೂ ಹುಟ್ಟಿಸುತ್ತಾರೆ. ಕೇವಲ ವಚನಗಳಿಂದ ಮದುವೆಯಾಗುತ್ತಾರೆ. ಯಾವ ಮಕ್ಕಳು ಹುಟ್ಟುತ್ತವೆಯೋ, ಅವು ಮೃತ್ಯು ಲೋಕದಿಂದ ಮುಕ್ತರಾಗುತ್ತಾರೆ. ನಂತರ ಎಂದಿಗೂ ಸಾಯುವುದೂ ಇಲ್ಲ, ಮುದುಕರಾಗುವುದೂ ಇಲ್ಲ. ಯಾರು ಮುಕ್ತರಾಗಿ ಸತ್ಯಲೋಕಕ್ಕೆ ತೆರಳುವರೋ, ಅವರಿಗೆ ಮೊದಲು ಸತ್ಯಪುರುಷರ ದರ್ಶನ ಮಾಡಿಸಲಾಗುತ್ತದೆ. ಆ ಸಮಯದಲ್ಲಿ ಅವರು ಭೂಮಿಯಿಂದ ಬಂದ ಸ್ವರೂಪದಲ್ಲೇ ಇರುತ್ತಾರೆ. ಆದರೆ ವೃದ್ಧರು ಕೆಳಗಿನಿಂದ ಹೊರಟರೆ ಅಲ್ಲಿ ಸತ್ಯಪುರುಷರ ಮುಂದೆ ಅದೇ ಸ್ವರೂಪದಲ್ಲಿ ಮತ್ತು ಅದೇ ಅವಸ್ಥೆಯಲ್ಲಿ ಹೋಗುತ್ತಾರೆ. ಅವನ ಪ್ರಕಾಶವು 16 ಸೂರ್ಯರ ಪ್ರಕಾಶದಷ್ಟಿರುತ್ತದೆ. ಅದರ ನಂತರ ಅವನನ್ನು ಎಲ್ಲಕ್ಕಿಂತ ಭಿನ್ನವಾದ ಜಾಗಕ್ಕೆ ಕಳುಹಿಸಲಾಗುತ್ತದೆ. ಆದರೆ ಮುದುಕರು ಅಲ್ಲಿಗೆ ಹೋದರೆ ಯೌವನ ಮತ್ತೆ ಬರುತ್ತದೆ. ಯುವಕರಾಗಿದ್ದರೆ ಯುವಕರಾಗೇ ಇರುತ್ತಾರೆ. ಹುಡುಗರಾಗಿದ್ದರೆ ಹುಡುಗರಾಗೇ ಇರುತ್ತಾರೆ. ಅಲ್ಲಿ ಕೆಲವರಿಗೆ ಸತ್ಯಪುರುಷನ ವಚನದಿಂದ ಸ್ತ್ರೀ–ಪುರುಷರ ಶರೀರವು ಲಭಿಸುವುದು. ಇನ್ನು ಕೆಲವರು ಬೀಜ ರೂಪದಲ್ಲಿ ಸತ್ಪುರುಷರ ಮೂಲಕ ಇನ್ಯಾವಾಗಲಾದರೂ ಯಾರಾದರೂ ಒಬ್ಬರ ಮನೆಯು ಸತ್ಯಲೋಕದಲ್ಲಿ ಉಂಟಾಗುವುದು. ಕುಟುಂಬವೇರ್ಪಡುವುದು. ಅಲ್ಲಿ ಅವರ ಜನ್ಮವಾಗುವುದು. ಆಗ ಮೃತ್ಯುಲೋಕ ಮತ್ತು ಅಕ್ಷರಲೋಕದಿಂದ ಮುಕ್ತರಾಗಿ ಹೋಗುತ್ತಾರೆ. ಅವರನ್ನ ಏಕಾಂತ ಸ್ಥಳದಲ್ಲಿ ಇಡಲಾಗುತ್ತದೆ. ಅವರು ಎರಡೂ ಕ್ಷೇತ್ರದಲ್ಲಿ ಜನ್ಮ ತಾಳುತ್ತಾರೆ. (ವಚನದಿಂದ ಹುಟ್ಟುವವರು ಹಾಗೂ ಸ್ತ್ರೀ ಪುರುಷರಿಂದ ಹುಟ್ಟಿದವರಲ್ಲಿ) ಸ್ತ್ರೀ ಪುರುಷರಿಂದ ಹುಟ್ಟುವುದು ಮಿತಿಗಿಂತ ಅಧಿಕವಾಗಿರುತ್ತದೆ.

ಈ ಮಿತಿಯು 10/ 90 ಆಗಿರುತ್ತದೆ. ಈ 10% ವಚನದಿಂದ ಹುಟ್ಟು, 90% ವಿವಾಹದ ರೀತಿಯಿಂದ ಹುಟ್ಟು ಆಗುತ್ತದೆ.

ಸತ್ಯಲೋಕಕ್ಕೆ ಹೋಗುವವರ ಶರೀರವು ಹದಿನಾರು ಸೂರ್ಯರ ಪ್ರಕಾಶದಷ್ಟಿರುತ್ತದೆ. ಮೊದಲು ಇವರು ಮಾನಸರೋವರಕ್ಕೆ ತೆರಳುವರು. ಅಲ್ಲಿ ಅವರಿಗೆ 4 ಸೂರ್ಯರ ಪ್ರಕಾಶ ಲಭಿಸುವುದು. ನಂತರ ಅವರು ಮುಂದೆ ಹೋಗುತ್ತಾರೆ. ಅಲ್ಲಿ ಪರಬ್ರಹ್ಮನಿಂದ ರಚಿಸಲ್ಪಟ್ಟ ಅಷ್ಟ ಕಮಲದ ಬಳಿ ಬರುತ್ತಾರೆ. ಆಗ ಅವರ ಶರೀರದ ಪ್ರಕಾಶವು 12 ಸೂರ್ಯರ ಪ್ರಕಾಶದಷ್ಟಾಗುತ್ತದೆ. ನಂತರ ಸತ್ಯಲೋಕದಲ್ಲಿ ನಿರ್ಮಾಣ ಮಾಡಲ್ಪಟ್ಟ ಭವರ್ ಗುಹೆಯಲ್ಲಿ ಪ್ರವೇಶಿಸಿದಾಗ ಆ ಶರೀರದ ಪ್ರಕಾಶವು 16 ಸೂರ್ಯರ ಪ್ರಕಾಶದಷ್ಟಾಗುವುದು.

ಇದನ್ನು ಕಬೀರ ಸಾಗರದ 'ಮೊಹಮ್ಮದ್ ಭೋಧ' ಎಂಬ ಅಧ್ಯಾಯದಲ್ಲಿ ಪುಟ ಸಂಖ್ಯೆ 20, 21 ಮತ್ತು 22ರಲ್ಲಿ ನೋಡಬಹುದು.

## "ದಶ ಮುಕಾಮಿ ರೇಖತಾ"

**21ನೇ ಪುಟದಿಂದ ಕೆಲವು ಅಂಶಗಳನ್ನು ಬರೆದಿರುವೆ:–**

ಭಯಾ ಆನಂದ್ ಫಂದ್ ಸಬ್ ಛೋಡಿಯಾ
ಪಹುಂಚಾ ಜಹಾ ಸತ್ಯಲೋಕ್ ಮೇರಾ ॥
{ಹಂಸನೀ (ನಾರಿ ರೂಪದಲ್ಲಿ ಪುಣ್ಯಾತ್ಮಾಗಳು)
ಹಂಸ್ (ನರ ರೂಪದಲ್ಲಿ ಪುಣ್ಯಾತ್ಮಾಗಳು)}

ಹಂಸನೀ ಹಂಸ್ ಸಬ್ ಗಾಯ್ ಬಜಾಯ್ ಕೇ ಸಾಜಿ
ಕೇ ಕಲಶ್ ಮೋಹೇ ಲೇನ್ ಆಏ ॥
ಯುಗನ್ ಯುಗನ್ ಕೇ ಬಿಛುಡೇ ಮಿಲೇ ತುಮ್ ಆಯ್
ಕೇ ಪ್ರೇಮ್ ಕರಿ ಅಂಗ್ ಸೇ ಅಂಗ್ ಲಾಏ ॥
ಪುರುಷ ದರ್ಶ್ ಜಬ್ ದೀನ್ಹಾ ಹಂಸ್ ಕೋ ತಪತ್ ಬಹು ಜನ್ಮ್ ಕೀ ತಬ್ ನಶಾಯೆಂ ॥
ಪಲಿಟ ಕರ್ ರೂಪ್ ಜಬ್ ಏಕ ಸಾ ಕೀನ್ಹಾ ಮಾನೋ
ತಬ್ ಭಾನು ಷೋಡಶ್ (16) ಉಗಾಯೇ ॥
ಪಹುಪ ಕೇ ದೀಪ್ ಪಯೂಷ್ (ಅಮೃತ್) ಭೋಜನ್ ಕರೆಂ
ಶಬ್ದ್ ಕೀ ದೇಹ್ ಸಬ್ ಹಂಸ್ ಪಾಈ ॥
ಪುಷ್ಪ್ ಕಾ ಸೆಹರಾ ಹಂಸ್ ಔರ್ ಹಂಸನೀ ಸಚ್ಚಿದಾನಂದ್ ಸಿರ್ ಛತ್ರ ಛಾಏ ॥
ದೀಪೈ ಬಹು ದಾಮಿನೀ ದಮಕ್ ಬಹು ಭಾಂತಿ ಕೀ
ಜಹಾಂ ಘನ್ ಶಬ್ದ್ ಕೋ ಘಮೋಡ್ ಲಾಈ ॥
ಲಗೇ ಜಹಾಂ ಬರಸನೇ ಘನ್ ಘೋರ್ ಕೈ ಉಠತ್ ತಹಾಂ ಶಬ್ದ್ ಧುನಿ ಅತಿ ಸೋಹಾಈ ॥
ಸುನ್ನ ಸೋಹೈಂ ಹಂಸ್–ಹಂಸನೀ ಯುತ್ಥ್ (ಜೋಡೇ–ಝುಂಡ್)
ಹೈ ಏಕಹೀ ನೂರ್ ಏಕ ರಂಗ್ ರಾಗೈ ॥
ಕರತ್ ಬಿಹಾರ್ (ಸೈರ್) ಮನ್ ಭಾವನೀ ಮುಕ್ತಿ ಮೆಂ
ಕರ್ಮ್ ಔರ್ ಭ್ರಮ್ ಸಬ್ ದೂರ್ ಭಾಗೇ ॥
ರಂಕ್ ಔರ್ ಭೂಪ್ (ರಾಜಾ) ಕೋಈ ಪರಖ್
ಆವೈ ನಹೀಂ ಕರತ್ ಕೋಲಾಹಲ್ ಬಹುತ್ ಪಾಗೇ ॥

ಕಾಮ್ ಔರ್ ಕ್ರೋಧ್ ಮದಲೋಭ್ ಅಭಿಮಾನ್ ಸಬ್ ಛಾಡಿ ಪಾಖಂಡ್ ಸತ್ ಶಬ್ದ್ ಲಾಗೇ ॥
ಪುರುಷ ಕೇ ಬದನ್ (ಶರೀರ್) ಕೌನ್ ಮಹಿಮಾ
ಕಹೂಂ ಜಗತ್ ಮೆಂ ಉಪಮಾ ಕಛು ನಾಹೀಂ ಪಾಯೀ ॥
ಚಂದ್ ಔರ್ ಸೂರ್ (ಸೂರ್ಯ) ಗಣ್ ಜ್ಯೋತಿ
ಲಾಗೈ ನಹೀಂ ಏಕ್ ಹೀ ನಖ್ (ನಾಖುನ್) ಪ್ರಕಾಶ್ ಭಾಈ ॥
ಪರವಾನಾ ಜಿನ್ ನಾದ್ ವಂಶ್ ಕಾ ಪಾಇಯಾ
ಪಹುಂಚಿಯಾ ಪುರುಷ ಕೇ ಲೋಕ್ ಜಾಯೀ ॥

ಕಹ್ ಕಬೀರ್ ಯಹೀ ಭಾಂತಿ ಸೋ ಪಾಇಹೋ
ಸತ್ಯ್ ಪುರುಷ್ ಕೀ ರಾಹ್ ಸೋ ಪ್ರಕಟ್ ಗಾಯೀ ॥

ಭಾವಾರ್ಥ:– ಕಬೀರ ಪರಮೇಶ್ವರರು ಸದ್ಗುರು ರೂಪದಲ್ಲಿ ಪೃಥ್ವಿಯಿಂದ ಧರ್ಮದಾಸನನ್ನು ಕರೆದುಕೊಂಡು ಸತ್ಯಲೋಕಕ್ಕೆ ಹೊರಟಾಗ ದಾರಿಯಲ್ಲಿ 9 ಜಾಗಗಳು ಎದುರಾದವು. ಫಾರಸಿಯಲ್ಲಿ ಹೇಳುವಂತೆ ನಾಸೂತ್, ಮಲಕೂತ್ ಎಂಬ ಜಾಗಗಳಿಗೆ ಬಂದರು. ಈ ಏಳು ಆಕಾಶಗಳನ್ನು ದಾಟಿ ಅಚಿಂತೆ, ವಿಷ್ಣುಲೋಕ ಮುಂತಾದವುಗಳನ್ನು ದಾಟಿ ಸತ್ಯಲೋಕಕ್ಕೆ ಬಂದು ತಲುಪಿದಾಗ ಧರ್ಮದಾಸರು ಹೇಳುತ್ತಿದ್ದರು. ನನ್ನನ್ನು ಸತ್ಕರಿಸುವುದಕ್ಕಾಗಿ ಸತ್ಯಲೋಕದ ಹಂಸ (ನರ) ಹಂಸಿನಿ (ನಾರಿ) ಹಾಡುತ್ತಾ, ಕುಣಿಯುತ್ತಾ, ವಾದ್ಯಗಳನ್ನು ನುಡಿಸುತ್ತಾ, ಸ್ತ್ರೀಯರು ತಮ್ಮ ತಲೆಯಮೇಲೆ ಕಳಸಗಳನ್ನು ಹೊತ್ತುಕೊಂಡು ಬಂದರು. ಅವರ ಶರೀರದ ಪ್ರಕಾಶವು 16 ಸೂರ್ಯರ ಪ್ರಕಾಶದಷ್ಟಿತ್ತು. ನನ್ನ ಶರೀರದ ಪ್ರಕಾಶವೂ ಸಹ ಅವರ ಶರೀರದ ಪ್ರಕಾಶದಂತೆ 16 ಸೂರ್ಯರ ಪ್ರಕಾಶದಷ್ಟಿತ್ತು.

3ಮೋಕ್ಷವನ್ನು ಪಡೆದ ಯಾವ ಹಂಸವು ಪೃಥ್ವಿ ಲೋಕದಿಂದ ಹೊರಡುವುದೋ ಅದನ್ನು ಪುಹಪ ದ್ವೀಪಕ್ಕೆ ಕೊಂಡೊಯ್ಯಲಾಗುತ್ತದೆ. ಅಲ್ಲಿ ಸರ್ವ ಸುಖವಿದೆ. ಸತ್ಯಲೋಕದ ಒಂದು ಭಾಗವಿದೆ. ಮೊಟ್ಟಮೊದಲಿಗೆ ಅದನ್ನು ಈ ಪುಹಪ ದ್ವೀಪದಲ್ಲಿರಿಸಲಾಗುತ್ತದೆ. ಇಲ್ಲಿಂದ ಅದರ ಜನ್ಮವು ಬೇರೆ ಜಾಗದಲ್ಲಿ, ಬೇರೆ ಕುಟುಂಬದಲ್ಲಿ ಆಗುವುದು. ಇದರ ನಂತರ ಆ ಸ್ಥಾನದ ವರ್ಣನೆ ಇದೆ. ಅಲ್ಲಿ ನರ–ನಾರಿಯರಿಂದ ಉತ್ಪತ್ತಿಯಾಗಿ ಕುಟುಂಬವುಂಟಾಗುತ್ತದೆ. ಅಲ್ಲಿ ನರ–ನಾರಿಯರ ಸಮೂಹವು ಸುಖದಿಂದ ಕುಳಿತು ಮಾತನಾಡುತ್ತಿರುತ್ತದೆ. ಮುಂದೆ ಮೋಡ ಗರ್ಜಿಸಿ, ಮಳೆ ಬೀಳುತ್ತದೆ. ಅಲ್ಲಿಗೆ ಸತ್ಯಲೋಕದ ನಿವಾಸಿಗಳು ಪಿಕ್‌ನಿಕ್‌ಗೆ ಹೋಗುತ್ತಾರೆ. ಇನ್ನೂ ಒಂದು ಜಾಗವಿದೆ. ಅಲ್ಲಿ ಮೋಡವೂ ಕಾಣುವುದಿಲ್ಲ, ಆದರೆ ಮಳೆಯಾಗುತ್ತದೆ.

❖ ದೀಕ್ಷೆಯ ನಂತರ ಸಾಧಕನು ಹೇಗಿರಬೇಕು?

ಕಬೀರ ಸಾಗರದ 'ಧರ್ಮಬೋಧ' ಎಂಬ 33ನೇ ಅಧ್ಯಾಯದಲ್ಲಿ (ಪುಟ ಸಂಖ್ಯೆ 177 (1521)ರಲ್ಲಿ ಇದರ ಉತ್ತರವಿದೆ. ಈ ಅಧ್ಯಾಯದಲ್ಲಿ ಪರಮೇಶ್ವರ ಕಬೀರರು ಧರ್ಮಪಾಲನೆಯ ಬಗ್ಗೆ ಹೇಳಿದ್ದಾರೆ. ಕಬೀರ್ ಪಂಥದಲ್ಲಿ ದಿನದಲ್ಲಿ ಮೂರು ಬಾರಿ ಸಂಧ್ಯೆಯಾಗುವುದನ್ನು ವಿವರಿಸಲಾಗಿದೆ. ಸಂಜೆಯ ಅರ್ಥ ಎರಡು ಹೊತ್ತಿನ ಮಿಲನ. ಬೆಳಿಗ್ಗೆ ಮತ್ತು ರಾತ್ರಿಯ ಮಿಲನವು ಒಂದು ಸಂಧ್ಯೆ ಎಂದಾದರೆ, ರಾತ್ರಿ ಬೀಳ್ಕೊಡುತ್ತದೆ. ಬೆಳಗ್ಗಿನ ಶುಭಾರಂಭವಾಗುತ್ತದೆ. ಎರಡನೇ ಸಂಧ್ಯೆ ಎಂದರೆ ದಿನದ 12 ಗಂಟೆಯಲ್ಲಾಗುತ್ತದೆ. ಆಗ ಏರು ಬಿಸಿಲು ಹಾಗೂ ಇಳಿಮುಖವಾಗುವ ಬಿಸಿಲಿನ ಮಿಲನವಾಗುತ್ತದೆ. ಅದು ಮಧ್ಯದಿನದ ಸಂಜೆ. ಮೂರನೇ ಸಂಧ್ಯಾ ಸಂಜೆಯ ಸಮಯದಲ್ಲಾಗುತ್ತದೆ. ಆ ಸಮಯದಲ್ಲಿ ಹಗಲು ಮತ್ತು ರಾತ್ರಿಯ ಮಿಲನವಾಗುತ್ತದೆ. ಆದರೆ ಸಾಮಾನ್ಯ ಜನರು ಸಂಜೆಯನ್ನು ಮಾತ್ರ ಸಂಧ್ಯೆ ಎನ್ನುತ್ತಾರೆ. ಪರಮಾತ್ಮನನ್ನು ಸ್ತುತಿಸುವುದೇ ನಿಜವಾದ ಸಂಧ್ಯೆ. ಯಾರು ಮೋಕ್ಷವನ್ನು ಬಯಸುವರೋ ಅವರು ಮೂರು ಬಾರಿ ಸಂಧ್ಯಾವಂದನೆ ಮಾಡುವರು. ಬೆಳಿಗ್ಗೆ ಮತ್ತು ಸಂಜೆ

ಪರಮಾತ್ಮನ ಸ್ತುತಿ ಮತ್ತು ಅರತಿ ಮಾಡುತ್ತಾರೆ. ಮಧ್ಯಾಹ್ನದ ಸಮಯದಲ್ಲಿ ಎಲ್ಲಾ ದೇವತೆಗಳ ಸ್ತುತಿಯನ್ನು ಮಾಡುತ್ತಾರೆ. ಇದಕ್ಕೆ ಪ್ರಮಾಣವು ಋಗ್ವೇದ 8ನೇ ಮಂಡಲದ 1ನೇ ಸುಕ್ತೀಯ 29ನೇ ಮಂತ್ರ ಹಾಗೂ ಯಜುರ್ವೆದ 19ನೇ ಅಧ್ಯಾಯದ 26ನೇ ಮಂತ್ರದಲ್ಲಿದೆ.

ಕಬೀರ ಸಾಗರದ 'ಧರ್ಮಬೋಧ' ಎಂಬ ಅಧ್ಯಾಯದಲ್ಲಿ ಪುಟ ಸಂಖ್ಯೆ 177ರಲ್ಲಿಯೂ ಸಹ ಪ್ರಮಾಣವಿದೆ.

ಸಾಂಝ್ ಸಕಾರ್ ಮಧ್ಯಾಹ್ನ ಸನ್ಧ್ಯಾ ತೀನೋಂ ಕಾಲ್ ।
ಧರ್ಮ್ ಕರ್ಮ್ ತತ್ಪರ್ ಸದಾ ಕೀಜೈ ಸುರತಿ ಸಂಭಾಲ್ ॥

ಭಾವಾರ್ಥ:– ಭಕ್ತಜನರು ಮೂರು ಹೊತ್ತು ಸಂಧ್ಯಾವಂದನೆ ಮಾಡಬೇಕು. ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆಯ ಹೊತ್ತು ಧ್ಯಾನ, ಆರತಿ, ಮಂತ್ರಜಪ ಮಾಡಬೇಕು. ಧರ್ಮದ ಕಾರ್ಯದಲ್ಲಿ ಯಾವಾಗಲೂ ತೊಡಗಿಸಿಕೊಂಡಿರಬೇಕು. ಸೋಮಾರಿತನ ಮಾಡಬಾರದು.

'ಧರ್ಮಬೋಧ' ಅಧ್ಯಾಯದ ಪುಟ ಸಂಖ್ಯೆ 178(1522) ರಲ್ಲಿ

ಕಬೀರ್, ಕೋಟಿನ್ ಕಂಟಕ್ ಘೇರಿ ಜ್ಯೋಂ ನಿತ್ಯ ಕ್ರಿಯಾ ನಿಜ್ ಕೀನ್ಹ ।
ಸುಮಿರನ್ ಭಜನ್ ಏಕಾಂತ್ ಮೇಂ ಮನ್ ಚಂಚಲ್ ಗಹ್ ಲೀನ್ ॥

ಭಾವಾರ್ಥ:– ಭಕ್ತನಿಗೆ ಕೋಟಿಗಟ್ಟಲೆ ಕಷ್ಟಬಂದರೂ, ನಿತ್ಯವೂ ದಿನಕ್ಕೆ ಮೂರು ಬಾರಿ ಸಂಧ್ಯಾವಂದನೆ ಮಾಡಬೇಕು. ಚಂಚಲ ಮನಸ್ಸನ್ನು ಬದಿಗಿಟ್ಟು ಏಕಾಂತದಲ್ಲಿ ಪರಮಾತ್ಮನಿಂದ ಪಡೆದ ದೀಕ್ಷಾ ಮಂತ್ರವನ್ನು ಜಪಿಸಬೇಕು.

ಕಬೀರ್, ಭಕ್ತೋಂ ಅರೂ ಗುರೂ ಕೀ ಸೇವಾ ಕರ್ ಶ್ರದ್ಧಾ ಪ್ರೇಮ್ ಸಹಿತ್ ।
ಪರಮ್ ಪ್ರಭು (ಸತ್ಯಪುರುಷ್) ಧ್ಯಾವಹೀ ಕರಿ ಅತಿಶ್ಯ ಮನ್ ಪ್ರೀತ್ ॥

ಭಾವಾರ್ಥ:– ನಿಮ್ಮ ಗುರುದೇವರನ್ನು ಹಾಗೂ ಸತ್ಸಂಗಕ್ಕೆ ಬರುವ ಭಕ್ತರನ್ನು ಮತ್ತು ಮನೆಗೆ ಬರುವ ಭಕ್ತರನ್ನು ಗೌರವದಿಂದ ಕಾಣಿರಿ. ಶ್ರದ್ಧೆ ಮತ್ತು ಪ್ರೀತಿಯಿಂದ ಸೇವೆ ಮಾಡಿರಿ. ಪರಮ ಪ್ರಭು ಅಂದರೆ ಪರಮ ಅಕ್ಷರ ಪುರುಷನ ಭಕ್ತಿಯನ್ನು ಅತ್ಯಂತ ಪ್ರೀತಿಯಿಂದ ಮಾಡಿ.

## "ಭಕ್ತ ಯತಿ ಮತ್ತು ಸತಿಯಾಗಬೇಕು"

### "ಯತಿಯ ಲಕ್ಷಣ"

ಪುರುಷ್ ಯತಿ (ಜತಿ) ಸೋ ಜಾನಿಯೇ, ನಿಜ್ ತ್ರಿಯಾ ತಕ್ ವಿಚಾರ್ ।
ಮಾತಾ ಬಹನ್ ಪುತ್ರೀ ಸಕಲ್ ಔರ್ ಜಗ್ ಕೀ ನಾರ್ ॥

ಭಾವಾರ್ಥ:– ಯಾರು ತನ್ನ ಹೆಂಡತಿಯನ್ನು ಬಿಟ್ಟು ಅನ್ಯ ಸ್ತ್ರೀಯಲ್ಲಿ ಪತ್ನಿಭಾವವನ್ನು ಹೊಂದುವುದಿಲ್ಲವೋ, ಅವನನ್ನು ಯತಿಪುರುಷನೆನ್ನುವರು. ಅವರ ವಯಸ್ಸಿಗನುಗುಣವಾಗಿ ಅವರನ್ನು ತಾಯಿ, ತಂಗಿ, ಪುತ್ರಿ ಎಂಬ ಭಾವನೆಯಿಂದ ಕಾಣಬೇಕು.

### "ಸತಿ ಸ್ತ್ರೀಯ ಲಕ್ಷಣ"

ಸ್ತ್ರಿ ಸೋ ಜೋ ಪತಿವ್ರತ್ ಧರ್ಮ್ ಧರೈ, ನಿಜ್ ಪತಿ ಸೇವತ್ ಜೋಯ್ ॥
ಅನ್ಯ ಪುರುಷ್ ಸಬ್ ಜಗತ್ ಮೆಂ ಪಿತಾ ಭ್ರಾತ್ ಸುತ್ ಹೋಯ್ ॥
ಅಪನೆ ಪತಿ ಕೀ ಆಜ್ಞಾ ಮೆಂ ರಹೈ, ನಿಜ್ ತನ್ ಮನ್ ಸೇ ಲಾಗ್ ॥
ಪಿಯಾ ವಿಪರೀತ್ ನ ಕಛು ಕರೈ, ತಾ ತ್ರಿಯಾ ಕೋ ಬಡ್ ಭಾಗ್ ॥

**ಭಾವಾರ್ಥ:– ಯಾರು ತನ್ನ ಪತಿಯನ್ನು ಅತ್ಯಂತ ಪ್ರೀತಿಸುವಳೋ ಅವಳನ್ನು ಸತಿ ಸ್ತ್ರೀ ಎಂದು ಕರೆಯಲಾಗುತ್ತದೆ. ತನ್ನ ಪತಿಯ ವಿನಃ ಪ್ರಪಂಚದಲ್ಲಿ ಅನ್ಯ ಪುರುಷರನ್ನು ಅವರ ವಯಸ್ಸಿಗನುಗುಣವಾಗಿ ತಂದೆ, ಅಣ್ಣ ಹಾಗೂ ಮಗನಂತೆ ಕಾಣುವಳೋ ಅವಳೇ ಸತೀ ಸ್ತ್ರೀ. ಅವಳು ಯಾವಾಗಲೂ ತನ್ನ ಪತಿಯ ಆದೇಶವನ್ನು ಪಾಲಿಸಬೇಕು. ತನು, ಮನದಿಂದ ಸೇವೆ ಮಾಡಬೇಕು. ಯಾವ ಕೆಲಸವನ್ನೂ ಪತಿಗೆ ವ್ಯತಿರಿಕ್ತವಾಗಿ ಮಾಡಬಾರದು.**

## "ದಾನ ಮಾಡುವುದು ಎಷ್ಟು ಅನಿವಾರ್ಯವಾಗಿದೆ"

ಕಬೀರ್, ಮನೋಕಾಮನಾ ಬಿಹಾಯ್ ಕೇ ಹರ್ಷ್ ಸಹಿತ್ ಕರೆ ದಾನ್ ।
ತಾಕಾ ತನ್ ಮನ್ ನಿರ್ಮಲ್ ಹೋಯ್, ಹೋಯ್ ಪಾಪ್ ಕೀ ಹಾನ್ ।
ಕಬೀರ್, ಯಜ್ಞ ದಾನ್ ಬಿನ್ ಗುರೂ ಕೆ, ನಿಶ್ ದಿನ್ ಮಾಲಾ ಫೇರ್ ॥
ನಿಷ್ಫಲ್ ವಹ್ ಕರನೀ ಸಕಲ್, ಸತ್‌ಗುರು ಭಾಖ್ಯೆ ಟೇರ್ ॥
ಪ್ರಥಮ್ ಗುರು ಸೆ ಪೂಛಿಎ, ಕೀಜೈ ಕಾಜ್ ಬಹೋರ್ ।
ಸೋ ಸುಖದಾಯಕ್ ಹೋತ್ ಹೈ, ಮಿಟೈ ಜೀವ್ ಕಾ ಖೋರ್ ॥

**ಭಾವಾರ್ಥ:– ಯಾರು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ದಾನ ಮಾಡುವರೋ. ಅಂಥಾ ದಾನವು ಎರಡು ಫಲಗಳನ್ನು ನೀಡುವುದು. ಬದುಕಿದ್ದಾಗ ಕಾರ್ಯಸಿದ್ಧಿಯಾಗುವುದು. ಹಾಗೂ ಭವಿಷ್ಯಕ್ಕಾಗಿ ಪುಣ್ಯ ಸಂಗ್ರಹವಾಗುವುದು. ಪ್ರತಿಫಲಾಪೇಕ್ಷೆ ಇಲ್ಲದೆ ಮಾಡುವ ದಾನವು ಆತ್ಮವನ್ನು ಶುದ್ಧಿಗೊಳಿಸುತ್ತದೆ. ಪಾಪವು ನಾಶವಾಗುತ್ತದೆ.**

❖ **ಮೊದಲು ಗುರುವನ್ನು ಹುಡುಕಿಕೊಳ್ಳಬೇಕು. ನಂತರ ಗುರುಗಳ ನಿರ್ದೇಶನದಂತೆ ದಾನವನ್ನು ಮಾಡಬೇಕು. ಗುರುವಿಲ್ಲದೆ ನೀವು ಎಷ್ಟೇ ದಾನ ಮಾಡಿದರೂ, ಎಷ್ಟೇ ಜಪ ಮಾಡಿದರೂ, ಎಲ್ಲವೂ ವ್ಯರ್ಥವಾಗುವುದು. ಇದನ್ನು ಸದ್ಗುರುವು ಕೂಗಿ ಕೂಗಿ ಹೇಳಿದ್ದಾನೆ.**

❖ **ನೀವು ಯಾವುದಾದರೂ ಹೊಸ ಕೆಲಸವನ್ನು ಪ್ರಾರಂಭಿಸಬೇಕಾದರೆ ಮೊದಲು ಗುರುವಿನ ಅನುಮತಿಯನ್ನು ಪಡೆದುಕೊಳ್ಳಿ. ಆಗ ಆ ಕೆಲಸವು ಶುಭಪ್ರದವಾಗುವುದು ಹಾಗೂ ಮನಸ್ಸಿನ ಚಿಂತೆ ದೂರವಾಗುವುದು.**

ಕಬೀರ್, ಅಭ್ಯಾಗತ್ ಆಗಮ್ ನಿರಖಿ, ಆದರ್ ಮಾನ್ ಸಮೇತ್ ।
ಭೋಜನ್ ಭಾಜನ್, ಬಿತ್ ಯಥಾ, ಸದಾ ಕಾಲ್ ಜೋ ದೇತ್ ॥

**ನಿಮ್ಮ ಮನೆಗೆ ಯಾರಾದರೂ ಅತಿಥಿಗಳು ಬಂದರೆ ನಿಮ್ಮ ಶಕ್ತ್ಯಾನುಸಾರ ಅವರ ಸತ್ಕಾರವನ್ನು ಮಾಡಬೇಕು. ಸಮಯಕ್ಕೆ ಸರಿಯಾಗಿ ಊಟೋಪಚಾರ ಮಾಡಬೇಕು.**

ಸೋಈ ಮ್ಲೇಚ್ಛ್ ಸಮ್ ಜಾನಿಯೇ, ಗೃಹೀ ಜೋ ದಾನ್ ವಿಹೀನ್ ।
ಯಹೀ ಕಾರಣ ನಿತ್ ದಾನ್ ಕರೇ, ಜೋ ನರ್ ಚತುರ್ ಪ್ರವಿನ್ ॥

**ಯಾವ ಗೃಹಸ್ಥನು ದಾನ ಮಾಡುವುದಿಲ್ಲವೋ, ಅವನು ದುಷ್ಟನಿಗೆ ಸಮಾನ, ಆದ್ದರಿಂದ ದಿನವೂ ದಾನ ಮಾಡಬೇಕು.**

ಪಾತ್ರ್ ಕುಪಾತ್ರ್ ವಿಚಾರ್ ಕೇ ತಬ್ ದೀಜೈ ತಾಹಿ ದಾನ್ ।
ದೇತಾ ಲೇತಾ ಸುಖ್ ಲಹ್ ಅಂತ್ ಹೋಯ್ ನಹೀಂ ಹಾನ್ ॥

**ಅಪಾತ್ರರಿಗೆ ದಾನ ಮಾಡಬಾರದು. ಸತ್ಪಾತ್ರರಿಗೆ ಸಂತೋಷವಾಗಿ ದಾನ ಮಾಡಬೇಕು. ಗುರುಗಳು**

ಸತ್ಪಾತ್ರರನ್ನು ಗುರುತಿಸುತ್ತಾರೆ. ಯಾರಾದರೂ ಹಸಿವಿನಿಂದ ಇದ್ದರೆ ಅವರಿಗೆ ಊಟ ಕೊಡಬೇಕು. ರೋಗಿಗಳ ಸೇವೆ ಮಾಡಬೇಕು. ಬರಪೀಡಿತರಿಗೆ, ಪ್ರವಾಹದಲ್ಲಿ ಮನೆ ಕಳೆದುಕೊಂಡವರಿಗೆ, ನೊಂದವರಿಗೆ ಬಡವರಿಗೆ ದಾನ ಮಾಡುವುದನ್ನು ಸತ್ಪಾತ್ರರಿಗೆ ದಾನ ಎಂದು ಕರೆಯಲ್ಪಡುತ್ತದೆ.

**"ಧರ್ಮ ಬೋಧ್ ಪುಟ 179ರ ಸಾರಾಂಶ"**

ಕಬೀರ್, ಫಲ್ ಕಾರಣ್ ಸೇವಾ ಕರ್ೈ, ನಿಶದಿನ್ ಯಾಚೈ ರಾಮ್ ।
ಕಹ್ ಕಬೀರ್ ಸೇವಾ ನಹೀಂ, ಜೋ ಚಾಹೈ ಚೌಗುನೆ ದಾಮ್ ॥

**ಭಾವಾರ್ಥ:–** ಯಾವುದಾದರೂ ಕಾರ್ಯಸಿದ್ಧಿಗಾಗಿ ಸೇವೆಯನ್ನೋ, ಪೂಜೆಯನ್ನೋ ಮಾಡಿದರೆ ಅದು ಸೇವೆ ಎನ್ನಿಸಿಕೊಳ್ಳುವುದಿಲ್ಲ. ಏಕೆಂದರೆ ಅವನು ಆ ಪೂಜೆಯ ನಂತರ ಪರಮಾತ್ಮನಲ್ಲಿ ಅದರ ನಾಲ್ಕರಷ್ಟು ಹಣವನ್ನು ಕೇಳಿ ಪಡೆಯುತ್ತಾನೆ.

ಕಬೀರ್, ಸಜ್ಜನ್ ಸಗೆ ಕುಟಂಬ್ ಹಿತು, ಜೋ ಕೋಈ ದ್ವಾರೈ ಆವ್ ।
ಕಬಹು ನಿರಾದರ್ ನ ಕೀಜಿಏ, ರಾಖೈ ಸಬ್ ಕಾ ಭಾವ್ ॥

**ಭಾವಾರ್ಥ:–** ನಿಮ್ಮ ಬಂಧುಮಿತ್ರರು, ಕುಟುಂಬದವರು ಮತ್ತು ನಿಮ್ಮ ಹಿತೈಷಿಗಳು ನಿಮ್ಮ ಮನೆ ಬಾಗಿಲಿಗೆ ಬಂದಾಗ ಅವರಿಗೆ ಎಂದಿಗೂ ಅವಮಾನ ಮಾಡಬಾರದು. ಎಲ್ಲರನ್ನು ಸಮಭಾವದಿಂದ ನೋಡಬೇಕು.

ಕಬೀರ್, ಕೋಡೀ–ಕೋಡೀ ಜೋಡೀ ಕರ್ ಕೀನೇ ಲಾಖ್ ಕರೋರ್ ।
ಪೈಸಾ ಏಕ ನಾ ಸಂಗ್ ಚಲೈ, ಕೇತೇ ದಾಮ್ ಬಟೋರ್ ॥

ಲಕ್ಷಾಂತರ ರೂಪಾಯಿಗಳನ್ನು ಸಂಗ್ರಹಿಸಿಟ್ಟುಕೊಂಡು ದಾನ ಧರ್ಮ ಮಾಡದಿದ್ದರೆ. ಈ ಪ್ರಪಂಚ ಬಿಟ್ಟು ಹೋಗುವಾಗ ಒಂದು ರೂಪಾಯಿಯನ್ನೂ ತೆಗೆದುಕೊಂಡು ಹೋಗುವುದಿಲ್ಲ. ಎಷ್ಟೇ ಸಂಪಾದಿಸಿದ್ದರೂ, ಅದನ್ನು ಬಿಟ್ಟು ಹೋಗಬೇಕು.

ಜೋ ಧನ್ ಹರಿಕೇ ಹೇತ್, ಧರ್ಮ್ ರಾಹ್ ನಹೀಂ ಲಗಾತ್ ।
ಸೋ ಧನ್ ಚೋರ್ ಲಬಾರ್ ಗಹ್, ಧರ್ ಛಾತೀ ಪರ್ ಲಾತ್ ॥

**ಭಾವಾರ್ಥ:–** ಯಾರ ಹಣವು ಪರಮಾತ್ಮನಿಗಾಗಿ ಖರ್ಚು ಮಾಡಲ್ಪಡುವುದಿಲ್ಲವೋ, ದಾನ ಧರ್ಮಕ್ಕಾಗಿ ವ್ಯಯವಾಗುವುದಿಲ್ಲವೋ, ಆ ಹಣವು ಕಳ್ಳಕಾಕರ, ಲೂಟಿಕೋರರ ಪಾಲಾಗುವುದು. ಅವರು ಒದ್ದು ಕಿತ್ತುಕೊಂಡು ಹೋಗುತ್ತಾರೆ.

ಸತ್ ಕಾ ಸೌದಾ ಜೋ ಕರ್ೈ, ದಮ್ಭ್ ಛಲ್ ಛಿದ್ರ ತ್ಯಾಗೈ ।
ಅಪನೇ ಭಾಗ್ ಕಾ ಧನ್ ಲಹೈ, ಪರಧನ್ ವಿಷ್ ಸಮ್ ಲಾಗೈ ॥

**ಭಾವಾರ್ಥ:–** ನಿಮ್ಮ ಜೀವನದಲ್ಲಿ ಪರಮಾತ್ಮನಿಗೆ ಹೆದರಬೇಕು. ಸತ್ಯದಿಂದ ಎಲ್ಲಾ ಕೆಲಸವನ್ನೂ ಮಾಡಬೇಕು. ನಿಮ್ಮ ಹಣೆಬರಹದಲ್ಲಿ ಯಾವ ಅದೃಷ್ಟ ಬರೆದಿದೆಯೋ, ಅದರಲ್ಲೇ ಸಂತೋಷ ಪಡಬೇಕು. ಪರಧನವು ವಿಷಕ್ಕೆ ಸಮಾನ.

ಭೂಖಾ ಜಹಿ ಘರ್ ತೇ ಫಿರೈ, ತಾಕೋ ಲಾಗೈ ಪಾಪ್ ।
ಭೂಖೋಂ ಭೋಜನ್ ಜೋ ದೇತ್ ಹೈ, ಕಟೈಂ ಕೋಟಿ ಸಂತಾಪ್ ॥

**ಭಾವಾರ್ಥ:–** ಯಾರ ಮನೆಯಿಂದ ಒಬ್ಬನು ಹಸಿವಿನಿಂದಲೇ ಹಿಂತಿರುಗುತ್ತಾನೋ, ಅವರ ಮನೆಗೆ ಪಾಪ ತಗುಲುವುದು. ಹಸಿದವನಿಗೆ ಊಟ ಕೊಡುವುದರಿಂದ ಕೋಟಿಗಟ್ಟಲೆ ಪುಣ್ಯ ಲಭಿಸುವುದು.

ಪ್ರಥಮ್ ಸಂತ್ ಕೋ ಜೀಮಾಇಐ । ಪೀಛೆ ಭೋಜನ್ ಭೋಗ್ ।
ಐಸೆ ಪಾಪ್ ಕೋ ಟಾಲಿಯೆ, ಕಟೇ ನಿತ್ಯ ಕಾ ರೋಗ್ ॥

**ಭಾವಾರ್ಥ:– ನಿಮ್ಮ ಮನೆಗೆ ಯಾರಾದರೂ ಸಂತರು ಆಗಮಿಸಿದರೆ, ಅವರಿಗೆ ಮೊದಲು ಊಟ ಬಡಿಸಬೇಕು. ನಂತರ ನೀವು ಊಟ ಮಾಡಬೇಕು. ಈ ರೀತಿ ನಿಮ್ಮ ತಲೆಯ ಮೇಲೆ ದಿನವೂ ಬಂದೊದಗುವ ಪಾಪಗಳನ್ನು ದೂರ ಮಾಡಿಕೊಳ್ಳಬೇಕು.**

## ಧರ್ಮಬೋಧ್ ಪುಟ 180ರ ಸಾರಾಂಶ

ಕಬೀರ್, ಯದ್ಯಪಿ ಉತ್ತಮ್ ಕರ್ಮ್ ಕರಿ, ರಹೈ ರಹಿತ್ ಅಭಿಮಾನ್ ।
ಸಾಧು ದೇಖೀ ಸಿರ್ ನಾವತೇ, ಕರತೇ ಆದರ್ ಮಾನ್ ॥

**ಭಾವಾರ್ಥ:– ಅಹಂಕಾರವನ್ನು ಬಿಟ್ಟು ಒಳ್ಳೆಯ ಕೆಲಸ ಮಾಡಬೇಕು. ಸಂತರು, ಭಕ್ತರು ಮುಂತಾದವರು ಬಂದಾಗ ಅವರಿಗೆ ತಲೆ ಬಗ್ಗಿಸಿ ನಮಸ್ಕರಿಸಬೇಕು ಮತ್ತು ಅವರನ್ನು ಗೌರವದಿಂದ ಕಾಣಬೇಕು.**

ಕಬೀರ್, ಬಾರ್–ಬಾರ್ ನಿಜ್ ಶ್ರವಣತೆಂ, ಸುನೇ ಜೋ ಧರ್ಮ್ ಪುರಾಣ್ ।
ಕೋಮಲ್ ಚಿತ್ ಉದಾರ್ ನಿತ್, ಹಿಂಸಾ ರಹಿತ್ ಬಖಾನ್ ॥

**ಭಾವಾರ್ಥ:– ಭಕ್ತನು ಸತ್ಸಂಗ ಜ್ಞಾನವನ್ನು ಪಡೆದು ತನ್ನ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ಅಹಿಂಸೆ ಪರಮ ಧರ್ಮ ಎನ್ನುವುದನ್ನು ಅರಿಯಬೇಕು. ಅಹಿಂಸೆಗೆ ಸಂಬಂಧ ಪಟ್ಟ ಪ್ರವಚನ ಕೇಳಬೇಕು.**

ಕಬೀರ್, ನ್ಯಾಯ್ ಧರ್ಮಯುಕ್ತ್ ಕರ್ಮ್ ಸಬ್ ಕರ್ರೈಂ,
ನ ಕರ್ ನಾ ಕಬಹೂ ಅನ್ಯಾಯ್ ।
ಜೋ ಅನ್ಯಾಯೀ ಪುರುಷ್ ಹೈಂ, ಬಂಧೆ ಯಮಪುರ್ ಜಾಐಂ ॥

**ಭಾವಾರ್ಥ:– ಯಾವಾಗಲೂ ನ್ಯಾಯಬದ್ಧವಾದ ಕೆಲಸ ಮಾಡಬೇಕು. ಎಂದಿಗೂ ಅನ್ಯಾಯ ಮಾಡಬಾರದು. ಯಾರು ಅನ್ಯಾಯ ಮಾಡುವರೋ, ಅವರು ಯಮಧರ್ಮರಾಜನ ಲೋಕದಲ್ಲಿ ನರಕಕ್ಕೆ ತಳ್ಳಲ್ಪಡುವರು.**

## ಧರ್ಮ ಬೋಧ್ ಪುಟ 181ರ ಸಾರಾಂಶ

ಕಬೀರ್, ಗೃಹ್ ಕಾರಣ್ ಮೆಂ ಪಾಪ್ ಬಹು, ನಿತ್ ಲಾಗೈ ಸುನ್ ಲೋಯ್ ।
ತಾಹಿತೇ ದಾನ್ ಅವಶ್ಯ್ ಹೈ, ದೂರ್ ತಾಹಿತೇ ಹೋಯ್ ॥
ಕಬೀರ್, ಚಕ್ಕೀ ಚೌಂಕ್ಕೈ ಚೂಲ್ಹ್ ಮೆಂ, ಝಾಡೂ ಅರೂ ಜಲ್‌ಪಾನ್ ।
ಗೃಹ್ ಆಶ್ರಮೀ ಕೋ ನಿತ್ಯ ಯಹ್, ಪಾಪ್ ಪಾಂಚೈ ವಿಧಿ ಜಾನ್ ॥

**ಭಾವಾರ್ಥ:– ಬೀಸುವ ಕಲ್ಲಿನಿಂದ ಹಿಟ್ಟು ಮಾಡುವುದರಿಂದ, ಅಡಿಗೆ ಮಾಡಲು ಒಲೆ ಹಚ್ಚುವುದರಿಂದ ಬೆಂಕಿ ಬಳಸಬೇಕಾಗುವುದರಿಂದ ಪಾಪವು ತಗುಲುವುದು. ಅಂದರೆ ಗುಡಿಸುವಾಗ, ಸಾರಿಸುವಾಗ, ತಿನ್ನುವಾಗ, ಕುಡಿಯುವಾಗ, ಪಾಪವುಂಟಾಗುವುದು. ಆದ್ದರಿಂದ ದಿನವೂ ಒಂದಿಲ್ಲೊಂದು ಪಾಪ ತಗುಲುತ್ತಿರುವುದು. ಆದ್ದರಿಂದ ದಾನ ಮಾಡುವುದು ಅತ್ಯಂತ ಅವಶ್ಯಕ. ದಾನ ಮಾಡುವುದರಿಂದ ಈ ಪಾಪಗಳೆಲ್ಲಾ ನಾಶವಾಗುವುದು.**

ಕಬೀರ್, ಕಛು ಕಟೆಂ ಸತ್ಸಂಗ್ ತೆ, ಕಛು ನಾಮ್ ಕೇ ಜಾಪ್ ।

ಕಭು ಸಂತ್ ಕೇ ದರ್ಶತೆ, ಕಭು ದಾನ್ ಪ್ರತಾಪ್ ॥

**ಭಾವಾರ್ಥ:–** ಕೆಲವು ಧಾರ್ಮಿಕ ಕ್ರಿಯೆಗಳಿಂದ ಭಕ್ತರ ಪಾಪಗಳು ದೂರವಾಗುವುದು. ಕೊಂಚಪಾಪವು ಸತ್ಸಂಗದ ಪ್ರವಚನಗಳನ್ನು ಕೇಳುವುದರಿಂದ, ಕೊಂಚ ಪಾಪವು ನಾಮ ಸ್ಮರಣೆ ಮಾಡುವುದರಿಂದ ಮತ್ತು ಸಂತರ ದರ್ಶನ ಪಡೆಯುವುದರಿಂದ ನಾಶವಾಗುವುದು, ಹಾಗೂ ಕೇಲವು ದಾನದಿಂದ ಸಮಾಪ್ತವಾಗುವುದು.

ಬಟ್ಟೆ ತೊಟ್ಟಾಗ ಧೂಳು, ಮಣ್ಣು ಮೆತ್ತಿಕೊಳ್ಳುವುದರಿಂದ ಬಟ್ಟೆಯು ಕೊಳೆಯಾಗುತ್ತದೆ. ಅದನ್ನು ಸಾಬೂನಿನಿಂದ ಒಗೆಯಲಾಗುತ್ತದೆ. ಹಾಗೆಯೇ ದಿನವೂ ಪಾಪವು ಅಂಟಿಕೊಳ್ಳುತ್ತಿರುತ್ತದೆ. ಬಟ್ಟೆಯ ಹಾಗೆ ಸತ್ಸಂಗ ವಚನ, ನಾಮಸ್ಮರಣೆ, ಜಪ, ಸಂತರ ದರ್ಶನದಂಥಾ ಸಾಬೂನು, ನೀರಿನಿಂದ ತೊಳೆದರೆ ಆತ್ಮವು ನಿರ್ಮಲಗೊಳ್ಳುವುದು. ಭಕ್ತಿಯಲ್ಲಿ ಮನಸ್ಸನ್ನು ತೊಡಗಿಸಿಕೊಳ್ಳಬೇಕು.

ಕಬೀರ್, ಜೋ ಧನ್ ಪಾಯ್ ನ ಧರ್ಮ್ ಕರತ್, ನಾಹೀಂ ಸದ್ ವ್ಯೌಹಾರ್ ।
ಸೋ ಪ್ರಭು ಕೇ ಚೋರ್ ಹೈಂ, ಫಿರತೇ ಮಾರೋ ಮಾರ್ ॥

ಪರಮಾತ್ಮನು ಕೊಟ್ಟ ಹಣದಲ್ಲಿ ಯಾರು ಸ್ವಲ್ಪವೂ ದಾನ ಮಾಡುವುದಿಲ್ಲವೋ, ಒಳ್ಳೆಯ ಕೆಲಸ ಮಾಡುವುದಿಲ್ಲವೋ, ಅವರು ಪರಮಾತ್ಮನ ಆಸ್ಥಾನದಲ್ಲಿ ಕಳ್ಳರು. ಅವರಿಗೆ ಮಾಯೆ ಆವರಿಸಿಕೊಂಡಿರುತ್ತದೆ. ಇದರ ಬಗ್ಗೆ ಗರೀಬ್‌ದಾಸರೂ ಸಹ ಹೇಳಿದ್ದಾರೆ.

ಜಿನ್ ಹರ್ ಕೀ ಚೋರೀ ಕರೀ ಔರ್ ಗಏ ರಾಮ್ ಗುಣ್ ಭೂಲ್ ।
ತೇ ವಿಧನಾ ಬಾಗುಲ್ ಕಿಏ, ರಹೇ ಊರ್ಧ್ ಮುಖ್ ಝೂಲ್ ॥

**ಭಾವಾರ್ಥ:–** ಇದನ್ನೇ ಗೀತೆಯ 3ನೇ ಅಧ್ಯಾಯದ 10 ರಿಂದ 13ನೇ ಶ್ಲೋಕದಲ್ಲಿ ಹೇಳಿದೆ. ಯಾರು ದಾನ ಧರ್ಮವನ್ನು ಮಾಡುವುದಿಲ್ಲವೋ, ಅವರು ಕಳ್ಳರಿಗೆ ಸಮಾನ. ಅಂಥಾವರು ಕೇವಲ ಅವರ ಉದರ ಪೋಷಣೆಗಾಗಿ ಅನ್ನ ಬೇಯಿಸುತ್ತಾರೆ. ಧರ್ಮ ಕರ್ಮಗಳ ಬಗ್ಗೆ ಅವರಿಗೆ ಗಮನವಿರುವುದಿಲ್ಲ. ಅವರು ಕೊನೆಗೆ ಪಾಪದ ಮೂಟೆ ಹೊತ್ತುಕೊಳ್ಳುತ್ತಾರೆ.

## "ಮಕ್ಕಳಿಗೆ ಶಿಕ್ಷಣವನ್ನು ಅವಶ್ಯಕವಾಗಿ ಕೊಡಿಸಬೇಕು"

ಕಬೀರ್, ಮಾತ್ ಪಿತಾ ಸೋ ಶತ್ರು ಹೈಂ, ಬಾಲ್ ಪಢಾವೈಂ ನಾಹಿಂ ।
ಹಂಸನ್ ಮೆಂ ಬಗುಲಾ ಯಥಾ, ತಥಾ ಅನ್‌ಪಢ್ ಸೋ ಪಂಡಿತ್ ಮಾಹೀಂ ॥

**ಭಾವಾರ್ಥ:–** ಯಾರು ತಮ್ಮ ಮಕ್ಕಳನ್ನು ಓದಿಸುವುದಿಲ್ಲವೋ ಅವರು ಮಕ್ಕಳಿಗೆ ಶತ್ರುಗಳಿದ್ದಂತೆ, ಅಶಿಕ್ಷಿತ ವ್ಯಕ್ತಿಯು ಶಿಕ್ಷಿತ ವ್ಯಕ್ತಿಯ ಮಧ್ಯದಲ್ಲಿ ಹಂಸಗಳ ಮಧ್ಯೆ ಬಕಪಕ್ಷಿಯಿದ್ದಂತೆ, ಶಿಕ್ಷಿತರನ್ನಾಗಿ ಮಾಡುವುದೆಂದರೆ ಅವರಿಗೆ ಧಾರ್ಮಿಕ ಜ್ಞಾನವನ್ನು ಕೊಡುವುದು, ಸತ್ಸಂಗಕ್ಕೆ ಕರೆದೊಯ್ಯುವುದು ಎಂದರ್ಥ.

ಯಾರಿಗಾದರೂ ಆಧ್ಯಾತ್ಮಿಕ ಜ್ಞಾನವಿಲ್ಲದಿದ್ದರೆ ಅವರಿಗೆ ಶುಭ–ಅಶುಭ ಕಾರ್ಯಗಳ ಬಗ್ಗೆ ಅರಿವಿರುವುದಿಲ್ಲ. ಆದ್ದರಿಂದ ಅವನು ಪಾಪ ಮಾಡುತ್ತಿರುತ್ತಾನೆ. ಸತ್ಸಂಗ ಕೇಳುವವನಿಗೆ ಆಧ್ಯಾತ್ಮ ಜ್ಞಾನದ ಅರಿವಿರುತ್ತದೆ. ಅವನು ಎಂದಿಗೂ ಪಾಪ ಮಾಡುವುದಿಲ್ಲ. ಅವನು ಸರೋವರದಲ್ಲಿ ಯಾವಾಗಲೂ ಮುತ್ತನ್ನು ತಿನ್ನುವ ಹಂಸಪಕ್ಷಿಯ ಹಾಗೆ ಇರುತ್ತಾನೆ. ಆಧ್ಯಾತ್ಮಿಕ ಜ್ಞಾನವಿಲ್ಲದ ವ್ಯಕ್ತಿಯು ಬಕಪಕ್ಷಿಗೆ ಸಮಾನ. ಬಕಪಕ್ಷಿಯು ಮೀನು, ಕೀಟ ಮುಂತಾದ ನೀರಿನ ಜಂತುಗಳನ್ನು ತಿನ್ನುತ್ತದೆ. ಹಂಸ ಮತ್ತು ಬಕಪಕ್ಷಿಯು ನೋಡಲು ಒಂದೇ ರೀತಿ ಇರುತ್ತದೆ. ಅವುಗಳನ್ನು ನೋಡಿ ಗುರುತಿಸುವುದು ಕಷ್ಟ. ಕೇವಲ ಅವುಗಳ ಕರ್ಮದಿಂದ ಗುರುತಿಸಲ್ಪಡುತ್ತವೆ. ಇದೇ ರೀತಿ ತತ್ವಜ್ಞಾನವುಳ್ಳ ವ್ಯಕ್ತಿಯು

**ಒಳ್ಳೆಯ ಕೆಲಸಗಳಿಂದ ಮತ್ತು ತತ್ವಜ್ಞಾನವಿಲ್ಲದ ವ್ಯಕ್ತಿ ಕೆಟ್ಟ ಕೆಲಸಗಳಿಂದ ಗುರುತಿಸಲ್ಪಡುತ್ತಾನೆ.**

ಕಬೀರ್, ಪಹಲೇ ಅಪನೇ ಧರ್ಮ್ ಕೋ, ಭಲೀ ಭಾಂತಿ ಸಿಖಲಾಯ್ ।
ಅನ್ಯ ಧರ್ಮ್ ಕೀ ಸೀಖ್ ಸುನಿ, ಭಟಕಿ ಬಾಲ್ ಬುದ್ಧಿ ಜಾಯ್ ॥

**ಭಾವಾರ್ಥ:– ಕುಟುಂಬದ ಸದಸ್ಯರಿಗೆ ಮತ್ತು ಮಕ್ಕಳಿಗೆ ಧರ್ಮದ ಬಗ್ಗೆ ಅಂದರೆ ಧಾರ್ಮಿಕ ಕರ್ಮದ ಬಗ್ಗೆ ಪೂರ್ಣರೂಪದ ಜ್ಞಾನವನ್ನು ನೀಡಬೇಕು. ಮಕ್ಕಳಿಗೆ ಹುಡುಗು ಬುದ್ಧಿ ಜಾಸ್ತಿ ಇದ್ದು, ಆಧ್ಯಾತ್ಮಿಕ ಜ್ಞಾನ ಇರುವುದಿಲ್ಲ. ಅವರು ಅನ್ಯಧರ್ಮದ ಶಿಕ್ಷಣ ಪಡೆದು ದಾರಿ ತಪ್ಪುವ ಸಾಧ್ಯತೆ ಇರುತ್ತದೆ. ಅವರಿಗೆ ನಿಮ್ಮ ಧರ್ಮದ ಜ್ಞಾನ ನೀಡಬೇಕು. ಯಾರಿಗೆ ತಮ್ಮ ಧರ್ಮದ ಸಂಪೂರ್ಣ ಜ್ಞಾನವಿರುತ್ತದೋ, ಅವನು ದಾರಿ ತಪ್ಪುವುದಿಲ್ಲ.**

## ಧರ್ಮ ಬೋಧ್ ಪುಟ 182ರ ಸಾರಾಂಶ

ಕಬೀರ್, ಜೋ ಕಛು ಧನ್ ಕಾ ಲಾಭ್ ಹೋ, ಶುದ್ಧ್ ಕಮಾಈ ಕೀನ್ ।
ತಾ ಧನ್ ಕೇ ದಶವೆಂ ಅಂಶ್ ಕೋ, ಅಪನೆ ಗುರೂ ಕೋ ದೀನ್ ॥

ದಸವಾಂ ಅಂಶ್ ಗುರೂ ಕೋ ದೀಜೈ । ಅಪನಾ ಜನ್ಮ ಸಫಲ್ ಕರ್ ಲೀಜೈ ॥

**ಭಾವಾರ್ಥ:– ಶುದ್ಧವಾದ ಸಂಪಾದನೆಯಿಂದ ಬರುವ ಲಾಭದಲ್ಲಿ ಹತ್ತನೇ ಒಂದು ಭಾಗವನ್ನು ಗುರುಗಳಿಗೆ ದಾನ ಮಾಡಬೇಕು.**

ಕಬೀರ್, ಜೆ ಗುರೂ ನಿಕಟ್ ನಿವಾಸ್ ಕರೈ, ತೋ ಸೇವಾ ಕರ್ ನಿತ್ಯ ।
ಜೋ ಕಛು ದೂರ್ ಬಸೈ, ಪಲ್–ಪಲ್ ಧ್ಯಾನ್ ಸೇ ಹಿತ್ ॥

**ಭಾವಾರ್ಥ:– ಗುರುಗಳ ಆಶ್ರಮವು ನಿಮ್ಮ ಮನೆಯ ಬಳಿ ಇದ್ದರೆ, ದಿನವೂ ಅವರ ಸೇವೆಗಾಗಿ ತೆರಳಬೇಕು. ದೂರವಿದ್ದರೆ, ಕ್ಷಣ ಕ್ಷಣವೂ ನೆನಪಿಸಿಕೊಳ್ಳಬೇಕು. ಇದರಿಂದ ಸಾಧಕನಿಗೆ ಪ್ರಯೋಜನ ಉಂಟಾಗುವುದು.**

ಕಬೀರ್, ಛಠೇ ಮಾಸ್ ಗುರೂ ದರ್ಶ್ ಕರನ್ ತೆ, ಕಬಹು ನಾ ಚುಕೋ ಹಂಸ್ ।
ಗುರೂ ದರ್ಶ್ ಅರೂ ಸತ್ಸಂಗ್, ವಿಚಾರ್ ಸೋ ಉಧರೈ ಜಾತ್ ಹೈ ವಂಶ್ ॥

ಕಬೀರ್, ಛಠೇ ಮಾಸ್ ನಾ ಕರಿ ಸಕೇ, ವರ್ಷ್ ಮೆಂ ಕರೋ ಧಾಯ್ ।
ವರ್ಷ್ ಮೆಂ ದರ್ಶ್ ನಹಿಂ ಕರೇ, ಸೋ ಭಕ್ತ್ ಸಾಕಿಟ್ ಠಹರಾಯ್ ॥

ಕಬೀರ್, ಜೈ ಗುರೂ ಪರಲೋಕ್ ಗಮನ್ ಕರೇ, ಸೀಖ್ ಮಾನಿಯೋ ಶೀಶ್ ।
ಹರದಮ್ ಗುರೂ ಕೋ ಸಾಥ್ ಜಾನಿ, ಸುಮರೋ ನಿತ್ ಜಗದೀಶ್ ॥

ಕಬೀರ್, ಗುರೂ ಮರಾ ಮತ್ ಜಾನಿಯೋ, ವಸ್ತ್ರ ತ್ಯಾಗಾ ಸ್ಥೂಲ್ ।
ಸೂಕ್ಷ್ಮ ದೇಹೀ ಗಮನ್ ಕರಿ, ಖಿಲಾ ಅಮರ್ ವಹ್ ಫೂಲ್ ॥

ಕಬೀರ್, ಸತ್‌ಲೋಕ್ ಮೆಂ ಬೈಠೀ ಕರ್, ಗುರೂ ನಿರಖೈ ತೋಹೆ ।
ಗುರೂ ತಜ್ ನಾ ಔರ್ ಮಾನಿಯೋ, ಅಧ್ಯಾತ್ಮ ಹಾನಿ ಹೋಯ್ ॥

ಕಬೀರ್, ಗುರೂ ಕೇ ಶಿಷ್ಯ ಕೀ ಜಗದೀಶ್ ಕರೈ ಸಹಾಯ್ ।
ನಾಮ್ ಜಪೈ ಅರೂ ದಾನ್ ಧರ್ಮ್ ಮೆಂ ಕಬಹೂ ನ ಅಲಸಾಯ್ ॥
ಕಬೀರ್, ಜೈಸೆ ರವಿ ಆಕಾಶ್ ಸೆ, ಸಬ್ ಕೇ ಸಾಥ್ ರಹಾಯ್।
ಉಷ್ಣತಾ ಅರೂ ಪ್ರಕಾಶ್ ಕೋ ದೂರಹೀ ತೇ ಪಹುಂಚಾಯ್ ॥

ಕಬೀರ್, ಐಸೆ ಗುರೂ ಜಹಾಂ ಬಸೆ ಸಬ್ ಪರ್ ಕರೇ ರಜಾ ।
ಗುರೂ ಸಮೀಪ್ ಜಾನ್‌ಕರ್ ಸಕಲ್ ವಿಕಾರ್ ಕರತ್ ಲಜಾ ॥

ಭಾವಾರ್ಥ:– ಆರು ತಿಂಗಳಿಗೊಮ್ಮೆ ಗುರುಗಳ ದರ್ಶನವನ್ನು ಖಂಡಿತವಾಗಿಯೂ ಮಾಡಬೇಕು. ಗುರುದರ್ಶನದಿಂದ ಇಡೀ ವಂಶಕ್ಕೆ ಮುಕ್ತಿ ದೊರಕುವುದು. ಇದು ಸಾಧ್ಯವಿಲ್ಲದಿದ್ದರೆ ವರ್ಷಕ್ಕೊಮ್ಮೆಯಾದರೂ ದರ್ಶನಕ್ಕೆ ಹೋಗಬೇಕು. ವರ್ಷಕ್ಕೊಮ್ಮೆಯಾದರೂ ಭಕ್ತನು ಗುರುದರ್ಶನಕ್ಕೆ ತೆರಳದಿದ್ದರೆ. ಅವನು ಭಕ್ತಿಯಿಂದ ವಂಚಿತನಾಗಿದ್ದಾನೆ ಎನ್ನಬಹುದು.

ಗುರುವು ಸತ್ಯಲೋಕಕ್ಕೆ ಹೊರಟು ಹೋಗಿದ್ದರೆ, ಅವನು ಕೊಟ್ಟ ಶಿಕ್ಷಣದಿಂದ ಧರ್ಮ–ಕರ್ಮ ಮಾಡುತ್ತಿರಬೇಕು. ಪರಮೇಶ್ವರನ ಭಜನೆ ಮಾಡಬೇಕು. ಗುರುವಿನಿಂದ ಪಡೆದ ಮಂತ್ರ ದೀಕ್ಷೆಯ ಜಪವನ್ನು ಮಾಡಬೇಕು.

ಗುರುವನ್ನು ಬೇರೆಯವರೆಂದು ಭಾವಿಸಬಾರದು. ಗುರುವು ಶರೀರ ಸಮೇತ ಸತ್ಯಲೋಕಕ್ಕೆ ತೆರಳಿ ಅಮರತ್ವವನ್ನು ಪಡೆದಿದ್ದಾನೆ. ನಿಮ್ಮನ್ನು ಅಲ್ಲಿಂದಲ್ಲೇ ನೋಡುತ್ತಾ ನಿಮ್ಮ ಆಗಮನಕ್ಕಾಗಿ ಕಾಯುತ್ತಿದ್ದಾನೆ. ಸ್ಥೂಲ ಶರೀರವನ್ನು ತ್ಯಜಿಸದೇ ಅಲ್ಲಿಗೆ ಹೋಗಲು ಸಾಧ್ಯವಿಲ್ಲ, ಗುರುವು ಹಾಕಿಕೊಟ್ಟ ದಾರಿಯಲ್ಲಿ ನಡೆದರೆ ಜೀವನವು ಸಫಲವಾಗುವುದು.

ಗುರುವು ಸತ್ಯಲೋಕದಲ್ಲಿ ಕುಳಿತು ನಿಮ್ಮನ್ನು ನೋಡುತ್ತಿರುತ್ತಾನೆ. ಗುರುವು ಈ ಪ್ರಪಂಚವನ್ನು ಬಿಟ್ಟು ಹೋದ ಮೇಲೆ ಅನ್ಯರನ್ನು ಗುರುವೆಂದು ಸ್ವೀಕರಿಸಬಾರದು. ಗುರುವಿನಿಂದ ಉಪದೇಶ ಪಡೆದ ಶಿಷ್ಯರಿಗೆ ಪರಮೇಶ್ವರನು ಸಹಾಯ ಮಾಡುತ್ತಾನೆ. ಗುರುವು ಹೇಳಿದ ನಾಮಸ್ಮರಣೆ, ಜಪ, ತಪ, ದಾನ ಧರ್ಮ ಮುಂತಾದ ಕೆಲಸಗಳನ್ನು ಮಾಡಲು ಸೋಮಾರಿತನ ಮಾಡಬಾರದು.

ಹೇಗೆ ಸೂರ್ಯನು ದೂರದ ಆಕಾಶದಿಂದ ಎಲ್ಲರಿಗೂ ಸಮಾನವಾದ ಬೆಳಕು ಹಾಗೂ ಶಾಖವನ್ನು ಕೊಡುತ್ತಾನೆಯೋ, ಹಾಗೆ ಗುರುವು ಎಲ್ಲೇ ಕುಳಿತಿದ್ದರೂ, ಅಲ್ಲಿಂದಲೇ ತನ್ನ ಭಕ್ತರ ಮೇಲೆ ಕೃಪೆ ತೋರುತ್ತಾನೆ. ಗುರುವು ಸಮೀಪದಲ್ಲೇ ಇದ್ದು ಎಲ್ಲವನ್ನೂ ನೋಡುತ್ತಿದ್ದಾನೆ ಎನ್ನುವ ಭಾವನೆ ಇಟ್ಟುಕೊಂಡು ಕೆಟ್ಟ ಕೆಲಸ ಮಾಡುವುದನ್ನು ಬಿಡಬೇಕು.

## ಧರ್ಮ ಬೋಧ್ ಪುಟ 183ರ ಸಾರಾಂಶ

ಕಬೀರ್, ಕೇತೇ ಜನಕಾದಿಕ್ ಗೃಹೀ ಜೋ ನಿಜ್ ಧರ್ಮ್ ಪ್ರವೀನ್ ।
ಪಾಯೋ ಶುಭಗತಿ ಆಪ್ ಹೀ ಔರನಹೂ ಮತಿ ದೀನ್ ॥

ಭಾವಾರ್ಥ:– ಜನಕ ರಾಜನಂಥಾ ಗೃಹಸ್ಥನು ತನ್ನ ಧರ್ಮವನ್ನು ಚೆನ್ನಾಗಿ ಅರಿತಿದ್ದನು. ಈ ಕಾರಣದಿಂದಲೇ ತಾನು ಸ್ವತಃ ಮೋಕ್ಷವನ್ನು ಹೊಂದಿದ್ದೇ ಅಲ್ಲದೆ ಬೇರೆಯವರಿಗೂ ಮೋಕ್ಷದ ಮಾರ್ಗವನ್ನು ತೋರಿಸಿದನು.

ಕಬೀರ್, ಹರಿ ಕೇ ಹೇತ್ ನ ದೇತ್, ಧನ್ ದೇತ್ ಕುಮಾರ್ಗ್ ಮಾಹೀಂ ।
ಐಸೆ ಅನ್ಯಾಯೀ ಅಧಮ್, ಬಾಂಧೇ ಯಮ್ ಪುರ್ ಜಾಹೀಂ ॥

ಭಾವಾರ್ಥ:– ಯಾರು ಧರ್ಮವನ್ನು ಪಾಲಿಸುವುದಿಲ್ಲವೋ, ಅಡ್ಡ ದಾರಿ ಹಿಡಿಯುವರೋ, ಹಣವನ್ನು ದುಂದುವೆಚ್ಚ ಮಾಡುವರೋ, ಮದ್ಯ ಕುಡಿಯುವರೋ, ಮಾಂಸವನ್ನು ತಿನ್ನುತ್ತಾರೋ, ತಂಬಾಕು ಸೇವಿಸುತ್ತಾರೋ, ಅವರನ್ನು ಯಮಲೋಕಕ್ಕೆ ಅಂದರೆ ನರಕಕ್ಕೆ ಎಳೆದೊಯ್ಯಲಾಗುವುದು.

## "ಭಕ್ತ ಅಂದರೆ ಹೇಗಿರಬೇಕು?"

ನಿಜಧನ್ ಕೇ ಭಾಗೀ ಜೇತೇ ಸಗೇ ಬಂಧು ಪರಿವಾರ್ ।
ಜೈಸಾ ಜಾಕೋ ಭಾಗ್ ಹೈ ದೀಜೈ ಧರ್ಮ್ ಸಮ್ಹಾರ್ ॥

**ಭಾವಾರ್ಥ:– ಕಬೀರರು ಹೇಳುವಂತೆ ಆಸ್ತಿಗೆ ಹಕ್ಕುದಾರರಾಗಿದ್ದರೆ, ಅವರಿಗೆ ಸೇರಬೇಕಾದ ಪಾಲನ್ನು ಅವರಿಗೆ ಕೊಡಬೇಕು. ಧರ್ಮ–ಕರ್ಮವನ್ನು ಗಮನದಲ್ಲಿಟ್ಟುಕೊಂಡು, ಪರಮಾತ್ಮನ ಹೆದರಿಕೆ ಇಟ್ಟುಕೊಂಡು ಅವರಿಗೆ ಸೇರಬೇಕಾದ ಸಂಪೂರ್ಣ ಪಾಲನ್ನು ಅವರಿಗೆ ನೀಡಬೇಕು.**

### ಧರ್ಮ ಬೋಧ್ ಪುಟ 184ರ ಸಾರಾಂಶ

ಕಬೀರ್, ಖಾಟ್ ಪಡ್ಯೆ ತಬ್ ಝುಖಈ ನಯನನ್ ಆವ್ಯೆ ನೀರ್ ।
ಯತನ್ ತಬ್ ಕಛು ಬನ್ಯೆ ನಹೀಂ, ತನು ವ್ಯಾಪ್ ಮೃತ್ಯು ಪೀರ ॥

**ಭಾವಾರ್ಥ:– ವೃದ್ಧಾವಸ್ಥೆಯಲ್ಲಿ ಅಥವಾ ರೋಗಿಯಾಗಿ ಮಾನವನು ಹಾಸಿಗೆ ಹಿಡಿದಾಗ, ಕಣ್ಣಿನಲ್ಲಿ ಕಣ್ಣೀರು ತುಂಬಿರುವಾಗ ಯಾರೂ ಬಂದು ನಿಮ್ಮನ್ನು ಕಾಪಾಡುವುದಿಲ್ಲ. ಸಾವಿನಂಚಿನಲ್ಲಿ ಇರುವಾಗ ಯಾತನೆ ಪ್ರಾರಂಭವಾಗಿರುತ್ತದೆ. ಯಾರು ಭಕ್ತಿಯಿಂದ ಇರುವುದಿಲ್ಲವೋ, ಅವರ ಅಂತಿಮ ಸಮಯವು ಬಹಳ ಕಷ್ಟದಾಯಕವಾಗಿರುತ್ತದೆ. ಅವರ ಪ್ರಾಣವು ಸುಲಭವಾಗಿ ಹೋಗುವುದಿಲ್ಲ. ಒಂದು ಲಕ್ಷ ಚೇಳು ಕುಟುಕಿದಾಗ ಆಗುವಷ್ಟು ಯಾತನೆ ಅವನಿಗಾಗುತ್ತದೆ. ಆ ಸಮಯದಲ್ಲಿ ಯಮದೂತರು ಅವನ ಗಂಟಲನ್ನು ಹಿಸಿಕಿ ಹಿಡಿದುಕೊಳ್ಳುತ್ತಾರೆ. ಅವನು ಮಾತನಾಡಲಾರ, ಉಸಿರಾಡಲೂ ಕಷ್ಟಪಡುತ್ತಾನೆ. ಕೇವಲ ಕಣ್ಣುಗಳಿಂದ ನೀರು ಸುರಿಯುತ್ತಿರುತ್ತದೆ. ಇದನ್ನೆಲ್ಲಾ ತಪ್ಪಿಸಬೇಕಾದರೆ ಭಕ್ತಿಯಿಂದ ಇರಬೇಕು ಮತ್ತು ಒಳ್ಳೆಯ ಕೆಲಸ ಮಾಡಬೇಕು.**

ಕಬೀರ್, ದೇಖೇ ಜಬ್ ಯಮ್ ದೂತನ್ ಕೋ, ಇತ್ ಉತ್ ಜೀವ್ ಲುಕಾಯ್ ।
ಮಹಾ ಭಯಂಕರ್ ಭೇಷ್ ಲಖೀ, ಭಯಭೀತ್ ಹೋ ಜಾಯ್ ॥

**ಭಾವಾರ್ಥ:– ಯಮದೂತರು ಭಯಂಕರವಾಗಿರುತ್ತಾರೆ. ಸಾವು ಸಮೀಪಿಸಿದಾಗ ಈ ಯಮದೂತರು ಕೇವಲ ಭಕ್ತಿ ಇಲ್ಲದ ವ್ಯಕ್ತಿಗಳಿಗೆ ಮಾತ್ರ ಕಾಣಿಸುತ್ತಾರೆ. ಅವರನ್ನು ನೋಡಿದಾಕ್ಷಣ ಆ ವ್ಯಕ್ತಿಯ ಪ್ರಾಣವು ಬಾಯಿಗೆ ಬಂದಂತಾಗುತ್ತದೆ.**

ಕಬೀರ್, ಭಕ್ತಿ ದಾನ್ ಕಿಯಾ ನಹೀಂ, ಅಬ್ ರಹ್ ಕಾಸ್ ಕೀ ಓಟ್ ।
ಮಾರ್ ಪೀಟ್ ಪ್ರಾಣ್ ನಿಕಾಲಹೀಂ, ಜಮ್ ತೋಡೇಂಗೆ ಹೋಠ್ ॥

**ಭಾವಾರ್ಥ:– ಗುರುವಿಗೆ ವಂದಿಸದೆ, ಭಕ್ತಿಯಿಂದ ಇರದೆ, ದಾನ ಧರ್ಮ ಮಾಡದೆ ಇದ್ದರೆ ಯಮದೂತರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ? ಯಮದೂತರು ಹೊಡೆದು, ಹೊಡೆದು ಪ್ರಾಣ ತೆಗೆಯುತ್ತಾರೆ. ನೀವು ಮಾತನಾಡುವ ಮುಂಚೆಯೇ ನಿಮ್ಮನ್ನು ಹೊಡೆಯುತ್ತಿರುತ್ತಾರೆ. ದಯಾ ದಾಕ್ಷಿಣ್ಯವಿಲ್ಲದೆ ಹೊಡೆದು, ಬಡಿದು ನಿಮ್ಮ ತುಟಿ ಸೀಳುತ್ತಾರೆ. ನಿರ್ದಯವಾಗಿ ನಿಮ್ಮನ್ನು ಸಾಯಿಸುತ್ತಾರೆ.**

### ಧರ್ಮ ಬೋಧ್ ಪುಟ 187ರ ಸಾರಾಂಶ

ಕಬೀರ್, ಮಾನ್ ಅಪಮಾನ್ ಸಮ್ ಕರ್ ಜಾನ್ಯೆ, ತಜೈ ಜಗತ್ ಕೀ ಆಶ್ ।
ಚಾಹ್ ರಹಿತ್ ಸಂಸ್ಯ ರಹಿತ್, ಹರ್ಷ್ ಶೋಕ್ ನಹೀಂ ತಾಸ್ ॥

**ಭಾವಾರ್ಥ:– ಯಾರಾದರೂ ಭಕ್ತನನ್ನು ಅವಮಾನಿಸಿದರೆ, ಅದರ ಕಡೆ ಗಮನ ಕೊಡಬಾರದು. ಯಾರು ನಿಮ್ಮನ್ನು ಗೌರವಿಸುತ್ತಾರೋ, ಅವರ ಕಡೆ ಗಮನ ಕೊಡಬೇಡಿ. ಬೇರೆಯವರಿಗಾಗಿ ನಿಮ್ಮ**

ಧರ್ಮವನ್ನು ಹಾಳುಮಾಡಬೇಡಿ. ಲಾಭ–ನಷ್ಟವನ್ನು ಪರಮಾತ್ಮ ಕೊಟ್ಟಿದ್ದು ಎಂದು ತಿಳಿದು ಸಂತೋಷದಿಂದ ಇರಬೇಕು.

ಕಬೀರ್, ಮಾರ್ಗ್ ಚಲೈ ಅಧೋ ಗತಿ, ಚಾರ್ ಹಾಥ್ ಮಾಂಹೀ ದೇಖ್ ।
ಪರ್ ತರಿಯಾ ಪರ್ ಧನ್ ನಾ ಚಾಹೈ ಸಮಝ್ ಧರ್ಮ್ ಕೇ ಲೇಖ್ ॥

**ಭಾವಾರ್ಥ:–** ಭಕ್ತನು ಮಾರ್ಗದಲ್ಲಿ ನಡೆಯುವಾಗ ತಲೆ ತಗ್ಗಿಸಿ ನಡೆಯಬೇಕು. ಅವನ ದೃಷ್ಟಿ ಆರು ಅಡಿಯಷ್ಟು ಮುಂದೆ ನೋಡುವಂತಿರಬೇಕು. ಧರ್ಮ–ಕರ್ಮವನ್ನು ಗಮನದಲ್ಲಿಟ್ಟುಕೊಂಡು ಪರಸ್ತ್ರೀ ಮತ್ತು ಪರರ ಧನವನ್ನು ಕೆಟ್ಟದೃಷ್ಟಿಯಿಂದ ನೋಡಬಾರದು.

ಕಬೀರ್, ಪಾತ್ರ್ ಕುಪಾತ್ರ ವಿಚಾರ್ ಕರ್, ಭಿಕ್ಷಾ ದಾನ್ ಜೋ ಲೇತ್ ।
ನೀಚ್ ಅಕರ್ಮೀ ಸೂಮ್ ಕಾ, ದಾನ್ ಮಹಾ ದುಃಖ್ ದೇತ್ ॥

**ಭಾವಾರ್ಥ:–** ಸಂತ ಅಂದರೆ ಗುರುವೂ ತನ್ನ ಭಕ್ತರನ್ನು ಬಿಟ್ಟು ಬೇರೆಯವರಿಂದ ದಾನ ಭಿಕ್ಷೆಯನ್ನು ಪಡೆಯಬಾರದು. ಕೆಟ್ಟ ಕೆಲಸ ಮಾಡುವವರ ಅಥವಾ ಅಧರ್ಮಿಗಳ ಧನವನ್ನು ಪಡೆಯುವುದರಿಂದ ಬಹಳ ದುಃಖ ಬಂದೊದಗುವುದು.

## ಧರ್ಮ ಬೋಧ್ ಪುಟ 189ರ ಸಾರಾಂಶ

ಕಬೀರ್, ಇಂದ್ರೀ ತತ್ತ್ವ ಪ್ರಕೃತಿ ಸೆ, ಆತ್ಮ ಜಾನ್ ಪಾರ್ ।
ಜಾಪ್ ಏಕ್ ಪಲ್ ನಹೀಂ ಛೂಟೈ, ಟೂಟ್ ನ ಪಾವೈ ತಾರ್ ॥

**ಭಾವಾರ್ಥ:–** ಪಂಚತತ್ವಗಳಿಂದ ಭಿನ್ನವಾದುದು ಆತ್ಮ. ಶರೀರವೂ ಸಹ ಆತ್ಮವಲ್ಲ. ನಿರಂತರವಾಗಿ ಸತ್ಯನಾಮವನ್ನು ಜಪಿಸಬೇಕು.

ಕಬೀರ್, ಜಬ್ ಜಪ್ ಕರಿ ಕೇ ಥಕ್ ಗಏ, ಹರಿ ಯಶ್ ಗಾವೇ ಸಂತ್ ।
ಕೈ ಜಿನ್ ಧರ್ಮ್ ಪುರಾಣ್ ಪಢೇ, ಐಸೋ ಧರ್ಮ್ ಸಿದ್ಧಾಂತ್ ॥

**ಭಾವಾರ್ಥ:–** ಭಕ್ತನು ಜಪ ಮಾಡಿ, ಮಾಡಿ ದಣಿದರೆ, ಪರಮಾತ್ಮನ ಮಹಿಮೆಯ ವಚನಗಳನ್ನು ಓದಬೇಕು. ನೆನಪಿದ್ದರೆ ಅವುಗಳನ್ನು ಹಾಡಬೇಕು ಅಥವಾ ತಮ್ಮ ಧರ್ಮದ ಪುಸ್ತಕಗಳನ್ನು ಓದಬೇಕು. ಇದೇ ಧಾರ್ಮಿಕ ಸಿದ್ಧಾಂತ.

**ಧರ್ಮಬೋಧದ 190ನೇ ಪುಟದ ಸಾರಾಂಶ :–**

ಕಬೀರ್, ಜ್ಞಾನೀ ರೋಗೀ ಅರ್ಥಾರ್ಥೀ ಜಿಜ್ಞಾಸು ಯೇ ಚಾರ್ ।
ಸೋ ಸಬ್ ಹೀ ಹರಿ ಧ್ಯಾವತೇ ಜ್ಞಾನೀ ಉತರೇ ಪಾರ್ ॥

**ಭಾವಾರ್ಥ:–** ನಾಲ್ಕು ವಿಧದ ವ್ಯಕ್ತಿಗಳು ಪರಮಾತ್ಮನ ಭಕ್ತಿ ಮಾಡುವರು.

**1) ಜ್ಞಾನಿ:–** ಮಾನವ ಜೀವನವು ಕೇವಲ ಪರಮಾತ್ಮನನ್ನು ಧ್ಯಾನಿಸುತ್ತಾ ಜೀವದ ಉದ್ಧಾರ ಮಾಡಿಕೊಳ್ಳಲೆಂದೇ ಪ್ರಾಪ್ತವಾಗುವುದು ಎಂದು ಜ್ಞಾನಿಗೆ ನಂಬಿಕೆ ಇರುತ್ತದೆ. ಪೂರ್ಣ ಪರಮಾತ್ಮನನ್ನು ಜಪಿಸುವುದರಿಂದ ಮಾತ್ರ ಮೋಕ್ಷ ಪ್ರಾಪ್ತಿಯಾಗುವುದೆಂದು ಅವನಿಗೆ ಅರಿವಿರುತ್ತದೆ. ಬೇರೆ ದೇವ–ದೇವತೆಗಳನ್ನು ಜಪಿಸುವುದರಿಂದ ಜನನ–ಮರಣದ ದುಃಖವು ದೂರವಾಗುವುದಿಲ್ಲ. ಪೂರ್ಣ ಸದ್ಗುರುವಿನಿಂದ ದೀಕ್ಷೆ ಪಡೆದಾಗ ಮಾತ್ರ ಸಿದ್ಧಿ ಲಭಿಸುವುದು. ಆಗ ಜ್ಞಾನಿಯಾದ ಭಕ್ತನು ಮುಕ್ತಿ ಹೊಂದುವನು.

**2) ಅರ್ಥಾರ್ಥಿ:–** ಧನ ಲಾಭಕ್ಕಾಗಿ ಭಗವಂತನನ್ನು ಪ್ರಾರ್ಥಿಸುವವರು.

3) ಆರ್ತ್ ಅಂದರೆ ಸಂಕಟಗ್ರಸ್ತರು:– ತಮ್ಮ ಸಂಕಟವನ್ನು ಮತ್ತು ಕಷ್ಟವನ್ನು ದೂರ ಮಾಡಿಕೊಳ್ಳಲು ಭಕ್ತಿ ಮಾಡುವವರು.

4) ಜಿಜ್ಞಾಸು:– ಪರಮಾತ್ಮನ ಮಹಿಮೆಯನ್ನು ಒಪ್ಪದೆ, ಬರಿ ವಾದ ಮಾಡುತ್ತಾ, ಜೀವನವನ್ನು ಹಾಳುಮಾಡಿಕೊಳ್ಳುವವರು. ಇದನ್ನು ಗೀತೆಯ 7ನೇ ಅಧ್ಯಾಯದ 16–17ನೇ ಶ್ಲೋಕದಲ್ಲಿಯೂ ಹೇಳಿದೆ.

## ಧರ್ಮಬೋಧದ ಪುಟ ಸಂಖ್ಯೆ 191ರ ಸಾರಾಂಶ

ಕಬೀರ್, ಕ್ಷಮಾ ಸಮಾನ್ ನ ತಪ್, ಸುಖ್ ನಹೀಂ ಸಂತೋಷ್ ಸಮಾನ್ ।
ತೃಷ್ಣಾ ಸಮಾನ್ ನಹೀಂ ಬ್ಯಾಧೀ ಕೋಈ, ಧರ್ಮ್ ನ ದಯಾ ಸಮಾನ್ ॥

ಭಾವಾರ್ಥ:– ಕ್ಷಮಿಸುವುದು ಮಾನವನ ಬಹಳ ದೊಡ್ಡ ಗುಣ ಎಂದು ಕಬೀರ್ ಪರಮೇಶ್ವರರು ಹೇಳಿದ್ದಾರೆ. ಇದಕ್ಕಿಂತ ದೊಡ್ಡ ತಪಸ್ಸಿಲ್ಲ. ಸಂತೋಷಕ್ಕೆ ಸಮಾನವಾದ ಸುಖವಿಲ್ಲ. ದಯೆಗೆ ಸಮಾನವಾದ ಧರ್ಮವಿಲ್ಲ, ಆಸೆಗೆ ಸಮಾನವಾದ ಆಪತ್ತಿಲ್ಲ.

ಕಬೀರ್, ಯೋಗ್ (ಭಕ್ತಿ) ಕೇ ಅಂಗ್ ಪಾಂಚ್ ಹೈಂ,
ಸಂಯಮ್ ಮನನ್ ಏಕಾಂತ್ ।
ವಿಷಯ್ ತ್ಯಾಗ್ ನಾಮ್ ರಟನ್, ಹೋಯೇ ಮೋಕ್ಷ್ ನಿಶ್ಚಿಂತ್ ॥

ಭಾವಾರ್ಥ:– ಭಕ್ತಿಗೆ 4 ಆವಶ್ಯಕ ಸೋಪಾನಗಳಿವೆ. ಸಂಯಮ. ಅಂದರೆ ಪ್ರತ್ಯೇಕ ಕಾರ್ಯದಲ್ಲಿ ಸಂಯಮವನ್ನು ಪಾಲಿಸಬೇಕು. ಧನ ಸಂಗ್ರಹಣೆಯಲ್ಲಿ, ಮಾತನಾಡುವುದರಲ್ಲಿ, ತಿನ್ನುವುದರಲ್ಲಿ, ಕುಡಿಯುವುದರಲ್ಲಿ, ಕಾಮ ಮುಂತಾದವುಗಳಲ್ಲಿ ಸಂಯಮವನ್ನು ಕಾಪಾಡಿಕೊಳ್ಳಬೇಕು. ಭಕ್ತನು ಕಡಿಮೆ ಮಾತನಾಡಬೇಕು, ಕಾಮ, ಮೋಹಗಳನ್ನು ತ್ಯಜಿಸಬೇಕು. ಪರಮಾತ್ಮನ ಭಜನೆ ಹಾಗೂ ಪರಮಾತ್ಮನ ಪ್ರವಚನಗಳ ಚಿಂತನ–ಮನನ ಮಾಡುವುದು ಅನಿವಾರ್ಯ. ಈ ರೀತಿ ಸಾಧನೆ ಮಾಡುವುದರಿಂದ ಮೋಕ್ಷ ಪ್ರಾಪ್ತಿಯಾಗುವುದು.

❖ ಪೂರ್ಣ ಪರಮಾತ್ಮನು ಭಕ್ತನ ಆಯುಷ್ಯವನ್ನು ಹೆಚ್ಚಿಸುತ್ತಾನೆ.

ಋಗ್ವೇದದ 10ನೇ ಮಂಡಲದ 161ನೇ ಸೂಕ್ತಿಯ 2ನೇ ಮಂತ್ರದಲ್ಲಿ ಹೀಗೆ ಹೇಳಿದೆ. ಪೂರ್ಣ ಪ್ರಭು ತನ್ನ ಭಕ್ತನ ರೋಗವನ್ನು ವಾಸಿಮಾಡುತ್ತಾನೆ. ಒಂದು ವೇಳೆ ರೋಗಿಯ ಆಯುಷ್ಯ ಬಾಕಿ ಉಳಿದಿರದಿದ್ದರೆ, ಅವನು ಮೃತ್ಯು ದೇವತೆಯ ಬಳಿ ಹೋಗಬೇಕಾದರೆ ಪರಮಾತ್ಮನು ಅವನನ್ನು ಆರೋಗ್ಯವಂತನನ್ನಾಗಿ ಮಾಡಿ ನೂರು ವರ್ಷಗಳವರೆಗೆ ಜೀವನದಾನ ನೀಡುತ್ತಾನೆ. ಕಬೀರ ಸಾಗರದ ಗರುಡ ಬೋಧ ಎಂಬ ಅಧ್ಯಾಯವೇ ಇದಕ್ಕೆ ಸಾಕ್ಷಿ.

## "ಗರುಡ್ ಬೋಧ್ ಅಧ್ಯಾಯದ ಸಾರಾಂಶ"

ಕಬೀರ್ ಸಾಗರದಲ್ಲಿ 'ಗರುಡ ಬೋಧ' ಎಂಬ 11ನೇ ಅಧ್ಯಾಯದ ಪುಟ ಸಂಖ್ಯೆ 65(625)ರಲ್ಲಿ ಈ ರೀತಿ ಇದೆ.

ಕಬೀರ್ ಪರಮೇಶ್ವರರು ಧರ್ಮದಾಸರಿಗೆ ಈ ರೀತಿ ಹೇಳಿದರು, "ನಾನು ವಿಷ್ಣುವಿನ ವಾಹನವಾದ ಪಕ್ಷಿರಾಜ ಗರುಡನಿಗೆ ಉಪದೇಶ ನೀಡಿದೆ. ಅವನಿಗೆ ಸೃಷ್ಟಿಯ ರಹಸ್ಯವನ್ನು ಹೇಳಿದೆ. ಅವನು ತನ್ನ ಕಿವಿಯನ್ನು ತಾನೇ ನಂಬಲಿಲ್ಲ. ಅವನು ನಾನು ಇದೇನು ಕೇಳುತ್ತಿರುವೆ ಎಂದು ಮನಸ್ಸಿನಲ್ಲೇ ಚಿಂತಿಸಲಾರಂಭಿಸಿದನು. ನಾನು ಕನಸು ಕಾಣುತ್ತಿಲ್ಲ ತಾನೇ? ನಾನು ಬೇರೆ ದೇಶಕ್ಕೆ ಹೊರಟು

ಹೋಗಿಲ್ಲ ತಾನೇ? ಯಾವ ದೇಶ ಮತ್ತು ಪರಮಾತ್ಮನ ಬಗ್ಗೆ ನಾನು ಕೇಳಿರುವೆನೋ, ಅದೆಲ್ಲಾ ಒಂದು ಚಲನಚಿತ್ರದಂತೆ ನನ್ನ ಮುಂದೆ ಸಾಗುತ್ತಿವೆ.' ಎಂದು ಗರುಡನು ಚಿಂತಿಸಿದನು. ಈ ಚಿಂತನೆಯಲ್ಲಿ ಗರುಡನು ತೊಡಗಿರುವಾಗ ನಾನು ಹೇಳಿದೆ, "ಹೇ ಪಕ್ಷಿರಾಜ! ನನ್ನ ಮಾತು ನಿಮಗೆ ಸುಳ್ಳು ಎನ್ನಿಸುತ್ತಿದೆಯಾ? ನೀನೇಕೆ ಸುಮ್ಮನಿರುವೆ? ಏನಾದರೂ ಸಂದೇಹವಿದ್ದರೆ ಪ್ರಶ್ನೆ ಮಾಡು. ನಿನ್ನ ಸಂದೇಹ ನಿವಾರಿಸಿಕೋ. ನನ್ನ ಮಾತಿನಿಂದ ನಿನಗೆ ದುಃಖವಾಗಿದ್ದರೆ ನನ್ನನ್ನು ಕ್ಷಮಿಸು", ನನ್ನ ಈ ಮಾತುಗಳನ್ನು ಕೇಳಿದ ಪಕ್ಷಿರಾಜನ ಕಣ್ಣು ತುಂಬಿಬಂದಿತು. ಅವನೆಂದನು, ಹೇ ದೇವಾ! ನೀವು ಯಾರು? ನಿಮ್ಮ ಉದ್ದೇಶವೇನು? ನೀವು ಹೇಳಿದ ಕಟು ಸತ್ಯವನ್ನು ನನಗೆ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅಮರಲೋಕದಲ್ಲಿ ಅಮರ ಪರಮೇಶ್ವರನ ಬಗ್ಗೆ ನೀವು ತಿಳಿಸಿದ್ದೀರಿ. ಒಂದು ವೇಳೆ ಅದು ಸತ್ಯವಾದರೆ ನಮ್ಮನ್ನು ಮೋಸದಲ್ಲಿ ಇಟ್ಟ ಹಾಗೆ ಎಂದು ನಾನು ಭಾವಿಸುವೆ. ಒಂದು ವೇಳೆ ಇದು ಸುಳ್ಳಾದರೆ ನಿಮ್ಮನ್ನು ನಿಂದಿಸಬೇಕಾಗುತ್ತದೆ. ನೀವು ಅಪರಾಧಿಯಾಗುತ್ತೀರಿ.

ಒಂದುವೇಳೆ ಇದು ನಿಜವಾದರೆ ಈ ಗರುಡದೇವನು ನಿಮ್ಮ ದಾಸನಾಗುವನು" ಎಂದನು. ಪರಮೇಶ್ವರ ಕಬೀರರು ಧರ್ಮದಾಸನಿಗೆ ಹೇಳಿದರು, "ನಾನು ಗರುಡನಿಗೆ ಹೇಳಿದೆ, ಹೇ ಗರುಡದೇವಾ! ನಿನ್ನ ಮನಸ್ಸಿನಲ್ಲಿ ಉಂಟಾಗಿರುವ ಸಂದೇಹವು ಸ್ವಾಭಾವಿಕ, ಆದರೆ ನೀನು ಸಂಯಮದಿಂದ ಇದ್ದೀಯಾ. ಇದು ನಿನ್ನ ದೊಡ್ಡಗುಣ. ಆದರೆ ನಾನು ನಿನಗೆ ಅಮರಲೋಕದ ಬಗ್ಗೆ ತಿಳಿಸಿಕೊಡುತ್ತೇನೆ. ಅದು ಪರಮ ಸತ್ಯ. ನನ್ನ ಹೆಸರು ಕಬೀರ್. ನಾನು ಅದೇ ಅಮರ ಲೋಕದ ನಿವಾಸಿ. ಕಾಲಬ್ರಹ್ಮನು ನಿನ್ನನ್ನು ಭ್ರಮೆಗೆ ಒಳಪಡಿಸಿದ್ದಾನೆ. ಇದರ ಬಗೆಗೆ ಬ್ರಹ್ಮಾ, ವಿಷ್ಣು, ಮಹೇಶ್ವರರಿಗೂ ಅರಿವಿಲ್ಲ, ನೀನು ಸ್ವಲ್ಪ ಯೋಚಿಸು ಗರುಡ, ಜೀವವು ಜನ್ಮ ಪಡೆಯುತ್ತದೆ. ಆನಂದದಿಂದ ಇರಲಾರಂಭಿಸುತ್ತದೆ. ಕುಟುಂಬ ದೊಡ್ಡದಾಗುತ್ತದೆ.

ಆ ಕುಟುಂಬವನ್ನು ಪೋಷಿಸುತ್ತಾ ಪ್ರಾಪಂಚಿಕ ಪರಂಪರೆಗಳನ್ನು ನಿರ್ವಹಿಸುತ್ತಾ, ವೃದ್ಧಾಪ್ಯ ಆವರಿಸುತ್ತದೆ. ಯಾವ ಕುಟುಂಬವನ್ನು ನೋಡುತ್ತಾ ಧನ್ಯತೆಯ ಭಾವವನ್ನು ಹೊಂದುತ್ತೇವೆಯೋ, ಆ ಕುಟುಂಬವನ್ನು ಅಗಲಿ, ಈ ಪ್ರಪಂಚವನ್ನು ಬಿಟ್ಟು ಹೋಗಬೇಕಾಗುತ್ತದೆ. ಸ್ವತಃ ಅಳುತ್ತಾ, ಅಂತಿಮ ಉಸಿರನ್ನು ಎಣಿಸುತ್ತೇವೆ. ಕುಟುಂಬವೂ ದುಃಖದಲ್ಲಿ ಮುಳುಗುತ್ತದೆ. ಇದು ಸರಿಯೋ?" ಆಗ ಗರುಡದೇವ ಹೇಳಿದನು, "ಹೇ ಕಬೀರ್‌ದೇವಾ! ಇದೊಂದು ಪ್ರಾಪಂಚಿಕ ನಿಯಮ. ಹುಟ್ಟಿದವನು ಸಾಯಲೇಬೇಕು." ಪರಮೇಶ್ವರರು ಹೇಳಿದರು, "ಯಾರಾದರೂ ಸಾಯಲು ಇಚ್ಛಿಸುವರೇ? ಯಾರಾದರೂ ವೃದ್ಧಾಪ್ಯವನ್ನು ಇಷ್ಟಪಡುವರೇ? ಹಾಗಾಗಿ ಮರಣವಾಗಲೀ, ವೃದ್ಧಾಪ್ಯವಾಗಲೀ ಇಲ್ಲದಿದ್ದರೆ ಹೇಗಿರುತ್ತದೆ? ಯಾರಾದರೂ ಮುದಿತನ ಬಯಸುವರೇ? ಆಗ ಗರುಡ ದೇವನ ಉತ್ತರ=ಇಲ್ಲ. ಆಗ ಪರಮೇಶ್ವರರು ಹೇಳಿದರು, "ಒಂದು ವೇಳೆ ವೃದ್ಧಾಪ್ಯ ಇಲ್ಲದಿದ್ದರೆ, ಮರಣವೆಂಬುದು ಇಲ್ಲದಿದ್ದರೆ ಹೇಗಿರುತ್ತದೆ?" ಆಗ ಗರುಡದೇವನೆಂದನು, "ಹೇಳುವುದೇನು? ಹಾಗೇನಾದರೂ ಆದರೆ ಆನಂದವೋ ಆನಂದ. ಆದರೆ ಅದು ಬರೀ ಕನಸಿನ ಮಾತಷ್ಟೇ, ಹೇ ಧರ್ಮದಾಸ! ನಾನು ಕೇಳಿದೆ, ವೇದ ಪುರಾಣಗಳನ್ನು ನೀವು ಸತ್ಯವೆಂದು ಭಾವಿಸುತ್ತೀರೋ ಅಥವಾ ಅಸತ್ಯವೆಂದು ಭಾವಿಸುತ್ತೀರೋ? ಆಗ ಗರುಡದೇವನೆಂದನು, "ಪರಮ ಸತ್ಯ."

ದೇವಿ ಪುರಾಣದ ಮೂರನೇ ಸ್ಕಂದದಲ್ಲಿ ವಿಷ್ಣುವು ಹೇಳಿದ್ದಾನೆ, "ಹೇ ಮಾತೆ, ನೀನು ಶುದ್ಧ ಸ್ವರೂಪಳು. ಇಡೀ ಪ್ರಪಂಚ ನಿನ್ನಿಂದಲೇ ನಡೆಯುತ್ತಿದೆ. ನಿನ್ನ ಕೃಪೆಯಿಂದಲೇ ನಾನು, ಬ್ರಹ್ಮಾ ಮತ್ತು ಶಿವ. ಈ ಮೂವರೂ ಇದ್ದೇವೆ. ನಮ್ಮ ಅವಿರ್ಭಾವ (ಜನ್ಮ) ಮತ್ತು ತಿರೋಭಾವವೂ (ಮೃತ್ಯು) ಆಗುತ್ತದೆ".

ಈ ರೀತಿ ಕಬೀರರ ಬಾಯಿಂದ ಸಾಕ್ಷಿ ಸಮೇತ ಪ್ರಮಾಣವನ್ನು ಕೇಳಿ ಗರುಡ ದೇವನು ಅವರ

ಕಾಲಿಗೆರಗಿದನು. ತನ್ನ ಅದೃಷ್ಟವನ್ನು ಕೊಂಡಾಡುತ್ತಾ ಹೇಳಿದನು, "ಯಾವ ದೇವನು ಸೃಷ್ಟಿ, ಬ್ರಹ್ಮಾ, ವಿಷ್ಣು, ಮಹೇಶ್ವರ ಹಾಗೂ ದುರ್ಗಾದೇವಿ ಮತ್ತು ನಿರಂಜನರ ಉತ್ಪತ್ತಿಯನ್ನು ಅರಿತಿದ್ದಾನೋ, ಅವನೇ ಪರಮೇಶ್ವರ. ಇಲ್ಲಿಯವರೆಗೆ ಯಾರೂ ಈ ರೀತಿಯ ಜ್ಞಾನವನ್ನು ತಿಳಿಸಿರಲಿಲ್ಲ. ಒಂದು ವೇಳೆ ಯಾವುದಾದರೂ ಜೀವಿಗೆ ಇದು ಗೊತ್ತಿದ್ದಿದ್ದರೆ. ಅವಶ್ಯವಾಗಿ ಹೇಳುತ್ತಿದ್ದವು. ಋಷಿ, ಮುನಿಗಳಾದರೂ ಹೇಳಿರುತ್ತಿದ್ದರು. ನಾನು ದೊಡ್ಡ ದೊಡ್ಡ ಮಂಡಲೇಶ್ವರರ ಪ್ರವಚನವನ್ನು ಕೇಳಿದ್ದೇನೆ. ಯಾರ ಬಳಿಯೂ ಇದರ ಬಗ್ಗೆ ಅರಿವಿಲ್ಲ. ಇವರಿಗೆ ವೇದಗಳ ಮತ್ತು ಗೀತೆಯ ಬಗ್ಗೆಯೂ ಅರಿವಿಲ್ಲ. ನಾನು ನಿಮ್ಮನ್ನು ಗುರುತಿಸಿದೆ. ನನಗೆ ಆಶ್ರಯ ಕೊಡುವ ಕೃಪೆ ತೋರಿಸು" ಎಂದನು.

ಆಗ ಕಬೀರರು ಗರುಡನಿಗೆ ಹೇಳಿದರು, "ನೀನು ಮೊದಲು ನಿನ್ನ ಸ್ವಾಮಿಯಾದ ವಿಷ್ಣುವಿನಿಂದ 'ನಾನು ನನ್ನ ಉದ್ಧಾರ ಮಾಡಿಕೊಳ್ಳಲು ಇಚ್ಛಿಸುತ್ತೇನೆ' ಎಂದು ಅನುಮತಿ ಪಡೆದುಕೋ".

ಒಬ್ಬ ಮಹಾನ್ ಸಂತರು ನನಗೆ ಸಿಕ್ಕಿದ್ದಾರೆ. ಅವರಿಂದ ಜ್ಞಾನವನ್ನು ಪಡೆದಿದ್ದೇನೆ. ನೀವು ಅನುಮತಿ ನೀಡಿದರೆ ನನ್ನ ಉದ್ಧಾರ ಮಾಡಿಕೊಳ್ಳುವೆ. ನೀವು ನನ್ನ ಸ್ವಾಮಿ, ನಾನು ನಿಮ್ಮ ದಾಸ. ನಾವು ಯಾವಾಗಲೂ ನಿಮ್ಮ ಜೊತೆಗಿರಬೇಕು. ನಿಮಗೆ ಹೇಳದೇ ಗುಟ್ಟಾಗಿ ನಾನು ದೀಕ್ಷೆ ಪಡೆದರೆ ನಿಮಗೆ ದುಃಖವಾಗುವುದು ಎಂದು ಹೇಳು", ಎಂದು ಕಬೀರರು ಹೇಳಿದರು. ಗರುಡನು ಹಾಗೇ ಮಾಡಿದನು. ವಿಷ್ಣುವಿಗೆ ಎಲ್ಲವನ್ನು ಹೇಳಿದನು. ಆಗ ವಿಷ್ಣುವು, ನಾನು ನಿಮ್ಮನ್ನು ತಡೆಯುವುದಿಲ್ಲ, ನೀವು ಸ್ವತಂತ್ರರು, ನಿಮಗೆ ಇಷ್ಟ ಬಂದ ಹಾಗೆ ಮಾಡಿ, ನೀವು ಸತ್ಯವನ್ನು ಹೇಳಿ ಒಳ್ಳೆಯದನ್ನೇ ಮಾಡಿದಿರಿ. ನನಗೆ ಯಾವ ಬೇಜಾರೂ ಇಲ್ಲ" ಎಂದನು.

ಹೇ ಧರ್ಮದಾಸ! ನಾನು ಗರುಡನಿಗೆ ಪ್ರಥಮ ಮಂತ್ರದೀಕ್ಷೆ ನೀಡಿದೆ. ಪಂಚ ನಾಮಗಳನ್ನು (ಕಮಲಗಳನ್ನು ಅರಳಿಸುವ ಪ್ರತ್ಯೇಕ ದೇವರ ಸಾಧನೆಯ ನಾಮಗಳು) ನೀಡಿದೆ. ಗರುಡದೇವನು, "ಹೇ ಗುರುದೇವಾ! ಈ ಮಂತ್ರಗಳು ಈ ದೇವತೆಗಳದ್ದೇ ಆಗಿದೆ. ಅಮರ ಪುರುಷನ ಮಂತ್ರವಲ್ಲ." ಎಂದನು. ಆಗ ಪರಮೇಶ್ವರ ಕಬೀರರೆಂದರು, ಇವೆಲ್ಲಾ ಇವರ ಪೂಜೆಯ ಮಂತ್ರಗಳಲ್ಲ. ಇವೆಲ್ಲಾ ಈ ದೇವತೆಗಳನ್ನು ತಮ್ಮ ಕಡೆಗೆ ತಿರುಗಿಸಿಕೊಂಡು ಅವರ ಬಲೆಯಿಂದ ಬಿಡಿಸುವ ಬೀಗದ ಕೈಗಳು. ಇವರ ವಶೀಕರಣದ ಮಂತ್ರಗಳು. ಎಮ್ಮೆಯನ್ನು ಆಕರ್ಷಿಸಲು ಎಮ್ಮೆ, ಎಮ್ಮೆ ಎಂದರೆ ಅವು ನೋಡುವುದೂ ಇಲ್ಲ. ಆದರೆ ಅವುಗಳನ್ನು ವಶೀಕರಣಗೊಳಿಸುವ ಹೆಸರನ್ನು ಕೂಗಿದೊಡನೇ 'ಹುರ್, ಹುರ್' ಎಂದು ಪ್ರಭಾವಕ್ಕೆ ಒಳಗಾಗಿ ಸಕ್ರಿಯವಾಗಿ ಬಿಡುತ್ತವೆ. ಹೆಸರನ್ನು ಹೇಳಿದವರ ಬಳಿ ಓಡಿ ಬರುತ್ತವೆ. ಆಗ ಅವನು ಅವುಗಳನ್ನು ಹಿಡಿದು ತನ್ನ ಕೆಲಸ ಮಾಡಿಕೊಳ್ಳುತ್ತಾನೆ. ಇದೇ ರೀತಿ ನೀವು ವಿಷ್ಣುವನ್ನು ಬೇರೆ ಹೆಸರಿನಿಂದ ಜಪ ಮಾಡುತ್ತಿದ್ದರೆ, ಅವನು ನಿಮ್ಮ ಕಡೆ ಗಮನ ಹರಿಸುವುದಿಲ್ಲ. ನೀವು ಈ ಮಂತ್ರದ ಜಪ ಮಾಡಿದರೆ ವಿಷ್ಣುವು ತಕ್ಷಣವೇ ಪ್ರಭಾವಿತನಾಗಿ ಸಾಧಕನಿಗೆ ಸಹಾಯ ಮಾಡುವನು. ಈ ದೇವತೆಗಳು ಮೂರೂ ಲೋಕಗಳ (ಭೂಲೋಕ, ಸ್ವರ್ಗಲೋಕ ಮತ್ತು ಪಾತಾಳಲೋಕ) ಪ್ರಧಾನ ದೇವತೆಗಳು. ಅವರು ಕೇವಲ ಸಂಸ್ಕಾರ ಕರ್ಮವನ್ನು ಬರೆದು ಕೊಡಬಹುದು. ಈ ಮಂತ್ರದ ಜಪದಿಂದ ನಮ್ಮ ಪುಣ್ಯವು ಅಧಿಕವಾಗುವುದು. ಹಾಗೂ ಭಕ್ತಿ ಎಂಬ ಹಣ ಸಂಗ್ರಹಣೆ ಹೆಚ್ಚಾಗುವುದು. ಪ್ರತಿಫಲವಾಗಿ ಈ ದೇವತೆಗಳು ಸಾಧಕರಿಗೆ ಸಹಾಯ ಮಾಡುವರು. ಈ ರೀತಿ ಇವರ ಸಾಧನೆ ಹಾಗೂ ಪೂಜೆಯ ವ್ಯತ್ಯಾಸವನ್ನು ಅರಿಯಬೇಕು. ನಿಮಗೆ ಮಾವಿನಹಣ್ಣು ತಿನ್ನಬೇಕೆನ್ನಿಸಿದ್ದರೆ, ಮೊದಲು ಪರಿಶ್ರಮ ಪಡಬೇಕು, ಕೆಲಸ ಮಾಡಬೇಕು. ಹಣ ಸಂಪಾದಿಸಬೇಕು, ಆಗ ಮಾವಿನ ಹಣ್ಣು ತಿನ್ನಲು ಸಿಗುವುದು. ಕೆಲಸವು ಪೂಜೆಯಂತೂ ಅಲ್ಲ. ನಮ್ಮ ಗುರಿ ಮಾವಿನಹಣ್ಣು. ಅದನ್ನು ಪಡೆಯಲು ಮಾಡುವ ಪ್ರಯತ್ನವೇ ಕೆಲಸ. ಇದೇ ರೀತಿ ನಮ್ಮ ಪೂಜ್ಯ ಪರಮೇಶ್ವರ ಕಬೀರರು ಪೂಜನೀಯರು. ಅವರಿಗಾಗಿ ನಾವು ಬ್ರಹ್ಮಾ, ವಿಷ್ಣು, ಮಹೇಶ್ವರ ಮತ್ತು ದುರ್ಗೆಯ ಕೂಲಿ ಮಾಡುತ್ತೇವೆ ಅಂದರೆ ಸಾಧನೆ ಮಾಡುತ್ತೇವೆ.

ಪರಮೇಶ್ವರನ ಪೂಜೆ ಮಾಡುತ್ತೇವೆ." ಎಂದರು.

ಆಗ ಗರುಡನು ಬಹಳ ಪ್ರಸನ್ನನಾಗಿ ಈ ಅಮೃತ ಜ್ಞಾನದ ಚರ್ಚೆಯ ಕಾರಣದಿಂದ ಬ್ರಹ್ಮಾನನ್ನು ಭೇಟಿಯಾದನು ಹಾಗೂ ಹೀಗೆಂದನು. "ನಾನು ಒಬ್ಬ ಮಹರ್ಷಿಯಿಂದ ಅಮೃತ ಜ್ಞಾನವನ್ನು ಪಡೆದೆ. ನನಗೆ ಆ ಜ್ಞಾನವು ನಿಜವೆನ್ನಿಸಿತು. ನೀವು ಅಂದರೆ ಬ್ರಹ್ಮಾ, ವಿಷ್ಣು ಮತ್ತು ಶಿವ–ನಶ್ವರರು, ನೀವು ಕೇವಲ ಭಾಗ್ಯವನ್ನು ಬರೆಯಬಹುದು, ಬೇರೆಯವರ ಆಯುಷ್ಯವನ್ನು ವೃದ್ಧಿಸಲು ಸಾಧ್ಯವಿಲ್ಲ. ಬೇರೆಯವರ ಕರ್ಮವನ್ನು ಕಡಿಮೆಗೊಳಿಸಲಾಗಲೀ, ಹೆಚ್ಚು ಮಾಡುವುದಾಗಲೀ ಸಾಧ್ಯವಿಲ್ಲ. ಪೂರ್ಣ ಪರಮಾತ್ಮನು ಬೇರೆಯವನೇ ಇದ್ದಾನೆ. ಅವನು ಅಮರ ಲೋಕದಲ್ಲಿರುತ್ತಾನೆ. ಅವನು ಪಾಪಕರ್ಮವನ್ನು ತೊಳೆಯಬಲ್ಲನು. ಅವನು ಮೃತ್ಯುವನ್ನು ಮುಂದೆ ಹಾಕಬಲ್ಲನು. ಆಯುಷ್ಯವನ್ನು ವೃದ್ಧಿಸಬಲ್ಲನು, ಋಗ್ವೇದದ 10ನೇ ಮಂಡಲದ 161ನೇ ಸೂಕ್ತಿಯ 2ನೇ ಶ್ಲೋಕದಲ್ಲಿ ಹೇಳಿದ ಹಾಗೆ ರೋಗಿಯ ರೋಗ ಹೆಚ್ಚಾಗಿ ಮೃತ್ಯುವನ್ನು ಪಡೆದಾಗ್ಯೂ ನಾನು ಭಕ್ತನನ್ನು ಮೃತ್ಯುದೇವತೆಯಿಂದ ಬಿಡಿಸಿಕೊಂಡು ಬರುವೆ, ಅವನಿಗೆ ನವಜೀವನ ಪ್ರದಾನ ಮಾಡುವೆ, ಅವನನ್ನು ಪೂರ್ಣ ಆಯಸ್ಸಿನವರೆಗೆ ಬದುಕಲು ಬಿಡುತ್ತೇನೆ. ಋಗ್ವೇದದ 10ನೇ ಮಂಡಲದ 161ನೇ ಸೂಕ್ತಿಯ 5ನೇ ಮಂತ್ರದಲ್ಲಿ ಹೇಳಿರುವುದೇನೆಂದರೆ, 'ಹೇ ಪುನರ್ಜನ್ಮ ಪಡೆದ ಪ್ರಾಣಿಯೇ! ನೀನು ನನ್ನ ಭಕ್ತಿ ಮಾಡುತ್ತಿರು. ಒಂದು ವೇಳೆ ನಿನ್ನ ಕಣ್ಣು ಹಾಳಾದರೆ ನಾನು ನಿನ್ನ ಕಣ್ಣನ್ನು ಆರೋಗ್ಯಪೂರ್ಣವಾಗಿರುವಂತೆ ಮಾಡುವೆ. ನಿನ್ನನ್ನು ನಾನು ಭೇಟಿಯಾಗುವೆ ಅಂದರೆ ನಿನಗೆ ನಾನು ಪ್ರಾಪ್ತವಾಗುತ್ತೇನೆ. ಇನ್ನೂ ಹೇಳಿರುವುದೇನೆಂದರೆ, "ಹೇ ಪುನರ್ಜನ್ಮ ಪಡೆದ ಪ್ರಾಣಿಯೇ, ನೀನು ನನ್ನನ್ನು ಧ್ಯಾನಿಸು, ನಾನು ನಿನ್ನನ್ನು ಕಾಪಾಡುವೆ."

ಬ್ರಹ್ಮಾನಿಗೆ ವೇದಮಂತ್ರವು ಕಂಠಪಾಠವಾಗಿತ್ತು. ತಕ್ಷಣವೇ ಅವನಿಗೆ ಅರ್ಥವಾಯಿತು. ಆದರೆ ಪ್ರಪಂಚದ ಲೋಕವೇದದ ಆಧಾರದ ಮೇಲೆ ಬ್ರಹ್ಮಾ ತನ್ನನ್ನು ಪ್ರಜಾಪಿತ ಎಂದು ಭಾವಿಸಿದ್ದಾನೆ. ವೇದಗಳನ್ನು ಕಂಠಪಾಠ ಮಾಡುವುದು ಬೇರೆ ಮಾತು. ವೇದಮಂತ್ರಗಳನ್ನು ತಿಳಿದುಕೊಳ್ಳುವುದು ವಿಶೇಷ ಜ್ಞಾನ. ವೇದಗಳ ಜ್ಞಾನವು ನನ್ನ ವಿನಃ ವಿಶ್ವದಲ್ಲಿ ಯಾರಿಗೂ ಇಲ್ಲ ಎಂದು ಬ್ರಹ್ಮಾ ಹೇಳಿದನು. ಈ ಮಂತ್ರಗಳ ಅರ್ಥವನ್ನು ತಪ್ಪಾಗಿ ಅರ್ಥೈಸಲಾಗಿದೆ. ಕಬೀರ್ ಪರಮೇಶ್ವರರು ಇಂತಹ ವ್ಯಕ್ತಿಗಳ ಬಗ್ಗೆ ಹೇಳಿದ್ದಾರೆ.

ಕಬೀರ್, ಜಾನ್ ಬೂಝ್ ಸಾಚ್ಚಿ ತಜೈ, ಕರೈ ಝೂಠ್ ಸೆ ನೇಹ್ ।
ತಾಕಿ ಸಂಗತ್ ಹೆ ಪ್ರಭು, ಸ್ವಪನ್ ಮೇ ಭೀ ನಾ ದೇಯ್ ॥

ಶಬ್ದಾರ್ಥ:– ಯಾವ ವ್ಯಕ್ತಿ ಸಾಕ್ಷಿ ಪುರಾವೆಗಳನ್ನು ನೋಡಿದ ಮೇಲೂ ಸುಳ್ಳನ್ನೇ ಆಧಾರವೆಂದು ನಂಬುತ್ತಾನೋ, ಆ ವ್ಯಕ್ತಿಯನ್ನು ಕನಸಿನಲ್ಲು ಭೇಟಿಯಾಗಬೇಡ. ಪರಮಾತ್ಮ! ಅವನು ಬಹಳ ದುಷ್ಟ. ಅವನ ಬಳಿ ಜ್ಞಾನದ ಚರ್ಚೆ ಮಾಡುವುದು ವ್ಯರ್ಥ ಎಂದು ಕಬೀರ ಪರಮೇಶ್ವರರು ಹೇಳಿದರು.

ಬ್ರಹ್ಮಾ ಗರುಡನ ಮಾತನ್ನು ಕೇಳಿ ಅತ್ಯಂತ ಕೋಪಗೊಂಡನು. ಹಾಗೂ ಬಯ್ಯತೊಡಗಿದನು. "ನಿನ್ನದು ಪಕ್ಷಿಯ ಬುದ್ಧಿ. ನಿನಗೆ ಯಾರಾದರೂ ಏನಾದರೂ ಹೇಳಲಿ. ಆ ಮಾತುಗಳನ್ನೇ ನೀನು ನಂಬಿಬಿಡುತ್ತೀಯಾ. ನಿನಗೆ ಸ್ವಂತ ಬುದ್ಧಿ ಇಲ್ಲ" ಎಂದನು. ನಂತರ ತಕ್ಷಣದಲ್ಲೇ ವಿಷ್ಣು, ಶಿವ, ಇಂದ್ರ ಮತ್ತು ಎಲ್ಲಾ ದೇವತೆಗಳನ್ನು, ಋಷಿಗಳನ್ನು ಕರೆದನು. ಸಭೆ ಏರ್ಪಟ್ಟಿತು. ಬ್ರಹ್ಮಾ ಅವರನ್ನು ಕುರಿತು ಹೀಗೆಂದನು. "ಗರುಡನು ಇಂದು ಹೊಸ ಮಾತನ್ನು ಹೇಳಿದ್ದಾನೆ. ಬ್ರಹ್ಮಾ, ವಿಷ್ಣು, ಮಹೇಶ್ವರರು ನಶ್ವರರು. ಪೂರ್ಣ ಪರಮಾತ್ಮನು ಬೇರೆಯೇ ಇದ್ದಾನೆ. ಅವನು ಅಮರ ಲೋಕದಲ್ಲಿ ಇದ್ದಾನೆ. ನಾವು ಸೃಷ್ಟಿಕರ್ತರಲ್ಲ" ಎಂದನು. ಈ ಮಾತನ್ನು ಕೇಳಿ ವಿಷ್ಣು ಮತ್ತು ಶಿವನಿಗೆ ಬಹಳ ಕೋಪಬಂದಿತು. ಗರುಡನನ್ನು ಒಂದೇ ಸಮನೆ ಬಯ್ಯಲಾರಂಭಿಸಿದನು. ನಂತರ ಎಲ್ಲರೂ ದುರ್ಗೆಯಿಂದ ಸತ್ಯವನ್ನು ಅರಿಯಲು ನಿಶ್ಚಯಿಸಿದರು. ಎಲ್ಲರೂ ಸೇರಿ ದುರ್ಗಾಮಾತೆಯ ಬಳಿ ಬಂದರು. ನಮ್ಮನ್ನು ಬಿಟ್ಟು

ಬೇರೆ ಪೂರ್ಣ ಪರಮಾತ್ಮನೆನ್ನುವವನು ಇದ್ದಾನೆಯೇ' ಎಂದು ಪ್ರಶ್ನಿಸಿದರು. ದುರ್ಗೆಯು ಹೀಗೆಂದಳು, "ನಿಮಗೆ ತಪ್ಪು ತಿಳುವಳಿಕೆ ಯಾವಾಗ ಆಯಿತು? ನೀವು ಅವಿನಾಶಿ ಅಥವಾ ಎಲ್ಲರ ಕರ್ತೃ ಎಂಬ ತಪ್ಪು ತಿಳುವಳಿಕೆ ಯಾವಾಗ ಆಯಿತು? ಹಾಗೇನಾದರೂ ಇದ್ದರೆ ನೀನು ನನ್ನ ತಂದೆಯಾಗಬೇಕು. ಆದರೆ ನಿನ್ನ ಜನ್ಮವು ನನ್ನ ಗರ್ಭದಿಂದ ಆಗಿದೆ. ವಾಸ್ತವವಾಗಿ ಪರಮೇಶ್ವರರೇ ಬೇರೆ. ಅವರು ಅವಿನಾಶಿ, ಅವರೇ ಎಲ್ಲರ ಕರ್ತೃ." ಎಂದಳು. ಈ ಮಾತನ್ನು ಕೇಳಿದ ನಂತರ ಸಭೆ ಮುಕ್ತಾಯವಾಯಿತು. ಎಲ್ಲರೂ ಮನೆಗೆ ಹಿಂತಿರುಗಿದರು. ಆದರೆ ಬ್ರಹ್ಮಾ, ವಿಷ್ಣು, ಮಹೇಶ್ವರರು ಇದನ್ನು ಅರಗಿಸಿಕೊಳ್ಳಲು ಸಿದ್ಧರಿರಲಿಲ್ಲ. ಅವರು ಗರುಡನನ್ನು ಕರೆದರು. ಗರುಡನು ಒಂದು ನಮಸ್ಕಾರ ಮಾಡಿ ಅಲ್ಲಿ ಕುಳಿತನು. ಈ ಮೂರೂ ದೇವತೆಗಳು ಹೇಳಿದರು, "ಹೇ ಪಕ್ಷಿರಾಜ, ನಾವು ಈ ಪ್ರಪಂಚದ ಕರ್ತೃಗಳಲ್ಲವೆಂದು ನಿಮಗೆ ಹೇಗೆ ನಂಬಿಕೆ ಬಂದಿತು? ಬೇಕಾದರೆ ಪರಿಕ್ಷೆ ಮಾಡಿಕೊಳ್ಳಿ" ಆಗ ಗರುಡನು ಎದ್ದು ಹಾರುತ್ತಾ ಕಬೀರರ ಬಳಿ ಬಂದನು. ಹಾಗೂ ಇಡೀ ವೃತ್ತಾಂತವನ್ನು ತಿಳಿಸಿದನು. ಆಗ ಕಬೀರರು ಹೇಳಿದರು." ವಂಗ ದೇಶದಲ್ಲಿ (ಈಗಿನ ಬಾಂಗ್ಲಾದೇಶ) **12**ವರ್ಷದ ಒಬ್ಬ ಬ್ರಾಹ್ಮಣ ಬಾಲಕನಿದ್ದನು. ಅವನ ಆಯುಷ್ಯ ಮುಗಿಯುವುದರಲ್ಲಿತ್ತು. ಅವನು ಕೆಲವೇ ಕೆಲವು ದಿನಗಳ ಅತಿಥಿಯಾಗಿದ್ದನು. ನಾನು ಆ ಬ್ರಾಹ್ಮಣ ಬಾಲಕನಿಗೆ ಆಶ್ರಯ ಪಡೆಯಲು ಬ್ರಹ್ಮಾ, ವಿಷ್ಣು, ಶಿವನ ಸ್ಥಿತಿ ಹೇಳಿದೆ. ಆ ಬಾಲಕನು ಬಹಳ ವಾದ ಮಾಡಿದನು. ನನ್ನ ಜ್ಞಾನವನ್ನು ಒಪ್ಪಿಕೊಳ್ಳಲಿಲ್ಲ. ಆಗ ನಾನು ಆ ಬಾಲಕನಿಗೆ ಹೇಳಿದೆ, "ನಿನ್ನ ಆಯುಷ್ಯ ಇನ್ನು ಮೂರು ದಿನ ಮಾತ್ರವಿದೆ. ಬ್ರಹ್ಮಾ, ವಿಷ್ಣು, ಮಹೇಶ್ವರರು ಸಮರ್ಥರಾಗಿದ್ದರೆ ನೀನು ಅವರ ಆಶ್ರಯಕ್ಕೆ ಹೋಗು," ಇಷ್ಟು ಹೇಳಿ ಕಬೀರರು ಅಂತರ್ಧ್ಯಾನರಾದರು. ಬಾಲಕನು ಚಿಂತೆಗೀಡಾದನು. "ನೀನು ಆ ಬಾಲಕನನ್ನು ಕರೆದುಕೊಂಡು ದೇವತೆಗಳ ಬಳಿ ಹೋಗು. ಅವರಿಂದ ಏನೂ ಆಗುವುದಿಲ್ಲ. ನಂತರ ನೀನು ನನ್ನ ಬಳಿ ಬಂದು ಮಾತನಾಡು. ನಾನು ಮುಂದೆ ಏನು ಮಾಡಬೇಕೆಂದು ನಿನಗೆ ತಿಳಿಸುತ್ತೇನೆ". ಎಂದು ಕಬೀರರು ಗರುಡನಿಗೆ ಹೇಳಿದರು. ಗರುಡನು ಆ ಬಾಲಕನನ್ನು ಕರೆದುಕೊಂಡು ಆ ತ್ರಿಮೂರ್ತಿಗಳ ಬಳಿ ತೆರಳಿದನು. ಗರುಡನು ಆ ಬಾಲಕನಿಗೆ ಆ ತ್ರಿಮೂರ್ತಿಗಳ ಬಳಿ ಹೀಗೆ ಹೇಳಬೇಕೆಂದು ಹೇಳಿದನು, "ನನ್ನ ತಾತಾ–ಮುತ್ತಾತಂದಿರು, ತಂದೆ ಹಾಗೂ ನಾನು ಸದಾ ನಿಮ್ಮ ಪೂಜೆ ಮಾಡಿದ್ದೇವೆ. ನನ್ನ ಜೀವನದಲ್ಲಿ **2** ದಿನಗಳು ಮಾತ್ರ ಬಾಕಿ ಉಳಿದಿವೆ. ನನ್ನ ಆಯುಷ್ಯವನ್ನು ವೃದ್ಧಿಸಿ" ಬಾಲಕನು ಅವರ ಬಳಿ ಹೋಗಿ ಹಾಗೆಯೇ ವಿನಂತಿಸಿದನು.

ಆಗ ಮೂವರು ದೇವರು ಪ್ರಯತ್ನ ಮಾಡಿದರು. ಆದರೆ ಅದು ವ್ಯರ್ಥವಾಯಿತು. ನಂತರ ನ್ಯಾಯಾಧೀಶನಾದ ಧರ್ಮರಾಜನ ಬಳಿ ಹೋಗಲು ನಿರ್ಧರಿಸಿದರು. ಲೆಕ್ಕವೆಲ್ಲಾ ಅವನ ಬಳಿಯೇ ಇರುವುದರಿಂದ ಅದೇ ಸರಿಯಾದ ಮಾರ್ಗವೆಂದು ತಿಳಿದು ಧರ್ಮರಾಯನ ಬಳಿ ತೆರಳಿದರು. ತ್ರಿಮೂರ್ತಿಗಳು ಧರ್ಮರಾಯನನ್ನು ಕುರಿತು ಆ ಬಾಲಕನ ಆಯುಷ್ಯ ಎಷ್ಟಿದೆ ಎಂದು ವಿಚಾರಿಸಿದಾಗ, ಅವನ ಆಯುಷ್ಯ ಮುಗಿದಿದೆ ಎಂದು ತಿಳಿದು ಬಂದಿತು. ತ್ರಿಮೂರ್ತಿಗಳು ಧರ್ಮರಾಜನಿಗೆ ಆ ಬಾಲಕನ ಆಯುಷ್ಯ ವೃದ್ಧಿಸಲು ಕೇಳಿದಾಗ ಅವನು ಅದು ಅಸಾಧ್ಯವೆಂದನು. ನಾವು ನಿನ್ನ ಬಳಿ ಮತ್ತೆ ಮತ್ತೆ ಬರುವುದಿಲ್ಲ. ಇದು ಮರ್ಯಾದೆಯ ಪ್ರಶ್ನೆ. ಇವನ ಆಯುಷ್ಯವನ್ನು ವೃದ್ಧಿಸು ಎಂದು ತ್ರಿಮೂರ್ತಿಗಳು ವಿನಂತಿಸಿದಾಗ ಧರ್ಮರಾಯನು "ಸಾಧ್ಯವಿಲ್ಲ, ಒಂದು ಕ್ಷಣವನ್ನು ಹೆಚ್ಚು, ಮಾಡಲಾಗಲೀ, ಕಡಿಮೆ ಮಾಡಲಾಗಲೀ ಸಾಧ್ಯವಿಲ್ಲ. ನೀವು ನಿಮ್ಮ ಆಯುಷ್ಯವನ್ನು ಕೊಟ್ಟರೆ ಮಾತ್ರ ಇವನ ಆಯುಷ್ಯವನ್ನು ಹೆಚ್ಚಿಸಬಲ್ಲೆ" ಎಂದನು. ಇದನ್ನು ಕೇಳಿದ ತಕ್ಷಣ ಎಲ್ಲರೂ ಗಾಭರಿಯಾದರು. ಆಗ ಇದನ್ನು ಕೇವಲ ಪರಮೇಶ್ವರನು ಮಾತ್ರ ಮಾಡಲು ಸಾಧ್ಯ ಎಂದು ನಿರ್ಧರಿಸಿ ಅಲ್ಲಿಂದ ತಕ್ಷಣವೇ ಹೊರಟು ಗರುಡನಿಗೆ ಹೇಳಿದರು, "ಯಾರಾದರೂ ಸಮರ್ಥ ಶಕ್ತಿವಂತರಿದ್ದರೆ ಅವರಿಂದ ಈ ಬಾಲಕನ ಆಯುಷ್ಯವನ್ನು ವೃದ್ಧಿಸಿ ತೋರಿಸು". ಆಗ ಗರುಡನು ಕಬೀರರನ್ನು ಧ್ಯಾನದ ಮೂಲಕ ಸಂಪರ್ಕಿಸಿದನು. ಕಬೀರರು ಧ್ಯಾನದ ಮೂಲಕವೇ ಹೇಳಿದರು, "ಇವನಿಗಾಗಿ ನೀವು ಮಾನಸ ಸರೋವರದಿಂದ ನೀರನ್ನು ತರಿಸಿ,

ಅಲ್ಲಿ ನಿಮಗೆ ಶ್ರವಣ ಎಂಬ ಭಕ್ತ ಸಿಗುವನು. ಅವನಿಗೆ ನಾನೆಲ್ಲವನ್ನೂ ಹೇಳಿದ್ದೇನೆ. ಅಲ್ಲಿಂದ ಅಮೃತವನ್ನು ತನ್ನಿ" ಎಂದರು. ಗರುಡನು ಕಬೀರರು ಹೇಳಿದ ಹಾಗೆ ಮಾಡಿದನು. ಅಮೃತವನ್ನು ತಂದು ಆ ಬಾಲಕನಿಗೆ ಕುಡಿಸಿದನು.

ಆ ಬಾಲಕನ ಬಳಿ ತೆರಳಿ ಅಮೃತವನ್ನು ಕುಡಿಸಿದ ನಂತರ ಇವರೇ ಸ್ವತಃ ಪರಮೇಶ್ವರ" ಎಂದು ಗರುಡನು ಆ ಬಾಲಕನಿಗೆ ತಿಳಿಸಿದನು. ಅವರು ಜಲವನ್ನು ಮಂತ್ರಿಸಿ ಕೊಟ್ಟಿದ್ದರು. ಬಾಲಕನು **15** ದಿನಗಳವರೆಗೆ ಸಾಯಲಿಲ್ಲ. ಆಗ ಗರುಡನು ಆ ತ್ರಿಮೂರ್ತಿಗಳಿಗೆ ಅವನು ಜೀವಂತವಾಗಿರುವುದನ್ನು ತಿಳಿಸಿದನು. ಆಗ ತ್ರಿಮೂರ್ತಿಗಳು ಧರ್ಮರಾಜನ ಬಳಿ ತೆರಳಿದರು. ಜೊತೆಯಲ್ಲಿ ಗರುಡನೂ ಹೋದನು. ಬಾಲಕನು ಹೇಗೆ ಬದುಕಿದ್ದಾನೆಂದು ತ್ರಿಮೂತಿಗಳು ಧರ್ಮರಾಜನನ್ನು ಕೇಳಿದಾಗ ಧರ್ಮರಾಜನು ಲೆಕ್ಕ ನೋಡಿದಾಗ ಅವನ ಆಯುಷ್ಯ ವೃದ್ಧಿಯಾಗಿರುವುದು ಅದರಲ್ಲಿ ಬರೆದಿತ್ತು. ಆಗ ಧರ್ಮರಾಜನು "ಇದು ಯಾವಾಗಲಾದರೊಮ್ಮೆ ನಡೆಯುತ್ತದೆ. ಆ ಪರಮೇಶ್ವರನ ಲೀಲೆಯನ್ನು ಬಲ್ಲವರು ಯಾರು?" ಎಂದನು. ತ್ರಿಮೂರ್ತಿಗಳಿಗೆ ಆಶ್ಚರ್ಯವಾಯಿತು. ಆದರೆ ಇದನ್ನು ಪ್ರತ್ಯಕ್ಷವಾಗಿ ನೋಡಿದರೂ ಸತ್ಯವನ್ನು ಒಪ್ಪಿಕೊಳ್ಳಲಿಲ್ಲ. ಅವರು ಅಹಂಕಾರವನ್ನು ಬಿಡಲಿಲ್ಲ. ಗರುಡನಿಗೆ ಮಾತ್ರ ನಂಬಿಕೆ ಇನ್ನೂ ಬಲವಾಯಿತು.

ಕಬೀರ್, ರಾಜ್ ತಜನಾ ಸಹಜ್ ಹೈ ಸಹಜ್ ತ್ರಿಯಾ ಕಾ ನೇಹ್ ।<br>
ಮಾನ್ ಬಡಾಯಿ ಈರ್ಷ್ಯಾ ದುರ್ಲಭ ತಜ್‌ನಾ ಯೇಹ್ ॥

**ಶಬ್ದಾರ್ಥ:–** ಆಧ್ಯಾತ್ಮ ಜ್ಞಾನದ ಕೊರತೆಯಿಂದ ಮನುಷ್ಯನಲ್ಲಿ ಕೊಚ್ಚಿಕೊಳ್ಳುವುದು, ಸ್ವಾರ್ಥ ಮುಂತಾದ ಅಸಾಧ್ಯವಾದ ಕೆಟ್ಟತನ ಮನೆ ಮಾಡುತ್ತದೆ. ಬಡಾಯಿಯ ಅರ್ಥವೆಂದರೆ ಪದವಿ ಅಥವಾ ಹಣದ ಅಹಂಕಾರದಿಂದ ಬೀಗುವ ವ್ಯಕ್ತಿ ಎಂದರ್ಥ. ಇವೆರಡೂ (ಪದವಿಯಿಂದ ಸಿಗುವ ದೊಡ್ಡತನ ಮತ್ತು ಹೊಟ್ಟೆಕಿಚ್ಚು) ಎಂತಹ ಕೆಟ್ಟಗುಣಗಳೆಂದರೆ, ಅವನು ಆ ಅಹಂಕಾರದಲ್ಲೇ ಮುಳುಗಿ ಕುರುಡನಾಗುತ್ತಾನೆ. ರಾಜ್ಯ ಬಿಡುತ್ತಾನೆ, ಹೆಂಡತಿಯನ್ನು ಬೇಕಾದರೂ ಬಿಡುತ್ತಾನೆ ಆದರೆ ಇವೆರಡನ್ನು ಬಿಡುವುದಿಲ್ಲ.

ಈ ಗರುಡ ಬೋಧದ ಅಂತ್ಯದಲ್ಲಿ ವಾಸುಕಿ ಎಂಬ ನಾಗಕನ್ಯೆಯ ಪ್ರಕರಣವನ್ನು ತಪ್ಪಾಗಿ ಅರ್ಥೈಸಲಾಗಿದೆ. ಇದರಲ್ಲಿ ಗರುಡನನ್ನು ಗುರು ಎಂದು ಬಿಂಬಿಸಲಾಗಿದೆ. ಇದು ತಪ್ಪು, ಏನೆಲ್ಲಾ ಆಗಿದೆಯೋ, ಅದು ಪರಮೇಶ್ವರನಾದ ಕಬೀರರಿಂದ ಆಗಿದೆ.

## ಗರುಡ ಬೋಧದ ಅಮೃತವಾಣಿಯನ್ನು ಈಗ ಓದೋಣ
## ಧರ್ಮದಾಸ ವಚನ

ಧರ್ಮದಾಸ್ ಬೀನತೀ ಕರೈ, ಸುನಹು ಜಗತ್ ಆಧಾರ್ ।<br>
ಗರುಡ್ ಬೋಧ್ ಭೇದ್ ಸಬ್, ಅಬ್ ಕಹೋ ತತ್ತ್ವ ವಿಚಾರ್ ॥

**ಶಬ್ದಾರ್ಥ:–** ಧರ್ಮದಾಸರು ಪರಮೇಶ್ವರ ಕಬೀರರಿಂದ ಗರುಡದೇವನ ಬಗ್ಗೆ ತಿಳಿದುಕೊಳ್ಳುವ ಇಚ್ಛೆಯಿಂದ ಪ್ರಪಂಚವನ್ನೇ ಧರಿಸಿರುವ ಪರಮಾತ್ಮ, ನನಗೆ ಗರುಡ ಪಕ್ಷಿಯ ವಿಷಯದಲ್ಲಿ ನಿಜವಾದ ಜ್ಞಾನವನ್ನು ತಿಳಿಸುವ ಕೃಪೆ ಮಾಡಿ ಎಂದು ವಿನಂತಿಸಿಕೊಂಡರು.

### ಸತ್‌ಗುರು ವಚನ (ಕಬೀರ್ ವಚನ)

ಪ್ರಥಮ್ ಗರುಡ್ ಸೋಂ ಭೈಂಟ್–ಜಬ್ ಭಯಊ ।<br>
ಸತ್ ಸಾಹಬ್ ಮೈಂ ಬೋಲ್ ಸುನಾಊ ।

ಧರ್ಮ್‌ದಾಸ್ ಸುನೋ ಕಹು ಬುಝಾಈ ।
ಜೇಹೀ ವಿಧಿ ಗರುಡ್ ಕೋ ಸಮಝಾಈ ॥

**ಶಬ್ದಾರ್ಥ:–** ಕಬೀರ ಪರಮೇಶ್ವರರು ಧರ್ಮದಾಸನಿಗೆ ಹೀಗೆಂದರು, "ಯಾವಾಗ ನಾನು ಮೊದಲ ಬಾರಿಗೆ ಗರುಡನನ್ನು ಭೇಟಿಯಾದೆನೋ, ಆಗ ನಾನು ಸತ್ ಸಾಹೇಬ್ ಎಂದು ಹೇಳಿದೆ. ಹೇ ಧರ್ಮದಾಸ, ಕೇಳು, ಹೇಗೆ ನಾನು ಗರುಡನಿಗೆ ಹೇಳಿದೆನೋ, ಅದನ್ನೇ ನಿನಗೆ ಹೇಳುತ್ತೇನೆ."

## ಗರುಡ ವಚನ

ಸುನಾ ಬಚನ ಸತ್ ಸಾಹಬ್ ಜಬಹೀ । ಗರುಡ್ ಪ್ರಣಾಮ್ ಕಿಯಾ ತಬಹೀ ॥
ಶೀಶ್ ನೀವಾಯ್ ತಿನ್ ಪೂಛಾ ಚಾಹಯೇ ।
ಹೋ ತುಮ್ ಕೌನ್ ಕಹಾಂ ಸೇ ಆಯೆ ॥

**ಶಬ್ದಾರ್ಥ:–** ಗರುಡನು ಸತ್ ಸಾಹೇಬರ ಮಾತನ್ನು ಕೇಳಿದ ತಕ್ಷಣ, ತಲೆ ಬಾಗಿಸಿ ನನ್ನನ್ನು ಕೇಳಿದನು, "ನೀವು ಯಾರು? ಎಲ್ಲಿಂದ ಬಂದಿರುವಿರಿ?"

## ಜ್ಞಾನಿ (ಕಬೀರ್) ವಚನ

ಕಹಾ ಕಬೀರ್ ಹೈ ನಾಮ್ ಹಮಾರಾ । ತತ್ವಜ್ಞಾನ್ ದೇನೇ ಆಏ ಸಂಸಾರಾ ॥
ಸತ್ಯಪುರುಷ್ ಹೈ ಕುಲ್ ಕಾ ದಾತಾ । ಹಮ್ ವಾಕಾ ಸಬ್ ಭೇದ್ ಬತಾತಾ ॥
ಸತ್ಯಲೋಕ್ ಸೆ ಹಮ್ ಚಲಿ ಆಏ । ಜೀವ್ ಛುಡಾವನ್ ಜಗ್ ಮೆಂ ಪ್ರಕಟಾಏ ॥

**ಶಬ್ದಾರ್ಥ:–** ಕಬೀರರು ಗರುಡನಿಗೆ ಹೀಗೆ ಹೇಳಿದರು, "ನನ್ನ ಹೆಸರು ಕಬೀರ. ಸಂಪೂರ್ಣ ವಿಶ್ವಕ್ಕೆ ತತ್ವಜ್ಞಾನ ಅಂದರೆ ನಿಜವಾದ ಆಧ್ಯಾತ್ಮ ಜ್ಞಾನವನ್ನು ನೀಡಲು ಬಂದಿರುವೆ. ನಾನು ಸತ್ಯಲೋಕ ಅಂದರೆ ಸನಾತನ ಪರಮಧಾಮದಿಂದ ಹೊರಟು ಬಂದಿರುವೆ. ಕಾಲಜಾಲದಿಂದ ಜೀವಿಗಳನ್ನು ಬಿಡಿಸಲು ಈ ಪ್ರಪಂಚದಲ್ಲಿ ಪ್ರತ್ಯಕ್ಷನಾಗಿರುವೆ. ಸತ್ಯಪುರುಷನು ಈ ಕುಲದ ಒಡೆಯನು. ಅವನು ಎಲ್ಲರನ್ನೂ ಸಲಹುತ್ತಾನೆ. ಎಲ್ಲರಿಗೂ ಕೊಡುವವನು ಅವನೇ. ನಾನು ಅವನ ಸಂಪೂರ್ಣವಾದ ರಹಸ್ಯವನ್ನು ಹೇಳುತ್ತೇನೆ.

## ಗರುಡ ವಚನ

ಸುನತ್ ಬಚನ್ ಅಚಮ್ಭೋ ಮಾನಾ । ಸತ್ಯ್ ಪುರುಷ್ ಹೈ ಕೌನ್ ಭಗವಾನಾ ॥
ಪ್ರತ್ಯಕ್ಷದೇವ್ ಶ್ರೀ ವಿಷ್ಣು ಕಹಾವೈ । ದಶ್ ಔತಾರ್ ಧರಿ ಧರಿ ಜಾವೈ ॥

**ಶಬ್ದಾರ್ಥ:–** ಕಬೀರರು ಹೇಳಿದರು, "ಗರುಡನು ಸತ್ಯ ಸಾಹೇಬ್ ಎನ್ನುವ ಶಬ್ದ ಕೇಳಿದಾಗ ಆಶ್ಚರ್ಯಗೊಂಡನು ಹಾಗೂ ಇವರು ಯಾವ ಪರಮಾತ್ಮ? ಆಧ್ಯಾತ್ಮ ಜ್ಞಾನದಿಂದ ಸ್ಪಷ್ಟವಾಗುವುದೇನೆಂದರೆ ವಿಷ್ಣುವೇ ಪರಮಾತ್ಮ. ಅವರೇ ಹತ್ತು ಅವತಾರಗಳನ್ನು ಎತ್ತಿ ಈ ಭೂಮಿಗೆ ಬಂದಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ" ಎಂದು ಗರುಡನು ಕೇಳಿದನು.

## ಜ್ಞಾನಿ (ಕಬೀರ್) ವಚನ

ತಬ್ ಹಮ್ ಕಹಯಾ ಸುನೋ ಗರುಡ್ ಸುಜಾನಾ ।
ಪರಮ್ ಪುರುಷ್ ಹೈ ಪುರುಷ್ ಪುರಾನಾ ॥
ವಹ್ ಕಬಹು ನಾ ಮರ್‌ತಾ ಭಾಈ । ವಹ್ ಗರ್ಭ್ ಸೆ ದೇಹ್ ಧರತಾ ನಾಹೀಂ ॥

ಕೋಟಿ ಮರೇ ವಿಷ್ಣು ಭಗವಾನಾ । ಕ್ಯಾ ಗರುಡ್ ತುಮ್ ನಹೀಂ ಜಾನಾ ॥
ಜಾಕಾ ಜ್ಞಾನ್ ಬೇದ್ ಬತಲಾವೈಂ । ವೇದ್ ಜ್ಞಾನ್ ಕೋಈ ಸಮಝ್ ನ ಪಾವೈಂ ॥
ಜಿಸ್ ನೆ ಕೀನ್ಹಾ ಸಕಲ್ ಬಿಸ್ತಾರಾ ।
ಬ್ರಹ್ಮಾ, ವಿಷ್ಣು, ಮಹಾದೇವ್ ಕಾ ಸಿರ್‌ಜನ್‌ಹಾರಾ ॥

ಜುನೀ ಸಂಕಟ್ ವಹ ನಹೀಂ ಆವೇ । ವಹ್ ತೋ ಸಾಹೇಬ್ ಅಕ್ಷಯ್ ಕಹಾವೈ ॥

**ಶಬ್ದಾರ್ಥ:– ಕಬೀರರು ಹೀಗೆಂದರು, "ಹೇ ಸಜ್ಜನನಾದ ಗರುಡನೇ? ಕೇಳು, ಈ ಸತ್ಯಪುರುಷ ಎಂದರೆ ಪರಮ ಪುರುಷ ಮೊದಲನೇ ಪರಮಾತ್ಮ ಅಂದರೆ ಎಂದೆಂದಿಗೂ ಇರುವ ಭಗವಂತ. ಅವನು ಎಂದಿಗೂ ಸಾಯುವುದಿಲ್ಲ ಅಥವಾ ಗರ್ಭದಿಂದ ಜನಿಸುವುದಿಲ್ಲ. ಹೇ ಗರುಡನೇ? ಕೋಟಿ ಕೋಟಿ ವಿಷ್ಣು ಸತ್ತಿದ್ದಾರೆ ಎಂದು ನಿನಗೆ ತಿಳಿದಿಲ್ಲವೇ? ಯಾವ ಪರಮ ಅಕ್ಷರ ಪುರುಷನ ಜ್ಞಾನವನ್ನು ವೇದಗಳಲ್ಲಿ ತಿಳಿಸಿದ್ದಾರೋ, ಆ ವೇದದ ಜ್ಞಾನವನ್ನು ಯಾರೂ ಸರಿಯಾಗಿ ತಿಳಿದುಕೊಂಡಿಲ್ಲ. ಯಾರು ಎಲ್ಲಾ ಬ್ರಹ್ಮಾಂಡಗಳನ್ನು ವಿಸ್ತರಿಸಿದ್ದಾರೋ, ಯಾರು ಬ್ರಹ್ಮಾ, ವಿಷ್ಣು, ಮಹೇಶ್ವರರನ್ನು ಹುಟ್ಟಿಸಿದ್ದಾನೋ, ಆ ಪರಮಾತ್ಮನು ಎಂಭತ್ತನಾಲ್ಕು ಲಕ್ಷ ಯೋನಿಗಳ ಸಂಕಷ್ಟದಲ್ಲಿ ಸಿಲುಕುವುದಿಲ್ಲ. ಅವನನ್ನು ಅವಿನಾಶಿ ಎಂದು ಕರೆಯಲಾಗುತ್ತದೆ.**

## ಗರುಡ ವಚನ

ರಾಮ ರೂಪ ಧರಿ ವಿಷ್ಣು ಆಯಾ । ಜಿನ್ ಲಂಕಾ ಕಾ ಮಾರಾ ರಾಯಾ ॥
ಪೂರ್ಣ್ ಬ್ರಹ್ಮ್ ಹೈ ವಿಷ್ಣು ಅವಿನಾಶಿ । ಹೈ ಬಂದೀ ಛೋಡ್ ಸಬ್ ಸುಖ್ ರಾಶೀ ॥
ತೇತೀಸ್ ಕೋಟಿ ದೇವತನ್ ಕೀ ಬಂದ್ ಛುಡಾಈ ।
ಪೂರ್ಣ ಪ್ರಭು ಹೈಂ ರಾಮ್ ರಾಈ ॥

**ಶಬ್ದಾರ್ಥ:– ಗರುಡನೆಂದನು, "ವಿಷ್ಣುವು ರಾಮನ ಅವತಾರವನ್ನು ಎತ್ತಿ ಶ್ರೀಲಂಕೆಯ ರಾಜನಾದ ರಾವಣನನ್ನು ಕೊಂದನು. ವಿಷ್ಣುವೇ ಅವಿನಾಶಿಯಾದ ಪೂರ್ಣ ಬ್ರಹ್ಮನು. ಮೂವತ್ತಮೂರು ಕೋಟಿ ದೇವತೆಗಳನ್ನು ರಾಜನಾದ ರಾವಣನು ಬಂಧನದಿಂದ ಬಿಡಿಸಿದನು. ಇದೆಲ್ಲವೂ ದೇವರಿಂದ ಆಗಿದೆ. ಶ್ರೀ ರಾಮನೇ ಪೂರ್ಣ ಪರಮಾತ್ಮನು.**

## ಜ್ಞಾನಿ (ಕಬೀರ್) ವಚನ

ತುಮ್ ಗರುಡ್ ಕೈಸೆ ಕಹೋ ಅವಿನಾಶಿ ।
ಸತ್ಯ ಪುರುಷ್ ಬಿನ್ ಕಟೈ ನಾ ಕಾಲ್ ಕೀ ಫಾಂಸೀ ॥
ಜಾ ದಿನ್ ಲಂಕ ಮೆಂ ಕರೀ ಚಢಾಈ । ನಾಗ್ ಫಾಂಸ್ ಮೆಂ ಬಂಧೆ ರಘುರಾಈ ॥
ಸೇನಾ ಸಹಿತ್ ರಾಮ್ ಬಂಧಾಈ । ತಬ್ ತುಮ್ ನಾಗ್ ಜಾ ಮಾರೇ ಭಾಈ ॥
ತಬ್ ತೇರೇ ವಿಷ್ಣು ಬಂದನ್ ಸೇ ಛೂಟೆ । ಯಾಕು ಪೂಜೈ ಭಾಗ್ ಜಾಕೇ ಫೂಟೆ ॥
ಕಬೀರ್ ಐಸೀ ಮಾಯಾ ಅಟಪಟೀ, ಸಬ್ ಘಟ್ ಆನ್ ಅಡೀ ।
ಕಿಸ್–ಕಿಸ್ ಕೂಂ ಸಮಝಾಊಂ, ಕೂಐ ಭಾಂಗ್ ಪಡೀ ॥

**ಶಬ್ದಾರ್ಥ:– ಆಗ ಕಬೀರರೆಂದರು, "ಹೇ ಗರುಡದೇವಾ !" ನೀನು ವಿಷ್ಣುವನ್ನು ಹೇಗೆ ಅವಿನಾಶಿ ಎಂದು ಕರೆಯುವೆ? ಸತ್ಯಪುರುಷನಿಲ್ಲದೆ ಮೃತ್ಯುವಿನ ಬಲೆ ಎಂದರೆ ಕರ್ಮದ ಬಂಧನವು ಎಂದಿಗೂ ಕೊನೆಗೊಳ್ಳುವುದಿಲ್ಲ. ಹೇ ಗರುಡನೇ ! ಜ್ಞಾಪಿಸಿಕೋ, ಯಾವ ಸಮಯದಲ್ಲಿ ಶ್ರೀ ರಾಮಚಂದ್ರನು ಶ್ರೀಲಂಕೆಯ ಮೇಲೆ ಆಕ್ರಮಣ ಮಾಡಿದನೋ, ಯುದ್ಧವಾದಾಗ ಶ್ರೀರಾಮ ಹಾಗೂ**

ಅವನ ಸೈನ್ಯವು ನಾಗಪಾಶದಲ್ಲಿ ಬಂಧಿಯಾಗಿತ್ತು. ನೀನು ರಾಮನ ಹಾಗೂ ಇಡೀ ಸೈನ್ಯವನ್ನು ನಾಗಪಾಶದಿಂದ ಬಿಡಿಸಿರುವೆ. ಆಗ ನಿನ್ನ ವಿಷ್ಣುವು ಬಂಧನದಿಂದ ಮುಕ್ತಿಯನ್ನು ಪಡೆದನು. ಶ್ರೀರಾಮ ಹಾಗೂ ಅವನ ಸೈನ್ಯಕ್ಕೆ ನೀನೇ ಮುಕ್ತಿ ಕೊಟ್ಟವನು. ಯಾವ ವಿಷ್ಣುವು ಪೂಜಿಸಲ್ಪಡುವನೋ, ಅವನ ಅದೃಷ್ಟ ಕೆಟ್ಟಿತ್ತು. ಅಂದರೆ ಅವನು ನತದೃಷ್ಟನು''. ಕಬೀರರು ಹೀಗೆಂದರು, ''ಕಾಲ ಬ್ರಹ್ಮನು ತನ್ನ ಮಾಯಾಜಾಲದಿಂದ ಎಲ್ಲಾ ಪ್ರಾಣಿಗಳ ಹೃದಯವನ್ನು ಅಜ್ಞಾನದಿಂದ ತುಂಬಿದ್ದಾನೆ. ಯಾರ್ಯಾರಿಗೇ ಎಂದು ತಿಳಿ ಹೇಳುವುದು? ಒಂದು ಕ್ವಿಂಟಾಲ್ ಭಂಗಿಯನ್ನು ಅರೆದು ಒಂದು ಬಾವಿಗೆ ಯಾರೋ ಸುರಿದು, ಅದನ್ನು ಚೆನ್ನಾಗಿ ನೀರಿನಲ್ಲಿ ಕದಡಿದ ಹಾಗೆ ಇದೊಂದು ದೊಡ್ಡ ಸಮಸ್ಯೆ. ಯಾರು ಆ ನೀರನ್ನು ಕುಡಿಯುವರೋ ಅವರೆಲ್ಲರಿಗೂ ಮತ್ತು ಏರುವುದು, ಅವರೆಲ್ಲರೂ ತೂರಾಡುತ್ತಾ, ತೊದಲು ಮಾತನಾಡುತ್ತಾ ಇರುತ್ತಾರೆ. ಇಂತಹದ್ದೇ ಸ್ಥಿತಿ ಕಾಲಬ್ರಹ್ಮನ ಮೂಲಕ ಭ್ರಮೆಗೆ ಒಳಗಾಗಿರುವ ಜೀವಿಗಳದ್ದಾಗಿದೆ. ಇವರೆಲ್ಲಾ ವಿಷ್ಣು ಹಾಗೂ ಶಿವ ಮತ್ತು ಬ್ರಹ್ಮಾ ಅವಿನಾಶಿ ಪ್ರಭು ಎಂದು ಹೇಳುತ್ತಾರೆ. ಇವರೇ ಸೃಷ್ಟಿ, ಸ್ಥಿತಿ ಹಾಗೂ ಲಯ ಕರ್ತರು. ಇವರನ್ನು ಬಿಟ್ಟರೆ ಬೇರೆ ಯಾರೂ ಪರಮಾತ್ಮನಿಲ್ಲ ಎನ್ನುತ್ತಾರೆ.

## ಗರುಡ ವಚನ

ಜ್ಞಾನೀ ಗರುಡ್ ಹೈ ದಾಸ್ ತುಮ್ಹಾರಾ । ತುಮ್ ಬಿನ್ ನಹೀಂ ಜೀವ್ ನಿಸ್ತಾರಾ ॥
ಇತನಾ ಕಹ್ ಗರುಡ್ ಚರಣ್ ಲಿಪಟಾಯಾ ।
ಶರಣ್ ಲೇವೋಂ ಅವಿಗತ್ ರಾಯಾ ॥
ಕಬಹು ನಾ ಛೋಡೂಂ ತುಮ್ಹಾರಾ ಶರಣಾ ।
ತುಮ್ ಸಾಹಬ್ ಹೋ ತಾರಣ್ ತರಣಾ ॥
ಪತ್ಥರ್ ಬುದ್ಧಿ ಪರ್ ಪಡೇ ಹೈ ಜ್ಞಾನೀ ।
ಹೋ ತುಮ್ ಪೂರ್ಣ್ ಬ್ರಹ್ಮ್ ಲಿಯಾ ಹಮ್ ಜಾನೀ ॥

**ಶಬ್ದಾರ್ಥ:–** ಗರುಡನು ಕಬೀರರಿಗೆ ಹೇಳಿದನು, ''ಹೇ ವಿದ್ವಾಂಸರಾದ ಕಬೀರರೇ, ನಾನು ಗರುಡ, ನಿಮ್ಮ ಗುಲಾಮ, ನೀವಿಲ್ಲದೆ ಈ ಜೀವದ ಉದ್ಧಾರ ಸಾಧ್ಯವಿಲ್ಲ''. ಕಬೀರರು ಧರ್ಮದಾಸನಿಗೆ ಹೇಳಿದರು. ಗರುಡದೇವನು ಇಷ್ಟು ಹೇಳಿ ನನ್ನ ಚರಣಗಳಲ್ಲಿ ಬಿದ್ದು ಹೇಳಿದನು. ಹೇ ಪರಮೇಶ್ವರ ! ನನಗೆ ಆಶ್ರಯ ನೀಡು. ನಾನು ಎಂದಿಗೂ ನಿಮ್ಮ ಆಶ್ರಯ ತೊರೆಯುವುದಿಲ್ಲ. ನೀವು ನನ್ನನ್ನು ಉದ್ಧರಿಸುವವರು. ಅಂದರೆ ಪೂರ್ಣ ಮೋಕ್ಷವನ್ನು ಕೊಡುವವರೇ ನೀವು. ಹೇ ಜ್ಞಾನಿ ಕಬೀರರೇ, ನಾವು ಜೀವಿಗಳು ಅಜ್ಞಾನದ ಕೂಪದಲ್ಲಿದ್ದೇವೆ. ಈಗ ನನಗೆ ನೀವೇ ಪೂರ್ಣ ಬ್ರಹ್ಮ ಎಂಬ ಜ್ಞಾನ ಉಂಟಾಗಿದೆ.

## ಜ್ಞಾನಿ (ಕಬೀರ್) ವಚನ

ತಬ್ ಹಮ್ ಗರುಡ್ ಕುಂ ಪಾಂಚ್ ನಾಮ್ ಸುನಾಯಾ ।
ತಬ್ ವಾಕುಂ ಸಂಶಯ್ ಆಯಾ ॥
ಯಹ್ ತೋ ಪೂಜಾ ದೇವತನ್ ಕೀ ದಾತಾ । ಯಾ ಸೇ ಕೈಸೇ ಮೋಕ್ಷ್ ವಿಧಾತಾ ॥
ತುಮ್ ತೋ ಕಹೋ ದೂಸರಾ ಅವಿನಾಶೀ । ವಾ ಸೇ ಕಟೇ ಕಾಲ್ ಕೀ ಫಾಂಸೀ ॥
ನಾಯಬ್ ಸೇ ಕೈಸೇ ಸಾಹೇಬ್ ಡರಹೀ । ಕೈಸೇ ಮ್ಯೆಂ ಭವಸಾಗರ್ ತಿರಹೀ ॥

**ಶಬ್ದಾರ್ಥ:–** ಕಬೀರ ಪರಮೇಶ್ವರರು ಧರ್ಮದಾಸನಿಗೆ ಹೇಳಿದರು, ''ಗರುಡನು ಪ್ರಾರ್ಥಿಸಿಕೊಂಡಾಗ ನಾನು ಐದು ನಾಮಗಳ ಮಂತ್ರದೀಕ್ಷೆಯನ್ನು ನೀಡಿದೆ. ಅದು ಶರೀರದಲ್ಲಿರುವ

ಕಮಲಗಳಲ್ಲಿ ಪ್ರತ್ಯಕ್ಷವಾಗುವ, ದೇವ–ದೇವತೆಯಾದ ದುರ್ಗಾಮಾತೆಯ ಸಾಧನೆಯದ್ದಾಗಿದೆ. ಆಗ ಗರುಡನಿಗೆ ಸಂದೇಹವಾಯಿತು. "ಹೇ ಪ್ರಭು, ನೀವು ಈ ಮಂತ್ರಗಳನ್ನು ದೇವತೆಗಳ ಪೂಜೆಗಾಗಿ ನೀಡಿರುವಿರಿ. ಆದರೆ ಇವರಿಗಿಂತ ಬೇರೆಯಾದ ಒಬ್ಬ ಅವಿನಾಶಿ ಸತ್ಯಪುರುಷನಾಗಿದ್ದಾನೆ, ಅವನು ಈ ಕಾಲನ ಬಂಧನವನ್ನು ಬಿಡಿಸುತ್ತಾನೆ ಎಂದು ಹೇಳುತ್ತಿರುವಿರಿ. ಈ ದೇವತೆಗಳ ಪೂಜೆಯಿಂದ ಪೂರ್ಣ ಮೋಕ್ಷವು ಹೇಗೆ ಸಿಗುತ್ತದೆ? ಇವರೆಲ್ಲಾ ಸಣ್ಣ ಸಣ್ಣ ದೇವರುಗಳು. ಇವರೆಲ್ಲರಿಗೂ ಕಾಲ ಬ್ರಹ್ಮನೇ ಒಡೆಯ. ಸಣ್ಣ ದೇವರುಗಳ ಬಗ್ಗೆ ಈ ಒಡೆಯನು ಭಯ ಬೀಳುವುದಾದರೂ ಹೇಗೆ? ಅಂದರೆ ಈ ದೇವತೆಗಳ ಭಕ್ತಿಯಿಂದ ಕಾಲನ ಬಲೆಯಿಂದ ಹೇಗೆ ಬಿಡಿಸಿಕೊಳ್ಳುತ್ತಾರೆ?"

### ಜ್ಞಾನಿ (ಕಬೀರ್) ವಚನ

ಸಾಧನಾ ಕೋ ಪೂಜಾ ಮತ್ ಜಾನೋ ।
ಸಾಧನಾ ಕೂಂ ಮಜದೂರೀ ಮಾನೋ ।
ಜೋ ಕೋಉ ಆಮ್ರ್ ಫಲ್ ಖಾನೋ ಚಾಹೈ ।
ಪಹಲೇ ಬಹುತೇ ಮೆಹನತ್ ಕರಾವೈ ॥

ಧನ್ ಹೋವೈ ಫಲ್ ಆಮ್ರ್ ಖಾವೈ । ಆಮ್ರ್ ಫಲ್ ಇಷ್ಟ್ ಕಹಾವೈ ॥
ಪೂಜಾ ಇಷ್ಟ್ ಪೂಜ್ಯ್ ಕೀ ಕಹಿಏ । ಐಸೆ ಮೆಹನತ್ ಸಾಧನಾ ಲಹಿಏ ॥
ಯಹ್ ಸುನ್ ಗರುಡ್ ಭಯೋ ಆನಂದಾ । ಸಂಶಯ್ ಸೂಲ್ ಕಿಯೋ ನಿಕಂದಾ ॥

**ಭಾವಾರ್ಥ:–** ಗರುಡದೇವನು ಪರಮೇಶ್ವರರಾದ ಕಬೀರರಿಗೆ ಹೇಳಿದನು. "ಹೇ ಪರಮೇಶ್ವರ, ನೀವಂತೂ ಈ ದೇವತೆಗಳ ನಾಮಮಂತ್ರವನ್ನು ನೀಡಿದ್ದೀರಿ. ಇದು ಇವರ ಪೂಜೆಯಾಯ್ತು. ಇವರು ಕೇವಲ 16 ಕಲೆಗಳನ್ನೊಳಗೊಂಡ ಪ್ರಭುಗಳು ಎಂದು ನೀವು ಹೇಳಿದಿರಿ. ಕಾಲದೇವನು ಒಂದು ಸಾವಿರ ಕಲೆಗಳನ್ನೊಳಗೊಂಡ ಪ್ರಭು. ಪೂರ್ಣಬ್ರಹ್ಮನು ಅಸಂಖ್ಯ ಕಲೆಗಳ ಪರಮೇಶ್ವರನು. ಸೃಷ್ಟಿ ರಚನೆಯಲ್ಲಿ ಕಾಲದೇವನು ನಿಮ್ಮನ್ನು ತಡೆದಿಟ್ಟಿದ್ದಾನೆ ಎಂದೂ ಹೇಳಿದಿರಿ. ಕಾಲಬ್ರಹ್ಮನ ಅಧೀನದಲ್ಲಿರುವ ಬ್ರಹ್ಮಾ, ವಿಷ್ಣು, ಮಹೇಶ್ವರರಿದ್ದಾರೆ. ಹೇ ಪರಮೇಶ್ವರ! ಚಿಕ್ಕ ಸಾಹೇಬರಿಗೆ ದೊಡ್ಡ ಸಾಹೇಬರು ಹೇಗೆ ಹೆದರಲು ಸಾಧ್ಯ? ಅಂದರೆ ಬ್ರಹ್ಮಾ, ವಿಷ್ಣು, ಶಿವ ಈ ಮೂವರೂ ಕಾಲಬ್ರಹ್ಮನಿಗಿಂತ ಚಿಕ್ಕವರು. ಚಿಕ್ಕ ತಹಸೀಲ್ದಾರ್ ಇದ್ದ ಹಾಗೆ. ಅಂದರೆ ಅವರು ಕಾಲಬ್ರಹ್ಮನಿಗಿಂತ ಚಿಕ್ಕವರು. ನೀವು ಇವರ ಭಕ್ತಿಯ ಬಗ್ಗೆ ತಿಳಿಸಿದ್ದೀರಿ. ಇವರ ಮಂತ್ರವನ್ನು ಜಪಿಸಿದ್ದೀರಿ. ಇವರೆಲ್ಲಾ ತಮ್ಮ ಮಾಲಿಕನಾದ ಕಾಲಬ್ರಹ್ಮನಿಂದ ನಮ್ಮನ್ನು ಹೇಗೆ ಬಿಡಿಸಬಲ್ಲರು?" ಆಗ ಪರಮೇಶ್ವರ ಕಬೀರರು ಪೂಜೆ ಮತ್ತು ಸಾಧನೆಯಲ್ಲಿರುವ ರಹಸ್ಯವನ್ನು ಹೇಳಿದರು. ಯಾರಿಗಾದರೂ ಮಾವಿನಹಣ್ಣು ತಿನ್ನಲು ಆಸೆಯಾಗುತ್ತದೆ ಎಂದರೆ ಮಾವಿನಹಣ್ಣು ಅವನಿಗೆ ಪೂಜ್ಯ. ಆ ಪೂಜ್ಯವಸ್ತುವನ್ನು ಪಡೆಯಲು ಮಾಡುವ ಪ್ರಯತ್ನವು ಸಾಧನೆ ಎಂದು ಕರೆಯಲ್ಪಡುತ್ತದೆ. ಹಣ ಸಂಪಾದನೆಗೆ ಪರಿಶ್ರಮ ಪಡಬೇಕಾಗುತ್ತದೆ. ಆ ಹಣದಿಂದ ಮಾವಿನಹಣ್ಣನ್ನು ಖರೀದಿಸಿ ತಿನ್ನಬಹುದು. ಇದೇ ರೀತಿ ಪೂರ್ಣ ಪರಮಾತ್ಮನು ನಮ್ಮ ಇಷ್ಟ ದೇವ ಅಥವಾ ಪೂಜ್ಯದೇವನಾಗುತ್ತಾನೆ. ದೇವತೆಗಳ ಮಂತ್ರದ ಜಪ ಪರಿಶ್ರಮ. ಯಾರಿಗೆ ನಾಮಜಪದ ಸಂಪಾದನೆ ಎನ್ನುವ ಭಕ್ತಿ ದಾನ ಸಿಗುವುದೋ, ಅವರಿಗೆ ಕಾಲಬ್ರಹ್ಮನನ್ನು ಬಿಟ್ಟು ಕರ್ಮಯುಕ್ತರಾಗಿ ತನ್ನ ಇಷ್ಟದೈವ ಅಂದರೆ ಪೂಜ್ಯದೈವ ಅಂದರೆ ಕಬೀರರನ್ನು ಪಡೆಯುವರು." ಈ ಮಾತನ್ನು ಕೇಳಿ ಗರುಡನು ಅತ್ಯಂತ ಪ್ರಸನ್ನನಾದನು. ಗುರುವಿನಿಂದ ಪೂರ್ಣಗುರುವಾಗುವ ಪ್ರಮಾಣ ಸಿಕ್ಕ ಸಂತೋಷವಾಯಿತು ಮತ್ತು ಪೂರ್ಣಗುರುವೇ ಸಂದೇಹ ನಿವಾರಣೆ ಮಾಡುತ್ತಾನೆ ಎಂದು ತಿಳಿಯಿತು. ತ್ರೇತಾಯುಗದಲ್ಲಿ ಕಬೀರ ಪರಮೇಶ್ವರರಿಂದ ದೀಕ್ಷೆ ಪಡೆದಿದ್ದರು. ಗರುಡನು ವಿಷ್ಣುವಿನ ವಾಹನವಾದ ಕಾರಣ ವಿಷ್ಣುವಿನ ಮಹಿಮೆ ಹಾಗೂ ಚಮತ್ಕಾರವನ್ನು ಮತ್ತೆ–ಮತ್ತೆ ನೋಡಿದ್ದ ಕಾರಣ ತನ್ನ ಗುರುವಿನಲ್ಲಿ

ಭಾವ ಭಕ್ತಿ ಕಡಿಮೆ ಆಯಿತು. ಆದರೆ ಗುರುದ್ರೋಹಿಯಾಗಲಿಲ್ಲ. ಮತ್ತೆ ಯಾವುದಾದರೂ ಜನ್ಮದಲ್ಲಿ ಮಾನವ ಶರೀರ ಪಡೆದು ಸಂತ ಕಬೀರ ಪರಮೇಶ್ವರಿಂದ ದೀಕ್ಷೆ ಪಡೆದು ಮುಕ್ತಿಯನ್ನು ಪಡೆಯಲು ಇಚ್ಛಿಸಿದನು. ದೀಕ್ಷೆಯ ನಂತರ ಗರುಡನು ತ್ರಿಮೂರ್ತಿಗಳ ಬಳಿ ಹೋಗಿ ಜ್ಞಾನದ ಚರ್ಚೆ ಮಾಡಲು ಚಿಂತಿಸಿದನು. ಗರುಡನು ಬ್ರಹ್ಮಾನ ಬಳಿ ಹೋಗಿ ಅವನ ಬಳಿ ಜ್ಞಾನದ ಚರ್ಚೆ ಮಾಡಿದನು.

### "ಗರುಡ ವಚನ ಬ್ರಹ್ಮಾನಿಗೆ ಪ್ರತಿಯಾಗಿ"

ಬ್ರಹ್ಮಾ ಕಹಾ ತುಮ್ ಕೈಸೆ ಆಯೆ । ಕಹೋ ಗರುಡ ಮೋ'ಹೆ ಅರ್ಥಾಯ್ ॥
ತಬ್ ಹಮ್ ಕಹಾ ಸುನೋಂ ನಿರಂಜನ್ ಪೂತಾ ।
ಆಯಾ ತುಮ್ಹೆಂ ಜಗಾವನ್ ಸೂತಾ ॥
ಜನ್ಮ್-ಮರಣ್ ಏಕ ಝುಂಝುಟ್ ಭಾರೀ ।
ಪೂರ್ಣ ಮೋಕ್ಷ್ ಕರಾಓ ತ್ರಿಪುರಾರೀ ॥

**ಶಬ್ದಾರ್ಥ:–** ಕಬೀರ ಪರಮೇಶ್ವರರಿಂದ ದೀಕ್ಷೆ ಪಡೆದ ಬಳಿಕ ಹಾಗೂ ಪ್ರಪಂಚದ ಹುಟ್ಟಿನ ಕತೆಯನ್ನು ಕೇಳಿ, ಯಾವ ಜ್ಞಾನವು ಪುರಾಣ ಹಾಗೂ ವೇದಗಳಲ್ಲಿದೆಯೋ, ಆ ಜ್ಞಾನವು ಕಬೀರರ ಜ್ಞಾನದಿಂದ ಸಿಗುತ್ತದೆ ಎಂದಾದರೆ ಅದು ಸುಳ್ಳಾಗಿರಲು ಸಾಧ್ಯವಿಲ್ಲ ಎಂದು ಗರುಡನಿಗೆ ಪೂರ್ಣವಾಗಿ ನಂಬಿಕೆ ಬಂದಿತು. ಸೃಷ್ಟಿಯ ಹುಟ್ಟಿನ ಜ್ಞಾನವನ್ನು ಸೃಷ್ಟಿಕರ್ತ ಅಂದರೆ ಪರಮೇಶ್ವರನ ವಿನಃ ಬೇರೆ ಯಾರೂ ತಿಳಿಸಲು ಸಾಧ್ಯವಿಲ್ಲ. ಅವರು ಋಷಿಯಲ್ಲ, ಪರಮೇಶ್ವರರು. ಹೀಗೆ ಯೋಚಿಸುತ್ತಾ ಗರುಡನು ಬ್ರಹ್ಮಾನ ಲೋಕಕ್ಕೆ ಹೋದರು. ಏಕೆಂದರೆ ಬ್ರಹ್ಮಾನನ್ನು ವೇದಗಳ ಜ್ಞಾನಿ ಎಂದು ಕರೆಯುತ್ತಾರೆ. ಬ್ರಹ್ಮಾನು ಗರುಡನು ಬಂದ ಕಾರಣವನ್ನು ತಿಳಿಯಲು ಇಚ್ಛಿಸಿದನು. ಹಾಗಾಗಿ ಗರುಡನನ್ನು ಏಕೆ ಬಂದೆ ಎಂದು ಪ್ರಶ್ನಿಸಿದನು. ಆಗ ಗರುಡನು "ಹೇ ಜ್ಯೋತಿ ನಿರಂಜನ ಪುತ್ರ ಅಂದರೆ ಬ್ರಹ್ಮಾ, ನಾನು ಬಂದ ಕಾರಣನ್ನು ಕೇಳು. ನಾನು ಅಜ್ಞಾನ, ಅಂಧಕಾರದಲ್ಲಿ ಮುಳುಗಿರುವವರನ್ನು ತತ್ವಜ್ಞಾನದ ಮೂಲಕ ಎಬ್ಬಿಸಲು ಅಂದರೆ ಎಚ್ಚರಿಸಲು ಬಂದಿರುವೆ. ಜನನ ಮರಣದ ಜಂಜಾಟವಿದೆ. ನೀವು ನಿಮ್ಮ ಮೋಕ್ಷ ಪಡೆದುಕೊಳ್ಳಿ" ಎಂದು ಹೇಳಿದನು.

### "ಬ್ರಹ್ಮಾ ವಚನ"

ಹಮರಾ ಕೋಈ ನಹೀಂ ಜನ್ಮ್ ದಾತಾ । ಕೇವಲ್ ಏಕ ಹಮಾರೀ ಮಾತಾ ॥
ಪಿತಾ ಹಮಾರಾ ನಿರಾಕಾರ್ ಜಾನೀ । ಹಮ್ ಹೈಂ ಪೂರ್ಣ ಸಾರಂಗಪಾಣೀ ॥
ಹಮರಾ ಮರಣ್ ಕಬಹುಂ ನಹೀಂ ಹೋವೈ ।
ಕೌನ್ ಅಜ್ಞಾನ್ ಮೆಂ ಪಕ್ಷಿ ಸೋವೈ ॥
ತಬಹೀ ಬ್ರಹ್ಮಾ ವಿಮಾನ್ ಮಂಗಾವಾ । ವಿಷ್ಣು, ಶಿವ ಕೋ ತುರಂತ್ ಬುಲಾವಾ ॥
ಗಏ ವಿಮಾನ್ ದೋನೋಂ ಪಾಸಾ । ಪಲ್ ಮೆಂ ಆನ್ ವಿರಾಜೆ ಪಾಸಾ ॥
ಇಂದ್ರ್ ಕುಬೇರ್ ವರುಣ್ ಬುಲಾಏ । ತೇತಿಸ ಕರೋಡ್ ದೇವತಾ ಆಏ ॥
ಆಏ ಋಷಿ ಮುನೀ ಔರ್ ನಾಥಾ । ಸಿದ್ಧ್ ಸಾಧಕ್ ಸಬ್ ಆ ಜಾತಾ ॥
ಬ್ರಹ್ಮಾ ಕಹಾ ಗರುಡ್ ನೀಂದ್ ಮೈಂ ಬೋಲೈ ।
ಕೋರೀ ಝೂಠ್ ಕುಫರ್ ಬಹು ತೋಲೈ ॥
ಕಹ್ ಕೋಈ ಔರ್ ಹೈ ಸಿರ್‌ಜನ್ ಹಾರಾ । ಜನ್ಮ್-ಮರಣ್ ಬತಾವೈ ಹಮಾರಾ ॥
ತಾತೇ ಮೈಂ ಯಹ್ ಮಜಲಿಸ್ ಜೋಡೀ । ಗರುಡ್ ಕೇ ಮನ್ ಕ್ಯಾ ಬಾತಾಂ ದೌಡೀ ॥
ಋಷಿ ಮುನಿ ಅನುಭವ್ ಬತಾತಾ । ಬ್ರಹ್ಮಾ, ವಿಷ್ಣು, ಶಿವ್ ವಿಧಾತಾ ॥
ನಿರ್ಗುಣ್ ಸರಗುಣ್ ಯೇಹೀ ಬನ್ ಜಾವೈ । ಕಬಹು ನಹೀಂ ಮರಣ್ ಮೈಂ ಆವೈ ॥

ಶಬ್ದಾರ್ಥ :– ಬ್ರಹ್ಮಾ ಹೇಳಿದನು, "ಹೇ ಗರುಡನೇ! ನಮ್ಮ ಜನ್ಮ ಮತ್ತು ಮರಣವಾಗುವುದಿಲ್ಲ. ನಮಗೆ ತಂದೆ ತಾಯಿಗಳಿಲ್ಲ, ನಮಗೆ ಕೇವಲ ಒಬ್ಬಳೇ ತಾಯಿ. ನಮ್ಮ ತಂದೆ ನಿರಾಕಾರನು. ನಾವು ಪೂರ್ಣ ಪರಮಾತ್ಮರು (ಸಾರಂಗ ಎಂದರೆ ಬಿಲ್ಲು ಪಾಣಿ ಎಂದರೆ ಕೈ=ಕೈಯಲ್ಲಿ ಬಿಲ್ಲನ್ನು ಹಿಡಿದವನನ್ನು ಕಾಲ ಲೋಕದ ಜೀವಿಗಳು ಪರಮಾತ್ಮ ಎಂದು ಕರೆಯುತ್ತಾರೆ) ಹೇ ಗರುಡ ಪಕ್ಷಿಯೇ, ನೀನು ಅಜ್ಞಾನದ ನಿದ್ರೆ ಮಾಡುತ್ತಿರುವೆ. ಈಗ ಕೇಳು, ನಮ್ಮ ಜನ್ಮ ಅಥವಾ ಮರಣ ಎಂದಿಗೂ ಆಗುವುದಿಲ್ಲ." ಅದೇ ಕ್ಷಣ ಬ್ರಹ್ಮಾ ವಿಮಾನವನ್ನು ತರಿಸಿಕೊಂಡು ವಿಷ್ಣು ಹಾಗೂ ಶಿವನನ್ನು ಕರೆತರಲು ಚಾಲಕನಿಗೆ ಹೇಳಿದನು. ಅವರಿಬ್ಬರನ್ನೂ ಒಂದು ಕ್ಷಣದಲ್ಲಿ ವಿಮಾನವು ತಂದು ಬಿಟ್ಟಿತು. ಅದರ ಜೊತೆಯಲ್ಲೇ 33 ಕೋಟಿ ದೇವ–ದೇವತೆಗಳು, ದೇವತೆಗಳ ರಾಜನಾದ ಇಂದ್ರ, ಕುಬೇರ ಜಲದೇವತೆ ವರುಣ ಮುಂತಾದವರನ್ನು ಕರೆಸಲಾಯಿತು. ಎಂಭತ್ತೆಂಟು ಸಾವಿರ ಋಷಿಗಳು, ಒಂಭತ್ತು ನಾಥರು, ಎಂಭತ್ತನಾಲ್ಕು ಸಿದ್ಧರು ? ಎಲ್ಲರನ್ನೂ ಕರೆಸಲಾಯಿತು. ಇಡೀ ಸಭೆ ಸಿದ್ಧವಾಯಿತು. ಗರುಡನು ನಿದ್ದೆಯಲ್ಲಿ ಬಡಬಡಿಸಿದಂತೆ ಏನೇನೋ ಹೇಳುತ್ತಿದ್ದಾನೆ, ಇದೆಲ್ಲವೂ ಸುಳ್ಳು, ಬ್ರಹ್ಮಾ, ವಿಷ್ಣು, ಶಿವ ? ಇವರಿಗೆ ಜನನ–ಮರಣವುಂಟು ಎಂದು ಗರುಡನು ಹೇಳುತ್ತಿದ್ದಾನೆ. ನಿಮ್ಮನ್ನು ಬಿಟ್ಟು ಸೃಷ್ಟಿಯನ್ನು ಮಾಡುವ ಮತ್ತೊಬ್ಬ ಪರಮಾತ್ಮನಿದ್ದಾನೆ ಆದರೆ ಗರುಡನ ಮನಸ್ಸಿನಲ್ಲಿ ಬೇರೆ ರೀತಿಯಾದ ಆಲೋಚನೆಗಳು ಏಕೆ ಬಂತು ಎಂದು ಚಿಂತಿಸಿ ನಿಮ್ಮ ಈ ಸಭೆಯನ್ನು ಕರೆಯಲಾಗಿದೆ ಎಂದು ಬ್ರಹ್ಮಾನು ಹೇಳಿದನು.

ಎಲ್ಲಾ ಋಷಿ ಮತ್ತು ಮುನಿ (ಸಾಧಕ)ಗಳು ಬ್ರಹ್ಮಾ, ವಿಷ್ಣು, ಮಹೇಶ್ವರರು ಜಗತ್ತಿನ ಉತ್ಪತ್ತಿಕರ್ತರಾದ ಪರಮಾತ್ಮ ಎಂಬುದನ್ನು ತಮ್ಮ ಅನುಭವದಿಂದ ಹೇಳುತ್ತಾರೆ ಎಂದು ಬ್ರಹ್ಮಾ ಹೇಳುತ್ತಾ ಹೋದನು. ಬ್ರಹ್ಮಾ ಸಾಕಾರ ಮತ್ತು ನಿರಾಕಾರನಾಗಿ ಲೀಲೆಗಳನ್ನು ಮಾಡುತ್ತಿರುತ್ತಾನೆ. ಅವನ ಸಾವು ಎಂದಿಗೂ ಆಗುವುದಿಲ್ಲ.

## "ವಿಷ್ಣು ವಚನ"

ಪಕ್ಷೀರಾಜ್ ಯಹ್ ಕ್ಯಾ ಮನ್ ಮೆಂ ಆಈ । ಪಾಪ್ ಲಗ್ಯೆ ಬನಾ ಆಲೋಚಕ್ ಭಾಈ ॥
ಹಮ್ ಸೆ ಔರ್ ಕೌನ್ ಬಡೇರಾ ದಾತಾ । ಹಮ್ ಹೈ ಕರ್ತಾ ಔರ ಚೌಥೀ ಮಾತಾ ॥
ತುಮರೀ ಮತಿ ಅಜ್ಞಾನ್ ಹರಲೀನಿ । ಹಮ್ ಹೈಂ ಪೂರ್ಣ ಕರತಾರ್ ತೀನೀ ॥

ಶಬ್ದಾರ್ಥ :– ವಿಷ್ಣು ಹೇಳಿದನು, "ಹೇ ಪಕ್ಷಿಗಳ ರಾಜನಾದ ಗರುಡನೇ, ನಮ್ಮ ಜನನ ಮರಣವಾಗುವುದೆಂಬ ತಪ್ಪು ಕಲ್ಪನೆ ನಿನ್ನ ಮನಸ್ಸಿನಲ್ಲಿ ಹೇಗೆ ಬಂದಿತು? ನೀನು ನಿಂದನೆಗೆ ಅರ್ಹನು. ನಮಗಿಂತ ದೊಡ್ಡ ದೇವರು ಯಾರಿದ್ದಾರೆ? ನಾವು ಮೂವರು ಹಾಗೂ ನಾಲ್ಕನೆಯವಳಾದ ದುರ್ಗಾ ಮಾತೆಯೇ ಈ ಪ್ರಪಂಚದ ಕರ್ತೃಗಳು. ನಿನ್ನ ಬುದ್ಧಿ ಅಜ್ಞಾನದಿಂದ ಕೊನೆಗೊಂಡಿದೆ. ನಮ್ಮನ್ನು ಬಿಟ್ಟು ಇನ್ಯಾರೋ ಸೃಷ್ಟಿಯ ಉತ್ಪತ್ತಿಕರ್ತ ಎಂದು ಹೇಳುತ್ತಿರುವೆ. ನಾವು ಮೂವರು ಪೂರ್ಣ ಪರಮಾತ್ಮರು ಸೃಷ್ಟಿಯ ಉತ್ಪತ್ತಿ ಕರ್ತೃಗಳು.

## "ಮಹಾದೇವ ವಚನ"

ಕಹ್ ಮಹಾದೇವ್ ಪಕ್ಷೀ ಹೈ ಭೋಲಾ । ಹೃದಯ್ ಜ್ಞಾನ್ ಇನ್ ನಹೀಂ ತೋಲಾ ॥
ಬ್ರಹ್ಮಾ ಬನಾವ್ಯೆ ವಿಷ್ಣು ಪಾಲ್ಯೆ । ಹಮ್ ಸಬ್ ಕಾ ಕರತೇ ಕಾಲ್ಯೆ ॥
ಔರ್ ಬತಾ ಗರುಡ್ ಅಜ್ಞಾನೀ । ಋಷಿ ಬತಾವ್ಯೆ ತುಮ್ ನಹೀಂ ಮಾನೀ ॥
ಚಲೋ ಮಾತಾ ಸೆ ಪೂಛ್ಯೆ ಬಾತಾ । ನಿರ್ಣಯ್ ಕರೋ ಕೌನ್ ಹೈ ವಿಧಾತಾ ॥
ಸಬನೇ ಕಹಾ ಸಹೀ ಹೈ ಬಾನೀ । ನಿರ್ಣಯ್ ಕರೇಗೀ ಮಾತಾ ರಾನೀ ॥
ಸಬ್ ಉಠ್ ಗಏ ಮಾತಾ ಪಾಸಾ । ಆಪನ್ ಸಮಸ್ಯಾ ಕರೀ ಪ್ರಕಾಶಾ ॥

**ಶಬ್ದಾರ್ಥ :–** ಮಹಾದೇವ ಅಂದರೆ ಶಿವನು ಹೀಗೆಂದನು, " ಈ ಪಕ್ಷಿಯು ಬಹಳ ಮುಗ್ಧವಾಗಿದೆ. ಇದು ತನ್ನ ಬುದ್ಧಿಯನ್ನು ಓರೆಗೆ ಹಚ್ಚದೆ ಹೇಳುತ್ತಿದೆ. ಬ್ರಹ್ಮಾ ಜೀವವನ್ನು ಹುಟ್ಟಿಸುತ್ತಾನೆ. ವಿಷ್ಣು ಪಾಲಿಸುತ್ತಾನೆ. ನಾನು ಸಂಹಾರ ಮಾಡುತ್ತೇನೆ. ಹೇ ಅಜ್ಞಾನಿ ಗರುಡನೇ ! ನೀನೇ ಹೇಳು, ಬೇರೆ ಯಾವ ಸಮರ್ಥ ಪ್ರಭು ಇದ್ದಾನೆ?" ನಂತರ ಶಿವನು ಅಲ್ಲಿ ನೆರೆದಿದ್ದ ಸಭೆಗೆ ಹೀಗೆಂದನು, "ನೀವೆಲ್ಲಾ ನಡೆಯಿರಿ, ದುರ್ಗಾಮಾತೆಯ ಬಳಿ ಹೋಗಿ ಪೂರ್ಣ ಪರಮಾತ್ಮನು ಯಾರು? ಎಂದು ತೀರ್ಮಾನ ತೆಗೆದುಕೊಂಡು ಬರೋಣ". ಶಿವನ ಮಾತಿಗೆ ಎಲ್ಲರೂ ಅನುಮೋದನೆ ನೀಡಿದರು. ಅವರೆಲ್ಲರೆಂದರು, "ನಿಮ್ಮ ಮಾತು ಸತ್ಯ. ಮಾತೆಯು ತೀರ್ಮಾನ ತೆಗೆದುಕೊಳ್ಳಲಿ". ಸಭೆಯಲ್ಲಿ ಹಾಜರಿದ್ದ ಎಲ್ಲರೂ ಎದ್ದು ಮಾತೆಯ ಬಳಿ ಹೊರಟರು ಹಾಗೂ ತಮ್ಮ ಸಮಸ್ಯೆಯನ್ನು ತಿಳಿಸಿದರು.

### "ಮಾತಾ ವಚನ"

ಕಹಾ ಮಾತಾ ಗರುಡ್ ಬತಾಓ । ಔರ್ ಕರ್ತಾ ಹೈ ಕೌನ್ ಸಮಝಾಓ ।

**ಶಬ್ದಾರ್ಥ :–** ದುರ್ಗಾಮಾತೆಯು ಗರುಡನನ್ನು ಕುರಿತು, "ನೀನೇ ಹೇಳು, ಈ ಪ್ರಪಂಚದ ವಿಧಾತನು ಅಂದರೆ ಹುಟ್ಟಿಸುವವನು ಇವರನ್ನು ಬಿಟ್ಟು ಇನ್ಯಾರಿದ್ದಾರೆ?" ಎಂದು ಪ್ರಶ್ನಿಸಿದಳು.

### "ಗರುಡ ವಚನ"

ಮಾತ್ ತುಮ್ ಜಾನತ್ ಹೋ ಸಾರೀ । ಸಚ್ಚ್ ಬತಾ ಕಹೇ ನ್ಯಾಕಾರೀ ॥
ಸಭಾ ಮೆಂ ಝೂಠೀ ಬಾತ್ ಬನಾವೈ । ವಾಕಾ ವಂಶ್ ಸಮೂಲಾ ಜಾವೈ ॥
ಮೈಂ ಸುನಾ ಔರ್ ಆಂಖೋಂ ದೇಖಾ । ಕರ್ತಾ ಅವಿಗತ್ ಅಲಗ್ ವಿಶೇಷಾ ॥
ಜಹಾಂ ಸೆ ಜನ್ಮ ಹುಆ ತುಮ್ಹಾರಾ । ವಹ್ ಹೈ ಸಬ್‌ಕಾ ಸರ್‌ಜನ್‌ಹಾರಾ ॥
ವೇದ್ ಜಾಕಾ ನಿತ್ ಗುಣ್ ಗಾವೈಂ । ಕೇವಲ್ ವಹೀ ಏಕ ಅಮರ್ ಬತಾವೈ ॥
ಮರಹೆಂ ಬ್ರಹ್ಮಾ ವಿಷ್ಣು ನರೇಶಾ । ಮರ್ ಹೈಂ ಸಬ್ ಶಂಕರ್ ಶೇಷಾ ॥
ಅಮರ್ ಪುರುಷ್ ಸತ್ ಪುರ್ ರಹತಾ ।
ಅಪನೇ ಮುಖ್ ಸತ್ಯ ಜ್ಞಾನ್ ವಹ್ ಕಹತಾ ॥
ವೇದ್ ಕಹೇ ವಹ್ ಪೃಥ್ವೀ ಪರ್ ಆವೈ । ಭೂಲೆ ಜೀವನ್ ಕೋ ಜ್ಞಾನ್ ಬತಲಾವೈ ॥
ಕ್ಯಾ ಯೆ ಝೂಠೆ ಶಾಸ್ತ್ರ ಸಾರೇ । ತುಮ್ ವ್ಯರ್ಥ್ ಬನ್ ಬೈಠೆ ಸಿರ್‌ಜನ್‌ಹಾರೆ ॥
ಮಾನ್ ಬಢಾಈ ಛೋಡೋ ಭಾಈ । ತಾಕಿ ಭಕ್ತಿ ಕರೇ ಅಮರಾಪುರ್ ಜಾಈ ॥
ಮಾತಾ ಕಹನಾ ಸಾಚೀ ಬಾತಾ । ಬತಾಓ ದೇವೀ ಹೈ ಕೌನ್ ವಿಧಾತಾ ॥

**ಶಬ್ದಾರ್ಥ:–** ಗರುಡನೆಂದನು, "ಹೇ ಮಾತಾ ! ನಿನಗೆ ಎಲ್ಲವೂ ತಿಳಿದಿದೆ. ನ್ಯಾಯಾಧೀಶನಾದವನು ಸತ್ಯವನ್ನೇ ನುಡಿಯಬೇಕು. ಯಾವ ನ್ಯಾಯಾಧೀಶನು ಸಭೆಯಲ್ಲಿ ಸುಳ್ಳು ಹೇಳುವನೋ ಅವನ ವಂಶವು ನಾಶವಾಗುವುದೆನ್ನುವುದು ಪರಮಾತ್ಮನ ನಿಯಮ. ಹಾಗಾಗಿ ಹೇ ಮಾತಾ, ಯಾವ ಪರಮೇಶ್ವರನು ನಿನ್ನನ್ನೂ ಸೃಷ್ಟಿ ಮಾಡಿದ್ದಾನೋ, ಅವನೇ ಎಲ್ಲರನ್ನೂ ಸೃಷ್ಟಿಸುತ್ತಾನೆ. ನಾನು ಕಣ್ಣಿಂದ ನೋಡಿದ್ದೇನೆ ಹಾಗೂ ತತ್ವದರ್ಶಿಯಿಂದ ಕೇಳಿದ್ದೇನೆ. ಅವನು ದಿವ್ಯ ಅವಿಗತ ವಿಶೇಷನು. ಅವನು ಇವರಿಗಿಂತ ಭಿನ್ನವಾಗಿದ್ದಾನೆ (ಯಾರ ರಹಸ್ಯವು ಗುಪ್ತವಾಗೇ ಉಳಿಯುವುದೋ ಅವನು ಅವಿಗತನು). ವೇದಗಳಲ್ಲಿ ಅವನ ಮಹಿಮೆಯನ್ನೇ ವರ್ಣಿಸಲಾಗಿದೆ. ಹಾಗೂ ಕೇವಲ ಅವನು ಮಾತ್ರ ಅವಿನಾಶಿ ಎಂದು ಹೇಳಲಾಗಿದೆ. ಬ್ರಹ್ಮಾ, ವಿಷ್ಣು, ಮಹೇಶ್ವರರಿಗೆ ಸಾವುಂಟು. ಅವಿನಾಶಿ ಪರಮಾತ್ಮ ಸತ್ಯಲೋಕದಲ್ಲಿ ವಾಸಿಸುತ್ತಾನೆ. ಅವನೇ ಭೂಮಿಯ ಮೇಲೆ ಪ್ರತ್ಯಕ್ಷನಾಗಿ ನಿಜವಾದ ಆಧ್ಯಾತ್ಮ ಜ್ಞಾನವನ್ನು ತನ್ನ ಬಾಯಿಂದ ವಾಣಿಯ ಮೂಲಕ ಹೇಳುತ್ತಾನೆ. ಅಜ್ಞಾನದಿಂದ ಸತ್ಯ ಭಕ್ತಿಯ ಮಾರ್ಗ ತಪ್ಪಿ ಅಲೆದಾಡುತ್ತಿರುವ ಒಳ್ಳೆಯ ಸಾಧಕರಿಗೆ ಸತ್ಯ ಮಾರ್ಗದ ಜ್ಞಾನವನ್ನು ನೀಡುತ್ತಾನೆ. ಇದಕ್ಕೆ ವೇದಗಳಲ್ಲಿ

ಪುರಾವೆಗಳಿವೆ. ಈ ಶಾಸ್ತ್ರಗಳೆಲ್ಲಾ ಸುಳ್ಳೇ? ಹೇ ಮೂರೂ ದೇವತೆಗಳೇ, ನೀವು ನಕಲಿ ದೇವತೆಗಳಾಗಿ ಕುಳಿತು ಬಿಟ್ಟಿದ್ದೀರಾ. ಹೇ ಬ್ರಹ್ಮಾ, ವಿಷ್ಣು, ಮಹೇಶ್ವರರೇ, ನಿಮ್ಮ ದೊಡ್ಡಸ್ತಿಕೆ ಬಿಟ್ಟು ನಿಮ್ಮನ್ನು ನೀವು ಉದ್ಧಾರ ಮಾಡಿಕೊಳ್ಳಿ. ಆ ಪೂರ್ಣ ಪರಮಾತ್ಮನನ್ನು ಆರಾಧಿಸಿ''. ಆಗ ಗರುಡನು ಮಾತೆಯ ಕಡೆಗೆ ತಿರುಗಿ ''ಹೇ ಮಾತಾ, ಸತ್ಯವನ್ನು ಹೇಳು, ಈ ಪ್ರಪಂಚದ ಸೃಷ್ಟಿಕರ್ತನು ಯಾರು?'' ಎಂದು ಪ್ರಾರ್ಥಿಸಿದನು.

## "ಮಾತಾ (ದುರ್ಗಾ) ವಚನ"

ಮಾತಾ ಕಹ್ ಸುನೋ ರೇ ಪೂತಾ । ತುಮ್ ಜೋಗೀ ತೀನೋಂ ಅವಧೂತಾ ॥
ಭಕ್ತಿ ಕರೀ ನಾ ಮಾಲಿಕ್ ಪಾಏ । ಅಪನೆ ಕೋ ತುಮ್ ಅಮರ್ ಬತಾಏ ॥
ವಹ್ ಕರ್ತಾ ಹೈ ಸಬ್ ಸೆ ನ್ಯಾರಾ । ಹಮ್ ತುಮ್ ಸಬ್‌ಕಾ ಸಿರ್‌ಜನ್‌ಹಾರಾ ॥
ಗರುಡ್ ಕಹತ್ ಹೈ ಸಚ್ಚೀ ಬಾನೀ । ಐಸೆ ಬಚನ್ ಕಹಾ ಮಾತಾ ರಾನೀ ॥
ಸಬ್ ಉಠ ಗಏ ಅಪನೇ ಅಸ್ಥಾನಾ । ಸಾಚ್ ಬಚನ್ ಕಾಹು ನಹೀಂ ಮಾನಾ ॥

**ಶಬ್ದಾರ್ಥ:–** ದುರ್ಗಾ ಮಾತೆಯು ಬ್ರಹ್ಮಾ, ವಿಷ್ಣು, ಶಿವರನ್ನು ಕುರಿತು ಹೀಗೆಂದಳು, ''ಹೇ ಮಕ್ಕಳಿರಾ, ಕೇಳಿ, ನೀವು ಮೂವರೂ ಸ್ವಯಂ ಸಾಧಕರು. ಸತ್ಯ ಭಕ್ತಿಯನ್ನು ಮಾಡಲಿಲ್ಲ. ನಿಮ್ಮನ್ನು ನೀವು ಅಮರರೆಂದು ಹೇಳುತ್ತಿದ್ದೀರಾ. ನಿಮಗೆ ಪರಮಾತ್ಮನು ಸಿಕ್ಕಿಲ್ಲ. ಸೃಷ್ಟಿಯ ಉತ್ಪತ್ತಿ ಮಾಡುವವನು ಬೇರೆಯವನೇ ಇದ್ದಾನೆ. ಅವನೇ ನಿಮ್ಮ ಹಾಗೂ ನಮ್ಮೆಲ್ಲಾ ಜೀವಿಗಳ ಆತ್ಮಗಳ ಸೃಷ್ಟಿ ಮಾಡಿದ್ದಾನೆ.'' ಮಾತೆಯು ಈ ಮಾತನ್ನು ಹೇಳಿದಾಕ್ಷಣ ಸಭೆಯಲ್ಲಿದ್ದ ಎಲ್ಲರೂ ಹಾಗೂ ಬ್ರಹ್ಮಾ, ವಿಷ್ಣು, ಮಹೇಶ್ವರರು ಎದ್ದು ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು. ಆದರೆ ಮಾತೆಯ ಈ ಮಾತನ್ನು ನಂಬಲಿಲ್ಲ.

## "ಗರುಡ ವಚನ"

ಬ್ರಹ್ಮಾ ವಿಷ್ಣು ಮೋಹೆ ಬುಲಾಯಾ। ಮಹಾದೇವ್ ಭೀ ವಹಾಂ ಬೈಠ್ ಪಾಯಾ॥
ತೀನೋಂ ಕಹೇ ಕೋಈ ದೋ ಪ್ರಮಾಣಾ । ತಬ್ ಹಮ್ ತೋಹೆ ಸಾಚಾ ಜಾನಾ॥
ಮೈಂ ಕಹಾ ಗುಂಗಾ ಗುಡ್ ಖಾವೈ। ದುಜೆ ಕೋ ಸ್ವಾದ್ ಕ್ಯಾ ಬತಲಾವೈ॥
ಮೈಂ ಜಾತ್ ಹೂಂ ಸತ್‌ಗುರು ಪಾಸಾ। ಲಾ ಪ್ರಮಾಣ್ ಕರೂ ಭ್ರಮ್ ವಿನಾಶಾ॥
ತ್ರಿದೇವ್ ಕಹೆಂ ಲೋ ಪರೀಕ್ಷಾ ಹಮಾರೀ। ಪೂರ್ಣ ಕರೆಂ ತೇರೀ ಆಶಾ ಸಾರೀ॥
ಹಮ್ ಹೀ ಮಾರೆಂ ಹಮ್ ಹೀ ಬಚಾವೈಂ। ಹಮ್ ರಹತ್ ಸದಾ ನರ್ದಾವೈಂ॥
ಗರುಡ್ ಕಹಾ ಹಮ್ ಕರೆಂ ಪರೀಕ್ಷಾ। ತುಮ್ ಪೂರ್ಣ ತೋ ಲೂಂ ತುಮ್ಹಾರೀ ದೀಕ್ಷಾ॥
ಉಡಾ ವಹಾಂ ಸೇ ಗುರು ಪಾಸೇ ಆಯಾ। ಸಬ್ ವೃತ್ತಾಂತ್ ಕಹ್ ಸುನಾಯಾ॥

**ಶಬ್ದಾರ್ಥ :–** ಬ್ರಹ್ಮಾ, ವಿಷ್ಣು, ಮಹೇಶ್ವರರು ಗರುಡನನ್ನು ವಿಷ್ಣು ಲೋಕಕ್ಕೆ ಕರೆಸಿಕೊಂಡು ಹೀಗೆಂದರು, "ಹೇ ಗರುಡನೇ, ನೀನು ನಮಗಿಂತ ಮೇಲೆ ಯಾವುದೋ ಒಂದು ಸಮರ್ಥ ಶಕ್ತಿ ಇದೆ ಎನ್ನುವುದಕ್ಕೆ ಸಾಕ್ಷಿ ಕೊಡು. ನಿನ್ನ ಅನುಭವವನ್ನು ಹೇಳು. ಆಗ ನಾವು ನಿನ್ನ ಮಾತನ್ನು ನಂಬುತ್ತೇವೆ." ಆಗ ಗರುಡನು, ಹೇಗೆ ಮೂಗನು ಬೆಲ್ಲವನ್ನು ತಿಂದು ಬೇರೆಯವರಿಗೆ ಅದರ ರುಚಿಯನ್ನು ಹೇಳಲಾಗುವುದಿಲ್ಲವೋ ಅದರ ಆನಂದವನ್ನು ಸ್ವತಃ ತಾನೇ ಅನುಭವಿಸುತ್ತಾನೋ, ಸ್ವತಃ ಪ್ರಸನ್ನನಾಗಿರುತ್ತಾನೋ ಹಾಗೆ ನಾನು ನನ್ನ ಅನುಭವವನ್ನು ನಿಮಗೆ ತಿಳಿಸಲು ಸಾಧ್ಯವಿಲ್ಲ. ನಾನು ಸದ್ಗುರುವಿನಿಂದ ಸತ್ಯವಾದ ಆಧ್ಯಾತ್ಮಿಕ ಜ್ಞಾನವನ್ನು ಕೇಳಿದ್ದೇನೆ ಹಾಗೂ ಪೂರ್ಣ ಪರಮಾತ್ಮನನ್ನು ಕಣ್ಣುಗಳಿಂದ ನೋಡಿದ್ದೇನೆ. ನಿಮಗೆ ಸದ್ಗುರು ಪರಮಾತ್ಮನ ದರ್ಶನ ಮಾಡಿಸಬಲ್ಲೆ. ನಾನು ನನ್ನ ಸದ್ಗುರುವಿನ ಬಳಿ ಹೋಗುತ್ತೇನೆ. ನಿಮಗೆ ನಂಬಿಕೆ ಬರಲು ಹಾಗೂ ನಿಮ್ಮ ಸಂದೇಹ ದೂರವಾಗಲು ನಾನು ಯಾವುದಾದರೂ ಸಾಕ್ಷಿ ತರುತ್ತೇನೆ" ಎಂದನು. ಆಗ ಆ ಮೂರು ದೇವತೆಗಳು, "ನೀನು

ನಮ್ಮನ್ನು ಪರೀಕ್ಷಿಸಿ ನೋಡು. ನಿನ್ನ ಮನದಾಸೆಯನ್ನು ನಾವು ಈಡೇರಿಸುವೆವು. ನಾವೇ ಉತ್ಪತ್ತಿ ಕರ್ತೃಗಳು. ನಾವೇ ಪಾಲಕರು ಹಾಗೂ ನಾವೇ ಸಂಹಾರಕರು. ನಾವೇ ಸಾವಿನಿಂದ ಪಾರು ಮಾಡುವವರು. ನಾವು ಮೂವರೂ ಸಂಪೂರ್ಣ ಸ್ವತಂತ್ರರು. ನಾವು ಏನು ಬಯಸುತ್ತೇವೋ ಅದನ್ನೇ ಮಾಡಬಲ್ಲೆವು." ಎಂದು ಹೇಳಿದರು. ಆಗ ಗರುಡನು ಹೀಗೆಂದನು, "ನಾನು ನಿಮ್ಮನ್ನು ಪರೀಕ್ಷಿಸುವೆ. ಒಂದು ವೇಳೆ ನೀವೇ ಪೂರ್ಣ ಪರಮಾತ್ಮ ಎಂದು ಸಾಬೀತಾದರೆ ನಾನು ನಿಮ್ಮ ಶಿಷ್ಯನಾಗುವೆ". ಗರುಡನು ಅಲ್ಲಿಂದ ಹಾರುತ್ತಾ ಹೋಗಿ ಸದ್ಗುರು ಕಬೀರರ ಬಳಿ ಬಂದನು. ಕಬೀರರು ಆ ಸಮಯದಲ್ಲಿ ಯೋಗ್ ಜೀತ್ ಎಂಬ ಹೆಸರಿನಲ್ಲಿ ಪ್ರತ್ಯಕ್ಷರಾಗಿದ್ದರು. ಗರುಡನು ಯೋಗ್ ಜೀತ್ (ಕಬೀರ)ರಿಗೆ ಎಲ್ಲಾ ವೃತ್ತಾಂತವನ್ನೂ ತಿಳಿಸಿದನು.

**"ಸತ್‌ಗುರು (ಕಬೀರ್) ವಚನ"**

ಗರುಡ್ ಸುನೋ ಬಂಗ್ ದೇಶ್ ಕೋ ಜಾಓ  
ಬಾಲಕ್ ಮರೇಗಾ ಕಹೋ ಉಸೇ ಬಚಾಓ ॥  
ದಿನ್ ತೀನ್ ಕೀ ಆಯು ಶೇಷಾ । ಕರೋ ಜೀವಿತ್ ಬ್ರಹ್ಮಾ ವಿಷ್ಣು ಮಹೇಶಾ ॥  
ಫಿರ್ ಹಮ್ ಪಾಸ್ ಆನಾ ಭಾಈ । ಹಮ್ ಬಾಲಕ್ ಕೋ ದೇವೈಂ ಜಿವಾಈ ॥  
ಬಂಗ್ ದೇಶ್ ಮೆಂ ಗರುಡ್ ಗಯೋ, ಬಾಲಕ್ ಲಿಯಾ ಸಾಥ್ ।  
ತ್ರಿದೇವಾ ಸೇ ಅರ್ಜ್ ಕರೀ, ಜೀವನ್ ದೆ ಬಾಲಕ್ ಕರೋ ಸುನಾಥ್ ॥

**ಶಬ್ದಾರ್ಥ:– ಕಬೀರರು ಹೀಗೆಂದರು, "ಹೇ ಗರುಡನೇ, ನೀನು ವಂಗದೇಶಕ್ಕೆ (ಈಗಿನ ಬಂಗಾಳ ದೇಶ) ಹೋಗು. ಅಲ್ಲಿ ಒಬ್ಬ ಹುಡುಗನ ಆಯುಷ್ಯ ಕೇವಲ ಮೂರು ದಿನ ಬಾಕಿ ಉಳಿದಿದೆ. ಅವನ ಸಾವುಂಟಾಗುವುದು. ಆ ಬಾಲಕನನ್ನು ಬ್ರಹ್ಮಾ, ವಿಷ್ಣು, ಮಹೇಶ್ವರ ಬಳಿ ತೆಗೆದುಕೊಂಡು ಹೋಗು. ಆ ಬಾಲಕನನ್ನು ಬದುಕಿಸಲು ಆ ಮೂಕರನ್ನು ಕೇಳು. ಅವರಿಂದ ಅದು ಸಾಧ್ಯವಿಲ್ಲ. ನಂತರ ಆ ಬಾಲಕನನ್ನು ನನ್ನ ಬಳಿ ಕರೆದುಕೊಂಡು ಬಾ" ಎಂದು ಹೇಳಿದರು. ಗರುಡನು ತನ್ನ ಸದ್ಗುರುವಿನ ಆದೇಶದ ಪ್ರಕಾರ ವಂಗದೇಶದಿಂದ ಬಾಲಕನನ್ನು ತೆಗೆದುಕೊಂಡು ಮೂರೂ ದೇವತೆಗಳ ಬಳಿ ತೆರಳಿದನು ಹಾಗೂ ಆ ಬಾಲಕನ ಆಯುಷ್ಯವನ್ನು ವೃದ್ಧಿಸಿ ಜೀವದಾನ ಮಾಡಿರೆಂದೂ, ಹಾಗೆ ಮಾಡಿದರೆ ನೀವೇ ಸಮರ್ಥ ಪರಮಾತ್ಮನೆಂದು ನಾನು ಒಪ್ಪಿಕೊಳ್ಳುವೆ ಎಂದೂ ಹೇಳಿದನು.**

**"ತ್ರಿದೇವ ವಚನ"**

ಧರ್ಮ್‌ರಾಜ್ ಪರ ಹೈ ಲೇಖಾ ಸಾರಾ । ಬಾಸೇ ಜಾನೇ ಸಬ್ ವಿಚಾರಾ ॥  
ಗರುಡ್ ಔರ ಬಾಲಕ್ ಸಾರೆ । ಗಏ ಧರ್ಮ್‌ರಾಜ್ ದರ್‌ಬಾರೆ ॥  
ಧರ್ಮ್‌ರಾಜ್ ಸೆ ಆಯು ಜಾನೀ । ದಿನ್ ತೀನ್ ಶೇಷ್ ಬಖಾನೀ ॥  
ಯಾಕೀ ಆಯು ಬಢೈ ನಾಹೀಂ । ಮೃತ್ಯು ಅತಿ ನಿಯಡೆ ಆಯೀ ॥  
ತ್ರಿದೇವ್ ಕಹಂ ಆಪ ರಾಖೋ ಲಾಜಾ ।  
ಹಮ್ ಕ್ಯಾ ಮುಖ್ ದಿಖಾವೈಂ ಧರ್ಮ್‌ರಾಜಾ ॥  
ಧರ್ಮ್ ಕಹ್ ಆಪನ್ ಆಯು ದೇ ಭಾಈ ।  
ತೋ ಬಾಲಕ್ ಕೀ ಆಯು ಬಢ್ ಜಾಈ ॥  
ಚಲೇ ತೀನೋಂ ನಹೀಂ ಪಾರ್ ಬಸಾಈ । ಬನೇ ಬೈಠೆ ಥೆ ಸಮರ್ಥ್ ರಾಈ ॥  
ಸುನ್ ಗರುಡ್ ಯಹ್ ಸತ್ಯ ಹೈ ಭಾಈ । ಆಈ ಮೃತ್ಯು ನ ಟಾಲೀ ಜಾಈ ॥

**ಶಬ್ದಾರ್ಥ:– ಆ ಮೂರೂ ದೇವತೆಗಳು ಹೇಳಿದರು, "ಧರ್ಮರಾಯನ ಬಳಿ ಎಲ್ಲಾ ಜೀವಿಗಳ ಜನನ–ಮರಣದ ಲೆಕ್ಕವಿದೆ. ಅವನ ಬಳಿ ಹೋಗಿ ಮಾತನಾಡುತ್ತೇವೆ." ಗರುಡ, ಆ ಬಾಲಕ ಹಾಗೂ**

ಆ ಮೂರೂ ದೇವತೆಗಳು ಧರ್ಮರಾಯನ (ಕಾಲಬ್ರಹ್ಮನ ನ್ಯಾಯಾಧೀಶ) ಬಳಿ ತೆರಳಿದರು ಹಾಗೂ ಬಾಲಕನ ಆಯುಷ್ಯ ಎಷ್ಟು ಉಳಿದಿದೆ ಎಂದು ಪತ್ತೆ ಮಾಡಿದರು. ಆಗ ಮೂರು ದಿನ ಇದೆ ಎನ್ನುವುದು ತಿಳಿಯಿತು. ಅವನ ಸಾವು ಅತ್ಯಂತ ಸಮೀಪದಲ್ಲಿದೆ ಎಂದು ಧರ್ಮರಾಯನು ತಿಳಿಸಿದನು. ಆಯುಷ್ಯವನ್ನು ಹೆಚ್ಚಿಸಲಾಗುವುದಿಲ್ಲ. ನಂತರ ಆ ಮೂರು ದೇವತೆಗಳು ಧರ್ಮರಾಯನ ಬಳಿ ಬಂದು ಹೀಗೆಂದರು, "ಹೇ ಧರ್ಮರಾಜ, ನಾವು ನಿಮ್ಮ ಆಸ್ಥಾನಕ್ಕೆ ಬಂದಿದ್ದೇವೆ. ನಮಗೆ ಗೌರವ ಕೊಟ್ಟು ಈ ಬಾಲಕನ ಆಯುಷ್ಯವನ್ನು ವೃದ್ಧಿಸು". ಆಗ ಧರ್ಮರಾಜನು, ನಿಮ್ಮಲ್ಲಿ ಯಾರಾದರೂ ಆಯುಷ್ಯವನ್ನು ನೀಡಿದರೆ ನಿಮ್ಮ ಸಾವು ಉಂಟಾಗುತ್ತದೆ, ಬಾಲಕನ ಆಯುಷ್ಯ ವೃದ್ಧಿಸುತ್ತದೆ". ಎಂದು ಹೇಳಿದನು. ಈ ಮಾತನನ್ನು ಕೇಳಿದ ತಕ್ಷಣ ತಮ್ಮನ್ನು ತಾವು ಸ್ವಯಂಭು ಎಂದು ತಿಳಿದಿದ್ದ ಮೂವರೂ ದೇವತೆಗಳು ಅಲ್ಲಿಂದ ಎದ್ದು ಹೊರಟು ಹೋದರು. ಯಾರಿಗೆ ಸಾವು ಬರುವುದೋ ಅದನ್ನು ತಡೆಯಲು ಸಾಧ್ಯವಿಲ್ಲ ಎಂದು ಗರುಡನಿಗೆ ಹೇಳುತ್ತಾ ಅಲ್ಲಿಂದ ಹೊರಟು ಹೋದರು.

## "ಗರುಡ ವಚನ"

ಸಮರ್ಥ್ ಮೆಂ ಗುಣ್ ಐಸಾ ಬತಾಯಾ ।
ಆಯು ಬಢಾವೈ ಔರ ಅಮರ್ ಕರ್‌ವಾಯಾ ॥
ಅಬ್ ಮೈಂ ಜಾಊಂ ಸಮರ್ಥ್ ಪಾಸಾ । ಬಾಲಕ್ ಬಚ್ ನೇ ಕೀ ಪೂರೀ ಆಶಾ ॥
ಗಯಾ ಗರುಡ್ ಕಬೀರ್ ಕೀ ಶರಣಾ ।
ದಯಾ ಕರೋ ಹೋ ಸಾಹಬ್ ಜರಣಾ (ವಿಶ್ವಾಸ್) ॥

**ಶಬ್ದಾರ್ಥ:–** ಸಾಧಕನ ಆಯಸ್ಸನ್ನು ವೃದ್ಧಿಸುತ್ತಾನೆ ಹಾಗೂ ಜನ್ಮ–ಮರಣವನ್ನು ಎಂದೆಂದಿಗೂ ಬರದ ಹಾಗೆ ಕೊನೆಗೊಳ್ಳಿಸಿ ಅಮರನನ್ನಾಗಿ ಮಾಡುತ್ತಾನೆ ಎಂದು ಸಮರ್ಥದಲ್ಲಿ ಹೇಳಲಾಗಿದೆ ಎಂದು ಗರುಡನು ಹೇಳಿದನು. ನಂತರ "ನಾನು ಸಮರ್ಥ ಪರಮೇಶ್ವರರಲ್ಲಿಗೆ ಹೋಗುತ್ತೇನೆ. ಹುಡುಗನ ಸಾವು ಮುಂದೂಡಬಹುದು ಎನ್ನುವ ಸಂಪೂರ್ಣ ಆಸೆ ಇದೆ ಎಂದು ಹೇಳುತ್ತಾ ಗರುಡನು ಆ ಹುಡುಗನನ್ನು ಅವನ ಮನೆಯಲ್ಲಿ ಬಿಟ್ಟನು ಹಾಗೂ ಕಬೀರ ಪರಮೇಶ್ವರನ ಬಳಿ ಹೋಗಿ ಹೀಗೆಂದನು, 'ಹೇ ಪರಮೇಶ್ವರ! ಮಗುವನ್ನು ಬದುಕಿಸುವ ಕೃಪೆ ಮಾಡಿ. ಜನತೆಗೆ ನಿಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಬರಲಿ.

## "ಕಬೀರ್ ಸಾಹೇಬರ ವಚನ"

ಸುನೋ ಗರುಡ್ ಏಕ್ ಅಮರ್ ಬಾನೀ ।
ಯಹ್ ಅಮೃತ್ ಲೇ ಬಾಲಕ್ ಪಿಲಾನೀ ॥
ಜೀವೈ ಬಾಲಕ್ ಉಮರ್ ಬಢ್ ಜಾವೈ । ಜಗ್ ಬಿಚರೆ ಬಾಲಕ್ ನಿರ್ದಾವೈ ॥

ಬಾಲಕ್ ಲಾನಾ ಮೇರೆ ಪಾಸಾ । ನಾಮ್ ದಾನ್ ಕರ್ ಕಾಲ್ ವಿನಾಶಾ ॥
ಜೈಸಾ ಕಹಾ ಗರುಡ್ ನೆ ಕೀನ್ಹಾ । ಬಾಲಕ್ ಕೂಂ ಜಾ ಅಮೃತ್ ದೀನಾ ।
ಲೇ ಬಾಲಕ್ ತುರಂತ್ ಹೀ ಆಏ । ಸತ್‌ಗುರು ಸೇ ದೀಕ್ಷಾ ಪಾಏ ॥

ಆಶೀರ್ವಾದ್ ದಿಯಾ ಸತ್‌ಗುರು ಸ್ವಾಮೀ । ದಯಾ ಕರಿ ಪ್ರಭು ಅಂತರ್ಯಾಮೀ ॥
ಬದಲಾ ಧರ್ಮ್‌ರಾಜ್ ಕಾ ಲೇಖಾ । ಬ್ರಹ್ಮಾ ವಿಷ್ಣು ಶಿವ್ ಆಂಖೋಂ ದೇಖಾ ॥
ಗಏ ಫಿರ್ ಧರ್ಮ್‌ರಾಜ್ ದರ್‌ಬಾರಾ । ಲೇಖಾ ಫಿರ್ ದಿಖಾಊ ತುಮ್ಹಾರಾ ॥
ಧರ್ಮ್‌ರಾಜ್ ಜಬ್ ಖಾತಾ ಖೋಲಾ । ಅಚರ್ಜ್ ದೇಖ್ ಮುಖ್ ಸೆ ಬೋಲಾ ॥
ಪರಮೇಶ್ವರ್ ಕಾ ಯಹ್ ಖೇಲ್ ನಿರಾಲಾ । ಉಸ್‌ಕಾ ಕ್ಯಾ ಕರತ್ ಹೈ ಕಾಲಾ ॥

ವೋ ಸಮರ್ಥ್ ರಾಖನ್ ಹಾರಾ । ವಾನೇ ಲೇಖ್ ಬದಲ್ ದಿಯಾ ಸಾರಾ ॥
ಸೌ ವರ್ಷ್ ಯಹ್ ಬಾಲಕ್ ಜೀವೈ । ಭಕ್ತಿ ಜ್ಞಾನ್ ಸುಧಾ ರಸ್ ಪೀವೈ ॥
ಯಹ್ ಭೀ ಲೇಖ್ ಇಸೀ ಕೇ ಮಾಹೀಂ । ಆಂಖೋಂ ದೇಖೋ ಝೂಠೀ ನಾಹೀಂ ॥
ದೇಖಾ ಲೇಖಾ ತೀನೋಂ ದೇವಾ । ಅಚರ್ಜ ಹುಆ ಕಹೂಂ ಕ್ಯಾ ಭೇವಾ ॥
ಬೋಲೇ ಬ್ರಹ್ಮಾ ವಿಷ್ಣು ಮಹೇಶಾ । ಪರಮ್ ಪುರುಷ್ ಹೈ ಕೋಈ ವಿಶೇಷಾ ॥
ಜೋ ಚಾಹೆ ವಹ್ ಮಾಲಿಕ್ ಕರಸೀ । ವಾಕೀ ಶರಣ್ ಫಿರ್ ಕೈಸೆ ಮರಸೀ ।
ಪಕ್ಷೀರಾಜ್ ತುಮ್ ಸಾಚೇ ಪಾಯೇ । ನಾಹಕ್ ಹಮ್ ಮಗಜ್ ಪಚಾಏ ॥
ಕರೋ ತುಮ್ ಜೋ ಮಾನ್ ಮನ್ ತೇರಾ । ತುಮ್ಹಾರಾ ಗರುಡ್ ಭಾಗ್ ಬಡೇರಾ ॥
ಪೂರ್ಣ್ ಬ್ರಹ್ಮ್ ಅವಿನಾಶೀ ದಾತಾ । ಸಚ್ಚ್ ಮೆಂ ಹೈ ಕೋಈ ಔರ್ ವಿಧಾತಾ ॥
ಇತ್‌ನಾ ಕಹ್ ಗಏ ಅಪ್‌ನೆ ಧಾಮಾ । ಗರುಡ್ ಔರ್ ಬಾಲಕ್ ಕರಿ ಪ್ರಣಾಮಾ ॥
ಭಕ್ತಿ ಕರೀ ಬಾಲಕ್ ಚಿತ್ ಲಾಈ । ಗರುಡ್ ಅರೂ ಬಾಲಕ್ ಭಯೇ ಗುರು ಭಾಈ ॥
ಧರ್ಮ್‌ದಾಸ್ ಯಹ್ ಗರುಡ್ ಕೋ ಬೋಧಾ ।
ಏಕ್-ಏಕ್ ವಚನ್ ಕಹಾ ಮ್ಯೆಂ ಸೋಧಾ ॥

**ಶಬ್ದಾರ್ಥ:–** ಕಬೀರ ಪರಮೇಶ್ವರರು ತಮ್ಮ ಕರಮಂಡಲ(ಲೋಟ)ದಿಂದ ಕೊಂಚ ನೀರನ್ನು ತೆಗೆದು ಗರುಡನಿಗೆ ಕೊಡುತ್ತಾ ಹೀಗೆಂದರು, "ಇದು ಅಮೃತದ ಜಲ. ಇದನ್ನು ಆ ಹುಡುಗನಿಗೆ ಕುಡಿಸು. ಇದನ್ನು ಕುಡಿದು ಅವನು ಇಚ್ಛಾ ದೀಕ್ಷೆ ಪಡೆಯಬೇಕು. ಕಾಲನ ಶಕ್ತಿ ಹೊರಟು ಹೋಗುವುದು." ಗರುಡನು ಸದ್ಗುರುವಿನ ಆದೇಶವನ್ನು ಪಾಲಿಸಿದನು. ಹುಡುಗನಿಗೆ ಅಮೃತವನ್ನು ಕುಡಿಸಿದನು. ಇದರಿಂದ ಅವನಿಗೆ ದೀಕ್ಷೆ ಪಡೆಯಲು ಪ್ರಬಲವಾದ ಇಚ್ಛೆಯುಂಟಾಯಿತು. ಗರುಡನು ಬಾಲಕನನ್ನು ಸದ್ಗುರುವಿನ ಬಳಿ ಕರೆತಂದು ಅವನಿಗೆ ದೀಕ್ಷೆ ಕೊಡಿಸಿದನು. ಪರಮಾತ್ಮ ಬಾಲಕನಿಗೆ ಆಶೀರ್ವಾದ ನೀಡಿ ಅವನನ್ನು ಕೃತಾರ್ಥನನ್ನಾಗಿ ಮಾಡಿದರು. ಅದೇ ಕ್ಷಣ ಧರ್ಮರಾಜನ ಲೆಕ್ಕ ಬದಲಾಗಿ ಹೋಯಿತು. ಮೂರೂ ದೇವತೆಗಳು ಧರ್ಮರಾಜನ ಆಸ್ಥಾನಕ್ಕೆ ಹೋಗಿ ಆ ಲೆಕ್ಕವನ್ನು ತಮ್ಮ ಕಣ್ಣಾರೆ ನೋಡಿದರು. ಧರ್ಮರಾಜನು ಸ್ವತಃ ತಾನೇ ಅದನ್ನು ಓದಿ ಹೇಳಿದನು. ಆ ಜೀವಿಯು ನೂರು ವರ್ಷ ಬದುಕಿರುತ್ತಾನೆ ಹಾಗೂ ಭಕ್ತಿಯಿಂದ ಇರುತ್ತಾನೆ ಎಂದು ಅದರಲ್ಲಿ ಬರೆದಿತ್ತು. ಪೂರ್ಣ ಪರಮಾತ್ಮನ ಮೂಲಕ ಅವನ ಆಯುಷ್ಯ ವೃದ್ಧಿಯಾಗಿತ್ತು. ಧರ್ಮರಾಜನು ಓದಿದನು, ಬ್ರಹ್ಮಾ, ವಿಷ್ಣು ಹಾಗೂ ಶಿವ ಅದನ್ನು ತಮ್ಮ ಕಣ್ಣುಗಳಿಂದ ನೋಡಿದರು. ಇದನ್ನು ಕಂಡು, ಇದೆಲ್ಲಾ ಹೇಗೆ ಸಾಧ್ಯ ಎಂದು ಆಶ್ಚರ್ಯವಾಯಿತು. ಧರ್ಮರಾಜನು ಆಶ್ಚರ್ಯದಿಂದ ಹೀಗೆಂದನು, "ಇದೆಲ್ಲಾ ಪರಮೇಶ್ವರನ ಅದ್ಭುತ ಲೀಲೆ. ಇವನನ್ನು ಕಾಲಬ್ರಹ್ಮನು ಏನು ಮಾಡಲು ಸಾಧ್ಯ? ಕಾಲಬ್ರಹ್ಮನ ಮೂಲಕ ನಿರ್ಧಾರಿತಗೊಂಡ ಮೃತ್ಯುವಿನ ಸಮಯ ಪರಮೇಶ್ವರನ ಆದೇಶದಿಂದ ಬದಲಾಗುತ್ತದೆ. ಅವನು ಎಲ್ಲಾ ಸಮರ್ಥ ಜೀವಿಗಳ ರಕ್ಷಕನು. ಅವನು ನನ್ನ ಪುಸ್ತಕದಲ್ಲಿದ್ದ ಎಲ್ಲಾ ಹಳೇ ಲೆಕ್ಕಗಳನ್ನು ಬದಲಿಸಿಬಿಟ್ಟಿದ್ದಾನೆ. ಈ ಮಗು ನೂರು ವರ್ಷಗಳವರೆಗೆ ಬದುಕಿರುತ್ತಾನೆ ಹಾಗೂ ಭಕ್ತಿಯನ್ನೂ ಮಾಡುತ್ತಾನೆ. ಇದನ್ನೂ ಇದರಲ್ಲಿ ಬರೆದಿದೆ. ನಾನು ಸುಳ್ಳು ಹೇಳುತ್ತಿಲ್ಲ. ನೀವೇ ಖುದ್ದಾಗಿ ನೋಡಿ. ಆಗ ಬ್ರಹ್ಮಾ, ವಿಷ್ಣು ಹಾಗೂ ಶಿವ ಹೀಗೆಂದರು, "ಎಂತಹ ಆಶ್ಚರ್ಯ! ನಿಜವಾಗಿಯೂ ಪರಮಪುರುಷ ಎನ್ನುವವನು ಒಬ್ಬನಿದ್ದಾನೆ. ಅವನು ಏನನ್ನು ಬಯಸುತ್ತಾನೋ, ಅದನ್ನು ಮಾಡುತ್ತಾನೆ. ಅವನ ಆಶ್ರಯಕ್ಕೆ ಹೋಗುವವನು ಹೇಗೆ ಸಾಯಲು ಸಾಧ್ಯ? ಹೇ ಪಕ್ಷಿಗಳ ರಾಜನಾದ ಗರುಡನೇ! ನಿನ್ನ ಮಾತು ಸತ್ಯ. ನಾವು ನಿನ್ನ ಬಳಿ ವ್ಯರ್ಥವಾಗಿ ವಾದಿಸಿದೆವು. ನೀನು ಇಚ್ಛಿಸಿದಂತೆ ಮಾಡು. ಹೇ ಗರುಡನೇ! ನಿನ್ನ ಅದೃಷ್ಟ ಚೆನ್ನಾಗಿರುತ್ತದೆ." ಹೀಗೆ ಹೇಳುತ್ತಾ ಆ ಮೂವರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಗರುಡ ಹಾಗೂ ಆ ಹುಡುಗನು ಧರ್ಮರಾಜನಿಗೆ ನಮಿಸಿದರು.

ಕಬೀರರು ಧರ್ಮರಾಜನಿಗೆ ಹೀಗೆಂದರು, "ಈಗ ಈ ಹುಡುಗನು ಮತ್ತು ಗರುಡ–ಇವರಿಬ್ಬರೂ ಗುರು ಸಹೋದರರು, ಹೇ ಧರ್ಮದಾಸ, ಇದೇ ಗರುಡನಿಗೆ ಆಶ್ರಯ ನೀಡಿದ ಕತೆ ಅಂದರೆ ಗರುಡ್ ಬೋಧ್."

## "ಹನುಮಾನ್ ಬೋಧ್‌ನ ಸಾರಾಂಶ"

ಕಬೀರ್ ಸಾಗರದ 113ನೇ ಪುಟದಲ್ಲಿ 12 ಅಧ್ಯಾಯವಾದ 'ಹನುಮಾನ್ ಬೋಧ್' ಇದೆ. ಕಬೀರ್ ಸಾಗರದ ಈ ಅಧ್ಯಾಯದಲ್ಲಿ ಪವನಸುತನಾದ ಹನುಮನನ್ನು ತನ್ನ ಆಶ್ರಯಕ್ಕೆ ತೆಗೆದುಕೊಳ್ಳುವ ಪ್ರಕರಣವಿದೆ. ನೀವು ಒಳ್ಳೆಯ ಆತ್ಮವಾದ ಪವನಪುತ್ರ ಹನುಮಂತನಿಗೂ ಸಿಕ್ಕಿದವರು ಎಂದು ಧರ್ಮದಾಸನು ಕಬೀರ್ ಪರಮೇಶ್ವರರನ್ನು ಪ್ರಶ್ನಿಸಿದನು.

ಕಬೀರರು 'ಹೌದು' ಎಂದರು.

ಧರ್ಮದಾಸರ ಪ್ರಶ್ನೆ:– "ಹೇ ಪ್ರಭು, ಅವರೂ ಸಹ ನಿಮ್ಮ ಜ್ಞಾನವನ್ನು ಸ್ವೀಕರಿಸಿದರೆ? ಏಕೆಂದರೆ ಹನುಮಂತನು ರಾಮ ಅಂದರೆ ವಿಷ್ಣುವಿನಲ್ಲಿ ಅಚಲವಾದ ಭಕ್ತಿಯನ್ನಿಟ್ಟಿದ್ದರು. ಅವರಿಗೆ ಆಶ್ರಯ ನೀಡುವುದೆಂದರೆ ಸೂರ್ಯನು ಪಶ್ಚಿಮದಲ್ಲಿ ಉದಯಿಸಿದ ಹಾಗೆ".

ಕಬೀರರ ಉತ್ತರ :– ಪರಮೇಶ್ವರರಾದ ಕಬೀರರು ಧರ್ಮದಾಸನಿಗೆ ವಾಯುಪುತ್ರನಾದ ಹನುಮಂತನನ್ನು ಆಶ್ರಯಕ್ಕೆ ಪಡೆದ ವೃತ್ತಾಂತವನ್ನು ಹೇಳಿದರು. ಸರಳಾರ್ಥ ಕರ್ತೃ (ರಾಮ್‌ಪಾಲ್ ದಾಸ್) ಮೂಲಕ ಹನುಮಾನ್‌ನಿಗೆ ಹೇಗೆ ಪರಮೇಶ್ವರರು ಆಶ್ರಯ ನೀಡಿದರು ಎಂದು ನೀವೂ ಓದಿ.

## ರಾಮಾಯಣದ ಸಂಕ್ಷಿಪ್ತ ವರ್ಣನೆ

ರಾಮಾಯಣದ ಒಂದು ಪ್ರಸಂಗ, ಅದರಲ್ಲಿ ವಾಲಿ ಎಂಬ ರಾಜನಿದ್ದನು. ಅವನ ತಮ್ಮನೇ ಸುಗ್ರೀವ. ವಾಲಿಯು ದುರಾಸೆಗೆ ಒಳಗಾಗಿ ಸುಗ್ರೀವನನ್ನು ತನ್ನ ರಾಜ್ಯದಿಂದ ಹೊರಗೋಡಿಸಿದನು. ಸುಗ್ರೀವನು ಚಿಂತಾಗ್ರಸ್ತವಾಗಿ ಓಡಾಡುತ್ತಿರುವಾಗ ಹನುಮಂತನ ಕಣ್ಣಿಗೆ ಬಿದ್ದನು. ಹನುಮಂತನು ಇವನ ಬಗ್ಗೆ ವಿಚಾರಿಸಿದಾಗ ಸುಗ್ರೀವನ ದುಃಖಕ್ಕೆ ಕಾರಣವೇನೆಂದು ತಿಳಿಯಿತು. ಹನುಮಂತನು ವಾಲಿಯ ಜೊತೆ ಯುದ್ಧ ಮಾಡುವುದಾಗಿ ತಿಳಿಸಿದಾಗ, ಸುಗ್ರೀವನು ವಾಲಿಯ ಜೊತೆ ಯುದ್ಧ ಮಾಡುವುದು ಅಷ್ಟು ಸುಲಭವಲ್ಲ, ಯಾರು ಅವನ ಜೊತೆ ಯುದ್ಧ ಮಾಡುವರೋ ಅವರ ಅರ್ಧದಷ್ಟು ಶಕ್ತಿ ವಾಲಿಯ ಶರೀರದೊಳಗೆ ಪ್ರವೇಶಿಸುವಂಥಾ ವರ ವಾಲಿಗಿದೆ ಎಂದು ಹನುಮಂತನಿಗೆ ತಿಳಿಸಿದನು. ಆಗ ಹನುಮಂತನು ವಾಲಿಯ ಜೊತೆ ಯುದ್ಧ ಮಾಡುವ ಯೋಚನೆ ಬಿಟ್ಟು ಬಿಟ್ಟನು. ದಶರಥನ ಮಗ ರಾಮಚಂದ್ರನು ತನ್ನ ಹೆಂಡತಿ ಸೀತೆ ಮತ್ತು ಶೇಷನಾಗ ಅವತಾರವಾದ ತನ್ನ ತಮ್ಮ ಲಕ್ಷ್ಮಣನ ಜೊತೆ ವನವಾಸಕ್ಕೆ ಬಂದಿದ್ದನು. ಆಗ ರಾವಣನ ತಂಗಿ ಶೂರ್ಪಣಖಿಯು ಲಕ್ಷ್ಮಣನನ್ನು ನೋಡಿ ತನ್ನನ್ನು ವಿವಾಹವಾಗಬೇಕೆಂದು ಕೇಳಿದಳು. ಲಕ್ಷಣನು ತನಗೆ ಮದುವೆಯಾಗಿದೆ ಎಂದೂ, ತನ್ನ ಹೆಂಡತಿಯ ಹೆಸರು ಊರ್ಮಿಳ ಎಂದೂ ತಿಳಿಸಿದನು. ಆದರೆ ಶೂರ್ಪಣಖಿ ಮದುವೆಯಾಗಲೇಬೇಕೆಂದು ಹಠ ಹಿಡಿದಾಗ ಲಕ್ಷ್ಮಣನು ಕೋಪಗೊಂಡು ಅವಳ ಮೂಗನ್ನು ಕತ್ತರಿಸಿದನು. ಅಪಮಾನಗೊಂಡ ಶೂರ್ಪಣಖಿಯು ತನ್ನ ಅಣ್ಣನಾದ ರಾವಣನ ಬಳಿ ತೆರಳಿ ಚಾಡಿ ಹೇಳಿದಳು. ರಾವಣನು ಪ್ರತೀಕಾರ ತೀರಿಸಿಕೊಳ್ಳಲು ರಾಮನ ಹೆಂಡತಿಯಾದ ಸೀತೆಯನ್ನು ಅಪಹರಿಸಿದನು. ಸಾಧು ವೇಷ ಧರಿಸಿ, ತನ್ನ ಮಾವನಾದ ಮಾರೀಚನ ಸಹಾಯದಿಂದ ಸೀತೆಯನ್ನು ಅಪಹರಿಸಿದನು.

ಸೀತೆಯನ್ನು ಹುಡುಕುತ್ತಾ ರಾಮ ಲಕ್ಷ್ಮಣರು ಕಾಡು ಮೇಡನ್ನು ಅಲೆಯುತ್ತಿರಬೇಕಾದರೆ ಅವರನ್ನು ಸುಗ್ರೀವ ಮತ್ತು ಹನುಮಂತ ಭೇಟಿಯಾದರು. ಪರಸ್ಪರ ಪರಿಚಯವಾಯಿತು. ಸುಗ್ರೀವನು ತನ್ನ ಕಷ್ಟವನ್ನು ರಾಮನ ಬಳಿ ಹೇಳಿಕೊಂಡನು. ರಾಮನು ಸುಗ್ರೀವನಿಗೆ ಸಹಾಯ ಮಾಡಲು ಒಂದು ಷರತ್ತಿನ ಮೇಲೆ ಒಪ್ಪಿಕೊಂಡನು. ಸೀತೆಯನ್ನು ಹುಡುಕಿ ಕೊಡಲು ಸಹಾಯ ಮಾಡಿದರೆ ಮಾತ್ರ ಸುಗ್ರೀವನಿಗೆ ತಾನು ಸಹಾಯ ಮಾಡುವ ಷರತ್ತನ್ನು ವಿಧಿಸಿದನು. ಆ ಷರತ್ತಿಗೆ ಸುಗ್ರೀವನು ಒಪ್ಪಿಕೊಂಡನು. ರಾಮನು ಮರದ ಮರೆಯಲ್ಲಿ ನಿಂತು ಸುಗ್ರೀವನಿಗೆ ಸಹಾಯ ಮಾಡುವ ಸಲುವಾಗಿ ವಾಲಿಯನ್ನು ಕೊಂದನು. ನಂತರ ಸುಗ್ರೀವನಿಗೆ ಅವನ ರಾಜ್ಯವನ್ನು ಒಪ್ಪಿಸಿ, ರಾಜ್ಯಭಿಷೇಕ ಮಾಡಿದನು. ಮಾತಿನಂತೆ ಸುಗ್ರೀವ ಮತ್ತು ಹನುಮಂತ ರಾಮನಿಗೆ ಸಹಾಯ ಮಾಡಲು ಮುಂದಾದರು. ಸೀತೆಯನ್ನು ರಾವಣನು ಅಪಹರಿಸಿ ಶ್ರೀಲಂಕೆಗೆ ಕರೆದುಕೊಂಡು ಹೋದುದ್ದನ್ನು ಹಾಗೂ ತಡೆಯಲು ಹೋದಾಗ ಅದರ ರೆಕ್ಕೆಗಳನ್ನು ಕತ್ತರಿಸಿದ್ದನ್ನು ಜಟಾಯು ಪಕ್ಷಿಯು ಹನುಮಂತನಿಗೆ ತಿಳಿಸಿತು. ರಾಮನು ಹನುಮಂತನನ್ನು ದೂತನನ್ನಾಗಿ ಮಾಡಿ, ರಾವಣನ ಜೊತೆ ಮಾತನಾಡಿ ಸೀತೆಯನ್ನು ಬಿಡಿಸಿಕೊಂಡು ಬರಲು ಕಳುಹಿಸಿದನು. ಜೊತೆಯಲ್ಲಿ ಸೀತೆಗೆ ನಂಬಿಕೆ ಬರಲು ರಾಮನು ತನ್ನ ಉಂಗುರವನ್ನು ಹನುಮಂತನಿಗೆ ಕೊಟ್ಟು ಕಳುಹಿಸಿದನು. ಹನುಮಂತನು ರಾಮನ ಉಂಗುರವನ್ನು ತೆಗೆದುಕೊಂಡು ಆಕಾಶಮಾರ್ಗದಲ್ಲಿ ಶ್ರೀಲಂಕೆಗೆ ಬಂದನು. ರಾವಣನ ರಾಜ್ಯದಲ್ಲಿ ಒಂಭತ್ತು ಲಕ್ಷ ವನಗಳಿದ್ದವು. ಅದರಲ್ಲಿ ಒಂದಾದ ಅಶೋಕವನದಲ್ಲಿ ಸೀತೆಯನ್ನು ಬಂಧಿಯನ್ನಾಗಿ ಇಟ್ಟಿದ್ದನು. ಹನುಮಂತನು ಸೀತೆಯ ಬಳಿ ಹೋಗಿ ಉಂಗುರವನ್ನು ತೋರಿಸಿ, ಸೀತೆಯ ವಿಶ್ವಾಸವನ್ನು ಗಳಿಸಿದನು. ರಾವಣನು ಕೊಡುತ್ತಿದ್ದ ಕಷ್ಟವನ್ನು ಸೀತೆಯು ಹನುಮಂತನಿಗೆ ತಿಳಿಸಿದಳು. ಸೀತೆಯು ತನ್ನ ಕೈ ಬಳೆಯನ್ನು ತೆಗೆದು ಹನುಮಂತನಿಗೆ ನೀಡಿದಳು. ಹಾಗೂ ಹೀಗೆ ಹೇಳಿದಳು. "ಹೇ ಸಹೋದರ, ನೀನು ಈ ಕೈ ಬಳೆಯನ್ನು ರಾಮನಿಗೆ ತೋರಿಸು, ಆಗ ನೀನು ಸೀತೆಯನ್ನು ಕಂಡು ಹಿಡಿದ ಬಗ್ಗೆ ರಾಮನಿಗೆ ನಂಬಿಕೆ ಬರುವುದು." ನಂತರ ಹನುಮಂತನು ತನಗೆ ಹಸಿವಾಗುವುದೆಂದು ಹೇಳಿದನು. ಆಗ ಸೀತೆಯು "ನನಗೆ ಯಾವುದೇ ಹಣ್ಣನ್ನು ಕೀಳುವ ಅಧಿಕಾರವಿಲ್ಲ" ಎಂದಳು. ಹನುಮಂತನು ಅಲ್ಲಿದ್ದ ಹಣ್ಣಿನ ಮರವನ್ನು ಅಲ್ಲಾಡಿಸಿದನು. ಆ ಮರದಿಂದ ಉದುರಿದ ಹಣ್ಣನ್ನು ತಿಂದು ತನ್ನ ಹಸಿವನ್ನು ಇಂಗಿಸಿಕೊಂಡನು. ನಂತರ ಆ ಮರವನ್ನು ಸಮುದ್ರಕ್ಕೆ ಎಸೆದನು. ಅಷ್ಟರಲ್ಲಿ ರಾವಣನು ಹನುಮಂತನನ್ನು ಅವಮಾನಿಸಿ, ಅವನ ಬಾಲಕ್ಕೆ ಬೆಂಕಿ ಇಟ್ಟನು. ಹನುಮಂತನು ಕೋಪಗೊಂಡು ರಾವಣನ ಇಡೀ ಲಂಕೆಯನ್ನೇ ಸುಟ್ಟನು.

ಇದಾದ ನಂತರ ಹನುಮಂತನು ಆಕಾಶಮಾರ್ಗದಲ್ಲಿ ಹಾರುತ್ತಾ ಒಂದು ಬೆಟ್ಟದ ಮೇಲೆ ಬಂದು ಕುಳಿತನು. ಬೆಳಗ್ಗಿನ ಸಮಯ, ಬೆಟ್ಟದಿಂದ ನೀರು ಜಲಾಶಯವಾಗಿ ಹರಿಯುತ್ತಿತ್ತು. ಅಲ್ಲಿ ಹಣ್ಣುಗಳು ತುಂಬಿದ್ದ ಮರಗಳಿದ್ದವು. ಹನುಮಂತನಿಗೆ ಬಹಳ ಹಸಿವಾಗುತ್ತಿತ್ತು. ಮೊದಲು ಜಲಾಶಯದಲ್ಲಿ ಸ್ನಾನ ಮಾಡಿ ನಂತರ ಹಣ್ಣನ್ನು ತಿನ್ನಲು ನಿಶ್ಚಯಿಸಿದನು. ಸೀತೆಯ ಕೈ ಬಳೆಯನ್ನು ಒಂದು ಬಂಡೆಯ ಮೇಲಿಟ್ಟು, ತಾನು ಸ್ನಾನ ಮಾಡಲು ಜಲಾಶಯದ ಕಡೆಗೆ ನಡೆದನು. ಸ್ನಾನ ಮಾಡುವಾಗಲೂ ಒಂದು ಕಣ್ಣನ್ನು ಆ ಬಳೆಯ ಮೇಲಿಟ್ಟಿದ್ದನು. ಅಷ್ಟರಲ್ಲಿ ಒಂದು ಕಪಿ ಅಲ್ಲಿಗೆ ಬಂದು ಆ ಬಳೆಯನ್ನು ಎತ್ತಿಕೊಂಡು ಓಡಿಹೋಯಿತು. ಹನುಮಂತನಿಗೆ ಬಹಳ ಚಿಂತೆಯಾಯಿತು. ಆ ಕಪಿ ಎಲ್ಲಾದರೂ ಆ ಬಳೆಯನ್ನು ಸಮುದ್ರಕ್ಕೆ ಎಸೆದು ಬಿಟ್ಟರೆ ಏನು ಮಾಡುವುದು ಎನ್ನುವ ಭಯದಲ್ಲಿ ಆ ಕಪಿಯನ್ನು ಹಿಂಬಾಲಿಸಿದನು. ನೋಡನೋಡುತ್ತಿದ್ದಂತೆ ಆ ಕಪಿಯು ಆ ಬಳೆಯನ್ನು ಋಷಿಯ ಒಂದು ಕುಟೀರದ ಹೊರಗಡೆ ಇಟ್ಟಿದ್ದ ಮಡಿಕೆಯಲ್ಲಿ ಹಾಕಿತು. ಮತ್ತು ಅಲ್ಲಿಂದ ಓಡಿಹೋಯಿತು. ಹನುಮಂತನಿಗೆ ಸ್ವಲ್ಪಮಟ್ಟಿಗೆ ಚಿಂತೆ ದೂರವಾಯಿತು. ಮಡಿಕೆಯ ಬಳಿ ಹೋಗಿ ಮಡಿಕೆಯ ಒಳಗೆ ಇಣುಕಿ ನೋಡಿದಾಗ ಅಲ್ಲಿ ಒಂದೇ ರೀತಿಯ ಅನೇಕ ಬಳೆಗಳಿದ್ದವು. ಇದರಲ್ಲಿ ಸೀತೆಯು ಕೊಟ್ಟ ಬಳೆ ಯಾವುದು ಎಂದು ತಿಳಿಯದೆ ಹನುಮಂತನು ಚಿಂತೆಗೀಡಾದನು. ಯಾವುದೋ ಬಳೆ ತೆಗೆದುಕೊಂಡು ಹೋಗಿ ಕೊಟ್ಟರೆ

ರಾಮನು ಅದು ಸೀತೆಯದಲ್ಲವೆಂದು ಹೇಳಿದರೆ ನನ್ನ ಪ್ರಯತ್ನವೆಲ್ಲಾ ವ್ಯರ್ಥವಾಗುವುದೆಂದು ಚಿಂತೆ ಮಾಡತೊಡಗಿದನು. ಎದುರುಗಡೆ ಒಬ್ಬ ಋಷಿ ಹನುಮಂತನ ಕಷ್ಟವನ್ನು ನೋಡಿ ನಗುತ್ತಿದ್ದನು. ಅವನು ಕುಟೀರದ ಹೊರಗಡೆ ಕುಳಿತಿದ್ದನು. ಋಷಿ ಹೀಗೆಂದನು, "ಬಾ, ಪವನಪುತ್ರ! ಯಾವ ಸಮಸ್ಯೆಗೆ ಸಿಲುಕಿರುವೆ?" ಹನುಮಂತನೆಂದನು, "ಋಷಿಗಳೇ, ಶ್ರೀರಾಮಚಂದ್ರನ ಪತ್ನಿಯನ್ನು ಲಂಕೆಯ ರಾಜ ರಾವಣನು ಅಪಹರಿಸಿದ್ದಾನೆ. ನಾನು ಕಂಡು ಹಿಡಿದಿದ್ದೇನೆ". ಆಗ ಋಷಿಗಳು "ಯಾವ ರಾಮಚಂದ್ರನ ಬಗ್ಗೆ ಹೇಳುತ್ತಿರುವೆ" ಎಂದರು. ಆಗ ಹನುಮಂತನಿಗೆ ಆಶ್ಚರ್ಯವಾಯಿತು. ಋಷಿಗಳು ಎಚ್ಚರದಲ್ಲಿದ್ದಾರೆಯೇ? ಅಥವಾ ಏನಾದರೂ ಭಂಗಿ ಕುಡಿದಿದ್ದಾರೋ ಎಂದು ಯೋಚಿಸಿದನು. ಹನುಮಂತನೆಂದನು, 'ಹೇ ಋಷಿಗಳೇ, ಎಷ್ಟು ರಾಮರಿದ್ದಾರೆ? ಅನೇಕ ರಾಮರಿದ್ದಾರೆಯೇ?' ಆಗ ಋಷಿಗಳು ಹೌದು, ಅನೇಕರು ಬಂದು ಹೋಗಿದ್ದಾರೆ, ಮುಂದೆಯೂ ಅನೇಕರು ಹುಟ್ಟುತ್ತಾರೆ–ಸಾಯುತ್ತಾರೆ. ಆಗ ಹನುಮಂತನಿಗೆ ಋಷಿಯ ವ್ಯವಹಾರ ಸರಿ ಎನ್ನಿಸಲಿಲ್ಲ. ಆದರೆ ಋಷಿಯ ಜೊತೆ ವಾದ ಮಾಡುವುದೂ ಸರಿಯಲ್ಲ ಎಂದು ತಿಳಿಯಿತು. ಋಷಿಗಳೆಂದರು, "ನೀನು ಹಣ್ಣನ್ನು ತಿನ್ನು ಅಡಿಗೆ ಮಾಡುತ್ತೇನೆ, ಊಟ ಮಾಡು. ಸುಸ್ತಾಗಿದ್ದೀಯಾ, ವಿಶ್ರಾಂತಿ ತೆಗೆದುಕೋ. ಆಗ ಹನುಮಂತನೆಂದನು," ಋಷಿಗಳೇ ! ನನ್ನ ಸಂತೋಷವೆಲ್ಲಾ ಕೊನೆಗೊಳ್ಳುತ್ತಿದೆ. ಸೀತಾಮಾತೆ ನನಗೆ ಬಳೆ ಕೊಟ್ಟಿದ್ದಳು.

ಆ ಬಳೆಯನ್ನು ಬಿಟ್ಟು ನಾನು ಹೋದರೆ ಸೀತೆಯನ್ನು ನಾನು ಹುಡುಕಿದ್ದೇನೆ ಎಂದು ಶ್ರೀರಾಮಚಂದ್ರನಿಗೆ ಮನವರಿಕೆ ಆಗುವುದಿಲ್ಲ. ಆ ಬಳೆಯನ್ನು ನಾನು ಬಂಡೆಯ ಮೇಲಿಟ್ಟು ಸ್ನಾನ ಮಾಡುತ್ತಿರುವಾಗ ಕೋತಿಯು ಅದನ್ನೆತ್ತಿ ಒಂದು ಮಡಕೆಯಲ್ಲಿ ಹಾಕಿಬಿಟ್ಟಿತು. ನಿಜವಾದ ಬಳೆ ಯಾವುದೆಂದು ನಾನು ಕಂಡು ಹಿಡಿಯಲು ಆಗುತ್ತಿಲ್ಲ. ನನಗೆ ಎಲ್ಲಾ ಬಳೆಗಳೂ ಒಂದೇ ತರಹ ಕಾಣಿಸುತ್ತಿವೆ ಎಂದನು, ಆಗ ಋಷಿ ರೂಪದಲ್ಲಿ ಕುಳಿತಿದ್ದ ಪರಮೇಶ್ವರ ಕಬೀರರು ಹೀಗೆಂದರು, "ಹೇ ಪವನನ ಮುದ್ದು ಮಗನೇ ! ನೀನು ಅದರಲ್ಲಿರುವ ಯಾವುದೇ ಬಳೆ ತೆಗೆದುಕೊಂಡು ಹೋದರೂ ಯಾವುದೇ ವ್ಯತ್ಯಾಸವಿಲ್ಲ. ಇಷ್ಟು ಸಾರಿ ಶ್ರೀ ದಶರಥ ಪುತ್ರ ರಾಮನ ವನವಾಸ ಹಾಗೂ ಸೀತೆಯ ಅಪಹರಣ ಹಾಗೂ ಹನುಮಂತನ ಮೂಲಕ ಹುಡುಕಾಟ ಆಗಿವೆ". ಆಗ ಹನುಮಂತನೆಂದನು, ಋಷಿಗಳೇ, ನಾನು ನಿಮ್ಮ ಮಾತನ್ನು ಒಪ್ಪುತ್ತೇನೆ. ಹಾಗಾದರೆ ಹೇಳಿ, ಪ್ರತಿ ಬಾರಿ ಸೀತಾಪಹರಣ ಹನುಮಂತ ಹುಡುಕಿದ್ದು ನಂತರ ಬಳೆ ತಂದಿದ್ದು ಹಾಗೂ ಕೋತಿಯ ಮೂಲಕ ಮಡಿಕೆಯಲ್ಲಿ ಹಾಕಿದ್ದು––ಇವೆಲ್ಲವೂ ಆಗುತ್ತಿದೆ ಎಂದರೆ ಬಳೆಗಳು ಇಲ್ಲೇ ಉಳಿದುಕೊಂಡಿದೆ, ಹನುಮಂತ ಏನನ್ನು ತೆಗೆದುಕೊಂಡು ಹೋಗುತ್ತಾನೆ?", ಆಗ ಋಷಿ ಮುನೀಂದ್ರರು ಹೇಳಿದರು, "ನಾನು ಈ ಮಡಿಕೆಗೆ ಆಶೀರ್ವಾದ ಮಾಡಿದ್ದೇನೆ. ಯಾವ ವಸ್ತುವು ಇದರಲ್ಲಿ ಬೀಳುವುದೋ, ಆ ವಸ್ತುವು ಎರಡಾಗುತ್ತದೆ" ಹೀಗೆಂದು ಹೇಳಿ ಋಷಿಗಳು ಒಂದು ಮಣ್ಣಿನ ಚಿಕ್ಕ ಪಾತ್ರೆಯನ್ನು ಮಡಿಕೆಯಲ್ಲಿ ಹಾಕಿದರು. ಆಗ ಆ ಪಾತ್ರೆಯು ಅದೇ ಸಮನಾದ ಎರಡು ಪಾತ್ರೆಗಳಾದವು. ಋಷಿ ಮುನೀಂದ್ರರು ಹೇಳಿದರು, ಹೇ ಹನುಮಂತ ! ನೀನು ಒಂದು ಬಳೆಯನ್ನು ತೆಗೆದುಕೊಂಡು ಹೋಗು. ಯಾವುದೇ ಬೇಸರ, ದುಗುಡ ಬೇಡ. ಆಗ ಹನುಮಂತನಲ್ಲಿ ಯಾವುದೇ ದ್ವಂದ್ವವಿರಲಿಲ್ಲ. ಆ ಮಡಿಕೆಯಿಂದ ಒಂದು ಬಳೆಯನ್ನು ತೆಗೆದುಕೊಂಡು ಅಲ್ಲಿಂದ ಹಾರಿ ಹೋದನು.

ಹನುಮಂತನು ರಾಮನ ಬಳಿ ತೆರಳಿ ಆ ಬಳೆಯನ್ನು ಕೊಟ್ಟನು. ಅದನ್ನು ನೋಡಿದ ರಾಮನು ಭಾವುಕನಾಗಿ, "ಈ ಬಳೆಯು ಸೀತೆಯದ್ದೇ, ನಿನ್ನ ಪ್ರಾಣವನ್ನು ಪಣಕ್ಕಿಟ್ಟು ನೀನು ಸೀತೆಯನ್ನು ಹುಡುಕಿರುವೆ, ಇಂದೇ ಸಭೆಯನ್ನು ಕರೆದು ಸೀತೆಯನ್ನು ಕರೆತರುವ ಪ್ರಯತ್ನ ಮಾಡುವೆ" ಎಂದನು. ಅದರಂತೆ ನಲ ಮತ್ತು ನೀಲರು ಮಹರ್ಷಿ ಮುನೀಂದ್ರರ ಆಶೀರ್ವಾದ

ಪಡೆದು ಕಲ್ಲುಗಳನ್ನು ನೀರಿನಲ್ಲಿ ಹಾಕಿದರು. ಅವುಗಳು ತೇಲಲಾರಂಭಿಸಿದವು, ಆದರೆ ಕೆಲ ಸಮಯದ ನಂತರ ನಲ ಮತ್ತು ನೀಲರು ಅಹಂಕಾರದಿಂದ ತಮ್ಮ ಗುರುಗಳಾದ ಮುನೀಂದ್ರ ಋಷಿಯ ನಾಮಸ್ಮರಣೆ ಮಾಡಲಿಲ್ಲ. ಇದರ ಕಾರಣ ಅವರಲ್ಲಿದ್ದ ಶಕ್ತಿ ಮುಗಿದು ಹೋಯಿತು. ರಾಮಚಂದ್ರ, ಹನುಮಂತ ಮತ್ತು ಉಳಿದ ಸೈನಿಕರು ಬಹಳ ದುಃಖಿಗಳಾದರು. ಮೂರು ದಿನಗಳವರೆಗೆ ರಾಮನು ಮಂಡಿಯವರೆಗೆ ನೀರಿನಲ್ಲಿ ನಿಂತಿದ್ದನು. ದಾರಿ ತೋರುವಂತೆ ಪ್ರಾರ್ಥಿಸುತ್ತಿದ್ದನು. ಆದರೆ ಸಮುದ್ರ ಒಂದಿಂಚೂ ಅಲುಗಾಡಲಿಲ್ಲ. ಆಗ ರಾಮನು ಲಕ್ಷ್ಮಣನನ್ನು ಕುರಿತು "ಅಗ್ನಿ ಬಾಣವನ್ನು ತೆಗೆ, ಸಮುದ್ರವನ್ನು ಊದಿ ಬಿಡುವೆ. ಕೇವಲ ಮಾತುಗಳಿಂದ ಕೆಲಸವಾಗುವುದಿಲ್ಲ" ಎಂದನು.

ಅದೇ ಸಮಯದಲ್ಲಿ ಸಮುದ್ರವು ಬ್ರಾಹ್ಮಣ ರೂಪ ಧರಿಸಿ ಕೈಮುಗಿಯುತ್ತಾ ರಾಮನ ಮುಂದೆ ಬಂದು ನಿಂತು ಹೇಳಿತು. "ಹೇ ಪರಮಾತ್ಮ, ನನ್ನೊಳಗೆ ಇಡೀ ಪ್ರಪಂಚ ನೆಲೆಸಿದೆ. ಹಾವೂ ಸಾಯಬೇಕು, ಕೋಲು ಮುರಿಯಬಾರದು ಎನ್ನುವ ಹಾಗೆ ನೀನೇ ಏನಾದರೂ ಮಾಡು" ಎಂದಿತು. ನಂತರ ಮುಂದುವರೆದು ಹೀಗೆಂದಿತು, "ನಿಮ್ಮ ಸೈನ್ಯದಲ್ಲಿ ನಲ ಮತ್ತು ನೀಲ ಎಂಬ ಸೈನಿಕರಿದ್ದಾರೆ. ಅವರಿಗೆ ಗುರುಗಳ ಆಶೀರ್ವಾದವಿದೆ. ಆದರೆ ಅವರ ಅಹಂಕಾರದಿಂದ ಹೀಗಾಗಿದೆ" ಎಂದಾಗ ನಲ ನೀಲರು ತಮ್ಮ ತಪ್ಪನ್ನು ತಿದ್ದಿಕೊಂಡರು. ಗುರುಗಳು ತಮ್ಮ ಶಿಷ್ಯರಿಗೆ ಶಕ್ತಿ ಕೊಡುವುದಾದರೆ ನನ್ನ ಕಾರ್ಯವನ್ನು ಸಹ ಮಾಡಿಕೊಳ್ಳಬಲ್ಲನು ಎಂದು ರಾಮನಿಗೆ ಅನ್ನಿಸಿತು. ರಾಮನು ವಿಷ್ಣುವಿನ ಅವತಾರವಾಗಿದ್ದನು. ವಿಷ್ಣು ಕಾಲ ನಿರಂಜನನ ಪುತ್ರನಾಗಿದ್ದನು. ಯಾವಾಗ ಪರಮೇಶ್ವರ ಕಬೀರರು ಮೊದಲ ಬಾರಿಗೆ ಕಾಲನ ಲೋಕಕ್ಕೆ ಬಂದಿದ್ದರೋ ಆಗ ಜ್ಯೋತಿ ನಿರಂಜನನು ಮೊದಲಿಗೆ ಪರಮೇಶ್ವರರ ಜೊತೆ ಜಗಳವಾಡಿದ್ದನು. ಯಶಸ್ಸು ಸಿಗದ ಕಾರಣ ಕಾಲಿಗೆ ಬಿದ್ದು ಕ್ಷಮೆ ಕೇಳಿದನು. ಹಾಗೂ ಆಶೀರ್ವಾದವನ್ನು ಪಡೆದನು.

ನಂತರ "ಅವರಲ್ಲಿ ಒಬ್ಬನು ನನ್ನ ಅಂಶವಾದ ವಿಷ್ಣು ತ್ರೇತಾಯುಗದಲ್ಲಿ ರಾಮಚಂದ್ರನೆಂಬ ಹೆಸರಿನಲ್ಲಿ ದಶರಥನ ಮನೆಯಲ್ಲಿ ಜನ್ಮ ತಾಳುವನು. ಅವನಿಗೆ ವನವಾಸವಾಗುವುದು". ಅವನ ಜೊತೆಯಲ್ಲಿ ಅವನ ಮಡದಿಯಾದ ಸೀತೆಯನ್ನು ಒಬ್ಬ ರಾಕ್ಷಸನು ಲಂಕಾ ನಗರಿಗೆ ಎತ್ತಿಕೊಂಡು ಹೋಗುವನು. ಆಗ ರಾಮಚಂದ್ರನು ಸಮುದ್ರದ ಮೇಲೆ ಒಂದು ಸೇತುವೆಯನ್ನು ನಿರ್ಮಿಸಲು ಇಷ್ಟಪಡುವನು. ಆದರೆ ಅದು ಸಾಧ್ಯವಾಗುವುದಿಲ್ಲ. ಆಗ ಆ ಸೇತುವೆಯನ್ನು ನೀವು ನಿರ್ಮಾಣ ಮಾಡಬೇಕು. 2ನೇ ಆಶೀರ್ವಾದವೇನೆಂದರೆ ದ್ವಾಪರಯುಗದಲ್ಲಿ ಅವನೇ ಕೃಷ್ಣನ ರೂಪದಲ್ಲಿ ಜನ್ಮ ತಾಳುವನು. ಮೃತ್ಯುವಿನ ನಂತರ ಅವನು ಜಗನ್ನಾಥ ಎಂಬ ಹೆಸರಿನ ಪುರಿ ನಗರದ ಸಮುದ್ರ ತೀರದಲ್ಲಿ ಮಂದಿರವನ್ನು ಕಟ್ಟಿಸುವನು. ಸಮುದ್ರ ಅವನಿಗೆ ಅವಕಾಶ ನೀಡುವುದಿಲ್ಲ. ಆಗ ನೀನು ಆ ಮಂದಿರವನ್ನು ಸಮುದ್ರದಿಂದ ರಕ್ಷಿಸಬೇಕು. ಕಬೀರ ಪರಮೇಶ್ವರರು ಹೇಳಿದ್ದೇನೆಂದರೆ, ಆ ಕಾರ್ಯವನ್ನು ಮಾಡಲು, ಆ ವಚನವನ್ನು ಪಾಲಿಸಲು ಪರಮೇಶ್ವರರಾದ ಕಬೀರರು ಮುನೀಂದ್ರ ಎಂಬ ಋಷಿಯ ರೂಪದಲ್ಲಿ ಸೇತುವೆಯ ಮೇಲೆ ಪ್ರತ್ಯಕ್ಷರಾದರು. ಹಾಗೆಯೇ ಪರ್ವತದ ನಾಲ್ಕೂ ದಿಕ್ಕುಗಳಲ್ಲಿ ತನ್ನ ದಂಡದಿಂದ ರೇಖೆಯನ್ನು ಎಳೆಯುತ್ತಾ ಹೋದರು. ನಳ ಮತ್ತು ನೀಲರು ದೂರದಿಂದ ತಮ್ಮ ಗುರುಗಳನ್ನು ಗುರುತಿಸಿದರು ಹಾಗೂ ಹೀಗೆಂದು ಹೇಳಿದರು–"ನಮ್ಮ ಗುರುಗಳು ಬಂದಿದ್ದಾರೆ". ಆಗ ರಾಮಚಂದ್ರನು ತನ್ನ ಕಷ್ಟವನ್ನು ತೋಡಿಕೊಂಡನು. ಹಾಗೂ ಬಹಳ ವಿನಯವಾಗಿ ತನ್ನ ಕಾರ್ಯಸಿದ್ಧಿಗಾಗಿ ಆಶೀರ್ವಾದಗಳನ್ನು ಬೇಡಿದನು. ಆಗ ಪರಮೇಶ್ವರನು ಹೀಗೆಂದನು– "ನಳ ಮತ್ತು ನೀಲರು ತಪ್ಪು ಮಾಡಿದ್ದಾರೆ. ಆ ಕಾರಣದಿಂದ ಅವರ ಶಕ್ತಿ ಕುಂದಿದೆ. ಇಂದಿಗೂ ನಾನು ಎದುರಿಗಿರುವ ಪರ್ವತದ ನಾಲ್ಕು ಕಡೆ ರೇಖೆಯನ್ನು ಎಳೆದಿದ್ದೇನೆ. ಅದರ ಒಳಗಿರುವ ಕಲ್ಲುಗಳು ಮರದ ತುಂಡುಗಳಿಗಿಂತ ಹಗುರವಾಗಿರುವಂತೆ ಮಾಡಿದ್ದೇನೆ. ಅವುಗಳು ಮುಳುಗುವುದಿಲ್ಲ". ಹನುಮಂತನು ರಾಮಭಕ್ತನಾಗಿದ್ದನು. ಅವನು ಆ ಕಲ್ಲುಗಳ ಮೇಲೆ 'ರಾಮ–ರಾಮ' ಎಂದು

ಬರೆದನು. ನಂತರ ಅದನ್ನು ಎತ್ತಿಕೊಂಡು ಹೋಗಿ ಸಮುದ್ರದ ಮೇಲೆ ಇಟ್ಟಾಗ ಆ ಕಲ್ಲುಗಳು ತೇಲಲಿಲ್ಲ. ನಳ ಮತ್ತು ನೀಲರು ಒಳ್ಳೆಯ ಶಿಲ್ಪಕಾರರಾಗಿದ್ದರು. ಅಂದರೆ ನಿಪುಣ ರಾಜತಾಂತ್ರಿಕರಾಗಿದ್ದರು. ಆ ಕಾರಣದಿಂದ ಅವರಿಬ್ಬರು ಕಲ್ಲುಗಳನ್ನು ಪರೀಕ್ಷಿಸುತ್ತಾ ಒಂದು ಕಲ್ಲನ್ನು ಇನ್ನೊಂದು ಕಲ್ಲಿನ ಪಕ್ಕದಲ್ಲಿ ಜೋಡಿಸುತ್ತಾ ಹೋದರು. ಮೊದಮೊದಲು ಕಲ್ಲುಗಳನ್ನು ರಾಮನಿಂದ ತೇಲಿಸಲು ಸಾಧ್ಯವಾಗಲಿಲ್ಲ. ನಳ ಮತ್ತು ನೀಲರು ಸಹ ಅದರಲ್ಲಿ ಯಶಸ್ವಿಯಾಗಲಿಲ್ಲ.

ಹನುಮಂತನು ನಿಂತುಕೊಂಡು ರಾಮರಾಮ ಎಂದು ಹೇಳಿದನು. ಕಲ್ಲುಗಳು ತೇಲಲಿ ಎಂದು ಇಚ್ಛಿಸಿದನು. ಆದರೆ ಎಲ್ಲವೂ ವ್ಯರ್ಥವಾಗಿ ಹೋಯಿತು. ಋಷಿಮುನೀಂದ್ರರು ಅಂದರೆ ಕಬೀರರು ಕಲ್ಲುಗಳನ್ನು ಹಗುರಗೊಳಿಸಿದ್ದರು. ಆ ಕಾರಣದಿಂದ ಕಲ್ಲುಗಳೆಲ್ಲ ಸಮುದ್ರದಲ್ಲಿ ಮುಳುಗಲಿಲ್ಲ. ಹನುಮಂತನಂತೂ 'ರಾಮ ರಾಮ' ಎಂದು ಜಪಿಸಲು ಶ್ರದ್ಧೆಯಿಂದ ಕಲ್ಲುಗಳ ಮೇಲೆ 'ರಾಮರಾಮ' ಎಂದು ಬರೆಯುತ್ತಿದ್ದನು. ಅವನು ಎಲ್ಲೆಲ್ಲಿ ಕುಳಿತುಕೊಳ್ಳುತ್ತಿದ್ದನೋ ಅಲ್ಲಿ ಗಿಡಮರಗಳ ಮೇಲೆ ರಾಮ ರಾಮ ಎಂದು ಬರೆಯುತ್ತಿದ್ದನು. ಹನುಮಂತನಿಗೆ ದಶರಥನ ಮಗನಾದ ರಾಮಚಂದ್ರನ ಪರಿಚಯವಿರಲಿಲ್ಲ. ಅದಕ್ಕಿಂತ ಮೊದಲಿನಿಂದಲೂ ರಾಮನಾಮದ ಜಪವನ್ನು ಮಾಡುತ್ತಿದ್ದನು. ಹೇಗೆಂದರೆ ಲೋಕವೇದ (ದಂತಕತೆ)ವನ್ನು ಕೇಳುತ್ತಾ ಬಂದಿದ್ದನು.

ಅಂದರೆ ನಳ ಮತ್ತು ನೀಲರು ಕಲ್ಲುಗಳನ್ನು ತೇಲಿಸುತ್ತಿದ್ದರು. ಹಾಗಾಗಿ ಸೇತುವೆಯ ನಿರ್ಮಾಣವಾಯಿತು. ಮತ್ತೊಬ್ಬರು ಹೇಳುತ್ತಿದ್ದರು. ಅದೇನೆಂದರೆ ಹನುಮಂತನು ಕಲ್ಲುಗಳ ಮೇಲೆ ರಾಮ ರಾಮ ಎಂದು ಬರೆದನು ಹಾಗಾಗಿ ಕಲ್ಲುಗಳು ತೇಲಲಾರಂಭಿಸಿದವು. ಹಾಗೂ ರಾಮನು ಕಲ್ಲುಗಳನ್ನು ತೇಲಿಸಿದನು. ಗುರುಗಳು ಈ ಮಾತುಗಳನ್ನೆಲ್ಲಾ ಕೇಳಿದ್ದರು. ಕಲ್ಲುಗಳನ್ನು ತೇಲಿಸುವ ಬಗ್ಗೆ ಋಷಿಮುನೀಂದ್ರರು ಹೇಳಿದ್ದೇನೆಂದರೆ ನಾನು ಪರ್ವತದ ಕಲ್ಲುಗಳನ್ನು ಹಗುರಗೊಳಿಸಿದ್ದೇನೆ. ಈ ವಿಷಯವು 20–30 ವ್ಯಕ್ತಿಗಳ ಮುಂದೆ ನಡೆದಿತ್ತು. ಉಳಿದ ಕೋಟ್ಯಾಂತರ ವ್ಯಕ್ತಿಗಳು ಯುದ್ಧಕ್ಕಾಗಿ ಹೋಗಿದ್ದರು. ಅಪ್ಪಣೆ ಸಿಕ್ಕ ತಕ್ಷಣ ಕಲ್ಲುಗಳನ್ನು ತರಲಾರಂಭಿಸಿದರು. ಅವರು ಅಲ್ಲಿಗೆ ಬಂದಾಗ ಹನುಮಂತನು ರಾಮ ರಾಮ ಎಂದು ಬರೆಯುತ್ತಿದ್ದನು ಹಾಗೂ ಉಳಿದವರು ಕಲ್ಲುಗಳನ್ನು ಎತ್ತಿಕೊಂಡು ಹೋಗುತ್ತಿರುವುದನ್ನು ನೋಡಿದರು. ಸಮುದ್ರದ ಮೇಲೆ ನಳ ಮತ್ತು ನೀಲರು ಕಲ್ಲುಗಳಿಂದ ಸೇತುವೆಯನ್ನು ನಿರ್ಮಾಣ ಮಾಡುತ್ತಿದ್ದರು. ರಾಮಚಂದ್ರನು ನಳ ಮತ್ತು ನೀಲರನ್ನು ಪ್ರಶಂಸೆ ಮಾಡುತ್ತಿದ್ದನು. ಅಲ್ಲಿ ಹಾಜರಿದ್ದ ವ್ಯಕ್ತಿಗಳು ಒಬ್ಬರಿಗೊಬ್ಬರು ಹೀಗೆಂದು ಮಾತನಾಡಿಕೊಳ್ಳುತ್ತಿದ್ದರು. ಹನುಮಂತನು ಕಲ್ಲುಗಳ ಮೇಲೆ ರಾಮ ರಾಮ ಎಂದು ಬರೆಯುತ್ತಿದ್ದಾನೆ. ಹಾಗಾಗಿ ಕಲ್ಲುಗಳೆಲ್ಲ ನೀರಿನಲ್ಲಿ ತೇಲಾಡುತ್ತಿವೆ. ಈ ಚಮತ್ಕಾರವು ನಳ ಮತ್ತು ನೀಲರ ಕೈಚಳಕದಿಂದ ಆಗಿದೆ ಎನಿಸಿತು. ಆ ಕಾರಣದಿಂದ ಕಲ್ಲುಗಳು ತೇಲುತ್ತಿವೆ ಎಂದುಕೊಂಡರು. ಹೀಗಾಗಿ ಈ ತಪ್ಪು ಕಲ್ಪನೆ ಅಂದರೆ ಒಂದು ರೀತಿಯ ಭ್ರಮೆ ಎಲ್ಲರಲ್ಲೂ ಉಂಟಾಯಿತು. ಹೀಗೆ ಸೇತುವೆ ನಿರ್ಮಾಣ ಮಾಡಿಕೊಂಡು ಯುದ್ಧದಲ್ಲಿ ನಿರತರಾಗಿದ್ದರು. ಸಾಕಷ್ಟು ಜನರು ಸಾವನ್ನಪ್ಪಿದರು. ಕೆಲವರು ಉಳಿದುಕೊಂಡರು. ಅವರು ತಮ್ಮ ಮನೆಗಳಿಗೆ ಹೊರಟು ಹೋದರು. ಅವರೆಲ್ಲ ತಮ್ಮ ತಮ್ಮ ಹಳ್ಳಿಗಳಲ್ಲಿ ಹಾಗೂ ನಗರಗಳಲ್ಲಿ ಇದೇ ರೀತಿ ತಪ್ಪು ಪ್ರಚಾರ ಮಾಡಿದರು. ಇಲ್ಲಿಯವರೆಗೂ ಅದೇ ತಪ್ಪುಕಲ್ಪನೆ ಎಲ್ಲರಲ್ಲಿಯೂ ನಿರ್ವಿವಾದವಾಗಿ ಪ್ರಚಲಿತವಾಗಿದೆ. ನಿಜಾಂಶವನ್ನು ಈ ದಾಸನು (ರಾಮ್‌ಪಾಲ್‌ದಾಸ್) ತಿಳಿಸಿದ್ದಾನೆ. ಯುದ್ಧವಂತೂ ಆಯಿತು. ಶ್ರೀರಾಮನ ಸೈನ್ಯದ ಮೇಲೆ ನಾಗಪಾಶವೆಂಬ ಅಸ್ತ್ರವನ್ನು ಪ್ರಯೋಗಿಸಲಾಯಿತು. ಈ ಕಾರಣದಿಂದ ಶ್ರೀರಾಮ, ಹನುಮಂತ, ಜಾಂಬವಂತ, ಸುಗ್ರೀವ, ಅಂಗದ ಇವರೆಲ್ಲರ ಸಮೇತ ಇಡೀ ಸೈನ್ಯವು ನಾಗಗಳ (ಸರ್ಪಗಳ) ಮೂಲಕ ಬಂಧಿಸಲ್ಪಟ್ಟಿತು. ಸರ್ಪಗಳೆಲ್ಲ ಸುತ್ತಿಕೊಂಡವು.

ಆಗ ಗರುಡನಿಗೆ ಹೇಳಿ ಕಳುಹಿಸಲಾಯಿತು. ಗರುಡನು ನಾಗಪಾಶವನ್ನು ಕತ್ತರಿಸಿದನು. ಆಗ ಎಲ್ಲರು ಬಂಧನದಿಂದ ಮುಕ್ತರಾದರು. ಲಕ್ಷ್ಮಣನಿಗೆ ಬಾಣ ತಗುಲಿದ್ದರಿಂದ ಅವನು ಮೂರ್ಛಿತನಾಗಿದ್ದನು. ಹನುಮಂತನು ಲಂಕೆಯಿಂದ ವೈದ್ಯನನ್ನು ಕರೆತಂದಾಗ ಆ ವೈದ್ಯನು ದ್ರೋಣಗಿರಿ ಪರ್ವತದಿಂದ ಸಂಜೀವಿನಿ ಬೇರನ್ನು ತರಲು ಹೇಳಿದನು. ರಾಮನು ಹನುಮಂತನಿಗೆ 'ಸೂರ್ಯೋದಯಕ್ಕೆ ಮೊದಲೇ ಸಂಜೀವಿನಿ ಬೇರನ್ನು ತರಬೇಕು ಅದು ನಿನ್ನಿಂದ ಮಾತ್ರ ಸಾಧ್ಯ' ಎಂದು ಹೇಳಿದನು. ತಕ್ಷಣವೇ ಹನುಮಂತನು ಆಕಾಶಮಾರ್ಗವಾಗಿ ತೆರಳಿದನು. ದ್ರೋಣಗಿರಿಯ ರಾಕ್ಷಸರು ಹನುಮಂತನಿಗೆ ಮೋಸಮಾಡಲೆಂದು ಎಲ್ಲಾ ಬೇರುಗಳನ್ನು ಸಂಜೀವಿನಿ ಬೇರಿನಂತೆ ಹೊಳೆಯುವಂತೆ ಮಾಡಿದರು. ಏಕೆಂದರೆ ವೈದ್ಯನು ಸಂಜೀವಿನಿಯ ಗುಣವನ್ನು ತಿಳಿಸುತ್ತಾ, ಬೆಳಕಿನಲ್ಲಿ ಅದನ್ನು ಗುರುತಿಸುವುದು ಕಷ್ಟವೆಂದೂ, ರಾತ್ರಿಯಲ್ಲಿ ಅದು ಮಿಂಚುಹುಳುವಿನಂತೆ ಹೊಳೆಯುವುದೆಂದು ಹೇಳಿದ್ದನು.

ಹನುಮಂತನು ಸಂಜೀವಿನಿ ಬೇರನ್ನು ಗುರುತಿಸಲು ಸಾಧ್ಯವಾಗದ ಕಾರಣ ದ್ರೋಣಗಿರಿ ಪರ್ವತವನ್ನೇ ಹೊತ್ತು ನಡೆದನು. ದಾರಿಯಲ್ಲಿ ಭರತನ ನೆನಪು ಬಂದಿತು. ಭರತನಿದ್ದಿದ್ದರೆ, ಅವನೊಬ್ಬನೇ ರಾವಣ ಮತ್ತು ಅವನ ಒಂದು ಲಕ್ಷ ಪುತ್ರರನ್ನು ಹಾಗೂ ಒಂದೂಕಾಲು ಲಕ್ಷ ಮೊಮ್ಮಕ್ಕಳನ್ನು ಹೊಡೆದು ಉರುಳಿಸುತ್ತಿದ್ದನು ಎಂದು ರಾಮ ಹೇಳಿದ್ದು ನೆನಪಾಯಿತು. ಹಾಗಾಗಿ ಭರತನನ್ನು ಪರೀಕ್ಷಿಸಲು ನಿಶ್ಚಯಿಸಿದನು. ರಾಮ ರಾವಣರಲ್ಲಿ ಯುದ್ಧವಾಗುತ್ತಿದೆ ಎಂದು ಭರತನಿಗೆ ಗೊತ್ತಿತ್ತು. ಆಕಾಶ ಮಾರ್ಗದಲ್ಲಿ ಹನುಮಂತನು ಪರ್ವತ ಸಮೇತ ಹಾರುತ್ತಿದ್ದುದ್ದನ್ನು ಕಂಡು, ಯಾರೋ ರಾಕ್ಷಸನಿರಬಹುದೆಂದು ತಿಳಿದು ಅವನ ಮೇಲೆ ಬಾಣ ಪ್ರಯೋಗಿಸಿದನು. ಹನುಮಂತನು ನೆಪಮಾತ್ರಕ್ಕೆ 'ಹೇ ರಾಮ್' ಎಂದು ಹೇಳುತ್ತಾ ಧರೆಗುರುಳಿದನು. ಪರ್ವತವನ್ನು ನೆಲದ ಮೇಲೆ ಇಟ್ಟು ಬಿಟ್ಟನು. ಭರತನು ಬಂದು ನೋಡಿದಾಗ ಹನುಮಂತನ ಬಾಯಲ್ಲಿ ರಾಮನಾಮ ಸ್ಮರಣೆ ಇತ್ತು. ಇದರಿಂದ 'ಇವನ್ಯಾರೋ ರಾಮನಿಗೆ ಬೇಕಾದವನು, ರಾಕ್ಷಸನಲ್ಲ, ಎನ್ನುವುದು ಭರತನಿಗೆ ತಿಳಿಯಿತು. ಆಗ ಹನುಮಂತನ ಪೂರ್ವಾಪರ ವಿಚಾರಿಸಿದಾಗ ಹನುಮಂತನು ನಡೆದ ವೃತ್ತಾಂತವನ್ನೆಲ್ಲಾ ತಿಳಿಸಿದನು. ಜೊತೆಗೆ ಈ ರಾತ್ರಿ ಕಳೆಯುವ ಮೊದಲೇ ಸಂಜೀವಿನಿ ಬೇರನ್ನು ತೆಗೆದುಕೊಂಡು ಹೋಗದಿದ್ದರೆ ಲಕ್ಷ್ಮಣನ ಜೀವಕ್ಕೆ ಆಪತ್ತು ಎಂದು ಸಹ ತಿಳಿಸಿದನು. ಆಗ ಭರತನು ಪಶ್ಚಾತ್ತಾಪಗೊಂಡು ಹನುಮಂತನಿಗೆ ಹೀಗೆಂದು ಹೇಳಿದನು. "ಚಿಂತೆ ಮಾಡಬೇಡಿ ಪವನಪುತ್ರ! ನೀವು ನನ್ನ ಬಾಣದ ತುದಿಯಲ್ಲಿ ಪರ್ವತ ಸಹಿತವಾಗಿ ನಿಂತುಕೊಳ್ಳಿ. ಒಂದು ಕಾಲನ್ನು ಹಿಂದೆ ಮಾಡಿಕೊಂಡು, ಒಂದು ಕಾಲನ್ನು ಮುಂದೆ ಬಾಣದ ತುದಿಯಲ್ಲಿ ಇರಿಸಿಕೊಂಡು, ಒಂದು ಕೈಯ್ಯಲ್ಲಿ ದ್ರೋಣಗಿರಿ ಪರ್ವತವನ್ನು ಹಿಡಿದುಕೊಳ್ಳಿ. ನಾನು ಆ ಬಾಣವನ್ನು ರಾಮನಿರುವ ಜಾಗಕ್ಕೆ ಬಿಡುತ್ತೇನೆ. ನೀವು ಹೋಗುವ ವೇಗಕ್ಕಿಂತ ಬಾಣವು ಅಲ್ಲಿಗೆ ಹೋಗಿ ತಲುಪುವುದು" ಎಂದನು. ಹನುಮಂತನು ಭರತನು ಹೇಳಿದ ಹಾಗೆ ಬಾಣದ ಮೇಲೆ ನಿಂತುಕೊಂಡನು. ಭರತನು ಆ ಬಾಣವನ್ನು ಎಷ್ಟು ಸುಲಲಿತವಾಗಿ ಎತ್ತಿದನೆಂದರೆ, ಹನುಮಂತನು ಮೂಗಿನ ಮೇಲೆ ಬೆರಳಿಟ್ಟುಕೊಂಡನು. ಭರತನ ಶಕ್ತಿಯ ಅರಿವು ಹನುಮಂತನಿಗಾಯಿತು. ಆಗ ಹನುಮಂತನು, ತಾನು ಕೇವಲ ಭರತನ ಶಕ್ತಿ ಸಾಮರ್ಥ್ಯವನ್ನು ಪರೀಕ್ಷಿಸಲು ಹಾಗೆ ಮಾಡಿದ್ದಾಗಿಯೂ, ತಾನು ಅತ್ಯಂತ ವೇಗವಾಗಿ ಹಾರಬಲ್ಲೆನು ಎಂಬುದಾಗಿಯೂ ತಿಳಿಸುತ್ತಾ, ಭರತನಿಗೆ ನಮಿಸುತ್ತಾ, ದ್ರೋಣಗಿರಿ ಪರ್ವತದ ಜೊತೆಗೆ ಆಕಾಶಕ್ಕೆ ಹಾರಿದನು.

ಯೋಚಿಸಬೇಕಾದ ವಿಷಯ, ಯಾರಾದರೂ ಭಾರ ಎತ್ತಿದರೆ ಎರಡೂ ಕೈಗಳಿಂದ ಅಥವಾ ಒಂದು ಕೈಯ್ಯನ್ನು ಇನ್ನೊಂದು ಕೈಯಿಂದ ಭದ್ರವಾಗಿ ಹಿಡಿದಾಗ ಭಾರವನ್ನು ಎತ್ತಬಹುದು. ಅದೇ ಭಾರವನ್ನು ಎತ್ತಲು ನಿಜವಾಗಲೂ ಕಷ್ಟ. ಆದರೆ ಭರತನು ದ್ರೋಣಗಿರಿ ಪರ್ವತ ಮತ್ತು

ಹನುಮಂತನನ್ನು ಅನಾಯಾಸವಾಗಿ ಎತ್ತಿದನು, ಇದೊಂದು ಪವಾಡವೇ ಸರಿ.

ಹನುಮಂತನು ಸಂಜೀವಿನಿ ಬೇರನ್ನು ತಂದು ಕೊಟ್ಟಾಗ ವೈದ್ಯನು ಅದರ ರಸವನ್ನು ಕುಡಿಸಿ ಲಕ್ಷ್ಮಣನನ್ನು ಬದುಕಿಸಿದನು. ನಂತರ ಯುದ್ಧವಾಯಿತು. ರಾವಣನನ್ನು ಕೊಲ್ಲಲಾಯಿತು. ರಾವಣನೇನೋ ಶಿವ ಭಕ್ತನಾಗಿದ್ದನು. ಅವನು ತನ್ನ ಹತ್ತು ತಲೆಗಳನ್ನು ಕಡಿದು ಶಿವನಿಗೆ ಅರ್ಪಿಸಿದ್ದನು. ಹತ್ತು ಬಾರಿಯೂ ಶಿವನು ಅವನ ತಲೆಗಳನ್ನು ಹಿಂತಿರುಗಿಸಿದ್ದನು. ಹಾಗೂ ಹತ್ತು ಬಾರಿ ತಲೆ ಕಡಿದಾಗ ಮಾತ್ರ ನಿನಗೆ ಸಾವುಂಟಾಗುವುದು ಎಂದು ವರವನ್ನಿತ್ತಿದ್ದನು. ರಾಮನು ಪರಮೇಶ್ವರನನ್ನು ಸ್ಮರಿಸುತ್ತಾ ಹೇಳಿದನು. "ಹೇ ಮಹಾದೇವ, ಈ ರಾಕ್ಷಸನನ್ನು ಕೊಲ್ಲಲು ನನಗೆ ಸಹಾಯ ಮಾಡು. ಹೇ, ಪರಮೇಶ್ವರ, ದೇವರ ದೇವಾ! ನಿನ್ನ ಮಗಳಾದ ಸೀತೆಯು ಸಂಕಷ್ಟದಲ್ಲಿದ್ದಾಳೆ. ನಿನ್ನ ಮಕ್ಕಳಾದ 33 ಕೋಟಿ ದೇವತೆಗಳನ್ನು ಈ ರಾಕ್ಷಸನು ಜೈಲಿನಲ್ಲಿ ಬಂಧಿಸಿಟ್ಟಿದ್ದಾನೆ". ತಕ್ಷಣವೇ ಪರಮೇಶ್ವರನು ಗುಪ್ತವಾಗಿ ತನ್ನ ಕೈಯ್ಯನ್ನು ರಾಮನ ಕೈಯ್ಯಲ್ಲಿಟ್ಟನು, ಆಗ ರಾಮನ ಬಾಣವು ನೇರವಾಗಿ ಹೋಗಿ ರಾವಣನ ನಾಭಿಯನ್ನು ಸೀಳಿತು. ರಾವಣನು ಸತ್ತು ಬಿದ್ದನು. ಈ ಯುದ್ಧದಲ್ಲಿ ರಾವಣನ ಹತ್ತು ತಲೆಗಳನ್ನು ಕಡಿದು, ಅವನ ನಾಭಿಗೆ ಬಾಣ ಬಿಟ್ಟಾಗ ರಾವಣನ ಹೊಟ್ಟೆಯಲ್ಲಿದ್ದ ಅಮೃತ ಕಳಸವು ನಾಶವಾದನಂತರ ರಾವಣನ ವಧೆಯಾಯಿತು. ಕಬೀರರು ಹೇಳಿದ್ದಾರೆ:–

ಕಬೀರ್, ಕಹ್‌ಮೇರೆ ಹಂಸ ಕೊ, ದುಃಖ್ ನಾ ದೀಜೆ ಕೋಯ್ ।
ಸಂತ ದುಃಖಾಎ ಮೈಂ ದುಃಖಿ, ಮೆರಾ ಆಪಾ ಭೀ ದುಖೀ ಹೊಯ್ ॥
ಪಹುಂಚುಂಗಾ ಛನ್ ಏಕ್ ಮೈಂ, ಜನ್ ಅಪನೆ ಕೆ ಹೇತ್ ।
ತೆತೀಸ್ ಕೋಟಿ ಕೀ ಬಂಧ್ ಛುಟಾಈ, ರಾವಣ್ ಮಾರಾ ಖೇತ್ ॥
ಜೋ ಮೇರೆ ಸಂತ್ ಕೋ ದುಃಖೀ ಕರೈಂ, ವಾಕಾ ಖೋಊಂ ವಂಶ್ ।
ಹಿರಣಾಕುಶ್ ಉದರ್ ವಿದಾರಿಯಾ, ಮೈಂ ಹೀ ಮಾರಾ ಕಂಸ್ ॥
ರಾಮ್–ಕೃಷ್ಣ ಕಬೀರ್ ಕೆ ಶಹ್‌ಜಾದೆ, ಭಕ್ತಿ ಹೇತ್ ಭಯೆ ಪ್ಯಾದೆ ॥

ಶಬ್ದಾರ್ಥ :– ಸಂತ ಗರೀಬ್‌ದಾಸರು ಹೇಳಿದರು, "ಶ್ರೀ ರಾಮಚಂದ್ರ ಹಾಗೂ ಶ್ರೀಕೃಷ್ಣನಿಗೆ ಅವರ ಒಳ್ಳೆಯ ಕೆಲಸಗಳಿಗೆ ಅನುಗುಣವಾಗಿ ಕಬೀರರು ಸಹಾಯವನ್ನು ನೀಡಿದರು. ಏಕೆಂದರೆ ರಾಮ ಮತ್ತು ಶ್ರೀ ಕೃಷ್ಣರು ಕಬೀರ ಸಾಮ್ರಾಟರ ರಾಜಕುಮಾರರು. ಅಂದರೆ ಪರಮಾತ್ಮ ಕಬೀರರ ಜೀವಗಳು. ರಾಮಕೃಷ್ಣರು ಅಂದರೆ ವಿಷ್ಣುವು ಒಳ್ಳೆಯ ಆತ್ಮ. ಅವನ ರಕ್ಷಣೆಯನ್ನು ಕಬೀರ ಪರಮೇಶ್ವರರು ಮಾಡುತ್ತಾರೆ. ತನ್ನ ಸಾಧಕನಿಗೆ ಯಾವುದೇ ಕಷ್ಟ ಬಾರದಿರುವಂತೆ ರಕ್ಷಿಸುತ್ತಾರೆ. ಭಕ್ತನಿಗೆ ಕಷ್ಟವುಂಟಾದರೆ ನಾನು ದುಃಖಿಯಾಗುವೆ. ಭಕ್ತನನ್ನು ರಕ್ಷಿಸಲು ನಾನು ಒಂದು ಕ್ಷಣದಲ್ಲಿ ಬಂದು ಬಿಡುತ್ತೇನೆ. ಆ ಕಾರಣದಿಂದ ರಾಮನ ಕೈಯಿಂದ ರಾವಣನು ಸಾಯದಿದ್ದಾಗ ನಾನು ರಹಸ್ಯವಾಗಿ ರಾಮನ ಕೈಯ್ಯನ್ನು ಹಿಡಿದು ರಾವಣನ ಹೊಕ್ಕಳಿಗೆ ಬಾಣ ತಗಲುವಂತೆ ಮಾಡಿದೆ. ಆಗ ರಾವಣನು ಸತ್ತನು. ರಾಮನ ಸೈನ್ಯಕ್ಕೆ ಶಕ್ತಿ ಕೊಟ್ಟೆ, ಹುರಿದುಂಬಿಸಿದೆ. ಇದೇ ರೀತಿ ಕೃಷ್ಣನಿಗೆ ಸಹಾಯ ಮಾಡಿ ಕಂಸನನ್ನು ನಾನೇ ಕೊಂದೆ. ಯಾರು ನನ್ನ ಭಕ್ತರನ್ನು ಸತಾಯಿಸುತ್ತಾರೋ, ಅವರ ಕುಲವನ್ನೇ ನಾಶ ಮಾಡುವೆ ಅಂದರೆ ಅವರ ವಂಶವನ್ನೇ ನಿರ್ನಾಮ ಮಾಡಿಬಿಡುವೆ.

ವಿಭೀಷಣನಿಗೆ ಲಂಕೆಯ ರಾಜ್ಯವನ್ನು ನೀಡಲಾಯಿತು. ಸೀತೆಗೆ ರಾಮನು ಅಗ್ನಿಪರೀಕ್ಷೆಯನ್ನು ಒಡ್ಡಿದನು. ಒಂದು ವೇಳೆ ಸೀತೆಯು ಪತಿವ್ರತೆಯಾಗಿ ಉಳಿಯದೇ ಇದ್ದರೆ ಅವಳು ಅಗ್ನಿಯಲ್ಲಿ ಬೆಂದು ಹೋಗುತ್ತಾಳೆ. ಅದೇ ಅವಳು ಪತಿವ್ರತೆಯಾಗಿಯೇ ಉಳಿದಿದ್ದರೆ ಅವಳು ಬೆಂಕಿಯಲ್ಲಿ ಬೆಂದು ಹೋಗುವುದಿಲ್ಲ. ಈ ರೀತಿ ಅಗ್ನಿಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಸೀತೆಯು ಬೆಂಕಿಯಿಂದ ಹೊರಬಂದಳು. ಎಲ್ಲರೂ ಜಯಕಾರ ಹಾಕಿದರು. ಸೀತೆಯನ್ನು ಎಲ್ಲರೂ ಪತಿವ್ರತೆ ಎಂದು

ಕೊಂಡಾಡಿದರು. ರಾವಣನು ಆಶ್ವಯೂಜ ಮಾಸದ ಶುಕ್ಲಪಕ್ಷದ ದಶಮಿಯ ದಿನ ಸಾವನ್ನಪ್ಪಿದನು.

ರಾವಣನ ಸಾವಿನ 20 ದಿನಗಳ ನಂತರ 14 ವರ್ಷದ ವನವಾಸವನ್ನು ಮುಗಿಸಿ ಶ್ರೀರಾಮ, ಸೀತೆ ಲಕ್ಷ್ಮಣರು ಪುಷ್ಪಕ ವಿಮಾನದಲ್ಲಿ ಕುಳಿತು ಅಯೋಧ್ಯೆಗೆ ಬಂದರು. ಆ ದಿನ ಕಾರ್ತಿಕಮಾಸದ ಅಮಾವಾಸ್ಯೆಯಾಗಿತ್ತು. ಆ ರಾತ್ರಿಯಲ್ಲಿ ಎಲ್ಲರೂ ತಮ್ಮ ತಮ್ಮ ಮನೆಗಳ ಒಳಗೆ ಹಾಗೂ ಮನೆಯ ತಾರಸಿಯ ಮೇಲೆ ಹಸುವಿನ ತುಪ್ಪದ ದೀಪಗಳನ್ನು ಹಚ್ಚಿ ರಾಮನ ಆಗಮನಕ್ಕಾಗಿ ಕಾಯುತ್ತಿದ್ದರು. ಭರತನು ರಾಮನಿಗೆ ರಾಜ್ಯವನ್ನು ಹಿಂತಿರುಗಿಸಿದನು.

ಒಂದು ದಿನ ಸೀತೆಯು ರಾಮನಿಗೆ ಹೀಗೆಂದಳು. "ಯುದ್ಧ ಮಾಡಿದ ಸೈನಿಕರಿಗೆ ನಾನು ಬಹುಮಾನ ಕೊಡಲು ಇಚ್ಛಿಸುತ್ತೇನೆ," ಅದೇ ರೀತಿ ತನ್ನ ಕೊರಳಲ್ಲಿ ಇದ್ದ ಬೆಲೆ ಬಾಳುವ ಮುತ್ತಿನ ಮಾಲೆಯನ್ನು ತೆಗೆದು ಹನುಮಂತನಿಗೆ ಕೊಟ್ಟಳು. ಹಾಗೇ ಜೋಪಾನವಾಗಿ ಕಾಪಾಡಿಕೊಂಡು ಇಟ್ಟಿರಬೇಕೆಂದು ಹೇಳಿದಳು. ಹನುಮಂತನು ಮಾಲೆಯಿಂದ ಒಂದೊಂದೇ ಮುತ್ತನ್ನು ಹೊರಗೆ ತೆಗೆದು ಒಡೆದು ಹಾಕಿದನು. ಸೀತೆಗೆ ಹನುಮಂತನ ಈ ವರ್ತನೆ ಇಷ್ಟವಾಗಲಿಲ್ಲ. ಆಗ ಬಹಳ ಕೋಪಗೊಂಡು ಹನುಮಂತನನ್ನು ಬಯ್ಯತೊಡಗಿದಳು. "ಹೇ ಕೋತಿಯೇ, ಹೀಗೇಕೆ ಮಾಡಿದೆ? ಹೆಸರಿಗೆ ತಕ್ಕಂತೆ ಕೋತಿ ಚೇಷ್ಟೆಯನ್ನೇ ಮಾಡಿರುವೆ, ನನ್ನ ಕಣ್ಣೆದುರಿಗೆ ನಿಲ್ಲಬೇಡ, ಎಲ್ಲಿಯಾದರೂ ಹೊರಟು ಹೋಗು ಎಂದಳು. ಸೀತೆ ಹೀಗೆ ಹೇಳುವಾಗ ಸಿಂಹಾಸನದ ಮೇಲೆ ರಾಮನು ಕುಳಿತಿದ್ದನು. ಅವನಿಗೂ ಹನುಮಂತನ ಈ ಕೆಲಸ ಇಷ್ಟವಾಗಲಿಲ್ಲ. ಹನುಮಂತನಿಗೆ ನೀನೇಕೆ ಹಾಗೆ ಮಾಡಿದೆ ಎಂದು ಕೇಳಿದನು. ಆಗ ಹನುಮಂತನು, ಯಾವುದರಲ್ಲಿ ರಾಮನಾಮವಿಲ್ಲವೋ ಅದು ನನಗೆ ಬೇಡ, ನಿಮ್ಮ ಮುತ್ತಿನ ಮಾಲೆಯ ಯಾವುದೇ ಮುತ್ತಿನಲ್ಲಿ ರಾಮನಾಮವಿರಲಿಲ್ಲ, ಆದ್ದರಿಂದ ಅದನ್ನು ಒಡೆದು ನೋಡಿ, ರಾಮನಾಮವಿಲ್ಲದ್ದನ್ನು ನೋಡಿ ನಾನು ಬಿಸಾಕಿದೆ" ಎಂದನು. ಆಗ ಸೀತೆಯು "ಹಾಗಾದರೆ ನಿನ್ನ ಶರೀರದಲ್ಲೂ ರಾಮನಾಮವಿಲ್ಲ, ಅದನ್ನೂ ಬಿಸಾಕಿಬಿಡು" ಎಂದಳು. ಆಗ ಹನುಮಂತನು ತನ್ನ ಎದೆಯನ್ನು ಸೀಳಿ ತೋರಿಸಿದನು. ಅದರಲ್ಲಿ ರಾಮ, ರಾಮ ಎಂದು ಬರೆದಿರುವುದು ಕಾಣಿಸಿತು, ಹನುಮಂತನು ಆ ಕ್ಷಣವೇ ಅಯೋಧ್ಯೆ ಬಿಟ್ಟು ದೂರ ಹಾರಿ ಹೋದನು.

ಶ್ರೀ ರಾಮಚಂದ್ರನು ಅಯೋಧ್ಯಾನಗರದ ಜನತೆಯ ಕ್ಷೇಮ ಕಾಪಾಡಲು ಒಂದು ದಿನ ರಾತ್ರಿ ವೇಷ ಬದಲಿಸಿಕೊಂಡು ಸುತ್ತಾಡುತ್ತಿದ್ದನು. ಒಂದು ಮನೆಯ ಒಳಗಡೆ ಜೋರು ಜೋರಾಗಿ ಮಾತನಾಡುವುದು ಕೇಳಿಸುತ್ತಿತ್ತು. ರಾಮ ಹತ್ತಿರ ಹೋಗಿ ಆ ಮನೆಯ ಕಿಟಕಿಗೆ ತನ್ನ ಕಿವಿಯನ್ನು ಇಟ್ಟು ಆಲಿಸಿದನು. ಆ ಮನೆಯ ಯಜಮಾನ ತನ್ನ ಪತ್ನಿಗೆ ಬಯ್ಯುತ್ತಿದ್ದನು. ಎರಡು ದಿನ ತನ್ನ ಅಕ್ಕನ ಮನೆಗೆ ಹೋಗಿದ್ದಕ್ಕಾಗಿ ಪತ್ನಿಯ ಪತಿವ್ರತ್ಯವನ್ನು ಶಂಕಿಸುತ್ತಿದ್ದನು. ಅವಳು ಅಳುತ್ತಾ ಶ್ರೀ ರಾಮನ ಮೇಲೆ ಆಣೆ ಇಟ್ಟು ತಾನು ಪತಿವ್ರತೆ ಎಂದು ಅಂಗಲಾಚುತ್ತಿದ್ದಳು. ಆದರೆ ಆ ಅಗಸನು ಅವನ ಪತ್ನಿಯನ್ನು ಕುರಿತು ಹೀಗೆಂದನು. "ನಾನೇನು ಶ್ರೀರಾಮಚಂದ್ರನಲ್ಲ, ರಾವಣನ ಹತ್ತಿರ ಎಷ್ಟೊ ಸಮಯದವರೆಗೆ ಇದ್ದ ಸೀತೆಯನ್ನು ತಂದು ಇಟ್ಟುಕೊಳ್ಳುವುದಕ್ಕೆ, ರಾಮ ಸೀತೆಯ ಬಗ್ಗೆ ಸಂಶಯ ವ್ಯಕ್ತಪಡಿಸಿ ಅಯೋಧ್ಯೆಯ ಜನರೆಲ್ಲಾ ಮಾತನಾಡಿಕೊಳ್ಳುತ್ತಿದ್ದಾರೆ, ಇಂಥಾ ಅಪವಿತ್ರ ಹೆಂಡತಿ ಇದ್ದಾಳೆ ಎಂದು ತಿಳಿದು ಯಾವ ಗಂಡಸು ಬದುಕಿರಲು ಸಾಧ್ಯ?" ಈ ಮಾತುಗಳನ್ನು ಕೇಳಿದ ರಾಮನಿಗೆ ತನ್ನ ಕಿವಿಗೆ ಕಾದ ಎಣ್ಣೆ ಸುರಿದಂತಾಯಿತು.

ಮಾರನೇ ದಿನ ಅಯೋಧ್ಯೆಯಲ್ಲಿ ಸಭೆ ಕರೆಯಲಾಯಿತು. ರಾಮಚಂದ್ರನು ಅಯೋಧ್ಯೆಯ ಜನತೆ ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತಿದ್ದ ವಿಷಯ ಎಲ್ಲರಿಗೂ ತಿಳಿಸಿದನು. ಆ ವಿಷಯವಾಗಿ ಭಾರಿ ಚರ್ಚೆಯಾಯಿತು. ಸೀತೆಯನ್ನು ಸಭೆಗೆ ಕರೆಸಲಾಯಿತು. ಸೀತೆಗೆ ವಿಷಯವನ್ನೆಲ್ಲಾ ತಿಳಿಸುತ್ತಾ ತಕ್ಷಣವೇ ಅಯೋಧ್ಯೆ ಬಿಟ್ಟು ತೆರಳುವಂತೆ ತಿಳಿಸಲಾಯಿತು. ಸೀತೆಯು ರೋಧಿಸುತ್ತಾ, ತಾನು

ಪತಿವ್ರತೆ ಎಂದೂ, ರಾವಣನು ತನ್ನನ್ನು ಮುಟ್ಟಿಲ್ಲವೆಂದೂ ತಿಳಿಸಿದಳು. ಏಕೆಂದರೆ ರಾವಣನಿಗೂ ಋಷಿಯ ಶಾಪವಿತ್ತು. ಅವನೇನಾದರೂ ಪರಸ್ತ್ರೀಯನ್ನು ಬಲವಂತವಾಗಿ ಕೂಡಿದರೆ ತಕ್ಷಣವೇ ಅವನ ಮರಣವಾಗುವುದು. ಆ ಸ್ತ್ರೀಯು ತನ್ನ ಒಪ್ಪಿಗೆಯ ಮೇರೆಗೆ ಅವಳನ್ನು ಕೂಡಿದರೆ ಯಾವುದೇ ಅಪಾಯವಿಲ್ಲ ಎಂಬ ವಿಷಯ ರಾವಣನಿಗೆ ತಿಳಿದಿದ್ದರಿಂದ ಅವನು ಬಲವಂತವಾಗಿ ಸೀತೆಯನ್ನು ಮುಟ್ಟುವ ಹಾಗಿರಲಿಲ್ಲ, ಹಾಗಾಗಿ ಸೀತೆ ಪತಿವ್ರತೆಯಾಗೇ ಉಳಿದಿದ್ದಳು. ಈ ವಿಷಯವನ್ನು ರಾಮನಿಗೆ ತಿಳಿಸಿದರೂ ರಾಮನು ಒಪ್ಪಲು ಸಿದ್ಧವಾಗಿರಲಿಲ್ಲ. ಅಯೋಧ್ಯೆಗೆ ಕಳಂಕ ತಗಲುವುದೆಂಬ ಕಾರಣಕ್ಕೆ ಸೀತೆಯನ್ನು ಅಯೋಧ್ಯೆ ಬಿಟ್ಟು ತೆರಳುವಂತೆ ಸೂಚಿಸಿದನು. ಸೀತೆಗೆ ಭೂಮಿ ಬಾಯಿ ಬಿಟ್ಟು ನುಂಗುತ್ತಿರುವಂತೆ ಆಯಿತು.

ಸೀತೆ ಅರಮನೆ ಬಿಟ್ಟು ಹೊರಟಳು. ಹೋಗುವಾಗ ತಿರುಗಿ ತಿರುಗಿ ತನ್ನ ಪತಿಯನ್ನು ಹಾಗೂ ಅರಮನೆಯನ್ನು ನೋಡುತ್ತಾ ಹೊರಟಳು. ಕಾಡು ಮೇಡನ್ನು ಅಲೆಯುತ್ತಾ ಋಷಿ ವಾಲ್ಮೀಕಿಯ ಆಶ್ರಮದ ಬಳಿ ಬಂದಳು. ಬೇಸಿಗೆಯ ಬಿಸಿಲು, ಗರ್ಭವತಿ ಬೇರೆ, ಬಳಲಿ ಬೆಂಡಾಗುತ್ತಾ, ಕೊನೆಗೆ ಜ್ಞಾನ ತಪ್ಪಿ ಬಿದ್ದುಹೋದಳು. ಋಷಿ ವಾಲ್ಮೀಕಿಗಳು ಅತ್ತ ಕಡೆ ಬರುತ್ತಿದ್ದವರು, ಯಾರೋ ಹೆಣ್ಣು ಮಗಳು ಬಿದ್ದು ಬಿಟ್ಟಿದ್ದಾಳೆಂದು ತಿಳಿದು ಹತ್ತಿರವೇ ಇದ್ದ ನದಿಯಿಂದ ನೀರನ್ನು ತಂದು ಮುಖಕ್ಕೆ ಸಿಂಪಡಿಸಿದರು. ಸೀತೆಗೆ ಎಚ್ಚರವಾಯಿತು. ನೀನ್ಯಾರು ಎಂದು ವಾಲ್ಮೀಕಿ ಕೇಳಿದಾಗ ನನ್ನ ಕೆಳಗೆ ಭೂಮಿ ಇದೆ, ಮೇಲೆ ಆಕಾಶವಿದೆ, ಇದಕ್ಕಿಂತ ಹೆಚ್ಚೇನು ಹೇಳಲಾರೆನೆಂದಳು. ವಾಲ್ಮೀಕಿಯು ದಯಾಳುವಾದ್ದರಿಂದ ಆಶ್ರಮವಾಸಿಗಳ ಸಹಾಯದಿಂದ ತಮ್ಮ ಆಶ್ರಮಕ್ಕೆ ಕರೆದುಕೊಂಡು ಹೋದರು. ಸೀತೆಯನ್ನು ಮಗಳಂತೆ ನೋಡಿಕೊಳ್ಳುವುದಾಗಿ ಹೇಳಿದರು.

ಪರಮೇಶ್ವರ ಕಬೀರರು ತ್ರೇತಾಯುಗದಲ್ಲಿ ಋಷಿ ಮುನೀಂದ್ರರ ರೂಪದಲ್ಲಿ ಬಂದು ಲೀಲೆಗಳನ್ನು ಮಾಡುತ್ತಿದ್ದರು. ಒಂದು ಬಾರಿ ಅವರು ಹನುಮಂತನನ್ನು ಭೇಟಿಯಾದರು. 'ಸತ್ ಸಾಹೇಬ್' ಎನ್ನುತ್ತಾ ಒಂದು ಬಂಡೆಯ ಮೇಲೆ ಕುಳಿತರು. 'ರಾಮ್ ರಾಮ್' ಎನ್ನುತ್ತಾ ಹನುಮಂತನು ಇನ್ನೊಂದು ಬಂಡೆಯ ಮೇಲೆ ಕುಳಿತನು. ಹನುಮಂತನು ಕಬೀರರನ್ನು ನೀವ್ಯಾರೆಂದು ಕೇಳಿದನು. ಕಬೀರರು "ಹೇ ಹನುಮಂತ, ನಾನು ಈ ಮೊದಲೇ ನಿನ್ನನ್ನು ಭೇಟಿಯಾಗಿರುವೆ, ನೀನು ಸೀತೆಯ ಬಳೆಯನ್ನು ಹುಡುಕುತ್ತಾ ಬರುತ್ತಿರುವಾಗ ಆ ಕೋತಿಯು ಬಳೆಯನ್ನು ಮಡಿಕೆಯಲ್ಲಿ ಹಾಕಿತ್ತಲ್ಲ, ಆಗ ನಾನು ನಿನ್ನನ್ನು ಭೇಟಿಯಾಗಿದ್ದೆ" ಎಂದರು. ಹನುಮಂತನಿಗೆ ಕಬೀರರನ್ನು ಗುರುತಿಸುವುದು ಕಷ್ಟವಾಗಲಿಲ್ಲ, ಆಗ ಕಬೀರರು ಹನುಮಂತನಿಗೆ ಹೀಗೆಂದರು. "ಹೇ ಪವನ ಪುತ್ರ! ನಾನು ನಿನಗೆ ಭಕ್ತಿ ಜ್ಞಾನವನ್ನು ನೀಡಲು ಬಂದಿರುವೆ. ನೀನು ದಶರಥ ಪುತ್ರ ರಾಮಚಂದ್ರನನ್ನು ಪೂಜಿಸುತ್ತಿರುವೆ. ಅವನು ಪೂರ್ಣ ಪರಮಾತ್ಮನಲ್ಲ. ಪೂರ್ಣ ಪರಮಾತ್ಮ ಅವಿನಾಶಿಯಾಗಿರುತ್ತಾನೆ." ಹನುಮಂತನು, "ಹೇ ಋಷಿವರ್ಯರೇ, ನಿಮ್ಮ ಮಾತುಗಳಿಂದ ನನಗೆ ನೋವಾಗುತ್ತಿದೆ. ಬೇರೆ ಏನಾದರೂ ವಿಷಯವಿದ್ದರೆ ಹೇಳಿ" ಎಂದನು. ಯಾರಾದರೂ ತಪ್ಪು ದಾರಿಯಲ್ಲಿ ಹೋಗುತ್ತಿದ್ದರೆ, ಅದೇ ರಸ್ತೆಯನ್ನು ಸರಿಯಾದ ದಾರಿಯೆಂದು ತಿಳಿದು ಮುಂದೆ ಸಾಗುತ್ತಿದ್ದರೆ, ಅದು ತಪ್ಪಾಗುವುದು. ಯಾರಾದರೂ ಸಜ್ಜನರು ಅವನಿಗೆ ನೀನು ತಪ್ಪುದಾರಿಯಲ್ಲಿ ನಡೆಯುತ್ತಿರುವೆ, ಮುಂದೆ ದರೋಡೆ ಕೋರರಿದ್ದಾರೆ ಎಂದು ತಿಳಿಸಿದರೂ, ಅವನು ಆ ಸಜ್ಜನನ ಮಾತಿಗೆ ಬೆಲೆ ಕೊಡದೆ ಮುಂದೆ ಸಾಗಿದರೆ, ಮುಂದೆ ದರೋಡೆಕೋರರು ಅವನನ್ನು ದೋಚುತ್ತಾರೆ. ಅಷ್ಟಾದರೂ ಆ ವ್ಯಕ್ತಿ ನನ್ನ ಭಾವನೆಗಳಿಗೆ ಧಕ್ಕೆ ಬರುವುದೆಂದು ಹೇಳಿದರೆ ಏನು ಮಾಡುವುದು?" ಆಗ ಹನುಮಂತನು ಸುಮ್ಮನಾದನು. ಆದರೆ ಶಾಂತಿಯಿಂದ ಕಬೀರರ ಮಾತನ್ನು ಕೇಳುತ್ತಿದ್ದನು. ಆಗ ಕಬೀರರು ಮುಂದುವರೆಸಿದರು. "ಶ್ರೀ ರಾಮಚಂದ್ರ ವಿಷ್ಣುವಿನ ಅವತಾರ. ಶ್ರೀ ಬ್ರಹ್ಮಾ, ವಿಷ್ಣು, ಮಹೇಶ್ವರರ ತಂದೆ ಕಾಲಬ್ರಹ್ಮ. ಅವನನ್ನೇ ಜ್ಯೋತಿ ನಿರಂಜನ್ ಎಂದೂ ಕರೆಯುತ್ತಾರೆ. ಕಾಲನಿಗೆ ಅವನ ತಪ್ಪಿಗೆ

ಶಿಕ್ಷೆಯಾಗಿ ಶಾಪ ಕೊಡಲಾಗಿದೆ, ಅದೇನೆಂದರೆ ಒಂದು ಲಕ್ಷ ಮಾನವ ಶರೀರ ಧಾರಿಗಳನ್ನು ಪ್ರತಿದಿನವು ತಿನ್ನಲಾಗುತ್ತದೆ. ಒಂದೂ ಕಾಲು ಲಕ್ಷ ಶರೀರಧಾರಿಗಳನ್ನು ಉತ್ಪತ್ತಿ ಮಾಡಲಾಗುತ್ತದೆ. ಇದೇ ಕಾರಣಕ್ಕೆ ಈ ಮೂವರೂ ಪುತ್ರರನ್ನು ಮೂರು ವಿಭಾಗಗಳಿಗೆ ಮುಖಂಡನನ್ನಾಗಿ ಮಾಡಲಾಗಿದೆ. ಬ್ರಹ್ಮಾನು ರಜಗುಣದವನು. ಇದರ ಪ್ರಭಾವದಿಂದ ಎಲ್ಲಾ ಪ್ರಾಣಿಗಳು ಪ್ರೇರಿತಗೊಂಡು ಸಂತಾನವನ್ನು ಉತ್ಪತ್ತಿ ಮಾಡುವರು ಆದ್ದರಿಂದ ಬ್ರಹ್ಮಾನನ್ನು ಸೃಷ್ಟಿಕರ್ತ ಎನ್ನಲಾಗಿದೆ. ನಿಜವಾಗಲೂ ಪೂರ್ಣ ಪರಮಾತ್ಮನೇ ಸೃಷ್ಟಿಕರ್ತನು.

ವಿಷ್ಣುವು ಸದ್ಗುಣನು. ಕಾಲಬ್ರಹ್ಮನು ತನ್ನ ಎರಡನೇ ಪುತ್ರನನ್ನು ಕರ್ಮಾನುಸಾರ ಪಾಲನೆ ಮಾಡುವ ವಿಭಾಗಕ್ಕೆ ನೇಮಿಸಿದ್ದಾನೆ. ಕಾಲಬ್ರಹ್ಮನು ತನ್ನ ಮೂರನೇ ಮಗನಾದ ತಮಗುಣ ಶಿವನನ್ನು ಒಂದು ಲಕ್ಷ ಮಾನವ ಶರೀರಧಾರಿ ಜೀವಿಗಳನ್ನು ಕೊಂದು ಅವನ ಬಳಿ ಕಳುಹಿಸುವ ವಿಭಾಗಕ್ಕೆ ನೇಮಿಸಿದ್ದಾನೆ. ಅವನು ಸ್ವಯಂ ಅವ್ಯಕ್ತನು. ನೀನು ನೋಡುತ್ತಿರುವ ಹಾಗೆ ಇಲ್ಲಿ ಯಾರೂ ಅಮರರಲ್ಲ. ದೇವತೆಗಳೂ ಸಾವನ್ನಪ್ಪುವರು. ಬಹ್ಮಾ, ವಿಷ್ಣು, ಮಹೇಶ್ವರರೂ ಸಹ ಹುಟ್ಟುತ್ತಾರೆ, ಸಾಯುತ್ತಾರೆ. ಎಲ್ಲರೂ ಬದುಕುತ್ತಾರೆ, ಎಲ್ಲರಿಗೂ ವೃದ್ಧಾಪ್ಯವು ಬರುತ್ತದೆ. ಒಂದು ಲೋಕವಿದೆ. ಅಲ್ಲಿ ವೃದ್ಧಾಪ್ಯವೂ ಇಲ್ಲ. ಸಾವೂ ಇಲ್ಲ, ಅಲ್ಲಿ ಯಾವ ರಾವಣ ಯಾರ ಪತ್ನಿಯನ್ನೂ ಅಪಹರಿಸುವುದಿಲ್ಲ. ಒಬ್ಬ ಸೀತೆಯನ್ನು ಬಿಡಿಸಿ ತರಲು ನಡೆದ ಯುದ್ಧದಲ್ಲಿ ಎಷ್ಟೊಂದು ಸಾಮಾನ್ಯ ಸೈನಿಕರು ಮರಣವನ್ನಪ್ಪಿದರು! ನೀನಂತೂ ರಾಮಚಂದ್ರನಿಗಾಗಿ ನಿನ್ನ ಪ್ರಾಣವನ್ನು ಒತ್ತೆ ಇಟ್ಟು ಇಡೀ ಲಂಕೆಯನ್ನೇ ಸುಟ್ಟುಹಾಕಿದೆ. ರಾವಣನ ಸಹೋದರ ಅಹಿರಾವಣನು ಪಾತಾಳ ಲೋಕದ ರಾಜನಾಗಿದ್ದನು. ಅವನು ರಾಮಲಕ್ಷಣರನ್ನು ಅಪಹರಿಸಿ ಪಾತಾಳ ಲೋಕಕ್ಕೆ ಎತ್ತಿಕೊಂಡು ಹೋಗಿದ್ದನು. ನೀನು ಅಲ್ಲಿಗೂ ತೆರಳಿ ಅವರಿಬ್ಬರನ್ನು ಕರೆತಂದೆ. ಈಗ ನೀನೇ ಹೇಳು. ಅವರು ಪರಮಾತ್ಮರೇ? ಯುದ್ಧದಲ್ಲಿ ರಾಮ ಲಕ್ಷ್ಮಣರನ್ನು ನಾಗಪಾಶವು ಬಂಧಿಸಿತ್ತು. ಒಂದೇ ನಿಮಿಷದಲ್ಲಿ ರಾವಣ ಸೈನ್ಯವು ಅವರನ್ನು ಕೊಲ್ಲಬಹುದಿತ್ತು. ಆದರೆ ಅಷ್ಟರಲ್ಲಿ ಗರುಡನನ್ನು ಕರೆಯಲಾಯಿತು. ಗರುಡನು ನಾಗಪಾಶವನ್ನು ಕತ್ತರಿಸಿದನು. ಆಗ ಎಲ್ಲರೂ ಬಂಧನದಿಂದ ಮುಕ್ತರಾದರು. ಪರಮಾತ್ಮನು ಇಷ್ಟು ದುರ್ಬಲರಾದರೆ ಭಕ್ತನ ಗತಿಯೇನು? ಯೋಚಿಸಿ ನೋಡು.

ಕಾಟೇ ಬಂದತ್ ವಿಪತ್ ಮೇ, ಕಠಿಣ್ ಕಿಯೋ ಸಂಗ್ರಾಮ್ ।
ಚಿನ್ಹೋ ರೆ ನರ್ ಪ್ರಾಣಿಯೋ, ಗರುಡ್ ಬಡೋ ಕೇ ರಾಮ್ ॥

ಶಬ್ದಾರ್ಥ :– ಈ ವಾಣಿಯ ಶಬ್ದಾರ್ಥವನ್ನು ಮೇಲೆ ತಿಳಿಸಲಾಗಿದೆ.

"ಹೇ ಋಷಿಗಳೇ, ಸಮುದ್ರದ ಮೇಲೆ ಸೇತುವೆ ಕಟ್ಟುವುದು ಸಾಮಾನ್ಯವೇ? ಸಾಮಾನ್ಯ ಮನುಷ್ಯ ಮಾಡುವ ಕೆಲಸವೇ? ಪರಮಾತ್ಮನಲ್ಲದೆ ಮತ್ಯಾರು ಮಾಡಲು ಸಾಧ್ಯ?" ಎಂದು ಹನುಮಂತನು ಪ್ರಶ್ನಿಸಿದನು.

ಸಮಂದರ್ ಪಾಂಟಿ ಲಂಕಾ ಗಯೋ, ಸೀತಾ ಕೇ ಭರ್‌ತಾರ್ ।
ಅಗಸ್ತ್ ಋಷಿ ಸಾತೋಂ ಪಿಯೇ, ಇನ್‌ಮೇಂ ಕೌನ್ ಕರ್‌ತಾರ್ ॥

"ಸಮುದ್ರದ ಮೇಲೆ ಸೇತುವೆ ಕಟ್ಟಿದ ಮಾತ್ರಕ್ಕೆ ನೀನು ಶ್ರೀರಾಮಚಂದ್ರನನ್ನು ಪರಮಾತ್ಮ ಎಂದು ಕರೆಯುವುದಾದರೆ, ಅಗಸ್ತ್ಯ ಋಷಿಗಳು ಏಳು ಸಮುದ್ರಗಳನ್ನೇ ಕುಡಿದಿದ್ದರು. ಹಾಗಾದರೆ ಇವರಲ್ಲಿ ಪರಮಾತ್ಮನು ಯಾರು?" ಎಂದು ಕೇಳಿದರು. ನಂತರ ಹನುಮಂತನಿಗೆ ಹೀಗೆಂದು ಹೇಳಿದರು, "ನಿನಗೆ ನೆನಪಿದೆಯಾ? ಒಬ್ಬ ಋಷಿ ಬಂದು ಒಂದು ಪರ್ವತದ ಕಲ್ಲುಗಳನ್ನು ತನ್ನ ದಂಡದಿಂದ ರೇಖೆ ಎಳೆದು ಹಗುರವಾಗಿಸಿದ್ದರು. ಕಲ್ಲುಗಳೂ ಸಹ ನಿನ್ನವು, ಅವುಗಳಿಂದ ಸೇತುವೆ

ಕಟ್ಟಲ್ಪಟ್ಟಿತು. ರಾಮಚಂದ್ರನಂತೂ ಮೂರು ದಿನಗಳಿಂದ ದಾರಿಗಾಗಿ ಕಾಯುತ್ತಿದ್ದನು". ಆಗ ಹನುಮಂತನು ಹೇಳಿದ, "ವಿಶ್ವಕರ್ಮನು ರಾಮಚಂದ್ರನ ಕರೆಗೆ ಓಗೊಟ್ಟು ವೇಷ ಬದಲಾಯಿಸಿಕೊಂಡು ಬಂದನು". ಆಗ ಪರಮೇಶ್ವರ ಕಬೀರರೆಂದರು "ವಿಶ್ವಕರ್ಮನು ಸೇತುವೆಯ ನಿರ್ಮಾಣ ಮಾಡಬಲ್ಲನು ಆದರೆ ನೀರಿನ ಮೇಲೆ ಕಲ್ಲುಗಳನ್ನು ತೇಲಿಸಲು ಸಾಧ್ಯವೇ? ಆ ದಿನ ಅವರಲ್ಲಿ ಅಹಂಕಾರವೇರ್ಪಟ್ಟಿತ್ತು. ಅವರ ಶಕ್ತಿಯೆಲ್ಲಾ ಮುಕ್ತಾಯವಾಗಿತ್ತು. ಆಗ ನನ್ನ ಆಶೀರ್ವಾದ ಅವರಿಗೆ ಸಿಕ್ಕಿತು" ಎಂದರು. ಆಗ ಹನುಮಂತನು, "ಹಾಗಾದರೆ ನೀವು ಋಷಿ ಮುನೀಂದ್ರರೇ?" ಎಂದು ಕೇಳಿದನು. ಆಗ ಪರಮೇಶ್ವರರೆಂದರು, "ಹೌದು, ನೋಡು ಹನುಮಂತ, ನೀನು ನಿನ್ನ ಸ್ವಾಮಿಗಾಗಿ ಏನೆಲ್ಲಾ ಮಾಡಿದೆ! ಆದರೆ ಅದಕ್ಕೆ ಬದಲಾಗಿ ಸೀತೆಯು ನಿನಗೆ ಅನ್ನಬಾರದ್ದನ್ನೆಲ್ಲಾ ಅಂದಳು, ನಿನ್ನನ್ನು ಊರು ಬಿಟ್ಟು ಹೋಗು ಎಂದಳು. ಆ ಸಮಯದಲ್ಲಿ ಶ್ರೀರಾಮನೂ ಅಲ್ಲಿ ಹಾಜರಿದ್ದರಲ್ಲವೇ? ಹಾಗೆಲ್ಲಾ ಹೇಳಬೇಡವೆಂದು ಸೀತೆಗೆ ಒಮ್ಮೆಯೂ ಹೇಳಲಿಲ್ಲ." ಹನುಮಂತನಿಗೆ ಒಳಗೊಳಗೇ ಹೌದು ಎನ್ನಿಸತೊಡಗಿತು. ಆದರೆ ಹಾಗೆಲ್ಲಾ ಯೋಚಿಸಬಾರದು ಎಂದು ಮುನೀಂದ್ರರಿಗೆ ಹೇಳಿದನು. ಆಗ ಮುನೀಂದ್ರರೆಂದರು, "ಸತ್ಯ ಹೇಳಿದರೆ ಯೋಚನೆ ಹೇಗಾಗುತ್ತದೆ? ರಾಮಚಂದ್ರ ಹಾಗೂ ಸೀತೆಯಲ್ಲಿ ಒಳ್ಳೆಯ ಗುಣಗಳು ಇದ್ದಿದ್ದರೆ ನಿನ್ನ ಉಪಕಾರವನ್ನು ಅವರು ಎಂದಿಗೂ ಮರೆಯುತ್ತಿರಲಿಲ್ಲ. ಹಾಗೂ ತಮ್ಮ ಪಾದಗಳ ಬಳಿ ನಿನ್ನನ್ನು ಇಟ್ಟುಕೊಳ್ಳುತ್ತಿದ್ದರು. ನೀನು ಅವರಿಲ್ಲದೆ ಬದುಕೇ ಇಲ್ಲ ಎನ್ನುವೆ. ಕೇಳು ಹನುಮಂತ, ನಿನ್ನ ಜೊತೆ ಹಾಗೆ ನಡೆದುಕೊಂಡ ಕಾರಣ ಅದರ ಫಲ ರಾಮ ಮತ್ತು ಸೀತೆಗೆ ಸಿಕ್ಕಿದೆ. ಕೆಲವು ವರ್ಷಗಳ ನಂತರ ರಾಮನು ಸೀತೆಯನ್ನು ಮನೆಯಿಂದ ಹೊರಗೆ ಕಳುಹಿಸಿದನು. ಆ ಸಮಯದಲ್ಲಿ ಅವಳು ಗರ್ಭವತಿಯಾಗಿದ್ದಳು" ಎಂದರು. ಇದನ್ನು ಕೇಳಿ ಹನುಮಂತನ ಕಣ್ಣಿಂದ ನೀರು ಸುರಿಯಲಾರಂಭಿಸಿತು. ಅವನು ಬಂದು ಋಷಿಯ ಕಾಲಿಗೆ ಬಿದ್ದನು. ಏನನ್ನೂ ಹೇಳಲಿಲ್ಲ. ಅಯೋಧ್ಯೆಯ ಜನರು ಎರಡು ವರ್ಷ ದಸರಾ ಹಾಗೂ ದೀಪಾವಳಿಯನ್ನು ಆಚರಿಸಿದ್ದರು. ಏಕೆಂದರೆ ಯಾವ ದೇವತೆಗಾಗಿ ರಾವಣನನ್ನು ಕೊಲ್ಲಲಾಯಿತೋ, ಇಂದು ಸೀತೆಯು ಎಷ್ಟು ರಾವಣರಿಂದ ಕಷ್ಟವನ್ನು ಸಹಿಸಬೇಕಾಗುವುದೋ? ದೀಪಗಳ ಸಾಲನ್ನು ಸಂತೋಷಕ್ಕಾಗಿ ಇಡಲಾಗುತ್ತದೆ. ರಾಜ ರಾಮಚಂದ್ರ ಹಾಗೂ ರಾಣಿ ಸೀತೆಯು ಬೇರೆ ಬೇರೆಯಾಗಿದ್ದಾರೆ. ದೀಪದ ಸಾಲು ರಾಜನಿಗಾಗಲೀ, ಪ್ರಜೆಗಳಿಗಾಗಲೀ ಸಂತೋಷ ತರುವುದಿಲ್ಲ. ಆದ್ದರಿಂದ ದೀಪಾವಳಿಯ ಉತ್ಸವ ಆಚರಿಸಬಾರದು ಎಂದು ಎಲ್ಲರೂ ನಿರ್ಧರಿಸಿ, ಅದರ ಆಚರಣೆಯನ್ನು ನಿಲ್ಲಿಸಲಾಗಿತ್ತು.

ಆಗ ಹನುಮಂತನೆಂದನು, "ಪ್ರಭು, ಪರಮೇಶ್ವರನ ಬಗ್ಗೆ ಮಾತನಾಡಿ", ಆಗ ಪರಮೇಶ್ವರ ಕಬೀರರು ಸೃಷ್ಟಿಯ ರಚನೆಯ ಬಗ್ಗೆ ಹೇಳಿದರು. ಈ ಸತ್ಯಕತೆಯನ್ನು ಕೇಳಿದ ಹನುಮಂತನು ಗದ್ಗದಿತನಾದನು. ಸತ್ಯಲೋಕವನ್ನು ನೋಡುವ ಇಚ್ಛೆ ವ್ಯಕ್ತಪಡಿಸಿದನು. ಪರಮೇಶ್ವರರು ಆಕಾಶಕ್ಕೆ ಹಾರಿದರು. ಹನುಮಂತನು ನೋಡ ನೋಡುತ್ತಿದ್ದಂತೆಯೇ ಅವರು ಅಂತರ್ಧ್ಯಾನರಾದರು. ಈ ಋಷಿ ಎಲ್ಲಿ ಸಿಗಬಹುದೆಂದು ಹನುಮಂತನಿಗೆ ಚಿಂತೆಯಾಯಿತು. ಇದ್ದಕ್ಕಿದ್ದಂತೆ ಆಕಾಶದಲ್ಲಿ ವಿಶೇಷವಾದ ಬೆಳಕು ಕಾಣಿಸಿತು. ಹನುಮಂತನಿಗೆ ದಿವ್ಯದೃಷ್ಟಿ ನೀಡಿ ಸತ್ಯಲೋಕವನ್ನು ತೋರಿಸಿದರು. ಋಷಿ ಮುನೀಂದ್ರರು ಸಿಂಹಾಸನದ ಮೇಲೆ ಕುಳಿತಿರುವುದು ಕಾಣಿಸಿತು. ಅವರ ಶರೀರದಿಂದ ವಿಶೇಷವಾದ ಪ್ರಕಾಶ ಹೊರಸೂಸುತ್ತಿತ್ತು. ಅವರ ತಲೆಯ ಮೇಲೆ ಕಿರೀಟವಿತ್ತು. ಕೊಂಚ ಹೊತ್ತು ಆ ದೃಶ್ಯವನ್ನು ತೋರಿಸಿ ದಿವ್ಯದೃಷ್ಟಿಯನ್ನು ಕೊನೆಗೊಳಿಸಿ, ಮುನೀಂದ್ರರು ಕೆಳಗಿಳಿದು ಬಂದರು. ಹನುಮಂತನಿಗೆ ಇವರೇ ಪರಮೇಶ್ವರ ಎಂಬ ನಂಬಿಕೆ ಬಂದಿತು. ಸತ್ಯಲೋಕವು ಸುಖದ ಸಾಗರ. ಆಗ ಪರಮೇಶ್ವರ ಕಬೀರರಿಂದ ದೀಕ್ಷೆ ಪಡೆದುಕೊಂಡು ತಮ್ಮ ಜೀವನವನ್ನು ಧನ್ಯಮಾಡಿಕೊಂಡನು. ಈ ರೀತಿ ಹನುಮಂತನಿಗೆ ತಮ್ಮ ಆಶ್ರಯ ನೀಡಿದರು. ಪರಮೇಶ್ವರರು ಇಂಥಾ ಆತ್ಮಗಳಿಗೆ ಅವಶ್ಯವಾಗಿ

ಆಶ್ರಯ ನೀಡುತ್ತಾರೆ.

ಶ್ರೀ ರಾಮಚಂದ್ರನಿಗೆ ತನ್ನ ಮಕ್ಕಳೇ ಆದ ಲವ ಮತ್ತು ಕುಶರಿಂದ ಸೋಲು ಅನುಭವಿಸಬೇಕಾಯಿತು. ಸೀತೆಯು ರಾಮನ ದರ್ಶನ ಮಾಡಲು ಸಹ ಇಚ್ಛಿಸಲಿಲ್ಲ. ನೋಡ ನೋಡುತ್ತಿದ್ದಂತೆ ಅವಳು ಭೂಮಿಯಲ್ಲಿ ಒಂದಾಗಿಹೋದಳು. ಇದರಿಂದ ದುಃಖಿತಗೊಂಡ ರಾಮನು ಅಯೋಧ್ಯೆಯ ಬಳಿ ಹರಿಯುತ್ತಿದ್ದ ಸರಯೂ ನದಿಗೆ ಹಾರಿ ತನ್ನ ಜೀವನ ಲೀಲೆಯನ್ನು ಜಲ ಸಮಾಧಿಯ ಮೂಲಕ ಅಂತ್ಯಗೊಳಿಸಿದನು. ಪರಮಾರ್ಥಿಯಾದ ಹನುಮಂತನಿಗೆ ದುಃಖಿಗಳ ಸಹಾಯ ಮಾಡಿದ ಫಲ ಪ್ರಾಪ್ತಿಯಾಯಿತು. ಪರಮಾತ್ಮ ಸ್ವಯಂ ಆಗಮಿಸಿ ಮೋಕ್ಷದ ಮಾರ್ಗವನ್ನು ತೋರಿಸಿದನು. ಹನುಮಂತ ಮತ್ತೆ ಮಾನವ ಜೀವನವನ್ನು ಪಡೆಯುವನು. ಆಗ ಪರಮೇಶ್ವರ ಕಬೀರರು ಅವನಿಗೆ ಆಶ್ರಯ ನೀಡಿ ಮುಕ್ತಿಯನ್ನು ನೀಡುವನು. ಅವನ ಆತ್ಮದಲ್ಲಿ ಸತ್ಯ ಮತ್ತು ಭಕ್ತಿ ಎಂಬ ಬೀಜವನ್ನು ಬಿತ್ತಲಾಗಿತ್ತು.

## "ನಾವು ಕಾಲನ ಜಾಲದಲ್ಲಿ ಹೇಗೆ ಸಿಲುಕಿಕೊಂಡೆವು?"

ಇದರ ಉತ್ತರವನ್ನು 'ಸೃಷ್ಟಿಯ ರಚನೆ' ಎಂಬ ಅಧ್ಯಾಯದಲ್ಲಿ ನೀಡಲಾಗಿದೆ. ಇದೇ ಪುಸ್ತಕದ **255** ಪುಟದಿಂದ **316**ಪುಟದವರೆಗೆ ಈ ಅಧ್ಯಾಯವಿದೆ.

## ಕಾಲನ ಜೊತೆ ಕಬೀರ್ ಪರಮೇಶ್ವರರ ಮಾತು

ಈಗ ನಾವು ಕಾಲಬ್ರಹ್ಮನ ಲೋಕದಲ್ಲಿ ವಾಸಿಸುತ್ತಿದ್ದೇವೆ. ಆತ್ಮದ ಮೇಲೆ ಸ್ಥೂಲ ಶರೀರವನ್ನು ನಿರ್ಮಿಸಿ ಕಾಲನು ಜೀವವನ್ನು ನಿರ್ಮಿಸಿದ್ದಾನೆ. ಅವನು ಜೀವವನ್ನು ಭ್ರಮೆಗೊಳಪಡಿಸಿದ್ದಾನೆ. ಆತ್ಮದ ಜನಕನಾದ ಪೂರ್ಣಪರಮಾತ್ಮನನ್ನು ಮರೆಸಿದ್ದಾನೆ. ಸ್ವಯಂ ತನ್ನನ್ನು ಪರಮಾತ್ಮನೆಂದು ಪ್ರಾಮಾಣೀಕರಿಸಿದ್ದಾನೆ. ಪರಮಾತ್ಮನು ದುಃಖಿಯಾಗಬೇಕೆಂದು ಯೋಚಿಸಿ, ಪರಮಾತ್ಮನ ಅಂಶವಾದ ಜೀವಾತ್ಮನನ್ನು ಚಿಂತೆಗೀಡುಮಾಡುತ್ತದೆ. ಇದೇ ಮನಸ್ಸು ಪ್ರತಿಯೊಂದು ಆತ್ಮದ ಜೊತೆಯಲ್ಲಿರುತ್ತದೆ. ತಪ್ಪನ್ನು ಮಾಡಿಸುತ್ತಿರುತ್ತದೆ. ಆದರೆ ಶಿಕ್ಷೆಮಾತ್ರ ಜೀವಾತ್ಮ ಅನುಭವಿಸುತ್ತಿರುತ್ತದೆ. ಅಂದರೆ ಮದ್ಯಕುಡಿಯುವುದು, ದುಶ್ಚಟಗಳಿಗೆ ಬಲಿಯಾಗುವುದು, ಅತ್ಯಾಚಾರ ಮಾಡುವುದು, ಪಾಪ ಕೆಲಸಗಳನ್ನು ಮಾಡುವುದು ಹೀಗೆ.... ನೀವು ಸಂತ ರಾಮ್‌ಪಾಲರಿಂದ ದೀಕ್ಷೆ ಪಡೆದರೆ, ಇದೆಲ್ಲದರಿಂದ ಮುಕ್ತಿ ಪಡೆಯಬಹುದು. ಏಕೆಂದರೆ ಜೀವಾತ್ಮನ ಜೊತೆ ಪರಮಾತ್ಮನ ಶಕ್ತಿ ಸೇರಿಕೊಳ್ಳುತ್ತದೆ. ಆತ್ಮಕ್ಕೆ ತತ್ವಜ್ಞಾನದಿಂದ ವಿವೇಕ ಲಭಿಸುತ್ತದೆ. ಪರಮಾತ್ಮನ ಶಕ್ತಿಯ ಕಾರಣದಿಂದ ಆತ್ಮ ದೃಢವಾಗುತ್ತದೆ. ಕಾಲಬ್ರಹ್ಮನು ಕಬೀರ ಪರಮಾತ್ಮನಿಗೆ ಮಾತ್ರ ಹೆದರುತ್ತಾನೆ. ಸಂತ ಗರೀಬ್‌ದಾಸರು ಹೇಳಿದ್ದಾರೆ.

ಕಾಲ್ ಡರೈ ಕರತಾರ್ ಸೆ, ಜಯ್–ಜಯ್–ಜಯ್ ಜಗದೀಶ್ ।
ಜೌರಾ ಜೋಡಿ ಝಾಡ್‌ತಾ, ಪಗ್ ರಜ್ ಡಾರೇ ಶೀಶ್ ॥
ಗರೀಬ್, ಕಾಲ್ ಜೋ ಪೀಸೆ ಪೀಸ್‌ನಾ, ಜೌರಾ ಹೈ ಪನಿಹಾರ್ ।
ಯೆ ದೋ ಅಸಲ್ ಮಜದೂರ್ ಹೈಂ, ಸತಗುರು ಕಬೀರ್ ಕೆ ದರಬಾರ್ ॥

ಭಾವಾರ್ಥ ಸ್ಪಷ್ಟವಾಗಿದೆ. ಪರಮಾತ್ಮ ಕಬೀರರು ನಮ್ಮ ಆತ್ಮವನ್ನು ಕಾಲನ ಬಲೆಯಿಂದ ಬಿಡಿಸುವ ಪ್ರಯತ್ನಮಾಡುತ್ತಿದ್ದಾರೆ. ಕಾಲಬ್ರಹ್ಮನು ನಮ್ಮನ್ನು ಆ ಬಲೆಯಲ್ಲಿ ಸಿಕ್ಕಿಸುವ ಪ್ರಯತ್ನ ಮಾಡುತ್ತಾನೆ. ಮುಂದಿನ ದೃಷ್ಟಾಂತದಲ್ಲಿ ಇದಕ್ಕೆ ಸಾಕ್ಷಿ ಸಿಗುವುದು.

ಪರಮೇಶ್ವರನು ಸರ್ವ ಬ್ರಹ್ಮಾಂಡಗಳ ರಚನೆ ಮಾಡಿ, ಸತ್ಯಲೋಕದಲ್ಲಿ ವಿಶ್ರಾಂತಿ ಪಡೆಯತೊಡಗಿದನು. ನಂತರ ನಾವೆಲ್ಲಾ ಕಾಲನ ಬ್ರಹ್ಮಾಂಡದಲ್ಲಿ ಇದ್ದು, ನಾವು ಮಾಡಿದ ಕರ್ಮ

ಫಲಗಳನ್ನು ಅನುಭವಿಸತೊಡಗಿದೆವು ಹಾಗೂ ಬಹಳ ದುಃಖಿಗಳಾದೆವು. ಸುಖ ಮತ್ತು ಶಾಂತಿಯನ್ನು ಅರಸುತ್ತಾ ಅಲೆದಾಡತೊಡಗಿದೆವು ಹಾಗೂ ನಮ್ಮ ಅಸಲಿ ಮನೆಯಾದ ಸತ್ಯಲೋಕದ ನೆನಪು ನಮ್ಮನ್ನು ಬಾಧಿಸಲಾರಂಭಿಸಿತು. ಅಲ್ಲಿಗೆ ಹೋಗಲು ಭಕ್ತಿ ಎಂಬ ಪ್ರಯತ್ನ ಮಾಡಿದೆವು. ಕೆಲವರು ವೇದಗಳನ್ನು ಕಂಠಸ್ಥಗೊಳಿಸಿಕೊಂಡರು. ಕೆಲವರು ಉಗ್ರ ತಪಸ್ಸನ್ನಾಚರಿಸಿದರು. ಕೆಲವರು ಯೋಗಗಳನ್ನು ಮಾಡಿದರು, ಮತ್ತೆ ಕೆಲವರು ಯಜ್ಞ, ಧ್ಯಾನ, ಸಮಾಧಿ ಮುಂತಾದ ಸಾಧನೆಗಳನ್ನು ಮಾಡಿದರು. ಆದರೆ ಸತ್ಯಲೋಕಕ್ಕೆ ಹೋಗಲಾಗಲಿಲ್ಲ. ಏಕೆಂದರೆ ಮೇಲೆ ತಿಳಿಸಿದ ಕ್ರಮಗಳನ್ನು ಮಾಡುವುದರಿಂದ ಮುಂದಿನ ಜನ್ಮಗಳಲ್ಲಿ ಒಳ್ಳೆಯ ಹಾಗೂ ಸಮೃದ್ಧ ಜೀವನವನ್ನು ಪಡೆದು (ಅಂದರೆ ರಾಜ, ಮಹಾರಾಜ, ದೊಡ್ಡ ವ್ಯಾಪಾರಿ, ಅಧಿಕಾರಿ, ದೇವ, ಮಹಾದೇವ, ಸ್ವರ್ಗ ಮಹಾಸ್ವರ್ಗ ಮುಂತಾದವು) ಮರಳಿ ಲಕ್ಷ ಎಂಭತ್ತನಾಲ್ಕು ಯೋನಿಗಳಲ್ಲಿ ಜನ್ಮ ಪಡೆದರು. ಬಹಳ ಚಿಂತಿತರಾಗಿ ಇರತೊಡಗಿದರು ಹಾಗೂ ದೇವರಲ್ಲಿ ಪ್ರಾರ್ಥಿಸತೊಡಗಿದರು, "ಹೇ ದಯಾಳು! ನಮಗೆ ಅಸಲಿ ಮನೆಯ ದಾರಿಯನ್ನು ತೋರಿಸು. ನಾವು ಹೃದಯಪೂರ್ವಕವಾಗಿ ಭಕ್ತಿಯಿಂದ ಇರುತ್ತೇವೆ. ನೀವೇಕೆ ನಮಗೆ ದರ್ಶನ ನೀಡುತ್ತಿಲ್ಲ?

ಈ ವೃತ್ತಾಂತವನ್ನು ಪರಮೇಶ್ವರ ಕಬೀರರು ಧರ್ಮದಾಸರಿಗೆ ಹೇಳುತ್ತಾ, "ಧರ್ಮದಾಸರೇ, ಈ ಜೀವಿಗಳ ಕೂಗನ್ನು ಕೇಳಿ ನಾನು ನನ್ನ ಸತ್ಯಲೋಕದಿಂದ ಯೋಗಜಿತ್ ವೇಷಧರಿಸಿ ಕಾಲಲೋಕಕ್ಕೆ ಬಂದೆ. **21**ನೇ ಬ್ರಹ್ಮಾಂಡದಲ್ಲಿ ಎಲ್ಲಿ ಕಾಲನ ಅಸಲೀ ಮನೆಯಿದೆಯೋ, ಅಲ್ಲಿ ಉರಿಯುತ್ತಿರುವ ಶಿಲೆಯ ಮೇಲೆ ಜೀವಿಗಳನ್ನು ಹುರಿದು ಸೂಕ್ಷ್ಮ ಶರೀರದಿಂದ ಪದಾರ್ಥವನ್ನು ತೆಗೆಯಲಾಗುತ್ತಿತ್ತು. ನಾನು ತಲುಪಿದ ಮೇಲೆ ಆ ಜೀವಿಗಳನ್ನು ಹುರಿಯುವುದು ತಪ್ಪಿತು. ಅವರು ನನ್ನನ್ನು ನೋಡಿ ಹೇಳಿದರು, "ಹೇ ಪುರುಷ! ನೀವು ಯಾರು? ನಿಮ್ಮ ದರ್ಶನ ಮಾತ್ರದಿಂದಲೇ ನಮಗೆ ಸುಖ ಮತ್ತು ಶಾಂತಿಯ ಭಾಸವಾಗುತ್ತಿದೆ," ಆಗ ಹೇಳಿದ "ನಾನು ಪಾರಬ್ರಹ್ಮ ಪರಮೇಶ್ವರ ಕಬೀರ. ನೀವೆಲ್ಲಾ ಜೀವಗಳು ನನ್ನ ಲೋಕದಿಂದ ಬಂದು ಕಾಲಬ್ರಹ್ಮನ ಲೋಕದಲ್ಲಿ ಸಿಕ್ಕಿಹಾಕಿ ಕೊಂಡಿರುವಿರಿ. ಈ ಕಾಲನು ಪ್ರತಿದಿನವೂ ಒಂದು ಲಕ್ಷ ಮನುಷ್ಯರ ಸೂಕ್ಷ್ಮ ಶರೀರಗಳಿಂದ ಪದಾರ್ಥವನ್ನು ತೆಗೆದು ತಿನ್ನುತ್ತಿದ್ದಾನೆ. ನಂತರ ಶಿಕ್ಷೆ ಅನುಭವಿಸಲು ನಾನಾ ರೀತಿಯ ಯೋನಿಗಳಿಗೆ ಬಿಡುತ್ತಿದ್ದಾನೆ." ಎಂದೆ. ಆಗ ಆ ಜೀವಾತ್ಮಗಳು ಹೇಳಲಾರಂಭಿಸಿದವು, "ಹೇ ದಯಾಳು ಪರಮೇಶ್ವರ! ನಮ್ಮನ್ನು ಈ ಕಾಲನ ಸೆರೆಮನೆಯಿಂದ ಬಿಡಿಸು." ಆಗ ನಾನೆಂದೆ, "ಈ ಬಹ್ಮಾಂಡವನ್ನು ಕಾಲನು ಮೂರು ಬಾರಿ ತಪಸ್ಸನ್ನಾಚರಿಸಿ ನನ್ನಿಂದ ಪಡೆದು ಕೊಂಡಿದ್ದಾನೆ. ನೀವು ಇಲ್ಲಿ ಉಪಯೋಗಿಸುತ್ತಿರುವಂಥಾ ಎಲ್ಲಾ ವಸ್ತುಗಳು ಕಾಲನದ್ದು. ನೀವೆಲ್ಲಾ ನಿಮ್ಮ ಇಷ್ಟದಂತೆಯೇ ಇಲ್ಲಿ ಸುತ್ತಾಡಲು ಬಂದಿರುವಿರಿ. ಆದ್ದರಿಂದ ಈಗ ನಿಮ್ಮ ಮೇಲೆ ಕಾಲಬ್ರಹ್ಮನ ಋಣವಿದೆ. ನನ್ನ ನಿಜವಾದ ನಾಮ ಸ್ಮರಣೆಯನ್ನು ಜಪಿಸದ ಹೊರತು ಆ ಋಣದಿಂದ ನೀವು ಬಿಡುಗಡೆಯಾಗಲಾರಿರಿ".

ಎಲ್ಲಿಯವರೆಗೆ ನೀವು ಋಣಮುಕ್ತರಾಗುವುದಿಲ್ಲವೋ ಅಲ್ಲಿಯವರೆಗೆ ನೀವು ಕಾಲಬ್ರಹ್ಮನ ಜೈಲಿನಿಂದ ಹೊರಬರಲಾರಿರಿ. ಅದಕ್ಕಾಗಿ ನೀವು ನನ್ನಿಂದ ಉಪದೇಶ ಪಡೆದು ಭಕ್ತಿಯಿಂದ ನಾಮಸ್ಮರಣೆ ಮಾಡಬೇಕಾಗುವುದು. ಆಗ ನಾನು ನಿಮ್ಮನ್ನು ಬಿಡಿಸಿಕೊಂಡು ಕರೆದುಕೊಂಡು ಹೋಗುವೆನು". ಈ ಸಂವಾದ ನಡೆಯುತ್ತಿರುವಾಗಲೇ ಕಾಲಬ್ರಹ್ಮನು ಪ್ರತ್ಯಕ್ಷನಾದನು. ಬಹಳ ಕೋಪಗೊಂಡು ನನ್ನ ಮೇಲೆ ಆಕ್ರಮಣ ಮಾಡಲು ಪ್ರಯತ್ನಿಸಿದನು. ನಾನು ನನ್ನ ಶಬ್ದಶಕ್ತಿಯಿಂದ ಅವನನ್ನು ಮೂರ್ಛಿತನನ್ನಾಗಿ ಮಾಡಿದೆ. ಸ್ವಲ್ಪ ಸಮಯದ ನಂತರ ಅವನಿಗೆ ಎಚ್ಚರವಾಯಿತು. ನನ್ನ ಕಾಲ ಮೇಲೆ ಬಿದ್ದು ಕ್ಷಮೆಯಾಚಿಸಿದನು ಹಾಗೂ "ನೀವು ನನಗಿಂತ ದೊಡ್ಡವರು. ನನ್ನ ಮೇಲೆ ದಯೆತೋರಿಸಿ ಹಾಗೂ ನನ್ನ ಲೋಕಕ್ಕೆ ಏಕೆ ಬಂದಿರುವಿರಿ ಎಂದು ಹೇಳಿ" ಎಂದನು. ಆಗ ನಾನು ಕಾಲ ಪುರುಷನಿಗೆ ಹೇಳಿದೆ, "ಕೆಲವು ಜೀವಾತ್ಮಗಳು ಭಕ್ತಿಯಿಂದ ಪೂಜಿಸಿ ತಮ್ಮ ಅಸಲೀ

ಮನೆಯಾದ ಸತ್ಯಲೋಕಕ್ಕೆ ಮರಳಿ ಹೋಗಲು ಇಚ್ಛಿಸುತ್ತಿವೆ. ಅವುಗಳಿಗೆ ಸತ್ಯ, ಭಕ್ತಿಮಾರ್ಗ ದೊರಕುತ್ತಿಲ್ಲ. ಆದ್ದರಿಂದ ಅವರು ಭಕ್ತಿಯಿಂದ ಇದ್ದಾಗ್ಯೂ ಇದೇ ಲೋಕದಲ್ಲಿ ಇರುತ್ತಿದ್ದಾರೆ. ನಾನು ಅವರಿಗೆ ಸತ್ಯ ಭಕ್ತಿಮಾರ್ಗವನ್ನು ತಿಳಿಸಲು ಹಾಗೂ ನಿನ್ನ ರಹಸ್ಯವನ್ನು ತಿಳಿಸಲು ಇಲ್ಲಿಗೆ ಬಂದಿದ್ದೇನೆ. ನೀನು ಕಾಲನು. ಒಂದು ಲಕ್ಷ ಜೀವಿಗಳ ಆಹಾರ ಸೇವಿಸುತ್ತಿದ್ದಾನೆ ಹಾಗೂ ಒಂದೂಕಾಲು ಲಕ್ಷ ಜೀವಿಗಳನ್ನು ಉತ್ಪತ್ತಿಮಾಡುತ್ತಿದ್ದಾನೆ ಹಾಗೂ ಭಗವಂತನಾಗಿ ಕುಳಿತಿದ್ದಾನೆ ಎಂದು ತಿಳಿಸಲು ಬಂದಿರುವೆ. ನೀನು ಭಗವಂತನಲ್ಲ, ಕೇವಲ ಕಾಲಬ್ರಹ್ಮ ಎಂದು ತಿಳಿಸಲು ಬಂದಿರುವೆ" ಎಂದನು. ಇದನ್ನು ಕೇಳಿದ ತಕ್ಷಣ ಕಾಲಬ್ರಹ್ಮನು ಹೇಳಿದನು. "ಜೀವಿಗಳು ಮರಳಿ ಹೊರಟು ಹೋದರೆ ನನ್ನ ಊಟದಗತಿಯೇನು? ನಾನು ಹಸಿವಿನಿಂದ ಸತ್ತು ಹೋಗುವೆ. ಮೂರೂ ಯುಗಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ಜೀವಿಗಳನ್ನು ತೆಗೆದುಕೊಂಡು ಹೋಗು ಹಾಗೂ ನಾನು ಕಾಲನೆಂದು ಹೇಳಬೇಡ. ಇದೇ ನನ್ನ ಪ್ರಾರ್ಥನೆ ಎಂದು ಕಾಲನು ನನ್ನಿಂದ ಭಾಷೆ ತೆಗೆದುಕೊಂಡನು." ನಂತರ ಕಬೀರರು ಧರ್ಮದಾಸನಿಗೆ ತಿಳಿಸುತ್ತಾ ಹೀಗೆಂದರು. "ಸತ್ಯಯುಗ, ತ್ರೇತಾಯುಗ, ದ್ವಾಪರಯುಗದಲ್ಲೂ ನಾನು ಬಂದಿದ್ದೆ ಹಾಗೂ ಸಾಕಷ್ಟು ಜೀವಿಗಳನ್ನು ಸತ್ಯಲೋಕಕ್ಕೆ ತೆಗೆದುಕೊಂಡು ಹೋದೆ. ಆದರೆ ಅವನ ರಹಸ್ಯವನ್ನು ಮಾತ್ರ ಹೇಳಲಿಲ್ಲ. ಈಗ ನಾನು ಕಲಿಯುಗದಲ್ಲಿ ಬಂದಿರುವೆ ಹಾಗೂ ಕಾಲನ ಜೊತೆ ಸಂವಾದವಾಯಿತು. ಕಾಲದೇವನು ನನಗೆ ಹೇಳಿದನು. "ನೀವು ಎಷ್ಟೇ ಹೇಳಿದರೂ ಯಾರೂ ನಿಮ್ಮ ಮಾತನ್ನು ಕೇಳಲಾರರು, ಮೊದಲನೆಯದಾಗಿ ನಾನು ಯಾವ ಜೀವಿಗಳನ್ನೂ ಭಕ್ತಿಗೆ ಅರ್ಹರನ್ನಾಗಿ ಮಾಡಿಲ್ಲ. ಅವರನ್ನು ಬೀಡಿ, ಸಿಗರೇಟು, ಮದ್ಯ, ಮಾಂಸ ಮುಂತಾದ ದುಶ್ಚಟಗಳಿಗೆ ಗುಲಾಮನಾಗಿ ಮಾಡಿ ಅವರ ವೃತ್ತಿಯನ್ನು ಹಾಳು ಮಾಡಿರುವೆ. ವಿವಿಧ ರೀತಿಯ ಕೆಟ್ಟ ಪೂಜೆಗಳಲ್ಲಿ ಜೀವಾತ್ಮಗಳು ಮಗ್ನರಾಗಿರುವಂತೆ ನೋಡಿಕೊಂಡಿದ್ದೇನೆ. ಎರಡನೆಯದಾಗಿ ಅವರಿಗೆ ಅರಿವು ಮೂಡಿಸಿ ವಾಪಸ್ಸು ನಿಮ್ಮ ಲೋಕಕ್ಕೆ ಹೊರಟು ಹೋದರೆ ನಾನು ಮತ್ತೆ ನನ್ನ ದೂತರನ್ನು ಕಳುಹಿಸಿ ನಿಮ್ಮ ಹೆಸರಿನಲ್ಲಿ 12 ಪಂಥ ನಡೆಸಿ ಜೀವಗಳನ್ನು ಭ್ರಮೆಗೊಳಪಡಿಸುವೆ. ಅವರೆಲ್ಲಾ ಸತ್ಯಲೋಕದ ಮಹಿಮೆ ಜಪಿಸುವರು, ನಿಮ್ಮ ಜ್ಞಾನವನ್ನು ಅರಿಯುವರು ಆದರೆ ನಾಮ ಜಪ ಮಾತ್ರ ನನ್ನ ಜಪ ಮಾಡುವರು. ಇದರ ಪರಿಣಾಮವಾಗಿ ಅವರೆಲ್ಲಾ ನನಗೆ ಆಹಾರವಾಗುವರು."

ಈ ಮಾತನ್ನು ಕೇಳಿ ಕಬೀರರು, "ನೀನು ಎಷ್ಟೇ ಪ್ರಯತ್ನಿಸಿದರೂ ನಾನು ಸತ್ಯಮಾರ್ಗವನ್ನು ತಿಳಿಸಿಯೇ ನಾನು ವಾಪಸ್ಸು ಹೊರಡುವೆ. ನನ್ನ ಜ್ಞಾನದ ಉಪದೇಶವನ್ನು ತಿಳಿದವನು ನಿನ್ನ ಆಕರ್ಷಣೆಗೆ ಒಳಗಾಗುವುದಿಲ್ಲ" ಎಂದರು. ಸತ್ಯಯುಗದಲ್ಲಿ ಕಬೀರ ಪರಮೇಶ್ವರರು ಹೇಳಿದರು. "ಹೇ ನಿರಂಜನ್! ನಾನು ಇಚ್ಛಿಸಿದರೆ ನಿನ್ನ ಇಡೀ ಆಟವನ್ನು ಕ್ಷಣಾರ್ಧದಲ್ಲಿ ಮುಗಿಸಿಬಿಡುವೆ. ಆದರೆ ಹೀಗೆ ಮಾಡಲು ನಾನು ಕೊಟ್ಟ ಮಾತು ಅಡ್ಡ ಬರುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ನಾನು ನನ್ನ ಇಷ್ಟವಾದ ಹಂಸಗಳಿಗೆ ಯಥಾರ್ಥಜ್ಞಾನವನ್ನು ನೀಡಿ ಶಬ್ದದ ಬಲವನ್ನು ಪ್ರದಾನ ಮಾಡಿ ಸತ್ಯಲೋಕಕ್ಕೆ ತೆರಳುವೆ"

ಕಹೊ ಕಬೀರ್ ಸುನೋ ಧರ್ಮರಾಯಾ,
ಹಮ್ ಶಂಖೋಂ ಹಂಸಾ ಪದ್ ಪರ್‌ಸಾಯ
ಜಿನ್ ಲೀನ್ಹಾ ಹಮರಾ ಪ್ರವಾನಾ, ಸೋ ಹಂಸಾ ಹಮ್ ಕಿಯೆ ಅಮಾನ ॥

(ಪವಿತ್ರ ಕಬೀರ ಸಾಗರದಲ್ಲಿ ಜೀವಗಳನ್ನು ಭ್ರಮೆಯ ಚಕ್ರವ್ಯೂಹಕ್ಕೆ ತಳ್ಳಲು ಹಾಗೂ ತನ್ನ ಹಸಿವನ್ನು ನೀಗಿಸಲು 2 ರೀತಿಯ ವರ್ಣನೆ.)

ದ್ವಾದಸ್ ಪಂಥ್ ಕರೂಂ ಮೈಂ ಸಾಜಾ, ನಾಮ್ ತುಮ್ಹಾರಾ ಲೇ ಕರೂಂ ಅವಾಜಾ ।
ದ್ವಾದಸ್ ಯಮ್ ಸಂಸಾರ್ ಪಠಹೋ, ನಾಮ್ ತುಮ್ಹಾರೆ ಪಂಥ್ ಚಲೈಹೋ ॥

ಪ್ರಥಮ್ ದೂತ್ ಮಮ್ ಪ್ರಗಟೇ ಜಾಈ, ಪೀಛೆ ಅಂಶ್ ತುಮ್ಹಾರಾ ಆಈ ॥
ಯಹೀ ವಿಧಿ ಜೀವನ್ ಕೋ ಭ್ರಮಾಊಂ,
ಪುರುಷ್ ನಾಮ್ ಜೀವನ್ ಸಮಝಾಊಂ ॥
ದ್ವಾದಸ್ ಪಂಥ್ ನಾಮ್ ಜೋ ಲೈಹೇ, ಸೋ ಹಮರೇ ಮುಖ್ ಆನ್ ಸಮೈ ಹೈ ॥
ಕಹಾ ತುಮ್ಹಾರಾ ಜೀವ್ ನಹೀಂ ಮಾನೇ,
ಹಮಾರೀ ಓರ್ ಹೋಯ್ ಬಾದ್ ಬಖಾನೈ ॥
ಮೈಂ ದೃಢ್ ಫಂದಾ ರಚೀ ಬನಾಈ, ಜಾಮೆಂ ಜೀವ್ ರಹೇ ಉರಝಾಈ ॥
ದೇವಲ್ ದೇವ್ ಪಾಷಾನ್ ಪೂಜಾಈ, ತೀರ್ಥ್ ವ್ರತ್ ಜಪ್–ತಪ್ ಮನ್ ಲಾಈ ॥
ಯಜ್ಞ್ ಹೋಮ್ ಅರೂ ನೇಮ್ ಅಚಾರಾ ಔರ್ ಅನೇಕ್ ಫಂದ್ ಮೆಂ ಡಾರಾ ॥
ಜೋ ಜ್ಞಾನೀ ಜಾಓ ಸಂಸಾರಾ, ಜೀವ್ ನ ಮಾನೈ ಕಹಾ ತುಮ್ಹಾರಾ ॥

**(ಸತಗುರು ವಚನ)**

ಜ್ಞಾನೀ ಕಹೇ ಸುನೋ ಅನ್ಯಾಯೀ, ಕಾಟೋ ಫಂದ್ ಜೀವ್ ಲೇ ಜಾಈ ॥
ಜೇತಿಕ್ ಫಂದ್ ತುಮ್ ರಚೇ ವಿಚಾರೀ ಸತ್ಯ್ ಶಬದ್ ತೈ ಸಬೈ ಬಿಂಡಾರೀ ॥
ಜೌನ್ ಜೀವ್ ಹಮ್ ಶಬ್ದ್ ದೃಢಾವೈ, ಫಂದ್ ತುಮ್ಹಾರಾ ಸಕಲ್ ಮುಕಾವೈ ॥
ಚೌಕಾ ಕರ್ ಪ್ರವಾನಾ ಪಾಈ, ಪುರುಷ್ ನಾಮ್ ತಿಹಿ ದೇಊಂ ಚಿನ್ಹಾಈ ॥
ತಾಕೇ ನಿಕಟ್ ಕಾಲ್ ನಹೀಂ ಆವೈ, ಸಂಧಿ ದೇಖೀ ತಾಕಹಂ ಸಿರ್ ನಾವೈ ॥

**ಮೇಲಿನ ವರ್ಣನೆಯಿಂದ ತಿಳಿಯುವುದೇನೆಂದರೆ, ಯಾರ ಬಳಿ ಕಬೀರ ಪರಮೇಶ್ವರರು ಹೇಳಿದ ಸತ್ಯಭಕ್ತಿಯ ಮಾರ್ಗವಿಲ್ಲವೋ ಅವರೆಲ್ಲಾ ಕಾಲ ಪ್ರೇರಿತರು. ಆದ್ದರಿಂದ ಬುದ್ಧಿವಂತರು ಚೆನ್ನಾಗಿ ಯೋಚಿಸಿ ಭಕ್ತಿಮಾರ್ಗವನ್ನು ಆರಿಸಿಕೊಳ್ಳಬೇಕು. ಏಕೆಂದರೆ ಮನುಷ್ಯ ಜನ್ಮ ಅಮೂಲ್ಯವಾದುದು. ಅದು ಮತ್ತೆ ಮತ್ತೆ ಸಿಗುವುದಿಲ್ಲ. ಕಬೀರರು ಹೇಳಿದ್ದಾರೆ:–**

ಕಬೀರ್ ಮಾನುಷ್ ಜನ್ಮ್ ದುರ್ಲಭ್ ಹೈ, ಮಿಲೈ ನ ಬಾರಂಬಾರ್ ।
ತರುವರ್ ಸೇ ಪತ್ತಾ ಟೂಟ್ ಗಿರೆ, ಬಹುರ್ ನ ಲಗ್‌ತಾ ಡಾರಿ ॥

## "ಕಾಲ ನಿರಂಜನನ ಮೂಲಕ ಕಬೀರರಿಂದ ಮೂರೂ ಯುಗಗಳಲ್ಲಿ ಕಡಿಮೆ ಜೀವಗಳನ್ನು ತೆಗೆದುಕೊಂಡು ಹೋಗುವ ಬಗ್ಗೆ ವಚನ ಪಡೆಯುವುದು"

## (ವಿಸ್ತೃತ ಹಾಗೂ ಸಂಪೂರ್ಣ ವರ್ಣನೆ)

**ಪ್ರಶ್ನೆ :– ಕಬೀರರ ಹೆಸರಿನಿಂದ ಹೊರಹೊಮ್ಮಿದ 12 ಪಂಥಗಳ ನಿಜವಾದ ಮುಖಂಡನು ಯಾರು ಹಾಗೂ ಹದಿಮೂರನೇ ಪಂಥವನ್ನು ಯಾರು ಮುಂದುವರೆಸುತ್ತಾರೆ?**

**ಉತ್ತರ :– ಕಬೀರ ಸಾಗರದ ಸಂಶೋಧನಾ ಕರ್ತೃವಾದ ಸ್ವಾಮಿ ಯುಗಳಾನಂದರು (ಬಿಹಾರಿ) ಆಗಾಗ ಕಬೀರರ ಗ್ರಂಥಗಳ ಬಗ್ಗೆ ಇಲ್ಲಸಲ್ಲದ ಮಾತುಗಳನ್ನಾಡಿ ಅದನ್ನು ಕೆಡಿಸುತ್ತಿದ್ದಾರೆ ಎಂದು ದುಃಖ ವ್ಯಕ್ತಪಡಿಸಿದ್ದಾರೆ.**

**ಉದಾಹರಣೆ :– ಪರಮೇಶ್ವರ ಕಬೀರರು ಯೋಗ್‌ಜೀತ್‌ನ ವೇಷದಲ್ಲಿ ಬಂದು ಕಾಲಬ್ರಹ್ಮನ ಜೊತೆ ಸಂವಾದ ನಡೆಸಿದ್ದರು. ಅದರ ವಿವರ 'ಸೂಕ್ಷ್ಮವೇದ ಬೋಧ' ಹಾಗೂ 'ಅನುರಾಗ ಸಾಗರ'ದ 60ನೇ ಪುಟದಿಂದ 67ರ ಪುಟದವರೆಗೆ ಇದೆ.**

**ಕಬೀರರು ತಮ್ಮ ಪುತ್ರ ಯೋಗ್‌ಜೀತ್‌ನ ವೇಷದಲ್ಲಿ ಕಾಲನ ಪ್ರಥಮ ಬ್ರಹ್ಮಾಂಡದಲ್ಲಿ**

ಪ್ರತ್ಯಕ್ಷರಾದರು. ಕಾಲಬ್ರಹ್ಮನು ಯೋಗ್‌ಜೀತ್‌ರ ಜೊತೆ ಜಗಳವಾಡಿದನು. ನಂತರ ಅಸಹಾಯಕತೆಯಿಂದ ಅವರ ಕಾಲು ಹಿಡಿದು ಕ್ಷಮೆ ಯಾಚಿಸಿದನು. ನಂತರ ಪ್ರತಿಜ್ಞೆ ಮಾಡಿಸಿಕೊಂಡು ಕೆಲವು ಸವಲತ್ತುಗಳನ್ನು ಕೇಳಿದನು.

1) ಮೂರೂ ಯುಗಗಳಲ್ಲಿ (ಸತ್ಯಯುಗ, ತ್ರೇತಾಯುಗ, ದ್ವಾಪರಯುಗ) ಕೆಲವೇ ಜೀವಗಳನ್ನು ಕಾಪಾಡಬೇಕು.

2) ಬಲವಂತವಾಗಿ ಯಾವ ಜೀವಗಳನ್ನೂ ನನ್ನ ಲೋಕದಿಂದ ತೆಗೆದುಕೊಂಡು ಹೋಗಬಾರದು.

3) ನೀವು ನಿಮ್ಮ ಜ್ಞಾನವನ್ನು ತಿಳಿಸಬೇಕು. ಯಾರು ನಿಮ್ಮ ಜ್ಞಾನವನ್ನು ಒಪ್ಪುತ್ತಾರೋ, ಅವರು ನಿಮ್ಮವರು, ಯಾರು ನನ್ನ ಜ್ಞಾನ ಒಪ್ಪುತ್ತಾರೋ ಅವರು ನನ್ನವರು.

4) ಕಲಿಯುಗದಲ್ಲಿ ಮೊದಲು ನನ್ನ ದೂತರು ಪ್ರತ್ಯಕ್ಷರಾಗಬೇಕು, ನಂತರ ನಿಮ್ಮ ದೂತರು ಬರಬೇಕು.

5) ತ್ರೇತಾಯುಗದಲ್ಲಿ ಸಮುದ್ರದ ಮೇಲೆ ಸೇತುವೆ ಕಟ್ಟಬೇಕು. ಆ ಸಮಯದಲ್ಲಿ ನನ್ನ ಪುತ್ರ ವಿಷ್ಣು ರಾಮನ ರೂಪದಲ್ಲಿ ಲಂಕೆಯ ರಾಜನಾದ ರಾವಣನ ಜೊತೆ ಯುದ್ಧ ಮಾಡುವನು. ಸಮುದ್ರವು ದಾರಿ ಕೊಡುವುದಿಲ್ಲ.

6) ದ್ವಾಪರ ಯುಗದಲ್ಲಿ ಬೌದ್ಧ ಶರೀರ ತ್ಯಜಿಸಿ ಹೋಗುವೆ. ರಾಜ ಇಂದ್ರದಮನನು ಜಗನ್ನಾಥನ ಹೆಸರಿನಲ್ಲಿ ಸಮುದ್ರದ ದಡದಲ್ಲಿ ನನ್ನ ಆಜ್ಞೆಯಂತೆ ಮಂದಿರ ಕಟ್ಟಿಸಲು ಇಚ್ಛಿಸುವನು. ಅವನಿಗೆ ಸಮುದ್ರವು ತೊಂದರೆ ಕೊಡುವುದು. ನೀವು ಆ ಮಂದಿರದ ರಕ್ಷಣೆ ಮಾಡುವುದು.

ಪರಮೇಶ್ವರರು ಈ ಎಲ್ಲಾ ಷರತ್ತುಗಳನ್ನು ಸ್ವೀಕರಿಸಿ ವಚನ ನೀಡಿದರು. ಆಗ ಕಾಲಬ್ರಹ್ಮನು ನಗುತ್ತಾ ಹೇಳಿದನು. “ಹೇ ಯೋಗ್‌ಜೀತ್ ! ಈಗ ಪ್ರಪಂಚಕ್ಕೆ ಹೊರಡಿ. ಯಾವಾಗ ಕಲಿಯುಗ ಬರುವುದೋ ಆಗ ನಾನು ನನ್ನ 12 ದೂತರನ್ನು ಪ್ರಪಂಚಕ್ಕೆ ಕಳುಹಿಸುವೆ. ಯಾವಾಗ ಕಲಿಯುಗ 5505 ವರ್ಷಗಳನ್ನು ಪೂರೈಸುವುದೋ, ಅಲ್ಲಿಯವರೆಗೆ ನನ್ನ ದೂತರು ನಿಮ್ಮ ಹೆಸರಿನಲ್ಲಿ 12 ಕಬೀರ ಪಂಥಗಳನ್ನು ನಡೆಸುವರು. ಕಬೀರರು ಯೋಗ್‌ಜೀತನ ರೂಪದಲ್ಲಿ ಕಾಲಬ್ರಹ್ಮನಿಗೆ ಹೇಳಿದರು. “ಕಲಿಯುಗದಲ್ಲಿ ನನ್ನ ಹೆಸರು ಕಬೀರ ಎಂದಿರುತ್ತದೆ. ನಾನು ಕಬೀರ ಎನ್ನುವ ಹೆಸರಿನಲ್ಲೇ ಪಂಥ ನಡೆಸುವೆ” ಆಗ ಕಾಲ ಜ್ಯೋತಿ ನಿರಂಜನನೆಂದನು “ನೀವು ಕಬೀರರ ಹೆಸರಿನಲ್ಲಿ ಒಂದು ಪಂಥವನ್ನು ನಡೆಸಿದರೆ ನಾನು ಕಬೀರರ ಹೆಸರಿನಲ್ಲಿ 12 ಪಂಥಗಳನ್ನು ನಡೆಸುವೆ. ಎಲ್ಲಾ ಜನರನ್ನೂ ಭ್ರಮೆಗೊಳಪಡಿಸುವೆ. ಇದಲ್ಲದೆ ಇನ್ನೂ ಅನೇಕ ಪಂಥಗಳನ್ನು ನಡೆಸುವೆ. ಆಗ ಸತ್ಯ ಸಾಧನೆ ಅವರ ಬಳಿ ಇರಲಾರದು. ಆದ ಕಾರಣದಿಂದ ಅವರು ಸತ್ಯಲೋಕದ ಆಸೆಯಿಂದ ತಪ್ಪಾದ ನಾಮ ಜಪ ಮಾಡಿ ನನ್ನ ಬಲೆಯಲ್ಲೇ ಸಿಕ್ಕಿಕೊಳ್ಳುತ್ತಾರೆ.”

ನೀವು ಕಲಿಯುಗದಲ್ಲಿ ಯಾವ ಸಮಯದಲ್ಲಿ ನಿಮ್ಮ ಸತ್ಯ ಕಬೀರ ಪಂಥವನ್ನು ನಡೆಸುವಿರಿ ಎಂದು ಕಾಲಬ್ರಹ್ಮನು ಕೇಳಿದನು. ಆಗ ಕಬೀರರು ಯಾವ ಸಮಯದಲ್ಲಿ ಕಲಿಯುಗದಲ್ಲಿ 5505 (ಐದು ಸಾವಿರದ ಐನೂರ ಐದು) ವರ್ಷಗಳು ಕಳೆಯುವುದೋ ಆಗ ನಾನು ನನ್ನ ನಿಜವಾದ 13ನೇ ಕಬೀರ ಪಂಥವನ್ನು ನಡೆಸುವೆ ಎಂದರು.

ಆ ಸಮಯಕ್ಕೆ ಮೊದಲೇ ನಾನು ಇಡೀ ಪ್ರಪಂಚದಲ್ಲಿ ಶಾಸ್ತ್ರಾನುಸಾರದ ಆಚರಣೆಯ ವಿರುದ್ಧ ಅಂದರೆ ಮನಸ್ಸಿಗೆ ಬಂದ ಆಚರಣೆ ಮಾಡಿಸಿ, ಶಾಸ್ತ್ರಕ್ಕೆ ವಿರುದ್ಧವಾದ ಜ್ಞಾನವನ್ನು ತಿಳಿಸಿ, ಸುಳ್ಳು ಹೆಸರಿನ ಹಾಗೂ ತಪ್ಪಾದ ಸಾಧನೆಯನ್ನು ಮಾಡುವಂತೆ ಪ್ರೇರೇಪಿಸುವೆ. ಯಾವಾಗ ನಿಮ್ಮ

ಹದಿಮೂರನೇ ಅಂಶವಾದ ಕಬೀರ ಪಂಥವು ಬಂದು ಸತ್ಯ ಕಬೀರ ಪಂಥವನ್ನು ನಡೆಸುವುದೋ ಆಗ ಅವರ ಮಾತನ್ನು ಯಾರೂ ನಂಬುವುದಿಲ್ಲ. ಬದಲಾಗಿ ಅವರ ಜೊತೆಯಲ್ಲೇ ಜಗಳವಾಡುತ್ತಾರೆ" ಎಂದು ಕಾಲಬ್ರಹ್ಮನು ಹೇಳಿದನು. ಯಾವಾಗ 5505 ವರ್ಷಗಳು ಕಲಿಯುಗದಲ್ಲಿ ಕಳೆಯುವುದೋ ಆಗ ಶಿಕ್ಷಣ ಕ್ರಾಂತಿ ಆಗುವುದೆಂದು ಕಬೀರರಿಗೆ ತಿಳಿದಿತ್ತು. ಎಲ್ಲಾ ಮಾನವರನ್ನು ಅಕ್ಷರ ಜ್ಞಾನಿಗಳನ್ನಾಗಿ ಮಾಡಲ್ಪಡುತ್ತದೆ. ಆ ಸಮಯದಲ್ಲಿ ನನ್ನ ದಾಸನು ಎಲ್ಲಾ ಧಾರ್ಮಿಕ ಗ್ರಂಥಗಳನ್ನು ಸರಿಯಾಗಿ ತಿಳಿದುಕೊಂಡು ಮಾನವ ಸಮಾಜ ನಿರ್ಮಾಣ ಮಾಡುವನು. ಎಲ್ಲಾ ಸಾಕ್ಷಿ ಪ್ರಮಾಣಗಳನ್ನು ತನ್ನ ಕಣ್ಣಿಂದಲೇ ನೋಡಿ ಶಿಕ್ಷಿತ ಮಾನವನು ಸತ್ಯದಿಂದ ಪರಿಚಿತನಾಗಿ ತಕ್ಷಣವೇ ನನ್ನ ಹದಿಮೂರನೇ ಪಂಥದವರಿಂದ ದೀಕ್ಷೆಯನ್ನು ಪಡೆಯುವನು ಹಾಗೂ ಇಡೀ ವಿಶ್ವವು ನನ್ನ ಮೂಲಕ ತಿಳಿಸಲ್ಪಟ್ಟ ಭಕ್ತಿಯ ವಿಧಾನ ಹಾಗೂ ತತ್ವಜ್ಞಾನವನ್ನು ಹೃದಯ ಪೂರ್ವಕವಾಗಿ ಸ್ವೀಕರಿಸಿ ಭಕ್ತಿಯಿಂದ ಇರುವರು. ಆ ಸಮಯದಲ್ಲಿ ಪುನಃ ಸತ್ಯಯುಗದಂಥಾ ವಾತಾವರಣ ಏರ್ಪಾಡುತ್ತದೆ. ಪರಸ್ಪರ ರಾಗದ್ವೇಷ, ಕಳ್ಳತನ, ಲೂಟಿ, ದರೋಡೆ ಯಾವುದನ್ನೂ ಮಾಡುವುದಿಲ್ಲ. ಯಾರೂ ಹಣವನ್ನು ಸಂಗ್ರಹಿಸುವುದಿಲ್ಲ. ಭಕ್ತಿಗೆ ಹೆಚ್ಚು ಮಹತ್ವ ನೀಡಲಾಗುತ್ತದೆ. ಆ ಸಮಯದಲ್ಲಿ ಯಾರ ಬಳಿ ಅಧಿಕ ಹಣವಿರುವುದೋ, ದೊಡ್ಡ ವ್ಯಾಪಾರವಿರುವುದೋ, ದೊಡ್ಡ ದೊಡ್ಡ ಬಂಗಲೆಗಳಿರುವುದೋ ಅವನನ್ನು ಮಹಾನ್ ವ್ಯಕ್ತಿ ಎಂದು ಪರಿಗಣಿಸಲಾಗುತ್ತಿತ್ತೋ, ಹದಿಮೂರನೇ ಪಂಥವು ಪ್ರಾರಂಭವಾದ ನಂತರ ಆ ವ್ಯಕ್ತಿಗಳನ್ನು ಮೂರ್ಖರೆಂದು ಪರಿಗಣಿಸಲಾಗುವುದು ಮತ್ತು ಯಾರು ಭಕ್ತಿಯಿಂದ ಇರುವರೋ, ಸಾಧಾರಣವಾದ ಮನೆಯಲ್ಲಿ ಇರುವರೋ, ಅವರನ್ನು ಮಹಾನ್ ವ್ಯಕ್ತಿಯೆಂದೂ, ದೊಡ್ಡ ವ್ಯಕ್ತಿಯೆಂದೂ ಹಾಗೂ ಗೌರವಾನ್ವಿತ ವ್ಯಕ್ತಿಯೆಂದೂ ಪರಿಗಣಿಸಲಾಗುವುದು.

## "ಸಾಕ್ಷಿಗಾಗಿ ಪವಿತ್ರ ಕಬೀರ್ ಸಾಗರದಿಂದ ಭಿನ್ನ-ಭಿನ್ನ ಅಧ್ಯಾಯಗಳಿಂದ ಅಮೃತ ವಾಣಿ"

## "ಪರಮೇಶ್ವರ ಕಬೀರರು ಹಾಗೂ ಜ್ಯೋತಿ ನಿರಂಜನನ ಸಂಭಾಷಣೆ"

**ಅನುರಾಗ ಸಾಗರದ ಪುಟ 62 ರಿಂದ :- "ಧರ್ಮರಾಯ (ಜ್ಯೋತಿ ನಿರಂಜನ) ವಚನ"**

ಧರ್ಮರಾಯ್ ಅಸ್ ವಿನತೀ ಠಾನೀ । ಮೈಂ ಸೇವಕ್ ದ್ವಿತೀಯಾ ನ ಜಾನೀ ॥ 1 ॥
ಜ್ಞಾನೀ ಬಿನತೀ ಏಕ್ ಹಮಾರಾ ।
ಸೋ ನ ಕರಹೂ ಜಿಹ್ ಸೆ ಹೋ ಮೋರ್ ಬಿಗಾರಾ ॥ 2 ॥
ಪುರುಷ್ ದೀನ್ಹ್ ಜಸ್ ಮೋಕಹಂ ರಾಜು ।
ತುಮ್ ಭೀ ದೇಹಹು ತೋ ಹೋವೆ ಮಮ್ ಕಾಜು ॥ 3 ॥
ಅಬ್ ಮೈಂ ವಚನ್ ತುಮ್ಹರೋ ಮಾನೀ ।
ಲೀಜೋ ಹಂಸಾ ಹಮ್ ಸೋ ಜ್ಞಾನೀ ॥ 4 ॥

**ಪುಟ 63ರಿಂದ ಅನುರಾಗ ಸಾಗರದ ವಾಣಿ :-**

ದಯಾವನ್ತ್ ತುಮ್ ಸಾಹೇಬ್ ದಾತಾ। ಐತಿಕ್ ಕೃಪಾ ಕರೋ ಹೋ ತಾತಾ ॥ 5 ॥
ಪುರುಷ್ ಶಾಪ್ ಮೋಕಹಂ ದೀನ್ಹಾ। ಲಖ್ ಜೀವ್ ನಿತ್ ಗ್ರಾಸನ್ ಕೀನ್ಹಾ ॥ 6 ॥

**ಪುಟ 64ರಿಂದ ಅನುರಾಗ ಸಾಗರದ ವಾಣಿ :-**

ಜೋ ಜೀವ್ ಸಕಲ್ ಲೋಕ್ ತವ್ ಆವೈ । ಕೈಸೆ ಕ್ಷುಧಾ ಮೋರ್ ಮಿಟಾವೈ ॥ 7 ॥
ಜೈಸೆ ಪುರುಷ್ ಕೃಪಾ ಮೋಪೆ ಕೀನ್ಹಾ ।

ಭೌಸಾಗರ್ ಕಾ ರಾಜ್ ಮೋಹೆ ದೀನ್ಹಾ ॥ 8 ॥
ತುಮ್ ಭೀ ಕೃಪಾ ಮೋಪರ್ ಕರಹು ।
ಜೋ ಮಾಂಗೆ ಸೋ ಮೋಹೆ ದೇಹೋ ಬರಹು ॥ 9 ॥
ಸತಯುಗ್, ತ್ರೇತಾ, ದ್ವಾಪರ್ ಮಾಂಹೀಂ ।
ತೀನೋಂ ಯುಗ್ ಜೀವ್ ಥೋಡೆ ಜಾಹೀಂ ॥ 10 ॥
ಚೌಥಾ ಯುಗ್ ಜಬ್ ಕಲಯುಗ್ ಆವೈ ।
ತಬ್ ತವ್ ಶಣ್ ಜೀವ್ ಬಹು ಜಾವೈ ॥ 11 ॥

**ಪುಟ 65ರಿಂದ ಅನುರಾಗ ಸಾಗರದ ವಾಣಿ, ಮೇಲ್ಕಂಡ ವಾಣಿ ಸಾಲಿನ ಸಂ. 3ರಿಂದ :–**

ಪ್ರಥಮ್ ದೂತ್ ಮಮ್ ಪ್ರಕಟ್ಯೆ ಜಾಈ । ಪೀಛೆ ಅಂಶ್ ತುಮ್ಹಾರಾ ಆಈ ॥ 12 ॥

**ಪುಟ 64 ರಿಂದ ಅನುರಾಗ ಸಾಗರದ ವಾಣಿ, ಮೇಲ್ಕಂಡ ವಾಣಿ ಸಾಲಿನ ಸಂ. 6 :–**

ಐಸಾ ವಚನ್ ಹರಿ ಮೋಹೆ ದೀಜೈ । ತಬ್ ಸಂಸಾರ್ ಗವನ್ ತವ್ ಕೀಜೈ ॥ 13 ॥

## "ಜೋಗ್ ಜೀತ್ ವಚನ್=ಜ್ಞಾನೀ ವಚನ"

**ಪುಟ 64ರಿಂದ ಅನುರಾಗ ಸಾಗರದ ವಾಣಿ, ಮೇಲ್ಕಂಡ ವಾಣಿ ಸಾಲಿನ ಸಂ. 7 :–**

ಅರೆ ಕಾಲ್ ತುಮ್ ಪರಪಂಚ್ ಪಸಾರಾ ।
ತೀನೋಂ ಯುಗ್ ಜೀವನ್ ದುಖ್ ಡಾರಾ ॥ 14 ॥
ಬೀನತೀ ತೋರೀ ಲೀನ್ಹ ಮೈಂ ಜಾನಿ ।
ಮೋಕಹಂ ಠಗಾ ಕಾಲ್ ಅಭಿಮಾನೀ ॥ 15 ॥
ಜಸ್ ಬೀನತೀ ತೂ ಮೋಸನ್ ಕೀನ್ಹೀ ।
ಸೋ ಅಬ್ ಬಖ್ಸ್ ತೋಹೇ ದೀನ್ಹೀ ॥ 16 ॥
ಚೌಥಾ ಯುಗ್ ಜಬ್ ಕಲಯುಗ್ ಆವೈ ।
ತಬ್ ಹಮ್ ಅಪನಾ ಅಂಶ್ ಪಠಾವೈ ॥ 17 ॥

## "ಧರ್ಮರಾಯ (ಕಾಲ) ವಚನ"

**ಪುಟ 64ರಿಂದ ಅನುರಾಗ ಸಾಗರದ ವಾಣಿ, ಮೇಲ್ಕಂಡ ವಾಣಿ ಸಾಲಿನ ಸಂ. 17:–**

ಹೇ ಸಾಹಿಬ್ ತುಮ್ ಪಂಥ್ ಚಲಾಊ ।
ಜೀವ್ ಉಬಾರ್ ಲೋಕ್ ಲೈ ಜಾಊ ॥ 18 ॥

**ಪುಟ 66ರಿಂದ ಅನುರಾಗ ಸಾಗರದ ವಾಣಿ, ಮೇಲ್ಕಂಡ ವಾಣಿ ಸಾಲಿನ ಸಂ. 8, 9, 16 ರಿಂದ 21 :–**

ಸಂಧಿ ಛಾಪ್ (ಸಾರ ಶಬ್ದ) ಮೋಹೆ ದಿಜೆ ಜ್ಞಾನೀ ।
ಜೈಸೇ ದೋವೋಂಗೇ ಹಂಸ್ ಸಹದಾನೀ ॥ 19 ॥
ಜೋ ಜನ್ ಮೋಕೂ ಸಂಧಿ (ಸಾರ ಶಬ್ದ) ಬತಾವೈ ।
ತಾಕೆ ನಿಕಟ್ ಕಾಲ್ ನಹೀಂ ಆವೈ ॥ 20 ॥
ಕಹೈ ಧರ್ಮರಾಯ್ ಜಾಓ ಸಂಸಾರಾ । ಆನಹು ಜೀವ್ ನಾಮ್ ಆಧಾರಾ ॥ 21 ॥
ಜೋ ಹಂಸಾ ತುಮ್ಹರೆ ಗುಣ್ ಗಾವೈ । ತಾಹಿ ನಿಕಟ್ ಹಮ್ ನಹೀಂ ಜಾವೈ ॥ 22 ॥
ಜೋ ಕೋಈ ಲೇಹೈ ಶರಣ್ ತುಮ್ಹಾರೀ ।
ಮಮ್ ಸಿರ್ ಪಗ್ ದೈ ಹೋವೈ ಪಾರೀ ॥ 23 ॥

ಹಮ್ ತೋ ತುಮ್ ಸಂಗ್ ಕೀನ್ಹ ಢಿಠಾಈ ।
ತಾತ್ ಜಾನ್ ಕಿನ್ಹಿಂ ಲಡಕಾಇ ॥ 24 ॥
ಕೋಟಿನ್ ಅವಗುನ್ ಬಾಲಕ್ ಕರಹೀ । ಪಿತಾ ಏಕ್ ಚಿತ್ ನಹೀಂ ಧರಹೀ ॥ 25 ॥
ಜೋ ಪಿತಾ ಬಾಲಕ್ ಕೂಂ ದೇಹೈ ನಿಕಾರೀ ।
ತಬ್ ಕೋ ರಕ್ಷಾ ಕರೈ ಹಮಾರೀ ॥ 26 ॥
ಸಾರನಾಮ್ ದೇಖೋ ಜೇಹಿ ಸಾಥಾ ।
ತಾಹಿ ಹಂಸ್ ಮೈಂ ನೀವಾಊಂ ಮಾಥಾ ॥ 27 ॥

### ಜ್ಞಾನಿ (ಕಬೀರ್) ವಚನ

**ಅನುರಾಗ ಸಾಗರ ಪುಟ 66 :–**

ಜೋ ತೋಹಿ ದೇಹುಂ ಸಂಧಿ ಬತಾಈ ।
ತೋ ತೂಂ ಜೀವನ್ ಕೋ ಹಇಹೋ ದುಖದಾಈ ॥ 28 ॥
ತುಮ್ ಪರಪಂಚ್ ಜಾನ್ ಹಮ್ ಪಾವಾ ।
ಕಾಲ್ ಚಲೈ ನಹೀಂ ತುಮ್ಹಾರಾ ದಾವಾ ॥ 29 ॥
ಧರ್ಮರಾಯ್ ತೋಹಿ ಪ್ರಕಟ್ ಭಾಖಾ ।
ಗುಪ್ತ್ ಅಂಕ್ ಬೀರಾ ಹಮ್ ರಾಖಾ ॥ 30 ॥
ಜೋ ಕೋಈ ಲೇಈ ನಾಮ್ ಹಮಾರಾ ।
ತಾಹಿ ಛೋಡ್ ತುಮ್ ಹೋ ಜಾನಾ ನಿಯಾರಾ ॥ 31 ॥
ಜೋ ತುಮ್ ಮೋರ್ ಹಂಸ್ ಕೋ ರೋಕೋ ಭಾಈ ।
ತೋ ತುಮ್ ಕಾಲ್ ರಹನ್ ನಹೀಂ ಪಾಈ ॥ 32 ॥

### "ಧರ್ಮರಾಯ (ಕಾಲ ನಿರಂಜನ) ವಚನ"

**ಪುಟ 62 ಹಾಗೂ 63 ರಿಂದ ಅನುರಾಗ ಸಾಗರದ ವಾಣಿ**

ಬೇಸಕ್ ಜಾಓ ಜ್ಞಾನೀ ಸಂಸಾರಾ । ಜೀವ್ ನ ಮಾನೈ ಕಹಾ ತುಮ್ಹಾರಾ ॥ 33 ॥
ಕಹಾ ತುಮ್ಹಾರಾ ಜೀವ್ ನಾ ಮಾನೈ ।
ಹಮರೀ ಔರ್ ಹೋಯ್ ಬಾದ್ ಬಖಾನೈ ॥ 34 ॥
ದೃಢ್ ಫಂದಾ ಮೈಂ ರಚಾ ಬನಾಈ । ಜಾಮೆಂ ಸಕಲ್ ಜೀವ್ ಉರಜಾಈ ॥ 35 ॥
ವೇದ್–ಶಾಸ್ತ್ರ ಸಮರ್ತಿ ಗುಣಗಾನಾ । ಪುತ್ರ ಮೇರೇ ತೀನ್ ಪ್ರಧಾನಾ ॥ 36 ॥
ತೀನಹೂ ಬಹು ಬಾಜೀ ರಚಿ ರಾಖಾ ।
ಹಮರೀ ಮಹಿಮಾ ಜ್ಞಾನ್ ಮುಖ್ ಭಾಖಾ ॥ 37 ॥
ದೇವಲ್ ದೇವ್ ಪಾಷಾಣ್ ಪುಜಾಈ ।
ತೀರ್ಥ್ ವ್ರತ್ ಜಪ್ ತಪ್ ಮನ್ ಲಾಈ ॥ 38 ॥
ಪೂಜಾ ವಿಶ್ವ ದೇವ್ ಅರಾಧೀ ।
ಯಹ್ ಮತಿ ಜೀವೋಂ ಕೋ ರಾಖಾ ಬಾಂಧಿ ॥ 39 ॥
ಜಗ್ (ಯಜ್ಞ) ಹೋಮ್ ಔರ್ ನೇಮ್ ಆಚಾರಾ ।
ಔರ್ ಅನೇಕ್ ಫಂದ್ ಮೈಂ ಡಾರಾ ॥ 40 ॥

### "ಜ್ಞಾನಿ (ಕಬೀರ್) ವಚನ್"

ಹಮನೇ ಕಹಾ ಸುನೋ ಅನ್ಯಾಈ । ಕಾಟೋ ಫಂದ್ ಜೀವ್ ಲೇ ಜಾಂಈ ॥ 41 ॥
ಜೇತೇ ಫಂದ್ ತುಮ್ ರಚೇ ವಿಚಾರೀ । ಸತ್ಯ ಶಬ್ದ್ ತೇ ಸಬೈ ವಿಡಾರೀ ॥ 42 ॥
ಜೌನ್ ಜೀವ್ ಹಮ್ ಶಬ್ದ್ ದೃಢಾವೈಂ ।
ಫಂದ್ ತುಮ್ಹಾರಾ ಸಕಲ್ ಮುಕ್ತಾವೈಂ ॥ 43 ॥
ಜಬಹೀ ಜೀವ್ ಚಿನ್ಹೀ ಜ್ಞಾನ್ ಹಮಾರಾ ।
ತಜಹೀ ಭ್ರಮ್ ಸಬ್ ತೋರ್ ಪಸಾರಾ ॥ 44 ॥
ಸತ್ಯನಾಮ್ ಜೀವನ್ ಸಮಝಾವೈಂ ।
ಹಂಸ್ ಉಭಾರ್ ಲೋಕ್ ಲೈ ಜಾವೈ ॥ 45 ॥
ಪುರುಷ್ ಸುಮಿರನ್ ಸಾರ್ ಬೀರಾ, ನಾಮ್ ಅವಿಚಲ್ ಜನಾವಹೂಂ ।
ಶೀಶ್ ತುಮ್ಹಾರೇ ಪಾಂವ್ ದೇಕೇ, ಹಂಸ್ ಲೋಕ್ ಪಠಾವಹೂಂ ॥ 46 ॥
ತಾಕೇ ನಿಕಟ್ ಕಾಲ್ ನಹೀಂ ಆವೈ । ಸಂಧಿ ದೇಖ್ ತಾಕೋ ಸಿರ್ ನಾವೈ ॥ 48 ॥

**(ಸಂಧಿ = ಸತ್ಯನಾಮ್+ಸಾರ್ ನಾಮ್)**

## "ಧರ್ಮರಾಯ (ಕಾಲ) ವಚನ"

ಪಂಥ್ ಏಕ್ ತುಮ್ ಆಪ್ ಚಲಊ । ಜೀವನ್ ಕೋ ಸತಲೋಕ್ ಲೈ ಜಾಊ ॥ 49 ॥
ದ್ವಾದಶ್ ಪಂಥ್ ಕರೂಂ ಮೈಂ ಸಾಜಾ ।
ನಾಮ್ ತುಮ್ಹಾರಾ ಲೇ ಕರೋಂ ಆವಾಜಾ ॥ 50 ॥
ದ್ವಾದಶ್ ಯಮ್ ಸಂಸಾರ್ ಪಠಾಊಂ ।
ನಾಮ್ ಕಬೀರ್ ಲೇ ಪಂಥ್ ಚಲಾಊಂ ॥ 51 ॥
ಪ್ರಥಮ್ ದೂತ್ ಮೇರೆ ಪ್ರಗಟೈ ಜಾಈ । ಪೀಛೇ ಅಂಶ್ ತುಮ್ಹಾರಾ ಆಈ ॥ 52 ॥
ಯಹಿ ವಿಧಿ ಜೀವನ್ ಕೋ ಭ್ರಮಾಊಂ ।
ಆಪನ್ ನಾಮ್ ಪುರುಷ್ ಕಾ ಬತಾಊಂ ॥ 53 ॥
ದ್ವಾದಶ್ ಪಂಥ್ ನಾಮ್ ಜೋ ಲೈಹಿ ।
ಹಮರೇ ಮುಖ್ ಮೆಂ ಆನ್ ಸಮೈಹಿ ॥ 54 ॥

**ಶಬ್ದಾರ್ಥ :– 1 ರಿಂದ 54ನೇ ವಾಣಿಯ ಶಬ್ದಾರ್ಥವನ್ನು ಮೇಲೆ ತಿಳಿಸಲಾಗಿದೆ.**

## "ಜ್ಞಾನಿ (ಕಬೀರ್) ವಚನ" ಚೌಪದಿ

## ಅಧ್ಯಾಯ "ಸೂಕ್ಷಮವೇದ್ ಬೋಧ್" ಪುಟ 121:–

ಅರೇ ಕಾಲ್ ಪರಪಂಚ್ ಪಸಾರಾ ।
ತೀನೋಂ ಯುಗ್ ಜೀವನ್ ದುಖ್ ಆಧಾರಾ ॥ 55 ॥
ಬೀನತೀ ತೋರೀ ಲೀನ್ ಮೈಂ ಮಾನೀ ।
ಮೋಕಹಂ ಠಗೇ ಕಾಲ್ ಅಭಿಮಾನೀ ॥ 56 ॥
ಚೌಥಾ ಯುಗ್ ಜಬ್ ಕಲಯುಗ್ ಆಈ ।
ತಬ್ ಹಮ್ ಅಪನಾ ಅಂಶ್ ಪಠಾಈ ॥ 57 ॥
ಕಾಲ್ ಫಂದ್ ಛೂಟೈ ನರ್ ಲೋಈ ।
ಸಕಲ್ ಸೃಷ್ಟಿ ಪರವಾನಿಕ್ (ದೀಕ್ಷಿತ್) ಹೋಈ ॥ 58॥ ।
ಘರ್–ಘರ್ ದೇಖೋ ಬೋಧ್ (ಜ್ಞಾನ್) ಬಿಚಾರಾ (ಚರ್ಚಾ) ।

ಸತ್ಯನಾಮ್ ಸಬ್ ಠೋರ್ ಉಚಾರಾ ॥ 59 ॥
ಪಾಂಚ್ ಹಜಾರ್ ಪಾಂಚ್ ಸೌ ಪಾಂಚಾ ।
ತಬ್ ಯಹ್ ವಚನ್ ಹೋಯಗಾ ಸಾಚಾ ॥ 60 ॥
ಕಲಯುಗ್ ಬೀತ್ ಜಾಏ ಜಬ್ ಐತಾ ।
ಸಬ್ ಜೀವ್ ಪರಮ್ ಪುರುಷ್ ಪದ್ ಚೇತಾ ॥ 61 ॥

**ಭಾವಾರ್ಥ :– ಪರಮೇಶ್ವರ ಕಬೀರರೆಂದರು, ಹೇ ಕಾಲ! ನೀನು ತುಂಬಾ ಮೋಸದ ಜಾಲ ಹರಡುತ್ತಿರುವೆ. ಮೂರೂ ಯುಗ (ಸತ್ಯಯುಗ, ತ್ರೇತಾ, ದ್ವಾಪರ)ದಲ್ಲಿ ಜೀವಿಗಳಿಗೆ ಕಷ್ಟ ಕೊಡುವೆ. ನನ್ನ ಬಳಿ ಬಂದು ನೀನು ಪ್ರಾರ್ಥಿಸಿಕೊಂಡಿದ್ದೆ. ಆದರೆ ನೀನು ಮೋಸ ಮಾಡುತ್ತಿರುವೆ. ಆದರೆ ನಾಲ್ಕನೇ ಯುಗವಾದ ಕಲಿಯುಗ ಬಂದಾಗ ನಾನು ನನ್ನ ಅಂಶವಾದ ಆತ್ಮವನ್ನು ಕಳುಹಿಸುವೆ. ಹೇ ಕಾಲನೇ, ನಿನ್ನ ಮೂಲಕ ಮಾಡಲ್ಪಟ್ಟ ಎಲ್ಲಾ ಜಾಲಗಳನ್ನು ಹಾಗೂ ಅಜ್ಞಾನದಿಂದ ಮಾಡಲ್ಪಟ್ಟ ಎಲ್ಲಾ ರೀತಿಯ ಸಾಧನೆಯನ್ನು ಸತ್ಯ, ಶಬ್ದ ಮತ್ತು ಸತ್ಯಜ್ಞಾನದಿಂದ ಕೊನೆಗೊಳಿಸುತ್ತಾನೆ. ಆಗ ಇಡೀ ವಿಶ್ವವೇ ನನ್ನ ಸಂತನಿಂದ ದೀಕ್ಷೆ ಪಡೆದುಕೊಳ್ಳುತ್ತದೆ. ಅಲ್ಲಿಯವರೆಗೆ ಅಂದರೆ ಎಲ್ಲಿಯವರೆಗೆ ಕಲಿಯುಗದ 5 ಸಾವಿರದ ಐದು ನೂರ ಐದು ಕಳೆಯುವುದಿಲ್ಲವೋ ಸತ್ಯನಾಮ, ಮೂಲನಾಮ (ಸಾರಶಬ್ದ) ಮತ್ತು ಮೂಲ ಜ್ಞಾನ(ತತ್ವಜ್ಞಾನ)ವನ್ನು ಪ್ರಕಟಗೊಳಿಸಬಾರದು. ಆದರೆ ಯಾವಾಗ ಕಲಿಯುಗದ 5505 ವರ್ಷಗಳು ಪೂರ್ಣವಾಗುವುದೋ, ಆಗ ಮನೆ ಮನೆಯಲ್ಲಿ ಆಧ್ಯಾತ್ಮಿಕ ಚರ್ಚೆಯಾಗುವುದು ಮತ್ತು ಸತ್ಯನಾಮ, ಸಾರಶಬ್ದವನ್ನು ಎಲ್ಲರಿಗೂ ಪ್ರದಾನಿಸಲಾಗುವುದು. 5505 ವರ್ಷಗಳು ಪೂರ್ಣವಾದಾಗ ನನ್ನ ವಚನವು ನಿಜವಾಗುವುದು. 5505 ವರ್ಷಗಳು ಕಳೆದ ನಂತರ ಎಲ್ಲಾ ಮಾನವರು ಪರಮ ಪುರುಷ ಅಂದರೆ ಸತ್ಯಪುರುಷನ ಪದವಿ ಅಂದರೆ ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಿರುವಂತೆ ತತ್ವದರ್ಶಿ ಸಂತನು ಸಿಕ್ಕನಂತರ ಸಾಧಕನು ಮರಳಿ ಪ್ರಪಂಚಕ್ಕೆ ಹೋಗುವುದಿಲ್ಲ ಎಂಬ ಅಂಶವನ್ನು ಅರಿಯುತ್ತಾನೆ. ಯಾವ ಪರಮೇಶ್ವರನು ಪ್ರಪಂಚವೆಂಬ ವೃಕ್ಷವನ್ನು ಬೆಳೆಸಿದ್ದಾನೋ, ಅಂದರೆ ಯಾವ ಪರಮೇಶ್ವರನು ಸೃಷ್ಟಿಯ ರಚನೆಯನ್ನು ಮಾಡಿದ್ದಾನೋ ಆ ಪರಮೇಶ್ವರನನ್ನು ಆರಾಧಿಸು. ಮೇಲೆ ತಿಳಿಸಿರುವ ವಾಣಿಯ ಭಾವಾರ್ಥವೇನೆಂದರೆ, ಆ ಸಮಯದಲ್ಲಿ ಆ ಪರಮೇಶ್ವರನ ಪದವಿಯ ವಿಷಯದಲ್ಲಿ ಎಲ್ಲರಿಗೂ ಪೂರ್ಣ ಜ್ಞಾನ ಪ್ರಾಪ್ತವಾಗುವುದು.**

**ಸೂಕ್ಷ್ಮವೇದ ಬೋಧ ಪುಟ 170:–**

**ಅಥ ಸೂಕ್ಷ್ಮವೇದದ ಸ್ಫುಟವಾರ್ತೆ–ಚೌಪದಿ**

ಏಕ್ ಲಾಖ್ ಔರ್ ಅಸಿ ಹಜಾರಾ ।
ಪೀರ್ ಪೈಗಂಬರ್ ಔರ್ ಅವತಾರಾ ॥ 62 ॥
ಸೋ ಸಬ್ ಆಹೀ ನಿರಂಜನ್ ವಂಶಾ ।
ತನ್ ಧರೀ–ಧರೀ ಕರೈಂ ನಿಜ್ ಪಿತಾ ಪ್ರಶಂಸಾ ॥ 63 ॥
ದಶ್ ಅವತಾರ್ ನಿರಂಜನ್ ಕೇ ರೇ ।
ರಾಮ್ ಕೃಷ್ಣ ಸಬ್ ಆಹೀಂ ಬಡೇರೇ ॥ 64 ॥
ಇನಸೇ ಬಡಾ ಜ್ಯೋತಿ ನಿರಂಜನ್ ಸೋಈ ।
ಯಾಮೆಂ ಫೇರ್ ಬದಲ್ ನಹೀಂ ಕೋಈ ॥ 65 ॥

**ಭಾವಾರ್ಥ :– ಪರಮೇಶ್ವರ ಕಬೀರರು ಹೇಳಿದ್ದಾರೆ, ಬಾಬಾ ಆದಮ್‌ರಿಂದ ಹಿಡಿದು, ಹಜರತ್ ಮುಹಮ್ಮದ್‌ವರೆಗೆ ಒಟ್ಟು ಒಂದು ಲಕ್ಷ ಎಂಭತ್ತು ಸಾವಿರ (1,80,000) ಪೈಗಂಬರ್ ಮತ್ತು ಹಿಂದೂಗಳು ಭಾವಿಸುವ ಹತ್ತು ಅವತಾರಗಳಲ್ಲಿ ಕಾಲನು ಕಳುಹಿಸಿರುವುದೇ ಆಗಿದೆ. ಈ 10**

ಅವತಾರಗಳಲ್ಲಿ ರಾಮ ಮತ್ತು ಕೃಷ್ಣರು ಪ್ರಮುಖರು. ಇವರು ಕಾಲನ ಮಹಿಮೆಯನ್ನು ಹೇಳುತ್ತಾ ಜೀವಿಗಳನ್ನು ಭ್ರಮೆಗೊಳಪಡಿಸಿ, ಕಾಲ ಸಾಧನೆಯನ್ನು ದೃಢಪಡಿಸಿದ್ದಾರೆ. ಇವರೆಲ್ಲರ ಮುಖಂಡನು ಜ್ಯೋತಿ ನಿರಂಜನನಾದ ಕಾಲ(ಬ್ರಹ್ಮ)ನಾಗಿದ್ದಾನೆ.

**ಸೂಕ್ಷಮವೇದ ಬೋಧ ಪುಟ 171 (1515) :–**

**ಸತ್ಯ ಕಬೀರ್ ವಚನ**

**ದೋಹೆ :–**

ಪಾಂಚ್ ಹಜಾರ್ ಅರೂ ಪಾಂಚ್ ಸೌ ಪಾಂಚ್
ಜಬ್ ಕಲಯುಗ್ ಬೀತ್ ಜಾಯ್ ।
ಮಹಾಪುರುಷ್ ಫರಮಾನ್ ತಬ್, ಜಗ್ ತಾರನ್ ಕೂಂ ಆಯ್ ॥ 66 ॥
ಹಿಂದು ತುರ್ಕ್ ಆದಿ ಸಬೈ, ಜೆತ್ತೆ ಜೀವ್ ಜಹಾನ್ ।
ಸತ್ಯ ನಾಮ್ ಕೀ ಸಾಖ್ ಗಹೀ, ಪಾವೈಂ ಪದ್ ನಿರ್ವಾನ್ ॥ 67 ॥
ಯಥಾ ಸರಿತಗಣ್ ಆಪ್ ಹೀ, ಮಿಲೈಂ ಸಿಂಧು ಮೈಂ ಧಾಯ್ ।
ಸತ್ಯ ಸುಕೃತ್ ಕೆ ಮಧ್ಯ್ ತಿಮಿ, ಸಬ್ ಹೀ ಪಂಥ್ ಸಮಾಯ್ ॥ 68 ॥
ಜಬ್ ಲಗ್ ಪೂರ್ಣ್ ಹೋಯ್ ನಹೀಂ, ಠೀಕ್ ಕಾ ತಿಥಿ ಬಾರ್ ।
ಕಪಟ್–ಚಾತುರೀ ತಬಹಿ ಲೌಂ, ಸ್ವಸಮ್ ವೇದ್ ನಿರಧಾರ್ ॥ 69 ॥
ಸಬಹೀ ನಾರೀ–ನರ್ ಶುದ್ಧ್ ತಬ್, ಜಬ್ ಠೀಕ್ ಕಾ ದಿನ್ ಆವಂತ್ ।
ಕಪಟ್ ಚಾತುರೀ ಛೋಡಿ ಕೆ, ಶರಣ್ ಕಬೀರ್ ಗಹಂತ್ ॥ 70 ॥
ಏಕ್ ಅನೇಕ್ ಹ್ವೈ ಗಏ, ಪುನಃ ಅನೇಕ್ ಹೋಂ ಏಕ್ ।
ಹಂಸ್ ಚಲೈ ಸತಲೋಕ್ ಸಬ್, ಸತ್ಯನಾಮ್ ಕೀ ಟೇಕ್ ॥ 71 ॥
ಘರ್ ಘರ್ ಬೋಧ್ ವಿಚಾರ್ ಹೋ, ದುರ್ಮತಿ ದೂರ್ ಬಹಾಯ್ ।
ಕಲಯುಗ್ ಮೆಂ ಸಬ್ ಏಕ್ ಹೋಈ, ಬರತೆಂ ಸಹಜ್ ಸುಭಾಯ್ ॥ 72 ॥
ಕಹಾಂ ಉಗ್ರ್ ಕಹಾಂ ಶುದ್ರ್ ಹೋ, ಹರೈ ಸಬಕೀ ಭವ್ ಪೀರ್ (ಪೀಡ್) ॥ 73 ॥
ಸೋ ಸಮಾನ್ ಸಮದೃಷ್ಟಿ ಹೈ, ಸಮರ್ಥ್ ಸತ್ಯ್ ಕಬೀರ್ ॥ 74 ॥

ಪರಮೇಶ್ವರ ಕಬೀರರು ಹೇಳಿರುವುದೇನೆಂದರೆ, ಹೇ ಧರ್ಮದಾಸ! ನಾನು ಜ್ಯೋತಿ ನಿರಂಜನ ಅಂದರೆ ಕಾಲಬ್ರಹ್ಮನಿಗೆ ಹೇಳಿದ್ದೆ, ನಿಮಗೂ ಹೇಳುತ್ತಿದ್ದೇನೆ.

ಸ್ವಸಮವೇದ ಬೋಧದ 66ನೇ ವಾಣಿಯಿಂದ 74ನೇ ವಾಣಿಯವರೆಗಿನ ಸರಳಾರ್ಥ:– ಯಾವಾಗ 5505 ವರ್ಷಗಳು ಕಳೆದು ಹೋಗುವುದೋ ಆಗ ಒಬ್ಬ ಮಹಾಪುರುಷ ವಿಶ್ವವನ್ನು ಉದ್ಧರಿಸಲು ಬರುವನು. ಹಿಂದೂ, ಮುಸಲ್ಮಾನ ಮುಂತಾದ ಎಷ್ಟೇ ಪಂಥಗಳು ಇರುವವೋ ಹಾಗೂ ಪ್ರಪಂಚದಲ್ಲಿ ಎಷ್ಟು ಜೀವಗಳಿರುವವೋ, ಅವರು ಮಾನವ ಶರೀರ ಪಡೆದು ಆ ಮಹಾಪುರುಷನಿಂದ ಸತ್ಯನಾಮವನ್ನು ಪಡೆದು ಸತ್ಯನಾಮದ ಶಕ್ತಿಯಿಂದ ಮೋಕ್ಷವನ್ನು ಪಡೆದುಕೊಳ್ಳುವರು. ಹೇಗೆ ಬೇರೇ ಬೇರೆ ನದಿಗಳು ತಮಗೆ ತಾನೇ ಯಾವುದೇ ಅಡೆ ತಡೆ ಇಲ್ಲದೆ ಸಮುದ್ರವನ್ನು ಸೇರುವುದೋ ಹಾಗೆ ಕಬೀರ ಪಂಥವನ್ನು ನಡೆಸುವ ಆ ಮಹಾಪುರುಷನ ಆ (13ನೇ) ಪಂಥದಲ್ಲಿ ಎಲ್ಲಾ ಪಂಥದವರು ಬಹಳ ವೇಗವಾಗಿ ಸೇರಲು ಪ್ರಾರಂಭಿಸುತ್ತಾರೆ. ಅವರನ್ನು ಯಾರೂ ತಡೆಯಲು ಸಾಧ್ಯವಿಲ್ಲ. ಅಂಥಾ ಹದಿಮೂರನೇ ಪಂಥದಲ್ಲಿ ಎಲ್ಲಾ ಪಂಥಗಳು ಬಹಳ ವೇಗವಾಗಿ ಒಂದಾಗುತ್ತಾ ಬರುತ್ತವೆ. ಆದರೆ ಎಲ್ಲಿಯವರೆಗೆ ಸರಿಯಾದ ಸಮಯ ಬರುವುದಿಲ್ಲವೋ, ಅಂದರೆ ಕಲಿಯುಗ 5505 ವರ್ಷಗಳನ್ನು ಪೂರೈಸುವುದಿಲ್ಲವೋ, ಅಲ್ಲಿಯವರೆಗೆ ನಾನು ಈ ಜ್ಞಾನವನ್ನು ಸ್ವಸಮವೇದದಲ್ಲಿ ಹೇಳುತ್ತಿರುತ್ತೇನೆ.

ಯಾವಾಗ ನಿರ್ಧಾರಿತ ಸಮಯ ಬರುವುದೋ, ಆಗ ಸ್ತ್ರೀ ಪುರುಷರು ಉಚ್ಚ ವಿಚಾರಗಳಿಂದ ಕೂಡಿ, ಶುದ್ಧ ಆಚರಣೆಗಳನ್ನು ಮಾಡುತ್ತಾ, ಕಪಟ, ಸ್ವಾರ್ಥ, ಚಾಲಾಕಿತನವನ್ನು ಬಿಟ್ಟು ನನ್ನ (ಕಬೀರರ) ಆಶ್ರಯಕ್ಕೆ ಬರುವರು. ಪರಮಾತ್ಮನಿಂದ ಪ್ರಯೋಜನ ಪಡೆಯಲು ಮಾನವ ಧರ್ಮದಿಂದ ಉಂಟಾಗಿದ್ದ ಅನೇಕ ಪಂಥಗಳು ಪುನಃ ಒಂದಾಗುತ್ತವೆ. ಎಲ್ಲರೂ (ನಿರ್ವಿಕಾರ ಭಕ್ತರು) ಸತ್ಯನಾಮದ ಶಕ್ತಿಯಿಂದ ಸತ್ಯಲೋಕಕ್ಕೆ ತೆರಳುವರು. ನನ್ನ ಆಧ್ಯಾತ್ಮ ಜ್ಞಾನದ ಚರ್ಚೆಯು ಮನೆಮನೆಯಲ್ಲೂ ಆಗುವುದು. ಎಲ್ಲರ ಕೆಟ್ಟ ಬುದ್ಧಿಗಳು ಅಂತ್ಯವಾಗುವುವು. ಕಲಿಯುಗದಲ್ಲಿ ಮತ್ತೆ ಎಲ್ಲರೂ ಒಂದಾಗಿ ಸಹಜವಾಗಿ ವರ್ತಿಸುವರು ಅಂದರೆ ಶಾಂತಿಯಿಂದ ಜೀವನ ನಡೆಸುವರು. ಆಗ ಉಗ್ರರಾಗಲಿ, ದರೋಡೆಕೋರರು, ಲೂಟಿಕೋರರು, ಖಸಾಯಿಗಳಾಗಲಿ ಎಲ್ಲಿರುವರು? ಪರಮಾತ್ಮನು ಸತ್ಯಭಕ್ತಿಯನ್ನು ಮಾಡುವವರ ಕಷ್ಟಗಳನ್ನು ನಿವಾರಿಸುತ್ತಾನೆ. ಅಂದರೆ ದೂರ ಮಾಡುವನು. ಸತ್ಯ ಸಾಧನೆಯಿಂದ ಎಲ್ಲರ ಸಾಂಸಾರಿಕ ಕಷ್ಟಗಳನ್ನು ಕೊನೆಗೊಳಿಸುತ್ತಾನೆ ಮತ್ತು 13ನೇ ಪಂಥದ ಪ್ರವರ್ತಕನು ಎಲ್ಲರನ್ನೂ ಸಮಾನವಾಗಿ ನೋಡುತ್ತಾನೆ. ಅರ್ಥಾತ್ ಮೇಲು ಕೀಳು ಎಂಬ ಬೇಧಭಾವ ಮಾಡುವುದಿಲ್ಲ. ಆ ಪ್ರವರ್ತಕನು ಸಮರ್ಥ ಸತ್ಯ ಕಬೀರರೇ ಆಗಿರುತ್ತಾರೆ. (ಮಮ್ ಸಂತ್ ಮುಝೆ ಜಾನ್ ಮೇರಾ ಹೀ ಸ್ವರೂಪಮ್)

ಪ್ರಶ್ನೆ :– ಈ ಹದಿಮೂರನೇ ಪಂಥ ಯಾವುದು? ಇದರ ಪ್ರವರ್ತಕರು ಯಾರು?

ಉತ್ತರ :– ಈ ಹದಿಮೂರನೇ ಪಂಥ 'ಯಥಾರ್ಥ ಸತ್ಯ ಕಬೀರ' ಪಂಥ. ಇದರ ಪ್ರವರ್ತಕರು ಸ್ವತಃ ಕಬೀರ್ ಪರಮೇಶ್ವರರೇ ಆಗಿದ್ದಾರೆ. ವರ್ತಮಾನದಲ್ಲಿ ಅದರ ಸಂಚಾಲಕರಾದ, ಅವರ ಗುಲಾಮರಾದ ರಾಮ್‌ಪಾಲ್‌ದಾಸ ಸ್ವಾಮಿ ರಾಮದೇವಾನಂದರ ಪುತ್ರ. (ಆಧ್ಯಾತ್ಮಿಕ ದೃಷ್ಟಿಯಿಂದ ಗುರುಗಳನ್ನು ತಂದೆಯೆಂದು ಭಾವಿಸಲಾಗುತ್ತದೆ. ಏಕೆಂದರೆ ಅವರು ಆತ್ಮವನ್ನು ಪೋಷಿಸುತ್ತಾರೆ.)

ಸಾಕ್ಷಿ :– ಸಂತ ಧರ್ಮದಾಸನ ವಂಶದವರಾದ ಮಹಂತರಿಂದ ಸಂಬಂಧವನ್ನು ಹೊಂದಿರುವ ಶ್ರದ್ಧಾಳುಗಳು ಅಜ್ಞಾನದಿಂದ ಹದಿಮೂರನೇ ಪಂಥ ಹಾಗೂ ಸಂಚಾಲಕರಾದ ಧರ್ಮದಾಸನ ಕುಟುಂಬದವರೆಂದು ಸಾಬೀತುಪಡಿಸುವ ದುಸ್ಸಾಹಸ ಮಾಡಿದ್ದಾರೆ. ಆದರೆ ಆನೆಯ ವಸ್ತ್ರವನ್ನು ಎಮ್ಮೆಯ ಮೇಲೆ ಹೊದಿಸಿ, ಇದು ಎಮ್ಮೆಯ ವಸ್ತ್ರವೇ ಎಂದು ಯಾರಾದರೂ ಹೇಳಿದರೆ, ಬುದ್ಧಿವಂತರು ತಕ್ಷಣವೇ ಇದು ಎಮ್ಮೆಯ ವಸ್ತ್ರವಲ್ಲವೆಂದು ಹೇಳಿಬಿಡುತ್ತಾರೆ. ಅದು ಆನೆಯದ್ದೇ ಎಂದು ಹೇಳದಿದ್ದರೂ ಇದು ಎಮ್ಮೆಗಿಂತ ನಾಲ್ಕು ಪಟ್ಟು ಉದ್ದದ, ದಪ್ಪ ಪ್ರಾಣಿಯ ವಸ್ತ್ರವೆಂದು ಸುಲಭವಾಗಿ ಹೇಳಿಬಿಡುತ್ತಾರೆ.

ಉದಾಹರಣೆ :– ಪವಿತ್ರ ಕಬೀರ ಸಾಗರದ 'ಕಬೀರ ಚರಿತ್ರ ಬೋಧ್' ಎಂಬ ಅಧ್ಯಾಯದ 1834–1835ನೇ ಪುಟದಲ್ಲಿ ಬರೆದಿದೆ.

## "ಹದಿಮೂರು ಗಾಡಿ ಕಾಗದಗಳನ್ನು ಬರೆಯುವುದು"

ಒಮ್ಮೆ ದಿಲ್ಲಿಯ ರಾಜನು ಕಬೀರರಿಗೆ 13 ಗಾಡಿಯಷ್ಟು ಪತ್ರಗಳನ್ನು ಎರಡೂವರೆ ದಿನದಲ್ಲಿ ಅಂದರೆ 60 ಗಂಟೆಗಳಲ್ಲಿ ಬರೆದುಕೊಟ್ಟರೆ, ಅವರನ್ನು ಪರಮಾತ್ಮನೆಂದು ನಂಬುವುದಾಗಿ ಹೇಳಿದನು. ಆಗ ಕಬೀರರು ತಮ್ಮ ದಂಡದಿಂದ ಆ ಹದಿಮೂರು ಗಾಡಿಗಳ ಮೇಲೆ ಒಮ್ಮೆ ಸವರಿದರು. ತಕ್ಷಣವೇ ಎಲ್ಲಾ ಕಾಗದಗಳ ಮೇಲೆ ಆಧ್ಯಾತ್ಮಕವಾದ ಸಂಪೂರ್ಣ ಅಮೃತವಾಣಿ ಬರೆಯಲ್ಪಟ್ಟಿತು. ರಾಜನಿಗೆ ಆಗ ನಂಬಿಕೆ ಬಂದರೂ ಸಹ ಅವನು ಮುಸಲ್ಮಾನನಾಗಿದ್ದರಿಂದ ತಮ್ಮ ಧರ್ಮದ ವ್ಯಕ್ತಿಗಳ ಒತ್ತಡಕ್ಕೆ ಸಿಲುಕಿ ಆ ಎಲ್ಲ ಗ್ರಂಥಗಳನ್ನು ದಿಲ್ಲಿಯ ಒಂದು ಜಮೀನಿನಲ್ಲಿ ಹೂಳಿಸಿದನು. ಕಬೀರ್‌ಸಾಗರದ ಕಬೀರ್‌ಚರಿತ್ರಬೋಧ್‌ನ 1834–35ನೇ ಪುಟದಲ್ಲಿ ಮುಕ್ತಾಮಣಿ ಸಾಹೇಬರ ಕಾಲ ಬರುವುದು ಹಾಗೂ ಅವರ ಧ್ವಜವು ದಿಲ್ಲಿಯಲ್ಲಿ ಹಾರಾಡುವುದು, ಆಗ ಸಮಸ್ತ ಪುಸ್ತಕಗಳನ್ನು ಹೊರ ತೆಗೆಯಲಾಗುತ್ತದೆ ಎಂದು ತಪ್ಪಾಗಿ ಬರೆದಿದೆ. ಮುಕ್ತಾಮಣಿ ಅವತಾರ (ಧರ್ಮದಾಸನ) ವಂಶದ ಹದಿಮೂರನೇ

ಪೀಳಿಗೆಯವರಾಗುತ್ತಾರೆ.

ವಿವೇಚನೆ:– ಈ ಲೇಖನದಲ್ಲಿ ತಪ್ಪಾಗಿ ಬರೆದಿರುವ ಬಗ್ಗೆ ಸಾಕ್ಷಿ ಏನೆಂದರೆ ವರ್ತಮಾನದಲ್ಲಿ ಧರ್ಮದಾಸನ ವಂಶದ ಸಿಂಹಾಸನವು ದಾಮಾಖೇಡಾ, ರಾಯ್‌ಗಢ್ ಜಿಲ್ಲೆಯ ಛತ್ತೀಸ್‌ಗಢ್ ರಾಜ್ಯದಲ್ಲಿದೆ. ಆ ಸಿಂಹಾಸನದ ಮೇಲೆ 14ನೇ ವಂಶಗುರು ಶ್ರೀ ಪ್ರಕಾಶಮುನಿ ಎಂಬ ಸಾಹೇಬರು ವಿರಾಜಮಾನರಾಗಿದ್ದಾರೆ. 13ನೇ ವಂಶಗುರು ಶ್ರೀ ಗೃಂಥಮುನಿ ಎಂಬ ಸಾಹೇಬರು 1998ರಲ್ಲಿ ಶರೀರವನ್ನು ತ್ಯಜಿಸಿದ್ದರು. ಒಂದುವೇಳೆ 13ನೇ ವಂಶಗುರುವಿನ ವಿಷಯದಲ್ಲಿ ಇದನ್ನು ಬರೆದಿದ್ದರೆ ಅವರು ಹೊರಗೆ ತೆಗೆಸಿ ಬಿಡುತ್ತಿದ್ದರು ಹಾಗೂ ದಿಲ್ಲಿಯಲ್ಲಿ ಧ್ವಜ ಹಾರಿಸುತ್ತಿದ್ದರು. ಹಾಗಾದರೆ ಅವರು 13ನೇ ಪಂಥದ ಧರ್ಮದಾಸರ ವಂಶದವರಂತೂ ಅಲ್ಲ.

'ಕಬೀರ್ ಚರಿತ್ರ ಬೋಧ್' ನ 1870ನೇ ಪುಟದಲ್ಲಿ 12ಪಂಥಗಳ ಹೆಸರನ್ನು ಬರೆಯಲಾಗಿದೆ. ಜ್ಯೋತಿ ನಿರಂಜನನು ಕಬೀರರ ಹೆಸರಿನಲ್ಲಿ ನಕಲಿ ಪಂಥವನ್ನು ನಡೆಸಲು ಉದ್ದೇಶಿಸಿದ್ದು. ಅದರಲ್ಲಿ ಮೊದಲನೆಯದಾಗಿ 'ನಾರಾಯಣದಾಸ' ಎಂದು ಬರೆದಿದೆ. 12ನೇ ಪಂಥ ಗರೀಬ್‌ದಾಸನದ್ದೆಂದು ಬರೆದಿದೆ. ವಾಸ್ತವವಾಗಿ ಪ್ರಥಮ ಮುನಿ ಚೂಡಾಮಣಿ. ಗೊತ್ತಿದ್ದೂ ಇದರಲ್ಲಿ ಬದಲಾವಣೆ ಮಾಡಲಾಗಿದೆ.

ಪರಮೇಶ್ವರ ಕಬೀರರು ನಾರಾಯಣದಾಸನನ್ನು ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಲಿಲ್ಲ ಎನ್ನುವುದು ಅವರಿಗೆ ತಿಳಿದಿರಬಹುದು. ನಾರಾಯಣದಾಸರು ಶ್ರೀ ಕೃಷ್ಣನ ಉಪಾಸಕರಾಗಿದ್ದರು. ಅವರು ತಮ್ಮ ತಮ್ಮನಾದ ಚೂಡಾಮಣಿಯನ್ನು ಬಹಳವಾಗಿ ವಿರೋಧಿಸಿದ್ದರು. ಆ ಕಾರಣದಿಂದ ಚೂಡಾಮಣಿಯು 'ಕುದುರ್ಮಾಲ' ಎಂಬ ಊರಿಗೆ ಹೊರಟು ಹೋಗಿದ್ದರು. ನಂತರ ಬಾಂಧವಗಢ್ ನಾಶವಾಗಿಹೋಗಿತ್ತು. 'ಕಬೀರ್ ಚರಿತ್ರ ಬೋಧ್' ನಲ್ಲಿ 1870

1. ನಾರಾಯಣ್‌ದಾಸರ ಪಂಥ 2) ಯೋಗೌದಾಸರ (ಜಾಗೂ ದಾಸ್)ರ ಪಂಥ 3) ಸೂರತ್ ಗೋಪಾಲ್ ಪಂಥ 4) ಮೂಲ ನಿರಂಜನ್ ಪಂಥ 5) ಟಕ್‌ಸಾರಿ ಪಂಥ 6) ಭಗವಾನ್ ದಾಸರ ಪಂಥ 7) ಸತ್‌ನಾಮಿ ಪಂಥ 8) ಕಮಾಲ್‌ಜೀಯವರ ಪಂಥ 9) ರಾಮ್‌ಕಬೀರ್ ಪಂಥ 10) ಪ್ರೇಮಧಾಮದ ವಾಣಿ ಪಂಥ 11) ಜೀವಾದಾಸರ ಪಂಥ 12) ಗರೀಬ್‌ದಾಸರ ಪಂಥ

ನಂತರ 'ಕಬೀರ್ ವಾಣಿ' ಎಂಬ ಅಧ್ಯಾಯದ 134ನೇ ಪುಟದಲ್ಲಿ ಕಬೀರ ಸಾಗರದಲ್ಲಿ ಬರೆದಿದೆ:–

### "ವಂಶ ಪ್ರಕಾರ"

ಪ್ರಥಮ್ ವಂಶ್ ಉತ್ತಮ್ (ಇದನ್ನು ಚೂಡಾಮಣಿಯ ವಿಷಯದಲ್ಲಿ ಹೇಳಲಾಗಿದೆ)

ದೂಸರೆ ವಂಶ್ ಅಹಂಕಾರೀ (ಇದು ಯಾಗೌ ಅಂದರೆ ಜಾಗೂ ದಾಸರದ್ದಾಗಿದೆ)

ತೀಸರೆ ವಂಶ್ ಪ್ರಚಂಡ್ (ಇದು ಸೂರತ್ ಗೋಪಾಲರದ್ದಾಗಿದೆ)

ಚೌಥೆ ವಂಶ್ ಬೀರಹೆ (ಇದು ಮೂಲ ನಿರಂಜನ ಪಂಥ)

ಪಾಂಚವೆಂ ವಂಶ್ ನಿನ್ದ್ರಾ (ಇದು ಟಕ್‌ಸಾರಿ ಪಂಥ)

ಛಟೆ ವಂಶ್ ಉದಾಸ್ (ಇದು ಭಗವಾನ್ ದಾಸರ ಪಂಥ)

ಸಾತವೆಂ ವಂಶ್ ಜ್ಞಾನ್ ಚತುರಾಈ (ಇದು ಸತ್‌ನಾಮೀ ಪಂಥ)

ಆಠವೆಂ ವಂಶ್ ದ್ವಾದಶ್ ಪಂಥ್ ವಿರೋಧ್ (ಇದು ಕಮಲ್‌ಜೀಯವರ ಕಮಾಲೀಯ ಪಂಥ)

ನೌವೆಂ ವಂಶ್ ಪಂಥ್ ಪೂಜಾ **(ಇದು ರಾಮ್ ಕಬೀರರ ಪಂಥ)**

ದಸವೆಂ ವಂಶ್ ಪ್ರಕಾಶ್ **(ಇದು ಪರಮಧಾಮದ ವಾಣಿ ಪಂಥ)**

ಗ್ಯಾರಹವೆಂ ವಂಶ್ ಪ್ರಕಟ್ ಪಸಾರಾ **(ಇದು ಜೀವಾ ಪಂಥ)**

ಬಾರಹವೆಂ ವಂಶ್ ಪ್ರಕಟ್ ಹೋಯ್ ಉಜಿಯಾರಾ **(ಇದು ಹರಿಯಾಣದ ಝಜ್ಜರ ಜಿಲ್ಲೆಯ ಛುಡಾನಿಯ ಸಂತ ಗರೀಬ್‌ದಾಸರ ಪಂಥ. ಇವರು ಪರಮೇಶ್ವರ ಕಬೀರರು ಭೇಟಿಯಾದ ನಂತರ ಅವರ ಮಹಿಮೆ ಹಾಗೂ ಯಥಾರ್ಥ ಜ್ಞಾನವನ್ನು ತಿಳಿಸಿದವರು. ಇದರಿಂದ ಪರಮಾತ್ಮ ಕಬೀರರ ಮಹಿಮೆಯ ಬಗ್ಗೆ ಬೆಳಕಿಗೆ ಬಂದಿತು.**

ತೇರಹವೇ ವಂಶ್ ಮಿಟೈ ಸಕಲ್ ಅಂಧಿಯಾರಾ **(ಇದು ಯಥಾರ್ಥ ಕಬೀರ ಪಂಥ. ಇದು 1994ರಿಂದ ಪ್ರಾರಂಭವಾಗಿದೆ. ಇದು ನನ್ನ ಮೂಲಕ ಅಂದರೆ ರಾಮ್‌ಪಾಲ್ ದಾಸರ ಮೂಲಕ ಮುಂದುವರೆದಿದೆ.)**

**ದಾಮಾಖೇಡಾದ ಜನರು, ಧರ್ಮದಾಸನ ವಂಶದ ಜನರು ವಾಸ್ತವಿಕ ರಹಸ್ಯವನ್ನು ಮುಚ್ಚಿಹಾಕಲು ಪ್ರಯತ್ನಿಸಿದರು. ಆದರೆ ಸತ್ಯವನ್ನು ಮರೆಮಾಚಲು ಸಾಧ್ಯವಾಗಲಿಲ್ಲ.**

**ಕಬೀರ ಸಾಗರದ "ಕಬೀರವಾಣಿ"** ಎಂಬ ಅಧ್ಯಾಯದ **136ನೇ ಪುಟದಲ್ಲಿದೆ.**

## ದ್ವಾದಸ್ ಪಂಥ ಚಲೊ ಸೋ ಭೆದ

ದ್ವಾದಶ್ ಪಂಥ್ ಕಾಲ್ ಫುರಮಾನಾ । ಭೂಲೆ ಜೀವ್ ನ ಜಾಯ್ ಠಿಕಾನಾ ॥
ತಾತೆಂ ಆಗಮ್ ಕಹ್ ಹಮ್ ರಾಖಾ । ವಂಶ್ ಹಮಾರಾ ಚುಡಾಮಣಿ ಶಾಖಾ ॥

ಪ್ರಥಮ್ ಜಗ್ ಮೆಂ ಜಾಗು ಭ್ರಮಾವೈ । ಬಿನಾ ಭೇದ್ ವಹ್ ಗ್ರಂಥ್ ಚುರಾವೈ ॥
ದೂಸರ್ ಸುರತಿ ಗೋಪಾಲ್ ಹೋಈ ।
ಅಕ್ಷರ್ ಜೋ ಜೋಗ್ ದೃಢಾವೈ ಸೋಈ ॥

**(ವಿವೇಚನೆ:– ಇಲ್ಲಿ ಪ್ರಥಮ ಜಾಗೂದಾಸರು ಎಂದು ತಪ್ಪಾಗಿ ಬರೆದಿದ್ದಾರೆ ಆದರೆ ವಾಣಿಯಲ್ಲಿ ಸ್ಪಷ್ಟವಾಗಿದೆ ಪ್ರಥಮ ವಂಶ ಚೂಡಾಮಣಿ ಹಾಗೂ ಎರಡನೆಯವರು ಜಾಗೂದಾಸರು. ಕಬೀರ್‌ಚರಿತ್ರ ಬೋಧ್‌ನ 1870ನೇ ಪುಟದಲ್ಲಿ ಇದರ ಪ್ರಮಾಣ ಸಿಗುತ್ತದೆ. ಸೂಕ್ಷ್ಮವೇದ ಬೋಧದ 155(1499)ನೇ ಪುಟದಲ್ಲೂ ಎರಡನೆಯ ಜಾಗೂದಾಸರು ಎಂದು ಬರೆದಿದ್ದಾರೆ. ಆದರೆ ಇಲ್ಲಿ ಪ್ರಥಮ ಎಂದು ಬರೆಯಲಾಗಿದೆ. ಇಲ್ಲಿ ಚೂಡಾಮಣಿಯೇ ಪ್ರಥಮರು ಎಂದು ಬರೆಯುವುದು ಸೂಕ್ತ.)**

ತೀಸರಾ ಮೂಲ್ ನಿರಂಜನ್ ಬಾನೀ । ಲೋಕ್ ವೇದ್ ಕೀ ನಿರ್ಣಯ್ ಠಾನೀ ॥

**(ಇಲ್ಲಿ ನಾಲ್ಕನೆಯದನ್ನು ಬರೆಯಬೇಕು.)**

ಚೌಥೆ ಪಂಥ್ ಟಕಸಾರ್ (ಟಕಸಾರೀ) ಭೇದ್ ಲೌ ಆವೈ ।
ನೀರ್ ಪವನ್ ಕೋ ಸಂಧಿ ಬತಾವೈ ॥

**(ಇಲ್ಲಿ ಐದನೆಯದನ್ನು ಬರೆಯಬೇಕು.)**

ಪಾಂಚವಾ ಪಂಥ್ ಬೀಜ್ ಕೋ ಲೇಖಾ ।
ಲೋಕ್ ಪ್ರಲೋಕ್ ಕಹೈ ಹಮ್ ಮೆಂ ದೇಖಾ ॥

**(ಇದು ಭಗವಾನ ದಾಸನ ಪಂಥ. ಇಲ್ಲಿ ಆರನೆಯದನ್ನು ಬರೆಯಬೇಕು.)**

ಛಟಾ ಪಂಥ್ ಸತ್ಯನಾಮೀ ಪ್ರಕಾಶಾ । ಘಟ್ ಕೆ ಮಾಹೀಂ ಮಾರ್ಗ್ ನಿವಾಸಾ ॥

**(ಇಲ್ಲಿ ಏಳನೆಯ ಪಂಥವನ್ನು ಬರೆಯಬೇಕು.)**

ಸಾತವಾಂ ಜೀವ್ ಪಂಥ್ ಲೇ ಬೋಲೈ ಬಾನೀ ।
ಭಯೋ ಪ್ರತೀತ್ ಮರ್ಮ್ ನಹೀಂ ಜಾನೀ ॥

**(ಇದು ಎಂಟನೆಯ ಕಮಾಲ್ ಜೀ ಯವರ ಪಂಥವಾಗಿದೆ)**

ಆಠವಾಂ ರಾಮ್ ಕಬೀರ್ ಕಹಾವೈ । ಸತಗುರು ಭ್ರಮ್ ಲೈ ಜೀವ್ ದೃಢಾವೈ ॥

**(ವಾಸ್ತವದಲ್ಲಿ ಇದು ಒಂಭತ್ತನೆಯ ಪಂಥವಾಗಿದೆ)**

ನೌಮೆಂ ಜ್ಞಾನ್ ಕೀ ಕಲಾ ದಿಖಾವೈ । ಭಈ ಪ್ರತೀತ್ ಜೀವ್ ಸುಖ್ ಪಾವೈ ॥

**(ವಾಸ್ತವದಲ್ಲಿ ಇದು ಹನ್ನೊಂದನೆಯ ಜೀವಾ ಪಂಥವಾಗಿದೆ. ಇಲ್ಲಿ ಒಂಭತ್ತನೆಯದನ್ನು ತಪ್ಪಾಗಿ ಬರೆಯಲಾಗಿದೆ.)**

ದಸವೆಂ ಭೇದ್ ಪರಮ್ ಧಾಮ್ ಕೀ ಬಾನೀ । ಸಾಖ್ ಹಮಾರೀ ನಿರ್ಣಯ್ ಠಾನೀ ॥

**(ಇದನ್ನು ಸರಿಯಾಗಿ ಬರೆಯಲಾಗಿದೆ. ಆದರೆ 11ನೇಯವರನ್ನು ಬರೆದಿಲ್ಲ. ಚೂಡಾಮಣಿಯನ್ನು ಪ್ರಥಮವೆಂದು ಪರಿಗಣಿಸಿದರೆ ಕ್ರಮವು ಸರಿಯಾಗುತ್ತದೆ. ವಾಸ್ತವವಾಗಿ ಚೂಡಾಮಣಿಯೇ ಪ್ರಥಮರು. ನಂತರ 12ನೇ ಪಂಥದ ಗರೀಬ್‌ದಾಸರ ಪಂಥದ ವರ್ಣನೆ ಪ್ರಾರಂಭವಾಗುತ್ತದೆ. ಇದು ಸಾಂಕೇತಿಕ ಸಂತ ಗರೀಬ್‌ದಾಸರ ಜನ್ಮ ವಿಕ್ರಮ ಸಂವತ್ಸರ 1774 ರಲ್ಲಿ ಆಗಿತ್ತು. ಇದು ತಪ್ಪಾಗಿ 1775 ಎಂದಾಗಿ ಬರೆಯಲಾಗಿದೆ.)**

ಸಂವತ್ ಸತರಹ್ ಸೌ ಪಚಹತ್ತರ್ (1775) ಹೋಈ ।
ತಾ ದಿನ್ ಪ್ರೇಮ್ ಪ್ರಕಟೆಂ ಜಗ್ ಸೋಈ ॥

ಆಜ್ಞಾ ರಹೈ ಬ್ರಹ್ಮ ಬೋಧ್ ಲಾವೈ । ಕೋಲೀ ಚಮಾರ್ ಸಬಕೇ ಘರ್ ಖಾವೈ ॥
ಸಾಖಿ ಹಮಾರೀ ಲೇ ಜೀವ್ ಸಮುಝಾವೈ ।
ಅಸಂಖ್ಯ ಜನ್ಮ ಠೌರ್ ನಹೀಂ ಪಾವೈ ॥
ಬಾರಹವೆಂ (ಬಾರವೈ) ಪಂಥ್ ಪ್ರಗಟ್ ಹೋವೈ ಬಾನೀ ।
ಶಬ್ದ್ ಹಮಾರೈ ಕೀ ನಿರ್ಣಯ್ ಠಾನೀ ॥
ಅಸ್ಥಿರ್ ಘರ್ ಕಾ ಮರ್ಮ್ ನಹೀಂ ಪಾವೈ ।
ಯೇ ಬಾರ್ (ಬಾರಹ್) ಪಂಥ್ ಹಮೀ (ಕಬೀರ್ ಜೀ) ಕೋ ಧ್ಯಾವೈಂ ॥
ಬಾರಹೇಂ ಪಂಥ್ ಹಮಹಿ (ಕಬೀರ್ ಜೀ ಹೀ) ಚಲಿ ಆವೈಂ ।
ಸಬ್ ಪಂಥ್ ಮಿಟಾ ಏಕ್ ಹೀ ಪಂಥ್ ಚಲಾವೈಂ ॥
ಪ್ರಥಮ್ ಚರಣ್ ಕಲಜುಗ್ ನಿರಯಾನಾ (ನಿರ್ವಾಣ್) ।
ತಬ್ ಮಗಹರ್ ಮಾಂಡೋ ಮೈದಾನಾ ॥

**ಭಾವಾರ್ಥ:– ಗರೀಬ್‌ದಾಸರೇ 12ನೇ ಪಂಥದವರೆಂದು ಇಲ್ಲಿ ಸ್ಪಷ್ಟವಾಗಿದೆ. ಏಕೆಂದರೆ ಇವರು ಪರಮೇಶ್ವರ ಕಬೀರರನ್ನು ಭೇಟಿಯಾಗಿದ್ದರು. ಅವರ ಜ್ಞಾನ ಯೋಗವು ತೆರೆಯಿತು. ಆಗ ಸಂತ ಗರೀಬ್‌ದಾಸರು ಪರಮೇಶ್ವರ ಕಬೀರರ ಮಹಿಮೆಯ ವಚನವನ್ನು ಹೇಳಿದರು. ಇದನ್ನು ಇಂದು ಪ್ರಿಂಟ್ ಮಾಡಿಸಲಾಗಿದೆ. ಸಂತ ಗರೀಬ್‌ದಾಸರ ಪಂಥಕ್ಕೆ ಮೊದಲು 12 ಪಂಥಗಳು ಬಂದಿದ್ದವು. ಸಂತ ಗರೀಬ್‌ದಾಸರು ನನ್ನ ಮಹಿಮೆಯಾದ ಸಾಖಿ–ಸಬದ್–ಚತುಷ್ಪದಿ ಬರೆದಿದ್ದಾರೆ ಎನ್ನುವುದನ್ನೂ ಬರೆಯಲಾಗಿದೆ. ಆದರೆ 12ನೇ ಪಂಥದ ಅನುಯಾಯಿಗಳು ತಮ್ಮ ತಮ್ಮ ಬುದ್ಧಿಗೆ ಅನುಸಾರವಾಗಿ**

ವಾಣಿಯ ಅರ್ಥವನ್ನು ಹೇಳುವರು. ಆದರೆ ಗರೀಬ್‌ದಾಸರವರೆಗಿನ ಪಂಥದ ಅನುಯಾಯಿಗಳು ಅಂದರೆ 12 ಪಂಥದವರು ನನ್ನ ವಾಣಿಯನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಈ ಕಾರಣದಿಂದ ಅಸಂಖ್ಯ ಜನ್ಮಗಳವರೆಗೆ ಸತ್ಯಲೋಕವೆಂಬ ಅಮರ ಲೋಕವನ್ನು ಪಡೆಯಲಾರರು. ಈ 12 ಪಂಥದವರು ಕಬೀರರ ಹೆಸರಿನಲ್ಲಿ ಪಂಥವನ್ನು ನಡೆಸುವರು. ಹಾಗೂ ನನ್ನ ಹೆಸರಿನಲ್ಲಿ ಮಹಿಮೆಯನ್ನು ಪಡೆಯುವರು. ಆದರೆ ಈ ಹನ್ನೆರಡು ಪಂಥದ ಅನುಯಾಯಿಗಳು ಯಾವುದೇ ಕಾರಣಕ್ಕೂ ಸತ್ಯಲೋಕವೆಂಬ ಶಾಶ್ವತವಾದ ಮನೆಯನ್ನು ಪ್ರವೇಶಿಸಲಾರರು" ಎಂದರು. ನಂತರ ಮುಂದುವರೆದು ಹೇಳಿದರು, "ಮುಂದೆ ಹನ್ನೆರಡನೇ ಪಂಥದಲ್ಲಿ (ಸಂತ ಗರೀಬ್‌ದಾಸರ ಪಂಥದಲ್ಲಿ) ನಾವು ಅಂದರೆ ಸ್ವತಃ ಕಬೀರರೇ ಬರುತ್ತೇವೆ. ಆಗ ಎಲ್ಲಾ ಪಂಥಗಳನ್ನು ನಾಶಪಡಿಸಿ ಒಂದು ಪಂಥವನ್ನು ನಡೆಸುತ್ತೇವೆ. ಇದು ಕಲಿಯುಗದ ಮೊದಲ ಮೆಟ್ಟಿಲಾಗಲಿದೆ. ನಾನು (ಕಬೀರ್) ವಿಕ್ರಮ ಸಂವತ್ಸರ 1575 ಅಂದರೆ 1518ನೇ ಇಸವಿಯಲ್ಲಿ ಮಗಹರ್ ಎಂಬ ಊರಿನಿಂದ ನಿರ್ವಾಣವನ್ನು ಹೊಂದುವೆ ಅರ್ಥಾತ್ ಯಾವುದಾದರೂ ಲೀಲೆಗಳನ್ನು ಮಾಡಿ ಸತ್ಯಲೋಕವನ್ನು ತಲುಪುವೆ".

ಪರಮೇಶ್ವರ ಕಬೀರರು ಕಲಿಯುಗವನ್ನು ಮೂರು ಭಾಗಗಳನ್ನಾಗಿ ವಿಭಜಿಸಿದ್ದಾರೆ. ಮೊದಲ ಚರಣದಲ್ಲಿ ಪರಮೇಶ್ವರರು ಲೀಲೆಗಳನ್ನು ಮಾಡಿ ಹೊರಟುಹೋಗಿದ್ದಾರೆ. ಮಧ್ಯದ ಚರಣವೆಂದರೆ ಐದು ಸಾವಿರ ಐದು ನೂರ ಐದು ವರ್ಷಗಳು ಕಳೆದು ಹೋಗುತ್ತದೆ. ಅಂತಿಮ ಚರಣದಲ್ಲಿ ಎಲ್ಲರೂ ಕೃತಘ್ನರಾಗುವರು, ಯಾರು ಭಕ್ತಿಯಿಂದ ಇರುವುದಿಲ್ಲ.

ಸಂತ ಗರೀಬ್‌ದಾಸರ ಹನ್ನೆರಡನೇ ಪಂಥದಿಂದ ನನ್ನ (ರಾಮ್‌ಪಾಲ್‌ದಾಸ)ನ ವಿಕಾಸ ಉಂಟಾಗಿದೆ. 13ನೇ ಪಂಥ ಈಗ ನಡೆಯುತ್ತಿದೆ. ಪರಮೇಶ್ವರ ಕಬೀರರು ನಡೆಸುತ್ತಿದ್ದಾರೆ. ಗುರು ಮಹಾರಾಜರಾದ ಸ್ವಾಮಿ ರಾಮದೇವಾನಂದರ ಆಶೀರ್ವಾದವಿದೆ. ಇಡೀ ವಿಶ್ವವೇ ಕಬೀರ ಪರಮೇಶ್ವರರನ್ನು ಒಪ್ಪುತ್ತಾರೆ ಮತ್ತು ಇದು ಯಶಸ್ಸು ಕಾಣುತ್ತದೆ.

ಸಂತ ಗರೀಬ್‌ದಾಸರನ್ನು ಕಬೀರ್ ಪರಮೇಶ್ವರರು ಭೇಟಿಯಾಗಿದ್ದರು. ಕಬೀರರು ಪರಮಾತ್ಮರಂತೂ ಹೌದು. ಅವರು ತಮ್ಮ ಜ್ಞಾನವನ್ನು ಹರಡಲು ಭೂಮಿಯ ಮೇಲೆ ಹಾಗೂ ಬೇರೆ ಲೋಕಗಳಲ್ಲಿ ಪ್ರತ್ಯಕ್ಷರಾಗುವರು. ಸಂತ ಗರೀಬ್‌ದಾಸರು "ಅಸುರ ನಿಕಂದನ್ ರಮೈಣಿ"ಯಲ್ಲಿ ಹೇಳಿದ್ದಾರೆ.

ಸತ್‌ಗುರು ದಿಲ್ಲಿ ಮಂಡಲ್ ಆಯಸಿ । ಸೂತಿ ಧರತಿ ಸೂಮ್ ಜಗಾಯಸೀ ॥
ದಿಲ್ಲಿ ಕೆ ತಖ್‌ತ್ ಛತ್ರ್ ಫೇರ್ ಭೀ ಫಿರಾಯಸಿ ।
ಚೌಂಸಠ್ ಯೋಗನಿ ಮಂಗಲ್ ಗಾಯಸೀ ॥

**ಸಂತ ಗರೀಬ್‌ದಾಸರ ಸದ್ಗುರು "ಪರಮೇಶ್ವರ ಕಬೀರರಾಗಿದ್ದರು.**

**ಪರಮೇಶ್ವರ ಕಬೀರರು ಕಬೀರ್ ಸಾಗರ ಎಂಬ ಅಧ್ಯಾಯದ ಕಬೀರ್ ವಾಣಿಯ 136 ಹಾಗೂ 137ನೇ ಪುಟದಲ್ಲಿ ಹೇಳಿದ್ದಾರೆ, 12ನೇ ಪಂಥವನ್ನು ಗರೀಬ್‌ದಾಸರ ಮೂಲಕ ನಡೆಸಲಾಗುತ್ತದೆ.**

ಸಂವತ್ ಸತರಹ್ ಸೌ ಪಚಹತ್ತರ್ (1775) ಹೋಈ ।
ಜಾ ದಿನ್ ಪ್ರೇಮ್ ಪ್ರಕಟ್ಯೆ ಜಗ್ ಸೋಈ ॥
ಸಾಖಿ ಹಮಾರೀ ಲೇ ಜೀವ್ ಸಮುಝಾವ್ಯೆ ।
ಅಸಂಖ್ಯೋಂ ಜನ್ಮ್ ಠೌರ್ ನಹೀಂ ಪಾವ್ಯೆ ॥
ಬಾರಹವೆಂ ಪಂಥ್ ಪ್ರಗಟ್ ಹೋ ಬಾನೀ ।
ಶಬ್ದ್ ಹಮಾರೇ ಕೀ ನಿರ್ಣಯ್ ಠಾನೀ ॥
ಅಸ್ಥಿರ್ ಘರ್ ಕಾ ಮರ್ಮ್ ನಾ ಪಾವ್ಯೆಂ ।

ಯೇ ಬಾರಾ (ಬಾರಹ್) ಪಂಥ್ ಹಮಹೀ ಕೋ ಧ್ಯಾವೈಂ ॥
ಬಾರಹವೆಂ ಪಂಥ್ ಹಮ್ ಹೀ ಚಲಿ ಆವೈ ।
ಸಬ್ ಪಂಥ್ ಮಿಟಾ ಏಕ್ ಪಂಥ್ ಚಲಾವೈಂ ॥

**ಭಾವಾರ್ಥ:–** ಪರಮೇಶ್ವರ ಕಬೀರರು ಸ್ಪಷ್ಟ ಪಡಿಸುವುದೇನೆಂದರೆ, 12ನೇ ಪಂಥದವರೆಗಿನ ಅನುಯಾಯಿಗಳು ನನ್ನ ಮಹಿಮೆಯ ಪದ್ಯವನ್ನು ಹಾಡುತ್ತಾರೆ. ಅದನ್ನು ನಾನು (ಪರಮೇಶ್ವರ ಕಬೀರರು) ಸ್ವತಃ ಉಪದೇಶಿಸಿದ್ದೇನೆ. ಅದನ್ನು ಕಬೀರ ಸಾಗರ, ಕಬೀರ್ ಸಾಖಿ, ಕಬೀರ್ ಬೀಜಕ್, ಕಬೀರ್ ಶಬ್ದಾವಲಿ ಮುಂತಾದ ಗ್ರಂಥಗಳಲ್ಲಿ ಬರೆಯಲಾಗಿದೆ. ನನ್ನ ಕೃಪೆಯಿಂದ ಗರೀಬ್‌ದಾಸರ ಮೂಲಕ ಹೇಳಲ್ಪಟ್ಟಿರುವ ವಾಣಿಯ ಗೂಢಾರ್ಥವನ್ನು ಯಾರು ಸರಿಯಾಗಿ ಅರ್ಥ ಮಾಡಿಕೊಳ್ಳುವುದಿಲ್ಲವೋ, ಸ್ವತಃ ತಾವೇ ನಿರ್ಧಾರ ತೆಗೆದುಕೊಂಡು ತಮ್ಮ ಅನುಯಾಯಿಗಳಿಗೆ ಉಪದೇಶಿಸುವರೋ, ಅವರು ಸತ್ಯದಿಂದ ವಂಚಿತರಾಗಿ ಅಸಂಖ್ಯ ಜನ್ಮಗಳನ್ನೆತ್ತಿ, ಶಾಶ್ವತವಾದ ಸತ್ಯಲೋಕದಿಂದ ದೂರವಾಗುವರು. ಎಂದಿಗೂ ಅವರು ಅಮರ ಲೋಕವನ್ನು ಪ್ರವೇಶಿಸುವುದಿಲ್ಲ. ಮತ್ತೆ ನಾನು (ಪರಮೇಶ್ವರ ಕಬೀರ) ಆ ಗರೀಬ್‌ದಾಸರ ಪಂಥದಲ್ಲಿ ಬರುವೆನು. ಕಲಿಯುಗದಲ್ಲಿ ಐದು ಸಾವಿರದ ಐದು ನೂರ ಐದು ವರ್ಷಗಳು ಮುಗಿದ ನಂತರ ನಿಜವಾದ ಸಂತ ಕಬೀರರ ಪಂಥವನ್ನು ನಡೆಸಲಾಗುತ್ತದೆ. ಆಗ ಮನೆ ಮನೆಯಲ್ಲೂ ತತ್ವಜ್ಞಾನದ ಬಗ್ಗೆ ಚರ್ಚೆಗಳಾಗುತ್ತದೆ. ತತ್ವಜ್ಞಾನವನ್ನು ಅರಿತು ಪ್ರಪಂಚದ ಮನುಷ್ಯರೆಲ್ಲರೂ ನನ್ನನ್ನು ಆರಾಧಿಸುವರು. ಎಲ್ಲರೂ ಸದ್ಗುಣಗಳನ್ನು ಪಡೆದು ನೆಮ್ಮದಿಯಿಂದ ಬಾಳುವರು. ಇದರಿಂದ ತಿಳಿಯುವುದೇನೆಂದರೆ, 13ನೇ ಪಂಥ ಯಥಾರ್ಥ ಕಬೀರರ ಪಂಥ. ಅದು ನನ್ನ (ರಾಮ್‌ಪಾಲ್ ದಾಸನ) ಮೂಲಕ ನಡೆಸಲಾಗುತ್ತಿದೆ. ಇದು ಪರಮೇಶ್ವರ ಕಬೀರರ ಕೃಪೆ. ಕಬೀರ ಪರಮೇಶ್ವರರು 'ತೋತಾದ್ರಿ' ಎನ್ನುವ ಸ್ಥಾನದಲ್ಲಿ ಬ್ರಾಹ್ಮಣರ ಮೂಲಕ ಮಾಡುತ್ತಿರುವ (ದಾಸೋಹ) ಭಂಡಾರದಲ್ಲಿ ಒಂದು ಕೋಣದಿಂದ ವೇದಮಂತ್ರವನ್ನು ಹೇಳಿಸಿದರು. ಅವರು ಸ್ವತಃ ಇದನ್ನು ಹೇಳಬಹುದಿತ್ತು. ಸಮರ್ಥರ ಸಮರ್ಥನೆ ಏನೆಂದರೆ, ಅವರು ಯಾರಿಂದ ಬೇಕಾದರೂ ತಮ್ಮ ಮಹಿಮೆಯ ಪರಿಚಯವನ್ನು ಮಾಡಿಸಬಲ್ಲರು. ಆದ್ದರಿಂದ ಕಬೀರ ಪರಮೇಶ್ವರರು ತಮ್ಮ ಕೃಪೆಯಿಂದ (ರಾಮ್‌ಪಾಲ್ ದಾಸರಿಂದ) ಈ 13ನೇ ಪಂಥವನ್ನು ಮುಂದುವರೆಸಿದ್ದಾರೆ.

## "ಕಲಿಯುಗ ವರ್ತಮಾನದಲ್ಲಿ ಎಷ್ಟು ಕಳೆದಿದೆ?"

ಹಿಂದೂ ಧರ್ಮದಲ್ಲಿ ಶಂಕರಾಚಾರ್ಯರಿಗೆ ವಿಶೇಷ ಸ್ಥಾನವಿದೆ. ಶಂಕರಾಚಾರ್ಯರನ್ನು ಹಿಂದೂ ಧರ್ಮದ ಸಂರಕ್ಷಕರೆನ್ನಬಹುದು. ಇವರ ನಂತರ ಇವರ ಶಿಷ್ಯರು ಪ್ರಚಾರ ಮಾಡಿದರು. ಇದರ ಪರಿಣಾಮವಾಗಿ ಹಿಂದೂ ದೇವತೆಗಳ ಪೂಜೆಯಲ್ಲಿ ಕ್ರಾಂತಿಯುಂಟಾಯಿತು. ಅವರ ಇಷ್ಟದೈವ ಶಂಕರ ಭಗವಾನ್ ಹಾಗೂ ಆರಾಧ್ಯದೈವ ಪಾರ್ವತಿದೇವಿ ಅದರ ಜೊತೆಗೆ ವಿಷ್ಣು ಹಾಗೂ ಅನ್ಯ ದೇವತೆಗಳ ಉಪಾಸಕರಿವರು. ವಿಶೇಷವಾಗಿ ಇವರಲ್ಲಿ ಪಂಚದೇವ ಪೂಜೆಯ ವಿಧಾನವಿದೆ 1) ಬ್ರಹ್ಮಾ 2) ವಿಷ್ಣು 3) ಶಿವ 4) ಪರಾಶರ ಋಷಿ 5) ಶ್ರೀಕೃಷ್ಣ ದ್ವೈಪಾಯನ ಅಂದರೆ ವೇದ ವ್ಯಾಸ ಪೂಜ್ಯರಿದ್ದಾರೆ.

'ಆದಿ ಶಂಕರಾಚಾರ್ಯರ ಜೀವನ ಚರಿತ್ರೆ' ಎಂಬ ಪುಸ್ತಕದಲ್ಲಿ ಶಂಕರಾಚಾರ್ಯರ ಜನ್ಮವು 508 ವರ್ಷ ಯೆಸು ಕ್ರಿಸ್ತನಿಗಿಂತ ಮೊದಲೇ ಆಗಿತ್ತು ಎಂದು ಬರೆದಿದೆ.

'ಹಿಮಾಲಯ ತೀರ್ಥ' ಎಂಬ ಪುಸ್ತಕದಲ್ಲಿ ಆದಿ ಶಂಕರಾಚಾರ್ಯರ ಹುಟ್ಟಿಗೆ ಮೊದಲೇ ಇದರ ಬಗ್ಗೆ ಭವಿಷ್ಯವಾಣಿ ಬರೆದಿತ್ತು. ಆದಿ ಶಂಕರಾಚಾರ್ಯರ ಜನ್ಮವು ಕಲಿಯುಗದಲ್ಲಿ ಮೂರು

ಸಾವಿರ ವರ್ಷಗಳು ಕಳೆದ ನಂತರ ಆಗುವುದು ಎಂದು ಅದರಲ್ಲಿ ಬರೆದಿದೆ. ಈಗ ಲೆಕ್ಕ ಹಾಕಿ ನೋಡಿದರೆ 2012 ರಲ್ಲಿ ಕಲಿಯುಗ ಎಷ್ಟು ಕಳೆದಿದೆ ಎಂದು ತಿಳಿಯುತ್ತದೆ.

ಆದಿ ಶಂಕರಾಚಾರ್ಯರ ಜನ್ಮವು ಯೇಸು ಕ್ರೀಸ್ತನ (ಮೇಲಿನ ಲೆಕ್ಕಾಚಾರದಿಂದ ಕಲಿಯುಗವು 3000 ವರ್ಷ ಕಳೆದಾಗ ಶಂಕರಾಚಾರ್ಯರ ಜನ್ಮವಾಯಿತು.) ಜನ್ಮಕ್ಕಿಂತ 508 ವರ್ಷಗಳ ಮೊದಲಾಯ್ತು.

ಈಶಾ ಜನಿಸಿ 2012 ವರ್ಷಗಳಾಯ್ತು.

ಶಂಕರಾಚಾರ್ಯರಿಗೆ ಎಷ್ಟು ವರ್ಷಗಳಾಯಿತೆಂದರೆ 2012+508=2520 ವರ್ಷ

2012ರಲ್ಲಿ ಕಲಿಯುಗ ಎಷ್ಟು ಕಳೆದಿದೆ ಎಂದರೆ

3000+2520=5520 ವರ್ಷ.

ಈಗ 5520 ವರ್ಷ ಕಲಿಯುಗದ ಯಾವ ಇಸವಿಯಲ್ಲಿ ಪೂರ್ತಿಯಾಗುವುದೆಂದು ನೋಡೋಣ.

5520–15=1997ಕ್ಕೆ ಕಲಿಯುಗದ 5505 ವರ್ಷಗಳು ಪೂರ್ಣಗೊಂಡಿದೆ. ಸಂವತ್ಸರದ ಲೆಕ್ಕಾಚಾರದಲ್ಲಿ ಪಾಲ್ಗುಣ ತಿಂಗಳು ಅಂದರೆ ಫೆಬ್ರವರಿ–ಮಾರ್ಚ್‌ನಲ್ಲಿ ಪೂರ್ಣವಾಗುವುದು.

ಸಂತರು ಭಗವದ್ಗೀತೆಯನ್ನು 5151 ವರ್ಷಕ್ಕೆ ಮೊದಲು ಹೇಳಲಾಗಿತ್ತು ಎಂದು ನಂಬಿದ್ದಾರೆ. ಅದು ತಪ್ಪು.

## "ಗುರುವಿಲ್ಲದೆ ಮೋಕ್ಷವಿಲ್ಲ"

ಪ್ರಶ್ನೆ:– ಗುರುವಿಲ್ಲದೆ ಭಕ್ತಿಯಿಂದಿರಲು ಸಾಧ್ಯವಿಲ್ಲವೇ?

ಉತ್ತರ:– ಭಕ್ತಿಯಿಂದ ಇರಬಹುದು, ಆದರೆ ಅದು ವ್ಯರ್ಥ ಪ್ರಯತ್ನ.

ಪ್ರಶ್ನೆ:– ಕಾರಣ ಹೇಳಿ.

ಉತ್ತರ:– ಸೂಕ್ಷ್ಮ ವೇದದಲ್ಲಿ ಹೇಳಿರುವ ಪರಮಾತ್ಮನ ವಿಧಾನ ಈ ರೀತಿ ಇದೆ.

ಕಬೀರ್, ಗುರು ಬಿನ್ ಮಾಲಾ ಫೇರತೆ, ಗುರೂ ಬಿನ್ ದೇತೇ ದಾನ್ ।
ಗುರೂ ಬಿನ್ ದೋನೋಂ ನಿಷ್ಫಲ್ ಹ್ಯೆ, ಪೂಛೋ ವೇದ್ ಪುರಾಣ್ ॥
ಕಬೀರ್, ರಾಮ್ ಕೃಷ್ಣ ಸೇ ಕೌನ್ ಬಡಾ, ಉನ್ಹೋಂ ಭೀ ಗುರು ಕೀನ್ಹ್ ।
ತೀನ್ ಲೋಕ್ ಕಾ ವೇ ಧನೀ, ಗುರು ಆಗೆ ಆಧೀನ್ ॥
ಕಬೀರ್, ರಾಮ್ ಕೃಷ್ಣ ಬಡೇ ತಿನ್ಹೂಂ ಪುರ್ ರಾಜಾ ।
ತಿನ್ ಗುರು ಬಂದ್ ಕೀನ್ಹ್ ನಿಜ್ ಕಾಜಾ ॥

ಭಾವಾರ್ಥ:– ಗುರುವಿನಿಂದ ದೀಕ್ಷೆ ಪಡೆಯದೆ ಜಪಮಾಲೆ ಹಿಡಿದರೆ ಹಾಗೂ ದಾನ ಮಾಡಿದರೆ ಅದು ಬರೀ ವ್ಯರ್ಥ. ನಿಮಗೆ ಸಂದೇಹವಿದ್ದರೆ ನಿಮ್ಮ ವೇದಗಳಲ್ಲಿ ಮತ್ತು ಪುರಾಣಗಳಲ್ಲಿ ಪ್ರಮಾಣ ನೋಡಿ,

ಭಗವದ್ಗೀತೆ, 4 ವೇದಗಳ ಸಾರಾಂಶ:– ಗೀತೆಯ 2ನೇ ಅಧ್ಯಾಯದ 7ನೇ ಶ್ಲೋಕದಲ್ಲಿ ಅರ್ಜುನನು, ಕೃಷ್ಣನಿಗೆ ಹೇಳುತ್ತಾನೆ. "ಹೇ ಕೃಷ್ಣ, ನಾನು ನಿಮ್ಮ ಶಿಷ್ಯ. ನಿಮ್ಮ ಆಶ್ರಯದಲ್ಲಿದ್ದೇನೆ. ಗೀತೆಯ 4ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಶ್ರೀ ಕೃಷ್ಣನಲ್ಲಿ ಕಾಲಬ್ರಹ್ಮನು ಪ್ರವೇಶಿಸಿ ಅರ್ಜುನನಿಗೆ ಹೇಳಿದನು. "ನೀನು ನನ್ನ ಭಕ್ತ. ಪುರಾಣಗಳಲ್ಲಿ ಶ್ರೀ ರಾಮಚಂದ್ರನು ಋಷಿ ವಸಿಷ್ಠರಿಂದ ದೀಕ್ಷೆ ಪಡೆದ ಪ್ರಮಾಣವಿದೆ ಹಾಗೂ ತನ್ನ ಮನೆಯಲ್ಲಿ ಹಾಗೂ ರಾಜ್ಯಭಾರದಲ್ಲಿ ಗುರು ವಸಿಷ್ಠರ ಆಜ್ಞೆ ಪಾಲಿಸುತ್ತಿದ್ದನೆಂಬ ಪ್ರತೀತಿ ಇದೆ. ಶ್ರೀ ಕೃಷ್ಣನು ಸಂದೀಪನಿ ಋಷಿಯಿಂದ ಅಕ್ಷರ ಜ್ಞಾನವನ್ನು ಪಡೆದನು ಹಾಗೂ ಶ್ರೀಕೃಷ್ಣನ ಆಧ್ಯಾತ್ಮಿಕ ಗುರುವು ದುರ್ವಾಸರಾಗಿದ್ದರು ಎನ್ನುವುದು ತಿಳಿದು ಬರುತ್ತದೆ.

ಕಬೀರ ಪರಮೇಶ್ವರರು ನಮಗೆ ತಿಳಿಸಲು ಇಚ್ಛಿಸುವುದೇನೆಂದರೆ ರಾಮ ಮತ್ತು ಕೃಷ್ಣನಿಗಿಂತ ಯಾರೂ ದೊಡ್ಡವರಿಲ್ಲ ಎಂದು ನೀವು ಭಾವಿಸಿದ್ದೀರಿ. ಅವರು ಮೂರು ಲೋಕದ ಪರಮಾತ್ಮರಿದ್ದರೆ ಅವರೂ ಸಹ ಗುರುವಿನ ಆಶ್ರಯ ಪಡೆದು ಭಕ್ತಿಯಿಂದ ಇದ್ದರು ಹಾಗೂ ಮಾನವ ಜೀವನವನ್ನು ಸಾರ್ಥಕ ಪಡಿಸಿಕೊಂಡರು. ಇದರಿಂದ ತಿಳಿದು ಬರುವುದೇನೆಂದರೆ ಯಾರಾದರೂ ಗುರುವಿಲ್ಲದೆ ಸಾಧನೆ ಮಾಡಿದರೆ ಅದು ವ್ಯರ್ಥವೇ ಸರಿ.

❖ ಗುರುವಿಲ್ಲದೆ ಎಲ್ಲೋ ನೋಡಿದ, ಎಲ್ಲೋ ಕೇಳಿದ ಭಕ್ತಿಯನ್ನು ಲೋಕವೇದಕ್ಕೆ ಅನುಸಾರವಾದ ಭಕ್ತಿ ಎಂದು ಕರೆಯುವರು. ಲೋಕವೇದದ ಅರ್ಥವೆಂದರೆ, ಯಾವುದೇ ಕ್ಷೇತ್ರದಲ್ಲಿ ಪ್ರಚಲಿತ ಭಕ್ತಿಯ ಜ್ಞಾನವು ತತ್ವಜ್ಞಾನದ ವಿರುದ್ಧವಾದ ಜ್ಞಾನವಾಗಿರುತ್ತದೆ. ಲೋಕವೇದದ ಆಧಾರದಿಂದ ಈ ದಾಸನು (ರಾಮ್‌ಪಾಲ್‌ದಾಸ್) ಹನುಮಂತ, ಬಾಬಾ ಶಾಮ್‌ಜೀ, ಶ್ರೀರಾಮ್, ಶ್ರೀಕೃಷ್ಣ, ಶಿವ ಹಾಗೂ ದೇವಿ ದೇವತೆಗಳ ಭಕ್ತಿಯನ್ನು ಮಾಡುತ್ತಿದ್ದ. ಹನುಮಂತನನ್ನು ಸ್ತುತಿಸಲು ಮಂಗಳವಾರದ ವ್ರತ, ಬೂಂದಿ, ಲಾಡು ಹಂಚುತ್ತಿದ್ದನು. (ಸ್ವತಃ ಶುದ್ಧ ತುಪ್ಪದಿಂದ ಮಾಡಿದ ತಿಂಡಿಗಳನ್ನು ತಿನ್ನುವವನು, ಡಾಲ್ಡಾದಿಂದ ಮಾಡಿದ ಬೂಂದಿ ಲಾಡು ನೈವೇದ್ಯಕ್ಕೆ ಇಡುತ್ತಿದ್ದವನು) ಹರೆ ರಾಮ, ಹರೇ ಕೃಷ್ಣ, ಕೃಷ್ಣ–ಕೃಷ್ಣ ಹರೆ ಹರೇ ಎಂಬ ಮಂತ್ರವನ್ನು ಜಪಿಸುತ್ತಿದ್ದವನು. ಯಾರೋ ಹೀಗೆಂದಿದ್ದರು:–

ಓಂ ನಾಮ್ ಸಬ್‌ಸೆ ಬಡಾ, ಇಸ್‌ಸೆ ಬಡಾ ನ ಕೋಯ್ ।
ಓಂ ನಾಮ್ ಕಾ ಜಪ್ ಕರೆ, ತೋ ಶುದ್ಧ್ ಆತ್ಮಾ ಹೋಯ್ ॥

ಈ ಕಾರಣದಿಂದ ಓಂ ನಾಮದ ಜಪವನ್ನು ಪ್ರಾರಂಭಿಸಿದನು. ಓಂ ನಮಃ ಶಿವಾಯ– ಈ ರೀತಿ ಶಿವನನ್ನು ಜಪಿಸುತ್ತಿದ್ದವನು. ಓಂ ಭಗವತೆ ವಾಸುದೇವಾಯಃ ನಮಃ ಇದು ವಿಷ್ಣುವಿನ ಜಪವಾಗಿತ್ತು. ತೀರ್ಥಸ್ಥಾನಗಳಿಗೆ ಹೋಗುವುದು, ದಾನ ಮಾಡುವುದು ಅಲ್ಲಿ ಸ್ನಾನ ಮಾಡುವುದು. ಇದೆಲ್ಲವೂ ಲೋಕವೇದದ ಆಧಾರದ ಮೇಲೆ ಮಾಡುತ್ತಿದ್ದೆನು.

ಮನೆಯಲ್ಲಿ ಸುಖ ಶಾಂತಿ ನೆಲೆಸಿದ್ದರೆ ನಾನು ಇದೆಲ್ಲವನ್ನೂ ಈ ರೀತಿ ಮಾಡುತ್ತಿರುವುದರಿಂದ ಶಾಂತಿ ನೆಲೆಸಿದೆ ಎಂದು ನಾವು ನಂಬುತ್ತೇವೆ. ಪರೀಕ್ಷೆಯಲ್ಲಿ ಪಾಸಾಗುವುದು, ಮದುವೆಯಾಗುವುದು, ಮಕ್ಕಳಾಗುವುದು, ಕೆಲಸ ಸಿಗುವುದು– ಈ ಎಲ್ಲಾ ಸುಖಗಳು ಸಾಧನೆಯಿಂದ ಸಿಕ್ಕಿದೆ ಎನ್ನುತ್ತೇವೆ. ಕಬೀರ ಪರಮೇಶ್ವರರು ಸೂಕ್ಷ್ಮ ವೇದದಲ್ಲಿ ಹೇಳಿದ್ದಾರೆ:–

ಕಬೀರ್, ಪೀಛೆ ಲಾಗ್ಯಾ ಜಾಊಂ ಥಾ, ಮೈ ಲೋಕ್ ವೇದ್ ಕೆ ಸಾಥ್ ।
ರಾಸ್ತೆ ಮೇ ಸತ್‌ಗುರು ಮಿಲೆ, ದೀಪಕ್ ದೀನ್ಹಾ ಹಾಥ್ ॥

ಭಾವಾರ್ಥ:– ಸಾಧಕನು ಲೋಕವೇದ ಅರ್ಥಾತ್ ದಂತಕತೆಯ ಆಧಾರದ ಮೇಲೆ ಭಕ್ತಿ ಮಾಡುತ್ತಿದ್ದನು. ಅವನು ಶಾಸ್ತ್ರ ವಿರುದ್ಧವಾದ ಸಾಧನೆಯ ಮಾರ್ಗದಲ್ಲಿ ನಡೆಯುತ್ತಿದ್ದನು. ದಾರಿಯಲ್ಲಿ ಅಂದರೆ ಭಕ್ತಿಮಾರ್ಗದಲ್ಲಿ ಒಂದು ದಿನ ತತ್ವದರ್ಶಿ ಸಂತನು ಭೇಟಿಯಾದನು. ಅವನು ಶಾಸ್ತ್ರ ವಿಧಿಯ ಅನುಸಾರವಾಗಿ ಶಾಸ್ತ್ರವು ಒಪ್ಪುವ ಸಾಧನೆ ಎಂಬ ದೀಪವನ್ನು ಕೊಟ್ಟನು. ಅಂದರೆ ಸತ್ಯ ಶಾಸ್ತ್ರಾನುಕೂಲ ಸಾಧನೆಯ ಜ್ಞಾನವನ್ನು ನೀಡಿದನು. ಆಗ ಹಾಳಾಗುತ್ತಿದ್ದ ಅವನ ಜೀವನ ಉಳಿಯಿತು. ಸದ್ಗುರುವಿನ ಮೂಲಕ ಹೇಳಿದ ತತ್ವಜ್ಞಾನದ ಬೆಳಕಿನಲ್ಲಿ ತಾನು ತಪ್ಪು ಮಾಡುತ್ತಿರುವೆ ಎಂದೂ, ತಪ್ಪುದಾರಿ ಹಿಡಿದಿರುವೆ ಎಂಬುದೂ ಅವನಿಗೆ ತಿಳಿಯಿತು. ಶ್ರೀಮದ್ ಭಗವದ್ಗೀತೆಯ 16ನೇ ಅಧ್ಯಾಯದ 23–24ನೇ ಶ್ಲೋಕದಲ್ಲಿ ಹೇಳಿರುವಂತೆ, ಶಾಸ್ತ್ರ ವಿಧಿಯನ್ನು ಬಿಟ್ಟು ಯಾವ ಸಾಧಕನು ತನಗೆ ಇಷ್ಟ ಬಂದ ಹಾಗೆ ವರ್ತಿಸುತ್ತಾನೋ, ಅವನಿಗೆ ಸುಖವೂ ಸಿಗುವುದಿಲ್ಲ, ಸಿದ್ಧಿಯೂ ಪ್ರಾಪ್ತಿಯಾಗುವುದಿಲ್ಲ, ಮೋಕ್ಷವೂ ಲಭಿಸುವುದಿಲ್ಲ. ಇದೆಲ್ಲವೂ ವ್ಯರ್ಥ ಸಾಧನೆಯಾಗುವುದು. ನಂತರ ಗೀತೆಯ 16ನೇ ಅಧ್ಯಾಯದ 24ನೇ ಶ್ಲೋಕದಲ್ಲಿ ಹೇಳಿರುವಂತೆ, "ಹೇ ಅರ್ಜುನ, ನಿನಗೆ ಕರ್ತವ್ಯ ಮತ್ತು ಅಕರ್ತವ್ಯದ ವ್ಯವಸ್ಥೆಯಲ್ಲಿ ಶಾಸ್ತ್ರವೇ ಪ್ರಮಾಣ."

ಮೇಲೆ ತಿಳಿಸಿದ ಸಾಧನೆಯನ್ನು ಈ ದಾಸ (ಸಂತ ರಾಮ್‌ಪಾಲ್ ದಾಸ್) ಮಾಡುತ್ತಿದ್ದನು ಮತ್ತು ಇಡೀ ಹಿಂದೂ ಸಮಾಜ ಮಾಡುತ್ತಿದೆ. ಇದೆಲ್ಲವನ್ನು ಗೀತೆಯಲ್ಲಿ, ವೇದಗಳಲ್ಲಿ ವರ್ಣಿಸದೇ ಇರುವುದರಿಂದ ಶಾಸ್ತ್ರಕ್ಕೆ ವಿರುದ್ಧವಾದ ಸಾಧನೆಯಾಯಿತು. ಹಾಗಾಗಿ ಇದು ವ್ಯರ್ಥ.

ಕಬೀರ್, ಗುರು ಬಿನ್ ಕಾಹು ನ ಪಾಯಾ ಜ್ಞಾನಾ,
ಜ್ಯೋ ಥೋಥಾ ಭುಸ್ ಛಡೆ ಮೂಢ ಕಿಸಾನಾ ॥
ಕಬೀರ್, ಗುರು ಬಿನ್ ವೇದ್ ಪಢೈ ಜೋ ಪ್ರಾಣಿ, ಸಮುಝೈ ನ ಸಾರ್ ರಹೆ ಅಜ್ಞಾನಿ ॥

ಆದ್ದರಿಂದ ಗುರುಗಳಿಂದ ವೇದ ಶಾಸ್ತ್ರಗಳನ್ನು ಕಲಿಯಬೇಕು. ಅದರಿಂದ ನಿಜವಾದ ಭಕ್ತಿಯಿಂದ ಶಾಸ್ತ್ರಾನುಕೂಲವಾದ ಸಾಧನೆ ಮಾಡಿ ಮಾನವ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬಹುದು.

## "ಪೂರ್ಣ ಗುರುವಿನ ವಚನಗಳ ಶಕ್ತಿಯಿಂದ ಭಕ್ತಿಯುಂಟಾಗುತ್ತದೆ"

ಗುರುವಿನಿಂದ ದೀಕ್ಷೆ ಪಡೆದು ಭಕ್ತಿಯಿಂದ ಇರುವುದು ಲಾಭದಾಯಕ. ಗುರುವಿಲ್ಲದೆ ಭಕ್ತಿಯಿಂದ ಇದ್ದರೆ ಯಾವುದೇ ಪ್ರಯೋಜನವಿಲ್ಲ.

ಉದಾಹರಣೆ:– ಒಂದೂರಿನಲ್ಲಿ ಒಬ್ಬ ರಾಣಿ ಬಹಳ ಧರ್ಮದಿಂದ ಬದುಕುತ್ತಿದ್ದಳು. ಅವಳು ಪರಮೇಶ್ವರ ಕಬೀರರಿಂದ ದೀಕ್ಷೆ ಪಡೆದಿದ್ದಳು. ಆ ರಾಣಿಯು ದಿನವೂ ಗುರುದರ್ಶನಕ್ಕೆ ಹೋಗುತ್ತಿದ್ದಳು. ಇದು ರಾಜನಿಗೆ ಇಷ್ಟವಾಗುತ್ತಿರಲಿಲ್ಲ. ಆದರೆ ಅವನಿಗೆ ಪತ್ನಿಯನ್ನು ತಡೆಯಲು ಆಗುತ್ತಿರಲಿಲ್ಲ. ಏಕೆಂದರೆ ಅವಳು ಶಕ್ತಿಶಾಲಿ ರಾಜನ ಮಗಳಾಗಿದ್ದಳು ಹಾಗೂ ರಾಜನಿಗೆ ರಾಣಿಯನ್ನು ಬೇಸರ ಪಡಿಸಲು ಇಷ್ಟವಿರಲಿಲ್ಲ.

ಒಂದು ದಿನ ರಾಜನು ತನ್ನ ಪತ್ನಿಗೆ ಹೀಗೆಂದನು. "ನೀನು ಬೇಸರಿಸದಿದ್ದರೆ. ಒಂದು ಮಾತು ಹೇಳುವೆ" ಆಗ ರಾಣಿಯು 'ಹೇಳು' ಎಂದಳು. ಆಗ ರಾಜನು, "ನೀನು ದಿನವೂ ಗುರುವಿನ ಬಳಿ ತೆರಳುವೆ. ಭಕ್ತಿಯು ಗುರುವಿಲ್ಲದಿದ್ದರೂ ಉಂಟಾಗುವುದು. ನಾಳೆ ನಿನ್ನ ಜೊತೆ ಬಂದು ಆ ಗುರುವಿಗೆ ಈ ಬಗ್ಗೆ ತಿಳಿಸುವೆ" ಎಂದನು.

ರಾಜನು ಗುರುವಿನ ಬಳಿ ತೆರಳಿ, "ನೀವು ಜನರನ್ನು ಮೂರ್ಖರನ್ನಾಗಿ ಮಾಡುತ್ತಿರುವಿರಿ. ನಾಮ ಜಪ ಮಾಡುವುದರಿಂದ ಭಕ್ತಿಯುಂಟಾಗುತ್ತದೆ. ಇದಕ್ಕೆ ದೀಕ್ಷೆ ಪಡೆಯುವ ಅವಶ್ಯಕತೆ ಏನಿದೆ? ಯಾರಿಂದಲಾದರೂ ಕೇಳಿ ಜಪ ಮಾಡಬಹುದು" ಎಂದನು. ಆಗ ಗುರುಗಳು, "ರಾಜ, ನಿಮ್ಮ ಮಾತಿನಲ್ಲಿ ಬಲವಿದೆ. ನಾನು ನಿಮ್ಮ ಆಸ್ಥಾನಕ್ಕೆ ಬರುವೆ. ಅಲ್ಲಿ ಈ ಮಾತಿಗೆ ಉತ್ತರ ನೀಡುವೆ" ಎಂದನು. ಮಾರನೇ ದಿನ ರಾಜನು ಗುರುವನ್ನು ಆಸ್ಥಾನಕ್ಕೆ ಕರೆದುಕೊಂಡು ಹೋದನು. ರಾಜನು ಸಿಂಹಾಸನದ ಮೇಲೆ ವಿರಾಜಮಾನನಾದನು. ಅಕ್ಕ ಪಕ್ಕದಲ್ಲಿ ಸೈನಿಕರು ಕುಳಿತಿದ್ದರು. ಗುರುಗಳಿಗೆ ಒಂದು ಪ್ರತ್ಯೇಕವಾದ ಕುರ್ಚಿ ಇರಿಸಿದ್ದರು. ಗುರುವು ಆಸ್ಥಾನಕ್ಕೆ ಹೋದಕೂಡಲೇ ಸೈನಿಕರನ್ನು ಉದ್ದೇಶಿಸಿ ರಾಜನನ್ನು ತೋರಿಸುತ್ತಾ 'ಅವನನ್ನು ಬಂಧಿಸಿ' ಎಂದು ಆದೇಶಿಸಿದನು. ಸೈನಿಕರು ನಿಂತ ಜಾಗದಿಂದ ಅಲುಗಾಡಲಿಲ್ಲ. ಗುರುವು ಮತ್ತೆ ಮತ್ತೆ ಅದೇ ಮಾತನ್ನು ಹೇಳಿದನು. ಆದರೆ ಸೈನಿಕರು ರಾಜನನ್ನು ಬಂಧಿಸಲಿಲ್ಲ.

ಸಂತನ ಮೇಲೆ ರಾಜನಿಗೆ ಕೆಂಡಾಮಂಡಲ ಕೋಪಬಂದಿತು. ಇವನು ನನ್ನ ಪತ್ನಿಯನ್ನು ಬಲೆಗೆ ಹಾಕಿಕೊಂಡು ರಾಜ್ಯವನ್ನು ಕಬಳಿಸಲು ಹವಣಿಸಿದ್ದಾನೆ ಎಂದು ತಿಳಿದನು. ಆ ಸಂತನನ್ನು ಬಂಧಿಸಬೇಕೆಂದು ಅದೇ ಸೈನಿಕರಿಗೆ ಆದೇಶಿಸಿದನು. ಅದೇ ಕ್ಷಣದಲ್ಲಿ ಸಿಪಾಯಿಗಳು ಆ ಗುರುವನ್ನು ಬಂಧಿಸಿದರು.

**ಆಗ ಗುರುವು "ನೀವು ಒಬ್ಬ ಸಂತನನ್ನು ಮನೆಗೆ ಕರೆದು ಅವಮಾನ ಮಾಡುತ್ತಿರುವಿರಿ. ಇದು ಒಳ್ಳೆಯದಲ್ಲ" ಎಂದನು. ಆಗ ರಾಜನು "ನೀವೇನು ಬಡಬಡಿಸುತ್ತಿದ್ದೀರಿ? ನನ್ನನ್ನು ಬಂಧಿಸುವಂತೆ ಆದೇಶಿಸುತ್ತಿದ್ದಿರಿ" ಎಂದನು. ಆಗ ಗುರು ಹೇಳುತ್ತಾರೆ "ನಾನು ನಿಮ್ಮ ಪ್ರಶ್ನೆಗೆ ಉತ್ತರಿಸುತ್ತಿದ್ದೆ. ಗುರುವಿನಿಂದ ದೀಕ್ಷೆ ಪಡೆದರೆ ಹೇಗೆ ಪ್ರಯೋಜನವುಂಟು ಎಂದು ಹೇಳುತ್ತಿದ್ದೆ. ಹೇ ರಾಜ, 'ಇವನನ್ನು ಬಂಧಿಸಿ' ಎಂದು ಹೇಳುತ್ತಿದ್ದೆ. ಆದರೆ ಸಿಪಾಯಿಗಳು ಅಲ್ಲಾಡಲಿಲ್ಲ. ಅದೇ ವಾಕ್ಯವನ್ನು ನೀವು ಹೇಳಿದ ತಕ್ಷಣ ಸಿಪಾಯಿಗಳು ನನ್ನನ್ನು ಬಂಧಿಸಿದರು. ನಿಮ್ಮ ಮಾತಿನಲ್ಲಿ ರಾಜನ ಶಕ್ತಿಇದೆ. ನನ್ನ ಮಾತಿನಲ್ಲಿ ಆಧ್ಯಾತ್ಮಿಕ ಶಕ್ತಿ ಇದೆ. ನೀವು ಅದೇ ನಾಮಸ್ಮರಣೆಯನ್ನು ಬೇರೆಯವರಿಗೆ ಹೇಳಿಕೊಟ್ಟರೆ ಅವರಲ್ಲಿ ಯಾವುದೇ ಮಂತ್ರಶಕ್ತಿ ಇರುವುದಿಲ್ಲ. ನಾನು ಆ ನಾಮಜಪವನ್ನು ಹೇಳಿ ಕೊಟ್ಟರೆ ಅವನು ತಕ್ಷಣವೇ ಕ್ರಿಯಾಶೀಲನಾಗುವನು. ಆದ್ದರಿಂದ ಪೂರ್ಣ ಗುರುವಿನಿಂದ ದೀಕ್ಷೆ ಪಡೆದರೆ ತಕ್ಷಣವೇ ಆಧ್ಯಾತ್ಮಿಕ ಪ್ರಕ್ರಿಯೆಯು ಪ್ರಾರಂಭವಾಗುವುದು. ಅವನ ಆತ್ಮದಲ್ಲಿ ಭಕ್ತಿಯ ಅಂಕುರವಾಗುತ್ತದೆ. ಸೂಕ್ಷ್ಮ ವೇದದಲ್ಲಿ ಹೇಳಿದೆ:–**

ಸತ್ಗುರು ಪಶು ಮಾನುಷ್ ಕರಿ ಡಾರೈ । ಸಿದ್ಧಿ ದೇಯ್ ಕರ್ ಬಹ್ಮ ಬಿಚಾರೈ ॥

**ಭಾವಾರ್ಥ:– ಸದ್ಗುರು ಮೊದಲು ಮನುಷ್ಯನನ್ನು ಸತ್ಸಂಗದಲ್ಲಿ ಸೇರಿಸಿ, ಉಪದೇಶ ಮಾಡಿ ಅವರನ್ನು ಒಳ್ಳೆಯ ಮನುಷ್ಯರನ್ನಾಗಿ ಮಾಡುತ್ತಾರೆ, ಎಲ್ಲಾ ಕೆಟ್ಟತನವನ್ನು ಬಿಡಿಸುತ್ತಾರೆ. ನಂತರ ತಮ್ಮ ಭಕ್ತಿಯ ಸಿದ್ಧಿ ಅಂದರೆ ಶಕ್ತಿಯನ್ನು ಶಿಷ್ಯನ ಅಂತಃಕರಣದಲ್ಲಿ ಶಬ್ದದ ಮೂಲಕ ಪ್ರವೇಶಿಸಿ ಪರಮಾತ್ಮನ ಸಾಧನೆ ಮಾಡುವ ವಿಚಾರವನ್ನು ಬಲಗೊಳಿಸುತ್ತಾನೆ. ಇದರಿಂದ ಭಕ್ತಿಮಾಡುವ ಇಚ್ಛೆ ಸಾಧಕನ ಮನಸ್ಸಿನಲ್ಲಿ ಪ್ರಬಲವಾಗುತ್ತಾ ಹೋಗುತ್ತದೆ. ನಂತರ ಅವನು ದೇವನಾಗುತ್ತಾನೆ. ಕಬೀರರು ಹೀಗೆ ಹೇಳಿದ್ದಾರೆ.**

ಕಬೀರ್, ಬಲಿಹಾರಿ ಗುರು ಆಪನಾ, ಘಡಿಘಡಿ ಸೌ ಸೌ ಬಾರ್
ಮಾನುಷ್ ಸೆ ದೇವತಾ ಕಿಯಾ, ಕರತ್ ನಾ ಲಾಈ ಬಾರ್ ॥

**ಆದ್ದರಿಂದ ಹೀಗೆಂದಿದ್ದಾರೆ,**

ಕಬೀರ್, ಗುರು ಬಿನಾ ಮಾಲಾ ಫೇರತೆ, ಗುರು ಬಿನ್ ದೇತೆ ದಾನ್ ॥
ಗುರು ಬಿನ್ ದೋನೋ ನಿಷ್ಫಲ್ ಹೈ, ಚಾಹೆ ಪೂಛೋ ವೇದ್ ಪುರಾಣ್ ॥
ಯೋಗ್, ಯಜ್ಞ್, ತಪ್ ದಾನ್ ಕರಾವೈ,
ಗುರು ವಿಮುಖ್ ಫಲ್ ಕಭೀ ನಹೀ ಪಾವೈ ॥

**ಭಾವಾರ್ಥ:– ಗುರುವಿಲ್ಲದೆ ನಾಮಸ್ಮರಣೆ, ಜಪ, ದಾನ ಮಾಡುವುದು ವ್ಯರ್ಥ. ಇದನ್ನು ವೇದ ಪುರಾಣಗಳಲ್ಲೂ ಹೇಳಿದೆ. ದೀಕ್ಷೆ ಪಡೆದ ನಂತರ ಗುರುವನ್ನು ಬಿಟ್ಟು ಯಜ್ಞ, ಹೋಮ, ಹವನ, ದಾನ ಮಾಡುತ್ತಿದ್ದರೆ ಅದೂ ಸಹ ವ್ಯರ್ಥ. ಇದರಿಂದ ಏನೂ ಪ್ರಯೋಜನವಿಲ್ಲ.**

ಕಬೀರ್, ತಾತೆ ಸತ್ಗುರು ಶರಣಾ ಲೀಜೈ, ಕಪಟ್ ಭಾವ್ ಸಬ್ ದೂರ್ ಕರಿಜೈ ॥

**ಇನ್ನುಳಿದ ಸಾಕ್ಷಿ ಎಂದರೆ,**

ಕಬೀರ್, ಗರ್ಭಯೋಗೇಶ್ವರ್ ಗುರು ಬಿನಾ, ಕರ್ ತೆ ಹರಿ ಕೀ ಸೇವ್ ।
ಕಹೈಂ ಕಬೀರ್ ಬೈಕುಂಠ್ ಸೆ, ಫೇರ್ ದಿಯಾ ಸುಖದೇವ್ ॥
ರಾಜಾ ಜನಕ್ ಗುರು ಕಿಯಾ, ಫಿರ್ ಕಿನ್ಹೀ ಹರ್ ಕೀ ಸೇವ್ ।
ಕಹೈ ಕಬೀರ್ ಬೈಕುಂಠ್ ಮೆಂ, ಚಲೆ ಗಏ ಸುಖದೇವ್ ॥

ಭಾವಾರ್ಥ:– ವೇದವ್ಯಾಸರ ಮಗನಾದ ಸುಖದೇವನು ತನ್ನ ಪೂರ್ವಜನ್ಮದ ಭಕ್ತಿಯ ಫಲದಿಂದ ಹಾರಿ ಸ್ವರ್ಗಕ್ಕೆ ಹೋಗಬಲ್ಲವನಾಗಿದ್ದನು. ಒಂದು ದಿನ ಅವನು ವಿಷ್ಣುವಿನ ಲೋಕಕ್ಕೆ ಹೋದನು. ಆಗ ಅಲ್ಲಿ ಬಾಗಿಲಲ್ಲೇ ಅಲ್ಲಿಯ ಕೆಲಸಗಾರರು ತಡೆದು ತಮ್ಮ ಗುರು ಯಾರೆಂದು ಪ್ರಶ್ನಿಸಿದರು. ಆಗ ಸುಖದೇವನು "ಗುರುವಿನ ಅವಶ್ಯಕತೆ ಏನಿದೆ? ನನ್ನಲ್ಲೇ ಅಷ್ಟು ಶಕ್ತಿ ಇದೆ. ನಾನು ಯಾವ ಗುರುವಿನ ಸಹಾಯವಿಲ್ಲದೆ ನಾನು ಇಲ್ಲಿಗೆ ಬಂದಿರುವೆ" ಎಂದನು. ಆಗ ದ್ವಾರಪಾಲಕರು, "ಇದು ನೀವು ಮಾಡಿರುವ ಪೂರ್ವಜನ್ಮದ ಪುಣ್ಯದ ಫಲ. ಇದು ಸ್ವಲ್ಪ ದಿನದಲ್ಲೇ ಮುಗಿಯಲಿದೆ. ನಿಮ್ಮ ಮಾನವ ಜೀವನ ಅಂತ್ಯಗೊಳ್ಳುವುದು" ಎಂದರು. ಉದಾಹರಣೆಗಾಗಿ:– ಇಂದಿನ ಕಾಲದಲ್ಲಿ ಇನ್ವರ್ಟರ್‌ನ ಬ್ಯಾಟರಿಯನ್ನು ಚಾರ್ಜರ್ ಹಾಕಿ ಚಾರ್ಜ್ ಮಾಡಲಾಗಿದೆ. ಚಾರ್ಜರ್ ತೆಗೆದ ನಂತರವೂ ಇನ್ವರ್ಟರ್ ತನ್ನ ಕೆಲಸ ಮಾಡುತ್ತದೆ. ಏಕೆಂದರೆ ಅದರಲ್ಲಿ ಚಾರ್ಜ್ ಸಂಗ್ರಹಗೊಂಡಿದೆ. ಕೊಂಚಸಮಯದ ನಂತರ ಚಾರ್ಜ್ ಮುಗಿದ ಮೇಲೆ ಇನ್ವರ್ಟರ್ ಕಾರ್ಯ ನಿಲ್ಲಿಸುತ್ತದೆ. ಅದನ್ನು ಮತ್ತೆ ಚಾರ್ಜ್ ಮಾಡಬೇಕಾಗುತ್ತದೆ. ಅದಕ್ಕಾಗಿ ಚಾರ್ಜರ್‌ನ ಅವಶ್ಯಕತೆ ಇದೆ. ಹಾಗಾಗಿ ಚಾರ್ಜರ್‌ನನ್ನು ಗುರು ಎಂದು ಭಾವಿಸಿದರೆ, ವಿದ್ಯುತ್ತನ್ನು ಪರಮೇಶ್ವರ ಎಂದು ಭಾವಿಸಿ.

ಸುಖದೇವನಲ್ಲಿ ಸಿದ್ಧಿ ಎಂಬ ಅಭಿಮಾನವಿತ್ತು. ಆದರೂ ಆ ಮಾತನ್ನು ಒಪ್ಪದೆ ದೂರನ್ನು ವಿಷ್ಣುವಿನವರೆಗೂ ತೆಗೆದುಕೊಂಡು ಹೋಗಲಾಯಿತು. ಆಗ ವಿಷ್ಣುವು ಸುಖದೇವನಿಗೆ ಗುರುವಿನ ಮಹತ್ವವನ್ನು ತಿಳಿಸುತ್ತಾ, ಮತ್ತೆ ಭೂಮಿಗೆ ಮರಳಿ ಜನಕನನ್ನು ಗುರುವೆಂದು ಸ್ವೀಕರಿಸಲು ತಿಳಿಸಿದನು. ಆಗ ಸುಖದೇವನು ಭೂಮಿಗೆ ಬಂದು ಜನಕನನ್ನು ಗುರುವೆಂದು ಸ್ವೀಕರಿಸಿ, ಅವನಿಂದ ಮಂತ್ರ ದೀಕ್ಷೆ ಪಡೆದನು. ನಂತರ ಸುಖದೇವನು ಸ್ವರ್ಗದಲ್ಲಿ ಇರಲು ಸಾಧ್ಯವಾಯಿತು. ಇದರಿಂದ ತಿಳಿಯುವುದೇನೆಂದರೆ ಗುರುವಿನಿಂದಲೇ ಯಶಸ್ಸು ಸಿಗುವುದು. ಇಲ್ಲದಿದ್ದರೆ ಭಕ್ತಿ. ದಾನ ಎಲ್ಲವೂ ವ್ಯರ್ಥ.

ಗುರು ಪೂರ್ಣವಾಗಿರಬೇಕು. ನಕಲಿ ಗುರುವಿನಿಂದ ಯಾವುದೇ ಪ್ರಯೋಜನವಿಲ್ಲ

ಪ್ರಶ್ನೆ:–ಪೂರ್ಣ ಗುರುವನ್ನು ಹೇಗೆ ಗುರುತಿಸುವುದು? ಯಾವ ಸಂತನಿಂದ ಉಪದೇಶ ಕೇಳಿದರೂ ಅವನೇ ಪೂರ್ಣಗುರುವೆಂದು ಭಾಸವಾಗುವುದು.

ಉತ್ತರ:– ಸೂಕ್ಷ್ಮವೇದದಲ್ಲಿ ಗುರುವಿನ ಲಕ್ಷಣಗಳನ್ನು ತಿಳಿಸಲಾಗಿದೆ.

ಗರೀಬ್, ಸತ್‌ಗುರು ಕೇ ಲಕ್ಷಣ್ ಕಹೂಂ, ಮಧುರೆ ಬೈನ್ ವಿನೋದ್ ॥<br>
ಚಾರ್ ವೇದ್ ಛಃ ಶಾಸ್ತ್ರ, ಕಹ್ ಅಠಾರಹ್ ಬೋಧ್ ॥

ಸಂತ ಗರೀಬ್‌ದಾಸ(ಹರಿಯಾಣಾದ ಝಜ್ಜರ್ ಜಿಲ್ಲೆಯ ಛುಡಾನಿ ಹಳ್ಳಿ)ರಿಗೆ ಕಬೀರ ಪರಮೇಶ್ವರರು ಸಿಕ್ಕಿದ್ದರು. ಅವರ ಆತ್ಮವನ್ನು ಸತ್ಯಲೋಕಕ್ಕೆ ತೆಗೆದುಕೊಂಡು ಹೋಗಿದ್ದರು. ಮೇಲಿನ ಎಲ್ಲಾ ಲೋಕಗಳನ್ನು ತೋರಿಸಿ ಮತ್ತೆ ಭೂಮಿಗೆ ತಂದು ಬಿಟ್ಟರು. ಅವರಿಗೆ ಸಂಪೂರ್ಣ ಆಧ್ಯಾತ್ಮದ ಜ್ಞಾನವನ್ನು ತಿಳಿಸಿದ್ದರು. ಅವರ ಜ್ಞಾನಯೋಗವನ್ನು ಕಬೀರ ಪರಮೇಶ್ವರರು ತೆರೆದಿದ್ದರು. ಅದರ ಆಧಾರದಿಂದ ಸಂತ ಗರೀಬ್‌ದಾಸರು ಗುರುವನ್ನು ಗುರುತಿಸುವ ಬಗ್ಗೆ ತಿಳಿಸಿದ್ದರು. ಯಾರು ನಿಜವಾದ ಗುರುವೋ ಅವನ ವಚನದಿಂದ ಆತ್ಮಕ್ಕೆ ಆನಂದ ಸಿಗುವುದು. ಆ ವಚನವು ಅತ್ಯಂತ ಮಧುರವಾಗಿರುತ್ತದೆ. ಏಕೆಂದರೆ ಅವು ಸತ್ಯದ ಮೇಲೆ ಆಧಾರಿತವಾಗಿರುತ್ತವೆ. ಇದಕ್ಕೆ ಕಾರಣವೇನೆಂದರೆ ಪೂರ್ಣ ಗುರುವು ನಾಲ್ಕು ವೇದಗಳು ಮತ್ತು ಎಲ್ಲಾ ಶಾಸ್ತ್ರಗಳ ಜ್ಞಾನವನ್ನು ವಿಸ್ತಾರವಾಗಿ ಹೇಳುತ್ತಾನೆ.

ಇದನ್ನೇ ಕಬೀರ ಪರಮೇಶ್ವರರು ಕಬೀರ ಸಾಗರದಲ್ಲಿ ತಿಳಿಸಿದ್ದಾರೆ.

ಗುರು ಕೆ ಲಕ್ಷಣ್ ಚಾರ್ ಬಖಾನಾ, ಪ್ರಥಮ್ ವೇದ್ ಶಾಸ್ತ್ರ ಕೊ ಜ್ಞಾನಾ ॥

ದುಜೆ ಹರಿ ಭಕ್ತಿ ಮನ್ ಕರ್ಮ್ ಬಾನಿ, ತೀಜೆ ಸಮದೃಷ್ಟಿ ಕರಿ ಜಾನೀ ॥
ಚೌಥೆ ವೇದ್ ವಿಧಿ ಸಬ್ ಕರ್ಮಾ,
ಯೆ ಚಾರ್ ಗುರೂ ಗುಣ್ ಜಾನೊಂ ಮರ್ಮಾ ॥

ಸರಳಾರ್ಥ:– ಯಾರು ನಿಜವಾದ ಗುರುವೋ ಅವನಲ್ಲಿ ನಾಲ್ಕು ಮುಖ್ಯವಾದ ಲಕ್ಷಣಗಳಿರುತ್ತವೆ ಎಂದು ಕಬೀರ ಪರಮೇಶ್ವರರು ಹೇಳಿದ್ದಾರೆ.

1) ಎಲ್ಲಾ ವೇದ ಮತ್ತು ಶಾಸ್ತ್ರಗಳನ್ನು ಗುರುವು ಸರಿಯಾಗಿ ತಿಳಿದಿರುತ್ತಾನೆ.

2) ಅವನು ಕಾಯಾ, ವಾಚಾ, ಮನಸ ಭಕ್ತಿಯಿಂದ ಇರುತ್ತಾನೆ. ಅವನು ಹೇಳುವುದನ್ನೇ ಮಾಡುತ್ತಾನೆ.

3) ಅವನು ಎಲ್ಲಾ ಅನುಯಾಯಿಗಳನ್ನು ಸಮಾನವಾಗಿ ನೋಡಿಕೊಳ್ಳುತ್ತಾನೆ. ಭೇದಭಾವ ಮಾಡುವುದಿಲ್ಲ.

4) ಅವನು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ ಹಾಗೂ ಸೂಕ್ಷ್ಮವೇದಗಳ ಅನುಗುಣವಾಗಿ ನಡೆದುಕೊಳ್ಳುತ್ತಾನೆ.

❖ ವೇದಗಳಲ್ಲಿ (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ) ಕೇವಲ 'ಓಂ' ಎಂಬ ಹೆಸರನ್ನು ಮಾತ್ರ ಜಪ ಮಾಡುವುದಿದೆ. ಪ್ರಮಾಣ=ಯಜುರ್ವೇದದ 40ನೇ ಅಧ್ಯಾಯದ 15 ಹಾಗೂ 17ನೇ ಮಂತ್ರದಲ್ಲಿ 'ಓಂ' ನ ನಾಮ ಸ್ಮರಣೆಯನ್ನು ಕೆಲಸ ಮಾಡುತ್ತಲೇ ಮಾಡಬಹುದು. ವಿಶೇಷ ಭಾವದಿಂದ ನಾಮಸ್ಮರಣೆ ಮಾಡಿ. ಮನುಷ್ಯ ಜೀವನದ ಪರಮ ಕರ್ತವ್ಯವೆಂದು ತಿಳಿದು ಸ್ಮರಣೆ ಮಾಡಿ. ಓಂ ಜಪವನ್ನು ಸಾಯುವವರೆಗೂ ಮಾಡಿದರೆ ಅಮರತ್ವ ಪ್ರಾಪ್ತಿಯಾಗುತ್ತದೆ ಎಂದು ಹೇಳಲಾಗಿದೆ. (ಯಜುರ್ವೇದ. 40/15)

❖ ಯಜುರ್ವೇದದ 40ನೇ ಅಧ್ಯಾಯದ 17ನೇ ಶ್ಲೋಕದಲ್ಲಿ 'ವೇದಜ್ಞಾನದಾತಾ ಬ್ರಹ್ಮನೇ' ಎಂದು ಹೇಳಲಾಗಿದೆ. ಯಾರು ಪೂರ್ಣ ಪರಮಾತ್ಮನೋ ಅವನು ಅವ್ಯಕ್ತನು. ಅವನು ಎಲ್ಲರ ಎದುರಿಗೆ ಬರುವುದಿಲ್ಲ. ಇದರ ಬಗ್ಗೆ ಯಜುರ್ವೇದದ 40ನೇ ಅಧ್ಯಾಯದ 10ನೇ ಶ್ಲೋಕದಲ್ಲಿ ಇದರ ನಿಜವಾದ ಜ್ಞಾನ ತತ್ವದರ್ಶಿ ಸಂತರೇ ಬಲ್ಲರು ಎಂದು ಹೇಳಲಾಗಿದೆ. ಯಜುರ್ವೇದದ 40ನೇ ಅಧ್ಯಾಯದ 17ನೇ ಶ್ಲೋಕದಲ್ಲಿ (ಅಹಂ ಖಮ್ ಬ್ರಹ್ಮ)"ನಾನು ಬ್ರಹ್ಮ. ನನ್ನ ಓಂ ನಾಮವಿದೆ. ನಾನು ಮೇಲಿರುವ ದಿವ್ಯ ಆಕಾಶ ಎಂಬ ಬ್ರಹ್ಮಲೋಕದಲ್ಲಿ ಇರುತ್ತೇನೆ" ಎಂದು ಹೇಳಲಾಗಿದೆ.

ಇದನ್ನೇ ದೇವಿ ಮಹಾಪುರಾಣದ 7ನೇ ಸ್ಕಂದದ 463ನೇ ಪುಟದಲ್ಲಿ ದೇವಿಯು ಹಿಮಾಲಯ ರಾಜನಿಗೆ ಹೇಳಿದ್ದಾಳೆ. "ಹೇ ರಾಜ, ನೀನು ಆತ್ಮ ಕಲ್ಯಾಣವನ್ನು ಇಚ್ಛಿಸಿದ್ದರೆ ನನ್ನ ಜಪ ಸಹಿತ ಎಲ್ಲಾ ವಿಷಯಗಳನ್ನು ಬಿಟ್ಟು ಬಿಡು, ಕೇವಲ 'ಓಂ' ಎಂಬ ನಾಮ ಜಪ ಮಾಡು, ಬ್ರಹ್ಮ ಪ್ರಾಪ್ತಿಯ ಉದ್ದೇಶವನ್ನು ಇಟ್ಟುಕೋ, ಇದರಿಂದ ನೀನು ಬ್ರಹ್ಮನನ್ನು ಪಡೆಯಬಹುದು. ಆ ಬ್ರಹ್ಮನು ಬ್ರಹ್ಮಲೋಕವೆಂಬ ದಿವ್ಯ ಆಕಾಶದಲ್ಲಿ ಇರುತ್ತಾನೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ವೇದಗಳಲ್ಲಿ ಕೇವಲ 'ಓಂ' ಎಂಬ ನಾಮ ಜಪಮಾತ್ರವಿದೆ. ಶ್ರೀಮದ್ ಭಗವದ್ಗೀತೆಯ ವೇದದ ಸಾರಾಂಶವಿದೆ. ಅದರಲ್ಲಿ 8ನೇ ಅಧ್ಯಾಯದ 13ನೇ ಶ್ಲೋಕದಲ್ಲಿ ಹೇಳಲಾಗಿದೆ:–

ಓಮ್ ಇತಿ ಏಕಾಕ್ಷರಮ್ ಬ್ರಹ್ಮ್ ವ್ಯಾಹರನ್ ಮಾಮ್ ಅನುಸ್ಮರನ್ ।
ಯಃ ಪ್ರಯಾತಿ ತ್ಯಜನ್ ದೇಹಮ್ ಸಃ ಯಾತಿ ಪರಮಾಮ್ ಗತಿಮ್ ॥

ಅನುವಾದ:– ಗೀತೆಯ ಜ್ಞಾನವನ್ನು ಕೊಟ್ಟ ಬ್ರಹ್ಮನು ಹೇಳಿದ್ದಾನೆ. ನನ್ನ 'ಓಂ' ಎನ್ನುವುದು ಒಂದು ಅಕ್ಷರ. ಅದನ್ನು ಉಚ್ಚರಿಸುತ್ತಾ ಯಾವ ಸಾಧಕನು ಸಾವನ್ನಪ್ಪುತ್ತಾನೋ, ಅವನು 'ಓಂ' ನಾಮ ಸ್ಮರಣೆಯಿಂದ ಪ್ರಾಪ್ತವಾಗುವ ಫಲವನ್ನು ಅನುಭವಿಸುತ್ತಾನೆ ಅಂದರೆ ಬ್ರಹ್ಮಲೋಕವನ್ನು ಸೇರುತ್ತಾನೆ.

ಶ್ರೀಮದ್ ಭಗವದ್ಗೀತೆ ಮತ್ತು ಮಿಕ್ಕ ವೇದಗಳಲ್ಲಿ ಇದನ್ನು ಬಿಟ್ಟು ಅಂದರೆ 'ಓಂ' ಅನ್ನು ಬಿಟ್ಟು ಬೇರೆ ಯಾವ ನಾಮವೂ ಬ್ರಹ್ಮ ಸಾಧನೆಗಾಗಿ ಇಲ್ಲ.

'ಓಂ' ನಾಮ ಸ್ಮರಣೆ ಶಾಸ್ತ್ರ ಬದ್ಧವಾಗಿದೆ ಎಂದು ಪ್ರಾಮಾಣಿಕರಿಸಲಾಗಿದೆ.

❖ ಹಾಗೆಯೇ ಅವನು ಸ್ಪಷ್ಟಪಡಿಸುವುದೇನೆಂದರೆ, "ಹೇ ಅರ್ಜುನ! ನಿನ್ನ ಹಾಗೂ ನನ್ನ ಅನೇಕ ಜನ್ಮಗಳುಂಟಾಗಿವೆ. ಮುಂದೆಯೂ ಆಗುವುವು ನನ್ನ ಉತ್ಪತ್ತಿಯನ್ನು ಋಷಿ ಹಾಗೂ ದೇವತೆಗಳಿಗೂ ಗೊತ್ತಿಲ್ಲ (ಗೀತಾ ಅಧ್ಯಾಯ/ ಶ್ಲೋಕ–2/ 12, 4/ 5, 10/ 2)

❖ ಇದರಿಂದ ತಿಳಿಯುವುದೇನೆಂದರೆ ಗೀತೆಯನ್ನು ತಿಳಿಸಿದವನು ಸಹ ನಶ್ವರನು. ಅವನು ಹುಟ್ಟುತ್ತಾನೆ, ಸಾಯುತ್ತಾನೆ. ಅವನ ಉಪಾಸಕರೂ ಸಹ ಈ ಜನನ–ಮರಣ ಚಕ್ರದಲ್ಲಿ ಸಿಲುಕಿದ್ದಾರೆ. ಹಾಗಾಗಿ ಬ್ರಹ್ಮಲೋಕಕ್ಕೆ ಹೋದ ಸಾಧಕರೂ ಸಹ ಪುನರ್ಜನ್ಮ ಪಡೆಯುತ್ತಾರೆ. ಆದ್ದರಿಂದ ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ ಬ್ರಹ್ಮಲೋಕಕ್ಕೆ ಹೋದ ಸಾಧಕನೂ ಸಹ ಪುನರ್ಜನ್ಮದಲ್ಲಿರುತ್ತಾನೆ. ಆದ್ದರಿಂದ ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಹೇಳಿರುವಂತೆ, 'ಹೇ ಭಾರತ! ನೀನು ಸರ್ವಭಾವದಿಂದ ಆ ಪರಮೇಶ್ವರರ ಆಶ್ರಯ ಪಡೆ. ಆ ಪರಮೇಶ್ವರರ ಕೃಪೆಯಿಂದ ನೀನು ಪರಮಪದವನ್ನು ಹಾಗೂ ಸನಾತನ ಪರಮಧಾಮ ಅಂದರೆ ಸತ್ಯಲೋಕವನ್ನು ಪಡೆಯುವೆ".

❖ ಮುಂದುವರೆದು, ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೀಗೆ ಹೇಳಲಾಗಿದೆ,"ಯಾವಾಗ ತತ್ವದರ್ಶಿ ಗುರುಗಳಿಂದ ತತ್ವಜ್ಞಾನ ಪ್ರಾಪ್ತವಾಗುವುದೋ, ಆಗ ಅವರು ಹೇಳಿದ ರೀತಿ ಸಾಧನೆ ಮಾಡಿ, ಅದರ ನಂತರ ಪರಮ ಪದದ ಅನ್ವೇಷಣೆ ಮಾಡಬೇಕು. ಅಲ್ಲಿಗೆ ತೆರಳಿದ ನಂತರ ಮತ್ತೆ ಈ ಪ್ರಪಂಚಕ್ಕೆ ಬರುವ ಆವಶ್ಯಕತೆ ಇರುವುದಿಲ್ಲ. ಆದ್ದರಿಂದ ಆ ಪರಮೇಶ್ವರನ ಆಶ್ರಯ ಪಡೆ" ಎಂದು ಹೇಳಿದ್ದಾರೆ.

ಗೀತೆಯ 7ನೇ ಅಧ್ಯಾಯದ 29ನೇ ಶ್ಲೋಕದಲ್ಲಿ ಭಗವದ್ಗೀತೆಯ ಜ್ಞಾನದಾತನು ಹೇಳಿದ್ದಾನೆ.

ಜರಾ ಮರಣ್ ಮೋಕ್ಷಾಯ್ ಮಾಮ್ ಆಶ್ರಿತ್ಯ ಯತಂತಿಯೇ,
ತೆ ತತ್ ಬ್ರಹ್ಮ ವಿದುಃ ಕೃತಸ್ನಮ್ ಆಧ್ಯಾತ್ಮಮ್ ಕರ್ಮ ಚ ಅಖಿಲಮ್ ॥

ಗೀತೆಯ ಜ್ಞಾನದಾತನು ಹೇಳಿದ್ದಾನೆ. ಯಾರು "ನಾನು ಹೇಳಿದ ಪ್ರಕಾರ ತತ್ವದರ್ಶಿ ಸಂತರಿಂದ ತತ್ವಜ್ಞಾನ ಪಡೆಯುತಾರೊ ಅವರು ವೃದ್ಧಾಪ್ಯ ಹಾಗೂ ಸಾವು ಎನ್ನುವ ಕಷ್ಟದಿಂದ ಪಾರಾಗಿ ಮೋಕ್ಷವನ್ನು ಪಡೆಯುವ ಪ್ರಯತ್ನ ಮಾಡುತ್ತಾರೆ. ಹಾಗೂ ಪ್ರಪಂಚದ ಯಾವುದೇ ಬೆಲೆಬಾಳುವ ವಸ್ತುಗಳನ್ನು ಭಕ್ತಿಯ ಪ್ರತಿಫಲವಾಗಿ ಇಚ್ಛಿಸುವುದಿಲ್ಲ. ಅವರು (ತತ್ ಬ್ರಹ್ಮ ವಿದುಃ) ಬ್ರಹ್ಮನನ್ನು, ಸಂಪೂರ್ಣ ಆಧ್ಯಾತ್ಮವನ್ನು ಹಾಗೂ ಎಲ್ಲಾ ಕರ್ಮಗಳನ್ನು ಬಲ್ಲವರಾಗಿರುತ್ತಾರೆ.

❖ ಮುಂದುವರೆದು, ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಗೀತಾಜ್ಞಾನದಾತನು ಹೇಳಿದ್ದಾನೆ. ಅರ್ಜುನನು ಗೀತೆಯ 8ನೇ ಅಧ್ಯಾಯದ 1ನೇ ಶ್ಲೋಕದಲ್ಲಿ

ಕೇಳುತ್ತಾನೆ. "ತತ್ ಬ್ರಹ್ಮ" ಎಂದರೆ ಏನು? ಆಗ ಉತ್ತರವಾಗಿ ಗೀತಾಜ್ಞಾನದಾತನು ಗೀತೆಯ 8ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಹೇಳಿದ್ದಾನೆ. 'ಪರಮ ಅಕ್ಷರ ಬ್ರಹ್ಮ' ಎಂದಿದ್ದಾನೆ.

❖ ಗೀತೆಯ 8ನೇ ಅಧ್ಯಾಯದ 5ನೇ ಮತ್ತು 7ನೇ ಶ್ಲೋಕದಲ್ಲಿ ಗೀತಾಜ್ಞಾನದಾತನು ತನ್ನನ್ನು ಆರಾಧಿಸುವಂತೆ ತಿಳಿಸಿದ್ದಾನೆ. ನನ್ನನ್ನು ಪಡೆದ ಮೇಲೆ ಜನನ–ಮರಣ, ಕರ್ಮಚಕ್ರ, ಯುದ್ಧ ಎಲ್ಲವೂ ಇರುವುದೆಂದೂ, ಪರಮಶಾಂತಿ ಇರುವುದಿಲ್ಲವೆಂದೂ ತಿಳಿಸಿದ್ದಾನೆ.

❖ ನಂತರ ಗೀತೆಯ ಜ್ಞಾನದಾತನು ತಕ್ಷಣವೇ ಗೀತೆಯ 8ನೇ ಅಧ್ಯಾಯದ 8, 9, 10ನೇ ಶ್ಲೋಕದಲ್ಲಿ ಹೇಳಿದ್ದಾನೆ, "ತತ್ ಬ್ರಹ್ಮ" ಅಂದರೆ ಪರಮ ಅಕ್ಷರ ಬ್ರಹ್ಮನನ್ನು ಭಕ್ತಿ ಮಾಡುವವನು ಆ ಸಚ್ಚಿದಾನಂದ ಘನ ಬ್ರಹ್ಮ ಅಂದರೆ ಪರಮ ಅಕ್ಷರ ಬ್ರಹ್ಮನನ್ನು ಆರಾಧಿಸುವುದರಿಂದ ಅಂದರೆ ನನ್ನ ಹೊರತಾಗಿ ಬೇರೆ ದಿವ್ಯ ಪರಮೇಶ್ವರನನ್ನು ಪಡೆಯುವುದಾಗಿ ಹೇಳಿದ್ದಾನೆ.

❖ ಗೀತೆಯಲ್ಲಿ ಅಕ್ಷರ ಬ್ರಹ್ಮನ ಮಹಿಮೆಯನ್ನು ತಿಳಿಸಲಾಗಿದೆ. 16ನೇ ಅಧ್ಯಾಯದ 15ನೇ ಶ್ಲೋಕದಲ್ಲಿ ಇಬ್ಬರು ಪುರುಷರನ್ನು ಹೆಸರಿಸಲಾಗಿದೆ. ಒಬ್ಬರು, ಕ್ಷರಪುರುಷ. ಅವನು ಗೀತೆಯ ಜ್ಞಾನ ಕೊಟ್ಟವನು. ಅವನ ಕ್ಷೇತ್ರ 21 ಬ್ರಹ್ಮಾಂಡಗಳು. ಇನ್ನೊಬ್ಬರು ಅಕ್ಷರಪುರುಷ ಅವನ ಕ್ಷೇತ್ರ 7 ಶಂಖ ಬ್ರಹ್ಮಾಂಡಗಳು. ಇವರಿಬ್ಬರನ್ನು ನಶ್ವರ ಎಂದು ಹೇಳಲಾಗಿದೆ. ಇವರ ಲೋಕಗಳಲ್ಲಿ ಎಲ್ಲಾ ಜೀವಿಗಳೂ ನಶ್ವರರು ಎಂದು ಹೇಳಲಾಗಿದೆ.

ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕ.

ಉತ್ತಮ ಪುರುಷಃ ತೂ ಅನ್ಯಃ ಪರಮಾತ್ಮಾ ಇತಿ ಉದಾಹೃತಃ
ಯಃ ಲೋಕ ತ್ರಯಮ್ ಅವಿಶ್ಯ ವಿಭರ್ತ್ರಿ ಅವ್ಯಯಃ ಈಶ್ವರಃ ॥

ಅನುವಾದ:– ಉತ್ತಮ ಪುರುಷ=ಪುರುಷೋತ್ತಮ ಅಂದರೆ ಪರಮ ಅಕ್ಷರಬ್ರಹ್ಮ. ಮೇಲೆ ತಿಳಿಸಿದಂತೆ ಕ್ಷರ ಮತ್ತು ಅಕ್ಷರ ಬ್ರಹ್ಮನಿಗಿಂತ ಬೇರೆಯಾದವನು. ಅವನೇ ಪರಮಾತ್ಮ ಇವನು ನಾಲ್ಕೂ ಲೋಕಗಳಲ್ಲಿ (ಸತ್ಯಲೋಕ, ಅಲಖ್‌ಲೋಕ, ಅಗಮಲೋಕ ಮತ್ತು ಅನಾಮಿಲೋಕ) ಪ್ರವೇಶಿಸಿ ಎಲ್ಲರನ್ನೂ ಪಾಲಿಸುತ್ತಾನೆ. ವಾಸ್ತವವಾಗಿ ಅವನು ಅವಿನಾಶಿ ಪರಮೇಶ್ವರನು.

❖ ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲಿ ಪರಮ ಅಕ್ಷರಬ್ರಹ್ಮನ ಪ್ರಾಪ್ತಿಯ ಮಂತ್ರ ಹೇಳಿದೆ.

ಓಂ ತತ್ ಸತ್ ಇತಿ ನಿರ್ದೇಶಃ ಬ್ರಾಹ್ಮಣಃ ತ್ರಿವಿಧಃ ಸ್ಮೃತಃ ।
ಬ್ರಾಹ್ಮಣಾಃ ತೇನ್ ವೇದಾಃ ಯಜ್ಞಾಃ ಚ ವಿಹಿತಾ ಪುರಾ ॥

ಬ್ರಹ್ಮಣಃ= ಸಚ್ಚಿದಾನಂದ ಘನ ಬ್ರಹ್ಮ ಅರ್ಥಾತ್ ಪರಮ ಅಕ್ಷರಬ್ರಹ್ಮನ ಭಕ್ತಿಯ ಸಾಧನೆ ಅರ್ಥಾತ್ ಪರಮೇಶ್ವರನ ಆ ಪರಮ ಪದವನ್ನು ಪಡೆಯುವ ಮಂತ್ರವನ್ನು ಹೇಳಲಾಗಿದೆ. ಅಲ್ಲಿಗೆ ಹೋದ ನಂತರ ಸಾಧಕನು ಮರಳಿ ಈ ಪ್ರಪಂಚಕ್ಕೆ ಬರುವುದಿಲ್ಲ. ಅಲ್ಲಿ ಪರಮ ಶಾಂತಿ ಪಡೆಯುತ್ತಾರೆ. ಅದು ಸನಾತನ ಪರಮಧಾಮ.

ಓಂ= ಬ್ರಹ್ಮ ಅರ್ಥಾತ್ ಕ್ಷರ ಪುರುಷನ ಮಂತ್ರ.

ತತ್= ಅಕ್ಷರ ಪುರುಷನ ಜಪಮಂತ್ರ. ಈ ಮಂತ್ರವು ಸಾಂಕೇತಿಕ. ವಾಸ್ತವಿಕಮಂತ್ರವನ್ನು ಸೂಕ್ಷ್ಮವೇದದಲ್ಲಿ ಹೇಳಿದೆ. ಈ ಮಂತ್ರವು ದೀಕ್ಷೆಯ ಸಮಯದಲ್ಲಿ ದೀಕ್ಷಾರ್ಥಿಗೆ ಕೊಡಲಾಗುತ್ತದೆ. ಬೇರೆಯವರಿಗೆ ತಿಳಿಸಲಾಗುವುದಿಲ್ಲ.

ಸತ್= ಇದು ಪರಮ ಅಕ್ಷರಪುರುಷನ ಸಾಧನೆಯ ಮಂತ್ರ, ಇದೂ ಸಹ ಸಾಂಕೇತಿಕ. ದೀಕ್ಷೆಯ ಸಮಯದಲ್ಲಿ ದೀಕ್ಷಾರ್ಥಿಗೆ ಕೊಡಲಾಗುವುದು. ಸೂಕ್ಷ್ಮವೇದದಲ್ಲಿ ಯಥಾರ್ಥ ಮಂತ್ರವನ್ನು ಬರೆಯಲಾಗಿದೆ. ಸಾಮವೇದದ ಮಂತ್ರ ಸಂಖ್ಯೆ 822ರಲ್ಲೂ ಇದರ ಬಗ್ಗೆ ಸಾಕ್ಷಿ ಇದೆ. ಮೂರು ನಾಮಜಪದಿಂದ ಪೂರ್ಣ ಮೋಕ್ಷವು ಪ್ರಾಪ್ತಿಯಾಗುವುದು.

**822ನೇ ಸಂಖ್ಯೆಯ ಸಾಮವೇದದ ಉತಾರ್ಚಿಕ 3ನೇ ಅಧ್ಯಾಯದ 5ನೇ ಖಂಡದ 8ನೇ ಶ್ಲೋಕ (ಸಂತ ರಾಮ್‌ಪಾಲ್ ದಾಸರ ಮೂಲಕ ಭಾಷಾ-ಭಾಷ್ಯ)**

ಮನೀಷಿಭಿಃ ಪವತೆ ಪೂರ್ವ್ಯಃ ಕವಿರ್ನೃಭಿರ್ಯತಃ ಪರಿ ಕೋಶಾಃ ಅಸಿಷ್ಯದತ್ ।
ತ್ರಿತಸ್ಯ ನಾಮ್ ಜನಯನ್ಮಧು ಕ್ಷರನ್ನಿಂದ್ರಸ್ಯ ವಾಯುಂ ಸಖ್ಯಾಯ್ ವರ್ಧಯನ್ ॥ 8 ॥

ಮನೀಷಿಭಿಃ-ಪವತೆ-ಪೂರ್ವ್ಯಃ-ಕವಿರ್-ನೃಭಿಃ-ಯತಃ-ಪರಿ-ಕೋಶಾನ್-ಅಸಿಷ್ಯದತ್-ತ್ರಿ-ತಸ್ಯ-ನಾಮ್-ಜನಯನ್-ಮಧು-ಕ್ಷರನಃ-ನ-ಇಂದ್ರಸ್ಯ-ವಾಯುಮ್-ಸಖ್ಯಾಯ್-ವರ್ಧಯನ್ ।

ಶಬ್ದಾರ್ಥ:-(ಪೂರ್ವ್ಯಃ) ಸನಾತನ ಅರ್ಥಾತ್ ಎಲ್ಲರಿಗಿಂತ ಮೊದಲು ಪ್ರಕಟವಾದ (ಕವಿರ್ ನೃಭಿಃ) ಕಬೀರ ಪರಮೇಶ್ವರರು ಮಾನವ ರೂಪ ಧರಿಸಿ ಅರ್ಥಾತ್ ಗುರು ರೂಪದಲ್ಲಿ ಪ್ರತ್ಯಕ್ಷರಾಗಿ (ಮನೀಷಿಭಿಃ) ಬುದ್ಧಿವಂತ ಭಕ್ತರಿಗೆ (ತ್ರಿ) ಮೂರು (ನಾಮ) ಮಂತ್ರಗಳನ್ನು ಅರ್ಥಾತ್ ನಾಮ ಉಪದೇಶವನ್ನು ನೀಡಿ (ಪವತೆ) ಪಾಪರಹಿತ ಅಂದರೆ ಪವಿತ್ರರನ್ನಾಗಿ ಮಾಡಿ (ಜನಯನ್) ಜನನ ಮತ್ತು (ಕ್ಷರನಃ) ಮರಣ ರಹಿತರನ್ನಾಗಿ (ನ) ಮಾಡುತ್ತಾರೆ ಮತ್ತು (ತಸ್ಯ) ಅವರ (ವಾಯುಮ್) ಪ್ರಾಣ ಅರ್ಥಾತ್ ಜೀವನ-ಶ್ವಾಸಗಳನ್ನು ಯಾರು ಸಂಸ್ಕಾರದಿಂದ ಎಣಿಸುತ್ತಾರೋ ಅವರನ್ನು (ಕೋಶಾನ್) ತಮ್ಮ ಭಂಡಾರದಿಂದ (ಸಖ್ಯಾಯ್) ಸ್ನೇಹದ ಆಧಾರದಿಂದ (ಪರಿ) ಪೂರ್ಣ ರೂಪವಾಗಿ (ವರ್ಧಯನ್) ಬೆಳೆಸುತ್ತಾರೆ. (ಯತಃ) ಹೀಗೆ (ಇಂದ್ರಸ್ಯ) ಪರಮೇಶ್ವರನ (ಮಧು) ವಾಸ್ತವಿಕ ಆನಂದವನ್ನು (ಅಸಿಶ್ಯದತ್) ತಮ್ಮ ಆಶೀರ್ವಾದದಿಂದ ಕೊಡಿಸುತ್ತಾರೆ.

ಭಾವಾರ್ಥ:- ಈ ಮಂತ್ರದಲ್ಲಿ ಸ್ಪಷ್ಟವಾಗಿ ಹೇಳಲಾಗಿರುವುದೇನೆಂದರೆ ಪರಮಾತ್ಮ ಕಬೀರರು ಮಾನವ ಶರೀರದಲ್ಲಿ ಗುರುರೂಪದಲ್ಲಿ ಪ್ರಕಟಗೊಂಡು ಪ್ರಭು ಪ್ರೇಮಿಗಳಿಗೆ ಮೂರು ನಾಮಜಪವನ್ನು ಕೊಟ್ಟು ಸತ್ಯ ಭಕ್ತಿಯನ್ನು ನೀಡುತ್ತಾರೆ ಹಾಗೂ ಆ ಭಕ್ತಮಿತ್ರರನ್ನು ಪವಿತ್ರರನ್ನಾಗಿ ಮಾಡಿ ತಮ್ಮ ಆಶೀರ್ವಾದದಿಂದ ಪೂರ್ಣ ಪರಮಾತ್ಮ ಅರ್ಥಾತ್ ತನ್ನ ಪ್ರಾಪ್ತಿಗಾಗಿ ದಾರಿ ತೋರಿಸುತ್ತಾ ಪೂರ್ಣ ಸುಖವನ್ನು ನೀಡುತ್ತಾರೆ. ಸಾಧಕನ ವಯಸ್ಸನ್ನು ಹೆಚ್ಚಿಸುತ್ತಾರೆ. ಇದೇ ಆಧಾರವು ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲಿದೆ. ಓಂ-ತತ್-ಸತ್ ಇತಿ ನಿರ್ದೇಶಃ ಬ್ರಹ್ಮಣಃ ತ್ರಿವಿಧ ಸ್ಮೃತಃ ಅಂದರೆ ಪೂರ್ಣ ಪರಮಾತ್ಮನು ಪಡೆಯುವ ಓಂ(1) ತತ್(2) ಸತ್(3) ಈ ಮಂತ್ರ ಜಪದ ಸ್ಮರಣೆ ಮಾಡುವ ನಿರ್ದೇಶನವಿದೆ ಎನ್ನುವುದೇ ಇದರ ಭಾವಾರ್ಥ. ಈ ಮಂತ್ರವನ್ನು ತತ್ವದರ್ಶಿ ಸಂತನಿಂದ ಪಡೆದುಕೋ. ತತ್ವದರ್ಶಿ ಸಂತನ ವಿಷಯದಲ್ಲಿ ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕದಲ್ಲಿ ಹೇಳಲಾಗಿದೆ. ಹಾಗೂ 15ನೇ ಅಧ್ಯಾಯದ 1 ಮತ್ತು 4 ನೇ ಶ್ಲೋಕದಲ್ಲಿ ತತ್ವದರ್ಶಿಯ ಬಗ್ಗೆ ತಿಳಿಸಲಾಗಿದೆ ಹಾಗೂ ತತ್ವದರ್ಶಿ ಸಂತನಿಂದ ತತ್ವಜ್ಞಾನವನ್ನು ಪಡೆದು ಅದರ ನಂತರ ಪರಮಪದ ಪರಮೇಶ್ವರರನ್ನು ಹುಡುಕಬೇಕು ಎಂದು ಹೇಳಲಾಗಿದೆ. ಅಂಥಾ ಪೂರ್ಣ ಪರಮಾತ್ಮನಿಂದ ಈ ಪ್ರಪಂಚದ ಸೃಷ್ಟಿಯಾಗಿದೆ.

ವಿಶೇಷ:-ನಾಲ್ಕು ವೇದಗಳಿಂದ ಹಾಗೂ ಮೇಲೆ ತಿಳಿಸಿರುವ ವಿವರಣೆಯಿಂದ ತಿಳಿದು ಬರುವುದೇನೆಂದರೆ ಪೂರ್ಣ ಪರಮಾತ್ಮನೇ ಪೂಜೆಗೆ ಯೋಗ್ಯನು. ಅವನ ನಿಜವಾದ ಹೆಸರು ಕಬೀರ ಪರಮೇಶ್ವರ ಮತ್ತು ಮೂರು ಮಂತ್ರವನ್ನು ಜಪಿಸುವುದರಿಂದ ಪೂರ್ಣ ಮೋಕ್ಷ ಪ್ರಾಪ್ತಿಯಾಗುತ್ತದೆ.

ಈ ಮೂರು ಮಂತ್ರಗಳ ಜಪವು ನಾಲ್ಕು ವೇದಗಳ ಸಾರಾಂಶವೂ ಸಹ ಭಗವದ್ಗೀತೆಯಲ್ಲಿ ಪ್ರಾಮಾಣಿಕರಿಸಲಾಗಿದೆ. ಇದರಲ್ಲಿ ಹೇಳಿರುವಂತೆ ಸಾಧಕನು ಅಲ್ಲಿಗೆ ತೆರಳಿದ ನಂತರ ಅವನು ಮತ್ತೆ ಪ್ರಪಂಚಕ್ಕೆ ವಾಪಸ್ಸಾಗುವುದಿಲ್ಲ.

ವೇದ ಹಾಗೂ ಗೀತೆಯಲ್ಲಿ ಈ ಮೂರು ನಾಮಮಂತ್ರ ಅಸ್ಪಷ್ಟ ಹಾಗೂ ಸಾಂಕೇತಿಕವಾಗಿದೆ. ನಾಲ್ಕು ವೇದ ಮತ್ತು ಗೀತೆಯ ಪ್ರಕಾರ ಸಾಧನೆ ಮಾಡುವುದರಿಂದ ಮೋಕ್ಷ ಲಭಿಸುವುದಿಲ್ಲ. ಆದ್ದರಿಂದ ಗೀತೆಯ 4ನೇ ಅಧ್ಯಾಯದ 32ನೇ ಶ್ಲೋಕ ಹಾಗೂ 34ನೇ ಶ್ಲೋಕದಲ್ಲಿ ಗೀತೆಯ ಜ್ಞಾನವನ್ನು ನೀಡಿದಾತನು ಯಜ್ಞಗಳ ಅಂದರೆ ಧಾರ್ಮಿಕ ಅನುಷ್ಠಾನಗಳ ನಿಜವಾದ ಜ್ಞಾನ (ಬ್ರಹ್ಮಣಃ ಮುಖೆ) ಸಚ್ಚಿದಾನಂದ ಘನ ಬ್ರಹ್ಮ ಅಂದರೆ ಪರಮ ಅಕ್ಷರ ಬ್ರಹ್ಮನು ತನ್ನ ಮುಖ–ಕಮಲದಿಂದ ವಾಣಿಯನ್ನು ಹೇಳುತ್ತಾ, ತಿಳಿಸಿಕೊಟ್ಟರು. ಅದನ್ನು ಸಚ್ಚಿದಾನಂದ ಘನ ಬ್ರಹ್ಮವಾಣಿ ಎಂದು ಹೇಳಲಾಗುತ್ತದೆ. ಅದನ್ನು ತತ್ವಜ್ಞಾನ ಹಾಗೂ ಸೂಕ್ಷ್ಮವೇದ ಎಂದೂ ಕರೆಯಲಾಗುತ್ತದೆ. ಅದನ್ನು ತಿಳಿದ ನಂತರ ಸರ್ವ ಪಾಪಗಳಿಂದ ಮುಕ್ತನಾಗುತ್ತಾನೆ. ಅದರಲ್ಲಿ ಸಂಪೂರ್ಣ ಭಕ್ತಿ ಮಂತ್ರ ಮತ್ತು ವಿಧಿ–ವಿಧಾನಗಳನ್ನು ತಿಳಿಸಲಾಗಿದೆ. (ಗೀತೆಯ 4ನೇ ಅಧ್ಯಾಯ 32ನೇ ಶ್ಲೋಕ).

❖ ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕ= ಆ ತತ್ವಜ್ಞಾನವನ್ನು ನೀನು ತತ್ವದರ್ಶಿ ಸಂತರ ಬಳಿ ಹೋಗಿ ತಿಳಿದುಕೋ. ಅವರಿಗೆ ದೀರ್ಘದಂಡ ನಮಸ್ಕಾರ ಮಾಡುವುದರಿಂದ, ಕಪಟತೆಯನ್ನು ಬಿಟ್ಟು, ವಿನಯವಾಗಿ ಪ್ರಶ್ನೆ ಮಾಡುವುದರಿಂದ ಪರಮಾತ್ಮನ ತತ್ವವನ್ನು ಚೆನ್ನಾಗಿ ಅರಿತ ಜ್ಞಾನಿ ಮಹಾತ್ಮ ನಿನಗೆ ತತ್ವಜ್ಞಾನದ ಉಪದೇಶ ನೀಡುವನು. (ಗೀತೆಯ 4ನೇ ಅಧ್ಯಾಯದ 34 ಶ್ಲೋಕ)

ಸಜ್ಜನರೇ, ಆ ತತ್ವದರ್ಶಿ ಸಂತನೇ ಈ ದಾಸ (ಸಂತ ರಾಮ್‌ಪಾಲ್ ದಾಸ) ನಾಗಿದ್ದಾನೆ. ಆ ತತ್ವಜ್ಞಾನವು ನನ್ನ ಬಳಿ ಇದೆ. ನನ್ನನ್ನು ಬಿಟ್ಟರೆ ಈ ಪ್ರಪಂಚದಲ್ಲಿ ಬೇರೆ ಯಾರ ಬಳಿಯೂ ಇಲ್ಲ. ವಿಶ್ವದಲ್ಲಿ ಸುಮಾರು 7 ಬೀಲಿಯನ್ ಜನಸಂಖ್ಯೆ ಇದೆ. ಇದರಲ್ಲಿ ಯಾರ ಬಳಿಯೂ ಈ ಜ್ಞಾನವಿಲ್ಲ.

ಗೀತೆಯ 7ನೇ ಅಧ್ಯಾಯದ 12ನೇ ಶ್ಲೋಕದಿಂದ 15ನೇ ಶ್ಲೋಕದವರೆಗೆ ಗೀತೆಯ ಜ್ಞಾನ ನೀಡಿದವನು, ಮೂರೂ ಗುಣಗಳ (ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು, ಹಾಗೂ ತಮೋಗುಣ ಶಿವನ)ನನ್ನು ಭಕ್ತಿ ಮಾಡುವವರಿಗೆ 1) ರಾಕ್ಷಸ ಸ್ವಭಾವವನ್ನು ಹೊಂದಿರುವವರು 2) ಮನುಷ್ಯರಲ್ಲಿ ನೀಚರು 3) ಕೆಟ್ಟ ಕೆಲಸ ಮಾಡುವವರು 4) ಮೂರ್ಖರು ನನ್ನ ಭಕ್ತಿಯನ್ನೂ ಮಾಡುವುದಿಲ್ಲ.

ನಂತರ ಗೀತೆಯ ಜ್ಞಾನ ನೀಡುವವನು ಗೀತೆಯ 7ನೇ ಅಧ್ಯಾಯದ 16ರಿಂದ 18ನೇ ಶ್ಲೋಕದವರೆಗೆ ತಮ್ಮ ಸಾಧನೆಯನ್ನು ಮಾಡುವವರ ಸ್ಥಿತಿಯನ್ನು ವರ್ಣಿಸಿದ್ದಾನೆ. ಅದೇನೆಂದರೆ ನನ್ನ ಭಕ್ತಿ ನಾಲ್ಕು ರೀತಿಯವು. 1) ಆರ್ತ 2) ಅರ್ಥಾರ್ಥಿ 3) ಜಿಜ್ಞಾಸು 4) ಜ್ಞಾನಿ) ವರು ಮಾಡುತ್ತಾರೆ. ಇವರಲ್ಲಿ ಕೇವಲ ಜ್ಞಾನಿ ಸಾಧಕರನ್ನು ಶ್ರೇಷ್ಠರೆಂದು ಹೇಳಿದೆ. ಆದರೆ ಅವರೂ ಸಹ ತತ್ವಜ್ಞಾನ ಅರಿಯದ ಕಾರಣ ನನ್ನ ಅಂದರೆ ಬ್ರಹ್ಮನ ಅನುತ್ತಮ ಅಂದರೆ ಕೆಳಮಟ್ಟದಲ್ಲೇ ಇರುತ್ತಾನೆ.

❖ ಗೀತೆಯ 7ನೇ ಅಧ್ಯಾಯದ 19ನೇ ಶ್ಲೋಕದಲ್ಲಿ ಗೀತೆಯನ್ನು ತಿಳಿಸುವವನು ಹೇಳಿರುವುದೇನೆಂದರೆ, ನನ್ನ ಪೂಜೆಯನ್ನೂ ಸಹ ಜನ್ಮ ಜನ್ಮಾಂತರದ ನಂತರ ಕೊನೆಯ ಜನ್ಮದಲ್ಲಿ ಯಾರಾದರೂ ಜ್ಞಾನಿ ಆತ್ಮ ಸರಿಯಾದ ರೀತಿಯಲ್ಲಿ ಮಾಡುತ್ತಾರೆ ಇಲ್ಲದಿದ್ದರೆ ಬೇರೆ ಉಪಾಸನೆಯಲ್ಲಿ ತಲ್ಲೀನರಾಗಿರುತ್ತಾರೆ. ಇದನ್ನು ತಿಳಿಸುವ ಮಹಾತ್ಮರು ಸಿಗುವುದು ಬಹಳ ದುರ್ಲಭ. ಕೇವಲ ವಾಸುದೇವ ಅಂದರೆ ಸರ್ವಗತಮ್ ಬ್ರಹ್ಮನೇ ಎಲ್ಲವೂ ಎಂದು ಹೇಳುವವರು ಸಿಗುವುದು ವಿರಳ. ಇವನ ಭಕ್ತಿಯಿಂದ ಮಾತ್ರ ಪರಮ ಶಾಂತಿ ಲಭಿಸುವುದು. ಇವನ ಭಕ್ತಿಯಿಂದ ಮಾತ್ರ ಸನಾತನ ಪರಮ ಪದ

ಪ್ರಾಪ್ತವಾಗುವುದು. ಇವನ ಭಕ್ತಿಯಿಂದ ಮುಕ್ತಿ ದೊರೆಯುವುದು ಅಲ್ಲಿಗೆ ಹೋದ ನಂತರ ಸಾಧಕನು ಮರಳಿ ಈ ಪ್ರಪಂಚಕ್ಕೆ ಎಂದಿಗೂ ಬರುವುದಿಲ್ಲ. ಅವನು ಪರಮ ಅಕ್ಷರಬ್ರಹ್ಮನು. ಎಲ್ಲರನ್ನೂ ಹುಟ್ಟಿಸುವವನು, ಅವನೇ ಪ್ರಪಂಚವೆಂಬ ವೃಕ್ಷದ ಮೂಲ. ಅವನು ಮೂರೂ ಲೋಕಗಳಲ್ಲಿ ಪ್ರವೇಶಿಸಿ ಎಲ್ಲರ ಪಾಲನೆ ಪೋಷಣೆ ಮಾಡುತ್ತಾನೆ. ಅವನೇ ಪಾಪನಾಶಕನು. ಅವನೇ ಪೂರ್ಣ ಮೋಕ್ಷದಾಯಕನು. ಅವನನ್ನು ಪೂಜಿಸಬೇಕು. ಭಕ್ತಿಯಿಂದ ಇರಬೇಕು.

ಪ್ರಿಯ ಓದುಗರೇ! ವರ್ತಮಾನದಲ್ಲಿ ಆ ತತ್ವದರ್ಶಿ ಸಂತನಾದ ಈ ದಾಸ (ರಾಮ್‌ಪಾಲ್ ದಾಸ) ಇದ್ದಾನೆ. ನನ್ನ ಬಳಿ ಸಂಪೂರ್ಣ ವೇದ ಶಾಸ್ತ್ರಗಳ ಜ್ಞಾನವಿದೆ. ವಾಸುದೇವ ಭಗವಂತನ ಭಕ್ತಿಯ ಸಂಪೂರ್ಣ ಮಂತ್ರವಿದೆ.

ಈಗ "ವಾಸುದೇವ"ನ ಪರಿಭಾಷೆಯನ್ನು ತಿಳಿಸೋಣ.

## "ವಾಸುದೇವನ ಪರಿಭಾಷೆ"

ಬ್ರಹ್ಮ ಅರ್ಥಾತ್ ಕ್ಷರಪುರುಷನ ಉತ್ಪತ್ತಿ ಅವಿನಾಶಿ ಪರಮಾತ್ಮನಿಂದ ಆಗಿದೆ ಎಂದು ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಹೇಳಲಾಗಿದೆ. 'ಸರ್ವಗತಮ್ ಬ್ರಹ್ಮ'= ಸರ್ವವ್ಯಾಪಿ ಪರಮ ಅಕ್ಷರಬ್ರಹ್ಮ ಅರ್ಥಾತ್ ವಾಸುದೇವನು ಯಾವಾಗಲೂ ಯಜ್ಞಗಳಲ್ಲಿ ಪ್ರತಿಷ್ಠಿತನಾಗಿರುತ್ತಾನೆ ಎಂದು ಇದರಿಂದ ತಿಳಿಯುತ್ತದೆ.

ವಿಚಾರ ಮಾಡೋಣ:– ಸರ್ವಗತಮ್ ಬ್ರಹ್ಮನು ಎಂದರೆ ಸರ್ವವ್ಯಾಪಿ ಪರಮ ಅಕ್ಷರ ಪರಮಾತ್ಮನು ಎಂದರ್ಥ. (ಗೀತೆಯ 3ನೇ ಅಧ್ಯಾಯದ 15ನೇ ಶ್ಲೋಕ)

1) ಬ್ರಹ್ಮಾ, ವಿಷ್ಣು, ಮಹೇಶ್ವರರು ಒಂದು ಬ್ರಹ್ಮಾಂಡದಲ್ಲಿ ಮೂರು ಲೋಕಗಳಲ್ಲಿ (ಸ್ವರ್ಗಲೋಕ, ಭೂಲೋಕ, ಪಾತಾಳಲೋಕ) ಕೇವಲ ಒಂದೊಂದು ವಿಭಾಗಕ್ಕೆ ಮುಖಂಡರು. ಇವರು ಸರ್ವಗತಮ್ ಬ್ರಹ್ಮ ಅರ್ಥಾತ್ ಸರ್ವವ್ಯಾಪಿ ಪರಮಾತ್ಮ= ವಾಸುದೇವ ಅಲ್ಲ.

2) ಕ್ಷರ ಪುರುಷ:– ಇವನು 21 ಬ್ರಹ್ಮಾಂಡಗಳ ಪ್ರಭು. ಇವನೂ ಸರ್ವವ್ಯಾಪಿ ಪರಮಾತ್ಮ= ವಾಸುದೇವನಲ್ಲ.

3) ಅಕ್ಷರ ಪುರುಷ:– ಇವನು 7 ಶಂಖ ಬ್ರಹ್ಮಾಂಡಗಳ ಪ್ರಭು. ಇವನೂ ಸರ್ವವ್ಯಾಪಿ ಅರ್ಥಾತ್ ವಾಸುದೇವ ಅಲ್ಲ.

4) ಪರಮ ಅಕ್ಷರಬ್ರಹ್ಮ:– ಇವನು ಎಲ್ಲಾ ಬ್ರಹ್ಮಾಂಡಗಳಿಗೆ ಒಡೆಯ. ಇವನು ಪೋಷಿಸುವವನು. ಇವನೇ ವಾಸುದೇವನು.

ವಿಶೇಷ:– ಹೆಚ್ಚಿನ ವಿವರಗಳಿಗಾಗಿ ಈ ಪುಸ್ತಕದ 'ಸೃಷ್ಟಿ ರಚನೆ' ಎಂಬ ಅಧ್ಯಾಯವನ್ನು ಓದಿರಿ.

❖ ನಿಮಗೆ ಮೊದಲೇ ತಿಳಿಸಿದಂತೆ ಪರಮ ಅಕ್ಷರ ಬ್ರಹ್ಮನು ಸ್ವತಃ ಭೂಮಿಯ ಮೇಲೆ ಪ್ರತ್ಯಕ್ಷನಾಗಿ ಒಳ್ಳೆಯ ಆತ್ಮಗಳನ್ನು ಭೇಟಿಯಾಗುತ್ತಾನೆ. ಅವರಿಗೆ ತತ್ವಜ್ಞಾನವನ್ನು ತಿಳಿಸುತ್ತಾನೆ. ಇದೇ ರೀತಿ ಪರಮಾತ್ಮ ಸಂತ ಗರೀಬ್‌ದಾಸರಿಗೆ ಇವರು 1727ನೇ ಇಸವಿಯಲ್ಲಿ ಸಿಕ್ಕಿದ್ದರು. ಅವರು ಒಬ್ಬ ಜೀವಂತ ಮಹಾತ್ಮರ ವೇಷದಲ್ಲಿದ್ದರು. ಪರಮಾತ್ಮ ಗರೀಬ್‌ದಾಸರ ಆತ್ಮವನ್ನು ಸನಾತನ ಪರಮಧಾಮಕ್ಕೆ ಕರೆದೊಯ್ದರು. ಮೇಲಿನಿಂದ ಎಲ್ಲಾ ಬ್ರಹ್ಮಾಂಡಗಳ ಮತ್ತು ಪ್ರಭುಗಳ ಸ್ಥಿತಿಯನ್ನು ತಿಳಿಸಿ ತತ್ವಜ್ಞಾನದ ಪರಿಚಯ ಮಾಡಿಸಿ, ಮತ್ತೆ ಶರೀರದೊಳಗೆ ತಂದು ಬಿಟ್ಟರು. ಆಗ ಸಂತ ಗರೀಬ್‌ದಾಸರ ವಯಸ್ಸು 10 ವರ್ಷವಾಗಿತ್ತು. ಆಗ ಗರೀಬ್‌ದಾಸನು ಸತ್ತಿದ್ದಾನೆಂದು ತಿಳಿದು ಅವರ ಮನೆಯವರು ಅವನನ್ನು

ಚಿತೆಯ ಮೇಲಿಟ್ಟು ಸುಡುವ ಸಿದ್ಧತೆ ನಡೆಸಿದ್ದರು. ಅದೇ ಸಮಯದಲ್ಲಿ ಅವರ ಆತ್ಮವನ್ನು ಅವರ ಶರೀರಕ್ಕೆ ಪ್ರವೇಶಿಸುವಂತೆ ಮಾಡಲಾಯಿತು. ಅವರು ಬದುಕಿದಾಕ್ಷಣ ಎಲ್ಲರ ಸಂತೋಷಕ್ಕೆ ಪಾರವೇ ಇರಲಿಲ್ಲ. ಆ ನಂತರ ಸಂತ ಗರೀಬ್‌ದಾಸರು ಒಂದು ಅಮೂಲ್ಯವಾದ ಗ್ರಂಥವನ್ನು ರಚಿಸಿದರು. ಅವರು ತಮ್ಮ ಕಣ್ಣುಗಳಿಂದ ನೋಡಿದ ಹಾಗೂ ಸ್ವತಃ ಪರಮಾತ್ಮನ ಮೂಲಕ ಹೇಳಲ್ಪಟ್ಟ ಜ್ಞಾನವನ್ನು ತಿಳಿಸಿದರು. ಗೋಪಾಲದಾಸ ಎಂಬ ದಾದೂ ಪಂಥದ ಸಾಧುವು ಇದನ್ನು ಬರೆದರು. ಇದು ಈಗ ಪ್ರಿಂಟಾಗಿದೆ.

❖ ಪಂಜಾಬಿನ ಲೂಧಿಯಾನ ಎಂಬ ನಗರದ ಬಳಿ ವಾಸಿಯರ್ ಎಂಬ ಹಳ್ಳಿ ಇದೆ. ಅಲ್ಲಿ ಒಬ್ಬ ಪ್ರಭು ಪ್ರೇಮಿಯಾದ ವ್ಯಕ್ತಿ ಇದ್ದನು. ಅವನು ಸಂತ ಗರೀಬ್‌ದಾಸರ ಮಹಿಮೆಯನ್ನು ಕೇಳಿ, ಅವರ ದರ್ಶನ ಪಡೆಯಲು ಛುಡಾನಿಗೆ ಬಂದನು. ಸಂತ ಗರೀಬ್‌ದಾಸರು ಈ ದಾಸ (ರಾಮ್‌ಪಾಲ್ ದಾಸ)ನಿಗೆ ಹೇಳಿದ ಜ್ಞಾನವನ್ನು ತಿಳಿಸಿದರು. ಅದನ್ನೇ ನಿಮಗೆ ಈ ಪುಸ್ತಕ ಮತ್ತು ಅನ್ಯ ಪುಸ್ತಕಗಳ ಮೂಲಕ ತಿಳಿಸಲಾಗುತ್ತಿದೆ.

ಆ ವ್ಯಕ್ತಿಯ ಹೆಸರು ರಾಮರಾಯ್. ಅವನು ಹೀಗೆಂದು ಪ್ರಶ್ನಿಸಿದನು, **"ಹೇ ಮಾಹಾತ್ಮ! ಈ** ಜ್ಞಾನವನ್ನು ಇಲ್ಲಿಯವರೆಗೆ ಯಾರೂ ತಿಳಿಸಿಲ್ಲ". ಆಗ ಸಂತ ಗರೀಬ್‌ದಾಸರು ವಾಣಿಯ ಮೂಲಕ ತಿಳಿಸಿದರು.

ಕೋಟ್ಯೋ ಮಧ್ಯೆ ಕೋಯೀ ನಹೀ ರಾಈ ಝಾಮ್ ಕರಾ,
ಅರಬೋಂ ಮೇ ಕೋಯೀ ಗರಕ್ ಸುನೋ ರಾಯೀ ಝಾಮ್‌ಕರಾ ॥

ಅನುವಾದ ಮತ್ತು ಭಾವಾರ್ಥ:– ಈ ಜ್ಞಾನವು ಕೋಟಿ–ಕೋಟಿ ಜನರಲ್ಲಿ ಯಾರ ಬಳಿಯೂ ಇಲ್ಲ. ಬಿಲಿಯನ್‌ಗಳಲ್ಲಿ ಯಾರೋ ಒಬ್ಬರ ಬಳಿ ಇರುವುದು. ಆ ಸಂತನು ಸರ್ವಜ್ಞಾನ ಸಂಪನ್ನನಾಗಿರುತ್ತಾನೆ. ಅವನು ಸಂಪೂರ್ಣ ಸಾಧನೆಯ ಮಂತ್ರಗಳಿಂದ ಅರ್ಥಾತ್ ಪರಿಪೂರ್ಣನಾಗಿರುತ್ತಾನೆ.

ಪ್ರಿಯ ಓದುಗರೇ, ಈ ಸಂತನು ಈಗ ಹಿಸಾರ್ ಜಿಲ್ಲೆಯ ಬರವಾಲಾದಲ್ಲಿದ್ದಾನೆ. ಜ್ಞಾನ ಪಡೆದು ಪ್ರಯೋಜನ ಪಡೆಯಿರಿ.

ಪ್ರಶ್ನೆ:– ಪ್ರಾಚೀನ ಕಾಲದಿಂದ ನಡೆದು ಬಂದಿರುವ ಭಕ್ತಿಯ ಸಾಧನೆಯನ್ನು ನೀವು ತಪ್ಪೆಂದು ಹೇಗೆ ಹೇಳುವಿರಿ? ಹೇಗೆ ಎಲ್ಲಾ ಋಷಿಗಳು ತಪಸ್ಸನ್ನು ಮಾಡುತ್ತಿದ್ದರೋ, ನಾವು ಸರ್ವ ಹಿಂದೂ ಸಮಾಜದಲ್ಲಿ ನೋಡುತ್ತಿದ್ದೇವೆ. ಹರೇ ಕೃಷ್ಣ, ಹರೇ ರಾಮ್, ರಾಧೆ–ರಾಧೆ ಶ್ಯಾಮ್ ಇವೆಲ್ಲವನ್ನೂ ಸೇರಿಸಿದರೆ ಓಂ ನಮಃ ಶಿವಾಯ, ಓಂ ನಮೋ ಭಗವತೇ ವಾಸುದೇವಾಯ, ಜಯ್ ಸೀತಾರಾಮ್, ರಾಧೇ ಶ್ಯಾಮ್, ಓಂ ತತ್ ಸತ್, ಮುಂತಾದವುಗಳಲ್ಲಿ ಒಂದು ಮಂತ್ರವನ್ನು ಜಪಿಸುತ್ತಾ ಬರುತ್ತಿದ್ದಾರೆ. ಇಂದಿಗೂ ಅದನ್ನೇ ಮಾಡುತ್ತಿದ್ದಾರೆ. ರಾಮನನ್ನು, ಕೃಷ್ಣನನ್ನು ಪರಮಾತ್ಮನೆಂದು ನಾವು ಭಾವಿಸಿರುವುದರಿಂದ ಅವರ ನಾಮಜಪ ಮಾಡುತ್ತಿದ್ದೇವೆ. ನೀವು ಈ ನಾಮಜಪಮಂತ್ರವು ವ್ಯರ್ಥಜಪ ಎಂದು ಹೇಳುತ್ತಿರುವಿರಿ. ಅದು ಹೇಗೆ?

ಉತ್ತರ:– ಪ್ರಾಚೀನ ಕಾಲದಲ್ಲಿ ಇದು ಸಾಧನೆಯಾಗಿದ್ದಿದ್ದರೆ ಹಾಗೂ ಇವು ಮಂತ್ರವಾಗಿದ್ದಿದ್ದರೆ ಭಗವದ್ಗೀತೆಯ 4ನೇ ಅಧ್ಯಾಯದ 1–2 ಶ್ಲೋಕದಲ್ಲಿ ಕೃಷ್ಣನು ಹೀಗೆ ಹೇಳುತ್ತಿರಲಿಲ್ಲ.– "ಯಾವ ಭಕ್ತಿ ವಿಧಾನವನ್ನು ನಾನು ಹೇಳುತ್ತಿರುವೆನೋ ಅದು ಈಗ ಲುಪ್ತವಾಗಿ ಹೋಗಿದೆ ಮತ್ತು ನಾಶವಾಗಿದೆ. ಈ ಭಕ್ತಿ ಮತ್ತು ಜ್ಞಾನವನ್ನು ನಾನು ಸೂರ್ಯದೇವನಿಗೆ ಹೇಳಿದ್ದೆ, ಸೂರ್ಯನು ಮನುವಿಗೆ ಹಾಗೂ ಮನುವು ತನ್ನ ಮಗನಾದ ಇಕ್ವಾಕುವಿಗೆ ಹೇಳಿದನು. ನಂತರ ಕೆಲವು ರಾಜಋಷಿಗಳು ತಿಳಿದುಕೊಂಡರು.

ದ್ವಾಪರಯುಗದ ಬಹಳ ಮೊದಲೇ ಇದು ನಾಶವಾಗಿತ್ತು. ಮನು ಮತ್ತು ಇಕ್ಷ್ವಾಕು ಮುಂತಾದವರು ಸತ್ಯಯುಗದ ಪ್ರಥಮ ಚರಣದಲ್ಲಿ ಬಂದಿದ್ದರು. ನೀವು ದಶರಥನ ಪುತ್ರ ರಾಮಚಂದ್ರನನ್ನು ಹಾಗೂ ವಾಸುದೇವನ ಪುತ್ರ ಶ್ರೀ ಕೃಷ್ಣನನ್ನು ಪರಮಾತ್ಮನೆಂದು ತಿಳಿದಿರುವಿರಿ. ಆದ್ದರಿಂದ ಅವರ ಹೆಸರುಗಳಾದ ಹರೇರಾಮ, ಹರೇಕೃಷ್ಣ ಮುಂತಾದವುಗಳನ್ನು ಜಪ ಮಾಡುವಿರಿ ಹಾಗೂ ಅದನ್ನೇ ಮೋಕ್ಷವೆಂದು ತಿಳಿದಿರುವಿರಿ. ಇದು ಭಗವದ್ಗೀತೆಯಲ್ಲಿ ವರ್ಣಿಸಿರುವ ಯಥಾರ್ಥ ಪ್ರಾಚೀನ ಯೋಗ ಅಂದರೆ ಭಕ್ತಿಯ ವಿಧಾನಕ್ಕೆ ವಿರುದ್ಧವಾದದ್ದು. ಆದ್ದರಿಂದ ಇದು ವ್ಯರ್ಥ. ಇಲ್ಲಿ ಶಾಸ್ತ್ರ ವಿಧಾನವಿಲ್ಲದೆ ಮನಸ್ಸಿಗೆ ಬಂದ ಹಾಗೆ ಆಚರಣೆಯಾಗುತ್ತಿದೆ. ಈ ಕಾರಣದಿಂದ ಮೇಲೆ ಕೇಳಿರುವ ಪ್ರಶ್ನೆಯಲ್ಲಿ ಬರೆದಿರುವ ಎಲ್ಲಾ ಮಂತ್ರಗಳೂ ಸಹ ಶಾಸ್ತ್ರದಿಂದ ಪ್ರಾಮಾಣಿಸಲ್ಪಟ್ಟಿಲ್ಲ. ಆದ್ದರಿಂದ ಇವೆಲ್ಲಾ ವ್ಯರ್ಥ. ಗೀತೆಯ **16ನೇ ಅಧ್ಯಾಯದ 23–24ನೇ ಶ್ಲೋಕದಲ್ಲಿ** ಹೇಳಿರುವುದೇನೆಂದರೆ, ಯಾವ ಪುರುಷನು ಶಾಸ್ತ್ರವಿಧಾನವನ್ನು ತ್ಯಜಿಸಿ ಮನಸ್ಸಿಗೆ ಬಂದ ಹಾಗೆ ಆಚರಣೆ ಮಾಡುತ್ತಾನೋ, ಅವನಿಗೆ ಯಾವುದೇ ಸುಖ ಪ್ರಾಪ್ತಿಯಾಗುವುದಿಲ್ಲ. ಅವನಿಗೆ ಸಿದ್ಧಿಯೂ ಪ್ರಾಪ್ತಿಯಾಗುವುದಿಲ್ಲ, ಮೋಕ್ಷವೂ ದೊರಕುವುದಿಲ್ಲ. ಅವನ ಸಾಧನೆಯು ವ್ಯರ್ಥವಾದುದು. (ಗೀತೆಯ **16ನೇ ಅಧ್ಯಾಯದ 23ನೇ ಶ್ಲೋಕ**).

ಗೀತೆಯ **16ನೇ ಅಧ್ಯಾಯದ 24ನೇ ಶ್ಲೋಕದಲ್ಲಿ** ಹೇಳಿರುವುದೇನೆಂದರೆ, "ಇದರಿಂದ ನಿನಗೆ ಕರ್ತವ್ಯ ಮತ್ತು ಅಕರ್ತವ್ಯದ ವ್ಯವಸ್ಥೆಯಲ್ಲಿ ಶಾಸ್ತ್ರವೇ ಪ್ರಮಾಣವಾದದ್ದು". ಇದರ ಅರ್ಥವೇನೆಂದರೆ ಯಾವ ಭಕ್ತಿಯ ವಿಧಾನವು ಪ್ರಾಮಾಣಿಕ ಶಾಸ್ತ್ರಗಳಲ್ಲಿ ವರ್ಣಿಸಲ್ಪಟ್ಟಿಲ್ಲವೋ ಅದು ಶಾಸ್ತ್ರವಿರುದ್ಧವಾದ ಸಾಧನೆಯಾಗಿದೆ. ಆದ್ದರಿಂದ ಭಕ್ತಿಯ ಯಾವ ವಿಧಾನಗಳನ್ನು ಆಚರಿಸಬೇಕು, ಯಾವ ವಿಧಾನಗಳನ್ನು ಆಚರಿಸಬಾರದು ಎನ್ನುವುದಕ್ಕೆ ಶಾಸ್ತ್ರಗಳನ್ನೇ ಆಧಾರವಾಗಿಟ್ಟುಕೊಳ್ಳಬೇಕು. ಆದ್ದರಿಂದ ಶಾಸ್ತ್ರಗಳಲ್ಲಿ ವರ್ಣಿಸಲಾದ ಭಕ್ತಿಯ ವಿಧಾನವನ್ನು ನಿಮ್ಮದಾಗಿಸಿಕೊಳ್ಳಿ ಮತ್ತು ಉಳಿದೆಲ್ಲವನ್ನೂ ತ್ಯಜಿಸಿ.

❖ ರಾಮನ ಜನ್ಮವು ತ್ರೇತಾಯುಗದ ಅಂತಿಮ ಚರಣದಲ್ಲಿ ಆಗಿತ್ತು. ಶ್ರೀ ಕೃಷ್ಣನ ಜನ್ಮವು ದ್ವಾಪರಯುಗದ ಅಂತಿಮ ಚರಣದಲ್ಲಾಗಿತ್ತು. ಸತ್ಯಯುಗದಿಂದಲೇ ಮಾನವನು ಭಕ್ತಿಯಿಂದ ಇರುತ್ತಿದ್ದಾನೆ. ಆ ಸಮಯದಲ್ಲಿ ಯಾವ ರಾಮನಿದ್ದನು? ಯಾವ ಕೃಷ್ಣನು ಸತ್ಯಯುಗಕ್ಕೆ ಮೊದಲೇ ಇದ್ದನು ಎಂದು ನೀವು ತಿಳಿಸಿ. ವಿಷ್ಣುವು ಸತ್ಯಯುಗಕ್ಕೆ ಮೊದಲೇ ಇದ್ದವನು, ಶ್ರೀ ರಾಮ, ಕೃಷ್ಣರು ವಿಷ್ಣುವೇ ಆಗಿದ್ದಾರೆ ಎಂದು ನೀವು ಹೇಳಬಹುದು. ಸತ್ಯಯುಗದಲ್ಲೂ ಒಂದು ಸಾಕ್ಷಿ ಇದೆ. ಮಹರ್ಷಿ ವಾಲ್ಮೀಕಿಗಳು ರಾಮನಾಮವನ್ನು ಜಪಿಸುತ್ತಿದ್ದರು. ಅವರು ವಿಷ್ಣುವೆಂದು ಜಪಿಸುತ್ತಿರಲಿಲ್ಲ. ಇದರಿಂದ ತಿಳಿಯುವುದೇನೆಂದರೆ ವಿಷ್ಣು ಕೃಷ್ಣರಿಗಿಂತ ಭಿನ್ನವಾದ ಒಬ್ಬ ರಾಮ ಇದ್ದನೆಂದು ಗೀತೆಯ **7ನೇ ಅಧ್ಯಾಯದ 29ನೇ ಶ್ಲೋಕದಲ್ಲಿ** ಹೇಳಿರುವಂತೆ ಆ ರಾಮನ ಜಪ ಮಾಡಬೇಕು. "ತತ್ ಬ್ರಹ್ಮ"ವನ್ನು ತಿಳಿದವರು ಕೇವಲ ವೃದ್ಧಾಪ್ಯ ಮತ್ತು ಮೃತ್ಯುವಿನಿಂದ ಬಿಡುಗಡೆ ಹೊಂದಲು ಭಕ್ತಿಯಿಂದ ಇರುತ್ತಾರೆ. ಅರ್ಜುನನು ಗೀತೆಯಲ್ಲಿ 'ತತ್ ಬ್ರಹ್ಮ' ಎಂದರೆ ಏನು ಎಂದು ಪ್ರಶ್ನಿಸಿದ್ದಾನೆ. ಗೀತೆಯನ್ನು ಹೇಳಿರುವವನು ಗೀತೆಯ **8ನೇ ಅಧ್ಯಾಯದ 3ನೇ ಶ್ಲೋಕದಲ್ಲಿ** ಉತ್ತರ ಕೊಟ್ಟಿದ್ದಾನೆ. "ಅದು ಪರಮ ಅಕ್ಷರ ಬ್ರಹ್ಮ". ಹಾಗೂ ತನ್ನನ್ನು ಆರಾಧಿಸುವಂತೆ ತಿಳಿಸಿದ್ದಾನೆ.

ಓಂ ಇತಿ ಏಕಾಕ್ಷರಮ್ ಬ್ರಹ್ಮ ವ್ಯವಹಾರನ್ ಮಾಮ್ ಅನುಸ್ಮರನ್.......

ಗೀತೆಯ **8ನೇ ಅಧ್ಯಾಯದ 8, 9, 10ನೇ ಶ್ಲೋಕದಲ್ಲಿ** ಗೀತೆಯ ಜ್ಞಾನದಾತನು ತನಗಿಂತ ಭಿನ್ನವಾದ ಅನ್ಯ 'ತತ್ ಬ್ರಹ್ಮ' ಅರ್ಥಾತ್ ಪರಮ ಅಕ್ಷರ ಬ್ರಹ್ಮನನ್ನು ಆರಾಧಿಸುವಂತೆ ಹೇಳಿದ್ದಾನೆ. ಅವನ ಭಕ್ತಿಯ ನಾಮ ಜಪ ಮಂತ್ರವು ಗೀತೆಯ **17ನೇ ಅಧ್ಯಾಯದ 23ನೇ ಶ್ಲೋಕದಲ್ಲಿ** ಹೇಳಲಾಗಿದೆ.

ಓಂ ತತ್ ಸತ್ ಇತಿ ನಿರ್ದೇಶಃ ಬ್ರಹ್ಮಣಃ ತ್ರಿವಿಧಃ ಸ್ಮರತಃ ।
ಬ್ರಾಹ್ಮಣಾಃ ತೇನ ವೇದಾಃ ಚ ಯಜ್ಞಾಃ ಚ ವಿಹಿತಾಃ ಮರಾ ॥

ಸರಳಾರ್ಥ:– ಬ್ರಹ್ಮಣಃ= ಸಚ್ಚಿದಾನಂದ ಘನಬ್ರಹ್ಮ ಅಂದರೆ ಪರಮ ಅಕ್ಷರ ಬ್ರಹ್ಮನ ಭಕ್ತಿಯ ಓಂ, ತತ್, ಸತ್ ಮಂತ್ರದ ಸ್ಮರಣೆಯ (ನಿರ್ದೇಶಃ) ಆದೇಶವಿದೆ. ಯಾವ (ತ್ರಿವಿಧಃ) ಮೂರು ಪ್ರಕಾರಗಳಿಂದ (ಸ್ಮೃತಃ) ಸ್ಮರಣೆಗಾಗಿ ಹೇಳಿದೆ (ಬ್ರಾಹ್ಮಣಾಃ) ವಿದ್ವಾಂಸರು ಅಂದರೆ ತತ್ವದರ್ಶಿ ಸಂತರು (ತೇನ) ಆ (ವೇದಾಃ) ಜ್ಞಾನದ ಆಧಾರದ ಮೇಲೆ ಭಕ್ತಿ ಮಾಡುತ್ತಿದ್ದರು (ಚ) ಮತ್ತು (ಯಜ್ಞಾಃ) ಧಾರ್ಮಿಕ ಯಜ್ಞಗಳ ಅನುಷ್ಠಾನ (ಚ) ಮತ್ತು ಅನ್ಯ ಭಕ್ತಿ ಕರ್ಮ (ಪುರಾ) ಸೃಷ್ಟಿಯ ಮುಂತಾದ ಅಂದರೆ ಸೃಷ್ಟಿಯ ಪ್ರಾರಂಭದಲ್ಲಿ (ವಿಹಿತಾ) ಮಾಡಲಾಗುತ್ತಿತ್ತು.

❖ ಶ್ರೀಮದ್ ಭಗವದ್ಗೀತೆಯಿಂದ ಪ್ರಮಾಣಿತಗೊಳ್ಳುವುದೇನೆಂದರೆ ಗೀತೆಯ ಜ್ಞಾನವನ್ನು ನೀಡುವವನಿಗಿಂತ ಬೇರೆ ಯಾರೋ ಪೂರ್ಣ ಪರಮಾತ್ಮನಿದ್ದಾನೆ. ಅವನು ಶ್ರೀ ವಿಷ್ಣು, ಶ್ರೀ ಬ್ರಹ್ಮಾ ಮತ್ತು ಶ್ರೀ ಶಿವನಿಗಿಂತ ಭಿನ್ನವಾಗಿದ್ದಾನೆ. ಅವನ ವಿಷಯದಲ್ಲಿ ಗೀತೆಯ 15ನೇ ಅಧ್ಯಾಯದ 1, 4, 17ನೇ ಶ್ಲೋಕದಲ್ಲಿ ಮತ್ತು ಗೀತೆಯ 18ನೇ ಅಧ್ಯಾಯದ 62ರಲ್ಲಿ ಹಾಗೂ ಅನೇಕ ಕಡೆ ಗೀತೆಯಲ್ಲಿ ಹೇಳಲಾಗಿದೆ. ಅವನು ಪೂರ್ಣ ಪರಮಾತ್ಮನು, ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಇಬ್ಬರು ಪುರುಷರನ್ನು ಹೇಳಲಾಗಿದೆ. ಇಬ್ಬರೂ ನಾಶವಾಗುವವರು ಎಂದು ಹೇಳಲಾಗಿದೆ. ಅವರಲ್ಲಿ ಎಷ್ಟೇ ಪ್ರಾಣಿಗಳಿದ್ದರೂ ಅವರೆಲ್ಲರೂ ನಾಶವಾಗುವವರು. 1) ಕ್ಷರ ಪುರುಷ, ಅವನು ಕೇವಲ ಇಪ್ಪತ್ತೊಂದು ಬ್ರಹ್ಮಾಂಡಗಳ ಒಡೆಯ 2) ಅಕ್ಷರ ಪುರುಷ ಇವನು 7 ಶಂಖ ಬ್ರಹ್ಮಾಂಡಗಳ ಒಡೆಯ. ಇವರಿಬ್ಬರೂ ಪೂರ್ಣ ಪರಮಾತ್ಮರಲ್ಲ (ಗೀತೆಯ 15ನೇ ಅಧ್ಯಾಯದ 16ನೆಯ ಶ್ಲೋಕ).

❖ ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಉತ್ತಮಃ ಪುರುಷಃ ತೂಃ ಅನ್ಯಃ ಅರ್ಥಾತ್ ಉತ್ತಮ ಪುರುಷನು ಅಂದರೆ ಪುರುಷೋತ್ತಮನು. ಮೇಲೆ ವರ್ಣಿಸಲಾದ ಇಬ್ಬರು ಪುರುಷರಿಗಿಂತ ಭಿನ್ನನಾದವನು (ಕ್ಷರಪುರುಷ ಮತ್ತು ಅಕ್ಷರಪುರುಷ) ಅವನನ್ನು ಪರಮಾತ್ಮ ಎಂದು ಕರೆಯಲಾಗಿದೆ. (ಯಃ ಲೋಕತ್ರಯಮ್) ಯಾರು ಮೂರೂ ಲೋಕಗಳಲ್ಲಿ (ಅವಿಶ್ಯ ವಿಭರ್ತಿ) ಪ್ರವೇಶಿಸಿ, ಪಾಲನೆ, ಪೋಷಣೆ ಮಾಡುವನೋ (ಅವ್ಯಯಃ ಈಶ್ವರಃ) ಅವನೇ ಅವಿನಾಶಿ ಪರಮೇಶ್ವರನು (ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕ) ಎಂದು ಹೇಳಲಾಗಿದೆ.

ಪೂರ್ಣ ಪರಮಾತ್ಮನು ಪರಮ ಅಕ್ಷರಬ್ರಹ್ಮ ಎಂಬುದು ಸಾಬೀತಾಯಿತು. ಅವನ ಭಕ್ತಿಯ ಮಂತ್ರ ಓಂ, ತತ್, ಸತ್ ಎಂಬುದು ಸಾಬೀತಾಯಿತು. ಓಂ, ತತ್, ಸತ್ ಈ ಮೂರೂ ಮಂತ್ರಗಳು ಮೇಲೆ ತಿಳಿಸಿದ ಮೂರೂ ಮಾಲೀಕರ (ಓಂ= ಕ್ಷರ ಪುರುಷ, ಅರ್ಥಾತ್ ಕ್ಷರ ಬ್ರಹ್ಮ–ಗೀತೆಯ ಜ್ಞಾನ ನೀಡಿದವನು. ತತ್= ಇದು ಸಾಂಕೇತಿಕ, ಈ ಪುಸ್ತಕದಲ್ಲಿ ಈ ಹಿಂದೆಯೇ ಇದರ ಬಗ್ಗೆ ವಿವರಿಸಲಾಗಿದೆ. ಅಲ್ಲಿ ಹೀಗೆ ಓದಿ–ಇದು ತತ್ ನಾಮ ಜಪ= ಅಕ್ಷರ ಪುರುಷನದ್ದು) ಸತ್= ಇದೂ ಸಹ ಸಾಂಕೇತಿಕವಾಗಿದೆ. ವಿಸ್ತಾರವಾಗಿ ಇದರ ಬಗ್ಗೆ ಓದಿರಿ. ಇದು ಸತ್ ಮಂತ್ರ–ಪರಮ ಅಕ್ಷರ ಬ್ರಹ್ಮನದ್ದು. ಭಗವದ್ಗೀತೆಯಲ್ಲಿ ಇದು ಪೂರ್ಣ ಮೋಕ್ಷ ಪ್ರಾಪ್ತಿಯ ಸಾಂಕೇತಿಕ ಮಂತ್ರವಾಗಿದೆ. ಇಲ್ಲಿಯವರೆಗೆ (2012ನೇ ಇಸವಿ) ಯಾರೂ ಇದನ್ನು ಸ್ಪಷ್ಟ ಪಡಿಸಿಲ್ಲ. ನೀವು 'ಹರಿ ಓಂ, ತತ್, ಸತ್' ಜಪ ಮಾಡುವಿರೋ, ಅದೂ ಸಹ ವ್ಯರ್ಥ. ಏಕೆಂದರೆ ನಿಮಗೆ ತತ್ ಮತ್ತು ಸತ್ ಎಂಬುದರ ವಾಸ್ತವಿಕ ಮಂತ್ರಗಳ ಜ್ಞಾನವಿಲ್ಲ.

ಉದಾಹರಣೆ:– ಒಬ್ಬ ಧನಿಕ ವ್ಯಕ್ತಿಯು ತನ್ನ ಧನವನ್ನೆಲ್ಲಾ ತನ್ನ ಮನೆಯಲ್ಲಿ ಗುಂಡಿ ತೋಡಿ ಮುಚ್ಚಿಟ್ಟಿದ್ದನು. ಆ ಜಾಗವು ಕೇವಲ ಅವನಿಗೆ ಮಾತ್ರ ತಿಳಿದಿತ್ತು. ಆ ಧನಿಕನು ಹಣವಿದ್ದ ಜಾಗವನ್ನು ಸಾಂಕೇತಿಕವಾಗಿ ಒಂದು ಕಾಗದದಲ್ಲಿ ಬರೆದಿಟ್ಟಿದ್ದನು. ಒಂದು ದಿನ ಆ ಧನಿಕನು ಅಕಾಲ ಮರಣವನ್ನಪ್ಪಿದನು. ತಂದೆಯ ಅಂತ್ಯಸಂಸ್ಕಾರ ಮಾಡಿದ ಪುತ್ರರು ಆ ಕಾಗದ ನೋಡಿದರು. ಹಣವೆಲ್ಲಿದೆ

ಎಂದು ಈ ಕಾಗದದಲ್ಲಿ ಬರೆದಿದೆ ಎಂದು ಅದರಲ್ಲಿ ಬರೆದಿತ್ತು.

ಧನಿಕನ ಮನೆಯ ಮುಂದೆ ಒಂದು ಅಂಗಳವಿತ್ತು. ಆ ಅಂಗಳದ ಒಂದು ಮೂಲೆಯಲ್ಲಿ ಒಂದು ಮಂದಿರವಿತ್ತು. ಹುಣ್ಣಿಮೆಯ ರಾತ್ರಿಯ 2 ಗಂಟೆಯಲ್ಲಿ ಇಡೀ ಹಣವನ್ನು ಮಂದಿರದ ಗೋಪುರದಲ್ಲಿ ಅಡಗಿಸಿಡಲಾಗಿದೆ ಎಂದು ಕಾಗದದಲ್ಲಿ ಬರೆದಿತ್ತು. ಆ ಧನಿಕನ ಪುತ್ರರು ಹುಣ್ಣಿಮೆಯ ಮಧ್ಯರಾತ್ರಿ 2 ಗಂಟೆಯಲ್ಲಿ ಮಂದಿರದ ಗೋಪುರವನ್ನು ಒಡೆದು ಹಾಕಿದರು. ಆದರೆ ಅಲ್ಲಿ ಯಾವ ಹಣವೂ ದೊರಕಲಿಲ್ಲ. ಮಕ್ಕಳಿಗೆ ಬಹಳ ದುಃಖವಾಯಿತು. ಒಂದು ದಿನ ಅವರ ತಂದೆಯ ಮಿತ್ರನೊಬ್ಬನು ಶೋಕ ವ್ಯಕ್ತಪಡಿಸಲು ಅವರ ಮನೆಗೆ ಬಂದನು. ಅವರ ಬಳಿ ಧನಿಕನ ಪುತ್ರರು ಶೋಕವನ್ನು ವ್ಯಕ್ತಪಡಿಸಿ, ಹಣದ ಬಗ್ಗೆ ತಿಳಿಸಿದರು. ಆ ಮಿತ್ರನು ಆ ಕಾಗದವನ್ನು ತರಿಸಿಕೊಂಡು ಓದಿದನು. ನಂತರ ಆ ದೇವಾಲಯದ ಗೋಪುರವನ್ನು ಹೇಗಿತ್ತೋ ಹಾಗೇ ಪುನರ್ ನಿರ್ಮಾಣ ಮಾಡಬೇಕೆಂದೂ, ಅವನು ಪುನಃ ಹುಣ್ಣಿಮೆಯ ರಾತ್ರಿ ಬರುವೆನೆಂದು ತಿಳಿಸುತ್ತಾ ಅಲ್ಲಿಂದ ಹೊರಟು ಹೋದನು. ಆ ಪುತ್ರರು ಮಂದಿರದ ಗೋಪುರವನ್ನು ಮತ್ತೆ ನಿರ್ಮಿಸಿದರು. ಆ ವ್ಯಕ್ತಿ ಹುಣ್ಣಿಮೆಯದಿನ ಬಂದನು. ರಾತ್ರಿಯ 2 ಗಂಟೆಯಲ್ಲಿ ಆ ಮಂದಿರದ ಗೋಪುರದ ನೆರಳು ಯಾವ ಕಡೆಗಿತ್ತೋ ಆ ಜಾಗದಲ್ಲಿ ಅಗೆಯಲಾಯಿತು. ಇಡೀ ಹಣದ ಗಂಟು ಅಲ್ಲಿ ಅವರಿಗೆ ಸಿಕ್ಕಿತು. ಮಕ್ಕಳೆಲ್ಲಾ ಸಂತೋಷಪಟ್ಟು ಎಲ್ಲರೂ ಧನಿಕರಾದರು.

ನೀವು ಹರಿ ಓಂ ತತ್ ಸತ್ ನಾಮ ಜಪ ಮಾಡುತ್ತಿರುವಿರಿ. ನೀವು ಮಂದಿರದ ಗೋಪುರವನ್ನು ಅಗೆಯುತ್ತಿರುವಿರಿ, ನಿಮಗೆ ಏನೂ ಸಿಗುವುದಿಲ್ಲ. ವಾಸ್ತವಿಕ ಮಂತ್ರವು ನನ್ನ (ಸಂತ ರಾಮ್‌ಪಾಲ್ ದಾಸನ) ಬಳಿ ಇದೆ. ಅದನ್ನು ಪಡೆದು ಭಕ್ತಿ ಎಂಬ ಧನದಿಂದ ಸುಖವನ್ನು ಪಡೆದುಕೊಳ್ಳಿ.

ಪ್ರಶ್ನೆ:– ರಾಧಾ ಉತ್ತರ ಪ್ರದೇಶದ ಬರಸಾನಾ ಎಂಬ ಹಳ್ಳಿಯ ಹತ್ತಿರ ಬೃಂದಾವನದ ಒಂದು ಪ್ರದೇಶದವಳಾಗಿದ್ದಳು. ಅಲ್ಲಿಯವರೆಲ್ಲಾ 'ರಾಧೆ ರಾಧೆ' ನಾಮ ಜಪಿಸುತ್ತಾರೆ. ಬೆಳಿಗ್ಗೆಯಾದರೆ ಅವರು ಒಬ್ಬರನ್ನೊಬ್ಬರು ರಾಮ್ ರಾಮ್ ಎನ್ನುವ ಬದಲು ರಾಧೆ ರಾಧೆ ಎನ್ನುತ್ತಿದ್ದರು. ಚಿಕ್ಕಪ್ಪನನ್ನು ಅವರ ಅಣ್ಣನ ಮಕ್ಕಳು 'ಚಿಕ್ಕಪ್ಪ ರಾಧೆ ರಾಧೆ' ಎಂದರೆ ಚಿಕ್ಕಪ್ಪನು ಅವರನ್ನು 'ಮಗನೆ, ರಾಧೆ ರಾಧೆ' ಎನ್ನುತ್ತಿದ್ದರು. ಅವರೇನು ಮೂರ್ಖರೇ?

ಉತ್ತರ:– ತತ್ವಜ್ಞಾನದ ಅಭಾವದಿಂದ ಲೋಕವೇದವನ್ನೇ ತತ್ವಜ್ಞಾನವೆಂದು ತಿಳಿದು ಶಾಸ್ತ್ರವಿರುದ್ಧವಾದ ಮಂತ್ರಗಳ ಜಪ ಪ್ರಚಲಿತವಾಗಿದೆ. ಶಾಸ್ತ್ರಗಳಲ್ಲಿ ಇಲ್ಲದಿರುವುದನ್ನು ಜಪಿಸಿದರೆ ಅವರಿಗೆ ಸುಖ ಪ್ರಾಪ್ತಿಯಾಗುವುದಿಲ್ಲ ಹಾಗೂ ಸಿದ್ಧಿ, ಮೋಕ್ಷ ಪ್ರಾಪ್ತಿಯಾಗುವುದಿಲ್ಲ ಎಂದು ಈ ಮೊದಲೇ ತಿಳಿಸಲಾಗಿದೆ. ಅದು ವ್ಯರ್ಥವಾದ ಸಾಧನೆ. ಇದನ್ನು ಮೊದಲೇ ತಿಳಿಸಿರುವೆ. ಈಗ ತಿಳಿಸುವುದೇನೆಂದರೆ, ಚಿಕ್ಕಪ್ಪ–ಅವನ ಅಣ್ಣನ ಮಗ ರಾಧೆ ರಾಧೆ ಎಂದು ಏಕೆ ಹೇಳುತ್ತಿದ್ದಾರೆ? ರಾಧೆ ಯಾರು ಎಂದು ಎಲ್ಲರಿಗೂ ಗೊತ್ತು. ಅವಳು ಶ್ರೀ ಕೃಷ್ಣನ ಪ್ರೇಯಸಿ. ಬರಸಾನ ಹಳ್ಳಿಯ ಜನರು ರಾಧೆಯನ್ನು ಕುಲಟೆ, ಚಾರಿತ್ರ್ಯಹೀನಳು, ನಾಚಿಕೆ ಇಲ್ಲದವಳು ಹಾಗೆ ಹೀಗೆ ಎಂದು ಬಯ್ಯುತ್ತಿದ್ದರು. 'ಬೇರೆ ಊರಿನ ನಂದ್ ಬಾಬಾ ಎನ್ನುವ ಮಗನನ್ನು ಅವಳು ಕದ್ದು ಮುಚ್ಚಿ ಭೇಟಿಯಾಗಲು ಹೋಗುತ್ತಾಳೆ, ಅವಳನ್ನು ಮನೆಗೆ ಸೇರಿಸಬಾರದು' ಎನ್ನುತ್ತಿದ್ದರು. ಹೆಣ್ಣುಮಕ್ಕಳ ಮೇಲೆ ಕೆಟ್ಟ ಪ್ರಭಾವ ಬೀರಬಹುದು ಎನ್ನುತ್ತಿದ್ದರು. ಆದರೆ ಅದೇ ಬರಸಾನ ಹಳ್ಳಿಯ ಜನರು ರಾಧೆಗಾಗಿ ಸ್ವತಃ (ಸ್ತ್ರೀ–ಪುರುಷರು, ಯುವತಿಯರು) ರಾಧೆ ರಾಧೆ ಎನ್ನುತ್ತಾರೆ. ಈಗ ರಾಧೆಯೂ ಇಲ್ಲ, ಕೃಷ್ಣನೂ ಇಲ್ಲ. ಆದರೆ ಅವರು ರಾಧೆ ರಾಧೆ ಶ್ಯಾಮ್ ಮಿಲಾ ದೇ ಎಂದು ರೋಗ ಬಂದವರಂತೆ ಅರಚುತ್ತಾರೆ. ಇದೇ ಸ್ಥಿತಿ ಬೇರೆ ಪ್ರಶ್ನೆಗಳದ್ದೂ ಆಗಿದೆ. ನೀವು ಈಗ ತಿಳಿದುಕೊಳ್ಳಿ. ಮೊದಲು ಕೇಳಿದ ಪ್ರಶ್ನೆಗಳೂ ಅಷ್ಟೇ. ಅವು ಶಾಸ್ತ್ರಬದ್ಧವಾಗಿಲ್ಲದಿದ್ದರೆ ಎಲ್ಲವೂ ವ್ಯರ್ಥ.

ಈಗ ಚಿಕ್ಕಪ್ಪನೂ ರಾಧೆ ರಾಧೆ ಎನ್ನುತ್ತಾನೆ, ಅಣ್ಣನ ಮಗನೂ ರಾಧೆ ರಾಧೆ ಎನ್ನುತ್ತಾನೆ, ಇದಕ್ಕೆ ನಾನು ಉತ್ತರಿಸುವೆ. ರಾಧೆಯು ಶ್ರೀ ಕೃಷ್ಣನ ಪ್ರೇಯಸಿ. ರುಕ್ಮಿಣಿಯನ್ನು ವಿವಾಹವಾಗಲು ಅವಳನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಹೊರಟಾಗ ಅವಳ ಅಣ್ಣನು ಹಿಂಬಾಲಿಸಿಕೊಂಡು ಬಂದಿದ್ದನೆಂದು ನಿಮಗೆ ಗೊತ್ತಿದೆ. ಶ್ರೀ ಕೃಷ್ಣನು ಮೊದಲು ಅವನಿಗೆ ಹೊಡೆದಿದ್ದನು. ನಂತರ ರಥಕ್ಕೆ ಕಟ್ಟಿ ಎಳೆದಾಡಿದ್ದನು. ರುಕ್ಮಿಣಿಯೂ ಶ್ರೀ ಕೃಷ್ಣನ ಪ್ರೇಯಸಿ. ಅವರಿಬ್ಬರ ಮಧ್ಯೆ ರುಕ್ಮಿಣಿಯ ಅಣ್ಣನು ಬಂದಿದ್ದನು. ರುಕ್ಮಿಣಿಯು ಶ್ರೀಕೃಷ್ಣನಲ್ಲಿ ವಿನಂತಿಸಿಕೊಂಡಿದ್ದರಿಂದ ಅವಳ ಅಣ್ಣನನ್ನು ಬಿಟ್ಟನು. ಶ್ರೀಕೃಷ್ಣನು ಈಗ ಇದ್ದಿದ್ದರೆ, ರಾಧೆ ಇದ್ದಿದ್ದರೆ ಬರಸಾನಾದ ಜನರು ರಾಧೆ, ರಾಧೆ ಎಂದಿದ್ದರೆ ಶ್ರೀ ಕೃಷ್ಣನು ಸುಮ್ಮನಿರುತ್ತಿದ್ದನೇ? ಎಂದಿಗೂ ಇಲ್ಲ. ಎಲ್ಲರನ್ನು ರಥಕ್ಕೆ ಕಟ್ಟಿ ಎಳೆದಾಡುತ್ತಿದ್ದನು. ಒಂದು ವೇಳೆ ನೀವು ಯಾರಾದರೂ ಒಬ್ಬ ಪ್ರೇಯಸಿಯ ಹೆಸರನ್ನು ಬಡಬಡಿಸಿದರೆ ಆ ಪ್ರೇಮಿಗೆ ಹೇಗಾಗಬೇಡ? ಯಾರಾದರೂ ಬಲಶಾಲಿಗಳಾದರೆ ಕೈ ಕಾಲು ಮುರಿಯುತ್ತಾರೆ. ದುರ್ಬಲರಾದರೆ ಸುಮ್ಮನೆ ಅಳುತ್ತಾರೆ. ಆದ್ದರಿಂದ ಈ ನಾಮಜಪವು ಶಾಸ್ತ್ರಬದ್ಧವಾಗಿಲ್ಲ. ಅವರ ಜಪವು ವ್ಯರ್ಥ. ಶಾಸ್ತ್ರಬದ್ಧವಾದ ಮಂತ್ರವು ನನ್ನ ಬಳಿ ಇದೆ. ಬನ್ನಿ ನಿಮ್ಮ ಉದ್ಧಾರ ಮಾಡಿಕೊಳ್ಳಿ.

ಪ್ರಶ್ನೆ:– ಪೂರ್ಣ ಗುರುವಿನ ಗುರುತೇನು ಎಂಬ ನೀವು ಕೇಳಿದ ಪ್ರಶ್ನೆಗೆ ಉತ್ತರವಾಗಿ ಒಂದು ಜಾಗದಲ್ಲಿ ಬರೆದಿದೆ. ಅದೇನೆಂದರೆ ಓಂ ನಾಮಜಪವು ಪ್ರಮಾಣಿತವಾಗಿದೆ ಎನ್ನಲಾಗಿದೆ. (ಕಾಲಬ್ರಹ್ಮನ ಪೂಜೆ ಮಾಡಬೇಕೋ ಬೇಡವೋ?) ಇದರ ಉತ್ತರದಲ್ಲಿ ಬಹಳಷ್ಟು ಋಷಿಗಳ ಪೂಜೆಯ ಶಾಸ್ತ್ರವಿಧಿಗಳನ್ನು ಬಿಟ್ಟು ಇಷ್ಟಬಂದ ಹಾಗೆ ಆಚರಣೆ ಮಾಡುವುದು. ಅದು ಓಂ ನಾಮ ಜಪ ಮಾಡುವವರದ್ದೇ ಆಗಿದೆ.

ಉತ್ತರ :– ಆ ಋಷಿಗಳು ಓಂ ನಾಮ ಜಪದ ಜೊತೆ ಘೋರ ತಪಸ್ಸನ್ನು ಮಾಡುತ್ತಿದ್ದರು. ಓಂ ನಾಮ ಜಪವು ಶಾಸ್ತ್ರದಿಂದ ಪ್ರಮಾಣಿತವಾಗಿದೆ. ಆದರೆ ಮೋಕ್ಷದಾಯಕವಲ್ಲ. ಇದರಿಂದ ಅನುತ್ತಮ ಮೋಕ್ಷ ಲಭಿಸುವುದು. ಆದ್ದರಿಂದ ಆ ಋಷಿಗಳ ಪೂಜೆಯು ಶಾಸ್ತ್ರಕ್ಕೆ ವಿರುದ್ಧವಾದದ್ದು, ವೇದ ಮತ್ತು ಗೀತೆಯಲ್ಲಿ ಆ ಪೂರ್ಣ ಪರಮಾತ್ಮನನ್ನು ಪೂಜಿಸಲು ಹೇಳಲಾಗಿದೆ. ಅದನ್ನು ಬಿಟ್ಟು ಇಷ್ಟ ಬಂದ ಹಾಗೆ ಪೂಜೆ ಮಾಡಿದರೆ ಅದು ಶಾಸ್ತ್ರಕ್ಕೆ ವಿರುದ್ಧವಾಗಿರುತ್ತದೆ.

ಪ್ರಶ್ನೆ :– ಮಹರ್ಷಿ ವಾಲ್ಮೀಕಿ ಸತ್ಯಯುಗದಲ್ಲಿ ಹುಟ್ಟಿದ್ದರು. ಅವರೂ ರಾಮ ನಾಮ ಜಪಿಸುತ್ತಿದ್ದರು. ಇದೂ ಶಾಸ್ತ್ರಬದ್ಧವಾಗಿಲ್ಲವೇ?

ಉತ್ತರ :– ಗೀತೆಯ 4ನೇ ಅಧ್ಯಾಯದ 1–2 ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಗೀತೆಯ ಜ್ಞಾನ ನೀಡಿದವನಾದ, ನಾನು ಈ ಜ್ಞಾನವನ್ನು ಸೂರ್ಯನಿಗೆ ತಿಳಿಸಿದ್ದೇನೆ ಎಂದು ಹೇಳಿದ್ದಾನೆ. ಅವನು ತನ್ನ ಮಗನಾದ ಮನುವಿಗೆ ಹೇಳಿದ್ದನು. ನಂತರ ಕೆಲವು ರಾಜಋಷಿಗಳಿಗೆ ಪ್ರಾಪ್ತವಾಯಿತು. ಸತ್ಯಯುಗದ ಪ್ರಾರಂಭದಲ್ಲೇ ಈ ಸೂರ್ಯ, ಮನು, ರಾಜರ್ಷಿಗಳು ಇದ್ದರು. ನಂತರ ಈ ಜ್ಞಾನವು ನಾಶವಾಗಿತ್ತು. ಮಹರ್ಷಿ ವಾಲ್ಮೀಕಿಗೆ ಸಪ್ತಋಷಿಗಳು ಸಿಕ್ಕರು. ಅವರು ತಪಸ್ಸನ್ನು ಮಾಡಿ ಸಿದ್ಧಿಯನ್ನು ಪಡೆದಿದ್ದರು. ಅದೇ ಹಠಯೋಗದ ತಪಸ್ಸನ್ನು ಮಹರ್ಷಿ ವಾಲ್ಮೀಕಿಗೆ ಅವರು ತಿಳಿಸಿದರು. ಆ ಹಠಯೋಗ ತಪಸ್ಸನ್ನು ಮಹರ್ಷಿ ವಾಲ್ಮೀಕಿಗಳು ತನು ಮನದಿಂದ, ಶ್ರದ್ಧೆಯಿಂದ ಆಚರಿಸಿದರು. ಸ್ವಲ್ಪ ಸಮಯದ ನಂತರ ಅವರ ಶರೀರದ ಮೇಲಿನ ಭಾಗ ಅಂದರೆ ತಲೆಯಿಂದ ಧ್ವನಿ ಕೇಳಿ ಬಂದಿತು. ಅದು ರಾಮ್–ರಾಮ್ ಎನ್ನುವುದಾಗಿತ್ತು. ಆ ಶಬ್ದದ ಉಚ್ಚಾರಣೆಯನ್ನೇ ವಾಲ್ಮೀಕಿಗಳು ತಪಸ್ಸಿಗಾಗಿ ಬಳಸಿದರು. ಕೇಳುವವರಿಗೆ ಮರ ಮರ ಎಂದು ಹೇಳುತ್ತಿದ್ದಾರೆ ಅನ್ನಿಸುತ್ತಿತ್ತು. ವಾಸ್ತವವಾಗಿ ಅವರು ರಾಮ ರಾಮ ಎಂದು ಉಚ್ಚರಿಸುತ್ತಿದ್ದರು. ಅವರ ತಪಸ್ಸಿಗೆ ಫಲ ಸಿಕ್ಕಿತು. ಸಿದ್ಧಿಯೂ ಪ್ರಾಪ್ತವಾಯಿತು. ಅವರಿಗೆ ದಿವ್ಯದೃಷ್ಟಿ ಪ್ರಾಪ್ತವಾಯಿತು. ಆ ಕಾರಣದಿಂದಲೇ ಅವರು ರಾಮಚಂದ್ರನ

ಜನ್ಮವಾಗುವ ಸಾವಿರಾರು ವರ್ಷಗಳ ಮೊದಲೇ ರಾಮಾಯಣ ಅಂದರೆ ರಾಮನ ಜೀವನದ ಎಲ್ಲಾ ಘಟನೆಗಳನ್ನು ಬರೆದಿದ್ದರು. ಗ್ರಂಥದ ಹೆಸರು ವಾಲ್ಮೀಕಿ ರಾಮಾಯಣ. ಇದನ್ನು ಸಂಸ್ಕೃತ ಭಾಷೆಯಲ್ಲಿ ಬರೆಯಲಾಗಿತ್ತು. ರಾಮನಾಮದ ಜಪದಿಂದ ಹೆಚ್ಚೇನೂ ಪ್ರಯೋಜನವಾಗುವುದಿಲ್ಲ. ಆದರೆ 'ಪರಮಾನಂದ' – ಈ ಶಬ್ದವನ್ನು ಉಚ್ಚರಿಸುವುದರಿಂದ ಪರಮಾತ್ಮನನ್ನು ಮರೆಯಲಾಗುವುದಿಲ್ಲ. ಆದ್ದರಿಂದ ರಾಮನಾಮದ ಉಚ್ಚಾರಣೆ ಹಿಂದೂ ಧರ್ಮದಲ್ಲಿ ಪ್ರಾಚೀನ ಕಾಲದಿಂದಲೂ ಇದೆ. ಸ್ವಾಮಿ ರಾಮಾನಂದರು ರಾಮನಾಮದಿಂದ ಸಂಭೋದಿಸುತ್ತಿದ್ದರು. ಅವರ ಶಿಷ್ಯರೂ ಇದನ್ನೇ ಮಾಡುತ್ತಿದ್ದರು. ಆದರೆ ಮಂತ್ರ ಜಪವು ಓಂ ಆಗಿತ್ತು. ಆದರೆ ಕಬೀರ ಪರಮೇಶ್ವರರ ಮಂತ್ರಜಪವೇ ಬೇರೆ. ಆ ಜಪದಿಂದ ಭಗವಂತನ ಬಳಿಗೆ ಹೋಗಬಹುದಾಗಿದೆ. ಸೂಕ್ಷ್ಮವೇದದಲ್ಲಿ ಹೇಳಿದೆ:–

ಸತಗುರು ಮಿಲೆ ತೊ ಇಚ್ಛಾ ಮೇಟ್ಯೆ, ಪದ್ ಮಿಲ್ ಪದ್ಯೆ ಸಮಾನಾ ।
ಚಲ್ ಹಂಸಾ ಉಸ್ ಲೋಕ್ ಪಠಾಊಂ, ಜೋ ಅಜರ್ ಅಮರ್ ಅಸ್ಥಾನಾ ।
ಚಾರ್ ಮುಕ್ತಿ ಜಹಾಂ ಚಂಪೀ ಕರತೀ, ಮಾಯಾ ಹೋ ರಹೀ ದಾಸೀ ।
ದಾಸ್ ಗರೀಬ್ ಅಭಯ್ ಪದ್ ಪರಸ್ಯೆ, ಮಿಲ್ಯೆ ರಾಮ್ ಅವಿನಾಶಿ ॥

## "ಯಾವ ಪ್ರಭುವನ್ನು ಆರಾಧಿಸಬೇಕು"–ಗೀತೆಯ ಪ್ರಕಾರ

ಸೂಕ್ಷ್ಮವೇದದಲ್ಲಿ ಹೇಳಲಾಗಿದೆ:–

ಭಜನ್ ಕರೋ ಉಸ್ ರಬ್ ಕಾ, ಜೋ ದಾತಾ ಹೈ ಕುಲ್ ಸಬ್ ಕಾ ॥

ಭಗವದ್ಗೀತೆಯ 15ನೇ ಅಧ್ಯಾಯದ 1 ರಿಂದ 4ನೇ ಶ್ಲೋಕ ಹಾಗೂ 16–17 ನೇ ಶ್ಲೋಕದಲ್ಲಿ ಹೇಳಿರುವಂತೆ, ಈ ಪ್ರಪಂಚವು ಒಂದು ಅರಳೀ ಮರದಂತೆ. ಯಾವ ಸಂತನು ಈ ಪ್ರಪಂಚವೆಂಬ ಅರಳೀಮರದ ಬೇರಿನಿಂದ ಹಿಡಿದು ಮೂರೂ ಗುಣಗಳೆಂಬ ಕೊಂಬೆಗಳವರೆಗೆ ಸರ್ವಾಂಗವನ್ನು ಹೇಳುವನೋ (ಸಃ ವೇದ ವಿತ್) ಅವನು ವೇದದ ತಾತ್ಪರ್ಯವನ್ನು ಅರಿತವನಾಗಿರುತ್ತಾನೆ. ಅಂದರೆ ಅವನೇ ತತ್ವದರ್ಶಿ ಸಂತನು. ತನ್ನ ಮೂಲಕವೇ ರಚಿಸಲ್ಪಟ್ಟ ಸೃಷ್ಟಿಯ ಜ್ಞಾನ ಮತ್ತು ವಾಸ್ತವಿಕ ಆಧ್ಯಾತ್ಮ ಜ್ಞಾನವನ್ನು ಪರಮಾತ್ಮನು ಸ್ವತಃ ಭೂಮಿಯ ಮೇಲೆ ಪ್ರತ್ಯಕ್ಷನಾಗಿ ತನ್ನ ಮುಖ ಕಮಲದಿಂದ ಹೇಳುತ್ತಾನೆ. ಸಾಕ್ಷಿಗಾಗಿ ಮುಂದಿನ ವೇದ ಮಂತ್ರವನ್ನು ಓದಿ. ಇದು 'ಗೀತಾ ತೇರಾ ಜ್ಞಾನ್ ಅಮೃತ್' ಎನ್ನುವ ಪುಸ್ತಕದಲ್ಲಿದೆ. ಅದರ ಅನುವಾದವನ್ನು ಆರ್ಯ ಸಮಾಜದ ಪ್ರವರ್ತಕರಾದ ಶ್ರೀ ದಯಾನಂದ ಸರಸ್ವತಿಯವರು ಹಾಗೂ ಅವರ ಅನುಯಾಯಿಗಳು ಮಾಡಿದ್ದಾರೆ. ಅದರಲ್ಲಿದ್ದ ಕೆಲವು ತಪ್ಪುಗಳನ್ನು ಲೇಖಕರು (ಸಂತ ರಾಮ್‌ಪಾಲ್‌ದಾಸ್) ಸರಿಪಡಿಸಿದ್ದಾರೆ.

ಋಗ್ವೇದ ಮಂಡಲ ನಂ. 9 ಸೂಕ್ತಿ 86 ಮಂತ್ರ 26–27, ಋಗ್ವೇದ ಮಂಡಲ 9 ಸೂಕ್ತಿ 82, ಮಂತ್ರ 1–2, ಋಗ್ವೇದ ಮಂಡಲ ನಂ. 9 ಸೂಕ್ತಿ 96 ಮಂತ್ರ 16ರಿಂದ 20, ಋಗ್ವೇದ ಮಂಡಲ 9 ಸೂಕ್ತಿ 94 ಮಂತ್ರ 1, ಋಗ್ವೇದ ಮಂಡಲ 9 ಸೂಕ್ತಿ 95 ಮಂತ್ರ 2, ಋಗ್ವೇದ ಮಂಡಲ ನಂ. 9 ಸೂಕ್ತಿ 54 ಮಂತ್ರ 3, ಋಗ್ವೇದ ಮಂಡಲ ನಂ. 9 ಸೂಕ್ತಿ 20 ಮಂತ್ರ 1ರಲ್ಲಿ ಪ್ರಮಾಣಿಕರಿಸಲಾಗಿರುವುದೇನೆಂದರೆ ಸರ್ವ ಬ್ರಹ್ಮಾಂಡಗಳ ರಚನಾಕಾರರು, ಸರ್ವರನ್ನೂ ಪಾಲಿಸುವ ಪರಮೇಶ್ವರನು ಯಾರು ಎಂದು ತಿಳಿಸಲಾಗಿದೆ. ಅವನು ಸರ್ವ ಭುವನಗಳ ಮೇಲಿನ ಲೋಕದಲ್ಲಿ ಕುಳಿತಿದ್ದಾನೆ. (ಋಗ್ವೇದ ಮಂಡಲ 9 ಸೂಕ್ತಿ 54 ಮಂತ್ರ 3) ಆ ಪರಮಾತ್ಮನು ಸಶರೀರನಾಗಿ ಭೂಮಿಗೆ ಬರುತ್ತಾನೆ. ಭಕ್ತರ ಸಂಕಟಗಳನ್ನು ದೂರ

ಮಾಡುತ್ತಾನೆ. ಅವನ ಹೆಸರೇ ಕವಿರದೇವ ಅಂದರೆ ಕಬೀರ ಪರಮೇಶ್ವರ. ಇಲ್ಲಿ ಒಳ್ಳೆಯ ಆತ್ಮಗಳನ್ನು ಸೇರಿಸುತ್ತಾನೆ. ಅವರಿಗೆ ಸ್ವತಃ ತನ್ನ ಬಾಯಿಂದ ತತ್ವಜ್ಞಾನವನ್ನು ತಿಳಿಸುತ್ತಾನೆ. (ಋಗ್ವೇದ ಮಂಡಲ ನಂ. 9 ಸೂಕ್ತಿ 86 ಮಂತ್ರ 26–27, ಮಂಡಲ 82 ಮಂತ್ರ 1–2 ಹಾಗೂ ಮಂಡಲ 9 ಸೂಕ್ತಿ 20 ಮಂತ್ರ 1). ಪರಮಾತ್ಮನು ಭೂಮಿಯ ಮೇಲೆ ಕವಿಯ ಹಾಗೆ ಬಂದು ವಿವರಣೆ ನೀಡುತ್ತಾನೆ. (ಋಗ್ವೇದ 9ನೇ ಮಂಡಲದ 94ನೇ ಸೂಕ್ತಿಯ 1ನೇ ಮಂತ್ರ).

ಪರಮಾತ್ಮನು ತನ್ನ ಬಾಯಿಂದ ವಚನಗಳನ್ನು ತಿಳಿಸುತ್ತಾ ಸಾಧಕರಿಗೆ ಭಕ್ತಿಯಿಂದ ಇರಲು ಪ್ರೇರೇಪಿಸುತ್ತಾನೆ. ಪರಮಾತ್ಮನು ರಹಸ್ಯ ಮಂತ್ರಗಳನ್ನು ಆವಿಷ್ಕರಿಸುತ್ತಾನೆ. (ಋಗ್ವೇದದ 9ನೇ ಮಂಡಲದ 95ನೇ ಸೂಕ್ತಿಯ 2ನೇ ಮಂತ್ರ).

ಪರಮಾತ್ಮನು ತತ್ವಜ್ಞಾನವನ್ನು ಕಬೀರ್ ವಾಣಿಯ ಮೂಲಕ, ಗಾದೆಗಳ ಮೂಲಕ, ದ್ವಿಪದಿಗಳ ಮೂಲಕ, ಚತುಷ್ಪದಿಗಳ ಮೂಲಕ ತಿಳಿಸುತ್ತಾನೆ. ಕಬೀರ ಪರಮೇಶ್ವರರು ಸಂತನ ರೂಪದಲ್ಲಿ ಪ್ರತ್ಯಕ್ಷರಾಗುತ್ತಾರೆ. ಆ ಪರಮೇಶ್ವರನ ಮೂಲಕ ಋಷಿ ಅಥವಾ ಸಂತರ ಮೂಲಕ ರಚಿಸಲ್ಪಟ್ಟ ಅಸಂಖ್ಯ ವಚನಗಳ ತತ್ವಜ್ಞಾನವು ಅವರ ಅನುಯಾಯಿಗಳಿಗೆ ಅಮೃತದಂತೆ ಆನಂದದಾಯಕವಾಗಿರುತ್ತದೆ. ಈ ಪರಮೇಶ್ವರರು ಪ್ರಸಿದ್ಧ ಕವಿಗಳಲ್ಲಿ ಒಬ್ಬ ಪ್ರಸಿದ್ಧ ಕವಿಯ ಪದವಿಯನ್ನೂ ಪಡೆಯುತ್ತಾರೆ. ಅವರನ್ನು ಕವಿ ಎಂದು ಕರೆಯುತ್ತಾರೆ. ಆದರೆ ಅವರು ಪರಮೇಶ್ವರರಾಗಿರುತ್ತಾರೆ. ಆ ಪರಮಾತ್ಮನು ಮೂರನೇ ಮುಕ್ತಿಧಾಮದಲ್ಲಿ ಅಂದರೆ ಸತ್ಯಲೋಕದಲ್ಲಿ ವಿರಾಜಮಾನನಾಗಿರುತ್ತಾನೆ. ಹೇಗೆ ಮನುಷ್ಯನು ಬೇರೆ ಬಟ್ಟೆ ಧರಿಸುತ್ತಾನೋ, ಹಾಗೆ ಪರಮಾತ್ಮನು ಬೇರೆ ಬೇರೆ ರೂಪಗಳಲ್ಲಿ ಭೂಮಿಯಲ್ಲಿ ಪ್ರತ್ಯಕ್ಷನಾಗುತ್ತಾನೆ. ಇದರಿಂದ ತಿಳಿಯುವುದೇನೆಂದರೆ ಪರಮಾತ್ಮನು ಅಮರಧಾಮದಿಂದ ಬಂದು ಭೂಮಿಯಲ್ಲಿ ಪ್ರತ್ಯಕ್ಷನಾಗುತ್ತಾನೆ. ಒಳ್ಳೆಯ ಆತ್ಮಗಳನ್ನು ಸೇರಿಸುತ್ತಾನೆ. ಒಳ್ಳೆಯ ವಚನಗಳನ್ನು ಹೇಳುತ್ತಾನೆ. ಆ ಪರಮೇಶ್ವರನು 1398 ರಿಂದ 1518 ರವರೆಗೆ 120 ವರ್ಷಗಳ ಕಾಲ ಈ ಭೂಮಿಯಲ್ಲಿ ಭಾರತವೆಂಬ ಪವಿತ್ರ ನೆಲದಲ್ಲಿ ಕಾಶಿ ನಗರದಲ್ಲಿ ನೇಕಾರರ ರೂಪದಲ್ಲಿ ಇದ್ದು ತತ್ವಜ್ಞಾನವನ್ನು ಹೇಳಿದ್ದನು.

ಕಬೀರ್, ಅಕ್ಷರ್ ಪುರುಷ್ ಏಕ್ ಪೇಡ್ ಹೈ, ಕ್ಷರ್ ಪುರುಷ್ ವಾಕೀ ಡಾರ್
ತೀನೋ ದೇವಾ ಶಾಖಾ ಹೈ, ಪಾತ್ ರೂಪ್ ಸಂಸಾರ್ ॥

ವಿಶೇಷ :– ಕಬೀರ್ ವಾಣಿ ಎಂಬ ಪುಸ್ತಕದಲ್ಲಿ ಒಂದು ವಚನವು ಈ ರೀತಿಯಾಗಿಯೂ ಬರೆದಿದೆ.

ಕಬೀರ್, ಅಕ್ಷರ್ ಪುರುಷ್ ವೃಕ್ಷ್ ಕಾ ತನಾ ಹೈ, ಕ್ಷರ್ ಪುರುಷ್ ಹೈ ಡಾರ್ ।
ತ್ರಯದೇವ್ ಶಾಖಾ ಭಏ, ಪಾತ್ ಜಾನೋ ಸಂಸಾರ್ ॥

ಸರಳಾರ್ಥ :– ವೃಕ್ಷದ ಭಾಗ ಭೂಮಿಯ ಮೇಲೆ ಕಾಣಿಸುತ್ತದೆ. ಅದರ ಬಗ್ಗೆ ಹೇಳಲಾಗಿದೆ. ಮರದ ಕಾಂಡವನ್ನು ಅಕ್ಷರ ಪುರುಷವೆಂದು ತಿಳಿದರೆ, ಅದರಲ್ಲಿರುವ ಕೊಂಬೆಗಳಲ್ಲಿ ಒಂದನ್ನು ಕ್ಷರ ಪುರುಷನೆಂದೂ, ಆ ಕೊಂಬೆಯ ಸಣ್ಣ ಸಣ್ಣ ರೆಂಬೆಗಳನ್ನು ರಜೋಗುಣ ಬ್ರಹ್ಮಾ, ಸದ್ಗುಣ ವಿಷ್ಣು ಹಾಗೂ ತಮೋಗುಣ ಶಿವ ಎಂದು ತಿಳಿಯಬೇಕು. ಆ ರೆಂಬೆ ಕೊಂಬೆಗಳಲ್ಲಿರುವ ಎಲೆಗಳನ್ನು ಜೀವ ಜಂತುಗಳೆಂದು ತಿಳಿಯಬೇಕು.

ಪರಮೇಶ್ವರ ಕಬೀರರು ತತ್ವಜ್ಞಾನದಲ್ಲಿ ಎಲ್ಲಾ ಜ್ಞಾನವನ್ನು ತಿಳಿಸಿದ್ದಾರೆ. ಗೀತೆಯ 4ನೇ

ಅಧ್ಯಾಯದ 32ನೇ ಶ್ಲೋಕದಲ್ಲಿ ಯಜ್ಞಗಳ ಅಂದರೆ ಧಾರ್ಮಿಕ ಅನುಷ್ಠಾನಗಳ ಅರಿವನ್ನು (ಬ್ರಹ್ಮಣಃ ಮುಖೆ) ಸಚ್ಚಿದಾನಂದ ಘನ ಬ್ರಹ್ಮ ಅಂದರೆ ಪರಮ ಅಕ್ಷರಬ್ರಹ್ಮನು ತನ್ನ ಬಾಯಿಂದ ಹೇಳಿದನು. ಅದೇ ತತ್ವಜ್ಞಾನ.

ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕದಲ್ಲಿ, ಯಾರು ತತ್ವಜ್ಞಾನವನ್ನು ಹೇಳುವರೋ, ಅವರನ್ನು ಪರಮಾತ್ಮನ ಕೃಪೆಗೆ ಒಳಗಾಗಿರುವ ಸಂತ ಎಂದು ತಿಳಿಯುತ್ತಾರೆ ಎಂದು ಹೇಳಲಾಗಿದೆ. ಅವರಿಗೆ ದೀರ್ಘದಂಡನಮಸ್ಕಾರ ಮಾಡಿ, ವಿನಯವಾಗಿ ಪ್ರಶ್ನಿಸುವುದರಿಂದ ಅವರು ತತ್ವಜ್ಞಾನದ ಉಪದೇಶವನ್ನು ನಿಮಗೆ ನೀಡುವರು.

ಪರಮೇಶ್ವರನು ಈ ತತ್ವಜ್ಞಾನವನ್ನು ಸ್ವತಃ ಭೂಮಿಗೆ ಬಂದು ತಿಳಿಸಿದ್ದನು. ಗೀತೆಯ 15ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ತತ್ವದರ್ಶಿ ಸಂತನ ಪರಿಚಯವನ್ನು ಮಾಡಿದೆ. ಯಾವ ಸಂತನು ಪ್ರಪಂಚವೆಂಬ ವೃಕ್ಷವನ್ನು ಬೇರಿನಿಂದ ಹಿಡಿದು ಎಲ್ಲಾ ಭಾಗಗಳನ್ನು ತಿಳಿದಿರುವನೋ ಅವನೇ ತತ್ವದರ್ಶಿ ಸಂತನು.

❖ ಈಗ ಪ್ರಪಂಚವೆಂಬ ವೃಕ್ಷದ ಸರ್ವಾಂಗಗಳನ್ನು ತಿಳಿಯೋಣ :–

1) ಮೂಲ (ಬೇರು) :– ಇದು ಪರಮ ಅಕ್ಷರ ಬ್ರಹ್ಮ. ಇವನು ಎಲ್ಲರಿಗೂ ಒಡೆಯ. ಇವನು ಎಲ್ಲರನ್ನೂ ಹುಟ್ಟಿಸುತ್ತಾನೆ. ಎಲ್ಲರನ್ನೂ ಧಾರಣೆ ಪೋಷಣೆ ಮಾಡುವವನು. ಇದರ ಅರಿವು ಗೀತೆಯ 8ನೇ ಅಧ್ಯಾಯದ 1ನೇ ಶ್ಲೋಕದ ಪ್ರಶ್ನೆಯ ಉತ್ತರ ಗೀತೆಯ 8ನೇ ಅಧ್ಯಾಯದ 3, 8, 9, 10 ಮತ್ತು 20, 21, 22ನೇ ಶ್ಲೋಕದಲ್ಲಿ ನೀಡಲಾಗಿದೆ. ಇದರ ವರ್ಣನೆ ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿದೆ. ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಇಬ್ಬರು ಪುರುಷರನ್ನು ಹೇಳಲಾಗಿದೆ :– ಒಬ್ಬರು "ಕ್ಷರ ಪುರುಷ" ಇನ್ನೊಬ್ಬರು "ಅಕ್ಷರ ಪುರುಷ" ಇವರಿಬ್ಬರೂ ಹಾಗೂ ಇವರ ಅಧೀನ ಎಷ್ಟೆಲ್ಲಾ ಶರೀರಧಾರೀ ಪ್ರಾಣಿಗಳಿದ್ದಾರೋ, ಅವರೆಲ್ಲಾ ನಾಶವಾಗುವವರು, ಯಾರ ಜೀವದ ಆತ್ಮವಂತೂ ಸಾಯುವುದಿಲ್ಲ.

ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಹೇಳಿದೆ (ಉತ್ತಮ ಪುರುಷಃ) ಅಂದರೆ ಪುರುಷೋತ್ತಮನಂತು (ಅನ್ಯಃ) ಅನ್ಯನೇ ಆಗಿದ್ದಾನೆ. ಅವನನ್ನು (ಪರಮಾತ್ಮಾ ಇತಿ ಉದಾಹೃತಃ) ಪರಮಾತ್ಮ ಎಂದು ಹೇಳಲಾಗುತ್ತದೆ (ಯಃ ಲೋಕ ತ್ರಯಮ್) ಯಾರು ಮೂರೂ ಲೋಕಗಳಲ್ಲಿ (ಅವಿಶ್ಯ ವಿಭರ್ತಿ) ಪ್ರವೇಶ ಮಾಡಿ ಎಲ್ಲರನ್ನೂ ಪಾಲನೆ–ಪೋಷಣೆ ಮಾಡುತ್ತಾರೋ (ಅವ್ಯಯಃ ಈಶ್ವರಃ) ಅವಿನಾಶಿ ಪರಮೇಶ್ವರನು, ಇವನು ಪರಮ ಅಕ್ಷರ ಬ್ರಹ್ಮನು ಪ್ರಪಂಚವೆಂಬ ವೃಕ್ಷದ ಮೂಲ (ಬೇರು) ರೂಪ ಪರಮೇಶ್ವರನು. ಯಾರ ಬಗ್ಗೆ ಸಂತ ಗರೀಬ್ ದಾಸರು ಹೇಳಿದ್ದಾರೋ, ಅವನು ಇದೇ ಪರಮಾತ್ಮನು :–

ಭಜನ್ ಕರೋ ಉಸ್ ರಬ್ ಕಾ, ಜೋ ದಾತಾ ಹೈ ಕುಲ್ ಸಬ್ ಕಾ ॥

ಇವನೇ ಅಸಂಖ್ಯ ಬ್ರಹ್ಮಾಂಡಗಳ ಒಡೆಯ. ಇವನೇ ಕ್ಷರಪುರುಷ ಮತ್ತು ಅಕ್ಷರಪುರುಷರ ಒಡೆಯ.

2) ಅಕ್ಷರಪುರುಷ :– ಪ್ರಪಂಚವೆಂಬ ವೃಕ್ಷದ ಕಾಂಡ ತಿಳಿಯಿರಿ. ಇವನು 7 ಶಂಖ ಬ್ರಹ್ಮಾಂಡಗಳ ಒಡೆಯ, ನಾಶವಾಗುವವನು,

3) ಕ್ಷರಪುರುಷ :– ಪ್ರಪಂಚವೆಂಬ ವೃಕ್ಷದ ಕೊಂಬೆ ತಿಳಿಯಿರಿ. ಇವನು ಗೀತೆಯ

ಜ್ಞಾನದಾತನು, ಇವನನ್ನು ಕ್ಷರಬ್ರಹ್ಮನೆಂದು ಕರೆಯುವರು. ಇವನು 21 ಬ್ರಹ್ಮಾಂಡಗಳ ಒಡೆಯ. ನಾಶವಾಗುವವನು.

4) ಬ್ರಹ್ಮಾ, ವಿಷ್ಣು, ಶಿವ (ರಜೋಗುಣ, ಸತ್ವಗುಣ, ತಮೋಗುಣ) ಮೂರು ರೆಂಬೆಗಳು, ಇವರು ಮೂರು ಲೋಕಗಳ ಒಡೆಯರು. ರಜೋಗುಣದ ವಿಭಾಗಕ್ಕೆ ಬಹ್ಮಾನು ಒಡೆಯ, ಇವನ ಪ್ರಭಾವದಿಂದ ಸಂತಾನೋತ್ಪತ್ತಿ ಆಗುತ್ತಿದೆ. ಸದ್ಗುಣ ವಿಭಾಗದ ಮಾಲೀಕನು ಶ್ರೀ ವಿಷ್ಣು. ಇವನಿಂದ ಒಬ್ಬರು ಇನ್ನೊಬ್ಬರನ್ನು ಪ್ರೀತಿಯಿಂದ ನೋಡಲು ಸಾಧ್ಯವಾಗುತ್ತದೆ. ಕರ್ಮಾನುಸಾರ ಎಲ್ಲರಿಗೂ ಫಲಪ್ರಾಪ್ತಿಯಾಗುತ್ತದೆ. ತಮೋಗುಣ ವಿಭಾಗದ ಮಾಲೀಕ ಶ್ರೀ ಶಂಕರನು. ಅವನ ಕಾರಣದಿಂದ ಎಲ್ಲರ ಅಂತ್ಯವಾಗುತ್ತದೆ. ಹೀಗೆ ಪ್ರಪಂಚವೆಂಬ ವೃಕ್ಷದ ಸರ್ವಾಂಗಗಳ ಭಿನ್ನ ಭಿನ್ನವಾದ ಪರಿಚಯ ಈ ರೀತಿ ಇದೆ. ಈ ಜ್ಞಾನವನ್ನು ಸ್ವತಃ ಕಬೀರ್ ಪರಮೇಶ್ವರರು ತಮ್ಮ ಬಾಯಿಂದಲೇ ಹೇಳಿದ್ದಾರೆ. ಕಬೀರ್ ವಾಣಿ, ಕಬೀರ್ ಬೀಜಕ್, ಕಬೀರ್ ಶಬ್ದಾವಳಿ ಮತ್ತು ಕಬೀರ್ ಸಾಗರದಲ್ಲಿ ಧರ್ಮದಾಸ್ (ಬಾಂಧವ್‌ಗಢ್ ನಗರದ) ಮೂಲಕ ಬರೆಯಲ್ಪಟ್ಟಿತ್ತು. ಇಂದಿನ ಯುಗದಲ್ಲಿ ಈ ದಾಸನು (ಸಂತ ರಾಮ್‌ಪಾಲ್ ದಾಸ) ಇದರ ಬಗ್ಗೆ ತಿಳಿದಿದ್ದಾನೆ. ನನಗೆ ಸಂಪೂರ್ಣ ಆಧ್ಯಾತ್ಮವು ಪ್ರಾಪ್ತವಾಗಿರುವುದು ಪರಮೇಶ್ವರ ಕಬೀರರ ಕೃಪೆಯಿಂದ ಎಂದು ನಾನು ಭಾವಿಸುತ್ತೇನೆ.

ಗೀತೆಯ 15ನೇ ಅಧ್ಯಾಯದ 1ನೇ ಶ್ಲೋಕದ ಪ್ರಕಾರ ತತ್ವದರ್ಶಿ ಸಂತನಿಂದಲೂ ಈ ದಾಸನು (ಸಂತ ರಾಮ್‌ಪಾಲ್ ದಾಸ್) ತತ್ವದರ್ಶಿ ಸಂತ ಎಂಬ ಬಗ್ಗೆ ಸಾಬೀತಾಗಿದೆ.

ತಲೆಕೆಳಗಾಗಿ ನೇತಾಡುತ್ತೀರು ಚಿತ್ರವನ್ನು 228ನೇ ಪುಟದಲ್ಲಿ ನೋಡಿರಿ.

ಗೀತೆಯ 15ನೇ ಅಧ್ಯಾಯದ 1ರಿಂದ 4ನೇ ಶ್ಲೋಕ ಮತ್ತು 16, 17ನೇ ಶ್ಲೋಕದ ಸಾರಾಂಶ ರೂಪದ ಚಿತ್ರ. ಮತ್ತೆ ನಾವು ಆ ಪ್ರಸಂಗದ ಬಗ್ಗೆ ಚಿಂತಿಸೋಣ.

ಭಜನ್ ಕರೋ ಉಸ್ ರಬ್ ಕಾ, ಜೋ ದಾತಾ ಹೈ ಕುಲ್ ಸಬ್ ಕಾ ।


ಇಲ್ಲಿಯವರೆಗೂ ಭಕ್ತಿಯಿಂದ ಇರಬೇಕೆಂದು ಹೇಳಲಾಯಿತು. ಆದರೆ ಈಗ ಯಾರನ್ನು ಆರಾಧಿಸಬೇಕು ಎಂಬುದನ್ನು ಹೇಳುತ್ತೇವೆ. 1) ರಜೋಗುಣದ ಬ್ರಹ್ಮಾನನ್ನೇ? 2) ಸದ್ಗುಣದ ವಿಷ್ಣುವನ್ನೇ? ಅಥವಾ 3) ತಮೋಗುಣದ ಶಿವನನ್ನೇ? ಅಥವಾ 4) ಗೀತೆಯ ಜ್ಞಾನವನ್ನು ನೀಡಿದ ಕ್ಷರಪುರುಷನನ್ನೇ=ಕೊಂಬೆ? ಅಥವಾ 5)ಕಾಂಡ=ಅಕ್ಷರ ಪುರುಷನನ್ನೇ? 6) ಪರಮ ಅಕ್ಷರಪುರುಷನನ್ನೇ=ಮೂಲ?

ಉದಾಹರಣೆ :– ನಾವು ನರ್ಸರಿಯಿಂದ ಯಾವುದಾದರೂ ಮಾವಿನ ಸಸಿಯನ್ನು ತಂದರೆ ಅದನ್ನು ಮನೆಯ ಅಂಗಳದಲ್ಲಿ ಹೇಗೆ ನೆಡುತ್ತೇವೆ?

ನೆಲದಲ್ಲಿ ಗುಂಡಿ ತೋಡುತ್ತೇವೆ. ಸಸಿಯ ಬೇರನ್ನು ಗುಂಡಿಯಲ್ಲಿಟ್ಟು ಮಣ್ಣಿನಿಂದ ಮುಚ್ಚುತ್ತೇವೆ. ನಂತರ ಆ ಬೇರಿಗೆ ನೀರನ್ನು ಹಾಕುತ್ತೇವೆ. ಗೊಬ್ಬರವನ್ನು ಹಾಕುತ್ತೇವೆ. ಬೇರು ತನಗೆ ಬೇಕಾದಷ್ಟು ಆಹಾರವನ್ನು (ಗೊಬ್ಬರ, ನೀರು) ಇಟ್ಟುಕೊಂಡು ಉಳಿದಿದ್ದನ್ನು ರೆಂಬೆ ಕೊಂಬೆಗಳಿಗೆ ರವಾನಿಸುತ್ತದೆ. ರೆಂಬೆ ಕೊಂಬೆಗಳು ತಮಗೆ ಬೇಕಾದಷ್ಟನ್ನು ಇಟ್ಟುಕೊಂಡು ಎಲೆಗಳಿಗೆ ಕಳುಹಿಸುತ್ತವೆ. ಹೀಗೆ ಆ ಸಸಿಯು ಬೆಳೆದು ದೊಡ್ಡ ಮರವಾದ ನಂತರ ಹಣ್ಣುಗಳನ್ನು ನೀಡುತ್ತದೆ.

ಓದುಗರಿಗೆ ಈಗ ಯಾವ ದೇವರನ್ನು ಪೂಜಿಸಬೇಕೆನ್ನುವುದು ಅರ್ಥವಾಗಿರಬಹುದು.

ಸೂಕ್ಷ್ಮವೇದದಲ್ಲಿ ಕಬೀರ ಪರಮೇಶ್ವರರು ಹೇಳಿದ್ದಾರೆ




ಮೇಲೆ ಬೇರು ಕೆಳಗೆ ಶಾಖೆಯುಳ್ಳ ಹಿಮ್ಮುಖವಾಗಿ ತೂಗಾಡುತ್ತಿರುವ
ಸಂಸಾರ (ಜಗತ್ತು) ರೂಪಿ ಮರದ ಚಿತ್ರ

ಕಬೀರ್, ಏಕೈ ಸಾಧ್ಯೆ ಸಬ್ ಸಧ್ಯೆ, ಸಬ್ ಸಾಧ್ಯೆ ಸಬ್ ಜಾಯ್ ।
ಮಾಲಿ ಸೀಂಚೆ ಮೂಲ್ ಕೈ, ಫೂಲೈ ಫಲೈ ಅಘಾಯ್ ॥

ಒಬ್ಬ ಮೂಲದೇವರ ಪೂಜೆ ಮಾಡುವುದರಿಂದ ಎಲ್ಲಾ ದೇವರ ಪೂಜೆಯೂ ನೆರವೇರುತ್ತದೆ. ಇದು ಶಾಸ್ತ್ರಬದ್ಧವಾಗಿದೆ. ಯಾರು ಇಬ್ಬರು ದೇವತೆಗಳ ಅಥವಾ ಮೂವರು ದೇವತೆಗಳ ಪೂಜೆ ಮಾಡುವವರೋ ಗೀತೆಯ 13ನೇ ಅಧ್ಯಾಯದ 10ನೇ ಶ್ಲೋಕದಲ್ಲಿ ಹೇಳಿದ ಹಾಗೆ ಆ ಪೂಜೆಯು ಅವ್ಯಭಿಚಾರಿಣಿ ಭಕ್ತಿ ಅಲ್ಲದ ಕಾರಣ ಅದು ವ್ಯರ್ಥವಾಗುತ್ತದೆ. ಹೇಗೆ ಒಬ್ಬ ಸ್ತ್ರೀಯು ತನ್ನ ಪತಿಯನ್ನು ಬಿಟ್ಟು ಅನ್ಯ ಪುರುಷನ ಜೊತೆ ಶಾರೀರಿಕ ಸಂಪರ್ಕ ಇಟ್ಟುಕೊಳ್ಳುವುದಿಲ್ಲವೋ ಅವಳು ಅವ್ಯಭಿಚಾರಿಣಿ ಸ್ತ್ರೀ. ಯಾರು ಅನ್ಯ ಪುರುಷರ ಜೊತೆ ಸಂಪರ್ಕ ಇಟ್ಟುಕೊಳ್ಳುವರೋ ಅವರು ವ್ಯಭಿಚಾರಿಣಿಯಾದ್ದರಿಂದ ಸಮಾಜವು ಅವಳನ್ನು ನಿಂದಿಸುತ್ತದೆ. ಅವಳು ಪತಿಯ ಮನಸ್ಸಿನಿಂದ ದೂರ ಸರಿಯುತ್ತಾಳೆ.

ಶಾಸ್ತ್ರಾನುಕೂಲ ಸಾಧನೆ ಅಂದರೆ ಬೀಜ ಬಿತ್ತಿದ ಭಕ್ತಿ ಎಂಬ ಗಿಡದ ಚಿತ್ರವನ್ನು ಇದೇ ಪುಸ್ತಕದಲ್ಲಿ ತೋರಿಸಲಾಗಿದೆ ಹಾಗೂ ಶಾಸ್ತ್ರದ ವಿರುದ್ಧವಾದ ಸಾಧನೆ ಅಂದರೆ ತಲೆಕೆಳಗಾಗಿ ಬೀಜ ಬಿತ್ತಿದ ಭಕ್ತಿ ಎನ್ನುವ ಗಿಡದ ಬಗ್ಗೆಯೂ ಚಿತ್ರದ ಮೂಲಕ ತೋರಿಸಲಾಗಿದೆ.


ಮೇಲೆ ತಿಳಿಸಿದ ಆಧಾರಗಳಿಂದ ಮೂಲ ಪರಮಾತ್ಮನ ಭಕ್ತಿಯನ್ನು ಮಾಡುವುದರಿಂದ ಆತ್ಮದ ಕಲ್ಯಾಣವಾಗುವುದೆಂದು ತಿಳಿಯುತ್ತದೆ.


ಉಳಿದ ಆಧಾರಗಳು :– ಗೀತೆಯ 3ನೇ ಅಧ್ಯಾಯದ 10ರಿಂದ 15ನೇ ಶ್ಲೋಕದಲ್ಲಿ ಮೇಲೆ ತಿಳಿಸಿದ ಭಕ್ತಿಯ ಬಗ್ಗೆ ಸಮರ್ಥನೆ ಸಿಗುವುದು.

❖ ಗೀತೆಯ 3ನೇ ಅಧ್ಯಾಯದ 10ನೇ ಶ್ಲೋಕ= ಪ್ರಜಾಪತಿಯು ಅಂದರೆ ಕುಲದ ಒಡೆಯನು ಸೃಷ್ಟಿಯ ಆದಿಯಲ್ಲಿ ಯಜ್ಞಸಹಿತವಾದ ಅಂದರೆ ಧಾರ್ಮಿಕ ಅನುಷ್ಠಾನಗಳ ಜ್ಞಾನ ಸಹಿತವಾದ ಪ್ರಜೆಗಳನ್ನು ಹುಟ್ಟಿಸಿ ಆದೇಶವನ್ನು ನೀಡಿದ್ದಾನೆ. "ನೀನು ಎಲ್ಲಾ ಧಾರ್ಮಿಕ ಅನುಷ್ಠಾನಗಳ ಮೂಲಕ ವೃದ್ಧಿಯನ್ನು ಪಡೆ" ಈ ಯಜ್ಞ ಅಂದರೆ ಧಾರ್ಮಿಕ ಅನುಷ್ಠಾನವು ನಿಮಗೆ ಬೇಕೆನ್ನಿಸಿದ ಭೋಗವನ್ನು ಕೊಡುವವನಾಗಿದ್ದಾನೆ. (ಗೀತೆಯ 3ನೇ ಅಧ್ಯಾಯದ 10ನೇ ಶ್ಲೋಕ)

❖ ಈ ಶಾಸ್ತ್ರಬದ್ಧವಾದ ಧಾರ್ಮಿಕ ಅನುಷ್ಠಾನದ ಮೂಲಕ ದೇವತೆಗಳನ್ನು ವೃದ್ಧಿಸು (ಪ್ರಪಂಚವೆಂಬ ಗಿಡದ ರೆಂಬೆಗಳು) ಅಂದರೆ ಪೂರ್ಣ ಪರಮಾತ್ಮ (ಮೂಲ ದೇವತೆ) ನನ್ನು ಇಷ್ಟದೈವವೆಂದು ತಿಳಿದು ಸಾಧನೆ ಮಾಡಿದರೆ ರೆಂಬೆ ಕೊಂಬೆಗಳು ತಾವಾಗಿಯೇ ಬಲಿಷ್ಠವಾಗುವುವು. ನಂತರ ಆ ದೇವತೆಗಳು (ಕೊಂಬೆಗಳು ದೊಡ್ಡದಾಗಿ ಫಲ ನೀಡುವುವು) ನಿಮ್ಮನ್ನು ಉದ್ಧರಿಸುವರು. ನಾವು ಶಾಸ್ತ್ರಬದ್ಧವಾಗಿ ಭಕ್ತಿಯಿಂದ ಇದ್ದರೆ ನಮ್ಮ ಭಕ್ತಿ ಕರ್ಮವಾಗುವುದು. ಕರ್ಮಫಲವನ್ನು ಈ ಮೂರೂ ದೇವತೆಗಳು (ಬಹ್ಮಾ, ವಿಷ್ಣು ಮತ್ತು ಶಿವ ಎಂಬ ರೆಂಬೆಗಳು) ನೀಡುವರು. ಹೀಗೆ ಒಬ್ಬರು ಇನ್ನೊಬ್ಬರನ್ನು ವೃದ್ಧಿಸಿದಾಗ ನಿನ್ನ ಕಲ್ಯಾಣವಾಗುವುದು. ಇದರಿಂದ ಪರಮಾತ್ಮನನ್ನು ಪಡೆಯುವೆ. (ಇದು ಗೀತೆಯ ಜ್ಞಾನ ನೀಡುವವನೇ ಹೇಳಿದ್ದಾನೆ) (ಗೀತೆಯ 3ನೇ ಅಧ್ಯಾಯ ಶ್ಲೋಕ 11)

❖ ಶಾಸ್ತ್ರಬದ್ಧವಾಗಿ ಮಾಡಿದ ಹೋಮ ಅಂದರೆ ಅನುಷ್ಠಾನಗಳ ಮೂಲಕ ವೃದ್ಧಿಸಿದ ದೇವತೆ ಅಂದರೆ ಪ್ರಪಂಚವೆಂಬ ಗಿಡದ ರೆಂಬೆಗಳು. ನೀವು ಕೇಳದೇ ಇದ್ದರೂ, ನೀವು ಇಚ್ಛಿಸಿದ ಭೋಗವನ್ನು ಅವು ಪ್ರದಾನಿಸುತ್ತಿವೆ. ಹೇಗೆ ಬೇರಿಗೆ ನೀರನ್ನು ಎರೆದರೆ ಆ ಗಿಡವು ಮರವಾಗಿ ಬೆಳೆಯುತ್ತದೆ ಮತ್ತು ರೆಂಬೆ ಕೊಂಬೆಗಳಿಂದ ಕೂಡಿ ಹಣ್ಣನ್ನು ನೀಡುವುದೋ ಮತ್ತು ಪ್ರತೀವರ್ಷವೂ


ಶಿವ
ಗೀತೆ ಅಧ್ಯಾಯ ಸ. 15
ಶ್ಲೋಕ ಸ. 1 ರಿಂದ 4
ಹಾಗೂ ಶ್ಲೋಕ ಸ. 16
ಮತ್ತು 17 ರ ತಾತ್ಪರ್ಯ
ವಿಷ್ಣು
ಬ್ರಹ್ಮಾ
[ಶಾಖೆಗಳು]
ಕೊಂಬೆ (ಡಾರ್)
'ಬ್ರಹ್ಮ' (ಕ್ಷರ ಪುರುಷ)
ಕಬೀರ್, ಅಕ್ಷರ ಪುರುಷ ಏಕ್ ಪೇಡ್ ಹೈ.
ನಿರಂಜನ ಬಾಕೀ ಡಾರ್।
ತೀನೊಂ ದೇವಾ ಶಾಖಾ ಹೈ,
ಪಾತ ರೂಪ ಸಂಸಾರ್।
ಕಾಂಡ 'ಪರಬ್ರಹ್ಮ'
(ಅಕ್ಷರ ಪುರುಷ)
ಮೂಲ ಬೇರು
'ಪೂರ್ಣ ಬ್ರಹ್ಮ'
ಕಬೀರ್ ಪರಮೇಶ್ವರ
(ಪರಮ ಅಕ್ಷರ ಪುರುಷ)
ಶಾಸ್ತ್ರದ ಅನುಕೂಲ ಸಾಧನೆ ಅಂದರೆ
ನೇರವಾಗಿ ನೆಟ್ಟಿರುವ ಭಕ್ತಿ ರೂಪಿ ಸಸ್ಯ (ಗಿಡ)


‘ಪೂರ್ಣ ಬ್ರಹ್ಮ ಕಬೀರ್ ಪರಮೇಶ್ವರ’
ಗೀತೆ ಅಧ್ಯಾಯ ಸ. 15
ಶ್ಲೋಕ ಸ.1 ರಿಂದ 4
ಹಾಗೂ ಶ್ಲೋಕ ಸ.16
ಮತ್ತು 17 ರ ತಾತ್ಪರ್ಯ
ಮೂಲ ಬೇರು
(ಪರಮ ಅಕ್ಷರ ಪುರುಷ)
ಕಬೀರ್, ಅಕ್ಷರ ಪುರುಷ ಎಕ್ ಪೇಡ್ ಹೈ,
ನಿರಂಜನ ಬಾಕೀ ಡಾರ್।
ತೀನೊಂ ದೇವಾ ಶಾಖಾ ಹೈ,
ಪಾತ ರೂಪ ಸಂಸಾರ್॥
ಕಾಂಡ ‘ಪರಬ್ರಹ್ಮ’
(ಅಕ್ಷರ ಪುರುಷ)
ಕೊಂಬೆ (ಡಾರ್)
‘ಬ್ರಹ್ಮ’ (ಕ್ಷರ ಪುರುಷ)
ಶಿವ (ಶಾಖೆಗಳು)
ವಿಷ್ಣು
ಬ್ರಹ್ಮಾ
ಶಾಸ್ತ್ರದ ವಿರುದ್ಧ ಸಾಧನೆ ಅಂದರೆ
ಹಿಮ್ಮುಖವಾಗಿ ನೆಟ್ಟಿರುವ ಭಕ್ತಿ ರೂಪಿ ಸಸ್ಯ (ಗಿಡ)

ಹಣ್ಣುಗಳಿಂದ ತುಂಬಿ ತುಳುಕುತ್ತದೆಯೋ ಹಾಗೆ ನೀವು ಶಾಸ್ತ್ರಬದ್ಧವಾಗಿ ಮಾಡಿದ ಭಕ್ತಿಗೆ ಕರ್ಮಫಲವು ದೊರಕುವುದು. ಈ ದೇವರು ನಿಮಗೆ ಅದನ್ನು ನೀಡುತ್ತಾ ಬರುತ್ತಾನೆ. ನೀವು ಕೇಳಿ ಅಥವ ಬಿಡಿ. ಆ ದೇವರು ನೀಡಿದ ಕರ್ಮ ಫಲವನ್ನು ಮತ್ತೆ ಧರ್ಮದಲ್ಲಿ ತೊಡಗಿಸದಿದ್ದರೆ ಸಾಧಕನು ಕಳ್ಳನೆನ್ನಿಸಿಕೊಳ್ಳುವನು. ಅವನು ಭವಿಷ್ಯದಲ್ಲಿ ಪುಣ್ಯ ರಹಿತನಾಗಿ ಉಳಿದು ಬಹಳ ಕಷ್ಟವನ್ನು ಅನುಭವಿಸುತ್ತಾನೆ. (ಗೀತೆಯ 3ನೇ ಅಧ್ಯಾಯದ 12ನೇ ಶ್ಲೋಕ)

❖ ಹೋಮದಿಂದ ಉಳಿದ ಅನ್ನವನ್ನು ತಿನ್ನುವ ಸಂತರು ಎಲ್ಲಾ ಪಾಪಗಳಿಂದ ಮುಕ್ತರಾಗುವರು. ಅಂದರೆ ತತ್ವದರ್ಶಿ ಸಂತರು ಮೊಟ್ಟಮೊದಲು ಪರಮ ಅಕ್ಷರ ಬ್ರಹ್ಮನಿಗೆ ನೈವೇದ್ಯವನ್ನು ನೀಡಿ ನಂತರ ಉಳಿದ ಭೋಜನವನ್ನು ಭಕ್ತರಿಗೆ ನೀಡುತ್ತಾನೆ. ಭಾವಾರ್ಥವೇನೆಂದರೆ ತತ್ವದರ್ಶಿ ಸಂತರು ಮೊಟ್ಟ ಮೊದಲಿಗೆ ಪರಮ ಅಕ್ಷರ ಬ್ರಹ್ಮನಿಗೆ ನೈವೇದ್ಯವನ್ನಿಟ್ಟು, ನಂತರ ಉಳಿದ ಊಟವನ್ನು ಎಲ್ಲಾ ಭಕ್ತರಿಗೂ ವಿತರಿಸುತ್ತಾರೆ. ಇದು ಸತ್ಯ ಸಾಧನೆಯ ಗುರುತಾದರೆ ಆ ಸಂತನು ಭಕ್ತಿಮಂತ್ರವನ್ನು ಶಾಸ್ತ್ರಾನುಸಾರವಾಗಿ ನೀಡುತ್ತಾನೆ. ಈ ಕಾರಣದಿಂದ ಸಾಧಕನು ಎಲ್ಲ ಪಾಪಗಳಿಂದ ಮುಕ್ತನಾಗಿ ಸತ್ಯಲೋಕಕ್ಕೆ ತೆರಳುತ್ತಾನೆ ಮತ್ತು ಯಾವ ಪಾಪಿ ಜನರು ಶಾಸ್ತ್ರಾನುಸಾರವಾಗಿ ಧಾರ್ಮಿಕ ಕ್ರಿಯೆಗಳನ್ನು ಮಾಡುವುದಿಲ್ಲವೋ, ಧರ್ಮವನ್ನು ಆಚರಿಸುವುದಿಲ್ಲವೋ, ಕೇವಲ ತನ್ನ ಶರೀರ ಪೋಷಣೆಗಾಗಿ ಅನ್ನವನ್ನು ಬೇಯಿಸುತ್ತಾರೆಯೋ, ಅವರು ಪಾಪವನ್ನೇ ಅನುಭವಿಸುತ್ತಾರೆ. (ಗೀತೆಯ 3ನೇ ಅಧ್ಯಾಯದ 13ನೇ ಶ್ಲೋಕ)

❖ ಎಲ್ಲಾ ಜೀವಿಗಳು ಅನ್ನದಿಂದಲೇ ಹುಟ್ಟುವರು ಅಂದರೆ ಅನ್ನವನ್ನು ತಿನ್ನುವುದರಿಂದ ಶರೀರದಲ್ಲಿ ಸಂತಾನೋತ್ಪತ್ತಿಯ ಪದಾರ್ಥಗಳು ಉಂಟಾಗುತ್ತವೆ. ಇದರಿಂದ ಎಲ್ಲಾ ಪ್ರಾಣಿಗಳು ಉತ್ಪತ್ತಿಯಾಗುವುವು. ಸೃಷ್ಟಿಯಿಂದ ಅನ್ನದ ಉತ್ಪತ್ತಿಯಾಗುವುದು. ಶಾಸ್ತ್ರವಿಧಿಯ ಅನುಸಾರವಾಗಿ ಮಾಡಿದ ಹೋಮದಿಂದ ಮಳೆಯಾಗುತ್ತದೆ. ಹೋಮ ಅಂದರೆ ಶಾಸ್ತ್ರಗಳಲ್ಲಿ ವರ್ಣಿಸಿದ ವಿಧಾನದಿಂದ ಧಾರ್ಮಿಕ ಅನುಷ್ಠಾನವು ಮಾಡಲ್ಪಡುತ್ತದೆ. ಕರ್ಮವು ಬ್ರಹ್ಮ ಅಂದರೆ ಕ್ಷರ ಪುರುಷನಿಂದ ಉತ್ಪನ್ನವಾಗಿವೆ ಎಂದು ತಿಳಿ. ಏಕೆಂದರೆ ನಾವು ಬ್ರಹ್ಮನ ಲೋಕಕ್ಕೆ ಬಂದಿದ್ದೇವೆ ಎಂದಾದರೆ ಕರ್ಮ ಮಾಡಿಯೇ ನಮಗೆ ಎಲ್ಲವೂ ಪ್ರಾಪ್ತವಾಗುವುದು ಎಂದರ್ಥ. ಆದ್ದರಿಂದ ಕರ್ಮವು ಕಾಲ(ಬ್ರಹ್ಮ)ನಿಂದ ಉತ್ಪತ್ತಿಯಾದದ್ದು ಎಂದು ತಿಳಿ. ಮತ್ತು ಬ್ರಹ್ಮ (ಕಾಲ)ನ ಉತ್ಪತ್ತಿ ಅವಿನಾಶಿಯಾದ ಪರಮಾತ್ಮನಿಂದ ಆಗಿದೆ. (ಇದರ ವರ್ಣನೆ ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಇದೆ. ಮತ್ತು ಸೃಷ್ಟಿ ರಚನೆ ಎನ್ನುವ ಅಧ್ಯಾಯದಲ್ಲಿ ಓದಿ) ಇದರಿಂದ ತಿಳಿಯುವುದೇನೆಂದರೆ (ಸರ್ವಗತಮ್ ಬ್ರಹ್ಮ) ಸರ್ವವ್ಯಾಪಿ ಪರಮ ಅಕ್ಷರ ಪರಮಾತ್ಮ ಅರ್ಥಾತ್ ಪರಮ ಅಕ್ಷರಬ್ರಹ್ಮನು ಯಾವಾಗಲೂ ಯಜ್ಞಗಳಲ್ಲಿ ಅರ್ಥಾತ್ ಧಾರ್ಮಿಕ ಅನುಷ್ಠಾನಗಳಲ್ಲಿ ಪ್ರತಿಷ್ಠಿತವಾಗಿರುತ್ತಾನೆ. ಅರ್ಥಾತ್ ಎಲ್ಲಾ ಧಾರ್ಮಿಕ ಕ್ರಿಯೆಗಳಲ್ಲಿ ಪರಮ ಅಕ್ಷರಬ್ರಹ್ಮನು ಇಷ್ಟ ರೂಪದಲ್ಲಿ ಪೂಜನೀಯನು. (ಗೀತೆಯ 3ನೇ ಅಧ್ಯಾಯದ 14–15 ಶ್ಲೋಕ)

ಪರಮ ಅಕ್ಷರ ಬ್ರಹ್ಮನು ಗೀತೆಯ ಜ್ಞಾನವನ್ನು ಕೊಟ್ಟವನಿಗಿಂತ ಭಿನ್ನವಾಗಿದ್ದಾನೆ.

ಗೀತೆಯ ಜ್ಞಾನವನ್ನು ಕೊಟ್ಟವನು ಸ್ವತಃ ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ, "ಹೇ ಭಾರತ! ನೀನು ಸರ್ವಭಾವದಿಂದ ಆ ಪರಮೇಶ್ವರನ ಅರ್ಥಾತ್ ಪರಮ ಅಕ್ಷರ ಬ್ರಹ್ಮನ ಆಶ್ರಯಕ್ಕೆ ಹೋಗು, ಆ ಪರಮೇಶ್ವರನ ಕೃಪೆಯಿಂದಲೇ ನಿನಗೆ ಪರಮ ಶಾಂತಿ ಮತ್ತು ಶಾಶ್ವತ ಸ್ಥಾನ ಅರ್ಥಾತ್ ಸನಾತನ ಪರಮ ಧಾಮವು ಪ್ರಾಪ್ತವಾಗುವುದು" ಎಂದು ಹೇಳಿದ್ದಾನೆ.

❖ ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಗೀತೆಯ ಜ್ಞಾನ ನೀಡಿದವನು,

ತತ್ವದರ್ಶಿ ಸಂತನು ಸಿಕ್ಕ ಬಳಿಕ ತತ್ವಜ್ಞಾನವೆಂಬ ಶಾಸ್ತ್ರದ ಮೂಲಕ ಅಜ್ಞಾನವನ್ನು ತೊಡೆದು ಪರಮೇಶ್ವರನ ಆ ಪರಮ ಪದವನ್ನು ಹುಡುಕಬೇಕು. ಅಲ್ಲಿಗೆ ಹೋದ ನಂತರ ಸಾಧಕನು ಮತ್ತೆ ಅವನು ಪ್ರಪಂಚಕ್ಕೆ ಮರಳಿ ಬರುವುದಿಲ್ಲ. ಅರ್ಥಾತ್ ಅವನಿಗೆ ಪರಮ ಪದವು ಪ್ರಾಪ್ತವಾಗುವುದು. ಅಲ್ಲಿ ಪರಮಶಾಂತಿ ಇರುವುದು. ಯಾವುದೇ ಕಷ್ಟವಿರುವುದಿಲ್ಲ, ಅಲ್ಲಿ ಮೃತ್ಯು ಇರುವುದಿಲ್ಲ. ಅಲ್ಲಿ ವೃದ್ಧಾಪ್ಯವಿರುವುದಿಲ್ಲ. ಯಾವುದೇ ಪದಾರ್ಥದ ಕೊರತೆ ಇರುವುದಿಲ್ಲ. ಯಾವ ಪರಮೇಶ್ವರನಿಂದ ಪ್ರಪಂಚವೆಂಬ ವೃಕ್ಷದ ಪ್ರವೃತ್ತಿ ಲಭ್ಯವಾಗಿದೆಯೋ ಆ ಪರಮೇಶ್ವರನನ್ನು ಭಕ್ತಿಯಿಂದ ಆರಾಧಿಸಬೇಕು ಎಂದು ಹೇಳಿದ್ದಾನೆ.

❖ ಗೀತೆಯ 17ನೇ ಅಧ್ಯಾಯದ 13ನೇ ಶ್ಲೋಕದಲ್ಲಿ ಗೀತೆಯ ಜ್ಞಾನವನ್ನು ನೀಡಿದವನು ಹೇಳಿರುವುದೇನೆಂದರೆ ಅವನು ಪರಬ್ರಹ್ಮ ಅರ್ಥಾತ್ ಮತ್ತೊಬ್ಬ ಪ್ರಭು. ಬೇರೆ ವಾಕ್ಯಗಳಲ್ಲಿ ಪರಮ ಅಕ್ಷರಬ್ರಹ್ಮ (ಇದರ ವಿಷಯವನ್ನು ಗೀತೆಯ 8ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಹೇಳಿದೆ) ಜ್ಯೋತಿಗಳಿಗೇ ಜ್ಯೋತಿ, ಮಾಯೆಗಿಂತ ಭಿನ್ನ ಎಂದು ಹೇಳಬಹುದು. ತಿಳಿಯುವ ಯೋಗ್ಯತೆ ಇರುವಂತಹ ಈ ಪರಮಾತ್ಮನು ತತ್ವಜ್ಞಾನದಿಂದ ಪ್ರಾಪ್ತಿಯಾಗುತ್ತಾನೆ ಮತ್ತು ಎಲ್ಲರ ಹೃದಯದಲ್ಲೂ ವಿಶೇಷ ರೂಪದಲ್ಲಿ ನೆಲೆಸಿರುತ್ತಾನೆ. (ಗೀತೆಯ 13ನೇ ಅಧ್ಯಾಯದ 17ನೇ ಶ್ಲೋಕ)

ವಿಚಾರ ಮಾಡೋಣ :– ಯಾವ ತತ್ವಜ್ಞಾನದಿಂದ ಪರಮ ಅಕ್ಷರಬ್ರಹ್ಮನು ಪ್ರಾಪ್ತಿಯಾಗುವನೋ, ಅದನ್ನು ಸೂಕ್ಷ್ಮವೇದ ಎಂದು ಕರೆಯುತ್ತಾರೆ. ಆ ಜ್ಞಾನವು ಗೀತೆಯನ್ನು ಬೋಧಿಸಿದಾತನಿಗೆ ಇಲ್ಲ. ಆದ್ದರಿಂದ ಗೀತೆಯ 4ನೇ ಅಧ್ಯಾಯದ 32 ಮತ್ತು 34ನೇ ಶ್ಲೋಕದಲ್ಲಿ ಗೀತೆಯನ್ನು ಬೋಧಿಸಿದಾತನು ಹೇಳಿರುವುದೇನೆಂದರೆ ಯಜ್ಞಗಳ ಅರ್ಥಾತ್ ಧಾರ್ಮಿಕ ಅನುಷ್ಠಾನಗಳ ಸವಿಸ್ತಾರ ಜ್ಞಾನವನ್ನು ಸ್ವತಃ ಸಚ್ಚಿದಾನಂದ ಘನಬ್ರಹ್ಮ ಪರಮಾತ್ಮ ಅಂದರೆ ಪರಮ ಅಕ್ಷರಬ್ರಹ್ಮನು ತನ್ನ ಮುಖ ಕಮಲದಿಂದ ತಿಳಿಸಿದ್ದಾನೆ. ಅದನ್ನ ಸಚ್ಚಿದಾನಂದ ಘನಬ್ರಹ್ಮನ ವಾಣಿ ಎಂದು ಹೇಳಲಾಗುತ್ತದೆ. ಅದನ್ನು ತತ್ವಜ್ಞಾನ ಎನ್ನುವರು. ಅದನ್ನು ತಿಳಿದ ಸಾಧಕನು ಎಲ್ಲಾ ಪಾಪಗಳಿಂದ ಮುಕ್ತನಾಗುತ್ತಾನೆ. (ಗೀತೆಯ 4ನೇ ಅಧ್ಯಾಯದ 32 ನೇ ಶ್ಲೋಕ)

❖ ಓದುಗರಲ್ಲಿ ವಿನಂತಿ, ಗೀತೆಯ 4ನೇ ಅಧ್ಯಾಯದ 32ನೇ ಮೂಲ ಪಾಠದಲ್ಲಿ 'ಬ್ರಹ್ಮಣಃ' ಎಂಬ ಶಬ್ದವಿದೆ. ಗೋರಖಪುರದ ಗೀತಾ ಪ್ರೆಸ್‌ನಿಂದ ಪ್ರಕಾಶನಗೊಂಡ ಗೀತೆಯ ಅಥವಾ ಅನ್ಯ ಪ್ರಕಾಶನಗಳಿಂದ ಮುದ್ರಿತಗೊಂಡ ಗೀತೆಯಲ್ಲಿ ಅನುವಾದಕರು 'ಬ್ರಹ್ಮಣಃ' ಎಂಬ ಶಬ್ದಕ್ಕೆ ವೇದ ಎಂದು ಬರೆದಿದ್ದಾರೆ. ಇದು ತಪ್ಪು.

ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲೂ ಸಹ 'ಬ್ರಹ್ಮಣಃ' ಎಂಬ ಶಬ್ದವಿದೆ. ಅದರಲ್ಲಿ ಅನುವಾದಕರು ಬ್ರಹ್ಮಣಃ ಎಂದರೆ ಸಚ್ಚಿದಾನಂದ ಘನಬ್ರಹ್ಮ ಎಂದಿದ್ದಾರೆ. ಆದ್ದರಿಂದ ಗೀತೆಯ 4ನೇ ಅಧ್ಯಾಯದ 32ನೇ ಶ್ಲೋಕದಲ್ಲಿ 'ಬ್ರಹ್ಮಣಃ ಮುಖೆ' ಎಂದರೆ ಸಚ್ಚಿದಾನಂದ ಘನ ಬ್ರಹ್ಮನ ಬಾಯಿಂದ ಹೇಳಲ್ಪಟ್ಟ ವಾಣಿ ಎಂದು ಕರೆಯುವುದೇ ಉತ್ತಮ.

ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ ಪರಮೇಶ್ವರನು ತನ್ನ ಬಾಯಿಂದ ಹೇಳಿರುವ ತತ್ವಜ್ಞಾನವನ್ನು ತತ್ವದರ್ಶಿ ಸಂತರ ಬಳಿ ಹೋಗಿ ತಿಳಿದುಕೋ. ಅವರಿಗೆ ದೀರ್ಘದಂಡ ನಮಸ್ಕಾರ ಮಾಡುವುದರಿಂದ, ವಿನಯದಿಂದ ಪ್ರಶ್ನೆ ಕೇಳುವುದರಿಂದ ಪರಮಾತ್ಮನ ತತ್ವವನ್ನು ಚೆನ್ನಾಗಿ ತಿಳಿದಿರುವ ತತ್ವದರ್ಶಿ ಮಹಾತ್ಮನು ನಿನಗೆ ತತ್ವಜ್ಞಾನದ ಉಪದೇಶವನ್ನು ನೀಡುವನು.

ಪ್ರಭುಪ್ರೇಮಿ ಓದುಗ ಬಂಧುಗಳೇ, ಯಾವುದರಿಂದ ಪರಮ ಅಕ್ಷರ ಪರಮಾತ್ಮನು

ಪ್ರಾಪ್ತನಾಗುವನೋ ಅದು ಗೀತೆಯ ಗ್ರಂಥದಲ್ಲಿಲ್ಲ ಎನ್ನುವುದು ತಿಳಿಯುತ್ತದೆ. ಗೀತೆಯು ನಾಲ್ಕೂ ವೇದಗಳ (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ) ಸಂಕ್ಷಿಪ್ತ ರೂಪ, ಅವುಗಳ ಸಾರಾಂಶ. ಇದರಿಂದ ತಿಳಿದು ಬರುವುದೇನೆಂದರೆ ಸೂಕ್ಷ್ಮ ವೇದದ ತತ್ವಜ್ಞಾನವು ಯಾವುದೇ ಪ್ರಚಲಿತ ಸದ್ಗ್ರಂಥದಲ್ಲಿ ಇಲ್ಲ. ಆ ಜ್ಞಾನವು ನನ್ನ ಬಳಿ ಇದೆ (ಸಂತ ರಾಮ್‌ಪಾಲ್ ದಾಸ್). ವಿಶ್ವದಲ್ಲಿ ಯಾರ ಬಳಿಯೂ ಇಲ್ಲ.

ಪ್ರಶ್ನೆ :– ರಜೋಗುಣ ಶ್ರೀ ಬ್ರಹ್ಮಾ, ಸದ್ಗುಣ ಶ್ರೀ ವಿಷ್ಣು ಹಾಗೂ ತಮೋಗುಣ ಶ್ರೀ ಶಿವರು ಸಹ ಇಷ್ಟರೂಪದಲ್ಲಿಯೂ ಪೂಜನೀಯರಲ್ಲವೇ? ಹಿಂದೂ ಧರ್ಮದಲ್ಲಿ ಈ ದೇವರುಗಳನ್ನು ಪೂಜಿಸಲಾಗುತ್ತದೆ. ಹಿಂದೂ ಧರ್ಮದ ಗುರು, ಶಂಕರಾಚಾರ್ಯರು ಮತ್ತು ಅನ್ಯರು ಇವರ ಪೂಜೆಯನ್ನು ಇಷ್ಟರೂಪ ಎಂದು ತಿಳಿದು ಪೂಜಿಸಲು ಹೇಳಿದ್ದಾರೆ ಹಾಗೂ ಅವರೆಲ್ಲರೂ ಮಾಡಿದ್ದಾರೆ. ನಿಮ್ಮ ಮಾತು ನಂಬಲು ಸಾಧ್ಯವೇ ಇಲ್ಲ. ನೀವು ಗೀತೆಯ ಮೂಲಕ ಸಾಬೀತುಪಡಿಸಬಲ್ಲಿರಾ?

ಉತ್ತರ :– ಹಿಂದೂ ಧರ್ಮದ ಧರ್ಮಗುರುಗಳಿಗೆ ತಮ್ಮ ಸದ್ಗ್ರಂಥಗಳ ಜ್ಞಾನವಿಲ್ಲ. ಅಕ್ಷರಜ್ಞಾನವನ್ನು ನೀಡುವ ಅಧ್ಯಾಪಕರಿಗೆ ತಮ್ಮ ಪಾಠ್ಯಕ್ರಮದ ಪುಸ್ತಕಗಳ ಉಲ್ಲೇಖದ ಬಗ್ಗೆಯೇ ಜ್ಞಾನವಿಲ್ಲ ಎಂದಾದರೆ ಆ ಅಧ್ಯಾಪಕನು ವಿದ್ಯಾರ್ಥಿಗಳಿಗೆ ಹಾನಿಕಾರಕನು. ಅವನು ನಿಜವಾಗಲೂ ಶಿಕ್ಷಕನಲ್ಲ. ಇದೇ ಸ್ಥಿತಿ ಹಿಂದೂ ಧರ್ಮದ ಧರ್ಮಗುರುಗಳದ್ದಾಗಿದೆ.

ಸಾಕ್ಷಿ :– ಭಗವದ್ಗೀತೆಯ 7ನೇ ಅಧ್ಯಾಯದ 12ನೇ ಶ್ಲೋಕದಲ್ಲಿ ಗೀತೆಯ ಜ್ಞಾನ ನೀಡುವವನು ಹೇಳಿರುವುದೇನೆಂದರೆ ಮೂರೂ ಗುಣಗಳಿಂದ (ರಜೋಗುಣ ಶ್ರೀ ಬ್ರಹ್ಮಾನಿಂದ ಸೃಷ್ಟಿ, ಸದ್ಗುಣ ಶ್ರೀ ವಿಷ್ಣುವಿನಿಂದ ಸ್ಥಿತಿ ಹಾಗೂ ತಮೋಗುಣದ ಶ್ರೀ ಶಿವನಿಂದ ಸಂಹಾರ) ಏನಾಗುತ್ತಿದೆಯೋ, ಅವುಗಳು ನೆಪಮಾತ್ರ. ಅವೆಲ್ಲ ನನ್ನಿಂದಾಗುತ್ತಿದೆ. ಆದರೆ ನಾನು ಅವರಲ್ಲಿ ಇಲ್ಲ ಮತ್ತು ಅವರು ನನ್ನಲ್ಲಿ ಇಲ್ಲ. (ಗೀತೆಯ 7ನೇ ಅಧ್ಯಾಯದ 12ನೇ ಶ್ಲೋಕ).

ಮೊದಲನೆಯದಾಗಿ ಪ್ರಮಾಣೀಕರಿಸುವುದೇನೆಂದರೆ ಬ್ರಹ್ಮಾ ರಜೋಗುಣದವ, ವಿಷ್ಣು ಸದ್ಗುಣ ಹಾಗೂ ಶಿವ–ಶಂಕರ ತಮೋಗುಣದವರಾಗಿದ್ದಾರೆ.

1) ಮಾರ್ಕಂಡೇಯ ಪುರಾಣದ (ಗೀತಾ ಪ್ರೆಸ್, ಗೋರಖ್‌ಪುರದಿಂದ ಪ್ರಕಾಶನಗೊಂಡ) 123ನೇ ಪುಟದಲ್ಲಿ ಬರೆದಿರುವುದೇನೆಂದರೆ ಬ್ರಹ್ಮಾ, ವಿಷ್ಣು ಮತ್ತು ಶಿವ ಕಾಲ ಬ್ರಹ್ಮನ ಪ್ರಧಾನ ಶಕ್ತಿಗಳು. ಈ ಮೂರು ಗುಣಗಳೂ ಮೂರು ದೇವರುಗಳು.

2) ಶ್ರೀ ದೇವಿ ಪುರಾಣ (ಖೇಮಚಂದ್ ಶ್ರೀ ಕೃಷ್ಣಚಂದ್, ವೆಂಕಟೇಶ್ವರ ಪ್ರೆಸ್, ಮುಂಬೈನಿಂದ ಪ್ರಕಾಶನಗೊಂಡ) ಮೂರನೇ ಸ್ಕಂದದ 5ನೇ ಅಧ್ಯಾಯದ 8ನೇ ಶ್ಲೋಕದಲ್ಲಿ ಹೇಳಿದೆ.

ಯದಿ ದಯಾದರ್ಮನಾ ಸದಾ ಅಂಬಿಕೆ ಕಥಮ್ ಅಹಮ್ ವಿಹಿತಃ ತಮೋಗುಣಃ
ಕಮಲಜಃ ರಜಗುಣಃ ಕಥಮ್ ವಿಹಿತಃ ಚ ಶ್ರೀ ಹರಿಃ ಸತ್‌ಗುಣಃ
(ದೇವಿ ಪುರಾಣ 3/5/8)

ಅನುವಾದ :– ಭಗವಂತನಾದ ಶಿವನು ದುರ್ಗಾಮಾತೆಯನ್ನು ಹೀಗೆ ಪ್ರಶ್ನಿಸಿದ್ದಾನೆ. "ಹೇ ಮಾತೆ, ನೀವು ನಮ್ಮ ಮೇಲೆ ದಯೆಯುಕ್ತರಾಗಿದ್ದರೆ, ನನ್ನಲ್ಲಿ ತಮೋಗುಣ ಏಕೆ ಉಂಟು ಮಾಡಿದ್ದೀರಿ? ಕಮಲದಿಂದ ಹುಟ್ಟಿದ ಬ್ರಹ್ಮಾನನ್ನು ರಜೋಗುಣಿಯಾಗಿ ಹಾಗು ಶ್ರೀ ವಿಷ್ಣುವನ್ನು ಸದ್ಗುಣವನ್ನು ಏಕೆ ಮಾಡಿದ್ದೀರಿ?"

❖ ಇದರಿಂದ ತಿಳಿಯುವುದೇನೆಂದರೆ, ರಜೋಗುಣವೆನ್ನಿ ಅಥವಾ ಬ್ರಹ್ಮಾ ಎನ್ನಿ 2)

ಸದ್ಗುಣವೆನ್ನಿ ಅಥವಾ ವಿಷ್ಣು ಎನ್ನಿ 3) ತಮೋಗುಣ ಎನ್ನಿ ಅಥವಾ ಶಿವ ಎನ್ನಿ.

ಗೀತೆಯ 7ನೇ ಅಧ್ಯಾಯದ 12ನೇ ಶ್ಲೋಕದ ಭಾವಾರ್ಥ:–

ಗೀತೆಯ ಜ್ಞಾನ ನೀಡಿದವನು ಕಾಲಬ್ರಹ್ಮನು. ಇದಕ್ಕೆ ಸಾಕ್ಷಿ ಗೀತೆಯ 11ನೇ ಅಧ್ಯಾಯದ 31–32ನೇ ಶ್ಲೋಕ. 11ನೇ ಅಧ್ಯಾಯದ 31ನೇ ಶ್ಲೋಕದಲ್ಲಿ ಅರ್ಜುನನು ಕೇಳಿದನು. "ಹೇ ಮಹಾನುಭಾವ! ನೀವು ಯಾರು? ಕೃಷ್ಣನಂತೂ ಅರ್ಜುನನ ಭಾಮೈದ. ಶ್ರೀ ಕೃಷ್ಣನ ತಂಗಿಯಾದ ಸುಭದ್ರೆಯನ್ನು ಅರ್ಜುನನು ಮದುವೆಯಾಗಿದ್ದನು. ಹಾಗಿದ್ದಲ್ಲಿ ಕೃಷ್ಣನೇ ಗೀತೆಯ ಜ್ಞಾನವನ್ನು ನೀಡಿದ್ದರೆ, ಅರ್ಜುನನಿಗೆ ನೀವು ಯಾರು ಎಂದು ಕೇಳುವ ಅವಶ್ಯಕತೆಯೇ ಇರುತ್ತಿರಲಿಲ್ಲ ಎನ್ನುವುದು ಯೋಚಿಃ ! ವಿಚಾರಮಾಡಬೇಕಾದ ವಿಷಯ. ಭಾವನಿಗೆ ಭಾವಮೈದುನನ ಪರಿಚಯವಿರುವುದಿಲ್ಲವೇ? ವಾಸ್ತವವಾಗಿ ಶ್ರೀ ಕೃಷ್ಣನ ಶರೀರದಲ್ಲಿ ಮತ್ತೊಬ್ಬ ಮನುಷ್ಯ ಪ್ರವೇಶಿಸಿ ಕಾಲಬ್ರಹ್ಮ ಗೀತಾ ಜ್ಞಾನವನ್ನು ಹೇಳುತ್ತಿದ್ದನು. (ಸಾಕ್ಷಿಗಾಗಿ 'ಗೀತಾ ತೇರಾ ಜಾನ್ ಅಮೃತ್', 'ಗಹರೀ ನಜರ್ ಗೀತಾ ಮೆ', 'ಜ್ಞಾನಗಂಗಾ', 'ಆಧ್ಯಾತ್ಮಿಕ ಜ್ಞಾನಗಂಗಾ' ಎಂಬ ಪುಸ್ತಕಗಳನ್ನು ಓದಿ. ಹಾಗೂ ಶ್ರೀಮದ್ ಭಗವದ್ಗೀತೆಯ ಜ್ಞಾನವನ್ನು ಹೇಳಿದವರು ಯಾರು ಎಂಬ ಡಿ.ವಿ.ಡಿ ನೋಡಿ. ಇವೆಲ್ಲಾ ನಮ್ಮ ವೆಬ್‌ಸೈಟ್ **www.jagatgururampalji.org** ನಲ್ಲಿ ಸಿಗುವುದು. ಉಚಿತವಾಗಿ ಅದನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. **you tube** ನಲ್ಲಿ **search** ಮಾಡಬಹುದು. **(Satsang Barwala Ashram** ಅಥವಾ **Sant Rampal Ji)** ಗೀತಾ ಜ್ಞಾನವನ್ನು ನೀಡಿದವನು ಕಾಲಬ್ರಹ್ಮನು. ಸ್ವತಃ ಗೀತೆಯ 11ನೇ ಅಧ್ಯಾಯದ 32ನೇ ಶ್ಲೋಕದಲ್ಲಿ ಹೇಳಲಾಗಿರುವುದೇನೆಂದರೆ, ನಾನು ಕಾಲಬ್ರಹ್ಮನು. ಈಗ ಪ್ರಕಟಗೊಂಡಿದ್ದೇನೆ. ಒಂದು ವೇಳೆ ಕೃಷ್ಣನು ಗೀತೆಯ ಜ್ಞಾನವನ್ನು ತಿಳಿಸಿದ್ದಿದ್ದರೆ ನಾನು ಈಗ ಬಂದಿದ್ದೇನೆ ಎಂದು ಹೇಳುತ್ತಿರಲಿಲ್ಲ. ಏಕೆಂದರೆ ಶ್ರೀ ಕೃಷ್ಣನು ಮೊದಲೇ ಇದ್ದನು. ಶ್ರೀ ಕೃಷ್ಣನು ಈ ಹಿಂದೆ ಎಂದೂ 'ನಾನು ಕಾಲನು' ಎಂದು ಹೇಳಿರಲಿಲ್ಲ. ನಂತರವೂ 'ಎಲ್ಲರನ್ನು ನಾಶ ಮಾಡುವ ಕಾಲನು' ಎಂದೂ ಹೇಳಲಿಲ್ಲ. ಕೌರವರ ಸಭೆಯಲ್ಲಿ ತನ್ನ ವಿರಾಟ ರೂಪವನ್ನು ತೋರಿಸಿದ್ದನು. ವಿರಾಟ ರೂಪವು ಭಕ್ತಿಯುಕ್ತವಾದ ಪ್ರತ್ಯೇಕ ಆತ್ಮದ್ದಾಗಿರುತ್ತದೆ. ಯಾರಾದರು ಒಬ್ಬರು ಅದನ್ನು ಪ್ರಕಟ ಮಾಡಲು ಸಾಧ್ಯ. ಇದು ಭಕ್ತಿಯ ಶಕ್ತಿ ಅನುಸಾರವಾಗಿರುತ್ತದೆ.

ಗೀತಾ ಜ್ಞಾನವನ್ನು ನೀಡಿದವನು ಗೀತೆಯ 11ನೇ ಅಧ್ಯಾಯದ 47ನೇ ಶ್ಲೋಕದಲ್ಲಿ ಹೇಳಿದ್ದಾನೆ. "ಹೇ ಅರ್ಜುನ ! ನನ್ನ ವಿರಾಟ ರೂಪವನ್ನು ನಿನ್ನ ವಿನಃ ಯಾರೂ ನೋಡಿಲ್ಲ." ಓದುಗರಲ್ಲಿ ವಿನಂತಿಸುವುದೇನೆಂದರೆ, ಶ್ರೀ ಕೃಷ್ಣನು ಈ ಮೊದಲು ತನ್ನ ವಿರಾಟ ರೂಪವನ್ನು ಕೌರವರ ಸಭೆಯಲ್ಲಿ ತೋರಿಸಿದ್ದನು. ಇದನ್ನು ಕೌರವರ ಸಹಿತ ಸಾವಿರಾರು ಜನರು ನೋಡಿದ್ದರು. ಕೃಷ್ಣನು ಗೀತೆಯ ಜ್ಞಾನವನ್ನು ತಿಳಿಸಿದ್ದಿದ್ದರೆ, ನನ್ನ ವಿರಾಟ ರೂಪವನ್ನು ನಿನ್ನ ವಿನಃ ಯಾರೂ ನೋಡಿಲ್ಲ ಎಂದು ಹೇಳುತ್ತಿರಲಿಲ್ಲ. ಇದರಿಂದ ಗೀತೆಯ ಜ್ಞಾನವನ್ನು ಬೋಧಿಸಿದವನು ಕಾಲಬ್ರಹ್ಮನು ಎಂದು ಸ್ಪಷ್ಟವಾಗುತ್ತದೆ. ಇದನ್ನು ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಕ್ಷರಪುರುಷ ಎಂದು ಹೇಳಲಾಗಿದೆ.

ಗೀತೆಯ 8ನೇ ಅಧ್ಯಾಯದ 13ನೇ ಶ್ಲೋಕ.

"ಓಂ ಇತಿ ಏಕಾಕ್ಷರಮ್ ಬ್ರಹ್ಮ್ ವ್ಯಾವಹರನ್ ಮಾಮ್ ಅನುಸ್ಮರನ್
ಯಃ ಪ್ರಯಾತಿ ತ್ಯಜನ್ ದೇಹಮ್ ಸಃ ಯಾತಿ ಪರಮಾಮ್ ಗತಿಮ್"

ಸರಳಾರ್ಥ :– ಗೀತಾ ಜ್ಞಾನವನ್ನು ಬೋಧಿಸಿದವನು ಹೇಳಿರುವುದೇನೆಂದರೆ, (ಮಾಮ್ ಬ್ರಹ್ಮ) ನನ್ನ ಬ್ರಹ್ಮನ್ (ಓಂ ಇತಿ ಏಕಾಕ್ಷರಮ್) ಇದು ಓಂ ಅಕ್ಷರ (ವ್ಯವಹಾರನ್) ಉಚ್ಚರಿಸಿ

(ಅನುಸ್ಮರನ್) ಸ್ಮರಣ ಮಾಡುತ್ತಾ (ಯಃ ಪ್ರಯಾತಿ ತ್ಯಜನ್ ದೇಹಮ್) ಯಾವ ಸಾಧಕನು ಶರೀರವನ್ನು ತ್ಯಜಿಸಿ ಹೋಗುವನೋ, (ಸಃ ಯಾತಿ ಪರಮಾಮ್ ಗತಿಮ್) ಇದು ಓಂ ನಾಮದಿಂದ ಬರುವ ಪರಮ ಪದವು ಪ್ರಾಪ್ತಿಯಾಗುವುದು. ಇದನ್ನು ಇನ್ನೂ ಸ್ಪಷ್ಟಪಡಿಸುವೆ.

ಶ್ರೀದೇವಿ ಪುರಾಣ (ಗೀತಾ ಪ್ರೆಸ್, ಗೋರಖ್‌ಪುರದಿಂದ ಪ್ರಕಾಶಿತಗೊಂಡ)ದ 7ನೇ ಸ್ಕಂದದ 463ರ ಪುಟದಲ್ಲಿ ಈ ರೀತಿ ಇದೆ.

ಶ್ರೀ ದೇವಿಯು ಹಿಮಾಲಯ ರಾಜನಿಗೆ ಜ್ಞಾನೋಪದೇಶ ನೀಡುತ್ತಾಳೆ. ಅವಳು ಹೇಳಿದ್ದೇನೆಂದರೆ, 'ಹೇ ರಾಜ, ನೀನು ಓಂ ನಾಮದ ಜಪ ಮಾಡು. ಇದರಿಂದ ಬ್ರಹ್ಮನ ಪ್ರಾಪ್ತಿಯಾಗುತ್ತದೆ. ಈ ಓಂ ನಾಮ ಬ್ರಹ್ಮ ಜಪ' ಎಲ್ಲವನ್ನೂ ತ್ಯಜಿಸಿ, ಎಲ್ಲಾ ಪೂಜೆಗಳನ್ನು ತ್ಯಜಿಸಿ ಕೇವಲ ಓಂ ನಾಮದ ಜಪವನ್ನು ಮಾಡು. ಬ್ರಹ್ಮ ಪ್ರಾಪ್ತಿಯ ಉದ್ದೇಶವಿಟ್ಟುಕೋ. ನಿನಗೆ ಒಳ್ಳೆಯದಾಗಲಿ. ಇದರಿಂದ ಬ್ರಹ್ಮನನ್ನು ಪಡೆಯಬಹುದು. ಆ ಬ್ರಹ್ಮನು ದಿವ್ಯ ಆಕಾಶವೆಂಬ ಬ್ರಹ್ಮಲೋಕದಲ್ಲಿರುತ್ತಾನೆ. ಈ ದೇವಿ ಮಹಾಪುರಾಣದಿಂದ ಸ್ಪಷ್ಟವಾಗಿರುವುದೇನೆಂದರೆ ಓಂ ನಾಮ ಜಪವು ಬ್ರಹ್ಮನದ್ದು ಎಂದು.

ಉಳಿದ ಸಾಕ್ಷಿಗಳು :– ಶ್ರೀ ಶಿವ ಮಹಾಪುರಾಣ (ಗೀತಾ ಪ್ರೆಸ್, ಗೋರಖ್‌ಪುರದ ಮೂಲಕ ಪ್ರಕಾಶಿತ)ದ ರುದ್ರ ಸಂಹಿತೆಯ 84 ರಿಂದ 85ನೇ ಪುಟದವರೆಗೆ ಹಾಗೂ ವಿದ್ವೇಶ್ವರ ಸಂಹಿತೆಯ 21–22ನೇ ಪುಟದಲ್ಲಿ ಈ ರೀತಿ ಬರೆದಿದೆ.

ಒಮ್ಮೆ ರಜೋಗುಣದ ಬ್ರಹ್ಮಾ ಹಾಗೂ ಸತೋಗುಣದ ವಿಷ್ಣುವಿನ ಮಧ್ಯೆ ಯುದ್ಧವಾಯಿತು. ಇದಕ್ಕೆ ಕಾರಣವೇನೆಂದರೆ ಬ್ರಹ್ಮಾನು ವಿಷ್ಣುವಿನ ಮನೆಗೆ ಹೋಗಿ, "ಹೇ ಅಹಂಕಾರಿ, ನಾನು ಬಂದಾಗ ನೀನು ಎದ್ದು ನಿಂತು ಸತ್ಕಾರ ಮಾಡಲಿಲ್ಲ. ನೀನು ಮಗನಾಗಿದ್ದರೂ ತಂದೆಯ ಸತ್ಕಾರ ಮಾಡುವುದಿಲ್ಲ. ನಾನು ಎಲ್ಲರನ್ನು ಹುಟ್ಟಿಸುವ ಹಾಗೂ ಎಲ್ಲರಿಗೂ ತಂದೆಯಂಥವನು" ಎಂದನು. ಆ ಮಾತನ್ನು ಕೇಳಿದ ವಿಷ್ಣುವಿಗೆ ಅತ್ಯಂತ ಕೋಪ ಬಂದಿತು. ಆದರೆ ಸುಮ್ಮನೆ ಮೇಲ್ನೋಟಕ್ಕೆ ನಗುತ್ತಾ ಹೀಗೆಂದನು, "ಬಾ ಪುತ್ರನೇ, ನಾನು ನಿನ್ನ ತಂದೆ. ನಿನ್ನ ಜನ್ಮವು ನನ್ನ ನಾಭಿಕಮಲದಿಂದ ಆಗಿದೆ." ಹೀಗೆ ಈ ಮಾತಿನಿಂದ ಇಬ್ಬರೂ ತಮ್ಮ ಶಸ್ತ್ರಗಳನ್ನು ಎತ್ತಿದರು. ಪರಸ್ಪರ ಕಾದಾಡತೊಡಗಿದರು. ಆ ಸಮಯದಲ್ಲಿ ಕಾಲಬ್ರಹ್ಮನು ಈ ಇಬ್ಬರ ಮಧ್ಯದಲ್ಲಿ ಒಂದು ತೇಜೋಮಯವಾದ ಸ್ತಂಭವನ್ನು ನಿಲ್ಲಿಸಿದನು. ಆ ಕಾರಣದಿಂದ ಇಬ್ಬರೂ ಕಾದಾಡುವುದನ್ನು ನಿಲ್ಲಿಸಿದರು. ಅದೇ ಸಮಯದಲ್ಲಿ ಕಾಲಬ್ರಹ್ಮನು ತನ್ನ ಪುತ್ರನಾದ ಶಿವನ ರೂಪ ಧರಿಸಿದನು ಮತ್ತು ತನ್ನ ಪತ್ನಿಯಾದ ದುರ್ಗೆಯನ್ನು ಪಾರ್ವತಿಯನ್ನಾಗಿ ಮಾಡಿ ಅವರ ಬಳಿ ಪ್ರತ್ಯಕ್ಷನಾದನು. ಇಲ್ಲಿಯ ಈಶನು ಯಾರು ಎಂದು ನಿಮಗೆ ಗೊತ್ತಿಲ್ಲವೇ? ನಾನು ಬ್ರಹ್ಮ, ಈ ಪ್ರಪಂಚವು ನನ್ನದು. ಹೇ ಬ್ರಹ್ಮಾ ಮತ್ತು ವಿಷ್ಣು, ನೀವಿಬ್ಬರೂ ತಪಸ್ಸನ್ನು ಮಾಡಿ ನನ್ನಿಂದ ಒಂದೊಂದು ಕಾರ್ಯವನ್ನು ಪಡೆದುಕೊಂಡಿರುವಿರಿ. ಬ್ರಹ್ಮಾನಿಗೆ ಉತ್ಪತ್ತಿಮಾಡುವುದು ಹಾಗೂ ವಿಷ್ಣುವಿಗೆ ಪಾಲಿಸುವ ಸ್ಥಿತಿ. ಮಕ್ಕಳೇ ಕೇಳಿ, ನಾನು ಇದೇ ರೀತಿ ಮಹೇಶ ಹಾಗೂ ರುದ್ರನಿಗೆ ಒಂದೊಂದು ಕೆಲಸವನ್ನು ಅಂದರೆ ಸಂಹಾರ ಮತ್ತು ತಿರೋಭಾವವನ್ನು ನೀಡಿರುವೆ" ಎಂದನು. ನಂತರ ಹೀಗೆಂದನು, ಒಂದು ಅಕ್ಷರ ಓಂ ಮಂತ್ರ ಜಪ ಮಾಡುವುದು. ಇದು ಐದು ಅವಯವಗಳ (ಅ, ಉ, ಮ, ನಾದ ಮತ್ತು ಬಿಂದು) ಮಂತ್ರ ಜಪ ಮಾಡುವುದೇ ಆಗಿದೆ. 'ಓಂ' ಎನ್ನುವ ಒಂದು ಅಕ್ಷರಬ್ರಹ್ಮನ ಜಪಮಂತ್ರ ಎನ್ನುವುದು ಓದುಗರಿಗೆ ಸ್ಪಷ್ಟವಾಗಿದೆ. ಹಾಗೂ ಬ್ರಹ್ಮಾ, ವಿಷ್ಣು, ಮಹೇಶ್ವರರನ್ನು ಬಿಟ್ಟು ಇನ್ನೊಬ್ಬ ಕಾಲಬ್ರಹ್ಮನಿದ್ದಾನೆ ಎನ್ನುವುದು ಸ್ಪಷ್ಟವಾಗಿದೆ. ಹಾಗೂ ಈ ಮೂವರೂ ಕಾಲಬ್ರಹ್ಮನ ಪುತ್ರರು ಎನ್ನುವುದು ಸ್ಪಷ್ಟವಾಗುತ್ತದೆ.

ಉಳಿದ ಸಾಕ್ಷಿಗಳು :– ಶ್ರೀ ಶಿವಪುರಾಣ (ಗೀತಾ ಪ್ರೆಸ್, ಗೋರಖ್ ಪುರದಿಂದ

ಪ್ರಕಾಶನಗೊಂಡ) ದಲ್ಲಿ ರುದ್ರ ಸಂಹಿತೆ 9ನೇ ಅಧ್ಯಾಯದ 90ನೇ ಪುಟದಲ್ಲಿ ಬರೆದಿರುವುದೇನೆಂದರೆ "ರಜೋಗುಣ ಬ್ರಹ್ಮಾ, ಸದ್ಗುಣ ವಿಷ್ಣು ಮತ್ತು ತಮೋಗುಣ ಶಿವ ಈ ಮೂರೂ ದೇವರುಗಳಲ್ಲಿ ಗುಣಗಳಿವೆ. ನಾನು ಇವರೆಲ್ಲರಿಗಿಂತ ಭಿನ್ನನಾಗಿದ್ದೇನೆ" ಎಂದು ಬರೆದಿದೆ.

ಈ ಎಲ್ಲಾ ಸಾಕ್ಷಿಗಳಿಂದ ತಿಳಿಯುವುದೇನೆಂದರೆ, ಗೀತೆಯನ್ನು ಬೋಧಿಸಿದಾತನು ಕಾಲಬ್ರಹ್ಮನು. ಇವನು ಪ್ರತಿದಿನವೂ ಒಂದು ಲಕ್ಷ ಮಾನವ ಶರೀರಧಾರಿ ಪ್ರಾಣಿಗಳನ್ನು ತಿನ್ನುತ್ತಾನೆ ಹಾಗೂ ಒಂದುಕಾಲು ಲಕ್ಷ ಪ್ರಾಣಿಗಳನ್ನು ಹುಟ್ಟಿಸುತ್ತಾನೆ ಎಂಬ ಶಾಪವೂ ತಗುಲಿದೆ ಎನ್ನುವುದು ಸ್ಪಷ್ಟವಾಗಿದೆ. ಈ ಕಾರಣದಿಂದಲೇ ಅವನು ತನ್ನ ಮೂವರು ಜನ ಪುತ್ರರನ್ನು ಒಂದೊಂದು ಗುಣಯುಕ್ತರನ್ನಾಗಿ ಮಾಡಿದ್ದಾನೆ. ಇವರ ಶರೀರದಿಂದ ಹೊರಡುವ ಗುಣಗಳ ಸೂಕ್ಷ್ಮ ಪ್ರಭಾವವು ಪ್ರತಿಯೊಂದು ಪ್ರಾಣಿಯನ್ನು ಅಸಹಾಯಕನನ್ನಾಗಿ ಮಾಡಿ ಕೆಲಸ ಮಾಡಿಸುತ್ತದೆ. ಹೇಗೆ ಅಡುಗೆ ಮನೆಯಲ್ಲಿ ಮೆಣಸಿನ ಒಗ್ಗರಣೆ ಹಾಕಿದಾಗ ಘಾಟಿಗೆ ಸೀನು ಬರುತ್ತದೆ. ಆ ಸೀನನ್ನು ಯಾರೂ ತಡೆಯಲು ಸಾಧ್ಯವಿಲ್ಲ. ಮೆಣಸು ಅಡಿಗೆ ಮನೆಯಲ್ಲಿದ್ದರೂ ಅದರಿಂದ ಹೊರಡುವ ಗುಣವು ದೂರದಲ್ಲೆಲ್ಲೋ ರೂಮಿನಲ್ಲಿ ಕುಳಿತ ವ್ಯಕ್ತಿಗಳ ಮೇಲೆ ಪ್ರಭಾವ ಬೀರುತ್ತದೆ.

ಇದೇ ಪ್ರಕಾರ ಮೂರು ದೇವರುಗಳ (ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಹಾಗು ಶ್ರೀ ಶವ) ಅವರವರ ಲೋಕಗಳಲ್ಲಿ ಇರುತ್ತಾರೆ, ಆದರೆ ಅವರ ಶರೀರದಿಂದ ಹೊರಡುವ ಗುಣಗಳ ಸೂಕ್ಷ್ಮ ಪ್ರಭಾವವು ಮೂರೂ ಲೋಕಗಳಲ್ಲಿ (ಸ್ವರ್ಗ ಲೋಕ, ಪಾತಾಳ ಲೋಕ, ಪೃಥ್ವಿ ಲೋಕ) ದ ಪ್ರಾಣಿಗಳ ಮೇಲೆ ಪ್ರಭಾವ ಉಂಟುಮಾಡುತ್ತಿರುತ್ತದೆ. ಇದರಿಂದ ಕಾಲ ಬ್ರಹ್ಮನಿಗೆ ಒಂದು ಲಕ್ಷ ಮಾನವರ ಆಹಾರ ತಯಾರಾಗುತ್ತದೆ, ಆದ್ದರಿಂದ ಗೀತೆಯ ಅಧ್ಯಾಯ 7ನೇ ಶ್ಲೋಕ 12 ರಲ್ಲಿ ಗೀತೆಯನ್ನು ಜ್ಞಾನದಾತ ಹೇಳಿರುವುದೇನೆಂದರೆ :–

❖ "ಮೂರೂ ಗುಣಗಳಿಂದ ಏನೆಲ್ಲಾ ಉಂಟಾಗುವುದೋ ಅದಕ್ಕೆ ನಾನೇ ಕಾರಣನು. ಬ್ರಹ್ಮಾನಿಂದ ಸೃಷ್ಟಿ, ವಿಷ್ಣುವಿನಿಂದ ಸ್ಥಿತಿ ಹಾಗೂ ಶಿವನಿಂದ ಸಂಹಾರ–ಇವೆಲ್ಲವೂ ನನಗಾಗಿ ಅವರಿಂದ ಆಗುತ್ತಿದೆ ಎಂದು ತಿಳಿ. ಆದರೆ ಅವರು ನನ್ನೊಳಗಿದ್ದಾರೆ. ನಾನು ಅವರಲ್ಲಿ ಇಲ್ಲ. ಏಕೆಂದರೆ ಕಾಲಬ್ರಹ್ಮನು ಈ ಮೂರೂ ದೇವರುಗಳಿಂದ ಭಿನ್ನವಾಗಿರುತ್ತಾನೆ (ಗೀತೆಯ 7ನೇ ಅಧ್ಯಾಯದ 12ನೇ ಶ್ಲೋಕ)

❖ ಇಡೀ ಪ್ರಪಂಚವು ಈ ಮೂರು ಗುಣಗಳ (ರಜೋಗುಣ ಬ್ರಹ್ಮಾ, ಸಾತ್ವಿಕಗುಣ ವಿಷ್ಣು ಹಾಗೂ ತಮೋಗುಣ ಶಿವ) ಮೇಲೆ ಮೋಹಿತವಾಗಿದೆ. ಇವುಗಳವರೆಗೆ ಮಾತ್ರ ಜ್ಞಾನ ಸಂಪಾದಿಸಿದೆ. ಈ ಮೂರೂ ದೇವತೆಗಳಿಗಿಂತ ಭಿನ್ನವಾದ ನನ್ನನ್ನು ಹಾಗೂ (ಅವ್ಯಯಮ್) ಆ ಅವಿನಾಶಿ ಪರಮಾತ್ಮನನ್ನು ತಿಳಿದುಕೊಂಡಿಲ್ಲ. (ಗೀತೆಯ 7ನೇ ಅಧ್ಯಾಯದ 13 ನೇ ಶ್ಲೋಕ)

❖ ಏಕೆಂದರೆ ಈ ಅಲೌಕಿಕ ತ್ರಿಗುಣಮಯೀ ನನ್ನ ಮಾಯೆಯೂ (ಅರ್ಥಾತ್ ನನ್ನ ಪುತ್ರರ ಮೂಲಕ ಹರಡಿರುವ ಮಾಯಾಜಾಲ) ವ್ಯರ್ಥ. ಕೆಲಸಕ್ಕೆ ಬಾರದಿರುವುದೇ ಆಗಿದೆ. ಯಾವ ಸಾಧಕನು ಕೇವಲ ನನ್ನನ್ನು (ಕಾಲಬ್ರಹ್ಮ) ಭಜಿಸುವನೋ ಅವನು ಈ ಮಾಯೆ (ಬ್ರಹ್ಮಾ, ವಿಷ್ಣು, ಮಹೇಶ್ವರನ ಭಕ್ತಿಯಿಂದ ಉಂಟಾಗುವ ಲಾಭಕ್ಕಿಂತ ಅಧಿಕ ಲಾಭ ಬ್ರಹ್ಮ ಭಕ್ತಿಯಲ್ಲಿದೆ. ಆದ್ದರಿಂದ ಯಾರು ಈ ಮೂವರಿಂದ ಸಿಗುವ ಲಾಭವನ್ನು ತ್ಯಜಿಸಿ ಕಾಲಬ್ರಹ್ಮನ ಸಾಧನೆಯನ್ನು ಮಾಡುವರೋ ಅವರು ಇದನ್ನು ಉಲ್ಲಂಘಿಸಿ ಅಂದರೆ ಇವರ ಸಾಧನೆಯನ್ನು ತ್ಯಜಿಸುತ್ತಾರೆ) ಯನ್ನು ಉಲ್ಲಂಘಿಸುತ್ತಾನೆ (ಗೀತೆಯ 7ನೇ ಅಧ್ಯಾಯದ 14ನೇ ಶ್ಲೋಕ).

❖ ಗೀತೆಯ 7ನೇ ಅಧ್ಯಾಯದ 15ನೇ ಶ್ಲೋಕದಲ್ಲಿ ಹೇಳಿದೆ, "ಮೂರೂ ಗುಣಗಳ

ರೂಪದಲ್ಲಿರುವ ಮಾಯಾಜಾಲದ ಮೂಲಕ ಯಾರ ಜ್ಞಾನವನ್ನು ಕದಿಯಲ್ಪಟ್ಟಿದೆಯೋ ಅಂದರೆ ಯಾವ ಸಾಧಕನು ಈ ಮೂರೂ ದೇವರಿಗಿಂತ ಭಿನ್ನನಾದ ಪ್ರಭುವನ್ನು ಅರಿತಿರುವುದಿಲ್ಲವೋ, ಅವನು ಈ ಮೂವರಿಂದ ಸಿಗುವ ನೆಪಮಾತ್ರದ ಲಾಭವನ್ನೇ ಮೋಕ್ಷವೆಂದು ತಿಳಿದು ಅವರಿಗೇ ಅಂಟಿಕೊಂಡು ಇರುತ್ತಾನೆ ಹಾಗೂ ಮನುಷ್ಯರಲ್ಲಿ ನೀಚಗುಣ ಇರುವವನು ಹಾಗೂ ದೂಷಿತ ಕರ್ಮವನ್ನು ಮಾಡುವ ಮೂರ್ಖನು ಕಾಲಬ್ರಹ್ಮನನ್ನು ಅರಿಯುವುದೇ ಇಲ್ಲ. (ಗೀತೆಯ 7ನೇ ಅಧ್ಯಾಯದ 15ನೇ ಶ್ಲೋಕ).

❖ ಗೀತೆಯ 14ನೇ ಅಧ್ಯಾಯದ 19ನೇ ಶ್ಲೋಕದಲ್ಲಿ ಗೀತೆಯನ್ನು ಬೋಧಿಸಿದಾತನು ಹೇಳಿರುವುದೇನೆಂದರೆ, ಯಾವಾಗ ತತ್ವಜ್ಞಾನವನ್ನು ಕೇಳುವವನು ಹಾಗೂ ಮೂರು ಗುಣಗಳ ಇಷ್ಟ ರೂಪದಲ್ಲಿ ಪೂಜಿಸುವವನು ತನ್ನ ಹಳೆಯ ಧೋರಣೆಯನ್ನು ಬದಲಿಸುವುದಿಲ್ಲವೋ ಅಂದರೆ ಈ ಮೂವರ ವಿನಃ ಬೇರೆ ಯಾರನ್ನೂ ಕರ್ತೃ ಎಂದು ಭಾವಿಸುವುದಿಲ್ಲವೋ, ಹಾಗೂ ಈ ಮೂವರನ್ನು ಬಿಟ್ಟು ನನ್ನನ್ನು ಪೂಜಿಸುವುದಿಲ್ಲವೋ ಅವನ ಜೀವನ ವ್ಯರ್ಥ. ಯಾರು ಈ ಮೂವರನ್ನು ಬಿಟ್ಟು ಪರಮಾತ್ಮನ ಜ್ಞಾನವನ್ನು ಪಡೆಯುವರೋ ಅವರು ನನ್ನ ಅಧೀನದಲ್ಲೇ ಇರುವರು. (ಗೀತೆ 14ನೇ ಅಧ್ಯಾಯದ 19ನೇ ಶ್ಲೋಕ).

ಗೀತೆಯ 14ನೇ ಅಧ್ಯಾಯದ 20ನೇ ಶ್ಲೋಕದಲ್ಲಿ ಗೀತೆಯನ್ನು ಬೋಧಿಸಿದಾತನು ಹೇಳಿದ್ದಾನೆ, "ದೇಹ ಪಡೆದಿರುವ ಮನುಷ್ಯನು ಈ ಮೂವರನ್ನು ಉಲ್ಲಂಘಿಸಿ, ಅಂದರೆ ಈ ಮೂವರ ಪೂಜೆಯನ್ನು ತ್ಯಜಿಸಿ ಜನನ–ಮರಣ ಮತ್ತು ವೃದ್ಧಾಪ್ಯ ಹಾಗೂ ಎಲ್ಲಾ ರೀತಿಯ ದುಃಖಗಳಿಂದ ಮುಕ್ತಿ ಹೊಂದಿ ಪರಮಾನಂದ ಅಂದರೆ ಗೀತೆಯ 18ನೇ ಅಧ್ಯಾಯದ 62ನೇ ಹಾಗೂ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ವರ್ಣಿಸಿರುವಂತೆ ಪರಮ ಶಾಂತಿ ಮತ್ತು ಸನಾತನ ಪರಮಪದವನ್ನು ಪಡೆಯುತ್ತಾನೆ.

ಸಾರಾಂಶ :– ಮೂರೂ ದೇವರ (ಬ್ರಹ್ಮಾ ರಜೋಗುಣ, ವಿಷ್ಣು ಸದ್ಗುಣ ಹಾಗೂ ಶಿವ ತಮೋಗುಣ) ಪೂಜೆ ಮಾಡುವ ರಾಕ್ಷಸ ಸ್ವಭಾವವನ್ನು ಹೊಂದಿರುವ ಮನುಷ್ಯರನ್ನು ನೀಚ ಹಾಗೂ ಕೆಟ್ಟ ಕರ್ಮವನ್ನು ಮಾಡುವ ಮೂರ್ಖ ಎಂದು ಕರೆಯಲಾಗಿದೆ. ಅಂದರೆ ಇವರ ಪೂಜೆ ಮಾಡಬಾರದೆನ್ನುವುದಕ್ಕೆ ಕಾರಣ 1. ರಜೋಗುಣದ ಬ್ರಹ್ಮಾನ ಪೂಜೆಯನ್ನು ಹಿರಣ್ಯ ಕಶಿಪು ಮಾಡಿದ್ದನು. ತನ್ನ ಪುತ್ರನಾದ ಪ್ರಹ್ಲಾದನ ಶತ್ರುವಾದನು, ರಾಕ್ಷಸನೆನಿಸಿಕೊಂಡನು. ನಾಯಿಯಂತೆ ನೀಚವಾಗಿ ಸತ್ತು ಹೋದನು. ಕಾರಣ 2. ತಮೋಗುಣದ ಶಿವನ ಪೂಜೆಯನ್ನು ರಾವಣ ಮಾಡುತ್ತಿದ್ದನು. ಅವನು ಜಗನ್ಮಾತೆ ಸೀತೆಯನ್ನು ಅಪಹರಿಸಿ ತನ್ನ ಪತ್ನಿಯನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿದನು. ರಾಕ್ಷಸನೆನಿಸಿಕೊಂಡು ಅಕಾಲ ಮರಣವನ್ನಪ್ಪಿದನು. ಕಾರಣ 3. ವಿಷ್ಣುವಿನ ಪೂಜೆ ಮಾಡುವವರನ್ನು ವೈಷ್ಣವನೆನ್ನುವರು. ಒಮ್ಮೆ ಹರಿದ್ವಾರದಲ್ಲಿ ಕುಂಭಮೇಳವಾಯಿತು. ಅಲ್ಲಿ ಸ್ನಾನ ಮಾಡಲು ಎಲ್ಲಾ ಸಂತರು ಅಲ್ಲಿಗೆ ಬಂದರು. ನಾಗಾ ಸಾಧುಗಳು ತಮೋಗುಣದ ಶಿವನ ಆರಾಧಕರು. ವೈಷ್ಣವರು ಸಾತ್ವಿಕಗುಣದ ವಿಷ್ಣುವಿನ ಆರಾಧಕರು. ಎಲ್ಲರೂ ಹರಿದ್ವಾರದ ನದಿ ತೀರದಲ್ಲಿ ಸ್ನಾನ ಮಾಡಲು ಸಿದ್ಧತೆ ನಡೆಸಿದ್ದರು. ಅವರು ಸುಮಾರು 20 ಸಾವಿರದಷ್ಟಿದ್ದರು. ವೈಷ್ಣವರೂ ಸುಮಾರು ಅಷ್ಟೇ ಸಂಖ್ಯೆಯಲ್ಲಿದ್ದರು. ವೈಷ್ಣವ ಸಾಧುಗಳು, 'ನಾವೇ ಶ್ರೇಷ್ಠರು, ನಾವು ಮೊದಲು ಸ್ನಾನ ಮಾಡುತ್ತೇವೆ' ಎಂದು ನಾಗಾ ಸಾಧುಗಳಿಗೆ ಹೇಳಿದರು. ಈ ವಿಷಯದಲ್ಲಿ ಅವರಲ್ಲೇ ಜಗಳ ಪ್ರಾರಂಭವಾಯಿತು. ಕತ್ತಿ, ಚೂರಿ, ಲಾಠಿಗಳಿಂದ ಹೊಡೆದಾಡಲಾರಂಭಿಸಿದರು. ಎರಡೂ ಪಕ್ಷಗಳಿಂದ ಸುಮಾರು 25 ಸಾವಿರದಷ್ಟು ಸಾಧುಗಳು ಹೊಡೆದಾಡುತ್ತಾ ಸತ್ತುಬಿದ್ದರು.

ಆದ್ದರಿಂದ ಗೀತೆಯ 7ನೇ ಅಧ್ಯಾಯದ 12 ನೇ ಶ್ಲೋಕದಿಂದ 15ನೇ ಶ್ಲೋಕದವರೆಗೆ ಮೂರೂ ಗುಣಗಳ ಉಪಾಸಕರನ್ನು ರಾಕ್ಷಸ ಸ್ವಭಾವವನ್ನು ಹೊಂದಿರುವವರು ಹಾಗೂ ಕೆಟ್ಟ ಕೆಲಸ

ಮಾಡುವ ಮೂರ್ಖರು ಎಂದು ಕರೆದಿದ್ದಾರೆ.

ಇದರಿಂದ ಸ್ಪಷ್ಟವಾಗಿದ್ದೇನೆಂದರೆ, ರಜೋಗುಣದ ಬ್ರಹ್ಮಾ, ಸಾತ್ವವಿಕಗುಣದ ವಿಷ್ಣು ಹಾಗೂ ತಮೋಗುಣದ ಶಿವನನ್ನು ಆರಾಧಿಸುವವರು ಮೂರ್ಖರು, ರಾಕ್ಷಸರು, ಹಾಗೂ ರಾಕ್ಷಸರಲ್ಲಿ ನೀಚ ಹಾಗೂ ಕೆಟ್ಟ ಕೆಲಸ ಮಾಡುವ ನೀಚ ವ್ಯಕ್ತಿಗಳು ಅಂದರೆ ಇವರ ಪೂಜೆ ಮಾಡುವುದನ್ನು ಗೀತೆಯಲ್ಲೂ ನಿಷೇಧಿಸಲಾಗಿದೆ. ಆದ್ದರಿಂದ ಇವರನ್ನು ಇಷ್ಟ ರೂಪದಲ್ಲಿ ಪೂಜಿಸುವುದು ವ್ಯರ್ಥ.

## "ಪೂಜೆ ಮತ್ತು ಸಾಧನೆಯಲ್ಲಿರುವ ವ್ಯತ್ಯಾಸ"

ಪ್ರಶ್ನೆ :– ಕಾಲಬ್ರಹ್ಮನ ಪೂಜೆ ಮಾಡಬೇಕೋ ಬೇಡವೋ? ಗೀತೆಯಲ್ಲಿ ಇದಕ್ಕೆ ಸಾಕ್ಷಿ ತೋರಿಸಿ.

ಉತ್ತರ :– ಮಾಡಬಾರದು, ಮೊದಲು ನಿಮಗೆ ಪೂಜೆ ಮತ್ತು ಸಾಧನೆಗೆ ಇರುವ ವ್ಯತ್ಯಾಸವನ್ನು ತಿಳಿಸುತ್ತೇವೆ.

ಭಕ್ತಿ ಅರ್ಥಾತ್ ಪೂಜೆ :– ಭೂಮಿಯ ಒಳಗಡೆ ಶೀತಲವಾದ ಜಲವಿದೆ ಎನ್ನುವುದು ನಮಗೆ ತಿಳಿದಿದೆ. ಅದನ್ನು ಪಡೆಯುವುದು ಹೇಗೆ? ಅದನ್ನು ಪಡೆಯಲು ಬೋರ್‌ವೆಲ್ ಮೂಲಕ ನೆಲವನ್ನು ಕೊರೆಯಲಾಗುತ್ತದೆ. ಅದಕ್ಕೆ ಒಂದು ಕಬ್ಬಿಣದ ಕೊಳವೆ ಜೋಡಿಸಲಾಗುತ್ತದೆ. ನಂತರ ಹ್ಯಾಂಡ್ ಪಂಪ್‌ನ ಮಷೀನನ್ನು ಜೋಡಿಸಲಾಗುತ್ತದೆ. ಆಗ ಆ ಜೀವಜಲ ಪ್ರಾಪ್ತಿಯಾಗುತ್ತದೆ.

ಪೂಜನೀಯವಾದ ಜಲವನ್ನು ಪಡೆಯಲು ಕೆಲವು ಉಪಕರಣಗಳನ್ನು ಜೋಡಿಸಬೇಕು ಹಾಗೂ ಸಾಧನೆ ಎನ್ನುವ ಪ್ರಯತ್ನ ಮಾಡಬೇಕು. ಕೇವಲ ಉಪಕರಣಗಳ ಪೂಜೆ ಮಾಡುವುದರಲ್ಲೇ ನಿರತರಾದರೆ ನಮಗೆ ಜಲ ಲಭ್ಯವಾಗುವುದಿಲ್ಲ. ಉಪಕರಣಗಳ ಮೂಲಕ ಪೂಜ್ಯ ವಸ್ತು ಪ್ರಾಪ್ತವಾಗುತ್ತದೆ.

ಅನ್ಯ ಉದಾಹರಣೆಗಳು :– ಪತಿವ್ರತೆಯು ತನ್ನ ಕುಟುಂಬದ ಎಲ್ಲಾ ಸದಸ್ಯರನ್ನು ಬಹಳ ಗೌರವಿಸುತ್ತಾಳೆ. ಅತ್ತೆ ಮಾವಂದಿರನ್ನು ತಂದೆ ತಾಯಿಯಂತೆ ಕಾಣುವುದು, ನಾದಿನಿಯರನ್ನು ಅಕ್ಕ ತಂಗಿಯರಂತೆ, ಮೈದುನನನ್ನು ಅಣ್ಣ ತಮ್ಮಂದಿರಂತೆ ಕಾಣುತ್ತಾಳೆ. ತನ್ನ ಪತಿಯನ್ನು ಪೂಜಿಸುತ್ತಾಳೆ, ಅವರಿಂದ ಬೇರೆಯಾದಾಗ ತನಗೆ ಸಂಬಂಧಿಸಿದ ವಸ್ತುಗಳೆಲ್ಲವನ್ನೂ ಗಂಡನಿಗೆ ಸೇರಿದ ಮನೆಗೆ ತೆಗೆದುಕೊಂಡು ಹೋಗುತ್ತಾಳೆ.

ಅನ್ಯ ಉದಾಹರಣೆ:– ನಮಗೆ ಮಾವಿನ ಹಣ್ಣು ತಿನ್ನಬೇಕೆಂಬ ಇಚ್ಛೆ ಇರುತ್ತದೆ ಎಂದಿಟ್ಟುಕೊಳ್ಳೋಣ. ನಮಗೆ ಆಗ ಮಾವಿನಹಣ್ಣು ಪೂಜನೀಯವೆನಿಸುತ್ತದೆ. ಅದನ್ನು ಪಡೆಯಲು ನಮಗೆ ಹಣದ ಅವಶ್ಯಕತೆ ಇರುತ್ತದೆ. ಹಣ ಪಡೆಯಲು ಕೂಲಿ/ನೌಕರಿ/ವ್ಯವಸಾಯ ಮಾಡಬೇಕಾಗುತ್ತದೆ. ಆಗ ನಮಗೆ ಮಾವಿನ ಹಣ್ಣು ಪ್ರಾಪ್ತವಾಗುತ್ತದೆ. ಆದ್ದರಿಂದ ಮಾವಿನಹಣ್ಣು ಪೂಜನೀಯವಾದುದು ಹಾಗೂ ಉಳಿದ ಕ್ರಿಯೆಗಳು ಸಾಧನೆಯ ಮೆಟ್ಟಿಲುಗಳು. ಸಾಧ್ಯವಸ್ತುವನ್ನು ಪಡೆಯಲು ಸಾಧನೆ ಮಾಡಬೇಕಾಗುವುದು. ಸಾಧನೆ ಬೇರೆ, ಪೂಜೆ ಅಂದರೆ ಭಕ್ತಿ ಬೇರೆ. ಈಗ ಸ್ಪಷ್ಟವಾಯಿತಾ?

ಬ್ರಹ್ಮನ ಪೂಜೆ ಮಾಡಬೇಕಾ ಎನ್ನುವುದರ ಬಗ್ಗೆ ಪ್ರಶ್ನೆ ಎದ್ದಿದೆ. ಇದರ ಉತ್ತರವಾಗಿ ಹೇಳುವುದೇನೆಂದರೆ, ಪೂಜೆ ಮಾಡಬಾರದು. ಭಗವದ್ಗೀತೆಯಲ್ಲಿ ಇದಕ್ಕೆ ಸಾಕ್ಷಿ ತೋರಿಸಲಾಗುತ್ತದೆ.

ಗೀತೆಯ 7ನೇ ಅಧ್ಯಾಯದ 12ರಿಂದ 15ನೇ ಶ್ಲೋಕದವರೆಗೆ ಗೀತೆಯನ್ನು ಬೋಧಿಸಿದಾತನು ಹೇಳಿದ್ದಾನೆ. ಮೂರೂ ಗುಣಗಳ (ರಜೋಗುಣದ ಬ್ರಹ್ಮಾ, ಸಾತ್ವಿಕ ಗುಣದ ವಿಷ್ಣು ಹಾಗೂ ತಮೋಗುಣದ ಶಿವ) ಭಕ್ತಿಯು ವ್ಯರ್ಥ ಎಂದು ಹೇಳಲಾಗಿದೆ. ಹಾಗೂ ಗೀತೆಯ 7ನೇ ಅಧ್ಯಾಯದ

16, 17, 18 ನೇ ಶ್ಲೋಕಗಳಲ್ಲಿ ಗೀತೆ ಬೋಧಿಸಿದಾತನು, ತನ್ನನ್ನು ಭಕ್ತಿಯಿಂದ ಆರಾಧಿಸಿದಾಗ ಉಂಟಾಗುವ ಮೋಕ್ಷವನ್ನು ಅನುತ್ತಮ ಅಂದರೆ ಕೆಟ್ಟದ್ದು ಎಂದು ಹೇಳಿದ್ದಾನೆ. ನಾಲ್ಕು ಬಗೆಯ ವ್ಯಕ್ತಿಗಳು ನನ್ನನ್ನು ಭಕ್ತಿಯಿಂದ ಆರಾಧಿಸುತ್ತಾರೆ ಎಂದಿದ್ದಾನೆ.

1) ಅರ್ಥಾರ್ಥಿ :– ಧನ ಲಾಭಕ್ಕಾಗಿ ವೇದಗಳ ಅನುಸಾರವಾಗಿ ಅನುಷ್ಠಾನ ಮಾಡುವವರು.

2) ಆರ್ತರು :– ಕಷ್ಟಗಳ ಪರಿಹಾರಕ್ಕಾಗಿ ವೇದಗಳ ಪ್ರಕಾರವಾಗಿ ಅನುಷ್ಠಾನ ಮಾಡುವವರು.

3) ಜಿಜ್ಞಾಸು :– ಪರಮಾತ್ಮನ ವಿಷಯದಲ್ಲಿ ತಿಳಿಯಲು ಇಚ್ಛಿಸುವವರು (ಜ್ಞಾನವನ್ನು ಪಡೆದು ಸ್ವತಃ ವಾಗ್ಮಿಯಾದವರು)

ಈ ಮೂರೂ ಬಗೆಯ ಬ್ರಹ್ಮನ ಉಪಾಸಕರನ್ನು ವ್ಯರ್ಥವೆಂದು ಪರಿಗಣಿಸಲಾಗಿದೆ.

4) ಜ್ಞಾನಿ :– ಮಾನವ ಜನ್ಮ ದುರ್ಲಭವಾದುದು ಎಂದು ಜ್ಞಾನಿಗೆ ತಿಳಿಯುತ್ತದೆ. ಮನುಷ್ಯ ಜೀವನವನ್ನು ಪಡೆದು ಆತ್ಮಕಲ್ಯಾಣ ಮಾಡಿಕೊಳ್ಳಬೇಕು. ಅನ್ಯ ದೇವರನ್ನು ಪೂಜಿಸುವುದರಿಂದ ಮೋಕ್ಷವು ಸಿಗುವುದಿಲ್ಲವೆನ್ನುವುದು ಅವರಿಗೆ ತಿಳಿಯುತ್ತದೆ. ಆದ್ದರಿಂದ ಒಬ್ಬನೇ ಪರಮಾತ್ಮನನ್ನು ಅನನ್ಯ ಮನಸ್ಸಿನಿಂದ ಆರಾಧಿಸುವುದರಿಂದ ಪೂರ್ಣ ಮೋಕ್ಷವು ಸಂಭವವಾಗುತ್ತದೆ. ಅವರಿಗೆ ತತ್ವದರ್ಶಿ ಸಂತನು ಸಿಗದೆ ಇರುವ ಕಾರಣ ಅವರು ವೇದಗಳನ್ನು ಅರಿಯುತ್ತಾರೆ. ಅದರ ಪ್ರಕಾರವಾಗಿ ಬ್ರಹ್ಮನನ್ನು ಒಬ್ಬ ಸಮರ್ಥ ಪ್ರಭು ಎಂದು ತಿಳಿದು ಯಜುರ್ವೇದದ 40ನೇ ಅಧ್ಯಾಯದ 15ನೇ ಮಂತ್ರದಿಂದ 'ಓಂ' ನಾಮವನ್ನು ಪಡೆದು ಭಕ್ತಿಯಿಂದ ಇದ್ದರು. ಆದರೆ ಪೂರ್ಣ ಮೋಕ್ಷ ಪಡೆಯಲಾಗಲಿಲ್ಲ. 'ಓಂ' ನಾಮ ಬ್ರಹ್ಮ ಸಾಧನೆಯದ್ದಾಗಿದೆ. ಇದರಿಂದ ಬ್ರಹ್ಮಲೋಕವು ಪ್ರಾಪ್ತಿಯಾಗುತ್ತದೆ. ಇದನ್ನು ಈ ಮೊದಲೂ ಸಹ ಪುಷ್ಟೀಕರಿಸಲಾಗಿದೆ. ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಹೇಳಿದ ಹಾಗೆ ಬ್ರಹ್ಮಲೋಕದ ಪರ್ಯಂತ ಎಲ್ಲಾಲೋಕಗಳು ಪುನರಾವರ್ತಿಯಲ್ಲಿದೆ. ಅಂದರೆ ಬ್ರಹ್ಮಲೋಕಕ್ಕೆ ತೆರಳಿದ ಸಾಧಕರೂ ಸಹ ಪುನಃ ಈ ಪ್ರಪಂಚಕ್ಕೆ ಬಂದು ಜನನ–ಮರಣದ ಚಕ್ರದಲ್ಲಿ ಸಿಲುಕುತ್ತಾರೆ.

ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಿರುವ ಕಾಲಬ್ರಹ್ಮನ ಸಾಧನೆಯಿಂದ ಆ ಮೋಕ್ಷವು ಪ್ರಾಪ್ತವಾಗುವುದಿಲ್ಲ. ತತ್ವಜ್ಞಾನದಿಂದ ಅಜ್ಞಾನವನ್ನು ತೊರೆದು ಪರಮೇಶ್ವರನ ಆ ಪರಮ ಪದದ ಹುಡುಕಾಟ ನಡೆಸಬೇಕು. ಅಲ್ಲಿಗೆ ಹೋದ ನಂತರ ಸಾಧಕನು ಮರಳಿ ಈ ಪ್ರಪಂಚಕ್ಕೆ ಬರುವುದಿಲ್ಲ ಎಂದು ಗೀತೆಯಲ್ಲಿ ಹೇಳಿದೆ.

❖ ಗೀತೆಯ 7ನೇ ಅಧ್ಯಾಯದ 18ನೇ ಶ್ಲೋಕದಲ್ಲಿ ಗೀತೆಯನ್ನು ಬೋಧಿಸಿದಾತನು ಹೇಳಿದ್ದಾನೆ, "ಈ ಜ್ಞಾನಿ ಆತ್ಮವು (ನಾಲ್ಕನೇ ಸಂಖ್ಯೆಯ ಬ್ರಹ್ಮನ ಸಾಧಕರೆಂದು ಕರೆಯಲಾಗಿದೆ) ಉದಾರವಾಗಿದೆ ಅಂದರೆ ಒಳ್ಳೆಯದಾಗಿದೆ ಆದರೆ ತತ್ವಜ್ಞಾನದ ಕೊರತೆಯಿಂದ ನನ್ನ ಅನುತ್ತಮ ಮೋಕ್ಷದಲ್ಲೇ ಉಳಿದಿದೆ." ಗೀತೆಯನ್ನು ಬೋಧಿಸಿದಾತನು ತನ್ನ ಸಾಧನೆಯಿಂದ ಪ್ರಾಪ್ತವಾಗುವ ಮೋಕ್ಷವನ್ನು ಅನುತ್ತಮ ಅಂದರೆ ಕೆಟ್ಟದ್ದೆಂದೇ ಹೇಳಿದ್ದಾನೆ. ಆದ್ದರಿಂದ ಆ ಬ್ರಹ್ಮನ ಪೂಜೆಯನ್ನು ಮಾಡುವುದು ಸರಿಯಲ್ಲ.

ಕಾರಣ :– ಒಬ್ಬ ಚುಣಕ ಎಂಬ ಹೆಸರಿನ ಋಷಿ ಜ್ಞಾನಿ ಆತ್ಮವನು ಅವನು ಸಾವಿರ ವರ್ಷಗಳ ಕಾಲ ಓಂ ನಾಮ ಜಪವನ್ನು ಮತ್ತು ಹಠಯೋಗವನ್ನು ಮಾಡಿದ್ದನು. ಅದರಿಂದ ಅವನಿಗೆ ಸಿದ್ಧಿಗಳು ಒಲಿದವು. ಬ್ರಹ್ಮನ ಸಾಧನೆ ಮಾಡುವುದರಿಂದ ಜನನ–ಮರಣ, ಸ್ವರ್ಗ–ನರಕದ ಚಕ್ರವು ಸದಾಕಾಲವೂ ಇರುವುದು, ಏಕೆಂದರೆ ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ ಹಾಗೂ 4ನೇ ಅಧ್ಯಾಯದ 5ನೇ ಶ್ಲೋಕ ಮತ್ತು 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ

ಗೀತೆಯನ್ನು ಬೋಧಿಸಿದಾತನು ಹೇಳಿದ್ದಾನೆ. "ಹೇ ಅರ್ಜುನ! ನಿನ್ನ ಮತ್ತು ನನ್ನ ಅನೇಕ ಜನ್ಮಗಳು ಆಗಿ ಹೋದವು. ನಿನಗೆ ಗೊತ್ತಿಲ್ಲ, ಆದರೆ ನನಗೆ ಗೊತ್ತಿದೆ. ನೀನು, ನಾನು ಹಾಗೂ ಈ ಎಲ್ಲಾ ರಾಜರು ಈ ಮೊದಲೇ ಹುಟ್ಟಿದ್ದರು. ಮುಂದೆಯೂ ಹುಟ್ಟುತ್ತಾರೆ. ನಾವೆಲ್ಲಾ ಈಗಲೇ ಹುಟ್ಟಿದ್ದೇವೆ ಎಂದು ಯೋಚಿಸಬೇಡ. ನನ್ನ ಹುಟ್ಟು ಮಹರ್ಷಿಗಳು ಮತ್ತು ಈ ದೇವ–ದೇವತೆಯರಿಗೆ ತಿಳಿದಿಲ್ಲ ಏಕೆಂದರೆ ಅವರೆಲ್ಲಾ ನನ್ನಿಂದ ಹುಟ್ಟಿದವರು.

ಇದರಿಂದ ಸ್ಪಷ್ಟವಾಗುವುದೇನೆಂದರೆ, ಗೀತೆಯನ್ನು ಬೋಧಿಸಿದ ಬ್ರಹ್ಮನೂ ಹುಟ್ಟುತ್ತಾನೆ, ಸಾಯುತ್ತಾನೆ ಎಂದಾದರೆ ಅವನನ್ನು ಆರಾಧಿಸುವ ಉಪಾಸಕನು ಅಮರನು ಹೇಗಾಗುತ್ತಾನೆ? ಗೀತೆಯ 18ನೇ ಅಧ್ಯಾಯದ 62 ನೇ ಶ್ಲೋಕದಲ್ಲಿ ಹಾಗೂ 15ನೇ ಅಧ್ಯಾಯದ 4ನೇ ಶ್ಲೋಕಗಳಲ್ಲಿ ಗೀತೆಯ ಜ್ಞಾನವನ್ನು ಬೋಧಿಸಿದಾತನು ಸ್ಪಷ್ಟಪಡಿಸಿದ್ದಾನೆ. "ಭಾರತವೇ? ನೀನು ಸರ್ವಭಾವದಿಂದ ಪರಮ ಅಕ್ಷರಬ್ರಹ್ಮನ ಆಶ್ರಯಕ್ಕೆ ಹೋಗು. ಆ ಪರಮೇಶ್ವರನ ಕೃಪೆಯಿಂದ ನೀನು ಪರಮಶಾಂತಿಯನ್ನು ಮತ್ತು ಸನಾತನ ಪರಮಪದ ಅಂದರೆ ಸತ್ಯ ಲೋಕವನ್ನು ಪಡೆದುಕೊಳ್ಳುವೆ. ತತ್ವಜ್ಞಾನವನ್ನು ತಿಳಿದ ನಂತರ ಸಾಧಕನು ಮರಳಿ ಈ ಪ್ರಪಂಚಕ್ಕೆ ಬಾರದಿರುವಂತಹ ಪರಮಪದದ ಹುಡುಕಾಟವನ್ನು ನಡೆಸಬೇಕು." ನೀವು ಮತ್ತೆ ಯೋಚಿಸಿ. ಗೀತೆಯನ್ನು ಬೋಧಿಸಿದಾತನು ಸ್ವತಃ ಜನ್ಮಿಸುತ್ತಾನೆ, ಮರಣ ಹೊಂದುತ್ತಾನೆ. ಆದ್ದರಿಂದ ಬ್ರಹ್ಮನ ಪೂಜೆಯನ್ನು ಉತ್ತಮವಲ್ಲವೆಂದು ಹೇಳಲಾಗಿದೆ.

ಈಗ ಚುಣಕ ಮಹರ್ಷಿಗಳ ಪ್ರಸಂಗವನ್ನು ಹೇಳುತ್ತೇವೆ :– ಚುಣಕ ಋಷಿಗಳು ಓಂ ನಾಮದ ಜಪವನ್ನು ಮತ್ತು ಹಠಯೋಗವನ್ನು ಮಾಡಿದರು. ವೇದಗಳ (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ)ಲ್ಲಿ ಹೇಳಲಾದ ಭಕ್ತಿಯಿಂದ ಪರಮಾತ್ಮನು ಪ್ರಾಪ್ತಿಯಾಗುವುದಿಲ್ಲ. ಇದಕ್ಕೆ ಸ್ಪಷ್ಟೀಕರಣ ಗೀತೆಯ 11ನೇ ಅಧ್ಯಾಯದ 47–48ನೇ ಶ್ಲೋಕದಲ್ಲಿದೆ. ಗೀತೆಯನ್ನು ಬೋಧಿಸಿದಾತನು ಹೇಳಿದ್ದಾನೆ. "ಹೇ ಅರ್ಜುನ! ನನ್ನದು ಕಾಲಬ್ರಹ್ಮನ ವಿರಾಟರೂಪ. ನನ್ನ ಈ ರೂಪದ ದರ್ಶನ ನಿನ್ನನ್ನು ಬಿಟ್ಟು ಇನ್ಯಾರಿಗೂ ಆಗಿಲ್ಲ. ನಾನು ನಿನಗೇ ಅನುಗ್ರಹಿಸಿ ಈ ರೂಪವನ್ನು ತೋರಿಸಿರುವೆ. ನನ್ನ ಈ ರೂಪದ ದರ್ಶನ ಅರ್ಥಾತ್ ಬ್ರಹ್ಮ ಪ್ರಾಪ್ತಿಯು ವೇದಗಳಲ್ಲಿ ತಿಳಿಸಿರುವ ಪ್ರಕಾರದಿಂದ ಅಂದರೆ ಓಂ ನಾಮ ಜಪದಿಂದ, ತಪದಿಂದ, ಹವನದಿಂದ, ವಿಧವಿಧವಾದ ಹೋಮ ಹವನಗಳಿಂದ ದೊರೆಯುವುದಿಲ್ಲ. ಅಂದರೆ ವೇದಗಳಲ್ಲಿ ವರ್ಣಿಸಿದ ವಿಧಾನಗಳಿಂದ ಬ್ರಹ್ಮಪ್ರಾಪ್ತಿಯಾಗುವುದಿಲ್ಲ. ಇದೇ ಕಾರಣದಿಂದ ಚುಣಕ ಮಹರ್ಷಿಗಳೂ ಸಹ ಬ್ರಹ್ಮನನ್ನು ನಿರಾಕಾರ ಎಂದು ಹೇಳಿರಬಹುದು. ಚುಣಕ ಋಷಿಗಳಿಗೆ ಸಿದ್ಧಿಗಳು ಒಲಿದವು. ಇದರಿಂದ ಅವರು ಪ್ರಪಂಚದಲ್ಲಿ ಪ್ರಸಿದ್ಧರಾದರು. ಸಿದ್ಧಿಯನ್ನು ಪಡೆದ ಸಾಧಕರು ತಮ್ಮ ಅನೇಕ ವರ್ಷಗಳ ಸಾಧನೆಯಿಂದ ಚಾರ್ಜ್ ಮಾಡಿದ ಬ್ಯಾಟರಿಯಿಂದ ಯಾರಿಗಾದರೂ ಶಾಪವನ್ನು ಕೊಟ್ಟು ತಮ್ಮ ಶಕ್ತಿಯನ್ನು ನಾಶಮಾಡಿಕೊಳ್ಳುತ್ತಾರೆ ಹಾಗೂ ಯಾರನ್ನಾದರೂ ಆಶೀರ್ವದಿಸಿ ತಮ್ಮ ಶಕ್ತಿಯನ್ನು ನಾಶಪಡಿಸಿಕೊಳ್ಳುತ್ತಾರೆ. ತಮ್ಮ ಸಿದ್ಧಿಯಿಂದ ಯಾರ ಮೇಲಾದರೂ ತಂತ್ರ–ಮಂತ್ರ ಮಾಡಿ ತಮ್ಮ ಶಕ್ತಿಯನ್ನು ನಾಶಪಡಿಸಿಕೊಳ್ಳುತ್ತಾರೆ ಹಾಗೂ ಪ್ರಪಂಚದಲ್ಲಿ ಪ್ರಶಂಸೆಗೆ ಪಾತ್ರರಾಗುತ್ತಾ ಸ್ವತಃ ಪ್ರಭುಗಳಾಗುತ್ತಾರೆ.

ಒಬ್ಬ ಮಾನಧಾತಾ ಎಂಬ ಚಕ್ರವರ್ತಿ ರಾಜನಿದ್ದನು. ಅವನು ಇಡೀ ಭೂಮಿಯನ್ನು ಆಳುತ್ತಿದ್ದನು. ಇಡೀ ಭೂಮಿಯಲ್ಲಿ ಬೇರೆ ರಾಜರು ನನ್ನ ಅಧೀನದಲ್ಲಿರುವರೇ ಅಥವಾ ಸ್ವತಂತ್ರರಾಗಲು ಇಚ್ಛಿಸುವರೇ ಎಂದು ಒಮ್ಮೆ ಪರೀಕ್ಷಿಸಲು ಇಚ್ಛಿಸಿದನು. ಆಗ ಅವನು ಒಂದು ಪತ್ರವನ್ನು ಬರೆದು ತನ್ನ ಕುದುರೆಗೆ ಕಟ್ಟಿದನು. ಯಾರು ಚಕ್ರವರ್ತಿಯ ಅಧೀನದಲ್ಲಿ ಇರಲು ಇಷ್ಟಪಡುವುದಿಲ್ಲವೋ, ಅವರು ಈ ಕುದುರೆಯನ್ನು ಕಟ್ಟಿಹಾಕಿ, ಯುದ್ಧವನ್ನು ಮಾಡಲು ಸಿದ್ಧರಾಗಬೇಕೆಂದೂ, ಆ ಚಕ್ರವರ್ತಿಯ ಬಳಿ

72 ಅಕ್ಷೋಹಿಣಿ ಅಂದರೆ 72 ಕೋಟಿ ಸೈನ್ಯವಿರುವುದಾಗಿಯೂ ಆ ಪತ್ರದಲ್ಲಿ ಬರೆದಿತ್ತು. ಆ ಕುದುರೆಯ ಜೊತೆ ನೂರಾರು ಸೈನಿಕರೂ ಹೊರಟರು. ಕುದುರೆ ಇಡೀ ಭೂಮಿಯನ್ನು ಸುತ್ತಾಡಿತು. ಯಾವ ರಾಜನೂ ಆ ಕುದುರೆಯನ್ನು ಕಟ್ಟಿ ಹಾಕಲಿಲ್ಲ. ಇದರಿಂದ ಭೂಮಿಯ ಮೇಲಿರುವ ಎಲ್ಲಾ ಚಿಕ್ಕ ಚಿಕ್ಕ ರಾಜರು ಈ ಚಕ್ರವರ್ತಿಯ ಅಧೀನದಲ್ಲಿದ್ದಾರೆಂದು ಸ್ಪಷ್ಟವಾಯಿತು. ಕುದುರೆಯ ಜೊತೆಗಿದ್ದ ಸೈನಿಕರೆಲ್ಲಾ ಸಂತೋಷದಿಂದ ಬರುತ್ತಿದ್ದರು. ದಾರಿಯಲ್ಲಿ ಚುಣಕ ಮಹರ್ಷಿಗಳ ಕುಟೀರವಿತ್ತು. ಕುದುರೆಗಳ ಮೇಲೆ ಕುಳಿತಿದ್ದ ಕುದುರೆ ಸವಾರರನ್ನು ನೋಡಿ ಚುಣಕ ಮಹರ್ಷಿಗಳು ಹೀಗೆಂದರು, "ಸೈನಿಕರೇ', ಎಲ್ಲಿಗೆ ಹೋಗಿದ್ದಿರಿ? ಈ ಕುದುರೆಯ ಸವಾರನು ಎಲ್ಲಿಗೆ ಹೋದ?" ಆಗ ಸೈನಿಕರು ಅವರಿಗೆ ಎಲ್ಲಾ ವಿಷಯವನ್ನು ತಿಳಿಸಿದರು. ಯಾರೂ ಚಕ್ರವರ್ತಿಯ ಜೊತೆ ಯುದ್ಧ ಮಾಡುವ ಸಾಹಸ ಮಾಡಲಿಲ್ಲವೇ?" ಎಂದು ಕೇಳಿದರು. ಆಗ ಸೈನಿಕರು, "ನಮ್ಮ ಚಕ್ರವರ್ತಿ ರಾಜರ ಜೊತೆ ಯುದ್ಧ ಮಾಡುವ ಧೈರ್ಯ ಯಾರಿಗಿದೆ? ನಮ್ಮ ರಾಜರ ಜೊತೆ ಯುದ್ಧ ಮಾಡುವಷ್ಟು ಧೈರ್ಯವಿರುವ ಯಾವ ಮಗನೂ ಇದುವರೆಗೆ ಈ ಭೂಮಿಯ ಮೇಲೆ ಹುಟ್ಟಿಲ್ಲ. ರಾಜನ ಬಳಿ 72 ಅಕ್ಷೋಹಿಣಿ ಅಂದರೆ 72 ಕೋಟಿ ಸೈನ್ಯವಿದೆ. ಯಾರಾದರೂ ಯುದ್ಧ ಮಾಡುವ ಸಾಹಸ ಮಾಡಿದರೆ, ಅವರ ಹೆಡೆ ಮುರಿಯುತ್ತಾರೆ." ಎಂದರು. ಚುಣಕ ಋಷಿಗಳು ಕಾಲಬ್ರಹ್ಮನ ಉಪಾಸಕರಾಗಿದ್ದರು. ಅವರು ಹೀಗೆಂದರು, "ಸೈನಿಕರೇ, ನಿಮ್ಮ ರಾಜನ ಜೊತೆ ಯುದ್ಧ ಮಾಡಲು ನಾನು ಸಿದ್ಧ. ನನ್ನ ಆಶ್ರಮದ ಒಂದು ಮರಕ್ಕೆ ಆ ಕುದುರೆಯನ್ನು ಕಟ್ಟಿ ಹಾಕಿ." ಆಗ ಆ ಸೈನಿಕರು "ಹೇ ಮೂರ್ಖ, ನಿನ್ನ ಬಳಿ ತಿನ್ನಲು ಗತಿಯಿಲ್ಲ. ಇಲ್ಲಿ ಆ ಚಕ್ರವರ್ತಿಯ ಜೊತೆ ನೀನೇನು ಯುದ್ಧ ಮಾಡುವೇ? ನೀನು ಸುಮ್ಮನೆ ಜಪ-ತಪ ಮಾಡಿಕೊಂಡಿರು, ನಿನ್ನ ಅಹಂಕಾರವು ಹೀಗೆ ಹೇಳಿಸುತ್ತಿದೆಯೇ?" ಎಂದರು. ಆಗ ಋಷಿಯು, "ಏನಾಗುವುದೋ, ನೋಡಿಯೇ ಬಿಡೋಣ. ಹೋಗಿ ನಿಮ್ಮ ರಾಜನ ಬಳಿ ಹೋಗಿ ಚುಣಕ ಮಹರ್ಷಿಗಳು ನಿಮ್ಮ ಜೊತೆ ಯುದ್ಧ ಮಾಡಲು ಸಿದ್ಧರೆಂದು ಹೇಳಿ" ಎಂದರು. ಈ ವಿಷಯ ರಾಜನಿಗೆ ತಿಳಿಯಿತು. ಈ ದಿನ ಒಬ್ಬ ದರಿದ್ರ ಋಷಿ ಇಷ್ಟು ಧೈರ್ಯಮಾಡಿದರೆ ನಾಳೆ ಬೇರೆ ರಾಜರು ಈ ರೀತಿ ಧೈರ್ಯ ಮಾಡಬಹುದು, ಇದನ್ನು ಪ್ರಾರಂಭದಲ್ಲೇ ಚಿವುಟಿ ಹಾಕಬೇಕು ಎಂದು ಯೋಚಿಸಿದನು, ಜನರಲ್ಲಿ ಭೀತಿ ಹುಟ್ಟಿಸಲು ಆ ಚಕ್ರವರ್ತಿಯು ಒಬ್ಬ ವ್ಯಕ್ತಿಯನ್ನು ಸಾಯಿಸಲು 72 ಕೋಟಿಯ ಸೈನ್ಯವನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿದನು. 72 ಕೋಟಿ ಸೈನ್ಯದ ಒಂದು ಗುಂಪನ್ನು ಋಷಿಯ ಜೊತೆ ಯುದ್ಧ ಮಾಡಲು ಕಳುಹಿಸಿದನು. ಇತ್ತ ಚುಣಕ ಮಹರ್ಷಿಗಳು ತಮ್ಮ ಸಿದ್ಧಿಯ ಶಕ್ತಿಯಿಂದ ನಾಲ್ಕು ಗೊಂಬೆಗಳನ್ನು ತಯಾರಿಸಿದರು. ಅರ್ಥಾತ್ ನಾಲ್ಕು ಪರಮಾಣು ಬಾಂಬ್‌ಗಳನ್ನು ತಯಾರಿಸಿದರು. ಒಂದು ಗೊಂಬೆಯನ್ನು ಬಿಟ್ಟಾಗ ಅದು 18 ಕೋಟಿ ಸೈನ್ಯವನ್ನು ನಾಶ ಮಾಡಿತು. ರಾಜನು ಎರಡನೇ ಗುಂಪನ್ನುಕಳುಹಿಸಿದನು. ಋಷಿಯು ಎರಡನೇ ಗೊಂಬೆಯನ್ನು ಬಿಟ್ಟನು. ಹೀಗೆ ಚಕ್ರವರ್ತಿಯ 72 ಅಕ್ಷೋಹಿಣಿ ಸೈನ್ಯವನ್ನು ಕಾಲಬ್ರಹ್ಮನ ಉಪಾಸಕರಾದ ಚುಣಕ ಮಹರ್ಷಿಗಳು ನಾಶ ಮಾಡಿಬಿಟ್ಟರು.

ಯೋಚಿಸಿ :- ರಾಜರ ಮಧ್ಯೆ ಋಷಿಗಳು ಯಾವಾಗಲೂ ಕಾಲು ತೂರಿಸಬಾರದು. ಏಕೆಂದರೆ ಋಷಿಗಳು ಸಾವಿರವರ್ಷ ಓಂ ನಾಮ ಜಪ ಮಾಡಿ ಪರಮಾತ್ಮನನ್ನು ಪಡೆಯಲು ಯತ್ನಿಸುತ್ತಾರೆ. ಆದರೆ ಪರಮಾತ್ಮನು ಸಿಗಲಿಲ್ಲ. ಏಕೆಂದರೆ ಗೀತೆಯ 11ನೇ ಅಧ್ಯಾಯದ 47-48ನೇ ಶ್ಲೋಕದಲ್ಲಿ ಹೇಳಿದೆ, ವೇದಗಳಲ್ಲಿ (ನಾಲ್ಕು ವೇದಗಳಾದ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ) ವರ್ಣಿಸಿದ ಭಕ್ತಿಯ ವಿಧಾನದಿಂದ ಬ್ರಹ್ಮ ಪ್ರಾಪ್ತಿಯಾಗುವುದಿಲ್ಲ. ಆದ್ದರಿಂದ ಋಷಿಗಳಲ್ಲಿ ಸಿದ್ಧಿಗಳು ಪ್ರಕಟಗೊಳ್ಳುತ್ತವೆ. ಅಜ್ಞಾನದ ಕಾರಣದಿಂದ ಈ ಮಾಯೆಯನ್ನೇ ಅವರು ಭಕ್ತಿಯ ಪ್ರಾಪ್ತಿ ಎಂದು ತಿಳಿದು ಬಿಟ್ಟಿದ್ದಾರೆ. ಆದ್ದರಿಂದ ಇಷ್ಟೆಲ್ಲಾ ಭಕ್ತಿಯಿಂದ ಇದ್ದರೂ ಪ್ರಪಂಚಕ್ಕೆ ಮರಳಿ ಬಾರದಿರುವಂತಹ ಪರಮ ಪದವನ್ನು ಅವರು ಪಡೆಯಲು ಸಾಧ್ಯವಾಗಲಿಲ್ಲ. ಏಕೆಂದರೆ

ಅವರಿಗೆ ತತ್ವದರ್ಶಿ ಸಂತನು ದೊರಕಿಲ್ಲ. ಸೂಕ್ಷ್ಮವೇದದಲ್ಲಿ ಹೇಳಿದೆ–

ಕಬೀರ್, ಗುರು ಬಿನ್ ಕಾಹೂ ನ ಪಾಯಾ ಜ್ಞಾನಾ,
ಜ್ಯೋ ಥೋಥಾ ಭುಸ್ ಛಡೆ ಮೂಢ್ ಕಿಸಾನಾ ।
ಗುರು ಬಿನ್ ವೇದ್ ಪಢೆ ಜೋ ಪ್ರಾಣಿ, ಸಮ್‌ಜೇ ನ ಸಾರ್ ರಹೇ ಅಜ್ಞಾನಿ ॥
ಗರೀಬ್, ಬಹತರ್ ಕ್ಷೌಣಿ ಖಾ ಗಯಾ, ಚುಣಕ್ ಋಷೀಶ್ವರ್ ಏಕ್ ।
ದೇಹ್ ಧಾರೇ ಜೌರಾ ಫಿರೆ, ಸಬ್‌ಹೀ ಕಾಲ್ ಕೇ ಭೇಷ್ ॥

ಭಾವಾರ್ಥ:– ತತ್ವದರ್ಶಿ ಸಂತನು ಸಿಗದ ಕಾರಣ ಸಾಧಕನು ಯಾವ ಸಾಧನೆಯನ್ನು ಮಾಡುತ್ತಾನೋ, ಅವನು ಶಾಸ್ತ್ರಬದ್ಧವಾಗಿ ಮಾಡದೆ ತನ್ನ ಮನಸ್ಸಿಗೆ ಬಂದ ಹಾಗೆ ಮಾಡುತ್ತಾನೆ. ಗೀತೆಯ 16ನೇ ಅಧ್ಯಾಯದ 23–24ನೇ ಶ್ಲೋಕದಲ್ಲಿ ಇದಕ್ಕೆ ಪ್ರಮಾಣವಿದೆ. ಅದರಲ್ಲಿ "ಹೇ ಭಾರತ! ಯಾವ ಸಾಧಕನು ಶಾಸ್ತ್ರ ವಿಧಾನವನ್ನು ಬಿಟ್ಟು ತನಗೆ ಇಷ್ಟ ಬಂದ ಹಾಗೆ ಸಾಧನೆಯನ್ನು ಮಾಡುತ್ತಾನೋ, ಅವನಿಗೆ ಸುಖವೂ ಸಿಗುವುದಿಲ್ಲ, ಸಿದ್ಧಿಯೂ ಪ್ರಾಪ್ತಿಯಾಗುವುದಿಲ್ಲ. ಅವನಿಗೆ ಮೋಕ್ಷವೂ ದೊರಕುವುದಿಲ್ಲ. ಇದರಿಂದ ಯಾವ ಸಾಧನೆ ಮಾಡಬೇಕೋ, ಯಾವ ಸಾಧನೆ ಮಾಡಬಾರದು ಎನ್ನುವುದಕ್ಕೆ ಶಾಸ್ತ್ರಗಳೇ ಪ್ರಮಾಣಗಳು" ಎಂದು ಹೇಳಿದೆ.

ಗುರುವಿಲ್ಲದೆ ಅಂದರೆ ತತ್ವದರ್ಶಿ ಸಂತನಿಲ್ಲದೆ ವೇದಗಳನ್ನು ಓದುವುದರಿಂದ ಏನೂ ಪ್ರಯೋಜನವಿಲ್ಲ. ಆ ವೇದಗಳನ್ನು ಕಂಠಪಾಠ ಮಾಡುವುದರಿಂದ ಏನೂ ಲಾಭವಿಲ್ಲ. ಹಿಂದಿನ ಕಾಲದಲ್ಲಿ ಬ್ರಾಹ್ಮಣರು ವೇದಗಳ ಮಂತ್ರಗಳನ್ನು ನೆನಪಿಟ್ಟುಕೊಳ್ಳುತ್ತಿದ್ದರು. ನಾಲ್ಕೂ ವೇದಗಳನ್ನು ಕಂಠಪಾಠ ಮಾಡುತ್ತಿದ್ದರು. ಮೂರು ವೇದಗಳನ್ನು ಕಂಠಪಾಠ ಮಾಡಿದವರನ್ನು ತ್ರಿವೇದಿ ಎಂತಲೂ, ನಾಲ್ಕು ವೇದಗಳನ್ನು ಕಂಠಪಾಠ ಮಾಡಿದವರನ್ನು ಚತುರ್ವೇದಿ ಎಂತಲೂ ಕರೆಯುತ್ತಿದ್ದರು. ಆದರೆ ಈ ವೇದಗಳ ಗೂಢಾರ್ಥದ ಜ್ಞಾನವಿಲ್ಲದ ಕಾರಣ ಆ ಋಷಿಗಳು ವೇದಗಳನ್ನು ಓದಿ, ಅರೆದು ಕುಡಿದಿದ್ದರೂ ಸಹ ಅವರು ಅಜ್ಞಾನಿಗಳಾಗಿಯೇ ಉಳಿದರು.

ಸೂಕ್ಷ್ಮವೇದದಲ್ಲಿ ಹೇಳಿದೆ:–

ಪೀಠ್ ಮನುಖಾ ದಾಖ್ ಲದೀ ಹೈ, ಊಂಟ್ ಖಾತ್ ಬಬೂಲ್ ॥

ಇದರ ಭಾವಾರ್ಥವೇನೆಂದರೆ, ಹಿಂದಿನ ಕಾಲದಲ್ಲಿ ಮರುಭೂಮಿಗಳಲ್ಲಿ ಒಂಟೆಯ ಮೇಲೆ ಬೆಣ್ಣೆಯಿಂದ ಮಾಡಿದ ತಿನಿಸುಗಳನ್ನು ಹೊರೆಸಿ ಸಾಗಿಸಲಾಗುತ್ತಿತ್ತು. ಒಂಟೆಯ ಬೆನ್ನ ಮೇಲೆ ಅಂಥಾ ಸ್ವಾದಿಷ್ಟ ತಿಂಡಿ ಇದ್ದರೂ ಅದು ಮಾತ್ರ ಜಾಲಿಯ ಮರದ ಮುಳ್ಳುಗಳಿಂದ ತನ್ನ ಮುಖವನ್ನು ಚುಚ್ಚಿಸಿಕೊಳ್ಳುತ್ತಾ, ಆ ಮರದ ಎಲೆಗಳನ್ನು ತಿನ್ನುತ್ತಾ ಮುಂದೆ ಸಾಗುತ್ತಿತ್ತು. ಜ್ಞಾನದ ಅಭಾವದಿಂದ ಎಲ್ಲಾ ಋಷಿಗಳು ವೇದಗಳೆಂಬ ಸ್ವಾದಿಷ್ಟ ತಿಂಡಿಯನ್ನು ಹೊತ್ತು ತಿರುಗುತ್ತಿದ್ದರು ಮತ್ತು ಪೂಜಿಸುತ್ತಿದ್ದರು ಕಾಲಬ್ರಹ್ಮನೆಂಬ ಜಾಲಿಯ ಮರವನ್ನು. ಆದ್ದರಿಂದ ಸನಾತನ ಪರಮಪದವೂ ಸಿಗುತ್ತಿರಲಿಲ್ಲ, ಪರಮ ಶಾಂತಿಯೂ ಲಭ್ಯವಾಗುತ್ತಿರಲಿಲ್ಲ.

ಸೂಕ್ಷ್ಮವೇದದಲ್ಲಿ ಹೇಳಲಾಗಿದೆ :–

ಬನ್‌ಜಾರೇ ಕೇ ಬೈಲ್ ಜ್ಯೋ, ಫಿರಾ ದೇಶ್–ವಿದೇಶ್ ।
ಖಾಂಡ್ ಛೋಡ್ ಭುಶ್ ಖಾತ್ ಹೈ, ಬಿನ್ ಸತ್‌ಗುರು ಉಪದೇಶ್ ॥

ಭಾವಾರ್ಥ :– ಇದರ ಭಾವಾರ್ಥವೇನೆಂದರೆ, ಆಗಿನ ಕಾಲದಲ್ಲಿ ಎತ್ತುಗಳ ಮೇಲೆ ಕತ್ತೆಗಳ ರೀತಿಯಲ್ಲಿ ಮೂಟೆಗಳನ್ನು ಹೊರೆಸಿ, ಅದರಲ್ಲಿ ದವಸಧಾನ್ಯಗಳನ್ನು ತುಂಬಿಕೊಂಡು ಅಲೆಮಾರಿಗಳು

ಅಂದರೆ ವ್ಯಾಪಾರಿಗಳು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ತೆಗೆದುಕೊಂಡು ಹೋಗುತ್ತಿದ್ದರು. ಎತ್ತಿನ ಬೆನ್ನಿನ ಮೇಲೆ ದವಸಗಳ ಮೂಟೆಗಳಿದ್ದರೂ, ಅದು ಮಾತ್ರ ಬೂಸಾ ತಿನ್ನುತ್ತಿತ್ತು. ಇದೇ ರೀತಿ ಗುರುವಿನ ಮೂಲಕ ತತ್ವಜ್ಞಾನವು ಸಿಗದ ಕಾರಣ ಋಷಿಗಳು ವೇದಗಳೆಂಬ ಸಕ್ಕರೆಯನ್ನು ಬರೀ ಕಂಠಪಾಠ ಮಾಡಿಟ್ಟುಕೊಂಡಿರುತ್ತಿದ್ದರು. ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಸಾಧನೆಗೆ ವಿರುದ್ಧವಾಗಿರುತ್ತಿದ್ದರು.

ಉದಾಹರಣೆಗೆ :– ಶ್ರೀ ದೇವಿ ಪುರಾಣದ (ಗೀತಾ ಪ್ರೆಸ್ಸಿನ ಸಚಿತ್ರ ಮುದ್ರಣಗೊಂಡು ಪ್ರಕಾಶಿತಗೊಂಡ)6ನೇ ಸ್ಕಂದದ 341ನೇ ಪುಟದಲ್ಲಿ ಬರೆಯಲಾಗಿದೆ:– ಸತ್ಯಯುಗದ ಬ್ರಾಹ್ಮಣರು ವೇದದಲ್ಲಿ ಪೂರ್ಣವಾಗಿ ವಿದ್ವಾಂಸರಾಗಿದ್ದಾರೆ ಎಂದು ವೇದವ್ಯಾಸರು ಹೇಳಿದ್ದಾರೆ. ಇವರೆಲ್ಲಾ ದುರ್ಗೆಯ ಪೂಜೆ ಮಾಡುತ್ತಿದ್ದರು. ಪ್ರತೀ ಗ್ರಾಮದಲ್ಲೂ ದೇವಿಯ ಮಂದಿರಗಳು ಕಟ್ಟಿಸುವುದರಲ್ಲಿ ಅವರಿಗೆ ಪ್ರಬಲವಾದ ಆಸೆ ಇತ್ತು.

ಓದುಗರೇ ಸ್ವಲ್ಪ ಯೋಚಿಸಿ:–

ನಾಲ್ಕೂ ವೇದಗಳಲ್ಲಿ ಹಾಗೂ ಆ ವೇದಗಳ ಸಾರಾಂಶವಾದ ಶ್ರೀಮದ್ ಭಗವದ್ಗೀತೆಯಲ್ಲಿ ಎಲ್ಲಿಯೂ ದೇವಿಯ ಪೂಜೆ ಮಾಡಲು ನಿರ್ದೇಶನವಿಲ್ಲ. ಹಾಗಾದರೆ ಸತ್ಯಯುಗದ ಬ್ರಾಹ್ಮಣರೆಲ್ಲಾ ನಕಲಿ ವಿದ್ವಾಂಸರೇ? ಅದೇ ದೇವಿ ಪುರಾಣದ 7ನೇ ಸ್ಕಂದದ 462, 463ನೇ ಪುಟದಲ್ಲಿ ದೇವಿಯು ಹಿಮಾಲಯ ರಾಜನಿಗೆ ಹೇಳಿದ್ದಾಳೆ." ನೀನು ನನ್ನ ಪೂಜೆಯನ್ನು ಸಹ ತ್ಯಜಿಸಿಬಿಡು.

ಒಂದು ವೇಳೆ ಬ್ರಹ್ಮ ಪ್ರಾಪ್ತಿ ಬೇಕೆನ್ನಿಸಿದರೆ ಉಳಿದೆಲ್ಲಾ ಮಾತುಗಳನ್ನು ಪಕ್ಕಕ್ಕಿಟ್ಟು ಕೇವಲ 'ಓಂ' ನ ಜಪ ಮಾಡು. ಇದು ಬ್ರಹ್ಮನ ಮಂತ್ರ. ಇದರಿಂದ ಬ್ರಹ್ಮನನ್ನು ಪಡೆಯಬಹುದು. ಆ ಬ್ರಹ್ಮನು ಬ್ರಹ್ಮಲೋಕವೆಂಬ ದಿವ್ಯ ಆಕಾಶದಲ್ಲಿರುತ್ತಾನೆ. ಯಾವಾಗ ಸತ್ಯಯುಗದ ಬ್ರಾಹ್ಮಣರಿಗೆ ಈ ರೀತಿಯ ಜ್ಞಾನ ಮತ್ತು ಸಾಧನೆ ಇತ್ತೆಂದರೆ ವರ್ತಮಾನದ ಬ್ರಾಹ್ಮಣರಿಗೆ ಇನ್ಯಾವ ರೀತಿಯ ಜ್ಞಾನವಿರಬಹುದು ಎಂದು ಓದುಗರು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ದೇವಿ ಪುರಾಣದ 6ನೇ ಸ್ಕಂದದ 342ನೇ ಪುಟದಲ್ಲಿ ಬರೆದಿರುವಂತೆ, ಸತ್ಯಯುಗದಲ್ಲಿ ಯಾರನ್ನು ರಾಕ್ಷಸರೆಂದು ತಿಳಿಯುತ್ತಿದ್ದರೋ ಅವರನ್ನೇ ಕಲಿಯುಗದಲ್ಲಿ ಬ್ರಾಹ್ಮಣರೆಂದು ಭಾವಿಸಲಾಗಿದೆ. ಬ್ರಾಹ್ಮಣ ಎನ್ನುವುದು ಯಾವುದೇ ಜಾತಿ ವಿಶೇಷವಲ್ಲ. ಯಾವ ಪರಮಾತ್ಮನು ಅರ್ಥಾತ್ ಬ್ರಹ್ಮನಿಗಾಗಿ ಪ್ರಯತ್ನಶೀಲನಾಗುವನೋ ಅವನು ಯಾವುದೇ ಜಾತಿಯವನಾಗಿದ್ದರೂ ಸಹ ಅವನೇ ಬ್ರಾಹ್ಮಣನೆಂದು ಕರೆಯಲ್ಪಡುವನು. ವರ್ತಮಾನದಲ್ಲಿ ಪರಂಪರಾಗತ ಬ್ರಾಹ್ಮಣರು ಕಡಿಮೆ. ಸಂತರ ರೂಪದಲ್ಲಿ ತತ್ವಜ್ಞಾನವನ್ನು ನೀಡುವವರು ಅಧಿಕವಾಗಿದ್ದಾರೆ. ಬ್ರಾಹ್ಮಣರು ಅರ್ಥಾತ್ ಮಾರ್ಗದರ್ಶಕ ಗುರುಗಳೆಂದು ಕರೆಸಿಕೊಳ್ಳುವವರು ತತ್ವಜ್ಞಾನದಿಂದ ವಂಚಿತರಾಗಿರುತ್ತಾರೆ. ಆದ್ದರಿಂದ ತತ್ವದರ್ಶಿ ಗುರುವನ್ನು ಬಿಟ್ಟು ಬೇರೆ ಯಾರಿಗೂ ಗೂಢ ರಹಸ್ಯಗಳ ಜ್ಞಾನವಿರುವುದಿಲ್ಲ ಎಂದು ಹೇಳಬಹುದು. ಯಾವ ಕಾರಣದಿಂದ ವೇದಗಳನ್ನು ಓದುತ್ತಿದ್ದರೋ ಆ ರೀತಿಯ ಸಾಧನೆ ಮಾಡದೆ, ವೇದಗಳ ವಿರುದ್ಧವಾಗಿ ಸಾಧನೆ ಮಾಡುತ್ತಿದ್ದರು. ವೇದ ಹಾಗೂ ಗೀತೆಯಲ್ಲಿ ಮೂರು ದೇವರ (ಬ್ರಹ್ಮಾ, ವಿಷ್ಣು, ಮಹೇಶ್ವರ)ರನ್ನು ಪೂಜಿಸುವುದು ನಿಶಿದ್ಧ. ಸರ್ವ ಹಿಂದೂ ಸಮಾಜದ ಜ್ಞಾನಹೀನ ಸಂತರು ಈ ಮೂವರು ದೇವರ ಮೇಲೆ ಕೇಂದ್ರೀಕರಿಸಿದ್ದಾರೆ. ಶ್ರೀದೇವಿ ದುರ್ಗೆ ಮತ್ತು ವಿಷ್ಣುವಿನ, ಶಿವನ ಭಕ್ತಿಯನ್ನು ಮಾಡುತ್ತಾ ಹಾಗೂ ಮಾಡಿಸುತ್ತಾ ಇದ್ದಾರೆ. ಮೊದಲಿನಿಂದಲೂ ಈ ಲೋಕವೇದ (ಕಟ್ಟುಕತೆ)ಯ ಜ್ಞಾನವೇ ಪ್ರಚಲಿತದಲ್ಲಿದೆ. ಇದು ನನ್ನ ಮುಂದೆ ಗೋಡೆಯಾಗಿ ಅಡ್ಡ ನಿಂತಿದೆ. ನಾನು ಶಾಸ್ತ್ರೋಕ್ತವಾದ ಜ್ಞಾನವನ್ನು ತಿಳಿಸುತ್ತೇನೆ. ಪ್ರೊಜೆಕ್ಟರ್ ಮೇಲೆ ತೋರಿಸುತ್ತೇನೆ. ಆದರೆ

ಮೊದಲಿನ ಅಜ್ಞಾನವನ್ನು ಸತ್ಯವೆಂದು ತಿಳಿದು, ಸತ್ಯವನ್ನು ಕಣ್ಣುಗಳಿಂದ ನೋಡಿದರೂ ಸಹ ನಂಬದೆ, ವಿರೋಧಿಸುವವರೇ ಇಲ್ಲಿ ತುಂಬಿದ್ದಾರೆ. ಜೈಲಿಗೆ ಕಳುಹಿಸುತ್ತಾರೆ.

**ಸೂಕ್ಷ್ಮವೇದದಲ್ಲಿ ಹೇಳಲಾಗಿದೆ,**

ಗರೀಬ್, ವೇದ್ ಪಢೈ ಪರ್ ಭೇದ್ ನ ಜಾನೆಂ, ಬಾಂಚೈ ಪುರಾಣ್ ಅಠಾರಹ್ ।
ಪತ್ಥರ್ ಕೀ ಪೂಜಾ ಕರೆ, ಬಿಸರೆ ಸಿರ್‌ಜನ್‌ಹಾರಾ ॥

**ಭಾವಾರ್ಥ:–**ವೇದ ಮತ್ತು 18 ಪುರಾಣಗಳನ್ನು ಓದುತ್ತಾರೆ ಮತ್ತು ಮೂರ್ತಿ ಪೂಜೆಯನ್ನು ಮಾಡುತ್ತಾರೆ. ಆದರೆ ವೇದೋಕ್ತವಾದ ಎಲ್ಲರ ಸೃಷ್ಟಿ ಮಾಡಿದ ಪರಮ ಅಕ್ಷರ ಬ್ರಹ್ಮನನ್ನು ಮರೆತುಬಿಟ್ಟಿದ್ದಾರೆ. ಅನ್ಯ ದೈವಗಳ ಪೂಜೆಯನ್ನು ಮಾಡಿ ಆ ಪರಮ ಶಕ್ತಿ ಮತ್ತು ಸನಾತನ ಪರಮಧಾಮ ಅರ್ಥಾತ್ ಪರಮೇಶ್ವರನ ಪರಮ ಪದದಿಂದ ವಂಚಿತರಾಗುತ್ತಾರೆ ಎನ್ನುವುದು ಇದರ ಬಾವಾರ್ಥ. ಇದನ್ನು ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕ ಹಾಗೂ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಲಾಗಿದೆ.

**ಸೂಕ್ಷ್ಮವೇದದಲ್ಲಿ ಬರೆಯಲಾಗಿದೆ :–**

ಗುರುವಾಂ ಗಾಮ್ ಬಿಬಾಡೆ ಸಂತೋ, ಗುರುವಾಂ ಗಾಮ್ ಬಿಗಾಡೆ ।
ಐಸೆ ಕರ್ಮ್ ಜೀವ್ ಕೆ ಲಾ ದಿಯೇ, ಫಿರ್ ಝುಡೈ ನಹೀ ಝಾಡೆ ॥

**ಭಾವಾರ್ಥ:–** ವೇದಗಳ ಜ್ಞಾನವನ್ನರಿಯದ ಹಾಗೂ ತತ್ವಜ್ಞಾನವನ್ನರಿಯದ ಗುರುಗಳು ಹಳ್ಳಿ ಹಳ್ಳಿಯಲ್ಲೂ ಶಾಸ್ತ್ರವಿರುದ್ಧವಾದ ಜ್ಞಾನ ಮತ್ತು ಭಕ್ತಿಯ ಅಜ್ಞಾನವನ್ನು ಎಲ್ಲರಿಗೂ ತಿಳಿಸುತ್ತಾ ಜನರನ್ನು ಭ್ರಮೆಗೆ ಒಳಪಡಿಸುತ್ತಾರೆ. ಅವರಿಗೆ ಎಷ್ಟೇ ಹೇಳಿದರೂ ಶಾಸ್ತ್ರವಿರುದ್ಧವಾದ ಸಾಧನೆಯನ್ನು ಬಿಡಲು ಅವರು ಸಿದ್ಧರಿರುವುದಿಲ್ಲ.

ಗೀತೆಯ 16ನೇ ಅಧ್ಯಾಯದ 23ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಶಾಸ್ತ್ರವಿಧಾನಗಳನ್ನು ತ್ಯಜಿಸಿ ಮನಸ್ಸಿಗೆ ಬಂದ ಆಚರಣೆಗಳನ್ನು ಮಾಡುವುದರಿಂದ ಸಿದ್ಧಿಯೂ ಪ್ರಾಪ್ತಿಯಾಗುವುದಿಲ್ಲ. ಸುಖವೂ ದೊರೆಯುವುದಿಲ್ಲ, ಮೋಕ್ಷ ಪ್ರಾಪ್ತಿಯೂ ಸಾಧ್ಯವಿಲ್ಲ. ಅಂದರೆ ಎಲ್ಲಾ ಸಾಧನೆಯೂ ವ್ಯರ್ಥವಾಗುತ್ತದೆ.

ಇನ್ನೊಂದೆಡೆ, ಚುಣಕ ಮಹರ್ಷಿಗಳಿಗೆ ಸಿದ್ಧಿಗಳು ಒಲಿದಿದ್ದವು ಎಂದು ಚುಣಕ ಋಷಿಗಳ ಕತೆಯಲ್ಲಿ ನೀವು ಓದಿದ್ದೀರಾ, ಈಗ ನೀವು ಸಿದ್ಧಿಯು ಭಕ್ತಿಯ ಬೈಪ್ರಾಡಕ್ಟ್ ಎಂದು ತಿಳಿಯಬೇಕು. ಹೇಗೆಂದರೆ ಜೋಳದಲ್ಲೂ ಬೂಸ ಇರುತ್ತದೆ. ಪಶುಗಳು ಅದನ್ನು ತಿಂದರೆ ಬಾಯಿಯಲ್ಲಿ ಗಾಯವಾಗುತ್ತದೆ. ಇದೇ ರೀತಿ ಚುಣಕ ಋಷಿಗಳಿಗೆ ಪ್ರಾಪ್ತವಾಗಿದ್ದ ಸಿದ್ಧಿಯು ಕಾಲಬ್ರಹ್ಮನ ಭಕ್ತಿಯಿಂದ ಪ್ರಾಪ್ತವಾಗುವ ಸಿದ್ಧಿಯಂತೆ ಎಂದು ಈಗ ನಿಮಗೆ ತಿಳಿಯಿತು.

ಶಾಸ್ತ್ರವಿಧಾನದ ಭಕ್ತಿಯಿಂದ ಪ್ರಾಪ್ತವಾಗುವ ಸಿದ್ಧಿಯು ಗೋಧಿಯ ಬೂಸಾದಂತೆ ಎಂದು ತಿಳಿಯಿರಿ. ಅದು ಪಶುಗಳಿಗೆ ತಿನ್ನಲೂ ಸುಲಭ ಹಾಗೂ ಆರೋಗ್ಯಕ್ಕೂ ಒಳ್ಳೆಯದು. ಶಾಸ್ತ್ರಬದ್ಧವಾಗಿ ಸಾಧನೆ ಮಾಡದಿದ್ದಾಗ, ಸಿಗುವ ಸಿದ್ಧಿಗಳು ಸಾಧಕನನ್ನೇ ನಾಶಪಡಿಸಬಲ್ಲುದು. ಏಕೆಂದರೆ ಅಜ್ಞಾನದಿಂದ ಋಷಿಗಳು ಅದರ ಪ್ರಯೋಗವನ್ನು ಮಾಡಿ ಯಾರಿಗಾದರೂ ಹಾನಿ ಉಂಟು ಮಾಡಬಹುದು, ಯಾರಿಗಾದರೂ ಆಶೀರ್ವಾದ ನೀಡಿ ತಮ್ಮ ಓಂ ನಾಮದ ಜಪದಿಂದ ಪ್ರಾಪ್ತವಾದ ಭಕ್ತಿಯ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ಆಗ ಅವರ ಕೈಯ್ಯಲ್ಲಿದ್ದ ಶಕ್ತಿಯೆಲ್ಲಾ ಕಳೆದು ಹೋಗುತ್ತದೆ. ಮಾನ್‌ಧಾತಾ ಚಕ್ರವರ್ತಿಯ 72 ಕೋಟಿ ಸೈನ್ಯವನ್ನು ಚುಣಕ ಮಹರ್ಷಿಗಳು ನಾಶಪಡಿಸಿದ ಕಾರಣ ಅವರು

ತಮ್ಮ ಭಕ್ತಿಯಿಂದ ಗಳಿಸಿದ್ದ ಸಿದ್ಧಿಗಳನ್ನೂ ಕಳೆದುಕೊಂಡರು.

ಸೂಕ್ಷ್ಮವೇದದಲ್ಲಿ ಬರೆಯಲಾಗಿದೆ.

ಗರೀಬ್, ಬಹತರ್ ಕ್ಷೌಣೀ ಕ್ಷಯ್ ಕರೀ, ಚುಣಕ್ ಋಷೀಶ್ವರ್ ಏಕ್ ।
ದೇಹ್ ಧಾರೇ ಔರಾ (ಮೃತ್ಯು) ಫಿರೈ, ಸಬ್ ಹೀ ಕಾಲ್ ಕೇ ಭೇಷ್ ॥

ಭಾವಾರ್ಥ:– ಋಷಿಗಳಲ್ಲಿ ಸರ್ವಶ್ರೇಷ್ಠ ಋಷಿಗಳಾದ ಚುಣಕ ಮಹರ್ಷಿಗಳು 72 ಕೋಟಿ ಸೈನ್ಯವನ್ನು ನಾಶಪಡಿಸಿದರು. ಇದಂತೂ ಕಾಣಲು ಸಾಧ್ಯ, ಆದರೆ ಇವರ ಬಳಿ ದ್ವೇಷ ಕಟ್ಟಿಕೊಂಡರೆ, ಅವರು ಹಾವಿನಂತೆ, ಸಣ್ಣ ಪುಟ್ಟ ಮಾತಿಗೂ ಶಾಪಕೊಡುವುದು, ಕಾರಣವಿಲ್ಲದೇ ಜಗಳವಾಡುವುದು, ದ್ವೇಷ ಕಟ್ಟಿಕೊಳ್ಳುವುದು ಅವರಿಗೆ ತೀರಾ ಸಾಮಾನ್ಯವಾದ ಮಾತು ಎನ್ನುವುದು ಇದರ ಭಾವಾರ್ಥ.

## “ಋಷಿ ದೂರ್ವಾಸರ ಕಾರ್ಯಕುಶಲತೆ”

ದೂರ್ವಾಸರೆಂಬ ಒಬ್ಬ ಕಾಲಬ್ರಹ್ಮನ ಉಪಾಸಕರಿದ್ದರು. ಒಮ್ಮೆ ಅವರು ನಡೆದುಕೊಂಡು ಹೋಗುತ್ತಿದ್ದಾಗ ದಾರಿಯಲ್ಲಿ ಅವರಿಗೆ ಸುಂದರವಾದ ಮುತ್ತಿನ ಹಾರವನ್ನು ಧರಿಸಿದ ಒಬ್ಬ ಅಪ್ಸರೆ ಕಾಣಿಸಿದಳು. ಋಷಿ ದೂರ್ವಾಸರು, ‘ಮುತ್ತಿನ ಹಾರವನ್ನು ತನಗೆ ಕೊಡು’ ಎಂದು ಅಪ್ಸರೆಯನ್ನು ಕೇಳಿದರು. ಅಪ್ಸರೆಗೆ ಇವರ ಕೋಪ ಹಾವಿನ ದ್ವೇಷದಂತೆ ಎಂಬ ಅರಿವಿದ್ದು, ಒಂದು ವೇಳೆ ಕೊಡಲು ನಿರಾಕರಿಸಿದರೆ ಶಾಪ ನೀಡುವರೆಂದು ಗೊತ್ತಿತ್ತು. ಆದ್ದರಿಂದ ತಕ್ಷಣ ತನ್ನ ಕೊರಳಿನಿಂದ ಹಾರವನ್ನು ತೆಗೆದು, ಆದರಪೂರ್ವಕವಾಗಿ ಅವರ ಕೈಯ್ಯಲ್ಲಿಟ್ಟಳು. ದೂರ್ವಾಸರು ಆ ಮುತ್ತಿನ ಹಾರವನ್ನು ತಮ್ಮ ತಲೆಯ ಮೇಲಿನ ಜಟೆಯಲ್ಲಿರಿಸಿಕೊಂಡರು. ನಂತರ ತಮ್ಮ ಪ್ರಯಾಣವನ್ನು ಮುಂದುವರಿಸಿದರು. ಎದುರಿನಿಂದ ಸ್ವರ್ಗಾಧಿಪತಿಯಾದ ಇಂದ್ರನು ತನ್ನ ವಾಹನವಾದ ಐರಾವತದ ಮೇಲೆ ಕುಳಿತು ಬರುತ್ತಿದ್ದನು. ಅವನ ಮುಂದೆ ಅಪ್ಸರೆಯರೂ, ಗಂಧರ್ವರೂ ಹಾಡುತ್ತಾ, ವಾದ್ಯಗಳನ್ನು ನುಡಿಸುತ್ತಾ ಬರುತ್ತಿದ್ದರು, ಇನ್ನೂ ಕೋಟಿ–ಕೋಟಿ ಸಂಖ್ಯೆಯಲ್ಲಿ ದೇವತೆಗಳು ಅವನ ಜೊತೆಯಲ್ಲಿ ಗೌರವದಿಂದ ಸಾಗುತ್ತಿದ್ದರು. ದೂರ್ವಾಸ ಋಷಿಗಳು ತಮ್ಮ ಜಟೆಯಲ್ಲಿದ್ದ ಮಾಲೆಯನ್ನು ತೆಗೆದು ಇಂದ್ರನ ಕಡೆಗೆ ಎಸೆದರು. ಇಂದ್ರನು ಆ ಮಾಲೆಯನ್ನು ಐರಾವತದ ಮೇಲೆ ಎಸೆದನು. ಆ ಐರಾವತವು ಆ ಮಾಲೆಯನ್ನು ನೆಲದ ಮೇಲೆ ಎಸೆದು ಬಿಟ್ಟಿತು. ಯಾವ ರೀತಿಯಲ್ಲಿ ಅಂದರೆ ಇಂದ್ರನಿಗೆ ಯಾರಾದರೂ ಭಕ್ತ ಅಥವಾ ದೇವತೆ ಹೂಮಾಲೆಯನ್ನು ಅರ್ಪಿಸಿದರೆ ಇಂದ್ರನು ಆ ಮಾಲೆಯನ್ನು ಐರಾವತದ ಕೊರಳಿಗೆ ಹಾಕುತ್ತಿದ್ದನು. ಆಗ ಐರಾವತವು ಆ ಮಾಲೆಯನ್ನು ತೆಗೆದು ನೆಲದ ಮೇಲೆ ಎಸೆಯುತ್ತಿತ್ತು. ಅದೇ ರೀತಿ ಈ ಬಾರಿಯೂ ಐರಾವತವು ಮುತ್ತಿನ ಮಾಲೆಯನ್ನು ನೆಲದ ಮೇಲೆ ಎಸೆಯಿತು. ಈ ಘಟನೆಯಿಂದ ಸಿಟ್ಟುಗೊಂಡ ದೂರ್ವಾಸರು ಇಂದ್ರನನ್ನು ಕುರಿತು ಈ ರೀತಿಯಾಗಿ ಹೇಳಿದರು. “ಹೇ ಇಂದ್ರನೇ, ನಿನಗೆ ರಾಜ್ಯಾಧಿಕಾರದ ಅಹಂಕಾರವಿದೆ. ನನ್ನಿಂದ ಕೊಡಲ್ಪಟ್ಟ ಮಾಲೆಗೆ ನೀನು ಅನಾದರ ತೋರಿಸಿರುವೆ. ಆದ್ದರಿಂದ ನಾನು ನಿನಗೆ ಶಾಪ ನೀಡುತ್ತಿರುವೆನು. ಇಗೋ, ನಿನ್ನ ಸಂಪೂರ್ಣ ರಾಜ್ಯ ನಾಶವಾಗಿ ಹೋಗಲಿ.” ಮರುಕ್ಷಣವೇ ದೇವರಾಜ ಇಂದ್ರನು ನಡುಗಲಾರಂಭಿಸಿದನು. ನಂತರ ಈ ರೀತಿ ಹೇಳಿದನು. ‘‘ಹೇ ವಿಪ್ರವರ್ಯಾ, ನಾನು ನಿಮ್ಮಿಂದ ಪಡೆದ ಮುತ್ತಿನ ಹಾರವನ್ನು ಗೌರವದಿಂದ ಪಡೆದು ನನ್ನ ಆನೆಯ ಮೇಲಿರಿಸಿದೆನು. ನನ್ನನ್ನು ಕ್ಷಮಿಸಿರಿ”. ಈ ರೀತಿಯಾಗಿ ಪದೇ–ಪದೇ ಕೈಜೋಡಿಸುತ್ತಾ, ಆನೆಯಿಂದ ಕೆಳಗಿಳಿದು ಸಾಷ್ಟಾಂಗ ನಮಸ್ಕಾರವನ್ನೂ ಮಾಡಿ ಕ್ಷಮೆ ಯಾಚಿಸಿದನು. ಆದರೆ ದೂರ್ವಾಸ ಋಷಿಗಳು ಕ್ಷಮೆಯನ್ನು ಸ್ವೀಕರಿಸದೆ ಹೀಗೆಂದರು, ‘‘ನನ್ನ ಬಾಯಿಂದ ನುಡಿದ ಮಾತು ಮತ್ತೆ ವಾಪಸ್ಸು ಪಡೆಯುವುದು ಸಾಧ್ಯವಿಲ್ಲ.” ಹಾಗೆ ನುಡಿದ ಸ್ವಲ್ಪ ಸಮಯದಲ್ಲೇ ಇಂದ್ರನ ಸರ್ವನಾಶವಾಯಿತು. ಸ್ವರ್ಗ ನಶಿಸಿ

ಹೋಯಿತು.

❖ ಒಂದು ಬಾರಿ ದೂರ್ವಾಸ ಋಷಿಗಳು ದ್ವಾರಕಾನಗರದ ಬಳಿಯ ಕಾಡಿನಲ್ಲಿ ಕೆಲ ಸಮಯ ಉಳಿದುಕೊಂಡಿದ್ದರು. ದ್ವಾರಕಾವಾಸಿಗಳಿಗೆ ಈ ವಿಷಯ ತಿಳಿಯಿತು. ಅವರು ತ್ರಿಕಾಲಜ್ಞಾನಿಗಳೂ, ಮಹಾತ್ಮರೂ, ಸಿದ್ಧಿ ಪಡೆದ ಋಷಿಗಳೆಂದೂ ಜನರು ಅರಿತಿದ್ದರು. ಆದರೆ ಆ ಜನರು ತಮ್ಮ ಕೃಷ್ಣನಿಗಿಂತ ಅಧಿಕ ಶಕ್ತಿಶಾಲಿಗಳಾರೂ ಇಲ್ಲವೆಂದು ನಂಬಿದ್ದರು. ಶ್ರೀಕೃಷ್ಣನ ಮಗ ಶ್ರೀ ಪ್ರದ್ಯುಮ್ನನ ಜೊತೆಗೂಡಿ ಕೆಲವು ಯಾದವರು ಒಂದು ಉಪಾಯವನ್ನು ಮಾಡಿದರು. ದೂರ್ವಾಸ ಮುನಿಗಳು ತ್ರಿಕಾಲದರ್ಶಿಗಳು, ಇನ್ನೊಬ್ಬರ ಮನದ ವಿಚಾರವನ್ನು ತಿಳಿಸಬಲ್ಲರು. ಅಂತರ್ಯಾಮಿ ಕೂಡಾ, ಅವರ ಪರೀಕ್ಷೆಯನ್ನು ಮಾಡುವ ಉಪಾಯ ಅದಾಗಿತ್ತು. ಈ ಉಪಾಯದಂತೆ ಪ್ರದ್ಯುಮ್ನನಿಗೆ ಗರ್ಭವತಿ ಸ್ತ್ರೀಯಂತೆ ವೇಷ ಹಾಕಿ ಅವನ ಜೊತೆಯಲ್ಲಿ ಹತ್ತು–ಹನ್ನೆರಡು ಜನ ದೂರ್ವಾಸರ ಬಳಿ ಹೋದರು. ಅವರಲ್ಲೇ ಒಬ್ಬನನ್ನು ಗರ್ಭವತಿ ಸ್ತ್ರೀಯ ಪತಿಯನ್ನಾಗಿಯೂ ಮಾಡಿದರು. ದೂರ್ವಾಸರನ್ನು ಕುರಿತು ಈ ರೀತಿಯಾಗಿ ಹೇಳಿದರು. "ಹೇ ಋಷಿವರ್ಯಾ, ಈ ಸ್ತ್ರೀಗೆ ಬಹಳ ದಿನಗಳ ನಂತರ ಭಗವಂತನ ಕೃಪೆಯಾಗಿದೆ, ಈಕೆಗೆ ಗರ್ಭ ನಿಂತಿದೆ. ಈತ ಈಕೆಯ ಪತಿ. ಇವರಿಬ್ಬರೂ ಗರ್ಭದಲ್ಲಿ ಹೆಣ್ಣು ಮಗುವಿದೆಯೋ? ಅಥವಾ ಗಂಡು ಮಗುವಿದೆಯೋ? ಎಂದು ತಿಳಿದುಕೊಳ್ಳಲು ಬಹಳ ಉತ್ಸುಕರಾಗಿದ್ದಾರೆ. ನೀವು ಅಂತರ್ಯಾಮಿಗಳು. ಕೃಪೆ ತೋರಿ ತಿಳಿಸುವಿರಾ?" ಅವರುಗಳು ಪ್ರದ್ಯುಮ್ನನ ಹೊಟ್ಟೆಗೆ ಒಂದು ಸಣ್ಣ ಬಾಣಲಿ ಕಟ್ಟಿಬಿಟ್ಟಿದ್ದರು ಅದರ ಮೇಲೆ (ತೊಗಟೆಯಿಂದ ಮಾಡಿದ ಮೇಲ್ಹೊದಿಕೆ) – ಬಣ್ಣದ ದಾರದಿಂದ ತುಂಬಿದ ಮತ್ತು ಹಳೆಯ ಬಟ್ಟೆಯನ್ನು ಕಟ್ಟಿ ಗರ್ಭದಂತೆ ಮಾಡಿದ್ದರು. ನಂತರ ಮೇಲೆ ಸ್ತ್ರೀಯಂತೆ ಬಟ್ಟೆಯನ್ನು ಉಡಿಸಿದ್ದರು. ಋಷಿ ದೂರ್ವಾಸರು ದಿವ್ಯ ದೃಷ್ಟಿಯಿಂದ ನೋಡಿ ತನ್ನೊಡನೆ ಕುಚೇಷ್ಟೆ ಮಾಡಲೆಂದೇ ಈ ರೀತಿಯಾಗಿ ಬಂದಿದ್ದಾರೆಂದು ಅರಿತು ಬಿಟ್ಟರು. ಆಗ ಕೋಪದಿಂದ ಈ ಮಾತುಗಳನ್ನು ನುಡಿದರು. "ಈ ಗರ್ಭದಿಂದ ಯಾದವ ಕುಲದ ನಾಶವಾಗುವುದು' ಈ ಮಾತು ಕೇಳಿದ ತಕ್ಷಣವೇ ಎಲ್ಲಾ ವ್ಯಕ್ತಿಗಳು ಅಲ್ಲಿಂದ ಕಾಲ್ಕಿತ್ತರು.

ಋಷಿ ದೂರ್ವಾಸರು ಶಾಪ ಕೊಟ್ಟವರೆಂದೂ, ಆ ಶಾಪದಿಂದ ಯಾದವ ಕುಲವು ನಾಶವಾಗುವುದೆಂಬ ವಿಷಯವು ಕಾಡ್ಗಿಚ್ಚಿನಂತೆ ನಗರದಲ್ಲೆಲ್ಲಾ ಹರಡಿತು. ಅಖಿಲ ಬ್ರಹ್ಮಾಂಡದ ನಾಯಕ, ಶಕ್ತಿವಂತ ಶ್ರೀಕೃಷ್ಣ ತಮ್ಮ ಜೊತೆಯಲ್ಲಿದ್ದಾನೆ. ದೂರ್ವಾಸ ಮುನಿಗಳ ಶಾಪದ ಪ್ರಭಾವ ನಮ್ಮ ಮೇಲೆ ಪ್ರಭಾವ ಬೀರುವುದಿಲ್ಲ ಎಂಬ ನಂಬಿಕೆ ಯಾದವರಿಗೆ ಬಲವಾಗಿತ್ತು. ಆದರೂ ಕೂಡಾ ಕೆಲವು ಬುದ್ಧಿವಂತ ಯಾದವರು ಒಂದುಗೂಡಿ ಶ್ರೀಕೃಷ್ಣನ ಬಳಿಗೆ ಹೋಗಿ, ದೂರ್ವಾಸರ ಜೊತೆ ಮಕ್ಕಳು ಮಾಡಿದ ತಮಾಷೆಯನ್ನೂ, ಅದರಿಂದ ಕೋಪಗೊಂಡ ಋಷಿಗಳು ಕೊಟ್ಟ ಶಾಪದ ವೃತ್ತಾಂತವನ್ನೂ ವಿವರಿಸಿದರು. ಎಲ್ಲವನ್ನೂ ಕೇಳಿದ ಶ್ರೀಕೃಷ್ಣನು ಸ್ವಲ್ಪ ಹೊತ್ತಿನವರೆಗೆ ಯೋಚಿಸಿದ ನಂತರ ಒಂದು ಉಪಾಯವನ್ನು ಹೇಳಿದನು. ಯಾವ ಮಕ್ಕಳು ದೂರ್ವಾಸರೊಡನೆ ತಮಾಷೆ ಮಾಡಿದ್ದರೋ ಆ ಮಕ್ಕಳನ್ನು ಜೊತೆಯಲ್ಲಿ ಕರೆದುಕೊಂಡು ಋಷಿಗಳ ಬಳಿ ಹೋಗಿ ಅವರಲ್ಲಿ ಕ್ಷಮಿಸುವಂತೆ ಪ್ರಾರ್ಥಿಸಿರಿ". ಅದರಂತೆ ಜನರೆಲ್ಲಾ ಋಷಿಯ ಬಳಿ ಸಾರಿ ಕ್ಷಮೆ ಕೋರಿದರು. ಆದರೆ ದೂರ್ವಾಸರು ಒಂದು ಬಾರಿ ಕೊಟ್ಟ ಶಾಪ ವಾಪಾಸ್ಸು ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಬಿಟ್ಟರು.

ಎಲ್ಲಾ ಜನರು ಪುನಃ ಶ್ರೀಕೃಷ್ಣನ ಬಳಿಗೆ ಬಂದರು ಮತ್ತು ಎಲ್ಲಾ ಮಾತನ್ನು ವಿವರಿಸಿದರು. ಚಿಂತೆಯಿಂದಿದ್ದ ಜನರು ಆ ದಿನ ಅಡುಗೆಯನ್ನು ಸಹಾ ಮಾಡಿರಲಿಲ್ಲ. (ಒಲೆ ಹಚ್ಚಿರಲಿಲ್ಲ) ಎಲ್ಲಾ ನಗರವಾಸಿಗಳು ಬಹಳ ಚಿಂತಿತರಾಗಿದ್ದರು. ಶ್ರೀಕೃಷ್ಣನು ಚಿಂತೆ ಏಕೆಂದು ಕೇಳಿದನು. "ಯಾವ ವಸ್ತುವನ್ನು ಗರ್ಭದಂತೆ ಬಳಸಿದ್ದರೋ, ಅದರಿಂದ ನಮ್ಮ ವಿನಾಶವೆಂದು ಹೇಳಿದ್ದಾರಲ್ಲಾ. ಹೀಗೆ ಮಾಡಿ, ಬಟ್ಟೆ ಹಾಗೂ ದಾರವನ್ನು ಸುಟ್ಟುಬಿಡಿ. ಲೋಹದ ಬಾಣಲೆಯನ್ನು ಕಲ್ಲಮೇಲೆ ಚೆನ್ನಾಗಿ ತೇದು ಪ್ರಭಾಸ

ಕ್ಷೇತ್ರ (ಯಮುನಾ ನದಿ ದಂಡೆಯ ಮೇಲಿನ ಒಂದು ಕ್ಷೇತ್ರದ ಹೆಸರು)ದಲ್ಲಿ ಯಮುನಾ ನದಿಯಲ್ಲಿ ಹರಿಯಲು ಬಿಡಿ. ಅಲ್ಲೇ ಕುಳಿತು ತೇಯಬೇಕು. ಅಲ್ಲೇ ನದಿಯಲ್ಲಿ ಹಾಕಿಬಿಡಿ. ಅಲ್ಲೇ ಸುಟ್ಟು ಇದ್ದಿಲನ್ನು ನೀರಿನಲ್ಲಿ ಹಾಕಿಬಿಡಿ. ಕೊಳಲೇ ಇಲ್ಲದ ಮೇಲೆ ಕೊಳಲನಾದವೆಲ್ಲಿಂದ ಬರಬೇಕು. ಯಾವಾಗ ಗರ್ಭದ ವಸ್ತುಗಳು ಇಲ್ಲವಾಗುತ್ತವೋ ಆವಾಗ ನಮ್ಮ ನಾಶ ಹೇಗೆ ಆಗುವುದು?" ಎಂದು ಹೇಳಿದನು, ಈ ಮಾತು ದ್ವಾರಿಕಾವಾಸಿಗಳಿಗೆ ಹಿಡಿಸಿತು. ಎಲ್ಲರೂ ಸಂಕಟದಿಂದ ಪಾರಾದೆವೆಂದು ಭಾವಿಸಿದರು. ಶ್ರೀಕೃಷ್ಣನ ಆದೇಶದಂತೆ ಎಲ್ಲವನ್ನೂ ಮಾಡಲಾಯಿತು. ಗಟ್ಟಿಯಾಗಿದ್ದ ಬಾಣಲೆಯ ಒಂದು ಹಿಡಿಯನ್ನು ಪೂರ್ಣವಾಗಿ ತೇಯಲಾಗಲಿಲ್ಲ. ಆ ತುಂಡು ಭಾಗವನ್ನು ಹಾಗೆಯೇ ಯಮುನಾನದಿಯಲ್ಲಿ ಎಸೆಯಲಾಯಿತು. ಆ ತುಂಡನ್ನು ಒಂದು ಮೀನು ಹೊಳೆಯುತ್ತಿರುವ ಹಾಗೂ ತಿನ್ನುವ ಒಂದು ಪದಾರ್ಥವೆಂದು ತಿಳಿದು ತಿಂದು ಬಿಟ್ಟಿತು. ಬಾಲಿಯಾನೆಂಬ ಭಿಲ್ಲನು (ಒಂದು ಜಾತಿಯ ಹೆಸರು) ಆ ಮೀನನ್ನು ಹಿಡಿದನು. ಮೀನನ್ನು ಕತ್ತರಿಸುವಾಗ ಆತನಿಗೆ ಈ ಲೋಹದ ತುಂಡು ದೊರೆಯಿತು. ಉತ್ತಮವಾದ ಲೋಹದ ತುಂಡೆಂದು ಪರೀಕ್ಷೆ ಮಾಡಿದ ನಂತರ ಅರಿವಾಯಿತು. ಆಗ ಅವನು ಅದನ್ನು ತನ್ನ ಬಾಣದ ತುದಿಯ ಭಾಗವನ್ನಾಗಿ ಮಾಡಿಕೊಂಡು, ವಿಷವನ್ನು ಸವರಿ, ಸುರಕ್ಷಿತವಾಗಿ ಇರಿಸಿದನು. ಲೋಹದ ಬಾಣಲೆಯ ತೇಯ್ದ ಭಾಗವು ನೀರಿನಲ್ಲಿ ಸೇರಿ, ಅದು ಜೊಂಡು ಹುಲ್ಲಿನ ರೂಪ ತಾಳಿ, ನದಿ ತೀರದಲ್ಲೆಲ್ಲಾ ಬೆಳೆದು ನಿಂತವು.

ಸ್ವಲ್ಪ ಸಮಯದ ನಂತರ ದ್ವಾರಕಾ ನಗರದಲ್ಲಿ ಉಪದ್ರವ ಪ್ರಾರಂಭವಾಯಿತು. ಸಣ್ಣ ಸಣ್ಣ ಮಾತಿಗೆಲ್ಲಾ ಒಬ್ಬರನ್ನೊಬ್ಬರು ಕೊಲ್ಲಲು ಪ್ರಾರಂಭಿಸಿದರು. ಪರಸ್ಪರ ದ್ವೇಷ ಹೆಚ್ಚಲಾರಂಭಿಸಿತು. ನಗರದ ಜನರ ಈ ಸ್ಥಿತಿಯನ್ನು ಕಂಡು ಗಣ್ಯ ವ್ಯಕ್ತಿಗಳು ಭಗವಂತನಾದ ಶ್ರೀಕೃಷ್ಣನ ಬಳಿ ಹೋಗಿ, ನಗರದಲ್ಲಿ ನಡೆಯುತ್ತಿದ್ದ ವಿಷಯವನ್ನೆಲ್ಲಾ ಹೇಳಿದರು ಮತ್ತು ಈ ಘಟನೆಗೆ ಕಾರಣವೂ ಹಾಗೂ ಪರಿಹಾರವನ್ನು ಶ್ರೀಕೃಷ್ಣನಿಂದ ತಿಳಿಯುವ ಇಚ್ಛೆ ವ್ಯಕ್ತಪಡಿಸಿದರು. ಏಕೆಂದರೆ ಶ್ರೀಕೃಷ್ಣನು ಯಾದವ ಹಾಗೂ ಪಾಂಡವರ ಆಧ್ಯಾತ್ಮಿಕ ಗುರುಗಳಾಗಿದ್ದನು. ಸಂಕಟದ ನಿವಾರಣೆ ಗುರುದೇವನಿಂದಲೇ ಮಾಡಲ್ಪಡುತ್ತದೆ. ಶ್ರೀ ಕೃಷ್ಣನು ದೂರ್ವಾಸ ಮುನಿಗಳ ಶಾಪದ ಫಲವೇ ಕಾರಣವೆಂದು ಹೇಳಿದನು, ಪರಿಹಾರವನ್ನೂ ತಿಳಿಸಿದನು. ಅದೇನೆಂದರೆ ಆ ದಿನ ಜನಿಸಿದ ಗಂಡುಮಗುವಿನಿಂದ ಹಿಡಿದು ಎಲ್ಲಾ ಪುರುಷರು ಪ್ರಭಾಸ ಕ್ಷೇತ್ರದಲ್ಲಿ, ಅಂದರೆ ಎಲ್ಲಿ ತಾವೆಲ್ಲಾ ಬಾಣಲೆಯ ಚೂರ್ಣವನ್ನು ನದಿಯಲ್ಲಿ ಸೇರಿಸಿದ್ದರೋ ಅಲ್ಲಿ ಹೋಗಿ ಯಮುನೆಯಲ್ಲಿ ಮುಳುಗಿ ಸ್ನಾನ ಮಾಡಿದರೆ ನಿಮ್ಮೆಲ್ಲರ ಶಾಪ ಪರಿಹಾರವಾಗುವುದು"ಎಂದನು. ಎಲ್ಲಾ ದ್ವಾರಕವಾಸಿಗಳು ಶ್ರೀಕೃಷ್ಣನ ಆದೇಶವನ್ನು ಅನುಸರಿಸಿದರು. ಸ್ನಾನಕ್ಕೋಸ್ಕರ ಪ್ರಭಾಸ ಕ್ಷೇತ್ರಕ್ಕೆ ನಡೆದರು. ಋಷಿ ದೂರ್ವಾಸರ ಶಾಪದ ಕಾರಣದಿಂದ ಎಲ್ಲಾ ಯಾದವರು ಒಟ್ಟಾಗಿ ಸೇರಿ ಅತ್ತ ನಡೆದರು. ಮೊದಲು ಸ್ನಾನ ಮಾಡುವುದರಿಂದ ಶಾಪ ವಿಮೋಚನೆಯಾಗಿ ನಂತರ ಪರಸ್ಪರ ಇರುವ ದ್ವೇಷ–ಅಸೂಯೆಗಳು ದೂರವಾಗಲಿ ಎಂಬ ಉದ್ದೇಶ ಅದಾಗಿತ್ತು. ಆದರೆ ಆ ರೀತಿ ಏನೂ ಆಗಲಿಲ್ಲ. ಮೊದಲು ಸ್ನಾನವನ್ನು ಮಾಡಿದರು. ಮತ್ತೆ ಪರಸ್ಪರ ಬೈಗುಳ–ನಿಂದನೆಗಳು ಶುರುವಾದವು. ನಂತರ ಆ ಜೊಂಡು ಹುಲ್ಲನ್ನು ಕಿತ್ತುಕೊಂಡು ಅದರಲ್ಲೇ ಹೊಡೆದಾಡಲು ಪ್ರಾರಂಭಿಸಿದರು. ಆ ಜೊಂಡು ಹುಲ್ಲು ಲೋಹದ ಬಾಣಲೆಯ ಚೂರ್ಣದಿಂದ ಬೆಳೆದಂತಹದಾಗಿತ್ತು. ಅದು ಕತ್ತಿಯಂತೆ ಕೆಲಸ ಮಾಡಲು ಪ್ರಾರಂಭಿಸಿತು. ಜೊಂಡು ಹುಲ್ಲಿನಿಂದ ಹೊಡೆಯುತ್ತಿದ್ದ ಹಾಗೆ ತಲೆಯು ಕ್ಷಣಮಾತ್ರದಲ್ಲಿ ಬೇರೆಯಾಗಿ ಕೆಳಗೆ ಬೀಳಲಾರಂಭಿಸಿತು. ಈ ರೀತಿಯಾಗಿ ಎಲ್ಲಾ ಯಾದವರು ಪರಸ್ಪರ ಹೊಡೆದಾಡಿ ಸಾವನ್ನಪ್ಪಿದರು. ಕೇವಲ **200** ಅಥವಾ **400** ಜನ ಬಾಕಿ ಉಳಿದಿದ್ದರು. ಅದೇ ಸಮಯದಲ್ಲಿ ಕೃಷ್ಣನು ಕೂಡಾ ಅಲ್ಲಿಗೆ ಬಂದು ತಲುಪಿದನು. ಅವನು ಕೂಡಾ ಆ ಜೊಂಡು ಹುಲ್ಲನ್ನು ಕಿತ್ತು, ಅದನ್ನೇ ಲೋಹದಷ್ಟು ಗಟ್ಟಿಯಾದ ಅಸ್ತ್ರದಂತೆ ಬಳಸಿ, ಸ್ವಯಂ ಕೃಷ್ಣನೇ ಉಳಿದ ಯಾದವರನ್ನು ಸಾವಿನ ಬಾಯಿಗೆ ಅರ್ಪಿಸಿದನು.

ಇದರ ನಂತರ ಶ್ರೀಕೃಷ್ಣನು ಒಂದು ಮರದ ಕೆಳಗೆ ವಿಶ್ರಾಂತಿ ಪಡೆಯುತ್ತಿದ್ದನು. ಇಷ್ಟರಲ್ಲಿ ಕಾಕತಾಳೀಯವೆಂಬಂತೆ ಲೋಹದ ಬಾಣಲೆಯ ತುಂಡಿನಿಂದ ಬಿಲ್ಲಿನ ತುದಿಯ ಮೊನಚಾದ ಭಾಗವನ್ನು ವಿಷಯುಕ್ತಗೊಳಿಸಿ ತನ್ನ ಬಿಲ್ಲಿಗೆ ಅಳವಡಿಸಿದ ಬಾಲಿಯಾ ಹೆಸರಿನ ಭಿಲ್ಲನು ಆ ಸ್ಥಳದಲ್ಲಿ ಬೇಟೆಯನ್ನು ಹುಡುಕುತ್ತಾ ತಲುಪಿದನು. ಆ ದಿನ ಆತನ ಬಳಿ ಆ ವಿಷ ತುಂಬಿದ ಬಾಣವಿತ್ತು. ಶ್ರೀಕೃಷ್ಣನ ಬಲಗಾಲಿನ ಪಾದದ ಕೆಳಭಾಗದಲ್ಲಿ ಪದ್ಮದ (ತಾವರೆ) ಚಿತ್ರವಿತ್ತು. ಅದು 100 ವಾಟ್ಸ್‌ನ ಬಲ್ಬ್ ಎಷ್ಟು ಹೊಳೆಯುತ್ತದೆಯೋ, ಅಷ್ಟರಮಟ್ಟಿಗೆ ಹೊಳೆಯುತ್ತಿತ್ತು. ಮರದ ಬಿಳಲು ನೆಲದವರೆಗೆ ಇಳಿಬಿದ್ದಿತ್ತು. ಅವುಗಳ ಮಧ್ಯದಲ್ಲಿ ಕಾಲಿನಲ್ಲಿದ್ದ ಪದ್ಮದ ಹೊಳಪು ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಈ ಕಾರಣದಿಂದ ಬಾಲಿಯ ಭಿಲ್ಲನು ಅದು ಜಿಂಕೆಯ ಕಣ್ಣೆಂದು ಭಾವಿಸಿ, ಅದನ್ನು ಕೊಲ್ಲುವ ಉದ್ದೇಶದಿಂದ ಬಾಣ ಹೂಡಿ ಆ ದಿಕ್ಕಿಗೆ ಹೊಡೆದುಬಿಟ್ಟನು. ಬಾಣವು ಯಾವಾಗ ಶ್ರೀಕೃಷ್ಣನ ಕಾಲಿಗೆ ತಗುಲಿತೋ, ಆಗ ಶ್ರೀಕೃಷ್ಣನು ಸತ್ತೆನಪ್ಪೊ ಸತ್ತೆ ಎಂದು ಹೇಳಿದನು. ಅಯ್ಯಯ್ಯೋ ನನ್ನ ಬಿಲ್ಲು ಯಾವುದೋ ವ್ಯಕ್ತಿಗೆ ತಗುಲಿದೆ ಎಂಬುದು ಬಾಲಿಯ ಭಿಲ್ಲನಿಗೆ ಆಗ ಅರಿವಾಯಿತು. ಓಡಿ ಹೋಗಿ ನೋಡಿದಾಗ ದ್ವಾರಿಕಾಧೀಶನು ಮಾರಣಾಂತಿಕ ಹಲ್ಲೆಗೊಳಗಾಗಿ ನೋವಿನಿಂದ ನರಳುತ್ತಿದ್ದನು. ಇದರಿಂದ ನೊಂದ ಬಾಲಿ ಹೀಗೆ ಹೇಳಿದನು. "ಹೇ ಮಹಾರಾಜ, ನಾನು ಭ್ರಮೆಗೊಳಗಾಗಿ ಬಾಣವನ್ನು ಹೂಡಿದೆನು. ನಿಮ್ಮ ಪಾದದ ಹೊಳಪು ನನಗೆ ಜಿಂಕೆಯ ಕಣ್ಣಿನಂತೆ ಕಾಣಿಸಿತು. ನನ್ನ ತಪ್ಪನ್ನು ಮನ್ನಿಸಿರಿ. ನನ್ನಿಂದ ಅಪರಾಧವಾಗಿದೆ, ಕ್ಷಮಿಸಿರಿ" ಎಂದು ವಿನಂತಿಸಿದನು. ಆಗ ಶ್ರೀಕೃಷ್ಣನು "ಇದರಲ್ಲಿ ನಿನ್ನ ತಪ್ಪೇನೂ ಇಲ್ಲ. ಕಳೆದ ಜನ್ಮದ ನನ್ನ ನಿನ್ನ ಲೆಕ್ಕಾಚಾರವಿದು, ನಾನು ಈಗ ಅದನ್ನು ಭರಿಸಿದ್ದೇನೆ ಅಷ್ಟೆ" ಎಂದನು. ನೀನು ತ್ರೇತಾಯುಗದಲ್ಲಿ ಸುಗ್ರೀವನ ಅಣ್ಣ ವಾಲಿಯಾಗಿದ್ದೆ, ನಾನು ದಶರಥನ ಮಗ ರಾಮಚಂದ್ರನಾಗಿದ್ದೆ. ನಾನು ಕೂಡಾ ನಿನಗೆ ಬಾಣ ಹೊಡೆಯಬೇಕಾದರೆ ಮರದ ಮರೆಯಲ್ಲಿ ನಿಂತು ಮೋಸದಿಂದ ಕೊಂದಿದ್ದೆನಲ್ಲವೆ?. ಅದರ ಪರಿಣಾಮವಿದು. ಆ ಅದಲು–ಬದಲು ಇದೀಗ ಪೂರ್ಣವಾಯಿತು".

ಈ ರೀತಿಯಾಗಿ ದೂರ್ವಾಸ ಮುನಿಗಳ ಶಾಪದಿಂದ ಯಾದವ ಕುಲವೆಲ್ಲಾ ನಾಶವಾಯಿತು, ಅದೇ ವರ್ತಮಾನದಲ್ಲಿ ಇವರು ಯಾದವರೆನಿಸಿಕೊಂಡಿದ್ದಾರೆ. ಈ ಯಾದವರು ಆ ಸಮಯದಲ್ಲಿ ತಾಯಿಯ ಗರ್ಭದಲ್ಲಿದ್ದು, ನಂತರ ಜನ್ಮ ತಳೆದವರಾಗಿದ್ದಾರೆ.

ಸೂಕ್ಷ್ಮವೇದದಲ್ಲಿ ಈ ರೀತಿಯಾಗಿ ಬರೆಯಲಾಗಿದೆ.

ಗರೀಬ್, ದೂರ್ವಾಸ ಕೋಪೆ ತಹಾಂ, ಸಮಝ್ ನ ಆಯೀ ನೀಚ್ ।
ಛಪ್ಪನ್ ಕರೋಡ್ ಯಾದವ್ ಕಟೇ, ಮಚೀ ರುಧಿರ ಕೀ ಕೀಚ್ ॥

**ಭಾವಾರ್ಥ :–**ದೂರ್ವಾಸರು ಮಕ್ಕಳ ತಮಾಷೆಯನ್ನು ಇಷ್ಟು ಗಂಭೀರವಾಗಿ ತೆಗೆದುಕೊಂಡು, ಅವರ ಕುಲವನ್ನು ನಾಶವಾಗುವಂತೆ ಶಾಪವನ್ನು ನೀಡಿದರು. ಆ ನೀಚ ದೂರ್ವಾಸರು ಎಂತಹ ಅನರ್ಥವಾಗಬಹುದೆಂದು ಕೂಡಾ ಯೋಚಿಸಲಿಲ್ಲ. ವಿಷಯವೇನೂ ಇರಲಿಲ್ಲವಾದರೂ ನೀಚ ಋಷಿ ದೂರ್ವಾಸರು ಇಂತಹ ಘೋರ ಪಾಪವನ್ನು ಮಾಡಿಬಿಟ್ಟರು. 56 (ಐವತ್ತಾರು) ಕೋಟಿ ಯಾದವರು ಪರಸ್ಪರ ಕತ್ತರಿಸಿಕೊಂಡು ಮರಣವನ್ನು ಹೊಂದಿದರು ಮತ್ತು ಆ ರಕ್ತ ಹರಿದು ಕೊಚ್ಚೆಯಾಯಿತು.

ಇದೇ ಪ್ರಕಾರವಾಗಿ ಚುಣುಕ ಋಷಿ ಯಾವುದೇ ಕಾರಣವಿಲ್ಲದೆ ದ್ವೇಷ ಕಟ್ಟಿಕೊಂಡು ಮಾನ್‌ಧಾತಾ ರಾಜನ 72 ಕೋಟಿ ಸೈನ್ಯವನ್ನು ನಷ್ಟ ಮಾಡಿದ ವೃತ್ತಾಂತವಿದೆ.

❖ ಪರಮಾತ್ಮನಾದ ವಿಷ್ಣುವಿನ 24 ಅವತಾರಗಳಲ್ಲಿ ಕಪಿಲರೆಂಬ ಋಷಿಯನ್ನು ಒಂದು

ಅವತಾರವೆಂದು ನಂಬಲಾಗಿತ್ತು. ಆತ ತಪಸ್ಸು ಮಾಡುತ್ತಿದ್ದರು.

ಒಬ್ಬ ಸಗಡನೆಂಬ ರಾಜನಿದ್ದನು. ಅವನಿಗೆ ಅರವತ್ತು ಸಾವಿರ ಗಂಡು ಮಕ್ಕಳಿದ್ದರು. ಯಾರೋ ಒಬ್ಬ ಋಷಿಗಳು ಒಂದು ಕೆರೆ, ಒಂದು ಬಾವಿ ಕಟ್ಟಿಸಿದರೆ ಹಾಗೂ ಒಂದು ಉದ್ಯಾನವನವನ್ನು ನಿರ್ಮಿಸಿದರೆ ಒಂದು ಅಶ್ವಮೇಧ ಯಜ್ಞ ಮಾಡಿದಷ್ಟು ಪುಣ್ಯ ಬರುವುದೆಂದು ಹೇಳಿದ್ದರು. ರಾಜ ಸಗಡನ ಮಕ್ಕಳು ಆ ಕಾರ್ಯವನ್ನು ಪ್ರಾರಂಭಗೊಳಿಸಿದ್ದರು. ಕೆಲವು ಬುದ್ಧಿವಂತ ವ್ಯಕ್ತಿಗಳು ರಾಜಕುಮಾರರಿಗೆ ಈ ರೀತಿಯ ಬುದ್ಧಿಮಾತುಗಳನ್ನು ಹೇಳಿದ್ದರು. "ನೀವು ಹೀಗೆ ಅಲ್ಲಲ್ಲಿ ಕೆರೆ ಬಾವಿಗಳನ್ನು ನಿರ್ಮಿಸುತ್ತಾ ಹೋದಲ್ಲಿ ಬೆಳೆ ಬೆಳೆಯಲು ಸ್ಥಳವೇ ದೊರೆಯುವುದಿಲ್ಲ ಎಂದು ಕೆಲವರೆಂದರು. ಒಬ್ಬ ರಾಜ ಇವರ ಈ ಕೆಲಸಕ್ಕೆ ವಿರೋಧ ವ್ಯಕ್ತಪಡಿಸಿದಾಗ ಅವನೊಡನೆ ಯುದ್ಧವನ್ನೇ ಮಾಡಿಬಿಟ್ಟರು. ನಂತರ ಸಗಡನ ಮಕ್ಕಳು ಒಂದು ಕುದುರೆಯನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು, ಅದರ ಕೊರಳಲ್ಲಿ ಒಂದು ಪತ್ರವನ್ನು ಕಟ್ಟಿದರು. ಆ ಪತ್ರದಲ್ಲಿ ಈ ರೀತಿ ಬರೆದಿತ್ತು. 'ಯಾರು ನಮ್ಮ ಕಾರ್ಯಕ್ಕೆ ಅಡ್ಡಿ ಉಂಟು ಮಾಡುವರೋ, ಅವರು ಈ ಕುದುರೆಯನ್ನು ಕಟ್ಟಿ ಹಾಕಿ, ನಮ್ಮೊಡನೆ ಯುದ್ಧ ಮಾಡಲು ತಯಾರಿ ನಡೆಸುವುದು'. ಹೀಗೆ ತಲೆತಿರುಗಿದವರ (ತಲೆ ಕೆಟ್ಟವರ) ಬಳಿ ಯಾರು ವಿರೋಧ ವ್ಯಕ್ತಪಡಿಸುತ್ತಾರೆ?–ಪೃಥ್ವಿದೇವಿ ಭಗವಂತ ವಿಷ್ಣುವಿನ ಬಳಿ ಬಂದಳು. ಹಾಗೂ ಒಂದು ಹಸುವಿನ ರೂಪವನ್ನು ಧಾರಣೆ ಮಾಡಿ ಹೀಗೆಂದಳು,"ಹೇ ರಾಜ, ಭೂಮಿಯ ಮೇಲೆ ಸಗಡನೆಂಬ ರಾಜನಿದ್ದಾನೆ. ಅವನಿಗೆ 60 ಸಾವಿರ ಗಂಡುಮಕ್ಕಳಿದ್ದಾರೆ. ಅವರಿಗೆ ಎಂಥಾ ಕೋಪವಿದೆಯೋ, ಏನೋ, ನನ್ನನ್ನು ಎಲ್ಲೆಂದರಲ್ಲಿ ಅಗೆದು ಬಿಟ್ಟಿದ್ದಾರೆ. ಅಂತಹಾ ಜಾಗಗಳಲ್ಲಿ ಮನುಷ್ಯರಿಗೆ ಆಹಾರಕ್ಕೋಸ್ಕರ ಅನ್ನ ಬೆಳೆಯಲು ಸಾಧ್ಯವಾಗುತ್ತಿಲ್ಲ". ಭಗವಂತ ವಿಷ್ಣುವು ಪೃಥ್ವಿದೇವಿಗೆ ಸಮಾಧಾನಗೊಳಿಸಿ,"ಅವರೀಗ ಏನೂ ಮಾಡುವುದಿಲ್ಲ. ನೀನು ಸಮಾಧಾನವಾಗಿರು" ಎಂದು ಹೇಳಿ ಕಳುಹಿಸಿಕೊಟ್ಟನು. ವಿಷ್ಣುವು ದೇವರಾಜ ಇಂದ್ರನನ್ನು ಕರೆದು ಹೇಳಿದನು,"ರಾಜ ಸಗಡನ 60 ಸಾವಿರ ಮಕ್ಕಳು ಯಜ್ಞವನ್ನು ಮಾಡುತ್ತಿರುವರು. ಅವರು 100 ಯಜ್ಞಗಳನ್ನು ಸಂಪೂರ್ಣಗೊಳಿಸಿದರೆಂದರೆ ನೀನು ಇಂದ್ರ ಪದವಿಯನ್ನು ಅವರಿಗೆ ನೀಡಬೇಕಾಗುತ್ತದೆ. ಸ್ವಲ್ಪವೇ ಸಮಯವಿದೆ ಅಷ್ಟರಲ್ಲಿ ನೀನು ಏನನ್ನಾದರೂ ಮಾಡಲು ಸಾಧ್ಯವಾದರೆ ಮಾಡಬಹುದು". ಆಗ ಇಂದ್ರನು ಸಂದೇಶವಾಹಕ ಅರ್ಥಾತ್ ತನ್ನ ಒಬ್ಬ ಸೇವಕನಿಗೆ ಎಲ್ಲವನ್ನು ಹೇಳಿ ಕಳುಹಿಸಿಕೊಟ್ಟನು. ರಾತ್ರಿಯ ಸಮಯ. ಸಗಡನ ಪುತ್ರರೆಲ್ಲರೂ ಮಲಗಿದ್ದರು. ಕುದುರೆಯನ್ನು ಮರಕ್ಕೆ ಕಟ್ಟಿ ಹಾಕಲಾಗಿತ್ತು. ದೇವರಾಜನ ಸೇವಕನು ಕುದುರೆಯನ್ನು ಬಿಚ್ಚಿ ತಪಸ್ವಿ ಕಪಿಲರ ತೊಡೆಗೆ ಕಟ್ಟಿಬಿಟ್ಟನು. ಕಪಿಲರು ಬಹಳ ವರ್ಷಗಳಿಂದ ತಪಸ್ಸನ್ನಾಚರಿಸುತ್ತಿದ್ದರು. ಈ ಕಾರಣದಿಂದ ಅವರ ಶರೀರವು ಅಸ್ಥಿಪಂಜರದಂತಾಗಿತ್ತು. ಪದ್ಮಾಸನವನ್ನು ಹಾಕಿದ್ದರು. ಕಾಲುಗಳು ಬಹಳ ತೆಳ್ಳಗಾಗಿದ್ದವು. ಮರದ ಬೇರುಗಳ ಮಧ್ಯದಿಂದ ಮಳೆಯ ಕಾರಣ ಮಣ್ಣು ಹರಿದು ಹೋದಾಗ ಹೇಗೆ ಬೇರುಗಳ ಮಧ್ಯದಲ್ಲಿ ಆರೇಳು ಇಂಚುಗಳ ಅಂತರ ಉಂಟಾಗುವುದೋ ಹಾಗೆ ಋಷಿಗಳ ಕಾಲುಗಳು ಕೂಡಾ ಆಗಿಬಿಟ್ಟಿದ್ದವು. ಇಂದ್ರನ ಸೇವಕನು ಕಾಲುಗಳ ಮಧ್ಯದಿಂದ ಹಗ್ಗವನ್ನು ಸೇರಿಸಿ ತೊಡೆಯ ಬಳಿ ಹಗ್ಗವನ್ನು ಕಟ್ಟಿಬಿಟ್ಟನು.

ಬೆಳಿಗ್ಗೆಯಾಗುತ್ತಲೇ ರಾಜಕುಮಾರರು ಕುದುರೆಯನ್ನು ನೋಡಿದರು. ಅದನ್ನು ಹುಡುಕಲು ಹೊರಟರು. ಅದಕ್ಕೋಸ್ಕರ ಯುದ್ಧ ಮಾಡಲು ಸಿದ್ಧತೆ ನಡೆಸಿ 60 ಸಾವಿರ ಸೈನಿಕರು ಹೊರಟು ಬಿಟ್ಟರು. ಕುದುರೆಯ ಕಾಲಿನ ಹೆಜ್ಜೆಯ ಗುರುತನ್ನು ಅನುಸರಿಸಿ ಅವರು ಕಪಿಲ ಮುನಿಗಳ ಆಶ್ರಮವನ್ನು ತಲುಪಿದರು. ಕುದುರೆಯನ್ನು ಕಟ್ಟಿಹಾಕಿರುವುದನ್ನು ಕಂಡ ರಾಜಕುಮಾರರು ಋಷಿಯ ಹೊಟ್ಟೆಗೆ ಈಟಿಯಿಂದ ಇರಿದರು. (ಎರಡೂ ಕಡೆಯ ಹೊಟ್ಟೆಯ ಕೆಳಭಾಗವನ್ನು ಹರಿಯಾಣ ಭಾಷೆಯಲ್ಲಿ ಹೀಂಕ್ ಎನ್ನುತ್ತಾರೆ) ಕಪಿಲ ಮುನಿಗಳ ಕಣ್ಣ ರೆಪ್ಪೆ ಆ ಮಟ್ಟಕ್ಕೆ ಕೆಳ ಇಳಿದಿತ್ತು ಅಂದರೆ ನೆಲವನ್ನು

ಮುಟ್ಟುತ್ತಿತ್ತು. ಋಷಿಗಳಿಗೆ ಯಾವಾಗ ಹಿಂಸೆಯಾಯಿತೋ ಆಗ ಕೋಪದಿಂದ ರೆಪ್ಪೆಯನ್ನು ಕೈಯಿಂದ ಎತ್ತಿದರು. ತಕ್ಷಣ ಕಣ್ಣಿನಿಂದ ಅಗ್ನಿಯ ಬಾಣಗಳು ಹೊರ ಚಿಮ್ಮಿದವು. 60ಸಾವಿರ ಸಗಡ ರಾಜನ ಮಕ್ಕಳ ಸೈನ್ಯವು ತರಗೆಲೆ ಉದುರಿದಂತೆ ಉದುರಿ ನೆಲಕ್ಕುರುಳಿತು. ಅಂದರೆ ರಾಜಕುಮಾರರೆಲ್ಲರೂ ಸತ್ತು ಹೋದರು.

ಸೂಕ್ಷ್ಮವೇದದಲ್ಲಿ ಈ ರೀತಿಯಾಗಿ ಹೇಳಲಾಗಿದೆ.

60 ಹಜಾರ್ ಸಗಡ್ ಕೆ ಹೋತೆ, ಕಪಿಲ ಮುನೀಶ್ವರ್ ಖಾಯೆ ।
ಜೈ ಪರಮೇಶ್ವರ್ ಕೀ ಕರೇಂ ಭಕ್ತಿ ತೋ ಅಜರ್–ಅಮರ್ ಹೋ ಜಾಯೆ ॥
72 ಕ್ಷೌಣೀ ಖಾ ಗಯಾ, ಚುಣಕ್ ಋಷೀಶ್ವರ್ ಏಕ್ ।
ದೇಹ್ ಧಾರೇಂ ಜೌರಾ ಫಿರೈಂ, ಸಭೀ ಕಾಲ್ ಕೆ ಭೇಷ್ ॥
ದೂರ್ವಾಸ ಕೋಪೆ ತಹಾಂ, ಸಮಝ್ ನ ಆಯೀ ನೀಚ್ ।
56 ಕರೋಡ್ ಯಾದವ್ ಕಟೇ, ಮಚೀ ರುಧಿರ್ ಕೀ ಕೀಚ್ ॥

ಭಾವಾರ್ಥ :– ಕಪಿಲ ಮುನಿಗಳು, ಚುಣಕ ಮುನಿ ಮತ್ತು ದೂರ್ವಾಸ ಮುನಿಗಳು ಪ್ರಪಂಚದಲ್ಲಿ ತುಂಬಾ ಪ್ರಸಿದ್ಧರಾಗಿದ್ದಾರೆ. ಇವರೆಲ್ಲರೂ ಕಾಲಬ್ರಹ್ಮನ ಭಕ್ತರಾಗಿ, ವೇಷಧಾರಿ ಋಷಿಗಳಾಗಿದ್ದಾರೆ. ಇವರು ಓಡಾಡುವ ಮೃತ್ಯುವಾಗಿದ್ದಾರೆ. ಓಡಾಡುವ ಮನುಷ್ಯರೂಪದ ಘಾಲ. (ಕುಡಿಕೆ) (ಘಾಲ – ಒಂದು ಮಣ್ಣಿನ ಸಣ್ಣ ಮಡಕೆ. ಈ ಮಡಕೆಯನ್ನು ತಾಂತ್ರಿಕರು ಆಕಾಶದಲ್ಲಿ ಹಾರಿಸಿ ಶತ್ರುಗಳ ಮೇಲೆ ಪ್ರಯೋಗಮಾಡುವರು. ಇದರಿಂದ ಬಹಳ ಹಾನಿಯುಂಟಾಗುವುದು) ಏನೂ ತಿಳಿಯದ ಮುಗ್ಧರು ಅವರನ್ನು ತಪ್ಪಾಗಿ ಮಹಾತ್ಮರೆಂದು ಭಾವಿಸುತ್ತಾರೆ.

ಇವರೆಲ್ಲರೂ ಜ್ಞಾನಿ ಆತ್ಮಗಳು. ಉದಾರ ಹೃದಯಿಗಳಾಗಿದ್ದರು. ಇವರು ಪರಮಾತ್ಮನನ್ನು ಪಡೆಯಲು ತಮ್ಮ ಕಲ್ಯಾಣವನ್ನು ನೆರವೇರಿಸಲು ತನು–ಮನ–ಧನವನ್ನು ಅರ್ಪಿಸಿದ್ದರು. ಆದರೆ ತತ್ವದರ್ಶಿ ಸಂತ ಸಿಗದೇ ಇದ್ದ ಕಾರಣ ಇವರು ಕಾಲಬ್ರಹ್ಮನನ್ನು ಒಬ್ಬ ಸಮರ್ಥ ಪ್ರಭುವೆಂದು ತಿಳಿದು ತಪ್ಪು ಮಾಡಿದರು ಮತ್ತು ಪ್ರಭುವಿನ ಸಾಧನಾ 'ಓಂ' ನಾಮದ ಜಪದ ಜೊತೆಗೆ ಮತ್ತು ಸಮಾಧಿಯ ಮೂಲಕ ಅಧಿಕವಾದ ಹಠಯೋಗವನ್ನು ಮಾಡಿದರು. ಅದರಿಂದ ಪರಮಾತ್ಮನ ಪ್ರಾಪ್ತಿಯಂತೂ ಸಿಗಲಿಲ್ಲ. ಬದಲಾಗಿ ನಷ್ಟವೇ ಆಯಿತು. ಏಕೆಂದರೆ ಈ ಸಾಧನೆಯು ಶಾಸ್ತ್ರ ವಿರೋಧವಾದದ್ದಾಗಿದೆ.

ಗೀತೆಯ ಅಧ್ಯಾಯ 16 ಶ್ಲೋಕ 23–24ರಲ್ಲಿ ಹೀಗೆ ಹೇಳಲಾಗಿದೆ. ಶಾಸ್ತ್ರ ವಿಧಿಯನ್ನು ತೊರೆದು ಯಾರು ಮನಸೋಇಚ್ಛೆ ಆಚರಣೆಯನ್ನು ಮಾಡುತ್ತಾರೋ, ಅವರ ಸಾಧನೆ ವ್ಯರ್ಥವಾಗುವುದು. ಈ ಉದಾರ ಆತ್ಮಗಳು ಇದೇ ಕಾರಣದಿಂದ ಕಾಲಬ್ರಹ್ಮನ ಅನುತ್ತಮ ಸ್ಥಿತಿಯಲ್ಲಿ ಇರುವರು.

ಗೀತೆಯ ಅಧ್ಯಾಯ 17 ಶ್ಲೋಕ 5, 6 ರಲ್ಲಿ ಈ ರೀತಿಯಾಗಿ ಹೇಳಲಾಗಿದೆ :–

❖ ಯಾವ ಮನುಷ್ಯ ಶಾಸ್ತ್ರವಿಧಿರಹಿತವಾಗಿ, ಕೇವಲ ಮನಸ್ಸಿನಲ್ಲಿ ಅತಿ ಘೋರವಾದ ತಪಸ್ಸನ್ನು ಕಲ್ಪಿಸಿಕೊಂಡು ತಪಸ್ಸನ್ನು ಮಾಡುತ್ತಾನೋ ಮತ್ತು ಗರ್ವ, ಅಹಂಕಾರದಿಂದ ತನ್ನ ಬಗ್ಗೆ ಕೊಚ್ಚಿಕೊಳುವುದು, ಕಾಮನೆಯ ಆಸಕ್ತ, ಅಭಿಮಾನಯುಕ್ತನಾಗಿರುತ್ತಾನೆ. (ಗೀತೆ ಅಧ್ಯಾಯ 17 ಶ್ಲೋಕ 5)

❖ ಶರೀರದಲ್ಲಿ ಸ್ಥಿತವಾಗಿರುವ ಎಲ್ಲಾ ಕಮಲಗಳಲ್ಲಿರುವ ದೇವಶಕ್ತಿಗಳನ್ನು ಮತ್ತು ಪೂರ್ಣರೂಪದ ಪರಮಾತ್ಮನನ್ನು ಹಾಗೂ ನನ್ನನ್ನು ಕೂಡಾ ಕೃಶನನ್ನಾಗಿಸುವವರು ಅರ್ಥಾತ್

ಕಷ್ಟವನ್ನು ನೀಡುವಂತಹ ಅಜ್ಞಾನಿಗಳನ್ನು ನೀನು ಅಸುರ ಸ್ವಭಾವದವರೆಂದು ತಿಳಿದುಕೋ (ಗೀತೆ ಅಧ್ಯಾಯ 17, ಶ್ಲೋಕ 6).

❖ ಇದೇ ಪ್ರಮಾಣ ಗೀತೆಯ 6ನೇ ಅಧ್ಯಾಯ 17ನೇ ಶ್ಲೋಕದಿಂದ 20ರವರೆಗೆ ಇವೆ.

❖ ಇವರು ತಮ್ಮಷ್ಟಕ್ಕೆ ತಾವು ತಮ್ಮನ್ನು ಶ್ರೇಷ್ಠರೆಂದು ತಿಳಿದುಕೊಳ್ಳುವ ಅಹಂಕಾರಿ ಪುರುಷರು. ಧನ ಮತ್ತು ಮಾನದ ಮದದಿಂದ ಕೂಡಿದವರಾಗಿ ಕೇವಲ ನಾಮಮಾತ್ರದ ಯಜ್ಞದ ಮುಖಾಂತರ ಪಾಖಂಡ (ತಮ್ಮನ್ನು ತಾವು ಶ್ರೇಷ್ಠರೆಂದು ತಿಳಿದವರು) ದಿಂದ ಕೂಡಿದ ಶಾಸ್ತ್ರವಿಧಿರಹಿತ ಪೂಜೆಯನ್ನು ಮಾಡುವರು. (ಗೀತೆಯ ಅಧ್ಯಾಯ 16, ಶ್ಲೋಕ 17)

❖ ಇವರುಬಲ, ಅಹಂಕಾರ, ಕಾಮನೆ, ಕ್ರೋಧಗಳ ವಶದಲ್ಲಿದ್ದು, ಇನ್ನೊಬ್ಬರ ನಿಂದನೆಯನ್ನು ಮಾಡುವಂತಹ ಪುರುಷರು. ತಮ್ಮ ಮತ್ತು ಉಳಿದವರ ಶರೀರದಲ್ಲಿರುವ ನನ್ನನ್ನು ದ್ವೇಷ ಮಾಡುವಂತಹವರಾಗಿರುತ್ತಾರೆ. (ಗೀತೆಯ ಅಧ್ಯಾಯ 16, ಶ್ಲೋಕ 18)

❖ ದ್ವೇಷ ಮಾಡುವವರು ಪಾಪದಿಂದ ಕೂಡಿದವರೂ, ಕ್ರೂರ ಕರ್ಮಿಗಳೂ, ಮಾತಿನಿಂದಲೇ ಕೋಟಿಗಟ್ಟಲೆ ವ್ಯಕ್ತಿಗಳ ಹತ್ಯೆಯನ್ನು ಮಾಡುವಂತಹ ನರಾಧಮರು ಅರ್ಥಾತ್ ಇಂತಹ ನೀಚ ಮನುಷ್ಯರನ್ನು ಪ್ರಪಂಚದಲ್ಲಿ ಬಾರಿಬಾರಿಗೂ ಅಸುರೀ ಅಂದರೆ ರಾಕ್ಷಸೀ ಯೋನಿಗಳಲ್ಲಿಯೇ ಹಾಕಿಬಿಡುತ್ತೇನೆ. (ಗೀತೆಯ ಅಧ್ಯಾಯ 16, ಶ್ಲೋಕ 19) ಸೂಕ್ಷ್ಮವೇದದಲ್ಲಿ ಕೂಡ ಇಂಥವರನ್ನು ನೀಚರೆಂದೇ ಹೇಳಲಾಗಿದೆ.

ದೂರ್ವಾಸ ಕೋಪೆ ತಹಾಂ, ಸಮಝ್ ನ ಆಯೀ ನೀಚ್ ।
56 ಕರೋಡ್ ಯಾದವ್ ಕಟೇ, ಮಚೀ ರುಧೀರ್ ಕೀ ಕೀಚ್ ॥

❖ ಹೇ ಅರ್ಜುನ ! ಈ ಮೂರ್ಖರು ನನ್ನನ್ನು ಪಡೆಯದೆ ಜನ್ಮ–ಜನ್ಮಗಳಲ್ಲಿ ಅಸುರೀ ಯೋನಿಗಳನ್ನೇ ಪಡೆಯುವರು. ಅದಕ್ಕಿಂತಲೂ ಅತಿ ನೀಚಗತಿಯನ್ನು ಪಡೆಯುತ್ತಾರೆ. ಅಂದರೆ ಘೋರ ನರಕದಲ್ಲಿ ಬೀಳುತ್ತಾರೆ (ಗೀತೆಯ ಅಧ್ಯಾಯ 17, ಶ್ಲೋಕ 20)

ಈ ಮೇಲಿನ ಪ್ರಮಾಣಗಳಿಂದ ಈ ಮಾತುಗಳನ್ನು ಪುಷ್ಟೀಕರಿಸಿದಂತಾಗಿದೆ, ಅದೇನೆಂದರೆ ಗೀತೆಯ ಅಧ್ಯಾಯ 7, ಶ್ಲೋಕ 18ರಲ್ಲಿ ಗೀತಾಜ್ಞಾನದಾತ, ತನ್ನ ಸಾಧನೆಯಿಂದ ಸಿಗುವಂತಹ ಸ್ಥಿತಿಯನ್ನು ಕೂಡಾ ಈ ಕಾರಣಗಳಿಂದ ಅನುತ್ತಮ ಅಥವಾ ನೀಚ ಸ್ಥಿತಿಯೆಂದು ಹೇಳಿದ್ದಾನೆ.

ಗೀತೆಯ 7ನೇ ಅಧ್ಯಾಯದ 18ನೇ ಶ್ಲೋಕ:– ಗೀತಾಜ್ಞಾನದಾತ ಹೀಗೆ ಹೇಳಿದ್ದಾನೆ, "ಯಾರು 4ನೇ ಪ್ರಕಾರದ ಜ್ಞಾನಿ ಸಾಧಕನೋ, ಅವರೆಲ್ಲರೂ ಉದಾರಿಗಳು. ಏಕೆಂದರೆ ಪರಮಾತ್ಮನ ಪ್ರಾಪ್ತಿಗೋಸ್ಕರ ತಮ್ಮ ಶರೀರವು ನಷ್ಟವಾಗುವುದನ್ನು ಕೂಡಾ ಅವರು ಲೆಕ್ಕಿಸಲಿಲ್ಲ ಮತ್ತು ಸಾವಿರಾರು ವರ್ಷಗಳ ಕಾಲ ಹಸಿವು–ನೀರಡಿಕೆಗಳನ್ನು ತ್ಯಜಿಸಿ ಸಾಧನೆಯಲ್ಲಿ ತೊಡಗಿದ್ದರು. ಆದರೆ ತತ್ವದರ್ಶಿ ಸಂತ ಸಿಗದೇ ಇರುವ ಕಾರಣ ಅವರೆಲ್ಲರೂ ಅನುತ್ತಮರು. ಅರ್ಥಾತ್ ನೀಚ ಗತಿ ಅಂದರೆ ಕಾಲ ಬ್ರಹ್ಮ ಸಾಧನೆಯಿಂದ ಸಿಗುವಂತಹ ಮೋಕ್ಷವು ಮೇಲೆ ತಿಳಿಸಿರುವ ಎಲ್ಲಾ ಋಷಿಗಳಿಗೆ ದೊರಕಿದೆ. ಅಂದರೆ ಜನನ–ಮರಣ, 84 ಲಕ್ಷ ಯೋನಿಯೊಳಗೆ ಮತ್ತೆ ಮತ್ತೆ ಬರುವಂತಹ ಗತಿಯನ್ನು ಪಡೆಯುವರು.

ಉಪಸಂಹಾರ– ಚುಣಕ ಋಷಿ, ದೂರ್ವಾಸ ಋಷಿ ಮತ್ತು ಕಪಿಲ ಋಷಿಗಳೆಲ್ಲರೂ ಯಾವ 'ಓಂ' ಕಾರ ನಾಮಜಪವನ್ನು ಮಾಡಿದರೋ, ಆ ಭಕ್ತಿಯ ಫಲಸ್ವರೂಪವಾಗಿ ಸ್ವಲ್ಪ ಸಮಯ ಬ್ರಹ್ಮಲೋಕಕ್ಕೆ ಹೋಗುವರು. ಅಲ್ಲಿ ಭಕ್ತಿ ಮುಗಿದ ನಂತರ ಪುನಃ ಭೂಮಿಗೆ ಬಂದು ರಾಜರಾಗುವರು.

ಯಾಕೆಂದರೆ ಸೂಕ್ಷ್ಮವೇದದಲ್ಲಿ ಹೀಗೆ ಬರೆದಿದ್ದಾರೆ.

ತಪ್ ಸೆ ರಾಜ್, ರಾಜ್ ಮಧ್ ಮಾನಮ್, ಜನ್ಮ್ ತೀಸರೆ ಶುಕರ್ ಸ್ವಾನಮ್ ।

ಮತ್ತೆ ನಾಯಿ, ಕತ್ತೆಯಾಗುವರು, ನಂತರ ನರಕಕ್ಕೆ ಹೋಗುವರು. ಯಾವಾಗ ನಾಯಿಯಾಗುತ್ತಾರೋ, ಆಗ ಅದರ ತಲೆಯ ಮೇಲೆ ಹುಳುಗಳು ಬೀಳುವುವು. ಯಾವ ವ್ಯಕ್ತಿ ಇವರ ಶಾಪದಿಂದ ಮರಣ ಹೊಂದಿರುತ್ತಾರೋ, ಅವರ ಪಾಪವನ್ನು ಇವರು ಅನುಭವಿಸಬೇಕಾಗುವುದು. ಹುಳುಗಳು ಇವರ ಮಾಂಸವನ್ನು ಕಿತ್ತು ಕಿತ್ತು ತಿನ್ನುವುವು. ಈ ಕಾರಣದಿಂದ ಗೀತೆಯಲ್ಲಿ ಕೂಡಾ ಈ ರೀತಿಯ ಸಾಧಕರ ಬಗ್ಗೆ ಹೇಳಲಾಗಿರುವ ವಿಷಯವನ್ನು ನೀವು ಮೇಲೆ ಓದಿರುವಿರಿ.

❖ ಮೇಲೆ ಬರೆದಿರುವ ವೃತ್ತಾಂತದ ಸಾರಾಂಶ.

1. ಬ್ರಹ್ಮ ಸಾಧನೆ ಉತ್ತಮವಲ್ಲ. ಕೀಳುಮಟ್ಟದ್ದಾಗಿದೆ.

2. ಮೂರು ರೀತಿಯ ತಾಪವನ್ನು ಶ್ರೀಕೃಷ್ಣನೂ ಸಹ ಅಂತ್ಯಗೊಳಿಸಲು ಶಕ್ತನಲ್ಲ. ಶಾಪ ನೀಡುವುದು ಮೂರು ತಾಪಗಳಲ್ಲಿಯೇ (ದೈವಿಕ ತಾಪ) ಬರುವುದಾಗಿದೆ. ದೂರ್ವಾಸ ಮುನಿಗಳ ಶಾಪಕ್ಕೆ ಸ್ವಯಂ ಶ್ರೀಕೃಷ್ಣ ಕೂಡಾ ಒಳಗಾಗಿ ಎಲ್ಲಾ ಯಾದವರು ಕೂಡಾ ನಾಶವಾದರು.

3. ಶ್ರೀಕೃಷ್ಣನು ಯಾದವರಿಗೆ ಶಾಪಮುಕ್ತರಾಗಲು ಯಮುನೆಯಲ್ಲಿ ಸ್ನಾನ ಮಾಡಲು ಹೇಳಿದನು. ಈ ಪರಿಹಾರದಿಂದ ಶಾಪ ನಾಶವಾಗಲಿಲ್ಲ, ಬದಲಾಗಿ ಯಾದವರ ನಾಶವಂತೂ ಆಯಿತು.

ವಿಚಾರ ಮಾಡಿ :– ಯಾರು ಬೇರೆ ಸಂತ ಅಥವಾ ಬ್ರಾಹ್ಮಣ ಈ ರೀತಿಯ ಸ್ನಾನ ಅಥವಾ ತೀರ್ಥಸ್ನಾನವನ್ನು ಮಾಡಲು ಹೇಳಿ, ಇದರಿಂದ ಸಂಕಟದಿಂದ ಮುಕ್ತರಾಗಬಹುದೆಂಬ ಅನಿಸಿಕೆಯನ್ನು ವ್ಯಕ್ತಪಡಿಸುವರೋ, ಆ ಕಾರ್ಯವೆಷ್ಟು ಪರಿಣಾಮಕಾರಿ? ಅರ್ಥಾತ್ ವ್ಯರ್ಥ. ಯಾಕೆಂದರೆ ತ್ರಿಲೋಕನಾಥನಾದ ಭಗವಂತನಿಂದಲೇ ಹೇಳಲ್ಪಟ್ಟ ಪರಿಹಾರ ಯಮುನಾ ಸ್ನಾನದಿಂದ ಯಾವುದೇ ಲಾಭ ಆಗದ ಮೇಲೆ ಬೇರೆ ನಕಲಿ ಬ್ರಾಹ್ಮಣರು, ಗುರುಗಳು ಹೇಳಿದ ಸ್ನಾನ ಮೊದಲಾದ ಪರಿಹಾರದಿಂದ ಯಾವುದೇ ಫಲ ದೊರಕಲು ಹೇಗೆ ಸಾಧ್ಯ?

4. ಬಾಣಲೆಯನ್ನು ಚೆನ್ನಾಗಿ ತೇದು ಆ ಚೂರ್ಣವನ್ನು ಪ್ರಭಾಸ ಕ್ಷೇತ್ರದ ಯಮುನಾನದಿಯಲ್ಲಿ ಹಾಕಿಬಿಡಿ ಎಂದು ಮೊದಲೇ ಶ್ರೀಕೃಷ್ಣನು ದೂರ್ವಾಸ ಮುನಿಗಳ ಶಾಪದಿಂದ ಹೊರ ಬರುವ ಉಪಾಯವನ್ನು ಹೇಳಿದ್ದನು. ಬಿದಿರೂ ಇಲ್ಲ, ಕೊಳಲೂ ಇಲ್ಲ ಎಂದಿದ್ದನು. ಆದರೆ ಬಿದಿರಂತೂ ಉಳಿಯಿತು. 56 ಕೋಟಿ ಯಾದವರ ಅಂತ್ಯವೂ ಹಾಡಲಾಯಿತು.

ಸಜ್ಜನರೇ,

ವರ್ತಮಾನದಲ್ಲಿರುವ ಬುದ್ಧಿವಂತ ಮನುಷ್ಯರೇ, ನೀವು ಶಿಕ್ಷಿತರು, ನನ್ನ ಮೂಲಕ (ಸಂತ ರಾಮ್‌ಪಾಲ್ ದಾಸರ ಮೂಲಕ) ಹೇಳಿದ ಈ ಜ್ಞಾನವನ್ನು ಶಾಸ್ತ್ರಗಳಲ್ಲಿ ಸೇರಿಸಿ, ಮತ್ತೆ ಭಕ್ತಿಯನ್ನು ನಿಮ್ಮದಾಗಿಸಿಕೊಳ್ಳಿ. ಯಾವ ರೀತಿಯ ಚಮತ್ಕಾರ ನಡೆಯುವುದೆಂದು ನೋಡಿ.

❖ ಪ್ರಸಂಗವನ್ನು ಮುಂದುವರೆಸೋಣ :–

1. ಮೂರೂ ಗುಣ(ರಜೋಗುಣ ಬ್ರಹ್ಮಾ, ಸದ್ಗುಣ ವಿಷ್ಣು, ತಮೋಗುಣ ಶಿವ)ರ ಭಕ್ತಿಕೂಡಾ ವ್ಯರ್ಥವೆಂದು ಸಾಬೀತಾಗಿದೆ.

2. ಗೀತೆಯ ಜ್ಞಾನದಾತ ಬ್ರಹ್ಮನ ಕುರಿತ ಭಕ್ತಿಯಬಗ್ಗೆ ಗೀತೆಯ ಅಧ್ಯಾಯ 7, ಶ್ಲೋಕ

18ರಲ್ಲಿ ಉತ್ತಮವಲ್ಲವೆಂದು ಹೇಳಿದ್ದಾನೆ. ಅವನು ಗೀತೆಯ ಅಧ್ಯಾಯ 18, ಶ್ಲೋಕ 62ರಲ್ಲಿ ಆ ಪರಮೇಶ್ವರ ಅರ್ಥಾತ್ ಪರಮ ಅಕ್ಷರ ಬ್ರಹ್ಮನಲ್ಲಿ ಶರಣಾಗಬೇಕೆಂದು ಹೇಳಿದ್ದಾನೆ. ಆ ಪರಮೇಶ್ವರನ ಕೃಪೆಯಿಂದಲೇ ನೀನು ಪರಮ ಶಾಂತಿ ಮತ್ತು ಸನಾತನವಾದ ಪರಂಧಾಮ (ಸ್ವರ್ಗ) ವನ್ನು ಪಡೆಯಬಹುದು ಎಂದು ಕೂಡಾ ಹೇಳಿದ್ದಾನೆ.

3. ಗೀತೆಯ ಅಧ್ಯಾಯ 15, ಶ್ಲೋಕ 1ರಿಂದ 4ರಲ್ಲಿ ಪ್ರಪಂಚದ ರೂಪದಲ್ಲಿರುವ ವೃಕ್ಷದ ವರ್ಣನೆ ಇದೆ ಮತ್ತು ತತ್ವದರ್ಶಿ ಸಂತನನ್ನು ಗುರುತಿಸುವ ಬಗ್ಗೆ ಕೂಡಾ ಹೇಳಲಾಗಿದೆ. ಪ್ರಪಂಚವೆಂಬ ವೃಕ್ಷದ ಎಲ್ಲಾ ಭಾಗಗಳು, ಬೇರು (ಮೂಲ) ಯಾವ ಪರಮೇಶ್ವರ, ಕಾಂಡವು ಯಾವ ದೇವರು, ಆಧಾರವಾದ ಬೇರು ಯಾವ ಭಗವಂತ, ಕೊಂಬೆಗಳು ಯಾವ–ಯಾವ ದೇವತೆಗಳು–ಎಲೆಗಳ ರೂಪದಲ್ಲಿರುವ ಪ್ರಪಂಚವನ್ನು ಹೇಳಲಾಗಿದೆ.

ಇದರಲ್ಲೇ ಅಧ್ಯಾಯ 15, ಶ್ಲೋಕ 16ರಲ್ಲಿ ಸ್ಪಷ್ಟನೆ ನೀಡಲಾಗಿದೆ. ಅದೇನೆಂದರೆ:–

1. ಕ್ಷರಪುರುಷ : (ಇವರು 21 ಬ್ರಹ್ಮಾಂಡಗಳ ಪ್ರಭುವಾಗಿದ್ದಾರೆ)

ಈ ದೇವತೆಯನ್ನು ಬ್ರಹ್ಮ, ಕಾಲಬ್ರಹ್ಮ, ಜ್ಯೋತಿ ನಿರಂಜನನೆಂದೂ ಕರೆಯಲಾಗುತ್ತದೆ. ಈತ ಲಯಕಾರಿ. ನಾವೆಲ್ಲರೂ ಈತನ ಲೋಕದಲ್ಲಿ ವಾಸಿಸುತ್ತಿದ್ದೇವೆ. ನಮಗೆ ಈತನ ಲೋಕದಿಂದ ಮುಕ್ತರಾಗಬೇಕಾಗಿದೆ ಮತ್ತು ನಮ್ಮ ಪರಮಾತ್ಮ ಕಬೀರರ ಬಳಿಗೆ, ಸತ್ಯಲೋಕಕ್ಕೆ ಹೋಗಬೇಕಾಗಿದೆ.

2. ಅಕ್ಷರಪುರುಷ : ಈ ಭಗವಂತನು 7 ಶಂಖ ಬ್ರಹ್ಮಾಂಡಗಳ ಪ್ರಭುವಾಗಿದ್ದಾನೆ. ಈತ ಕೂಡಾ ನಾಶಕಾರಕನೇ ಆಗಿದ್ದಾನೆ. ನಾವುಗಳು ಈ ಭಗವಂತನ 7 ಶಂಖ ಬ್ರಹ್ಮಾಂಡಗಳ ಕ್ಷೇತ್ರಗಳನ್ನು ದಾಟಿ ಸತ್ಯಲೋಕಕ್ಕೆ ಹೋಗಬೇಕಾಗಿದೆ. ಈ ಕಾರಣದಿಂದ ಈ ಭಗವಂತನಿಗೆ ಟೋಲ್ ಟ್ಯಾಕ್ಸ್ ಕೊಡಬೇಕಾಗುವುದು. ಈ ಭಗವಂತನೊಡನೆ ನಮ್ಮ ಕೆಲಸ ಇಷ್ಟೇ.

ಗೀತೆಯ ಅಧ್ಯಾಯ 15, ಶ್ಲೋಕ 17ರಲ್ಲಿ ಹೀಗೆ ಹೇಳಲಾಗಿದೆ.

ಉತ್ತಮಃ ಪುರುಷಃ ತೂ ಅನ್ಯಃ ಪರಮಾತ್ಮಾ ಇತಿ ಉದಾಹೃತಃ ।
ಯಃ ಲೋಕ ತ್ರಯಮ್ ಆವಿಷ್ಯ ವಿಭರ್ತಿ ಅವ್ಯಯಃ ಈಶ್ವರಃ ॥

ಭಾವಾರ್ಥ :– ಗೀತೆಯ 15ನೇ ಅಧ್ಯಾಯ, 16ನೇ ಶ್ಲೋಕದಲ್ಲಿ ಈ ರೀತಿ ಹೇಳಲಾಗಿದೆ. ಇಬ್ಬರು ಪುರುಷರು, ಒಬ್ಬ ಕ್ಷರಪುರುಷ ಎರಡನೆಯವನು ಅಕ್ಷರ ಪುರುಷನಾಗಿದ್ದಾನೆ. ಈ ಇಬ್ಬರನ್ನು ಬಿಟ್ಟು ಇನ್ನೊಬ್ಬ ಪುರುಷನಿದ್ದಾನೆ. ಆತ ಉತ್ತಮ ಪುರುಷ ಅರ್ಥಾತ್ ಪುರುಷೋತ್ತಮ. ಆತನಿಗೆ ಪರಮಾತ್ಮ ಎನ್ನುತ್ತಾರೆ. ಯಾರು ಮೂರೂ ಲೋಕಗಳಲ್ಲಿ ಪ್ರವೇಶಿಸಿ ಎಲ್ಲರನ್ನು ತನ್ನವರನ್ನಾಗಿಸಿ ಪೋಷಣೆಯನ್ನು ಮಾಡುವನೋ. ಆತನೇ ವಾಸ್ತವದಲ್ಲಿ ಅವಿನಾಶಿ ಪರಮೇಶ್ವರನು. (ಗೀತೆಯ ಅಧ್ಯಾಯ 15, ಶ್ಲೋಕ 17) ಗೀತೆಯ ಅಧ್ಯಾಯ 3, ಶ್ಲೋಕ 14–15ರಲ್ಲಿ ಕೂಡಾ ಸ್ಪಷ್ಟನೆ ನೀಡಲಾಗಿದೆ. ಅದೇನೆಂದರೆ ಸರ್ವಗತಮ್ ಬ್ರಹ್ಮ ಅರ್ಥಾತ್ ಸರ್ವವ್ಯಾಪಿ ಪರಮಾತ್ಮ, ಯಾರು ಸಚ್ಚಿದಾನಂದ ಘನ ಬ್ರಹ್ಮನಾಗಿದ್ದಾನೋ, ಅವನನ್ನು ವಾಸುದೇವನೆಂದೂ ಕರೆಯುತ್ತಾರೆ. ಅವನ ವಿಷಯದಲ್ಲಿ ಗೀತೆಯ 7ನೇ ಅಧ್ಯಾಯದ 19ನೇ ಶ್ಲೋಕದಲ್ಲಿ ಹೇಳಲಾಗಿದೆ. ಅವನು ಧಾರ್ಮಿಕ ಅನುಷ್ಠಾನಗಳಲ್ಲಿ ಪ್ರತಿಷ್ಠಿತನಾಗಿದ್ದಾನೆ. ಅರ್ಥಾತ್ ಇಷ್ಟ ರೂಪದಲ್ಲಿ ಪೂಜ್ಯನು.

ಪೂರ್ಣ ಗುರುವಿನಿಂದ ದೀಕ್ಷೆ ತೆಗೆದುಕೊಂಡು ಸಜ್ಜನಿಕೆಯಿಂದ ಇದ್ದು, ಭಕ್ತಿಯನ್ನು ಮಾಡಿ. ಈ ರೀತಿಯಾಗಿ ಜೀವನದ ಮಾರ್ಗದಲ್ಲಿ ನಡೆದು ಲೋಕದಲ್ಲಿ ಸುಖೀ ಜೀವನ ನಡೆಸಿ ಮತ್ತು ಮೋಕ್ಷ ರೂಪದ ಗುರಿಯನ್ನು ಪಡೆದುಕೊಳ್ಳಿ.

# "ಸೃಷ್ಟಿ ರಚನೆ"

## (ಸೂಕ್ಷ್ಮ ವೇದದಿಂದ ನಿಷ್ಕರ್ಷ ರೂಪದಲ್ಲಿ ಸೃಷ್ಟಿ ರಚನೆಯ ವರ್ಣನೆ)

ಪ್ರಭು ಪ್ರೇಮಿ ಆತ್ಮಗಳೇ, ಪ್ರಪ್ರಥಮವಾಗಿ ಕೆಳಕಂಡ ಸೃಷ್ಟಿ ರಚನೆಯನ್ನು ಓದಿದಾಗ ಇದೇನು ದಂತಕಥೆಯೋ ಎಂದು ನಮಗೆ ಅನಿಸುತ್ತದೆ. ಆದರೆ ಎಲ್ಲಾ ಪವಿತ್ರ ಸದ್ ಗ್ರಂಥಗಳಲ್ಲಿ ಸಿಕ್ಕ ಮಾಹಿತಿಯನ್ನು ಪಡೆದ ನಂತರ ಬೆರಳು ಕಚ್ಚುವಂತಾಗುತ್ತದೆ. ಏಕೆಂದರೆ ಇಂಥಾ ವಾಸ್ತವಿಕವಾದ ಅಮೃತ ಜ್ಞಾನವನ್ನು ಎಲ್ಲಿ ಬಚ್ಚಿಡಲಾಗಿತ್ತು? ಕೃಪೆ ಮಾಡಿ. ಧೈರ್ಯದೊಡನೆ ಓದಿ ಮತ್ತು ಈ ಅಮೃತದಂತಹ ಜ್ಞಾನವನ್ನು ಸುರಕ್ಷಿತವಾಗಿಡಿ. ನಿಮ್ಮ 101 ತಲೆಮಾರುಗಳವರೆಗೆ ಕೆಲಸಕ್ಕೆ ಬರುವುದು. ಪವಿತ್ರವಾದ ಆತ್ಮಗಳೇ, ಕೃಪೆಮಾಡಿ ಸತ್ಯನಾರಾಯಣ (ಅವಿನಾಶಿ ಪ್ರಭು/ಸತ್ಯಪುರುಷ) ಭಗವಂತನ ಮೂಲಕ ರಚನೆಯಾದ ಸೃಷ್ಟಿಯ ವಾಸ್ತವಿಕ ಜ್ಞಾನವನ್ನು ಓದಿರಿ.

1. ಪೂರ್ಣಬ್ರಹ್ಮ : ಈ ಸೃಷ್ಟಿಯ ರಚನೆಯಲ್ಲಿ ಸತ್ಪುರುಷ – ಸತ್ಯಲೋಕದ ಒಡೆಯ (ಪ್ರಭು), ಅಲಖ್ ಪುರುಷ – ಅಲಖ್ ಲೋಕದ ಒಡೆಯ (ಪ್ರಭು), ಅಗಮ ಪುರುಷ – ಅಗಮ ಲೋಕದ ಸ್ವಾಮಿ (ಪ್ರಭು) ಮತ್ತು ಅನಾಮಿ ಪುರುಷ – ಅನಾಮ ಲೋಕದ ಒಡೆಯ (ಪ್ರಭು) ಎಲ್ಲರೂ ಪೂರ್ಣಬ್ರಹ್ಮನೇ ಆಗಿದ್ದಾರೆ, ಯಾರು ವಾಸ್ತವದಲ್ಲಿ ಅವಿನಾಶಿ ಒಡೆಯನಾಗಿದ್ದಾನೋ, ಆತನು ಭಿನ್ನ–ಭಿನ್ನವಾದ ರೂಪಧಾರಣೆಯನ್ನು ಮಾಡಿ ತನ್ನ ನಾಲ್ಕು ಲೋಕದಲ್ಲಿ ಸ್ಥಿತನಾಗಿದ್ದಾನೆ. ಆ ಲೋಕದೊಳಗೆ ಅಸಂಖ್ಯ ಬ್ರಹ್ಮಾಂಡಗಳು ಬರುತ್ತವೆ.

2. ಪರಬ್ರಹ್ಮ : ಈ ಬ್ರಹ್ಮನು ಕೇವಲ 7 ಸಂಖ ಬ್ರಹ್ಮಾಂಡಗಳ ಒಡೆಯನಾಗಿದ್ದಾನೆ. ಈತನನ್ನು ಅಕ್ಷರಪುರುಷನೆಂದೂ ಕರೆಯಲಾಗುತ್ತದೆ. ಆದರೆ ಈತ ಹಾಗೂ ಈತನ ಬ್ರಹ್ಮಾಂಡವು ಕೂಡಾ ವಾಸ್ತವದಲ್ಲಿ ಅವಿನಾಶಿ ಅಲ್ಲ.

3. ಬ್ರಹ್ಮ : ಬ್ರಹ್ಮನು ಕೇವಲ 21 ಬ್ರಹ್ಮಾಂಡದ ಸ್ವಾಮಿಯಾಗಿದ್ದಾನೆ. ಈತನನ್ನು ಕ್ಷರಪುರುಷ, ಜ್ಯೋತಿ ನಿರಂಜನ, ಕಾಲ ಮುಂತಾದ ಉಪಮೆಗಳಿಂದ ಅರಿಯಲಾಗಿದೆ. ಈತ ಹಾಗೂ ಈತನ ಎಲ್ಲಾ ಬ್ರಹ್ಮಾಂಡಗಳು ನಾಶವಾಗುವಂತಹದ್ದಾಗಿದೆ. (ಈ ಮೇಲೆ ಹೇಳಿದ ಮೂವರೂ ಪುರುಷರ (ಪ್ರಭುಗಳು) ಪ್ರಮಾಣವು ಪವಿತ್ರ ಶ್ರೀಮದ್‌ಭಗವದ್ಗೀತೆ ಅಧ್ಯಾಯ 15, ಶ್ಲೋಕ 16–17 ರಲ್ಲಿ ಕಾಣಬಹುದಾಗಿದೆ.)

4. ಬ್ರಹ್ಮಾ : ಬ್ರಹ್ಮಾನು ಕಾಲಬ್ರಹ್ಮನ ಜ್ಯೇಷ್ಠ ಮಗನಾಗಿದ್ದಾನೆ. ವಿಷ್ಣು ಮಧ್ಯದ ಮಗನಾಗಿದ್ದು ಮತ್ತು ಶಿವ ಅಂತಿಮ ಹಾಗೂ ಮೂರನೆಯ ಮಗನಾಗಿದ್ದಾನೆ. ಬ್ರಹ್ಮನ ಈ ಮೂವರು ಪುತ್ರರು ಕೇವಲ ಒಂದು ಬ್ರಹ್ಮಾಂಡದ ಒಂದು ವಿಭಾಗದ (ಗುಣ) ಒಡೆಯರಾಗಿದ್ದು ನಾಶವಾಗುವಂತಹವರಾಗಿದ್ದಾರೆ, ವಿಸ್ತೃತ ವಿವರಣೆಗಾಗಿ ದಯವಿಟ್ಟು ಕೆಳಗೆ ಬರೆದಿರುವ ಸೃಷ್ಟಿ ರಚನೆಯನ್ನು ಓದಿರಿ.

(ಕವಿರ್ದೇವ ಅಂದರೆ ಕಬೀರ್ ಪರಮಾತ್ಮನು ಸೂಕ್ಷ್ಮ ವೇದ ಅರ್ಥಾತ್ ಕವಿವಾಣಿಯಲ್ಲಿ ತಮ್ಮ ಮೂಲಕ ರಚನೆಯಾದ ಸೃಷ್ಟಿಯ ಜ್ಞಾನವನ್ನು ಜನರಿಗೆ ತಿಳಿಸಿದರು. ಅದನ್ನು ಈ ಕೆಳಗೆ ವಿವರಿಸಲಾಗಿದೆ).


ಮೊಟ್ಟ ಮೊದಲು ಕೇವಲ ಒಂದೇ ಒಂದು ಸ್ಥಾನವಿತ್ತು, ಅದು ಅನಾಮೀ (ಅನಾಮಯ) ಲೋಕವಾಗಿತ್ತು. ಅದನ್ನು ಅಕಹ್ ಲೋಕವೆಂದೂ ಕರೆಯಲಾಗುತ್ತಿತ್ತು. ಪೂರ್ಣಪರಮಾತ್ಮ ಆ ಅನಾಮೀ ಲೋಕದಲ್ಲಿ ಒಬ್ಬನೇ ಇರುತ್ತಿದ್ದನು. ಆ ಪರಮಾತ್ಮನ ವಾಸ್ತವಿಕ ಹೆಸರು ಕವಿರ್ದೇವ

# ಕಬೀರ್ ಪರಮೇಶ್ವರರ ಅಸಂಖ್ಯ ಬ್ರಹ್ಮಾಂಡಗಳ ಲಘು ಚಿತ್ರ

ಅನಾಮಿ ಲೋಕ : ಈ ಲೋಕದಲ್ಲೂ ಸಹ ಕಬೀರ್ ಪರಮೇಶ್ವರರು ಅನಾಮಿ ಪುರುಷನ ರೂಪದಲ್ಲಿರುತ್ತಾರೆ

ಅಗಮ ಲೋಕ : ಈ ಲೋಕದಲ್ಲೂ ಸಹ ಕಬೀರ್ ಪರಮೇಶ್ವರರು ಅಗಮ ಪುರುಷನ ರೂಪದಲ್ಲಿರುತ್ತಾರೆ

ಅಲಖ ಲೋಕ : ಈ ಲೋಕದಲ್ಲೂ ಸಹ ಕಬೀರ್ ಪರಮೇಶ್ವರರು ಅಲಖ ಪುರುಷನ ರೂಪದಲ್ಲಿರುತ್ತಾರೆ



ಅರ್ಥಾತ್ ಕಬೀರ ಪರಮೇಶ್ವರ ಎಂದಾಗಿದೆ. ಎಲ್ಲಾ ಆತ್ಮಗಳು ಆ ಪೂರ್ಣಧಣಿಯ ಶರೀರವನ್ನು ಸೇರಿದ್ದವು. ಈ ಕವಿರ್ದೇವನ ಉಪಮಾತ್ಮಕ (ಪದವಿಯ)ದ ಹೆಸರು ಅನಾಮೀ ಪುರುಷ ಎಂದಾಗಿದೆ. (ಪುರುಷ ಎಂಬ ಪದದ ಅರ್ಥ ಪ್ರಭು ಎಂದಾಗಿದೆ. ಪ್ರಭುವು ಮನುಷ್ಯನಿಗೆ ತನ್ನದೇ ಆದ ರೂಪವೆಂದು ಹೇಳಿದ್ದಾನೆ. ಇದೇ ಕಾರಣದಿಂದ ಮಾನವನನ್ನು ಕೂಡಾ ಪುರುಷನೆಂದೇ ಕರೆಯಲಾಗುತ್ತದೆ) ಅನಾಮೀ ಪುರುಷನ ಒಂದು ರೋಮಕೂಪದ ಪ್ರಕಾಶವು ಸಂಖ್– ಸೂರ್ಯರ ಪ್ರಕಾಶಕ್ಕಿಂತಲೂ ಅಧಿಕವಾಗಿರುತ್ತದೆ.

ವಿಶೇಷ :– ಹೇಗೆ ಯಾವುದೇ ದೇಶದ ಗೌರವಾನ್ವಿತ ಪ್ರಧಾನಮಂತ್ರಿಯ ಶರೀರದ ಹೆಸರು ಬೇರೆ ಬೇರೆಯಾದರೂ, ಆ ಪದವಿಯ ಉಪಮಾತ್ಮಕ (ಪದವಿಯ) ಹೆಸರು ಪ್ರಧಾನಮಂತ್ರಿ ಎಂದೇ ಇರುತ್ತದೆ. ಬಹಳಷ್ಟು ಬಾರಿ ಪ್ರಧಾನಮಂತ್ರಿ ತಮ್ಮ ಬಳಿ ಕೆಲವು ವಿಭಾಗಗಳನ್ನು ತಮ್ಮ ಬಳಿಯೇ ಇರಿಸಿಕೊಂಡಿರುತ್ತಾರೆ. ಆಗ ಯಾವ ವಿಭಾಗವೇ ಆಗಿರಲಿ. ಯಾವ ವಿಭಾಗದ ಫೈಲು(ಕಡತ)ಗಳಲ್ಲಿ

ಹಸ್ತಾಕ್ಷರವನ್ನು ಮಾಡುತ್ತಾರೋ, ಆ ಸಮಯದಲ್ಲಿ ಆ ಪದವಿಯ ಹೆಸರನ್ನು ಬರೆಯುತ್ತಾರೆ. ಹೇಗೆ ಗೃಹ ಮಂತ್ರಾಲಯದ ಫೈಲು(ಕಡತ)ಗಳ ಮೇಲೆ ಹಸ್ತಾಕ್ಷರ ಮಾಡುವಾಗ ತಮ್ಮ ಪದವಿಯನ್ನು ಗೃಹಮಂತ್ರಿಯೆಂದೇ ಬರೆಯುತ್ತಾರೆ. ಅಲ್ಲಿ ಇದೇ ವ್ಯಕ್ತಿಯ ಹಸ್ತಾಕ್ಷರದ (ಸಹಿಯ) ಶಕ್ತಿ ಸ್ವಲ್ಪ ಕಡಿಮೆಯಾಗುತ್ತದೆ. ಇದೇ ರೀತಿ ಕಬೀರ ಪರಮೇಶ್ವರರ (ಕವಿರ್ದೇವ) ಬೆಳಕಿ(ಹೊಳಪು)ನಲ್ಲಿ ಭಿನ್ನ–ಭಿನ್ನ ಲೋಕಗಳಲ್ಲಿ ಸ್ವಲ್ಪ ವ್ಯತ್ಯಾಸ ಉಂಟಾಗುತ್ತದೆ.

ಸರಿಯಾಗಿ ಇದೇ ರೀತಿ ಪೂರ್ಣ ಪರಮಾತ್ಮ, ಕವಿರ್ದೇವ (ಕಬೀರ ಪರಮೇಶ್ವ)ರು ಕೆಳಗೆ ನೀಡಿರುವ ಮೂರು ಲೋಕಗಳ (ಅಗಮಲೋಕ, ಅಲಖ್‌ಲೋಕ, ಸತ್ಯಲೋಕ) ರಚನೆಯನ್ನು ಶಬ್ದ (ವಚನ)ಗಳಿಂದ ಮಾಡಿದರು. ಇದೇ ಪೂರ್ಣ ಬ್ರಹ್ಮ, ಪರಮಾತ್ಮಾ ಕವಿರ್ದೇವ (ಕಬೀರ ಪರಮೇಶ್ವರ) ಈ ಅಗಮ ಲೋಕದಲ್ಲಿ ಪ್ರತ್ಯಕ್ಷರಾದರು ಮತ್ತು ಕವಿರ್ದೇವ (ಕಬೀರ ಪರಮೇಶ್ವರ) ಅಗಮ ಲೋಕದ ಒಡೆಯ ಸಹ ಆದರು ಮತ್ತು ಅಲ್ಲಿ ಅವರ ಉಪಮಾತ್ಮಕ (ಪದವಿಯ) ಹೆಸರು ಅಗಮ ಪುರುಷ ಅರ್ಥಾತ್ ಅಗಮ ಪ್ರಭು. ಈ ಅಗಮ ಪ್ರಭುವಿನ ಮಾನವ ಸದೃಶ ಶರೀರ ತುಂಬಾ ತೇಜೋಮಯವಾಗಿದ್ದು ಅದರ ಒಂದು ರೋಮ ಕೂಪದ ಪ್ರಕಾಶವು ಸಂಖ ಸೂರ್ಯನ ಪ್ರಕಾಶಕ್ಕಿಂತಲೂ ಅಧಿಕವಾಗಿರುತ್ತದೆ. ಈ ಪೂರ್ಣ ಪರಮಾತ್ಮ ಕವಿರ್ದೇವ (ಕಬೀರ್ ದೇವ ಕಬೀರ್ ಪರಮೇಶ್ವರ) ಅಲಖ್ ಲೋಕದಲ್ಲಿ ಪ್ರತ್ಯಕ್ಷರಾದರು ಮತ್ತು ಸ್ವಯಂ ಅಲಖ್ ಲೋಕಕ್ಕೆ ಕೂಡಾ ಸ್ವಾಮಿಯಾದರು ಹಾಗೂ ಉಪಮಾತ್ಮಕ (ಪದವಿಯ) ಹೆಸರು ಅಲಖ್ ಪುರುಷ ಕೂಡಾ ಈ ಪರಮೇಶ್ವರನ ಹೆಸರೇ ಆಗಿದೆ. ಹಾಗೂ ಈ ಪೂರ್ಣ ಪ್ರಭುವಿನ ಮಾನವ ಸದೃಶ ಶರೀರವು ಅತ್ಯಂತ ತೇಜೋಮಯವಾಗಿದೆ. (ಸ್ವಜ್ಯೋತಿ) ಸ್ವಯಂ ಪ್ರಕಾಶಿತವಾಗಿದೆ. ಇದರ ಒಂದು ರೋಮ ಕೂಪದ ಪ್ರಕಾಶವು ಸಾವಿರಾರು ಕೋಟಿ ಸೂರ್ಯರ ಪ್ರಕಾಶಕ್ಕಿಂತಲೂ ಹೆಚ್ಚಾಗಿರುತ್ತದೆ.

ಈ ಪೂರ್ಣ ಪ್ರಭು ಸತ್ಯಲೋಕದಲ್ಲಿ ಪ್ರತ್ಯಕ್ಷವಾದರು ಮತ್ತು ಸತ್ಯಲೋಕದಲ್ಲಿ ಅಧಿಪತಿ ಸಹ ಇವರೇ ಆಗಿದ್ದಾರೆ. ಆದ ಕಾರಣ ಇವರ ಉಪಮಾತ್ಮಕ (ಪದವಿಯ) ನಾಮ ಸತ್ಯಪುರುಷ (ಅವಿನಾಶಿ ಪ್ರಭು) ಆಗಿದೆ. ಇವರ ಹೆಸರು ಅಕಾಲ ಮೂರ್ತಿ, ಶಬ್ದ ಸ್ವರೂಪೀ ರಾಮ, ಪೂರ್ಣ ಬ್ರಹ್ಮ, ಪರಮ ಅಕ್ಷರ ಬ್ರಹ್ಮ ಮೊದಲಾದವುಗಳಾಗಿವೆ. ಈ ಸತ್ಯಪುರುಷ ಕವಿರ್ದೇವ (ಕಬೀರ ಪ್ರಭು)ರ ಮಾನವ ಸದೃಶ ಶರೀರವು ತೇಜೋಮಯವಾಗಿದೆ. ಅದರ ಒಂದು ರೋಮಕೂಪದ ಪ್ರಕಾಶವು ಸಾವಿರಾರು ಕೋಟಿ ಸೂರ್ಯರ ಹಾಗೂ ಅಷ್ಟೇ ಸಂಖ್ಯೆಯ ಚಂದ್ರಮಗಳ ಪ್ರಕಾಶಕ್ಕಿಂತಲೂ ಅಧಿಕವಾಗಿರುತ್ತದೆ.

ಈ ಕವಿರ್ದೇವ (ಕಬೀರ ಪ್ರಭು)ರು ಸತ್ಯಪುರುಷ ರೂಪದಲ್ಲಿ ಪ್ರತ್ಯಕ್ಷರಾಗಿ ಸತ್ಯಲೋಕದಲ್ಲಿ ವಿರಾಜಮಾನರಾಗಿ ಪ್ರಥಮ ಸತ್ಯಲೋಕದಲ್ಲಿ ಅನ್ಯ ರಚನೆ ಮಾಡಿದರು.

ಒಂದು ಶಬ್ದದಿಂದ (ವಚನ) 16 ದ್ವೀಪಗಳ ರಚನೆಯನ್ನು ಮಾಡಿದರು. ಪುನಃ 16 ಶಬ್ದಗಳಿಂದ 16 ಪುತ್ರರನ್ನು ಉತ್ಪತ್ತಿ ಮಾಡಿದರು. ಒಂದು ಮಾನಸ ಸರೋವರದ ರಚನೆ ಮಾಡಿ ಅದರಲ್ಲಿ ಅಮೃತವನ್ನು ತುಂಬಿದರು. 16 ಮಕ್ಕಳ ಹೆಸರು ಹೀಗಿದೆ:–

(1) ಕೂರ್ಮ (2) ಜ್ಞಾನಿ (3) ವಿವೇಕ (4) ತೇಜ (5) ಸಹಜ (6) ಸಂತೋಷ (7) ಸುರತಿ (8) ಆನಂದ (9) ಕ್ಷಮ (10) ನಿಷ್ಕರ್ಷ (11) ಜಲರಂಗೀ (12) ಅಚಿಂತ (13) ಪ್ರೇಮ (14) ದಯಾಳ್ (15) ಧೈರ್ಯ (16) ಯೋಗ ಸಂತಾಯನ ಅರ್ಥಾತ್ 'ಯೋಗ ಜೀತ್'.

ಸತ್ಯಪುರುಷ ಕವಿರ್ದೇವನು ತನ್ನ ಪುತ್ರ ಅಚಿಂತನಿಗೆ ಸತ್ಯಲೋಕದ ಅನ್ಯ ಸೃಷ್ಟಿಯ ಭಾರವನ್ನು ಹೊರಿಸಿ, ಅದಕ್ಕೆ ಅಗತ್ಯವಾದ ಶಕ್ತಿಯನ್ನು ಪ್ರದಾನಗೊಳಿಸಿದನು. ಅಚಿಂತನು ಅಕ್ಷರ ಪುರುಷನ (ಪರಬ್ರಹ್ಮ)ನ್ನು ಶಬ್ದದಿಂದಲೇ ಉತ್ಪತ್ತಿ ಮಾಡಿ ಆತನಿಗೆ ಸಹಾಯ ಮಾಡುವಂತೆ ಹೇಳಿದನು. ಅಕ್ಷರ ಪುರುಷನು ಸ್ನಾನ ಮಾಡಲು ಮಾನಸ ಸರೋವರಕ್ಕೆ ನಡೆದನು. ಅಲ್ಲಿ ಆತನಿಗೆ ಬಹಳಷ್ಟು ಆನಂದವಾಯಿತು ಮತ್ತು ಅಲ್ಲೇ ಮಲಗಿ ಬಿಟ್ಟನು. ತುಂಬಾ ಸಮಯದವರೆಗೆ ಹೊರಗೆ ಬರಲೇ ಇಲ್ಲ. ಆಗ ಅಚಿಂತನ ಪ್ರಾರ್ಥನೆಯಂತೆ ಅಕ್ಷರ ಪುರುಷನನ್ನು ಎಚ್ಚರಿಸಲು ಕವಿರ್ದೇವನು (ಕಬೀರ ಪರಮೇಶ್ವರ) ಅದೇ ಮಾನಸ ಸರೋವರದಿಂದ ಸ್ವಲ್ಪ ಅಮೃತ ಜಲವನ್ನು ತೆಗೆದುಕೊಂಡು ಒಂದು ಮೊಟ್ಟೆಯನ್ನು ಮಾಡಿದನು ಮತ್ತು ಮೊಟ್ಟೆಯಲ್ಲಿ ಒಂದು ಆತ್ಮ ಪ್ರವೇಶ ಮಾಡುವಂತೆ ಮಾಡಿ, ಆ ಮೊಟ್ಟೆಯನ್ನು ಮಾನಸ ಸರೋವರದ ಅಮೃತ ಜಲದೊಳಗೆ ಬಿಟ್ಟು ಬಿಟ್ಟನು. ಮೊಟ್ಟೆಯ ಗಡಗಡಾ ಶಬ್ದದಿಂದ ಅಕ್ಷರ ಪುರುಷನ ನಿದ್ರಾಭಂಗವಾಯಿತು. ಅವನು ಮೊಟ್ಟೆಯನ್ನು ಕೋಪದಿಂದ ನೋಡಿದಾಗ ಆ ಮೊಟ್ಟೆಯು ಒಡೆದು 2 ಭಾಗವಾಯಿತು. ಅದರಿಂದ ಜ್ಯೋತಿನಿರಂಜನ (ಕ್ಷರ ಪುರುಷ) ಹೊರ ಬಂದನು. ಅವನೇ ಮುಂದೆ 'ಕಾಲ'ನೆಂದು ಕರೆಯಲ್ಪಟ್ಟನು. ಇವನ ವಾಸ್ತವಿಕ ಹೆಸರು 'ಕೈಲ'ವಾಗಿದೆ. ಆಗ ಸತ್ಯಪುರುಷನು (ಕವಿರ್ದೇವ) ಆಕಾಶವಾಣಿ ಮಾಡಿದನು,"ನೀವಿಬ್ಬರೂ ಹೊರಬನ್ನಿ ಮತ್ತು ಅಚಿಂತನ ದ್ವೀಪದಲ್ಲಿರಿ" ಎಂದನು. ಆಜ್ಞೆ ಪಡೆದ ಅಕ್ಷರ ಪುರುಷ ಮತ್ತು ಕ್ಷರ ಪುರುಷ (ಕೈಲ) ಇವರಿಬ್ಬರೂ ಅಚಿಂತನ ದ್ವೀಪದಲ್ಲಿ ವಾಸ ಮಾಡತೊಡಗಿದರು. (ಮಕ್ಕಳ ಸಮರ್ಥತೆಯ ಬಗ್ಗೆ ಅವರಿಗೆ ಚಿಂತೆಯಾಯಿತು. ಪ್ರಭುತ್ವಕ್ಕೆ ತಡೆ ಬಂದರೆ? ಎಂದು ಯೋಚಿಸಿದರು.

ಏಕೆಂದರೆ ಅಸಮರ್ಥತೆಯಿಂದ ಕಾರ್ಯ ಸಫಲಗೊಳ್ಳುವುದಿಲ್ಲ) ಮತ್ತೆ ಪೂರ್ಣ ಧಣಿಯಾದ ಕವಿರ್ದೇವರೇ ಪೂರ್ಣ ಸೃಷ್ಟಿಯನ್ನು ಸ್ವಯಂ ಸೃಷ್ಟಿಸಿದರು. ತಮ್ಮ ಶಬ್ದ ಶಕ್ತಿಯಿಂದ ಒಂದು (ರಾಷ್ಟ್ರೀ) ಶಕ್ತಿ ಉತ್ಪನ್ನ ಮಾಡಿ, ಆ ಶಕ್ತಿಯಿಂದ ಬ್ರಹ್ಮಾಂಡಗಳನ್ನು ಸ್ಥಾಪಿತಗೊಳಿಸಲಾಯಿತು. ಪೂರ್ಣ ಬ್ರಹ್ಮನು ಸರ್ವ ಆತ್ಮಗಳನ್ನು, ತಮ್ಮೊಳಗೆ ಇರುವ ತಮ್ಮ ವಚನ ಶಕ್ತಿಯಿಂದ ತಮ್ಮಂತೆ ಇರುವ ಮಾನವ ಶರೀರಗಳನ್ನು ಉತ್ಪನ್ನ ಮಾಡಿದನು. ಪ್ರತ್ಯೇಕ ಹಂಸ ಆತ್ಮವನ್ನು ಪರಮಾತ್ಮನು ರಚನೆ ಮಾಡಿದ ತಕ್ಷಣ ಅದರ ತೇಜಸ್ಸು 16 ಸೂರ್ಯರಿಗೆ ಸಮಾನವಾದ ಮಾನವನಂತೆ ಇತ್ತು. ಆದರೆ ಪರಮೇಶ್ವರನ ಶರೀರದ ಒಂದು ರೋಮಕೂಪದ ಪ್ರಕಾಶವು ಸಾವಿರಾರು ಕೋಟಿ ಸೂರ್ಯರ ತೇಜಸ್ಸಿಗಿಂತ ಹೆಚ್ಚಾಗಿತ್ತು. ಬಹಳ ಸಮಯದ ನಂತರ ಕ್ಷರ ಪುರುಷ (ಜ್ಯೋತಿ ನಿರಂಜನ) ಈ ರೀತಿ ಯೋಚಿಸಿ, "ನಾವು ಮೂವರು (ಅಚಿಂತ, ಅಕ್ಷರ ಪುರುಷ, ಕ್ಷರ ಪುರುಷ) ಒಂದು ದ್ವೀಪದಲ್ಲಿ ವಾಸಿಸುತ್ತಿದ್ದೇವೆ ಮತ್ತು ಬೇರೆ ಎಲ್ಲರೂ ಒಂದೊಂದು ದ್ವೀಪದಲ್ಲಿದ್ದಾರೆ. ನಾನು ಕೂಡಾ ಸಾಧನೆಯನ್ನು ಮಾಡಿ ಬೇರೆ ದ್ವೀಪವನ್ನು ಪಡೆಯುವೆನು". ಆತನು ಹೀಗೆ ವಿಚಾರವನ್ನು ಮಾಡಿ ಒಂದು ಕಾಲಿನ ಮೇಲೆ ನಿಂತುಕೊಂಡು 70 ಯುಗಗಳ ಕಾಲ ತಪಸ್ಸನ್ನಾಚರಿಸಿದನು.

## "ಆತ್ಮಗಳು ಕಾಲನ ಬಲೆಯಲ್ಲಿ ಹೇಗೆ ಸಿಲುಕಿಕೊಂಡವು?"

**ವಿಶೇಷ:– ಯಾವಾಗ ಬ್ರಹ್ಮ (ಜ್ಯೋತಿ ನಿರಂಜನ) ತಪಸ್ಸು ಮಾಡುತ್ತಿದ್ದನೋ ನಮ್ಮ ಎಲ್ಲಾ ಆತ್ಮಗಳು, ಯಾರು ಈ ದಿನ ಜ್ಯೋತಿ ನಿರಂಜನನ 21 ಬ್ರಹ್ಮಾಂಡದಲ್ಲಿ ವಾಸಿಸುತ್ತಿರುವರೋ, ಈತನ ಸಾಧನೆಯ ಬಗ್ಗೆ ಆಸಕ್ತಿ ಹೊಂದಿದವು ಮತ್ತು ಅಂತರಾಳದಿಂದ ಆತನನ್ನು ಬಯಸುತ್ತಿದ್ದವು. ಸುಖವನ್ನೇ ನೀಡುವ ಪ್ರಭುವಾದ ಸತ್ಯಪುರುಷನಿಂದ ವಿಮುಖವಾದವು. ಈ ಕಾರಣದಿಂದ ಪತಿವ್ರತಾ ಎನ್ನುವ ಪದದಿಂದ ಕೆಳಗಿಳಿದು ಬಿಟ್ಟವು. ಪೂರ್ಣ ಪ್ರಭು ನಮ್ಮನ್ನು ಪದೇ ಪದೇ ಎಚ್ಚರಿಕೆ ನೀಡಿದರೂ ನಮ್ಮ ಆಸಕ್ತಿ ಕ್ಷರ ಪುರುಷನಿಂದ ಈಚೆಗೆ ಬರಲೇ ಇಲ್ಲ.**

{ಇದೇ ಪ್ರಭಾವ ಇಂದಿನ ಕಾಲದ ಸೃಷ್ಟಿಯಲ್ಲಿ ಆಚರಣೆಯಲ್ಲಿದೆ. ಹೇಗೆ ಯುವ ಪೀಳಿಗೆಗಳು ಸಿನಿಮಾ ತಾರೆಗಳ (ಅಭಿನೇತ ಹಾಗೂ ಅಭಿನೇತ್ರಿಗಳ) ತೋರಿಕೆಯ ಭಂಗಿಗಳನ್ನು ಮತ್ತು ತಮ್ಮ ವೃತ್ತಿಯ ಉದ್ದೇಶವಿಟ್ಟುಕೊಂಡು ಮಾಡುವ ಪಾತ್ರಗಳ ಬಗ್ಗೆ ಅತಿಯಾದ ಆಸಕ್ತಿ ಹೊಂದುವರೋ, ಆ ಆಸಕ್ತಿಯನ್ನು ತಡೆಯುವುದರಿಂದ ಅದು ಕಡಿಮೆಯಾಗುವುದಿಲ್ಲ. ಒಂದು ವೇಳೆ ಯಾವುದೇ ನಟ ಅಥವಾ ನಟಿ ಹತ್ತಿರದ ನಗರಕ್ಕೆ ಬಂದಲ್ಲಿ ಆ ಮುಗ್ಧ ಮಕ್ಕಳ ಜಂಗುಳಿ ಕೇಳುವುದೇ ಬೇಡ. ಕೇವಲ ದರ್ಶನ ಪಡೆಯುವುದಕ್ಕೆ ಬಹುಸಂಖ್ಯೆಯಲ್ಲಿ ಒಟ್ಟುಗೂಡಿರುತ್ತಾರೆ. 'ಪಡೆಯುವುದೊಂದು, ಮಾಡುವುದು ಒಂದು, ಹೇಳುವುದು ಇನ್ನೊಂದು ಎನ್ನುವಂತಾಗಬಾರದು. ದಿನನಿತ್ಯದ ಆಹಾರಕ್ಕಾಗಿ ನಟ ಸಂಪಾದಿಸುತ್ತಿದ್ದರೆ, ಅದನ್ನು ನೋಡಿದ ಈ ಮಕ್ಕಳು ಮೋಸಕ್ಕೆ ಒಳಗಾಗುತ್ತಾರೆ. ತಂದೆ–ತಾಯಿಯರು ಎಷ್ಟೇ ತಿಳಿ ಹೇಳಿದರೂ ಮಕ್ಕಳು ಒಪ್ಪಲು ತಯಾರಿರುವುದಿಲ್ಲ. ಎಲ್ಲಿಯಾಗಲೀ, ಯಾವಾಗಲಾಗಲೀ ಕದ್ದು–ಮುಚ್ಚಿಯಾದರೂ ತಮ್ಮ ಇಷ್ಟವನ್ನು ಪೂರ್ಣಗೊಳಿಸಿಕೊಳ್ಳುತ್ತಾರೆ.}

**ಪೂರ್ಣ ಬ್ರಹ್ಮ ಕವಿರ್ದೇವ (ಕಬೀರ ಪ್ರಭು) ರವರು ಕ್ಷರ ಪುರುಷನಿಗೆ ಈ ರೀತಿಯಾಗಿ ಕೇಳಿದರು. "ಹೇಳು, ನೀನು ಏನು ಬಯಸುವೆ?" ಆಗ ಕ್ಷರಪುರುಷನು ಹೇಳಿದನು. "ತಂದೆಯೇ, ಈ ಸ್ಥಳವು ನನಗೆ ಚಿಕ್ಕದಾಗಿದೆ. ನನಗೆ ಬೇರೆಯೇ ಒಂದು ದ್ವೀಪವನ್ನು ಕೊಡುವ ಮನಸ್ಸು ಮಾಡಿರಿ." ಹಕ್ಕಾ ಕಬೀರ್ (ಸತ್ಯ ಕಬೀರ್)ರವರು ಅವರಿಗೆ 21 ಬ್ರಹ್ಮಾಂಡವನ್ನು ನೀಡಿದರು. ಸ್ವಲ್ಪ ಸಮಯದ ನಂತರ ಜ್ಯೋತಿ ನಿರಂಜನನು ಯೋಚಿಸಿದನು. ಇದರಲ್ಲಿ ಇನ್ನೂ ಸ್ವಲ್ಪ ರಚನೆಯನ್ನು ಮಾಡುವ ಅಗತ್ಯವಿದೆ. ಖಾಲಿ ಬ್ರಹ್ಮಾಂಡದಿಂದ ಏನು ಪ್ರಯೋಜನ? ಹೀಗೆ ವಿಚಾರ ಮಾಡಿ 70 ಯುಗಗಳ ತಪಸ್ಸನ್ನು ಮಾಡಿ, ಪೂರ್ಣ ಪರಮಾತ್ಮ ಕವಿರ್ದೇವ (ಕಬೀರ ಪ್ರಭು) ರಿಂದ ರಚನಾ ಸಾಮಗ್ರಿಯನ್ನು ನೀಡುವಂತೆ ವಿನಂತಿಸಿಕೊಂಡನು. ಸತ್ಯಪುರುಷರು ಅವರಿಗೆ ಮೂರು ಗುಣಗಳು ಮತ್ತು 5 ತತ್ವಗಳನ್ನು ಪ್ರದಾನ ಮಾಡಿದರು. ಅದರಿಂದ ಬ್ರಹ್ಮ (ಜ್ಯೋತಿ ನಿರಂಜನ)ನು ತನ್ನ ಬ್ರಹ್ಮಾಂಡಗಳಲ್ಲಿ ಕೆಲವು ರಚನೆಯನ್ನು ಮಾಡಿದನು. ಮತ್ತೆ ಯೋಚಿಸಿ ಬ್ರಹ್ಮಾಂಡಗಳಲ್ಲಿ ಜೀವಿಗಳು ಕೂಡ ಇರಬೇಕು. ಒಂಟಿಯಾಗಿದ್ದರೆ ಮನಸ್ಸಿಗೆ ಸಮಾಧಾನವಿರುವುದಿಲ್ಲ. ಈ ವಿಚಾರ ಮನಸ್ಸಿಗೆ ಬರುತ್ತಿದ್ದಂತೆ 64 ಯುಗಗಳವರೆಗೆ ಮತ್ತೆ ತಪಸ್ಸನ್ನು ಮಾಡಿದನು.**

**ಪೂರ್ಣ ಪರಮಾತ್ಮ ಕಬೀರರು ಕೇಳಿದಾಗ ಅವನು ಈ ರೀತಿ ಉತ್ತರಿಸಿದನು. "ನನ್ನ ಜೊತೆ ಕೆಲವು ಆತ್ಮಗಳನ್ನು ಕಳುಹಿಸು, ಏಕಾಂಗಿಯಾಗಿರಲು ನನ್ನ ಮನಸ್ಸು ಒಪ್ಪುತ್ತಿಲ್ಲ". ಆಗ ಸತ್ಯಪುರುಷ ಕವಿರಗ್ನಿ (ಕಬೀರ್ ಪರಮೇಶ್ವರ) ಹೀಗೆಂದು ಹೇಳಿದರು. "ಬ್ರಹ್ಮ, ನಿನ್ನ ತಪಸ್ಸಿನ ಪ್ರತಿಫಲವಾಗಿ ನಿನಗೆ ಇನ್ನೂ ಕೆಲವು ಬ್ರಹ್ಮಾಂಡಗಳನ್ನು ಕೊಡಬಲ್ಲೆ. ಆದರೆ ನನ್ನ ಆತ್ಮಗಳನ್ನು ಯಾವುದೇ ಜಪ–ತಪಗಳ, ಸಾಧನೆಗಳ ಫಲಸ್ವರೂಪವಾಗಿ ನೀಡಲು ಸಾಧ್ಯವಿಲ್ಲ. ಹಾಂ, ಒಂದು ವೇಳೆ ಯಾರಾದರೂ ಸ್ವೇಚ್ಛೆಯಿಂದ ನಿನ್ನ ಜೊತೆಯಲ್ಲಿ ಹೋಗುವ ಮನಸ್ಸಿದ್ದರೆ ಆ ಆತ್ಮ ಹೋಗಬಹುದಾಗಿದೆ". ಕಬೀರ್**

ಪರಮೇಶ್ವರರ ಮಾತನ್ನು ಕೇಳಿ ಜ್ಯೋತಿ ನಿರಂಜನ ನಮ್ಮ ಬಳಿ ಬಂದನು. ನಾವೆಲ್ಲಾ ಹಂಸಾತ್ಮ. ಮೊದಲೇ ಅವನ ಬಗ್ಗೆ ಆಸಕ್ತರಾಗಿದ್ದೆವು. ನಾವು ಅವನನ್ನು ನಾಲ್ಕು ದಿಕ್ಕಿನಿಂದಲೂ ಆವರಿಸಿ ನಿಂತುಕೊಂಡೆವು. ಜ್ಯೋತಿ ನಿರಂಜನನು ಈ ರೀತಿಯಾಗಿ ನಮಗೆ ಹೇಳಿದನು. "ನಾನು ತಂದೆಯಿಂದ 21 ಬ್ರಹ್ಮಾಂಡಗಳನ್ನು ಪಡೆದಿದ್ದೇನೆ.

ಅಲ್ಲಿ ನಾನಾ ಪ್ರಕಾರದ ರಮಣೀಯ ಸ್ಥಳಗಳನ್ನು ರಚಿಸಲಾಗಿದೆ. ತಾವು ನನ್ನೊಡನೆ ಬರಲು ತಯಾರಾಗಿರುವಿರಾ?" ಆಗ ನಾವೆಲ್ಲಾ ಆತ್ಮಗಳು ಸೇರಿ ಈ ದಿನ ಈ 21 ಬ್ರಹ್ಮಾಂಡದಲ್ಲಿ ಏನು ಕಷ್ಟಪಡುತ್ತಿದ್ದೆವೋ, ಅವರೆಲ್ಲಾ ಈ ರೀತಿಯಾಗಿ ಹೇಳಿದೆವು. "ಒಂದು ವೇಳೆ ತಂದೆಯವರು ಆಜ್ಞೆ ನೀಡಿದರೆ ನಾವೆಲ್ಲಾ ತಯಾರಾಗಿದ್ದೇವೆ" ನಂತರ ಕ್ಷರಪುರುಷ ಪೂರ್ಣ ಬ್ರಹ್ಮ ಮಹಾನ್ ಕವಿರ್ (ಸಮರ್ಥ ಕಬೀರ ಪ್ರಭು) ರವರ ಬಳಿ ಹೋಗಿ ಎಲ್ಲಾ ವೃತ್ತಾಂತವನ್ನು ತಿಳಿಸಿದನು. ಆಗ ಕವಿರಗ್ನೀ (ಕಬೀರ ಪರಮೇಶ್ವರ)ಯು ಹೇಳಿದನು,"ನನ್ನ ಎದುರಿಗೆ ಬಂದು ಯಾರು ಸ್ವೀಕರಿಸುವರೋ, ಅವರಿಗೆ ಒಪ್ಪಿಗೆ ನೀಡುವೆನು". ಕ್ಷರಪುರುಷ ಹಾಗೂ ಪರಮ ಅಕ್ಷರ ಪುರುಷ (ಕವಿರಮಿತೌಜಾ ಕವಿರ್ ಅಮಿತ್ ಔಜಾ ಅಂದರೆ ಯಾರ ಶಕ್ತಿಗೆ ಸಮಾನವಾದ ಯಾವುದೇ ಶಕ್ತಿ ಇಲ್ಲವೋ ಅವನೇ ಕಬೀರ) ಇಬ್ಬರೂ ನಮ್ಮ ಎಲ್ಲಾಹಂಸಾತ್ಮಗಳ ಬಳಿ ಬಂದರು. ಸತ್ಯ ಕವಿರ್ದೇವನು ಹಂಸಾತ್ಮಗಳಿಗೆ ಹೀಗೆ ಪ್ರಶ್ನಿಸಿದನು. "ಯಾರು ಬ್ರಹ್ಮನ ಜೊತೆಯಲ್ಲಿ ಹೋಗಲು ಬಯಸುವಿರೋ, ಅವರುಗಳು ತಮ್ಮ ಕೈ ಮೇಲಕ್ಕೆತ್ತಿ ನಿಮ್ಮ ಅಂಗೀಕಾರವನ್ನು ದೃಢಪಡಿಸಿರಿ". ತಮ್ಮ ತಂದೆಯ ಎದುರಿಗೆ ಯಾರಿಗೂ ಕೈ ಎತ್ತಲು ಧೈರ್ಯವಿರಲಿಲ್ಲ. ಯಾರೂ ಕೈ ಎತ್ತಲಿಲ್ಲ. ಬಹಳ ಹೊತ್ತಿನವರೆಗೆ ನಿಶ್ಯಬ್ದ ಆವರಿಸಿತ್ತು. ತದನಂತರ ಒಂದು ಹಂಸಾತ್ಮವು ಧೈರ್ಯವನ್ನೆಲ್ಲಾ ಒಟ್ಟುಗೂಡಿಸಿ ಹೇಳಿಬಿಟ್ಟಿತು. "ತಂದೆಯೇ ನಾನು ಹೋಗಲು ಬಯಸುತ್ತೇನೆ". ಆ ತಕ್ಷಣವೇ ನೋಡು ನೋಡುತ್ತಲೇ ಒಪ್ಪಿಗೆಯನ್ನು ಹಂಸಾತ್ಮಕರು (ಈಗಿನ ಕಾಲಬ್ರಹ್ಮನ 21 ಬ್ರಹ್ಮಾಂಡಗಳಲ್ಲಿ ಸಿಕ್ಕಿ ಹಾಕಿಕೊಂಡಿರುವರು) ಅಂದರೆ ನಮ್ಮೆಲ್ಲಾ ಆತ್ಮಗಳು ನಮ್ಮ ಒಪ್ಪಿಗೆಯನ್ನು ಸೂಚಿಸಿದವು. ಪರಮೇಶ್ವರ ಕಬೀರರು ಜ್ಯೋತಿ ನಿರಂಜನರೊಡನೆ ಈ ರೀತಿಯಾಗಿ ಹೇಳಿದರು. ''ನೀನು ನಿನ್ನ ಸ್ಥಳಕ್ಕೆ ಹೋಗು'' ಯಾರು ನಿನ್ನ ಜೊತೆಯಲ್ಲಿ ಬರಲು ಒಪ್ಪಿದ್ದಾರೋ ಆ ಎಲ್ಲಾ ಹಂಸ ಆತ್ಮಗಳನ್ನು ನಿನ್ನ ಬಳಿಗೆ ಕಳುಹಿಸಿಕೊಡುವೆನು". ಜ್ಯೋತಿ ನಿರಂಜನನು ತನ್ನ 21 ಬ್ರಹ್ಮಾಂಡಗಳ ಕಡೆಗೆ ಹೊರಟು ಹೋದನು. ಅಲ್ಲಿಯವರೆಗೆ ಈ 21 ಬ್ರಹ್ಮಾಂಡಗಳು ಸತ್ಯಲೋಕದಲ್ಲಿಯೇ ಇದ್ದವು.

ತದನಂತರ ಪೂರ್ಣ ಬ್ರಹ್ಮನು ಮೊಟ್ಟ ಮೊದಲಿಗೆ ಒಪ್ಪಿಗೆ ನೀಡಿದ ಹಂಸಾತ್ಮಕ್ಕೆ ಸ್ತ್ರೀರೂಪ ನೀಡಿದನು. ಆದರೆ ಸ್ತ್ರೀ ಇಂದ್ರಿಯವನ್ನು ರಚನೆ ಮಾಡಲಿಲ್ಲ ಹಾಗೂ ಎಲ್ಲಾ ಆತ್ಮಗಳನ್ನು (ಯಾವ ಆತ್ಮಗಳು ಜ್ಯೋತಿ ನಿರಂಜನ (ಬ್ರಹ್ಮ)ನ ಜೊತೆಯಲ್ಲಿ ಹೊರಡಲು ಒಪ್ಪಿಗೆ ನೀಡಿದ್ದವು) ಆ ಸ್ತ್ರೀಯ ಶರೀರದಲ್ಲಿ ಪ್ರವೇಶ ಮಾಡಿಸಿದನು ಮತ್ತು ಅವುಗಳ ಹೆಸರನ್ನು ಆಷ್ಟಾ (ಆದಿ ಮಾಯ/ಪ್ರಕೃತಿ ದೇವಿ/ ದುರ್ಗಾ) ಎಂದಿರಿಸಿದನು ಮತ್ತು ಸತ್ಯ ಪುರುಷನು ಆಷ್ಟಾಳಿಗೆ ಹೀಗೆಂದು ನುಡಿದನು, ''ಪುತ್ರಿ, ನಿನಗೆ ನಾನು ಶಬ್ದ ಶಕ್ತಿಯನ್ನು ನೀಡಿರುವೆನು. ಬ್ರಹ್ಮನು ಹೇಳಿದಷ್ಟು ಜೀವಗಳನ್ನು ಉತ್ಪನ್ನ ಮಾಡಿಕೊಡು'' ಪೂರ್ಣ ಬ್ರಹ್ಮ ಕವಿರ್ದೇವ (ಕಬೀರ್ ಸಾಹೇಬ್)ರು ತನ್ನ ಪುತ್ರನಾದ ಸಹಜದಾಸನ ಮೂಲಕ ಪ್ರಕೃತಿಯನ್ನು ಕ್ಷರಪುರುಷನ ಬಳಿ ಕಳುಹಿಸಿಕೊಟ್ಟರು. ಸಹಜದಾಸನು ಜ್ಯೋತಿ ನಿರಂಜನನಿಗೆ ಹೇಳಿದನು, " ಯಾರ್ಯಾರು ನಿಮ್ಮ ಜೊತೆಯಲ್ಲಿ ಬರಲು ಒಪ್ಪಿಗೆಯನ್ನು ವ್ಯಕ್ತಪಡಿಸಿದ್ದರೋ, ತಂದೆಯವರು ಈ ತಂಗಿಯ ಶರೀರದಲ್ಲಿ ಆ ಎಲ್ಲಾ ಆತ್ಮಗಳನ್ನು ಪ್ರವೇಶಿಸುವಂತೆ ಮಾಡಿದ್ದಾರೆ. ಮತ್ತು ತಂದೆಯವರು ಪ್ರಕೃತಿಗೆ ವಚನ ಶಕ್ತಿಯನ್ನು ದಯಪಾಲಿಸಿದ್ದಾರೆ. ನೀವು ಎಷ್ಟು ಜೀವಿಗಳನ್ನು ಬಯಸುವಿರೋ ಅಷ್ಟು ಜೀವಿಗಳನ್ನು ಪ್ರಕೃತಿ ತನ್ನ ಶಬ್ದ ಶಕ್ತಿಯಿಂದಲೇ ಉತ್ಪತ್ತಿ ಮಾಡುವಳು". ಇಷ್ಟನ್ನು ಹೇಳಿ ಸಹಜದಾಸನು ತನ್ನ ದ್ವೀಪಕ್ಕೆ ಮರಳಿದನು.

ಯುವತಿಯಾದ ಕಾರಣ ಆ ಪ್ರಕೃತಿಯ (ಹುಡುಗಿಯ) ರೂಪ ಮತ್ತು ಬಣ್ಣ ಹೊಳೆಯುತ್ತಿತ್ತು. ಬ್ರಹ್ಮನ ಮನದಲ್ಲಿ ಕಾಮನೆಗಳು ಉತ್ಪನ್ನವಾದವು ಮತ್ತು ಪ್ರಕೃತಿದೇವಿಯೊಡನೆ ಅಭದ್ರಗತಿ ವಿಧಿಯನ್ನು ಪ್ರಾರಂಭಿಸಿದನು. ಆಗ ದುರ್ಗೆಯು ಹೇಳಿದಳು. "ಜ್ಯೋತಿ ನಿರಂಜನ, ನನ್ನ ಬಳಿ ತಂದೆಯವರು ನೀಡಿದ ಶಬ್ದ ಶಕ್ತಿ ಇದೆ. ನೀವು ಎಷ್ಟು ಪ್ರಾಣಿಗಳನ್ನು ಹೇಳುವಿರೋ, ಅವುಗಳನ್ನು ನನ್ನ ವಚನದಿಂದಲೇ ಉತ್ಪನ್ನ ಮಾಡುವೆನು. ನೀವು ನನ್ನ ದೊಡ್ಡಣ್ಣನಾಗಿರುವುದರಿಂದ, ಅಣ್ಣ–ತಂಗಿಯರ ಈ ಸಂಬಂಧ ಮಹಾಪಾಪಕ್ಕೆ ಕಾರಣವಾಗುವುದು". ಆದರೆ ಜ್ಯೋತಿ ನಿರಂಜನನು ಪ್ರಕೃತಿಯ ಒಂದೂ ಪ್ರಾರ್ಥನೆಯನ್ನು ಕೇಳಲಿಲ್ಲ ಮತ್ತು ತನ್ನ ಶಬ್ದ ಶಕ್ತಿ ಮೂಲಕ ಬೆರಳುಗಳ ತುದಿಭಾಗದಿಂದ (ಉಗುರುಗಳಿಂದ) ಸ್ತ್ರೀಯ ಇಂದ್ರಿ (ಭಗ, ಯೋನಿ)ಯನ್ನು ಪ್ರಕೃತಿಗೆ ಇರಿಸಿದನು ಮತ್ತು ಬಲಾತ್ಕಾರವನ್ನೆಸಗಲು ತೀರ್ಮಾನಿಸಿದನು. ಅದೇ ಸಮಯದಲ್ಲಿ ದುರ್ಗೆಯು ತನ್ನ ಮಾನವನ್ನು ರಕ್ಷಣೆ ಮಾಡಿಕೊಳ್ಳುವ ಸಲುವಾಗಿ ಬೇರೆ ಉಪಾಯವಿಲ್ಲದೆ ಸೂಕ್ಷ್ಮ ರೂಪ ಧರಿಸಿದಳು ಮತ್ತು ಜ್ಯೋತಿ ನಿರಂಜನನ ತೆರೆದ ಬಾಯಿಯ ಮೂಲಕ ಹೊಟ್ಟೆಯಲ್ಲಿ ಪ್ರವೇಶ ಮಾಡಿ ರಕ್ಷಣೆಗೋಸ್ಕರ ಪೂರ್ಣ ಬ್ರಹ್ಮನನ್ನು ಯಾಚಿಸಿದಳು. ಅದೇ ಸಮಯದಲ್ಲಿ ಕವಿರ್ದೇವ (ಕವಿರ್ ದೇವ) ತನ್ನ ಮಗ ಯೋಗ ಸಂತಾಯನ್ ಅರ್ಥಾತ್ ಜೋಗ್‌ಜೀತ್‌ನಂತೆ ರೂಪ ಧರಿಸಿ ಅಲ್ಲಿ ಪ್ರತ್ಯಕ್ಷವಾದರು ಮತ್ತು ಕನ್ಯೆಯನ್ನು ಬ್ರಹ್ಮನ ಹೊಟ್ಟೆಯಿಂದ ಹೊರ ತೆಗೆದರು. ಮತ್ತು ಹೀಗೆ ಹೇಳಿದರು. "ಜ್ಯೋತಿ ನಿರಂಜನ, ಇಂದಿನಿಂದ ನಿನ್ನ ಹೆಸರು 'ಕಾಲ' ಎಂಬುದಾಗಿರುತ್ತದೆ. ನಿನಗೆ ಜನ್ಮ–ಮೃತ್ಯುಗಳು ಆಗುತ್ತಿರುತ್ತವೆ. ಈ ಕಾರಣದಿಂದ ನಿನ್ನ ಹೆಸರು ಕ್ಷರಪುರುಷ ಎಂದಾಗುವುದು ಮತ್ತು ಒಂದು ಲಕ್ಷ ಮಾನವ ಶರೀರ ಹೊಂದಿದವರನ್ನು ಪ್ರತಿದಿನ ತಿನ್ನುವೆ ಮತ್ತು ಒಂದು ಕಾಲು ಲಕ್ಷ ಉತ್ಪನ್ನ ಮಾಡುವೆ. ನಿಮ್ಮಿಬ್ಬರನ್ನು 21 ಬ್ರಹ್ಮಾಂಡ ಸಹಿತ ಹೊರಹಾಕಲಾಗುತ್ತದೆ". ಇಷ್ಟು ಹೇಳುತ್ತಲೇ 21 ಬ್ರಹ್ಮಾಂಡವು ವಿಮಾನದ ರೀತಿ ಚಲಿಸಲು ಪ್ರಾರಂಭಿಸಿತು. ಸಹಜದಾಸನ ದ್ವೀಪದ ಕಡೆಯಿಂದ ಹೊರಟು ಸತ್ಯಲೋಕದಿಂದ 16 ಸಂಖ ಕೋಸ (ಒಂದು ಕೋಸವೆಂದರೆ ಹೆಚ್ಚು ಕಡಿಮೆ 3 ಕಿ.ಮೀ. ದೂರವಾಗುತ್ತದೆ) ದೂರ ಬಂದು ನಿಂತುಬಿಟ್ಟಿತು.

ವಿಶೇಷ ವಿವರಣೆ – ಇಲ್ಲಿಯವರೆಗೆ 3 ಶಕ್ತಿಗಳ ವಿವರಣೆ ಬಂದಿದೆ.


1. ಪೂರ್ಣಬ್ರಹ್ಮ – ಇವನನ್ನು ಬೇರೆ ಬೇರೆ ಉಪಮಾತ್ಮಕ ಹೆಸರುಗಳಿಂದ ಕೂಡಾ ಕರೆಯಲಾಗುತ್ತದೆ, ಹೇಗೆಂದರೆ ಸತ್ಯಪುರುಷ, ಅಕಾಲ ಪುರುಷ, ಶಬ್ದ ಸ್ವರೂಪಿ ರಾಮ, ಪರಮ ಅಕ್ಷರ ಬ್ರಹ್ಮ/ಪುರುಷ ಮೊದಲಾದವು. ಈ ಪೂರ್ಣ ಬ್ರಹ್ಮ ಅಸಂಖ್ಯ ಬ್ರಹ್ಮಾಂಡಗಳ ಸ್ವಾಮಿಯಾಗಿದ್ದಾನೆ ಹಾಗೂ ವಾಸ್ತವದಲ್ಲಿ ಅವಿನಾಶಿಯಾಗಿದ್ದಾನೆ.

2. ಪರಬ್ರಹ್ಮ – ಇವನನ್ನು ಅಕ್ಷರ ಪುರುಷನೆಂದೂ ಕರೆಯಲಾಗುತ್ತದೆ. ಇವನು ವಾಸ್ತವದಲ್ಲಿ ಅವಿನಾಶಿ ಅಲ್ಲ. ಇವನು 7 ಸಂಖ ಬ್ರಹ್ಮಾಂಡಗಳ ಸ್ವಾಮಿಯಾಗಿದ್ದಾನೆ.

3. ಬ್ರಹ್ಮ – ಇವನನ್ನು ಜ್ಯೋತಿ ನಿರಂಜನ, ಕಾಲ, ಕೈಲ, ಕ್ಷರಪುರುಷ ಮತ್ತು ಧರ್ಮರಾಯ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಈತ ಕೇವಲ 21 ಬ್ರಹ್ಮಾಂಡಗಳಿಗೆ ಸ್ವಾಮಿಯಾಗಿದ್ದಾನೆ. ಈಗ ಮುಂದೆ ಇದೇ ಬ್ರಹ್ಮ (ಕಾಲ)ನ ಸೃಷ್ಟಿಯಲ್ಲಿ ಒಂದು ಬ್ರಹ್ಮಾಂಡದ ಪರಿಚಯ ನೀಡಲಾಗುತ್ತದೆ. ಅದರಲ್ಲಿ ಇನ್ನೂ ಮೂರು ಹೆಸರುಗಳನ್ನು ನೀವು ಓದಬೇಕಾಗಿರುತ್ತದೆ. ಬ್ರಹ್ಮಾ, ವಿಷ್ಣು ಮತ್ತು ಶಿವ.

ಬ್ರಹ್ಮಾ ಮತ್ತು ಬ್ರಹ್ಮನಲ್ಲಿರುವ ಅಂತರ:– ಒಂದು ಬ್ರಹ್ಮಾಂಡದಲ್ಲಿರುವ, ಎಲ್ಲದಕ್ಕಿಂತಲೂ ಎತ್ತರವಾದ ಹಾಗೂ ಉನ್ನತವಾದ ಸ್ಥಾನದಲ್ಲಿ ಬ್ರಹ್ಮ (ಕ್ಷರ ಪುರುಷ) ಸ್ವಯಂ ಮೂರು ಗುಪ್ತ ಸ್ಥಾನಗಳ ರಚನೆ ಮಾಡಿ ಬ್ರಹ್ಮಾ, ವಿಷ್ಣು ಮತ್ತು ಶಿವನ ರೂಪದಲ್ಲಿ ಸ್ಥಿತನಾಗಿದ್ದಾನೆ. ಮತ್ತು ತನ್ನ ಪತ್ನಿ ಪ್ರಕೃತಿ (ದುರ್ಗಾ)ಯ ಸಹಯೋಗದಿಂದ ಮೂವರು ಪುತ್ರರ ಉತ್ಪತ್ತಿ ಮಾಡುತ್ತಾನೆ.

# ಒಂದು ಬ್ರಹ್ಮಾಂಡದ ಲಘು ಚಿತ್ರ



ಅವರುಗಳ ಹೆಸರನ್ನೂ ಕೂಡಾ ಬ್ರಹ್ಮಾ, ವಿಷ್ಣು ಹಾಗೂ ಶಿವನೆಂದೇ ಇಡುತ್ತಾನೆ. ಯಾರು ಬ್ರಹ್ಮನ ಪುತ್ರ ಬ್ರಹ್ಮಾನಾಗಿದ್ದಾನೋ ಅವನು ಒಂದು ಬ್ರಹ್ಮಾಂಡದಲ್ಲಿ ಕೇವಲ 3 ಲೋಕ (ಪೃಥ್ವಿಲೋಕ, ಸ್ವರ್ಗ ಲೋಕ ಮತ್ತು ಪಾತಾಳ ಲೋಕ)ಗಳಲ್ಲಿ ಒಂದಾದ ರಜೋಗುಣ ವಿಭಾಗದ ಮಂತ್ರಿ (ಸ್ವಾಮಿ). ಇವನನ್ನು ತ್ರಿಲೋಕದ ಬ್ರಹ್ಮಾ ಎಂದು ಹೇಳಲಾಗುತ್ತದೆ ಮತ್ತು ಬ್ರಹ್ಮನು ಬ್ರಹ್ಮಲೋಕದಲ್ಲಿ ಬ್ರಹ್ಮಾ ಎನ್ನುವ ರೂಪದಲ್ಲಿ ಇರುತ್ತಾನೆ. ಅವನನ್ನು ಮಹಾಬ್ರಹ್ಮಾ ಅಥವಾ ಬ್ರಹ್ಮಲೋಕದ ಬ್ರಹ್ಮಾ ಎಂದು ಕರೆಯಲ್ಪಡುವನು. ಇದೇ ಬ್ರಹ್ಮ (ಕಾಲ)ನನ್ನು ಸದಾಶಿವ, ಮಹಾಶಿವ, ಮಹಾವಿಷ್ಣುವೆಂದೂ ಕೂಡಾ ಕರೆಯಲಾಗುವುದು.

ಶ್ರೀ ವಿಷ್ಣು ಪುರಾಣದ ಪ್ರಮಾಣ– ಚತುರ್ಥ ಅಂಶ, ಅಧ್ಯಾಯ 1 ಪುಟ ಸಂಖ್ಯೆ 230–231ರಲ್ಲಿ ಶ್ರೀ ಬಹ್ಮಾ ಹೇಳಿದ್ದಾನೆ. "ಯಾವ ಜನ್ಮವಿಲ್ಲದ, ಸರ್ವಮಯ ವಿಧಾತಾ ಪರಮೇಶ್ವರನ ಆದಿ, ಮಧ್ಯ, ಅಂತ್ಯ, ಸ್ವರೂಪ, ಸ್ವಭಾವ ಮತ್ತು ಸಾರವನ್ನು ನಾವು ತಿಳಿಯಲು ಸಾಧ್ಯವಿಲ್ಲವೋ (ಶ್ಲೋಕ 83).

ಯಾರು ನನ್ನ ರೂಪಧಾರಣೆ ಮಾಡಿ ಪ್ರಪಂಚದ ರಚನೆ ಮಾಡುವನೋ, ಸ್ಥಿತಿಯ ಸಮಯದಲ್ಲಿ ಯಾರಿಗೆ ಪುರುಷ ರೂಪ ಇದೆಯೋ ಮತ್ತು ಯಾವ ರುದ್ರ ರೂಪದಿಂದ ವಿಶ್ವವನ್ನು ಲಯಮಾಡುವನೋ, ಅವನು ಅನಂತ ರೂಪದಿಂದ ಸಂಪೂರ್ಣ ಜಗತ್ತನ್ನು ಧಾರಣೆ ಮಾಡುತ್ತಾನೆ. (ಶ್ಲೋಕ 86)

## "ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಮತ್ತು ಶ್ರೀ ಶಿವನ ಉತ್ಪತ್ತಿ"

ಕಾಲನು (ಬ್ರಹ್ಮ) ಪ್ರಕೃತಿಯೊಡನೆ ಹೇಳಿದನು, "ಈಗ ನನ್ನನ್ನು ಯಾರು ಏನು ಮಾಡಲು ಸಾಧ್ಯ? ಮನಸ್ಸಿಗೆ ಬಂದದ್ದನ್ನು ಮಾಡುವೆನು". ಆಗ ಪ್ರಕೃತಿಯು ಮತ್ತೆ ಪ್ರಾರ್ಥನೆ ಮಾಡಿದಳು. "ನಿಮಗೆ ಸ್ವಲ್ಪವಾದರೂ ನಾಚಿಕೆಯಾಗಬೇಕು ಮೊದಲನೆಯದಾಗಿ ನೀವು ನನ್ನ ದೊಡ್ಡ ಅಣ್ಣನಾಗಿದ್ದೀರಿ. ಏಕೆಂದರೆ ಅದೇ ಪೂರ್ಣ ಪರಮಾತ್ಮ (ಕವಿರ್ದೇವ)ನ ವಚನ ಶಕ್ತಿಯಿಂದ ನಿಮ್ಮನ್ನು (ಬ್ರಹ್ಮ) ಮೊಟ್ಟೆಯಿಂದ ಉತ್ಪತ್ತಿ ಮಾಡಿರುವುದು ಮತ್ತು ಆಮೇಲೆ ನನ್ನನ್ನು ಉತ್ಪತ್ತಿ ಮಾಡಿರುವುದು ಅದೇ ಪರಮೇಶ್ವರನ ವಚನ ಶಕ್ತಿಯಿಂದಲೇ, ಎರಡನೆಯದಾಗಿ ನಾನು ತಮ್ಮ ಉದರದಿಂದ ಹೊರ ಬಂದಿರುವ ಕಾರಣ ನಾನು ನಿಮ್ಮ ಮಗಳು ಹಾಗೂ ನೀವು ನನ್ನ ತಂದೆಯಾದಿರಿ. ಈ ಪವಿತ್ರವಾದ ಸಂಬಂಧವನ್ನು ಹಾಳು ಮಾಡುವುದು ಮಹಾಪಾಪವಾಗಬಹುದು. ನನ್ನ ಬಳಿ ತಂದೆಯವರು ನೀಡಿದ ಶಬ್ದ ಶಕ್ತಿ ಇದೆ. ಅದರಿಂದ ತಾವು ಎಷ್ಟು ಪ್ರಾಣಿಗಳನ್ನು ಹೇಳುವಿರೋ ನನ್ನ ವಚನ ಶಕ್ತಿಯಿಂದಲೇ ಉತ್ಪನ್ನ ಮಾಡಿಬಿಡುವೆನು". ಜ್ಯೋತಿ ನಿರಂಜನನು ದುರ್ಗಾಳ ಒಂದೂ ವಿನಂತಿಯನ್ನು ಕೇಳಲಿಲ್ಲ. ಅವನು ಹೀಗೆ ಹೇಳಿದನು, ಏನೆಂದರೆ ನನಗೆ ಯಾವ ರೀತಿಯ ಶಿಕ್ಷೆ ದೊರೆಯುವುದೋ ಅದಾಗಲೇ ದೊರೆತು ಬಿಟ್ಟಿದೆ, ನನ್ನನ್ನು ಸತ್ಯಲೋಕದಿಂದ ಹೊರಹಾಕಿಬಿಟ್ಟಿದ್ದಾರೆ. ಈಗ ನಾನು ಮನಸೋ ಇಚ್ಛೆ ನಡೆದುಕೊಳ್ಳುತ್ತೇನೆ".

ಈ ಮಾತನ್ನು ಹೇಳಿದ ನಂತರ ಕಾಲಪುರುಷ (ಕ್ಷರಪುರುಷ) ನು ಪ್ರಕೃತಿಯ ಜೊತೆಯಲ್ಲಿ ಒತ್ತಾಯವಾಗಿ ಮದುವೆಯಾಗಿ ಮೂರು ಪುತ್ರರಿಗೆ ಜನ್ಮ ನೀಡಲು ಕಾರಣನಾದನು. (ರಜಗುಣ ಕೂಡಿದ–ಬ್ರಹ್ಮಾ, ಸದ್ಗುಣದಿಂದ ಕೂಡಿದ ವಿಷ್ಣು ಮತ್ತು ತಮೋಗುಣದಿಂದ ಕೂಡಿದ ಶಿವ ಶಂಕರ) ಯೌವನಾವಸ್ಥೆಗೆ ಬರುವವರೆಗೂ ಮೂರೂ ಪುತ್ರರನ್ನು ದುರ್ಗೆಯ ಮುಖಾಂತರ ಅಚೇತರನ್ನಾಗಿ ಮಾಡಿದನು. ಮತ್ತೆ ಯುವಕರಾದ ನಂತರ ಬ್ರಹ್ಮಾನನ್ನು ಕಮಲದ ಪುಷ್ಪದೊಳಗೆ, ಶ್ರೀ ವಿಷ್ಣುವನ್ನು ಶೇಷನಾಗನ ಪಲ್ಲಂಗದ ಮೇಲೆ ಮತ್ತು ಶ್ರೀ ಶಿವನನ್ನು ಕೈಲಾಸ ಪರ್ವತದ ಮೇಲೆ ಸಚೇತರನ್ನಾಗಿ

ಮಾಡಿ ಒಟ್ಟುಗೂಡಿಸಿದನು. ತದನಂತರ ಪ್ರಕೃತಿ (ದುರ್ಗಾ)ಯ ಮೂಲಕ ಈ ಮೂರು ಜನರ ವಿವಾಹ ಮಾಡಿ ಮತ್ತು ಒಂದು ಬ್ರಹ್ಮಾಂಡದಲ್ಲಿ ಮೂರು ಲೋಕಗಳಲ್ಲಿ (ಸ್ವರ್ಗಲೋಕ, ಪೃಥ್ವಿಲೋಕ ಮತ್ತು ಪಾತಾಳಲೋಕ) ಒಂದೊಂದು ವಿಭಾಗಕ್ಕೆ ಮಂತ್ರಿಯನ್ನಾಗಿ (ಪ್ರಭು) ನಿಯುಕ್ತಿಗೊಳಿಸಿದನು. ಹೀಗೆ ಶ್ರೀ ಬ್ರಹ್ಮಾನಿಗೆ ರಜೋಗುಣ ವಿಭಾಗದ ಮತ್ತು ವಿಷ್ಣುವಿಗೆ ಸತೋಗುಣ ವಿಭಾಗದ ಹಾಗೂ ಶಿವಶಂಕರನಿಗೆ ತಮೋಗುಣ ವಿಭಾಗದ ಮತ್ತು ಸ್ವಯಂ ಗುಪ್ತ (ಮಹಾಬ್ರಹ್ಮಾ-ಮಹಾವಿಷ್ಣು-ಮಹಾಶಿವ) ರೂಪದಲ್ಲಿ ಮುಖ್ಯಮಂತ್ರಿ ಪದವಿಯನ್ನು ನಿರ್ವಹಿಸುತ್ತಾನೆ. ಒಂದು ಬ್ರಹ್ಮಾಂಡದಲ್ಲಿ ಒಂದು ಬ್ರಹ್ಮಲೋಕದ ರಚನೆಯನ್ನು ಮಾಡಲಾಯಿತು. ಅಲ್ಲಿಯೇ ಮೂರು ಗುಪ್ತ ಸ್ಥಾನಗಳನ್ನು ಇಡಲಾಯಿತು. ಒಂದು ರಜೋಗುಣವು ಪ್ರಧಾನವಾದ ಸ್ಥಾನವಾಗಿದ್ದು, ಅಲ್ಲಿ ಈ ಬ್ರಹ್ಮ (ಕಾಲ)ನು ಸ್ವಯಂ ಮಹಾಬ್ರಹ್ಮಾನ (ಮುಖ್ಯಮಂತ್ರಿ) ರೂಪದಲ್ಲಿ ಇರುತ್ತಾನೆ ಮತ್ತು ತನ್ನ ಪತ್ನಿ ದುರ್ಗಾಳಿಗೆ ಮಹಾಸಾವಿತ್ರಿ ರೂಪವನ್ನು ನೀಡುತ್ತಾನೆ. ಇವರಿಬ್ಬರ ಸಂಯೋಗದಿಂದ ಯಾವ ಪುತ್ರನು ಆ ಸ್ಥಾನದಲ್ಲಿ ಉತ್ಪನ್ನನಾಗುವನೋ, ಅವನು ಸ್ವತಃ ರಜೋಗುಣಿಯಾಗಿರುತ್ತಾನೆ. ಎರಡನೆಯ ಸ್ಥಾನ ಸತೋಗುಣ ಪ್ರಧಾನ ಸ್ಥಾನವಾಯಿತು. ಅಲ್ಲಿ ಈ ಕ್ಷರಪುರುಷ ಸ್ವಯಂ ಮಹಾವಿಷ್ಣು ರೂಪದಲ್ಲಿ ಇರುತ್ತಿದ್ದನು. ಮತ್ತು ಅವನ ಪತ್ನಿ ದುರ್ಗಾಳನ್ನು ಮಹಾಲಕ್ಷ್ಮಿ ರೂಪದಲ್ಲಿ ಸ್ಥಿತಗೊಳಿಸಿ, ಯಾವ ಪುತ್ರ ಅಲ್ಲಿ ಜನಿಸುತ್ತಾನೋ ಅವನಿಗೆ ವಿಷ್ಣುವೆಂದು ಹೆಸರಿಡುತ್ತಾನೆ. ಈ ಬಾಲಕ ಸದ್ಗುಣದಿಂದ ಕೂಡಿರುತ್ತಾನೆ ಮತ್ತು ಮೂರನೆಯ ಸ್ಥಳದಲ್ಲಿ ಈ ಕಾಲನೇ ಒಂದು ತಮೋಗುಣ ಪ್ರಧಾನವಾದ ಕ್ಷೇತ್ರವನ್ನಾಗಿ ಮಾಡಿದನು. ಅದರಲ್ಲಿ ಈತ ಸ್ವಯಂ ಸದಾಶಿವನ ರೂಪದಲ್ಲಿರುವನು ಮತ್ತು ತನ್ನ ಪತ್ನಿ ದುರ್ಗಾಳನ್ನು ಮಹಾಪಾರ್ವತಿ ರೂಪದಲ್ಲಿರಿಸಿದನು.

ಈ ಇಬ್ಬರು ದಂಪತಿಗಳ ವ್ಯವಹಾರದಿಂದ ಯಾವ ಪುತ್ರ ಜನಿಸಿದನೋ ಅವನಿಗೆ ಶಿವನೆಂದು ಹೆಸರನ್ನಿಟ್ಟು ಅವನನ್ನು ತಮೋಗುಣಯುಕ್ತನನ್ನಾಗಿ ಮಾಡಿದನು. (ಪ್ರಮಾಣಕ್ಕೋಸ್ಕರ ಪವಿತ್ರ ಶ್ರೀ ಶಿವ ಮಹಾಪುರಾಣ, ವಿದ್ವೇಶ್ವರ ಸಂಹಿತೆ ಪುಟ ಸಂಖ್ಯೆ 21-25, ಅದರಲ್ಲಿ ಬ್ರಹ್ಮಾ ವಿಷ್ಣು, ರುದ್ರ ಮತ್ತು ಮಹೇಶ್ವರರಿಂದ ಬೇರೆ ಸದಾಶಿವನು ಮತ್ತು ರುದ್ರ ಸಂಹಿತೆ ಅಧ್ಯಾಯ 6. 7 ಮತ್ತು 9, ಪುಟ ಸಂ. 81 ರಿಂದ 87 ಮತ್ತು 90ರ ಅನುವಾದಕರು ಕೀರ್ತನಾಚಾರ್ಯ ಲಕ್ಷ್ಮಣದಾಸ್ ವೇಲಣಕರ್, ಗೀತ ಪ್ರೆಸ್, ಗೋರಖ್ ಪುರದಿಂದ ಪ್ರಕಾಶಿತಗೊಂಡ ಪವಿತ್ರ ಶ್ರೀ ಮದ್ದೇವಿ ಮಹಾಪುರಾಣ ಮೂರನೆ ಸ್ಕಂದ ಪುಟ 97ರಿಂದ 111ರವರೆಗೆ ಗೀತಾ ಪ್ರೆಸ್, ಗೋರಖ್‌ಪುರ ಇದರಿಂದ ಪ್ರಕಾಶಿತಗೊಂಡಿದೆ. ಇದರ ಅನುವಾದಕರು ಕೀರ್ತನಾಚಾರ್ಯ ಲಕ್ಷ್ಮಣದಾಸ್ ವೇಲಣಕರ್) ಮತ್ತೆ ಇವರೆಲ್ಲರನ್ನೂ ನಂಬಿಕೆದ್ರೋಹದಲ್ಲಿರಿಸಿ ತನ್ನ ಆಹಾರಕ್ಕೋಸ್ಕರ ಜೀವಿಗಳನ್ನು ಉತ್ಪತ್ತಿ ಮಾಡಿ ಶ್ರೀ ಬ್ರಹ್ಮಾನ ಮೂಲಕ, ಸ್ಥಿತಿ (ಒಬ್ಬರ ಮೇಲೊಬ್ಬರು ಮೋಹ-ಮಮತೆಯ ಜಾಲದಲ್ಲಿ ಮುಳುಗುವಂತೆ ಮಾಡುವುದು) ಶ್ರೀ ವಿಷ್ಣುವಿನಿಂದ ಮತ್ತು ಸಂಹಾರ (ಏಕೆಂದರೆ ಕಾಲ ಪುರುಷನಿಗೆ ಶಾಪದ ಕಾರಣ ಒಂದು ಲಕ್ಷ ಮಾನವ ಶರೀರ ಹೊಂದಿದ ಪ್ರಾಣಿಗಳನ್ನು ಸೂಕ್ಷ್ಮ ಶರೀರದಿಂದ ಮೈಲಿಗೆಯನ್ನು ದೂರಮಾಡಿ ನಂತರ ತಿನ್ನಬೇಕಾದ ಕಾರಣ 21ನೇ ಬ್ರಹ್ಮಾಂಡದಲ್ಲಿ ಒಂದು ತಪ್ತಶಿಲಾ ಇದೆ.

ಅದು ಸ್ವತಃ ಯಾವಾಗಲೂ ಬಿಸಿಯಾಗಿಯೇ ಇರುತ್ತದೆ. ಇದರ ಮೇಲೆ ಬಿಸಿ ಮಾಡಿ ಮೈಲಿಗೆಯನ್ನು ಹೊರತೆಗೆದು ತಿನ್ನುತ್ತಾನೆ. ಜೀವವು ಮರಣ ಹೊಂದಿರುವುದಿಲ್ಲ. ಆದರೆ ಕಷ್ಟ ಅಸಹನೀಯವಾಗಿರುತ್ತದೆ. ಮತ್ತು ಪ್ರಾಣಿಗಳಿಗೆ ಅವುಗಳ ಕರ್ಮದ ಆಧಾರದ ಮೇಲೆ ಬೇರೆ ಶರೀರವನ್ನು ನೀಡುತ್ತಾನೆ) ಶ್ರೀ ಶಿವನ ಮೂಲಕ ಈ ಕೆಲಸಗಳನ್ನು ಮಾಡಿಸುತ್ತಾನೆ. ಹೇಗೆಂದರೆ ಯಾವುದೋ ಮನೆಯಲ್ಲಿ ಮೂರು ಕೋಣೆ ಇರುವಂತೆ ಕಟ್ಟಿರುವುದು. ಒಂದು ಕೋಣೆಯಲ್ಲಿ ಅಶ್ಲೀಲ ಚಿತ್ರಗಳನ್ನು ಗೋಡೆಗಳಲ್ಲಿ ತೂಗು ಹಾಕಿರುವುದು. ಆ ಕೋಣೆಗೆ ಹೋಗುತ್ತಿದ್ದ ಹಾಗೆ ಮಲಿನ ವಿಚಾರ ಉತ್ಪನ್ನವಾಗುವುದು. ಎರಡನೇ ಕೋಣೆಯಲ್ಲಿ ಸಾಧು-ಸಂತರು, ಭಕ್ತರ ಚಿತ್ರ ಹಾಕಲಾಗಿರುತ್ತದೆ,

ಅದನ್ನು ನೋಡುತ್ತಿದ್ದ ಹಾಗೆ ಮನದಲ್ಲಿ ಉತ್ತಮ ವಿಚಾರ, ಪ್ರಭುವಿನ ಚಿಂತನೆಯೇ ಮೂಡಿ ಬರುತ್ತದೆ. ಮೂರನೇ ಕೋಣೆಯಲ್ಲಿ ದೇಶಭಕ್ತರ ಹಾಗೂ ಪ್ರಾಣತ್ಯಾಗಿಗಳ ಚಿತ್ರ ಹಾಕಿದರೆ, ಮನದಲ್ಲಿ ಅದೇ ರೀತಿ ತ್ಯಾಗ ಹಾಗೂ ಹೋರಾಟದ ಭಾವನೆ ಉತ್ಪನ್ನವಾಗುವುದು. ಅದೇ ರೀತಿ ಬ್ರಹ್ಮ(ಕಾಲ)ನು ತನ್ನ ತಿಳುವಳಿಕೆ ಹಾಗೂ ಬುದ್ಧಿವಂತಿಕೆಯಿಂದ ಮೂರೂ ಗುಣ ಪ್ರಧಾನವಾಗಿರುವ ಸ್ಥಾನಗಳನ್ನು ರಚನೆ ಮಾಡಿದನು.

## "ಮೂರು ಗುಣಗಳೆಂದರೆ ಏನು? ಆಧಾರದ ಸಹಿತ"

"ಮೂರೂ ಗುಣಗಳಲ್ಲಿ ರಜಗುಣ ಬ್ರಹ್ಮಾ, ಸತ್‌ಗುಣ ವಿಷ್ಣು ಹಾಗೂ ತಮಗುಣ ಶಿವನಾಗಿದ್ದಾರೆ. ಬ್ರಹ್ಮ (ಕಾಲ) ಮತ್ತು ಪ್ರಕೃತಿ (ದುರ್ಗಾ) ಇವರುಗಳಿಂದ ಹುಟ್ಟಿರುವ ಈ ಮೂವರೂ ನಾಶಕ್ಕೊಳಗಾಗುವರು.

ಪ್ರಮಾಣ :– ಗೀತಾ ಪ್ರೆಸ್, ಗೋರಖ್‌ಪುರ್ ರವರಿಂದ ಪ್ರಕಾಶಿತಗೊಂಡ ಶ್ರೀ ಶಿವಮಹಾಪುರಾಣ. ಇದರ ಅನುವಾದಕರು ಕೀರ್ತನಾಚಾರ್ಯ ಲಕ್ಷ್ಮಣದಾಸ್ ವೇಲಣಕರ್, ಪುಟ ಸಂಖ್ಯೆ 21ರಿಂದ 26 ವಿದ್ವೇಶ್ವರ ಸಂಹಿತಾ ಮತ್ತು ಪುಟ 90, ಅಧ್ಯಾಯ 9, ರುದ್ರ ಸಂಹಿತಾ" ಈ ಪ್ರಕಾರವಾಗಿ ಬ್ರಹ್ಮಾ-ವಿಷ್ಣು ಮತ್ತು ಶಿವ ಮೂರೂ ದೇವತೆಗಳಲ್ಲಿ ಗುಣಗಳಿವೆ. ಆದರೆ ಶಿವ (ಬ್ರಹ್ಮ-ಕಾಲ) ಗುಣಾತೀತನೆಂದು ಹೇಳಲಾಗಿದೆ.

ಎರಡನೆಯ ಪ್ರಮಾಣ :– ಗೀತಾ ಪ್ರೆಸ್, ಗೋರಖ್‌ಪುರದಿಂದ ಪ್ರಕಾಶಿತಗೊಂಡ ಶ್ರೀಮದ್ ದೇವಿ ಭಾಗವತ ಪುರಾಣ. ಅದರ ಅನುವಾದಕರು ಕೀರ್ತನಾಚಾರ್ಯ ಲಕ್ಷ್ಮಣದಾಸ್ ವೇಲಣಕರ್, ಮೂರನೆ ಸ್ಕಂದ, ಅಧ್ಯಾಯ 5, ಪುಟ–105, ಭಗವಂತನಾದ ವಿಷ್ಣುವು ದುರ್ಗೆಯ ಸ್ತುತಿಯನ್ನು ಮಾಡಿದನು. ಅವನು ಹೀಗೆ ಹೇಳಿದನು, "ನಾನು (ವಿಷ್ಣು), ಬ್ರಹ್ಮಾ ಮತ್ತು ಶಂಕರ ನಿನ್ನ ಕೃಪೆಯಿಂದ ವಿದ್ಯಮಾನದಲ್ಲಿದ್ದೇವೆ. ನಮ್ಮ ಆವಿರ್ಭಾವವೂ (ಜನ್ಮ) ಮತ್ತು ತಿರೋಭಾವವೂ (ಮೃತ್ಯು) ಆಗುವುದು. ನಾವು ನಿತ್ಯ (ಅವಿನಾಶಿ) ಅಂತೂ ಅಲ್ಲ. ನೀನಂತೂ ನಿತ್ಯ ಆಗಿದ್ದೀಯೆ, ಜಗತ್ ಜನನಿಯೂ ಹೌದು, ಪ್ರಕೃತಿ ಮತ್ತು ಸನಾತನೀ ದೇವಿಯೂ ಆಗಿದ್ದೀಯೆ".

ಆಗ ಭಗವಂತ ಶಂಕರನು ಹೇಳಿದನು "ಒಂದು ವೇಳೆ ಭಗವಂತ ಬ್ರಹ್ಮಾ ಮತ್ತು ಭಗವಾನ್ ವಿಷ್ಣು ನಿನ್ನಿಂದಲೇ ಉತ್ಪನ್ನರಾಗಿದ್ದಾರೆ ಎಂದರೆ ಅವರ ನಂತರ ಉತ್ಪನ್ನವಾದ ನಾನು, ತಮೋಗುಣಕ್ಕೆ ಸಂಬಂಧಿಸಿದ ಲೀಲೆಗಳನ್ನು ಮಾಡುವವನು ಶಂಕರ ನಿನ್ನ ಸಂತಾನವಲ್ಲವೇನು? ಅರ್ಥಾತ್ ನನ್ನನ್ನು ಕೂಡಾ ಹುಟ್ಟಿಸಿದವಳು ನೀನೇ ಅಲ್ಲವೇನು? ಈ ಪ್ರಪಂಚದ ಸೃಷ್ಟಿ-ಸ್ಥಿತಿ-ಸಂಹಾರಗಳಲ್ಲಿ ನಿನ್ನ ಗುಣ ಯಾವಾಗಲೂ, ಎಲ್ಲಾ ಕಡೆಯೂ ಇರುತ್ತದೆ. ಇವೇ ಮೂರು ಗುಣಗಳಿಂದ ಉತ್ಪನ್ನವಾದ ನಾವು ಬ್ರಹ್ಮಾ-ವಿಷ್ಣು ಮತ್ತು ಶಂಕರ ನಿಯಮಾನುಸಾರವಾಗಿ ಕಾರ್ಯದಲ್ಲಿ ನಿರತರಾಗಿದ್ದೇವೆ".

ಮೇಲೆ ಹೇಳಿರುವ ಈ ವಿವರಣೆ ಕೇವಲ ಹಿಂದಿಗೆ ಅನುವಾದವಾಗಿರುವ ಶ್ರೀದೇವೀ ಮಹಾಪುರಾಣದಲ್ಲಿರುವುದಾಗಿದೆ. ಇದರಲ್ಲಿ ಕೆಲವು ತಥ್ಯಗಳನ್ನು ಮುಚ್ಚಿಡಲಾಗಿದೆ. ಆದ್ದರಿಂದ ಶ್ರೀಮದ್ ದೇವಿ ಭಾಗವತ ಮಹಾಪುರಾಣ ಸಭಾಷಟೀಕಮ್ ಸಮಾಹಾತ್ಯಮ್, ಖೇಮರಾಜ ಶ್ರೀ ಕೃಷ್ಣದಾಸ ಪ್ರಕಾಶನ ಮುಂಬಯಿ, ಈ ಪ್ರಮಾಣವನ್ನು ನೋಡಿರಿ. ಇದರಲ್ಲಿ ಸಂಸ್ಕೃತಸಹಿತ ಹಿಂದಿ ಭಾಷೆಯಲ್ಲಿ ಅನುವಾದ ಮಾಡಲಾಗಿದೆ. ಮೂರನೇ ಸ್ಕಂದ ಅಧ್ಯಾಯ 4, ಪುಟ 10, ಶ್ಲೋಕ 42.

ಬ್ರಹ್ಮಾ – ಅಹಂ ಈಶ್ವರಃ ಫಿಲ್ ತೆ ಪ್ರಭಾವಾತ್ಸರ್ವೆ<br>
ವಯಂ ಜನಿಯುತಾ ನ ಯದಾ ತೂ ನಿತ್ಯಾಃ<br>
ಕೆ ಅನ್ಯೆ ಸುರಾಃ ಶತಮುಖ ಪ್ರಮುಖಾಃ ಚ<br>
ನಿತ್ಯಾ ನಿತ್ಯಾ ತ್ವಮೇವ ಜನನೀ ಪ್ರಕೃತಿಃ ಪುರಾಣಾ ।(42)

ಅನುವಾದ : ಹೇ ಮಾತಾ। ಬ್ರಹ್ಮಾ, ನಾನು ಮತ್ತು ಶಿವ ನಿನ್ನ ಪ್ರಭಾವದಿದಂಲೇ ಜನ್ಮ ಪಡೆದವರಾಗಿದ್ದೇವೆ. ನಿತ್ಯರಲ್ಲ, ಅರ್ಥಾತ್ ನಾವು ಅವಿನಾಶಿ ಅಲ್ಲ, ಇಂದ್ರಾದಿ ದೇವತೆಗಳು ಹಾಗೂ ಬೇರೆ ದೇವತೆಗಳು ಯಾವ ಪ್ರಕಾರ ನಿತ್ಯರಾಗಲು ಸಾಧ್ಯ. ನೀನೆ ಅವಿನಾಶಿ ಆಗಿರುವೆ. ಪ್ರಕೃತಿ ಮತ್ತು ಸನಾತನಿ ದೇವಿಯಾಗಿರುವೆ.

**ಪುಟ 11–12, ಅಧ್ಯಾಯ 5, ಶ್ಲೋಕ 8 :**

ಯದಿ ದಯಾರ್ದ್ರಮನಾ ನ ಸದ್ಯಾಂಬಿಕೆ ಕಥಮಹಂ ವಿಹಿತಃ ಚ ತಮೋಗುಣಃ
ಕಮಲಜಶ್ಚ ರಜೋಗುಣ ಸಂಭವಃ ಸುವಿಹಿತಃ ಕಿಮು ಸತ್ವಗುಣೋಂ ಹರಿಃ ।(8)

**ಅನುವಾದ :– ಭಗವಾನ್ ಶಂಕರ ಈ ರೀತಿಯಾಗಿ ಹೇಳಿದನು, "ಹೇ, ಮಾತಾ, ಒಂದು ವೇಳೆ ನಮ್ಮ ಮೇಲೆ ನೀವು ದಯೆಯನ್ನು ತೋರಿಸಿದ್ದಲ್ಲಿ, ಮತ್ತೆ ನನ್ನನ್ನು ತಮೋಗುಣ ಹೊಂದಿದವನನ್ನಾಗಿ ಏಕೆ ರಚಿಸಿದಿರಿ. ಕಮಲದಿಂದ ಉತ್ಪನ್ನವಾದ ಬ್ರಹ್ಮಾನಿಗೆ ರಜೋಗುಣವನ್ನು ಏಕೆ ದಯಪಾಲಿಸಿದಿರಿ? ಮತ್ತು ವಿಷ್ಣುವನ್ನು ಸತ್‌ಗುಣನನ್ನಾಗಿ ಏಕೆ ಮಾಡಿದಿರಿ? ಅರ್ಥಾತ್ ಜೀವಿಗಳ ಜನ್ಮ–ಮೃತ್ಯು ರೂಪದ ದುಷ್ಕರ್ಮವನ್ನು ಏಕೆ ಜೋಡಿಸಿಬಿಟ್ಟಿರಿ?**

ಶ್ಲೋಕ 12 :– ರಮಯಸೆ ಸ್ವಪತಿಂ ಪುರುಷಂ ಸದಾ ತವ
ಗತಿಂ ನ ಹಿ ವಿಹ ವಿದ್‌ಮ ಶಿವೆ (12)

ಅನುವಾದ :– ನಿನ್ನ ಪತಿಯಾದ ಪುರುಷ ಅರ್ಥಾತ್ ಕಾಲಭಗವಂತನ ಜೊತೆಯಲ್ಲಿ ಯಾವಾಗಲೂ ನೀನು ಭೋಗ–ವಿಲಾಸದಲ್ಲಿ ಮುಳುಗಿರುವೆ. ನಿನ್ನ ಪರಿಯನ್ನು ಯಾರೂ ತಿಳಿದಿಲ್ಲ.

**ಉಪಸಂಹಾರ :– ಮೇಲೆ ತಿಳಿಸಿದ ಆಧಾರಗಳಿಂದ ಪ್ರಮಾಣೀಕರಿಸಲಾಯಿತು. ಅದೇನೆಂದರೆ ರಜಗುಣ–ಬ್ರಹ್ಮಾ, ಸದ್ಗುಣ ವಿಷ್ಣು ಮತ್ತು ತಮಗುಣ–ಶಿವನಾಗಿದ್ದಾನೆ. ಈ ಮೂವರೂ ನಾಶವಾಗುವಂತಹವರಾಗಿದ್ದಾರೆ. ದುರ್ಗೆಯ ಪತಿ ಬ್ರಹ್ಮ(ಕಾಲ)ನಾಗಿದ್ದಾನೆ. ಇವನು ದುರ್ಗೆಯ ಜೊತೆಯಲ್ಲಿ ಸದಾ ಭೋಗವಿಲಾಸದಲ್ಲಿ ಮುಳುಗಿರುವನು.**

## "ಬ್ರಹ್ಮ (ಕಾಲ)ನು ಅವ್ಯಕ್ತವಾಗಿರುವ ಪ್ರತಿಜ್ಞೆ"

**ಸೂಕ್ಷ್ಮವೇದದಿಂದ ಉಳಿದ ಸೃಷ್ಟಿಯರಚನೆ.......**

**ಮೂರು ಮಕ್ಕಳನ್ನು ಉತ್ಪತ್ತಿ ಮಾಡಿದ ನಂತರ ಬ್ರಹ್ಮನು ತನ್ನ ಹೆಂಡತಿ ದುರ್ಗಾ (ಪ್ರಕೃತಿ)ಳಿಗೆ ಹೀಗೆ ಹೇಳಿದನು, "ನಾನು ಪ್ರತಿಜ್ಞೆ ಮಾಡುವೆನು. ಅದೇನೆಂದರೆ ಭವಿಷ್ಯದಲ್ಲಿ ನಾನು ಯಾರಿಗೂ ನನ್ನ ವಾಸ್ತವಿಕ ರೂಪದ ದರ್ಶನ ನೀಡುವುದಿಲ್ಲ. ಆ ಕಾರಣದಿಂದ ನಾನು ಅವ್ಯಕ್ತನೆಂದೆನಿಸಿಕೊಳ್ಳುವೆನು. ನನ್ನ ರಹಸ್ಯವನ್ನು ಯಾರಿಗೂ ಹೇಳಬೇಡ. ನಾನು ಗುಪ್ತವಾಗಿರುವೆನು". ದುರ್ಗಾ ಮತ್ತೆ ಪ್ರಶ್ನಿಸಿದಳು. "ನೀವು ನಿಮ್ಮ ಪುತ್ರರಿಗೂ ದರ್ಶನ ನೀಡುವುದಿಲ್ಲವೇ?" ಅದಕ್ಕೆ ಉತ್ತರವಾಗಿ ಬ್ರಹ್ಮನು "ನಾನು ನನ್ನ ಮಕ್ಕಳಿಗಾಗಲೀ ಮತ್ತು ಅನ್ಯರಿಗಾಗಲೀ ಯಾವುದೇ ಸಾಧನೆಗಳಿಗಾಗಲೀ ದರ್ಶನವನ್ನು ನೀಡುವುದಿಲ್ಲ. ಇದು ನನ್ನ ಅಚಲವಾದ ನಿಯಮವಾಗಿರುತ್ತದೆ" ಎಂದು ಖಡಾಖಂಡಿತವಾಗಿ ಹೇಳಿದನು. ಆಗ ದುರ್ಗೆಯು,"ಹಾಗಿದ್ದಲ್ಲಿ ನಿಮ್ಮ ಈ ನಿಯಮವು ಉತ್ತಮ ನಿಯಮವಾಗುವುದಿಲ್ಲ. ಯಾರು ನಿಮ್ಮ ಮಕ್ಕಳೋ ಅವರಿಂದಲೂ ಕೂಡಾ ನೀವು ಗುಪ್ತವಾಗಿ ಹಾಗೂ ಮರೆಯಾಗುವುದು ಸರಿಯೇ?" ಎಂದು ಕೇಳಿದಳು. ಆಗ ತಿರುಗುತ್ತರಿಸುತ್ತಾ ಬ್ರಹ್ಮನು ಹೀಗೆ ಹೇಳಿದನು, "ದುರ್ಗಾ, ಇಲ್ಲಿ ನನಗೆ ಅಸಹಾಯಕತೆ ಇದೆ. ನನಗೆ ಒಂದು ಲಕ್ಷ ಮಾನವ ಶರೀರ ಹೊಂದಿರುವ ಪ್ರಾಣಿಗಳನ್ನು ಆಹಾರ ರೂಪದಲ್ಲಿ ಸೇವಿಸುವ ಶಾಪವಿದೆ. ಒಂದು ವೇಳೆ ನನ್ನ ಪುತ್ರರಿಗೆ (ಬ್ರಹ್ಮಾ, ವಿಷ್ಣು, ಮಹೇಶ) ಈ ವಿಷಯ ತಿಳಿದಲ್ಲಿ ಈ ಉತ್ಪತ್ತಿ, ಸ್ಥಿತಿ ಮತ್ತು ಸಂಹಾರದ ಕಾರ್ಯವನ್ನು ಮಾಡಲಾರರು. ಆದ್ದರಿಂದ**

ಈ ನನ್ನ ಅನುತ್ತಮ ನಿಯಮ ಯಾವಾಗಲೂ ಇರುವುದು. ಯಾವಾಗ ಈ ಮೂವರು ಸ್ವಲ್ಪ ದೊಡ್ಡವರಾಗುವರೋ ಆಗ ಅವರನ್ನು ಅಚೇತರನ್ನಾಗಿ ಮಾಡಿಬಿಡು. ನನ್ನ ವಿಷಯವನ್ನು ಅವರಿಗೆ ಹೇಳದಿರು, ಇಲ್ಲವಾದರೆ ನಿನಗೆ ಕೂಡಾ ನಾನು ಶಿಕ್ಷೆ ವಿಧಿಸುವೆನು". ದುರ್ಗಾದೇವಿ ಈ ಹೆದರಿಕೆಯ ಕಾರಣದಿಂದ ವಾಸ್ತವಿಕತೆಯ ಬಗ್ಗೆ ಹೇಳದೇ ಹೋದಳು. ಈ ಕಾರಣದಿಂದ ಗೀತೆಯ ಅಧ್ಯಾಯ 7 ಶ್ಲೋಕ 24ರಲ್ಲಿ ಹೇಳಲಾಗಿದೆ. 'ಈ ಬುದ್ಧಿಹೀನ ಜನ ಸಮುದಾಯವು ನನ್ನ ಅನುತ್ತಮ ನಿಯಮಕ್ಕೆ ಅಪರಿಚಿತರಾಗಿದ್ದಾರೆ. ಏಕೆಂದರೆ ನಾನು ಯಾವ ಸಮಯದಲ್ಲೂ ಯಾರದೇ ಎದುರಿನಲ್ಲಿ ಪ್ರಕಟವಾಗುವುದಿಲ್ಲ. ನನ್ನ ಯೋಗಮಾಯೆಯ ಶಕ್ತಿಯಲ್ಲಿ ಅಡಗಿರುವೆನು. ಇದರಿಂದ ನನ್ನ ಅವ್ಯಕ್ತ ರೂಪವು ಮನುಷ್ಯ ರೂಪದಲ್ಲಿ ಬಂದಿದೆ. ಅರ್ಥಾತ್ ಕೃಷ್ಣ ಎಂದು ಜನ ನಂಬುತ್ತಾರೆ.

(ಅಬುದ್ಧಯಃ) ಬುದ್ಧಿಹೀನ (ಮಮ) ನನ್ನ (ಅನುತ್ತಮಮ್) ಅನುತ್ತಮ ಅಂದರೆ ಘಟಿಯಾ (ಕೆಟ್ಟದಾದ) (ಅವ್ಯಯಮ್) ಅವಿನಾಶಿ (ಪರಮ್ ಭಾವಮ್) ವಿಶೇಷ ಭಾವನೆಯನ್ನು (ಅಜಾನಂತಃ) ತಿಳಿಯದೆ (ಮಾಮ್ ಅವ್ಯಕ್ತಮ್) ನನ್ನ ಅವ್ಯಕ್ತತೆಗೆ (ವ್ಯಕ್ತಿಮ್) ಮನುಷ್ಯ ರೂಪದಲ್ಲಿ (ಆಪನ್ನಮ್) ಬಂದನು. (ಮನ್ಯಂತೆ)ಎಂದು ತಿಳಿದಿದ್ದಾರೆ. ಅರ್ಥಾತ್ ನಾನು ಕೃಷ್ಣನಲ್ಲ (ಗೀತೆಯ ಅಧ್ಯಾಯ 7, ಶ್ಲೋಕ 24)

ಗೀತೆಯ ಅಧ್ಯಾಯ 11 ಶ್ಲೋಕ 47 ಮತ್ತು 48 ರಲ್ಲಿ ಹೀಗೆ ಹೇಳಲಾಗಿದೆ. 'ಇದು ನನ್ನ ವಾಸ್ತವಿಕ ಕಾಲನ ರೂಪವಾಗಿದೆ. ಇದರ ದರ್ಶನ ಅರ್ಥಾತ್ ಬ್ರಹ್ಮನ ಪ್ರಾಪ್ತಿ ವೇದಗಳಲ್ಲಿ ವರ್ಣಿತ ವಿಧಿಗಳ ಮೂಲಕವಾಗಲೀ, ಜಪದ ಮೂಲಕವಾಗಲೀ, ತಪಸ್ಸಿನ ಮೂಲಕವಾಗಲೀ ಮತ್ತು ಯಾವುದೇ ಕ್ರಿಯೆಗಳ ಮೂಲಕವಾಗಲೀ ಸಾಧ್ಯವಿಲ್ಲ'.

ಯಾವಾಗ ಮೂರೂ ಮಕ್ಕಳು ಯುವಾವಸ್ಥೆಗೆ ಬಂದರೋ ಆಗ ಮಾತಾ ಭವಾನಿ(ಪ್ರಕೃತಿ, ಅಷ್ಟಾಂಗಿ)ಯು ಮಕ್ಕಳಿಗೆ ಹೀಗೆ ಹೇಳಿದಳು, "ನೀವು ಸಾಗರ ಮಂಥನವನ್ನು ಮಾಡಿ. ಮೊದಲ ಬಾರಿಗೆ ಸಾಗರ ಮಂಥನ ಮಾಡಿದಾಗ (ಜ್ಯೋತಿ ನಿರಂಜನನು ತನ್ನ ಶ್ವಾಸಗಳ ಮೂಲಕ 4 ವೇದಗಳನ್ನು ಉತ್ಪಾದಿಸಿದನು. ಅವುಗಳಿಗೆ ಗುಪ್ತವಾಣಿಯಿಂದ ಸಾಗರದಲ್ಲಿ ವಾಸವಾಗಿರಿ ಎಂದು ಆಜ್ಞೆನೀಡಿದನು) 4 ವೇದಗಳು ಬಂದವು. ಅವುಗಳನ್ನು ಬ್ರಹ್ಮಾನು ತೆಗೆದುಕೊಂಡನು. ಅವುಗಳನ್ನು ತೆಗೆದುಕೊಂಡು ಮೂರೂ ಮಕ್ಕಳು ಮಾತೆಯ ಬಳಿಗೆ ಬಂದಾಗ, ಮಾತೆಯು ನಾಲ್ಕು ವೇದಗಳನ್ನು ಬ್ರಹ್ಮಾನು ಪಡೆಯಲಿ ಹಾಗೂ ಓದಲಿ ಎಂದು ಹೇಳಿದಳು.

ಸೂಚನೆ :– ವಾಸ್ತವದಲ್ಲಿ ಪೂರ್ಣಬ್ರಹ್ಮನು ಬ್ರಹ್ಮ ಅರ್ಥಾತ್ ಕಾಲನಿಗೆ ಐದು ವೇದಗಳನ್ನು ಪ್ರದಾನ ಮಾಡಿದ್ದನು. ಆದರೆ ಬ್ರಹ್ಮನು ಕೇವಲ 4 ವೇದಗಳನ್ನು ಮಾತ್ರ ಪ್ರಕಟಗೊಳಿಸಿದನು. 5ನೇ ವೇದವನ್ನು ಅಡಗಿಸಿದನು. ಅದನ್ನು ಪೂರ್ಣ ಪರಮಾತ್ಮನು ಸ್ವಯಂ ಪ್ರತ್ಯಕ್ಷವಾಗಿ ಕವಿರ್ಗಿರ್ಭಿಃ ಅರ್ಥಾತ್ ಕವಿರ್ವಾಣಿ (ಕಬೀರವಾಣಿ) ಮೂಲಕ ಲೋಕೋಕ್ತಿ ಮತ್ತು ದ್ವಿಪಂಕ್ತಿಗಳ ಮಾಧ್ಯಮದಲ್ಲಿ ಪ್ರಕಟಗೊಳಿಸಿದನು. ಎರಡನೇ ಬಾರಿ ಸಮುದ್ರ ಮಂಥನ ಮಾಡಿದಾಗ ಮೂವರು ಕನ್ಯೆಯರು ದೊರಕಿದರು. ಮಾತೆಯು ಮೂವರನ್ನು ಮೂವರಿಗೆ ನೀಡಿದಳು. ಪ್ರಕೃತಿಯು (ದುರ್ಗಾ) ತನ್ನದೇ ಆದ ಬೇರೆ ಮೂರು ರೂಪ (ಸಾವಿತ್ರಿ, ಲಕ್ಷ್ಮೀ ಮತ್ತು ಪಾರ್ವತಿ) ಧಾರಣೆ ಮಾಡಿದಳು ಮತ್ತು ಅವರನ್ನು ಸಮುದ್ರದಲ್ಲಿ ಅಡಗಿಸಿಟ್ಟಿದ್ದಳು. ಸಾಗರ ಮಂಥನದಲ್ಲಿ ಅವರುಗಳು ಹೊರಗೆ ಬಂದರು. ಅದೇ ಪ್ರಕೃತಿ ಮೂರು ರೂಪ ಧರಿಸಿ ಮತ್ತು ಭಗವಾನ್ ಬ್ರಹ್ಮಾನಿಗೆ ಸಾವಿತ್ರಿ, ಭಗವಾನ್ ವಿಷ್ಣುವಿಗೆ ಲಕ್ಷ್ಮೀ, ಭಗವಾನ್ ಶಂಕರನಿಗೆ ಪಾರ್ವತಿಯನ್ನು ಪತ್ನಿ ರೂಪದಲ್ಲಿ ನೀಡಿದಳು. ಮೂರು ಜನ ಭೋಗ ವಿಲಾಸಗಳಲ್ಲಿ ಮುಳುಗಿದರು. ಅದರ ಪರಿಣಾಮವಾಗಿ ಸುರರು ಮತ್ತು ಅಸುರರು ಜನ್ಮ ತಾಳಿದರು.

(ಯಾವಾಗ ಮೂರನೇ ಬಾರಿ ಸಾಗರ ಮಂಥನ ಮಾಡಿದರೋ ಆಗ 14 ರತ್ನಗಳು ಬ್ರಹ್ಮಾನಿಗೂ

ಮತ್ತು ಅಮೃತ ವಿಷ್ಣುವಿಗೂ ಹಾಗೂ ದೇವತೆಗಳಿಗೂ, ಮದಿರೆಯು ಅಸುರರಿಗೂ ದೊರಕಿತು. ವಿಷವನ್ನು ಪರಮಾರ್ಥ ಶಿವನು ಅವನ ಕಂಠದಲ್ಲಿ ಧರಿಸಿದನು. ಇದು ಬಹಳ ನಂತರದ ವಿಷಯವಾಗಿದೆ) ಬ್ರಹ್ಮಾ ವೇದವನ್ನು ಓದಲು ತೊಡಗಿದಾಗ, ಎಲ್ಲಾ ಬ್ರಹ್ಮಾಂಡವನ್ನು ರಚನೆ ಮಾಡುವ ಕುಲದ ಮಾಲೀಕ ಪುರುಷ (ಪ್ರಭು) ಬೇರೊಬ್ಬನಿದ್ದಾನೆ ಎಂಬುದು ಅವನಿಗೆ ತಿಳಿಯಿತು. ಆಗ ಬ್ರಹ್ಮಾ ವಿಷ್ಣು ಮತ್ತು ಶಂಕರನಿಗೆ ಹೀಗೆ ಹೇಳಿದನು. ಏನೆಂದರೆ, "ವೇದಗಳಲ್ಲಿ ಈ ರೀತಿ ವರ್ಣನೆ ಇದೆ. ಸೃಜನವಾದ (ಸೃಷ್ಟಿ ಮಾಡುವವ) ಬೇರೊಬ್ಬ ಪ್ರಭುವಾಗಿದ್ದಾನೆ. ಅದೇನೆಂದರೆ ನಾವು ಕೂಡಾ ಅದನ್ನು ತಿಳಿದಿಲ್ಲವೆಂದು ವೇದಗಳು ಹೇಳುತ್ತವೆ. ಇದರ ಬಗ್ಗೆ ಯಾವುದಾದರೂ ತತ್ವದರ್ಶಿ ಸಂತನ ಬಳಿ ಕೇಳಿರಿ". ಆಗ ಬ್ರಹ್ಮಾನು ತಾಯಿಯ ಬಳಿ ಬಂದು ಎಲ್ಲಾ ವೃತ್ತಾಂತವನ್ನು ತಿಳಿಸಿದನು. ಮಾತೆಯು 'ನನ್ನನ್ನು ಬಿಟ್ಟು ಬೇರೆ ಯಾರೂ ಇಲ್ಲ' ಎಂಬುದಾಗಿ ಉತ್ತರಿಸಿದಳು. 'ನಾನೇ ಕರ್ತಳು ನಾನೇ ಎಲ್ಲದಕ್ಕಿಂತಲೂ ಶಕ್ತಿಮಾನಳು' ಎಂಬುದಾಗಿಯೂ ಹೇಳಿದಳು. ಆದರೆ ಬ್ರಹ್ಮಾನು, "ವೇದವು ಈಶ್ವರನಿಂದ ಉತ್ಪತ್ತಿಯಾಗಿರುವುದರಿಂದ ಸುಳ್ಳಾಗಲು ಸಾಧ್ಯವಿಲ್ಲ" ಎಂದನು. ದುರ್ಗೆಯು, "ಆಗ ನಿನ್ನ ತಂದೆ ನಿನಗೆ ದರ್ಶನ ನೀಡುವುದಿಲ್ಲ. ಆತ ಪ್ರತಿಜ್ಞೆ ಮಾಡಿಬಿಟ್ಟಿದ್ದಾನೆ" ಎಂದಳು. ಈ ಮಾತಿನಿಂದ ಬ್ರಹ್ಮಾನು ತಾಯಿಗೆ "ಅಮ್ಮಾ ನಿಮ್ಮ ಮಾತಿನ ಮೇಲೆ ನನಗೆನಂಬಿಕೆಬರುತ್ತಿಲ್ಲ. ನಾನು ಆ ಪುರುಷ(ಪ್ರಭು)ನ ಪರಿಚಯವನ್ನು, ಸ್ಥಳವನ್ನೂ ತಿಳಿದೇ ತಿಳಿಯುವೆನು" ಎಂದುತ್ತರಿಸಿದನು. ಅದನ್ನು ಕೇಳಿದ ದುರ್ಗೆಯು "ಒಂದು ವೇಳೆ ಆತ ನಿನಗೆ ದರ್ಶನ ನೀಡದಿದ್ದರೆ ಏನು ಮಾಡುವೆ?" ಎಂದು ಪ್ರಶ್ನಿಸಿದಳು. ಬ್ರಹ್ಮಾನು ಉತ್ತರವಾಗಿ "ಒಂದು ವೇಳೆ ನಾನು ಪ್ರಭುವಿನ ದರ್ಶನ ಪಡೆಯದಿದ್ದರೆ ನನ್ನ ಮುಖವನ್ನು ನಿಮಗೆ ತೋರಿಸುವುದಿಲ್ಲ" ಎಂದನು. ಇನ್ನೊಂದು ಕಡೆಯಲ್ಲಿ ಜ್ಯೋತಿ ನಿರಂಜನನು 'ನಾನು ಯಾರಿಗೂ ದರ್ಶನ ನೀಡುವುದಿಲ್ಲ. ಅವ್ಯಕ್ತನಾಗೇ ಇರುವೆನು' ಎಂಬ ಶಪಥವನ್ನು ಮಾಡಿದ್ದನು. ಅರ್ಥಾತ್ 21 ಬ್ರಹ್ಮಾಂಡದಲ್ಲಿ ಯಾವುದೇ ಸಮಯದಲ್ಲಿ ವಾಸ್ತವಿಕ ಕಾಲನ ರೂಪದಲ್ಲಿ ಬರುವುದಿಲ್ಲ.

**ಗೀತೆಯ 7ನೇ ಅಧ್ಯಾಯದ 24ನೇ ಶ್ಲೋಕ.**

ಅವ್ಯಕ್ತಮ್, ವ್ಯಕ್ತಿಮ್, ಅಪನ್ನಮ್, ಮನ್ಯಂತೆ, ಮಾಮ್, ಅಬುದ್ಧಯಃ।
ಪರಮ್, ಭಾವಮ್, ಅಜಾನಂತಃ, ಮಮ, ಅವ್ಯಯಮ್, ಅನುತ್ತಮಮ್॥24॥

ಅನುವಾದ :– (ಅಬುದ್ಧಯಃ) ಬುದ್ಧಿಹೀನ ಮನುಷ್ಯರು (ಮಮ್) ನನ್ನ (ಅನುತ್ತಮಮ್) ಶ್ರೇಷ್ಠನಲ್ಲದ (ಅವ್ಯಯಮ್) ಅಟಲ (ಪರಮ್) ಪರಮ (ಭಾವಮ್) ಭಾವನೆಯನ್ನು (ಅಜಾನಂತಃ) ತಿಳಿಯದೆ ಇದ್ದು (ಅವ್ಯಕ್ತಮ್) ಅದೃಶ್ಯವಾದ (ಮಾಮ್) ನನ್ನ ಕಾಲನಿಗೆ (ವ್ಯಕ್ತಿಮ್) ನರರೂಪದಲ್ಲಿ ಕೃಷ್ಣನು (ಆಪನ್ನಮ್) ಪ್ರಾಪ್ತವಾಗಿರುವಂತೆ (ಮನ್ಯಂತೆ) ನಂಬಿದ್ದಾರೆ.

**ಗೀತೆಯ 7ನೇ ಅಧ್ಯಾಯದ 25ನೇ ಶ್ಲೋಕ.**

ನ, ಅಹಮ್, ಪ್ರಕಾಶಃ, ಸರ್ವಸ್ಯ, ಯೋಗಮಾಯಾಸಮಾವೃತಃ ।
ಮೂಢಃ, ಅಯಮ್, ನ, ಅಭಿಜಾನಾತಿ, ಲೋಕಃ,
ಮಾಮ್, ಅಜಮ್ ಅವ್ಯಯಮ್ ॥ 25 ॥

ಅನುವಾದ :– (ಅಹಮ್) ನಾನು (ಯೋಗಮಾಯಾ ಸಮಾವೃತಃ) ಯೋಗ ಮಾಯೆಯಿಂದ ಅಡಗಿಕೊಂಡಿರುವೆನು (ಸರ್ವಸ್ಯ) ಎಲ್ಲರಿಗೂ (ಪ್ರಕಾಶಃ) ಪ್ರತ್ಯಕ್ಷ (ನ) ಆಗುವುದಿಲ್ಲ ಅರ್ಥಾತ್ ಅದೃಶ್ಯನಾಗಿರುವೆನು ಅರ್ಥಾತ್ ಅವ್ಯಕ್ತನಾಗಿರವೆನು. ಆದ್ದರಿಂದಲೇ (ಅಜಮ್) ಜನ್ಮ ಪಡೆಯದೇ ಇರುವ (ಅವ್ಯಯಮ್) ಅವಿನಾಶಿಯ ಅಟಲ (ಅಚಲ) ಭಾವನೆಗಳನ್ನು (ಅಯಮ್) ಈ (ಮೂಢಃ) ಅಜ್ಞಾನಿ (ಲೋಕಃ) ಜನ ಸಮುದಾಯಪ್ರಪಂಚವು (ಮಾಮ್) ನನ್ನನ್ನು (ನ)

ತಿಳಿದಿರುವುದಿಲ್ಲ. (ಅಭಿಜಾನಾತಿ) ಅರ್ಥಾತ್ ನನ್ನನ್ನು ಕೃಷ್ಣ ಎಂದು ತಿಳಿದಿರುವರು। ಏಕೆಂದರೆ ಬ್ರಹ್ಮ ತನ್ನ ಶಬ್ದಶಕ್ತಿಯಿಂದ ತನ್ನದೇ ನಾನಾ ರೂಪಗಳನ್ನು ರಚಿಸಿರುವನು. ಇದು ದುರ್ಗೆಯ ಸಂತತಿಯಾಗಿದೆ. ಇದರಿಂದ ಈ ಮಂತ್ರದಲ್ಲಿ ನಾನು ಶ್ರೀ ಕೃಷ್ಣರಾದಿಯ ತರಹ ದುರ್ಗೆಯಿಂದ ಹುಟ್ಟಿದವನಲ್ಲ ಎಂದು ಹೇಳಲಾಗಿದೆ.

## "ಬ್ರಹ್ಮಾನು ತನ್ನ ತಂದೆ (ಕಾಲ/ ಬ್ರಹ್ಮ)ಯನ್ನು ಪಡೆಯುವ ಪ್ರಯತ್ನ"

ಆಗ ದುರ್ಗೆಯು ಬ್ರಹ್ಮಾನಿಗೆ ಹೇಳಿದಳು. "ಅಲಖ್ ನಿರಂಜನ ನಿನ್ನ ತಂದೆ, ಆದರೆ ಆತ ನಿನಗೆ ದರ್ಶನವನ್ನು ನೀಡುವುದಿಲ್ಲ". ಬ್ರಹ್ಮಾನು ಉತ್ತರಿಸುತ್ತಾ "ನಾನು ದರ್ಶನ ಪಡೆದೆ ಹಿಂತಿರುಗಿ ಬರುವೆನು" ಈ ರೀತಿಯಾಗಿ ಹೇಳಿದನು. ಮಾತೆ ಮತ್ತೆ ಪ್ರಶ್ನಿಸಿದಳು. "ಒಂದು ವೇಳೆ ಆತ ದರ್ಶನ ನೀಡದಿದ್ದರೆ ಏನು ಮಾಡುವೆ?" ಆಗ ಬ್ರಹ್ಮಾನು "ನಾನು ಪ್ರತಿಜ್ಞೆ ಮಾಡುವೆನು. ಒಂದು ವೇಳೆ ತಂದೆಯು ನನಗೆ ದರ್ಶನ ನೀಡದಿದ್ದಲ್ಲಿ ನಾನು ನಿಮ್ಮ ಮುಂದೆ ಬರುವುದೇ ಇಲ್ಲ". ಈ ರೀತಿ ಹೇಳಿ ಬ್ರಹ್ಮಾ ಅಲ್ಲಿಂದ ಚಿಂತಿತನಾಗಿ ಉತ್ತರ ದಿಕ್ಕಿನ ಕಡೆಗೆ ನಡೆದುಬಿಟ್ಟನು. ಆ ದಿಕ್ಕಿನಲ್ಲಿ ಬರೇ ಕತ್ತಲು ತುಂಬಿತ್ತು. ಅಲ್ಲಿ ಬ್ರಹ್ಮಾ 4 ಯುಗಗಳ ಕಾಲದವರೆಗೆ ಧ್ಯಾನದಲ್ಲಿದ್ದರೂ ಏನೂ ಪ್ರಾಪ್ತಿಯಾಗಲಿಲ್ಲ. ಕಾಲನು ಆಕಾಶವಾಣಿಯ ರೂಪದಲ್ಲಿ ದುರ್ಗೆಯನ್ನು ಕೇಳಿದನು. "ದುರ್ಗಾ, ಸೃಷ್ಟಿಯ ರಚನೆ ಏಕೆ ಆಗುತ್ತಿಲ್ಲ? ಆಗ ಭವಾನಿಯು ಹೀಗೆ ಉತ್ತರಿಸಿದಳು. "ನಿಮ್ಮ ಜ್ಯೇಷ್ಠ ಪುತ್ರ ಬ್ರಹ್ಮಾ ಹಠ ಹಿಡಿದು ನಿಮ್ಮ ಹುಡುಕಾಟಕ್ಕೆ ನಿಂತು ಬಿಟ್ಟಿದ್ದಾನೆ. ಅವನಿಲ್ಲದೆ ಜೀವಿಗಳ ಉತ್ಪತ್ತಿ ಅಸಂಭವವಾಗಿದೆ. ಆಗ ಬ್ರಹ್ಮ(ಕಾಲ)ನು "ಆತನನ್ನು ತಿರುಗಿ ಬರುವಂತೆ ಹೇಳು ಎಂದನು. ನಾನು ಅವನಿಗೆ ದರ್ಶನ ನೀಡುವುದಿಲ್ಲ". ಆಗ ದುರ್ಗಾ (ಪ್ರಕೃತಿ)ಳು ತನ್ನ ವಚನ ಶಕ್ತಿಯಿಂದ ಗಾಯತ್ರಿ ಎಂಬ ಒಬ್ಬ ಹುಡುಗಿಯನ್ನು ಉತ್ಪತ್ತಿ ಮಾಡಿ ಆಕೆಗೆ ಬ್ರಹ್ಮಾನನ್ನು ತಿರುಗಿ ಕರೆತರುವಂತೆ ಹೇಳಿದಳು. ಗಾಯತ್ರಿ ಬ್ರಹ್ಮಾನ ಬಳಿಗೆ ಹೋದಳು. ಆದರೆ ಬ್ರಹ್ಮಾ ಸಮಾಧಿಯಲ್ಲಿ ಮುಳುಗಿದ್ದು ಆತನಿಗೆ ತನ್ನ ಬಳಿಗೆ ಯಾರೋ ಬಂದಿದ್ದಾರೆಂಬ ಆಭಾಸ ಕೂಡಾ ಆಗಲಿಲ್ಲ. ಆಗ ಆದಿಕುಮಾರಿ (ಪ್ರಕೃತಿ) ಯು ಗಾಯತ್ರಿಗೆ ತನ್ನ ಧ್ಯಾನದ ಮೂಲಕ ಆತನ ಪಾದವನ್ನು ಸ್ಪರ್ಶ ಮಾಡು ಎಂದು ಹೇಳಿಕೊಟ್ಟಳು. ಗಾಯತ್ರಿ ಅದರಂತೆ ಮಾಡಿದಳು. ಬ್ರಹ್ಮಾನ ಧ್ಯಾನ ಭಂಗವಾಯಿತು, ಆ ಕಾರಣದಿಂದ ಕ್ರೋಧದಿಂದ "ಯಾವ ಪಾಪಿ ನನ್ನ ಸಮಾಧಿಯನ್ನು ಭಂಗ ಮಾಡಿದವರು. ಅವರಿಗೆ ನಾನು ಶಾಪ ನೀಡುವೆನು" ಎಂದನು. ಗಾಯತ್ರಿ ಹೇಳಲು ಕ್ರಮಿಸಿದಳು. "ನನ್ನ ದೋಷವೇನಿಲ್ಲ. ಮೊದಲು ನಾನು ಹೇಳುವ ಮಾತನ್ನು ಕೇಳು ನಂತರ ಶಾಪ ನೀಡು" ನಿನ್ನನ್ನು ಮಾತೆಯು ತಿರುಗಿ ಕರೆತರಲು ಕಳುಹಿಸಿರುವಳು. ಯಾಕೆಂದರೆ ನಿನ್ನ ವಿನಃ ಸೃಷ್ಟಿಯ ಕಾರ್ಯ ಆಗುವುದಿಲ್ಲ". ಬ್ರಹ್ಮಾನು ಆಕೆಗೆ ಉತ್ತರವಾಗಿ "ನಾನು ಏಕೆ ಹೋಗಲಿ? ಪಿತೃವಿನ ದರ್ಶನ ಆಗದೇ ಇದ್ದಲ್ಲಿ ನಾನು ಹೇಗೆ ಹೋಗಲಿ, ನನ್ನ ಅಪಹಾಸ್ಯವಾಗುವುದು?" ಎಂದನು. "ಒಂದು ವೇಳೆ ನೀವು ಮಾತೆಯ ಸಮಕ್ಷಮದಲ್ಲಿ ಬ್ರಹ್ಮಾನಿಗೆ ತಂದೆಯವರ (ಜ್ಯೋತಿ ನಿರಂಜನ) ದರ್ಶನ ಆಗಿದೆ, ಅದೂ ನನ್ನ ಕಣ್ಣೆದುರಲ್ಲೇ ಎಂದು ಹೇಳುವಿರಾದರೆ. ನಾನು ನಿಮ್ಮ ಜೊತೆಯಲ್ಲಿ ಬರುವೆನು" ಎಂದು ನುಡಿದನು. ಆಗ ಗಾಯಿತ್ರಿಯು "ನೀವು ನನ್ನ ಜೊತೆಯಲ್ಲಿ ಸಂಭೋಗ ಮಾಡುವಿರಾದರೆ ನಾನು ಸುಳ್ಳು ಸಾಕ್ಷಿ ಹೇಳುವೆನು" ಎಂದಳು. ಆಗ ಬ್ರಹ್ಮಾನು ತಂದೆಯವರ ದರ್ಶನವಂತೂ ಆಗಲಿಲ್ಲ. ಹಾಗೆಯೇ ಹೋದರೆ ತಾಯಿಯ ಮುಂದೆ ನಾಚಿಕೆಯಿಂದ ತಲೆ ತಗ್ಗಿಸಬೇಕಾಗುವುದು ಮತ್ತು ಬೇರೆ ಯಾವ ಉಪಾಯವು ತೋರದೆ, ಗಾಯತ್ರಿಯ ಜೊತೆಯಲ್ಲಿ ರತಿಕ್ರೀಡೆಯಲ್ಲಿ ತೊಡಗಿದನು. ನಂತರ ಗಾಯತ್ರಿ ಈ ರೀತಿಯಾಗಿ ಹೇಳಿದಳು. "ನಾವು ಏಕೆ ಇನ್ನೊಬ್ಬ ಸಾಕ್ಷಿಯನ್ನು ಹುಟ್ಟಿಸಬಾರದು?". ಬ್ರಹ್ಮಾ ಆ ಮಾತಿಗೆ "ಉಪಾಯ ಬಹಳ ಚೆನ್ನಾಗಿದೆ" ಎಂದನು. ಆಗ ಗಾಯಿತ್ರಿಯು ಶಬ್ದಶಕ್ತಿಯಿಂದ ಒಬ್ಬ ಹುಡುಗಿಯನ್ನು (ಪುಹಪವತಿ ಹೆಸರಿನ) ಹುಟ್ಟಿಸಿದಳು ಮತ್ತು ಅವಳೊಡನೆ ಇಬ್ಬರೂ ಈ ರೀತಿ

ತಾಕೀತು ಮಾಡಿದರು. ಏನೆಂದರೆ "ನೀವು ಸಾಕ್ಷಿಯಾಗಿ ಬ್ರಹ್ಮಾನು ಪಿತನ ದರ್ಶನವನ್ನು ಮಾಡಿದ್ದಾನೆಂದು ಹೇಳಬೇಕು". ಆ ಸಮಯದಲ್ಲಿ ಪುಹಪವತಿಯು "ನಾನೇಕೆ ಸುಳ್ಳು ಸಾಕ್ಷಿ ಹೇಳಬೇಕು? ಹ್ಞಾಂ ಬ್ರಹ್ಮಾ ನನ್ನ ಜೊತೆಯಲ್ಲಿ ರತಿಕ್ರಿಯೆಯನ್ನು ನಡೆಸಿದರೆ ನಾನು ಸಾಕ್ಷಿ ಹೇಳಬಲ್ಲೆನು" ಎಂದಳು. ಗಾಯತ್ರಿಯು ಬ್ರಹ್ಮಾನಿಗೆ ಪ್ರೋತ್ಸಾಹವನ್ನು ನೀಡಿ, ಬೇರೆ ಉಪಾಯವೇ ಇಲ್ಲವೆಂದಾಗ, ಬ್ರಹ್ಮಾನು ಅವಳೊಡನೆಯೂ ರತಿಕ್ರೀಡೆಯನ್ನಾಡಿದನು. ನಂತರ ಮೂರೂ ಜನ ಒಟ್ಟಿಗೆ ಆದಿ ಮಾಯೆಯ ಬಳಿ ಬಂದರು (ಪ್ರಕೃತಿ). ಇಬ್ಬರೂ ದೇವಿಯರು ಮೇಲಿನ ಷರತ್ತನ್ನು ಈ ಕಾರಣದಿಂದ ಬ್ರಹ್ಮಾನ ಮುಂದೆ ಇಟ್ಟಿದ್ದರು. ಅದೇಕೆಂದರೆ ಒಂದು ವೇಳೆ ಬ್ರಹ್ಮಾ ಮಾತೆಯ ಎದುರಿಗೆ ತಮ್ಮ ಸುಳ್ಳು ಸಾಕ್ಷಿಯ ಬಗ್ಗೆ ಹೇಳಿದರೆ ಮಾತೆ ತಮಗೆ ಶಾಪವನ್ನು ನೀಡುವಳು. ಆದ್ದರಿಂದ ಬ್ರಹ್ಮಾನನ್ನು ದೋಷಿಯನ್ನಾಗಿ ಮಾಡಿದರೆ, ಅವನು ಶಾಪದ ಭಯಕ್ಕೆ ತನ್ನ ತಪ್ಪನ್ನು ಮುಚ್ಚುವನು. ಜೊತೆಯಲ್ಲಿ ನಮ್ಮನ್ನೂ ರಕ್ಷಿಸುವನು ಎಂಬುದಾಗಿತ್ತು.

(ಇಲ್ಲಿ ಮಹಾರಾಜ ಗರೀಬ್‌ದಾಸರು ಹೇಳಿದ್ದಾರೆ–'ದಾಸ ಗರೀಬ ಯಹ್ ಚೂಕ ಧುರೋಂ ಧುರ್')

## ''ಮಾತೆ(ದುರ್ಗಾ)ಯಿಂದ ಬ್ರಹ್ಮಾನಿಗೆ ಶಾಪ ನೀಡುವಿಕೆ''

ಯಾವಾಗ ಮಾತೆಯು ಬ್ರಹ್ಮಾನೊಡನೆ "ನಿನ್ನ ತಂದೆಯ ದರ್ಶನವಾಯಿತೇ" ಎಂದು ಕೇಳಿದಳೋ? ಬ್ರಹ್ಮಾನು ಹ್ಞಾಂ, ನನಗೆ ದರ್ಶನವಾಯಿತು ಎಂದನು. ತಾಯಿಯು ಸಾಕ್ಷಿಯನ್ನು ಹೇಳು ಎಂದಳು. ಆಗ ಬ್ರಹ್ಮಾನು ಈ ಇಬ್ಬರ ಎದುರಿನಲ್ಲಿಯೇ ನನಗೆ ಸಾಕ್ಷಾತ್ಕಾರವಾಯಿತು ಎಂದನು. ಇಬ್ಬರೂ ಕೂಡಾ ಹೌದು ನಮ್ಮ ಕಣ್ಣ ಮುಂದೆಯೇ ಬ್ರಹ್ಮದೇವನ ದರ್ಶನವಾಯಿತು ಎಂದರು. ಮತ್ತೆ ಭವಾನಿಗೆ (ಪ್ರಕೃತಿ) ಸಂಶಯವಾಯಿತು. ನನಗೇನೋ ಬ್ರಹ್ಮನು ನಾನು ಯಾರಿಗೂ ದರ್ಶನ ನೀಡುವುದಿಲ್ಲವೆಂದು ಹೇಳಿದ್ದನು. ಆದರೆ ಇವರುಗಳು ದರ್ಶನವಾಗಿದೆ ಎನ್ನುವರಲ್ಲಾ? ಆಗ ಅಷ್ಟಾಂಗಿಯು ಧ್ಯಾನದಲ್ಲಿ ಮುಳುಗಿದಳು ಮತ್ತು ಕಾಲ/ಜ್ಯೋತಿ ನಿರಂಜನನೊಡನೆ ಕೇಳಿದಳು. ಏನು ಈ ಕಥೆ? ಎಂದು ಚಿಂತಿಸಿದಳು. ಆಗ ಜ್ಯೋತಿ ನಿರಂಜನನು ಹೇಳಿದನು, "ಈ ಮೂರು ಜನ ಸುಳ್ಳು ಹೇಳುತ್ತಿದ್ದಾರೆ". ಮಾತಾ ಮತ್ತೆ ಹೇಳಿದಳು, "ನೀನೇ ಯಾಕೆ ಸುಳ್ಳು ಹೇಳುತ್ತಿರಬಾರದು". ಆಕಾಶವಾಣಿ ಆಗ ನುಡಿಯಿತು. ಇವರ್ಯಾರಿಗೂ ದರ್ಶನವಾಗಿಲ್ಲ. ಈ ಮಾತನ್ನು ಕೇಳಿ ಬ್ರಹ್ಮಾ ಹೇಳಿದನು, "ಅಮ್ಮ ನಾನು ಶಪಥವನ್ನು ಮಾಡಿ ತಂದೆಯವರನ್ನು ಹುಡುಕಲು ಹೊರಟಿದ್ದೆನು. ಆದರೆ ತಂದೆಯ (ಬ್ರಹ್ಮ) ದರ್ಶನ ಆಗಲಿಲ್ಲ. ತಮ್ಮ ಬಳಿಗೆ ಬರಲು ನನಗೆ ಸಂಕೋಚವಾಗುತ್ತಿತ್ತು. ಆ ಕಾರಣದಿಂದ ನಾವು ನಿಮ್ಮ ಬಳಿ ಸುಳ್ಳನ್ನು ಹೇಳಿದೆವು". ಆಗ ಮಾತಾ (ದುರ್ಗಾ) ನಿನಗೆ ನಾನು ಶಾಪವನ್ನು ನೀಡುವೆನು ಎಂದು ಹೇಳಿದಳು.

ಬ್ರಹ್ಮಾನಿಗೆ ಶಾಪ :– ನಿನ್ನ ಪೂಜೆ ಜಗತ್ತಿನಲ್ಲಿ ಎಲ್ಲೂ ಆಗುವುದಿಲ್ಲ. ಮುಂದೆ ನಿನ್ನ ವಂಶಜರು ಯಾರು ಉತ್ಪನ್ನರಾಗುವರೋ ಅವರು ತುಂಬಾ ಪಾಖಂಡಿಗಳಾಗುವರು. ಸುಳ್ಳು ವಿಷಯವನ್ನು ಸೃಷ್ಟಿಸಿ ಪ್ರಪಂಚವನ್ನು ದೋಚುವರು. ಮೇಲೆ ಒಳ್ಳೆಯ ಕಾರ್ಯಗಳನ್ನೂ ನಡೆಸುವವರಂತೆ ಕಂಡರೂ ಒಳಗಿಂದ ವಿಕಾರಕ್ಕೆ ಒಳಗಾಗುವರು. ಕಥೆ ಪುರಾಣಗಳನ್ನು ಓದಿ ಜನರಿಗೆ ಕೇಳಿಸುವರು, ಸ್ವತಃ ಸದ್ ಗ್ರಂಥಗಳಲ್ಲಿರುವ ವಾಸ್ತವಿಕತೆ ಏನು, ಎಂಬ ಜ್ಞಾನವನ್ನು ಪಡೆಯುವುದಿಲ್ಲ ಆದರೂ ಕೂಡಾ ಮರ್ಯಾದೆಗೋಸ್ಕರ ಮತ್ತು ಧನಪ್ರಾಪ್ತಿಗೋಸ್ಕರ ಗುರುವಾಗಿ ಶಿಷ್ಯರಿಗೆ (ಅನುಯಾಯಿ) ಲೋಕವೇದ (ಶಾಸ್ತ್ರ ವಿರುದ್ಧ ದಂತ ಕಥೆ) ವನ್ನು ಕೇಳಿಸುವರು. ದೇವಿ–ದೇವತೆಗಳ ಪೂಜೆಯನ್ನು ಮಾಡಿ ಮತ್ತು ಮಾಡಿಸಿ, ಬೇರೆಯವರನ್ನು ನಿಂದಿಸಿ, ಕಷ್ಟಗಳ ಮೇಲೆ ಕಷ್ಟಗಳನ್ನು ಎಳೆದುಕೊಳ್ಳುವರು. ಯಾರು ಅವರ ಶಿಷ್ಯತ್ವವನ್ನು ಸ್ವೀಕರಿಸುವರೋ ಅವರಿಗೆ ಪರಮಾರ್ಥದ ಬಗ್ಗೆ ಇವರು ಹೇಳುವುದಿಲ್ಲ. ದಕ್ಷಿಣೆಗೋಸ್ಕರ ಪ್ರಪಂಚವನ್ನು ಹಾದಿ ತಪ್ಪಿಸುವರು. ತಮ್ಮನ್ನು ತಾವು ಎಲ್ಲರಿಗಿಂತ ಅತ್ಯಂತ ಉತ್ತಮವೆಂದು

ತಿಳಿದುಕೊಂಡಿರುವರು, ಬೇರೆಯವರನ್ನು ನೀಚರೆಂದುಕೊಳ್ಳುವರು". ಇದೆಲ್ಲವನ್ನೂ ಮಾತೆಯ ಮುಖದಿಂದ ಕೇಳಿದ ಬ್ರಹ್ಮಾ ಮೂರ್ಛೆ ಹೋಗಿ ನೆಲದ ಮೇಲೆ ಬಿದ್ದು ಬಿಟ್ಟನು. ತುಂಬಾ ಸಮಯದ ನಂತರ ಎಚ್ಚರವಾಯಿತು.

ಗಾಯತ್ರಿಗೆ ಶಾಪ :– ನಿನಗೆ ಬಹಳಷ್ಟು ಗೂಳಿಗಳು ಗಂಡಂದಿರಾಗುವರು. ನೀನು ಮೃತಲೋಕ (ಭೂಮಿ)ದಲ್ಲಿ ಹಸುವಾಗುವೆ.

ಪುಹಪವತಿಗೆ ಶಾಪ :– ನಿನ್ನ ಜಾಗ ಕೊಳಚೆಯಲ್ಲಿ. ನಿನ್ನ ಹೂವುಗಳನ್ನೂ ಕೂಡಾ ಯಾರೂ ಪೂಜೆಯಲ್ಲಿ ಬಳಸುವುದಿಲ್ಲ. ಈ ಸುಳ್ಳು ಸಾಕ್ಷಿಯ ಕಾರಣದಿಂದ ನೀನು ನರಕವನ್ನು ಅನುಭವಿಸಬೇಕಾಗುವುದು. ನಿನ್ನ ಹೆಸರು ಕೇವಡಾ ಕೇತಕಿ ಎಂದಿರುವುದು". (ಹರಿಯಾಣದಲ್ಲಿ ಕುಸೋಂಧಿ ಎಂದು ಕರೆಯುತ್ತಾರೆ. ಈ ಹೂವು ಕೊಳಚೆ ಪ್ರದೇಶದಲ್ಲಿ ದೊರೆಯುತ್ತದೆ.)

ಈ ರೀತಿಯಾಗಿ ಈ ಮೂವರಿಗೂ ಶಾಪ ನೀಡಿದ ಮಾತೆ ಭವಾನಿ ಬಹಳ ಪಶ್ಚಾತ್ತಾಪಪಟ್ಟಳು. ಹೀಗೆ ಈ ಮೊದಲು ಜೀವವಿಲ್ಲದ ಮನಸ್ಸಿನ (ಕಾಲ ನಿರಂಜನ) ಪ್ರಭಾವದಿಂದ ತಪ್ಪನೆಸಗಿ ನಂತರ ಆತ್ಮ (ಸತ್ಯಪುರುಷನ ಅಂಶ)ದ ಪ್ರಭಾವದಿಂದ ನಂತರ ತಪ್ಪಿನ ಅರಿವಾಗಿ ಪಶ್ಚಾತ್ತಾಪ ಪಡುವಂತಾಗುತ್ತದೆ. ಇದೇ ರೀತಿ ತಾಯಿ–ತಂದೆಯರು ಮಕ್ಕಳ ಸಣ್ಣ ತಪ್ಪಿಗೆ ಹೊಡೆದುಬಿಡುತ್ತಾರೆ. (ಕೋಪಕ್ಕೆ ಬಲಿಯಾಗಿ) ಆದರೆ ನಂತರ ತುಂಬಾ ಪಶ್ಚಾತ್ತಾಪ ಪಡುತ್ತಾರೆ. ಇದೇ ಪ್ರಕ್ರಿಯೆ ಮನದ (ಕಾಲ–ನಿರಂಜನ) ಪ್ರಭಾವದಿಂದ ಎಲ್ಲಾ ಜೀವಿಗಳಲ್ಲಿಯೂ ಸಕ್ರಿಯವಾಗಿದೆ ಹ್ಞಾಂ, ಇಲ್ಲಿ ಇನ್ನೊಂದು ವಿಷಯ ವಿಶೇಷವಾಗಿದೆ. ಅದೇನೆಂದರೆ ನಿರಂಜನ (ಕಾಲಬ್ರಹ್ಮ)ನು ಕೂಡಾ ತನ್ನ ಕಾನೂನನ್ನು ರಚಿಸಿದ್ದಾನೆ ಅದೇನೆಂದರೆ ಒಂದು ವೇಳೆ ಯಾವ ಜೀವಿಯಾದರೂ ಯಾವುದೇ ದುರ್ಬಲ ಜೀವಿಯನ್ನು ಗೋಳಾಡಿಸಿದರೆ ಅದಕ್ಕೆ ಬದಲಾಗಿ ಏನನ್ನಾದರೂ ನೀಡಬೇಕಾಗುತ್ತದೆ. ಯಾವಾಗ ಆದಿ ಭವಾನಿ (ಪ್ರಕೃತಿ, ಅಷ್ಟಾಂಗಿ)ಯು ಬ್ರಹ್ಮಾ, ಗಾಯತ್ರಿ ಮತ್ತು ಪುಹಪವತಿಯರಿಗೆ ಶಾಪ ನೀಡಿದಳೋ ಆಗ ಅಲಖ್ ನಿರಂಜನ (ಬ್ರಹ್ಮ–ಕಾಲ)ನು ಹೇಳಿದನು. ಏನೆಂದರೆ "ಹೇ ಭವಾನಿ (ಪ್ರಕೃತಿ/ಅಷ್ಟಾಂಗಿ) ಇದು ನೀವು ಒಳ್ಳೆಯದನ್ನು ಮಾಡಲಿಲ್ಲ. ನಿಮಗೆ ಕೂಡಾ ಐದು ಪತಿಯರು ಇರುವರು. (ದ್ರೌಪದಿಯೇ ಆದಿ ಮಾಯೆಯ ಅವತಾರವಾಗಿದ್ದಾಳೆ)" ಯಾವಾಗ ಈ ರೀತಿ ಆಕಾಶವಾಣಿಯನ್ನು ಕೇಳಿದಳೋ ಆಗ ಆದಿಮಾಯ ಹೇಳಿದಳು. "ಹೇ ಜ್ಯೋತಿ ನಿರಂಜನನೇ (ಕಾಲ) ನಿನ್ನ ವಶದಲ್ಲಿ ನಾನಿರುವೆ. ನಿನಗೇನು ಅನ್ನಿಸುವುದೋ ಹಾಗೆ ಮಾಡು".

## ''ವಿಷ್ಣುವು ತನ್ನ ತಂದೆ (ಕಾಲ/ ಬ್ರಹ್ಮ)ಯನ್ನು ಪಡೆಯಲು ನಿರ್ಗಮನ ಮತ್ತು ತಾಯಿಯ ಆಶೀರ್ವಾದ ಪಡೆಯುವಿಕೆ''

ಇದಾದ ನಂತರ ವಿಷ್ಣುವಿಗೆ ಪ್ರಕೃತಿಯು, "ಪುತ್ರನೇ, ನೀನು ಕೂಡಾ ನಿನ್ನ ತಂದೆಯನ್ನು ಹುಡುಕು ಎಂದಳು. ವಿಷ್ಣು ಅದರಂತೆ ತಂದೆಯನ್ನು ಹುಡುಕುತ್ತಾ, ಹುಡುಕುತ್ತಾ ಪಾತಾಳ ಲೋಕಕ್ಕೆ ನಡೆದನು. ಅಲ್ಲಿ ಶೇಷನಾಗನಿದ್ದನು. ಅವನು ತನ್ನ ಗಡಿಯನ್ನು ವಿಷ್ಣುವು ಅತಿಕ್ರಮಿಸುವುದನ್ನು ಕಂಡು ವಿಷಭರಿತವಾದ ತನ್ನ ಉಸಿರನ್ನು ಅವನೆಡೆಗೆ ಬಲವಾಗಿ ಊದಿದನು. ಆ ವಿಷದ ಪರಿಣಾಮವಾಗಿ ವಿಷ್ಣುವಿನ ಶರೀರದ ಬಣ್ಣ ಕಪ್ಪಾಯಿತು. ಸ್ಪ್ರೇ ಪೇಂಟ್‌ನಿಂದ ಬದಲಾದ ಹಾಗೆ ಬದಲಾಯಿತು. ಆಗ ವಿಷ್ಣುವು ಈತನನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಅಂದುಕೊಂಡನು. ಈ ಸಮಯದಲ್ಲಿ ಜ್ಯೋತಿ ನಿರಂಜನನು ವಿಷ್ಣುವನ್ನು ಸಮಾಧಾನಪಡಿಸುವುದು ಸರಿಯಾದ ಮಾರ್ಗವೆಂದು ಅಂದುಕೊಂಡನು. ಅದೇ ಸಮಯದಲ್ಲಿ ಆಕಾಶವಾಣಿಯಾಯಿತು. ಅದು ಹೀಗಿತ್ತು. "ವಿಷ್ಣು, ಈಗ ನೀನು ನಿನ್ನ ಮಾತೆಯ ಬಳಿಗೆ ಹೋಗಿ ಇಲ್ಲಿ ಏನೆಲ್ಲಾ ನಡೆಯಿತು ಎಂಬ ಸತ್ಯವನ್ನು ವಿವರಿಸು ಮತ್ತು ಯಾವ ಕಷ್ಟವನ್ನು

ಶೇಷನಾಗನಿಂದ ಅನುಭವಿಸಬೇಕಾಯಿತೋ ಅದರ ಸೇಡನ್ನು ದ್ವಾಪರಯುಗದಲ್ಲಿ ತೀರಿಸಿಕೊಳ್ಳುವಿಯಂತೆ. ದ್ವಾಪರಯುಗದಲ್ಲಿ ನೀನು ಕೃಷ್ಣನ ಅವತಾರವನ್ನು ತಳೆಯುವೆ ಮತ್ತು ಕಾಳೀದಹನದಲ್ಲಿ ಕಾಲಿಂದ್ರಿ ಹೆಸರಿನ ನಾಗನ ಜನ್ಮ ಆಗುವುದು ಆ ಜನ್ಮ ಶೇಷನಾಗನದಾಗಿರುತ್ತದೆ.

ಊಂಚ್ ಹೋಯಿಕೆ ನೀಚ್ ಸತಾವೈ,<br>
ತಾಕರ್ ಓಎಲ್ (ಬದಲಾ) ಮೋಹಿ ಸೋಂ ಪಾವೈ ।<br>
ಜೋ ಜೀವ್ ದೇಯೀ ಪೀರ್ ಪುನೀ ಕಾಂಹೂ,<br>
ಹಮ್ ಪುನಿ ಓಎಲ್ ದಿವಾವೆಂ ತಾಹೂಂ ॥

ಆಗ ವಿಷ್ಣುವು ಮಾತೆಯ ಬಳಿಗೆ ಬಂದು ಎಲ್ಲಾ ವಿಚಾರವನ್ನು ಹೇಳಿದನು. ಮತ್ತು ನನಗೆ ತಂದೆಯ ದರ್ಶನವಾಗಲಿಲ್ಲ ಎಂದು ಕೂಡಾ ನೊಂದುಕೊಂಡನು. ಈ ಮಾತಿನಿಂದ ಮಾತೆ ಬಹಳ ಪ್ರಸನ್ನಳಾದಳು ಮತ್ತು ಹೀಗೆ ಹೇಳಿದಳು, "ಪುತ್ರ, ನೀನು ಸತ್ಯವಾದಿ. ನಾನು ಈಗ ನನ್ನ ಶಕ್ತಿಯಿಂದ ನಿನಗೆ ನಿನ್ನ ತಂದೆಯ ಭೇಟಿಯಾಗುವಂತೆ ಮಾಡುವೆನು. ನಿನ್ನ ಮನದಲ್ಲಿರುವ ಸಂಶಯವನ್ನು ಹೋಗಲಾಡಿಸುವೆನು".

ಕಬೀರ್, ದೇಖ್ ಪುತ್ರ ತೋಹಿ ಪಿತಾ ಭೀಟಾವೂಂ,<br>
ತೌರೆ ಮನ ಕಾ ಧೋಖಾ ಮಿಟಾವೂಂ ।<br>
ಮನ್ ಸ್ವರೂಪ್ ಕರ್ತಾ ಕಹ ಜಾನೋಂ, ಮನ ತೆ ದೂಜಾ ಔರ್ ನ ಮಾನೋ ।<br>
ಸ್ವರ್ಗ್ ಪಾತಾಲ್ ದೌರ್ ಮನ್ ಕೇರಾ, ಮನ್ ಅಸ್ಥಿರಾ ಮನ್ ಅಹೈ ಅನೆರಾ ।<br>
ನಿರಂಕಾರ್‌ಮನ್ ಹೀ ಕೋ ಕಹಿಯೆ, ಮನ್ ಕೀ ಆಸ್ ನಿಶ್ ದಿನ್ ರಹಿಯೆ ।<br>
ದೇಖ್ ಹ್ಞೂಂ ಪಲಟಿ ಸುನ್ಯ ಮಹ್ ಜ್ಯೋತಿ,<br>
ಜಹ್ಞಾಂ ಪರ್ ಝಿಲ್‌ಮಿಲ್ ಝಾಲರ್ ಹೋತೀ ॥

ಮಾತೆ (ಅಷ್ಟಾಂಗಿ ಪ್ರಕೃತಿ)ಯು ವಿಷ್ಣುವಿಗೆ ಈ ರೀತಿಯಾಗಿ ಹೇಳಿದಳು, "ಮನವೇ ಜಗದ ಕರ್ತೃವಾಗಿದ್ದಾನೆ. ಇದೇ ಜ್ಯೋತಿ ನಿರಂಜನ, ಧ್ಯಾನದಲ್ಲಿ ಯಾವ ಒಂದು ಸಾವಿರ ಜ್ಯೋತಿಗಳು ಕಾಣಿಸುತ್ತವೋ, ಅವೇ ಅವನ ರೂಪವಾಗಿದೆ. ಯಾವ ಶಂಖ, ಘಂಟೆಗಳ ನಾದವನ್ನು ಕೇಳುತ್ತೀಯೋ, ಅದು ಮಹಾಸ್ವರ್ಗದಲ್ಲಿ ನಿರಂಜನನ ಪೂಜೆಯಲ್ಲಿ ಊದುತ್ತಿರುವುದಾಗಿದೆ". ಮಾತೆಯು ಮುಂದುವರೆಸುತ್ತಾ (ಅಷ್ಟಾಂಗಿ, ಪ್ರಕೃತಿ) "ಪುತ್ರನೇ, ನೀನು ಎಲ್ಲಾ ದೇವತೆಗಳಿಗೂ ಮುಕುಟ ಪ್ರಾಯನಂತಿರುವೆ ಮತ್ತು ನಿನ್ನ ಆಕಾಂಕ್ಷೆ ಹಾಗೂ ಕಾರ್ಯಗಳನ್ನು ನಾನು ಪೂರ್ಣಗೊಳಿಸುವೆನು. ನಿನ್ನ ಪೂಜೆ ಎಲ್ಲಾ ಜಗತ್ತಿನಲ್ಲಿಯೂ ನಡೆಯುವುದು. ನೀನು ನನಗೆ ಸತ್ಯವನ್ನೇ ಹೇಳಿರುವೆ. ಕಾಲನ 21 ಬ್ರಹ್ಮಾಂಡಗಳಲ್ಲಿನ ಪ್ರಾಣಿಗಳಲ್ಲಿ ವಿಶೇಷವಾದ ಒಂದು ಅಭ್ಯಾಸವಿದೆ. ಅದೇನೆಂದರೆ ತನ್ನ ಮಹಿಮೆಯನ್ನು ತಾನೇ ವ್ಯರ್ಥವಾಗಿ ಹೇಳಿಕೊಳ್ಳುವುದು". ಮಗೂ, ನಿನ್ನ ಪೂಜೆ ಇಡೀ ಜಗತ್ತಿನಲ್ಲಿ ನಡೆಯುವುದು ನಾನು ನಿನಗೆ ನಿನ್ನ ತಂದೆಯ ದರ್ಶನವನ್ನು ಮಾಡಿಸಿರುವೆನು ಎಂದು ವಿಷ್ಣುವಿಗೆ ಹೇಳುತ್ತಿರುವಾಗಲೇ ಅವಳು ಕೇವಲ ಪ್ರಕಾಶವನ್ನು ತೋರಿಸಿ ಶ್ರೀವಿಷ್ಣುವನ್ನು ಮರುಳು ಮಾಡಿದಳು. ಶ್ರೀ ವಿಷ್ಣುವು ಪ್ರಭುವಿನ ಇದೇ ಸ್ಥಿತಿಯನ್ನು ತನ್ನ ಅನುಯಾಯಿಗಳಿಗೆ ತಿಳಿಹೇಳತೊಡಗಿದನು. ಪರಮಾತ್ಮನು ಕೇವಲ ಪ್ರಕಾಶದ ರೂಪದಲ್ಲಿರುವನು. ಪರಮಾತ್ಮ ನಿರಾಕಾರನು ಎಂದು ತಿಳಿಸಿದನು. ಅದರ ನಂತರ ಆದಿ ಭವಾನಿ ರುದ್ರನ (ಮಹೇಶ್ವರ) ಬಳಿಗೆ ಹೋದಳು ಮತ್ತು ಹೇಳಿದಳು. "ಮಹೇಶ್ವರಾ, ನೀನು ಕೂಡಾ ನಿನ್ನ ತಂದೆಯನ್ನು ಹುಡುಕು, ನಿನ್ನ ಇಬ್ಬರು ಅಣ್ಣಂದಿರಿಗೂ ನಿನ್ನ ತಂದೆಯ ದರ್ಶನ ದೊರೆಯಲಿಲ್ಲ. ಅವರಿಗೆ ಏನು ದೊರೆಯಬೇಕಾಗಿತ್ತೋ ಅದನ್ನು ನೀಡಿದ್ದಾರೆ. ಈಗ ನೀನು ನಿನಗೆ ಏನು ಬೇಕೋ ಅದನ್ನು ಕೇಳಿಕೋ". ಆಗ ಮಹೇಶ್ವರ ತಾಯಿಗೆ ಹೀಗೆಂದು ಹೇಳಿದನು. "ಹೇ

ಜನನಿ, ನನ್ನ ಇಬ್ಬರೂ ಅಣ್ಣಂದಿರಿಗೆ ತಂದೆಯ ದರ್ಶನವಾಗಲಿಲ್ಲ. ಪುನಃ ಪ್ರಯತ್ನ ಮಾಡುವುದು ಖಂಡಿತ ವ್ಯರ್ಥ. ದಯವಿಟ್ಟು ನನಗೆ ಅಂತಹಾ ವರವನ್ನು ನೀಡು ಅದರಿಂದ ನಾನು ಅಮರನಾಗಿ ಬಿಡುವೆನು". (ಮೃತ್ಯುಂಜಯ) ಆಗ ಮಾತೆ ಉತ್ತರಿಸಿದಳು. "ನಾನು ಈ ರೀತಿ ಮಾಡಲು ಸಾಧ್ಯವಿಲ್ಲ. ಆದರೆ ಒಂದು ಉಪಾಯ ಹೇಳಬಲ್ಲೆ. ಅದರಿಂದ ನಿನ್ನ ಆಯಸ್ಸು ಎಲ್ಲರಿಗಿಂತ ಹೆಚ್ಚಿನದಾಗಿರುತ್ತದೆ. ಅದು ವಿಧಿ ಯೋಗ ಸಮಾಧಿಯಾಗಿದೆ". (ಈ ಕಾರಣದಿಂದ ಮಹಾದೇವ ಹೆಚ್ಚಾಗಿ ಸಮಾಧಿಯಲ್ಲೇ ಇರುವನು). ಈ ಪ್ರಕಾರವಾಗಿ ಮಾತೆ (ಅಷ್ಟಾಂಗಿ, ಪ್ರಕೃತಿ)ಯು ಮೂರು ಪುತ್ರರಿಗೂ ವಿಭಾಗವನ್ನು ಹಂಚಿದಳು.

ಭಗವಂತ ಬ್ರಹ್ಮಾನಿಗೆ ಕಾಲನ ಲೋಕದಲ್ಲಿ **84** ಲಕ್ಷ ಪ್ರಕಾರದ ಶರೀರ ರಚನೆ ಮಾಡುವ (ಹುಟ್ಟಿಸುವ) ಅರ್ಥಾತ್ ರಜೋಗುಣದಿಂದ ಪ್ರಭಾವಿತನಾಗಿ ಸಂತಾನೋತ್ಪತ್ತಿಗೋಸ್ಕರ ವಿವಶಗೊಳಿಸಿ ಜೀವ ಉತ್ಪನ್ನ ಮಾಡುವ ವಿಭಾಗವನ್ನು ನೀಡಿದಳು. ಭಗವಂತ ವಿಷ್ಣುವಿಗೆ ಜೀವಿಗಳ ಪಾಲನೆ–ಪೋಷಣೆಯ (ಕರ್ಮಾನುಸಾರವಾಗಿ) ಕಾರ್ಯವನ್ನು ಮತ್ತು ಮೋಹ–ಮಮತೆಗಳನ್ನು ಹುಟ್ಟು ಹಾಕಿ ಮಾನವರ ಸ್ಥಿತಿಯನ್ನು ಹಾಗೇ ಇರಿಸಿಕೊಳ್ಳುವ ವಿಭಾಗವನ್ನು ವಹಿಸಿದಳು.

ಇಲ್ಲಿ ಮನಸ್ಸು ಒಂದು ಸಂದೇಹವನ್ನು ಹೊಂದಬಹುದು. ಅದೇನೆಂದರೆ ಬ್ರಹ್ಮಾ, ವಿಷ್ಣು ಮತ್ತು ಶಂಕರರಿಂದ ಉತ್ಪತ್ತಿ, ಸ್ಥಿತಿ ಮತ್ತು ಸಂಹಾರ ಹೇಗೆ ಆಗಲು ಸಾಧ್ಯ?. ಈ ಮೂವರೂ ತಮ್ಮ ಮೂರು ಲೋಕಗಳಲ್ಲಿ ಇರುತ್ತಾರೆ. ಹೇಗೆ ಈಗಿನ ದಿನಗಳಲ್ಲಿ ಸಂಚಾರ ವ್ಯವಸ್ಥೆಗೋಸ್ಕರ ಉಪಗ್ರಹಗಳನ್ನು ಗಗನದಲ್ಲಿ ಬಿಟ್ಟು ಮತ್ತು ಅವುಗಳ ಕೆಳಗೆ ಭೂಮಿಯಲ್ಲಿ ಸಂಚಾರ ವ್ಯವಸ್ಥೆಯನ್ನು ಸುಸೂತ್ರವಾಗಿ ನೆರವೇರಿಸುವರೋ, ಅದೇ ರೀತಿ ಈ ಮೂವರು ದೇವರು ಅಲ್ಲಿಯೂ ಇರುತ್ತಾರೆ. ಇವರ ಶರೀರದಿಂದ ಹೊರಹೊಮ್ಮುವ ಸೂಕ್ಷ್ಮ ಗುಣಗಳ ತರಂಗಗಳು ಮೂರೂ ಲೋಕಗಳಲ್ಲಿ ಅವರ ಪ್ರಭಾವವು ಪ್ರತಿ ಪ್ರಾಣಿಯಲ್ಲಿಯೂ ಇರುವಂತೆ ಮಾಡುತ್ತವೆ.

ಈ ಮೇಲಿನ ವಿವರಣೆಯು ಒಂದು ಬ್ರಹ್ಮಾಂಡದಲ್ಲಿ ಬ್ರಹ್ಮನ (ಕಾಲ) ರಚನೆಯ ಬಗ್ಗೆಯದಾಗಿದೆ. ಹೀಗೆಯೇ ಕ್ಷರ ಪುರುಷ (ಕಾಲ)ನ **21** ಬ್ರಹ್ಮಾಂಡಗಳಿವೆ.

ಆದರೆ ಕ್ಷರ ಪುರುಷನು(ಕಾಲ) ಸ್ವಯಂ ವ್ಯಕ್ತವಾಗುವುದಿಲ್ಲ ಅರ್ಥಾತ್ ವಾಸ್ತವಿಕ ಶರೀರದ ರೂಪದಲ್ಲಿ ಎಲ್ಲರ ಎದುರಿಗೆ ಬರುವುದಿಲ್ಲ. ಈ ದರ್ಶನವನ್ನು ಪಡೆಯಲೆಂದೇ ಮೂವರೂ ದೇವರು (ಬ್ರಹ್ಮಾ, ವಿಷ್ಣು, ಮಹೇಶ್ವರ) ವೇದಗಳಲ್ಲಿ ವರ್ಣಿತವಾಗಿರುವ ವಿಧಿಯ ಅನುಸಾರವಾಗಿ ತಮ್ಮೆಲ್ಲಾ ತನು–ಮನ–ಧನಗಳನ್ನು ಅರ್ಪಿಸಿ ಸಾಧನೆ ಮಾಡಿದರೂ ಕೂಡಾ ಬ್ರಹ್ಮ (ಕಾಲ)ನ ದರ್ಶನವಾಗಲಿಲ್ಲ. ಅನಂತರ ಋಷಿಗಳು ವೇದಗಳನ್ನು ಅಧ್ಯಯನ ಮಾಡಿದರು. ಅದರಲ್ಲಿ "ಅಗ್ನೇಃ ತನೂರ್ ಅಸಿ" (ಪವಿತ್ರ ಯಜುರ್ವೇದ ಅಧ್ಯಾಯ **1,** ಮಂತ್ರ **15**) ಪರಮೇಶ್ವರ ಸಶರೀರನು ಮತ್ತು ಯಜುರ್ವೇದ ಅಧ್ಯಾಯ **5** ಮಂತ್ರ **1**ರಲ್ಲಿ 'ಅಗ್ನೇಃ ತನೂರ್ ಅಸಿ ವಿಷ್ಣುವೆ ತ್ವಾ ಸೋಮಸ್ಯ ತನೂರ್ ಅಸಿ' ಈ ಮಂತ್ರದಲ್ಲಿ **2** ಬಾರಿ ವೇದ ಸಾಕ್ಷಿ ನೀಡುತ್ತದೆ. ಯಾವುದರ ಬಗ್ಗೆ ಅಂದರೆ ಸರ್ವವ್ಯಾಪಕ, ಸರ್ವಪಾಲನಾ ಕರ್ತಾ ಸತ್ಯಪುರುಷ ಸಶರೀರನು ಪವಿತ್ರ ಯಜುರ್ವೇದ ಅಧ್ಯಾಯ **40** ಮಂತ್ರ **8**ರಲ್ಲಿ ಹೇಳಲಾಗಿದೆ. (ಕವಿರ್ ಮನೀಷಿ) ಯಾವ ಪರಮೇಶ್ವರನನ್ನು ಪ್ರತಿಪ್ರಾಣಿಗಳು ದರ್ಶನಕ್ಕೋಸ್ಕರ ಹಾತೊರೆಯುವುವೋ ಆ ದೇವ ಕವಿರ್ ಅರ್ಥಾತ್ ಕಬೀರನಾಗಿದ್ದಾನೆ. ಅವನ ಶರೀರವು ನಾಡಿರಹಿತವಾಗಿದೆ. (ಅಸ್ನಾವಿರಮ್), (ಶುಕ್ರಮ್) ವೀರ್ಯದಿಂದ ಉಂಟಾದ **5** ತತ್ವಗಳ (ಅಕಾಯಮ್) ಭೌತಿಕ ಶರೀರರಹಿತನಾಗಿದ್ದಾನೆ. ಎಲ್ಲದಕ್ಕಿಂತಲೂ ಎತ್ತರದಲ್ಲಿರುವ ಸತ್ಯಲೋಕದಲ್ಲಿ ವಿರಾಜಮಾನನಾದ ಆ ಪರಮೇಶ್ವರನ ತೇಜಪುಂಜವು (ಸ್ವಜ್ಯೋರ್ತಿ) ಸ್ವಯಂ ಪ್ರಕಾಶಿತ ಶರೀರವು ಶಬ್ದರೂಪದ್ದಾಗಿದೆ. ಅರ್ಥಾತ್ ಅವಿನಾಶಿಯಾಗಿದೆ. ಅವರೇ ಕವಿರ್ದೇವನಾಗಿದ್ದಾರೆ. (ಕಬೀರ್ ಪರಮೇಶ್ವರ) ಇವರೇ ಎಲ್ಲಾ ಬ್ರಹ್ಮಾಂಡದ ರಚನೆಯನ್ನು

ಮಾಡುವವರು. (ವ್ಯದಧಾತಾ) ಸರ್ವ ಬ್ರಹ್ಮಾಂಡದ ರಚನೆಗೆ ಕಾರಣಕರ್ತರು. (ಸ್ವಯಂಭೂಃ) ಸ್ವಯಂ ಪ್ರಕಟಿತನಾಗುವವರು. (ಹೊಸ ತತ್ವಗಳ ರಚನಕಾರ) ವಾಸ್ತವದಲ್ಲಿ (ಶಾಶ್ವತ) ಅವಿನಾಶಿಯಾಗಿರುವರು. (ಗೀತಾ ಅಧ್ಯಾಯ 15, ಶ್ಲೋಕ 17 ರಲ್ಲಿ ಕೂಡ ಇದರ ಪ್ರಮಾಣವಿದೆ).


ಭಾವಾರ್ಥ :– ಪೂರ್ಣ ಬ್ರಹ್ಮನ ಶರೀರದ ಹೆಸರು ಕಬೀರ (ಕವಿರ್ ದೇವ) ಎಂದಾಗಿದೆ. ಆ ಪರಮೇಶ್ವರನ ಶರೀರವು ಜ್ಯೋತಿಯ ತತ್ವದಿಂದ ರಚಿಸಲ್ಪಟ್ಟಿದೆ. ಪರಮಾತ್ಮನ ಶರೀರ ಅತಿ ಸೂಕ್ಷ್ಮವಾಗಿದೆ. ಯಾರ ದಿವ್ಯ ದೃಷ್ಟಿಯು ತೆರೆದಿರುತ್ತದೋ, ಅಂಥಹ ಸಾಧಕನಿಗೆ ಮಾತ್ರ ಆ ಶರೀರವು ಕಂಡು ಬರುತ್ತದೆ. ಈ ರೀತಿಯಾಗಿ ಜೀವಕ್ಕೂ ಕೂಡಾ ಒಂದು ಸೂಕ್ಷ್ಮ ಶರೀರವಿದೆ. ಈ ಶರೀರದ ಐದು ತತ್ವಗಳ ಮೇಲಿನ ಪದರವಿರುತ್ತದೆ (ಕವರ್) ಅರ್ಥಾತ್ ಐದು ತತ್ವಗಳಿಂದ ಕೂಡಿದ ಕಾಯ (ಶರೀರ) ಸೂಕ್ಷ್ಮ ಶರೀರದ ಮೇಲಿರುತ್ತದೆ. ಈ ಪದರವು ಮಾತಾ–ಪಿತರ ಸುಯೋಗದಿಂದ (ಶುಕ್ರಮ) ವೀರ್ಯದಿಂದ ರಚಿಸಿದ್ದಾಗಿರುತ್ತದೆ. ಈ ಶರೀರವನ್ನು ತ್ಯಾಗ ಮಾಡಿದ ಮೇಲೂ ಕೂಡ ಜೀವನ ಸೂಕ್ಷ್ಮ ಶರೀರ ಜೊತೆಯಲ್ಲಿರುತ್ತದೆ. ಯಾರ ದಿವ್ಯ ದೃಷ್ಟಿ ಮೊದಲೇ ತೆರೆದಿರುತ್ತದೆಯೋ, ಅವರಿಗೆ ಈ ಶರೀರ ಕಾಣಿಸುತ್ತದೆ. ಹೀಗೆ ಪರಮಾತ್ಮ ಹಾಗೂ ಜೀವದ ಸ್ಥಿತಿಯನ್ನು ತಿಳಿಯುವುದಾಗಿದೆ. ವೇದಗಳಲ್ಲಿ ಓಂ ನಾಮಸ್ಮರಣದ ಪ್ರಮಾಣವು ಇದೆ. ಅದು ಕೇವಲ ಬ್ರಹ್ಮನ ಸಾಧನೆಯಾಗಿದೆ. ಈ ಉದ್ದೇಶದಿಂದಲೇ ಓಂ ನಾಮದ ಜಪವನ್ನು ಪೂರ್ಣ ಬ್ರಹ್ಮನನ್ನು ಪಡೆಯುವ ಸಾಧನೆಯೆಂದು ನಂಬಿ ಋಷಿಗಳು ಕೂಡಾ ಸಾವಿರಾರು ವರ್ಷಗಳ ಹಠಯೋಗ (ಸಮಾಧಿ ಸ್ಥಿತಿ)ವನ್ನು ಮಾಡಿ ಪ್ರಭುವಿನ ಸಾಕ್ಷಾತ್ಕಾರವನ್ನು ಪಡೆಯುವ ಪ್ರಯತ್ನ ಮಾಡಿದ್ದಾರೆ. ಆದರೆ ಪ್ರಭುವಿನ ದರ್ಶನವಾಗಲಿಲ್ಲ. ಸಿದ್ಧಿಗಳು ಲಭಿಸಿದವು. ಈ ರೀತಿಯ ಸಿದ್ಧಿಗಳೆಂಬ ಆಟಿಕೆಯೊಡನೆ ಆಟವಾಡುತ್ತಾ ಋಷಿಗಳು ಜನ್ಮ ಮೃತ್ಯುಗಳ ಚಕ್ರದಲ್ಲಿಯೇ ಸಿಲುಕಿಕೊಂಡರು. ಮತ್ತು ತಮ್ಮ ಅನುಭವದ ಶಾಸ್ತ್ರಗಳಲ್ಲಿ ಪರಮಾತ್ಮನನ್ನು ನಿರಾಕಾರನೆಂದು ಬರೆದರು. ಬ್ರಹ್ಮ(ಕಾಲ) ಶಪಥ ಮಾಡಿಬಿಟ್ಟಿದ್ದನು. ಅದೇನೆಂದರೆ ನನ್ನ ವಾಸ್ತವಿಕ ರೂಪದಲ್ಲಿ ನಾನು ಯಾರಿಗೂ ದರ್ಶನ ನೀಡುವುದಿಲ್ಲ. ನನ್ನನ್ನು ಅವ್ಯಕ್ತನೆಂದು ತಿಳಿದುಕೊಳ್ಳುವರು.

(ಅವ್ಯಕ್ತದ ಭಾವಾರ್ಥ:– ಯಾವುದೋ ಆಕಾರದಲ್ಲಿರುತ್ತಾನೆ ಆದರೆ ವ್ಯಕ್ತಿಗತ ರೂಪದಲ್ಲಿ ಸ್ಥೂಲರೂಪದಲ್ಲಿ ದರ್ಶನವನ್ನು ನೀಡುವುದಿಲ್ಲ. ಹೇಗೆ ಆಕಾಶದಲ್ಲಿ ಮೋಡ ಆವರಿಸಿಕೊಂಡಾಗ ಬೆಳಗ್ಗಿನ ಸಮಯದಲ್ಲಿ ಸೂರ್ಯ ಅದೃಶ್ಯನಾಗುವನೋ ಹಾಗೆ, ಭಗವಂತ ಸ್ಥೂಲರೂಪದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಆದರೆ ವಾಸ್ತವದಲ್ಲಿ ಮೋಡವನ್ನು ದಾಟಿದ ಮೇಲೆ ಏನಿದೆಯೋ ಆ ಘಟ್ಟವನ್ನು ಅವ್ಯಕ್ತವೆಂದು ಕರೆಯುತ್ತೇವೆ).


(ಗೀತೆಯ ಅಧ್ಯಾಯ 7, ಶ್ಲೋಕ 24–25, ಅಧ್ಯಾಯ 11 ಶ್ಲೋಕ 48 ಮತ್ತು 32ರಲ್ಲಿ ನಿಮಗೆ ಇದರ ಪ್ರಮಾಣವು ದೊರೆಯುವುದು)

ಪವಿತ್ರ ಗೀತೆಯನ್ನು ಹೇಳುವವನಾದ ಬ್ರಹ್ಮ (ಕಾಲ) ಶ್ರೀಕೃಷ್ಣನ ಶರೀರದಲ್ಲಿ ಪ್ರೇತರೂಪದಲ್ಲಿ ಪ್ರವೇಶ ಮಾಡಿ ಹೇಳುತ್ತಿದ್ದಾನೆ. "ಅರ್ಜುನಾ, ನಾನು ಬೆಳೆದಿರುವ ಕಾಲನಾಗಿದ್ದೇನೆ ಮತ್ತು ಎಲ್ಲರನ್ನೂ ತಿನ್ನುವುದಕ್ಕೋಸ್ಕರ ಬಂದಿರುವೆನು. (ಗೀತೆಯ ಅಧ್ಯಾಯ 11, ಶ್ಲೋಕ 32) ಇದು ನನ್ನ ವಾಸ್ತವಿಕವಾದ ರೂಪವಾಗಿದೆ. ಈ ರೂಪವನ್ನು ನಿನ್ನ ಬಿಟ್ಟು ಬೇರೆ ಯಾರೂ ಮೊದಲು ನೋಡಿಲ್ಲ, ಮುಂದೆ ಭವಿಷ್ಯದಲ್ಲಿ ನೋಡುವುದಿಲ್ಲ. ಅರ್ಥಾತ್ ವೇದದಲ್ಲಿ ವರ್ಣಿಸಲ್ಪಟ್ಟಿರುವ ಯಜ್ಞ–ತಪ–ಜಪ ಮತ್ತು 'ಓಂ' ನಾಮ ಮುಂತಾದ ವಿಧಿಗಳಿಂದ, ನನ್ನ ಈ ವಾಸ್ತವಿಕ ಸ್ವರೂಪದ ದರ್ಶನವಾಗುವುದಿಲ್ಲ. (ಗೀತೆಯ ಅಧ್ಯಾಯ 11, ಶ್ಲೋಕ 48) ನಾನು ಕೃಷ್ಣನಲ್ಲ. ಈ ಮೂರ್ಖ ಜನರು ಕೃಷ್ಣನ ರೂಪದಲ್ಲಿ ನನ್ನ ಅವ್ಯಕ್ತ ರೂಪವನ್ನು ವ್ಯಕ್ತ ರೂಪವೆಂದು (ಮನುಷ್ಯ ರೂಪ) ನಂಬಿರುತ್ತಾರೆ. ಏಕೆಂದರೆ ಈ ನನ್ನ ನಿಯಮದಿಂದ ಅವರು ಅಪರಿಚಿತರಾಗಿದ್ದಾರೆ. ಏಕೆಂದರೆ ಯಾವತ್ತಿಗೂ ನಾನು ಈ ಕಾಲರೂಪದಿಂದ

# ಬ್ರಹ್ಮ ಲೋಕದ ಲಘು ಚಿತ್ರ



# ಜ್ಯೋತಿ ನಿರಂಜನ (ಕಾಲ) ಬ್ರಹ್ಮನ ಲೋಕ (ಇಪ್ಪತ್ತೊಂದು ಬ್ರಹ್ಮಾಂಡ)ದ ಲಘು ಚಿತ್ರ



ಎಲ್ಲರ ಎದುರಿಗೆ ಬರುವುದೇ ಇಲ್ಲ. ನಾನು ಯೋಗ ಮಾಯೆಯಿಂದ ಅಡಗಿರುವೆನು. (ಗೀತೆಯ ಅಧ್ಯಾಯ 7, ಶ್ಲೋಕ 24–25).

ಚಿಂತಿಸಿ:– ತನ್ನ ಅಡಗಿರುವ ವಿಧಾನವನ್ನು ಸ್ವಯಂ ಅಶ್ರೇಷ್ಠನು (ಅನುತ್ತಮ) ಏಕೆ ಹೇಳುತ್ತಿರುವನು?

ಒಂದು ವೇಳೆ ತಂದೆಯು ತನ್ನ ಸಂತಾನಕ್ಕೆ ಕೂಡಾ ದರ್ಶನ ನೀಡದೇ ಇದ್ದಲ್ಲಿ, ಆತನಲ್ಲೇ ಏನೋ ದೋಷವಿದೆಯೆಂದೂ, ಆ ಕಾರಣದಿಂದಲೇ ಆತ ಅವಿತುಕೊಂಡಿರುವನೆಂದೂ ಮತ್ತು ಎಲ್ಲಾ ಸೌಲಭ್ಯಗಳನ್ನು ನೀಡುತ್ತಿರುವನೆಂದೂ ಅನಿಸುವುದಲ್ಲದೆ ಕಾಲ(ಬ್ರಹ್ಮ)ನು ಶಾಪವಶನಾಗಿ ಒಂದು ಲಕ್ಷ ಮಾನವ ಶರೀರವನ್ನು ಧರಿಸಿದ ಪ್ರಾಣಿಗಳನ್ನು ಆಹಾರವಾಗಿ ಸ್ವೀಕರಿಸಬೇಕಾದ್ದರಿಂದಲೂ ಮತ್ತು 25% ಪ್ರತಿದಿನ ಯಾವ ಜೀವಿಗಳನ್ನು ಉತ್ಪನ್ನ ಮಾಡಬೇಕಾಗಿದೆಯೋ ಅವರಿಗೆ ಸ್ಥಿತಿಗಳನ್ನು ಹೊಂದಿಸಲು ಮತ್ತು ತಮ್ಮ ತಮ್ಮ ಕರ್ಮಕ್ಕನುಗುಣವಾಗಿ ಶಿಕ್ಷೆ ನೀಡುವುದಕ್ಕೋಸ್ಕರ ಎಂಭತ್ನಾಲ್ಕು ಲಕ್ಷ ಯೋನಿಗಳನ್ನು ರಚನೆ ಮಾಡಿ ಆಗಿದೆ. ಒಂದು ವೇಳೆ ಎಲ್ಲರೆದುರು ಕುಳಿತು ಯಾರದೋ ಮಗಳು, ಯಾರದೋ ಪತ್ನಿ, ಯಾರದೋ ಪುತ್ರ. ತಂದೆ–ತಾಯಿಯನ್ನು ತಿಂದರೆ ಆಗ ಎಲ್ಲರಿಗೂ ಬ್ರಹ್ಮನೆಂದರೆ ಅಸಹ್ಯಪಟ್ಟುಕೊಳ್ಳಬಹುದು. ಯಾವಾಗಲಾದರೂ ಪರಮಾತ್ಮ ಕವಿರಗ್ನಿ (ಕಬೀರ ಪರಮೇಶ್ವರ) ಸ್ವಯಂ ಬಂದು ಅಥವಾ ತನ್ನ ಯಾರಾದರೂ ಸಂದೇಶವಾಹಕನನ್ನು (ದೂತ) ಕಳುಹಿಸಿದರೆ, ಆಗ ಎಲ್ಲಾ ಪ್ರಾಣಿಗಳೂ ಸತ್ಯವಾದ ಭಕ್ತಿಯಿಂದ ಕಾಲನ ಹಿಡಿತದಿಂದ ಬಿಡಿಸಿಕೊಂಡು ಹೋಗಬಹುದು.

ಹೀಗೆ ಕಾಲಬ್ರಹ್ಮನು ಮೋಸ ಮಾಡಿ ಇರಿಸುತ್ತಾನೆ ಮತ್ತು ಪವಿತ್ರವಾದ ಗೀತೆಯ ಅಧ್ಯಾಯ 7 ಶ್ಲೋಕ 18. 24. 25 ರಲ್ಲಿ ತನ್ನ ಸಾಧನೆಯಿಂದ ಆಗುವಂತಹ ಮುಕ್ತಿ(ಗತಿ)ಯನ್ನು ಕೂಡಾ (ಅನುತ್ತಮಾಮ್) ಅತಿ ಅಶ್ರೇಷ್ಠನೆಂದು ಹೇಳಿದ್ದಾನೆ ಮತ್ತು ತನ್ನ ವಿಧಾನ (ನಿಯಮ)ವನ್ನು ಕೂಡಾ (ಅನುತ್ತಮ) ಅಶ್ರೇಷ್ಠವೆಂದು ಹೇಳಿದ್ದಾನೆ.

ಪ್ರತ್ಯೇಕ ಬ್ರಹ್ಮಾಂಡದಲ್ಲಿ ಸ್ಥಿತವಿರುವ ಬ್ರಹ್ಮಲೋಕದಲ್ಲಿ ಒಂದು ಮಹಾಸ್ವರ್ಗವನ್ನು ನಿರ್ಮಿಸಲಾಗಿದೆ. ಮಹಾಸ್ವರ್ಗದ ಒಂದು ಸ್ಥಾನದ ಮೇಲೆ ನಕಲಿ ಸತ್ಯಲೋಕ ನಕಲಿ ಅಲಖ್ ಲೋಕ–ನಕಲೀ ಅಗಮ ಲೋಕ ಮತ್ತು ನಕಲಿ ಅನಾಮಿ ಲೋಕದ ರಚನೆಯು ಪ್ರಾಣಿಗಳಿಗೆ ಭ್ರಮೆಯನ್ನುಂಟು ಮಾಡುವ ಕಾರಣಕ್ಕಾಗಿಯೇ ದುರ್ಗೆಯ (ಪ್ರಕೃತಿ/ಆದಿ ಮಾಯೆ) ಮೂಲಕ ಸೃಷ್ಟಿಸಲಾಗಿದೆ. ಕಬೀರ್ ಸಾಹೇಬರ ಒಂದು ಶಬ್ದವಿದೆ.

"ಕರ ನೈನೋಂ ದೀದಾರ ಮಹಲ್ ಮೆಂ ಪ್ಯಾರಾ ಹೈ" ನಲ್ಲಿ ಬರೆದಿರುವುದೇನೆಂದರೆ
"ಕಾಯಾ ಭೇದ್ ಕಿಯಾ ನಿರವಾರಾ. ಯಹ್ ಸಬ್ ರಚನಾ ಪಿಂಡ್ ಮಂಝಾರಾ ಹೈ.
ಮಾಯಾ ಅವಿಗತ್ ಜಾಲ್ ಪಸಾರಾ, ಸೋ ಕಾರೀಗರ್ ಭಾರಾ ಹೈ. ಆದಿ ಮಾಯಾ ಕಿನ್ಹೀ
ಚತುರಾಯೀ, ಝೂಠೀ ಬಾಜೀ ಪಿಂಡ ದಿಖಾಯೀ.
ಅವಿಗತ್ ರಚನಾ ರಚಿ ಅಂಡ್ ಮಾಹಿ ವಾಕಾ ಪ್ರತಿಬಿಂಬ ಡಾರಾ ಹೈ"

ಒಂದು ಬ್ರಹ್ಮಾಂಡದಲ್ಲಿ ಅನ್ಯ ಲೋಕಗಳ ರಚನೆಯೂ ಇದೆ. ಹೇಗೆಂದರೆ ಶ್ರೀ ಬ್ರಹ್ಮಾನ ಲೋಕ, ಶ್ರೀ ವಿಷ್ಣುಲೋಕ, ಶ್ರೀ ಶಿವನಲೋಕ. ಅಲ್ಲಿ ಕುಳಿತುಕೊಂಡು ಮೂವರೂ ಪ್ರಭುಗಳು ಕೆಳಗಿನ ಮೂರು ಲೋಕಗಳ (ಸ್ವರ್ಗಲೋಕ ಅರ್ಥಾತ್ ಇಂದ್ರನ ಲೋಕ–ಪೃಥ್ವೀಲೋಕ ಮತ್ತು ಪಾತಾಳ ಲೋಕ) ಮೇಲೆ ಒಂದೊಂದು ವಿಭಾಗದ ಮಾಲಿಕತ್ವವನ್ನು ಪಡೆದು ಪ್ರಭುತ್ವವನ್ನು ನೆರವೇರಿಸುತ್ತಿದ್ದಾರೆ. ಮತ್ತು ತಮ್ಮ ತಂದೆ ಕಾಲನಿಗೆ, ಅವನು ತಿನ್ನುವುದಕ್ಕೋಸ್ಕರ ಪ್ರಾಣಿಗಳ ಉತ್ಪತ್ತಿ, ಸ್ಥಿತಿ ಮತ್ತು ಸಂಹಾರಗಳ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದಾರೆ. ಈ ಮೂವರು ಪ್ರಭುಗಳ ಜನ್ಮ ಮತ್ತು ಮೃತ್ಯುಗಳು ಕೂಡಾ ಆಗುತ್ತಿರುತ್ತದೆ. ಆಗ ಕಾಲನು ಇವರು ಮೂವರನ್ನೂ ತಿನ್ನುತ್ತಾನೆ. ಈ ಬ್ರಹ್ಮಾಂಡವನ್ನು ಗೋಲವೆಂದು

ಹೇಳುತ್ತಾನೆ. ಏಕೆಂದರೆ ಅದರ ರಚನೆ ಗೋಲಾಕಾರವಾಗಿದೆ. ಇದನ್ನು ಪಿಂಡವೆಂದೂ ಕರೆಯುತ್ತಾರೆ.

ಏಕೆಂದರೆ ಶರೀರ(ಪಿಂಡ)ದಲ್ಲಿ ಒಂದು ಬ್ರಹ್ಮಾಂಡದ ರಚನೆಯು ಕಮಲದಲ್ಲಿ ಟಿ.ವಿ. ತರಹ ನೋಡಲಾಗುತ್ತದೆ. ಇಲ್ಲಿ ಒಂದು ಮಾನಸ ಸರೋವರ ಮತ್ತು ಧರ್ಮರಾಯ(ನ್ಯಾಯಾಧೀಶ)ನ ಲೋಕ ಕೂಡಾ ಆಗಿದೆ. ಹೇಗೆ ಪ್ರತಿಯೊಂದು ದೇಶದಲ್ಲಿಯೂ ಒಂದೊಂದು ರಾಜದೂತ ಭವನವಿರುವುದೋ, (ರಾಯಭಾರಿ ಕಚೇರಿ) ಅಲ್ಲಿಗೆ ಕೂಡಾ ಯಾರೂ ಹೋಗಲು ಸಾಧ್ಯವಿಲ್ಲವೋ, ಹಾಗೆ ಒಂದು ಗುಪ್ತ ಸ್ಥಾನದಲ್ಲಿ ಪೂರ್ಣ ಪರಮಾತ್ಮ ಬೇರೆ ರೂಪ ಧಾರಣೆ ಮಾಡಿ ಸ್ಥಿತನಾಗಿರುತ್ತಾನೆ. ಸತ್ಯಲೋಕದ ಅರ್ಧಂಬರ್ಧ ಭಕ್ತಿ ಇರುವ ಆತ್ಮಗಳನ್ನು ಅಲ್ಲಿರಿಸಲಾಗುತ್ತದೆ. ಯಾವಾಗ ಭಕ್ತಿಯುಗವು ಅಸ್ತಿತ್ವಕ್ಕೆ ಬರುವುದೋ ಆ ಸಮಯದಲ್ಲಿ ಪರಮೇಶ್ವರ ಕಬೀರರು ತಮ್ಮ ಪ್ರತಿನಿಧಿ ಪೂರ್ಣ ಸಂತ ಸದ್ಗುರುಗಳನ್ನು ಕಳುಹಿಸಿಕೊಡುತ್ತಾರೆ. ಈ ಆತ್ಮಗಳಿಗೆ ಭೂಮಿಯ ಮೇಲೆ ಆ ಸಮಯದಲ್ಲಿ ಮಾನವ ಶರೀರ ಪ್ರಾಪ್ತಿಯಾಗುವುದು ಮತ್ತು ಈ ಆತ್ಮಗಳು ಅತಿ ಶೀಘ್ರದಲ್ಲಿ ದೇವ ಭಕ್ತಿಯಲ್ಲಿ ಮುಳುಗಿ ಬಿಡುತ್ತವೆ ಮತ್ತು ಸದ್ಗುರುವಿನಿಂದ ದೀಕ್ಷೆ ಪಡೆದು ಪೂರ್ಣ ಮೋಕ್ಷವನ್ನು ಪಡೆಯುತ್ತವೆ. ಆ ಸ್ಥಾನದಲ್ಲಿ ವಾಸವಾಗಿರುವ ಹಂಸಾತ್ಮಗಳಲ್ಲಿ ಸಂಚಯವಾಗಿರುವ ಸ್ವಭಕ್ತಿಯು ಖರ್ಚಾಗುವುದಿಲ್ಲ. ಪರಮಾತ್ಮನ ಭಂಡಾರದಿಂದ ಎಲ್ಲಾ ಸೌಕರ್ಯಗಳೂ ಆ ಆತ್ಮಗಳಿಗೆ ದೊರೆಯುವುದು. ಬ್ರಹ್ಮನ ಉಪಾಸಕರ ಭಕ್ತಿ ಸಂಚಯವು ಸ್ವರ್ಗ–ಮಹಾಸ್ವರ್ಗದಲ್ಲಿ ಮುಗಿದು ಹೋಗುವುದು. ಏಕೆಂದರೆ ಈ ಕಾಲನ ಲೋಕದಲ್ಲಿ (ಬ್ರಹ್ಮಲೋಕ) ಮತ್ತು ಪರಬ್ರಹ್ಮ ಲೋಕದಲ್ಲಿ ಪ್ರಾಣಿಗಳಿಗೆ ತನ್ನ ಕರ್ಮಕ್ಕನುಗುಣವಾಗಿಯೇ ಫಲವು ದೊರೆಯುವುದು.

ಕ್ಷರಪುರುಷ (ಬಹ್ಮ)ನು ತನ್ನ 20 ಬ್ರಹ್ಮಾಂಡಗಳನ್ನು 4 ಮಹಾಬ್ರಹ್ಮಾಂಡಗಳನ್ನಾಗಿ ವಿಭಾಗ ಮಾಡಿದ್ದಾನೆ. ಒಂದು ಮಹಾ ಬ್ರಹ್ಮಾಂಡದಲ್ಲಿ 5 ಬ್ರಹ್ಮಾಂಡಗಳ ಸಮೂಹವನ್ನು ಮಾಡಿದ್ದಾನೆ ಮತ್ತು ನಾಲ್ಕು ಕಡೆಯಿಂದ ಅಂಡಾಕಾರದ ಪರಿಧಿಯಲ್ಲಿ ತಡೆಹಿಡಿದಿದ್ದಾನೆ ಮತ್ತು ನಾಲ್ಕು ಮಹಾ ಬ್ರಹ್ಮಾಂಡಗಳನ್ನು ಕೂಡಾ ಮತ್ತೆ ಅಂಡಾಕಾರದ ಪರಿಧಿಯೊಳಗೆ ತಡೆಯಲಾಗಿದೆ. 21ನೇ ಬ್ರಹ್ಮಾಂಡದ ರಚನೆಯು ಒಂದು ಮಹಾಬ್ರಹ್ಮಾಂಡದ ಸ್ಥಾನಕ್ಕೆಷ್ಟು ಸ್ಥಾನ ಬೇಕೋ ಅಷ್ಟರೊಳಗೆ ರಚನೆ ಮಾಡಲಾಗಿದೆ. 21ನೇ ಬ್ರಹ್ಮಾಂಡದಲ್ಲಿ ಪ್ರವೇಶ ಮಾಡುತ್ತಿದ್ದ ಹಾಗೆ 3 ದಾರಿಗಳನ್ನು ಮಾಡಲಾಗಿದೆ. 21ನೇ ಬ್ರಹ್ಮಾಂಡದಲ್ಲಿ ಕೂಡಾ ಎಡಭಾಗದಲ್ಲಿ ನಕಲಿ ಸತ್ಯಲೋಕ, ನಕಲಿ ಅಲಖ್ ಲೋಕ ಮತ್ತು ನಕಲಿ ಆಗಮ ಲೋಕ, ನಕಲಿ ಅನಾಮಿ ಲೋಕದ ರಚನೆಯು ಪ್ರಾಣಿಗಳನ್ನು ಮೋಸದಲ್ಲಿಡುತ್ತದೆ. ಈ ಲೋಕಗಳು ಆದಿಮಾಯಾ (ದುರ್ಗಾ) ದೇವಿಯಿಂದ ರಚಿಸಲ್ಪಟ್ಟಿದೆ ಮತ್ತು ಬಲಭಾಗದಲ್ಲಿ 12 ಸರ್ವಶ್ರೇಷ್ಠ ಬ್ರಹ್ಮ ಸಾಧಕರನ್ನು (ಭಕ್ತರನ್ನು) ಇಡಲಾಗಿದೆ. ಮತ್ತೆ ಪ್ರತ್ಯೇಕ ಯುಗದಲ್ಲಿ ಅವರನ್ನು ಸಂದೇಶವಾಹಕ(ಸಂತ ಸದ್ಗುರು)ರನ್ನಾಗಿ ಮಾಡಿ ಪೃಥ್ವಿಗೆ ಕಳುಹಿಸಿಕೊಡಲಾಗುವುದು. ಯಾರು ಶಾಸ್ತ್ರರಹಿತ ಸಾಧನೆ ಮತ್ತು ಜ್ಞಾನವನ್ನು ಹೇಳುತ್ತಾರೋ, ಅವರು ಸ್ವತಃ ಭಕ್ತಿರಹಿತರಾಗಿ ಬಿಡುತ್ತಾರೆ ಮತ್ತು ಅನುಯಾಯಿಗಳನ್ನು ಕೂಡಾ ಕಾಲನ ಜಾಲದಲ್ಲಿ ಸಿಕ್ಕಿ ಹಾಕಿಕೊಳ್ಳುವಂತೆ ಮಾಡಿಬಿಡುತ್ತಾರೆ ಮತ್ತು ಆ ಗುರುಗಳು ಹಾಗೂ ಅನುಯಾಯಿಗಳು ಇಬ್ಬರೂ ನರಕಕ್ಕೆ ಹೋಗುವರು. ಮತ್ತು ಎದುರಿಗೆ ಒಂದು ಬೀಗವನ್ನು ಹಾಕಿರುವ ದಾರಿ ಕಾಣಿಸುವುದು. ಆ ದಾರಿಯು ಕಾಲ(ಬ್ರಹ್ಮ)ನ ಸ್ವಂತ ಲೋಕಕ್ಕೆ ಹೋಗುವುದು. ಅಲ್ಲಿ ಈ ಬ್ರಹ್ಮನು (ಕಾಲ) ತನ್ನ ವಾಸ್ತವಿಕ ಮಾನವ ಸದೃಶ ಕಾಲ ರೂಪದಲ್ಲಿ ಇರುವನು. ಆ ಸ್ಥಾನದಲ್ಲಿ ಒಂದು ಕಲ್ಲಿನ ಸಣ್ಣಭಾಗವನ್ನು ದೋಸೆಯ ಹೆಂಚಿನ ಆಕಾರದಲ್ಲಿ ರಚಿಸಿ ಇರಿಸಲಾಗಿರುತ್ತದೆ. (ಚಪಾತಿ ಮೊದಲಾದವನ್ನು ಬೇಯಿಸಲು ಕಬ್ಬಿಣದ ವೃತ್ತಾಕಾರದ ಪ್ಲೇಟ್‌ನ ರೀತಿಯಲ್ಲಿರುತ್ತದೆ) ಅದು ಯಾವಾಗಲೂ ಶಾಖವಾಗಿರುತ್ತದೆ. ಅದರ ಮೇಲೆ ಒಂದು ಲಕ್ಷ ಮಾನವ ಶರೀರಧಾರಿ ಪ್ರಾಣಿಗಳ ಸೂಕ್ಷ್ಮ ಶರೀರವನ್ನು ಹುರಿದು ಅದರಿಂದ ಕೊಳಕನ್ನು ತೆಗೆದುಹಾಕಿ ತಿನ್ನುವನು. ಆ ಸಮಯದಲ್ಲಿ ಸೂಕ್ಷ್ಮ ಶರೀರಗಳು ಬಹಳ ಕಷ್ಟವನ್ನು ಅನುಭವಿಸುತ್ತವೆ ಮತ್ತು ಹಾಹಾಕಾರವೆಸಗುತ್ತವೆ. ಮತ್ತೆ ಸ್ವಲ್ಪ ಸಮಯದ ನಂತರ

ಅವುಗಳು ಮೂರ್ಛೆ ತಪ್ಪಿ ಬಿಡುತ್ತವೆ. ಜೀವ ಸಾಯುವುದಿಲ್ಲ. ನಂತರ ಧರ್ಮರಾಯನ ಲೋಕದಲ್ಲಿ ಪ್ರವೇಶ ಮಾಡಿ ತಮ್ಮ ಕರ್ಮಾನುಸಾರವಾಗಿ ಅನ್ಯ ಜನ್ಮವನ್ನು ಪಡೆಯುತ್ತವೆ. ಹೀಗೆ ಜನ್ಮ–ಮೃತ್ಯುಗಳ ಚಕ್ರ ನಡೆಯುತ್ತಿರುತ್ತದೆ. ಮೇಲೆ ಹೇಳಿರುವ, ಹಾಗೂ ಹಾಕಿರುವ ಬೀಗವನ್ನು ಬ್ರಹ್ಮ (ಕಾಲ) ಕೇವಲ ತನ್ನ ಆಹಾರವಾಗುವ ಪ್ರಾಣಿಗಳಿಗೋಸ್ಕರ ಕೆಲವು ಕ್ಷಣಗಳ ಕಾಲ ತೆಗೆದಿರುತ್ತಾನೆ. ಪೂರ್ಣ ಪರಮಾತ್ಮನ ಸತ್ಯನಾಮ ಮತ್ತು ಸಾರನಾಮದಿಂದ ಈ ಬೀಗವು ಸ್ವತಃ ತೆರೆದುಕೊಳ್ಳುತ್ತದೆ. ಈ ರೀತಿಯ ಕಾಲನ ಜಾಲವನ್ನು ಪೂರ್ಣ ಪರಮಾತ್ಮ ಕವಿರ್ದೇವ (ಕಬೀರ್ ಸಾಹೇಬ)ನು ಸ್ವತಃ ತನ್ನ ಭಕ್ತನಾದ ಧರ್ಮದಾಸನಿಗೆ ತಿಳಿಸಿ ಹೇಳಿದನು.

## "ಪರಬ್ರಹ್ಮನ ಏಳು ಸಂಖ ಬ್ರಹ್ಮಾಂಡಗಳ ಸ್ಥಾಪನೆ"

ಕಬೀರ್ ಪರಮೇಶ್ವರ ಕವಿರ್ದೇವರು ಮುಂದೆ ಹೀಗೆ ಹೇಳಿದರು. ಪರಬ್ರಹ್ಮ (ಅಕ್ಷರ ಪುರುಷ)ನು ತನ್ನ ಕಾರ್ಯದಲ್ಲಿ ಉದಾಸೀನ ಮಾಡಿದನು. ಏಕೆಂದರೆ ಇವನು ಮಾನಸ ಸರೋವರದಲ್ಲಿ ಮಲಗಿಬಿಟ್ಟಿದ್ದನು ಪರಮೇಶ್ವರ(ನಾನು ಅಂದರೆ ಕಬೀರ್ ಸಾಹೇಬ್)ರು ಆ ಸರೋವರದಲ್ಲಿ ಮೊಟ್ಟೆಯನ್ನು ಮುಳುಗಿಸಿದಾಗ ಅಕ್ಷರ ಪುರುಷ (ಪರಬ್ರಹ್ಮ)ನು ಆತನನ್ನು ಕೋಪದಿಂದ ನೋಡಿದನು. ಈ ಎರಡು ಅಪರಾಧದ ಕಾರಣ ಈತನನ್ನು ಕೂಡಾ ಏಳು ಬ್ರಹ್ಮಾಂಡಗಳ ಸಹಿತ ಸತ್ಯಲೋಕದಿಂದ ಹೊರ ಹಾಕಲಾಯಿತು. ಅನ್ಯ ಕಾರಣವೇನೆಂದರೆ ಅಕ್ಷರ ಪುರುಷನು (ಪರಬ್ರಹ್ಮ) ತನ್ನ ಜೊತೆಗಾರನಾದ ಬ್ರಹ್ಮ (ಕ್ಷರಪುರುಷ) ನಿಂದ ದೂರ ಹೋಗಬೇಕಾದ್ದರಿಂದ ವ್ಯಾಕುಲನಾಗಿ ಪರಮಪಿತ ಕವಿರ್ದೇವ (ಕಬೀರ ಪರಮೇಶ್ವರ)ನ ಧ್ಯಾನವನ್ನು ಮರೆತು ಕ್ಷರಪುರುಷನ ನೆನಪಿನಲ್ಲಿರತೊಡಗಿದನು. ಮತ್ತು ಕ್ಷರ ಪುರುಷನು ತುಂಬಾ ಆನಂದದಿಂದ ಕಾಲ ಕಳೆಯುತ್ತಿರಬಹುದು ಎಂದು ಯೋಚಿಸತೊಡಗಿದನು. ಜೊತೆಯಲ್ಲಿ ಅವನು ಸ್ವತಂತ್ರವಾಗಿ ರಾಜ್ಯಭಾರ ಮಾಡುತ್ತಿರುವನು. ನಾನು ಮಾತ್ರ ಅವನಿಗಿಂತ ಹಿಂದೆ ಉಳಿದುಬಿಟ್ಟಿರುವೆ ಮತ್ತು ಪರಬ್ರಹ್ಮನ ಜೊತೆಯಲ್ಲಿ 7 ಸಂಖ ಬ್ರಹ್ಮಾಂಡಗಳಲ್ಲಿ ಜನ್ಮ–ಮೃತ್ಯುಗಳ ಕರ್ಮಕಾಂಡವನ್ನು ಅನುಭವಿಸುತ್ತಿರುವ ಕೆಲವು ಆತ್ಮಗಳು, ಬ್ರಹ್ಮ(ಕಾಲ)ನ ಜೊತೆಯಲ್ಲಿ 21 ಬ್ರಹ್ಮಾಂಡಗಳಲ್ಲಿ ಸಿಲುಕಿದ ಹಂಸ ಆತ್ಮಗಳಿದ್ದವೋ ಅವುಗಳು ದೂರವಾಗುವಿಕೆಯ ಬಗ್ಗೆ ಯೋಚಿಸುತ್ತಿದ್ದವು ಮತ್ತು ಪೂರ್ಣ ಪರಮಾತ್ಮಾ, ಸುಖದಾಯಿ ಕವಿರ್ದೇವರ ಧ್ಯಾನವನ್ನು ಮರೆತೇಬಿಟ್ಟವು. ಪರಮೇಶ್ವರ ಕವಿರ್ ದೇವರು ಪ್ರತೀ ಸಾರಿ ತಿಳುವಳಿಕೆ ನೀಡಿದರೂ ಈ ವಿಷಯಗಳ ಬಗ್ಗೆ (ದೂರವಾಗುವಿಕೆ) ಆಸಕ್ತಿ (ಆಸೆ) ಕಡಿಮೆಯಾಗಲಿಲ್ಲ. ಪರಬ್ರಹ್ಮ (ಅಕ್ಷರ ಪುರುಷ)ನು ನಾನು ಪ್ರತ್ಯೇಕ ಸ್ಥಾನವನ್ನು ಪಡೆದರೆ ಚೆನ್ನಾಗಿರುತ್ತದೇನೋ ಎಂದು ಯೋಚಿಸಿದನು. ಹೀಗೆ ಯೋಚಿಸಿದ ನಂತರ ರಾಜ್ಯ ಪ್ರಾಪ್ತಿಯ ಇಚ್ಛೆಯಿಂದ ಸಾರನಾಮದ ಜಪ ಮಾಡಲು ಪ್ರಾರಂಭಿಸಿದನು.

ಈ ರೀತಿಯಾಗಿ ಅನ್ಯ ಆತ್ಮಗಳು (ಪರಬ್ರಹ್ಮನ ಏಳು ಸಂಖ ಬ್ರಹ್ಮಾಂಡಗಳಲ್ಲಿ ಸಿಲುಕಿದ ಆತ್ಮಗಳು) ಬ್ರಹ್ಮನ ಜೊತೆಯಲ್ಲಿ ಹೋದ ಆತ್ಮಗಳು ಅಲ್ಲಿ ಆನಂದದಿಂದ ಕಾಲ ಕಳೆಯುತ್ತವೆ, ನಾವು ಮಾತ್ರ ಹಿಂದೆ ಉಳಿದು ಬಿಟ್ಟೆವು ಎಂದು ಯೋಚಿಸತೊಡಗಿದವು. ಪರಬ್ರಹ್ಮನ ಮನದಲ್ಲಿ ಈ ರೀತಿಯ ವಿಷಯ ಬಹಳ ಬಲವಾಗಿ ಕುಳಿತುಬಿಟ್ಟಿತು. ಅದೇನೆಂದರೆ ಕ್ಷರ ಪುರುಷ ಬೇರೆಯಾಗಿ ಬಹಳ ಸುಖಿಯಾಗಿ ಇರುವನು. ಪರಬ್ರಹ್ಮ (ಅಕ್ಷರ ಪುರುಷ)ನು ಹೀಗೆ ಯೋಚಿಸಿ ಅಂತರಾತ್ಮದಲ್ಲಿ ಭಿನ್ನ (ಬೇರೆ)ಸ್ಥಾನವನ್ನು ಪಡೆಯಲು ಹಠ ತೊಟ್ಟನು. ಪರಬ್ರಹ್ಮ(ಅಕ್ಷರಪುರುಷ)ನು ಹಠಯೋಗ ಮಾಡಲಿಲ್ಲ. ಆದರೆ ಕೇವಲ ಬೇರೆ ರಾಜ್ಯದ ಪ್ರಾಪ್ತಿಗೋಸ್ಕರ ಸಹಜ ಧ್ಯಾನಯೋಗವನ್ನು ವಿಶೇಷವಾದ ಆಸಕ್ತಿಯಿಂದ ಪಟ್ಟಾಗಿ ಕುಳಿತು ಮಾಡತೊಡಗಿದನು. ಬೇರೆ ಸ್ಥಾನವನ್ನು ಪಡೆಯಲು ಹುಚ್ಚನ ರೀತಿಯಲ್ಲಿ ಅಲ್ಲಿ ಇಲ್ಲಿ ವಿಹರಿಸತೊಡಗಿದನು. ಜೊತೆಯಲ್ಲಿ ಆಹಾರ–ಬಾಯಾರಿಕೆಗಳನ್ನು ತ್ಯಾಗ ಮಾಡಿದನು. ಬೇರೆ ಕೆಲವು ಆತ್ಮಗಳು, ಕಾಲಬ್ರಹ್ಮನ ಜೊತೆಯಲ್ಲಿ ಹೋದ ಆತ್ಮಗಳಪ್ರೇಮದಲ್ಲಿ ವ್ಯಾಕುಲಗೊಂಡಿದ್ದವು.

ಅವುಗಳು ಅಕ್ಷರ ಪುರುಷನ ವೈರಾಗ್ಯದ ಮೇಲೆ ಆಸಕ್ತಿಯನ್ನು ಹೊಂದಿ ಆತನನ್ನು ಬಯಸತೊಡಗಿದವು. ಪೂರ್ಣ ಪ್ರಭುವು ಕೇಳಿದಾಗ ಪರಬ್ರಹ್ಮನು ತನಗೂ ಮತ್ತು ಕೆಲವು ಹಂಸಾತ್ಮಗಳಿಗೂ ಪ್ರತ್ಯೇಕ ಸ್ಥಳವನ್ನು ಬೇಡಿಕೊಂಡನು. ಆಗ ಕವಿರ್ದೇವನು ಹೀಗೆ ಹೇಳಿದನು. "ಯಾವ ಆತ್ಮಗಳು ನಿಮ್ಮ ಜೊತೆಯಲ್ಲಿ ಬರಲು ಇಚ್ಛಿಸುವುವೋ ಅವುಗಳನ್ನು ಕಳುಹಿಸಿಕೊಡುವೆನು". ಪೂರ್ಣ ಪ್ರಭು ನಂತರ ಹಂಸಾತ್ಮಗಳನ್ನು ಕೇಳಿದನು, "ಯಾರು ಪರಬ್ರಹ್ಮನ ಜೊತೆಯಲ್ಲಿ ಹೋಗಲು ಇಚ್ಛಿಸುವಿರೋ, ಅವುಗಳು ಒಪ್ಪಿಗೆಯನ್ನು ಸೂಚಿಸಿರಿ". ಬಹಳಷ್ಟು ಸಮಯದ ನಂತರ ಒಂದು ಹಂಸಾತ್ಮವು ತನ್ನ ಸ್ವೀಕೃತಿಯನ್ನು ಸೂಚಿಸಿತು. ನಂತರ ನೋಡು ನೋಡುತ್ತಿದ್ದಂತೆ ಅಲ್ಲಿದ್ದ ಎಲ್ಲಾ ಆತ್ಮಗಳೂ ಕೂಡಾ ತಮ್ಮ ಸಹಮತವನ್ನು ವ್ಯಕ್ತಗೊಳಿಸಿದವು. ಸರ್ವಪ್ರಥಮವಾಗಿ ಯಾವ ಹಂಸವು ಸ್ವೀಕೃತಿಯನ್ನು ಸೂಚಿಸಿತ್ತೋ, ಆ ಹಂಸವನ್ನು ಸ್ತ್ರೀಯನ್ನಾಗಿ ಮಾಡಿ ಆಕೆಗೆ ಈಶ್ವರೀ ಮಾಯೆ (ಪ್ರಕೃತಿ ಸುರತಿ) ಎಂಬ ಹೆಸರನ್ನಿಡಲಾಯಿತು. ಮತ್ತು ಉಳಿದ ಆತ್ಮಗಳನ್ನು ಆಕೆಯಲ್ಲಿ ಪ್ರವೇಶ ಮಾಡುವಂತೆ ಮಾಡಿ ಅಚಿಂತನ ಮೂಲಕ ಅಕ್ಷರ ಪುರುಷನ (ಪರಬ್ರಹ್ಮ)ನ ಬಳಿಗೆ ಕಳುಹಿಸಲಾಯಿತು. (ಪತಿವ್ರತಾ ಸ್ಥಾನದಿಂದ ಕೆಳಗಿಳಿಯುವ ಸಜೆಯನ್ನು ನೀಡಲಾಯಿತು) ಹಲವಾರು ಯುಗಗಳವರೆಗೆ ಇಬ್ಬರೂ ಜೊತೆಯಲ್ಲಿ ಏಳು ಸಂಖ ಬ್ರಹ್ಮಾಂಡಗಳಲ್ಲಿ ವಾಸಿಸುತ್ತಿದ್ದರು. ಆದರೆ ಪರಬ್ರಹ್ಮನು ದುರ್ವ್ಯವಹಾರಗಳನ್ನು ಮಾಡಲಿಲ್ಲ. ಈಶ್ವರೀ ಮಾಯೆಯನ್ನು ಸ್ವ–ಇಚ್ಛೆಯಿಂದ ಅಂಗೀಕಾರ ಮಾಡಿ ಹಾಗೂ ತನ್ನ ಶಬ್ದಶಕ್ತಿಯಿಂದ ಉಗುರುಗಳಿಂದ ಸ್ತ್ರೀಯೋನಿಯನ್ನು (ಇಂದ್ರಿ) ರಚಿಸಿದನು. ಈಶ್ವರೀ ದೇವಿಯ ಒಪ್ಪಿಗೆಯಿಂದ ಸಂತಾನವು ಉತ್ಪತ್ತಿಯಾಯಿತು. ಈ ಕಾರಣದಿಂದ ಪರಬ್ರಹ್ಮನ ಲೋಕದಲ್ಲಿ (ಏಳು ಸಂಖ ಬ್ರಹ್ಮಾಂಡ)ಪ್ರಾಣಿಗಳಿಗೆ ತಪ್ತಶಿಲೆಯ ಕಷ್ಟವಿಲ್ಲ ಹಾಗೂ ಅಲ್ಲಿ ಪಶು–ಪಕ್ಷಿಗಳು ಕೂಡಾ ಬ್ರಹ್ಮಲೋಕದ ದೇವತೆಗಳಿಂದ ಒಳ್ಳೆಯ ವ್ಯಕ್ತಿತ್ವವನ್ನು ಪಡೆದವು. ಆಯುಷ್ಯ ಕೂಡಾ ಬಹಳ ದೀರ್ಘವಾಗಿದೆ. ಆದರೆ ಜನ್ಮ–ಮೃತ್ಯು ಕರ್ಮಗನುಗುಣವಾಗಿ ಶಿಕ್ಷೆ ಮತ್ತು ಪರಿಶ್ರಮದಿಂದಲೇ ಹೊಟ್ಟೆಹೊರೆಯಬೇಕು. ಸ್ವರ್ಗ ಮತ್ತು ನರಕ ಕೂಡಾ ಹೀಗೆಯೇ ರಚನೆಯಾಯಿತು. ಪರಬ್ರಹ್ಮ (ಅಕ್ಷರ ಪುರುಷ) ನಿಗೆ ಏಳು ಸಂಖ ಬ್ರಹ್ಮಾಂಡಗಳನ್ನು ಅವನ ಇಚ್ಛೆಗನುಗುಣವಾಗಿ ಭಕ್ತಿ, ಧ್ಯಾನ ಅರ್ಥಾತ್ ಸಹಜ ಸಮಾಧಿವಿಧಿಯಿಂದಲೇ ನಿರ್ಮಾಣಮಾಡಲಾಯಿತು. ಆತನ ಗಳಿಕೆಯ ಪ್ರತಿಫಲದಿಂದಲೇ ಈ ಬ್ರಹ್ಮಾಂಡಗಳನ್ನು ನೀಡಲಾಯಿತು ಮತ್ತು ಸತ್ಯಲೋಕದಿಂದ ಭಿನ್ನವಾದ ಸ್ಥಾನದಲ್ಲಿ ಗೋಲಾಕಾರವಾದ ಪರಿಧಿಯೊಳಗೆ ಬಂಧಿಸಿ ಏಳು ಸಂಖ ಬ್ರಹ್ಮಾಂಡಗಳ ಸಹಿತ ಅಕ್ಷರಪುರುಷ ಮತ್ತು ಈಶ್ವರೀ ಮಾಯಾಳನ್ನು ಹೊರಹಾಕಲಾಯಿತು.

ಸತ್ಯಲೋಕ ಆದಿಯಲ್ಲಿ ಇರುವ ಅಸಂಖ್ಯ ಬ್ರಹ್ಮಾಂಡಗಳು ಮತ್ತು ಬ್ರಹ್ಮನ 21 ಬ್ರಹ್ಮಾಂಡಗಳು ಮತ್ತು ಪರಬ್ರಹ್ಮನ ಏಳು ಸಂಖ ಬ್ರಹ್ಮಾಂಡಗಳ ಪ್ರಭು (ಮಾಲಿಕ) ಪೂರ್ಣ ಬ್ರಹ್ಮ (ಸತ್ಯಪುರುಷ)ನಾಗಿದ್ದಾನೆ. ಅರ್ಥಾತ್ ಪರಮೇಶ್ವರ ಕವಿರ್ದೇವ ಕುಲದ ಒಡೆಯನಾಗಿದ್ದಾನೆ.

ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಮತ್ತು ಶ್ರೀ ಶಿವ ಆದಿ ದೇವತೆಗಳಿಗೆ ನಾಲ್ಕು–ನಾಲ್ಕು ಭುಜಗಳು ಮತ್ತು 16 ಕಲೆಗಳು ಇವೆ. ಪ್ರಕೃತಿ ದೇವಿ (ದುರ್ಗಾ)ಗೆ 8 ಭುಜಗಳು ಮತ್ತು 64 ಕಲೆಗಳಿವೆ. ಬ್ರಹ್ಮನಿಗೆ (ಕ್ಷರಪುರುಷ) ಒಂದು ಸಾವಿರ ಭುಜಗಳು ಇವೆ. ಒಂದು ಸಾವಿರ ಕಲೆಗಳು ಇವೆ ಹಾಗೂ ಬ್ರಹ್ಮನು 21 ಬ್ರಹ್ಮಾಂಡಗಳ ಪ್ರಭುವೂ ಆಗಿದ್ದಾನೆ. ಪರಬ್ರಹ್ಮ (ಅಕ್ಷರಪುರುಷ)ನಿಗೆ 10 ಸಾವಿರ ಭುಜಗಳಿವೆ ಮತ್ತು 10 ಸಾವಿರ ಕಲೆಗಳಿವೆ ಮತ್ತು ಅವನು ಏಳುಸಂಖ ಬ್ರಹ್ಮಾಂಡಗಳ ಮಾಲೀಕನಾಗಿದ್ದಾನೆ. ಪೂರ್ಣಬ್ರಹ್ಮ (ಪರಮ ಅಕ್ಷರಪುರುಷ ಅರ್ಥಾತ್ ಸತ್ಯಪುರುಷ)ನಿಗೆ ಅಸಂಖ್ಯ ಭುಜಗಳು ಮತ್ತು ಅಸಂಖ್ಯ ಕಲೆಗಳೂ ಇವೆ ಮತ್ತು ಬ್ರಹ್ಮನ 21 ಬ್ರಹ್ಮಾಂಡ ಪರಬ್ರಹ್ಮನ ಏಳು ಸಂಖ ಬ್ರಹ್ಮಾಂಡಗಳ ಸಹಿತ ಅಸಂಖ್ಯ ಬ್ರಹ್ಮಾಂಡಗಳ ಪ್ರಭುವಾಗಿದ್ದಾನೆ. ಪ್ರತಿಯೊಬ್ಬ ಪ್ರಭು ತನ್ನೆಲ್ಲಾ ಭುಜಗಳನ್ನು ಒಟ್ಟುಗೂಡಿಸಿ ಕೇವಲ ಎರಡು ಭುಜಗಳನ್ನೇ ಇಟ್ಟುಕೊಳ್ಳಬಹುದಾಗಿದೆ ಮತ್ತು ಯಾವಾಗ ಅವಶ್ಯಕತೆ ಬೀಳುತ್ತೋ ಆಗ ಆ ಎಲ್ಲಾ ಭುಜಗಳನ್ನು ಕೂಡಾ ಪ್ರಕಟಪಡಿಸಬಹುದಾಗಿದೆ. ಪೂರ್ಣ ಪರಮಾತ್ಮನು ಪರಬ್ರಹ್ಮನ

ಬ್ರಹ್ಮಾಂಡದಲ್ಲೂ ಬೇರೆಯೇ ಸ್ಥಾನವನ್ನು ರಚಿಸಿ ಬೇರೆ ರೂಪದಲ್ಲಿ ಗುಪ್ತನಾಗಿರುವನು. ನಾವು ಅದನ್ನು ಹೀಗೆ ಹೇಳಬಹುದು. ಒಂದು ತಿರುಗುವ ಕ್ಯಾಮರಾ ಹೊರಗಡೆ ಇಟ್ಟು ಒಳಗಡೆ ಟಿ.ವಿ. (ಟೆಲಿವಿಷನ್) ಇಟ್ಟಿರುತ್ತಾರೆ. ಟಿ.ವಿಯಲ್ಲಿ ಹೊರಗಡೆ ನಡೆಯುವ ಎಲ್ಲಾ ದೃಶ್ಯ ಕಂಡುಬರುತ್ತದೆ ಹಾಗಲ್ಲದೆ ಟಿವಿಯನ್ನು ಹೊರಗಿಟ್ಟು ಒಳಗಿನ ಕ್ಯಾಮೆರಾವನ್ನು ಸ್ಥಿರವಾಗಿ ಮಾಡಿ ಇಟ್ಟು ಬಿಟ್ಟರೆ, ಅದರಲ್ಲಿ ಕೇವಲ ಒಳಗೆ ಕುಳಿತಿರುವ ಪ್ರಬಂಧಕನ ಚಿತ್ರ ಕಂಡು ಬರುತ್ತದೆ. ಇದರಿಂದ ಎಲ್ಲಾ ಕರ್ಮಚಾರಿಗಳು ಎಚ್ಚರಿಕೆಯಿಂದಿರುವರು.

ಇದೇ ರೀತಿ ಪೂರ್ಣ ಪರಮಾತ್ಮ ತನ್ನ ಸತ್ಯಲೋಕದಲ್ಲಿ ಕುಳಿತುಕೊಂಡು ಎಲ್ಲರನ್ನು ನಿಯಂತ್ರಣಗೊಳಿಸಿದ್ದಾನೆ ಹಾಗೂ ಪ್ರತಿಯೊಂದು ಬ್ರಹ್ಮಾಂಡದಲ್ಲಿ ಕೂಡಾ ಸದ್ಗುರು ಕವಿರ್ದೇವ ಅಸ್ತಿತ್ವದಲ್ಲಿರುವನು. ಹೇಗೆಂದರೆ ಸೂರ್ಯ ದೂರದಲ್ಲಿದ್ದರೂ ಕೂಡಾ ತನ್ನ ಪ್ರಭಾವವನ್ನು ಬೇರೆಲ್ಲಾ ಲೋಕದಲ್ಲಿ ಬೀರುವನೋ ಹಾಗೆ.

## "ಪವಿತ್ರ ಅಥರ್ವಣವೇದದಲ್ಲಿ ಸೃಷ್ಟಿ ರಚನೆಗೆ ಆಧಾರ"

ಅಥರ್ವಣವೇದ ಕಾಂಡ ಸಂ. 4 ಅನುವಾಕ್ ಸಂ. 1 ಮಂತ್ರ ಸಂ. 1.

"ಬ್ರಹ್ಮ ಜಜ್ಞಾನಂ ಪ್ರಥಮಂ ಪುರಸ್ತಾದ್ ವಿ ಸೀಮತಃ ಸುರುಚೋ ವೇನ್ ಆವಃ ।
ಸಃ ಬುಧ್ನ್ಯಾ ಉಪಮಾ ಅಸ್ಯ ವಿಷ್ಠಾಃ ಸತಶ್ಚ ಯೋನಿಮಸತಶ್ಚ ವಿ ವಃ ॥"

**ಬ್ರಹ್ಮ–ಜ–ಜ್ಞಾನಂ–ಪ್ರಥಮಮ್–ಪುರಸ್ತಾತ್–ವಿಸಿಮತಃ–ಸುರಚಃ–ವೇನಃ–ಆವಃ–ಸಃ–ಬುಧ್ನ್ಯಾಃ–ಉಪಮಾ–ಅಸ್ಯ–ವಿಷ್ಠಾಃ–ಸತಃ–ಚ–ಯೋನಿಮ್–ಅಸತಃ–ಚ–ವಿ ವಃ**

ಅನುವಾದ :– (ಪ್ರಥಮಮ್) ಪ್ರಾಚೀನ ಅರ್ಥಾತ್ ಸನಾತನ (ಬ್ರಹ್ಮ) ಪರಮಾತ್ಮನು (ಜ) ಪ್ರತ್ಯಕ್ಷನಾಗಿ (ಜ್ಞಾನಮ್) ತನ್ನ ಬುದ್ಧಿವಂತಿಕೆಯಿಂದ (ಪುರಸ್ತಾತ್) ಶಿಖರದಲ್ಲಿ ಅಂದರೆ ಸತ್ಯಲೋಕ ಮುಂತಾದವುಗಳನ್ನು (ಸುರಚಃ) ತನ್ನ ಇಚ್ಛೆಯಿಂದ, ತುಂಬಾ ಆಸಕ್ತಿಯಿಂದ ಸ್ವ ಪ್ರಕಾಶಿತನಾಗಿ (ವಿಸಿಮತಃ) ಸೀಮಾರಹಿತನಾಗಿ ಅರ್ಥಾತ್ ವಿಶಾಲ ಪರಿಧಿಯನ್ನು ಹೊಂದಿದ ಭಿನ್ನ ಲೋಕಗಳಿಗೆ ಆ (ವೆನಃ) ನೇಕಾರನು ತಾನೇ ಅರ್ಥಾತ್ ಬಟ್ಟೆಯ ರೀತಿಯಲ್ಲಿ ನೇಯ್ದು (ಆವಃ) ಸುರಕ್ಷತೆಯನ್ನು ನೀಡಿದನು. (ಚ) ಮತ್ತು (ಸಃ) ಆ ಪೂರ್ಣ ಬ್ರಹ್ಮನೇ ಸರ್ವ ರಚನೆಯನ್ನೂ ಮಾಡುವವನು. (ಅಸ್ಯ) ಇದರಿಂದಲೇ ಆ (ಬುಧ್ನ್ಯಾಃ) ಮೂಲ ಮಾಲೀಕನು (ಯೋನಿಮ್) ಮೂಲಸ್ಥಾನವಾದ ಸತ್ಯಲೋಕದ ರಚನೆಯನ್ನು ಮಾಡಿದ್ದಾನೆ. (ಅಸ್ಯ) ಇದರ (ಉಪಮಾ) ಸದೃಶನಾಗಿ ಅರ್ಥಾತ್ ಒಟ್ಟಾಗಿ ಸೇರಿ (ನತಃ) ಅಕ್ಷರಪುರುಷ ಅರ್ಥಾತ್ ಪರಬ್ರಹ್ಮನ ಲೋಕದ ಕೆಲವು ಸ್ಥಿರ (ಚ) ಮತ್ತು (ಅಸತಃ) ಕ್ಷರಪುರುಷನ ಅಸ್ಥಾಯಿ ಲೋಕ ಮುಂತಾದವುಗಳ (ವಿ ವಃ) ಆವಾಸಸ್ಥಾನವನ್ನು ಭಿನ್ನವಾಗಿ (ವಿಷ್ಠಾಃ) ಸ್ಥಾಪಿಸಿದ್ದಾನೆ.

**ಭಾವಾರ್ಥ :– ಪವಿತ್ರ ವೇದಗಳನ್ನು ಹೇಳುವ ಬ್ರಹ್ಮನು (ಕಾಲ) ಈ ರೀತಿಯಾಗಿ ಹೇಳುತ್ತಿದ್ದಾನೆ ಏನೆಂದರೆ, "ಸನಾತನ ಪರಮೇಶ್ವರನು ಸ್ವಂತ ಅನಾಮಯ (ಅನಾಮಿ) ಲೋಕದಿಂದ ಬಂದು ಸತ್ಯಲೋಕದಲ್ಲಿ ಪ್ರತ್ಯಕ್ಷನಾಗಿ ತನ್ನ ಬುದ್ಧಿವಂತಿಕೆಯಿಂದ ಬಟ್ಟೆಯ ರೀತಿಯಲ್ಲಿ ರಚನೆ ಮಾಡಿ ಮೇಲಿನ ಸತ್ಯಲೋಕಾದಿಗಳಿಗೆ ಸೀಮಾರಹಿತ ಸ್ವಪ್ರಕಾಶಿತ ಅಜರಾಮರ ಅರ್ಥಾತ್ ಅವಿನಾಶಿಯಾಗಿ ನೆಲೆಗೊಂಡನು ಮತ್ತು ಕೆಳಗಿನ ಪರಬ್ರಹ್ಮನ ಏಳು ಸಂಖ ಬ್ರಹ್ಮಾಂಡ ಮತ್ತು ಬ್ರಹ್ಮನ 21 ಬ್ರಹ್ಮಾಂಡ ಮತ್ತು ಇದರಲ್ಲಿ ಚಿಕ್ಕದರಲ್ಲಿ ಚಿಕ್ಕ ರಚನೆಯಲ್ಲಿ ಕೂಡಾ ಈ ಪರಮಾತ್ಮನ ಅಸ್ಥಾಯೀ ಲೋಕವನ್ನು ಸ್ಥಾಪಿಸಿದ್ದಾನೆ.**

**ಅಥರ್ವಣವೇದ ಕಾಂಡ ಸಂ. 4 ಅನುವಾಕ್ ಸಂ. 1 ಮಂತ್ರ ಸಂ. 2.**

ಇಯಂ ಪಿತ್ರ್ಯಾ ರಾಷ್ಟ್ರ್ಯೆತ್ವಗ್ರೆ ಪ್ರಥಮಾಯ ಜನುಷೆ ಭುವನೇಷ್ಠಾಃ ।

ತಸ್ಮಾ ಏತಂ ಸುರುಚಂ ಹಾರಮಹ್ಯಂ ಧರ್ಮಂ ಶ್ರೀಣಂತು ಪ್ರಥಮಾಯ ಧಾಸ್ಯವೆ ॥ 2 ॥

**ಇಯಮ್–ಪ್ರಿತ್ಯಾ–ರಾಷ್ಟ್ರಿ–ಏತು–ಅಗ್ರೆ–ಪ್ರಥಮಾಯ–ಜನುಷೆ–ಭುವನೇಷ್ಠಾ–ತಸ್ಮಾ–ಏತಮ್–ಸುರಚಮ್–ಹವಾರಮ್ಹ್ಯಾಮ್–ಧರ್ಮಮ್–ಶ್ರೀಣಾಂತು–ಪ್ರಥಮಾಯ್–ಧಾಸ್ಯವೆ**

ಅನುವಾದ :– (ಇಯಮ್) ಈ (ಪಿತ್ರ್ಯಾ) ಜಗತ್‌ಪಿತಾ ಪರಮೇಶ್ವರನು (ಏತು) ಈ (ಅಗ್ರೆ) ಸರ್ವೋತ್ತಮನು (ಪ್ರಥಮಾಯ) ಎಲ್ಲದಕ್ಕಿಂತ ಮೊದಲು ಆಕರ್ಷಣ ಶಕ್ತಿ ಎಂದು ಕರೆಯಲ್ಪಡುವ ಮಾಯಾ ಪರಾನಂದನೀ (ರಾಷ್ಟ್ರಿ) ರಾಜೇಶ್ವರಿ ಶಕ್ತಿ ಅರ್ಥಾತ್ ಪರಾಶಕ್ತಿ, ಅವಳನ್ನು (ಜನುಷ) ಉತ್ಪನ್ನ ಮಾಡಿ (ಭುವನೇಷ್ಠಾಃ) ಲೋಕಸ್ಥಾಪನೆ ಮಾಡಿದನು. (ತಸ್ಮಾ) ಅದೇ ಪರಮೇಶ್ವರನು (ಸುರುಚಮ್) ತುಂಬಾ ಆಸಕ್ತಿಯಿಂದ, ಸ್ವೇಚ್ಛೆಯಿಂದ (ಸ್ವತಂತ್ರವಾಗಿ) (ಏತಮ್) ಈ (ಪ್ರಥಮಾಯ) ಪ್ರಥಮ ಉತ್ಪತ್ತಿಯ ಶಕ್ತಿ ಅರ್ಥಾತ್ ಪರಾಶಕ್ತಿಯ ಮುಖಾಂತರ (ಹಾರಮಹ್ಯಾಮ್) ಒಬ್ಬರು ಇನ್ನೊಬ್ಬರ ವಿಯೋಗವನ್ನು ತಡೆಯುವ ಅರ್ಥಾತ್ ಆಕರ್ಷಣ ಶಕ್ತಿಯ (ಶ್ರೀಣಾಂತು) ಗುರುತ್ವ ಆಕರ್ಷಣೆಯನ್ನು ಪರಮಾತ್ಮನೇ ಆದೇಶ ನೀಡಿ ಸದಾ ಇರುವ ಯಾವತ್ತಿಗೂ ಸಮಾಪ್ತಿಯಾಗದೇ ಇರುವಂತಹ (ಧರ್ಮಮ್) ಸ್ವಭಾವದಿಂದ (ಧಾಸ್ಯವೆ) ಧಾರಣೆಯನ್ನು ಮಾಡಿದನು ಅರ್ಥಾತ್ ಬಟ್ಟೆಯ ರೀತಿಯಲ್ಲಿ ನೇಯ್ದು ತಡೆಹಿಡಿದಿದ್ದಾನೆ.

**ಭಾವಾರ್ಥ :– ಜಗತ್ ಪಿತಾ ಪರಮೇಶ್ವರನು ತನ್ನ ಶಬ್ದಶಕ್ತಿಯಿಂದ ರಾಷ್ಟ್ರೀ ಅರ್ಥಾತ್ ಎಲ್ಲದಕ್ಕಿಂತಲೂ ಮೊದಲು ಮಾಯಾ ರಾಜೇಶ್ವರಿಯನ್ನು ಉತ್ಪನ್ನ ಮಾಡಿ ಮತ್ತು ಅದೇ ಪರಾಶಕ್ತಿಯ ಮುಖಾಂತರ ಒಬ್ಬರನ್ನೊಬ್ಬರ ಆಕರ್ಷಣಾ ಶಕ್ತಿಯಿಂದ ತಡೆಹಿಡಿಯುವ ಮತ್ತು ಯಾವತ್ತಿಗೂ ಕಡಿಮೆಯಾಗದ ಗುಣದಿಂದ ಮೇಲೆ ಹೇಳಿರುವ ಎಲ್ಲಾ ಬ್ರಹ್ಮಾಂಡವನ್ನು ಸ್ಥಾಪಿಸಿದನು.**

**ಅಥರ್ವಣವೇದ ಕಾಂಡ ಸಂ. 4. ಅನುವಾಕ್ ಸಂ.1 ಮಂತ್ರ ಸಂ. 3.**

'ಪ್ರ ಯೋ ಜಜ್ಞೆ ವಿದ್ವಾನಸ್ಯ ಬಂಧುರ್ವಿಶ್ವ ದೇವಾನಾಂ ಜನಿಮಾ ವಿವಕ್ತಿ ।
ಬ್ರಹ್ಮ ಬ್ರಹ್ಮಣ ಉಜ್ಜಭಾರ ಮಧ್ಯಾನ್ನೀಚೈರುಚ್ಚೈಃ ಸ್ವಧಾ ಅಭಿ ಪ್ರ ತಸ್ಥೌ ॥ 3 ॥

**ಪ್ರ ಯಃ – ಜಜ್ಞೆ– ವಿದ್ವಾನಸ್ಯ – ಬಂಧುಃ – ವಿಶ್ವಾ – ದೇವಾನಾಮ್ – ಜನಿಮಾ – ವಿವಕ್ತಿ– ಬ್ರಹ್ಮಃ – ಬ್ರಹ್ಮಣಃ – ಉಜ್ಜಾಭಾರ್ – ಮಧ್ಯಾತ್ – ನಿಚೈಃ –ಉಚ್ಚೈಃ – ಸ್ವಧಾ – ಅಭಿಃ – ಪ್ರತಸ್ಥೌ'**

ಅನುವಾದ :– (ಪ್ರ) ಸರ್ವ ಪ್ರಥಮ (ದೇವಾನಾಮ್) ದೇವತೆಗಳ ಮತ್ತು ಬ್ರಹ್ಮಾಂಡಗಳ (ಜಜ್ಞೆ) ಉತ್ಪತ್ತಿಯ ಜ್ಞಾನವನ್ನು (ವಿದ್ವಾನಸ್ಯ) ಜಿಜ್ಞಾಸು ಭಕ್ತನ (ಯಃ) ಯಾವ (ಬಂಧುಃ) ವಾಸ್ತವಿಕ ಜೊತೆಗಾರ ಅರ್ಥಾತ್ ಪೂರ್ಣ ಪರಮಾತ್ಮನೇ ತನ್ನ ನಿಜವಾದ ಸೇವಕನಿಗೆ (ಜನಿಮಾ) ತನ್ನ ಮೂಲಕ ಸೃಷ್ಟಿ ಮಾಡಲ್ಪಟ್ಟಿರುವುದನ್ನು (ವಿವಕ್ತಿ), ಸ್ವತಃ ತಾನೇ ಸರಿಯಾದ ರೀತಿಯಲ್ಲಿ ವಿಸ್ತಾರಪೂರ್ವಕವಾಗಿ ಹೇಳುತ್ತಾನೆ. ಅದೇನೆಂದರೆ (ಬ್ರಾಹ್ಮಣಃ) ಪೂರ್ಣ ಪರಮಾತ್ಮನು (ಮಧ್ಯಾತ್) ತನ್ನ ಮಧ್ಯದಿಂದ ಅರ್ಥಾತ್ ಶಬ್ದಶಕ್ತಿಯಿಂದ (ಬ್ರಹ್ಮಃ) ಬ್ರಹ್ಮ–ಕ್ಷರ ಪುರುಷ ಅರ್ಥಾತ್ ಕಾಲವನ್ನು (ಉಜ್ಜಭಾರ್) ಉತ್ಪನ್ನ ಮಾಡಿ (ವಿಶ್ವಾ) ಎಲ್ಲಾ ಪ್ರಪಂಚವನ್ನು ಅಂದರೆ ಸರ್ವ ಲೋಕಗಳಿಗೂ (ಉಚ್ಚೈಃ) ಮೇಲಿರುವ ಸತ್ಯಲೋಕದ ಮತ್ತು (ನಿಚ್ಚೈಃ) ಕೆಳಗಿನ ಪರಬ್ರಹ್ಮ ಮತ್ತು ಬ್ರಹ್ಮನ ಎಲ್ಲಾ ಬ್ರಹ್ಮಾಂಡಗಳನ್ನು (ಸ್ವಧಾ) ತನ್ನನ್ನು ಧರಿಸುವವಳ (ಅಭಿಃ) ಆಕರ್ಷಣಾ ಶಕ್ತಿಯಿಂದ (ಪ್ರ ತಸ್ಥೌ) ಎರಡನ್ನೂ ಒಳ್ಳೆಯ ರೀತಿಯಲ್ಲಿ ಸ್ಥಾಪಿತಗೊಳಿಸಿದನು.

**ಭಾವಾರ್ಥ:– ಪೂರ್ಣ ಪರಮಾತ್ಮನು ತನ್ನ ಮೂಲಕ ರಚಿಸಿದ ಸೃಷ್ಟಿಯ ಜ್ಞಾನವನ್ನು ಹಾಗೂ ಸರ್ವ ಆತ್ಮಗಳ ಉತ್ಪತ್ತಿಯ ಜ್ಞಾನವನ್ನು ತನ್ನ ನಿಜವಾದ ದಾಸನಿಗೆ ಸ್ವತಃ ತಾನೇ ಸರಿಯಾದುದನ್ನು ಹೇಳುತ್ತಿದ್ದಾನೆ. ಅದೇನೆಂದರೆ ಪೂರ್ಣ ಪರಮಾತ್ಮನು ತನ್ನ ಮಧ್ಯದಿಂದ ಅರ್ಥಾತ್ ತನ್ನ ಶರೀರದಿಂದ**

**ತನ್ನ ಶಬ್ದಶಕ್ತಿಯ ಮೂಲಕ ಬ್ರಹ್ಮ (ಕ್ಷರ ಪುರುಷ/ಕಾಲ)ನನ್ನು ಉತ್ಪತ್ತಿ ಮಾಡಿದನು. ಮತ್ತು ಸರ್ವ ಬ್ರಹ್ಮಾಂಡಗಳ ಮೇಲೆ ಸತ್ಯಲೋಕ, ಅಲಖ್ ಲೋಕ, ಆಗಮಲೋಕ, ಅನಾಮಿಲೋಕ ಮುಂತಾದವುಗಳನ್ನು ಮತ್ತು ಕೆಳಭಾಗದಲ್ಲಿ ಪರಬ್ರಹ್ಮನ ಏಳು ಸಂಖ ಬ್ರಹ್ಮಾಂಡ ಮತ್ತು ಬ್ರಹ್ಮನ 21 ಬ್ರಹ್ಮಾಂಡಗಳನ್ನು ತನ್ನನ್ನು ಧಾರಣೆಯನ್ನು ಮಾಡುವ ಆಕರ್ಷಣ ಶಕ್ತಿಯಿಂದ ರಚಿಸಿದನು. ಪೂರ್ಣ ಪರಮಾತ್ಮನು ಕಬೀರ ಪರಮೇಶ್ವರ (ಕವಿರ್ದೇವ)ನು ತನ್ನ ಸ್ವಂತ ಸೇವಕ ಅರ್ಥಾತ್ ಗೆಳೆಯನಾದ ಶ್ರೀ ಧರ್ಮದಾಸನಿಗೆ, ಗೌರವಾನ್ವಿತ ಗಬೀರದಾಸ್ ಮೊದಲಾದವರಿಗೆ ತನ್ನ ಮುಖಾಂತರ ಸೃಷ್ಟಿಸಿದ ಲೋಕದ ಜ್ಞಾನವನ್ನು ಸ್ವತಃ ತಾನೇ ಹೇಳಿದನು. ಮೇಲೆ ತಿಳಿಸಿರುವ ವೇದಮಂತ್ರವು ಕೂಡಾ ಇದನ್ನೇ ಸಮರ್ಥನೆ ನೀಡುತ್ತದೆ.**

**ಅಥರ್ವಣವೇದ ಕಾಂಡ ಸಂ. 4 ಅನುವಾಕ್ ಸಂ. 1 ಮಂತ್ರ ಸಂ. 4.**

ಸಃ ಹಿ ದಿವಃ ಸಃ ಪೃಥಿವ್ಯಾ ಋತಸ್ಥಾ ಮಹೀ ಕ್ಷೇಮಂ ರೋದಸೀ ಅಸ್ಕಭಾಯತ್ ।
ಮಹಾನ್ ಮಹೀ ಅಸ್ಕಭಾಯದ್ ವಿ ಜಾತೋ ಧ್ಯಾಂ ಸದ್ಮ ಪಾರ್ಥಿವಂ ಚ ರಜಃ ॥ 4 ॥

**ಹಿ–ದಿವಃ–ಸ–ಪೃಥಿವ್ಯಾ–ಋತಸ್ಥಾ–ಮಹೀ–ಕ್ಷೇಮಮ್–ರೋದಸೀ–ಅಸ್ಕಭಾಯತ್–ಮಹಾನ್–ಮಹೀ–ಅಸ್ಕಭಾಯದ್–ವಿಜಾತಃ–ಧಾಮ್–ಸದಮ್–ಪಾರ್ಥಿವಮ್–ಚ–ರಜಃ**

ಅನುವಾದ :– (ಸಃ) ಅದೇ ಸರ್ವ ಶಕ್ತಿವಂತ ಪರಮಾತ್ಮನು (ಹಿ) ನಿಸ್ಸಂದೇಹವಾಗಿ (ದಿವಃ) ಮೇಲಿನ ನಾಲ್ಕು ದಿವ್ಯಲೋಕದಂತೆ, ಸತ್ಯಲೋಕ, ಅಲಖ್ ಲೋಕ, ಆಗಮಲೋಕ ಮತ್ತು ಅನಾಮಿ ಅರ್ಥಾತ್ ಅಕಹ್ ಲೋಕ ಅರ್ಥಾತ್ ದಿವ್ಯ ಗುಣದಿಂದ ಯುಕ್ತವಾದ ಲೋಕಗಳನ್ನು (ರುತಸ್ಥಾ) ಸತ್ಯ ಸ್ಥಿರ ಅರ್ಥಾತ್ ಅಜರಾಮರ ರೂಪದಿಂದ ಸ್ಥಿರಗೊಳಿಸಿದನು (ಸ) ಅವುಗಳಿಗೆ ಸಮಾನವಾದ (ಪೃಥಿವ್ಯಾ) ಕೆಳಭಾಗದಲ್ಲಿ ಪೃಥ್ವಿಯ ಜನ ಸರ್ವಲೋಕಗಳ ಹಾಗೆ ಪರಬ್ರಹ್ಮನ ಏಳು ಸಂಖ ಮತ್ತು ಬ್ರಹ್ಮ/ಕಾಲನ 21 ಬ್ರಹ್ಮಾಂಡ (ಮಹೀ) ಗಳನ್ನು ಪೃಥ್ವಿಯ ತತ್ವದಿಂದ (ಕ್ಷೇಮಮ್) ಸುರಕ್ಷತೆಯಿಂದ (ಅಸ್ಕಭಾಯತ್) ಸ್ಥಾಪಿಸಿದನು. (ರೋದಸೀ) ಆಕಾಶ ತತ್ವ ಮತ್ತು ಪೃಥ್ವೀ ತತ್ವ ಇವೆರಡಕ್ಕೂ ಮೇಲೆ ಮತ್ತು ಕೆಳಗಿನ ಬ್ರಹ್ಮಾಂಡಗಳಿಗೆ (ಹೇಗೆ ಆಕಾಶ ಒಂದು ಸೂಕ್ಷ್ಮ ತತ್ವವಾಗಿದೆ. ಆಕಾಶದ ಗುಣವು ಶಬ್ದವಾಗಿದೆ. ಪೂರ್ಣ ಪರಮಾತ್ಮನು ಮೇಲಿನ ಲೋಕವನ್ನು ಶಬ್ದರೂಪದಲ್ಲಿ ರಚಿಸಿದನು. ಅದು ತೇಜಪುಂಜದಿಂದ ರಚಿಸಲ್ಪಟ್ಟಿದೆ ಮತ್ತು ಕೆಳಗಿನ ಪರಬ್ರಹ್ಮ (ಅಕ್ಷರ ಪುರುಷ)ನ ಏಳು ಸಂಖ ಬ್ರಹ್ಮಾಂಡಗಳು ಮತ್ತು ಬ್ರಹ್ಮ/ಕ್ಷರ ಪುರುಷನ 21 ಬ್ರಹ್ಮಾಂಡಗಳನ್ನು ಪೃಥ್ವೀ ತತ್ವದಿಂದ ಅಸ್ಥಾಯೀ ರೂಪದಲ್ಲಿ (ವಿನಾಶಿ) ರಚನೆ ಮಾಡಿದನು. (ಮಹಾನ್) ಪೂರ್ಣ ಪರಮಾತ್ಮನು (ಪಾರ್ಥಿವಮ್) ಪೃಥ್ವಿಯ ಜನರನ್ನು (ವಿ) ಬೇರೆ–ಬೇರೆ (ಧಾಮ್) ಲೋಕದಲ್ಲಿ (ಚ) ಮತ್ತು (ಸದಮ್) ಆವಾಸಸ್ಥಾನ (ಮಹೀ) ಪೃಥ್ವಿಯ ತತ್ವದಿಂದ (ರಜಃ) ಪ್ರತ್ಯೇಕ ಬ್ರಹ್ಮಾಂಡದಲ್ಲಿ ಚಿಕ್ಕ ಚಿಕ್ಕ ಲೋಕಗಳ (ಜಾತಃ) ರಚನೆಯನ್ನು ಮಾಡಿ (ಅಸ್ಕಭಾಯಾತ್) ಸ್ಥಿರಗೊಳಿಸಿದನು.

**ಭಾವಾರ್ಥ:– ಮೇಲಿನ ನಾಲ್ಕೂ ಲೋಕ–ಸತ್ಯಲೋಕ, ಅಲಖ್‌ಲೋಕ, ಆಗಮಲೋಕ, ಅನಾಮೀಲೋಕ, ಇದಂತೂ ಅಜರಾಮರ ಸ್ಥಾಯಿ ಸ್ಥಿತಿಯಲ್ಲಿದೆ ಅರ್ಥಾತ್ ಅವಿನಾಶಿ ರೂಪದಲ್ಲಿ ರಚಿಸಲಾಗಿದೆ ಮತ್ತು ಕೆಳಗಿನ ಬ್ರಹ್ಮ ಮತ್ತು ಪರಬ್ರಹ್ಮನ ಲೋಕಗಳ ಸ್ಥಿರವಲ್ಲದ ರಚನೆಯನ್ನು ಮಾಡಿ ಮತ್ತು ಸಣ್ಣ ಸಣ್ಣ ಲೋಕಗಳನ್ನು ಕೂಡಾ ಅದೇ ಪರಮೇಶ್ವರನು ರಚಿಸಿ ಸ್ಥಿರಗೊಳಿಸಿದನು.**

**ಅಥರ್ವಣವೇದ ಕಾಂಡ ಸಂ.4 ಅನುವಾಕ್ ಸಂ. 1 ಮಂತ್ರ–5.**

ಸಃ ಬುಧ್ನ್ಯಾದಾಷ್ಟ್ರ ಜನುಷೋಭ್ಯಗ್ರಂ ಬೃಹಸ್ಪತಿರ್ದೇವತಾ ತಸ್ಯ ಸಾಮ್ರಾಟ್।
ಅಹರ್ಯಚ್ಛುಕ್ರಂ ಜ್ಯೋತಿಷೊ ಜನಷ್ಟಾಥ್ ದ್ಯುಮಂತೋ ವಿ ವಸಂತು ವಿಪ್ರಾಃ॥5॥

**ಸಃ – ಬುಧ್ನ್ಯಾತ್ – ಆಷ್ಟ್ರ – ಜನುಷೇಃ – ಅಭಿ–ಅಗ್ರಮ್– ಬೃಹಸ್ಪತಿಃ – ದೇವತಾ–**

**ತಸ್ಯ–ಸಾಮ್ರಾಟ್ – ಅಹಃ – ಯತ್ – ಶುಕ್ರಮ್ – ಜ್ಯೋತಿಷಃ –ಜನಿಷ್ಟ – ಅಥ – ದ್ಯುಮಂತಃ – ವಿ– ವಸಂತು–ವಿಪ್ರಾಃ**

ಅನುವಾದ :–(ಸಃ) ಅದೇ (ಬುಧ್ನ್ಯಾತ್) ಮೂಲ ಮಾಲಿಕನಿಂದ (ಅಭಿ–ಅಗ್ರಮ್) ಸರ್ವಪ್ರಥಮ ಸ್ಥಾನದಲ್ಲಿ (ಆಷ್ಟ್ರ) ಅಷ್ಟಾಂಗಿ ಮಾಯಾ–ದುರ್ಗಾ ಅರ್ಥಾತ್ ಪ್ರಕೃತಿ ದೇವಿ (ಜನುಷೇಃ) ಉತ್ಪನ್ನಳಾದಳು. ಯಾಕೆಂದರೆ ಕೆಳಗಿನ ಪರಬ್ರಹ್ಮ ಮತ್ತು ಬ್ರಹ್ಮನ ಲೋಕಗಳಲ್ಲಿ ಪ್ರಥಮಸ್ಥಾನ ಸತ್ಯಲೋಕವಾಗಿದೆ. ಇದು ಮೂರನೆಯ ಧಾಮವೆಂದು ಕರೆಯಲ್ಪಡುತ್ತದೆ. (ತಸ್ಯ) ಈ ದುರ್ಗಾದೇವಿಯ ಮಾಲಿಕ ಇವನೇ. (ಸಮ್ರಾಟ) ರಾಜಾಧಿರಾಜ. (ಬೃಹಸ್ಪತಿಃ) ಎಲ್ಲರಿಗಿಂತಲೂ ದೊಡ್ಡ ಒಡೆಯ ಮತ್ತು ಜಗದ್ಗುರು (ದೇವತಾ) ಪರಮೇಶ್ವರನಾಗಿದ್ದಾನೆ. (ಯತ್) ಇದರಿಂದ (ಅಹಃ) ಎಲ್ಲರ ವಿಯೋಗವಾಯಿತು. (ಅಥ) ಇದರ ನಂತರ (ಜ್ಯೋತಿಷಃ) ಜ್ಯೋತಿರೂಪದ ನಿರಂಜನ ಅರ್ಥಾತ್ ಕಾಲನ (ಶುಕ್ರಮ್) ವೀರ್ಯ ಅರ್ಥಾತ್ ಬೀಜಶಕ್ತಿಯಿಂದ (ಜನಿಷ್ಟ) ದುರ್ಗಾಳ ಉದರದಲ್ಲಿ ಉತ್ಪನ್ನನಾಗಿ (ವಿಪ್ರಾಃ) ಭಕ್ತ ಆತ್ಮಗಳು (ವಿ) ಬೇರೆಯಾಗಿ (ದ್ಯುಮಂತ್) ಮನುಷ್ಯ ಲೋಕ ಮತ್ತು ಸ್ವರ್ಗ ಲೋಕಗಳಲ್ಲಿ ಜ್ಯೋತಿ ನರಂಜನನ ಆದೇಶದಿಂದ ದುರ್ಗೆಯು ಹೇಳಿದಳು, (ವಸಂತು) "ವಾಸರಾಗಿರಿ. ಅರ್ಥಾತ್ ಅವರು ವಾಸಿಸಲು ಪ್ರಾರಂಭಿಸಿದರು.

**ಭಾವಾರ್ಥ:– ಪೂರ್ಣ ಪರಮಾತ್ಮನು ಮೇಲಿನ ನಾಲ್ಕೂ ಲೋಕಗಳಿಗಿಂತ ಕೆಳಭಾಗದಲ್ಲಿರುವ ಎಲ್ಲದಕ್ಕಿಂತ ಪ್ರಥಮ ಅರ್ಥಾತ್ ಸತ್ಯಲೋಕದಲ್ಲಿ ಆಷ್ಟ್ರಾ ಅರ್ಥಾತ್ ಅಷ್ಟಾಂಗಿ (ಪ್ರಕೃತಿದೇವಿ/ ದುರ್ಗಾ) ಯನ್ನು ಉತ್ಪನ್ನ ಮಾಡಿದನು. ಇವನೇ ರಾಜಾಧಿರಾಜ, ಜಗದ್ಗುರು. ಪೂರ್ಣ ಪರಮೇಶ್ವರ (ಸತ್ಯಪುರುಷ)ನಾದ ಇವನಿಂದ ಎಲ್ಲರೂ ದೂರವಾದರು. ನಂತರ ಸರ್ವಪ್ರಾಣಿ ಜ್ಯೋತಿ ನಿರಂಜನ (ಕಾಲ)ನ (ವೀರ್ಯ) ಬೀಜದಿಂದ ದುರ್ಗಾಳ (ಆಷ್ಟ್ರಾ) ಗರ್ಭದಿಂದ ಹುಟ್ಟಿ ಸ್ವರ್ಗಲೋಕ ಮತ್ತು ಪೃಥ್ವಿಲೋಕದಲ್ಲಿ ವಾಸಿಸಲು ಪ್ರಾರಂಭಿಸಿದರು.**

**ಅಥರ್ವಣವೇದ ಕಾಂಡ ಸಂ.4 ಅನುವಾಕ್ ಸಂ. 1 ಮಂತ್ರ 6.**

"ನೂನಂ ತದಸ್ಯ ಕಾವ್ಯೋ ಹಿನೋತಿ ಮಹೋ ದೇವಸ್ಯ ಪೂರ್ವಸ್ಯ ಧಾಮ ।
ಏಷ ಜಜ್ಞೆ ಬಹುಭಿಃ ಸಾಕಮಿತ್ಥಾ ಪೂರ್ವೆ ಅರ್ಧೆ ವಿಷಿತೆ ಸಸನ್ ನು ॥ 6 ॥

**ನೂನಮ್–ತತ್–ಅಸ್ಯ–ಕಾವ್ಯಃ–ಮಹಃ–ದೇವಸ್ಯ–ಪೂರ್ವಸ್ಯ–ಧಾಮ್–ಹಿನೋತಿ–ಪೂರ್ವೆ–ವಿಷಿತೆ–ಏಷ–ಜಜ್ಞೆ–ಬಹುಭಿಃ–ಸಾಕಮ್–ಇತ್ಥಾ–ಅರ್ಧೆ–ಸಸನ್–ನು**

ಅನುವಾದ :– (ನೂನಮ್) ನಿಸ್ಸಂದೇಹವಾಗಿ (ತತ್) ಅವನು ಪೂರ್ಣ ಪರಮೇಶ್ವರನು ಅರ್ಥಾತ್ ತತ್‌ಬ್ರಹ್ಮನೇ ಹೌದು (ಅಸ್ಯ) ಈ (ಕಾವ್ಯಃ) ಯಾವ ಭಕ್ತಾತ್ಮ ಪೂರ್ಣ ಪರಮೇಶ್ವರನ ಭಕ್ತಿಯನ್ನು ವಿಧಿವತ್ತಾಗಿ ಮಾಡುತ್ತಾನೋ ಅವನನ್ನು ಮರಳಿ (ಮಹಃ) ಸರ್ವಶಕ್ತಿವಂತ (ದೇವಸ್ಯ) ಪರಮೇಶ್ವರನ (ಪೂರ್ವಸ್ಯ) ಮೊದಲನೆ (ಧಾಮ) ಲೋಕದಲ್ಲಿ ಅರ್ಥಾತ್ ಸತ್ಯಲೋಕಕ್ಕೆ (ಹಿನೋತಿ) ಕಳುಹಿಸುವನು.

(ಪೂರ್ವೇ) ಮೊದಲನೆಯವನು (ವಿಷಿತೆ) ವಿಶೇಷವಾಗಿ ಬಯಸುವ (ಏಷ) ಈ ಪರಮೇಶ್ವರನಿಗೆ ಮತ್ತು (ಜಜ್ಞೆ) ಸೃಷ್ಟಿ ಉತ್ಪತ್ತಿಯ ಜ್ಞಾನವನ್ನು ಅರಿತುಕೊಂಡು (ಬಹು ಭಿಃ) ಬಹಳ ಆನಂದ (ಸಾಕಮ್) ದಿಂದ (ಅರ್ಧೆ) ಅರ್ಧ (ಸಸನ್) ನಿದ್ರಿಸುತ್ತಾ (ಇತ್ಥಾ) ವಿಧಿವತ್ತಾಗಿ, ಹೀಗೆ ನಿಜವಾದ ಆತ್ಮವನ್ನು ಸ್ತುತಿಸುತ್ತಾನೆ.

**ಭಾವಾರ್ಥ :– ಆ ಪೂರ್ಣ ಪರಮೇಶ್ವರನು ನಿಜವಾದ ಸಾಧನೆ ಮಾಡುವ ಸಾಧಕನನ್ನು ಅದೇ ಮೊದಲನೆಯ ಸ್ಥಾನವೆಂದರೆ ಸತ್ಯಲೋಕಕ್ಕೆ ಅಂದರೆ ಎಲ್ಲಿಂದ ದೂರವಾಗಿ ಬಂದಿರುವನೋ ಅಲ್ಲಿಗೆ**

**ಕರೆದುಕೊಂಡು ಬರುವನು. ಅಲ್ಲಿ ವಾಸ್ತವಿಕ ಹಾಗೂ ನಿಜವಾದ ಸುಖವನ್ನು ನೀಡುವ ಭಗವಂತನನ್ನು ಪಡೆದ ಆತ್ಮವು ಅಪಾರವಾದ ಆನಂದದಿಂದ, ಸಂತೋಷದಿಂದ ಸ್ತುತಿಯನ್ನು ಮಾಡುವುದು. ಹೇಗೆಂದರೆ "ಹೇ, ಪರಮಾತ್ಮಾ, ಅಸಂಖ್ಯ ಜನ್ಮಗಳಿಂದ ತಪ್ಪುಗಳನ್ನು ಮಾಡಿ ಅಲ್ಲಿ ಇಲ್ಲಿ ಸುತ್ತಾಡುತ್ತಾ ಇದ್ದವರಿಗೆ ವಾಸ್ತವಿಕ ನೆಲೆಯು ದೊರೆತಿದೆ. ಇದರ ಆಧಾರವು ನಮಗೆ ಪವಿತ್ರವಾದ ಋಗ್ವೇದ ಮಂಡಲ 10 ಸೂಕ್ತಿ 90 ಮಂತ್ರ 16ರಲ್ಲಿ ಕೂಡಾ ಸಿಕ್ಕಿದೆ :–**

**ಗೌರವಾನ್ವಿತ ಗರೀಬ್‌ದಾಸರಿಗೆ ಈ ರೀತಿಯಾಗಿ ಪೂರ್ಣ ಪರಮಾತ್ಮ ಕವಿರ್ದೇವ (ಕಬೀರ್ ಪರಮೇಶ್ವರ) ಸ್ವಯಂ ಸತ್ಯಭಕ್ತಿಯನ್ನು ನೀಡಿ ಸತ್ಯಲೋಕಕ್ಕೆ ಕರೆದುಕೊಂಡು ಹೋದರು. ಆಗ ತಮ್ಮ ಅಮೃತವಾಣಿಯಲ್ಲಿ ಗೌರವಾನ್ವಿತ ಗರೀಬ್‌ದಾಸರು ತಾವು ತಮ್ಮ ಕಣ್ಣಿಂದ ನೋಡಿದ್ದನ್ನು ಹೀಗೆ ಹೇಳಿದರು.**

ಗರೀಬ್, ಅಜಬ್ ನಗರ್ ಮೆಂ ಲೆ ಗಯೆ, ಹಮ್‌ಕುಂ ಸತ್‌ಗುರು ಆನ್ ।
ಝಿಲಕೆ ಬಿಂಬ್ ಅಗಾಧ್ ಗತಿ, ಸುತೆ ಚಾದರ್ ತಾನ್ ॥

**ಅಥರ್ವವೇದ ಕಾಂಡ ಸಂ. 4 ಅನುವಾಕ್ ಸಂ. 1 ಮಂತ್ರ ಸಂ. 7.**

ಯೋಥರ್ವಾಣಂ ಪಿತ್ತರಂ ದೇವಬಂಧುಂ ಬೃಹಸ್ಪತಿಂ ನಮಸಾವ್ ಚ ಗಚ್ಛಾತ್
ತ್ವಂ ವಿಶ್ವೇಷಾಂ ಜನಿತಾ ಯಥಾಸಃ ಕವಿರ್ದೇವೋ ನ ದಭಾಯತ್ ಸ್ವಧಾವಾನ್ ॥ 7 ॥

**ಯಃ–ಅಥರ್ವಾಣಮ್–ಪಿತ್ತರಮ್–ದೇವಬಂಧುಂ–ಬೃಹಸ್ಪತಿಂ–ನಮಸಾ–ಅವ–ಚ–**

**ಗಚ್ಛಾತ್–ತ್ವಮ್–ವಿಶ್ವೇಷಾಂ–ಜನಿತಾ–ಯಥಾ–ಸಃ–ಕವಿರ್ದೇವ–ನ–ದಭಾಯತ್–ಸ್ವಧಾವಾನ್.**

ಅನುವಾದ :– (ಯಃ) ಯಾರು (ಅಥರ್ವಾಣಂ)–ಅಚಲರೋ ಅರ್ಥಾತ್ ಅವಿನಾಶಿಯೋ (ಪಿತ್ತರಂ) ಅವನು ಜಗತ್ ಪಿತಾ (ದೇವಬಂಧುಂ) ಭಕ್ತರ ವಾಸ್ತವಿಕ ಜೊತೆಗಾರ (ಮಿತ್ರ) ಅರ್ಥಾತ್ ಆತ್ಮನಿಗೆ ಆಧಾರ (ಬೃಹಸ್ಪತಿಮ್) ಜಗದ್ಗುರು (ಚ) ಮತ್ತು (ನಮಸಾ) ವಿನಮ್ರ ಉಪಾಸಕರು ಅರ್ಥಾತ್ ವಿಧಿವತ್ ಸಾಧಕನಿಗೆ (ಅವ) ಸುರಕ್ಷೆಯ ಜೊತೆಯಲ್ಲಿ (ಗಚ್ಛಾತ್) ಸತ್ಯಲೋಕಕ್ಕೆ ಹೋದವರಿಗೆ ಅರ್ಥಾತ್ ಯಾರಿಗೆ ಪೂರ್ಣ ಮೋಕ್ಷ ದೊರೆತಿದೆಯೋ, ಅವರು ಸತ್ಯಲೋಕಕ್ಕೆ ಹೋಗಿದ್ದಾರೆ. ಅವರನ್ನು ಸತ್ಯಲೋಕಕ್ಕೆ ಕರೆದುಕೊಂಡು ಹೋಗುವವರು (ವಿಶ್ವೇಷಾಮ್) ಸರ್ವ ಬ್ರಹ್ಮಾಂಡಗಳ (ಜನಿತಾ) ರಚನೆಯನ್ನು ಮಾಡುವವನು ಜಗದಂಬೆ ಅರ್ಥಾತ್ ತಾಯಿಯ ಗುಣಗಳಿಂದ ಕೂಡಿದ (ನ ದಭಾಯತ್) ಕಾಲನ ರೀತಿಯಲ್ಲಿ ಮೋಸ ಮಾಡದೆ ಇರುವವನು (ಸ್ವಧಾವಾನ್) ಸ್ವಭಾವ ಅರ್ಥಾತ್ ಗುಣವುಳ್ಳವನು (ಯಥಾ) ಹೇಗೆಂದರೆ ಹಾಗೆ ಅರ್ಥಾತ್ ಅದೇ ರೀತಿ (ಸಃ) (ತ್ವಮ್) ತಾವು ಕವಿರ್ದೇವ/ಕವಿರ್ ದೇವಃ) ಕವಿರ್ದೇವರು ಅರ್ಥಾತ್ ಭಾಷೆ ಬೇರೆಯಾದ್ದರಿಂದ ಕಬೀರ ಎನ್ನುವುದನ್ನು ಕವಿರ್ ಎಂದೂ ಕರೆಯುವರು.

**ಭಾವಾರ್ಥ :– ಮಂತ್ರದಲ್ಲಿ ಯಾರು ಸರ್ವ ರಚನೆಯನ್ನು ಮಾಡಿದ್ದಾನೋ ಆ ಪರಮೇಶ್ವರನ ಹೆಸರು ಕವಿರ್ದೇವ ಅರ್ಥಾತ್ ಕಬೀರ ಪರಮೇಶ್ವರನೇ ಎಂಬುದನ್ನು ಸ್ಪಷ್ಟಗೊಳಿಸಲಾಗಿದೆ.**

**ಯಾವ ಪರಮೇಶ್ವರನು ಅಚಲನೋ ಅರ್ಥಾತ್ ವಾಸ್ತವದಲ್ಲಿ ಅವಿನಾಶಿಯೋ, (ಗೀತೆ ಅಧ್ಯಾಯ 15, ಶ್ಲೋಕ ಸಂ. 16–17ರಲ್ಲಿ ಪ್ರಮಾಣಿತವಾಗಿದೆ) ಜಗದ್ಗುರು, ಆತ್ಮಾಧಾರ, ಯಾರು ಪೂರ್ಣ ಮುಕ್ತರಾಗಿ ಸತ್ಯಲೋಕಕ್ಕೆ ಹೋಗುವರೋ ಅವರನ್ನು ಸತ್ಯಲೋಕಕ್ಕೆ ಕರೆದುಕೊಂಡು ಹೋಗುವವನು. ಸರ್ವಬ್ರಹ್ಮಾಂಡಗಳನ್ನೂ ರಚಿಸಿದವನು, ಕಾಲ(ಬ್ರಹ್ಮ)ನ ರೀತಿ ದುಃಖವನ್ನು ಕೊಡದೇ ಇರುವವನು. ಹೇಗಿರುವನೋ ಹಾಗೆಯೇ ಇರುವ ದೇವನು. ಸ್ವಯಂ ಕವಿರ್ದೇವ ಅರ್ಥಾತ್ ಕಬೀರ್ ಪ್ರಭುವಾಗಿದ್ದಾನೆ. ಈ ಪರಮೇಶ್ವರನೇ ಸರ್ವ ಬ್ರಹ್ಮಾಂಡಗಳನ್ನೂ ಮತ್ತು ಪ್ರಾಣಿಗಳನ್ನು ತನ್ನ ಶಬ್ದ ಶಕ್ತಿಯಿಂದ**

**ಉತ್ಪನ್ನಗೊಳಿಸುವ ಕಾರಣ (ಜನಿತಾ) ತಾಯಿ ಎಂದೂ ಕರೆಯಲ್ಪಡುವವನು ಮತ್ತು (ಪಿತ್ತರಮ್) ಪಿತಾ ಎಂದೂ ಹಾಗೂ (ಬಂಧು) ವಾಸ್ತವದಲ್ಲಿ ಸಹೋದರನೂ ಕೂಡಾ ಇವನೇ ಹಾಗೂ (ದೇವ) ಪರಮೇಶ್ವರನು ಕೂಡಾ ಈತನೇ ಆಗಿದ್ದಾನೆ. ಈ ಕಾರಣದಿಂದ ಈ ಕವಿರ್ದೇವನ (ಕಬೀರ ಪರಮೇಶ್ವರ) ಸ್ತುತಿಯನ್ನು ಮಾಡುವರು. ತ್ವಮೇವ ಮಾತಾ ಚ ಪಿತಾ ತ್ವಮೇವ, ತ್ವಮೇವ ಬಂಧು ಚ ಸಖಾ ತ್ವಮೇವ, ತ್ವಮೇವ ವಿದ್ಯಾ ಚ ದ್ರವಿಣಂ ತ್ವಮೇವ, ತ್ವಮೇವ ಸರ್ವಂ ಮಮ್ ದೇವ ದೇವ. ಹೀಗೆ ಈ ಪರಮೇಶ್ವರನ ಮಹಿಮೆಯನ್ನು ಪವಿತ್ರ ಋಗ್ವೇದ ಮಂಡಲ ಸಂ.1 ಸೂಕ್ತ ಸಂ.24 ರಲ್ಲಿ ವಿಸ್ತೃತವಾಗಿ ವಿವರಣೆ ನೀಡಲಾಗಿದೆ.**

## "ಪವಿತ್ರ ಋಗ್ವೇದದಲ್ಲಿ ಸೃಷ್ಟಿ ರಚನೆಯ ಆಧಾರ"

**ಋಗ್ವೇದ 10ನೇ ಮಂಡಲದ 90ನೇ ಸೂಕ್ತಿಯ 1ನೇ ಮಂತ್ರ.**

ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।
ಸ ಭೂಮಿಂ ವಿಶ್ವತೋಂ ವೃತ್ವಾತ್ಯ ತಿಷ್ಠದ್ದ ಶಾಂಗುಲಂ ॥ 1 ॥

ಸಹಸ್ರಶೀರ್ಷಾ–ಪುರುಷಃ–ಸಹಸ್ರಾಕ್ಷಃ–ಸಹಸ್ರಪಾತ್
ಸ–ಭೂಮಿಮ್–ವಿಶ್ವತಃ–ವೃತ್ವಾ–ಅತ್ಯಾತಿಷ್ಠತ್–ದಶಂಗುಲಮ್ ।

ಅನುವಾದ:– (ಪುರುಷಃ) ವಿರಾಟ ರೂಪವುಳ್ಳ ಕಾಲ ಭಗವಾನ್ ಅರ್ಥಾತ್ ಕ್ಷರ ಪುರುಷನು (ಸಹಸ್ರಶೀರ್ಷಾ) ಸಹಸ್ರ ತಲೆಯುಳ್ಳವನು (ಸಹಸ್ರಾಕ್ಷಃ) ಸಾವಿರ ಕಣ್ಣುಳ್ಳವನು (ಸಹಸ್ರಪಾತ್) ಸಾವಿರ ಕಾಲುಳ್ಳವನು. (ಸ) ಆ ಕಾಲನು (ಭೂಮಿಮ್) ಪೃಥ್ವಿಯ ಜೊತೆಯಲ್ಲಿ 21 ಬ್ರಹ್ಮಾಂಡಗಳನ್ನು (ವಿಶ್ವತಃ) ಎಲ್ಲಾ ಕಡೆಯಿಂದಲೂ (ದಶಂಗುಲಮ್) ಹತ್ತು ಬೆರಳುಗಳಿಂದ ಅರ್ಥಾತ್ ಪೂರ್ಣ ರೂಪದಿಂದ ವಶಪಡಿಸಿಕೊಂಡು (ವೃತ್ವಾ) ವೃತ್ತಾಕಾರದಲ್ಲಿ ಆವರಿಸಿಕೊಂಡು (ಅತ್ಯಾತಿಷ್ಠತ್) ಇದಕ್ಕಿಂತ ಹೆಚ್ಚಾಗಿ ಅರ್ಥಾತ್ ತನ್ನ ಕಾಲಲೋಕದಲ್ಲಿ ಎಲ್ಲರಿಂದ ಬೇರೆಯಾಗಿ 21ನೇ ಬ್ರಹ್ಮಾಂಡದಲ್ಲಿ ನೆಲೆಸಿದ್ದಾನೆ. ಅರ್ಥಾತ್ ವಾಸವಾಗಿದ್ದಾನೆ.

**ಭಾವಾರ್ಥ:– (ಪ್ರಸ್ತುತ) ಈ ಮಂತ್ರದಲ್ಲಿ ವಿರಾಟನ (ಕಾಲ/ ಬ್ರಹ್ಮ) ವರ್ಣನೆ ಇದೆ. (ಗೀತೆಯ ಅಧ್ಯಾಯ 10–11 ರಲ್ಲಿ ಇದೇ ಕಾಲ/ ಬ್ರಹ್ಮನ ವರ್ಣನೆ ಹೀಗೆಯೇ ಇದೆ. ಅಧ್ಯಾಯ 11 ಮಂತ್ರ ನಂ. 46ರಲ್ಲಿ ಅರ್ಜುನನು ಈ ರೀತಿಯಾಗಿ ಹೇಳಿದ್ದಾನೆ. "ಹೇ ಸಹಸ್ರಬಾಹು ಅರ್ಥಾತ್ ಸಾವಿರ ಭುಜವುಳ್ಳವನಾಗಿರುವ ನೀವು–ನಿಮ್ಮ ಚತುರ್ಭುಜದ ರೂಪದಲ್ಲಿ ದರ್ಶನವನ್ನು ನೀಡಿ).**

**ಯಾರಿಗೆ ಸಾವಿರ ಕೈಗಳು, ಕಾಲುಗಳು, ಸಾವಿರ ಕಣ್ಣುಗಳು, ಕಿವಿಗಳು ಮುಂತಾದವುಗಳು ಇವೆಯೋ ಆ ವಿರಾಟರೂಪ ಕಾಲನು ತನ್ನ ಅಧೀನದಲ್ಲಿರುವ ಎಲ್ಲಾ ಪ್ರಾಣಿಗಳನ್ನು ಪೂರ್ಣವಾಗಿ ತನ್ನ ಅಧೀನದಲ್ಲಿಟ್ಟುಕೊಂಡು ಅರ್ಥಾತ್ 20 ಬ್ರಹ್ಮಾಂಡಗಳನ್ನು ವೃತ್ತಾಕಾರದೊಳಗೆ ತಡೆಗಟ್ಟಿ ಸ್ವಯಂ ಅವುಗಳ ಮೇಲೆ (ಬೇರೆಯಾಗಿ) 21ನೇ ಬ್ರಹ್ಮಾಂಡದಲ್ಲಿ ಕುಳಿತಿದ್ದಾನೆ.**

**ಋಗ್ವೇದ 10ನೇ ಮಂಡಲದ 90ನೇ ಸೂಕ್ತಿಯ 2ನೇ ಮಂತ್ರ.**

ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭಾವ್ಯಮ್ ।
ಉತಾಮೃತತ್ವಸ್ಯೆಶಾನೋ ಯದನ್ನೇನಾತಿರೋಹತಿ ॥ 2 ॥

**ಪುರುಷ–ಏವ–ಇದಂ–ಸರ್ವಮ್–ಯತ್–ಭೂತಮ್–ಯತ್–ಚ–ಭಾವ್ಯಮ್–**

**ಉತ್–ಅಮೃತತ್ವಸ್ಯ–ಇಶಾನಃ–ಯತ್–ಅನ್ನೇನ–ಅತಿರೋಹತಿ.**

ಅನುವಾದ :– (ಏವ) ಹೀಗೆ ಕೆಲವು ಸರಿಯಾದ ರೀತಿಯಲ್ಲಿ (ಪುರುಷ) ಭಗವಂತನು.

ಅವನು ಅಕ್ಷರ ಪುರುಷ ಅರ್ಥಾತ್ ಪರಬ್ರಹ್ಮನು (ಚ) ಮತ್ತು (ಇದಮ್) ಈ (ಯತ್) ಯಾವುದು (ಭೂತಮ್) ಉತ್ಪನ್ನ ಆಗಿದೆಯೋ (ಯತ್) ಯಾವುದು (ಭಾವ್ಯಮ್) ಭವಿಷ್ಯದಲ್ಲಿ ಉತ್ಪನ್ನವಾಗುವುದೋ (ಸರ್ವಮ್) ಎಲ್ಲವೂ (ಯತ್) ಪ್ರಯತ್ನದಿಂದ ಅರ್ಥಾತ್ ಪರಿಶ್ರಮದ ಮೂಲಕ (ಅನ್ನೆನ) ಬೇರೆಯವರಿಂದ (ಅತಿರೋಹತಿ) ವಿಕಸಿತವಾಗುತ್ತದೆ. ಈ ಅಕ್ಷರ ಪುರುಷ ಕೂಡಾ (ಉತ) ಸಂದೇಹದಿಂದ ಕೂಡಿದ (ಅಮೃತತ್ವಸ್ಯ) ಮೋಕ್ಷದ (ಇಶಾನಃ) ಸ್ವಾಮಿಯಾಗಿದ್ದಾನೆ ಅರ್ಥಾತ್ ಅಕ್ಷರಪುರುಷ ಭಗವಂತನೆಂಬುದು ಸ್ವಲ್ಪಮಟ್ಟಿಗೆ ನಿಜವಾದರೂ ಪೂರ್ಣ ರೂಪದ ಮೋಕ್ಷದಾಯಕನಲ್ಲ.

**ಭಾವಾರ್ಥ :– ಈ ಮಂತ್ರದಲ್ಲಿ ಪರಬ್ರಹ್ಮ (ಅಕ್ಷರ ಪುರುಷ)ನ ವಿವರಣೆಯಿದೆ. ಕೆಲವು ಭಗವಂತನ ಗುಣಲಕ್ಷಣಗಳಿದ್ದರೂ, ಈತನ ಭಕ್ತಿಯಿಂದ ಕೂಡಾ ಪೂರ್ಣ ಮೋಕ್ಷ ದೊರೆಯುವುದಿಲ್ಲ. ಇದರಿಂದ ಈತನನ್ನು ಸಂದೇಹದಿಂದ ಕೂಡಿದ ಮುಕ್ತಿದಾಯಕ ಪ್ರಭುವೆಂದು ಕರೆಯಲಾಗಿದೆ. ಪರಬ್ರಹ್ಮನಲ್ಲಿ ಕೆಲವು ಭಗವಂತನ ಗುಣಗಳಿವೆ ಎಂದು ಏಕೆ ಹೇಳಲಾಗಿದೆ ಎಂದರೆ ಇವನು ಕಾಲನ ರೀತಿಯಲ್ಲಿ ಬಿಸಿ ಹೆಂಚಿನ ಮೇಲೆ ಆತ್ಮಗಳನ್ನು ಹುರಿದು ತಿನ್ನುವುದಿಲ್ಲ. ಆದರೆ ಈ ಪರಬ್ರಹ್ಮನ ಲೋಕದಲ್ಲಿಯೂ ಕೂಡಾ ಪ್ರಾಣಿಗಳು ಪರಿಶ್ರಮಪಟ್ಟು ಪಡೆದ ಕರ್ಮದ ಆಧಾರದ ಮೇಲೆಯೇ ಫಲವು ಪ್ರಾಪ್ತವಾಗುವುದು ಮತ್ತು ಅನ್ನದಿಂದಲೇ ಎಲ್ಲಾ ಪ್ರಾಣಿಗಳ ಶರೀರವು ಬೆಳೆಯುವುದು. ಜನ್ಮ ಮತ್ತು ಮೃತ್ಯುವಿನ ಸಮಯವು ಕಾಲನಿಗಿಂತಲೂ (ಕ್ಷರಪುರುಷ) ಅಧಿಕವಾದುದು. ಆದರೆ ಉತ್ಪತ್ತಿ, ಪ್ರಳಯ ಮತ್ತು 84 ಲಕ್ಷ ಯೋನಿಗಳಲ್ಲಿ ಜನಿಸುವ ಯಾತನೆಯಂತೂ ಇದ್ದೇ ಇರುತ್ತದೆ.**

**ಋಗ್ವೇದ 10ನೇ ಮಂಡಲದ 90ನೇ ಸೂಕ್ತಿಯ 3ನೇ ಮಂತ್ರ.**

ಏತಾವಾನಸ್ಯ ಮಹಿಮಾತೋ ಜ್ಯಾಯಾಂಶ್ಚ ಪುರುಷಃ ।
ಪಾದೋಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ॥ 3 ॥

**ತಾವಾನ್–ಅಸ್ಯ–ಮಹಿಮಾ–ಅತಃ–ಜ್ಯಾಯಾನ್–ಚ–ಪುರುಷಃ**

**ಪಾದಃ–ಅಸ್ಯ–ವಿಶ್ವಾ–ಭೂತಾನಿ–ತ್ರಿ–ಪಾದ್–ಅಸ್ಯ–ಅಮೃತಮ್–ದಿವಿ**

ಅನುವಾದ :– (ಅಸ್ಯ) ಈ ಅಕ್ಷರ ಪುರುಷ ಅರ್ಥಾತ್ ಪರಬ್ರಹ್ಮನಿಗೆ (ಏತಾವಾನ್) ಇಷ್ಟೇ (ಮಹಿಮಾ) ಒಡೆತನವಿರುವುದು. (ಚ) ಮತ್ತು (ಪುರುಷಃ) ಅವನು ಪರಮ ಅಕ್ಷರ ಬ್ರಹ್ಮ ಅರ್ಥಾತ್ ಪೂರ್ಣ ಬ್ರಹ್ಮ ಪರಮೇಶ್ವರನು, (ಅತಃ) ಇವನಿಗಿಂತಾ ಕೂಡಾ (ಜ್ಯಾಯಾನ್) ದೊಡ್ಡವನು (ವಿಶ್ವಾ) ಸಮಸ್ತ (ಭೂತಾನಿ) ಕ್ಷರ ಪುರುಷ ಮತ್ತು ಅಕ್ಷರ ಪುರುಷ ಹಾಗೂ ಇವರ ಲೋಕದಲ್ಲಿ, ಸತ್ಯಲೋಕದಲ್ಲಿ, ಮತ್ತು ಈ ಲೋಕಗಳಲ್ಲಿ ಎಷ್ಟು ಪ್ರಾಣಿಗಳಿದ್ದರೂ, (ಅಸ್ಯ) ಈ ಪೂರ್ಣ ಪರಮಾತ್ಮನು ಪರಮ ಅಕ್ಷರ ಪುರುಷನ (ಪಾದಃ) ಒಂದು ಪಾದ ಮಾತ್ರ ಅಂದರೆ ಒಂದು ಅಂಶ ಮಾತ್ರವಾಗಿದ್ದಾನೆ. (ಅಸ್ಯ) ಈ ಪರಮೇಶ್ವರನ (ತ್ರಿ) ಮೂರು (ದಿವಿ) ದಿವ್ಯ ಲೋಕ–ಸತ್ಯಲೋಕ–ಅಲಖಲೋಕ–ಅಗಮಲೋಕ (ಅಮೃತಮ್) ಅವಿನಾಶೀ (ಪಾದ್) ಎರಡನೇ ಪಾದವಾಗಿದೆ. ಅರ್ಥಾತ್ ಸರ್ವ ಬ್ರಹ್ಮಾಂಡಗಳಲ್ಲಿ ಏನೇನು ಉತ್ಪತ್ತಿಯಾಗುವುದೋ ಅವೆಲ್ಲವೂ ಸತ್ಯಪುರುಷ ಪೂರ್ಣ ಪರಮಾತ್ಮನ ಒಂದು ಅಂಶ ಅಥವಾ ಅಂಗವಾಗಿದೆ.

**ಭಾವಾರ್ಥ:– ಈ ಮೇಲೆ ಹೇಳಿರುವ ಮಂತ್ರ 2ರಲ್ಲಿ ವರ್ಣಿಸಲಾಗಿರುವ ಅಕ್ಷರ ಪುರುಷ (ಪರಬ್ರಹ್ಮ)ನ ಮಹಿಮೆ ಕೇವಲ ಇಷ್ಟೇ. ಮತ್ತು ಆ ಪೂರ್ಣ ಪುರುಷ ಕವಿರ್ದೇವ ಇವನಿಗಿಂತಲೂ ದೊಡ್ಡವನು ಅರ್ಥಾತ್ ಸರ್ವಶಕ್ತಿವಂತನು ಮತ್ತು ಸರ್ವ ಬ್ರಹ್ಮಾಂಡವು ಆತನ ಅಂಶಮಾತ್ರವಾಗಿದೆ. ಈ ಮಂತ್ರದಲ್ಲಿ ಮೂರು ಲೋಕಗಳ ವರ್ಣನೆ ಈ ಕಾರಣದಿಂದ ಇದೆ ಏಕೆಂದರೆ 4ನೇಯ ಅನಾಮೀ (ಅನಾಮಯ) ಲೋಕ ಬೇರೆ ರಚನೆಗಳಿಗಿಂತ ಮೊದಲೇ ರಚಿತವಾಗಿತ್ತು. ಈ ಮೂವರು ಭಗವಂತರ**

**(ಕ್ಷರ ಪುರುಷ–ಅಕ್ಷರ ಪುರುಷ ಮತ್ತು ಇವರಿಬ್ಬರಿಗಿಂತ ಬೇರೆ ಪರಮ ಅಕ್ಷರ ಪುರುಷನ ವಿವರಣೆ ಶ್ರೀಮದ್ಭಗವದ್ಗೀತೆ ಅಧ್ಯಾಯ 12 ಶ್ಲೋಕ ಸಂಖ್ಯೆ 16–17ರಲ್ಲಿ ಇದೆ) (ಇದರ ಪ್ರಮಾಣ ಗೌರವಾನ್ವಿತ ಗರೀಬ್‌ದಾಸ್ ರವರು ಹೀಗೆ ಹೇಳುತ್ತಾರೆ.**

ಗರೀಬ್, ಜಾಕೆ ಅರ್ಧ ರೂಮ್ ಪರ್ ಸಕಲ್
ಪಸಾರಾ ಐಸಾ ಪೂರ್ಣ ಬ್ರಹ್ಮ ಹಮಾರಾ ॥
ಗರೀಬ್, ಅನಂತ್ ಕೋಟಿ ಬ್ರಹ್ಮಾಂಡ್ ಕಾ, ಏಕ್ ರತಿ ನಹೀಂ ಭಾರ್ ।
ಸತ್‌ಗುರು ಪುರುಷ್ ಕಬೀರ್ ಹೈ, ಕುಲ ಕೇ ಸೃಜನ್ ಹಾರ್ ॥

**ಈ ಹೇಳಿಕೆಯ ಪ್ರಮಾಣವು ಗೌರವಾನ್ವಿತ ದಾದೂ ರವರು ಹೇಳಿಕೆಯಲ್ಲಿ ದೊರೆಯುತ್ತದೆ.**

ಜಿನ್ ಮೋಕುಂ ನಿಜ್‌ನಾಮದಿಯಾ, ಸೋಯೀ ಸತ್‌ಗುರು ಹಮಾರ ।
ದಾದೂ ದೂಸರಾ ಕೋಯೆ ನಹೀಂ, ಕಬೀರ್ ಸೃಜನ್‌ಹಾರ್ ॥

**ಈ ಮಾತಿನ ಪ್ರಮಾಣವನ್ನು ಗೌರವಾನ್ವಿತ ಗುರು ನಾನಕ್ ರವರು ಹೀಗೆ ನೀಡುತ್ತಾರೆ:–**

ಯಕ್ ಅರ್ಜ್ ಗುಫ್‌ತಮ್ ಪೇಶ್ ತೋ ದರ್ ಕೂನ್ ಕರತಾರ್ ।
ಹಕ್ಕಾ ಕಬೀರ್ ಕರೀಮ್ ತೂ, ಬೆಎಬ್ ಪರ್‌ವರದಿಗಾರ್ ॥

**(ಶ್ರೀ ಗುರು ಗ್ರಂಥ ಸಾಹೇಬ್, ಪುಟ ಸಂ. 721, ಮಹಲಾ 1, ರಾಗ್ ತಿಲಂಗ್)**

**[ಕೂನ್ ಕರ್ತಾರ್ ಎಂದರೆ ಎಲ್ಲವನ್ನು ರಚನೆ ಮಾಡುವವನು, ಅರ್ಥಾತ್ ಶಬ್ದ ಶಕ್ತಿಯಿಂದ ರಚನೆ ಮಾಡುವವನು, ಶಬ್ದಸ್ವರೂಪಿ ಪ್ರಭು ಎಂದರ್ಥ, ಹಕ್ಕಾ ಕಬೀರ ಶಬ್ದದ ಅರ್ಥ ಸತ್ಯ ಕಬೀರ್, ಕರೀಮ್ ಶಬ್ದದ ಅರ್ಥ ದಯಾಳು, ಪರವರ್ದಿಗಾರ್ ಶಬ್ದದ ಅರ್ಥ ಪರಮಾತ್ಮ]**

**ಋಗ್ವೇದ 10ನೇ ಮಂಡಲದ 90ನೇ ಸೂಕ್ತಿಯ 4ನೇ ಮಂತ್ರ.**

ತ್ರಿಪಾದೂರ್ಧ್ವ ಉದೈತ್ಪುರುಷಃ ಪಾದೋಸ್ಯೆಹಾಭವತ್ಪುನಃ ।
ತತೋ ವಿಶ್ವ ಙ್‌ವ್ಯಕ್ರಾಮತ್ಸಾಶನಾನಶನೆ ಅಭಿ ॥ 4 ॥

**ತ್ರಿ–ಪಾದ–ಊರ್ಧ್ವಃ–ಉದೈತ–ಪುರುಷಃ–ಪಾದಃ–ಅಸ್ಯ–ಇಹ–**

**ಅಭವತ್–ಪುನಃ–ತತಃ–ವಿಶಙ–ವ್ಯಕ್ರಾಮತ್–ಸಃ–ಅಶನಾನಶನೇ–ಅಭಿ**

ಅನುವಾದ :– (ಪುರುಷಃ) ಈ ಪರಮ ಅಕ್ಷರ ಬ್ರಹ್ಮ ಅರ್ಥಾತ್ ಅವಿನಾಶೀ ಪರಮಾತ್ಮನು (ಊರ್ಧ್ವಃ) ಮೇಲಿನ (ತ್ರಿ) ಮೂರು ಲೋಕಗಳೆಂದರೆ (ಸತ್ಯಲೋಕ–ಅಲಖಲೋಕ–ಅಗಮಲೋಕ) ಮೇಲಿನ ಮೂರು ಲೋಕಗಳಲ್ಲಿ ಮೂರು ರೂಪಗಳಲ್ಲಿ (ಉದೈತ್) ಪ್ರಕಟನಾಗುವವನು. ಅರ್ಥಾತ್ ಸ್ವತಃ ವಿರಾಜಮಾನವಾಗಿದ್ದಾನೆ. ಈ ಪರಮೇಶ್ವರ ಪೂರ್ಣ ಬ್ರಹ್ಮನ (ಪಾದಃ) ಒಂದು ಕಾಲು ಅರ್ಥಾತ್ ಒಂದು ಭಾಗವಷ್ಟೇ ಜಗತ್ ರೂಪನಾಗಿದ್ದಾನೆ (ಪುನರ್) ಮತ್ತೆ (ಇಹ) ಇಲ್ಲಿ (ಅಭವತ್) ಪ್ರಕಟವಾಗುವವನು. (ತತಃ) ಇದೇ ಕಾರಣದಿಂದ (ಸಃ) ಅವನು ಅವಿನಾಸಿ ಪೂರ್ಣ ಪರಮಾತ್ಮ (ಅಶನಾನ ಶನೆ) ತಿನ್ನುವವನಾದ ಕಾಲ ಅರ್ಥಾತ್ ಕ್ಷರ ಪುರುಷ ಮತ್ತು ತಿನ್ನದೇ ಇರುವ ಪರಬ್ರಹ್ಮ ಅರ್ಥಾತ್ ಅಕ್ಷರ ಪುರುಷನಿಂದ ಕೂಡಾ (ಅಭಿ) ಮೇಲೆ (ವಿಶ್ವಙ) ಎಲ್ಲ ಕಡೆಯಲ್ಲಿಯೂ (ವ್ಯಕ್ರಾಮತ್) ಪಸರಿಸಿದ್ದಾನೆ ಅರ್ಥಾತ್ ಆತನ ಪ್ರಭುತ್ವವು ಸರ್ವ ಬ್ರಹ್ಮಾಂಡಗಳು ಮತ್ತು ಸರ್ವ ಪುರುಷರ ಮೇಲಿದೆ. ಅವನು ಕುಲದ ಮಾಲೀಕನಾಗಿದ್ದಾನೆ. ಹಾಗೂ ಅದನ್ನು ತನ್ನ ಶಕ್ತಿಯನ್ನು ಎಲ್ಲರ ಮೇಲೆ ಆವರಿಸುವಂತೆ ಮಾಡಿದ್ದಾನೆ.

**ಭಾವಾರ್ಥ:– ಇದೇ ಸರ್ವ ಸೃಷ್ಟಿ ರಚನೆಕಾರ ಪ್ರಭು ರಚನೆಯ ಮೇಲಿನ ಭಾಗದಲ್ಲಿ ಮೂರು**

ಸ್ಥಾನ (ಸತ್ಯಲೋಕ–ಅಲಖಲೋಕ–ಅಗಮಲೋಕ)ಗಳಲ್ಲಿ ಮೂರು ರೂಪಗಳಲ್ಲಿ ಸ್ವಯಂ ಪ್ರಕಟನಾಗಿದ್ದಾನೆ. ಅರ್ಥಾತ್ ಸ್ವಯಂ ವಿರಾಜಮಾನನಾಗಿದ್ದಾನೆ. ಇಲ್ಲಿ ಅನಾಮಿ ಲೋಕದ ವರ್ಣನೆ ಮಾಡಿಲ್ಲ. ಏಕೆಂದರೆ ಅನಾಮೀ ಲೋಕದಲ್ಲಿ ಯಾವುದೇ ರಚನೆಯಾಗಿಲ್ಲ ಮತ್ತು ಅಕಹ (ಅನಾಮಯ) ಲೋಕ ಶೇಷರಚನೆಯ ಮೊದಲೇ ರಚಿತವಾಗಿದೆ. ಮತ್ತು ಆ ಪರಮಾತ್ಮನ ಸತ್ಯಲೋಕದಿಂದ ದೂರವಾಗಿ ಕೆಳಗಿನ ಬ್ರಹ್ಮ ಮತ್ತು ಪರಬ್ರಹ್ಮನ ಲೋಕ ಉತ್ಪತ್ತಿಯಾಗಿದೆ ಎಂದು ಹೇಳಲಾಗಿದೆ ಮತ್ತು ಆ ಪರಮಾತ್ಮ ತಿನ್ನುವ ಬ್ರಹ್ಮ ಅರ್ಥಾತ್ ಕಾಲನಿಂದ (ಏಕೆಂದರೆ ಬ್ರಹ್ಮ/ಕಾಲ ವಿರಾಟ ರೂಪದಿಂದ ಕೂಡಿದ್ದು ಒಂದು ಲಕ್ಷ ಮಾನವ ಶರೀರಧಾರಿ ಪ್ರಾಣಿಗಳನ್ನು ತಿನ್ನುತ್ತಾನೆ) ಮತ್ತು ತಿನ್ನದೇ ಇರುವ ಪರಬ್ರಹ್ಮ ಅರ್ಥಾತ್ ಅಕ್ಷರ ಪುರುಷನಿಂದ (ಪರಬ್ರಹ್ಮ ಪ್ರಾಣಿಗಳನ್ನು ತಿನ್ನವುದಿಲ್ಲ. ಆದರೆ ಜನ್ಮ–ಮೃತ್ಯು, ಕರ್ಮಕ್ಕನುಗುಣವಾಗಿ ದಂಡವನ್ನು ನೀಡುತ್ತಾ ಸ್ಥಿತಿಯನ್ನು ಕಾಪಾಡುತ್ತಾನೆ) ಕೂಡಾ ಶ್ರೇಷ್ಠನಾಗಿ ಸರ್ವತ್ರವೂ ವ್ಯಾಪ್ತನಾಗಿದ್ದಾನೆ. ಅರ್ಥಾತ್ ಈ ಪೂರ್ಣ ಪರಮಾತ್ಮನ ಪ್ರಭುತ್ವವು ಎಲ್ಲರಿಗಿಂತಲೂ ಉನ್ನತವಾಗಿದೆ. ಕಬೀರ ಪರಮೇಶ್ವರನೇ ಕುಲದ ಮಾಲೀಕನಾಗಿದ್ದಾನೆ. ಯಾರು ತನ್ನ ಶಕ್ತಿಯನ್ನು ಎಲ್ಲರ ಮೇಲೆ ಹರಡುತ್ತಾನೋ, ಅಂದರೆ ಹೇಗೆ ಸೂರ್ಯನು ತನ್ನ ಪ್ರಕಾಶವನ್ನು ಎಲ್ಲರ ಮೇಲೆ ಹರಡಿ ಪ್ರಭಾವಿತಗೊಳಿಸಿರುವನೋ ಹಾಗೆ ಪೂರ್ಣ ಪರಮಾತ್ಮನು ತನ್ನ ಶಕ್ತಿರೂಪದ ರೇಂಜ್ (ಕ್ಷಮತೆ)ಯನ್ನು ಎಲ್ಲಾ ಬ್ರಹ್ಮಾಂಡಗಳನ್ನು ನಿಯಂತ್ರಿತಗೊಳಿಸಲು ಹೊರಹೊಮ್ಮಿಸಿದ್ದಾನೆ. ಹೇಗೆ ಮೊಬೈಲ್ ಫೋನ್‌ನ ಟವರ್ ದೇಶೀಯವಾದರೂ ಕೂಡಾ ತನ್ನ ಶಕ್ತಿ ಅರ್ಥಾತ್ ಮೊಬೈಲ್ ಫೋನ್‌ನ ಕಾರ್ಯಕುಶಲತೆ (ಕ್ಷಮತೆ) ನಾಲ್ಕು ದಿಕ್ಕಿನಲ್ಲಿ ಹರಡಿಕೊಂಡಿರುತ್ತದೆ. ಹೀಗೆ ಪೂರ್ಣ ಪ್ರಭುವು ತನ್ನ ನಿರಾಕಾರ ಶಕ್ತಿಯನ್ನು ಎಲ್ಲಾ ಕಡೆಯಲ್ಲೂ ವ್ಯಾಪಿಸುತ್ತಾನೆ. ಅದರಿಂದ ಪೂರ್ಣ ಪರಮಾತ್ಮನು ಎಲ್ಲಾ ಬ್ರಹ್ಮಾಂಡಗಳನ್ನು ಒಂದು ಸ್ಥಾನದಲ್ಲಿ ಕುಳಿತು ನಿಯಂತ್ರಿಸುತ್ತಿರುತ್ತಾನೆ.

ಇದರ ಪ್ರಮಾಣವನ್ನು ಆದರಣೀಯ ಗರೀಬ್‌ದಾಸ ಮಹಾರಾಜರು ಹೀಗೆ ನೀಡುತ್ತಿದ್ದಾರೆ. (ಅಮೃತವಾಣಿ ರಾಗ ಕಲ್ಯಾಣ್)

ತೀನ್ ಚರಣ್ ಚಿಂತಾಮಣಿ ಸಾಹೇಬ್, ಶೇಷ್ ಬದನ್ ಪರ್ ಛಾಯೆ ।
ಮಾತಾ, ಪಿತಾ, ಕುಲ್ ನ ಬಂಧು, ನಾ ಕಿನ್ಹೆಂ ಜನನೀ ಜಾಯೆ ॥

**ಋಗ್ವೇದ 10ನೇ ಮಂಡಲದ 90ನೇ ಸೂಕ್ತಿಯ 5ನೇ ಮಂತ್ರ.**

ತಸ್ಮಾದ್ವಿರಾಳಜಾಯತ ವಿರಾಜೋ ಅಧಿ ಪೂರುಷಃ ।
ಸ ಜಾತೋ ಅತ್ಯರಿಚ್ಯತ ಪಶ್ಚಾದ್ ಭೂಮಿಮಥೋ ಪುರಃ ॥ 5 ॥

**ತಸ್ಮಾತ್–ವಿರಾಟ್–ಅಜಾಯತ್–ವಿರಾಜಃ–ಅಧಿ–ಪುರುಷಃ–ಸ–ಜಾತಃ–ಅತ್ಯರಿಚ್ಯತ್–ಪಶ್ಚಾತ್–ಭೂಮಿಮ್–ಅಥಃ–ಪುರಃ ।**

ಅನುವಾದ :– (ತಸ್ಮಾತ್) ಅದರ ನಂತರ ಆ ಪರಮೇಶ್ವರ ಸತ್ಯಪುರುಷನ ಶಬ್ದಶಕ್ತಿಯಿಂದ (ವಿರಾಟ್) ವಿರಾಟ ಅರ್ಥಾತ್ ಬ್ರಹ್ಮ, ಯಾರನ್ನು ಕ್ಷರ ಪುರುಷ ಅಥವಾ ಕಾಲ ಎಂದೂ ಕರೆಯುತ್ತೇವೋ (ಅಜಾಯತ್) ಆತನ ಉತ್ಪನ್ನವಾಯಿತು. (ಪಶ್ಚಾತ್) ತದನಂತರ (ವಿರಾಜಃ) ವಿರಾಟಪುರುಷ ಅರ್ಥಾತ್ ಕಾಲ ಭಗವಾನನಿಗಿಂತ (ಅಧಿ) ಶ್ರೇಷ್ಠನಾದ (ಪುರುಷಃ) ಪರಮೇಶ್ವರನು (ಭೂಮಿಮ್) ಪೃಥ್ವೀಲೋಕ, ಕಾಲಬ್ರಹ್ಮ ಮತ್ತು ಪರಬ್ರಹ್ಮನ ಲೋಕಗಳನ್ನು (ಅತ್ಯರಿಚ್ಯತ್) ಅತ್ಯಂತ ಉತ್ತಮ ರೀತಿಯಲ್ಲಿ ರಚಿಸಿ (ಅಥಃ) ಮತ್ತೆ ಅನ್ಯ ಸಣ್ಣ–ಸಣ್ಣ ಲೋಕಗಳನ್ನು (ಸ) ಆ ಪೂರ್ಣ ಪರಮೇಶ್ವರನೇ (ಜಾತಃ) ಉತ್ಪತ್ತಿ ಮಾಡಿದನು ಅರ್ಥಾತ್ ಸ್ಥಾಪಿತಗೊಳಿಸಿದನು.

**ಭಾವಾರ್ಥ:– ಈ ಮೇಲಿನ 4ನೇ ಮಂತ್ರದಲ್ಲಿ ವರ್ಣನೆಗೊಂಡ ಮೂರೂ ಲೋಕಗಳ (ಅಗಮ**

**ಲೋಕ, ಅಲಖ್ ಲೋಕ ಮತ್ತು ಸತ್ಯಲೋಕ) ರಚನೆಯ ನಂತರ ಪೂರ್ಣ ಪರಮಾತ್ಮನು ಜ್ಯೋತಿ ನಿರಂಜನ (ಬ್ರಹ್ಮ)ನ ಸೃಷ್ಟಿ ಮಾಡಿದನು. ಅರ್ಥಾತ್ ಅದೇ ಸರ್ವ ಶಕ್ತಿವಂತ ಪರಮಾತ್ಮ ಪೂರ್ಣ ಬ್ರಹ್ಮ ಕವಿರ್ದೇವ (ಕಬೀರ ಪ್ರಭು) ನಿಂದಲೇ ವಿರಾಟ ಅರ್ಥಾತ್ ಬ್ರಹ್ಮ (ಕಾಲ)ನ ಸೃಷ್ಟಿಯಾಯಿತು. ಇದರ ಪ್ರಮಾಣವು ಗೀತೆಯ ಅಧ್ಯಾಯ 3 ಮಂತ್ರ 15ರಲ್ಲಿ ದೊರೆಯುವುದು. ಅದೇನೆಂದರೆ ಅಕ್ಷರ ಪುರುಷ ಅರ್ಥಾತ್ ಅವಿನಾಶಿ ಪ್ರಭುವಿನಿಂದ ಬ್ರಹ್ಮನ ಸೃಷ್ಟಿಯಾಯಿತು. ಇದೇ ಪ್ರಮಾಣವು ಅಥರ್ವವೇದ ಕಾಂಡ 4 ಅನುವಾಕ್ 1 ಸೂಕ್ತ 3 ರಲ್ಲಿಯೂ ಇರುವುದು. ಪೂರ್ಣ ಬ್ರಹ್ಮನಿಂದ ಬ್ರಹ್ಮನ ಸೃಷ್ಟಿಯಾಯಿತು. ಈ ಪೂರ್ಣ ಬ್ರಹ್ಮನು (ಭೂಮಿಮ್) ಭೂಮಿ ಮುಂತಾದ ಸಣ್ಣ ಹಾಗೂ ದೊಡ್ಡದಾದ ಎಲ್ಲಾ ಲೋಕಗಳ ರಚನೆಯನ್ನೂ ಮಾಡಿದನು. ಆ ಪೂರ್ಣಬ್ರಹ್ಮನು ಈ ವಿರಾಟ ಭಗವಂತ ಅರ್ಥಾತ್ ಬ್ರಹ್ಮನಿಂದಲೂ ಶ್ರೇಷ್ಠನಾಗಿದ್ದಾನೆ ಅರ್ಥಾತ್ ಬ್ರಹ್ಮನಿಗೂ ಒಡೆಯನಾಗಿದ್ದಾನೆ.**

**ಋಗ್ವೇದ 10ನೇ ಮಂಡಲದ 90ನೇ ಸೂಕ್ತಿಯ 15ನೇ ಮಂತ್ರ.**

ಸಪ್ತಾಸ್ಯಾಸನ್ಪರಿಧಯಸ್ತ್ರಿಃ ಸಪ್ತ ಸಮಿಧಃ ಕೃತಾಃ ।
ದೇವಾ ಯದ್ಯಜ್ಞಂ ತನ್ವಾನಾ ಅಬಧ್ನಂಪುರುಷಂ ಪಶುಂ ॥ 15 ॥

**ಸಪ್ತ–ಅಸ್ಯ–ಆಸನ್–ಪರಿಧಯಃ–ತ್ರಿಸಪ್ತ–ಸಮಿಧಃ–ಕೃತಾಃ**
**ದೇವಾ–ಯತ್–ಯಜ್ಞಂ–ತನ್ವಾನಾಃ–ಅಬಧ್ನನ್–ಪುರುಷಮ್–ಪಶುಮ್ ॥ 15 ॥**

ಅನುವಾದ :– (ಸಪ್ತ) ಏಳು ಸಂಖ್ ಬ್ರಹ್ಮಾಂಡವಂತೂ ಪರಬ್ರಹ್ಮನ ಮತ್ತು (ತ್ರಿಸಪ್ತ) 21 ಬ್ರಹ್ಮಾಂಡಗಳ ಹಾಗೂ ಕಾಲಬ್ರಹ್ಮನ (ಸಮಿಧಃ) ಕರ್ಮಕ್ಕನುಗುಣವಾಗಿ ಶಿಕ್ಷೆಯನ್ನು ಪಡೆದು ದುಃಖಾಗ್ನಿಯಲ್ಲಿ ಬೇಯುವಂತೆ (ಕೃತಾಃ) ಮಾಡುವ (ಪರಿಧಯಃ) ವೃತ್ತಾಕಾರದ ಪರಿಧಿಯೊಳಗೆ ಸಿಲುಕಿಕೊಂಡಿದೆ (ಆಸನ್) (ಯತ್) ಯಾರು (ಪುರುಷಮ್) ಪೂರ್ಣ ಪರಮಾತ್ಮನನ್ನು (ಯಜ್ಞಮ್) ವಿಧಿವತ್ತಾದ ಧಾರ್ಮಿಕ ಕರ್ಮಗಳಿಂದ ಅರ್ಥಾತ್ ಪೂಜೆ ಮಾಡುವನೋ, ಅಂತಹ (ಪಶುಮ್) ಬಲಿಯ ಪಶು ರೂಪದಲ್ಲಿ ಕಾಲನ ಜಾಲದಲ್ಲಿ ಕರ್ಮ ಬಂಧನದಲ್ಲಿ ಬಂಧಿಸಲ್ಪಟ್ಟ (ದೇವಾ) ಭಕ್ತಾತ್ಮಗಳಿಗೆ (ತನ್ವಾನಾಃ) ಕಾಲನ ಮೂಲಕ ರಚಿಸಿರುವ ಅರ್ಥಾತ್ ಪಾಪ ಹರಡಿ ಕರ್ಮಬಂಧನದ ಜಾಲದಿಂದ (ಅಬಧ್ನನ) ಬಂಧನ ರಹಿತನನ್ನಾಗಿ ಮಾಡುತ್ತಾನೆ ಅರ್ಥಾತ್ ಬಂಧನದಿಂದ ಬಿಡಿಸುವವನು. ಅವನು ಬಂಧಮುಕ್ತನಾಗಿದ್ದಾನೆ.

**ಭಾವಾರ್ಥ:– ಏಳು ಸಂಖ್ ಬ್ರಹ್ಮಾಂಡಗಳು ಪರಬ್ರಹ್ಮನ ಹಾಗೂ 21 ಬ್ರಹ್ಮಾಂಡಗಳು ಬ್ರಹ್ಮನದಾಗಿವೆ. ಯಾವ ಪ್ರಾಣಿಗಳು ಗೋಲಾಕಾರದ ಪರಿಧಿಯೊಳಗೆ ಸಿಲುಕಿಕೊಂಡಿದ್ದವೋ, ಅದರೊಳಗಿರುವ ಪ್ರಾಣಿಗಳು ಪಾಪಕರ್ಮಗಳಿಂದ ಕೂಡಿದ ಅಗ್ನಿಯೊಳಗೆ ಬೇಯುತ್ತಿರುವುವೋ, ಅವುಗಳಿಗೆ ನಿಜವಾದ ಪೂಜಾವಿಧಿಯನ್ನು ಹೇಳಿ, ಸರಿಯಾದ ಉಪಾಸನೆಯನ್ನು ಮಾಡಿಸುತ್ತಾನೋ, ಯಾವ ಕಾರಣದಿಂದ ಬಲಿ ನೀಡುವಂತಹ ಪಶುಗಳ ರೂಪದಲ್ಲಿ ಜನ್ಮ–ಮೃತ್ಯುವಿನ ಕಾಲ(ಬ್ರಹ್ಮ)ನ ಆಹಾರಕ್ಕಾಗಿ ಜನ್ಮ ತಳೆಯುವುವೋ, ಅಂತಹ ತಪ್ತ ಶಿಲೆಯ ಕಷ್ಟದಿಂದ ಬಾಧಿತ ಭಕ್ತಾತ್ಮಗಳನ್ನು ಕಾಲನ ಕರ್ಮ ಬಂಧನವು ಆವರಿಸಿದ ಜಾಲವನ್ನು ಹರಿದು ಬಂಧನ ಮುಕ್ತ ಮಾಡುತ್ತಾನೆ ಅರ್ಥಾತ್ ಬಂಧನದಿಂದ ಬಿಡಿಸುವವನು, ಬಂಧಮುಕ್ತನನ್ನಾಗಿ ಮಾಡುವವನೇ ಆಗಿದ್ದಾನೆ.**

**ಇದರ ಪ್ರಮಾಣವು ಪವಿತ್ರ ಯಜುರ್ವೇದ ಅಧ್ಯಾಯ 5 ಮಂತ್ರ 32ರಲ್ಲಿ ಹೀಗಿದೆ. ಕವಿರಂಘಾರಿಸಿ (ಕವಿರ್) ಕಬೀರ್ ಪರಮೇಶ್ವರ (ಅಂಘ) ಪಾಪದ (ಅರಿ) ಶತ್ರು (ಅಸಿ) ಆಗಿದ್ದಾನೆ. ಅರ್ಥಾತ್ ಪಾಪ ವಿನಾಶಕ ಕಬೀರನಾಗಿದ್ದಾನೆ. ಬಂಭಾರಿಸಿ (ಬಂಭಾರಿ) ಬಂಧನದ ಶತ್ರು ಅರ್ಥಾತ್ ಬಂಧಮುಕ್ತ ಕಬೀರ್ ಪರಮೇಶ್ವರ (ಅಸಿ) ಆಗಿದ್ದಾನೆ.**

**ಋಗ್ವೇದ 10ನೇ ಮಂಡಲದ 90ನೇ ಸೂಕ್ತಿಯ 16ನೇ ಮಂತ್ರ.**

ಯಜ್ಞೆನ ಯಜ್ಞಮಯ ಜಂತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ।
ತೆ ಹ ನಾಕಂ ಮಹಿಮಾನಃ ಸಚಂತ
ಯತ್ರ ಪೂರ್ವೆ ಸಾಧ್ಯಾಃ ಸಂತಿ ದೇವಾಃ ॥ 16 ॥

**ಯಜ್ಞೆನ್–ಅಯಜ್ಞಮ್–ಅ–ಯಜಂತ್–ದೇವಾಃ–ತಾನಿ–ಧರ್ಮಾಣಿ–ಪ್ರಥಮಾನಿ–ಆಸನ್–ತೆ–ಹ–ನಾಕಮ್–ಮಹಿಮಾನಃ–ಸಚಂತ–ಯತ್ರ–ಪೂರ್ವೆ–ಸಾಧ್ಯಾಃ–ಸಂತಿ ದೇವಾಃ ।**

ಅನುವಾದ :– ಯಾವ (ದೇವಾಃ) ನಿರ್ವಿಕಾರ ದೇವ ಸ್ವರೂಪ ಭಕ್ತಾತ್ಮಗಳು (ಅಯಜ್ಞಮ್) ಪೂರ್ಣವಲ್ಲದ, ತಪ್ಪಾದ ಧಾರ್ಮಿಕ ಪೂಜೆಯ ಸ್ಥಾನದಲ್ಲಿ (ಯಜ್ಞೆನ) ಸತ್ಯ ಭಕ್ತಿ ಧಾರ್ಮಿಕ ಕರ್ಮದ ಆಧಾರದ ಮೇಲೆ (ಅಯಜಂತ) ಪೂಜೆ ಮಾಡುವರೋ (ತಾನಿ) ಅವರು (ಧರ್ಮಾಣಿ) ಧಾರ್ಮಿಕ ಶಕ್ತಿಸಂಪನ್ನರು (ಪ್ರಥಮಾನಿ) ಮುಖ್ಯ ಅರ್ಥಾತ್ ಉತ್ತಮ (ಆಸನ್)ರು ಆಗಿದ್ದಾರೆ. (ತೆಹ) ಇದೇ ವಾಸ್ತವದಲ್ಲಿ (ಮಹಿಮಾನಃ) ಮಹಾನ್ ಭಕ್ತಿ, ಶಕ್ತಿವಂತರಾಗಿ (ಸಾಧ್ಯಾಃ) ಸಫಲ ಭಕ್ತಜನರಂತೆ (ನಾಕಮ್) ಪೂರ್ಣ ಸುಖದಾಯಕ ಪರಮೇಶ್ವರನಿಗೆ (ಸಚಂತ) ಭಕ್ತಿಯ ಕಾರಣದಿಂದ ಅರ್ಥಾತ್ ಸತ್ಯಭಕ್ತಿಯ ಸಂಚಯದಿಂದ ಪ್ರಾಪ್ತಿಯಾಗುತ್ತದೆ. ಅವರು ಅಲ್ಲಿಗೆ (ಸತ್ಯಲೋಕ್) ಹೊರಟು ಹೋಗುತ್ತಾರೆ. (ಯತ್ರ) ಎಲ್ಲಿ (ಪೂರ್ವೆ) ಮೊದಲ ಬಾರಿ ಸೃಷ್ಟಿಯ (ದೇವಾಃ) ಪಾಪರಹಿತ ದೇವ ಸ್ವರೂಪ ಭಕ್ತ ಆತ್ಮಗಳು (ಸಂತಿ) ವಾಸವಾಗಿರುತ್ತವೋ, ಅಲ್ಲಿಗೆ ಹೋಗುತ್ತಾರೆ.

**ಭಾವಾರ್ಥ :– ಯಾವ ನಿರ್ವಿಕಾರ (ಯಾರು ಮಾಂಸ, ಮದಿರೆ, ತಂಬಾಕು ಸೇವನೆಯನ್ನು ತ್ಯಾಗ ಮಾಡಿದ್ದಾರೋ ಮತ್ತು ಅನ್ಯ ಕೆಟ್ಟ ವಿಚಾರಗಳಿಂದ ದೂರವಿರುತ್ತಾರೋ ಅವರು) ದೇವ ಸ್ವರೂಪ ಭಕ್ತ ಆತ್ಮಗಳು ಶಾಸ್ತ್ರವಿಧಿರಹಿತ ಪೂಜೆಯನ್ನು ತ್ಯಾಗಮಾಡಿ ಶಾಸ್ತ್ರಬದ್ಧವಾದ ಸಾಧನೆಯನ್ನು ಮಾಡುವರೋ ಅವರು ಭಕ್ತಿಯ ಶಕ್ತಿಯನ್ನು ಪಡೆದು ಶ್ರೀಮಂತರಾಗಿ ಕಾಲನ ಋಣದಿಂದ ಮುಕ್ತರಾಗುವರು, ತಮ್ಮ ಸತ್ಯ ಭಕ್ತಿಯ ಶಕ್ತಿಯಿಂದ ಆ ಸರ್ವಸುಖದಾತ ಪರಮಾತ್ಮನನ್ನು ಪಡೆಯುವರು ಅರ್ಥಾತ್ ಸತ್ಯಲೋಕಕ್ಕೆ ಹೊರಟು ಹೋಗುವರು. ಅಲ್ಲಿ ಸರ್ವ ಪ್ರಥಮದಲ್ಲಿನ ಸೃಷ್ಟಿಯ ದೇವ ಸ್ವರೂಪ ಅರ್ಥಾತ್ ಪಾಪರಹಿತ ಹಂಸಾತ್ಮಗಳು ವಾಸವಾಗಿರುವುವು.**

**ಹಾಗೆಯೇ ಕೆಲವು ಆತ್ಮಗಳಂತೂ ಕಾಲ(ಬ್ರಹ್ಮ)ನ ಜಾಲದಲ್ಲಿ ಸಿಲುಕಿಕೊಂಡು ಇಲ್ಲಿಗೆ ಬಂದಿವೆ, ಕೆಲವು ಪರಬ್ರಹ್ಮನ ಜೊತೆ 7 ಸಂಖ ಬ್ರಹ್ಮಾಂಡಗಳಿಗೆ ಹೋಗಿವೆ. ಆದರೂ ಕೂಡಾ ಯಾರ ಅಸಂಖ್ಯ ಆತ್ಮಗಳು ಪೂರ್ಣ ಪರಮಾತ್ಮನಲ್ಲಿ ಅಚಲವಾದ ವಿಶ್ವಾಸ ಇಡುತ್ತವೆಯೋ, ಯಾರು ಪತಿವ್ರತಾ ಧರ್ಮದಿಂದ ಕೆಳಗೆ ಇಳಿದಿಲ್ಲವೋ ಆ ಎಲ್ಲಾ ಆತ್ಮಗಳು ಅಲ್ಲೇ ಉಳಿದಿದ್ದಾವೆ. ಈ ಕಾರಣದಿಂದ ಇಲ್ಲಿ ಅದೇ ವರ್ಣನೆಯನ್ನು ಪವಿತ್ರ ವೇದಗಳೂ ಕೂಡಾ ಸತ್ಯವೆಂದೇ ಹೇಳಿವೆ.**

**ಇದರ ಪ್ರಮಾಣವು ಗೀತೆಯ ಅಧ್ಯಾಯ 8. ಶ್ಲೋಕ ಸಂಖ್ಯೆ 8ರಿಂದ 10ರಲ್ಲಿ ಹೀಗೆ ವರ್ಣನೆಯನ್ನು ಮಾಡಿರುವರು.**

**ಯಾವ ಸಾಧಕನು ಪೂರ್ಣ ಪರಮಾತ್ಮನ ಸತ್ಯಸಾಧನೆ ಶಾಸ್ತ್ರವಿಧಿಯ ಅನುಸಾರವಾಗಿ ಮಾಡುವನೋ ಅವನು ಭಕ್ತಿಯ ಶಕ್ತಿಯ ಬಲದಿಂದ ಆ ಪೂರ್ಣ ಪರಮಾತ್ಮನನ್ನು ಪಡೆಯುತ್ತಾನೆ ಅರ್ಥಾತ್ ಆತನ ಬಳಿಗೆ ಹೊರಟು ಹೋಗುತ್ತಾನೆ. ಈ ಮಾತಿನಿಂದ ತಿಳಿದು ಬರುವುದೇನೆಂದರೆ ಮೂವರು ಪ್ರಭುಗಳು–ಬ್ರಹ್ಮ, ಪರಬ್ರಹ್ಮ ಹಾಗೂ ಪೂರ್ಣ ಬ್ರಹ್ಮ ಇವರುಗಳಿಗೆ**

**1. ಬ್ರಹ್ಮ – ಈಶ – ಕ್ಷರ ಪುರುಷ**

2. ಪರಬ್ರಹ್ಮ – ಅಕ್ಷರ ಪುರುಷ/ ಅಕ್ಷರ ಬ್ರಹ್ಮ ಈಶ್ವರ ಮತ್ತು

3. ಪೂರ್ಣಬ್ರಹ್ಮ– ಪರಮ ಅಕ್ಷರ ಬ್ರಹ್ಮ – ಪರಮೇಶ್ವರ –ಸತ್ಯಪುರುಷ ಮುಂತಾದ ಪರ್ಯಾಯ ಶಬ್ದಗಳಿಂದ ಕರೆಯಲಾಗುತ್ತದೆ.

ಇದರ ಪ್ರಮಾಣವು ಋಗ್ವೇದ ಮಂಡಲ 9 ಸೂಕ್ತಿ 96 ಮಂತ್ರ 17ರಿಂದ 20ರವರೆಗೆ ಸ್ಪಷ್ಟವಾಗಿದೆ. ಹೇಗೆಂದರೆ ಪೂರ್ಣ ಪರಮಾತ್ಮ ಕವಿರ್ದೇವನು (ಕಬೀರ ಪರಮೇಶ್ವರ) ಶಿಶು ರೂಪಧಾರಣೆ ಮಾಡಿ ಪ್ರಕಟವಾಗಿರುವನು ಮತ್ತು ತನ್ನ ನಿರ್ಮಲ ಜ್ಞಾನ ಅರ್ಥಾತ್ ತತ್ವಜ್ಞಾನ (ಕವಿರ್ಗೀರ್ಭಿಃ) ಕಬೀರ್ ವಾಣಿಯ ಮೂಲಕ ತಮ್ಮ ಅನುಯಾಯಿಗಳಿಗೆ ಮತ್ತೆ–ಮತ್ತೆ ಹೇಳುತ್ತಾ ವರ್ಣನೆ ಮಾಡುವನು. ಆ ಕವಿರ್ದೇವ (ಕಬೀರ ಪರಮೇಶ್ವರ) ಬ್ರಹ್ಮನ (ಕ್ಷರಪುರುಷ) ಧಾಮ (ಕ್ಷೇತ್ರ) ಮತ್ತು ಪರಬ್ರಹ್ಮ (ಅಕ್ಷರ ಪುರುಷ)ನ ಕ್ಷೇತ್ರದಿಂದ ಬೇರೆಯಾದ ಯಾವ ಪೂರ್ಣ ಬ್ರಹ್ಮ (ಪರಮ ಅಕ್ಷರ ಪುರುಷ)ನ ಮೂರನೇ ಋತಧಾಮ (ಸತ್ಯಲೋಕ)ವಾಗಿದೆ. ಅದರಲ್ಲಿ ಆಕಾರವನ್ನು ಹೊಂದಿ ವಿರಾಜಮಾನವಾಗಿದ್ದಾನೆ ಮತ್ತು ಸತ್ಯಲೋಕದಿಂದ ನಾಲ್ಕನೇ ಅನಾಮಿಲೋಕವೂ ಇದೆ. ಅದರಲ್ಲಿಯೂ ಈ ಕವಿರ್ದೇನೇ (ಕಬೀರ ಪರಮೇಶ್ವರ) ಅನಾಮಿ ಪುರುಷ ರೂಪದಲ್ಲಿ ಮನುಷ್ಯ ಸದೃಶ ಆಕಾರದಲ್ಲಿ ವಿರಾಜಮಾನನಾಗಿದ್ದಾನೆ.

## "ಪವಿತ್ರ ಶ್ರೀಮದ್‌ದೇವಿ ಮಹಾಪುರಾಣದಲ್ಲಿ ಸೃಷ್ಟಿ ರಚನೆಯ ಆಧಾರ"

## "ಬ್ರಹ್ಮಾ, ವಿಷ್ಣು ಮತ್ತು ಶಿವನ ತಂದೆ–ತಾಯಿ"

(ದುರ್ಗಾ ಮತ್ತು ಬ್ರಹ್ಮನ ಸಂಯೋಗದಿಂದ ಬ್ರಹ್ಮಾ, ವಿಷ್ಣು ಮತ್ತು ಶಿವನ ಜನ್ಮ)

ಪವಿತ್ರವಾದ ಶ್ರೀಮದ್ ದೇವಿ ಮಹಾಪುರಾಣ ಮೂರನೇ ಸ್ಕಂದ ಅಧ್ಯಾಯ 1–3 (ಗೀತಾ ಪ್ರೆಸ್ ಗೋರಖ್‌ಪುರದಿಂದ ಪ್ರಕಾಶಿತ, ಅನುವಾದಕರು ಕೀರ್ತನಾಚಾರ್ಯ ಲಕ್ಷ್ಮಣದಾಸ್ ವೇಲಣಕರ್.)

ಪುಟ ಸಂ. 97ರಿಂದ 102ರ ತನಕ ನಮಗೆ ಸೃಷ್ಟಿಯ ಬಗ್ಗೆ ವಿವರಣೆ ದೊರೆಯುವುದು. ಅದೇನೆಂದರೆ ಆಚಾರ್ಯರು ದೇವಿ ಭವಾನಿಯನ್ನು ಸಂಪೂರ್ಣ ಮನೋಕಾಮನೆಯನ್ನು ಪೂರ್ಣಗೊಳಿಸುವವಳು ಎಂದಿದ್ದಾರೆ. ಅವಳನ್ನು ಪ್ರಕೃತಿ ಎಂದೂ ಕರೆಯಲಾಗುತ್ತದೆ ಮತ್ತು ಬ್ರಹ್ಮನ ಜೊತೆಯಲ್ಲಿ ಬೇರೆ ಮಾಡಲಾಗದೇ ಇರುವಷ್ಟು ಸಂಬಂಧವನ್ನು ಹೊಂದಿದ್ದಾಳೆ. ಹೇಗೆಂದರೆ ಪತ್ನಿಯನ್ನು ಅರ್ಧಾಂಗಿ ಎಂದೂ ಕೂಡಾ ಹೇಳುವರು. ಅರ್ಥಾತ್ ದುರ್ಗಾ ದೇವಿಯು ಬ್ರಹ್ಮ (ಕಾಲ)ನ ಪತ್ನಿಯಾಗಿದ್ದಾಳೆ. ಒಂದು ಬ್ರಹ್ಮಾಂಡದ ಸೃಷ್ಟಿ ಮಾಡುವ ವಿಷಯದಲ್ಲಿ ರಾಜಾ ಶ್ರೀ ಪರೀಕ್ಷಿತ್ ರಾಜನ ವಿನಂತಿಯ ಮೇರೆಗೆ ಶ್ರೀ ವ್ಯಾಸರು ಹೀಗೆ ಹೇಳಿದ್ದರು. "ನಾನು ಶ್ರೀನಾರದರನ್ನು ವಿಚಾರಸಿದೆನು. ಹೇ ದೇವರ್ಷಿ! ಈ ಬ್ರಹ್ಮಾಂಡದ ರಚನೆ ಹೇಗಾಯಿತು? ನನ್ನ ಈ ಪ್ರಶ್ನೆಗೆ ಉತ್ತರವಾಗಿ, ಶ್ರೀನಾರದರು ಹೇಳಿದರು, ನಾನು ನನ್ನ ತಂದೆ ಶ್ರೀ ಬ್ರಹ್ಮಾನನ್ನು ಸೃಷ್ಟಿಯ ಬಗ್ಗೆ ಪ್ರಶ್ನಿಸಿದ್ದೆ. ತಂದೆಯೇ ಈ ಬ್ರಹ್ಮಾಂಡದ ರಚನೆಯನ್ನು ತಾವು ಮಾಡಿದಿರೋ? ಶ್ರೀ ವಿಷ್ಣು ಈ ಸೃಷ್ಟಿಯ ರಚನಕಾರನೇ ಅಥವಾ ಶಿವನು ರಚನೇ ಮಾಡಿದನೇ? ನಿಜವನ್ನು ಹೇಳುವ ಕೃಪೆ ಮಾಡಿ ಎಂದಾಗ ನನ್ನ ಪೂಜ್ಯ ತಂದೆ ಶ್ರೀ ಬ್ರಹ್ಮಾ ಹೀಗೆ ಹೇಳಿದನು. "ಮಗೂ ನಾರದ, ನಾನು ಕಮಲದ ಹೂವಿನ ಮೇಲೆ ಕುಳಿತುಕೊಂಡಿದ್ದನ್ನು ಕಂಡಿರುವೆನು, ನನಗೆ ನಿಜವಾಗಲೂ ಈ ಸೃಷ್ಟಿಯ ರಚನೆ ಹೇಗಾಯಿತೆಂದು ಗೊತ್ತಿಲ್ಲ ಈ ಅಗಾಧವಾದ ಜಲರಾಶಿಯಲ್ಲಿ ನಾನು ಹೇಗೆ ಹುಟ್ಟಿ ಬಂದೆ ಎಂಬುದೂ ತಿಳಿದಿಲ್ಲ. ಒಂದು ಸಾವಿರ ವರ್ಷಗಳವರೆಗೆ ಪೃಥ್ವಿಯಲ್ಲಿ ಹುಡುಕಾಡಿದೆನು. ಆದರೆ ಎಲ್ಲಿಯೂ ನೀರಿನ ಆದಿ–ಅಂತ್ಯಗಳನ್ನು ಪಡೆಯಲಿಲ್ಲ. ನಂತರ ತಪಸ್ಸನ್ನು ಮಾಡು ಎಂಬುದಾಗಿ ಆಕಾಶವಾಣಿ ಹೇಳಿತು. ಒಂದು ಸಾವಿರ ವರ್ಷದವರೆಗೆ ತಪಸ್ಸನ್ನು ಮಾಡಿದೆನು. ಮತ್ತೆ ಆಕಾಶವಾಣಿ ಸೃಷ್ಟಿಯನ್ನು ರಚಿಸು ಎಂಬುದಾಗಿ ನುಡಿಯಿತು. ಇಷ್ಟರಲ್ಲಿ ಮಧು

ಮತ್ತು ಕೈಟಭರೆಂಬ ಇಬ್ಬರು ರಾಕ್ಷಸರು ಬಂದರು. ಅವರುಗಳ ಭಯದಿಂದ ನಾನು ಕಮಲದ ಹೂವಿನ ಕಾಂಡವನ್ನು ಹಿಡಿದು ಕೆಳಗೆ ಇಳಿದೆನು. ಅಲ್ಲಿ ಭಗವಂತ ವಿಷ್ಣುವು ಶೇಷಶಯನದಲ್ಲಿ ಚೇತನಹೀನನಾಗಿ ಮಲಗಿದ್ದನು. ಅವನಿಂದ ಒಬ್ಬ ಸ್ತ್ರೀ ಹೊರಬಂದಳು. (ಪ್ರೇತಸ್ವರೂಪಿ (ಆತ್ಮ)ಳ ಆಗಮನ ದುರ್ಗಾ) ದುರ್ಗಾಳು ಆಕಾಶದಲ್ಲಿ ಒಡವೆಗಳನ್ನು ಧರಿಸಿದಂತೆ ಕಾಣಿಸಿದಳು. ಆಗ ಭಗವಂತ ವಿಷ್ಣುವು ಮೂರ್ಛೆಯಿಂದ ಎದ್ದನು. ಆಗ ನಾನು ಮತ್ತು ವಿಷ್ಣು ಇಬ್ಬರಿದ್ದೆವು. ಆ ಸಮಯದಲ್ಲಿ ಭಗವಂತ ಶಂಕರನೂ ಅಲ್ಲಿಗೆ ಆಗಮಿಸಿದನು. ದೇವಿಯು ನಮ್ಮನ್ನು ವಿಮಾನದಲ್ಲಿ ಕುಳ್ಳಿರಿಸಿಕೊಂಡು ಬ್ರಹ್ಮಲೋಕಕ್ಕೆ ಕರೆದೊಯ್ದಳು. ಅಲ್ಲಿ ಒಬ್ಬ ಬ್ರಹ್ಮಾ, ಒಬ್ಬ ವಿಷ್ಣು ಮತ್ತು ಒಬ್ಬ ಶಿವ ಹಾಗೂ ಮತ್ತೊಬ್ಬ ದೇವಿಯನ್ನು ಕಂಡೆವು. ಅವರನ್ನು ನೋಡಿ ವಿಷ್ಣುವು ವಿವೇಕಪೂರ್ವಕವಾಗಿ ಈ ಕೆಳಗಿನಂತೆ ವರ್ಣನೆ ಮಾಡಿದನು. (ಬ್ರಹ್ಮ ಕಾಲನು ಭಗವಾನ್ ವಿಷ್ಣುವಿಗೆ ಚೇತನ (ಶಕ್ತಿ) ವನ್ನು ನೀಡಿದನು. ಆಗ ವಿಷ್ಣುವಿಗೆ ತನ್ನ ಬಾಲ್ಯಕಾಲದ ನೆನಪು ಬಂದು, ತನ್ನ ಬಾಲ್ಯದ ಕಥೆಯನ್ನು ಹೇಳಿದನು.

ಪುಟ ಸಂ. 103 ರಲ್ಲಿ ಭಗವಂತ ವಿಷ್ಣುವು ಶ್ರೀ ಬ್ರಹ್ಮಾ ಹಾಗೂ ಶ್ರೀ ಶಿವನೊಡನೆ ಹೀಗೆ ಹೇಳಿದನು. "ಈ ದೇವಿಯು ನಮ್ಮ ಮೂರೂ ಜನಕ್ಕೆ ತಾಯಿಯಾಗಿದ್ದಾಳೆ, ಇವಳೇ ಜಗಜ್ಜನನಿ ಪ್ರಕೃತಿದೇವಿ. ನಾನು ಈ ದೇವಿಯನ್ನು ನಾನು ಸಣ್ಣ ಬಾಲಕನಾಗಿದ್ದಾಗ ನೋಡಿದ್ದೆನು. ಈಕೆ ನನ್ನನ್ನು ತೊಟ್ಟಿಲಲ್ಲಿ ಮಲಗಿಸಿ ತೂಗುತ್ತಿದ್ದಳು".

ಮೂರನೇ ಸ್ಕಂದ ಪುಟ ಸಂಖ್ಯೆ 105ರಲ್ಲಿ ಶ್ರೀವಿಷ್ಣುವು ಶ್ರೀ ದುರ್ಗಾದೇವಿಯ ಸ್ತುತಿಯನ್ನು ಮಾಡುತ್ತಾ ಹೀಗೆ ಹೇಳಿದನು. "ನೀನು ಶುದ್ಧ ಸ್ವರೂಪಳು, ಈ ಎಲ್ಲಾ ಪ್ರಪಂಚವು ನಿನ್ನಿಂದ ಬೆಳಕಿಗೆ ಬಂದಿದೆ (ರಚಿತವಾಗಿದೆ). ನಾನು (ವಿಷ್ಣು) ಬ್ರಹ್ಮಾ ಮತ್ತು ಶಂಕರ. ನಾವೆಲ್ಲರೂ ನಿನ್ನ ಕೃಪೆಯಿಂದಲೇ ಈ ಪ್ರಪಂಚದಲ್ಲಿದ್ದೇವೆ. ನಮ್ಮ ಆವಿರ್ಭಾವ (ಜನ್ಮ) ಮತ್ತು ತಿರೋಭಾವ (ಮೃತ್ಯು) ಎರಡೂ ಆಗುತ್ತಿರುತ್ತವೆ. ಅರ್ಥಾತ್ ನಾವು ಮೂರೂ ದೇವತೆಗಳು ನಾಶವಾಗುವೆವು. ಕೇವಲ ನೀನು ಮಾತ್ರ ನಿತ್ಯಳು (ಅವಿನಾಶಿ). ನೀನು ಜಗಜ್ಜನನಿಯು ಹಾಗೂ ಪ್ರಕೃತಿದೇವಿ ಕೂಡಾ ಆಗಿರುವೆ". ಭಗವಂತ ಶಂಕರನು ಹೇಳಿದನು. "ದೇವೀ ಒಂದು ವೇಳೆ ಮಹಾಭಾಗ ವಿಷ್ಣು ನಿನ್ನಿಂದಲೇ ಪ್ರಕಟವಾಗಿದ್ದಾನೆಂದರೆ (ಉತ್ಪನ್ನ) ಅವನ ನಂತರ ಸೃಷ್ಟಿಯಾದ ಬ್ರಹ್ಮಾ ಕೂಡಾ ನಿನ್ನ ಮಗನೇ ಆಗಿದ್ದಾನೆ. ಮತ್ತು ನಾನು ತಮೋಗುಣದ ಲೀಲೆಯನ್ನು ನಡೆಸುವ ಶಂಕರ ನಿನ್ನ ಸಂತಾನವಲ್ಲವೇ? ಅಂದರೆ ನನ್ನನ್ನು ಸೃಷ್ಟಿಸಿದವಳು ನೀನೇ ಅಲ್ಲವೇ?"

ಚಿಂತಿಸಿ :– ಈ ಮೇಲೆ ನೀಡಿದ ವಿವರಣೆಯಿಂದ ಪ್ರಮಾಣಿತವಾದುದೇನೆಂದರೆ ಶ್ರೀ ಬ್ರಹ್ಮಾ, ಶ್ರೀವಿಷ್ಣು, ಶ್ರೀಶಿವ ಈ ಮೂರೂ ಜನ ನಾಶವಾಗುವವರು ಅಂದರೆ ಕೊನೆಗಾಣುವವರು. ಮೃತ್ಯುಂಜಯ (ಅಜರ–ಅಮರ) ಅಥವಾ ಸರ್ವೇಶ್ವರರಲ್ಲ ಮತ್ತು ದುರ್ಗಾದೇವಿ (ಪ್ರಕೃತಿ)ಯ ಪುತ್ರರು ಮತ್ತು ಬ್ರಹ್ಮ (ಕಾಲ–ಸದಾಶಿವ) ಇವರ ತಂದೆಯಾಗಿದ್ದಾನೆ.

ಮೂರನೆ ಸ್ಕಂದ ಪುಟ ಸಂಖ್ಯೆ 107ರಲ್ಲಿ ಬ್ರಹ್ಮಾನು ಮಾತೆಯನ್ನು ಹೀಗೆ ಪ್ರಶ್ನಿಸಿದನು. "ಹೇ ಮಾತೆ! ವೇದಗಳಲ್ಲಿ ಬ್ರಹ್ಮನೆಂದು ಹೇಳಲಾಗಿದೆಯಲ್ಲಾ, ಆ ಬ್ರಹ್ಮ ನೀವೇನೇ ಅಥವಾ ಬೇರೆ ಪ್ರಭು ಇರುವನೇ?" ಈ ಪ್ರಶ್ನೆಗೆ ಉತ್ತರವಾಗಿ ಇಲ್ಲಂತೂ ದುರ್ಗಾಮಾತೆ ಹೇಳುತ್ತಿರುವಳು. ಏನೆಂದರೆ ನಾನು ಮತ್ತು ಬ್ರಹ್ಮ ಒಂದೇ ಆಗಿದ್ದೇವೆ". ಮತ್ತೆ ಇದೇ ಸ್ಕಂದ ಅ. 6ರ ಪುಟ ಸಂ. 111ರಲ್ಲಿ ಹೇಳಲಾಗಿದೆ. ಏನೆಂದರೆ "ಈಗ ನನ್ನ ಕಾರ್ಯ ಸಫಲಗೊಳಿಸಲು ವಿಮಾನದಲ್ಲಿ ಕುಳಿತುಕೊಂಡು ನೀವೆಲ್ಲರೂ ಶೀಘ್ರವಾಗಿ ತೆರಳಿ (ಹೊರಡಿ). ಯಾವುದೇ ಕಠಿಣ ಕಾರ್ಯ ನಿಮಗೆ ಎದುರಾದಲ್ಲಿ ನನ್ನನ್ನು ನೆನಪಿಸಿಕೊಳ್ಳಿ. ಆಗ ನಾನು ನಿಮ್ಮ ಮುಂದೆ ಪ್ರಕಟವಾಗುವೆನು. ದೇವತೆಗಳೇ, ನನ್ನ (ದುರ್ಗೆಯ) ಮತ್ತು ಬ್ರಹ್ಮನ ಧ್ಯಾನವನ್ನು ಯಾವಾಗಲೂ ಮಾಡುತ್ತಿರಬೇಕು. ನಮ್ಮಿಬ್ಬರ ಸ್ಮರಣೆ ಮಾಡ್ತಾ

ಇರುವುದರಿಂದಲೇ ನಿಮ್ಮಗಳ ಕಾರ್ಯಗಳು ಸಫಲವಾಗುವುದರಲ್ಲಿ ಯಾವುದೇ ಸಂದೇಹವಿರುವುದಿಲ್ಲ".

ಮೇಲೆ ಹೇಳಿರುವ ವಿಷಯದಿಂದ ದುರ್ಗಾದೇವಿ (ಪ್ರಕೃತಿ) ಮತ್ತು ಬ್ರಹ್ಮ (ಕಾಲ)ರು ಮೂರೂ ದೇವತೆಗಳ ತಂದೆ-ತಾಯಿಯರೆಂದೂ ಮತ್ತು ಬಹ್ಮಾ, ವಿಷ್ಣು ಮತ್ತು ಶಿವರು ನಾಶವಾಗುವವರೆಂದೂ, ಪೂರ್ಣರೂಪದಲ್ಲಿ ಶಕ್ತಿವಂತರಲ್ಲವೆಂದೂ ಸಾಬೀತು ದೊರೆತಿದೆ.

ಮೂರೂ ದೇವತೆಗಳ (ಶ್ರೀ ಬ್ರಹ್ಮಾ, ಶ್ರೀ ವಿಷ್ಣು, ಶ್ರೀ ಶಿವ) ಮದುವೆಯು ದುರ್ಗಾದೇವಿಯೇ ಮಾಡಿದ್ದಾಳೆ. (ಪ್ರಕೃತಿದೇವಿ) ಪುಟ ಸಂ. 109, 110 3ನೇ ಸ್ಕಂದ.

ಗೀತೆಯ 7ನೇ ಅಧ್ಯಾಯದ 12ನೇ ಶ್ಲೋಕ.

ಯೆ. ಚ. ಏವ, ಸಾತ್ವಿಕಾಃ, ಭಾವಾಃ, ರಾಜಸಾಃ, ತಾಮಸಾಃ ಚ, ಯೆ, ।
ಮತಃ, ಏವ, ಇತಿ, ತಾನ್, ವಿದ್ಧಿ, ನ, ತು, ಅಹಮ್, ತೇಷು, ತೆ, ಮಯೀ ॥

ಅನುವಾದ :- (ಚ) ಮತ್ತು (ಏವ) ಕೂಡ (ಯೆ) ಯಾವ (ಸಾತ್ವಿಕಾಃ) ಸತ್ವಗುಣ ವಿಷ್ಣುವಿನಿಂದ ಸ್ಥಿತಿ (ಭಾವಾಃ) ಭಾವವಿದೆ ಮತ್ತು (ಯೆ) ಯಾವ (ರಾಜಸಾಃ) ರಜೋಗುಣ ಬ್ರಹ್ಮಾನಿಂದ ಉತ್ಪತ್ತಿ (ಚ) ಮತ್ತು (ತಾಮಸಾಃ) ತಮೋಗುಣ. ಭಾವದಿಂದ ಸಂಹಾರ (ನಾಶ) ವಾಗುತ್ತಿದೆಯೋ, (ತಾನ್) ಆ ಎಲ್ಲರಿಗೂ ನೀನು (ಮತಃ ಏವ) ನನ್ನ ಮೂಲಕ ಮೊದಲೇ ನಿರ್ಧಾರವಾದಂತೆ ನಿಯಮಾನುಸಾರವಾಗಿಯೇ ನಡೆಯುವುದು (ಇತಿ) ಹಾಗೆಯೇ (ವಿದ್ಧಿ) ತಿಳಿ (ತು) ಆದರೆ ವಾಸ್ತವದಲ್ಲಿ (ತೇಷು) ಅವರಲ್ಲಿ (ಅಹಮ್) ನಾನು ಮತ್ತು (ತೆ) ಅವುಗಳು (ಮಯಿ) ನನ್ನಲ್ಲಿ (ನ) ಇಲ್ಲ.

## "ಪವಿತ್ರ ಶಿವ ಮಹಾಪುರಾಣದಲ್ಲಿ ಸೃಷ್ಟಿ ರಚನೆಯ ಆಧಾರ"

(ಕಾಲ ಬ್ರಹ್ಮ ಮತ್ತು ದುರ್ಗೆಯಿಂದ ವಿಷ್ಣು, ಬ್ರಹ್ಮಾ ಮತ್ತು ಶಿವನ ಉತ್ಪತ್ತಿ)

ಈ ಮೇಲಿನ ಹೇಳಿಕೆಯ ಪ್ರಮಾಣವು ಪವಿತ್ರ ಶ್ರೀ ಶಿವ ಪುರಾಣ (ಗೀತಾ ಪ್ರೆಸ್, ಗೋರಖ್‌ಪುರದವರಿಂದ ಪ್ರಕಾಶಿತ, ಅನುವಾದಕರು ಕೀರ್ತನಾಚಾರ್ಯ ಲಕ್ಷ್ಮಣದಾಸ್ ವೇಲಣಕರ್)ದ ಅಧ್ಯಾಯ 6 ರುದ್ರ ಸಂಹಿತಾ, ಪುಟ ಸಂ. 81ರಲ್ಲಿ ಹೀಗೆ ಹೇಳಲಾಗಿದೆ. ಯಾರು ಮೂರ್ತಿರಹಿತ ಪರಬ್ರಹ್ಮನೋ, ಅವನ ಮೂರ್ತಿಯೇ ಭಗವಂತ ಸದಾಶಿವನಾಗಿದ್ದಾನೆ. ಇವನ ಶರೀರದಿಂದ ಒಂದು ಶಕ್ತಿ ಹೊರಹೊಮ್ಮಿತು. ಆ ಶಕ್ತಿಯೇ ಅಂಬಿಕಾ, ಪ್ರಕೃತಿ (ದುರ್ಗಾ), ತ್ರಿದೇವ ಜನನಿ (ಬ್ರಹ್ಮಾ, ವಿಷ್ಣು ಮತ್ತು ಶಿವರನ್ನು ಸೃಷ್ಟಿ ಮಾಡಿದ ತಾಯಿ) ಎಂದು ಕರೆಯಲ್ಪಟ್ಟಳು. ಆಕೆಗೆ 8 ಭುಜಗಳಿವೆ. ಯಾರನ್ನು ನಾವು ಸದಾಶಿವರೆಂದು ಕರೆಯುತ್ತೇವೋ ಅವರನ್ನು ಶಿವ, ಶಂಭೂ ಮತ್ತು ಮಹೇಶ್ವರ ಎಂದೂ ಹೇಳುತ್ತೇವೆ.

ರುದ್ರ ಸಂಹಿತೆಯ ಪುಟ ಸಂ. 82 ರಲ್ಲಿ : ಅವನು ತನ್ನ ಶರೀರಕ್ಕೆ ಭಸ್ಮದಿಂದ ಲೇಪನವನ್ನು ಮಾಡಿಕೊಂಡಿರುತ್ತಾನೆ. ಆ ಕಾಲರೂಪಿ ಬ್ರಹ್ಮನು ಒಂದು ಶಿವಲೋಕವೆಂಬ ಕ್ಷೇತ್ರವನ್ನು ನಿರ್ಮಾಣ ಮಾಡಿದನು. ನಂತರ ಇಬ್ಬರೂ ಪತಿ-ಪತ್ನಿಯ ಸಂಬಂಧದಿಂದ ಒಬ್ಬ ಪುತ್ರನ ಜನ್ಮಕ್ಕೆ ಕಾರಣರಾದರು. ಅವನ ಹೆಸರನ್ನು ವಿಷ್ಣುವೆಂದು ಇಟ್ಟರು. ಪುಟ ಸಂಖ್ಯೆ. 83 ರಲ್ಲಿ

ತದನಂತರ ರುದ್ರ ಸಂಹಿತಾ ಅಧ್ಯಾಯ ಸಂ.7 ಪುಟ ಸಂ. 84ರಲ್ಲಿ ಬ್ರಹ್ಮಾನು ಹೇಳುತ್ತಾನೆ. ನನ್ನ ಹುಟ್ಟು ಕೂಡಾ ಭಗವಂತ ಸದಾಶಿವ (ಬ್ರಹ್ಮ-ಕಾಲ) ಮತ್ತು ಪ್ರಕೃತಿ (ದುರ್ಗಾ)ಯರ ಸಂಯೋಗದಿಂದ ಅರ್ಥಾತ್ ಪತಿ-ಪತ್ನಿಯ ವ್ಯವಹಾರದಿಂದಲೇ ಆಗಿದೆ. ನಂತರ ನನ್ನನ್ನು ಎಚ್ಚರ ತಪ್ಪುವಂತೆ ಮಾಡಲಾಯಿತು.

**ರುದ್ರ ಸಂಹಿತಾ ಅಧ್ಯಾಯ ಸಂ. 9 ಪುಟ ಸಂ. 90ರಲ್ಲಿ ಹೀಗೆ ಹೇಳಲಾಗಿದೆ, ಬ್ರಹ್ಮಾ, ವಿಷ್ಣು ಮತ್ತು ರುದ್ರ ಈ ಮೂವರಲ್ಲಿಯೂ ಗುಣಗಳಿವೆ. ಆದರೆ ಶಿವ(ಕಾಲ–ಬ್ರಹ್ಮ) ಗುಣಾತೀತನೆಂದು ನಂಬಲಾಗಿದೆ.**

**ಈ ಎಲ್ಲಾ 4 ಹೇಳಿಕೆಗಳಿಂದ ತಿಳಿದು ಬರುವುದೇನೆಂದರೆ ಅರ್ಥಾತ್ ಸದಾಶಿವ (ಕಾಲ–ಬ್ರಹ್ಮ) ಮತ್ತು ಪ್ರಕೃತಿ (ದುರ್ಗಾ) ದೇವಿಯರಿಂದಲೇ ಬ್ರಹ್ಮಾ, ವಿಷ್ಣು ಮತ್ತು ಶಿವನ ಹುಟ್ಟು ನಡೆದಿರುವುದು. ಮೂರೂ ದೇವತೆಗಳ (ಬ್ರಹ್ಮಾ, ವಿಷ್ಣು, ಶಿವ) ತಾಯಿಯು ಶ್ರೀ ದುರ್ಗಾದೇವಿ ಹಾಗೂ ತಂದೆ ಶ್ರೀಜ್ಯೋತಿ ನಿರಂಜನ (ಬ್ರಹ್ಮ) ಈ ಮೂವರು ಪ್ರಭುಗಳಲ್ಲಿ ರಜಗುಣ–ಬ್ರಹ್ಮಾ, ಸತಗುಣ–ವಿಷ್ಣು, ತಮಗುಣ–ಶಿವ ಹೊಂದಿದ್ದಾರೆ.**

## "ಪವಿತ್ರ ಶ್ರೀ ಮದ್ಭಗವದ್ಗೀತೆಯಲ್ಲಿ ಸೃಷ್ಟಿ ರಚನೆಯ ಆಧಾರ"

**ಇದರ ಪ್ರಮಾಣವು ಪವಿತ್ರಗೀತೆ ಅಧ್ಯಾಯ 14, ಶ್ಲೋಕ 3ರಿಂದ 5ರವರೆಗೆ ಇದೆ. ಬ್ರಹ್ಮ (ಕಾಲ) ಹೇಳುತ್ತಿದ್ದಾನೆ, ಪ್ರಕೃತಿಯಂತೂ (ದುರ್ಗಾ) ನನ್ನ ಪತ್ನಿ, ನಾನು ಬ್ರಹ್ಮ (ಕಾಲ) ಇವಳ ಪತಿಯಾಗಿದ್ದೇನೆ. ನಮ್ಮಿಬ್ಬರ ಸಂಯೋಗದಿಂದ ಸರ್ವ ಪ್ರಾಣಿಗಳ ಸಹಿತವಾಗಿ ಮೂರೂ ಗುಣ (ರಜೋಗುಣ–ಬ್ರಹ್ಮಾ, ಸತಗುಣ–ವಿಷ್ಣು, ತಮೋಗುಣ–ಶಿವ)ಗಳ ಸೃಷ್ಟಿಯಾಯಿತು. ನಾನು (ಬ್ರಹ್ಮ) ಎಲ್ಲಾ ಪ್ರಾಣಿಗಳ ತಂದೆ ಹಾಗೂ ಪ್ರಕೃತಿ (ದುರ್ಗಾ) ಇವುಗಳ ತಾಯಿಯಾಗಿದ್ದಾಳೆ. ನಾನು ದೇವಿಯ ಉದರದಲ್ಲಿ ಬೀಜದ ಸ್ಥಾಪನೆಯನ್ನು ಮಾಡುವೆನು. ಅದರಿಂದ ಸರ್ವಪ್ರಾಣಿಗಳ ಜನನವಾಗುವುದು. (ಪ್ರಕೃತಿ) ದುರ್ಗಾದೇವಿಯಿಂದ ಹುಟ್ಟಿದ ಮೂರು ಗುಣ (ರಜೋಗುಣ–ಬ್ರಹ್ಮಾ, ಸತ್‌ಗುಣ–ವಿಷ್ಣು ಮತ್ತು ತಮೋ ಗುಣ–ಶಿವ) ಗಳು ಜೀವಿಗಳ ಕರ್ಮಾನುಸಾರವಾಗಿ ಶರೀರದಲ್ಲಿ ನೆಲೆಸುತ್ತವೆ.**

**ಇದೇ ಪ್ರಮಾಣವು ಅಧ್ಯಾಯ 15 ಶ್ಲೋಕ 1ರಿಂದ 4 ಮತ್ತು 16, 17 ರಲ್ಲಿ ಕೂಡಾ ಇದೆ.)**

**ಗೀತೆಯ 15ನೇ ಅಧ್ಯಾಯದ 1ನೇ ಶ್ಲೋಕ.**

ಊರ್ಧ್ವ ಮೂಲಮ್, ಅಧಃ ಶಾಖಮ್, ಅಶ್ವತ್ಥಮ್, ಪ್ರಾಹುಃ, ಅವ್ಯಯಮ್,
ಛಂದಾಂಸಿ, ಯಸ್ಯ, ಪರ್ಣಾನಿ, ಯಃ, ತಮ್, ವೇದ, ಸಃ, ವೇದವಿತ್ ॥

ಅನುವಾದ :– (ಊರ್ಧ್ವ ಮೂಲಮ್) ಮೇಲಿನ ಪೂರ್ಣ ಪರಮಾತ್ಮ ಆದಿ ಪುರುಷ ಪರಮೇಶ್ವರ ಬೇರಿನ ರೂಪದಲ್ಲಿ (ಅಧಃ ಶಾಖಮ್) ಕೆಳಗೆ ಮೂರೂ ಗುಣವುಳ್ಳ ಅರ್ಥಾತ್ ರಜೋಗುಣ ಬ್ರಚಿಹ್ಮಾ, ಸತಗುಣ ವಿಷ್ಣು ಮತ್ತು ತಮೋಗುಣ ಶಿವರೂಪೀ ಕೊಂಬೆಗಳುಳ್ಳ (ಅವ್ಯಯಮ್) ಅವಿನಾಶಿ (ಅಶ್ವತ್ಥಮ್) ವಿಸ್ತಾರವುಳ್ಳ ಅರಳೀಮರವಾಗಿದೆ (ಯಸ್ಯ) ಅದರ (ಛಂದಾಂಸಿ) ಹೇಗೆ ವೇದದಲ್ಲಿ 4 ಛಂದಗಳಿವೆಯೋ, ಹಾಗೆ ಪ್ರಪಂಚ ರೂಪದ ವೃಕ್ಷದಲ್ಲಿ ಕೂಡಾ ಸಣ್ಣ–ಸಣ್ಣ ವಿಭಾಗವಾಗಿ ಕೊಂಬೆಗಳಂತೆ ಮತ್ತು (ಪರ್ಣಾನಿ) ಎಲೆಗಳು (ಪ್ರಾಹುಃ) ಎಂದು ಹೇಳಲಾಗಿದೆ. (ತಮ್) ಆ ಸಂಸಾರ ರೂಪದ ವೃಕ್ಷವನ್ನು (ಯಃ) ಯಾರು (ವೇದ) ವಿಸ್ತಾರವಾಗಿ ತಿಳಿದಿರುವನೋ (ಸಃ) ಅವನು (ವೇದವಿತ್) ಪೂರ್ಣಜ್ಞಾನಿ ಅರ್ಥಾತ್ ತತ್ವದರ್ಶಿಯಾಗಿದ್ದಾನೆ.

**ಗೀತೆಯ 15ನೇ ಅಧ್ಯಾಯದ 2ನೇ ಶ್ಲೋಕ.**

"ಅಧಃ, ಚ, ಊರ್ಧ್ವಮ್, ಪ್ರಸೃತಾಃ, ತಸ್ಯ, ಶಾಖಾಃ, ಗುಣಪ್ರವೃದ್ಧಾಃ,
ವಿಷಯಪ್ರವಾಲಾಃ, ಅಧಃ, ಮೂಲಾನಿ,
ಅನುಸಂತತಾನಿ, ಕರ್ಮಾನುಬಂಧೀನಿ, ಮನುಷ್ಯಲೋಕೇ ॥

ಅನುವಾದ:– (ತಸ್ಯ) ಆ ವೃಕ್ಷದ (ಅಧಃ) ಕೆಳಗೆ (ಚ) ಮತ್ತು (ಊರ್ಧ್ವಮ್) ಮೇಲೆ (ಗುಣಪ್ರವೃದ್ಧಾಃ) ಮೂರೂ ಗುಣಗಳ ಬ್ರಹ್ಮಾ–ರಜೋಗುಣ, ವಿಷ್ಣು–ಸತಗುಣ, ಶಿವ–ತಮೋಗುಣ ರೂಪಿ (ಪ್ರಸೃತಾ) ಹರಡಿರುವ (ವಿಷಯ ಪ್ರವಾಲಾಃ) ವಿಕಾರ–ಕಾಮ, ಕ್ರೋಧ, ಮೋಹ, ಲೋಭ, ಅಹಂಕಾರ ರೂಪಿ ಎಲೆಗಳು (ಶಾಖಾಃ) ರೆಂಬೆಗಳು ಬ್ರಹ್ಮಾ, ವಿಷ್ಣು, ಶಿವ (ಕರ್ಮಾನುಬಂಧೀನಿ) ಜೀವಿಗಳಿಗೆ ಕರ್ಮಗಳಿಂದ ಬಂಧಿಸಲು (ಮೂಲಾನಿ) ಬೇರು ಅರ್ಥಾತ್ ಮುಖ್ಯ ಕಾರಣವಾಗಿದೆ. (ಚ) ಮತ್ತು (ಮನುಷ್ಯ ಲೋಕೆ) ಮನುಷ್ಯ ಲೋಕ ಅರ್ಥಾತ್ ಪೃಥ್ವಿ ಲೋಕದಲ್ಲಿ (ಅಧಃ) ಕೆಳಗೆ–ನರಕ, 84 ಲಕ್ಷ ಯೋನಿಯಲ್ಲಿ (ಊರ್ಧ್ವಮ್) ಮೇಲೆ ಸ್ವರ್ಗಲೋಕ ಮುಂತಾದವುಗಳಲ್ಲಿ (ಅನುಸಂತತಾನಿ) ವ್ಯವಸ್ಥಿತವಾಗಿ ಮಾಡಲಾಗಿದೆ.

**ಗೀತೆಯ 15ನೇ ಅಧ್ಯಾಯದ 3ನೇ ಶ್ಲೋಕ.**

ನ, ರೂಪಮ್, ಅಸ್ಯ, ಇಹ್, ತಥಾ, ಉಪಲಭ್ಯತೆ,ನ, ಅಂತಃ, ನ, ಚ, ಆದಿಃ, ನ, ಚ
ಸಂಪ್ರತಿಷ್ಠಾ, ಅಶ್ವತ್ಥಮ್, ಏನಮ್, ಸುವಿರೂಢಮೂಲಮ್,
ಅಸಂಗಶಸ್ತ್ರೇಣ, ದೃಢೇನ ಛಿತ್ವಾ ॥

ಅನುವಾದ :– (ಅಸ್ಯ) ಈ ರಚನೆಯ (ನ) ಇಲ್ಲ (ಆದಿಃ) ಪ್ರಾರಂಭ (ಚ) ಮತ್ತು (ನ) ಇಲ್ಲ (ಅಂತಃ) ಕೊನೆ (ತಥಾ) ಹಾಗೆ (ರೂಪಮ್) ಸ್ವರೂಪ (ಉಪಲಭ್ಯತೆ) ಪಡೆಯಲಾಗುತ್ತದೆ. (ಚ) ಮತ್ತು (ಇಹ) ಇಲ್ಲಿ ವಿಚಾರ ಕಾಲದಲ್ಲಿ ಅರ್ಥಾತ್ ನನ್ನ ಮೂಲಕ ನೀಡಲಾಗುತ್ತಿರುವ ಗೀತೆಯ ಜ್ಞಾನದಲ್ಲಿ ಪೂರ್ಣವಾದ ಮಾಹಿತಿ ನನಗೆ ಕೂಡ(ನ) ಇಲ್ಲ. (ಸಂಪ್ರತಿಷ್ಠಾ) ಏಕೆಂದರೆ ಸರ್ವಬ್ರಹ್ಮಾಂಡಗಳ ರಚನೆಯ ಸರಿಯಾದ ಸ್ಥಿತಿಯ ಜ್ಞಾನ ನನಗೂ ಕೂಡಾ ಇಲ್ಲ. (ಏನಮ್) ಈ (ಸುವಿರೂಢಮೂಲಮ್) ಒಳ್ಳೆಯ ರೀತಿಯ ಸ್ಥಾಯೀ (ಚಿರ) ಸ್ಥಿತಿಉಳ್ಳವನು (ಅಶ್ವತ್ಥಮ್) ದೃಢವಾದ ಸ್ವರೂಪ ಉಳ್ಳುವನು. ಪ್ರಪಂಚ ರೂಪದ ವೃಕ್ಷದ ಜ್ಞಾನವನ್ನು (ಅಸಂಜಗ ಶಸ್ತ್ರೇಣ) ಪೂರ್ಣಜ್ಞಾನ ರೂಪದ (ಪೂರ್ಣರೂಪದ ಜ್ಞಾನ) (ದೃಢೇನ್) ದೃಢ ಸೂಕ್ಷ್ಮವೇದ ಅರ್ಥಾತ್ ತತ್ವಜ್ಞಾನದ ಮೂಲಕ ಅರಿತುಕೊಂಡು (ಛಿತ್ವಾ) ಕಡಿದು ಹಾಕಿ ಅರ್ಥಾತ್ ನಿರಂಜನನ ಭಕ್ತಿಯನ್ನು ಕ್ಷಣಿಕವೆಂದು ಅರ್ಥಾತ್ ಕ್ಷಣ ಭಂಗುರ (ಅಲ್ಪಕಾಲಿಕ) ವೆಂದು ತಿಳಿದು ಬ್ರಹ್ಮಾ, ವಿಷ್ಣು, ಶಿವ, ಬ್ರಹ್ಮ ಮತ್ತು ಪರಬ್ರಹ್ಮನಿಂದಲೂ ಮುಂದೆ ಸಾಗಿ ಪೂರ್ಣಬ್ರಹ್ಮನ ಹುಡುಕಾಟ ಮಾಡಬೇಕಾಗಿದೆ.

**ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕ.**

ತತಃ, ಪದಮ್, ತತ್, ಪರಿಮಾರ್ಗಿತವ್ಯಮ್,
ಯೆಸ್ಮಿನ್, ಗತಾಃ, ನ, ನಿವರ್ತಂತಿ, ಭೂಯಃ ತಮ್,
ಏವ, ಚ, ಅದ್ಯಮ್, ಪುರುಷಮ್, ಪ್ರಪದ್ಯೆ, ಯತಃ, ಪ್ರವೃತಿಃ, ಪ್ರಸೃತಾ, ಪುರಾಣೀ ॥

ಅನುವಾದ :– ಯಾವಾಗ ತತ್ವದರ್ಶಿ ಋಷಿ ದೊರೆಯುತ್ತಾರೋ (ತತಃ) ಇದರ ನಂತರ (ತತ್) ಆ ಪರಮಾತ್ಮನ (ಪದಮ್) ಪದವಿ ಸ್ಥಾನ ಅರ್ಥಾತ್ ಸತ್ಯಲೋಕವನ್ನು (ಪರಿಮಾರ್ಗಿತವ್ಯಮ್) ಸರಿಯಾದ ಮಾರ್ಗದಲ್ಲಿ ಹುಡುಕಬೇಕು. (ಯಸ್ಮಾನ್) ಇದರಿಂದ (ಗತಾಃ) ಕಳೆದು ಹೋದ ಸಾಧಕ (ಭೂಯಃ) ಮತ್ತೆ (ನ, ನಿವರ್ತಂತಿ) ಹಿಂತಿರುಗಿ ಪ್ರಪಂಚಕ್ಕೆ ಮತ್ತೆ ಬರುವುದಿಲ್ಲ (ಚ) ಮತ್ತು (ಯತಃ) ಪರಮಾತ್ಮಾ–ಪರಮ ಅಕ್ಷರ ಬ್ರಹ್ಮನಿಂದ (ಪುರಾಣೀ) ಮೊದಲಾದ (ಪ್ರವೃತಿಃ) ರಚನೆ–ಸೃಷ್ಟಿ (ಪ್ರಸೃತಾ) ಉತ್ಪನ್ನವಾಯಿತು (ತಮ್) ಅಜ್ಞಾತ (ಆದ್ಯಮ್) ಮೊದಲಾದ ಯಮ ಅರ್ಥಾತ್ ನಾನು ಕಾಲ ನಿರಂಜನ (ಪುರುಷಮ್) ಪೂರ್ಣ ಪರಮಾತ್ಮ (ಏವ) ನಿಗೆ. (ಪ್ರಪದ್ಯೆ)ನಾನು ಶರಣಾಗತನಾಗಿದ್ದೇನೆ ಮತ್ತು ಅವನ ಪೂಜೆಯನ್ನು ಮಾಡುವೆನು.

**ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕ.**

ದ್ವೌ, ಇಮೌ, ಪುರುಷೌ, ಲೋಕೇ, ಕ್ಷರಃ, ಚ, ಅಕ್ಷರಃ, ಏವ, ಚ,
ಕ್ಷರಃ, ಸರ್ವಾಣಿ, ಭೂತಾನಿ, ಕೂಟಸ್ಥ, ಅಕ್ಷರಃ ಉಚ್ಯತೆ ॥


ಅನುವಾದ :– (ಲೋಕೆ) ಈ ಪ್ರಪಂಚದಲ್ಲಿ (ದ್ವೌ) ಎರಡು ಪ್ರಕಾರದ (ಕ್ಷರಃ) ನಾಶವಾಗುವಂತಹ (ಚ) ಮತ್ತು (ಅಕ್ಷರಃ) ಅವಿನಾಶೀ (ಪುರುಷೌ) ಭಗವಂತರಿದ್ದಾರೆ. (ಏವ) ಈ ರೀತಿಯಲ್ಲಿ (ಇಮೌ) ಈ ಇಬ್ಬರು ಪ್ರಭುಗಳ ಲೋಕದಲ್ಲಿ (ಸರ್ವಾಣಿ) ಸಂಪೂರ್ಣ (ಭೂತಾನಿ) ಪ್ರಾಣಿಗಳ ಶರೀರವಂತೂ (ಕ್ಷರಃ) ನಾಶವಾಗುವುದು (ಚ) ಮತ್ತು (ಕೂಟಸ್ಥಃ) ಜೀವಾತ್ಮಾ (ಅಕ್ಷರಃ) ಅವಿನಾಶಿ (ಉಚ್ಯತೆ) ಎಂದು ಹೇಳಲಾಗುತ್ತದೆ.

**ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕ.**

ಉತ್ತಮಃ, ಪುರುಷಃ, ತು, ಅನ್ಯಃ, ಪರಮಾತ್ಮಾ, ಇತಿ, ಉದಾಹೃತಃ
ಯಃ, ಲೋಕತ್ರಯಮ್ ಆವಿಶ್ಯ, ಬಿಭರ್ತಿ, ಅವ್ಯಯಃ, ಈಶ್ವರಃ ॥

ಅನುವಾದ :– (ಉತ್ತಮಃ) ಉತ್ತಮ (ಪುರುಷಃ) ಪ್ರಭು, ಭಗವಂತ(ತು) ಅಂತೂ (ಅನ್ಯಃ) ಈ ಮೇಲಿನ ಇಬ್ಬರೂ ಪ್ರಭುಗಳು "ಕ್ಷರ ಪುರುಷ ಮತ್ತು ಅಕ್ಷರ ಪುರುಷ"ರಿಂದಲೂ ಬೇರೆಯೇ ಆಗಿದ್ದಾರೆ. (ಇತಿ) ಇದು ವಾಸ್ತವದಲ್ಲಿ (ಪರಮಾತ್ಮಾ) ಪರಮಾತ್ಮ (ಉದಾಹೃತಃ) ಎಂದು ಹೇಳಲಾಗಿದೆ. (ಯಃ) ಅವನು (ಲೋಕತ್ರಯಮ್) ಮೂರೂ ಲೋಕಗಳಲ್ಲಿ (ಆವಿಶ್ಯ) ಪ್ರವೇಶವನ್ನು ಮಾಡಿ (ಬಿಭರ್ತಿ) ಎಲ್ಲರ ಧಾರಣೆ (ಶರೀರ ಪಡೆಯುವುದು) ಪೋಷಣೆ ಮಾಡುವನು ಮತ್ತು ಅವನೇ (ಅವ್ಯಯಃ) ಅವಿನಾಶಿ (ಈಶ್ವರಃ) ಈಶ್ವರ (ಪ್ರಭುಗಳಲ್ಲಿ ಶ್ರೇಷ್ಠ ಅರ್ಥಾತ್ ಸಮರ್ಥ ಪ್ರಭು)ನಾಗಿದ್ದಾನೆ.

**ಭಾವಾರ್ಥ :– ಗೀತೆಯ ಜ್ಞಾನವನ್ನು ನೀಡುವ ಪ್ರಭುವು ಕೇವಲ ಇಷ್ಟನ್ನೇ ಹೇಳಿದ್ದಾನೆ. ಏನೆಂದರೆ, ಈ ಪ್ರಪಂಚವು ತಲೆಕೆಳಗಾಗಿ ನಿಂತ ವೃಕ್ಷದಂತೆ ಎಂದು ತಿಳಿದುಕೋ, ಮೇಲಿರುವ ಬೇರಂ (ಮೂಲ)ತೂ ಪೂರ್ಣ ಪರಮಾತ್ಮನು. ಕೆಳಭಾಗದ ಕೊಂಬೆ ಮುಂತಾದವು ಬೇರೆ ಭಾಗಗಳೆಂದು ತಿಳಿದುಕೋ. ಈ ಪ್ರಪಂಚ ರೂಪದ ವೃಕ್ಷದ ಪ್ರತ್ಯೇಕ ಭಾಗದ ಭಿನ್ನ-ಭಿನ್ನ ವಿವರಣೆಯನ್ನು ಯಾವ ಸಂತನು ತಿಳಿದಿರುವನೋ ಆ ಸಂತನು ತತ್ವದರ್ಶಿ ಸಂತನಾಗಿರುವನು. ಆ ವಿಚಾರವನ್ನು ಗೀತೆಯ ಅಧ್ಯಾಯ 4, ಶ್ಲೋಕ ನಂ. 34ರಲ್ಲಿ ಹೇಳಲಾಗಿದೆ. ಗೀತೆಯ ಅಧ್ಯಾಯ 15 ಶ್ಲೋಕ ಸಂ. 2–3ರಲ್ಲಿ ಕೇವಲ ಇಷ್ಟನ್ನೇ ಹೇಳಲಾಗಿದೆ ಏನೆಂದರೆ ಮೂರು ಗುಣಗಳ ರೂಪದ ಕೊಂಬೆಗಳಿವೆ. ಇಲ್ಲಿ ವಿಚಾರಕಾಲದಲ್ಲಿ ಅರ್ಥಾತ್ ಗೀತೆಯಲ್ಲಿ ತಮಗೆ ನಾನು (ಗೀತೆಯ ಜ್ಞಾನದಾತನು) ಪೂರ್ಣವಾದ ಮಾಹಿತಿಯನ್ನು ನೀಡಲು ಅಸಮರ್ಥನಾಗಿದ್ದೇನೆ. ಏಕೆಂದರೆ ಈ ಪ್ರಪಂಚದ ರಚನೆಯ ಪ್ರಾರಂಭ ಮತ್ತು ಅಂತ್ಯದ ಜ್ಞಾನ ನನಗಿಲ್ಲ, ಅದಕ್ಕೋಸ್ಕರ ಗೀತೆಯ ಅಧ್ಯಾಯ 4 ಶ್ಲೋಕ ಸಂ. 34ರಲ್ಲಿ ಹೇಳಿದ್ದಾರೆ. ಏನೆಂದರೆ ಯಾವುದೇ ತತ್ವದರ್ಶಿ ಸಂತರಿಂದ ಆ ಪೂರ್ಣ ಪರಮಾತ್ಮನ ಜ್ಞಾನವನ್ನು ತಿಳಿಯಿರಿ. ಗೀತೆಯ ಈ ಅಧ್ಯಾಯ 15 ಶ್ಲೋಕ 1ರಲ್ಲಿ ಆ ತತ್ವದರ್ಶಿ ಸಂತರ ಲಕ್ಷಣಗಳನ್ನು ಹೇಳಲಾಗಿದೆ. ಅದೇನೆಂದರೆ ಆ ಸಂತನು ಪ್ರಪಂಚ ರೂಪದ ವೃಕ್ಷದ ಪ್ರತಿಯೊಂದು ಭಾಗದ ಜ್ಞಾನವನ್ನು ನಿಮಗೆ ತಿಳಿಸುವನು. ಆತನನ್ನೇ ನೀವು ವಿನಂತಿಸಿಕೊಳ್ಳಿ. ಗೀತೆಯ ಅಧ್ಯಾಯ 15ರ ಶ್ಲೋಕ 4ರಲ್ಲಿ ಹೇಳಲಾಗಿದೆ ಏನೆಂದರೆ ಆ ತತ್ವದರ್ಶಿ ಸಂತನು ನಿಮಗೆ ದೊರಕಿದ ನಂತರ ಪರಮಪದ ಪರಮೇಶ್ವರನ ಹುಡುಕಾಟವನ್ನು ಪ್ರಾರಂಭಿಸಬೇಕು. ಅರ್ಥಾತ್ ಆ ತತ್ವದರ್ಶಿ ಸಂತನು ನೀಡಿದ ಮಾರ್ಗದರ್ಶನದ ಅನುಸಾರವಾಗಿ ಸಾಧನೆ ಮಾಡಬೇಕು. ಅದರಿಂದ ಪೂರ್ಣ ಮೋಕ್ಷ (ಅನಾದಿ ಮೋಕ್ಷ) ಪ್ರಾಪ್ತಿಯಾಗುವುದು. ಗೀತೆಯ ಅಧ್ಯಾಯ 15 ಶ್ಲೋಕ 16–17ರಲ್ಲಿ ಸ್ಪಷ್ಟಗೊಳಿಸಲಾಗಿದೆ. ಅದೇನೆಂದರೆ ಮೂವರು ಭಗವಂತರಿದ್ದಾರೆ**




ಮೇಲೆ ಬೇರು ಕೆಳಗೆ ಶಾಖೆಯುಳ್ಳ ಹಿಮ್ಮುಖವಾಗಿ ತೂಗಾಡುತ್ತಿರುವ ಸಂಸಾರ (ಜಗತ್ತು) ರೂಪಿ ಮರದ ಚಿತ್ರ

ಮೊದಲನೆಯವನು ಕ್ಷರಪುರುಷ (ಬ್ರಹ್ಮ), ಎರಡನೆಯವನು ಅಕ್ಷರಪುರುಷ (ಪರಬ್ರಹ್ಮ), ಮೂರನೆಯವನು ಪರಮ ಅಕ್ಷರಪುರುಷ (ಪೂರ್ಣ ಬ್ರಹ್ಮ). ಕ್ಷರಪುರುಷ ಮತ್ತು ಅಕ್ಷರಪುರುಷ ವಾಸ್ತವದಲ್ಲಿ ಅವಿನಾಶಿ ಅಲ್ಲ. ಆ ಅವಿನಾಶಿ ಪರಮಾತ್ಮ ಈ ಇಬ್ಬರಿಗಿಂತಲೂ ಭಿನ್ನನಾಗಿದ್ದಾನೆ. ಅವನೇ ಮೂರೂ ಲೋಕಗಳಲ್ಲಿ ಪ್ರವೇಶ ಮಾಡಿ ಎಲ್ಲರ ಸೃಷ್ಟಿ ಹಾಗೂ ಪೋಷಣೆಯನ್ನು ಮಾಡುತ್ತಾನೆ.

ಮೇಲೆ ಹೇಳಿದ ಶ್ರೀಮದ್ಭಗವದ್ಗೀತೆಯ ಅಧ್ಯಾಯ 15 ಶ್ಲೋಕ 1ರಿಂದ 4 ಮತ್ತು 16–17ರಲ್ಲಿ ಇದು ಪ್ರಮಾಣಿತವಾಗಿದೆ. ತಲೆ ಕೆಳಗಾಗಿ ತೂಗಾಡುತ್ತಿರುವ ಪ್ರಪಂಚ ರೂಪದ ವೃಕ್ಷದ ಮೂಲ ಅರ್ಥಾತ್ ಬೇರು ಪರಮ ಅಕ್ಷರ ಬ್ರಹ್ಮ ಅರ್ಥಾತ್ ಪೂರ್ಣ ಬ್ರಹ್ಮನಾಗಿದ್ದಾನೆ. ಆತನಿಂದಲೇ ಪೂರ್ಣ ವೃಕ್ಷದ ಪಾಲನೆಯಾಗುವುದು ಮತ್ತು ವೃಕ್ಷದ ಯಾವ ಭಾಗ ಪೃಥ್ವಿಯ ಹೊರಭಾಗದಲ್ಲಿ ಕಾಣಸಿಗುತ್ತದೆಯೋ, ಅದು ಕಾಂಡವಾಗಿರುತ್ತದೆ ಅದನ್ನು ಅಕ್ಷರ ಪುರುಷ ಅರ್ಥಾತ್ ಪರಬ್ರಹ್ಮನೆಂದು ತಿಳಿಯಿರಿ. ಆ ಕಾಂಡದ ಮೇಲೆ ಬೇರೆಯ ದಪ್ಪವಾದ ಕೊಂಬೆ ಹೊರ ಚಾಚಿದೆಯೋ ಅದರಲ್ಲಿಂದ ಹೊರಟ ಮತ್ತೊಂದು ಕೊಂಬೆಯನ್ನು ಬ್ರಹ್ಮ ಅರ್ಥಾತ್ ಕ್ಷರ ಪುರುಷನೆಂದು ತಿಳಿಯಿರಿ ಮತ್ತು ಆ ಕೊಂಬೆಯಿಂದ ಪುನಃ ಮೂರು ಶಾಖೆಗಳು ಹೊರಚಾಚಿವೆ ಅವುಗಳನ್ನು ಬ್ರಹ್ಮಾ, ವಿಷ್ಣು ಮತ್ತು ಶಿವನೆಂದು ಅರಿಯಿರಿ ಮತ್ತು ಶಾಖೆಗಳಿಂದ ಮುಂದೆ ಎಲೆಯ ರೂಪದಲ್ಲಿರುವ ಪ್ರಪಂಚದ ಪ್ರಾಣಿಗಳೆಂದು ಅರ್ಥೈಸಿಕೊಳ್ಳಿ. ಈ ಮೇಲಿನ ಗೀತೆ ಅಧ್ಯಾಯ 15 ಶ್ಲೋಕ 16–17 ರಿಂದ ಈ ಮಾತು ಸ್ಪಷ್ಟವಾಗಿದೆ. ಏನೆಂದರೆ ಕ್ಷರ ಪುರುಷ (ಬ್ರಹ್ಮ) ಮತ್ತು ಅಕ್ಷರ ಪುರುಷ (ಪರಬ್ರಹ್ಮ) ಮತ್ತು ಇವರ ಲೋಕಗಳಲ್ಲಿ ಎಷ್ಟು ಪ್ರಾಣಿಗಳಿವೆಯೋ, ಅವುಗಳ ಸ್ಥೂಲ ಶರೀರಗಳು ನಾಶವಾಗುವುವು ಮತ್ತು ಜೀವಾತ್ಮ ಅವಿನಾಶಿ. ಅರ್ಥಾತ್ ಬ್ರಹ್ಮ ಮತ್ತು ಪರಬ್ರಹ್ಮ ಈ ಇಬ್ಬರೂ ಪ್ರಭುಗಳು ಮತ್ತು ಇವರ ಕೈಕೆಳಗಿರುವ ಸರ್ವ ಪ್ರಾಣಿಗಳು ನಾಶವಾಗುತ್ತವೆ. ಖಂಡಿತವಾಗಿಯೂ ಅಕ್ಷರ ಪುರುಷನನ್ನು (ಪರಬ್ರಹ್ಮ) ಅವಿನಾಶಿ ಎಂದು ಕರೆದಿರಬಹುದು ಆದರೆ ವಾಸ್ತವದಲ್ಲಿ ಅವಿನಾಶಿ ಪರಮಾತ್ಮನಂತೂ ಇವರಿಬ್ಬರಿಗಿಂತ ಬೇರೆಯೇ ಆಗಿದ್ದಾನೆ. ಅವನು ಮೂರೂ ಲೋಕಗಳಲ್ಲಿ ಪ್ರವೇಶಿಸಿ ಎಲ್ಲರ ಪಾಲನೆ–ಪೋಷಣೆಯನ್ನು ಮಾಡುತ್ತಾನೆ. ಹೀಗೆ ಮೇಲ್ಭಾಗದಲ್ಲಿ ಮೂವರು ಪ್ರಭುಗಳ ಬಗ್ಗೆ ಬೇರೆ–ಬೇರೆಯಾಗಿ ವಿವರಣೆ ನೀಡಲಾಗಿದೆ.

## "ಪವಿತ್ರ ಬೈಬಲ್ ಮತ್ತು ಪವಿತ್ರ ಕುರಾನ್ ಶರೀಫದಲ್ಲಿ ಸೃಷ್ಟಿ ರಚನೆಯ ಆಧಾರ"

ಸೃಷ್ಟಿಯ ಬಗ್ಗೆ ಹೆಚ್ಚಿನ ಮಾಹಿತಿ ಪವಿತ್ರ ಬೈಬಲ್ ಮತ್ತು ಪವಿತ್ರ ಕುರಾನ್ ಶರೀಫದಲ್ಲಿ ಕೂಡಾ ಇದೆ. ಕುರಾನ್ ಶರೀಫದಲ್ಲಿ ಪವಿತ್ರ ಬೈಬಲ್‌ನ ಜ್ಞಾನ ಕೂಡಾ ದೊರೆಯುತ್ತದೆ.

ಆದ್ದರಿಂದ ಈ ಎರಡು ಪವಿತ್ರ ಸದ್ಗ್ರಂಥಗಳು ಒಟ್ಟಿಗೆ ಸೇರಿ ಪ್ರಮಾಣಿತಗೊಳಿಸಿವೆ. ಅದರಲ್ಲಿ ಯಾರು ಮತ್ತು ಹೇಗೆ ಸೃಷ್ಟಿ ರನಚೆ ಮಾಡಿದರು ಮತ್ತು ಅವುಗಳ ವಾಸ್ತವಿಕ ಹೆಸರೇನು? ಎಂಬುದನ್ನು ನಮಗೆ ತಿಳಿಸುತ್ತವೆ.

**ಪವಿತ್ರ ಬೈಬಲ್ (ಉತ್ಪತ್ತಿ ಗ್ರಂಥ ಪುಟ ಸಂ. 2 ರಲ್ಲಿ, ಅ. 1:20–2:5ರಲ್ಲಿ) 6 ನೇಯ ದಿನ :– ಪ್ರಾಣಿ ಮತ್ತು ಮನುಷ್ಯ:**

ಅನ್ಯ ಪ್ರಾಣಿಗಳ ರಚನೆಯನ್ನು ಮಾಡಿ 26. ಮತ್ತೆ ಪರಮೇಶ್ವರನು ಹೇಳಿದನು. ಯಾರು ಸರ್ವ ಪ್ರಾಣಿಗಳನ್ನು ಹಿಡಿತದಲ್ಲಿಟ್ಟುಕೊಳ್ಳುವನೋ ಅಂಥಾ ಮನುಷ್ಯರನ್ನು ನಾವು ಅವರ ಸ್ವರೂಪಕ್ಕೆ ತಕ್ಕ ಹಾಗೆ ನಮಗೆ ಸಮಾನವಾಗಿ ರಚಿಸೋಣ. 27. ಆಗ ಪರಮೇಶ್ವರನು ತನ್ನ ಸ್ವರೂಪಕ್ಕೆ ಅನುಸಾರವಾಗಿ ಮನುಷ್ಯನನ್ನು ಸೃಷ್ಟಿ ಮಾಡಿದನು, ತನ್ನದೇ ರೂಪವನ್ನು ನೀಡಿದನು, ನರ ಮತ್ತು ನಾರಿಯನ್ನು ರೂಪಿಸಿ ಮನುಷ್ಯರ ಸೃಷ್ಟಿ ಮಾಡಿದನು.

29. ಭಗವಂತನು ಮನುಷ್ಯನಿಗೆ ತಿನ್ನಲೆಂದು ಎಷ್ಟೊಂದು ಬೀಜವುಳ್ಳ ಸಣ್ಣ ಸಣ್ಣ ಮರಗಳನ್ನು ಮತ್ತು ಎಷ್ಟೊಂದು ಬೀಜವುಳ್ಳ ಹಣ್ಣಿನ ಮರವನ್ನು ಭೋಜನಕ್ಕೋಸ್ಕರ ನೀಡಿದನು. (ಮಾಂಸ ತಿನ್ನುವ ಬಗ್ಗೆ ಹೇಳಿಲ್ಲ)

**ಏಳನೆಯ ದಿನ : ವಿಶ್ರಾಂತಿಯ ದಿನ**

**ಪರಮೇಶ್ವರನು 6 ದಿನದಲ್ಲಿ ಸರ್ವ ಸೃಷ್ಟಿಯನ್ನು ಮಾಡಿದನು ಮತ್ತು ಏಳನೆ ದಿನ ವಿಶ್ರಾಂತಿಯನ್ನು ಪಡೆದನು.**

**ಪವಿತ್ರ ಬೈಬಲ್ ಕೂಡ ಈ ಮಾತಿಗೆ ಪ್ರಮಾಣವನ್ನು ನೀಡುತ್ತದೆ. ಅದೇನೆಂದರೆ ಪರಮಾತ್ಮ ಮಾನವ ಸದೃಶ ಶರೀರದಲ್ಲಿದ್ದಾನೆ. ಮತ್ತು ಆತ 6 ದಿನದಲ್ಲಿ ಸರ್ವ ಸೃಷ್ಟಿ ಕಾರ್ಯ ನಡೆಸಿದನು ನಂತರ ವಿಶ್ರಾಂತಿ ಪಡೆದನು.**

**ಪವಿತ್ರ ಕುರಾನ್ ಶರೀಫ (ಸುರತ ಫುರ್ಕಾನಿ 25, ಅಯಾತ ಸಂ. 52, 58, 59)**

ಅಯತ 52 : ಫಲಾ ತುತಿಅಲ್–ಕಾಫಿರನ್ ವ ಜಹಿದ್ ಹುಮ್ ಬಿಹೀ ಜಿಹಾದನ್ ಕಬೀರಾ
(ಕಬೀರನ್) ॥ 52 ॥

**ಇದರ ಭಾವಾರ್ಥವು ಹೀಗಿದೆ, ಹಜರತ್ ಮುಹಮ್ಮದ್‌ರವರ ಖುದಾ (ಪ್ರಭು) ಹೇಳುತ್ತಿದ್ದಾನೆ, ಏನೆಂದರೆ ಹೇ ಪೈಗಂಬರ್! ನೀವು ಕಾಫಿರರು (ಯಾರು ಒಬ್ಬ ಭಗವಂತನನ್ನು ತೊರೆದು ಅನ್ಯ ದೇವಿ–ದೇವತೆಗಳ ಮತ್ತು ಮೂರ್ತಿ ಮೊದಲಾದವುಗಳ ಪೂಜೆ ಮಾಡುತ್ತಾರೆ) ಹೇಳಿದ ಮಾತನ್ನು ನಂಬಬೇಡಿ, ಏಕೆಂದರೆ ಆ ಜನರು ಕಬೀರರನ್ನು ಪೂರ್ಣ ಪರಮಾತ್ಮನೆಂದು ನಂಬುವುದಿಲ್ಲ. ನೀವು ನನ್ನ ಮುಖಾಂತರ ನೀಡಿರುವ ಕಬೀರರೇ ಪೂರ್ಣ ಪ್ರಭು ಎಂಬ ಈ ಕುರಾನಿನ ಜ್ಞಾನದ ಆಧಾರದ ಮೇಲೆ ಅಚಲರಾಗಿರಿ. ಮತ್ತು ಕಬೀರ್ ಅಲ್ಲಾಹ್‌ಗೋಸ್ಕರ ಸಂಘರ್ಷ ಮಾಡಿ (ಆದರೆ ಜಗಳ ಮಾಡಬೇಡಿ) ಅರ್ಥಾತ್ ಸ್ಥಿರವಾಗಿರಿ.**

ಆಯತ್ 58 :–
ವ ತವಕ್ಕಲ್ ಅಲಲ್–ಹರಿಲ್ಲಜೀ ಲಾ ಯಮೂತು ವ ಸಬ್ಬಿಹ್ ಬಿಹಮ್ದಿಹೀ ವ ಕಫಾ
ಬಿಹೀ ಬಿಜುನೂಬಿ ಇಬಾದಿಹೀ ಖಬೀರಾ (ಕಬೀರಾ) ॥ 58 ॥

**ಭಾವಾರ್ಥ:– ಹಜರತ್ ಮುಹಮ್ಮದರು ಯಾರನ್ನು ತನ್ನ ಪ್ರಭುವೆಂದು ನಂಬಿರುವರೋ, ಆ ಪ್ರಭುವು (ಅಲ್ಲಾಹ್) ಬೇರೆ ಪರಮಾತ್ಮನ ಮತ್ತು ಪೂರ್ಣ ಭಗವಂತನ ಕಡೆಗೆ ಸಂಕೇತವನ್ನು ಮಾಡುತ್ತಿದ್ದಾರೆ. ಅದೇನೆಂದರೆ ಹೇ ಪೈಗಂಬರ್, ಆ ಕಬೀರ ಪರಮಾತ್ಮನಲ್ಲಿ ನಂಬಿಕೆಯನ್ನಿಡು, ಅವರು ನಿನಗೆ ಜೀವಂತ ಮಹಾತ್ಮನ ರೂಪದಲ್ಲಿ ಬಂದು ನಿನ್ನನ್ನು ಭೇಟಿಯಾಗಿರುವರು. ಅವರು ಯಾವತ್ತೂ ಮರಣ ಹೊಂದುವವರಲ್ಲ ಅರ್ಥಾತ್ ವಾಸ್ತವದಲ್ಲಿ ಅವಿನಾಶಿ ಆಗಿದ್ದಾರೆ. ಹೊಗಳಿಕೆಯ ಜೊತೆಯಲ್ಲಿ ಅವರ ಪಾಕಿ (ಪವಿತ್ರ ಮಹಿಮೆ)ಯ ಗುಣಗಾನವನ್ನು ಮಾಡುತ್ತಾ ಹೋಗು, ಕಬೀರ್ ಅಲ್ಲಾಹ್ (ಕವಿರ್ದೇವ)ನು ಪೂಜೆಗೆ ಯೋಗ್ಯನಾಗಿದ್ದಾನೆ ಮತ್ತು ತನ್ನ ಉಪಾಸಕರ ಎಲ್ಲಾ ಪಾಪವನ್ನು ನಾಶ ಮಾಡುವವನಾಗಿದ್ದಾನೆ.**

ಆಯತ 59 :–
ಅಲ್ಲಜೀ ಖಲಕಸ್ಸಮಾವಾತಿ ವಲಅರ್ಜ ವ ಮಾ ಬೈನಹುಮಾ ಫೀ
ಸಿತ್ತತಿ ಅಯ್ಯಾಮಿನ್ ಸುಮ್ಮಸ್ತವಾ ಅಲಲ್ ಅರ್ಶಿ ಅರ್ ಹಮಾನ್, ಫಸ್ ಅಲ್ ಬಿಹೀ ಖಬೀರನ್
(ಕಬೀರನ್) ॥ 59 ॥

ಭಾವಾರ್ಥ :– ಹಜರತ್ ಮುಹಮ್ಮದರಿಗೆ ಕುರಾನ್ ಶರೀಫನ ಜ್ಞಾನವನ್ನು ಹೇಳಿದಾತನು ಹೀಗೆಂದು ಹೇಳುತ್ತಿದ್ದಾನೆ. ಆ ಕಬೀರ ಪ್ರಭು, ಯಾರು ಭೂಮಿ ಮತ್ತು ಆಕಾಶಕ್ಕೆ ಮಧ್ಯದಲ್ಲಿ ಯಾವುದೇ ವಿದ್ಯಮಾನ (ಘಟನೆ) ನಡೆಯಲಿ, ಸರ್ವಸೃಷ್ಟಿಯನ್ನು 6 ದಿನಗಳಲ್ಲಿ ಮಾಡಿ ಏಳನೆಯ ದಿನ ತನ್ನ ಸತ್ಯಲೋಕದಲ್ಲಿ ಸಿಂಹಾಸನದ ಮೇಲೆ ವಿರಾಜಮಾನನಾಗಿರುವನೋ ಆತನೇ ಪೂರ್ಣ ಪ್ರಭು ಆಗಿದ್ದಾನೆ. ಅವನ ವಿಷಯದಲ್ಲಿ ಮಾಹಿತಿ ಬೇಕಾದಲ್ಲಿ ಯಾರಾದರೂ ತತ್ವದರ್ಶಿ ಸಂತರ (ಬಾಖಬರ್) ಬಳಿ ಕೇಳು, ನನಗೆ ತಿಳಿದಿಲ್ಲ.

ಮೇಲೆ ಹೇಳಿದ ಎರಡೂ ಪವಿತ್ರ ಧರ್ಮಗಳ (ಈಸಾಯಿ ಮತ್ತು ಮುಸಲ್ಮಾನ) ಪವಿತ್ರ ಶಾಸ್ತ್ರಗಳೂ ಕೂಡಾ ಒಟ್ಟುಗೂಡಿ ಪ್ರಮಾಣಿತಗೊಳಿಸಿವೆ ಅದೇನೆಂದರೆ ಸರ್ವ ಸೃಷ್ಟಿಯ ರಚನಕಾರ, ಸರ್ವ ಪಾಪವಿನಾಶಕ, ಸರ್ವರಿಗಿಂತಲೂ ಶಕ್ತಿವಂತ, ಅವಿನಾಶಿ ಪರಮಾತ್ಮನು ಮಾನವ ಸದೃಶ ಶರೀರದ ಆಕಾರದಲ್ಲಿರುವ ಮತ್ತು ಸತ್ಯಲೋಕದಲ್ಲಿ ಇರುವನು. ಆತನ ನಾಮಧೇಯ ಕಬೀರ್, ಆತನನ್ನೇ ಅಲ್ಲಾಹು ಅಕಬರ್ ಎಂದೂ ಕರೆಯುತ್ತಾರೆ.

ಗೌರವಾನ್ವಿತ ಧರ್ಮದಾಸರು ಪೂಜ್ಯ ಕಬೀರ ಪ್ರಭುವಿನೊಡನೆ ಕೇಳಿದರು ಹೇ, ಸರ್ವ ಶಕ್ತಿವಂತನೇ, ಈ ದಿನದವರೆಗೆ ಈ ತತ್ವಜ್ಞಾನವನ್ನು ಯಾರೂ ಹೇಳಲಿಲ್ಲ. ವೇದಗಳ ಮರ್ಮಜ್ಞ (ಜ್ಞಾನಿ)ರೂ ವಿವರಿಸಲಿಲ್ಲ. ಆದ್ದರಿಂದ 4 ವೇದಗಳೂ ಹಾಗೂ 4 ಪವಿತ್ರ ಕತೇಬ್ (ಕುರಾನ್ ಶರೀಫ್ ಮುಂತಾದವು) ಸುಳ್ಳಾಗಿವೆ ಎಂಬುದು ಪ್ರಮಾಣಿತವಾಗಿದೆ. ಪೂರ್ಣ ಪರಮಾತ್ಮನು ಹೀಗೆ ಹೇಳಿದನು.

ಕಬೀರ್, ಬೇದ್ ಕತೇಬ್ ಝೂಟೆ ನಹೀಂ ಭಾಯಿ,  
ಝೂಟೆ ಹೈಂ ಜೋ ಸಮಝೆ ನಾಹೀಂ ।

ಭಾವಾರ್ಥ :–ನಾಲ್ಕೂ ಪವಿತ್ರ ವೇದಗಳು (ಋಗ್ವೇದ–ಅಥರ್ವಣವೇದ–ಯಜುರ್ವೇದ–ಸಾಮವೇದ) ಮತ್ತು 4 ಕತೇಬ್ (ಕುರಾನ್ ಶರೀಫ್–ಜಬೂರ್–ತೌರಾತ್–ಇಂಜಿಲ್) ತಪ್ಪು ಹೇಳಿಲ್ಲ. ಆದರೆ ಯಾರು ಅವುಗಳನ್ನು ಅರ್ಥ ಮಾಡಿಕೊಂಡಿಲ್ಲವೋ ಅವರು ಮುಗ್ಧರಾಗಿದ್ದಾರೆ.

## "ಪೂಜ್ಯ ಕಬೀರ್ ಪರಮೇಶ್ವರ (ಕವಿರ್ ದೇವ) ರವರ ಅಮೃತವಾಣಿಯಲ್ಲಿ ಸೃಷ್ಟಿಯ ರಚನೆ"

ವಿಶೇಷ :– ಈ ಕೆಳಗಿನ ಅಮೃತವಾಣಿಯನ್ನು ಕ್ರಿ.ಶ. 1403ರಿಂದ (ಪೂಜ್ಯ ಕವಿರ್ದೇವ ಅಂದರೆ ಕಬೀರ ಪರಮೇಶ್ವರರು ಲೀಲಾಮಯ ಶರೀರದಲ್ಲಿ 5 ವರ್ಷದವರಿದ್ದಾಗ) ಕ್ರಿ.ಶ. 1518 (ಕವಿರ್ದೇವ (ಕಬೀರ ಪರಮೇಶ್ವರ) ಮಗಹರ್ ಸ್ಥಾನದಿಂದ ಸಶರೀರರಾಗಿ ಸತ್ಯಲೋಕಕ್ಕೆ ಹೋದರು)ರ ಮಧ್ಯದಲ್ಲಿ ಹೆಚ್ಚು ಕಡಿಮೆ 600 ವರ್ಷಗಳ ಪೂರ್ವದಲ್ಲಿ ಪರಮಪೂಜ್ಯ ಕಬೀರ ಪರಮೇಶ್ವರ (ಕವಿರ್ದೇವ)ರ ಮೂಲಕ ತನ್ನ ಸ್ವಂತ ಸೇವಕ (ದಾಸಭಕ್ತ) ಗೌರವಾನ್ವಿತ ಧರ್ಮದಾಸ ರವರಿಗೆ ತಿಳಿಸಿದ್ದರು ಮತ್ತು ಧರ್ಮದಾಸರು ಅದನ್ನು ಲಿಪಿಬದ್ಧವನ್ನಾಗಿ (ಬರೆವಣಿಗೆ ರೂಪದಲ್ಲಿ) ಮಾಡಿದರು. ಆದರೆ ಆ ಸಮಯದ ಪವಿತ್ರ ಹಿಂದೂಗಳು ಅಥವಾ ಪವಿತ್ರ ಮುಸಲ್ಮಾನರುಗಳ ಗುರುಗಳು ಮುಗ್ಧತೆ (ನೀಮ–ಹಕೀಮ) ಯಿಂದ ಹೀಗೆ ಹೇಳಿದರು. ಏನೆಂದರೆ "ಈ ಧಾಣಕ (ನೇಕಾರ) ಕಬೀರ್ ಸುಳ್ಳುಗಾರ, ಯಾವುದೇ ಸದ್‌ಗ್ರಂಥಗಳಲ್ಲಿ ಶ್ರೀ ಬ್ರಹ್ಮಾ, ಶ್ರೀವಿಷ್ಣು ಮತ್ತು ಶ್ರೀಶಿವ  ಇವರ ಮಾತಾ–ಪಿತರ ಹೆಸರಿಲ್ಲ. (ಉಲ್ಲೇಖವಿಲ್ಲ) ಈ ಮೂರೂ ಪ್ರಭುಗಳು ಅವಿನಾಶಿಯಾಗಿದ್ದಾರೆ. ಇವರಿಗೆ ಜನ್ಮ–ಮೃತ್ಯುಗಳಿಲ್ಲ. ಪವಿತ್ರ ವೇದಗಳಲ್ಲಿ ಮತ್ತು ಪವಿತ್ರ ಕುರಾನ್ ಶರೀಫ್ ಮುಂತಾದವುಗಳಲ್ಲಿ ಕಬೀರ ಪರಮೇಶ್ವರರ ಪ್ರಮಾಣವಿಲ್ಲ. ಮತ್ತು ಪರಮಾತ್ಮನನ್ನು ನಿರಾಕಾರನೆಂದು ಬರೆಯಲಾಗಿದೆ. ನಾವು ದಿನಂಪ್ರತಿ ಓದುತ್ತಿದ್ದೇವೆ. ಮುಗ್ಧ ಆತ್ಮಗಳು ಆ ವಿಚಕ್ಷಣೆಗಳ (ಚತುರ ಗುರುಗಳು)ಲ್ಲಿ ವಿಶ್ವಾಸವನ್ನಿಟ್ಟಿದ್ದಾರೆ. ಏಕೆಂದರೆ ನಿಜವಾಗಿಯೂ

**ಈ ಕಬೀರ ನೇಕಾರನು ಅಶಿಕ್ಷಿತನು ಮತ್ತು ಗುರುಗಳು (ನೀಮ–ಹಕೀಮ) ಶಿಕ್ಷಿತರು. ಆದ್ದರಿಂದ ನಿಜವನ್ನೇ ನುಡಿದಿರಬಹುದೆಂದು ನಂಬಿದ್ದಾರೆ. ಈ ದಿನ ಅದೇ ಸತ್ಯ ಪ್ರಕಾಶಿತವಾಗಿದೆ ಮತ್ತು ತನ್ನ ಸರ್ವ ಪವಿತ್ರ ಧರ್ಮಗಳ ಪವಿತ್ರ ಸದ್ಗ್ರಂಥಗಳು ಸಾಕ್ಷಿಯಾಗಿವೆ. ಇದರಿಂದ ಪೂರ್ಣ ಪರಮೇಶ್ವರ, ಸರ್ವ ಸೃಷ್ಟಿರಚನೆಕಾರ, ಕುಲಕರ್ತಾರ ಮತ್ತು ಸರ್ವಜ್ಞ ಕವಿರ್ದೇವ (ಕಬೀರ ಪರಮೇಶ್ವರ)ನೇ ಹೌದು. ಯಾರು ಕಾಶಿ (ಬನಾರಸ್)ಯಲ್ಲಿ ಕಮಲದ ಹೂವಿನ ಮೇಲೆ ಪ್ರಕಟವಾದರೋ ಮತ್ತು 120 ವರ್ಷಗಳವರೆಗೆ ವಾಸ್ತವಿಕ ತೇಜೋಮಯ ಶರೀರದ ಮೇಲೆ ಮಾನವ ಸದೃಶ ಶರೀರವನ್ನು ಹಗುರವಾದ ಹಾಗೂ ತೇಜಸ್ಸಿನಿಂದ ಕೂಡಿದಂತೆ ಮಾಡಿಕೊಂಡು ವಾಸವಾಗಿದ್ದರೋ ಮತ್ತು ತಮ್ಮಿಂದ ರಚಿತವಾದ ಸೃಷ್ಟಿಯ ಸರಿಯಾದ (ವಾಸ್ತವಿಕ ತತ್ವ) ಜ್ಞಾನವನ್ನು ನೀಡಿ ಸಶರೀರರಾಗಿ ಸತ್ಯಲೋಕಕ್ಕೆ ತೆರಳಿದರೋ ಅವರೇ ಕಬೀರ ಪರಮೇಶ್ವರರು.**

**ದಯಮಾಡಿ ಪ್ರಿಯ ಓದುಗರೇ, ಪರಮೇಶ್ವರ ಕಬೀರ ಸಾಹೇಬರಿಂದ ಉಚ್ಚರಿತವಾದ ಅಮೃತವಾಣಿಯನ್ನು ಈ ಕೆಳಗೆ ನೀಡಲಾಗಿದೆ. ಅದನ್ನು ಅವಲೋಕಿಸಿರಿ.**

ಧರ್ಮದಾಸ ಯಹ್ ಜಗ್ ಬೌರಾನಾ । ಕೋಯಿ ನ ಜಾನೆ ಪದ್ ನಿರ್ವಾನಾ ॥
ಯಹಿ ಕಾರನ್ ಮೈ ಕಥಾ ಪಸಾರಾ । ಜಗ್‌ಸೆ ಕಹಿಯೋ ರಾಮ್ ನಿಯಾರಾ ॥
ಯಹೀ ಜ್ಞಾನ ಜಗ್ ಜೀವ್ ಸುನಾವೋ । ಸಬ್ ಜೀವೋಂಕಾ ಭರಮ್ ನಶಾವೋ ॥
ಅಬ್ ಮೈ ತುಮ್‌ಸೆ ಕಹೋಂ ಚಿತಾಯೀ । ತ್ರಯದೇವನ್ ಕೀ ಉತ್ಪತಿ ಭಾಯಿ ॥
ಕುಛ್ ಸಂಕ್ಷೇಪ್ ಕಹೋಂ ಗುಹರಾಯೀ । ಸಬ ಸಂಶಯ್ ತುಮ್ಹಾರೆ ಮಿಟ್ ಜಾಯೀ ॥
ಭರಮ್ ಗಯೆ ಜಗ್ ವೇದ್ ಪುರಾನಾ । ಆದಿ ರಾಮ್ ಕಾ ಭೇದ್ ನ ಜಾನಾ ॥
ರಾಮ್ ರಾಮ್ ಸಬ್ ಜಗತ್ ಬಖಾನೆ । ಆದಿ ರಾಮ್ ಕೋಯಿ ಬಿರಲಾ ಜಾನೆ ॥
ಜ್ಞಾನಿ ಸುನೆ ಸೋ ಹಿರದೈ ಲಗಾಯೀ । ಮೂರ್ಖ ಸುನೆ ಸೋ ಗಮ್ಯ್ ನಾ ಪಾಯೀ ॥
ಮಾಂ ಅಷ್ಟಾಂಗಿ ಪಿತಾ ನಿರಂಜನ್ । ವೆ ಜಮ್ ದಾರುಣ್ ವಂಶನ್ ಅಂಜನ್ ॥
ಪಹಿಲೆ ಕೀನ್ಹ ನಿರಂಜನ್ ರಾಯೀ । ಪೀಛೆಸೆ ಮಾಯಾ ಉಪಜಾಯೀ ॥
ಮಾಯಾ ರೂಪ್ ದೇಖ್ ಅತಿ ಶೋಭಾ । ದೇವ್ ನಿರಂಜನ್ ತನ್ ಮನ್ ಲೋಭಾ ॥
ಕಾಮದೇವ್ ಧರ್ಮರಾಯ್ ಸತ್ತಾಯೆ । ದೇವೀ ಕೋ ತುರತಹೀ ಧರ್ ಖಾಯೆ ॥
ಪೇಟ್ ಸೆ ದೇವೀ ಕರೀ ಪುಕಾರಾ । ಸಾಹಬ್ ಮೇರಾ ಕರೋ ಉಬಾರಾ ॥
ಟೇರ್ ಸುನೀ ತಬ್ ಹಮ್ ತಹಾಂ ಆಯೆ । ಅಷ್ಟಾಂಗೀ ಕೋ ಬಂದ್ ಛುಡಾಯೇ ॥
ಸತ್‌ಲೋಕ ಮೇ ಕೀನ್ಹಾ ದುರಾಚಾರಿ । ಕಾಲ್ ನಿರಂಜನ್ ದಿನ್ಹಾ ನಿಕಾರಿ ॥
ಮಾಯಾ ಸಮೇತ್ ದಿಯಾ ಭಗಾಯೀ ।
ಸೋಲಹ್ ಸಂಖ್ ಕೋಸ್ ದೂರೀ ಪರ್ ಆಯೀ
ಅಷ್ಟಂಗೀ ಔರ್ ಕಾಲ್ ಅಬ್ ದೋಯೀ । ಮಂದ್ ಕರ್ಮ್ ಸೆ ಗಯೆ ಬಿಗೋಯೀ ॥
ಧರ್ಮರಾಯ್ ಕೋ ಹಿಕಮತ್ ಕೀನ್ಹಾ । ನಖ್ ರೇಖಾ ಸೆ ಭಗಕರ್ ಲೀನ್ಹಾ ॥
ಧರ್ಮರಾಯ್ ಕಿನ್ಹಾಂ ಭೋಗ್ ವಿಲಾಸಾ । ಮಾಯಾಕೋ ರಹೀ ತಬ್ ಆಸಾ ॥
ತೀನ್ ಪುತ್ರ ಅಷ್ಟಂಗೀ ಜಾಯೆ । ಬ್ರಹ್ಮಾ ವಿಷ್ಣು ಶಿವ ನಾಮ ಧರಾಯೇ ॥
ತೀನ್ ದೇವ್ ವಿಸ್ತಾರ್ ಚಲಾಯೆ । ಇನ್‌ಮೆಂ ಯಹ್ ಜಗ್ ಧೋಖಾ ಖಾಯೆ ॥
ಪುರುಷ ಗಮ್ಯ್ ಕೈಸೆ ಕೊ ಪಾವೈ । ಕಾಲ್ ನಿರಂಜನ್ ಜಗ್ ಭರಮಾವೈ ॥
ತೀನ್ ಲೋಕ್ ಅಪನೆ ಸುತ ದೀನ್ಹಾ । ಸುನ್ನ್ ನಿರಂಜನ್ ಬಾಸಾ ಲೀನ್ಹಾ ॥
ಅಲಖ್ ನಿರಂಜನ್ ಸುನ್ನ್ ಠಿಕಾನಾ । ಬ್ರಹ್ಮಾ ವಿಷ್ಣು ಶಿವ ಭೇದ್ ನ ಜಾನಾ ॥
ತೀನ್ ದೇವ್ ಸೋ ಉನ್ ಕೋ ಧಾವೇಂ । ನಿರಂಜನ್ ಕಾ ವೆ ಪಾರ್ ನಾ ಪಾವೆಂ ॥

ಅಲಖ್ ನಿರಂಜನ್ ಬಡಾ ಬಟ್‌ಪಾರಾ । ತೀನ್ ಲೋಕ್ ಜಿವ್ ಕೀನ್ಹ ಅಹಾರಾ ॥
ಬ್ರಹ್ಮಾ ವಿಷ್ಣು ಶಿವ ನಹೀಂ ಬಚಾಯೆ । ಸಕಲ್ ಖಾಯ್ ಪುನ್ ಧೂರ್ ಉಡಾಯೆ ॥
ತಿನಕೆ ಸುತ ಹೈಂ ತೀನೋಂ ದೇವಾ । ಆಂಧರ್ ಜೀವ್ ಕರತ್ ಹೈಂ ಸೇವಾ ॥
ಅಕಾಲ್ ಪುರುಷ್ ಕಾಹೂ ನಹಿಂ ಚೀನ್ಹಾ । ಕಾಲ್ ಪಾಯ್ ಸಬಹೀ ಗಹ್ ಲೀನ್ಹಾಂ ॥
ಬ್ರಹ್ಮ್ ಕಾಲ್ ಸಕಲ್ ಜಗ್ ಜಾನೆ । ಆದಿ ಬ್ರಹ್ಮಕೋ ನ ಪಹಿಚಾನೆ ॥
ತೀನೋಂ ದೇವ್ ಔರ್ ಔತಾರಾ । ತಾಕೋ ಭಜೆ ಸಕಲ್ ಸಂಸಾರಾ ॥
ತೀನೋಂ ಗುಣ್‌ಕಾ ಯಹ್ ವಿಸ್ತಾರಾ । ಧರ್ಮದಾಸ್ ಮೈಂ ಕಹೋಂ ಪುಕಾರಾ ॥
ಗುಣ್ ತಿನೋಂ ಕೀ ಭಕ್ತಿಮೆಂ, ಭೂಲ್ ಪರೊ ಸಂಸಾರ್ ।
ಕಹೈ ಕಬೀರ್ ನಿಜ್ ನಾಮ್ ಬಿನ್, ಕೈಸೆ ಉತರೈ ಪಾರ್ ॥

ಮೇಲೆ ಹೇಳಿದ ಅಮೃತ ವಾಣಿಯಲ್ಲಿ ಪರಮೇಶ್ವರ ಕಬೀರ್ ಸಾಹೇಬರು ತನ್ನ ಸ್ವಂತ ಸೇವಕ ಶ್ರೀ ಧರ್ಮದಾಸ ರವರಿಗೆ ಹೇಳುತ್ತಿರುವರು. ಏನೆಂದರೆ "ಧರ್ಮದಾಸ, ಈ ಎಲ್ಲಾ ಪ್ರಪಂಚವು ತತ್ವಜ್ಞಾನದ ಅಭಾವದಿಂದ ವಿಚಲಿತವಾಗಿದೆ. ಯಾರಿಗೂ ಕೂಡಾ ಪೂರ್ಣ ಮೋಕ್ಷ ಹಾಗೂ ಪೂರ್ಣ ಸೃಷ್ಟಿ ರಚನೆಯ ಜ್ಞಾನವಿಲ್ಲ. ಆದ್ದರಿಂದ ನಾನು ನಿನಗೆ ನನ್ನ ಮೂಲಕ ರಚನೆಯಾದ ಸೃಷ್ಟಿಯ ಕಥೆಯನ್ನು ತಿಳಿಸುವೆನು. ಬುದ್ಧಿವಂತ ವ್ಯಕ್ತಿಯಂತೂ ತಕ್ಷಣ ತಿಳಿದುಕೊಳ್ಳುವನು. ಆದರೆ ಯಾರು ಎಲ್ಲಾ ಪ್ರಮಾಣಗಳನ್ನು ನೋಡಿಕೂಡಾ ನಂಬುವುದಿಲ್ಲವೋ, ಅವರುಮುಗ್ಧರಾಗಿದ್ದು ಕಾಲನ ಪ್ರಭಾವಕ್ಕೊಳಗಾಗಿದ್ದಾರೆ. ಅವರುಗಳು ಭಕ್ತಿಗೆ ಯೋಗ್ಯರಾಗಿರುವುದಿಲ್ಲ. ಈಗನಾನು ಹೇಳುವೆನು. ಮೂವರು ಭಗವಂತರ (ಬ್ರಹ್ಮಾ, ವಿಷ್ಣು ಹಾಗೂ ಶಿವ) ಸೃಷ್ಟಿ ಹೇಗಾಯಿತು? ಇವರ ತಾಯಿಯಂತೂ ಅಷ್ಟಂಗೀ (ದುರ್ಗಾ) ಮತ್ತು ಪಿತ ಜ್ಯೋತಿ ನಿರಂಜನ (ಬ್ರಹ್ಮ, ಕಾಲ) ಆಗಿದ್ದಾನೆ. ಪ್ರಪ್ರಥಮವಾಗಿ ಬ್ರಹ್ಮನ ಸೃಷ್ಟಿಯು ಮೊಟ್ಟೆಯಿಂದ ಆಯಿತು. ನಂತರ ದುರ್ಗಾದೇವಿಯ ಸೃಷ್ಟಿಯಾಯಿತು. ದುರ್ಗೆಯ ರೂಪಕ್ಕೆ ಮರುಳಾದ ಕಾಲ (ಬ್ರಹ್ಮ)ನು ತಪ್ಪನ್ನೆಸಗಿದನು. (ಛೇಡಿಸಿದನು) ಆಗ ದುರ್ಗೆ (ಪ್ರಕೃತಿ)ಯು ಅವನ ಹೊಟ್ಟೆಯಲ್ಲಿ ಆಶ್ರಯವನ್ನು ಪಡೆದಳು. ಜ್ಯೋತಿ ನಿರಂಜನ ಎಲ್ಲಿದ್ದನೋ ಅಲ್ಲಿಗೆ ನಾನು ಹೋದೆನು. ಆಗ ಭವಾನಿಯನ್ನು ಬ್ರಹ್ಮನ ಹೊಟ್ಟೆಯಿಂದ ಹೊರಗೆ ತೆಗೆದು 21 ಬ್ರಹ್ಮಾಂಡಗಳ ಸಮೇತ 16 ಸಂಖ್ ಫರ್ಲಾಂಗ್ ದೂರ ಕಳುಹಿಸಲಾಯಿತು. ಜ್ಯೋತಿ ನಿರಂಜನ(ಧರ್ಮರಾಯ)ನು ಪ್ರಕೃತಿದೇವಿ (ದುರ್ಗಾ)ಯೊಡನೆ ಭೋಗ ವಿಲಾಸದಲ್ಲಿ ಮುಳುಗಿದನು. ಇವರಿಬ್ಬರ ಸಂಯೋಗದಿಂದ ಈ ಮೂರು ಗುಣಗಳ (ಬ್ರಹ್ಮಾ, ವಿಷ್ಣು ಹಾಗೂ ಶಿವ) ಒಡೆಯರ ಜನನವಾಯಿತು. ಈ ಮೂರು ಗುಣಗಳನ್ನು ಪಡೆಯಲು (ರಜಗುಣ–ಬ್ರಹ್ಮಾ,, ಸತ್‌ಗುಣ–ವಿಷ್ಣು–ತಮೋಗುಣ–ಶಿವ) ಸಾಧನೆಯನ್ನು ಮಾಡಿ ಎಲ್ಲಾ ಪ್ರಾಣಿಗಳು ಕಾಲನ ಜಾಲದಲ್ಲಿ ಸಿಲುಕಿಕೊಳ್ಳುವರು. ಅಲ್ಲಿಯವರೆಗೆ ವಾಸ್ತವಿಕ ಮಂತ್ರವು ದೊರೆಯುವುದಿಲ್ಲ. ಪೂರ್ಣ ಮೋಕ್ಷ ಹೇಗೆ ದೊರೆಯುವುದು?

ವಿಶೇಷ :– ಪ್ರಿಯ ಓದುಗರೇ, ನೀವು ವಿಚಾರ ಮಾಡಿ, ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಹಾಗೂ ಶ್ರೀ ಶಿವರ ಸ್ಥಿತಿಯನ್ನು ಅವಿನಾಶಿ ಎಂದು ಹೇಳಲಾಗಿದೆ. ಎಲ್ಲಾ ಹಿಂದೂ ಸಮಾಜವು ಇಲ್ಲಿಯವರೆಗೆ ಮೂವರು ಪ್ರಭುಗಳನ್ನು ಅಜರಾಮರ ಮತ್ತು ಜನ್ಮ–ಮೃತ್ಯು ರಹಿತರೆಂದು ಭಾವಿಸಿದೆ. ಇವರುಗಳ ತಂದೆ ಕಾಲರೂಪಿ ಬ್ರಹ್ಮ ಮತ್ತು ಮಾತೆ ದುರ್ಗಾ (ಪ್ರಕೃತಿ/ಅಷ್ಟಾಂಗಿ). ಹೇಗೆ ತಾವು ಪೂರ್ಣ ಪ್ರಮಾಣಗಳೊಂದಿಗೆ ಓದಿದ್ದೀರೋ, ಈ ಜ್ಞಾನವು ನಮ್ಮ ಶಾಸ್ತ್ರಗಳಲ್ಲಿ ಕೂಡಾ ಉಲ್ಲೇಖವಾಗಿವೆ. ಆದರೆ ಹಿಂದೂ ಸಮಾಜದ ಕಲಿಯುಗದ ಗುರುಗಳಿಗೆ, ಋಷಿಗಳಿಗೆ ಹಾಗೂ ಸಂತರಿಗೆ ಈ ಜ್ಞಾನವಿಲ್ಲ. ಅಧ್ಯಾಪಕನು ಪಠ್ಯಕ್ರಮ (ಸಿಲೆಬಸ್) ದಿಂದಲೇ ಅಪರಿಚಿತನಾದರೆ ಆ ಅಧ್ಯಾಪಕ ಸರಿಯಾಗಿರಲು ಸಾಧ್ಯವಿಲ್ಲ. ಅಂತಹ ಅಧ್ಯಾಪಕನು ವಿದ್ಯಾರ್ಥಿಗಳ ಭವಿಷ್ಯದ ಶತೃವಾಗುವನು. ಈ ಪ್ರಕಾರವಾಗಿ

**ಯಾವ ಗುರುಗಳಿಗೆ ಇವತ್ತಿನವರೆಗೆ ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಮತ್ತು ಶ್ರೀ ಶಿವರ ತಂದೆ–ತಾಯಿ ಯಾರು? ಎಂಬ ಜ್ಞಾನದ ಅರಿವಿಲ್ಲವೋ ಆ ಗುರು, ಋಷಿ, ಸಂತರು ಜ್ಞಾನರಹಿತರಾಗಿದ್ದಾರೆ. ಈ ಕಾರಣದಿಂದ ಅವರೆಲ್ಲಾ ಎಲ್ಲಾ ಭಕ್ತ ಸಮಾಜಕ್ಕೆ ಶಾಸ್ತ್ರ ವಿರುದ್ಧವಾದ ಜ್ಞಾನವನ್ನು (ಲೋಕವೇದ ಅಂದರೆ ದಂತಕಥೆ) ಬೋಧಿಸಿ ಅಜ್ಞಾನದಿಂದ ತುಂಬಿರುವಂತೆ ಮಾಡಿದ್ದಾರೆ. ಶಾಸ್ತ್ರವಿರುದ್ಧ ಭಕ್ತಿ ಸಾಧನೆಯನ್ನು ಮಾಡಿಸಿ ಪರಮಾತ್ಮನ ವಾಸ್ತವಿಕವಾದ ಲಾಭದಿಂದ (ಪೂರ್ಣಮೋಕ್ಷ) ವಂಚಿತರನ್ನಾಗಿ ಮಾಡಿ, ಎಲ್ಲರ ಮಾನವಜನ್ಮವನ್ನು ನಷ್ಟವಾಗುವಂತೆ ಮಾಡಿಬಿಟ್ಟಿದ್ದಾರೆ. ಏಕೆಂದರೆ ಶ್ರೀ ಮದ್ಭಗವದ್ಗೀತೆ ಅಧ್ಯಾಯ 16 ಶ್ಲೋಕ 23–24ರಲ್ಲಿ ಇದಕ್ಕೆ ಪ್ರಮಾಣ ಇದೆ ಏನೆಂದರೆ ಶಾಸ್ತ್ರವಿಧಿಯನ್ನು ನಿರ್ಲಕ್ಷಿಸಿ ಮನಬಂದಂತೆ ಆಚರಣೆ, ಪೂಜೆ ಯಾರು ಮಾಡುತ್ತಾರೋ, ಅವರಿಗೆ ಯಾವುದೇ ಲಾಭ ಸಿಗುವುದಿಲ್ಲ. ಪೂರ್ಣ ಪರಮಾತ್ಮ ಕಬೀರ್‌ರವರು ಕ್ರಿ.ಶ. 1403ರಿಂದಲೇ ಸರ್ವ ಶಾಸ್ತ್ರಬದ್ಧ ಜ್ಞಾನವನ್ನು ತಮ್ಮ ಅಮೃತವಾಣಿ (ಕವಿರ್ ವಾಣಿ)ಯಲ್ಲಿ ಹೇಳಲು ಪ್ರಾರಂಭ ಮಾಡಿದ್ದರು. ಆದರೆ ಆ ಅಜ್ಞಾನಿ ಗುರುಗಳು ಈ ಜ್ಞಾನವನ್ನು ಭಕ್ತರತನಕ ತಲುಪಲು ಬಿಡಲಿಲ್ಲ. ವರ್ತಮಾನದಲ್ಲಿ ನಮಗೆ ಪ್ರಮಾಣವು ದೊರೆಯುತ್ತಿದೆ ಅದೇನೆಂದರೆ ಕವಿರ್ದೇವ (ಕಬೀರ ಪ್ರಭು) ತತ್ವದರ್ಶಿಯು ಸಂತ ರೂಪದಲ್ಲಿ ಸ್ವಯಂ ಪೂರ್ಣ ಪರಮಾತ್ಮನೇ ಆಗಿ ಬಂದಿದ್ದರು ಎನ್ನುವುದು ಸ್ಪಷ್ಟವಾಗುತ್ತಿದೆ.**

## "ಗೌರವಾನ್ವಿತ ಗರೀಬ್ ದಾಸ್ ರವರ ಅಮೃತವಾಣಿಯಲ್ಲಿ ಸೃಷ್ಟಿಯ ರಚನೆಯ ಆಧಾರ"

**ಆದಿ ರಮೈಣೀ (ಸದ್ ಗ್ರಂಥ ಪುಟ ಸಂ. 690ರಿಂದ 692ರವರೆಗೆ)**

ಆದಿ ರಮ್ಯೈಣೀ ಅದಲೀ ಸಾರಾ । ಜಾ ದಿನ್ ಹೋತೆ ಧುಂಧುಂಕಾರಾ ॥ 1 ॥
ಸತ್‌ಪುರುಷ ಕೀನ್ಹಾ ಪ್ರಕಾಶಾ । ಹಮ್ ಹೋತೆ ತಖತ್ ಕಬೀರ್ ಖವಾಸಾ ॥ 2 ॥
ಮನ ಮೋಹಿನಿ ಸಿರ್‌ಜೀ ಮಾಯಾ । ಸತ್‌ಪುರುಷ್ ಏಕ್ ಖ್ಯಾಲ್ ಬನಾಯಾ ॥ 3 ॥
ಧರ್ಮರಾಯ್ ಸಿರ್‌ಜೆ ದರ್‌ಬಾನೀ । ಚೌಸಠ್ ಜುಗತಪ ಸೇವಾ ಠಾನೀ ॥ 4 ॥
ಪುರುಷ್ ಪೃಥಿವೀ ಜಾಕೂಂ ದೀನ್ಹೀ । ರಾಜ್ ಕರೋ ದೇವಾ ಆಧೀನೀ ॥ 5 ॥
ಬ್ರಹ್ಮಾಂಡ ಇಕ್ಕೀಸ್ ರಾಜ್ ತುಮ್ಹ್ ದೀನ್ಹಾ । ಮನ್ ಕೀ ಇಚ್ಛಾ ಸಬ್ ಜುಗ್ ಲೀನ್ಹಾ ॥ 6 ॥
ಮಾಯಾ ಮೂಲ್ ರೂಪ್ ಏಕ್ ಛಾಜಾ ।ಮೋಹಿ ಲಿಯೆ ಜಿನಹೂಂ ಧರ್ಮರಾಜಾ ॥ 7 ॥
ಧರ್ಮ್ ಕಾ ಮನ್ ಚಂಚಲ್ ಚಿತ್ ಧಾರಯಾ । ಮನ ಮಾಯಾ ಕಾ ರೂಪ ವಿಚಾರಾ ॥ 8 ॥
ಚಂಚಲ ಚೇರೀ ಚಪಲ್ ಚಿರಾಗಾ । ಯಾ ಕೆ ಪರಸೆ ಸರ್‌ಬಸ್ ಜಾಗಾ ॥ 9 ॥
ಧರ್ಮರಾಯ್ ಕೀಯಾ ಮನ್ ಕಾ ಭಾಗೀ । ವಿಷಯ್ ವಾಸನಾ ಸಂಗ್ ಸೆ ಜಾಗೀ ॥ 10 ॥
ಆದಿ ಪುರುಷ ಅದಲೀ ಅನ್‌ರಾಗೀ । ಧರ್ಮರಾಯ್ ದಿಯಾ ದಿಲ್ ಸೆ ತ್ಯಾಗೀ ॥ 11 ॥
ಪುರುಷ್ ಲೋಕ್ ಸೇ ದೀಯಾ ಢಹಾಹೀ । ಅಗಮ್ ದೀಪ್ ಚಲಿ ಆಯೆ ಭಾಯಿ ॥ 12 ॥
ಸಹಜ್ ದಾಸ್ ಜಿಸ್ ದೀಪ್ ರಹಂತಾ ।ಕಾರಣ್ ಕೌನ್ ಕೌನ್ ಕುಲ್ ಪಂಥಾ ॥ 13 ॥
ಧರ್ಮರಾಯ್ ಬೋಲೆ ದರಬಾನೀ । ಸುನೋ ಸಹಜ್ ದಾಸ್ ಬ್ರಹ್ಮ್‌ಜ್ಞಾನೀ ॥ 14 ॥
ಚೌಸಠ್ ಜುಗ್ ಹಮ್ ಸೇವಾ ಕೀನ್ಹೀ । ಪುರುಷ್ ಪೃಥ್ವೀ ಹಮ್ ಕೂ ದೀನ್ಹೀ ॥ 15 ॥
ಚಂಚಲ್ ರೂಪ್ ಭಯಾ ಮನ್ ಬೌರಾ । ಮನ್ ಮೋಹಿನೀ ಠಗ್‌ಯಾ ಭೌಂರಾ ॥ 16 ॥
ಸತ್‌ಪುರುಷ್ ಕೆ ನಾ ಮನ್ ಭಾಯೆ । ಪುರುಷ್ ಲೋಕ್ ಸೆ ಹಮ್ ಚಲಿ ಆಯೆ ॥ 17 ॥
ಅಗರ್ ದೀಪ್ ಸುನತ್ ಬಡಭಾಗೀ । ಸಹಜದಾಸ್ ಮೇಟೋ ಮನ್ ಪಾಗೀ ॥ 18 ॥
ಬೋಲೆ ಸಹಜದಾಸ್ ದಿಲ್ ದಾನೀ । ಹಮ್ ತೊ ಚಾಕರ್ ಸತ್ ಸಹದಾನೀ ॥ 19 ॥
ಸತ್‌ಪುರುಷ್ ಸೆ ಅರಜ್ ಗುಜಾರೂಂ । ಜಬ್ ತುಮ್ಹಾರಾ ಬಿವಾಣ್ ಉತಾರೂಂ ॥ 20 ॥

ಸಹಜದಾಸ್ ಕೋ ಕೀಯಾ ಪೀಯಾನಾ । ಸತ್ಯಲೋಕ್ ಲೀಯಾ ಪ್ರವಾನಾ ॥ 21 ॥
ಸತ್‌ಪುರುಷ್ ಸಾಹಿಬ್ ಸರಬಂಗೀ । ಅವಿಗತ ಅದಲೀ ಅಚಲ್ ಅಭಂಗೀ ॥ 22 ॥
ಧರ್ಮರಾಯ್ ತುಮ್ಹಾರಾ ದರಬಾನೀ । ಅಗರ್ ದೀಪ್ ಚಲಿ ಗಯೆ ಪ್ರಾನೀ ॥ 23 ॥
ಕೌನ್ ಹುಕಮ್ ಕರೀ ಅರಜ್ ಅವಾಜಾ । ಕಹಾಂ ಪಠಾವೌ ಉಸ್ ಧರ್ಮರಾಜಾ ॥ 24 ॥
ಭಯೀ ಅವಾಜ್ ಅದಲೀ ಏಕ್ ಸಾಚಾ ।ವಿಷಯ ಲೋಕ್ ಜಾ ತೀನ್ಯೂಂ ಬಾಚಾ ॥ 25 ॥
ಸಹಜ್ ವಿಮಾನ್ ಚಲೆ ಅಧಿಕಾಯಿ । ಛಿನ್ ಮೆ ಅಗರ್ ದೀಪ್ ಚಲಿ ಆಯೀ ॥ 26 ॥
ಹಮ್ ತೋ ಅರಜ್ ಕರೀ ಅನರಾಗೀ । ತುಮ್ಹ ವಿಷಯ್ ಲೋಕ್ ಜಾವೋ ಬಡಭಾಗೀ ॥ 27 ॥
ಧರ್ಮರಾಯ್ ಕೆ ಚಲೆ ವಿಮಾನಾ । ಮಾನಸರೋವರ್ ಆಯೆ ಪ್ರಾನಾ ॥ 28 ॥
ಮಾನಸರೋವರ್ ರಹನ್ ನ ಪಾಯೆ । ದರ್ರೈ ಕಬೀರಾ ಥಾಂನಾ ಲಾಯೆ ॥ 29 ॥
ಬಂಕನಾಲ್ ಕೀ ವಿಷಮೀ ಬಾಟೀ । ತಹಾಂ ಕಬೀರಾ ರೋಕೀ ಘಾಟೀ ॥ 30 ॥
ಇನ್ ಪಾಂಚೋ ಮಿಲಿ ಜಗತ್ ಬಂಧಾನಾ । ಲಖ್ ಚೌರಾಸೀ ಜೀವ ಸಂತಾನಾ ॥ 31 ॥
ಬ್ರಹ್ಮಾ ವಿಷ್ಣು ಮಹೇಶ್ವರ್ ಮಾಯಾ । ಧರ್ಮರಾಯ ಕಾ ರಾಜ್ ಪಠಾಯಾ ॥ 32 ॥
ಯೌಹ್ ಖೋಖಾ ಪುರ್ ಝೂಠೀ ಬಾಜೀ । ಭಿಸತಿ ಬೈಕುಂಠ್ ದಗಾಹೀ ಸಾಜೀ ॥ 33 ॥
ಕೃತಿಮ್ ಜೀವ್ ಭುಲಾಂನೇ ಭಾಯೀ। ನಿಜ ಘರ್ ಕೀ ತೋ ಖಬರಿ ನ ಪಾಯೀ ॥ 34 ॥
ಸವಾ ಲಾಖ್ ಉಪಜೆಂ ನಿತ್ ಹಂಸಾ । ಏಕ್ ಲಾಖ್ ವಿನಶೆಂ ನಿತ ಅಂಸಾ ॥ 35 ॥
ಉಪತಿ ಖಪತಿ ಪ್ರಲಯ ಫೇರಿ । ಹರ್ಷ ಶೋಕ್ ಜೌಂರಾ ಜಮ್ ಜೇರೀ ॥ 36 ॥
ಪಾಂಚೋಂ ತತ್ವ ಹೈಂ ಪ್ರಲಯ ಮಾಂಹೀ ।
ಸತ್ವಗುಣ್ ರಜಗುಣ್ ತಮಗುಣ್ ಝಾಂಯಿ ॥ 37॥
ಆಠೋಂ ಅಂಗ್ ಮಿಲೀ ಹೈ ಮಾಯಾ । ಪಿಂಡ್ ಬ್ರಹ್ಮಾಂಡ್ ಸಕಲ್ ಭರಮಾಯಾ ॥ 38 ॥
ಯಾ ಮೇಂ ಸುರತಿ ಶಬ್ದ ಕೀ ಡೋರೀ । ಪಿಂಡ ಬ್ರಹ್ಮಾಂಡ ಲಗೀ ಹೈ ಖೋರೀ ॥ 39 ॥
ಶ್ವಾಸಾ ಪಾರಸ್ ಮನ್ ಗಹ್ ರಾಖೋ । ಖೋಲ್ಹಿ ಕಪಾಟ್ ಅಮೀರಸ್ ಚಾಖೋ ॥ 40 ॥
ಸುನಊಂ ಹಂಸ್‌ಶಬ್ದ್ ಸುನ್ ದಾಸಾ । ಅಗಮ್ ದೀಪ್‌ಹೈ ಅಗ್ ಹೈ ಬಾಸಾ ॥ 41 ॥
ಭವಸಾಗರ್ ಜಮ್ ದಂಡ್ ಜಮಾನಾ । ಧರ್ಮರಾಯ್ ಕಾ ಹೈ ತಲ್‌ಬಾಂನಾ ॥ 42 ॥
ಪಾಂಚೋ ಊಪರ್ ಪದ್ ಕೀ ನಗರೀ । ಬಾಟ್ ವಿಹಂಗಮ್ ಬಂಕೀ ಡಗರೀ ॥ 43 ॥
ಹಮ್‌ರಾ ಧರ್ಮರಾಯ್ ಸೋಂ ದಾವಾ। ಭವಸಾಗರ್ ಮೇಂ ಜೀವ್ ಭರಮಾವಾ ॥ 44 ॥
ಹಮ್ ತೋ ಕಹೈ ಅಗಮ್‌ಕೀ ಬಾನೀ । ಜಹಾಂ ಅವಿಗತ್ ಅದಲೀ ಆಪ್ ಬಿನಾನೀ ॥ 45 ॥
ಬಂದೀ ಛೋಡ್ ಹಮಾರಾ ನಾಮ್ಂ । ಅಜರ್ ಅಮರ್ ಹೈ ಅಸ್ಥೀರ್ ಠಾಮಂ ॥ 46 ॥
ಜುಗನ್ ಜುಗನ್ ಹಮ್ ಕಹತೆ ಆಯೆ । ಜಮ್ ಜೌರಾ ಸೆ ಹಂಸ ಛುಟಾಯೆ ॥ 47 ॥
ಜೋ ಕೋಯಿ ಮಾನೇಂ ಶಬ್ದ್ ಹಮಾರಾ ।
ಭವಸಾಗರ್ ನಹೀಂ ಭರಮೆಂ ಧಾರಾ ॥ 48 ॥
ಯಾ ಮೆಂ ಸುರತಿ ಶಬ್ದ ಕಾ ಲೇಖಾ ।
ತನ್ ಅಂದರ್ ಮನ್ ಕಹೋ ಕೀನ್ಹೀಂ ದೇಖಾ ॥ 49 ॥
ದಾಸ್ ಗರೀಬ್ ಅಗಮ್ ಕೀ ಬಾನೀ । ಖೋಜಾ ಹಂಸಾ ಶಬ್ದ್ ಸಹದಾನೀ ॥ 50 ॥

**ಮೇಲೆ ಹೇಳಲಾಗಿರುವ ಅಮೃತವಾಣಿಯ ಭಾವಾರ್ಥ ಏನೆಂದರೆ ಗೌರವಾನ್ವಿತ ಗರೀಬ್‌ದಾಸ್ ರವರು ಹೇಳುತ್ತಿದ್ದಾರೆ. "ಇಲ್ಲಿ ಮೊದಲು ಕೇವಲ ಅಂಧಕಾರವಿತ್ತು ಮತ್ತು ಪೂರ್ಣ ಪರಮಾತ್ಮಾ ಕಬೀರರು ಸತ್ಯಲೋಕದಲ್ಲಿ ಸಿಂಹಾಸನದ ಮೇಲೆ ವಿರಾಜಮಾನರಾಗಿದ್ದರು. ನಾವು ಅಲ್ಲಿ ಸೇವಕರಾಗಿದ್ದೆವು. ಪರಮಾತ್ಮನು ಜ್ಯೋತಿ ನಿರಂಜನರ ಸೃಷ್ಟಿಯನ್ನು ಮಾಡಿದರು. ನಂತರ ಆತನ ತಪಸ್ಸಿನ ಫಲವಾಗಿ 21**

**ಬ್ರಹ್ಮಾಂಡಗಳನ್ನು ನೀಡಿದರು. ಆಮೇಲೆ ಮಾಯಾ (ಪ್ರಕೃತಿಯ) ದೇವಿಯ ಸೃಷ್ಟಿ ಮಾಡಿದರು. ಯುವತಿ ದುರ್ಗಾದೇವಿಯ ರೂಪದಿಂದ ಮೋಹಿತನಾಗಿ ಜ್ಯೋತಿ ನಿರಂಜನ (ಬ್ರಹ್ಮ)ನು ದುರ್ಗಾ (ಪ್ರಕೃತಿ)ಳನ್ನು ಬಲಾತ್ಕಾರ ಮಾಡುವ ಪ್ರಯತ್ನವನ್ನು ಮಾಡಿದನು. ಬ್ರಹ್ಮನ ಆ ತಪ್ಪಿಗೆ ಶಿಕ್ಷೆಯನ್ನು ನೀಡಲಾಯಿತು. ಆತನನ್ನು ಸತ್ಯಲೋಕದಿಂದ ಹೊರಹಾಕಲಾಯಿತು ಮತ್ತು ಶಾಪ ದೊರೆಯಿತು. ಆ ಶಾಪದಿಂದ ಒಂದು ಲಕ್ಷ ಮಾನವ ಶರೀರ ಹೊಂದಿದ ಪ್ರಾಣಿಗಳನ್ನು ಪ್ರತಿದಿನ ಆಹಾರವಾಗಿ ಸೇವಿಸುವಂತಾಯಿತು. ಒಂದೂ ಕಾಲು ಲಕ್ಷ ಮಾನವರ ಸೃಷ್ಟಿಯನ್ನು ಮಾಡಬೇಕಾಯಿತು. ಇಲ್ಲಿರುವ ಎಲ್ಲಾ ಪ್ರಾಣಿಗಳು ಜನ್ಮ, ಮೃತ್ಯುಗಳ ಕಷ್ಟವನ್ನು ಪಡುತ್ತಿದ್ದಾರೆ. ಒಂದು ವೇಳೆ ಯಾರಾದರೂ ಪೂರ್ಣ ಪರಮಾತ್ಮನ ವಾಸ್ತವಿಕ ಶಬ್ದ (ನಿಜವಾದ ಜಪದ ಮಂತ್ರ) ನಮ್ಮಿಂದ ಪಡೆಯುವರೋ, ಅವರನ್ನು ಕಾಲನ ಬಂಧನದಿಂದ ಬಿಡಿಸುವೆವು. ನಮಗೆ ಬಂಧಮುಕ್ತನೆಂಬ ಹೆಸರಿದೆ". ಗೌರವಾನ್ವಿತ ಗರೀಬ್‌ದಾಸರು ತಮ್ಮ ಗುರು ಮತ್ತು ಪ್ರಭು ಕಬೀರ ಪರಮಾತ್ಮನ ಆಧಾರದಿಂದ ಏನು ಹೇಳುತ್ತಿದ್ದಾರೆಂದರೆ, "ನಿಜವಾದ ಮಂತ್ರ ಅರ್ಥಾತ್ ಸತ್ಯನಾಮ ಮತ್ತು ಸಾರಶಬ್ದದ ಪ್ರಾಪ್ತಿ ಪಡೆ, ಪೂರ್ಣ ಮೋಕ್ಷ ದೊರೆಯುವುದು. ಇಲ್ಲವಾದರೆ ನಕಲೀ ನಾಮಮಂತ್ರ ನೀಡುವ ಸಂತರು ಹಾಗೂ ಗುರುಗಳ ಸಿಹಿ–ಸಿಹಿಯಾದ (ಮೃದುವಾದ) ಮಾತುಗಳಲ್ಲಿ ಸಿಲುಕಿಕೊಂಡು ಶಾಸ್ತ್ರ ವಿಧಿರಹಿತ ಸಾಧನೆಯನ್ನು ಮಾಡಿ ಕಾಲನ ಜಾಲದಲ್ಲಿ ಬಂದಿಯಾಗಿಬಿಡುವೆ. ನಂತರ ಕಷ್ಟದ ಮೇಲೆ ಕಷ್ಟವನ್ನು ಅನುಭವಿಸುವೆ".**

**॥ ಸಂತ ಗರೀಬ್‌ದಾಸ್‌ರ ವಾಣಿ ॥**

**(ಸದ್ಗ್ರಂಥ ಸಾಹೀಬ್ ಪುಟ ಸಂ. 690ರ ಆಧಾರದಿಂದ)**

ಮಾಂಯಾ ಆದಿ ನಿರಂಜನ್ ಭಾಈ, ಅಪನೆ ಜಾಂಯೆ ಆಪೈಖಾಯೀ ।
ಬ್ರಹ್ಮಾ ವಿಷ್ಣು ಮಹೇಶ್ವರ ಚೇಲಾ, ಓಂ ಸೋಹಂ ಕಾ ಹೈ ಖೇಲಾ ॥
ಸಿಖರ್ ಸುನ್ನ್ ಮೆಂ ಧರ್ಮ್ ಅನ್ಯಾಯೀ, ಜಿನ್ ಶಕ್ತಿ ಡಾಯನ್ ಮಹಲ್ ಪಠಾಈ॥
ಲಾಖ್ ಗ್ರಾಸೈ ನಿತ್ ಉಠ್ ದೂತಿ, ಮಾಂಯಾ ಆದಿ ತಖ್ತ್ ಕೀ ಕುತೀ ॥
ಸವಾ ಲಾಖ್ ಘಡಿಯೆ ನಿತ್ ಭಾಂಡೆ, ಹಂಸಾ ಉತ್‌ಪತಿ ಪರಲಯ್ ಡಾಂಡೆ ।
ಯೆ ತೀನೋಂ ಚೇಲಾ ಬಟ್‌ಪಾರೀ, ಸಿರಜೆ ಪುರುಷಾ ಸಿರಜೀ ನಾರೀ ॥
ಖೊಖಾಪುರ್ ಮೆಂ ಜೀವ್ ಭುಲಾಯೆ, ಸ್ವಪನಾ ಬಹಿಸ್ತ್ ವೈಕುಂಠ್ ಬನಾಯೇ ।
ಯೊ ಹರಹಟ್ ಕಾ ಕುವಾ ಲೋಯೀ, ಯಾ ಗಲ್ ಬಂಧ್ಯಾ ಹೈ ಸಬ್ ಕೋಯಿ ॥
ಕೀಡೀ ಕುಂಜರ ಔರ್ ಅವತಾರಾ, ಹರಹಟ್ ಡೋರೀ ಬಂಧೆ ಕಯೀ ಬಾರಾ ।
ಅರಬ್ ಅಲೀಲ್ ಇಂದ್ರ್ ಹೈ ಭಾಯೀ, ಹರಹಟ್ ಡೋರೀ ಬಂಧೆ ಸಬ್ ಆಯೀ ॥
ಶೇಷ್ ಮಹೇಶ್ ಗಣೇಶ್ವರ್ ತಾಹಿಂ, ಹರಹಟ್ ಡೋರೀ ಬಂಧೆ ಸಬ್ ಆಹಿಂ ॥
ಶುಕ್ರಾದಿಕ್ ಬ್ರಹ್ಮಾದಿಕ್ ದೇವಾ, ಹರಹಟ್ ಡೋರೀ ಬಂಧೆ ಸಬ್ ಖೇವಾ ॥
ಕೋಟಿಕ್ ಕರ್ತಾ ಫಿರತಾ ದೇಖ್ಯಾ, ಹರಹಟ್ ಡೋರೀ ಕಹೂಂ ಸುನ್ ಲೇಖಾ ।
ಚತುರ್ಭುಜೀ ಭಗವಾನ್ ಕಹಾವೈಂ, ಹರಹಟ್ ಡೋರೀ ಬಂಧೆ ಸಬ್ ಆವೈಂ ॥
ಯೋ ಹೈ ಖೋಖಾಪುರ್ ಕಾ ಕುವಾ, ಯಾ ಮೆಂ ಪಡಾ ಸೊ ನಿಶ್ಚಯ್ ಮುವಾ ।

**ಜ್ಯೋತಿನಿರಂಜನ (ಕಾಲಬಲೀ)ನ ವಶದಲ್ಲಿರುವ ಈ ಮೂವರು ದೇವತೆಗಳು (ರಜೋಗುಣ–ಬ್ರಹ್ಮಾ, ಸತಗುಣ–ವಿಷ್ಣು, ತಮೋಗುಣ–ಶಿವ) ತಮ್ಮ ಮಹಿಮೆಯನ್ನು ತೋರಿಸಿ ಜೀವಿಗಳಿಗೆ ಸ್ವರ್ಗ, ನರಕ ಮತ್ತು ಭವಸಾಗರದಲ್ಲಿ (84 ಲಕ್ಷ ಯೋನಿಗಳಲ್ಲಿ ಮುಳುಗಿಸಿ) ಅಲೆದಾಡಿಸುತ್ತಾರೆ. ಜ್ಯೋತಿ ನಿರಂಜನರು ತನ್ನ ಮಾಯೆಯಿಂದ ನಾಗಿನಿಯ ರೀತಿಯಲ್ಲಿ ಜೀವಿಯ ಸೃಷ್ಟಿಯನ್ನು ಮಾಡುತ್ತಾರೆ**

ಮತ್ತು ಕೊಲ್ಲುತ್ತಾರೆ. ಯಾವ ರೀತಿಯಲ್ಲಿ ನಾಗಿನಿಯು ಅವುಗಳನ್ನು ತಿಂದು ಬಿಡುತ್ತಾಳೋ ಆ ರೀತಿಯಲ್ಲಿ ನಾಶ ಮಾಡುತ್ತಾರೆ. ಹೆಡೆಹೊಡೆಯುವ ಸಮಯದಲ್ಲಿ ಹಲವಾರು ಮೊಟ್ಟೆಗಳು ಒಡೆದು ಹೋಗುತ್ತವೆ. ಯಾಕೆಂದರೆ ನಾಗಿನಿಯ ಮೊಟ್ಟೆಗಳು ಬಹಳಷ್ಟು ಇರುತ್ತವೆ. ಕೆಲವು ಮೊಟ್ಟೆಗಳು ಒಡೆದು ಅದರಿಂದ ಮರಿಗಳು ಹೊರಬರುತ್ತವೆ. ನಾಗಿನಿಯು ತನ್ನ ಬಾಲದ ಸಹಾಯದಿಂದ ಮೊಟ್ಟೆಗಳ ಸುತ್ತಲೂ ಮಂಡಲವನ್ನು ರಚಿಸುತ್ತಾಳೆ ಮತ್ತು ಆ ಮೊಟ್ಟೆಗಳ ಮೇಲೆ ತನ್ನ ಹೆಡೆಯಿಂದ ಹೊಡೆಯುತ್ತಾಳೆ. ಅದರಿಂದ ಮೊಟ್ಟೆ ಒಡೆದುಕೊಳ್ಳುತ್ತವೆ. ಅವುಗಳಿಂದ ಮರಿಗಳು ಹೊರ ಬರುತ್ತವೆ. ನಾಗಿನಿಯ ದೇಹದ ವೃತ್ತಾಕಾರದ ಮಂಡಲದಿಂದ ಯಾವುದಾದರೂ ಮರಿ ಹೊರ ಬಂತೋ ಅದರ ಜೀವ ಉಳಿಯುತ್ತದೆ. ಇಲ್ಲವೆಂದರೆ ಮಂಡಲದ ಒಳಗಿರುವ ಮರಿಗಳನ್ನು ಅವಳು (ನಾಗಿನಿ) ಬಿಡುವುದಿಲ್ಲ. ಎಷ್ಟು ಮರಿಗಳು ಆ ಮಂಡಲದ ಒಳಗೆ ಇರುತ್ತವೋ ಅವೆಲ್ಲವನ್ನೂ ತಿಂದು ಬಿಡುತ್ತಾಳೆ.

ಮಾಯಾ ಕಾಲೀ ನಾಗಿನೀ, ಅಪನೆ ಜಾಯೆ ಖಾತ್।
ಕುಂಡಲೀ ಮೆ ಛೋಡ್ಯೆ ನಹೀಂ ಸೌ ಬಾತೋಂ ಕೀ ಬಾತ್ ॥

ಇದೇ ರೀತಿಯಲ್ಲಿ ಈ ಕಾಲಬಲಿಯ ಜಾಲವಿದೆ. ನಿರಂಜನನವರೆಗೆ ಭಕ್ತಿ, ಪೂರ್ಣ ಸಂತರಿಂದ ನಾಮಜಪ ಪಡೆದು ಸ್ಮರಣೆ ಮಾಡುವೆವು. ಆದರೂ ಕೂಡಾ ಈ ನಿರಂಜನನ ಮಂಡಲ (**21** ಬ್ರಹ್ಮಾಂಡಗಳು)ಗಳಿಂದ ಹೊರಗೆ ಬರಲು ಸಾಧ್ಯವಾಗುವುದಿಲ್ಲ. ಸ್ವಯಂ ಬ್ರಹ್ಮಾ, ವಿಷ್ಣು, ಮಹೇಶ ಮುಂತಾದವರಿಂದ ಹಿಡಿದು ಮಾಯಾ ಶೇರಾವಾಲಿ (ದುರ್ಗಾ) ಕೂಡಾ ನಿರಂಜನನ ಮಂಡಲದಲ್ಲಿ ಬಂಧಿಯಾಗಿರುವಳು. ಪಾಪ ಇವರುಗಳು ಅವತಾರ ಪಡೆದು ಬರುತ್ತಾರೆ ಮತ್ತು ಜನ್ಮ-ಮೃತ್ಯುಗಳ ವರ್ತುಲದಲ್ಲಿ ಸಿಲುಕಿಕೊಂಡು ಅಲ್ಲೇ ಸುತ್ತು ಹಾಕುತ್ತಾರೆ. ಆದ್ದರಿಂದ ಯೋಚನೆ ಮಾಡಿ, ಸೋಹಂ (ಅವನೇ ನಾನು) ಎಂಬ ಜಪವನ್ನು ಯಾವ, ಧ್ರುವ, ಪ್ರಹ್ಲಾದ ಮತ್ತು ಶುಕದೇವ ಋಷಿಗಳು ಜಪವನ್ನು ಮಾಡಿದರೋ ಅವರು ಕೂಡಾ ಸಂಸಾರ ಬಂಧನದಿಂದ ಪಾರಾಗಲು ಸಾಧ್ಯವಾಗಲಿಲ್ಲ. ಏಕೆಂದರೆ ಶ್ರೀವಿಷ್ಣು ಪುರಾಣದಲ್ಲಿ ಧ್ರುವ ಕೇವಲ ಒಂದು ಕಲ್ಪ ಅರ್ಥಾತ್ ಒಂದು ಸಾವಿರ ಚತುರ್ಯುಗದವರೆಗೆ ಮಾತ್ರ ಮುಕ್ತನಾಗಿದ್ದನು. ಇದರಿಂದ ಕಾಲನ ಲೋಕದಲ್ಲಿಯೇ ಇರಬೇಕಾಗುವುದು. ಮತ್ತು "ಓಂ ನಮಃ ಭಗವತೇ ವಾಸುದೇವಾಯ" ಮಂತ್ರ ಜಪ ಮಾಡುವ ಭಕ್ತರು ಕೂಡಾ ಕೃಷ್ಣನವರೆಗೆ ಮಾತ್ರ ಭಕ್ತಿಯನ್ನು ತೋರಿಸುತ್ತಿದ್ದಾರೆ. ಅವರು ಕೂಡಾ **84** ಲಕ್ಷ ಯೋನಿಯೊಳಗೆ ಸಿಲುಕಿ ಆ ಬಂಧನದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಹೀಗೆ ಪರಮ ಪೂಜ್ಯ ಕಬೀರ್ ಪರಮೇಶ್ವರ ಮತ್ತು ಗೌರವಾನ್ವಿತ ಗರೀಬ್‌ದಾಸ್ ರವರ ವಾಣಿ ಪ್ರತ್ಯಕ್ಷವಾಗಿ ಪ್ರಮಾಣವನ್ನು ನೀಡುತ್ತಿದೆ.


ಅನಂತ್ ಕೋಟಿ ಅವತಾರ್ ಹೈ, ಮಾಯಾ ಕೆ ಗೋವಿಂದ್ ।
ಕರ್ತಾ ಹೋ ಹೋ ಅವತರೆ, ಬಹುರ್ ಪಡೆ ಜಗ್ ಫಂಧ್ ॥

ಸತ್ಯಪುರುಷ ಕಬೀರ ಪರಮೇಶ್ವರರ ಭಕ್ತಿಯಿಂದಲೇ ಜೀವಮುಕ್ತಿ ಪಡೆಯಬಹುದಾಗಿದೆ. ಎಲ್ಲಿಯವರೆಗೆ ಜೀವಾತ್ಮವು ಸತ್ಯಲೋಕಕ್ಕೆ ತಿರುಗಿ ಹೋಗುವುದಿಲ್ಲವೋ ಅಲ್ಲಿಯವರೆಗೆ ಕಾಲಲೋಕದಲ್ಲಿ ಇದೇ ರೀತಿ ಕರ್ಮದಲ್ಲಿ ಮುಳುಗಿರುವನು ಮತ್ತು ಮಂತ್ರ ಜಪ ಮತ್ತು ದಾನ ಧರ್ಮಗಳಿಂದ ಪಡೆದ ಪುಣ್ಯವನ್ನು ಸ್ವರ್ಗರೂಪದ ಹೋಟೆಲ್‌ನಲ್ಲಿ ಕಳೆದ ನಂತರ ತಿರುಗಿ ಕರ್ಮದ ಆಧಾರದ ಮೇಲೆ **84** ಲಕ್ಷ ಪ್ರಕಾರದ ಪ್ರಾಣಿಗಳ ಶರೀರದಲ್ಲಿ ಕಷ್ಟದಲ್ಲಿ ಮುಳುಗಬೇಕಾದ ಕಾಲನ ಲೋಕದಲ್ಲಿ ನರಳಬೇಕಾಗುವುದು. ಮಾಯಾ(ದುರ್ಗಾ)ಳಿಂದ ಉತ್ಪತ್ತಿಯಾದ (ಸೃಷ್ಟಿಯಾದ) ಕೋಟಿ-ಕೋಟಿ ಗೋವಿಂದ (ಬ್ರಹ್ಮಾ-ವಿಷ್ಣು-ಶಿವ)ರು ಮರಣವನ್ನು ಹೊಂದಿದ್ದಾರೆ. ಭಗವಂತನ ಅವತಾರ ತಳೆದು ಬಂದಿದ್ದರು. ಮತ್ತೆ ಕರ್ಮಾಬಂಧನದಲ್ಲಿ ಸಿಲುಕಿ ಕರ್ಮವನ್ನು ಅನುಭವಿಸುತ್ತಾ **84** ಲಕ್ಷ ಯೋನಿಗಳಲ್ಲಿ ಮತ್ತೆ ಬಂಧಿಸಲ್ಪಟ್ಟರು. ಹೇಗೆ ಭಗವಂತ ವಿಷ್ಣುವಿಗೆ ದುರ್ವಿಧಿ ನಾರದನ ಶಾಪತಟ್ಟಿತು. ಅವನು

**ಶ್ರೀರಾಮಚಂದ್ರನ ರೂಪದಲ್ಲಿ ಅಯೋಧ್ಯೆಯಲ್ಲಿ ಜನಿಸಿದನು. ಮತ್ತೆ ಶ್ರೀರಾಮನ ರೂಪದಲ್ಲಿ ವಾಲಿಯನ್ನು ವಧಿಸಿದನು. ಆ ಕರ್ಮದ ದಂಡವನ್ನು ಅನುಭವಿಸಲು ಕೃಷ್ಣನ ರೂಪವನ್ನು ತಾಳಬೇಕಾಯಿತು. ಮತ್ತು ವಾಲಿಯ ಆತ್ಮವು ಬೇಟೆಗಾರನ ಜನ್ಮವನ್ನು ತಳೆದು ತನ್ನ ದ್ವೇಷವನ್ನು ಪೂರೈಸಿಕೊಂಡನು. ಕೃಷ್ಣನ ಕಾಲಿಗೆ ವಿಷಯುಕ್ತ ಬಾಣವನ್ನು ಹೊಡೆದು ಆತನನ್ನು ಕೊಂದನು. ಮಹಾರಾಜ ಗರೀಬ್‌ದಾಸರು ತಮ್ಮ ವಚನದಲ್ಲಿ ಹೀಗೆ ಹೇಳಿದ್ದಾರೆ:–**

ಬ್ರಹ್ಮಾ ವಿಷ್ಣು ಮಹೇಶ್ವರ್ ಮಾಯಾ, ಔರ್ ಧರ್ಮರಾಯ್ ಕಹಿಯೆ ।
ಇನ್ ಪಾಂಚೋ ಮಿಲ್ ಪರಪಂಚ್ ಬನಾಯಾ, ವಾಣೀಹಮರೀ ಲಹಿಯೆ ॥
ಇನ್ ಪಾಂಚೋ ಮಿಲ್ ಜೀವ್ ಅಟ್‌ಕಾಯೆ,
ಜುಗನ್–ಜುಗನ್ ಹಮ್ ಆನ್ ಛುಟಾಯೆ ।
ಬಂದೀ ಛೋಡ್ ಹಮಾರಾ ನಾಮಂ, ಅಜರ–ಅಮರ ಹೈ ಅಸ್ಥಿರ್ ಠಾಮಂ ॥
ಪೀರ್ ಪೈಗಂಬರ್ ಕುತುಬ್ ಔಲಿಯಾ, ಸುರ್ ನರ್ ಮುನಿಜನ್ ಜ್ಞಾನೀ ।
ಯೇತಾ ಕೊ ತೋ ರಾಹ್ ನ ಪಾಯಾ, ಜಮ್ ಕೆ ಬಂಧೆ ಪ್ರಾಣೀ ॥
ಧರ್ಮರಾಯ್ ಕೀ ಧೂಮಾ–ಧಾಮೀ, ಜಮ್ ಪರ್ ಜಂಗ್ ಚಲಾವೂಂ ।
ಜೋರಾ ಕೊ ತೊ ಜಾನ್ ನ ದೂಂಗಾ, ಬಾಂಧ್ ಅದಲ್ ಘರ್ ಲ್ಯಾಊಂ ॥
ಕಾಲ್ ಅಕಾಲ್ ದೋಹೂಂ ಕೊ ಮೋಸೂಂ, ಮಹಾಕಾಲ ಸಿರ್ ಮೂಂಡೂ ।
ಮೈ ತೋ ತಖ್ತ್ ಹಜೂರೀ ಹುಕಮೀ, ಚೋರ್ ಖೋಜ್ ಕೂಂ ಢೂಂಢೂ ॥
ಮೂಲಾ ಮಾಯಾ ಮಗ್ ಮೆಂ ಬೈಠೀ, ಹಂಸಾ ಚುನ್–ಚುನ್ ಖಾಯೀ ।
ಜ್ಯೋತಿ ಸ್ವರೂಪೀ ಭಯಾ ನಿರಂಜನ, ಮೈಂ ಹೀ ಕರ್ತಾ ಭಾಯೀ ॥
ಸಹಂಸ್ ಅಠಾಸೀ ದೀಪ್ ಮುನೀಶ್ವರ್, ಬಂಧೆ ಮುಲಾ ಡೋರೀ ।
ಐತ್ಯಾ ಮೆ ಜಮ್ ಕಾ ತಲ್‌ಬಾನಾ, ಚಲಿಯೆ ಪುರುಷ್ ಕಿಶೋರಿ ॥
ಮೂಲಾ ಕಾ ತೋ ಮಾಥಾ ದಾಗೂಂ, ಸತ್‌ಕೀ ಮೊಹರ್ ಕರೂಂಗಾ ।
ಪುರುಷ್ ದೀಪ್ ಕೂಂ ಹಂಸ್ ಚಲಾವೂಂ, ದರಾ ನ ರೋಕನ್ ದೂಂಗಾ ॥
ಹಮ್ ತೋ ಬಂದೀ ಛೋಡ್ ಕಹಾವಾಂ, ಧರ್ಮರಾಯ್ ಹೈ ಚಕವೈ ।
ಸತ್‌ಲೋಕ್ ಕೀ ಸಕಲ್ ಸುನಾವಾಂ, ವಾಣೀ ಹಮರೀ ಅಖಿವೈ ॥
ನೌ ಲಖ್ ಪಟ್ಟನ್ ಊಪರ್ ಖೇಲೂಂ, ಸಾಹದರೆ ಕೂಂ ರೋಕೂಂ ।
ದ್ವಾದಸ್ ಕೋಟಿ ಕಟಕ್ ಸಬ್ ಕಾಟೂಂ, ಹಂಸ ಪಠಾವೂಂ ಮೋಖೂಂ ॥
ಚೌದಹ್ ಭುವನ್ ಗಮನ್ ಹೈ ಮೇರಾ, ಜಲ್ ಥಲ್ ಮೆ ಸರಬಂಗೀ ।
ಖಾಲಿಕ್ ಖಲಕ್ ಖಲಕ್ ಮೆಂ ಖಾಲಿಕ್, ಅವಿಗತ್ ಅಚಲ್ ಅಭಂಗೀ ॥
ಅಗರ್ ಅಲೀಲ್ ಚಕ್ರ್ ಹೈ ಮೇರಾ, ಜಿತ್ ಸೆ ಹಮ್ ಚಲ್ ಆಯೆ ।
ಪಾಂಚೋ ಪರ್ ಪ್ರವಾನಾ ಮೇರಾ, ಬಂಧಿ ಛುಟಾವನ್ ಧಾಯೆ ॥
ಜಹಾಂ ಓಂಕಾರ್ ನಿರಂಜನ್ ನಾಹೀಂ, ಬ್ರಹ್ಮಾ ವಿಷ್ಣು ವೇದ್ ನಹೀಂ ಜಾಹೀಂ ।
ಜಹಾಂ ಕರತಾ ನಹೀಂ ಜಾನ್ ಭಗವಾನಾ, ಕಾಯಾ ಮಾಯಾ ಪಿಂಡ್ ನ ಪ್ರಾಣಾ ॥
ಪಾಂಚ್ ತತ್ತ್ವ ತೀನೋಂ ಗುಣ್ ನಾಹೀಂ, ಜೋರಾ ಕಾಲ್ ದೀಪ್ ನಹೀಂ ಜಾಹೀಂ ।
ಅಮರ್ ಕರೂಂ ಸತ್‌ಲೋಕ್ ಪಠಾವೂ, ತಾತೈ ಬಂದೀ ಛೋಡ್ ಕಹಾವೂಂ ॥

**ಕಬೀರ ಪರಮೇಶ್ವರ (ಕವಿರ್ದೇವ)ನ ಮಹಿಮೆಯನ್ನು ಹೇಳುತ್ತಾ ಗೌರವಾನ್ವಿತ ಗರೀಬ್‌ದಾಸ್‌ರವರು ಏನು ಹೇಳುತ್ತಿದ್ದಾರೆಂದರೆ, "ನಮ್ಮ ಪ್ರಭು ಕವಿರ್ (ಕವಿರ್ದೇವ) ಬಂಧಮುಕ್ತನಾಗಿದ್ದಾನೆ. ಬಂಧಮುಕ್ತನ ಭಾವಾರ್ಥ ಈ ರೀತಿ ಇದೆ. ಕಾಲನ ಕಾರಾಗೃಹದಿಂದ ಬಿಡಿಸುವವನು, ಕಾಲಬ್ರಹ್ಮನ**




'ಕಾಲ'ನ ಲೋಕದಲ್ಲಿ ಜನನ–ಮರಣ ರೂಪಗಳ ಹರಹಟ (ಚಕ್ರ)

21 ಬ್ರಹ್ಮಾಂಡದಲ್ಲಿರುವ ಎಲ್ಲಾ ಪ್ರಾಣಿಗಳೂ ಪಾಪಗಳ ಕಾರಣದಿಂದ ಕಾಲನ ಬಂಧಿಯಾಗಿದ್ದಾರೆ. ಪೂರ್ಣ ಪರಮಾತ್ಮ (ಕವಿರ್ದೇವ) ಕಬೀರ ಪರಮೇಶ್ವರರು ಪಾಪದ ನಾಶವನ್ನು ಮಾಡುತ್ತಾರೆ. ಹೇಗೆ ಪಾಪವಿದೆಯೋ ಹಾಗೆಯೇ ಫಲವನ್ನು ನೀಡುತ್ತಾರೆ. ಆದ್ದರಿಂದ ಯಜುರ್ವೇದ ಅಧ್ಯಾಯ 5ರ ಮಂತ್ರ 32ರಲ್ಲಿ ಬರೆಯಲಾಗಿದೆ. 'ಕವಿರಂಘಾರಿರಸಿ' ಕವಿರ್ದೇವ (ಕಬೀರ ಪರಮೇಶ್ವರ) ಪಾಪದ ಶತ್ರುವಾಗಿದ್ದಾನೆ. 'ಬಂಭಾರಿರಸಿ' ಬಂಧನಗಳ ಶತ್ರು ಅರ್ಥಾತ್ ಬಂಧಮುಕ್ತನಾಗಿದ್ದಾನೆ.

ಈ ಐದೂ (ಬ್ರಹ್ಮಾ, ವಿಷ್ಣು, ಶಿವ, ಮಾಯಾ ಮತ್ತು ಧರ್ಮರಾಯ) ದೇವತೆಗಳಿಗಿಂತ ಮೇಲೆ ಸತ್ಯಪುರುಷ ಪರಮಾತ್ಮಾ (ಕವಿರ್ದೇವ) ಇದ್ದಾನೆ. ಯಾವುದು ಸತ್ಯಲೋಕ ಎನಿಸುತ್ತದೆಯೋ ಅದರ ಮಾಲೀಕನಾಗಿದ್ದಾನೆ. ಉಳಿದ ಎಲ್ಲಾ ಪರಬ್ರಹ್ಮ-ಬ್ರಹ್ಮ ಮತ್ತು ಬ್ರಹ್ಮಾ-ವಿಷ್ಣು-ಶಿವ ಮತ್ತು ಆದಿಮಾಯಾ ನಾಶವಾಗುವ ಪರಮಾತ್ಮರಾಗಿದ್ದಾರೆ. ಮಹಾಪ್ರಲಯದಲ್ಲಿ ಇವರೆಲ್ಲರೂ ಮತ್ತು ಇವರ ಲೋಕ ಸಮಾಪ್ತಿ (ನಾಶ)ಯಾಗಿ ಹೋಗುವುವು. ಸಾಧಾರಣ ಜೀವಕ್ಕಿಂತಲೂ ಹಲವಾರು ಸಾವಿರ ಪಟ್ಟು ಹೆಚ್ಚಿನ ಆಯಸ್ಸು ಈ ದೇವತೆಗಳಿಗಿರುತ್ತದೆ. ಆದರೆ ಯಾವ ಸಮಯ ನಿರ್ಧಾರಿತವಾಗಿರುತ್ತದೆಯೋ. ಆ ಆಯಸ್ಸು ಒಂದು ದಿನ ಖಂಡಿತವಾಗಿ ಪೂರ್ಣ ಆಗುತ್ತದೆ. ಗೌರವಾನ್ವಿತ ಗರೀಬ್‌ದಾಸ್ ರವರು ಹೇಳುತ್ತಿದ್ದಾರೆ:-

ಶಿವ್ ಬ್ರಹ್ಮಾ ಕಾ ರಾಜ್, ಇಂದ್ರ್ ಗಿನತೀ ಕಹಾಂ।
ಚಾರ್ ಮುಕ್ತಿ ವೈಕುಂಠ್ ಸಮಝ್ ಯೆತಾ ಲಹ್ಯಾ ॥
ಸಂಖ್ ಜುಗನ್ ಕೀ ಜುನೀ, ಉಮ್ರ್ ಬಡ್ ಧಾರಿಯಾ।
ಜಾ ಜನನೀ ಕುರ್ಬಾನ್, ಸು ಕಾಗಜ್ ಪಾರಿಯಾ ॥
ಯೆತೀ ಉಮ್ರ್ ಬುಲಂದ್ ಮರ್ಯೆಗಾ ಅಂತ್ ರೆ।
ಸತ್‌ಗುರು ಲಗೆ ನ ಕಾನ್, ನ ಭೈಂಟೆ ಸಂತರೆ ॥

ಸಂಖ್ ಯುಗದ ಆಯುಷ್ಯವಿದ್ದರು ಸಹ ಒಂದು ದಿನ ಸಮಾಪ್ತವಾಗುವುದು. ಒಂದು ವೇಳೆ ಸತ್ಯಪುರುಷ ಪರಮಾತ್ಮಾ (ಕವಿರ್ದೇವ) ಕಬೀರ್ ಸಾಹೇಬರ ಪ್ರತಿನಿಧಿಯಾದ ಪೂರ್ಣ ಸಂತ (ಗುರು) ಯಾವ ಮೂರು ನಾಮದ ಮಂತ್ರ (ಯಾವುದರಲ್ಲಿ ಒಂದು ಓಂ+ತತ್+ಸತ್ ಸಾಂಕೇತಿಕವಾಗಿದೆ) ನೀಡುವನೋ ಮತ್ತು ಪೂರ್ಣ ಸಂತನ ಮೂಲಕ ಭಗವಂತನ ನಾಮವನ್ನು ಭಕ್ತರಿಗೆ ಉಪದೇಶ ನೀಡಲು ಆದೇಶ ಕೊಡುವನೋ, ಆತನಿಂದ ಯಾರು ಉಪದೇಶವನ್ನು ಪಡೆದು, ಆ ನಾಮಸ್ಮರಣೆಯಿಂದ ಪುಣ್ಯ ಸಂಚಯವನ್ನು ಪಡೆಯುವರೋ ಅವರುಗಳು ಸತ್ಯಲೋಕದ ಅಧಿಕಾರಿ ಹಂಸವಾಗುವರು. ಸತ್ಯ ಸಾಧನೆಯು ಇಲ್ಲದೆ ಇದ್ದರೆ ಅತೀ ಹೆಚ್ಚಿನ ಆಯಸ್ಸು ಕೂಡಾ ಯಾವುದೇ ಕೆಲಸಕ್ಕೆ ಬರುವುದಿಲ್ಲ ಏಕೆಂದರೆ ನಿರಂಜನಲೋಕದಲ್ಲಿ ದುಃಖವೇ ದುಃಖ ತುಂಬಿದೆ.

ಕಬೀರ್, ಜೀವನಾ ತೋ ಥೋಡಾ ಹೀ ಭಲಾ, ಜೈ ಸತ್ ಸುಮರನ್ ಹೋಯ್ ।
ಲಾಖ್ ವರ್ಷ್ ಕಾ ಜೀವನಾ, ಲೆಖೈ ಧರೈ ನಾ ಕೋಯ್ ॥

ಕಬೀರ ಸಾಹೇಬರು ತಮ್ಮ (ಪೂರ್ಣ ಬ್ರಹ್ಮನ) ಮಾಹಿತಿಯನ್ನು ಸ್ವತಃ ಹೇಳುತ್ತಿದ್ದಾರೆ, ಏನೆಂದರೆ, ಈ ಮೂವರು ಪರಮಾತ್ಮರಿಗಿಂತಲೂ ಶ್ರೇಷ್ಠನಾದ ಅಸಂಖ್ಯ ಭುಜಗಳುಳ್ಳ ಪರಮಾತ್ಮಾ ಸತ್ಯಪುರುಷನಿದ್ದಾನೆ ಅವನು ಸತ್ಯಲೋಕ (ಸತ್ಯಖಂಡ, ಸತ್ಯಧಾಮ)ದಲ್ಲಿ ವಾಸವಾಗಿದ್ದಾನೆ ಮತ್ತು ಅವನ ಅಧೀನದಲ್ಲಿ ಸರ್ವಲೋಕ (ಬ್ರಹ್ಮ (ಕಾಲ)ದ 21 ಬ್ರಹ್ಮಾಂಡ ಮತ್ತು ಬ್ರಹ್ಮಾ, ವಿಷ್ಣು, ಶಿವ ಶಕ್ತಿಯ ಲೋಕ ಹಾಗೂ ಪರಬ್ರಹ್ಮನ ಜೊತೆಯಲ್ಲಿ ಏಳು ಸಂಖ್ ಬ್ರಹ್ಮಾಂಡ ಮತ್ತು ಬೇರೆ ಎಲ್ಲಾ ಬ್ರಹ್ಮಾಂಡಗಳು ಬರುತ್ತವೆ ಮತ್ತು ಯಾರು ಸರ್ವಸಂಪನ್ನನಾದ ಗುರುವಿನಿಂದ ಉಪದೇಶ ಪಡೆದು ಸತ್ಯನಾಮ-ಸಾರನಾಮಗಳನ್ನು ಜಪಿಸುತ್ತಾ ಹೋಗುವನೋ ಆ ಜೀವವು ಅಲ್ಲಿಗೆ ಹೋಗುವುದು. ಸಚ್ಚಖಂಡ (ಸತ್ಯಲೋಕ)ದಲ್ಲಿ

ಯಾವ ಆತ್ಮವು ಹೋಗುವುದೋ ಆ ಆತ್ಮಕ್ಕೆ ಪುನರ್ಜನ್ಮವಿರುವುದಿಲ್ಲ. ಸತ್ಯಪುರುಷ (ಪೂರ್ಣ ಬ್ರಹ್ಮ) ಕಬೀರ ಪರಮೇಶ್ವರ (ಕವಿರ್ದೇವ) ನೇ ಬೇರೆ ಲೋಕಗಳಲ್ಲಿ ಸ್ವಯಂ ಭಿನ್ನ-ಭಿನ್ನ ಹೆಸರುಗಳಲ್ಲಿ ವಿರಾಜಮಾನನಾಗಿದ್ದಾನೆ. ಹೇಗೆಂದರೆ ಅಲಖ್ ಲೋಕದಲ್ಲಿ ಅಲಖ್ ಪುರುಷ, ಆಗಮ ಲೋಕದಲ್ಲಿ ಅಗಮ ಪುರುಷ ಮತ್ತು ಅಕಹ್ ಲೋಕದಲ್ಲಿ ಅನಾಮೀ ಪುರುಷ ರೂಪದಲ್ಲಿ ಸಿಂಹಾಸವನ್ನು ಅಲಂಕರಿಸಿದ್ದಾನೆ. ಈ ಎಲ್ಲಾ ಹೆಸರುಗಳು ಉಪಮೆಯ ಹೆಸರುಗಳಾಗಿವೆ. ಆದರೆ ಆ ಪೂರ್ಣ ಪುರುಷನ ವಾಸ್ತವಿಕ ಹೆಸರು ಕವಿರ್ದೇವವಾಗಿದೆ. (ಭಾಷೆಯು ಬೇರೆಯಾಗಿರುವುದರಿಂದ ಆ ಹೆಸರು ಕಬೀರ ಸಾಹೇಬನೇ ಆಗಿದೆ)

## "ಗೌರವಾನ್ವಿತ ಗುರುನಾನಕ್ ರವರ ಮಾತಿನಲ್ಲಿ ಸೃಷ್ಟಿರಚನೆಯ ಸಂಕೇತ"

**ಶ್ರೀ ಗುರುನಾನಕ ರವರ ಅಮೃತವಾಣಿ, ಮಹಲಾ 1. ರಾಗ ಬಿಲಾವಲು, ಅಂಶ 1. (ಗುರುಗ್ರಂಥ ಸಾಹೇಬ ಪುಟ. 839)**

ಆಪೆ ಸಚು ಕೀಆ ಕರ ಜೋಡಿ । ಅಂಡಜ ಫೋಡಿ ಜೋಡಿ ವಿಛೋಡ್ ॥
ಧರತೀ ಆಕಾಶ್ ಕೀಎ ಬೈಸಣ್ ಕಉ ಥಾಉ । ರಾತಿ ದಿನಂತು ಕೀಎ ಭಉ-ಭಾಉ ॥
ಜಿನ್ ಕೀಎ ಕರಿ ವೇಖಣ್‌ಹಾರಾ ॥ 3 ॥

ತ್ರಿತೀಆ ಬ್ರಹ್ಮಾ-ಬಿಸನು-ಮಹೇಸಾ । ದೇವೀ ದೇವ್ ಉಪಾಏ ವೇಸಾ ॥ 4 ॥

ಪಉಣ ಪಾಣೀ ಅಗನೀ ಬಿಸರಾವು । ತಾಹೀ ನಿರಂಜನ್ ಸಾಚೋ ನಾವು ॥
ತಿಸು ಮಹಿ ಮನುಆ ರಹಿಆ ಲಿವ ಲಾಯೀ ।
ಪ್ರಣವತಿ ನಾನಕು ಕಾಲು ನ ಖಾಈ ॥ 10 ॥

ಈ ಮೇಲೆ ತಿಳಿಸಿರುವ ಅಮೃತವಾಣಿಯ ಭಾವಾರ್ಥ ಹೀಗಿದೆ. ನಿಜವಾದ ಪರಮಾತ್ಮಾ (ಸತ್ಯಪುರುಷ)ರು ಸ್ವಯಂ ತನ್ನ ಕೈಯಿಂದ ಎಲ್ಲಾ ಸೃಷ್ಟಿಯ ರಚನೆಯನ್ನು ಮಾಡಿದರು. ಅವರೇ ಅಂಡ (ಮೊಟ್ಟೆ)ವನ್ನು ರಚಿಸಿದರು ನಂತರ ಒಡೆದರು. ಆ ಮೊಟ್ಟೆಯಿಂದ ಜ್ಯೋತಿ ನಿರಂಜನನು ಹೊರ ಬಂದನು. ಸರ್ವ ಪ್ರಾಣಿಗಳು ವಾಸಿಸಲು ಭೂಮಿ, ಆಕಾಶ, ವಾಯು, ಜಲ ಮುಂತಾದ 5 ತತ್ವಗಳನ್ನು ಈ ಪೂರ್ಣ ಪರಮಾತ್ಮರು ಉತ್ಪಾದಿಸಿದರು. ತನ್ನ ಮೂಲಕ ಅಸ್ತಿತ್ವಕ್ಕೆ ಬಂದ ಸೃಷ್ಟಿಗೆ ತಾವೇ ಸಾಕ್ಷಿಯಾಗಿದ್ದಾರೆ. ಬೇರೆ ಯಾರೇ ಆಗಲಿ, ಈ ರಚನೆಯ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲ. ನಂತರ ಒಡೆದ ಮೊಟ್ಟೆಯಿಂದ ನಿರಂಜನನ, ನಂತರ ಬ್ರಹ್ಮಾ, ವಿಷ್ಣು ಮತ್ತು ಶಿವರ ಜನ್ಮವಾಯಿತು. ಆಮೇಲೆ ಅನ್ಯ ದೇವ-ದೇವತೆಯ ಸೃಷ್ಟಿಯಾಯಿತು ಮತ್ತು ಅಸಂಖ್ಯ ಜೀವಿಗಳ ಉತ್ಪತ್ತಿಯಾಯಿತು. ಅದರ ನಂತರ ಬೇರೆ ದೇವತೆಗಳ ಜೀವನ ಚರಿತ್ರೆ ಮತ್ತು ಋಷಿಗಳ ಅನುಭವದ 6 ಶಾಸ್ತ್ರಗಳು ಮತ್ತು 18 ಪುರಾಣಗಳು ರಚನೆಯಾದವು. ಪೂರ್ಣ ಪರಮಾತ್ಮನ ನಿಜನಾಮ (ಸತ್ಯನಾಮ)ದ ಸಾಧನೆಯನ್ನು ಅನನ್ಯ ಭಕ್ತಿಯಿಂದ ಮಾಡುವುದರಿಂದ ಮತ್ತು ಗುರು ಮರ್ಯಾದೆಯಲ್ಲಿ ಇರುವವರನ್ನು (ಪ್ರಣವತಿ-ಜೀವನಪೂರ್ತಿ) ಕಾಲ ತಿನ್ನುವುದಿಲ್ಲವೆಂದು ನಾನಕರು ಹೇಳುತ್ತಿದ್ದರು.

**ರಾಗ ಮಾರು (ಅಂಶ) ಅಮೃತವಾಣೀ ಮಹಲಾ 1 (ಗುರುಗ್ರಂಥ ಪುಟ ಸಂ. 1037)**

ಸುನಹು ಬ್ರಹ್ಮಾ, ಬಿಸನು, ಮಹೆಸು, ಉಪಾಎ । ಸುನೆ ವರತೆ ಜುಗ್ ಸಬಾಎ ॥
ಇಸು ಪದ್ ಬಿಚಾರೆ ಸೊ ಜನು ಪುರಾ । ತಿಸ್ ಮಿಲಿಎ ಭರಮು ಚುಕಾಇದಾ ॥(3)

ಸಾಮವೇದು, ರುಗು ಜುಜರು ಅಥರಬಣು। ಬ್ರಹಮೆಂ ಮುಖ ಮಾಇಆ ಹೈ ತ್ರೈಗುಣ್ ॥
ತಾ ಕೀ ಕೀಮತ್ ಕಹಿ ನ ಸಕೈ । ಕೊ ತಿಉ ಬೋಲೆ ಜಿಉ ಬುಲಾಯೀದಾ ॥(9)

**ಮೇಲೆ ಹೇಳಿದ ಅಮೃತವಾಣಿಯ ಸಾರಾಂಶ ಹೀಗಿದೆ. "ಯಾವ ಸಂತನು ಪೂರ್ಣವಾಗಿ ಸೃಷ್ಟಿ ರಚನೆಯ ಬಗ್ಗೆ ತಿಳಿಸಿ ಹೇಳುವನೋ, ಅಂಡವು (ಮೊಟ್ಟೆ) ಎರಡು ಭಾಗವಾಗಿ ಯಾರು ಹೊರ ಬಂದರೋ, ಮತ್ತೆ ಯಾರು ಬ್ರಹ್ಮಲೋಕದಲ್ಲಿ ಚಟುವಟಿಕೆ ಇಲ್ಲದ ಸ್ಥಳ ಅಂದರೆ ಗುಪ್ತ ಸ್ಥಾನದಲ್ಲಿ ಬ್ರಹ್ಮಾ, ವಿಷ್ಣು ಹಾಗೂ ಶಿವನ ಉತ್ಪತ್ತಿ ಮಾಡಿದರೋ, ಅವರು ಯಾರು? ಮತ್ತು ನಿಜವಾದ ಪರಮಾತ್ಮ ಯಾರು, ಯಾರಿಂದ ಬ್ರಹ್ಮನ ಮುಖದಿಂದ ನಾಲ್ಕು ವೇದಗಳು (ಪವಿತ್ರ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ) ಉಚ್ಚರಿಸಲ್ಪಡುವಂತೆ ಆಯಿತೋ, ಆ ಪೂರ್ಣ ಪರಮಾತ್ಮಾ ಹೇಗೆ ಬಯಸಿದನೋ ಹಾಗೆಯೇ ಪ್ರತಿಯೊಂದು ಪ್ರಾಣಿಯನ್ನು ಹೆಸರಿಸಿ ಹೇಳುತ್ತಾನೆ. ಈ ಎಲ್ಲಾ (ಸರ್ವ) ಜ್ಞಾನವನ್ನು ಸಂಪೂರ್ಣವಾಗಿ ಹೇಳುವಂತಹ ಸಂತ ದೊರಕಿದಾಗ, ಅವನ ಬಳಿಗೆ ಹೋಗಿ ಮತ್ತು ಯಾವ ಸಂದೇಹಗಳು ನಿಮ್ಮನ್ನು ಕಾಡುತ್ತಿವೆಯೋ ಅವುಗಳನ್ನೆಲ್ಲಾ ಅವನು ನಿವಾರಿಸುತ್ತಾನೆ. ಅವನೇ ಪೂರ್ಣ ರೂಪದ ಸಂತನಾಗಿರುವನು ಮತ್ತು ತತ್ವದರ್ಶಿಯಾಗಿರುವನು.**

**ಶ್ರೀ ಗುರು ಗ್ರಂಥ ಸಾಹೇಬ ಪು.ಸಂ. 929 ಅಮೃತವಾಣಿ ಶ್ರೀ ಗುರುನಾನಕ್ ರವರ ರಾಗ ರಾಮಕಲೀ ಮಹಲಾ 1 ದಖಣೀ ಓ ಅಂಕಾರ.**

ಓಅಂಕಾರಿ ಬ್ರಹ್ಮಾ ಉತ್‌ಪತಿ । ಓಅಂಕಾರೂ ಕೀಆ ಜಿನಿ ಚಿತ್ ।
ಓಅಂಕಾರಿ ಸೈಲ್ ಜುಗ್ ಭಏ । ಓಅಂಕಾರಿ ಬೆದ್ ನಿರಮಏ ।
ಓಅಂಕಾರಿ ಸಬದಿ ಉಧರೆ । ಓಅಂಕಾರಿ ಗುರುಮುಖಿ ತರೆ।
ಓನಮ್ ಅಖರ ಸುಣಹೂ ಬೀಚಾರು । ಓನಮ್ ಅಖರು ತ್ರಿಭವಣ್ ಸಾರು ।

**ಮೇಲೆ ಕಾಣಿಸಿದ ಅಮೃತವಾಣಿಯಲ್ಲಿ ಶ್ರೀ ಗುರುನಾನಕ್ ರವರು ಹೀಗೆಂದು ಹೇಳುತ್ತಿದ್ದಾರೆ, ಓಂಕಾರ ಅರ್ಥಾತ್ ಜ್ಯೋತಿ ನಿರಂಜನ (ಕಾಲ)ನಿಂದ ಬಹ್ಮಾನ ಉತ್ಪತ್ತಿ (ಹುಟ್ಟು) ಆಯಿತು. ಹಲವಾರು ಯುಗಗಳ ಕಾಲ ಮೋಜಿನಲ್ಲಿ ಮುಳುಗಿದ್ದ ಓಂಕಾರ (ಬ್ರಹ್ಮ)ನು ವೇದಗಳನ್ನು ರಚಿಸಿದನು. ಅವುಗಳು ಬ್ರಹ್ಮಾನಿಗೆ ಪ್ರಾಪ್ತಿಯಾದವು. ಮೂರು ಲೋಕಗಳನ್ನು ಪಡೆಯುವ ಶಕ್ತಿಯು ಕೇವಲ ಒಂದು ಓಂ ಮಂತ್ರದಲ್ಲಿದೆ. ವಾಸ್ತವದಲ್ಲಿ ಈ ಒಂದು ಮಂತ್ರವನ್ನೇ ಜಪ ಮಾಡಬೇಕಾಗಿರುವುದು. ವ್ಯಕ್ತಿಯು ಈ ಓಂ ಶಬ್ದವನ್ನು ಪೂರ್ಣ ಸಂತನಿಂದ ಉಪದೇಶ ಪಡೆದು ಅರ್ಥಾತ್ ಗುರುವನ್ನು ಸ್ವೀಕರಿಸಿ ಆತನಿಂದ ದೀಕ್ಷೆ ಪಡೆದ ನಂತರವೇ ಜಪ ಮಾಡುವುದರಿಂದ ಉದ್ಧಾರವಾಗುವನು.**

**ವಿಶೇಷ :– ಶ್ರೀ ಗುರುನಾನಕ್ ರವರು ಮೂರು ಮಂತ್ರಗಳ (ಓಂ+ತತ್+ಸತ್) ರಹಸ್ಯವನ್ನು ಪ್ರತಿಯೊಂದು ಸ್ಥಳದಲ್ಲಿಯೂ ರಹಸ್ಯಾತ್ಮಕವಾಗಿ ವಿವರಣೆಯನ್ನು ನೀಡಿದ್ದಾರೆ. ಅವರನ್ನು ಕೇವಲ ಪೂರ್ಣ ಸಂತ (ತತ್ವದರ್ಶಿ ಸಂತ) ಎಂದೇ ತಿಳಿಯಬಹುದಾಗಿದೆ ಮತ್ತು ಮೂರು ಮಂತ್ರಗಳ ಜಪದ ಉಪದೇಶವನ್ನು ನೀಡುವ ಗುರುವೆಂದು ಅರಿಯಬೇಕಾಗಿದೆ.**

**ಪುಟ.ಸಂ. 1038**

ಉತ್ತಮ್ ಸತಿಗುರು ಪುರುಷ ನಿರಾಲೆ, ಸಬದಿ ರತೆ ಹರಿರಸ್ ಮತವಾಲೆ ।
ರಿಧಿ, ಬುಧಿ, ಸಿಧಿ, ಗಿಆನ ಗುರು ತೆ ಪಾಯಿಏ, ಪೂರೆ ಭಾಗ ಮಿಲಾಇದಾ ॥(15)

ಸತ್‌ಗುರು ತೆ ಪಾಏ ಬೀಚಾರಾ, ಸುನ್ ಸಮಾಧಿ ಸಚೆ ಘರ್‌ಬಾರಾ ।
ನಾನಕ್ ನಿರ್‌ಮಲ್ ನಾದು ಸಬದ್ ಧುನಿ, ಸಚು ರಾಮೈ ನಾಮಿ ಸಮಾಇದಾ ॥(17)

**ಮೇಲಿನ ಅಮೃತವಾಣಿಯ ಭಾವಾರ್ಥ ಹೀಗಿದೆ. ವಾಸ್ತವಿಕ ಜ್ಞಾನವನ್ನು ನೀಡುವಂತಹ**

ಸದ್ಗುರುವಂತೂ ವಿಶೇಷವಾದ ವ್ಯಕ್ತಿಯಂತೂ ಹೌದು, ಅವರು ಕೇವಲ ನಾಮಸ್ಮರಣೆ ಮಾಡುವರು, ಅನ್ಯ ಹಠಯೋಗ ಸಾಧನೆಯನ್ನು ಹೇಳುವುದಿಲ್ಲ. ಒಂದು ವೇಳೆ ನಿಮಗೆ ಹಣ, ಆಡಂಬರ, ಪದವಿ, ಬುದ್ಧಿ ಅಥವಾ ಭಕ್ತಿಯ ಪುಣ್ಯ ಕೂಡಾ ಬೇಕಾಗಿದೆಯೇ? ಹಾಗಿದ್ದಲ್ಲಿ ಭಕ್ತಿ ಮಾರ್ಗದ ಜ್ಞಾನವನ್ನು ಪೂರ್ಣ ಸಂತನು ಸಂಪೂರ್ಣವಾಗಿ ನೀಡುವನು. ಈ ರೀತಿಯ ಪೂರ್ಣ ಸಂತರು ಅತಿಪುಣ್ಯ ಮಾಡಿದವರಿಗೆ ಮಾತ್ರ ದೊರೆಯುವರು. ಮೇಲಿನ ಆಕಾಶದಲ್ಲಿ ತನ್ನ ವಾಸ್ತವಿಕ ನೆಲೆಯನ್ನು (ಸತ್ಯಲೋಕ, ಮನೆ) ಪರಮೇಶ್ವರನು ರಚಿಸಿರುವನು ಎಂದು ಪೂರ್ಣ ಸಂತನು ವಿವರಿಸುವನು.

ಅಲ್ಲಿ ಒಂದು ವಾಸ್ತವಿಕ ಸಾರನಾಮದ ಉಚ್ಚಾರವು (ಧ್ವನಿಯು) ಸದಾ ಕೇಳಿ ಬರುತ್ತಿರುತ್ತದೆ. ಆ ಆನಂದದಲ್ಲಿ ಅವಿನಾಶಿ ಪರಮೇಶ್ವರನ ಎಲ್ಲಾ ಶಬ್ದಗಳೂ ಲೀನವಾಗುತ್ತವೆ ಅರ್ಥಾತ್ ವಾಸ್ತವಿಕವಾದ ಸುಖದಾಯಿ ಸ್ಥಾನದಲ್ಲಿ ವಾಸ ಮಾಡಬಹುದು. ಬೇರೆ ಮಂತ್ರ ಅಥವಾ ಅಪೂರ್ಣವಾದ ಗುರುಗಳಿಂದ ಈ ಸುಖವು ದೊರೆಯುವುದಿಲ್ಲ.

**ಆಂಶಿಕ ಅಮೃತವಾಣಿ ಮಹಲಾ ಪಹಲಾ (ಶ್ರೀ ಗುರುಗ್ರಂಥ ಪುಟ ಸಂ. 359–360)**

ಸಿವ್ ನಗರೀ ಮಹಿ ಆಸಣಿ ಬೈಸಉ ಕಲಪ್ ತ್ಯಾಗೀ ವಾದಂ । (1)
ಸಿಂಙೀ ಸಬದ ಸದಾ ಧುನಿ ಸೋಹೈ ಅಹಿನಿಸಿ ಪೂರೈ ನಾದಂ । (2)
ಹರಿ ಕೀರತಿ ರಹ್ ರಾಸಿ ಹಮಾರೀ ಗುರು ಮುಖ್‌ಪಂಥ ಅತೀತಂ । (3)
ಸಗಲೀ ಜೋತಿ ಹಮಾರೀ ಸಂಮಿಆ ನಾನಾ ವರಣ್ ಅನೇಕಂ ।
ಕಹ್ ನಾನಕ್ ಸುಣಿ ಭರಥರೀ ಜೋಗೀ ಪಾರಬ್ರಹ್ಮ ಲಿವ ಏಕಂ । (4)

ಇಲ್ಲಿರುವ ಅಮೃತವಾಣಿಯ ಭಾವಾರ್ಥವು ಇಂತಿದೆ. ಶ್ರೀ ಗುರುನಾನಕ್ ರವರು ಹೇಳಿರುವುದೇನೆಂದರೆ, "ಹೇ ಭರಥರೀ ಯೋಗಿ, (ಜ್ಞಾನದಿಂದ ತುಂಬಿದ) ನಿಮ್ಮ ಸಾಧನೆಯು ಭಗವಂತನಾದ ಶಿವನವರೆಗೆ ಮಾತ್ರವಿದೆ, ಅದರಿಂದ ನಿಮಗೆ ಶಿವನಗರದಲ್ಲಿ (ಲೋಕದಲ್ಲಿ) ಸ್ಥಾನ ದೊರಕಿದೆ ಮತ್ತು ಶರೀರದಲ್ಲಿ ಆಗುತ್ತಿರುವ(ಸಂಗೀತವಾದಕದ) ಶಬ್ದವು ಈ ಕಮಲಗಳದ್ದೇ ಆಗಿದೆ ಮತ್ತು ದೂರದರ್ಶನದ ರೀತಿ ಪ್ರತೀ ದೇವತೆಯ ಲೋಕದಿಂದ ಶರೀರದಲ್ಲಿ ನಿಮಗೆ ಕೇಳಿಸುತ್ತಿದೆ.

ನಾವಂತೂ ಒಬ್ಬ ಪರಮಾತ್ಮ ಪರಬ್ರಹ್ಮ ಅರ್ಥಾತ್ ಎಲ್ಲದರಿಂದ ಪಾರಾಗಿರುವ ಪೂರ್ಣ ಪರಮಾತ್ಮನಿದ್ದಾನೋ, ಬೇರೆ ಪರಮಾತ್ಮನಿಗಿಂತಲೂ ಶ್ರೇಷ್ಠನೋ ಅವನಲ್ಲಿ ಸಂಪೂರ್ಣ ತಲ್ಲೀನರಾಗಿ ಮನಸ್ಸನ್ನು ಕೇಂದ್ರೀಕರಿಸಿದ್ದೇವೆ.

ನಾವು ತೋರಿಕೆಯ (ಭಸ್ಮವನ್ನು ಮೈಗೆಲ್ಲಾ ಬಳಿದುಕೊಳ್ಳುವುದು, ಕೈಯಲ್ಲಿ ದಂಡವನ್ನಿಟ್ಟುಕೊಳ್ಳುವುದು)ನ್ನು ಮಾಡುವುದಿಲ್ಲ. ನಾನಂತೂ ಸರ್ವ ಪ್ರಾಣಿಗಳನ್ನೆಲ್ಲಾ ಒಬ್ಬ ಪೂರ್ಣ ಪರಮಾತ್ಮನ (ಸತ್ಯಪುರುಷ) ಸಂತಾನವೆಂದು ಭಾವಿಸುತ್ತೇನೆ. ಎಲ್ಲವೂ ಆತನ ಶಕ್ತಿಯಿಂದಲೇ ನಡೆಯುವುದು. ನಮ್ಮ ಮುದ್ರೆಗಳು (ಭಂಗಿಗಳು) ನಿಜವಾದ ಗುರುವಿನಿಂದ ಪಡೆದ ಜಪಮಂತ್ರದಿಂದಲೇ ಮಾಡುವುದಾಗಿದೆ ಮತ್ತು ಕ್ಷಮೆ ನೀಡುವುದು ನಮ್ಮ ವೇಷಭೂಷಣವಾಗಿದೆ. ನಾನಂತೂ ಪೂರ್ಣ ಪರಮಾತ್ಮನ ಉಪಾಸಕನಾಗಿದ್ದೇನೆ. ಮತ್ತು ಪೂರ್ಣ ಸದ್ಗುರುವಿನ ಭಕ್ತಿಮಾರ್ಗವು ಇದೆಲ್ಲಕ್ಕಿಂತಲೂ ಭಿನ್ನವಾಗಿದೆ.

**(ಅಮೃತವಾಣೀ ರಾಗ ಆಸಾಮಹಲಾ1 (ಶ್ರೀ ಗುರುಗ್ರಂಥ, ಪುಟ 420)**

॥ ಆಸಾ ಮಹಲಾ 1 ॥ "ಜಿನೀ ನಾಮು ವಿಸಾರಿಆ ದೂಜೈ ಭರಮಿ ಭುಲಾಯೀ ।

ಮೂಲು ಛೋಡಿ ಡಾಲೀ ಲಗೆ ಕಿಆ ಪಾವಹಿ ಛಾಯಿ ।
ಸಾಹಿಬು ಮೇರಾ ಏಕು ಹೈ ಅವರು ನಹೀಂ ಭಾಯೀ ।
ಕಿರಪಾ ತೆ ಸುಖು ಪಾಯಿಆ ಸಾಚೆ ಪರಧಾಯೀ ॥ 3 ॥

ಗುರು ಕೀ ಸೇವಾ ಸೊ ಕರೆ ಜಿಸು ಆಪಿ ಕರಾಏ । ನಾನಕ್
ಸಿರು ದೆ ಛೂಟೀಐ ದರಗಹ ಪತಿ ಪಾಏ ॥ 8 ॥ 18 ॥

**ಈ ಮೇಲಿನ ವಾಣಿಯ ಭಾವಾರ್ಥವೇನೆಂದರೆ ಗುರುನಾನಕ್ ರವರು ಹೇಳುತ್ತಿರುವರು, "ಯಾವ ಪೂರ್ಣ ಪರಮಾತ್ಮನ ವಾಸ್ತವಿಕವಾದ ಹೆಸರನ್ನು ಮರೆತು ಅನ್ಯ ಭಗವಂತನ ನಾಮವನ್ನು ಜಪಿಸುತ್ತಾ ಭ್ರಮೆಯಲ್ಲಿರುವರೋ, ಅವರುಗಳು ಈ ರೀತಿ ಮಾಡುತ್ತಿದ್ದಾರೆ. ಮೂಲವನ್ನು (ಪೂರ್ಣ ಪರಮಾತ್ಮ) ಬಿಟ್ಟು ಕೊಂಬೆಗಳನ್ನು (ಮೂರು ರೂಪದ ರಜೋಗುಣ–ಬ್ರಹ್ಮಾ, ಸತ್‌ಗುಣ–ವಿಷ್ಣು, ತಮೋಗುಣ–ಶಿವ) ಪೂಜೆ ಮಾಡುತ್ತಿರುವರು. ಆ ಸಾಧನೆಯಿಂದ ಯಾವ ಸುಖವೂ ದೊರೆಯುವುದಿಲ್ಲ ಅರ್ಥಾತ್ ಮರವೇ ಒಣಗಿ ಹೋದರೆ ನೆರಳಲ್ಲಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಇದರ ಅರ್ಥವೇನೆಂದರೆ ಶಾಸ್ತ್ರರಹಿತವಾದ ಸಾಧನೆಯನ್ನು ಮಾಡುವುದು ವ್ಯರ್ಥ ಪ್ರಯತ್ನವಾಗಿದೆ.**

**ಯಾವುದೇ ಲಾಭವಿಲ್ಲ. ಇದರ ಪ್ರಮಾಣವು ಪವಿತ್ರ ಗೀತೆಯ ಅಧ್ಯಾಯ 16 ಶ್ಲೋಕ 23–24ರಲ್ಲಿ ಕೂಡಾ ಇದೆ. ಆ ಪೂರ್ಣ ಪರಮಾತ್ಮನನ್ನು ಪಡೆಯಲು ಮನಸ್ಸಿಗೆ ಬಂದ ಸಾಧನೆಯನ್ನು ತ್ಯಾಗ ಮಾಡಿ ಪೂರ್ಣ ಗುರುದೇವನಿಗೆ ತಮ್ಮನ್ನು ತಾವು ಸಮರ್ಪಿಸಿಕೊಂಡಲ್ಲಿ ಮತ್ತು ಸತ್ಯಭಗವಂತನ ನಾಮವನ್ನು ಜಪ ಮಾಡುವುದರಿಂದ ಮೋಕ್ಷ ಲಭಿಸುವ ಸಂಭವವಿದೆ. ಇಲ್ಲದಿದ್ದಲ್ಲಿ ಮೃತ್ಯುವಿನ ನಂತರ ಆ ವ್ಯಕ್ತಿ ನರಕಕ್ಕೆ ಹೋಗುವನು.**

**(ಶ್ರೀ ಗುರು ಗ್ರಂಥ್ ಸಾಹೇಬ್ ಪುಟ ಸಂಖ್ಯೆ 843–844)**

॥ ಬಿಲಾವಲು ಮಹಲಾ 1 ॥
ಮೈಂ ಮನ್ ಚಾಹು ಘಣಾ ಸಾಚಿ ವಿಗಾಸೀ ರಾಮ್ ।
ಮೋಹೀ ಪ್ರೇಮ್ ಪಿರೆ ಪ್ರಭು ಅಬಿನಾಸೀ ರಾಮ್ ॥
ಅವಿಗತೋ ಹರಿ ನಾಥು ನಾಥಹ್, ತಿಸೈ ಭಾವೈ ಸೊ ಥೀಐ ।
ಕಿರಪಾಲು ಸದಾ ದಇಆಲು ದಾತಾ ಜೀಆ ಅಂದರಿ ತೂಂ ಜೀಏ ।
ಮೈ ಆಧಾರು ತೇರಾ ತೂ ಖಸಮು ಮೇರಾ ಮೈ ತಾಣು ತಕೀಆ ತೇರಓ ।
ಸಾಚಿ ಸೂಚಾ ಸದಾ ನಾನಕ್ ಗುರಸಬದಿ ಝುಗರು ನಿಬೆರಓ ॥ 4 ॥ 2 ॥

**ಈ ಮೇಲಿನ ಅಮೃತವಾಣಿಯಲ್ಲಿ ಶ್ರೀ ಗುರುನಾನಕ್ ರವರು ಹೇಳಿರುವಿದೇನೆಂದರೆ, ಅವಿನಾಶೀ ಪೂರ್ಣ ಪರಮಾತ್ಮನು ಭಗವಂತರಿಗೆ ಭಗವಂತನು ಅರ್ಥಾತ್ ದೇವತೆಗಳಿಗೆ ದೇವನಾಗಿದ್ದಾನೆ. (ಎಲ್ಲಾ ಭಗವಂತರಾದ ಶ್ರೀ ಬ್ರಹ್ಮಾ, ಶ್ರೀ ವಿಷ್ಣು, ಶ್ರೀ ಶಿವ ಮತ್ತು ಬ್ರಹ್ಮ ಮತ್ತು ಪರಬ್ರಹ್ಮರಿಗೂ ಸ್ವಾಮಿಯಾಗಿದ್ದಾನೆ) ನಾನಂತೂ ಸತ್ಯ ಭಗವಂತನ ನಾಮವನ್ನು ಹೃದಯದಲ್ಲಿ ತುಂಬಿಕೊಂಡಿದ್ದೇನೆ. ಹೇ ಪರಮಾತ್ಮಾ, ಎಲ್ಲಾ ಪ್ರಾಣಿಗಳ ಜೀವನದ ಆಧಾರ ನೀವೇ ಆಗಿದ್ದೀರಿ. ನಾನು ನಿಮ್ಮ ಆಶ್ರಯದಲ್ಲಿರುವೆನು. ನೀವು ನನ್ನ ಒಡೆಯರಾಗಿದ್ದೀರಿ. ತಾವೇ ಗುರುವಿನ ರೂಪದಲ್ಲಿ ಬಂದು ಸತ್ಯಭಕ್ತಿಯ ನಿರ್ಧಾರಿತ ಜ್ಞಾನವನ್ನು ನೀಡಿ ಎಲ್ಲಾ ಗೊಂದಲವನ್ನು ನಿವಾರಿಸಿರುವಿರಿ ಅರ್ಥಾತ್ ಎಲ್ಲಾ ಸಂಶಯಗಳಿಗೆ ಉತ್ತರವನ್ನು ದೊರಕಿಸಿರುವಿರಿ.**

**(ಶ್ರೀ ಗುರು ಗ್ರಂಥ ಸಾಹೇಬ ಪುಟ ಸಂ. 721 ರಾಗ್ ತಿಲಂಗ್ ಮಹಲಾ 1)**

ಯಕ್ ಅರ್ಜ್ ಗುಫತಮ್ ಪೇಶ್ ತೋ ದರ್ ಕೂನ್ ಕರತಾರ್ ।
ಹಕ್ಕಾ ಕಬೀರ್ ಕರೀಮ್ ತೂ ಬೇಅಬ್ ಪರವರ್ದಿಗಾರ್ ।
ನಾನಕ್ ಬುಗೋಯದ್ ಜನ್ ತುರಾ ತೇರೆ ಚಾಕರಾಂ ಪಾಖಾಕ್ ।

**ಈ ಅಮೃತವಾಣಿಯಲ್ಲಿ ಹೀಗೆ ಸ್ಪಷ್ಟನೆ ನೀಡಿದ್ದಾರೆ. ಹೇ (ಹಕ್ಕಾ ಕಬೀರ್), ತಾವು ಸತ್ಯ ಕಬೀರರು. (ಕೂನ್ ಕರ್ತಾರ) ಶಬ್ದ ಶಕ್ತಿಯಿಂದಲೇ ಸೃಷ್ಟಿಯ ರಚನೆ ಮಾಡುವವರು, ಶಬ್ದ ಸ್ವರೂಪಿ ಪ್ರಭು ಅರ್ಥಾತ್ ಸರ್ವ ಸೃಷ್ಟಿಯ ರಚನೆ ಮಾಡುವವರು. ತಾವೇ ತಪ್ಪಿಲ್ಲದ (ಮುತ್ತಿನಂತೆ) ನಿರ್ವಿಕಾರರು (ಪರ್ವರ್ದಿಗಾರ). ಎಲ್ಲರ ಪಾಲನೆ ಮಾಡುವ ದಯಾಳು ಪ್ರಭು ನೀವು. ನಾನು ನಿಮ್ಮ ದಾಸರ ದಾಸನಾಗಿದ್ದೇನೆ.**

**(ಶ್ರೀ ಗುರುಗ್ರಂಥ ಸಾಹೇಬ ಪುಟ ಸಂ. 24 ರಾಗ ಸೀರೀ ಮಹಲಾ1)**

ತೇರಾ ಏಕ್ ನಾಮ್ ತಾರೆ ಸಂಸಾರ್, ಮೈ ಐಹಾ ಆಸ್ ಐಹೋ ಆಧಾರ್ ।
ನಾನಕ್ ನೀಚ್ ಕಹೈ ಬಿಚಾರ್, ಧಾಣಕ್ ರೂಪ್ ರಹಾ ಕರ್‌ತಾರ್ ॥

**ಮೇಲಿನ ಅಮೃತವಾಣಿಯಲ್ಲಿ ದೊರೆಯುವ ಪ್ರಮಾಣವು ಏನೆಂದರೆ ಯಾರು ಕಾಶಿಯಲ್ಲಿ ನೇಕಾರರಾಗಿ (ಜುಲಾಹ, ಬಟ್ಟೆ ನೇಯುವವರು) ಇದ್ದರೋ, ಅವರೇ (ಕರ್ತೃ) ಕುಲದ ರಚನೆಕಾರನಾಗಿದ್ದಾರೆ. ಶ್ರೀ ಗುರುನಾನಕ್ ರವರು ಏನು ಹೇಳುತ್ತಿದ್ದಾರೆಂದರೆ ನಾನು ಸತ್ಯವನ್ನು ಹೇಳುತ್ತಿದ್ದೇನೆ. ಈ ನೇಕಾರ ಅರ್ಥಾತ್ ಕಬೀರ ನೇಕಾರನೇ ಪೂರ್ಣ ಬ್ರಹ್ಮನಾಗಿದ್ದಾನೆ. (ಸತ್ಯಪುರುಷ)**

**ವಿಶೇಷ:– ಈ ಮೇಲೆ ದೊರೆತ ಪ್ರಮಾಣಗಳಿಂದ ಸಾಂಕೇತಿಕ ಜ್ಞಾನದಿಂದ ಸ್ಪಷ್ಟವಾಗಿರುವುದೇನೆಂದರೆ ಸೃಷ್ಟಿ ಹೇಗಾಯಿತು? ಪೂರ್ಣ ಪರಮಾತ್ಮನನ್ನು ಪಡೆಯಬೇಕೆ? ಹಾಗಿದ್ದಲ್ಲಿ ಪೂರ್ಣ ಸಂತ (ಗುರು)ನಿಂದ ಪರಮಾತ್ಮ ನಾಮದ ದೀಕ್ಷೆಯನ್ನು ಪಡೆಯಿರಿ. ಹಾಗಾದಲ್ಲಿ ಪೂರ್ಣ ಪರಮಾತ್ಮನನ್ನು ಪಡೆಯಬಹುದಾಗಿದೆ.**

## "ಅನ್ಯ ಸಂತರಿಂದ ಸೃಷ್ಟಿ ರಚನೆಯ ದಂತ ಕಥೆ"

**ಬೇರೆ ಋಷಿಗಳಿಂದ ಅಥವಾ ಸಂತರಿಂದ ಯಾವ ಸೃಷ್ಟಿ ರಚನೆಯ ಜ್ಞಾನವನ್ನು ಹೇಳಲಾಗಿದೆ? ಅದು ಹೇಗಿದೆ?**

**ದಯವಿಟ್ಟು ಕೆಳಗಿನ ವಿವರಣೆಯನ್ನು ಓದಿರಿ। ಸೃಷ್ಟಿ ರಚನೆಯ ವಿಷಯದಲ್ಲಿ ರಾಧಾಸ್ವಾಮೀ ಪಂಥದ ಸಂತರ ಹಾಗೂ ಧನ್–ಧನ್ ಸದ್ಗುರು ಪಂಥದ ಸಂತರ ವಿಚಾರ :–**

*** ಪವಿತ್ರ ಪುಸ್ತಕ ಜೀವನ ಚರಿತ್ರೆ "ಪರಮ ಸಂತ ಬಾಬಾ ಜಯಮಲ್ ಸಿಂಹ್ ಮಹಾರಾಜ್"**

**ಪುಟ ಸಂ. 102–103 ರಿಂದ "ಸೃಷ್ಟಿಯ ರಚನೆ" (ಸಾವನ್ ಕೃಪಾಲ್ ಪಬ್ಲಿಕೇಷನ್, ದಿಲ್ಲಿ)**

"ಮೊದಲು ಸತ್ಯಪುರುಷ ನಿರಾಕಾರನಾಗಿದ್ದನು. ಮತ್ತೆ ಆಕಾರವನ್ನು ಪಡೆದು, ಮೇಲಿನ ಮೂರು ನಿರ್ಮಲ ಮಂಡಲ (ಸತ್ಯಲೋಕ, ಅಲಖ್‌ಲೋಕ, ಅಗಮ ಲೋಕ)ಗಳನ್ನು ಸೃಷ್ಟಿಸಿದನು ಮತ್ತು ಪ್ರಕಾಶ ಮತ್ತು ಮಂಡಲಗಳ ನಾದವಾದನು."

*** ಪವಿತ್ರ ಪುಸ್ತಕ ಸಾರವಚನ (ನಸರ್) ಪ್ರಕಾಶಕ :– ರಾಧಾಸ್ವಾಮೀ ಸತ್ಸಂಗ್ ಸಭಾ,**

**ದಯಾಲ್ ಬಾಗ್ ಆಗ್ರಾ, ''ಸೃಷ್ಟಿಯ ರಚನೆ'' ಪುಟ ಸಂ.8 :–**

ಪ್ರಥಮವಾಗಿ ಶಬ್ದವಿತ್ತು. ಅದರಲ್ಲಿ ಪುರುಷ ಸಮಾಧಿಸ್ಥಿತಿಯಲ್ಲಿದ್ದನು. ಆಗ ಯಾವುದೇ ರಚನೆ ಆಗಿರಲಿಲ್ಲ. ನಂತರ ಸ್ವಲ್ಪ ಸುಖವೇರ್ಪಟ್ಟಿತು. ಆಗ ಶಬ್ದ ಪ್ರಕಟವಾಯಿತು. ಅದರಿಂದ ಎಲ್ಲಾ ರಚನೆ ಆಯಿತು. ಮೊದಲು ಸತ್ಯಲೋಕ, ನಂತರ ಸತ್ಯಪುರುಷನ ಕಲೆಯಿಂದ ಮೂರು ಲೋಕಗಳು. ನಂತರ ಎಲ್ಲಾ ವಿಸ್ತಾರವುಂಟಾಯಿತು.

**ಈ ಮೇಲಿನ ಮಾಹಿತಿಯು ಈ ಕೆಳಗಿನ ಉದಾಹರಣೆಯಂತಿದೆ. ಒಂದು ಸಲ ಒಬ್ಬ ಹುಡುಗ ಕೆಲಸ ಪಡೆಯಲು ಸಂದರ್ಶನದಲ್ಲಿ ಪಾಲ್ಗೊಂಡನು. ಅಧಿಕಾರಿಯು ಮಹಾಭಾರತ ಓದಿರುವೆಯಾ? ಎಂಬ ಪ್ರಶ್ನೆಗೆ ಉತ್ತರವಾಗಿ ನಾನು ಬಾಯಿಪಾಠ ಮಾಡಿರುವೆನು. ನನ್ನ ಬೆರಳ ತುದಿಯಲ್ಲೇ ಎಲ್ಲಾ ವಿಚಾರಗಳಿವೆ ಎಂದನು. ಅಧಿಕಾರಿಯು ಹಾಗಿದ್ದಲ್ಲಿ ಪಾಂಡವರ ಹೆಸರನ್ನು ಹೇಳಬೇಕೆಂದು ಕೇಳಿದಾಗ ಆ ಹುಡುಗನು, ಒಬ್ಬ ಭೀಮನಿದ್ದನು, ಅವನಿಗೊಬ್ಬ ಅಣ್ಣ, ಅವನ ತಮ್ಮ ಮತ್ತೊಬ್ಬನಿದ್ದನು ಹಾಗೂ ಇನ್ನೊಬ್ಬನ ಹೆಸರನ್ನು ನಾನು ಮರೆತಿರುವೆನು ಎಂದನು. ಮೇಲೆ ತಿಳಿಸಿರುವ ಸೃಷ್ಟಿ ರಚನೆಯ ಜ್ಞಾನವೂ ಇದೇ ರೀತಿ ಇದೆ.**

**ಸತ್ಯಪುರುಷ ಹಾಗೂ ಸತ್ಯಲೋಕದ ಮಹಿಮೆಯನ್ನು ಹೇಳುವ ಮತ್ತು ಐದು ಹೆಸರು (ಓಂಕಾರ–ಜ್ಯೋತಿ ನಿರಂಜನ–ರರಂಕಾರ–ಸೋಹಂ–ಸತ್ಯನಾಮ) ನೀಡುವವನು, ಮತ್ತು ಮೂರು ಹೆಸರನ್ನು (ಅಕಾಲ ಮೂರ್ತಿ–ಸತ್ಪುರುಷ– ಶಬ್ದಸ್ವರೂಪಿ ರಾಮ) ಕೊಡುವ ಸಂತರ ಮೂಲಕ ರಚಿತವಾದ ಪುಸ್ತಕಗಳಿಂದ ಕೆಲವು ಉಪಸಂಹಾರಗಳು:–**

**ಸಂತಮತ ಪ್ರಕಾಶ ಭಾಗ 3 ಪು.ಸಂ. 76ರಲ್ಲಿ ಹೀಗೆ ಬರೆಯಲಾಗಿದೆ. ''ಸತ್ಯಖಂಡ ಅಥವಾ ಸತ್ಯನಾಮ 4ನೇ ಲೋಕವಾಗಿದೆ. ಇಲ್ಲಿ 'ಸತ್ಯನಾಮ' ವನ್ನು ಒಂದು ಸ್ಥಳವೆಂದು ಹೇಳಲಾಗಿದೆ. ಮತ್ತೆ ಈ ಪವಿತ್ರ ಪುಸ್ತಕದ ಪು.ಸಂ. 79ರಲ್ಲಿ ಉಲ್ಲೇಖವಾಗಿದೆ. ಏನೆಂದರೆ ''ಒಬ್ಬ ರಾಮ ದಶರಥನ ಮಗ, ಎರಡನೆಯ ರಾಮ 'ಮನಸ್ಸು', ಮೂರನೆಯ ರಾಮ 'ಬ್ರಹ್ಮ', ನಾಲ್ಕನೆಯವ ರಾಮ 'ಸತ್ಯನಾಮ', ಇವನೇ ನಿಜವಾದ ರಾಮನು. ಮತ್ತೆ ಪವಿತ್ರ ಪುಸ್ತಕ ಸಂತಮತ ಪ್ರಕಾಶ ಮೊದಲನೇ ಭಾಗ ಪುಟ ಸಂ. 17ರಲ್ಲಿ ಹೇಳಲಾಗಿದೆ. ಏನೆಂದರೆ, ''ಅದು ಸತ್ಯಲೋಕವಾಗಿದೆ, ಅದನ್ನೇ ಸತ್ಯನಾಮವೆಂದೂ ಹೇಳಲಾಗುತ್ತಿದೆ.'' ಪವಿತ್ರ ಪುಸ್ತಕ ''ಸಾರ ವಚನ ನಸರ್" ಅಂದರೆ ವಾರ್ತಿಕ ಪುಟ ಸಂ.3ರಲ್ಲಿ ಹೀಗೆ ಬರೆಯಲಾಗಿದೆ. ''ಈಗ ತಿಳಿದುಕೊಳ್ಳ ಬೇಕಾಗಿರುವುದೇನೆಂದರೆ, ರಾಧಾಸ್ವಾಮಿ ಪದವಿಯು ಎಲ್ಲದಕ್ಕಿಂತಲೂ ಶ್ರೇಷ್ಠ ನೆಲೆಯಾಗಿದೆ. ಏಕೆಂದರೆ ಸಂತರು ಸತ್ಯಲೋಕ ಮತ್ತು ಸತ್ಯಖಂಡ ಸಾರಶಬ್ದ ಮತ್ತು ಸತ್ಯಶಬ್ದ, ಸತ್ಯನಾಮ ಮತ್ತು ಸತ್ಯಪುರುಷ ಎಂದು ಅವುಗಳನ್ನು ವ್ಯಾಖ್ಯಾನ ಮಾಡಿದ್ದಾರೆ.'' ಪವಿತ್ರ ಪುಸ್ತಕ ಸಾರವಚನ (ನಸರ್) ಆಗ್ರಾದಿಂದ ಪ್ರಕಾಶಿತವಾದ, ಪುಟ ಸಂ. 4ರಲ್ಲಿ ಕೂಡಾ ಈ ಮೊದಲು ಮಾಡಿದ ವರ್ಣನೆಯನ್ನೇ ಮಾಡಲಾಗಿದೆ. ಪವಿತ್ರ ಪುಸ್ತಕ ''ಸಚ್ಚಖಂಡ ಕೀ ಸಡಕ್'' ಪುಟ ಸಂ. 226. ''ಸಂತರ ದೇಶ ಸಚ್ಚಖಂಡ ಅಥವಾ ಸತ್ಯಲೋಕವಾಗಿದೆ. ಆ ಲೋಕಕ್ಕೆ ಸತ್ಯಶಬದ್– ಸಾರಶಬ್ದವೆಂದೂ ಕರೆಯಲಾಗುತ್ತದೆ.''**

**ವಿಶೇಷ :– ಈ ಮೇಲಿನ ವ್ಯಾಖ್ಯಾನದಿಂದ ಈ ರೀತಿ ಅನ್ನಿಸುತ್ತದೆ. ಹೇಗೆ ಯಾರೋ ಒಬ್ಬ ವ್ಯಕ್ತಿ ಜೀವನದಲ್ಲಿ ಪಟ್ಟಣವನ್ನೂ, ಕಾರನ್ನೂ, ಪೆಟ್ರೋಲ್, ಡ್ರೈವರನ್ನೂ ನೋಡೇ ಇಲ್ಲದೆ, ಅವನು ತನ್ನ ಸಂಗಡಿಗರಿಗೆ ಡ್ರೈವರ್ ಯಾರು, ಎಂಬುದನ್ನು ವಿವರಿಸುತ್ತಾ, ಹೀಗೆ ಹೇಳುತ್ತಾನೆ. "ನಾನು ಪಟ್ಟಣಕ್ಕೆ ಹೋಗಿ ಕಾರಿನಲ್ಲಿ ಕುಳಿತು ಆನಂದವನ್ನು ಪಡೆಯುತ್ತೇನೆ". ಸಂಗಡಿಗರು ಮತ್ತೆ ಆತನನ್ನು ಪ್ರಶ್ನಿಸುತ್ತಾರೆ, ''ಕಾರು ಹೇಗಿದೆ? ಪೆಟ್ರೋಲ್ ಹೇಗಿದೆ? ಡ್ರೈವರ್ ಹಾಗೂ**

ಪಟ್ಟಣ ಹೇಗಿದೆ?'' ಉತ್ತರವಾಗಿ ಆ ಗುರುವು ಹೀಗೆ ಉತ್ತರ ನೀಡುತ್ತಾನೆ. ಪಟ್ಟಣ ಎಂದಾದರೂ ಹೇಳು, ಕಾರು ಎಂದಾದರೂ ಹೇಳು ಎರಡೂ ಒಂದೇ ಆಗಿದೆ. ಪಟ್ಟಣ, ಕಾರು ಎರಡೂ ಒಂದೇ, ಪೆಟ್ರೋಲ್ ಎಂದು ಕಾರಿಗೆ ಹೇಳುತ್ತಾರೆ. ಡ್ರೈವರ್ ಕೂಡಾ ಕಾರೇ ಆಗಿದೆ. ದಾರಿಯೂ ಕೂಡಾ ಕಾರೇ ಆಗಿದೆ".

ಬನ್ನಿ ಚಿಂತಿಸೋಣ – ಸತ್ಯಪುರುಷನಂತೂ ಪೂರ್ಣ ಪರಮಾತ್ಮನೇ ಆಗಿದ್ದಾನೆ. ಸತ್ಯನಾಮ ಎರಡು ಮಂತ್ರದ ಹೆಸರಾಗಿದೆ. ಅದರಲ್ಲಿ ಒಂದು ಓಂ+ತತ್, ತತ್ ಸಾಂಕೇತಿಕವಾಗಿದೆ ಮತ್ತು ಇದರ ನಂತರ ಸಾರನಾಮವನ್ನು ಸಾಧನೆ ಮಾಡುವ ಸಾಧಕನಿಗೆ ಪೂರ್ಣ ಗುರುವಿನ ಮೂಲಕ ದೀಕ್ಷೆಯ ಜೊತೆಯಲ್ಲಿ ಈ ಮಂತ್ರವನ್ನು ನೀಡಲಾಗುವುದು. ಈ ಸತ್ಯನಾಮ ಮತ್ತು ಸಾರನಾಮ ಎರಡೂ ಸ್ಮರಣೆ ಮಾಡುವಂತಹ ನಾಮಗಳಾಗಿವೆ. ಸತ್ಯಪುರುಷ ನೆಲೆಯಾಗಿರುವ ಸ್ಥಾನವೇ ಸತ್ಯಲೋಕವಾಗಿದೆ. ಪುಣ್ಯ ಆತ್ಮಗಳು ಸ್ವತಃ ಒಂದು ತೀರ್ಮಾನಕ್ಕೆ ಬರಲಿ. ಸತ್ಯ ಅಥವಾ ಅಸತ್ಯ ಯಾವುದೆಂದು ನಿರ್ಧರಿಸಲಿ.

# "ಭಕ್ತಿಯ ಮರ್ಯಾದೆ"

## ದೀಕ್ಷೆ ಪಡೆಯುವ ವ್ಯಕ್ತಿಗಳಿಗೆ ಕೆಲವು ತಿಳುವಳಿಕೆಗಳು

**1) ಪೂರ್ಣ ಗುರುವಿನಿಂದ ದೀಕ್ಷೆ ಪಡೆಯಬೇಕು :–**

ಪೂರ್ಣ ಗುರುವನ್ನು ಗುರುತಿಸುವುದು:– ಇಂದಿನ ಕಲಿಯುಗದಲ್ಲಿ ಪೂರ್ಣ ಗುರುವನ್ನು ಗುರುತಿಸುವುದು ಭಕ್ತ ಸಮಾಜಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಆದರೆ ಇದಕ್ಕೆ ಒಂದು ಸರಳವಾದ ಉಪಾಯವಿದೆ. ಯಾವ ಗುರುವು ಶಾಸ್ತ್ರಕ್ಕೆ ಅನುಸಾರವಾಗಿ ಭಕ್ತಿಯಿಂದ ಇರುತ್ತಾನೋ ಮತ್ತು ತನ್ನ ಅನುಯಾಯಿಗಳ ಅಂದರೆ ಶಿಷ್ಯರ ಮೂಲಕ ಭಕ್ತಿಯನ್ನು ಮಾಡಿಸುತ್ತಾನೋ ಅವನೇ ಪರಿಪೂರ್ಣ ಸಂತ. ಭಕ್ತಿಮಾರ್ಗದ ಸಂವಿಧಾನ ಧಾರ್ಮಿಕ ಶಾಸ್ತ್ರ ಅಂದರೆ ಕಬೀರವಾಣಿ, ಗುರುನಾನಕ ರವರ ವಚನ, ಸಂತ ಗರೀಬ್‌ದಾಸ್ ಮಹಾರಾಜರ ವಚನ, ಸಂತ ಧರ್ಮದಾಸ್ ರವರ ವಚನ, ವೇದ, ಗೀತೆ, ಪುರಾಣ, ಕುರ್‌ಆನ್, ಪವಿತ್ರ ಬೈಬಲ್ ಮುಂತಾದವು. ಯಾವ ಗುರುವು ಶಾಸ್ತ್ರಗಳ ಅನುಸಾರವಾಗಿ ಭಕ್ತಿ ಸಾಧನೆಯನ್ನು ತಿಳಿಸುತ್ತಾನೋ ಮತ್ತು ಭಕ್ತಿ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಾನೋ ಅವನು ಪೂರ್ಣ ಗುರು. ಇಲ್ಲದಿದ್ದರೆ ಅವನು ಭಕ್ತಿ ಸಮಾಜದ ದೊಡ್ಡ ಶತ್ರು. ಈ ಅಮೂಲ್ಯವಾದ ಮಾನವ ಜನ್ಮದೊಂದಿಗೆ ಅವನು ಆಟವಾಡುತ್ತಿದ್ದಾನೆಂದು ಅರ್ಥ, ಅಂಥಾ ಗುರು ಅಥವಾ ಸಂತನನ್ನು ಭಗವಂತನ ಆಸ್ಥಾನದಲ್ಲಿ ಘೋರ ನರಕದಲ್ಲಿ ತಲೆಕೆಳಗಾಗಿ ತೂಗು ಹಾಕಲಾಗುತ್ತದೆ.

ಉದಾಹರಣೆಗಾಗಿ ಯಾರಾದರೂ ಅಧ್ಯಾಪಕರು ಪಠ್ಯಕ್ರಮದ ಹೊರಪಡಿಸಿ ಬೇರೆ ಶಿಕ್ಷಣ ನೀಡಿದರೆ ಅಂತಹವರು ವಿದ್ಯಾರ್ಥಿಗಳಿಗೆ ಒಬ್ಬ ಶತ್ರುವೇ ಸರಿ.

ಗೀತೆಯ 7ನೇ ಅಧ್ಯಾಯದ 15ನೇ ಶ್ಲೋಕ.

ನ, ಮಾಮ್, ದುಷ್ಕೃತಿನಃ, ಮೂಢಾಃ, ಪ್ರದ್ಯನ್ತೆ, ನರಾಧಮಾಃ,
ಮಾಯಯಾ, ಅಪಹೃತಜ್ಞಾನಾಃ, ಆಸುರಮ್, ಭಾವಮ್, ಆಶ್ರಿತಾಃ ॥

ಅನುವಾದ :– ಮಾಯೆಯ ಮೂಲಕ ಯಾರ ಜ್ಞಾನವನ್ನು ಸೋಲಿಸಲಾಗುವುದೋ ಅಂಥಾ ಅಸುರ ಸ್ವಭಾವವನ್ನು ಧರಿಸಿರುವ ಮನುಷ್ಯರಲ್ಲಿ ಕೆಟ್ಟ, ನೀಚ ಕರ್ಮವನ್ನು ಮಾಡುವ ಮೂರ್ಖರು ನನ್ನನ್ನು ಭಜಿಸುವುದಿಲ್ಲ. ಅಂದರೆ ಅವರು ಮೂರೂ ಗುಣಗಳ (ರಜಗುಣ–ಬ್ರಹ್ಮಾ, ಸತ್‌ಗುಣ–ವಿಷ್ಣು, ತಮಗುಣ–ಶಿವ) ಸಾಧನೆಯನ್ನೇ ಮಾಡುತ್ತಿರುತ್ತಾರೆ. ಯಜುರ್ವೇದದ 40ನೇ ಅಧ್ಯಾಯದ 10ನೇ ಶ್ಲೋಕದಲ್ಲಿ (ಸಂತ ರಾಮ್‌ಪಾಲ್ ದಾಸರಿಂದ ವ್ಯಾಖ್ಯಾನಿಸಿದ)

ಅನ್ಯದೇವಾಹುಃಸಂಭವಾದನ್ಯದಾಹುರಸಂಭವಾತ್,
ಇತಿ ಶುಶ್ರುಮ್ ಧೀರಾಣಾಂ ಯೇ ನಸ್ತದ್ವಿಚಚಕ್ಷಿರೆ ॥

ಅನುವಾದ :– ಪರಮಾತ್ಮನ ಬಗ್ಗೆ ಸಾಮಾನ್ಯವಾಗಿ ಹೇಳಬೇಕೆಂದರೆ ಅವನು ನಿರಾಕಾರ ಅರ್ಥಾತ್ ಎಂದಿಗೂ ಜನ್ಮವೆತ್ತದಿರುವವನು ಎಂದು ಹೇಳುತ್ತಾರೆ. ಬೇರೆ ಆಕಾರದಲ್ಲಿ ಅರ್ಥಾತ್ ಜನ್ಮ ಪಡೆದು ಅವತಾರ ರೂಪದಲ್ಲಿ ಬಂದವನು ಎನ್ನುತ್ತಾರೆ. ಯಾವ ಪರ್ಣಜ್ಞಾನಿ ಇದನ್ನು ಚೆನ್ನಾಗಿ ತಿಳಿಸುವರೋ ಅವರು ಸಮರೂಪ ಅರ್ಥಾತ್ ನಿಜರೂಪದಲ್ಲಿ ಭಿನ್ನ ಭಿನ್ನ ರೂಪದಿಂದ ಪ್ರತ್ಯಕ್ಷ ಜ್ಞಾನವನ್ನು ನೀಡುವರು.

ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕ.

ತತ್ ವಿದ್ಧಿ, ಪ್ರಣಿಪಾತೇನ್, ಪರಿಪ್ರಶ್ನೇನ್, ಸೇವಯಾ,

ಉಪದೇಕ್ಷ್ಯನ್ತಿ, ತೆ, ಜ್ಞಾನಮ್, ಜ್ಞಾನಿನಃ ತತ್ವದರ್ಶಿನಃ ॥

**ಅನುವಾದ :–** ಅದನ್ನು ತಿಳಿದು ಆ ಪೂರ್ಣ ಪರಮಾತ್ಮನ ಜ್ಞಾನ ಮತ್ತು ಪರಿಹಾರಗಳನ್ನು ತಿಳಿದ ಸಂತರಿಗೆ ದೀರ್ಘ ದಂಡ ನಮಸ್ಕಾರ ಮಾಡಿದರೆ, ಅವರ ಸೇವೆ ಮಾಡಿದರೆ ಮತ್ತು ಕಪಟವನ್ನು ಬಿಟ್ಟು, ಸರಳತೆಯಿಂದ ಪ್ರಶ್ನಿಸುವುದರಿಂದ ಪರಮಾತ್ಮನ ತತ್ವವನ್ನು ಚೆನ್ನಾಗಿ ಅರಿತಿರುವ ಜ್ಞಾನಿಯಾದ ಸಂತನು ನಿನಗೆ ತತ್ವಜ್ಞಾನದ ಉಪದೇಶವನ್ನು ನೀಡುವನು.

**2) ಮತ್ತಿನ ಪದಾರ್ಥಗಳ ಸೇವನೆಯ ನಿಷೇಧ :–** ಹುಕ್ಕಾ, ಮದ್ಯ, ಬೀಯರ್, ತಂಬಾಕು, ಬೀಡಿ, ಸಿಗರೇಟು, ನಶ್ಯ ಸೇವನೆ, ಗುಟ್ಕಾ, ಮಾಂಸ, ಮೊಟ್ಟೆ, ಅಫೀಮು, ಗಾಂಜಾ ಮತ್ತು ಇತರೆ ಮತ್ತಿನ ಪದಾರ್ಥಗಳನ್ನು ಸೇವಿಸುವುದರಿಂದ ದೂರವಿರುವುದೇ ಅಲ್ಲದೆ, ಅಂಥಾ ವಸ್ತುಗಳನ್ನು ತಂದು ಯಾರಿಗೂ ಕೊಡಬಾರದು. ಗರೀಬ್‌ದಾಸರು ಈ ಎಲ್ಲಾ ಮತ್ತಿನ ಪದಾರ್ಥಗಳನ್ನು ಬಹಳ ಕೆಟ್ಟದ್ದೆಂದು ಹೇಳುತ್ತಾ ತಮ್ಮ ವಚನಗಳಲ್ಲಿ ಹೀಗೆಂದು ಹೇಳಿದ್ದಾರೆ.

ಸುರಾಪಾನ್ ಮದ್ಯ್ ಮಾಂಸಾಹಾರಿ, ಗಮನ್ ಕರೈ ಭೋಗೈ ಪರ್ ನಾರೀ ।
ಸತ್ತರ್ ಜನ್ಮ್ ಕಟತ್ ಹೈ ಶೀಶಂ, ಸಾಕ್ಷೀ ಸಾಹಿಬ್ ಹೈ ಜಗದೀಶ್ಂ ॥
ಪರ್ ದ್ವಾರಾ ಸ್ತ್ರೀ ಕಾ ಖೋಲೈ, ಸತ್ತರ್ ಜನ್ಮ್ ಅಂಧಾ ಹೋವೈ ಡೋಲೈ ।
ಮದಿರಾ ಪೀವೈ ಕಡವಾ ಪಾನೀ, ಸತ್ತರ್ ಜನ್ಮ್ ಶ್ವಾನ್ ಕೇ ಜಾನೀ ॥

ಗರೀಬ್, ಹುಕ್ಕಾ ಹರ್‌ದಮ್ ಪಿವತೇ, ಲಾಲ್ ಮಿಲಾವೈ ಧೂರ್ ।
ಇಸ್ ಮೆಂ ಸಂಶಯ್ ಹೈ ನಹೀಂ, ಜನ್ಮ್ ಪಿಛಲೆ ಸೂರ್ ॥ 1 ॥

ಗರೀಬ್, ಸೋ ನಾರೀ ಜಾರೀ ಕರೈ, ಸುರಾ ಪಾನ್ ಸೌ ಬಾರ್ ।
ಏಕ್ ಚಿಲಮ್ ಹುಕ್ಕಾ ಭರೈ, ಡುಬೈ ಕಾಲೀ ಧಾರ್ ॥ 2 ॥

ಗರೀಬ್, ಸೂರ್ ಗಊ ಕುಂ ಖಾತ್ ಹೈ, ಭಕ್ತಿ ಬಿಹುನೇಂ ರಾಡ್ ।
ಭಾಂಗ್ ತಮ್ಬಾಖೂ ಖಾ ಗಏ, ಸೋ ಚಾಬತ್ ಹೈಂ ಹಾಡ್ ॥ 3 ॥

ಗರೀಬ್, ಭಾಂಗ್ ತಮ್ಬಾಖೂ ಪೀವ್ ಹೀಂ, ಸುರಾ ಪಾನ್ ಸೈಂ ಹೇತ್ ।
ಗೌಸ್ತ್ ಮಟ್ಟೀ ಖಾಯ್ ಕರ್, ಜಂಗಲೀ ಬನೆಂ ಪ್ರೇತ್ ॥ 4 ॥

ಗರೀಬ್, ಪಾನ್ ತಮ್ಬಾಖೂ ಚಾಬ್ ಹೀಂ, ನಾಸ್ ನಾಕ್ ಮೆಂ ದೇತ್ ।
ಸೋ ತೋ ಇರಾನೈ ಗಏ, ಜ್ಯೂಂ ಭಡಭೂಜೆ ಕಾ ರೇತ್ ॥ 5 ॥

ಗರೀಬ್, ಭಾಂಗ್ ತಮ್ಬಾಖೂ ಪೀವಹೀಂ, ಗೋಸ್ತ್ ಗಲಾ ಕಬಾಬ್ ।
ಮೋರ್ ಮೃಗ್ ಕೂಂ ಭಖತ್ ಹೈಂ, ದೇಂಗೆ ಕಹಾಂ ಜವಾಬ್ ॥ 6 ॥

**3) ತೀರ್ಥಸ್ಥಾನಗಳಿಗೆ ಹೋಗುವುದು ನಿಷೇಧ :–** ಯಾವ ರೀತಿಯ ವ್ರತವನ್ನೂ ಆಚರಿಸಬಾರದು. ಯಾವ ತೀರ್ಥಯಾತ್ರೆಗಳನ್ನೂ ಮಾಡಬಾರದು, ಗಂಗಾಸ್ನಾನ ಮಾಡುವುದು, ಅನ್ಯ ಧಾರ್ಮಿಕ ಕ್ಷೇತ್ರಗಳಲ್ಲಿ ಸ್ನಾನ ಮಾಡುವುದು, ದರ್ಶನ ಮಾಡುವುದು ಮುಂತಾದವುಗಳನ್ನು ಮಾಡಬಾರದು. ಯಾವುದೇ ದೇವಸ್ಥಾನಗಳಿಗೆ ಹೋಗಿ ದೇವರಿಗೆ ಪೂಜೆ ಮಾಡಬಾರದು, ಭಕ್ತಿಯಿಂದ ನಮಿಸಬಾರದು. ದೇವರು ಯಾವುದೇ ಪ್ರಾಣಿಯಲ್ಲ. ಅವನನ್ನು ಪೂಜಾರಿಯು ದೇವಸ್ಥಾನದ ಒಳಗೆ ಕೂಡಿಡುವ ಹಾಗೆ ಮಾಡುತ್ತಿದ್ದಾನೆ. ದೇವರು ಕಣ ಕಣದಲ್ಲೂ ಇದ್ದಾನೆ. ಈ ಎಲ್ಲಾ ವಿಧಾನಗಳು ಶಾಸ್ತ್ರಕ್ಕೆ ವಿರುದ್ಧವಾದದ್ದು.

ಸ್ವಲ್ಪ ಯೋಚಿಸಿ ನೋಡಿ. ಎಲ್ಲಾ ತೀರ್ಥಸ್ಥಾನಗಳು (ಜಗನ್ನಾಥ್ ಮಂದಿರ,

ಬದರೀನಾಥ್, ಹರಿದ್ವಾರ್, ಮಕ್ಕಾ–ಮದೀನಾ, ಅಮರನಾಥ್, ವೈಷ್ಣೋದೇವಿ, ಬೃಂದಾವನ, ಮಥುರಾ, ಅಯೋಧ್ಯೆಯ ರಾಮಮಂದಿರ, ಕಾಶಿ, ಛುಡಾನಿಯ ದೇವಸ್ಥಾನ ಮುಂತಾದವು) ಮಂದಿರ, ಮಸೀದಿ, ಗುರುದ್ವಾರ, ಚರ್ಚ್ ಮತ್ತು ಯಾವುದೇ ಇಷ್ಟವಾದ ಮಂದಿರಗಳಲ್ಲಿ ಸಂತರು ವಾಸಿಸುತ್ತಾರೆ. ಅವರು ಅಲ್ಲಿ ಸಾಧನೆ ಮಾಡಿ ಭಕ್ತಿ ಎಂಬ ಹಣವನ್ನು ಸಂಗ್ರಹಿಸಿ, ಶರೀರವನ್ನು ತ್ಯಜಿಸಿ ತಮ್ಮ ಇಷ್ಟದೈವದ ಲೋಕಕ್ಕೆ ತೆರಳುವರು. ನಂತರ ಅವರ ಸ್ಮರಣಾರ್ಥ ಇನ್ಯಾರೋ ಆ ಜಾಗದಲ್ಲಿ ಮಂದಿರ, ಮಸೀದಿ, ಗುರುದ್ವಾರ, ಚರ್ಚ್ ಅಥವಾ ಧರ್ಮಶಾಲೆ ಕಟ್ಟಿಸುವರು. ಬೇರೆಯವರಿಗೆ ಅದು ಮಾದರಿಯಾಗಿರಲಿ ಹಾಗೂ ಆ ಸಂತರು ಮಾಡಿದಂಥಾ ಕಾರ್ಯವನ್ನು ಎಲ್ಲರೂ ಮಾಡಲಿ ಎನ್ನುವ ಆಶಯ ಅವರದ್ದಾಗಿರುತ್ತದೆ. ಈ ಎಲ್ಲಾ ಧಾರ್ಮಿಕ ಸ್ಥಳಗಳು ಆ ಸಂತರು ಮಾಡಿದ ಸಾಧನೆಯನ್ನು ನೀವೂ ಮಾಡಿ ಎಂಬ ಸಂದೇಶವನ್ನು ನೀಡುತ್ತವೆ. ಆದ್ದರಿಂದ ಈ ರೀತಿ ಸಾಧನೆ ಮಾಡುವ ಅಥವಾ ಹೇಳಿಕೊಡುವ ಸಂತರನ್ನು ಹುಡುಕಿ ಮತ್ತು ಅವರು ಹೇಳಿದಂತೆ ಕೇಳಿ. ಆದರೆ ಆನಂತರ ಆ ಸ್ಥಳಗಳ ಪೂಜೆ ಪ್ರಾರಂಭಗೊಂಡಿದ್ದು ನಿಜವಾಗಲೂ ವ್ಯರ್ಥ ಏಕೆಂದರೆ ಅದು ಶಾಸ್ತ್ರಕ್ಕೆ ವಿರುದ್ಧವಾಗಿದೆ.

ಈ ಎಲ್ಲಾ ಸ್ಥಳಗಳು ಒಬ್ಬ ಸಿಹಿ ತಿಂಡಿ ಮಾಡುವವನು ಬಾಣಲೆ ಇಟ್ಟು ಜಿಲೇಬಿ, ಲಡ್ಡು ಮುಂತಾದವುಗಳನ್ನು ತಯಾರಿಸಿ ಸ್ವತಃ ತಾನೂ ತಿಂದು, ತನ್ನ ಸಂಬಂಧಿಕರಿಗೂ ತಿನ್ನಿಸಿ ಹೊರಟು ಹೋದ ಹಾಗೆ ಎಂದು ಹೇಳಬಹುದು. ನಂತರ ಆ ಜಾಗದಲ್ಲಿ ಸಿಹಿ ತಿಂಡಿ ಮಾಡುವವನೂ ಇಲ್ಲ, ಸಿಹಿ ತಿಂಡಿಯೂ ಇಲ್ಲ. ಅಲ್ಲಿ ಕೇವಲ ಬಾಣಲೆ ಇದೆ, ಬಾಣಲೆಯು ನಮಗೆ ಸಿಹಿತಿಂಡಿ ಮಾಡುವುದನ್ನೂ ಕಲಿಸುವುದಿಲ್ಲ, ನಮ್ಮ ಹೊಟ್ಟೆಯೂ ತುಂಬುವುದಿಲ್ಲ. ಯಾರಾದರೂ ಬಂದು, ಬಾ ತಮ್ಮ, ಸಿಹಿತಿಂಡಿ ಮಾಡುತ್ತಿದ್ದ ಬಾಣಲೆ ತೋರಿಸುತ್ತೇನೆ ಬಾ ಎಂದು ಹೇಳಿದರೆ ನೀವು ಅಲ್ಲಿ ಹೋಗಿ ಆ ಬಾಣಲೆಯನ್ನು ನೋಡಿ, ಅದರ ಸುತ್ತಲೂ ಸುತ್ತಿದರೆ ನಿಮಗೆ ಸಿಹಿತಿಂಡಿ ಸಿಗುವುದೇ? ನಿಮಗೆ ಸಿಹಿತಿಂಡಿ ಮಾಡುತ್ತಿದ್ದವನು ಸಿಕ್ಕಿದನೇ? ನೀವು ಮೊದಲು ಸಿಹಿತಿಂಡಿ ತಿನ್ನಿಸಬಲ್ಲಂಥಾ ಹಾಗೂ ಅದನ್ನು ಮಾಡುವ ವಿಧಾನವನ್ನು ಹೇಳಿಕೊಡುವಂಥಾ ಸಿಹಿತಿಂಡಿ ಮಾಡುವವನನ್ನು ಹುಡುಕಬೇಕು. ನಂತರ ಅವನು ಹೇಳಿದಂತೆ ಮಾಡಬೇಕು. ಅದೇ ರೀತಿ ತೀರ್ಥಸ್ಥಾನಗಳ ಪೂಜೆ ಮಾಡದೆ, ಸಂತರನ್ನು ಹುಡುಕಿ ಶಾಸ್ತ್ರಗಳ ಅನುಸಾರವಾಗಿ ಪೂರ್ಣ ಪರಮಾತ್ಮನಾದ ಕಬೀರ್ ಸಾಹೇಬರ ಭಕ್ತಿಯನ್ನು ಮಾಡುವರೋ ಹಾಗೂ ಮಾಡುವಂತೆ ಬೇರೆಯವರಿಗೆ ಹೇಳುವರೋ ಅವರನ್ನು ಹುಡುಕಿ ನಂತರ ಅವರು ಹೇಳಿದಂತೆ ಮಾಡಿ. ನಿಮಗೆ ತೋಚಿದಂತೆ ಮಾಡಬೇಡಿ.

**ಸಾಮವೇದ ಸಂಖ್ಯೆ 1400ರ 12ನೇ ಅಧ್ಯಾಯದ 3ನೇ ಖಂಡದ 5ನೇ ಶ್ಲೋಕದಲ್ಲಿ ಹೇಳಿದೆ (ಸಂತ ರಾಮ್‌ಪಾಲ್‌ದಾಸರ ಮೂಲಕ ವ್ಯಾಖ್ಯಾನಿಸಲಾಗಿದೆ)**

ಭದ್ರಾ ವಸ್ತ್ರಾ ಸಮನ್ಯಾವಸಾನೋ ಮಹಾನ್ ಕವಿರ್ನಿವಚನಾನಿ ಶಂಸನ್ ।
ಆ ವಚ್ಯಸ್ವ ಚಮ್ವೋಃ ಪೂಯಮಾನೋ ವಿಚಕ್ಷಣೋ ಜಾಗೃವಿರ್ದೇವವೀತೌ ॥ 5 ॥

**ಅನುವಾದ :–** ಚತುರ ವ್ಯಕ್ತಿಗಳು ತಮ್ಮ ವಚನಗಳ ಮೂಲಕ ಪೂರ್ಣ ಪರಮಾತ್ಮನ (ಪೂರ್ಣ ಬ್ರಹ್ಮನ) ಪೂಜೆಯ ಸತ್ಯಮಾರ್ಗವನ್ನು ಕಂಡುಕೊಳ್ಳದೆ ಅಮೃತದ ಬದಲಾಗಿ ಭೂತೋಪಾಸನೆ (ಭೂತ ಪೂಜೆ, ಪಿತೃ ಪೂಜೆ, ಶ್ರಾದ್ಧ ಆಚರಣೆ, ಮೂರೂ ಗುಣಗಳ (ರಜಗುಣ–ಬ್ರಹ್ಮಾ, ಸತ್‌ಗುಣ–ವಿಷ್ಣು, ತಮೋಗುಣ–ಶಿವ) ಮತ್ತು ಬ್ರಹ್ಮ ಪೂಜೆ, ಕಾಲಬ್ರಹ್ಮನ ಪೂಜೆ, ಮಂದಿರ, ಮಸೀದಿ, ಚರ್ಚ್, ಗುರುದ್ವಾರ ಪ್ರವೇಶ ಮತ್ತು ಉಪವಾಸ, ವ್ರತಗಳ ಆಚರಣೆ ಮುಂತಾದವನ್ನು ಮಾಡಬಾರದು. ಅವರಿಗೆ ಪರಮಸುಖದಾಯಕ ಪೂರ್ಣ ಬ್ರಹ್ಮ ಕಬೀರರು

ಸಶರೀರರಾಗಿ ಸಾಧಾರಣ ವೇಷ ಭೂಷಣಗಳಲ್ಲಿ (ವಸ್ತ್ರಗಳೆಂದರೆ ಸಂತರ ಭಾಷೆಯಲ್ಲಿ ಜೋಳಿಗೆ ಎನ್ನುತ್ತಾರೆ ಅಂದರೆ ಯಾರಾದರೂ ಸಂತರು ಶರೀರ ತ್ಯಜಿಸಿ ಹೋದರೆ ಆಗ ಜನರು ಆ ಮಹಾತ್ಮನು ತನ್ನ ಜೋಳಿಗೆ ಬಿಟ್ಟು ಹೊರಟ ಎಂದು ಹೇಳುತ್ತಾರೆ) ಸತ್ಯಲೋಕದ ಶರೀರದಂತೆ ಇನ್ನೊಂದು ಪ್ರಕಾಶಮಯವಾದ ಶರೀರವನ್ನು ಧರಿಸಿ ಸಾಧಾರಣ ವ್ಯಕ್ತಿಯಂತೆ ಜೀವನವನ್ನು ಮಾಡಿ ಕೆಲವು ದಿನಗಳ ಕಾಲ ಈ ಪ್ರಪಂಚದಲ್ಲಿದ್ದು ತನ್ನ ವಚನ–ವಾಣಿಗಳಿಂದ ಸತ್ಯಜ್ಞಾನವನ್ನು ವರ್ಣಿಸುತ್ತಾ ಪೂರ್ಣ ಪರಮಾತ್ಮನ ಗುಪ್ತವಾಗಿರುವ ನಿಜವಾದ ಸತ್ಯಜ್ಞಾನ ಮತ್ತು ಭಕ್ತಿಯನ್ನು ಜಾಗೃತಗೊಳಿಸುತ್ತಾರೆ.

**ಗೀತೆಯ 16ನೇ ಅಧ್ಯಾಯದ 23ನೇ ಶ್ಲೋಕ.**

ಯಃ, ಶಾಸ್ತ್ರವಿಧಿಮ್, ಉತ್ಸೃಜ್ಯ, ವರ್ತತೆ, ಕಾಮಕಾರತಃ, ನ, ಸಃ,
ಸಿದ್ಧಿಮ್, ಅವಾಪ್ನೋತಿ, ನ, ಸುಖಮ್, ನ, ಪರಾಮ್, ಗತಿಮ್ ॥

**ಅನುವಾದ :– ಯಾವ ಪುರುಷನು ಶಾಸ್ತ್ರವಿಧಾನವನ್ನು ತ್ಯಜಿಸಿ ತನ್ನ ಇಚ್ಛೆಯಂತೆ ಮನಸ್ಸಿಗೆ ಬಂದ ಹಾಗೆ ಆಚರಣೆ ಮಾಡುವನೋ ಅವನು ಯಾವ ಸಿದ್ಧಿಯನ್ನೂ ಪಡೆಯುವುದಿಲ್ಲ ಹಾಗೂ ಮೋಕ್ಷವನ್ನು ಪಡೆಯುವುದಿಲ್ಲ. ಯಾವ ಸುಖವೂ ಅವನಿಗೆ ದಕ್ಕುವುದಿಲ್ಲ.**

**ಗೀತೆಯ 6ನೇ ಅಧ್ಯಾಯದ 16ನೇ ಶ್ಲೋಕ.**

ನ, ಅತಿ, ಅಶ್ರನತಃ, ತು, ಯೋಗಃ, ಅಸ್ತಿ, ನ, ಚ, ಏಕಾಂತಮ್,
ಅನಶ್ರನತಃ, ನ, ಚ, ಅತಿ, ಸ್ವಪ್ನಶೀಲಸ್ಯ, ಜಾಗ್ರತಃ, ನ, ಏವ್, ಚ, ಅರ್ಜುನ್ ॥

**ಅನುವಾದ :– ಹೇ ಅರ್ಜುನ ! ಈ ಯೋಗವು ಅರ್ಥಾತ್ ಭಕ್ತಿಯು ಹೆಚ್ಚು ತಿನ್ನುವವನದ್ದೂ ಅಲ್ಲ, ತಿನ್ನದೇ ಇರುವವನದ್ದೂ ಅಲ್ಲ, ಏಕಾಂತದಲ್ಲಿ ಆಸನಗಳನ್ನು ಹಾಕಿ ಸಾಧನೆ ಮಾಡುವವನದ್ದೂ ಅಲ್ಲ ಅಥವಾ ಯಾವಾಗಲೂ ಮಲಗುವ ಸ್ವಭಾವ ಇರುವವನದ್ದೂ ಅಲ್ಲ ಅಥವಾ ಯಾವಾಗಲೂ ಎಚ್ಚರದಿಂದ ಇರುವವನದ್ದೂ ಅಲ್ಲ ಎನ್ನುವುದು ತಿಳಿಯುತ್ತದೆ.**

ಪೂಜೈ ದೇಈ ಧಾಮ್ ಕೋ, ಶೀಶ್ ಹಲಾವೈ ಜೋ ।
ಗರೀಬ್ ದಾಸ್ ಸಾಚೀ ಕಹೈ, ಹದ್ ಕಾಫಿರ್ ಹೈ ಸೋ ॥

ಕಬೀರ್, ಗಂಗಾ ಕಾಠೈ ಘರ್ ಕರೈ, ಪೀವೈ ನಿರ್ಮಲ್ ನೀರ್ ।
ಮುಕ್ತಿ ನಹೀಂ ಹರಿ ನಾಮ್ ಬಿನ್, ಸತಗುರು ಕಹೈಂ ಕಬೀರ್ ॥

ಕಬೀರ್, ತೀರ್ಥ್ ಕರ್–ಕರ್ ಜಗ್ ಮೂವಾ, ಉಡೈ ಪಾನೀ ನ್ಹಾಯ್ ।
ರಾಮ್ ಹೀ ನಾಮ್ ನಾ ಜಪಾ, ಕಾಲ್ ಘಸೀಟೆ ಜಾಯ್ ॥

ಗರೀಬ್, ಪೀತಲ್ ಹೀ ಕಾ ಥಾಲ್ ಹೈ, ಪೀತಲ್ ಕಾ ಲೋಟಾ ।
ಜಡ್ ಮೂರತ್ ಕೋ ಪೂಜತೇಂ, ಆವೈಗಾ ಟೋಟಾ॥

ಗರೀಬ್, ಪೀತಲ್ ಚಮಚ್ಚಾ ಪೂಜಿಯೇ, ಜೋ ಥಾಲ್ ಪರೋಸೈ ।
ಜಡ್ ಮೂರತ್ ಕಿಸ್ ಕಾಮ್ ಕೀ, ಮತಿ ರಹೋ ಭರೋಸೈ ॥

ಕಬೀರ್, ಪರ್ವತ್ ಪರ್ವತ್ ಮೈಂ ಫಿರ್ಯಾ, ಕಾರಣ್ ಅಪನೇ ರಾಮ್ ।
ರಾಮ್ ಸರೀಖೆ ಜನ್ ಮಿಲೆ, ಜಿನ್ ಸಾರೇ ಸಬ್ ಕಾಮ್ ॥

**4) ಪಿತೃ ಪೂಜೆ ನಿಷೇಧ :– ಯಾವುದೇ ರೀತಿಯ ಪಿತೃಪೂಜೆ, ಶ್ರಾದ್ಧ ಮುಂತಾದವುಗಳನ್ನು**

ಮಾಡಬಾರದು. ಭಗವಂತನಾದ ಶ್ರೀ ಕೃಷ್ಣನು ಪಿತೃಪೂಜೆ ಮತ್ತು ಭೂತಪೂಜೆ ಮಾಡುವುದನ್ನು ತಿರಸ್ಕರಿಸಿದ್ದಾನೆ. ಗೀತೆಯ 9ನೇ ಅಧ್ಯಾಯದ 25ನೇ ಶ್ಲೋಕದಲ್ಲಿ ಹೇಳಿದೆ.

ಯಾನ್ತಿ, ದೇವವ್ರತಾಃ, ದೇವಾನ್, ಪಿತೃಯನ್, ಯಾನ್ತಿ, ಪಿತೃವ್ರತಾಃ ।
ಭೂತಾನಿ, ಯಾನ್ತಿ, ಭೂತೇಜ್ಯಾಃ, ಮದ್ಯಾಜಿನಃ, ಅಪಿ, ಮಾಮ್ ॥

ಅನುವಾದ :– ದೇವತೆಗಳ ಪೂಜೆಯನ್ನು ಮಾಡುವವರು ದೇವತೆಗಳನ್ನು ಪಡೆಯುವರು, ಪಿತೃಗಳನ್ನು ಪೂಜಿಸುವವರು ಪಿತೃಗಳನ್ನು ಪಡೆಯುವರು ಹಾಗೂ ಭೂತಗಳನ್ನು ಪೂಜಿಸುವವರು ಭೂತಗಳನ್ನು ಪಡೆಯುವರು.

ಸಂತ ಗರೀಬ್‌ದಾಸ್ ಹಾಗೂ ಕಬೀರ್ ಪರಮೇಶ್ವರರು ಹೇಳುತ್ತಾರೆ.

ಗರೀಬ್, ಭೂತ್ ರಮ್ಯೆ ಸೋ ಭೂತ್ ಹೈ, ದೇವ್ ರಮ್ಯೆ ಸೋ ದೇವ್ ।
ರಾಮ್ ರಮ್ಯೆ ಸೋ ರಾಮ್ ಹೈ, ಸುನೋ ಸಕಲ್ ಸುರ್ ಭೇವ್ ॥

ಆದ್ದರಿಂದ ಯಾರಿಂದ ಪೂರ್ಣ ಮುಕ್ತಿ ಸಿಗುವುದೋ ಆ (ಪೂರ್ಣ ಪರಮಾತ್ಮ) ಪರಮೇಶ್ವರನನ್ನು ಆರಾಧಿಸು. ಅವನು ಪೂರ್ಣ ಬ್ರಹ್ಮ ಸತ್ಯಪುರುಷನು. ಇದರ ಆಧಾರ ಗೀತೆಯ 18ನೇ ಅಧ್ಯಾಯದ 46ನೇ ಶ್ಲೋಕದಲ್ಲಿದೆ.

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥ 46 ॥

ಅನುವಾದ :– ಯಾವ ಪರಮೇಶ್ವರನಿಂದ ಸಕಲ ಪ್ರಾಣಿಗಳ ಸೃಷ್ಟಿಯಾಗುವುದೋ ಹಾಗೂ ಯಾರಿಂದ ಈ ಸಮಸ್ತ ಪ್ರಪಂಚವು ವ್ಯಾಪಿಸಲ್ಪಟ್ಟಿದೆಯೋ ಆ ಪರಮೇಶ್ವರನನ್ನು ನಿನ್ನ ಸ್ವಾಭಾವಿಕ ಕರ್ಮಗಳ ಮೂಲಕ ಪೂಜಿಸು. ಆಗ ಹೇ ಮಾನವಾ, ನೀನು ಪರಮಸಿದ್ಧಿಯನ್ನು ಪಡೆಯುವೆ.

ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕ.

ತ್ವಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।
ತತ್ ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಯಸಿ ಶಾಶ್ವತಮ್ ॥ 62 ॥

ಅನುವಾದ :– ಹೇ ಭರತವಂಶೋಧ್ಭವ ಅರ್ಜುನ! ನೀನು ಸರ್ವಭಾವದಿಂದ ದೇವರ ಆಶ್ರಯ ಪಡೆ. ಅವನ ಕೃಪೆಯಿಂದ ನೀನು ಪರಮಶಾಂತಿಯನ್ನು ಹಾಗೂ ಅವಿನಾಶಿ ಪರಮಪದವನ್ನು ಪಡೆಯುವೆ. ಸರ್ವಭಾವ ಎಂದರೆ ಬೇರೆ ಯಾವ ಪೂಜೆಯನ್ನೂ ಮಾಡದೆ ಕಾಯಾ–ವಾಚಾ–ಮನಸಾ ಒಬ್ಬನೇ ಪರಮೇಶ್ವರನಲ್ಲಿ ನಂಬಿಕೆ ಇಡುವುದು ಎಂದರ್ಥ.

ಗೀತೆಯ 8ನೇ ಅಧ್ಯಾಯದ 22ನೇ ಶ್ಲೋಕ.

ಪುರುಷಃ ಸ ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ ।
ಯಸ್ಯಾಂತಃ ಸ್ಥಾನಿ ಭೂತಾನಿ ಯೇನ ಸರ್ವಮಿದಂ ತತಮ್ ॥

ಅನುವಾದ :– ಹೇ ಪೃಥಾನಂದನ ಅರ್ಜುನ ! ಯಾರ ಒಳಗೆ ಎಲ್ಲಾ ಜೀವಿಗಳಿವೆಯೋ ಹಾಗೂ ಯಾರಿಂದ ಈ ಇಡೀ ಪ್ರಪಂಚವು ವ್ಯಾಪಿಸಿದೆಯೋ, ಆ ಪರಮ ಪುರುಷ ಪರಮಾತ್ಮನು ಅನನ್ಯ ಭಕ್ತಿಯಿಂದ ಪ್ರಾಪ್ತನಾಗುವವನು. ಅನನ್ಯ ಭಕ್ತಿ ಎಂದರೆ ಒಬ್ಬನೇ ಪರಮೇಶ್ವರನನ್ನು ಆರಾಧಿಸುವುದು ಎಂದರ್ಥ. ಬೇರೆ ದೇವ–ದೇವತೆಗಳನ್ನು ಅಲ್ಲ ಎಂದರ್ಥ.

ಗೀತೆಯ 15ನೇ ಅಧ್ಯಾಯದ 1ನೇ ಶ್ಲೋಕ.

ಊರ್ಧ್ವಮೂಲಮ್, ಅಧಃಶಾಖಮ್ ಅಶ್ವತ್ಥಮ ಪ್ರಾಹುಃ ಅವ್ಯಯಮ್,
ಛಂದಾಂಸಿ, ಯಸ್ಯ, ಪರ್ಣಾನಿ, ಯಃ ತಮ್, ವೇದ, ಸಃ, ವೇದವಿತ್ ॥

**ಅನುವಾದ :– ಮೇಲೆ ಬೇರಿರುವ ಹಾಗೂ ಕೆಳಗೆ ರೆಂಬೆಗಳಿರುವ ಅವಿನಾಶಿಯು ವಿಸ್ತೃತ ಪ್ರಪಂಚವೆಂಬ ಅರಳಿ ಮರವಾಗಿದೆ. ಅದರ ಸಣ್ಣ ಸಣ್ಣ ರೆಂಬೆಗಳು, ಎಲೆಗಳು ಎಂದು ಹೇಳಲ್ಪಡುವ ಈ ಪ್ರಪಂಚವೆಂಬ ವೃಕ್ಷವನ್ನು ಯಾರು ಈ ರೀತಿಯಾಗಿ ಅರಿಯುತ್ತಾನೋ, ಅವನೇ ಪೂರ್ಣಜ್ಞಾನಿ ಅಂದರೆ ತತ್ವದರ್ಶಿ ಆಗಿರುತ್ತಾನೆ.**

**ಗೀತೆಯ 15ನೇ ಅಧ್ಯಾಯದ 2ನೇ ಶ್ಲೋಕ.**

ಅಧಃ, ಚ, ಊರ್ಧ್ವಮ್, ಪ್ರಸೃತಾಃ, ತಸ್ಯ, ಶಾಖಾಃ,
ಗುಣಪ್ರವೃದ್ಧಾಃ, ವಿಷಯ ಪ್ರವಾಲಾಃ,
ಅರ್ಧಃ, ಚ, ಮೂಲಾನಿ, ಅನುಸಂತತಾನಿ,
ಕರ್ಮಾನುಬಂಧೀನಿ, ಮನುಷ್ಯಲೋಕೆ ॥ 2 ॥

**ಅನುವಾದ :– ಆ ವೃಕ್ಷದ ಕೆಳಗೆ ಹಾಗೂ ಮೇಲೆ ಮೂರೂ ಗುಣಗಳ ಬ್ರಹ್ಮಾ–ರಜಗುಣ, ವಿಷ್ಣು–ಸತ್‌ಗುಣ, ಶಿವ–ತಮೋಗುಣ ರೂಪದಲ್ಲಿ ಹರಡಿರುವ ಕಾಮ, ಕ್ರೋಧ, ಮೋಹ, ಲೋಭ, ಅಹಂಕಾರವೆಂಬ ರೆಂಬೆಕೊಂಬೆ ಬ್ರಹ್ಮಾ, ವಿಷ್ಣು, ಶಿವ ಇವರೇ ಜೀವವನ್ನು ಕರ್ಮದಲ್ಲಿ ಬಂಧಿಸುವ ಬೇರುಗಳು. ಅರ್ಥಾತ್ ಅವರೇ ಮೂಲ ಕಾರಣರು ಮತ್ತು ಮನುಷ್ಯಲೋಕ, ಸ್ವರ್ಗ, ನರಕಲೋಕ, ಭೂಲೋಕದಲ್ಲಿ (84 ಲಕ್ಷ ಯೋನಿಗಳಲ್ಲಿ)ಕೆಳಗೆ ಮೇಲೆ ಬಂಧಿಸಿದ್ದಾರೆ.**

**ಗೀತೆಯ 15ನೇ ಅಧ್ಯಾಯ 3ನೇ ಶ್ಲೋಕ.**

ನ ರೂಪಮ್, ಅಸ್ಯ ಇಹ್ ತಥಾ ಉಪಲಭ್ಯತೆ, ನ, ಅಂತಃ, ನ, ಚ, ಆದಿಃ, ನ, ಚ ।
ಸಂಪ್ರತಿಷ್ಠಾ, ಅಶ್ವತ್ಥಮ್, ಏನಮ್, ಸುವಿರೂಢಮೂಲಮ್,
ಅಸಂಗಶಸ್ತ್ರೇಣ, ದೃಢೇನ, ಛಿತ್ವಾ ॥ 3 ॥

**ಅನುವಾದ :– ಈ ರಚನೆಯು ಪ್ರಾರಂಭವೂ ಅಲ್ಲ, ಅಂತ್ಯವೂ ಅಲ್ಲ. ನಾನು ಕೊಡುತ್ತಿರುವ ಗೀತೆಯ ಜ್ಞಾನದ ಅರಿವು ಪೂರ್ಣವಾಗಿ ನನಗೂ ಇಲ್ಲ. ಏಕೆಂದರೆ ಸರ್ವಬ್ರಹ್ಮಾಂಡಗಳ ರಚನೆಯ ಬಗ್ಗೆ ನನಗೂ ಸರಿಯಾದ ಜ್ಞಾನವಿಲ್ಲ.**

**ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕ.**

ತತಃ ಪದಂ ತತ್ಪರಿಮಾರ್ಗಿತವ್ಯಂ ಯಸ್ಮಿನ್ಗತಾ ನ ನಿವರ್ತಂತಿ ಭೂಯಃ ।
ತಮೇವ ಚಾದ್ಯಂ ಪುರುಷಂ ಪ್ರಪದ್ಯೆ ಯತಃ ಪ್ರವೃತ್ತಿ ಪ್ರಸೃತಾ ಪುರಾಣಿ॥

**ಅನುವಾದ :– ಇದರ ನಂತರ ಆ ಪರಮಪದ ಪರಮಾತ್ಮನನ್ನು ಹುಡುಕಬೇಕು. ಅವನನ್ನು ಪಡೆದ ಮನುಷ್ಯನು ಮತ್ತೆ ಈ ಪ್ರಪಂಚಕ್ಕೆ ಬರುವುದಿಲ್ಲ. ಆ ಆದಿ ಪುರುಷ ಪರಮಾತ್ಮನಿಗೆ ನಾನು ಶರಣು.**

**ಈ ರೀತಿ ಸ್ವಯಂ ಭಗವಂತನಾದ ಶ್ರೀಕೃಷ್ಣನು ದೇವಾದಿದೇವತೆಗಳಿಗೆ ದೇವನಾದ ಇಂದ್ರನ ಪೂಜೆಯನ್ನು ಬಿಡಿಸಿ ಪೂರ್ಣ ಪರಮಾತ್ಮನನ್ನು ಆರಾಧಿಸಲು ಪ್ರೇರಣೆ ನೀಡಿದ್ದನು. ಆ ಕಾರಣದಿಂದಲೇ ಅವನು ಗೋವರ್ಧನ ಪರ್ವತವನ್ನು ಎತ್ತಿ ಹಿಡಿದು ಇಂದ್ರನ ಕೋಪದಿಂದ ಬ್ರಜವಾಸಿಗಳನ್ನು ರಕ್ಷಿಸಿದ್ದನು.**

ಗರೀಬ್, ಇಂದ್ರ್ ಚಢಾ ಬ್ರಿಜ್ ಡುಬೋವನ್, ಭೀಗಾ ಭೀತ್ ನ ಲೇವ್।
ಇಂದ್ರ್ ಕಢಾಈ ಹೋತ್ ಜಗತ್ ಮೆಂ, ಪೂಜಾ ಖಾ ಗಏ ದೇವ್॥
ಕಬೀರ್, ಇಸ್ ಸಂಸಾರ್ ಕೋ, ಸಮಝಾಊಂ ಕೈ ಬಾರ್।

ಪೂಂಛ್ ಜೋ ಪಕಡೈ ಭೇಢ್ ಕೀ, ಉತರಾ ಚಾಹೈ ಪಾರ್॥

**5) ಗುರುಗಳ ಆಜ್ಞೆಯ ಪಾಲನೆ :– ಗುರುದೇವನ ಆಜ್ಞೆ ಇಲ್ಲದೆ ಮನೆಯಲ್ಲಿ ಯಾವುದೇ ರೀತಿಯ ಧಾರ್ಮಿಕ ಆಚರಣೆ ಮಾಡಿಸಬಾರದು. ಗರೀಬ್‌ದಾಸರು ತಮ್ಮ ವಾಣಿಯಲ್ಲಿ ಹೀಗೆಂದು ಹೇಳಿದ್ದಾರೆ.**

"ಗುರು ಬಿನ್ ಯಜ್ಞ್ ಹವನ್ ಜೋ ಕರಹೀಂ,
ಮಿಥ್ಯಾ ಜಾವೇ ಕಬಹು ನಹೀಂ ಫಲಹೀ।"

ಕಬೀರ್, ಗುರು ಬಿನ್ ಮಾಲಾ ಫೇರತೆ, ಗುರು ಬಿನ್ ದೇತೆ ದಾನ್।
ಗುರು ಬಿನ್ ದೋನೋಂ ನಿಷ್ಫಲ್ ಹೈಂ, ಪೂಛೋ ವೇದ್ ಪುರಾಣ್॥

**6) ಸಮಾಧಿಯ ಪೂಜೆಯ ನಿಷೇಧ:– ತಮ್ಮ ಜಮೀನಿನಲ್ಲಿ ಅಥವಾ ಮನೆಯ ಬಳಿ ಇರುವ ಯಾವುದೇ ಸಮಾಧಿಯನ್ನು ಪೂಜಿಸಬಾರದು. ಸಮಾಧಿ ಯಾರದ್ದೇ ಆಗಿದ್ದರೂ ಪೂಜಿಸಬಾರದು. ಬೇರೆ ಯಾರ ಉಪಾಸನೆಯನ್ನೂ ಮಾಡಬಾರದು. ಮೂರು ಗುಣಗಳ (ಬ್ರಹ್ಮಾ, ವಿಷ್ಣು, ಶಿವ) ಪೂಜೆಯನ್ನು ಮಾಡಬಾರದು. ಕೇವಲ ಗುರುಗಳು ಹೇಳಿದಂತೆ ಮಾಡಬೇಕು.**

**ಗೀತೆಯ 7ನೇ ಅಧ್ಯಾಯದ 15ನೇ ಶ್ಲೋಕ.**

ನ, ಮಾಮ್, ದುಷ್ಕೃತಿನಃ ಮುಢಾಃ, ಪ್ರಪದ್ಯಂತೆ, ನರಾಧಮಾಃ।
ಮಾಯಯಾ ಅಪಹೃತಜ್ಞಾನಾಃ, ಆಸುರಮ್, ಭಾವಮ್, ಆಶ್ರಿತಾಃ॥

**ಅನುವಾದ :– ಮಾಯೆಯ ಮೂಲಕ ಯಾರ ಜ್ಞಾನವು ಸೋಲಿಸಲ್ಪಟ್ಟಿದೆಯೋ, ಅಂಥಾ ಅಸುರ ಸ್ವಭಾವವನ್ನು ಹೊಂದಿರುವಂಥಾ ಮನುಷ್ಯ ನೀಚ ಹಾಗೂ ಕೆಟ್ಟ ಕರ್ಮ ಮಾಡುವಂಥಾ ಮೂರ್ಖನು ನನ್ನನ್ನು ಭಜಿಸುವುದಿಲ್ಲ ಅರ್ಥಾತ್ ಆ ಮೂರೂ ಗುಣಗಳ (ರಜಗುಣ–ಬ್ರಹ್ಮಾ, ಸತ್‌ಗುಣ–ವಿಷ್ಣು, ತಮಗುಣ–ಶಿವ) ಸಾಧನೆಯನ್ನು ಮಾಡುತ್ತಿರುತ್ತಾರೆ.**

ಕಬೀರ್, ಮಾಈ ಮಸಾನೀ ಶೇಢ್ ಶೀಲತಾ, ಭೈರವ್ ಭೂತ್ ಹನುಮಂತ್।
ಪರಮಾತ್ಮ ಉನ್‌ಸೆ ದೂರ್ ಹೈ, ಜೋ ಇನ್‌ಕೋ ಪೂಜಂತ್॥
ಕಬೀರ್, ಸೌ ವರ್ಷ್ ತೋ ಗುರು ಕೀ ಸೇವಾ, ಏಕ್ ದಿನ್ ಆನ್ ಉಪಾಸೀ ।
ವೋ ಅಪರಾಧಿ ಆತ್ಮಾ, ಪರೈ ಕಾಲ್ ಕೀ ಫಾಂಸಿ॥
ಗುರು ಕೋ ತಜೈ ಭಜೈ ಜೋ ಆನಾ । ತಾ ಪಸುವಾ ಕೋ ಫೋಕಟ್ ಜ್ಞಾನಾ॥

**7) ಸಂಕಟ ಮೋಚನ ಕಬೀರ್ ಪರಮೇಶ್ವರರು :– ಕಷ್ಟ ಬಂದಾಗ ಯಾರದೇ ಸಮಾಧಿಯ ಪೂಜೆ ಮಾಡಬಾರದು. ಯಾವುದೇ ಪುರಾಣ ಓದಿಸಬಾರದು. ಕೇವಲ ಕಬೀರ ಪರಮೇಶ್ವರರನ್ನು ಪೂಜಿಸಬೇಕು. ಅವರು ಎಲ್ಲಾ ದುಃಖಗಳನ್ನು ನಿವಾರಿಸುವವರು.**

**ಸಾಮವೇದ 22ನೇ ಸಂಖ್ಯೆಯ 3ನೇ ಉತಾರ್ಚಿತ ಅಧ್ಯಾಯದ 5 ಕಾಂಡದ 8ನೇ ಶ್ಲೋಕ (ಸಂತ ರಾಮ್‌ಪಾಲ್ ದಾಸರ ಮೂಲಕ ವ್ಯಾಖ್ಯಾನಗೊಂಡಿದೆ)**

ಮನೀಷಿಭಿಃ ಪವತೆ ಪೂರ್ವ್ಯಃ ಕವಿರ್ನುಭಿರ್ಯತಃ ಪರಿ ಕೋಶಾಂ ಅಸಿಶ್ಯದತ್ ।
ತ್ರಿತಸ್ಯ ನಾಮ್ ಜನಯನ್ಮಧು ಕ್ಷರನ್ನಿಂದ್ರಸ್ಯ ವಾಯುಂ ಸಖ್ಯಾಯ ವರ್ಧಯನ್॥ 8 ॥

**ಕನ್ನಡ :– ಸನಾತನ ಅರ್ಥಾತ್ ಅವಿನಾಶಿ ಕಬೀರ ಪರಮೇಶ್ವರರು ಇಚ್ಛಿಸುವಂಥಾ ಶ್ರದ್ಧೆಯಿಂದ, ಭಕ್ತಿಯಿಂದ ಇರುವ ಭಕ್ತಾತ್ಮನಿಗೆ ಮೂರು ಮಂತ್ರೋಪದೇಶವನ್ನು ಕೊಟ್ಟು ಪವಿತ್ರರನ್ನಾಗಿ ಮಾಡಿ ಜನನ ಮತ್ತು ಮರಣ ರಹಿತರನ್ನಾಗಿ ಮಾಡುತ್ತಾರೆ. ಮತ್ತು ಅವನ ಪ್ರಾಣ**

ಅರ್ಥಾತ್ ಜೀವನ–ಶ್ವಾಸಗಳನ್ನು ಸಂಸ್ಕಾರಕ್ಕನುಗುಣವಾಗಿ ತನ್ನ ಮಿತ್ರ ಅಂದರೆ ಭಕ್ತನು ಆಶಿಸುವಂಥಾ ಶ್ವಾಸವನ್ನು ತನ್ನ ಖಜಾನೆಯಿಂದ ಪೂರ್ಣ ರೂಪವಾಗಿ ಹೆಚ್ಚಿಸುತ್ತಾನೆ ಹಾಗೂ ಪರಮೇಶ್ವರನ ವಾಸ್ತವಿಕ ಆನಂದವನ್ನು ತನ್ನ ಆಶೀರ್ವಾದ ಪ್ರಸಾದದಿಂದ ಕೊಡುತ್ತಾನೆ.

ಕಬೀರ್, ದೇವೀ ದೇವ್ ಠಾಢೇ ಭಯೆ, ಹಮ್ ಕೋ ಠೌರ್ ಬತಾಓ।
ಜೋ ಮುಝ್ (ಕಬೀರ್) ಕೋ ಪೂಜೈ ನಹೀಂ, ಉನ್ ಕೋ ಲೂಟೋ ಖಾಓ॥
ಕಬೀರ್, ಕಾಲ್ ಜೋ ಪೀಸ್ಯೆ ಪೀಸನಾ, ಜೋರಾ ಹೈ ಪನಿಹಾರ್।
ಯೆ ದೋ ಅಸಲ್ ಮಜೂರ್ ಹೈಂ, ಸತಗುರು ಕೆ ದರ್‌ಬಾರ್॥

**8) ಅನಾವಶ್ಯಕವಾದ ದಾನ ನಿಷೇಧ :–** ಎಲ್ಲೂ, ಯಾರಿಗೂ, ಯಾವ ರೂಪದಲ್ಲೂ ದಾನ ನೀಡಬಾರದು. ಹಣ, ಹೊಲಿದ ಬಟ್ಟೆ ಮುಂತಾದವುಗಳನ್ನೂ ನೀಡಬಾರದು. ಯಾರಾದರೂ ದಾನ ರೂಪದಲ್ಲಿ ಬೇಡಲು ಬಂದರೆ ಅವರಿಗೆ ಊಟ ಮಾಡಿಸಿ, ಕಾಫಿ, ಟೀ, ಹಾಲು, ನೀರು, ಲಸ್ಸಿ ಮುಂತಾದವುಗಳನ್ನು ಕುಡಿಸಿ. ಆದರೆ ಏನನ್ನೂ ಕೊಡಬೇಡಿ. ಆ ಹಣವನ್ನು ಆ ಭಿಕ್ಷುಕ ಹೇಗೆ ದುರುಪಯೋಗಪಡಿಸಿಕೊಳ್ಳುವನೋ ಯಾರಿಗೆ ಗೊತ್ತು? ಒಬ್ಬ ಭಿಕಾರಿ ಒಬ್ಬ ವ್ಯಕ್ತಿಯ ಬಳಿ ಹೋಗಿ ನನ್ನ ಮಕ್ಕಳು ರೋಗದಿಂದ ನರಳುತ್ತಿದ್ದಾರೆ, ಚಿಕಿತ್ಸೆಗೆ ಹಣವಿಲ್ಲ ಎಂದು ಕಟ್ಟುಕತೆ ಹೇಳಿದಾಗ ಆ ವ್ಯಕ್ತಿಯು ಆ ಮಾತನ್ನು ನಂಬಿ ಅವನ ಮೇಲೆ ದಯೆ ಇಟ್ಟು, ಅವನಿಗೆ 100 ರೂಪಾಯಿಗಳನ್ನು ಕೊಟ್ಟನು. ಆ ಭಿಕಾರಿ ಈ ಮೊದಲೇ ಕುಡುಕನಾಗಿದ್ದನು. ಆ ದಿನ ಅರ್ಧ ಬಾಟಲಿ ಮದ್ಯ ಸೇವಿಸಿ ತನ್ನ ಹೆಂಡತಿಯನ್ನು ಹಿಗ್ಗಾಮಗ್ಗಾ ಥಳಿಸಿದನು. ಅವನ ಹೆಂಡತಿ ಬೇಸತ್ತು ತನ್ನ ಮಕ್ಕಳ ಸಹಿತ ಆತ್ಮಹತ್ಯೆ ಮಾಡಿಕೊಂಡಳು. ನೀವು ಮಾಡಿದ ದಾನ ಆ ಕುಟುಂಬದ ನಾಶಕ್ಕೆ ಕಾರಣವಾಯಿತು. ನೀವು ಇಷ್ಟಪಟ್ಟರೆ ಆ ವ್ಯಕ್ತಿಯ ಮಕ್ಕಳಿಗೆ ನೀವೇ ಖುದ್ದಾಗಿ ಹೋಗಿ ಔಷಧಿ ಕೊಡಿಸಬೇಕೇ ವಿನಃ ದುಡ್ಡನ್ನಲ್ಲ.

ಕಬೀರ್, ಗುರು ಬಿನ್ ಮಾಲಾ ಫೆರತೆ, ಗುರು ಬಿನ್ ದೇತೆ ದಾನ್ ।
ಗುರು ಬಿನ್ ದೋನೋಂ ನಿಷ್ಫಲ್ ಹೈಂ, ಪುಛೋ ವೇದ್ ಪುರಾನ್ ॥

**9) ಎಂಜಲು ತಿನ್ನುವುದು ನಿಷೇಧ :–** ಯಾರು ಮಾಂಸ, ಮೊಟ್ಟೆ ತಿನ್ನುವರೋ, ಮದ್ಯ, ತಂಬಾಕು, ಬೀರ್, ಅಫೀಮ್, ಗಾಂಜಾ ಮುಂತಾದವುಗಳ ಸೇವನೆ ಮಾಡುವರೋ, ಅಂಥಾ ವ್ಯಕ್ತಿಗಳ ಎಂಜಲನ್ನು ತಿನ್ನಬಾರದು.

**10) ಸತ್ಯಲೋಕ ಗಮನ(ದೇಹಾಂತ)ದ ನಂತರ ಕ್ರಿಯಾ–ಕರ್ಮ ನಿಷೇಧ :–** ಕುಟುಂಬದಲ್ಲಿ ಯಾರಾದರೂ ಮರಣ ಹೊಂದಿದರೆ, ಆಗ ಚಿತೆಗೆ ಬೆಂಕಿ ಯಾರು ಬೇಕಾದರೂ ಹಾಕಬಹುದು. ಮನೆಯವರು ಅಥವಾ ಬೇರೆಯವರು, ಯಾರಾದರೂ ಅಗ್ನಿ ಪ್ರಜ್ವಲಿಸುವಾಗ ಮಂಗಳಾಚರಣವನ್ನು ಹೇಳಲಿ. ಅದರ ಹೂವು ಮುಂತಾದವು ಏನನ್ನೂ ತೆಗೆಯಬಾರದು. ಆ ಸ್ಥಾನವನ್ನು ಶುಚಿಗೊಳಿಸುವುದು ಅನಿವಾರ್ಯವಾದಾಗ, ಅಲ್ಲಿನ ಅಸ್ಥಿಗಳನ್ನು ಸಂಗ್ರಹಿಸಿ ಹರಿಯುವ ನೀರಿನಲ್ಲಿ ಬಿಡಬೇಕು. ಆ ಸಮಯದಲ್ಲೂ ಮಂಗಲಾಚರಣವನ್ನು ಹೇಳಬೇಕು. ಆದರೆ ಪಿಂಡ ಬಿಡುವುದು, ಹದಿಮೂರನೆ ದಿನ ಆಚರಣೆ, ಆರು ತಿಂಗಳ ತಿಥಿ, ವಾರ್ಷಿಕ ತಿಥಿ ಪ್ರತಿ ವರ್ಷ ತಿಥಿ ಏನನ್ನೂ ಮಾಡಬಾರದು. ಬೇರೆಯವರಿಂದ ಹೋಮ ಹವನಗಳನ್ನು ಮಾಡಿಸಬಾರದು. ಯಾರಾದರೂ ಸಂಬಂಧಿಕರು ಅಥವಾ ಆಪ್ತರು ಶೋಕ ವ್ಯಕ್ತಪಡಿಸಲು ಬಂದರೆ, ಅವರಿಗಾಗಿ ಒಂದು ದಿನ ನಿಗದಿಪಡಿಸಬೇಕು. ಆ ದಿನ ಪ್ರತಿದಿನವೂ ಮಾಡುವಂಥಾ ನಿತ್ಯ ಕರ್ಮಗಳನ್ನು ಮಾಡಬೇಕು. ನಂತರ ಜ್ಯೋತಿ ಬೆಳಗಿಸಬೇಕು. ನಂತರ ಎಲ್ಲರಿಗೂ ಊಟ ಏರ್ಪಡಿಸಬೇಕು. ಸತ್ತವರ ಹೆಸರಿನಲ್ಲಿ

ಏನಾದರೂ ಮಾಡಲು ಬಯಸಿದರೆ ಗುರುದೇವರ ಅಪ್ಪಣೆ ಪಡೆದು ಗರೀಬ್‌ದಾಸ ಗುರುಗಳ ಅಮೃತವಾಣಿಯ ಅಖಂಡ ಭಜನೆ ಮಾಡಿಸಬಹುದು. ಭಜನೆ (ಪಾಠ ಪ್ರಕಾಶ್) ಮಾಡಿಸಲು ಅಪ್ಪಣೆ ದೊರಕದಿದ್ದರೆ ಕುಟುಂಬದಲ್ಲಿ ದೀಕ್ಷೆ ಪಡೆದ ಭಕ್ತರಿದ್ದರೆ, ಅವರು ನಾಲ್ಕು ದಿನ ಅಥವಾ ಏಳು ದಿನ ದೇಸೀ ತುಪ್ಪದಲ್ಲಿ ಒಂದು ಜ್ಯೋತಿಯನ್ನು ಬೆಳಗಿಸಬೇಕು ಹಾಗೂ ಬ್ರಹ್ಮ ಗಾಯತ್ರಿಮಂತ್ರವನ್ನು ಪ್ರತಿದಿನವೂ ನಾಲ್ಕು ಬಾರಿ ಜಪಿಸಬೇಕು. ಹಾಗೂ ಮೂರು ಅಥವಾ ಒಂದು ಮಂತ್ರದ ದಾನ ಸಂಕಲ್ಪವನ್ನು ಸತ್ಯಲೋಕವಾಸಿಗೆ ಮಾಡಬೇಕು. ನಿಮಗೆ ಸರಿ ಎನಿಸುವಷ್ಟು ಒಂದು, ಎರಡು, ಮೂರರವರೆಗೆ ಮಂತ್ರ ಜಪದ ಫಲವನ್ನು ಅವರಿಗೆ ದಾನ ಮಾಡಬೇಕು. ಪ್ರತಿದಿನದಂತೆ ಜ್ಯೋತಿ ಬೆಳಗಿಸುವುದು, ಆರತಿ ಮಾಡುವುದು, ನಾಮಸ್ಮರಣೆ ಮಾಡುವುದು ಮುಂತಾದವುಗಳನ್ನು ಮಾಡಬೇಕು. ಇದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಕಬೀರ್, ಸಾಥಿ ಹಮಾರೆ ಚಲೇ ಗಯೆ, ಹಮ್ ಭೀ ಚಾಲನ್ ಹಾರ್ ।
ಕೋಯೆ ಕಾಗಜ್ ಮೇ ಬಾಕಿ ರಹ್ ರಹೀ, ತಾತೇ ಲಾಗ್ ರಹೀ ವಾರ್ ॥
ಕಬೀರ್, ದೇಹ್ ಪಡೀ ತೋ ಕ್ಯಾ ಹುವಾ, ಜೂತಾ ಸಭೀ ಪಟೀಟ್ ।
ಪಕ್ಷಿ ಉಡ್‌ಯಾ ಆಕಾಶ್ ಕೂ, ಚಲತಾ ಕರ್ ಗಯಾ ಬೀಟ್ ॥

## "ಕರ್ಮ ಕಾಂಡದ ವಿಷಯದಲ್ಲಿ ಸತ್ಯಕಥೆ"

ನನ್ನ (ಸಂತ ರಾಮ್‌ಪಾಲ್ ದಾಸರ) ಪೂಜ್ಯ ಗುರುದೇವ ಸ್ವಾಮೀ ರಾಮದೇವಾನಂದ ಮಹಾರಾಜರು ತಮ್ಮ 16 ವರ್ಷ ವಯಸ್ಸಿನಲ್ಲಿ ಒಬ್ಬ ಮಹಾತ್ಮರ ಸತ್ಸಂಗವನ್ನು ಕೇಳಿದ್ದರಿಂದ ವೈರಾಗ್ಯ ಉಂಟಾಯಿತು. ಒಂದು ದಿನ ಹೊಲಕ್ಕೆ ಹೋಗಿದ್ದರು. ಪಕ್ಕದಲ್ಲಿಯೇ ಒಂದು ತೋಟವಿತ್ತು. ಆ ತೋಟಕ್ಕೆ ಹೋದ ಗುರುಗಳು ಯಾವುದೋ ಸತ್ತ ಮೃಗದ ಮೂಳೆಗಳ ಬಳಿ ತಮ್ಮ ಬಟ್ಟೆಯನ್ನು ಹರಿದು ಎಸೆದು ಬಿಟ್ಟರು. ಮತ್ತು ಸ್ವತಃ ಮಹಾತ್ಮರ ಜೊತೆಯಲ್ಲಿ ಹೋಗಿ ಬಿಟ್ಟರು.

ಯಾವಾಗ ಅವರ ಹುಡುಕಾಟ ಶುರುವಾಯಿತೋ, ಆಗ ಅವರ ಮನೆಯವರು ತೋಟದಲ್ಲಿ ಮೂಳೆಗಳ ಬಳಿ ಹರಿದು ಹಾಕಿದ ಬಟ್ಟೆ ದೊರಕಿತು. ಅದನ್ನು ಕಂಡು, ಯಾವುದೋ ಕಾಡು ಪ್ರಾಣಿ ಅವರನ್ನು ತಿಂದಿರಬೇಕೆಂದು ತಿಳಿದುಕೊಂಡು ಬಿಟ್ಟರು. ಹರಿದ ಬಟ್ಟೆ ಮತ್ತು ಮೂಳೆಗಳನ್ನು ತೆಗೆದುಕೊಂಡು ಹೋಗಿ ಅಂತಿಮ ಸಂಸ್ಕಾರವನ್ನೂ ಮಾಡಿದರು. ಅದರ ನಂತರ 13 ದಿನದ ಕಾರ್ಯ ಮತ್ತು 6 ತಿಂಗಳ ಆಚರಣೆಯನ್ನು ಮಾಡಿದರು. ನಂತರ ಶ್ರಾದ್ಧವನ್ನೂ ಮಾಡಿದರು.

ನನ್ನ ಪೂಜ್ಯ ಗುರುದೇವರು ವೃದ್ಧರಾದಾಗ ಒಂದು ಬಾರಿ ಅವರ ಮನೆಗೆ ಹೋದರು. ಆಗ ಅವರ ಮನೆಯವರಿಗೆ ಇವರು ಬದುಕಿದ್ದಾರೆ ಹಾಗೂ ಮನೆ ಬಿಟ್ಟು ಹೋಗಿದ್ದಾರೆಂದು ತಿಳಿಯಿತು. ಗುರುಗಳಿಗೆ ಮನೆಯವರು ಹೇಳಿದ್ದೇನೆಂದರೆ,"ಯಾವಾಗ ಅವರು ಮನೆ ಬಿಟ್ಟು ಹೊರಟರೋ, ಆ ದಿನ ಇವರ ಹುಡುಕಾಟ ನಡೆಯಿತು. ತೋಟದಲ್ಲಿ ಇವರ ಹರಿದ ಬಟ್ಟೆ ಪಕ್ಕದಲ್ಲಿ ಕೆಲವು ಮೂಳೆಗಳನ್ನು ಕಂಡು, ಯಾವುದೋ ಕಾಡು ಪ್ರಾಣಿ ಹುಡುಗನನ್ನು ತಿಂದಿರಬಹುದೆಂದು ಯೋಚಿಸಿದೆವು ಮತ್ತು ಆ ಬಟ್ಟೆ ಮತ್ತು ಮೂಳೆಗಳನ್ನು ಮನೆಗೆ ತಂದು ಅಂತಿಮ ಸಂಸ್ಕಾರವನ್ನು ಮಾಡಿದೆವು".

ಆಮೇಲೆ ನಾನು (ಸಂತ ರಾಮ್‌ಪಾಲ್ ದಾಸ್) ನನ್ನ ಪೂಜ್ಯ ಗುರುಗಳ ತಮ್ಮನ ಪತ್ನಿಯನ್ನು ಹೀಗೆ ಕೇಳಿದೆ. ಪೂಜ್ಯ ಗುರುಗಳು ಮನೆ ಬಿಟ್ಟು ಹೊರಟು ಹೋದಾಗ ನೀವೇನು ಮಾಡಿದಿರಿ? ಆಕೆ ಉತ್ತರಿಸುತ್ತಾ, "ಯಾವಾಗ ನಾನು ಮದುವೆಯಾಗಿ ಈ ಮನೆಗೆ ಬಂದೆನೋ, ಆಗಿನಿಂದಲೂ ಇವರ ಶ್ರಾದ್ಧವನ್ನು ಆಚರಿಸುವುದನ್ನೇ ನೋಡುತ್ತಿದ್ದೇನೆ. ನಾನು ನನ್ನ ಕೈಯಿಂದ ಸುಮಾರು 70 ಶ್ರಾದ್ಧಗಳನ್ನು ಆಚರಿಸಿದ್ದೇನೆ. ಯಾವಾಗ ಮನೆಯಲ್ಲಿ ಯಾವುದಾದರೂ ನಷ್ಟವಾಗುತ್ತಿತ್ತೋ ಅಂದರೆ ಎಮ್ಮೆ ಹಾಲು

ಕೊಡದೇ ಇರುವುದು, ಕೆಚ್ಚಲಲ್ಲಿ ತೊಂದರೆ ಬರುವುದು, ಹೀಗೆ ಬೇರೆ ಯಾವುದೇ ನಷ್ಟವಾದಾಗ ನಾವು ಬುದ್ಧಿವಂತರ ಬಳಿಗೆ ಪರಿಹಾರ ಪಡೆಯಲು ಹೋಗುತ್ತಿದ್ದೆವು. ಆಗ ಅವರು ಹೇಳುತ್ತಿದ್ದರು. ನಿಮ್ಮ ಮನೆಯಲ್ಲಿ ಯಾರೋ ಒಬ್ಬರು ಸಂತಾನಹೀನರ ಸಾವಾಗಿದೆ. (ಬ್ರಹ್ಮಚಾರಿ) ಆ ವಿಷಯವು ನಿಮ್ಮನ್ನು ದುಃಖಿಗೊಳ್ಳುವಂತೆ ಮಾಡುತ್ತಿದೆ". ನಂತರ ನಾವು ಅವರಿಗೆ ಬಟ್ಟೆ ಮೊದಲಾದುವನ್ನು ನೀಡುತ್ತಿದ್ದೆವು.

ಆಗ ನಾನು ಕೇಳಿದೆ,"ಇವರಂತೂ ಪ್ರಪಂಚದ ಉದ್ಧಾರವನ್ನು ಮಾಡುತ್ತಿರುವರು, ಇವರು ಯಾರಿಗೂ ದುಃಖ ಕೊಡುವವರಲ್ಲ, ಸುಖದಾತನಾಗಿದ್ದಾರೆ". ಪುನಃ ನಾನು (ಸಂತ ರಾಮ್‌ಪಾಲ್ ದಾಸರು) ಆ ವೃದ್ಧೆಯನ್ನು ಕೇಳಿದೆ, "ಈಗಂತೂ ಅವರು ನಿಮ್ಮ ಮುಂದಿದ್ದಾರೆ, ಈಗ ಆ ವ್ಯರ್ಥ ಸಾಧನೆಯಾದ ಶ್ರಾದ್ಧ ಮಾಡುವ ಕ್ರಮವನ್ನು ನಿಲ್ಲಿಸಿಬಿಡಿ. ಆಗ ಆ ವೃದ್ಧೆಯು ಹೀಗೆ ಹೇಳಿದಳು, "ಇದು ಹಿಂದಿನ ಪರಂಪರೆಯಾಗಿದೆ. ಇದನ್ನು ಹೇಗೆ ಬಿಟ್ಟು ಬಿಡಲಿ? ಅರ್ಥಾತ್ ಪ್ರಾಚೀನ ಕ್ರಮಗಳಲ್ಲಿ ಇಷ್ಟೊಂದು ತಲ್ಲೀನರಾಗಿ ಬಿಟ್ಟಿದ್ದೇವೆ. ಸಾಕ್ಷ್ಯಾಧಾರಗಳು ದೊರಕಿದರೂ ಕೂಡಾ ಅದು ತಪ್ಪು ಮಾಡುತ್ತಿದ್ದೇವೆಂದು ಅನಿಸಿದರೂ ಬಿಡಲು ಅಸಾಧ್ಯವಾಗಿದೆ". ಇದರಿಂದ ನಮಗೆ ತಿಳಿಯುವುದೇನೆಂದರೆ ಶ್ರಾದ್ಧ ಮಾಡುವುದು, ಪಿತೃ ಪೂಜೆ ಮಾಡುವುದು ಇವೆಲ್ಲವೂ ವ್ಯರ್ಥವಾಗಿದೆ.

**11) ಮಕ್ಕಳ ಜನ್ಮವಾದಾಗ ಶಾಸ್ತ್ರ ವಿರುದ್ಧ ಪೂಜೆಯ ನಿಷೇಧ :–**

ಮಕ್ಕಳ ಜನನವಾದಾಗ ಆರನೆ ದಿನದ ಕಾರ್ಯವಾಗಲೀ, ಯಾವುದೇ ಕಾರ್ಯವನ್ನೂ ಆಚರಿಸುವಂತಿಲ್ಲ. ಸೂತಕವಿದ್ದಾಗಲೂ ಸಹ ಪ್ರತಿದಿನ ಮಾಡುವ ರೀತಿಯಲ್ಲಿಯೇ ಪೂಜೆ, ಭಕ್ತಿ, ಆರತಿ, ಜ್ಯೋತಿ ಬೆಳಗಿಸುವುದನ್ನು ನಿಲ್ಲಿಸಬಾರದು.

ಈ ಸಂದರ್ಭದಲ್ಲಿ ಒಂದು ಕಥೆಯನ್ನು ಹೇಳುವೆನು. ಒಬ್ಬ ವ್ಯಕ್ತಿಗೆ ಮದುವೆಯಾದ 10 ವರ್ಷದ ನಂತರ ಪುತ್ರನ ಜನ್ಮವಾಯಿತು. ಪುತ್ರಪ್ರಾಪ್ತಿಯಿಂದ ತುಂಬಾ ಸಂತೋಷಗೊಂಡ ಅವನು ಆ ಆನಂದವನ್ನು ಹಂಚಿಕೊಂಡನು. 20–25 ಹಳ್ಳಿಗಳನ್ನು ಭೋಜನಕ್ಕೋಸ್ಕರ ಆಮಂತ್ರಿಸಿದನು. ಸಂಗೀತ, ವಾದ್ಯಗಳಮೇಳ, ನೃತ್ಯ ಇವೆಲ್ಲವೂ ನಡೆಯಿತು. ಅರ್ಥಾತ್ ಹಣ ವಿಪರೀತವಾಗಿ ಖರ್ಚಾಯಿತು. ಇದಾದ ಒಂದು ವರ್ಷದ ನಂತರ ಆ ಮಗು ಮರಣ ಹೊಂದಿತು. ಆ ಸಂಸಾರವು ಅತಿಯಾದ ವೇದನೆಯಿಂದ (ಚಿಂತೆಯಿಂದ) ರೋಧಿಸತೊಡಗಿತು ಮತ್ತು ತಮ್ಮ ದೌರ್ಭಾಗ್ಯವನ್ನು ಹಳಿಯತೊಡಗಿತು. ಇದರಿಂದ ಕಬೀರ್ ಪರಮೇಶ್ವರರು ನಮಗೆ ಹೇಳುತ್ತಾರೆ,

ಕಬೀರ್, ಬೇಟಾ ಜಾಯಾ ಖುಷಿ ಹುಯೀ, ಬಹುತ್ ಬಚಾಯೆ ಥಾಲ್ ।
ಆನಾ ಜಾನಾ ಲಗ್ ರಹಾ, ಜ್ಯೋಂ ಕೀಡೀ ಕಾ ನಾಲ್ ॥

ಕಬೀರ್, ಪತಝುಡ್ ಆವತ್ ದೇಖ್ ಕರ್, ಬನ್ ರೋವ್ಯೆ ಮನ್ ಮಾಹೀಂ ।
ಊಂಚೀ ಡಾಲಿ ಪಾತ ಥೆ, ಅಬ್ ಪೀಲೆ ಹೋ ಹೋ ಜಾಹಿಂ ॥

ಕಬೀರ್, ಪಾತ್ ಝುಡಂತಾ ಯೂಂ ಕಹ್ಯೆ, ಸುನ್ ಭಯೀ ತರುವರ ರಾಯ್ ।
ಅಬ್ ಕೆ ಬಿಛುಡೆ ನಹೀಂ ಮಿಲಾ, ನ ಜಾನೆ ಕಹಾಂ ಗಿರೆಂಗೇ ಜಾಯ್ ।

ಕಬೀರ್, ತರುವರ್ ಕಹತಾ ಪಾತ್ ಸೆ, ಸುನೋಂ ಪಾತ್ ಏಕ್ ಬಾತ್ ।
ಯಹಾಂ ಕೀ ಯಾಹೆ ರೀತಿ ಹೈ, ಏಕ್ ಆವತ್ ಏಕ್ ಜಾತ್ ॥

**12. ಪುಣ್ಯ ಕ್ಷೇತ್ರದಲ್ಲಿ ಕೇಶ ಮುಂಡನ ಮಾಡುವುದು ನಿಷೇಧ :–**

ಮಕ್ಕಳ ಕೇಶಮುಂಡನ ಮಾಡಲು ಯಾವಕ್ಷೇತ್ರಕ್ಕೂ ಹೋಗುವ ಅಗತ್ಯವಿಲ್ಲ. ಯಾವಾಗ ಕೂದಲು ಉದ್ದ ಬೆಳೆಯುತ್ತದೆಯೋ, ಆಗ ಕತ್ತರಿಸಿ ಎಸೆದು ಬಿಡಿ. ಒಂದು ಮಂದಿರದಲ್ಲಿ ನಾವು

ನೋಡಿದಾಗ, ಶ್ರದ್ಧಾಳು ಭಕ್ತರು ತಮ್ಮ ಮಗಳು ಅಥವಾ ಮಗನ ಕೂದಲನ್ನು ತೆಗೆಸಲು ಬಂದಿದ್ದರು. ಅಲ್ಲಿದ್ದ ಕ್ಷೌರಿಕನು ಹೊರಗಡೆ ಯಾವ ರೇಟ್ ಇತ್ತೋ ಅದರ ಮೂರು ಪಟ್ಟು ಹಣ ತೆಗೆದುಕೊಂಡು ಒಂದು ಬಾರಿ ಕತ್ತರಿಯಿಂದ ಎಷ್ಟು ಕತ್ತರಿಸಬಹುದೋ ಅಷ್ಟು ಕೂದಲನ್ನು ಕತ್ತರಿಸಿ ತಂದೆ–ತಾಯಿಯ ಕೈಯಲ್ಲಿಟ್ಟನು. ಅವರುಗಳು ಆ ಕೂದಲನ್ನು ದೇವರಿಗೆ ಬಹಳ ಶ್ರದ್ಧೆಯಿಂದ ಅರ್ಪಿಸಿದರು. ಪೂಜಾರಿಯು ಆ ಕೂದಲನ್ನು ಒಂದು ಚೀಲದಲ್ಲಿ ಹಾಕಿದನು. ರಾತ್ರಿ ಅದನ್ನು ತೆಗೆದುಕೊಂಡು ಹೋಗಿ ದೂರ ಯಾರು ಇಲ್ಲದ ಸ್ಥಳದಲ್ಲಿ ಎಸೆದು ಬಿಟ್ಟನು. ಇದು ಕೇವಲ ನಾಟಕವಾಗಿದೆ. ಯಾಕೆ ಮೊದಲಿನ ರೀತಿಯಲ್ಲಿ ನಾವು ಕೂದಲನ್ನು ತೆಗೆಸಿ ಹೊರಗೆ ಹಾಕಬಾರದು? ಪರಮಾತ್ಮನು ತನ್ನ ಹೆಸರಿನ ಜಪದಿಂದ ಸಂತೋಷಗೊಳ್ಳುತ್ತಾನೆ. ತೋರುಗಾಣಿಕೆಯಿಂದಲ್ಲ.

**13. ನಾಮಸ್ಮರಣೆಯಿಂದ ಸುಖ:–**

ನಾಮೋಪದೇಶ (ದೀಕ್ಷೆ) ಕೇವಲ ದುಃಖ ನಿವಾರಣೆಯ ಅರ್ಥದಿಂದ ಪಡೆಯುವುದಲ್ಲ, ಬದಲಾಗಿ ಆತ್ಮಕಲ್ಯಾಣಕ್ಕೋಸ್ಕರ ಪಡೆದುಕೊಳ್ಳಬೇಕು. ಮತ್ತೆ ಈ ಸ್ಮರಣೆಯಿಂದ ಎಲ್ಲಾ ಸುಖಗಳು ತಮ್ಮಷ್ಟಕ್ಕೆ ತಾವು ನಮ್ಮ ಬಳಿಗೆ ಬರುತ್ತವೆ.

"ಕಬೀರ್, ಸುಮಿರಣ್ ಸೆ ಸುಖ್ ಹೋತ್ ಹೈ, ಸುಮಿರಣ್ ಸೆ ದುಃಖ್ ಜಾಎ ।
ಕಹೈ ಕಬೀರ್ ಸುಮಿರಣ್ ಕಿಎ, ಸಾಂಈ ಮಾಹಿಂ ಸಮಾಯ್ ॥"

**14. ವ್ಯಭಿಚಾರದ ನಿಷೇಧ :–**

ಪರಸ್ತ್ರೀಯನ್ನು ತಾಯಿ–ಮಗಳು–ಸಹೋದರಿಯ ದೃಷ್ಟಿಯಿಂದ ನೋಡಬೇಕು. ವ್ಯಭಿಚಾರವು ಮಹಾಪಾಪ ಹೇಗೆಂದರೆ

ಗರೀಬ್, ಪರದ್ವಾರಾ ಸ್ತ್ರೀ ಕಾ ಖೋಲೈ । ಸತ್ತರ್ ಜನ್ಮ ಅಂಧಾ ಹೋ ಡೋಲೈ ।
ಸುರಾಪಾನ್ ಮದ್ಯ ಮಾಂಸಾಹಾರೀ । ಗವನ್ ಕರೆಂ ಭೋಗೈ ಪರ್ ನಾರೀ ॥
ಸತ್ತರ್ ಜನ್‌ಮ್ ಕಟತ್ ಹೈಂ ಶೀಶಂ । ಸಾಕ್ಷೀ ಸಾಹಿಬ್ ಹೈ ಜಗದೀಶಂ ॥
ಪರನಾರೀ ನಾ ಪರಸಿಯೋಂ, ಮಾನೋ ವಚನ್ ಹಮಾರ ।
ಭವನ್ ಚತುರ್ದಶ್ ತಾಸ್ ಸಿರ್, ತ್ರಿಲೋಕೀ ಕಾ ಭಾರ್ ॥
ಪರನಾರೀ ನಾ ಪರಸಿಯೋ, ಸುನೋ ಶಬ್ದ ಸಲತಂತ್ ।
ಧರ್ಮರಾಯ್ ಕೆ ಖಂಬ್ ಸೆ, ಅರ್ಧಮುಖೀ ಲಟಕಂತ್ ॥

**15. ನಿಂದನೆಯನ್ನು ಕೇಳುವುದು ಮತ್ತು ಮಾಡುವುದು ನಿಷೇಧ :–**

ತನ್ನ ಗುರುವಿನ ನಿಂದನೆಯನ್ನು ಅಪ್ಪಿತಪ್ಪಿಯೂ ಕೂಡ ಮಾಡಬಾರದು ಹಾಗೂ ಕೇಳಬಾರದು. ಕೇಳುವುದರ ಅಭಿಪ್ರಾಯ ಹೀಗಿದೆ. ಒಂದು ವೇಳೆ ಯಾರಾದರೂ ನಿಮ್ಮ ಗುರುಗಳ ವಿಷಯದಲ್ಲಿ ಕೆಟ್ಟ ಅಥವಾ ಸುಳ್ಳು ವಿಷಯ ಕೇಳಿದಾಗ ಜಗಳವಾಡಬಾರದು. ಹಿಂದೆ ಮುಂದೆ ಯೋಚಿಸದೆ ಮಾತನಾಡುತ್ತಿದ್ದಾನೆ ಅರ್ಥಾತ್ ಸುಳ್ಳು ಹೇಳುತ್ತಿದ್ದಾನೆ ಎಂದು ಅರ್ಥೈಸಿಕೊಳ್ಳಬೇಕು.

ಗುರು ಕೀ ನಿಂದಾ ಸುನೈ ಜೋ ಕಾನಾ । ತಾಕೋ ನಿಶ್ಚಯ್ ನರಕ್ ನಿದಾನಾ ॥
ಅಪನ್ ಮುಖ್ ನಿಂದಾ ಜೋ ಕರಹೀಂ । ಶುಕರ್ ಶ್ವಾನ್ ಗರ್ಭ ಮೆಂ ಪರಹೀಂ ॥

ನಿಂದನೆಯನ್ನಂತೂ ಯಾರಿಗೂ ಮಾಡಬಾರದು ಮತ್ತು ನಿಂದನೆಯನ್ನು ಕೇಳಬಾರದು. ಅವನು ಎಷ್ಟೇ ಸಾಮಾನ್ಯ ವ್ಯಕ್ತಿಯಾಗಿದ್ದರೂ ಕಬೀರ್ ಪರಮೇಶ್ವರರು ಹೀಗೆ ಹೇಳುತ್ತಾರೆ.

ತಿನಕಾ ಕಬಹೂ ನ ನಿಂದಿಯೇ, ಜೋ ಪಾಂವ್ ತಲೆ ಹೋ ।

ಕಬಹು ಉತ್ ಆಖಿನ್ ಪಡೆ. ಪೀರ ಘನೇರೀ ಹೋ ॥

**16. ಗುರು ದರ್ಶನದ ಮಹಿಮೆ :–**

ಸತ್ಸಂಗಕ್ಕೆ ಸಮಯ ಸಿಕ್ಕ ತಕ್ಷಣ ಬರುವ ಪ್ರಯತ್ನ ಮಾಡಬೇಕು ಮತ್ತು ಸತ್ಸಂಗದಲ್ಲಿ ಜಂಭ ಹಾಗೂ ದೊಡ್ಡಸ್ತಿಕೆ ಎಲ್ಲಾ ಮಾಡುವ ಹಾಗಿಲ್ಲ. ಅಲ್ಲದೆ ತನ್ನನ್ನು ತಾನು ಒಂದು ರೋಗಿಯೆಂದು ತಿಳಿದು ಸತ್ಸಂಗಕ್ಕೆ ಬರಬೇಕು. ಹೇಗೆಂದರೆ ರೋಗಿ ಬೇಕಾದರೆ ಎಷ್ಟೇ ಹಣ ಉಳ್ಳವನಾಗಿರಲಿ, ದೊಡ್ಡ ಪದವಿಯನ್ನು ಪಡೆದವನಾಗಿರಲಿ, ಯಾವಾಗ ಆಸ್ಪತ್ರೆಗೆ ಹೋಗುತ್ತಾನೋ, ಆಗ ಆತನ ಉದ್ದೇಶ ಕೇವಲ ರೋಗ ಮುಕ್ತನಾಗಿರುವುದಾಗಿರುತ್ತದೆ. ಅಲ್ಲಿ ಡಾಕ್ಟರ್ ಮಲಗಲು ಹೇಳಿದರೆ ಮಲಗುತ್ತಾನೆ. ಕೂರಲು ಹೇಳಿದರೆ ಕುಳಿತುಕೊಳ್ಳುತ್ತಾನೆ, ಹೊರಗೆ ಹೋಗಲು ಆಜ್ಞಾಪಿಸಿದರೆ ಹೊರಗೆ ಹೋಗುತ್ತಾನೆ ಮತ್ತೆ ಒಳಗೆ ಬರಲು ಆದೇಶ ದೊರೆತರೆ ಸುಮ್ಮನೆ ಒಳಗೆ ಬರುತ್ತಾನೆ. ಇದೇ ರೀತಿ ಒಂದು ವೇಳೆ ನೀವು ಸತ್ಸಂಗಕ್ಕೆ ಬಂದಿರಾದರೆ ನಿಮಗೆ ಸತ್ಸಂಗದ ಲಾಭ ದೊರೆಯುವುದು. ಇಲ್ಲದಿದ್ದರೆ ನೀವು ಬಂದಿದ್ದೂ ಕೂಡಾ ಫಲವಿಲ್ಲದಂತಾಗುವುದು. ಸತ್ಸಂಗದಲ್ಲಿ ಎಲ್ಲಿ ನಿಮಗೆ ಕೂರಲು ಜಾಗ ಸಿಗುವುದೋ ಅಲ್ಲಿಯೇ ಕುಳಿತುಕೊಂಡುಬಿಡಿ. ತಿನ್ನಲು ಏನು ಸಿಗುವುದೋ ಅದನ್ನೇ ಪರಮಾತ್ಮ ಕಬೀರ್ ಪರಮೇಶ್ವರರ ಅಪ್ಪಣೆಯಿಂದ ದೊರೆತ ಪ್ರಸಾದವೆಂದು ತಿಳಿದು ತಿಂದು ಪ್ರಸನ್ನರಾಗಿ ಇರಿ.

ಕಬೀರ್, ಸಂತ್ ಮಿಲನ್ ಕೂಂ ಚಾಲಿಯೆ, ತಜ್ ಮಯಾ ಅಭಿಮಾನ್ ।
ಜೋ–ಜೋ ಕದಮ್ ಆಗೆ ರಖೆ, ಓಹೀ ಯಜ್ಞ್ ಸಮಾನ್ ॥
ಕಬೀರ್, ಸಂತ್ ಮಿಲನ್ ಕೂಂ ಜಾಈಎ, ದಿನ್ ಮೇ ಕಈ–ಕಈ ಬಾರ್ ।
ಆಸೋಜ್ ಕೆ ಮೇಹ್ ಜ್ಯೋಂ, ಘನಾಕರೆ ಉಪಕಾರ್ ॥
ಕಬೀರ್, ದರ್ಶನ್ ಸಾಧು ಕಾ, ಪರಮಾತ್ಮಾ ಆವೈ ಯಾದ್ ।
ಲೇಖೆ ಮೇ ವೋಹೆ ಘಡೀ, ಬಾಕೀ ಕೆ ದಿನ್ ಬಾದ್ ।
ಕಬೀರ್, ದರ್ಶನ್ ಸಾಧು ಕಾ, ಮುಖ ಪರ್ ಬಸೈ ಸುಹಾಗ್ ।
ದರ್ಶ ಉನ್‌ಹೀ ಕೋ ಹೋತ್ ಹೈ, ಜಿನಕೆ ಪೂರ್ಣ್ ಭಾಗ್ ॥

**17. ಗುರು ಮಹಿಮೆ :–**

ಒಂದು ವೇಳೆ ಎಲ್ಲಿಯಾದರೂ ಪಾಠ ಅಥವಾ ಸತ್ಸಂಗಕ್ಕೆಹೋಗಬೇಕಾದರೆ ಅಥವಾ ಗುರುಗಳ ದರ್ಶನಕ್ಕೆ ಹೋಗಬೇಕಾದರೆ ಮೊಟ್ಟ ಮೊದಲು ಗುರುಗಳಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಬೇಕು. ನಂತರ ಸದ್ಗ್ರಂಥ ಸಾಹೀಬ್ ಅಥವಾ ಕಬೀರ್ ಪರಮೇಶ್ವರರ ಮೂರ್ತಿ, ಗರೀಬ್‌ದಾಸರ ಮೂರ್ತಿ ಅಥವಾ ಸ್ವಾಮಿ ರಾಮದೇವಾನಂದರ ಮೂರ್ತಿಗೆ ನಮಸ್ಕರಿಸಬೇಕು. ಇದರಿಂದ ಕೇವಲ ಭಕ್ತಿ ಭಾವನೆ ಮನದಲ್ಲಿರುವುದು. ಮೂರ್ತಿ ಪೂಜೆ ಮಾಡಬಾರದು. ನಮಸ್ಕಾರ ಮಾಡುವುದು ಪೂಜಾಕಾರ್ಯದಲ್ಲಿ ಸೇರುವುದಿಲ್ಲ. ಅದು ಭಕ್ತನ ಶ್ರದ್ಧೆಯನ್ನು ಮನದಲ್ಲಿರಿಸಿಕೊಳ್ಳಲು ಸಹಕರಿಸುವುದು. ಪೂಜೆ ಎಂದರೆ ಗುರುವಿನ ಅಥವಾ ಪ್ರಭುವಿನ ನಾಮಸ್ಮರಣೆಯನ್ನು ಮಾಡುವುದು, ಆ ಮಂತ್ರವು ಭವಸಾಗರವನ್ನು ದಾಟಲು ನಮಗೆ ಶಕ್ತಿ ನೀಡುತ್ತದೆ,

ಕಬೀರ್, ಗುರು ಗೋವಿಂದ್ ದೋವು ಖಡೆ, ಕಾಕೆ ಲಾಗುಂ ಪಾಯ್ ।
ಬಲಿಹಾರಿ ಗುರು ಆಪನೆ, ಜಿನ್ ಗೋವಿಂದ್ ದಿಯೋ ಮಿಲಾಯ್ ॥
ಕಬೀರ್, ಗುರು ಬಡೆ ಹೈಂ ಗೋವಿಂದ್ ಸೆ, ಮನ್ ಮೆಂ ದೇಖ್ ವಿಚಾರ್ ।
ಹರಿ ಸುಮರೆ ಸೋ ರಹ್ ಗಯೆ, ಗುರು ಭಜೆ ಹೋಯ್ ಪಾರ್ ॥

ಕಬೀರ್, ಹರಿ ಕೆ ರೂಠತಾಂ, ಗುರು ಕೀ ಶರಣ್ ಮೆಂ ಜಾಯ್ ।
ಕಬೀರ್ ಗುರು ಜೈ ರೂಠಜಾಂ, ಹರಿ ನಹೀಂ ಹೋತ್ ಸಹಾಯ್ ॥

ಕಬೀರ್, ಸಾತ್ ಸಮುಂದ್ರ ಕೀ ಮಸಿ ಕರೂಂ, ಲೇಖನಿ ಕರೂಂ ಬನಿರಾಯ್ ।
ಧರತೀ ಕಾ ಕಾಗಜ್ ಕರೂಂ, ತೋ ಗುರು ಗುನ್ ಲಿಖಾ ನ ಜಾಯ್ ॥

**18. ಮಾಂಸ ಭಕ್ಷಣೆಯ ನಿಷೇಧ :–**

**ಮೊಟ್ಟೆ, ಮಾಂಸ ಭಕ್ಷಣೆ ಮತ್ತು ಜೀವಹಿಂಸೆಯನ್ನು ಮಾಡಬಾರದು. ಇದು ಮಹಾಪಾಪವಾಗುತ್ತದೆ. ಸಾಹೇಬ್ ಕಬೀರ ಮಹಾರಾಜರು ಮತ್ತು ಗರೀಬ್‌ದಾಸ ಮಹಾರಾಜರು ಹೇಳಿದ್ದಾರೆ :–**

ಕಬೀರ್, ಜೀವಹ್‌ನೆ ಹಿಂಸಾ ಕರೆ ಪ್ರಕಟ್ ಪಾಪ್ ಸಿರ್ ಹೋಯ್ ।
ನಿಗಮ್ ಪುನಿ ಐಸೆ ಪಾಪ್ ತೆಂ ಭಿಸ್ತ್ ಗಯಾ ನಹಿಂ ಕೋಯ್ ॥ 1 ॥

ಕಬೀರ್, ತಿಲ್‌ಭರ್ ಮಛಲೀ ಖಾಯಕೆ, ಕೋಟಿ ಗಊ ದೆ ದಾನ್ ।
ಕಾಶೀ ಕರೌತ್ ಲೆ ಮರೆ, ತೋ ಭೀ ನರಕ್ ನಿದಾನ್ ॥ 2 ॥

ಕಬೀರ್, ಬಕರೀ ಪಾತೀ ಖಾತ್ ಹೈ ತಾಕೀ ಕಾಢೀ ಖಾಲ್ ।
ಜೋ ಬಕರೀಕೊ ಖಾತ್ ಹೈ, ತಿನಕಾ ಕೌನ್ ಹವಾಲ್ ॥ 3 ॥

ಕಬೀರ್, ಗಲಾ ಕಾಟಿ ಕಲಮಾ ಭರೆ, ಕೀಯಾ ಕಹೈ ಹಲಾಲ್ ।
ಸಾಹಬ್ ಲೇಖಾ ಮಾಂಗಸೀ, ತಬ್ ಹೋಸೀ ಕೌನ್ ಹವಾಲ್ ॥ 4 ॥

ಕಬೀರ್, ದಿನ್ ಕೋ ರೋಜಾ ರಹತ್ ಹೈ, ರಾತ್ ಹನತ್ ಹೈಂ ಗಾಯ್ ।
ಯಹ್ ಖೂನ್ ವಹ್ ವಂದಗೀ, ಕಹುಂ ಕ್ಯೋಂ ಖುಷೀ ಖುದಾಯ್ ॥ 5 ॥

ಕಬೀರ್, ಕಬೀರಾ ತೇಯ್ ಪೀರ್ ಹೈ, ಜೋ ಜಾನೈ ಪರ್ ಪೀರ್ ।
ಜೋ ಪರ್ ಪೀರ್ ನ ಜಾನಿ ಹೈ, ಸೋ ಕಾಫಿರ್ ಬೇಪೀರ್ ॥ 6 ॥

ಕಬೀರ್, ಖೂಬ್ ಖಾನಾ ಹೈ ಖೀಚಡೀ, ಮಾಂಹೀ ಪರೀ ಟುಕ್ ಲೌನ್ ।
ಮಾಂಸ್ ಪರಾಯಾ ಖಾಯ್ ಕೈ, ಗಲಾ ಕಟಾವೈ ಕೌನ್ ॥ 7 ॥

ಕಬೀರ್, ಮುಸಲ್ಮಾನ್ ಮಾರೈಂ ಕರದಸೋ, ಹಿಂದೂ ಮಾರೈ ತರವಾರ್ ।
ಕಹೈ ಕಬೀರ್ ದೊನೂಂ ಮಿಲಿ, ಜೈಹೈಂ ಯಮಕೆ ದ್ವಾರ್ ॥ 8 ॥

ಕಬೀರ್, ಮಾಂಸ್ ಅಹಾರೀ ಮಾನವ್, ಪ್ರತ್ಯಕ್ಷ್ ರಾಕ್ಷಸ್ ಜಾನಿ ।
ತಾಕಿ ಸಂಗತಿ ಮತಿ ಕರೈ, ಹೋಇ ಭಕ್ತಿ ಮೆಂ ಹಾನಿ ॥ 9 ॥

ಕಬೀರ್, ಮಾಂಸ್ ಖಾಂಯ್ ತೆ ಢೇಡ್ ಸಬ್, ಮದ್ ಪೀವೈ ಸೋ ನೀಚ ।
ಕುಲಕೀ ದುರ್‌ಮತಿ ಪರ ಹರೈ, ರಾಮ್ ಕಹೈ ಸೋ ಊಂಚ್ ॥ 10 ॥

ಕಬೀರ್, ಮಾಂಸ್ ಮಛಲಿಯಾ ಖಾತ್ ಹೈಂ, ಸುರಾಪಾನ್ ಸೆ ಹೇತ್ ।
ತೆ ನರ ನರಕೈ ಜಾಹಿಂಗೆ, ಮಾತಾ ಪಿತಾ ಸಮೇತ್ ॥ 11 ॥

ಗರೀಬ್, ಜೀವ್ ಹಿಂಸಾ ಜೋ ಕರತೆ ಹೈಂ, ಯಾ ಆಗೆ ಕ್ಯಾ ಪಾಪ್ ।
ಕಂಟಕ್ ಜುನೀ ಜಿಹಾನ್ ಮೆಂ, ಸಿಂಹ್ ಭೇಡಿಯಾ ಔರ್ ಸಾಂಪ್ ॥

ಝೋಟೆ ಬಕರೆ ಮುರುಗೆ ತಾಈ। ಲೇಖಾ ಸಬ್ ಹೀ ಲೇತ್ ಗುಸಾಯೀ ॥

ಮೃಗ ಮೋರ್ ಮಾರೆ ಮಹಮಂತಾ । ಅಚರಾ ಚರ್ ಹೈ ಜೀವ್ ಅನಂತಾ ॥
ಜಿಹ್ವಾ ಸ್ವಾದ್ ಹಿತೆ ಪ್ರಾನಾ । ನೀಮಾ ನಾಶ್ ಗಯಾ ಹಮ್ ಜಾನಾ ॥
ತೀತರ್ ಲವಾ ಬುಟೇರೀ ಚಿಡಿಯಾ । ಖೂನೀ ಮಾರೆ ಬಡೆ ಅಗಡಿಯಾ ॥
ಅದಲೆ ಬದಲೆ ಲೆಖೆ ಲೇಖಾ । ಸಮಝ್ ದೇಖ್ ಸುನ್ ಜ್ಞಾನ ವಿವೇಕಾ ॥
ಗರೀಬ್, ಶಬ್ದ ಹಮಾರಾ ಮಾನಿಯೋ, ಔರ್ ಸುನತೆ ಹೋ ನರ್ ನಾರಿ ।
ಜೀವ್ ದಯಾ ಬಿನ್ ಕುಫರ್ ಹೈ, ಚಲೆ ಜಮಾನಾ ಹಾರಿ ॥

**ಗೊತ್ತಿಲ್ಲದೇ ಮಾಡಿದ ಹಿಂಸೆ ಪಾಪವಾಗುವುದಿಲ್ಲ. ಮುಕ್ತಿದಾತ ಕಬೀರ್ ಪರಮೇಶ್ವರರು ಹೀಗೆ ಹೇಳುತ್ತಾರೆ:–**

"ಇಚ್ಛಾ ಕರ್ ಮಾರೈ ನಹೀಂ, ಬಿನ್ ಇಚ್ಛಾ ಮರ್ ಜಾಎ ।
ಕಹೈಂ ಕಬೀರ್ ತಾಸ್ ಕಾ ಪಾಪ್ ನಹೀಂ ಲಗಾಯೆ ॥"

**19. ಗುರು ದ್ರೋಹಿ ಸಂಪರ್ಕದ ನಿಷೇಧ :–**

**ಒಂದು ವೇಳೆ ಒಬ್ಬ ಭಕ್ತ ಗುರುದ್ರೋಹ (ಗುರುಗಳಿಂದ ದೂರವಾಗುವನೋ) ಮಾಡುವನೋ, ಅವನು ಮಹಾಪಾಪದಲ್ಲಿ ಮುಳುಗುತ್ತಾನೆ. ಹಾಗೆಯೇ ಯಾರಿಗಾದರೂ ಈ ಮಾರ್ಗ ಸರಿಯಿಲ್ಲ ಎನಿಸಿದರೆ ತನ್ನ ಗುರುವನ್ನು ಬದಲಿಸಬಹುದು. ಆದರೆ ಯಾವ ಭಕ್ತನು ತನ್ನ ಮೊದಲಿನ ಗುರುವಿನೊಡನೆ ದ್ವೇಷಸಾಧನೆ ಅಥವಾ ನಿಂದನೆ ಮಾಡುವನೋ, ಅವನನ್ನು ಗುರುದ್ರೋಹಿ ಎಂದು ಕರೆಯಲಾಗುವದು. ಅಂತಹ ವ್ಯಕ್ತಿಯೊಡನೆ ಭಕ್ತಿಯ ಚರ್ಚೆಯನ್ನು ಮಾಡುವುದರಿಂದ ಉಪದೇಶಕನಿಗೆ ದೋಷವು ಲಭಿಸುವುದು. ಆತನ ಭಕ್ತಿಯು ನಶಿಸಿ ಹೋಗುವುದು.**

ಗರೀಬ್, ಗುರು ದ್ರೋಹಿ ಕೀ ಪೈಡ್ ಪರ್, ಜೆ ಪಗ್ ಆವೈ ಬೀರ್ ।
ಚೌರಾಸೀ ನಿಶ್ಚಯ್ ಪಡೈ, ಸತ್‌ಗುರು ಕಹೈ ಕಬೀರ್ ॥
ಕಬೀರ್, ಜಾನ್ ಬುಝ್ ಸಾಚೀ ತಜೈ, ಕರೈ ಝೂಠೇ ಸೆ ನೇಹ್ ।
ಜಾಕೀ ಸಂಗತ್ ಹೇ ಪ್ರಭು, ಸ್ವಪನ್ ಮೆಂ ಭೀ ನಾ ದೇಹ್ ॥

**ಅರ್ಥಾತ್ ಗುರು ದ್ರೋಹಿಯ ಬಳಿ ಹೋಗುವವನು ಭಕ್ತಿರಹಿತನಾಗಿ ನರಕಕ್ಕೆ ಹೋಗುವನು ಅಥವಾ 84 ಲಕ್ಷ ಯೋನಿಗಳಲ್ಲಿ ಹೋಗುವನು.**

**20. ಜೂಜು ನಿಷೇಧ :– ಜೂಜು, ಇಸ್ಪೀಟು ಆಡಬಾರದು.**

ಕಬೀರ್, ಮಾಂಸ್ ಭಖೈ ಔರ್ ಮದ್ ಪಿಯೆ, ಧನ್ ವೇಶ್ಯಾ ಸೋಂ ಖಾಯ್ ।
ಜುವಾ ಖೇಲಿ ಚೋರಿ ಕರೈ, ಅಂತ್ ಸಮೂಲಾ ಜಾಯ್ ॥

**21. ನೃತ್ಯ–ಗಾನದ ನಿಷೇಧ :–**

**ಸಂತೋಷದ ಸಮಯದಲ್ಲಿ ಯಾವುದೇ ರೀತಿಯ ನೃತ್ಯ ಮತ್ತು ಅಶ್ಲೀಲ ಗೀತೆಗಳನ್ನು ಹಾಡುವುದು ಭಕ್ತಿಭಾವದ ವಿರುದ್ಧವಾಗಿದೆ. ಇದಕ್ಕೊಂದು ಉದಾಹರಣೆ ಎಂದರೆ ಒಂದು ಕಾಲದಲ್ಲಿ ಒಬ್ಬ ವಿಧವೆ ಯಾವುದೋ ಸಂತೋಷ ಕೂಟಕ್ಕೋಸ್ಕರ ನೆಂಟರ ಮನೆಗೆ ಹೋಗಿದ್ದಳು. ಎಲ್ಲರೂ ಸಂತೋಷದಿಂದ ನೃತ್ಯ ಸಂಗೀತದಲ್ಲಿ ಮಗ್ನರಾಗಿದ್ದರು. ಆಕೆ ಮಾತ್ರ ಒಂದು ಕಡೆ ಕುಳಿತು ಭಗವಂತನ ಚಿಂತನೆಯಲ್ಲಿ ತೊಡಗಿದ್ದಳು. ನಂತರ ಅವಳ ನೆಂಟರು ಹೀಗೆ ಪ್ರಶ್ನಿಸಿದರು, "ನೀವು ಏಕೆ ಹೀಗೆ ನಿರಾಶರಾಗಿ ಕುಳಿತಿದ್ದೀರಿ? ನೀವು ಕೂಡಾ ನಮ್ಮ ಹಾಗೇ ನೃತ್ಯ ಮಾಡಿ, ಹಾಡಿ ಮತ್ತು ಸಂತೋಷಪಡಿ". ಈ**

ಮಾತಿಗೆ ಉತ್ತರಿಸುತ್ತಾ ಆ ವಿಧವೆ ಹೇಳುತ್ತಾಳೆ, "ಯಾವ ಋಷಿಯನ್ನು ನಾನು ಆಚರಿಸಲಿ? ಈ ವಿಧವೆಯ ಒಬ್ಬನೇ ಮಗನನ್ನು, ಭಗವಂತ ತನಗೆ ಪ್ರಿಯನನ್ನಾಗಿ ಮಾಡಿಕೊಂಡು ಬಿಟ್ಟಿದ್ದಾನೆ. ಅಂದರೆ ಪರಮಾತ್ಮ ಅವನನ್ನು ತನ್ನ ಬಳಿ ಕರೆದುಕೊಂಡು ಬಿಟ್ಟಿದ್ದಾನೆ. ಈಗ ನನಗೆ ಯಾವ ಸಂತೋಷವಿದೆ?" ಇದೇ ರೀತಿ ಕಾಲನ ಲೋಕದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಸ್ಥಿತಿಯೂ ಇದೆ.

**ಈ ಸಂದರ್ಭಕ್ಕೆ ಹೊಂದುವಂತಹ ಒಂದು ಗುರುನಾನಕರ ವಾಣಿ ಇಲ್ಲಿದೆ,**

ನಾ ಜಾನೆ ಕಾಲ್ ಕೀ ಕರ್ ಡಾರ್ಯೆ, ಕಿಸ್ ವಿಧಿ ಢಲ್ ಪಾಸಾ ವೆ ।
ಜಿನ್ಹಾದೆ ಸಿರ್ ತೆ ಮೌತ್ ಖುಡಗದೀ, ಉನ್ಹಾನೂಂ ಕೇಡಾ ಹಾಂಸಾ ವೆ ॥
ಸಾಧ್ ಮಿಲೆಂ ಸಾಡೀ ಶಾದೀ (ಖುಷೀ) ಹೋಂದೀ,
ಬಿಛಡ್ ದಾಂ ದಿಲ್ ಗಿರಿ (ದುಃಖ) ವೆ ।
ಅಖದೆ ನಾನಕ್ ಸುನೋ ಜಿಹಾನಾ, ಮುಶ್ಕಿಲ್ ಹಾಲ್ ಫಕೀರೀ ವೆ ॥

**ಕಬೀರ್ ಪರಮೇಶ್ವರರು ಕೂಡಾ ಹೀಗೆ ಹೇಳುತ್ತಾರೆ :–**

ಕಬೀರ್, ಝೂಟೆ ಸುಖ್ ಕೋ ಸುಖ್ ಕಹೈ, ಮಾನ್ ರಹಾ ಮನ್ ಮೋದ್ ।
ಸಕಲ್ ಚಬೀನಾ ಕಾಲ್ ಕಾ, ಕುಛ್ ಮುಖ್ ಮೆಂ ಕುಛ್ ಗೋದ್ ॥
ಕಬೀರ್, ಬೇಟಾ ಜಾಯಾ ಖುಷೀ ಹುಯೀ, ಬಹುತ್ ಬಜಾಯೆ ಥಾಲ್ ।
ಆವಣ್ ಜಾಣಾ ಲಗ್ ರಹಾ, ಜ್ಯೋಂ ಕೀಡೀ ಕಾ ನಾಲ್ ॥

**ವಿಶೇಷ :–** ಸ್ತ್ರೀ ಮತ್ತು ಪುರುಷರಿಬ್ಬರಿಗೂ ಪರಮಾತ್ಮನನ್ನು ಪಡೆಯುವ ಹಕ್ಕಿದೆ. ಸ್ತ್ರೀಯರು ತಮ್ಮ ಮಾಸಿಕ ಋತುವಿನ ದಿನದಲ್ಲಿಯೂ ಕೂಡಾ ತಮ್ಮ ದಿನದ ಪೂಜೆ ಹಾಗೂ ದೀಪ ಬೆಳಗಿಸುವುದು ಮುಂತಾದವನ್ನು ನಿಲ್ಲಿಸಬಾರದು. ಯಾವುದೇ ಜನ್ಮ, ಮರಣದಿನಗಳಲ್ಲಿ ಕೂಡಾ ದೈನಿಕ ಪೂಜಾ ಕ್ರಮಗಳನ್ನು ನಿಲ್ಲಿಸಬಾರದು.

**ಟಿಪ್ಪಣಿ :–** ಯಾವ ಭಕ್ತಜನರು ಈ 21 ಸೂತ್ರದ ಆದೇಶಗಳನ್ನು ಪಾಲಿಸುವುದಿಲ್ಲವೋ ಅವರು ನಾಮ ರಹೀತರಾಗುವರು. ಒಂದು ವೇಳೆ ತಿಳಿಯದೆ ತಪ್ಪು ಆಗಿಬಿಟ್ಟರೂ ಅದು ಕ್ಷಮೆಗೆ ಯೋಗ್ಯವಾಗಿರುತ್ತದೆ. ಆದರೆ ತಿಳಿದೂ ತಪ್ಪನ್ನು ಮಾಡಿದರೆ ಆ ಭಕ್ತನು ನಾಮಾವಶೇಷವಾಗಿ ಬಿಡುತ್ತಾನೆ. ಈ ಸಮಸ್ಯೆಗೆ ಪರಿಹಾರವೇನೆಂದರೆ ಗುರುದೇವನಲ್ಲಿ ಕ್ಷಮೆಯಾಚಿಸಿ ಮತ್ತೊಮ್ಮೆ ಭಗವಂತನ ನಾಮದ (ಮಂತ್ರದ) ಉಪದೇಶವನ್ನು ಪಡೆಯುವುದು.

ಲೇಖಕ,
ಸಂತ ರಾಮ್‌ಪಾಲ್ ದಾಸ್ ಮಹಾರಾಜ
ಸತ್ಯಲೋಕ ಆಶ್ರಮ, ಬರ್‌ವಾಲಾ,
ಜಿಲ್ಲೆ–ಹಿಸಾರ್, ಹರಿಯಾಣ (ಭಾರತ)

# "ಶಾಸ್ತ್ರಾನುಕೂಲದ ಭಕ್ತಿಯಿಂದ ಭಕ್ತರಿಗಾಗುವ ಲಾಭ"

## "ಪರಮೇಶ್ವರನ ಸೀಮಾತೀತವಾದ ದಯೆ"

ಮುಕ್ತಿದಾತ ಸದ್ಗುರು ರಾಮ್‌ಪಾಲ್ ಮಹಾರಾಜರಿಗೆ ಜೈ

ನನ್ನ ಹೆಸರು ನೀಲೇಶ ದಾಸ್, ನನ್ನ ತಂದೆಯವರ ಹೆಸರು ವಾಲಪ್ಪ, ನಾನು ತಾ॥ ಜಿ॥ ಬಾಗಲಕೋಟ, ನೀಲಾನಗರ ಹಳ್ಳಿಯ ನಿವಾಸಿಯಾಗಿದ್ದೇನೆ. ನಾನು ಮೋದಲು ನನ್ನ ತಂದೆ–ತಾಯಿಯವರು ಶ್ರದ್ಧಾ, ಭಕ್ತಿ ಮತ್ತು ನಂಬಿಕೆಯಿಂದ ಪೂಜೆ ಪುನಸ್ಕಾರ ಮಾಡಿಕೊಂಡು ಬಂದಂತಹ ದೇವಾನು–ದೇವತೆಗಳ ಪೂಜೆ ಪುನಸ್ಕಾರಗಳನ್ನು ನಾನೂ ಶ್ರದ್ಧೆಯಿಂದ ಮಾಡಿಕೊಂಡು ಬರುತ್ತಿದ್ದೆ. ನಮ್ಮ ಊರಿನ ಹತ್ತೀರದಲ್ಲಿರುವ ಎಲ್ಲಮ್ಮ ದೇವಿಯ ಗುಡ್ಡಕ್ಕೂ ಹೋದೆ, ದಸರಾ ಉತ್ಸವದ ಸಮಯದಲ್ಲಿ ದುರ್ಗಾ ದೇವಿಗೆ ಅಲ್ಲಿ ನಡೆದುಕೊಂಡು ಬಂದಿರುವ ಆಚಾರ ವಿಚಾರ ಮತ್ತು ನಂಬಿಕೆಗಳ ಆಧಾರದ ಮೆರೆಗೆ ಮೇಕೆ ಬಲಿ ಕೊಡುತ್ತಿದ್ದೆ ಮತ್ತು ಪಾಂಡುರಂಗನ ಭಕ್ತಿ ಕೂಡ ಮಾಡುತ್ತಿದ್ದೆ. ಅದೇ ರೀತಿ ಎಲ್ಲಾ ದೇವರ ಭಕ್ತಿ ಮಾಡುತ್ತಿದ್ದೆನು. ಆದರೂ ಸಹ ನನ್ನ ಆರ್ಥಿಕ ಹಾಗೂ ಶಾರೀರಿಕ ತೊಂದರೆಗಳನ್ನು ಅನುಭವಿಸುತ್ತಿದ್ದೆನು ಮತ್ತು ಆ ಭಕ್ತಿಯನ್ನು ಮಾಡಿದ ದಿಸೆಯಿಂದ ನನ್ನ ತೊಂದರೆಗಳು ಸುದಾರಿಸುವ ಸ್ಥಿತಿಯನ್ನು ಕಂಡುಕೊಳ್ಳಲಿಲ್ಲ ಹಾಗೂ ಯಾವುದೆ ವ್ಯತ್ಯಾಸಗಳು ಕಂಡುಬರಲಿಲ್ಲ.

ನಾನು ಕಂಡ ಜೀವನದಲ್ಲಿ, ಒಂದು ದಿನ ಸಂತೋಷದಿಂದಿದ್ದರೆ ಹತ್ತು ದಿನ ದುಃಖದಲ್ಲಿರುತ್ತಿದ್ದೆ. ನಾನು ಯಾವುದೇ ಕೆಲಸ ಮಾಡಿದರು ಯಶಸ್ವಿ ಹೊಂದುತ್ತೀರಲಿಲ್ಲ. ಈ ಕಾರಣದಿಂದ ನಾನು ಕಾಲ ಕ್ರಮೇಣವಾಗಿ ನಶೆ ಮಾಡಲು ಆರಂಭಿಸಿದೆ. ಆ ದಿಸೆಯಲ್ಲಿ ಸಾರಾಯಿ, ಗುಟಖಾ, ತಂಬಾಕು, ಸಿಗರೇಟ್ ಇವೆಲ್ಲ ದುಷ್ಚಟಗಳು ನನ್ನಲ್ಲಿ ಮನೆ ಮಾಡಿಕೊಂಡಿದ್ದವು.

ನಾನು ಡ್ರೈವರ್ ಕೆಲಸ ಮಾಡುತ್ತಿದ್ದೆ. ಬರುವ ಅರ್ಧ ಸಂಬಳ ಈ ಚಟಗಳಿಗೆ ಖರ್ಚಾಗುತ್ತಿತ್ತು. ಸ್ವಲ್ಪ ದಿನದ ನಂತರ ನಾನು ಮದುವೆ ಮಾಡಿಕೊಂಡೆ. ನನ್ನ ಹೆಂಡತಿ ಒಂದು ಹೆಣ್ಣು ಮಗುವಿಗೆ ಜನ್ಮ ನೀಡಿದಳು ಹೆರಿಗೆ ಆದ ನಂತರ ಕೆಲವು ಗಂಟೆಗಳ ನಂತರ ಆ ಮಗು ಸಾವನ್ನಪ್ಪಿತು. ಹೀಗೆ ಒಂದು ವರ್ಷದ ನಂತರ ಇನ್ನೊಂದು ಹೆಣ್ಣು ಮಗು ಹುಟ್ಟಿತು. ಆ ಕೂಸಿಗೆ ಉಸಿರಾಟದ ಸಮಸ್ಯೆ ಇತ್ತು. ನಾನು ನಂಬಿಕೊಂಡಿದ್ದ ದೇವರುಗಳಲ್ಲಿ, ಹೇ ದೇವರೇ ! ನನಗೆ ಈ ಭೂಮಿ ಮೇಲೆ ಏಕೆ ಹುಟ್ಟಿಸಿದ್ದೀರಿ. ನನಗೆ ದುಃಖ ಬಿಟ್ಟು ಏನೂ ಸಿಗುತ್ತಿಲ್ಲ. ಈ ಭೂಮಿ ಮೇಲೆ ನಿವು ಇದ್ದಿರೋ ಅಥವಾ ಇಲ್ಲವೋ? ಎಂದು ಇಡೀ ರಾತ್ರಿ ದುಃಖಿಸುತ್ತಿದ್ದೆ. ಕೆಲವು ದಿನದ ನಂತರ ನಾನು ಯಾವ ಲಾರ್‍ರಿಯನ್ನು ಓಡಿಸಿ ನನ್ನ ಕುಟುಂಬದ ಜೀವನ ಸಾಗಿಸುತ್ತಿದ್ನೋ ಅದೂ ಕಳುವಾಯ್ತು. ಸಮಯಕ್ಕೆ ಬೇರೆ ಕೆಲಸ ಸಿಗದೆ, ಜೀವನ ಸಾಗಿಸುವುದು ತುಂಬ ಕಷ್ಟಕರವಾಗಿ ದುಃಖದ ಬೆಟ್ಟವೇ ನನ್ನ ಮೇಲೆ ಬಿದ್ದಂತೆ ಭಾಸವಾಗುತ್ತಿತ್ತು.

ನನ್ನ ಗೆಳೆಯನಾದ ಉಮೇಶನು ಒಂದು ದಿನ ಸಾಧನಾ ಟವಿಯಲ್ಲಿ ಸಂತ ರಾಮ್‌ಪಾಲ್ ಮಹಾರಾಜ ರವರ ಪ್ರವಚನ ಕೇಳುತ್ತಿದ್ದನು ಟಿವಿ ಸ್ಕ್ರೀನ್ ಮೇಲೆ "ಜ್ಞಾನ ಗಂಗಾ" ಪುಸ್ತಕವನ್ನು ಉಚಿತವಾಗಿ ಪಡೆಯಲು ನಿಮ್ಮ ಪೂರ್ಣ ವಿಳಾಸ ಆಶ್ರಮನ ಮೊಬೈಲ್ ಸಂಖ್ಯೆಗೆ ಎಸ್.ಎಮ್.ಎಸ್ ಮಾಡಿ ಎಂದು ಒಂದು ಪಟ್ಟಿಯ ಮೇಲೆ ಬರೆದಿತ್ತು. ನಾನು ಮತ್ತು ಉಮೇಶನು ಪರಸ್ಪರ ನಮ್ಮ ವಿಳಾಸವನ್ನು ಎಸ್.ಎಮ್.ಎಸ್ ಮೂಲಕ ಸದರಿ ಮೊಬೈಲ್ ಸಂಖ್ಯೆಗೆ ಪುಸ್ತಕ ಕಳುಹಿಸಿಕೊಡಲು ಕೆಳಿಕೊಂಡೆವು. ಒಂದು ವಾರದಲ್ಲಿ ಪುಸ್ತಕ ನಮ್ಮ ಮನೆ ಬಾಗಿಲಿಗೆ ಬಂದು ತಲುಪಿತು.

ಅದರಲ್ಲಿ ಬ್ರಹ್ಮಾ, ವಿಷ್ಣು, ಮಹೇಶ್ವರರ ಭಕ್ತಿ ಹೇಗೆ ಮಾಡಿದರೆ ಲಾಭವಾಗುವುದು, ಶ್ರೀಮದ್ಭಗವದ್ಗೀತೆ, ವೇದಗಳು ಮತ್ತು ಪುರಾಣಗಳಲ್ಲಿ ಪ್ರಮಾಣ ಸಹೀತ ಯಾವ ದೇವರ ಭಕ್ತಿ ಮಾಡಿದರೆ ನಾವು ನಮ್ಮ ಜೀವನದಲ್ಲಿ ಸಾರ್ಥಕತೆಯನ್ನು ಹೊಂದಿ ಮೋಕ್ಷ ಮಾರ್ಗ ಪ್ರಶಸ್ತವಾಗುವುದು ಎಂಬುವ ಜ್ಞಾನವನ್ನು ಸಂತ ರಾಮ್‌ಪಾಲ್ ಮಹಾರಜರು ಸವಿಸ್ತಾರವಾಗಿ ತಿಳಿಸಿರುವುದನ್ನು ಓದಿ ನನಗೆ ಜ್ಞಾನೋದಯವಾಯಿತು.

ಭಗವದ್ಗೀತೆಯ 16ನೇ ಅಧ್ಯಾಯದ 23ನೇ ಶ್ಲೋಕದಲ್ಲಿ ಬರೆದಿದೆ ಯಾವ ವ್ಯಕ್ತಿಯು ಶಾಸ್ತ್ರಗಳಲ್ಲಿ ಬರೆದಿರುವುದನ್ನು ಬಿಟ್ಟು ಮನಬಂದಂತೆ ಆಚರಣೆ (ಪೂಜೆ) ಮಾಡುತ್ತಾರೋ ಅಂಥವರಿಗೆ ಸುಖ, ಸಿದ್ಧಿ ಮತ್ತು ಮೋಕ್ಷ ದೊರೆಯುವುದಿಲ್ಲವೆಂಬುವುದನ್ನು ಅರಿತು ನಾನು ಇಲ್ಲಿಯವರೆಗೆ ಮಾಡಿಕೊಂಡು ಬರುತ್ತಿದ್ದ ಭಕ್ತಿಯಿಂದ ಯಾವ ಲಾಭವು ಏಕೆ ಸಿಗುತ್ತೀರಲಿಲ್ಲವೆಂದು ತಿಳಿದುಕೊಂಡೆನು.

ಬ್ರಹ್ಮಾ, ವಿಷ್ಣು, ಮಹೇಶ್ವರ ಮತ್ತು ಇನ್ನಿತರ ಆದಿ ದೇವತೆಗಳ ಮೂಲ ಮಂತ್ರವನ್ನು ಪೂರ್ಣ ಗುರುವಿನಿಂದ ಪಡೆದು ನಿಯಮದಲ್ಲಿದ್ದು ಭಕ್ತಿ ಮಾಡಿದರೆ ಮನೆಯಲ್ಲಿ ಸುಖ–ಶಾಂತಿ ಮತ್ತು ಮೊಕ್ಷದ ಮಾರ್ಗ ಸಿಗುವುದೆಂದು "ಜ್ಞಾನ ಗಂಗಾ" ಪುಸ್ತಕದ ಮೂಲಕ ತಿಳಿಯಿತು ಮತ್ತು ಗುರವಿಲ್ಲದೆ ಮುಕ್ತಿ ದೊರೆಯುವುದಿಲ್ಲ ಎಂದು ತಿಳಿದ ಬಳಿಕ ಸಂತ ರಾಮ್‌ಪಾಲ್ ಗುರುಗಳ ಆಶೀರ್ವಚದನ ಪಡೆಯುವ ಇಚ್ಛೆ ಮನಸ್ಸಿನಲ್ಲಿ ಮೂಡಿತು. ಆರ್ಥಿಕ ತೊಂದರೆಗಳ ಕಾರಣಗಳಿದ್ದರೂ ಬೇರೆಯವರಿಂದ ಸಾಲ ಪಡೆದು ಸತ್ಯಲೋಕ ಆಶ್ರಮ ಬರವಾಲಾ, ಜಿಲ್ಲೆ–ಹಿಸಾರ್ (ಹರಿಯಾಣ)ಕ್ಕೆ ಹೋಗಿ ದಿನಾಂದಕ : 11–04–2014 ರಂದು ರಾತ್ರಿ 03:30 ಕ್ಕೆ ಗುರುಗಳಿಂದ ನಾಮದೀಕ್ಷೆ ಪಡೆದೆ. ಆಶ್ರಮದಲ್ಲಿ ಭಕ್ತಾದಿಗಳ ನಡೆ–ನುಡಿ, ಸಭ್ಯತೆ ಮತ್ತು ಆಶ್ರಮದ ವ್ಯವಸ್ಥೆ ಎಲ್ಲವನ್ನು ನೋಡಿದಾಗ ಅದೊಂದು ಮಿನಿ ಸತ್ಯಲೋಕ ಎನ್ನಿಸಿತು. ಗುರುಗಳಿಂದ ಆಶಿರ್ವಾದ ಪಡೆಯುವಾಗ ಅಳುತ್ತಾ ನನ್ನ ದುಃಖಗಳನ್ನು ವಿವರಿಸಿದೆ. ಆಗ ಗುರುಗಳು, ಪರಮಾತ್ಮ ಎಲ್ಲಾ ಸರಿಪಡಿಸುತ್ತಾನೆ ಭಕ್ತಿ ಮಾಡು ಮಗು ಎಂದು ಹೇಳಿ ಆಶಿರ್ವದಿಸಿದರು. ಆಶ್ರಮದಿಂದ ಅವತ್ತೆ ಸಾಯಂಕಾಲ ಮನೆಗೆ ಹಿಂದಿರುಗಿದೆ. ಗುರುಗಳು ಹೇಳಿದ ಪ್ರಕಾರ ನಿಯಮದಲ್ಲಿದ್ದು ಶ್ರದ್ಧೆಯಿಂದ ಭಕ್ತಿ ಮಾಡಲು ಆರಂಭಿಸಿದೆ. ಕೆಲವೇ ದಿನಗಳಲ್ಲಿ ಆರ್ಥಿಕ ಹಾಗೂ ಶಾರೀರಿಕ ಲಾಭ ಸಿಗಲು ಪ್ರಾರಂಭವಾಯಿತು. ನಾನು ಮೊದಲು ಮಾಂಸ, ಮೀನು, ಮೊಟ್ಟೆ ಎಲ್ಲವನ್ನು ತಿನ್ನುತ್ತಿದ್ದೆ ಹಾಗೂ ಸಾರಾಯಿ, ಗುಟಖಾ, ಸಿಗರೆಟ್‌ಗಳ ಚಟಗಳಿತ್ತು. ಗುರುಗಳು ತಿಳಿಸಿದ ಹಾಗೆ ಭಕ್ತಿ ಮಾರ್ಗದಲ್ಲಿ ಇವೆಲ್ಲ ವಿಷಕ್ಕೆ ಸಮಾನವೆಂದು ಅರಿತು ಅವೆಲ್ಲವನ್ನು ತಿನ್ನುವುದನ್ನು ಹಾಗೂ ಸೇವಿಸುವುದನ್ನು ಬಿಟ್ಟಿರುತ್ತೇನೆ ಹಾಗೂ ಅವೆಲ್ಲವನ್ನು ಯಾರಿಗೂ ತಂದು ಸಹ ಕೊಡುವುದಿಲ್ಲ ಮತ್ತು ಮುಟ್ಟುವುದಿಲ್ಲ. ಇಷ್ಟೆಲ್ಲ ಬದಲಾವಣೆ ಗುರುಗಳು ನೀಡಿದಂತಹ ನಾಮ ಜಪದಿಂದ ಹಾಗೂ ಅವರ ಆಶಿರ್ವಾದದಿಂದಾಯಿತೆಂದು ಅವರಿಗೆ ಕೋಟಿ–ಕೋಟಿ ಸಲ ಕೃತಘ್ನತೆಗಳನ್ನು ಅರ್ಪಿಸಿದರು ಸಾಲದು ಎಂದು ಹೇಳಲು ಇಚ್ಛಿಸುತ್ತೇನೆ.

ನಾನು ಮೊದಲು ಬೇರೆಯವರ ಬಳಿ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದೆ. ಇಗ ನನ್ನದೆ ಆದ ಒಂದು ಸ್ವಂತ ಗಾಡಿ ಇದೆ. ನನಗೆ ಎಲ್ಲಾ ತರಹದ ಸುಖ ಸಿಗಲು ಪ್ರಾರಂಭವಾದವು. ನನ್ನ ಹೆಂಡತಿಯ ಎರಡೂ ಕಾಲುಗಳು ಅಚಾನಕ್ಕಾಗಿ ಸ್ಪರ್ಶವಿಲ್ಲದಂತಾಯಿತು. ಆಗ ನಾನು ಸತ್ಯಲೋಕ ಆಶ್ರಮ ಬರವಾಲಾಗೆ ಫೋನ್ ಮಾಡಿ ಗುರುಗಳಲ್ಲಿ ಪ್ರಾರ್ಥಿಸಿಕೊಂಡಾಗ, ಗುರುಗಳು ನಿನ್ನ ಹೆಂಡತಿಗೆ ದೀಕ್ಷೆ ಕೊಡಿಸು ಪರಮಾತ್ಮ ದಯಮಾಡುತ್ತಾರೆ ಎಂದರು. ನನ್ನ ಕಾಲುಗಳು ಸರಿಯಾದರೆ ನಾನು ದೀಕ್ಷೆ ಪಡೆಯುವೆನೆಂದು ಅವತ್ತೆ ರಾತ್ರಿ ನನ್ನ ಹೆಂಡತಿ ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡಳು. ಮುಕ್ತಿದಾತ ಸಂತ ರಾಮ್‌ಪಾಲ್ ಮಹಾರಾಜರವರ ದಯದಿಂದ ಬೆಳಿಗ್ಗೆ ಆಗುವಷ್ಟರಲ್ಲಿ ಕಾಲುಗಳು ಸರಿಯಾಗಿದ್ದವು. ಆಮೇಲೆ ನನ್ನ ಹೆಂಡತಿ ದೀಕ್ಷೆ ಪಡೆದಳು.ಈಗ ನಾನು, ನನ್ನ ಹೆಂಡತಿ ಮತ್ತು ನನ್ನ ಐದು ವರ್ಷದ ಮಗಳು ಸೇರಿ

ಮುಕ್ತಿದಾತ ಕಬೀರ್ ಪರಮೇಶ್ವರರ ಅವತಾರ ಸಂತ ರಾಮ್‌ಪಾಲ್ ಮಹಾರಾಜ ರವರು ನೀಡಿದಂತಹ ಭಕ್ತಿ ಮಾರ್ಗ ಅನುಸರಿಸಿ ಬಹಳ ಸುಖಕರ ಜೀವನ ಸಾಗಿಸುತ್ತಿದ್ದೇವೆ. ಎಲ್ಲ ಭಕ್ತ ಸಮಾಜರಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ ಸ್ವತಃ ಕಬೀರ್ ಪರಮೇಶ್ವರರು ಸಂತ ರಾಮ್‌ಪಾಲ್ ಮಹಾರಾಜರವರ ರೂಪದಲ್ಲಿ ಬಂದು ವೇದಗಳು, ಶ್ರೀಮದ್ಭಗವದ್ಗೀತೆ, ಪುರಾಣ ಶಾಸ್ತ್ರಗಳಲ್ಲಿ ಉಲ್ಲೆಖವಿರುವ ನೀಜ ಭಕ್ತಿಸಾಧನೆಯ ತತ್ವ ಜ್ಞಾನವನ್ನು ತಿಳಿಸಿ, ಸತ್ಯ ಭಕ್ತಿ ಮಾಡಿಸಿ ನಮ್ಮನ್ನು ಅಮರಲೋಕ ಅಂದರೆ ಸತ್ಯಲೋಕಕ್ಕೆ ಕರೆದೊಯ್ಯಲು ಅವತರಿಸಿರುತ್ತಾರೆ. ಇವರಿಂದ ದೀಕ್ಷೆ ಪಡೆದು ನಿಮ್ಮ ಆತ್ಮ ಕಲ್ಯಾಣಮಾಡಿಸಿಕೊಳ್ಳಿರಿ.

–: ಸತ್ ಸಾಹೇಬ್ :–

ನೀಲೇಶ್ ದಾಸ್: 7972426806

## "ಅದ್ಭುತ ಚಮತ್ಕಾರ"

ನಾನು ಹಣಮಂತರೆಡ್ಡಿಯವರ ಮಗ ಶಿವಾರೆಡ್ಡಿ ಕರ್ನಾಟಕ ರಾಜ್ಯದ ಕಲಬುರ್ಗಿ ಜಿಲ್ಲೆಯ ಕಮಲಾಪೂರ ತಾಲ್ಲೂಕಿನ ಕಲಮೂಡ ಗ್ರಾಮದ ನಿವಾಸಿಯಾಗಿದ್ದೇನೆ. ನನಗೆ ನಾಲ್ಕು ವರ್ಷದಿಂದ ಬೆನ್ನು ನೋವು ಮತ್ತು ಕಿಡ್ನಿ ಸ್ಟೋನ್ ಹಾಗೂ ಕಾಲು ನೋವು ಇತ್ತು. ಸುಮಾರು 6 ತಿಂಗಳಿನಿಂದ ನನಗೆ ಬೆನ್ನಿನಿಂದ ಕಾಲಿನವರೆಗೆ ನೋವು ಅತೀ ಹೆಚ್ಚಾಗಿತ್ತು. ಡಾಕ್ಟರ್ ಹತ್ತಿರ ಹೋದಾಗ ಅವರು ಮೂರು ತಿಂಗಳುಗಳಿಗೆ ಆಗುವಷ್ಟು ಮಾತ್ರೆ ಕೊಟ್ಟರು. ಅದನ್ನೆಲ್ಲಾ ಸೇವಿಸಿದ ನಂತರವೂ ರಿಪೋರ್ಟಿನಲ್ಲಿ ಸ್ಲೀಪ್ ಡಿಸ್ಕ್ ಆಗಿರುವ ಕಾರಣದಿಂದ ಆಪರೇಷನ್ ಮಾಡಿಸಿಕೊಳ್ಳುವಂತೆ ವೈದ್ಯರು ಸಲಹೆ ನೀಡಿದ್ದರು. ಆ ವಿಷಯದಲ್ಲಿ ನಾನು ಬೆಂಗಳೂರಿಗೆ ಹೋಗಿ 'ಮಹಾವೀರ್ ಜೈನ್ ಆಸ್ಪತ್ರೆ' ಯಲ್ಲಿ ತಜ್ಞ ವೈದ್ಯರ ಸಲಹೆ ಪಡೆಯಲು ರೋಗಿಗಳ ಸಾಲಿನಲ್ಲಿ ಕುಳಿತುಕೊಂಡೆ. ಆಗ ನಾನು ದೊಡ್ಡ ಟಿವಿ ಸ್ಕ್ರಿನಿನ ಪರದೆಯ ಮೇಲೆ ಮೂಳೆಗಳನ್ನು ಕಟ್ಟು ಮಾಡಿ ಆಪರೇಷನ್ ಮಾಡುವುದನ್ನು ನೋಡಿ ಭಯಭೀತನಾಗಿ ಮುಂದಿನ ಸಲಹೆ ಪಡೆಯದೆ ಮರಳಿ ಊರಿಗೆ ಬಂದೆ. ಆಗ ನನ್ನ ಮಿತ್ರರು ಆದ ಡಾಕ್ಟರ್ ಮಠಪತಿಯವರ ಮೂಲಕ ಕಲಬುರ್ಗಿ ಯುನೈಟೆಡ್ ಹಾಸ್ಪಿಟಲನಲ್ಲಿ ಆಪರೇಷನ್ ಮಾಡಿಸಿಕೊಳ್ಳುವ ಸಿದ್ಧತೆಯನ್ನು ಮಾಡಿಕೊಂಡಿದ್ದೆನು. ಆದರೂ ನನಗೆ ಅವರು ಮಿತ್ರರಾದ ಕಾಣದಿಂದ ಖಾಸಗಿ ಆಸ್ಪತ್ರಯಲ್ಲಿ ಬಹಳ ಖರ್ಚು ವೆಚ್ಚ ತಗಲಬಹುದೆಂದು ಸರ್ಕಾರಿ ಆಸ್ಪತ್ರೆಯಲ್ಲಿ ಆಪರೇಷನ್ ಮಾಡುತ್ತೆನೆಂದು ಸಲಹೆಯನ್ನು ನೀಡಿದರು. ಸದರಿ ಸಲಹೆಯಂತೆ ಐದು ದಿನಗಳ ನಂತರ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗುತ್ತೆನೆಂದು ಊರಿಗೆ ಮರಳಿ ಬಂದೆ. ಈ ರೀತಿ ಇರುವಾಗ ನನ್ನ ಗೆಳೆಯನಾದ ರಾಮರೆಡ್ಡಿಯವರು ಸಂತ ರಾಮ್‌ಪಾಲ್ ಮಹಾರಾಜರಿಂದ ಸಾವಿರಾರು ಜನರು ದೀಕ್ಷೆ ಪಡೆದು ಭಕ್ತಿ ಮಾಡುವುದರಿಂದ ಮಾರಣಾಂತಿಕ ರೋಗಗಳಿಂದ ಗುಣಮುಖರಾಗಿದ್ದಾರೆಂದು ಸುಮಾರು 6 ತಿಂಗಳುಗಳ ಹಿಂದೆ ಹೇಳಿದ ಮಾತು ಪದೆ ಪದೆ ನೆನಪಾಗುತ್ತಿತ್ತು. ನಾನು ಅವರ ಮಾತುಗಳಿಗೆ ಗಮನ ನೀಡುತ್ತಿರಲಿಲದಿದ್ದರು, ಅವರು ಒಂದು ದಿನ ಅಂಚೆಯ ಮೂಲಕ 'ಜ್ಞಾನ ಗಂಗಾ' ಪುಸ್ತಕವನ್ನು ನನಗೆ ಕಳುಹಿಸಿದರು. ಸದರಿ ಪುಸ್ತಕ ಈ ಮೊದಲೇ ನನ್ನ ಮನೆಯಲ್ಲಿ ಇತ್ತು. ಅದನ್ನು ಒಂದು ದಿನ ನಾನು ಕಮಲಾಪೂರದಲ್ಲಿ ಕೆಲಸಕ್ಕೆ ಹೊಗಿದ್ದಾಗ ಕೆಲ ಭಕ್ತರು 'ಜ್ಞಾನ ಗಂಗಾ' ಪುಸ್ತಕ ಸೇವೆ ಮಾಡುತ್ತೀರುವಾಗ ಅವರ ಬಳಿ ಹತ್ತು ರೂಪಾಯಿ ನೀಡಿ ಪುಸ್ತಕವನ್ನು ಪಡೆದುಕೊಂಡಿದ್ದೆ. ಅದೇ ಪುಸ್ತಕವನ್ನು ನನ್ನ ಸ್ನೇಹಿತರು ಕಳುಹಿಸಿದ್ದನ್ನು ನೋಡಿ, ಆ ಪುಸ್ತಕದಲ್ಲಿ ಏನಿರಬಹುದೆಂಬ ಕೂತುಹಲದಿಂದ ಪುಸ್ತಕವನ್ನು ಓದಲು ಆರಂಭಿಸಿದೆ. ಪುಸ್ತಕವನ್ನು

ಸಂಪೂರ್ಣವಾಗಿ ಓದಲಾಗಿ, ಶ್ರೀ ಮದ್ಭಗವದ್ಗೀತೆ, ನಾಲ್ಕು ವೇದಗಳು, ಪುರಾಣಗಳು, ಉಪನಿಷದ್‌ಗಳು ಮತ್ತು ಇನ್ನಿತರೆ ಧರ್ಮದ ಪವಿತ್ರ ಸದ್ಗ್ರಂಥಗಳಲ್ಲಿ ಪೂರ್ಣ ಪರಮಾತ್ಮನ ಬಗ್ಗೆ ಒಬ್ಬರೆ ಎನ್ನುವ ಅರಿವು ಆಯಿತು. ಹಾಗೂ ಅವರನ್ನು ಆರಾಧಿಸುವುದರಿಂದ ದುಃಖಿಯನ್ನು ಸುಖಿಯನ್ನಾಗಿ ಮಾಡುವನೆಂದು ತಿಳಿಯಿತು. ಅವತ್ತಿನಿಂದ ನಾನು ಮಾಂಸ ಮತ್ತು ವ್ಯಸನ ಮಾಡುವುದಿಲ್ಲ. ನನ್ನ ತಾಯಿಯವರಿಗೂ ಕೂಡ ಬಹಳ ವರ್ಷಗಳಿಂದ ಮಾಟ ಮಂತ್ರ ಪೀಡೆಯಿಂದ ಬಳಲುತ್ತಿದ್ದರು. ಅವರು ಅಂಬಾ ಭವಾನಿ ಮಾತೆಯ ಭಕ್ತೆಯಾಗಿದ್ದಳು. ಅವರ ಹೆಸರಿನಲ್ಲಿ ಮಂಗಳವಾರ ಮತ್ತು ಶುಕ್ರವಾರ ಬಿಕ್ಷಾಟನೆ ಮಾಡಿ ತಯಿಗೆ ನೈವೇದ್ಯ ಸೇವೆ ಮಾಡುತ್ತಿದ್ದರು. ಆದರೂ ಪೀಡೆಯ ಕಾಟದ ಪ್ರಮಾಣ ಕಡಿಮೆಯಾಗಲಿಲ್ಲ. ಎಲ್ಲಾ ತಾಂತ್ರಿಕರ ಹತ್ತಿರ ಹೋದರು ಕೂಡ ನೋವು ಹಾಗೂ ತೊಂದರೆಗಳು ಹೆಚ್ಚಾಗುತ್ತಿತ್ತು. ನಮ್ಮ ಊರಲ್ಲಿದ್ದ ಮಾಣಿಕೇಶ್ವರ ದೇವಸ್ಥಾನಕ್ಕೆ, ಎಲ್ಲಮ್ಮ ದೇವಸ್ಥಾನ ಹಾಗೂ ಮನ ಲಕ್ಷ್ಮಿಗೆ ಕೂರಿಯನ್ನು ಮೂರು ವರ್ಷಕ್ಕೊಮ್ಮೆ ಬಲಿ ಅರ್ಪಿಸಿ ಪೂಜೆಯನ್ನು ಮಾಡಿದರೂ ಸಹ ನಮ್ಮ ತಾಯಿಯ ಶರೀರದಲ್ಲಿ ಸೂಜಿ ಚುಚ್ಚಿದ ಹಾಗೆ ಮತ್ತು ಬೆಂಕಿ ಹತ್ತಿದ ಹಾಗೆ ಕಾಲು ನೋವು ಹೆಚ್ಚಾಗಿತ್ತು. ಅವರು ಕೂಡ ಗುರುಗಳು ಹೇಳಿದ ಜ್ಞಾನಾರ್ಚನೆ ಮಾಡಿ ನಾಮೋಪದೇಶ ಪಡೆಯಲು ಮುಂದದರು. ದಿನಾಂಕ :– 25–08–2019 ರಂದು ನಮ್ಮ ಸಪರಿವಾರದೊಂದಿಗೆ ಹೈದ್ರಾಬಾದನಲ್ಲಿರುವ ಸದ್ಗುರುಗಳ ನಾಮೋಪದೇಶ ಕೇಂದ್ರಕ್ಕೆ ಹೋಗಿ ಗುರು ದೀಕ್ಷೆ ಪಡೆದುಕೊಂಡೆವು. ಸೇವೆ ಮಾಡುವುದರಿಂದ ನಮ್ಮ ಪಾಪ ಕರ್ಮಗಳು ಕಳೆಯುವುದೆಂದು ಕೆಲವು ಭಕ್ತಾದಿಗಳಿಂದ ತಿಳಿದುಕೊಂಡು ಒಂದು ತಿಂಗಳ ತನಕ ಸೇವೆ ಮಾಡುವುದಾಗಿ ಪರಮಾತ್ಮನಲ್ಲಿ ಮನಸ್ಸಿನಲ್ಲಿ ಬೇಡಿಕೊಂಡೆ. ಆಗ ನಾನು ಬೆಂಗಳೂರು ನಾಮೋಪದೇಶ ಕೇಂದ್ರಕ್ಕೆ ಫೋನ್ ಮಾಡಿ ಸೇವೆಗೆ ಬರುವುದಾಗಿ ಕೇಳಿದೆ. ಆಗ ಅವರು ಕರ್ನಾಟಕದ ಎಲ್ಲಾ ಕಾರಾಗೃಹಗಳಲ್ಲಿ ಬಂದಿಗಳಿಗೆ ಉಚಿತವಾಗಿ ಪುಸ್ತಕ ವಿತರಣೆಯ ಸೇವೆಯಲ್ಲಿ ಭಾಗವಹಿಸಲು ತಿಳಿಸಿದರು. ಸದರಿ ಸೇವೆ ಮಾಡುವ ಅವಕಾಶವನ್ನು ಸದುಪಯೋಗ ಪಡೆಯಲು ಸೇವೆಯಲ್ಲಿ ಭಾಗವಹಿಸಿದೆ. ಕೆಲವು ದಿನಗಳ ನಂತರ ನನ್ನ ಬೆನ್ನು ಮೂಳೆ ನೋವು ಹೇಗೆ ಮಾಯವಾಯಿತು ಎಂದು ನನಗೆ ತಿಳಿಯಲಿಲ್ಲ. ಇದೆಲ್ಲ ಮುಕ್ತಿದಾತ ಸಂತ ರಾಮ್‌ಪಾಲ್ ಮಹಾರಾಜರ ಕೃಪೆಯಿಂದಾಗಿದೆ ಎನ್ನುವುದರಲ್ಲಿ ಎರಡು ಮಾತಿರುವುದಿಲ್ಲ. ಒಂದು ತಿಂಗಳು ಹದಿನಾಲ್ಕು ದಿವಸ ಸೇವೆ ಮಾಡಿ ಊರಿಗೆ ಹೋಸ ಉಲ್ಲಾಸದಿಂದ ವಾಪಸ್ಸಾದೆ. ಈಗ ನಾವು ಸಪರಿವಾರ ಸಂತ ರಾಮ್‌ಪಾಲ್ ಮಹಾರಾಜರವರು ಹೇಳಿರುವ ಭಕ್ತಿಯನ್ನು ಮಾಡುತ್ತಾ ಸುಖವಾಗಿ ಜೀವನವನ್ನು ಸಾಗಿಸುತ್ತಿದ್ದೇವೆ

॥ ಸತ್ ಸಾಹೇಬ್ ॥

ಶಿವಾರೆಡ್ಡಿ ದಾಸ್– 9108900453

## “ಲೂಟಿಗೊಳಗಾದವರಿಗೆ ಆಧಾರ”

ನಾನು ಚೆತನಾ ದಾಸಿ ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಹರಲಾಪೂರದ ನಿವಾಸಿಯಾಗಿದ್ದೇನೆ. ನನ್ನನ್ನು ದೇವರು ಸಾವಿನ ದವಡೆಯಿಂದ ಬದುಕಿಸಿದ್ದಾರೆ. ಈ ಮೇಲೆ ತಿಳಿಸಿರುವ ನಾನು ಆತ್ಮ ಹತ್ಯೆ ಮಾಡಿಕೊಳ್ಳುವ ಮಾನಸಿಕ ಸ್ಥಿತಿಗೆ ಒಳಗಾಗಿದ್ದೆ ಮತ್ತು ಬದುಕೆಂಬುವುದು ಒಂದು ಅವತಾರವಾಗಿ ಪರಿಗಣಿಸಿತ್ತು. ಇವೆಲ್ಲಾ ಸಂಕಷ್ಟಗಳು ನನಗೆ ಮದುವೆ ಆದ ಮೇಲೆ ಶುರುವಾಗಿ ತುಂಬಾ ಹಿಂಸೆ ಅನುಭವಿಸಬೇಕಾಯಿತು. ನಾನು ಮೂಲತಃ ಬಿ.ಕಾಮ್ ಎಜುಕೇಷನ್ ಮಾಡಿದ್ದೆನೆ.

ನನ್ನನ್ನು ಮಹಾರಾಷ್ಟ್ರದಲ್ಲಿ ಮದುವೆ ಮಾಡಿ ಕೊಟ್ಟರು. ನನಗೆ ಕನ್ನಡ ಮತ್ತು ಇಂಗ್ಲೀಷ ಭಾಷೆ ಬಿಟ್ಟು ಯಾವುದೇ ಬೇರೆ ಭಷೆಗಳು ಬರುತ್ತಿರಲಿಲ್ಲ. ಮನೆಯಲ್ಲಿ ನನ್ನ ಗಂಡ ಮತ್ತು ಮಾವನವರಿಗೆ ಇಂಗ್ಲೀಷ ಭಾಷೆಯ ಅರಿವಿದ್ದ ಕಾರಣದಿಂದ ಅವರ ಜೋತೆಯಲ್ಲಿ ಮಾತನಾಡಬಹುದಿತ್ತು. ಆದರೆ ನನ್ನ ಅತ್ತೆ ಮತ್ತು ನಾದನಿ ಇಬ್ಬರು ನನಗೆ ಮರಠ ಭಾಷೆ ಬರದೇ ಇದ್ದ ಕಾರಣಅವರೊಡನೆ ಸಂಭಾಷಿಸಲು ಕಷ್ಟಕರವಾಗುತಿತ್ತು ಮತ್ತು ಈ ವರ್ತನೆಯಿಂದ ಅವರುಗಳು ನನಗೆ ಅವರುಗಳುಮಾನಸಿಕವಾಗಿ ಹಿಂಸಿಸುತ್ತಿದ್ದರು ಆದ ಕರಣದಿಂದ ನಾನು ಹಲವಾರು ಬಾರಿ ಅಳುತ್ತಿದ್ದೆ. ನಾನು ನನ್ನ ತಾಯಿ ತಂದೆಗೆ ಫೋನ್ ಮಾಡಲೂ ಕೂಡ ಕಷ್ಟವಾದ ಸ್ಥಿತಿಯಲ್ಲಿ ಇಟ್ಟಿದರು. ನನ್ನ ಫೋನ್ ಕೂಡ ಕೊಡುತ್ತಿರಲಿಲ್ಲ. ನಮ್ಮದು ಸ್ವಂತ ಫ್ಯಾಕ್ಟರಿ ಇದ್ದು ಮತ್ತು ಮನೆಯಲ್ಲಿ ಕೆಲಸದವರು ಇದ್ದರು ನನಗೆ ಆ ಮನೆಯಲ್ಲಿ ಇರಲು ಕಷ್ಟವಾಗುತಿತ್ತು. ನನಗೆ ಗಂಡನ ಮನೆಯವರು ತತ್ವಜ್ಞಾನ ಇಲ್ಲದ ಕಾರಣ ತುಂಬ ಹಿಂಸೆ ಕೊಡುತ್ತಿರುತ್ತಿದ್ದರು. ಮನೆಯಲ್ಲಿ ಗಂಡನ ಆಸರೆಯು ಇರಲಿಲ್ಲ ದಿನಾಗಲೂ ಮನೆಯಲ್ಲಿ ಅನಗತ್ಯವಾಗಿ ಜಗಳವಾಗುತ್ತಿತ್ತು. ಮದುವೆಯಾಗಿ ಗಂಡನ ಮನೆಯಲ್ಲಿ ಒಂದು ವರ್ಷ ಕಾಲ ಕಳೆಯಲಾಗಲಾರದೇ ತವರಿಗೆ ಮರಳಿದೆ. ತವರು ಮನೆಯಲ್ಲಿ 5 ವರ್ಷಕಳೆಯಿತು, ಆ 5 ವರ್ಷಗಳಲ್ಲಿ ಪೋಲಿಸ್ ಸ್ಟೇಷನ್, ಕೊರ್ಟು ಕಛೇರಿಗಳನ್ನು ಅಲೆದಾಡಿದರು, ಎಲ್ಲ ಗುರು ಹಿರಿಯರು ಸೇರಿ ಮಾತನಾಡಿದ್ದರೂ ಕೂಡ ಪರಿಸ್ಥಿತಿ ಸುಧಾರಿಸದೇ ನನ್ನ ದಾಂಪತ್ಯ ಜೀವನದಲ್ಲಿ ಯಾವುದೇ ರೀತಿಯ ಸುಖವನ್ನು ಕಾಣಲಾಗಲಿಲ್ಲ.

ಇಷ್ಟೆ ಅಲ್ಲದೆ ನಾನು ಜೈನ್ ಧರ್ಮದವಳಾಗಿದ್ದ ಕಾರಣ ನನ್ನ ತಾಯಿ ಹೇಳಿದ ಹಾಗೆ ಜೈನ್ ಮಂತ್ರ 'ನವಕಾರ್ ಮಂತ್ರ' ಕೂಡ ಜಪ ಮಾಡುತ್ತಿದ್ದೆ. ಇದರ ಜೋತೆಗೆ 'ಭಕ್ತಾಂಬರ' ಸ್ತೋತ್ರ' ಕೂಡ ಜಪಿಸುತ್ತಿದ್ದೆ. ಜೈನ್ ಧರ್ಮದಲ್ಲಿ 'ಭಕ್ತಾಂಬರ' ಸ್ತೋತ್ರವನ್ನು ಸ್ತುತಿ ಮಾಡುವುದರಿಂದ ಸಕಲ ಸಂಕಷ್ಟಗಳು ದೂರವಾಗುವುದೆಂಬ ಪ್ರತೀತಿ ಇರುವ ಕಾರಣದಿಂದ, ಅದನ್ನೂ ಸಹ ಹಲವಾರು ಬಾರಿ ಜಪಿಸುತ್ತಿದೆ. ಯಾರೋ ಹೇಳಿದಂತೆ, ಪಠನೆ ಮಾತ್ರದಿಂದಲೇ ಸಕಲ ಕಷ್ಟಗಳು ದೂರವಾಗುವುದೆಂದು ಹನುಮಾನ ಚಾಲಿಸಾ ಕೂಡ ಜಪ ಮಾಡಿದೆ. ಹುಬ್ಬಳ್ಳಿಯಲ್ಲಿ ಭವಿಷ್ಯ ಹೇಳುವವರೊಬ್ಬರ ಬಳಿ ಹೊಗಲಾಗಿ, ಸದರಿಯವರು ನನ್ನನ್ನು ಗಮನಿಸಿ, ನಿನ್ನ ಮುಖದ ಮೇಲೆ ಇರುವ ಮಚ್ಚೆಯು ಅಪಶಕುನವಾಗಿ ಪರಿಗಣಿಸುತ್ತೀರುವುದರಿಂದ ಸದರಿ ಮಚ್ಚೆಯನ್ನು ತೆಗೆದು ಹಾಕಲು ಸೂಚಿಸಿದರು. ಅವರು ಸೂಚಿಸಿದಂತೆ, ಮಚ್ಚೆಯನ್ನು ಅಗರಬತ್ತಿಯಿಂದ ಸುಟ್ಟು ತೆಗೆಯಲು ಹೋಗಿ ಮುಖದಲ್ಲಿ ಗಾಯವನ್ನು ಮಾಡಿಕೊಂಡೆನು. ನಮ್ಮ ಊರ ಹತ್ತೀರ ಇರುವ ಪದ್ಮಾವತಿ ದೇವಸ್ಥಾನಕ್ಕೂ ಹೊದೆ, ಎಲ್ಲೋ ಪಂಚಾಂಗ ಕೇಳಿದೆ ಅವರು ಹೇಳಿದ ಹಾಗೆ ಕೂಡ ಮಾಡಿದೆ, ಸಿ.ಜಿ ಪರಿವಾರ ಅಂತ ಟಿವಿಯಲ್ಲಿ ಬರುತ್ತಿದ್ದು ಸರಳವಾಸ್ತು ಕೂಡ ಮಾಡಿಸಿದೆವು, ಕವಡೆ ಶಾಸ್ತರ ಕೇಳಿಸಿದೆವು, ನನ್ನ ಗೆಳತಿಯ ಸಲಹೆಯಂತೆ ಕ್ರೈಸ್ತ ಧರ್ಮದಲ್ಲಿ ಮಾಡುವ ಪ್ರರ್ಥನೆಗೆ ಕೂಡ ಹೊದೆ. ಎಲ್ಲೆಲ್ಲೋ ಸುತ್ತಾಡಿ ನನ್ನ 5 ವರ್ಷಗಳ ಕಾಲ ವ್ಯರ್ಥವಾಯಿತೆ ಹೊರತು ನನಗೆ ಎಲ್ಲೂ ಕೂಡ ಲಾಭ ಸಿಗಲಿಲ್ಲ. ಮಧ್ಯದಲ್ಲಿ ಒಂದು ಸಲ ನನ್ನ ಗಂಡ ಕರೆದುಕೊಂಡು ಹೊದರು ನಾವಿಬ್ಬರು ಬೇರೆ ಬಾಡಿಗೆ ಮನೆಯಲ್ಲಿ ಇರುತ್ತಿದ್ದೇವು. ಒಂದು ದಿನ ನನ್ನ ಗಂಡ ಜಗಳವಾಡಿ ಏನೂ ಹೇಳಲಾರದೆ ನನ್ನನ್ನು ಬಿಟ್ಟು ಹೋದರು. ಇವೆಲ್ಲವನ್ನು ಸಹಿಸಲಾರದೆ ನಾನು ವಿಷ ಸೆವಿಸಿ ಆತ್ಮ ಹತ್ಯೆ ಮಾಡಲು ಪ್ರಯತ್ನಿಸಿದೆ. ಆದರೆ ಪೂರ್ವ ಜನ್ಮದ ಸಂಸ್ಕಾರದಿಂದ ಬದುಕುಳಿದು ಮತ್ತೆ ತವರು ಮನೆಗೆ ಮರಳಿ ಬಂದೆ. ನನಗೆ ಒಳಿತಾಗಬೇಕೆಂದು ಮೇಲೆ ತಿಳಿಸಿದ ಎಲ್ಲ ದೇವರುಗಳ ಆರಾಧನೆ ಮಾಡಿದರು ಸಹ ಯಾವುದೇ ಲಾಭ ಸಿಗದೆ ನನ್ನ ಸಮಯ ಮತ್ತು ನನ್ನ ದುಡ್ಡು ವ್ಯರ್ಥವಾಯಿತು. ಕೊನೆಗೆ ಎಲ್ಲಾ ಸ್ಥಿತಿಗಳು ನನ್ನ ವಿರುದ್ಧವಾಯಿತು. ಇಷ್ಟೆಲ್ಲ ಸೇವೆ, ಭಕ್ತಿ, ವ್ಯಯಾ

ಮಾಡಿದರೂ ನನ್ನ ಜೀವನ ಸರಿಪಡಿಸಿಕೊಳ್ಳಲಾಗದೆ, ದಾಂಪತ್ಯ ಜೀವನ ಅಂತ್ಯ ಅಂದರೆ ಡೈವರ್ಸ್ ತನಕ ತಲುಪಿತು. ಒಂದು ದಿನ ರಾತ್ರಿ ಏನನ್ನೂ ಹೇಳಲಾಗದ ಸ್ಥಿತಿಯಲ್ಲಿ ಅಳುತ್ತಿದ್ದೆ. ನಾನು ನೋಡಲು ಚೆನ್ನಾಗಿದ್ದೆನೆ, ವಿದ್ಯೆ ಇದೆ ಮತ್ತು ಧನವಂತ ಗಂಡ ಇದ್ದರೂ ಮದುವೆಯಾದ ಮೇಲೆ ನನ್ನ ಜೀವನ ನರಕವಾಯಿತು. ಬೇರೆ ಕಡೆ ಕೆಲಸ ಮಾಡಲು ಹೊಗುತ್ತಿದ್ದೆ ಅದರೆ ಒಳ್ಳೆ ಸಂಬಳ ಇಲ್ಲದೆ ಜನರು ಕೆಟ್ಟ ದೃಷ್ಟಿಯಿಂದ ಜಾಸ್ತಿ ಸಂಬಳ ಕೊಡುತ್ತೆವೆ ಎಂದರು. ಎಲ್ಲಾ ಕೆಲಸ ಬಿಟ್ಟು ಬದುಕುವ ಆಸೆಯನ್ನೆ ಬಿಟ್ಟೆ. ಒಂದು ರಾತ್ರಿ ಏಕಾಂತದಲ್ಲಿ ಕುಳಿತಿರುವಾಗ ಎಲ್ಲವೂ ನೆನನಪಿಸಿಕೊಳ್ಳುತ್ತ ತುಂಬ ನೋವಾಯಿತು. ಅವತ್ತೆ ದೇವರಲ್ಲಿ ನಮಸ್ಕಾರ ಹಾಕಿ ಕೇಳಿಕೊಂಡೆ ನೀವು ನೀಜವಾಗಿಯೂ ಇದ್ದರೆ ಅದು ನನಗೆ ಗೊತ್ತಾಗಲಿ, ಈ ಎಲ್ಲಾ ದೇವರು ಸತ್ಯ ಅಥವಾ ಸುಳ್ಳು ಎಂದು ಗೊತ್ತಾಗಲಿ ಮತ್ತು ಪೂರ್ಣ ಪರಮಾತ್ಮ ಯಾರು ಎಂದು ಗೊತ್ತಾಗಲಿ ಎಂದು ಪರಮಾತ್ಮನಲ್ಲಿ ಮೊರೆ ಹೋದೆ.

ಒಂದು ದಿನ ನಾನು ಸಾಯಿ ಸಮರ್ಥ ಮಂದಿರಕ್ಕೆ ಹೊಗಿದ್ದೆ. ಅಲ್ಲಿ ಸರಿತಾ ದಾಸಿ ಮನೆಯ ಸದಸ್ಯರ ಜೋತೆ ಬಂದಿದ್ದರು ಅಚಾನಕ್ಕಾಗಿ ಅವರು ನನ್ನನ್ನು ಮಾತನಾಡಿಸಿ 'ಜ್ಞಾನ ಗಂಗಾ' ಪುಸ್ತಕ ನೀಡಿ ಓದಲು ಹೇಳಿದರು. ಮನೆಗೆ ಬಂದು ಪುಸ್ತಕವನ್ನು ಓದಿದಾಗ ನಾನು ಬಯಸಿದ ಹಾಗೆ ನೀಜವಾದ ದೇವರು ಪೂರ್ಣ ಪರಮಾತ್ಮ ಯಾರೆಂದು ಮತ್ತು ಎಲ್ಲಾ ಧರ್ಮಗ್ರಂಥಗಳನ್ನು ತಿಳಿದಿರುವ ತತ್ವದರ್ಶಿ ಸಂತ ಯಾರೆಂದು ಗೊತ್ತಾಯ್ತು ಮತ್ತು ಇವರಿಂದ ಎಲ್ಲಾ ಸಂದೇಹ ನಿವಾರಣೆ ಆಯಿತು. ಇದರಲ್ಲಿ ಎಲ್ಲಾ ಸದ್ಗ್ರಂಥಗಳು ಶ್ರೀಮದ್ಭಗವದ್ಗೀತೆ, 4 ವೇದಗಳು, ಪುರಾಣಗಳು, ಕುರಾನ್ ಶರೀಫ್, ಬೈಬಲ್, ಜೈನ್ ಧರ್ಮದ ಗ್ರಂಥ ಮತ್ತು ಗುರುಗ್ರಂಥ ಸಾಹೇಬ್ ಈ ಎಲ್ಲಾ ಗ್ರಂಥಗಳ ಸತ್ಯಾಂಶ ತಿಳಿಯಿತು. ನನಗೆ ಪುಸ್ತಕ ನೀಡಿದ ಸರಿತಾ ದಾಸಿಗೆ, ಸದ್ಭಕ್ತಿ ಮಾಡಲು ಮತ್ತು ಶಂಕೆಗಳ, ಕಷ್ಟಗಳ ನಿವಾರಣೆ ಮಾಡಿಕೊಳ್ಳಲು ನಿಮ್ಮ ಗುರುಗಳಿಗೆ ಏನಾದರು ಶುಲ್ಕ ಪಾವತಿಸಬೇಕೆ ಎಂದು ಕೇಳಿದೆ? ಆಗ ಅವಳು 'ಅವರಿಗೆ ಯಾವ ದುಡ್ಡು ಕೇಳುವುದಿಲ್ಲ ಎಂದಳು' ಆಗ ನಾನು ಸರಿಯಾದ ಜಾಗಕ್ಕೆ ಬಂದೆ ಎಂದು ತಿಳಿದೆ. ಏಕೆಂದರೆ ಎಲ್ಲಿ ಹೊದರೂ ಮೊದಲು ದುಡ್ಡಿನ ವಿಷಯ ಎತ್ತುತಿದ್ದರು. ಇಗ ನಾನು ಖರ್ಚು ಮಾಡಿಕೊಳ್ಳುವ ಅವಶ್ಯಕತೆ ಇಲ್ಲ ಎಂದು ಬಹಳ ಖುಷಯಾದೆ. ಒಂದೇ ವಾರದದಲ್ಲಿ ಪುಸ್ತಕ ಓದಿ ತಿಳಿದು ನನ್ನ ತಮ್ಮನನ್ನು ಸಹ ಕರೆದುಕೊಂಡು ದೆಹಲಿಯ ಬಳಿ ಇರುವ ಮುಂಡ್ಕ ಸತ್ಯಲೋಕ ಆಶ್ರಮದಲ್ಲಿರುವ ನಾಮೋಪದೇಶ ಕೇಂದ್ರ ದಿನಾಂಕ :- 26 –03 –2017 ರಂದು ನಾಮದೀಕ್ಷೆ ಪಡೆದುಕೊಂಡೆವು. ಅವತ್ತಿನಿಂದ ನನ್ನ ಎಲ್ಲ ಸಮಸ್ಯೆಗಳು ದೂರವಾಗತೊಡಗಿದವು.

ನಾನು ನಾಮದೀಕ್ಷೆ ಪಡೆದು ಮನೆಗೆ ಬಂದ ಕೆಲವೆ ದಿನಗಳಲ್ಲಿ ನನ್ನ ಗಂಡನ ಫೋನ್ ಬರಲು ಶುರುವಾಯಿತು. 6 ತಿಂಗಳಿಂದ ಮಾತಾಡುವುದನ್ನು ಬಿಟ್ಟಿದ್ದೇವು ಆ ಕಾರಣದಿಂದ ನಾನು ಫೋನ್ ತೆಗೆಯುತ್ತಿರಲಿಲ್ಲ 3 ದಿನದ ನಂತರ ಖುದ್ದಾಗಿ ಮನೆಗೆ ಬಂದು ಕರೆದುಕೊಂಡು ಹೋದರು. ಇಗ ಗುರುಗಳ ದಯದಿಂದ ನಮ್ಮ ಮನೆಯಲ್ಲಿ ಯಾವ ತೊಂದರೆಯು ಇಲ್ಲ.

ಈ ಮಧ್ಯ ನಾನು ತವರು ಮನೆಯಲ್ಲಿದ್ದಾಗ ಒಂದು ದಿನ ಜೊರಾಗಿ ಮಳೆ ಬರುತ್ತಿತ್ತು ಮನೆ ಒಳಗೆ ಹೊಗುವಾಗ ತಲೆಗೆ ಬಾಗಿಲು ತಾಗಿ ಗಂಭೀರವಾದ ಪೆಟ್ಟು ಬಿದ್ದು ತುಂಬಾ ಗಾಯವಾಯಿತು ಮತ್ತು ಕಣ್ಣು ಕತ್ತಲೆ ಆಗುತ್ತಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ನನ್ನ ಹತ್ತಿರ ದುಡ್ಡು ಇರಲಿಲ್ಲ. ಆಗ ನಾನು ಸತ್ಯಲೋಕ ಆಶ್ರಮ ಮುಂಡ್ಕಗೆ ಫೋನ್ ಮಾಡಿ ತೊಂದರೆ ನಿವಾರಣೆಗೆ ಗುರುಗಳ ಬಳಿ ಪ್ರಾರ್ಥನೆ ಸಲ್ಲಿಸಿದೆ. ಆಗ ಗುರುಗಳ ಆದೇಸದಂತೆ 'ಪರಮಾತ್ಮ ದಯಮಾಡುತ್ತಾರೆ ಎಂದರು. ಆಶ್ರಮದಲ್ಲಿ

ನೀಡಿದಂತಂಹ ಅಮೃತ್ ಜಲವನ್ನು ಸೇವಿಸಿದೆ ಅವತ್ತೆ ಗುರುಗಳ ದಯದಿಂದ ಸರಿಯಾಯಿತು. ಮತ್ತು ನನ್ನ ತಮ್ಮ ಕೆಲಸವಿಲ್ಲದೆ ದುಃಖಿತನಾಗಿದ್ದು ಗುರುಗಳಿಗೆ ಪ್ರಾರ್ಥನೆ ಮಾಡಿಕೊಂಡ ಸ್ವಲ್ಪ ದಿನದಲ್ಲೇ ಅವನಿಗೆ ಸರ್ಕಾರಿ ಕೆಲಸ ಸಿಕ್ಕಿದೆ. ಸರಿಯಾಗಿ ಮಾತನಾಡಲು ಬರುತ್ತಿರಲಿಲ್ಲದವನಿಗೆ ಸರ್ಕಾರಿ ಕೆಲಸ ಹೇಗೆ ಸಿಕ್ಕಿತು ಎಂದು ಊರಿನ ಜನರು ಆಶ್ಚರ್ಯಪಡುತ್ತಾರೆ.

ಗುರುಗಳು ಹೇಳಿದ ನಿಯಮವನ್ನು ಉಲ್ಲಂಘನೆ ಮಾಡಿದ್ದರಿಂದ ನನಗೆ ಮೊದಲಿನ ತೊಂದರೆಗಳು ಕಾಡಲಾರಂಭಿಸಿದವು. ಮನೆಯಲ್ಲಿ ಮತ್ತೆ ಕಲಹ ಸುರುವಾಯಿತು ನನ್ನ ಗಂಡ ಗುರುಗಳ ಫೋಟೊ ಮನೆಯಿಂದ ತೆಗೆದರು. ಆಗ ನಾನು ತವರು ಮನೆಗೆ ಹೋಗುವೆನೆಂದು ನೇರ ಸತ್ಯಲೋಕ ಆಶ್ರಮ ಮುಂಡ್ಕಾ ದೆಹಲಿಗೆ ಹೋಗಿ ನನ್ನ ತವರು ಮನೆಗೆ ಫೋನ್ ಮಾಡಿ ಆಶ್ರಮಕ್ಕೆ ಬಂದಿರುವುದಾಗಿ ತಿಳಿಸಿದೆ. ಗುರುಗಳಲ್ಲಿ ಪ್ರಾರ್ಥಿಸಿಕೊಂಡೆ ಭವಿಷ್ಯದಲ್ಲಿ ಯಾವತ್ತು ನಿಯಮ ಖಂಡನೆ ಮಾಡುವುದಿಲ್ಲವೆಂದು ಮತ್ತು ಪುನರ ಉಪದೇಶ ಪಡೆದೆ. ನನ್ನ ಗಂಡ ನನ್ನ ತವರು ಮನೆಯಲ್ಲಿ ಫೋನ್ ಮಾಡಿ ಆಶ್ರಮಕ್ಕೆ ಹೋಗಿರುವುದಾಗಿ ತಿಳಿದು ನನಗೆ ಫೋನ್ ಮಾಡಿ ತಾನು ಮಾಡಿದ ತಪ್ಪನ್ನು ಒಪ್ಪಿಕೊಂಡು ಈ ರೀತಿ ಎಂದು ಮಾಡುವುದಿಲ್ಲ ಎಂದರು. ಇಗ ನಾವು ನಮ್ಮ ಪರಿವಾರದಲ್ಲಿ ಬಹಳ ಸುಖಿಯಾಗಿದ್ದೆವೆ.

॥ ಸತ್ ಸಾಹೇಬ್ ॥ **8550066959**

## "೧೧,೦೦೦ ಓಲ್ಟೇಜ್‌ನ ವೈರ್‌ನಿಂದ ಬಿಡುಗಡೆಗೊಳಿಸುವುದು"

ನಾನು ಭಕ್ತ ಸುರೇಶದಾಸ, ಚಾಂದರಾಮರ ಪುತ್ರ, ನಿವಾಸಿ ಹಳ್ಳಿ–ಧನಾನಾ, ಜಿಲ್ಲೆ–ಸೋನಿಪತ್, ಆದರೆ ಈಗ ಶಾಸ್ತ್ರಿನಗರ, ರೋಹತಕ್ (ಹರಿಯಾಣ)ದಲ್ಲಿ ವಾಸವಾಗಿದ್ದೇನೆ. ಸದ್ಗುರುವಿನಿಂದ ನಾಮಸ್ಮರಣೆಯ ದೀಕ್ಷೆ ತೆಗೆದುಕೊಳ್ಳುವ ಮೊದಲು ನನ್ನ ಮನೆಯ ಆರ್ಥಿಕ ಸ್ಥಿತಿ ತುಂಬಾ ಹೀನಾಯ ಸ್ಥಿತಿಯಲ್ಲಿತ್ತು. ಕುಟುಂಬದಲ್ಲಿ ಎಲ್ಲಾ ಸದಸ್ಯರು ಒಂದಲ್ಲಾ ಒಂದು ಅನಾರೋಗ್ಯದಿಂದ ನರಳುತ್ತಿದ್ದರು ಹಾಗೂ ಯಾವೊಬ್ಬ ವ್ಯಕ್ತಿಯೂ ಈ ತೊಂದರೆಯಿಂದ ಹೊರಗುಳಿದಿದ್ದಾನೆ ಎನ್ನುವಂತಿರಲಿಲ್ಲ. ನನ್ನ ಪತ್ನಿಗೆ ಭೂತ ಪ್ರೇತಗಳು ಬಹಳಷ್ಟು ತೊಂದರೆಯನ್ನು ನೀಡುತ್ತಿದ್ದವು. ಇಷ್ಟು ಕಷ್ಟಗಳು ಇದ್ದರೂ ಕೂಡಾ ನಾವು ದೇವ–ದೇವತೆಗಳ ಪೂಜೆಯನ್ನು ಅತಿಯಾಗಿ ಮಾಡುತ್ತಿದ್ದೆವು ಮತ್ತು ನನಗೆ ಆಂಜನೆಯನ ಬಗ್ಗೆ ಬಹಳಷ್ಟು ನಂಬಿಕೆ ಇತ್ತು. ಆದರೆ ಮನೆಯಲ್ಲಿ ಸಂಕಟವು ಮೇಲಿಂದ ಮೇಲೆ ಬರುತ್ತಲಿದ್ದವು. ಯಾವುದೇ ಕಾರ್ಯವು ಸಂಪನ್ನತೆಯಿಂದ ಆಗುತ್ತಿರಲಿಲ್ಲ. ಪೂರ್ಣ ಪರಮಾತ್ಮ ಸದ್ಗುರು ರಾಮ್‌ಪಾಲ್ ಮಹಾರಾಜರು ನನ್ನ ಪರಿವಾರದವರೇ ಆದ ಕಾರಣ ನಾವು ಅವರನ್ನು ಪೂರ್ಣ ಪರಮಾತ್ಮನೆಂದು ಒಪ್ಪಿರಲಿಲ್ಲ. ಅದರ ಫಲವನ್ನು ನಾವು ಬಹಳ ವರ್ಷಗಳವರೆಗೆ ಅನುಭವಿಸಬೇಕಾಯಿತು. ಆಗಲೇ ಸಿಂಹಪುರ ಹಳ್ಳಿಯ ನಿವಾಸಿ ಭಕ್ತ ವಿಕಾಸನು ನನಗೆ ಈ ರೀತಿ ಹೇಳಿದನು. "ನಿಮ್ಮ ಮನೆಗೆ ಪೂರ್ಣ ಪರಮಾತ್ಮ ಜಗದ್ಗುರು ರಾಮ್‌ಪಾಲ್ ಮಹಾರಾಜರು ಬಂದಿದ್ದಾರೆ ಆದರೆ ನೀವು ನಿಮ್ಮ ಕಷ್ಟಗಳ ಸುಳಿಯಲ್ಲಿ ಮಲಗಿ ಬಿಟ್ಟಿದ್ದೀರಿ" ಎಂದನು, ಆಗ ನಾನು, "ಕಾಲನು ಎಷ್ಟು ಕಷ್ಟವನ್ನು ಕೊಟ್ಟಿದ್ದಾನೆಂದರೆ ಅವರ ಬಗ್ಗೆ ತಿಳಿದುಕೊಳ್ಳಲು ಸಮಯವೇ ದೊರೆಯಲಿಲ್ಲ. ಎಲ್ಲಾ ಸಮಯದಲ್ಲೂ ಡಾಕ್ಟರ್ ಬಳಿ ಹೋಗಿ ಬರುವುದರಲ್ಲೇ ಕಳೆದು ಹೋಯಿತು. ಅದರ ಮೇಲೆ ಆರ್ಥಿಕ ಮುಗ್ಗಟ್ಟು ಕೂಡಾ ಬಹಳವಾಗಿತ್ತು" ಎಂದೆನು. ಆಗ ಆ ಭಕ್ತನು ನನಗೆ ಬಹಳಷ್ಟು ತಿಳಿಸಿ ಹೇಳಿದನು. ಪೂರ್ಣ ಪರಮಾತ್ಮನಿಗೆ ಎಷ್ಟರಮಟ್ಟಿಗೆ ದಯೆ ಇತ್ತೆಂದರೆ ನಾನು ರಾಮ್‌ಪಾಲ್ ಮಹಾರಾಜರಿಂದ ನಾಮಸ್ಮರಣೆಯ ಉಪದೇಶ ಪಡೆಯಲೆಂದು

ಅಕ್ಟೋಬರ್ 2010ರಲ್ಲಿ ಸತ್ಯಲೋಕ ಆಶ್ರಮ ಬರವಾಲಾ ತಲುಪಿದೆನು. ಮಂತ್ರಪಠಣದ ಉಪದೇಶ ಪಡೆದ ನಂತರ ಸದ್ಗುರುವು ತನ್ನ ದಯೆಯ ಭಂಡಾರವನ್ನು ತೆರೆದರು ಮತ್ತು ನನಗೆ ಆ ಸುಖದ ಅನುಭವವಾಗತೊಡಗಿತು. ಆ ಸುಖದ ಅನುಭವವನ್ನು ಈ ಪಾಮರನ ನಾಲಿಗೆಯಿಂದ ವರ್ಣಿಸಲು ಬಹಳ ಕಷ್ಟಸಾಧ್ಯವಾಗಿತ್ತು.

ನನ್ನ ಹೆಂಡತಿಗೆ ಭೂತ–ಪ್ರೇತಗಳು ಬಹಳ ತೊಂದರೆ ನೀಡುತ್ತಿದ್ದವು. ಸದ್ಗುರುವಿನ ದಯೆಯಿಂದ ಈಗ ಪೂರ್ಣವಾಗಿ ಆರೋಗ್ಯವಾಗಿದ್ದಾಳೆ. 7 ಸೆಪ್ಟೆಂಬರ್ 2011ರಲ್ಲಿ ನನ್ನ ಮಗ ಮೋಹಿತ್, 12 ವರ್ಷ ವಯಸ್ಸು, ನನ್ನ ಅಣತಿಯಂತೆ ಮೆಕ್ಯಾನಿಕ್‌ನನ್ನು ಕರೆದುಕೊಂಡು ಬರಲು ಹೋಗಿದ್ದನು. ನನ್ನ ಮಗ ಮೆಕ್ಯಾನಿಕ್‌ನ ಟೆರೇಸ್‌ನ ಮೇಲೆ ಹತ್ತಲು ಸಜ್ಜದ ಮೇಲೆ ಹೋದನು. ಛಜ್ಜಾದ ಪಕ್ಕದಲ್ಲೇ ಮೇಲೆ 11,000 (ಹನ್ನೊಂದು ಸಾವಿರ) ಓಲ್ಟೇಜ್‌ನ ಕರೆಂಟಿನ ವೈರು ಇತ್ತು. ಮಗು ಹಾಗೂ ವೈರಿನ ಮಧ್ಯದಲ್ಲಿ ಒಂದು ಅಡಿಯ ಅಂತರವಿತ್ತು. ಯಾವಾಗ ಮಗು ವೈರಿನ ಹತ್ತಿರ ಹೋದನೋ ವೈರುಗಳು ಹುಡುಗನನ್ನು ಸೆಳೆದುಕೊಂಡು ಬಿಟ್ಟವು ಮತ್ತು ಹುಡುಗನ ತಲೆಗೆ ವೈರುಗಳು ಅಂಟಿಕೊಂಡವು ಒಂದು ಇಂಚಿನಷ್ಟು ಒಳಗೆ ಹೊರಟು ಹೋಯಿತು. ಮುಖವು ಸುಟ್ಟು, ಕರೆಂಟು ಮೈಯ್ಯಲ್ಲೆಲ್ಲಾ ಹರಿದು ಕಾಲಿನ ಹೆಬ್ಬೆರಳಿನ ಮೂಳೆಯು ಮುರಿದು ಹೋಯಿತು. ಅದೇ ಸಮಯದಲ್ಲಿ ಸದ್ಗುರು ರಾಮ್‌ಪಾಲ್ ಮಹಾರಾಜರು ಆಕಾಶಮಾರ್ಗದಿಂದ ಬಂದರು. ಮತ್ತು ನನ್ನ ಮಗನಿಗೆ ಬಹಳ ತೇಜೋಮಯ ಶರೀರದಲ್ಲಿ ಕಾಣಿಸಿಕೊಂಡರು, 1000 ಟ್ಯೂಬ್‌ಲೈಟ್‌ಗಳ ಬೆಳಕು ಕೂಡಿದರೆ ಹೇಗಿರುವುದೋ ಹಾಗೆ ಕಾಣಿಸಿಕೊಂಡರು. ಅವರು ಹುಡುಗನ ಕೈಹಿಡಿದು ಕರೆಂಟ್ ನಿಂದ ಬಿಡಿಸಿ ಸಜ್ಜದ ಮೇಲೆ ಮಲಗಿಸಿದರು. ನಂತರ ಮಗುವಿನ ಜೊತೆಯಲ್ಲಿ ಬಹಳ ಹೊತ್ತು ಮಾತನ್ನಾಡಿದರು. ನಂತರ ಸದ್ಗುರು ಹೊರಡಲನುವಾದಾಗ ಮಗುವು 'ಗುರೂಜಿ ಎಲ್ಲಿಗೆ ಹೋಗುತ್ತಿರುವಿರಿ?' ಎಂದು ಕೇಳಿದರು. ಗುರೂಜಿ ಉತ್ತರಿಸುತ್ತಾ, "ಮಗೂ, ನಾನು ನಿನ್ನ ಜೊತೆಯಲ್ಲಿ ಇರುವೆನು. ನೀನು ಹೆದರದಿರು". ಆ ಸಮಯದಲ್ಲಿ ನನ್ನ ಮಗುವಿನ ಅಜ್ಜಿ ಅಲ್ಲಿಯೇ ಇದ್ದರು. ಅವರು ಈ ದೃಶ್ಯವನ್ನು ತನ್ನ ಕಣ್ಣುಗಳಿಂದ ನೋಡಿ, ಬಹಳಷ್ಟು ಹೆದರಿಬಿಟ್ಟಿದ್ದರು. ಯಾಕೆಂದರೆ ಹುಡುಗನ ಶರೀರದಿಂದ ಕರೆಂಟಿನ ಕಿಡಿಗಳು ಹೊರ ಹೊಮ್ಮುತ್ತಿದ್ದವು.

ಅದರ ನಂತರ ನಾವು ಹುಡುಗನನ್ನು ಪಿ.ಜಿ.ಐ. ರೋಹತಕ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ಕೂಡಾ ನನ್ನ ಮಗನಿಗೆ ಗುರುಗಳು ಕಾಣಿಸಿಕೊಂಡರು. ನನ್ನ ಮಗ "ಗುರೂಜಿ ನನ್ನ ಬಳಿ ಇದ್ದಾರೆ. ನೀವು ಹೆದರಬೇಡಿ" ಎಂದನು. ಒಂದು ವೇಳೆ ನಾವು ಗುರುಗಳಲ್ಲಿ ಶರಣಾಗತರಾಗದಿದ್ದಲ್ಲಿ ನಮ್ಮ ಮಗ ಇಂದು ಜೀವಂತವಾಗಿರುತ್ತಿರಲಿಲ್ಲ ಮತ್ತು ನನ್ನ ಪತ್ನಿಯನ್ನು ಪ್ರೇತಗಳು ಕೊಂದುಬಿಡುತ್ತಿದ್ದವು. ನಮ್ಮ ಕುಟುಂಬವು ನಾಶವಾಗದೆ ಉಳಿದುಕೊಂಡಿತು. ಇದು ಸದ್ಗುರು ರಾಮ್‌ಪಾಲ್ ಮಹಾರಾಜರ ದಯೆಯೇ ಆಗಿದೆ.

ಎಲ್ಲಾ ಓದುಗರಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ನನ್ನ ಸತ್ಯಕಥೆಯನ್ನು ಓದಿ ತಾವು ಕೂಡಾ ಸದ್ಗುರು ರಾಮ್‌ಪಾಲ್ ದಾಸರಲ್ಲಿ ಶರಣಾಗತರಾಗಿ ತಮ್ಮ ಕಲ್ಯಾಣವನ್ನು ಮಾಡಿಕೊಳ್ಳಿ ಮತ್ತು ಪ್ರಾರಬ್ಧದಲ್ಲಿ ಬರೆದ ಕರ್ಮಗಳ ಕಾರಣದಿಂದ ಯಾವ ಘಟನೆಗಳು ನಡೆಯಬೇಕಾಗಿದೆಯೋ ಅವುಗಳಿಂದ ಪೂರ್ಣವಾಗಿ ಪಾರಾಗಿ. ಸದ್ಗುರು ರಾಮ್‌ಪಾಲ್ ಮಹಾರಾಜರ ಸತ್ಸಂಗದಲ್ಲಿ ನಾನು ಕೇಳಿದೆ, ಏನೆಂದರೆ ಪೂರ್ಣ ಪರಮಾತ್ಮ ಕಬೀರರು ಮುಕ್ತಿದಾತರು, ನಮ್ಮ ಎಲ್ಲಾ ಪಾಪಗಳನ್ನು ನಾಶಮಾಡುವರು. ಹೀಗೆ ಪ್ರಮಾಣ (ಸಾಕ್ಷ್ಯವು) ಋಗ್ವೇದ ಮಂಡಲ 10 ಸೂಕ್ತ 161 ಮಂತ್ರ 2 ರಲ್ಲಿ ಮತ್ತು ಮಂಡಲ 9 ಸೂಕ್ತ

80 ಮಂತ್ರ 2 ರಲ್ಲಿ ಬರೆಯಲಾಗಿದೆ ಏನೆಂದರೆ ಯಾವುದೇ ರೋಗಿಯ ಪ್ರಾಣಶಕ್ತಿ ಕ್ಷೀಣವಾಗಿರುವುದೋ ಮತ್ತು ಅವನ ಆಯಸ್ಸು ಕೂಡಾ ಬಾಕಿ ಇಲ್ಲದೇ ಇರುವುದೋ ಅವನ ಪ್ರಾಣದ ರಕ್ಷಣೆ ಮಾಡುವೆನು. ಮತ್ತು ಅವನಿಗೆ 100 ವರ್ಷ ಆಯಸ್ಸನ್ನು ನೀಡಿ ಅರ್ಥಾತ್ ಅವನ ಜೀವಿತ ಕಾಲವನ್ನು ದೀರ್ಘಗೊಳಿಸಿ ಸಾಧಕನಿಗೆ ಸರ್ವಸುಖವನ್ನು ನೀಡುವೆನು.

ಸಜ್ಜನರೇ, ಸದ್ಗುರು ರಾಮ್‌ಪಾಲ್ ಮಹಾರಾಜರು ತಮ್ಮ ಅಮೃತ ವಚನಗಳಲ್ಲಿ ಈ ವಿಚಾರವನ್ನೂ ಹೇಳಿದ್ದಾರೆ. ಪ್ರತಿಯೊಂದು ಪ್ರಾಣಿಯೂ ತಾನು ಮಾಡಿದ ಕರ್ಮದನುಸಾರವಾಗಿಯೇ ಸುಖ ಅಥವಾ ದುಃಖವನ್ನು ಪಡೆಯುತ್ತಾನೆ. ದುಃಖವು ಪಾಪಕರ್ಮದ ಫಲವಾಗಿದೆ ಮತ್ತು ಸುಖವು ಪುಣ್ಯ ಕರ್ಮದ ಫಲವಾಗಿದೆ. ಇಲ್ಲಿಯವರೆಗೂ ಎಲ್ಲಾ ವಿದ್ವಾಂಸರೂ, ಗುರುಗಳು, ಸಂತರೂ ಇದನ್ನೇ ಹೇಳುತ್ತಿದ್ದಾರೆ ಏನೆಂದರೆ ಪ್ರಾರಬ್ಧ ಕರ್ಮಗಳನ್ನು ಮಾಡಿರುವ ಪ್ರಾಣಿಯು ಅದನ್ನು ಅನುಭವಿಸಿಯೇ ತೀರಿಸಬೇಕಾಗುವುದು. ಹೇ ಸಭ್ಯ ಓದುಗರೇ, ಪಾಪಕರ್ಮದಿಂದ ದುಃಖವು ಉಂಟಾಗುತ್ತದೆ. ಒಂದು ವೇಳೆ ಪಾಪ ಕರ್ಮಗಳು ನಾಶವಾಗಿಬಿಟ್ಟರೆ, ದುಃಖವು ತಂತಾನೇ ಕಡಿಮೆಯಾಗುವುದು. ಆದ್ದರಿಂದ ಭಕ್ತಿಭಾವದಿಂದ ಭಗವಂತನ ಸ್ಮರಣೆ ಮಾಡಿ, ಪಾಪಕರ್ಮಗಳ ಫಲವನ್ನು (ದುಃಖ) ಅನುಭವಿಸುತ್ತಿರಬೇಕಾದರೆ, ಭಕ್ತಿಯು ದುಃಖದ ಅಂತ್ಯವನ್ನು ಕಂಡುಕೊಳ್ಳುತ್ತದೆ. 7 ಸೆಪ್ಟೆಂಬರ್ 2011ರಲ್ಲಿ ನಮ್ಮ ಪ್ರಾರಬ್ಧ ಕರ್ಮದ ಪಾಪದ ಕಾರಣ ನನ್ನ ಪುತ್ರ ಮೋಹಿತನ ಮೃತ್ಯು ಆಗಬೇಕಾಗಿತ್ತು. ನಮ್ಮ ಸದ್ಗುರು ರಾಮ್‌ಪಾಲ್ ದಾಸರ ಕೃಪೆಯಿಂದ ಪರಮ ಪೂಜ್ಯ ಕಬೀರ ಪರಮೇಶ್ವರನು ನಮ್ಮ ಪಾಪವನ್ನು ನಾಶ ಮಾಡಿದರು ಮತ್ತು ನನ್ನ ಮಗುವಿನ ಪ್ರಾಣವನ್ನು ಉಳಿಸಿ ಆತನ ಆಯಸ್ಸನ್ನು ಹೆಚ್ಚಿಸಿದರು. ಒಂದು ವೇಳೆ ಸೆಪ್ಟೆಂಬರ್ 2011ರಲ್ಲಿ ಪ್ರಾರಬ್ಧ ಕರ್ಮದ ಫಲಸ್ವರೂಪ ನನ್ನ ಮಗ ಮರಣ ಹೊಂದಿದ್ದರಂತೂ ಇಡೀ ಕುಟುಂಬದ ಸದಸ್ಯರುಗಳು ಭಕ್ತಿ, (ನಾಮಸ್ಮರಣೆ)ಯನ್ನು ತ್ಯಾಗ ಮಾಡಿ ನಾಸ್ತಿಕರಾಗಿಬಿಡುತ್ತಿದ್ದೆವು. ಏಕೆಂದರೆ ನಮಗೆ ಆ ಸಮಯದಲ್ಲಿ ಪರಮಾತ್ಮನ ಪೂರ್ಣ ಜ್ಞಾನವಿರಲಿಲ್ಲ. ಈಗ ಭಗವಂತನ ಮೇಲೆ ಅತ್ಯಧಿಕ ವಿಶ್ವಾಸ ಉಂಟಾಗಿದೆ. ಪರಮಪೂಜ್ಯ ಕಬೀರ ಪರಮೇಶ್ವರರೇ ಪಾಪನಾಶಕರು, ಸರ್ವಸುಖದಾಯಕರು ಮತ್ತು ಪೂರ್ಣ ಮೋಕ್ಷದಾಯಕರಾಗಿದ್ದಾರೆ ಮತ್ತು ಸದ್ಗುರು ರಾಮ್‌ಪಾಲ್ ದಾಸರು ಕಬೀರರು ಕಳುಹಿಸಿದ ಅವರ ಅವತಾರವೇ ಆಗಿದ್ದಾರೆ ಎಂಬುದು ದೃಢವಾದ ನಂಬಿಕೆಯಾಗಿದೆ. ಅಲ್ಲದೆ ತಮ್ಮಲ್ಲಿ ಪುನಃ ಪ್ರಾರ್ಥಿಸುತ್ತಿರುವುದೇನೆಂದರೆ ವಿಳಂಬ ಮಾಡದೆ ಸತ್ಯಲೋಕ ಆಶ್ರಮ ಬರವಾಲಕ್ಕೆ ಬಂದು, ಉಪದೇಶ ಪಡೆದು ಉದ್ಧಾರವಾಗಿ. ನಿಮ್ಮಲ್ಲಿ ನಾನು ಪ್ರಾರ್ಥನೆ ಮಾಡುವ ಉದ್ದೇಶ ಇದಾಗಿದೆ, ನನ್ನ ಹಾಗೆ ಬಹಳಷ್ಟು ಜನರು ದುಃಖದಲ್ಲಿದ್ದಾರೆ. ನನ್ನ ಈ ಮೇಲಿನ ಆತ್ಮಕಥೆ ಓದಿ ಯೋಚನೆ ಮಾಡಿ. ನೀವೂ ಕೂಡಾ ನನ್ನ ಹಾಗೆ ಸಂಕಟಗಳ ನಿವಾರಣೆಯನ್ನು ಮಾಡಿಕೊಳ್ಳಬಹುದಾಗಿದೆ ಹಾಗೂ ಸುಖೀ ಜೀವನವನ್ನು ನಡೆಸಬಹುದಾಗಿದೆ.

ಯಹ್ ಸಂಸಾರ್ ಸಮಝುದಾ ನಾಹೀಂ, ಕಹಂದಾ ಶಾಮ್ ದೋಪಹರೆ ನೂಂ ।
ಗರೀಬ್‌ದಾಸ ಯಹ್ ವಕ್ತ್ ಜಾತ್ ಹೈ, ರೋವೋಗೆ ಇಸ್ ಪಹರೆ (ಸಮಯ್) ನೂಂ ॥

ಪ್ರಾರ್ಥಿ ಭಕ್ತ ಸುರೇಶದಾಸ,
ಶ್ರೀ ಚಾಂದರಾಮರ ಪುತ್ರ, ಶಾಸ್ತ್ರೀನಗರ,
ಹಿಸಾರ್ ಬೈಪಾಸ್ ರೋಹತಕ್, ಮೊ.ನಂ. 09829588628

## "ಪೂರ್ಣ ಪರಮಾತ್ಮನು ಸಾಧಕರ ಭಯಂಕರ ರೋಗ ವನ್ನು ಮುಕ್ತಗೊಳಿಸಿ ಆಯಸ್ಸನ್ನು ವೃದ್ಧಿಸುತ್ತಾನೆ."

(ಭಕ್ತ ಡಾ॥ ಓಂ ಪ್ರಕಾಶ್ ಹುಡ್ಡಾ (**C.M.O**) ರವರ ಪ್ರಮಾಣ)

ಋಗ್ವೇದದ 10ನೇ ಮಂಡಲದ, 161ನೇ ಸೂಕ್ತಿಯ, 1 ಮತ್ತು 2ನೇ ಮಂತ್ರದಲ್ಲಿ ಪರಮೇಶ್ವರರು ಹೇಳಿದ್ದಾರೆ. ಯಾರಿಗಾದರೂ ಪ್ರತ್ಯಕ್ಷ ಅಥವಾ ಗುಪ್ತ ಕ್ಷಯರೋಗ ರಾಜಕ್ಷಯವಾಗಿದ್ದರೂ, ಅದನ್ನು ಸಹ ಗುಣಪಡಿಸುತ್ತೇನೆ. ಯಾವುದೆ ರೋಗಿಯ ಪ್ರಾಣ ಕ್ಷೀಣವಾಗಿದ್ದರೆ, ಯಾರದ್ದಾದರೂ ಆಯಸ್ಸು ಶೇಷವಿರದಿದ್ದರೆ ಅವರಿಗೆ 100 ವರ್ಷಗಳ ಆಯಸ್ಸನ್ನು ವೃದ್ಧಿಸುವೆ ಎಲ್ಲಾ ಸುಖಗಳನ್ನು ಕರುಣಿಸುವೆ, ಮಂತ್ರ 5ರಲ್ಲಿ ಹೇಳಿದೆ 'ಹೇ ಪುನರ್ ಜೀವನ ಪ್ರಾಪ್ತ ಪ್ರಾಣಿಯೇ, ನೀನು ಸರ್ವ ಭಾವದಿಂದ ನನಲ್ಲಿ ಶರಣು ಬಾ ಒಂದು ವೇಳೆ ಪಾಪ ಕರ್ಮದ ದಂಡದ ಕಾರಣ ನಿಮ್ಮ ಕಣ್ಣುಗಳು ಕುರುಡಾಗಿದ್ದರೆ ನಿನಗೆ ಜೀವನ ಪರ್ಯಂತ ನೇತ್ರದಾನ ಮಾಡುವೆ, ನಿನ್ನನ್ನು ರೋಗಮುಕ್ತಗೊಳಿಸಿ ಸಕಲ ಅಂಗಗಳನ್ನು ಪ್ರಧಾನ ಮಾಡುವೆ'.

ಜಮ್ ಜೊರಾ ಜಾಸೆ ಡರೆ, ಮಿಟೆ ಕರ್ಮ ಕೆ ಲೇಖ್ ।
ಅದಲೀ ಅದಲ್ ಕಬೀರ್ ಹೈ, ಕುಲ್ ಕೆ ಸತ್‌ಗುರು ಏಕ್ ॥

ಮೇಲಿನ ಪಂಕ್ತಿಗಳು ನನ್ನ ಜೀವನದಲ್ಲಿ ಪೂರ್ಣ ರೂಪದಲ್ಲಿ ಸತ್ಯವಾಗಿದೆ. ನಾನು ಭಕ್ತ ಡಾಕ್ಟರ್ ಓಂ ಪ್ರಕಾಶ್ ಹುಡ್ಡಾ (**C.M.O.-M.B.B.S.,M.S(Eye specialist)**) 18**A** ಸರಕುಲರ್ ರೋಡ್, ರೋಹತ್‌ಕ್ ದಲ್ಲಿದ್ದೇನೆ. ನನ್ನ ಮೊ. ನಂ 9813265050. ನಾನು ಹುಟ್ಟಿದ ದಿನಾಂಕ : 12–4–1953, ಹುಟ್ಟಿದ ಸ್ಥಳ ಕಿಲೋಈ ಎಂಬ ಹಳ್ಳಿ, ರೋಹತಕ್ ಜಿಲ್ಲೆ, ನನ್ನ 5 ರಿಂದ 12ನೇ ತರಗತಿಯವರೆಗಿನ ವಿದ್ಯಾಭ್ಯಾಸ **D.A.V** ಸ್ಕೂಲ್ ಹಾಗೂ **D.A.V** ಕಾಲೇಜ್, ಅಮೃತಸರದಲ್ಲೇ ಆಯಿತು. ಅಮೃತಸರದಲ್ಲಿ ನನ್ನ ಅಣ್ಣ ಗ್ರಂಥಪಾಲಕ (**Librarian**) ರಾಗಿ **D.A.V** ಸ್ಕೂಲಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿನ ಪರಿಚಿತ ಜನರು ಅವರನ್ನು ಪ್ರೀತಿಯಿಂದ ಮಾಸ್ಟರ್‌ಜೀ ಎಂದು, ನನ್ನನ್ನು ಛೋಟೆ ಮಾಸ್ಟರ್ ಜೀ ಎಂದು ಕರೆಯುತ್ತಿದ್ದರು. ನಾನು ಆರನೆಯ ತರಗತಿಯಲ್ಲಿ ಓದುತ್ತಿದ್ದಾಗ, ಒಬ್ಬ ಮಹಾತ್ಮರು (ಅಮೃತ ಸರದಲ್ಲಿದ್ದವರು) ನನ್ನ ಹಸ್ತರೇಖೆಯನ್ನು ನೋಡಿ, ನೀನು ವೈದ್ಯನಾಗುವೆ, ಆದರೆ ನಿನ್ನ ಆಯಸ್ಸು ಕೇವಲ 50 ವರ್ಷಗಳು ಮಾತ್ರ ಎಂದು ತಿಳಿಸಿದರು. ಆ ಮೇಲೆ ಅವರಿಗೆ ಭಯವಾಯಿತು. ನಾನೂ ಈ ಚಿಕ್ಕ ಬಾಲಕನಿಗೆ ಸತ್ಯಾಂಶವನ್ನು ತಿಳಿಸಿ ತಪ್ಪು ಮಾಡಿದೆ. ಆದರೆ ಮಹಾತ್ಮರ ಮಾತುಗಳಿಗೆ ಅಂದು ನಾನು ಕೇಳಿಸಿದರೂ ಕೇಳಿಸದ ಹಾಗಿದ್ದು ಬಿಟ್ಟೆ. ನಾನು ದೊಡ್ಡವನಾಗಿ ವೈದ್ಯನಾದೆ. **M.B.B.S** ಹಾಗೂ **M.S** ಪರೀಕ್ಷೆ ಪಾಸು ಮಾಡಿದೆ.

ಸರಿಯಾಗಿ ನನಗೆ 50ವರ್ಷ ಪೂರೈಸುವುದರಲ್ಲಿತ್ತು. ದಿನಾಂಕ 10/11 ಏಪ್ರಿಲ್ 2003, ರಾತ್ರಿ ಸರಿಯಾಗಿ 12 ಗಂಟೆಗೆ ನನ್ನ ಎರಡೂ ಕೈಗಳಲ್ಲಿ ಬಹಳ ನೋವು ಕಾಣಿಸಿಕೊಂಡಿತು. ಎದೆಯಲ್ಲಿ ಒತ್ತಡ ಶುರುವಾಯಿತು. ಆಗ ನಾನು ರೋಹತಕ್‌ನಲ್ಲಿ ಇದ್ದೆ. ನಮ್ಮ ಪರಿವಾರದವರೆಲ್ಲಾ ಜೊತೆಯಲ್ಲಿದ್ದರು. ಚಿಕಿತ್ಸೆಗಾಗಿ **P.G.I.M.S** ಗೆ ಹೋದೆವು. ಈ ಮೊದಲು ನನಗೆ ಸಕ್ಕರೆ ಕಾಯಿಲೆಯಾಗಲೀ, ಅಧಿಕ ರಕ್ತದೊತ್ತಡವಾಗಲಿ ಇರಲಿಲ್ಲ. ನಾಮೋಪದೇಶ ಪಡೆಯುವ ಮೊದಲು ನಾನು ಧೂಮ್ರಪಾನ (ನನ್ನ 23 ವರ್ಷಗಳವರೆಗೆ) ಮಾಡಿದ್ದೆ.

ಅಲ್ಲಿದ್ದ ಡ್ಯೂಟಿ ಡಾಕ್ಟರೊಂದಿಗೆ ನನ್ನ ಪರಿಚಯ ತಿಳಿಸಿದೆ. ಪದವಿದೃಷ್ಟಿಯಿಂದ ಅವರು **H.C.M.S.I (Group A)** ಶ್ರೇಣಿಯಲ್ಲಿದ್ದರು. ನಾನು **S.M.O** ಪದದಲ್ಲಿ ಸೇವಾನಿರತನಿದ್ದೆ. (ಆ ಕಾಲದ **S.M.O** ಈಗ **C.M.O** ಎನ್ನುತ್ತಾರೆ) ನನ್ನ ಪರಿಚಯವಾದ ಮೇಲೆ ವೈದ್ಯರು ತಕ್ಷಣ ಉಚಿತ ತಪಾಸಣೆ ಆದ ಮೇಲೆ, ನನಗೆ ಚಿಕಿತ್ಸೆ ಶುರುಮಾಡಿದರು. ನಂತರ **I.C.U** ನಲ್ಲಿ ಶಿಫ್ಟ್ ಮಾಡುವವರೆಗೆ ಎಲ್ಲ ಗತಿ–

ವಿಧಿಗಳನ್ನು ಪರೀಕ್ಷಿಸಲಾಯಿತು. ಆದರೆ I.C.U ಗೆ ಶಿಫ್ಟ್ ಮಾಡಿದ ಸ್ವಲ್ಪ ಸಮಯದ ನಂತರ, ನನಗೆ ಏನಾಯಿತು? ಎಂದು ತಿಳಿಯದಾಯಿತು. ಸುಮಾರು ಒಂದುವರೆ ಗಂಟೆಗಳ ತರುವಾಯ ಕಾಲನ ಧೂತರು ನನ್ನನು ಸುತ್ತುಗಟ್ಟಿ ನಿಂತಿದ್ದಂತೆ ಭಾಸವಾಯಿತು. ಅವರು ಹೇಳಿದರು– "ನಿನ್ನ ಸಮಯ ಮುಗಿಯಿತು ನಾನು ನಿನ್ನನ್ನು ಕರೆದೊಯ್ಯಲು ಬಂದಿರುವೆವು" ನಾನು ಆಗ ಅವರಿಗೆ ಏನನ್ನೂ ಹೇಳದ ಪರಿಸ್ಥಿತಿಯಲ್ಲಿದ್ದಾಗ, ನನ್ನ ಹಾಸಿಗೆಯ ಬಳಿ ಸಂತ ರಾಮ್‌ಪಾಲ್ ಮಹಾರಾಜರು ಪ್ರಕಟವಾದರು. ಅವರನ್ನು ಕಂಡು ಭಯಂಕರ ರೂಪದ ಕಾಲನ ಧೂತರು ಹೆದರಿ ಅದೃಶ್ಯವಾದರು.

ನನ್ನ ಸದ್ಗುರು ದೇವರು ಹೀಗೆ ಆಶೀರ್ವಾದ ಮಾಡಿದರು "ಕಬೀರ್ ಪರಮೇಶ್ವರನು ನಿನ್ನ ಆಯಸ್ಸನ್ನು ತಮ್ಮ ಖೋಟಾದಿಂದ ಹೆಚ್ಚಿಸಿದ್ದಾರೆ. ಮತ್ತು ತಾವು ಭಕ್ತಿಯಲ್ಲಿ ಪೂರ್ಣತಲ್ಲಿನರಾಗಿ, ಸತ್ಯಲೋಕಕ್ಕೆ ಹೋಗಬಹುದು. ನಾನು ಅಳುತ್ತಾ ಹೇಳಿದೆ "ಸ್ವಾಮಿ ತಾವೇ ಸ್ವಯಂ ಪರಮೇಶ್ವರರು. ತಮ್ಮನ್ನು ತಾವು ಈ ಶರೀರದಲ್ಲಿ ಮುಚ್ಚಿಕೊಂಡಿರುವಿರಿ. ಪರಮೇಶ್ವರನ ಭಕ್ತಿಯನ್ನು ತಾವೇ ಮಾಡಿಸುವವರಾಗಿರುವಿರಿ. ನಾನು ಭಕ್ತಿಮಾಡಲು ಯಾರು?" ಇಷ್ಟು ಹೇಳುವುದರಲ್ಲಿ ನನ್ನ ಕಣ್ಣು ತೆರೆಯಿತು. ನನ್ನ ಕಣ್ಣುಗಳಿಂದ ಕಣ್ಣೀರ ಧಾರೆ ಹೊರತಾಗಿ ಇನ್ನೇನೂ ಇರಲಿಲ್ಲ. 3 ದಿನಗಳ ನಂತರ ನನ್ನನ್ನು I.C.U ನಿಂದ ವಾರ್ಡ್‌ಗೆ ತರುತ್ತಿದ್ದಾಗ ನಾನು ಎದ್ದು ಓಡಾಡ ತೊಡಗಿದೆ. ಆಗ ಡಾಕ್ಟರ್ ಓಡಿ ಬಂದು ನನ್ನನ್ನು ಹಿಡಿದುಕೊಂಡು ಕೇಳಿದರು. "ನೀನು ಎಲ್ಲಿಗೆ ಹೋಗುತ್ತಿರುವೆ? ನೀನು ನಡೆಯಬಾರದು. ನಿನಗೆ ಹೃದಯ ಸ್ಥಂಭನವಾಗಿದೆ. ಸ್ಪೆಷಲ್ ವಾರ್ಡ್‌ಗೆ ಶಿಫ್ಟ್ ಆದ ನಂತರ ಡಾಕ್ಟರ್ ಹೀಗೆ ಹೇಳಿದರು ತಾ: 10/11ರ ರಾತ್ರಿಯಲ್ಲಿ ತಮ್ಮ E.C.G ಹಾಗೂ B.P ರಿಪೋರ್ಟ್ ಹೇಳುತ್ತಿದ್ದ ಪ್ರಕಾರ ನೀವು ಉಳಿಯುವ ಸಂಭವವೇ ಇರಲಿಲ್ಲ. ಆದರೆ ಬೆಳಿಗ್ಗೆ ನಿಮ್ಮ B.P ನೋಡಿದರೆ ಮತ್ತೆ ನೀವು ಸಾಮಾನ್ಯ (Normal) ಸ್ಥಿತಿಯಲ್ಲಿದ್ದಿರಿ.

ನಾನು 25–12–1999 ರಂದು ತತ್ವದರ್ಶಿ ಸಂತ ರಾಮ್‌ಪಾಲ್ ಮಹಾರಾಜರಿಂದ ನಾಮೋಪದೇಶವನ್ನು ಪಡೆದೆ. ಇದಕ್ಕೂ ಮೊದಲು ನಾನು ಬ್ರಹ್ಮಕುಮಾರಿ, ಜೈನೀ, ರಾಧಾಸ್ವಾಮಿಗಳ ಶಿಷ್ಯನಾಗಿದ್ದೆ ಹಾಗೂ D.A.V ಶಾಲೆಯ ಶಿಷ್ಯನಾದ ಕಾರಣ ಆರ್ಯ ಸಮಾಜದ ಪ್ರಭಾವ ನನ್ನ ಮೇಲಿತ್ತು.

ಗಾಯತ್ರಿ ಮಂತ್ರದ ಜಪವನ್ನು ಅನೇಕ ಲಕ್ಷಗಳವರೆಗೆ ಮಾಡಿರಬಹುದು. ಮನೆಯಲ್ಲಿ ಸುಮಾರು ನೂರಾರು ಫೋಟೋಗಳು ದೇವ–ದೇವತೆಯರದ್ದು ಇತ್ತು. ನಾಮೋಪದೇಶದ ನಂತರ ಆ ಎಲ್ಲಾ ಫೋಟೋಗಳನ್ನು ಹರಿವ ನೀರಿನಲ್ಲಿ ವಿಸರ್ಜನೆ ಮಾಡಿದೆ. ಹಾಗೂ ಎಲ್ಲಾ ರೀತಿಯ ಮೊದಲಿನ ನಾನು ಆರಾಧನೆಯನ್ನು ಬಿಟ್ಟು ಬಿಟ್ಟೆ. ಸದ್ಗುಗುರು ರಾಮ್‌ಪಾಲ್ ಮಹಾರಾಜರ ಅಪ್ಪಣೆಯಂತೆ ಪೂರ್ಣ ಪರಮಾತ್ಮ ಕಬೀರ್ ಪರಮೇಶ್ವರರನ್ನು ಭಕ್ತಿಯಿಂದ ಧ್ಯಾನ ಮಾಡತೊಡಗಿದೆ. ಏಕೆಂದರೆ ಸದ್ಗುರು ಹೀಗೆ ಹೇಳಿದ್ದಾರೆ–

ಏಕೈ ಸಾಧೈ ಸಬ್ ಸಧೈ, ಸಬ್ ಸಾಧೈ ಸಬ್ ಜಾವಿ ।
ಮಾಲೀಸೀಂಚೈ ಮೂಲ್ ಕೋ, ಫಲೆ–ಫೂಲೇ ಅಘಾವಿ ॥

ಕಬೀರ್ ಪರಮೇಶ್ವರರ ಭಕ್ತಿಯಲ್ಲಿ ತಲ್ಲೀನನಾದಾಗ, ತತ್ವದರ್ಶಿ ಸಂತರಿಂದ ನಾಮೋಪದೇಶ ಪಡೆದ ನಂತರ ನನಗಾದ ಲಾಭವೆನೆಂದರೆ ಸಂತ ರಾಮ್‌ಪಾಲ್ ಮಹಾರಾಜರು ತಮ್ಮ ಖೋಟಾದಿಂದ ನನ್ನ ಆಯಸ್ಸನ್ನು ಹೆಚ್ಚಿಸಿದರು. "ಈ ಮಾತುಗಳನ್ನು ನಾನು ಹಾಗೂ ನನ್ನ ಪರಿವಾರದ ಸದಸ್ಯರು. ಅಲ್ಲಿ ಕಾರ್ಯನಿರತ ಡಾಕ್ಟರ್ ಮತ್ತು ಸಿಬ್ಬಂದಿವರ್ಗದವರಿಗೆ ತಿಳಿಸಿದೆವು. ಆದರೆ ಅವರು ಯಾರೂ ಇದನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಏಕೆಂದರೆ ಈ ಮಾತುಗಳು ಕೇವಲ ಅವರನ್ನೆ ಅರಿಯುತ್ತವೆ ಯಾರ

ಭಕ್ತಿಯ Channel ಪರಮೇಶ್ವರ On ಮಾಡುತ್ತಾರೆ. ಅನ್ಯರಿಗೆ ಅರಿವಾಗುವುದು ಸಾಧ್ಯವಾಗುವುದಿಲ್ಲ."

ನಾನು 25–12–1999 ರಲ್ಲಿ ರಾಮ್‌ಪಾಲ್ ಮಹಾರಾಜರಿಂದ ನಾಮೋಪದೇಶ ಪಡೆದೆ. ಇವರೇ ಕಬೀರ್‌ರ ಅವತಾರವೆಂದು ತಿಳಿದಿರಲಿಲ್ಲ ಯಾವಾಗ ನನಗೆ ಮೇಲಿನ ಘಟನೆಗಳು ಘಟಿಸಿದವೋ, ಆಗ ನಂಬಿಕೆ ಬಂದಿತು.

ಮಾಂಸಾ ಘಟೆ ನ ತಿಲ್ ಬಢೆ, ವಿಧನಾ ಲಿಖೆ ಜೋ ಲೇಖ್ ।
ಸಾಚಾ ಸತ್‌ಗುರು ಮೇಟ್ ಕರ್, ಊಪರ್ ಮಾರೇ ಮೇಖ್ ॥

ಕಬೀರ್ ಪರಮೇಶ್ವರರು ಸಶರೀರರಾಗಿ ಸಂತ ರಾಮ್‌ಪಾಲ್ ಮಹಾರಾಜರ ರೂಪದಲ್ಲಿ ಬಂದಿರುವರು ಯಾರು ನಿಜವಾದ ಸದ್ಗುರುಗಳೋ, ಅವರು ವಿಧಿಯ ಹಣೆ ಬರಹವನ್ನು ಅಳಿಸಿ (ಪಾಪಕರ್ಮದ) ತಮ್ಮ ಶಕ್ತಿಯಿಂದ ಹೊಸ ಬರಹವನ್ನು ಬರೆಯಬಲ್ಲರು.

## "ಭಕ್ತೆ ಸುಶೀಲಳ ಕಣ್ಣು ಸರಿಪಡಿಸಿದ್ದು"

ಇದೇ ರೀತಿ ನನ್ನ ಧರ್ಮಪತ್ನಿ ಶ್ರೀಮತಿ ಸುಶೀಲಾ ಹುಡ್ಡಾಳಿಗೆ,

6–12–2004ರಲ್ಲಿ ಬಲಗಣ್ಣಿನಿಂದ ಎರಡೆರಡು ವಸ್ತುಗಳು ಕಾಣಿಸಲು ತೊಡಗಿತ್ತು. P.G.I.M.S ರೋಹತಕ್‌ದಲ್ಲಿ ಎಲ್ಲ ಟೆಸ್ಟ್‌ಗಳನ್ನು ಹಾಗೂ M.R.I.angiography ಮುಂತಾದವುಗಳನ್ನೂ ಮಾಡಿಸಿದೆವು. ಎಲ್ಲಾ ಅನುಭವವುಳ್ಳ (Specialist) ವರಿಷ್ಠ ವೈದ್ಯರಿಗೆ ತೋರಿಸಿ ಚಿಕಿತ್ಸೆ ಕೊಡಿಸಲಾಯಿತು. ಆದರೆ ಯಾವುದೇ ಲಾಭವಾಗಲಿಲ್ಲ. ಖಾಸಗಿ ವೈದ್ಯ ಈಶ್ವರ ಸಿಂಹ್ ಮೊದಲಾದವರಿಗೂ ತೋರಿಸಿದರೂ ಏನೂ ಲಾಭವಾಗಲಿಲ್ಲ. ಈ ಎಲ್ಲಾ ಚಿಕಿತ್ಸೆಗಳನ್ನು ಸದ್ಗುರುವಿನ ಆಜ್ಞೆ ಪಡೆದ ನಂತರವೇ ಮಾಡಿಸಿದ್ದೆ. ಯಾವಾಗ ಔಷಧಿಗಳಿಂದ ಗುಣವಾಗಲಿಲ್ಲವೋ, ಆಗ ಸದ್ಗುರುವನ್ನು ಪ್ರಾರ್ಥಿಸಿದೆ ಪರಮೇಶ್ವರ ತಾವು ಆಯಸ್ಸನ್ನೇ ವೃದ್ಧಿಸಬಲ್ಲಿರಿ. ಈ ಕಾರ್ಯ ನಿಮಗೆ ಕಠಿಣವೇ? ನಿಮ್ಮ ಮಕ್ಕಳ ಮೇಲೆ ದಯವಿಟ್ಟು ಕೃಪೆ ಮಾಡಿರಿ. ಸದ್ಗುರುಗಳು ಕೃಪೆ ಮಾಡಿದರು. ಅವರು ತಲೆಯ ಮೇಲೆ ಕೈ ಇಟ್ಟರು. ಬಲಗಣ್ಣು ಸರಿಯಾಯಿತು. ಈಗ ಇವರನ್ನು ಪಾಪಕರ್ಮಗಳನ್ನು ನಾಶಮಾಡುವಂತಹ ಭಗವಾನ್ ಎನ್ನದೆ ಮತ್ತೇನು ಹೇಳಬಹುದು? ಪ್ರಿಯಪಾಠಕರು ವಿಚಾರ ಮಾಡಿ ನಿರ್ಣಯ ತೆಗೆದುಕೊಳ್ಳಿ, ಅತಿ ಶೀಘ್ರವಾಗಿ ನೀವೂ ಸಹ ತಮ್ಮ ಗೌರವ ವೃದ್ಧಿಯ, ಶಾಸ್ತ್ರವಿಧಿ ವಿರೋಧದ ಸಾಧನಾ ಮಾರ್ಗವನ್ನು ತ್ಯಜಿಸಿ, ನಿಮ್ಮ ಹತ್ತಿರದ ನಾಮೋಪದೇಶ ಕೇಂದ್ರಕ್ಕೆ ಹೋಗಿ ಸಂತ ರಾಮ್‌ಪಾಲ್ ಮಹಾರಾಜರಿಂದ ನಾಮೋಪದೇಶ ಪಡೆಯಿರಿ. ನಿಮ್ಮ ಹಾಗೂ ನಿಮ್ಮ ಪರಿವಾರದವರ ಕಲ್ಯಾಣ ಮಾಡಿಕೊಳ್ಳಿರಿ. "ಸತ್ ಸಾಹೇಬ್"

ಪ್ರಾರ್ಥಿಸುವವ

ಭಕ್ತ ಡಾ॥ ಓಂ ಪ್ರಕಾಶ್ ಹುಡ್ಡಾ

******

➢ ಸತ್ಯಲೋಕ ಆಶ್ರಮದ ಬೇರೆ ಪುಸ್ತಕಗಳು (ಆಧ್ಯಾತ್ಮಿಕ ಜ್ಞಾನ ಗಂಗಾ, ಬದುಕುವ ದಾರಿ, ಜ್ಞಾನ ಗಂಗಾ, ಗಹರಿ ನಜರ್ ಗೀತಾ ಮೆಂ, ಗೀತಾ ತೇರಾ ಜ್ಞಾನ್ ಅಮೃತ್, ಸೃಷ್ಟಿ ರಚನಾ ಸಂಪೂರ್ಣ್, ಮಾನವತಾ ಕಾ ಹ್ರಾಸ್ ತಥಾ ವಿಕಾಸ್ ಮುಂತಾದವು) ನಮ್ಮ ವೆಬ್‌ಸೈಟ್ (www.jagatgururampalji.org) ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.